॥ ಪೂರ್ಣ ಪರಮಾತ್ಮನೇ ನಮಃ ॥

# ಬದುಕುವ ದಾರಿ

## (Way of Living)


ಲೇಖಕರು :– ಸಂತ ರಾಮ್‌ಪಾಲ್ ದಾಸ್
ಸ್ವಾಮೀ ರಾಮ್‌ದೇವಾನಂದ್ ಮಹಾರಾಜರ ಶಿಷ್ಯರು


ಜೀವವೇ ನಮ್ಮ ಜಾತಿ, ಮಾನವ ಧರ್ಮ(Mankind) ನಮ್ಮದು ।
ಹಿಂದೂ, ಮುಸ್ಲಿಂ, ಸಿಖ್, ಇಸಾಈ ಯಾವ ಧರ್ಮವೂ ಬೇರೆ ಅಲ್ಲ ॥

## ಅವಶ್ಯಕವಾಗಿ ನೋಡಿರಿ

### ಸಂತ ರಾಮ್‌ಪಾಲ್ ಮಹಾರಾಜ ರವರ ಮಂಗಳ ಪ್ರವಚನ

ಸಾಧನಾ ಚಾನಲ್‌ನಲ್ಲಿ ಸಂಜೆ 7:30 ರಿಂದ 8:30 ರವರೆಗೆ

ಶ್ರದ್ಧಾ ಚಾನಲ್‌ನಲ್ಲಿ ಮಧ್ಯಾಹ್ನ 2:00 ರಿಂದ 3:00 ರವರೆಗೆ

ಈಶ್ವರ್ ಚಾನಲ್‌ನಲ್ಲಿ ಬೆಳಿಗ್ಗೆ 6:00 ರಿಂದ 7:00 ರವರೆಗೆ

ಲೋಕಶಾಹೀ ಚಾನಲ್‌ನಲ್ಲಿ ಬೆಳಿಗ್ಗೆ 5:55 ರಿಂದ 6:55 ರವರೆಗೆ

ಸುದರ್ಶನ್ ಚಾನಲ್‌ನಲ್ಲಿ ಬೆಳಿಗ್ಗೆ 6:00 ರಿಂದ 7:00 ರವರೆಗೆ

ಧರ್ಮಾರ್ಥ ಬೆಲೆ. 20/–

ಪ್ರಕಾಶಕರು :– ಪ್ರಚಾರ ಪ್ರಸಾರ ಸಮೀತಿ ಹಾಗು ಭಕ್ತ ಸಮೂಹ
ಸತ್ಯಲೋಕ ಆಶ್ರಮ, ಹಿಸಾರ್–ಟೋಹಾನಾ ರೋಡ್ ಬರವಾಲಾ
ಜಿಲ್ಲೆ–ಹಿಸಾರ್ (ಪ್ರಾಂತ್ಯ–ಹರಿಯಾಣ) ಭಾರತ.

ಮುದ್ರಕರು :– ಕಬೀರ್ ಪ್ರಿಂಟರ್ಸ್
C–117, ಸೆಕ್ಟರ್–3, ಬವಾನಾ ಇಂಡ್‌ಸ್ಟ್ರಿಯಲ್ ಏರಿಯಾ, ನವ ದೆಹಲಿ.

ದೂರವಾಣಿ ಸಂ. 8222880541, 8222880542, 8222880543,
8222880544, 8222880545

ಕರ್ನಾಟಕ ದೂರವಾಣಿ ಸಂ.
8884445281, 7026200360

Visit us at: www.jagatgururampalji.org
e-mail: jagatgururampalji@yahoo.com

# ವಿಷಯ ಸೂಚಿ


| ಕ್ರ.ಸಂ. | ವಿವರಣೆ | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | I |
| 2. | ಎರಡು ಮಾತು | 1 |
| 3. | ಮಾನವ ಜೀವನದ ಸಾಮಾನ್ಯ ಅನಿಸಿಕೆ | 4 |
| 4. | ಮಾರ್ಕಂಡೇಯ ಋಷಿ ಮತ್ತು ಅಪ್ಸರೆಯ ಸಂವಾದ | 12 |
| 5. | ಇಂದು ಸಹೋದರರನಿಗೆ ಬಿಡುವು | 17 |
| 6. | ಭಕ್ತಿ ಮಾಡದೆ ಇರುವುದರಿಂದ ಆಗುವ ನಷ್ಟದ ವಿವರಣೆ | 21 |
| 7. | ಭಕ್ತಿ ಮಾಡದಿದ್ದರೆ ಬಹಳ ದುಃಖವಾಗುವುದು | 24 |
| 8. | ಭಕ್ತಿ ಮಾರ್ಗದ ಯಾತ್ರೆ | 25 |
| 9. | ಮದುವೆ ಹೇಗೆ ಮಾಡಬೇಕು | 26 |
| 10. | ಪ್ರೇಮ ಪ್ರಸಂಗವು ಹೇಗಾಗುತ್ತದೆ? | 28 |
| 11. | ಭಗವಂತ ಶಿವನು ತನ್ನ ಪತ್ನಿಯನ್ನು ತ್ಯಜಿಸುವುದು | 28 |
| 12. | ಕೃತಘ್ನ ಮಗ | 31 |
| 13. | ಮಕ್ಕಳಿಲ್ಲದವರೇ, ಎಚ್ಚರ! | 32 |
| 14. | ಮದುವೆಯಲ್ಲಿ ಜ್ಞಾನಹಿನರು ನರ್ತಿಸುತ್ತಾರೆ | 32 |
| 15. | ಸಂತರ ಶಿಕ್ಷಣ | 33 |
| 16. | ವಿವಾಹದ ನಂತರದ ಯಾತ್ರೆ | 35 |
| 17. | ವಿಶೇಷ ಮಂಥನ | 38 |
| 18. | ಚಾರಿತ್ರ್ಯವಂತನ ಕತೆ | 40 |
| 19. | ಸಹವಾಸದ ಪ್ರಭಾವ ಮತ್ತು ಪ್ರಭುವಿನ ವಿಶ್ವಾಸ | 41 |
| 20. | ಕಬೀರ್ ಪರಮೇಶ್ವರರಿಂದ ಕಾಶೀ ನಗರದಲ್ಲಿ ಭೋಜನ ಅಂದರೆ ಧರ್ಮಯಜ್ಞದ ವ್ಯವಸ್ಥೆ | 44 |
| | ● ಆ ಭೋಜನ ಕೂಟದಲ್ಲಿ ನಡೆದ ಇನ್ನೊಂದು ಚಮತ್ಕಾರ | 47 |
| 21. | ಹರ್‌ಲಾಲ್ ರೈತನ ಕತೆ | 49 |
| 22. | ತಂಬಾಕು ಸೇವನೆ ಮಹಾಪಾಪ | 51 |
| 23. | ತಂಬಾಕು ಉತ್ಪತ್ತಿಯ ಕತೆ | 52 |
| 24. | ತಂಬಾಕಿನ ವಿಷಯದಲ್ಲಿ ಇನ್ನುಳಿದ ವಿಚಾರಗಳು | 55 |
| 25. | ತಂಬಾಕನ್ನು ಕತ್ತೆ-ಕುದುರೆಗಳೂ ಅಸಹ್ಯ ಪಟ್ಟುಕೊಳ್ಳುತ್ತವೆ | 57 |
| 26. | ಮಾದಕತೆ ನಮ್ಮನ್ನು ನಾಶಮಾಡುತ್ತದೆ | 58 |
| 27. | ತಂದೆ ತಾಯಿಯ ಸೇವೆ ಮಾಡುವುದು ಮತ್ತು ಅವರನ್ನು ಗೌರವಿಸುವುದು. ನಮ್ಮ ಪರಮ ಕರ್ತವ್ಯ | 62 |

28. ತಂದೆಯು ಮಕ್ಕಳ ಪ್ರತಿಯೊಂದು ತಪ್ಪನ್ನು ಮನ್ನಿಸುತ್ತಾನೆ ............................ 63
29. ಸತ್ಸಂಗದಿಂದ ಮನೆಯಲ್ಲಿ ಕಲಹವು ಅಂತ್ಯವಾಗುತ್ತದೆ ........................... 69
30. ಪುಹಲೋ ಬಾಯಿಯ ಕತೆ ........................................................... 71
31. ವರ್ತಮಾನದ ಕೆಲವು ಸತ್ಯ ಕತೆಗಳು ........................................... 79
- ಭಕ್ತ ಸುರೇಶ್‌ನ ಹಾಳಾದ ಸಂಸಾರವನ್ನು ಸರಿ ಮಾಡಿದ್ದು ................. 79
- ಸತ್ಸಂಗ ಕೇಳದಿದ್ದಕ್ಕೆ ಸರ್ವನಾಶವಾಯಿತು ....................................... 82
- ಸತ್ಸಂಗಕ್ಕೆ ಹೋದರೆ ದೊಡ್ಡ ವಿಪತ್ತಿನಿಂದ ಪಾರಾಗಬಹುದು .............. 83
- ಮೀರಾಬಾಯಿಯನ್ನು ವಿಷ ಕುಡಿಸಿ ಕೊಲ್ಲುವ ವ್ಯರ್ಥ ಪ್ರಯತ್ನ .......... 86
- ಮೀರಾಬಾಯಿಗೆ ಸದ್ಗುರುವಿನ ಆಶ್ರಯ ಸಿಕ್ಕಿತು ................................. 86
- ಕಳ್ಳನು ಎಂದಿಗೂ ಧನಿಕನಾಗುವುದಿಲ್ಲ ............................................ 93
- ಸಾಂಸಾರಿಕ ಜಂಜಾಟದಲ್ಲಿದ್ದುಕೊಂಡೇ ಭಕ್ತಿಮಾಡಬೇಕಾಗುತ್ತದೆ ........ 96
- ಚೌಧರಿ ಎಂಬ ಜಮೀನ್ದಾರನಿಗೆ ಜ್ಞಾನೋದಯವಾಯಿತು ................. 98
- ವೇಶ್ಯೆಯ ಉದ್ಧಾರ ........................................................................ 100
- ರಂಕಾ–ಬಂಕಾನ ಕತೆ ..................................................................... 103
- ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ ................................................ 105
- ಮದವೇರಿದ ಆನೆಯ ಕಾಲಿನಿಂದ ತುಳಿಸಿ ಪರಮೇಶ್ವರ ಕಬೀರರನ್ನು ಕೊಲ್ಲುವ ವ್ಯರ್ಥಪ್ರಯತ್ನ ............................................ 112

32. ದೀಕ್ಷೆಯ ನಂತರ .......................................................................... 114
33. ಪರಮಾತ್ಮನಿಗೆ ಯಾವುದೂ ಅಸಾಧ್ಯವಲ್ಲ ....................................... 115
34. ಒಂದು ಕೊಟ್ಟರೆ ಒಂದು ತೆಗೆದುಕೊಳ್ಳಬೇಕು ................................... 120
35. ಹೇಳುವುದು ಮತ್ತು ಮಾಡುವುದರಲ್ಲಿ ಅಂತರವಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ........................................................... 121
36. ಸತ್ಸಂಗದಿಂದ ಭಕ್ತಿಯ ದಾರಿ ಸಿಕ್ಕಿತು ........................................... 122
37. ಮನೀರಾಮ್ ಎಂಬ ಪಂಡಿತ ಕಥಾವಾಚಕನ ಕೆಲಸ ......................... 130
38. ಪರೀಕ್ಷಿತ ರಾಜನ ಉದ್ಧಾರ ............................................................ 131
39. ಪಂಡಿತನ ಪರಿಭಾಷೆ .................................................................... 134
40. ಸುದಾಮರು ಪಂಡಿತರಾಗಿದ್ದರು ........................................................ 134
41. 'ಅನುರಾಗ್ ಸಾಗರ್'ದ ಸಾರಾಂಶ .................................................. 136
- ಭಕ್ತನ ಸ್ವಭಾವ ಹೇಗಿರಬೇಕು? ....................................................... 141
- ಮನಸ್ಸು ಹೇಗೆ ಪಾಪ ಪುಣ್ಯಗಳನ್ನು ಮಾಡಿಸುತ್ತದೆ ......................... 146
- ಭಕ್ತನ 16 ಗುಣಗಳು (ಆಭೂಷಣ) ................................................. 147
- ಕಾಲನ ಜೀವವು ಸದ್ಗುರುವಿನ ಜ್ಞಾನವನ್ನು ಒಪ್ಪುವುದಿಲ್ಲ .................. 149
- ಹಂಸ (ಭಕ್ತ)ರ ಲಕ್ಷಣಗಳು ........................................................... 150

● ಜ್ಞಾನಿಯ ಅಂದರೆ ಸತ್ಸಂಗೀಯ ಲಕ್ಷಣಗಳು ........................................ 150
● ಭಕ್ತನು ಪರಮಾರ್ಥಿಯಾಗಬೇಕು ........................................ 150
42. ದೀಕ್ಷೆ ಪಡೆದು ನಾಮ ಸ್ಮರಣೆ ಮಾಡುವುದು ಅನಿವಾರ್ಯ ........................................ 153
● ದಶ ಮುಕಾಮಿ ರೇಖತಾ ........................................ 156
● ಭಕ್ತ ಯತಿ ಮತ್ತು ಸತಿಯಾಗಬೇಕು ........................................ 158
43. ಗರುಡ್ ಬೋಧ್ ಅಧ್ಯಾಯದ ಸಾರಾಂಶ ........................................ 166
44. ಹನುಮಾನ್ ಬೋಧ್‌ನ ಸಾರಾಂಶ ........................................ 181
45. ನಾವು ಕಾಲನ ಜಾಲದಲ್ಲಿ ಹೇಗೆ ಸಿಲುಕಿಕೊಂಡೆವು? ........................................ 193
46. ಕಾಲನ ಜೊತೆ ಕಬೀರ್ ಪರಮೇಶ್ವರರ ಮಾತು ........................................ 193
● ಕಾಲ ನಿರಂಜನನ ಮೂಲಕ ಕಬೀರರಿಂದ ಮೂರೂ ಯುಗಗಳಲ್ಲಿ ಕಡಿಮೆ ಜೀವಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ವಚನ ಪಡೆಯುವುದು ........................................ 196
47. ಹದಿಮೂರು ಗಾಡಿ ಕಾಗದಗಳನ್ನು ಬರೆಯುವುದು ........................................ 203
48. ಕಲಿಯುಗ ವರ್ತಮಾನದಲ್ಲಿ ಎಷ್ಟು ಕಳೆದಿದೆ? ........................................ 207
49. ಗುರುವಿಲ್ಲದೆ ಮೋಕ್ಷವಿಲ್ಲ ........................................ 208
50. ಪೂರ್ಣ ಗುರುವಿನ ವಚನಗಳ ಶಕ್ತಿಯಿಂದ ಭಕ್ತಿಯುಂಟಾಗುತ್ತದೆ ........................................ 209
51. ವಾಸುದೇವನ ಪರಿಭಾಷೆ ........................................ 217
52. ಯಾವ ಪ್ರಭುವನ್ನು ಆರಾಧಿಸಬೇಕು–ಗೀತೆಯ ಪ್ರಕಾರ ........................................ 223
53. ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸ ........................................ 237
54. ಋಷಿ ದೂರ್ವಾಸರ ಕಾರ್ಯಕುಶಲತೆ ........................................ 244
55. ಸೃಷ್ಟಿ ರಚನೆ ........................................ 252
● ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು? ........................................ 255
● ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಮತ್ತು ಶ್ರೀ ಶಿವನ ಉತ್ಪತ್ತಿ ........................................ 259
● ಮೂರು ಗುಣಗಳು ಯಾವುವು? ಪ್ರಮಾಣದ ಸಹಿತವಾಗಿ ........................................ 261
● ಕಾಲಬ್ರಹ್ಮನ ಅವ್ಯಕ್ತನಾಗುವ ಪ್ರತಿಜ್ಞೆ........................................ 262
● ಬ್ರಹ್ಮಾನು ತನ್ನತಂದೆ (ಕಾಲ/ಬ್ರಹ್ಮ)ನನ್ನು ಪಡೆಯುವ ಪ್ರಯತ್ನದಲ್ಲಿ......... 264
● ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ ........................................ 265
● ವಿಷ್ಣು ತನ್ನ ತಂದೆ ಕಾಲಬ್ರಹ್ಮನನ್ನು ಕಾಣಲು ಹೊರಡುವನು ಹಾಗೂ ತಾಯಿಯ ಆಶೀರ್ವಾದ ಪಡೆಯುವನು ........................................ 266
● ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳ ಸ್ಥಾಪನೆ ........................................ 273
● ಪವಿತ್ರ ಅಥರ್ವಣ ವೇದದಲ್ಲಿ ಸೃಷ್ಟಿ ರಚನೆಗೆ ಪ್ರಮಾಣ ........................................ 275
● ಪವಿತ್ರ ಋಗ್ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ ........................................ 279
● ಪವಿತ್ರ ಶ್ರೀಮದ್‌ದೇವಿ ಮಹಾಪುರಾಣದಲ್ಲಿ

ಸೃಷ್ಟಿ ರಚನೆಯ ಪ್ರಮಾಣ ........................................ 284

- ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಪ್ರಮಾಣ ................ 286
- ಪವಿತ್ರ ಶ್ರೀ ಮದ್ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಪ್ರಮಾಣ ............... 286
- ಪವಿತ್ರ ಬೈಬಲ್ ಹಾಗು ಪವಿತ್ರ ಕುರಾನ್ ಶರೀಫದಲ್ಲಿ
  ಸೃಷ್ಟಿ ರಚನೆಯ ಪ್ರಮಾಣ........................................ 290
- ಪೂಜ್ಯ ಕಬೀರ್ ಪರಮೇಶ್ವರ (ಕವಿರ್ ದೇವ) ರವರ
  ಅಮೃತವಾಣಿಯಲ್ಲಿ ಸೃಷ್ಟಿಯ ರಚನೆ ........................................ 292
- ಗೌರವಾನ್ವಿತ ಗರೀಬ್ ದಾಸ್ ರವರ ಅಮೃತವಾಣಿಯಲ್ಲಿ
  ಸೃಷ್ಟಿಯ ರಚನೆಯ ಪ್ರಮಾಣ ........................................ 294
- ಗೌರವಾನ್ವಿತ ಗುರುನಾನಕ್ ರವರ ಮಾತಿನಲ್ಲಿ
  ಸೃಷ್ಟಿರಚನೆಯ ಸಂಕೇತ ........................................ 301
- ಬೇರೆ ಸಂತರಿಂದ ಸೃಷ್ಟಿ ರಚನೆಯ ದಂತ ಕಥೆ ........................................ 304

56. ಭಕ್ತಿಯ ಮರ್ಯಾದೆ ........................................ 306

- ನಾಮದೀಕ್ಷೆ ಪಡೆಯುವ ವ್ಯಕ್ತಿಗಳಿಗೆ ಅವಶ್ಯಕ ಮಾಹಿತಿ ...................... 306
- ಕರ್ಮ ಕಾಂಡದ ವಿಷಯದಲ್ಲಿ ಸತ್ಯಕಥೆ ........................................ 313

57. ಶಾಸ್ತ್ರಾನುಕೂಲದ ಭಕ್ತಿಯಿಂದ ಭಕ್ತರಿಗಾಗುವ ಲಾಭ ................................ 319

- ಪರಮೇಶ್ವರನ ಸೀಮಾತೀತವಾದ ದಯೆ ........................................ 319
- ಅದ್ಭುತ ಚಮತ್ಕಾರ ........................................ 321
- ಲೂಟಿಗೊಳಗಾದವರಿಗೆ ಆಧಾರ ........................................ 322
- 11,000 ಓಲ್ಟೇಜ್‌ನ ವೈರ್‌ನಿಂದ ಬಿಡುಗಡೆಗೊಳಿಸುವುದು ................ 325
- ಭಕ್ತ ಸತೀಶನ ಆತ್ಮಕಥೆ ........................................ 327


❑❑❑

# ಪೀಠಿಕೆ

**ಬದುಕುವ ದಾರಿ**–ಇದು ಮನೆಮನೆಯಲ್ಲಿ ಸಂಗ್ರಹಿಸಿಡುವಂಥಾ ಪುಸ್ತಕ. ಇದನ್ನು ಓದುವುದರಿಂದ ಹಾಗೂ ಇದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಈ ಲೋಕದಲ್ಲೂ, ಪರಲೋಕದಲ್ಲೂ ಸುಖವಾಗಿರುವಿರಿ. ಪಾಪದಿಂದ ಮುಕ್ತರಾಗುವಿರಿ, ಮನೆಯಲ್ಲಿ ಕಲಹಗಳಿದ್ದರೆ, ಅವು ಅಂತ್ಯವಾಗುತ್ತವೆ. ಆಗ ಮಗ–ಸೊಸೆ ತಮ್ಮ ತಂದೆ–ತಾಯಿಯರ ಸೇವೆಯನ್ನು ವಿಶೇಷವಾಗಿ ಮಾಡುವರು, ಮನೆಯಲ್ಲಿ ಪರಮಾತ್ಮ ನೆಲೆಸುವನು. ಭೂತ–ಪ್ರೇತ, ದೆವ್ವ ಪಿಶಾಚಿಗಳಂಥ ದುಷ್ಟಆತ್ಮಗಳು ಆ ಕುಟುಂಬದ ಹತ್ತಿರವೂ ಸುಳಿಯಲಾರವು. ದೇವತೆಗಳು ಆ ಭಕ್ತ–ಕುಟುಂಬವನ್ನು ರಕ್ಷಿಸುತ್ತಾರೆ. ಯಾರು ಈ ಪುಸ್ತಕವನ್ನು ಓದಿ, ದೀಕ್ಷೆಯನ್ನು ಪಡೆದು ಸಚ್ಚಾರಿತ್ರದಿಂದ ಸಾಧನೆ ಮಾಡುವರೋ ಅಂಥಾ ಭಕ್ತರಿಗೆ ಅಕಾಲ ಮರಣವು ಉಂಟಾಗುವುದಿಲ್ಲ.

ಈ ಪುಸ್ತಕವನ್ನು ಓದುವುದರಿಂದ ಮುರಿದ ಕುಟುಂಬಗಳು ಒಂದಾಗುತ್ತವೆ. ಯಾರ ಮನೆಯಲ್ಲಿ ಈ ಪುಸ್ತಕವಿರುವುದೋ ಅವರು ಓದುವರು, ಅವರ ನಶೆ ತನ್ನಿಂದ ತಾನೇ ದೂರವಾಗುವುದು. ಏಕೆಂದರೆ ಇದರಲ್ಲಿ ಆತ್ಮವನ್ನು ಮುಟ್ಟುವಂಥ ಪ್ರಮಾಣಗಳಿವೆ. ಮದ್ಯಪಾನ, ತಂಬಾಕು ಮತ್ತು ಅನ್ಯರೀತಿಯ ಮತ್ತಿನ ಪದಾರ್ಥಗಳ ಬಗ್ಗೆ ತಿರಸ್ಕಾರ ಉಂಟಾಗುವುದು. ಅವುಗಳ ಹೆಸರೆತ್ತಿದರೂ ಕಂಪಿಸುವರು. ಇಡೀ ಕುಟುಂಬ ಸುಖದ ಸುಪ್ಪತ್ತಿಗೆಯಲ್ಲಿರುವುದು. ಜೀವನದ ಯಾತ್ರೆಯು ಸುಲಭವಾಗಿ ಸಾಗುವುದು. ಏಕೆಂದರೆ ಜೀವನದ ಮಾರ್ಗವು ಸ್ವಚ್ಛವಾಗಿರುವುದು.

ಈ ಪುಸ್ತಕದಲ್ಲಿ, ಪೂರ್ಣ ಪರಮಾತ್ಮನು ಯಾರು? ಅವನ ಹೆಸರೇನು? ಅವನ ಭಕ್ತಿಯು ಹೇಗಿರುತ್ತದೆ? ಇವೆಲ್ಲದರ ಬಗ್ಗೆ ವಿವರವಿದೆ. ಇದನ್ನರಿತರೆ ಮಾನವ ಜೀವನವು ಸಾರ್ಥಕವಾಗುವುದು. ಕುಟುಂಬದಲ್ಲಿ ಯಾವುದೇ ರೀತಿಯ ಕೆಟ್ಟತನವಿರುವುದಿಲ್ಲ. ಪರಮಾತ್ಮನ ಕೃಪೆ ಎಂದಿಗೂ ಇರುವುದು. ಉತ್ತಮವಾದ ಬದುಕುವ ದಾರಿಯು ಸಿಗುವುದರಿಂದ ಯಾತ್ರೆಯು ಸುಲಭವಾಗುವುದು. ಯಾರು ಈ ಪುಸ್ತಕವನ್ನು ಮನೆಯಲ್ಲಿಟ್ಟು ಕೊಳ್ಳುವುದಿಲ್ಲವೋ, ಅವನಿಗೆ ಉತ್ತಮ ಜೀವನವು ಲಭಿಸದೆ, ಈ ಪ್ರಪಂಚ ರೂಪಿ ಕಾಡಿನಲ್ಲಿ ಅಲೆದಾಡುತ್ತಾ ತನ್ನ ಅಮೂಲ್ಯವಾದ ಜೀವನವನ್ನು ನಾಶಮಾಡಿಕೊಳ್ಳುತ್ತಾನೆ. ಅವನು ಪರಮಾತ್ಮನ ಮನೆಗೆ ಹೋದಾಗ ಪಶ್ಚತ್ತಾಪದ ವಿನಃ ಇನ್ನೇನೂ ಉಳಿದಿರುವುದಿಲ್ಲ. ಆಗ ನಿಮಗೆ ಉತ್ತಮವಾದ ಬದುಕುವ ದಾರಿ ಸಿಗದೆ ಬದುಕು ನಾಶವಾಯಿತು ಎಂದು ಅನ್ನಿಸುತ್ತದೆ. ಆಗ ನೀವು ಪರಮಾತ್ಮನಲ್ಲಿ "ಹೇ ಪ್ರಭು! ಮತ್ತೊಮ್ಮೆ ಮಾನವ ಜನ್ಮ ಕೊಡು, ನಾನು ನಿಜವಾದ ಮನಸ್ಸಿನಿಂದ ಸತ್ಯಭಕ್ತಿ ಮಾಡುವೆ. ಜೀವನದ ನಿಜವಾದ ದಾರಿಯನ್ನು ಹುಡುಕಲು ಸತ್ಸಂಗಕ್ಕೆ ಹೋಗುವೆ. ನನ್ನ ಉದ್ಧಾರಕ್ಕಾಗಿ ಶ್ರಮಿಸುವೆ" ಎಂದು ನೀವು ಪ್ರಾರ್ಥಿಸುವಿರಿ. ಆ ಪರಮಾತ್ಮನ ಆಸ್ಥಾನದಲ್ಲಿ ನಿಮ್ಮ ಪೂರ್ವಜನ್ಮದ ಫಿಲ್ಮ ನಿಮಗೆ ತೋರಿಸಲಾಗುತ್ತದೆ. ಅದರಲ್ಲಿ ನೀವು ಪ್ರತೀ ಬಾರಿಯೂ ಮನುಷ್ಯ ಜನ್ಮ ಪ್ರಾಪ್ತವಾದಾಗಲೆಲ್ಲಾ ಇದೇ ರೀತಿ 'ಹೇ ದೇವ ನನಗೆ ಮನುಷ್ಯ ಜನ್ಮ ಕೊಡು, ನಾನು ಎಂದೆಂದಿಗೂ ತಪ್ಪು ಕೆಲಸ ಮಾಡಲಾರೆ, ಜೀವನಪರ್ಯಂತ ಭಕ್ತಿಮಾಡುವೆ. ಮನೆಯನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗುತ್ತೇನೆ. ಸದ್ಗುರುವಿನಿಂದ ದೀಕ್ಷೆಪಡೆದು ಉದ್ಧಾರ ಮಾಡಿಕೊಳ್ಳುವೆ. ಈ ಜನ್ಮದಲ್ಲಿ ಯಾವ ತಪ್ಪುಗಳಾಗಿದೆಯೋ ಅವನ್ನು ಪುನರಾವರ್ತಿಸುವುದಿಲ್ಲ' ಎಂದೆಲ್ಲಾ ಹೇಳಿದ ಸಿನಿಮಾ ತೋರಿಸಲಾಗುತ್ತದೆ.

ಆಗ ಪರಮಾತ್ಮನು, 'ನೀನು ನಿನ್ನನ್ನು ಮೂರ್ಖನನ್ನಾಗಿ ಮಾಡಿಕೊಂಡು, ಜೀವನವನ್ನು ಹಾಳುಮಾಡಿಕೊಂಡು, ಈಗ ಪಾಪದ ಕೊಡ ಹೊತ್ತುಕೊಂಡು ನನ್ನ ಮುಂದೆ ನಿಂತು ನನ್ನನ್ನು ಮೂರ್ಖನನ್ನಾಗಿ ಮಾಡಲು ಇಚ್ಛಿಸುವೆಯಾ? ನಡೀ, ನರಕಕ್ಕೆ', ಎನ್ನುತ್ತಾನೆ. ಆದ್ದರಿಂದ

ಎಂಭತ್ತ ನಾಲ್ಕು ಲಕ್ಷ ಪ್ರಕಾರಗಳ ಪ್ರಾಣಿಗಳ ಶರೀರದಲ್ಲಿ ಸುತ್ತಿ ಸುತ್ತಿ, ಮತ್ತೆಂದಾದರೂ ಮಾನವ (ಸ್ತ್ರೀ–ಪುರುಷ) ಶರೀರ ಸಿಕ್ಕಿದರೆ, ಬಹಳ ಸಾವಧಾನದಿಂದ ಸತ್ಸಂಗವನ್ನು ಆಲಿಸಿಕೊಂಡು ನಿನ್ನ ಉದ್ಧಾರವನ್ನು ಮಾಡಿಕೊ ಎಂದು ಹೇಳುತ್ತಾನೆ.

ಓದುಗರಲ್ಲಿ ವಿನಂತಿಸುವುದೇನೆಂದರೆ ಈ ಪವಿತ್ರವಾದ ಪುಸ್ತಕವನ್ನು ಓದುವುದರಿಂದ ನಿಮ್ಮ 101 ಪೀಳಿಗೆ ಈ ಲೋಕದಲ್ಲೂ ಹಾಗು ಪರಲೋಕದಲ್ಲೂ ಸುಖಿಯಾಗುವರು. ಇದನ್ನು ಪರಮಾತ್ಮನ ಆದೇಶವೆಂದು ತಿಳಿದು ಇಡೀ ಕುಟುಂಬದವರು ಓದಿರಿ. ಒಬ್ಬರು ಓದಿ ಮತ್ತೊಬ್ಬರು ಕೇಳುವಂತೆ ಅಥವಾ ಒಂದಕ್ಕಿಂತ ಹೆಚ್ಚು ಪುಸ್ತಕಗಳನ್ನು ತೆಗೆದುಕೊಂಡು ಪ್ರತಿಯೊಬ್ಬರೂ, ಪ್ರತಿದಿನವೂ ಓದಿ. ಇದರಲ್ಲಿ ಬರೆದಿರುವ ಪ್ರತಿಯೊಂದು ಪ್ರಕರಣವನ್ನೂ ಸತ್ಯವೆಂದೇ ತಿಳಿಯಿರಿ. ತಮಾಷೆ ಎಂದು ಪರಿಗಣಿಸಬೇಡಿ. ಇದನ್ನು ಯಾರೋ ಬರೆದಿದ್ದಾರೆ ಎಂದು ಪರಿಗಣಿಸದೆ, ಇದನ್ನು ಪರಮೇಶ್ವರನ ಗುಲಾಮನಾದ ರಾಮ್‌ಪಾಲ್‌ದಾಸನ ಮೂಲಕ ಹೃದಯ ಪೂರ್ವಕವಾಗಿ ಮಾನವ ಕಲ್ಯಾಣಕ್ಕಾಗಿ ಬರೆಯಲಾಗಿದೆ ಎಂದು ತಿಳಿಯಿರಿ. ಇದರ ಲಾಭ ಖಂಡಿತ ಪಡೆದುಕೊಳ್ಳಿ.

**ಲೇಖಕರು**

ದಾಸಾನುದಾಸ ರಾಮ್‌ಪಾಲ್ ದಾಸ್
ಸ್ವಾಮೀ ರಾಮ್‌ದೇವಾನಂದರ ಪುತ್ರ\ಶಿಷ್ಯ.
ಸತ್ಯಲೋಕ ಆಶ್ರಮ, ಬರವಾಲಾ
ಹಿಸಾರ್ ಜಿಲ್ಲೆ, ಹರಿಯಾಣ, ಭಾರತ.

# ಎರಡು ಮಾತು

ಪ್ರಾಣಿಗಳ ಜೀವನ ಯಾತ್ರೆಯು ಅವುಗಳ ಜನ್ಮದಿಂದ ಪ್ರಾರಂಭವಾಗುತ್ತದೆ. ಅವುಗಳ ಗುರಿಯು ನಿರ್ಧಾರಿತವಾಗಿರುತ್ತದೆ. ಈ ಪವಿತ್ರ ಪುಸ್ತಕದಲ್ಲಿ ಮಾನವ ಜೀವನದ ಯಾತ್ರೆಯ ಮಾರ್ಗವನ್ನು ವಿವರವಾಗಿ ತೋರಿಸಲಾಗಿದೆ. ಮೋಕ್ಷ ಪ್ರಾಪ್ತಿಯೇ ಮಾನವ(ಸ್ತ್ರೀ/ಪುರುಷ)ನ ಗುರಿಯಾಗಿದೆ. ಅವರ ದಾರಿಯಲ್ಲಿ ಪಾಪ ಮತ್ತು ಪುಣ್ಯಕರ್ಮಗಳ ಗುಂಡಿ ಹಾಗೂ ಮುಳ್ಳುಗಳು ಇವೆ. ನಿಮಗೆ ಆಶ್ಚರ್ಯವಾಗುವುದು, ಏನೆಂದರೆ ಪಾಪಕರ್ಮಗಳಂತು ಕಷ್ಟ ಕೊಡುವವು, ಪುಣ್ಯ ಕರ್ಮಗಳಂತು ಸುಖ ಕೊಡುವವು. ಇವುಗಳನ್ನು ಗುಂಡಿ ಎನ್ನುವುದು ಒಳ್ಳೆಯದಲ್ಲ. ಅದರ ಸಂಕ್ಷಿಪ್ತ ವಿವರ ಹೀಗಿದೆ:–

ಪಾಪರೂಪಿ ಗುಂಡಿ ಮತ್ತು ಮುಳ್ಳುಗಳು:– ಮನುಷ್ಯನ ಜೀವನವು ಪರಮಾತ್ಮನ ಶಾಸ್ತ್ರಾನುಸಾರದಂತೆ ಸಾಧನೆಯನ್ನು ಮಾಡಿ ಮೋಕ್ಷವನ್ನು ಪಡೆಯಲು ಸಿಕ್ಕಿದೆ. ಪಾಪಕರ್ಮದ ಕಷ್ಟವು ಭಕ್ತಿಮಾರ್ಗಕ್ಕೆ ಅಡೆತಡೆಯಾಗುತ್ತದೆ. ಉದಾ:– ಪಾಪಕರ್ಮದಿಂದ ಶರೀರಕ್ಕೆ ರೋಗ ಅಂಟಿಕೊಳ್ಳುವುದು, ಪಶುವೃತ್ತಿಯಲ್ಲಿ ಹಾಗೂ ರೈತವೃತ್ತಿಯಲ್ಲಿ ನಷ್ಟವುಂಟಾಗುವುದು, ಸಾಲದ ಹೊರೆ ಹೆಚ್ಚಾಗುತ್ತದೆ. ಸಾಲದಿಂದ ಭಾಧಿತನಾದ ವ್ಯಕ್ತಿಯು ಹಗಲಿರುಳೂ ಚಿಂತೆಗೊಳಗಾಗುತ್ತಾನೆ. ಅವನು ಭಕ್ತಿ ಮಾಡಲಾರನು. ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದ ನಂತರ ಪರಮೇಶ್ವರನು ಆ ಭಕ್ತನನ್ನು ಮೇಲೆ ಹೇಳಿದಂಥಾ ಸಕಲ ಕಷ್ಟಗಳಿಂದ ಮುಕ್ತಗೊಳಿಸುತ್ತಾನೆ. ಆಗ ಭಕ್ತನು ಅಧಿಕ ಶ್ರದ್ಧೆಯಿಂದ ಭಕ್ತಿಯಲ್ಲಿ ತೊಡಗಲು ಸಾಧ್ಯ. ಆಗ ಪರಮಾತ್ಮನ ಮೇಲೆ ವಿಶ್ವಾಸವು ಹೆಚ್ಚುವುದು. ಅವನು ಹೆಚ್ಚು ಧೃಢನಾಗುತ್ತಾನೆ. ಆದರೆ ಭಕ್ತನು ಪರಮಾತ್ಮನಿಗೆ ಸಮರ್ಪಿತನಾಗಬೇಕು. ಹೇಗೆ ಪತಿವ್ರತಾ ಸ್ತ್ರೀಯು ತನ್ನ ಪತಿಯ ವಿನಃ ಕಾಮಪೂರ್ತಿಗಾಗಿ **(Sexual Satisfaction)** ಅನ್ಯ ಪುರುಷನನ್ನು ಅವನು ಎಷ್ಟೇ ಸುಂದರನಾಗಿದ್ದರೂ, ಕನಸಿನಲ್ಲೂ ಇಚ್ಛಿಸುವುದಿಲ್ಲವೋ ಹಾಗೆ ಭಕ್ತನು ಪರಮಾತ್ಮನಲ್ಲಿ ಲೀನವಾಗಬೇಕು. ಅವಳ ಪತಿಯು ತನ್ನ ಪತ್ನಿಗಾಗಿ ಆದಷ್ಟು ಪ್ರಯತ್ನಿಸಿ ಎಲ್ಲಾ ಸುಖ ಸವಲತ್ತುಗಳನ್ನು ನೀಡುತ್ತಾನೆ. ವಿಶೇಷವಾಗಿ ಪ್ರೀತಿಸುತ್ತಾನೆ. ಇದೇ ರೀತಿ ದೀಕ್ಷೆ ತೆಗೆದುಕೊಂಡ ನಂತರ ಆತ್ಮದ ಸಂಯೋಗ ಪರಮಾತ್ಮನ ಜೊತೆಗೆ ಆಗುತ್ತದೆ. ಗುರುಗಳು ಪರಮಾತ್ಮನ ಜೊತೆ ಆತ್ಮದ ವಿವಾಹವನ್ನು ಮಾಡಿಸುತ್ತಾರೆ. ಒಂದು ವೇಳೆ ಮಾನವ ಶರೀರವನ್ನು ಧರಿಸಿರುವ ಆತ್ಮವು ತನ್ನ ಪತಿ ಪರಮೇಶ್ವರನಲ್ಲಿ ಪತಿವ್ರತೆಯಂತೆ ಸಮರ್ಪಿತಳಾಗಿ ಇದ್ದರೆ ಅಂದರೆ ಪೂರ್ಣ ಪರಮಾತ್ಮನ ಹೊರತು ಅನ್ಯ ಬೇರೆ ದೇವಿ–ದೇವತೆಗಳಿಂದ ಇಚ್ಛೆಪೂರ್ತಿಗಾಗಿ ಬಯಸದಿದ್ದರೆ, ಆಗ ಆ ಆತ್ಮದ ಪತಿ ಪರಮೇಶ್ವರನು ಅದರ ಜೀವನದಲ್ಲಿ ಬಂದೊದಗುವ ಕಷ್ಟಗಳನ್ನು ಎಲ್ಲಾ ಪಾಪಕರ್ಮಗಳ ಮುಳ್ಳನ್ನು ನಾಶಮಾಡುತ್ತಾನೆ. ಆಗ ಆ ಆತ್ಮದ ಬದುಕುವ ದಾರಿಯು ಕಷ್ಟಗಳಿಲ್ಲದೆ ಸುಗಮವಾಗಿ ಸಾಗುತ್ತದೆ. ಆ ಆತ್ಮಕ್ಕೆ ಗುರಿಯು ಸುಲಭವಾಗಿ ಸಿಗುತ್ತದೆ. ಆ ಆತ್ಮಕ್ಕೆ ಪರಮಾತ್ಮನು ಏನನ್ನು ಮಾಡುತ್ತಾನೆ? ಅದನ್ನು ಪರಮೇಶ್ವರ ಕಬೀರರಿಂದ ಪ್ರಾಪ್ತವಾದ ಜ್ಞಾನವನ್ನು ಸಂತ ಗರೀಬ್‌ದಾಸರು ಈ ರೀತಿ ಹೇಳಿದ್ದಾರೆ:–

ಗರೀಬ್, ಪತಿವ್ರತಾ ಜಮೀಂ ಪರ್, ಜ್ಯೋಂ–ಜ್ಯೋಂ ಧರಿ ಹೈ ಪಾಂವ್ಯೆ ।
ಸಮರ್ಥ್ ಝಾಡೂ ದೇತ್ ಹೈ, ನಾ ಕಾಂಟಾ ಲಗ್ ಜಾವ್ಯೆ ॥

**ಕಬೀರ ಪರಮೇಶ್ವರರು ಹೇಳಿರುವುದೇನೆಂದರೆ:–**

ಕಬೀರ್, ಸಾಧಕ್ ಕೆ ಲಕ್ಷಣ್ ಕಹೂಂ, ರಹೈ ಜ್ಯೋಂ ಪತಿವ್ರತಾ ನಾರಿ ।
ಕಹ್ ಕಬೀರ್ ಪರಮಾತ್ಮಾ ಕೋ, ಲಗ್ಯೆ ಆತ್ಮಾ ಪ್ಯಾರೀ ॥
ಪತಿವ್ರತಾ ಕೆ ಭಕ್ತಿ ಪಥ್ ಕೋ, ಆಪ್ ಸಾಫ್ ಕರೇ ಕರ್‌ತಾರ್ ।
ಆನ್ ಉಪಾಸನಾ ತ್ಯಾಗ್ ದೇ, ಸೋ ಪತಿವ್ರತಾ ಪಾರ್ ॥

**ಭಕ್ತಿಯ ದಾರಿಯಲ್ಲಿ ಮುಳ್ಳುಗಳಂತಿರುವ ಪಾಪಗಳು ಭಕ್ತಿ ಮಾಡುವುದರಿಂದ, ನಾಶವಾಗಿ ಹೋಗುತ್ತವೆ.**

ಕಬೀರ್, ಜಬ್ ಹೀ ಸತ್ಯನಾಮ್ ಹೃದಯ್ ಧರೋ, ಭಯೋ ಪಾಪ್ ಕೋ ನಾಶ್।
ಜೈಸೇ ಚಿಂಗಾರೀ ಅಗ್ನಿ ಕೀ, ಪಡ್ಯೆ ಪುರಾನೆ ಘಾಸ್ ॥

ಆದ್ದರಿಂದ ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಪ್ರತಿಯೊಬ್ಬ ಸ್ತ್ರೀ–ಪುರುಷರು, ಬಾಲಕರು (ಮೂರು ವರ್ಷ ತುಂಬಿದ) ಯುವಕರು ಹಾಗೂ ವೃದ್ಧರು ಎಲ್ಲರೂ ಭಕ್ತಿ ಅವಶ್ಯ ಮಾಡಬೇಕು.

❖ ಪುಣ್ಯವೂ ಸಹ ಭಕ್ತಿಯ ಮಾರ್ಗದಲ್ಲಿ ಅಡ್ಡವಾಗುತ್ತದೆ:–

ಪೂರ್ವ ಜನ್ಮದ ಪುಣ್ಯದಿಂದ ಮನೆಯಲ್ಲಿ ಧನ ಇರುತ್ತದೆ. ಸಕಲ ಸೌಲಭ್ಯಗಳು ಲಭ್ಯವಾಗುತ್ತವೆ. ಆದರೆ ರಾಜನ ಪದವಿ ಸಿಕ್ಕರೆ ಅದೇ ಭಕ್ತಿಗೆ ಅಡ್ಡವಾಗುತ್ತದೆ. ಆ ಸುಖವು ಅವನನ್ನು ಪರಮಾತ್ಮನಿಂದ ಮೈಲಿಗಟ್ಟಲೆ (ಅನೇಕ ಕಿಲೋಮಿಟರ) ದೂರ ಮಾಡುತ್ತದೆ. ಅಂಥಹ ಸುಖವು ಬದುಕುವ ದಾರಿಯಲ್ಲಿ ಪರಮಾತ್ಮನನ್ನು ಪಡೆಯುವ ಗುರಿಯಿಂದ ದೂರ ಮಾಡುತ್ತದೆ.

ಕಬೀರ್, ಸುಖ್ ಕೆ ಮಾಥೆ ಪತ್ಥರ್ ಪಡೋ, ನಾಮ್ ಹೃದಯ್ ಸೆ ಜಾವೈ ।
ಬಲಿಹಾರೀ ವಾ ದುಖ್ ಕೇ, ಜೋ ಪಲ್–ಪಲ್ ನಾಮ್ ರಟಾವೈ ॥

ಒಬ್ಬ ರಾಜನಿಗೆ ಮತ್ತು ಧನಿಕನಿಗೆ, ಪರಮಾತ್ಮನ ಕಥೆಯನ್ನು ಹೇಳುವ ಪ್ರಯತ್ನ ಮಾಡಿ ನೋಡಿ. ಅವನಿಗೆ ನಿಜವಾಗಲೂ ಅದು ರುಚಿಸುವುದಿಲ್ಲ. ಇನ್ನೊಂದೆಡೆ ಪಾಪಕರ್ಮಗಳ ಕಷ್ಟಗಳನ್ನು ಅನುಭವಿಸುತ್ತಿರುವ ವ್ಯಕ್ತಿಗೆ ಪರಮಾತ್ಮನು ಎಲ್ಲಾ ಕಷ್ಟಗಳನ್ನು ದೂರ ಮಾಡುತ್ತಾನೆ. ಪರಮಾತ್ಮನ ಧ್ಯಾನಮಾಡು ಎಂದು ಹೇಳಿ, ನೋಡು ನಮ್ಮ ಹಳ್ಳಿಯ ಒಬ್ಬ ವ್ಯಕ್ತಿ ಆ ಸಂತನಿಂದ ದೀಕ್ಷೆ ಪಡೆದು ಸುಖಿಯಾದನು. ಈ ಮೊದಲು ಅವನೂ ನಿನ್ನಂತೆ ಕಷ್ಟದಲ್ಲಿದ್ದನು ಎಂದು ಹೇಳಿ, ಆಗ ಆ ವ್ಯಕ್ತಿ ಭಕ್ತಿ ಮಾಡಲು ಪ್ರಾರಂಭಿಸುತ್ತಾನೆ. ಅವನಿಗೆ ಆ ದುಃಖವೇ ವರವಾಗಿ ಪರಿಣಮಿಸುತ್ತದೆ. ಆ ಧನಿಕ ವ್ಯಕ್ತಿಯು ತನ್ನ ಪುಣ್ಯವನ್ನು ಉಂಡು, ತಿಂದು, ಖರ್ಚುಮಾಡಿ ಖಾಲಿ ಮಾಡಿಕೊಂಡು, ಪಾಪದ ಮೂಟೆ ಹೊತ್ತುಕೊಂಡು, ಸಾವಿನ ನಂತರ ಪರಮಾತ್ಮನ ಆಸ್ಥಾನದಲ್ಲಿ ಜೋಲು ಮೋರೆ ಹಾಕಿಕೊಂಡು ಭಯಭೀತನಾಗಿ ನಿಲ್ಲುವನು, ನಾಯಿ–ಕತ್ತೆ, ಹಂದಿಯ ಜನ್ಮವು ಪಡೆಯುವನು. ಇದಕ್ಕೆ ವಿರುದ್ಧವಾಗಿ ದುಃಖದಿಂದಿರುವ ಬಡವನಾದ ವ್ಯಕ್ತಿಯು ಪರಮಾತ್ಮನ ಭಕ್ತಿಮಾಡುತ್ತಾ ದಾನಧರ್ಮ ಮಾಡಿ ಸುಖವಾದ ಜೀವನ ಹೊಂದುತ್ತಾನೆ. ಪಾಪಕರ್ಮಗಳಿಂದ ದೂರಾಗಿ ಪುಣ್ಯದ ಮೂಟೆ ಹೊತ್ತು ಭಕ್ತಿ ಎನ್ನುವ ಧನದಿಂದ ಧನಿಕನಾಗಿ ಪರಮಾತ್ಮನ ಆಸ್ಥಾನದಲ್ಲಿ ನಿರ್ಭಯನಾಗಿ ನಿಲ್ಲುತ್ತಾನೆ. ಪರಮಾತ್ಮನು ಅವನನ್ನು ತನ್ನ ಹತ್ತಿರಕ್ಕೆ ಬರಮಾಡಿಕೊಳ್ಳುತ್ತಾನೆ. ಆ ಭಕ್ತನಿಗೆ ಮೋಕ್ಷವನ್ನು ಕರುಣಿಸಿ, ಎಂದೆಂದಿಗೂ ಸುಖವನ್ನು ನೀಡುತ್ತಾನೆ.ಹಾಗೊಂದು ವೇಳೆ ಧನಿಕ–ರಾಜ್ಯ ಪದವಿ ಪಡೆದ ಸುಖಿ ವ್ಯಕ್ತಿಯೂ ಸಹ ಭಕ್ತಿ ಮಾಡತೊಡಗಿದರೆ ಅವನ ಕಾರ್ಯವಂತು ಸಿದ್ಧಪಡಿಸಿದಂತೆ ಹಾಗೂ ಮೋಕ್ಷಕ್ಕೆ ಯಾವುದೇ ಅಡಚಣೆಯೂ ಆಗುವುದಿಲ್ಲ.

ಪ್ರಶ್ನೆ:– ಒಬ್ಬ ಸಜ್ಜನ ಪುರುಷನು 'ನಾನು ಮತ್ತಿನ ಪದಾರ್ಥ ತೆಗೆದುಕೊಳ್ಳುವುದಿಲ್ಲ. ಕೆಟ್ಟ ಚಟಗಳಿಂದ ದೂರವಿದ್ದೇನೆ. ಪರಸ್ತ್ರೀಯರನ್ನು ಅಕ್ಕ ತಂಗಿಯರಂತೆ ಕಾಣುತ್ತೇನೆ. ಯಾವುದೇ ಪಾಪ ಮಾಡುವುದಿಲ್ಲ. ನನಗೆ ಭಕ್ತಿಯ ಅವಶ್ಯಕತೆ ಇಲ್ಲ, ಬೇರೆಯವರು ಕೆಟ್ಟಕೆಲಸ ಮಾಡಿ, ಸತ್ಸಂಗಕ್ಕೆ ಹೋಗುತ್ತಾರೆ' ಎಂದನು.

ಉತ್ತರ:– ಹೇಗೆ ಎರಡು ಎಕರೆ ಜಮೀನಿದೆ. ಒಂದು ಎಕರೆಯನ್ನು ಟ್ರಾಕ್ಟರಿನಿಂದ ಉತ್ತು, ಫಲವತ್ತಾಗಿ ಮಾಡಲಾಗಿದೆ. ಅಂದರೆ ಅದರಲ್ಲಿನ ಗಿಡ–ಗಂಟಿಗಳನ್ನು, ಹುಲ್ಲು ತೆಗೆದು ಟ್ರಾಕ್ಟರಿನಿಂದ ಸ್ವಚ್ಛಗೊಳಿಸಲಾಗಿದೆ ಆದರೆ ಬೀಜ ಬಿತ್ತಿಲ್ಲ. ಇನ್ನೊಂದೆಕರೆ ಜಮೀನಿನಲ್ಲಿ ಹುಲ್ಲು, ಗಿಡಗಂಟಿಗಳು ಬೆಳೆದುನಿಂತಿವೆ. ಅವೆಲ್ಲಾ ಕೆಲಸಕ್ಕೆ ಬಾರದವು. ಹಾಗಾದ್ರೆ ಎರಡು ವ್ಯರ್ಥವಾಗಿವೆ. ಒಂದು ವೇಳೆ ಎರಡೇ ಎಕರೆಯ ಆ ಜಮೀನನ್ನು ಯಾರಾದರೂ ಸ್ವಲ್ಪ ಸ್ವಚ್ಛಮಾಡಿ, ಗೋಧಿಯನ್ನು ಬಿತ್ತಿದರೆ ಹಾಗೂ ಮೊದಲಿನ ಒಂದೆಕರೆ ಜಮೀನಿನಲ್ಲಿ ಏನನ್ನೂ ಬಿತ್ತಲಿಲ್ಲವೆಂದರೆ, ಮೊದಲನೆಯ ಜಮೀನಿಗಿಂತ ಎರಡನೆಯ ಜಮೀನು ಉಪಯುಕ್ತವಾಗಿದೆ, ಆದ್ದರಿಂದ ನೀವು ಯಾವುದೇ ದುಶ್ಚಟಗಳಿಂದ ದೂರವಿದ್ದರೂ, ನೀವು ಭಕ್ತಿ ಎನ್ನುವ ಬೀಜ ಬಿತ್ತದಿದ್ದರೆ ಯಾವುದೇ ಉಪಯೋಗವಾಗಲಾರದು. ಭಕ್ತಿ ಎನ್ನುವ ಬೀಜ ಬಿತ್ತಿದರೆ ನಿಮ್ಮ ಶರೀರ ಎನ್ನುವ ಜಮೀನು ಫಲನೀಡುವುದು.

ಯಾರು ಕೆಟ್ಟ ಕೆಲಸ ಮಾಡುತ್ತಿದ್ದರೋ, ಅವರಿಗೆ ಜ್ಞಾನವಾಯಿತು. ಕೆಟ್ಟತನ ಬಿಟ್ಟು ಭಕ್ತಿ ಮಾಡಲು ಪ್ರಾರಂಭಿಸಿದರು, ತಮ್ಮ ಬದುಕುವ ದಾರಿಯನ್ನು ಬದಲಿಸಿದರು, ಸ್ವಚ್ಛಗೊಳಿಸಿದರು, ಆಗ ಅವರಿಗೆ ತನ್ನ ಗುರಿ ಹತ್ತಿರವಾಯಿತು. ಕಬೀರ ಪರಮಾತ್ಮನ ಸತ್ಸಂಗವನ್ನು ಕೇಳಿ ತನ್ನ ದಿಕ್ಕನ್ನು ಬದಲಾಯಿಸಿಕೊಂಡು, ದೀಕ್ಷೆಯನ್ನು ಪಡೆದು, ಸತ್ಸಂಗಕ್ಕೆ ಹೋದ ಒಬ್ಬಳು ವೇಶ್ಯೆಯ ಕತೆಯನ್ನು ಮುಂದೆ ಓದಲಿದ್ದೀರಿ. ಆ ವೇಶ್ಯೆಯು ಸತ್ಸಂಗಕ್ಕೆ ಹೋಗಿದ್ದು ನಗರದ ಜನರಿಗೆ ಸರಿ ಕಾಣಲಿಲ್ಲ. ಮನಸ್ಸಿಗೆ ಬಂದಂತೆ ಮಾತನಾಡತೊಡಗಿದರು. ಕಬೀರನ ಸತ್ಸಂಗಕ್ಕೆ ಕೆಟ್ಟ ಹೆಂಗಸರು ಹೋಗುವರು, ಅವನು ಒಳ್ಳೆಯ ಸಂತನಲ್ಲ, ಅಲ್ಲಿ ಚರಿತ್ರಹೀನರು ಮಾತ್ರ ಸತ್ಸಂಗಕ್ಕೆ ಹೋಗುವರು. ನಿಮ್ಮ ಅಕ್ಕ ತಂಗಿಯರನ್ನು ಅಲ್ಲಿ ಕಳುಹಿಸಬೇಡಿ ಎಂದೆಲ್ಲಾ ಹೇಳಿದರು. ಊರಿನ ಜನರ ಮಾತುಗಳನ್ನು ಕೇಳಿ ಕೆಲವು ಭಕ್ತರು ಗರುಗಳೊಂದಿಗೆ ಅವರಂತೆ ಮಾತನಾಡತೋಡಗಿದರು. ಆಗ ಪರಮೇಶ್ವರನಾದ ಕಬೀರರು ಹೇಳಿದರು:–

ಕುಷ್ಟೀ ಹೋ ಸಂತ್ ಬಂದಗೀ ಕೀಜಿಯೇ ।
ಜೆ ಹೋ ವೈಶ್ಯಾ ಕೋ ಪ್ರಭು ವಿಶ್ವಾಸ್, ಚರಣ್ ಚಿತ್ ದೀಜಿಯೆ ॥

ಭಾವಾರ್ಥ:– ಒಂದೊಮ್ಮೆ ಒಬ್ಬ ಭಕ್ತನಿಗೆ ಕುಷ್ಟರೋಗವಿದ್ದು, ಅವನು ಭಕ್ತಿ ಮಾಡುತ್ತಿದ್ದರೆ ಆಗ ಭಕ್ತ ಸಮಾಜವು ಅವನನ್ನು ತಿರಸ್ಕಾರದಿಂದ ನೋಡಬಾರದು. ಬೇರೆ ಭಕ್ತರಿಗೆ ನಮಿಸುವಂತೆ ಅವನಿಗೂ ನಮಿಸಬೇಕು. ಅವನನ್ನು ಗೌರವಿಸಬೇಕು. ಅವನಿಗೆ ಧೈರ್ಯ ತುಂಬಬೇಕು. ಭಕ್ತಿಮಾಡುವುದರಿಂದ ಅವನ ಜೀವನವೂ ಸಾರ್ಥಕವಾಗುವುದು, ರೋಗವೂ ಗುಣವಾಗುವುದು. ಇದೇ ರೀತಿ ಯಾರೋ ವೇಶ್ಯೆ ಅಕ್ಕ–ತಂಗಿಯರಿಗೆ ಭಕ್ತಿ ಮಾಡುವ, ಸತ್ಸಂಗಕ್ಕೆ ಬರುವ ಪ್ರೇರಣೆಯಾಗಿದೆ, ಆಗ ಅವಳಿಗೆ ಪರಮಾತ್ಮನಲ್ಲಿ ನಂಬಿಕೆ ಬಂದಿದೆ, ಅವಳು ಸತ್ಸಂಗದ ವಿಚಾರವನ್ನು ಕೇಳಿದರೆ ಅವಳ ಕೆಟ್ಟತನ ದೂರವಾಗುತ್ತದೆ, ಅವಳ ಉದ್ಧಾರವಾಗುವುದು. ಸಮಾಜದಿಂದ ದುಷ್ಟತನ ಹೋಗುವುದು. ಅವಳು ಸತ್ಸಂಗಕ್ಕೆ ಬರದಿದ್ದರೆ ಅವಳಿಗೆ ಅವಳ ಪಾಪಕರ್ಮಗಳ ಬಗ್ಗೆ ತಿಳಿಯುವುದಾದರೂ ಹೇಗೆ? ಕೊಳೆ ಬಟ್ಟೆಯು ನೀರು ಮತ್ತು ಸಾಬೂನಿನ ಸಂಪರ್ಕದಲ್ಲಿ ಬರದಿದ್ದರೆ ಸ್ವಚ್ಛವಾಗುವುದಾದರೂ ಹೇಗೆ? ಆದ್ದರಿಂದ ಕುಲಟೆಯೂ ಸಹ ಭಕ್ತಿ ಮಾಡುತ್ತಿದ್ದರೆ ಅವಳನ್ನು ಗೌರವದಿಂದ ಕಾಣಬೇಕು. ಆಗ ಅವಳಿಗೆ ಸತ್ಸಂಗಕ್ಕೆ ಬರಲು ಸಂಕೋಚವಾಗುವುದಿಲ್ಲ. ನೀವು ಅವಳನ್ನು ತಡೆದರೆ ನೀವೇ ಪಾಪಕ್ಕೆ ತುತ್ತಾಗುವಿರಿ. ಇನ್ನುಳಿದ ಕತೆಯನ್ನು ಇದೆ ಪುಸ್ತಕದಲ್ಲಿ 'ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ' ಎಂಬ ಹೆಡ್ಡಿಂಗ್ ನಲ್ಲಿ ಓದಿರಿ.

ಶ್ರೀಮದ್ಭಗವದ್ಗೀತೆಯ **9**ನೇ ಅಧ್ಯಾಯದ **30**ನೇ ಶ್ಲೋಕದಲ್ಲಿಯೂ ಇದರ ಪ್ರಮಾಣವಿದೆ. ಯಾರಾದರೂ ಅತ್ಯಂತ ದುರಾಚಾರಿ ವ್ಯಕ್ತಿಯು ನಂಬಿಕೆ ಇಟ್ಟು ಪರಮಾತ್ಮನ ಭಕ್ತಿಮಾಡ ತೊಡಗಿದರೆ ಅವನನ್ನು ಮಹಾತ್ಮನಿಗೆ ಸಮಾನನಂತೆ ಕಾಣಬೇಕು ಎಂದು ಹೇಳಿದೆ. ಅವನು ಸಂತರ ವಿಚಾರಗಳಿಂದ ಬದಲಾಗಬಲ್ಲ ಮತ್ತು ತನ್ನ ಉದ್ಧಾರ ಮಾಡಿಕೊಳ್ಳುವನು. ಆದ್ದರಿಂದ ಮಾನವ ಶರೀರವುಳ್ಳವರು ಪರಮಾತ್ಮನ ಭಕ್ತಿ ಮತ್ತು ಶುಭ ಕರ್ಮ, ದಾನ–ಧರ್ಮ, ಗುರುಗಳ ಶರಣದಲ್ಲಿ ಬಂದು ಖಂಡಿತ ಮಾಡಬೇಕು.

ಕಬೀರ್ ಪರಮೇಶ್ವರರು ಹೇಳಿದ್ದಾರೆ:–

ಕಬೀರ್, ಮಾನುಷ್ ಜನ್ಮ್ ದುರ್ಲಭ್ ಹೈ, ಮಿಲೇ ನ ಬಾರಂ–ಬಾರ್ ।
ತರ್‌ವರ್ ಸೇ ಪತ್ತಾ ಟೂಟ್ ಗಿರೇ, ಬಹುರ್ ನಾ ಲಾಗೇ ಡಾರ್ ॥

ಭಾವಾರ್ಥ:– ಹೇ ಮಾನವ ಶರೀರಧಾರಿ ಜೀವಾತ್ಮ! ಮಾನವ(ಸ್ತ್ರೀ–ಪುರುಷ) ಜನ್ಮ ಬಹಳ ಕಷ್ಟದಿಂದ ಹಾಗೂ ಯುಗ ಯುಗಗಳ ಪುಣ್ಯಗಳಿಂದ ಪ್ರಾಪ್ತವಾಗುತ್ತದೆ. ಇದು ಮತ್ತೆ ಮತ್ತೆ ಸಿಗುವುದಿಲ್ಲ. ಈ ಶರೀರವಿದ್ದಾಗಲೇ ಶುಭ ಕರ್ಮ ಹಾಗೂ ಪರಮಾತ್ಮನ ಭಕ್ತಿ ಮಾಡು. ಇಲ್ಲದಿದ್ದರೆ ಈ ಶರೀರ ನಾಶವಾಗಿಹೋದರೆ. ನೀವು ಇದೇ ಸ್ಥಿತಿ ಅಂದರೆ ಮಾನವ ಶರೀರವು

ಪ್ರಾಪ್ತವಾಗುವುದಿಲ್ಲ. ಹೇಗೆ ಮರದಿಂದ ಉದುರಿದ ಎಲೆ ಮತ್ತೆ ಮರವನ್ನು ಸೇರುವುದಿಲ್ಲವೋ ಹಾಗೆ ಈ ಶರೀರ ಮತ್ತೆ ನಿನಗೆ ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಈ ಮನವ ಶರೀರ ಅವಕಾಶ ವ್ಯರ್ಥ ಕಳೆಯಬೇಡಾ ಕಬೀರರು ಮತ್ತೆ ಹೇಳಿದ್ದಾರೆ, ಏನೆಂದರೆ :–

ಕಬೀರ್, ಮಾನುಷ್ ಜನ್ಮ್ ಪಾಯ್ ಕರ್, ನಹೀಂ ರಟ್ಯೆಂ ಹರಿ ನಾಮ್ ।
ಜೈಸೆ ಕುಆ ಜಲ್ ಬಿನಾ, ಬನ್‌ವಾಯಾ ಕ್ಯಾ ಕಾಮ್ ॥

ಭಾವಾರ್ಥ:– ಮಾನವ ಜೀವನದಲ್ಲಿ ಭಕ್ತಿ ಮಾಡದಿದ್ದರೆ ಆ ಜೀವನವೊಂದು ಸುಂದರವಾದ ಬಾವಿ ಇದ್ದಂತೆ. ಅದರಲ್ಲಿ ನೀರು ಇರದಿದ್ದರೆ ಅಥವಾ ನೀರಿದ್ದರೂ ಉಪ್ಪು ನೀರಾಗಿದ್ದರೆ, ಅದರ ಹೆಸರಂತು ಬಾವಿಯಾಗಿದೆ, ಆದರೆ ಗುಣ ಬಾವಿಯದ್ದಲ್ಲ(**well**). ಹಾಗೆಯೇ ಮನುಷ್ಯನು ಭಕ್ತಿ ಮಾಡದಿದ್ದರೂ ಅವನನ್ನು ಮನುಷ್ಯ ಎನ್ನುವರು, ಆದರೆ ಮನುಷ್ಯನ ಗುಣಗಳಿಲ್ಲ.

ಪೂರ್ವ ಜನ್ಮಗಳಲ್ಲಿ ಮಾಡಿದ ಶುಭ–ಅಶುಭ ಕರ್ಮಗಳಿಂದ ಹಾಗೂ ಭಕ್ತಿಯ ಕಾರಣದಿಂದ ಯಾರಾದರೂ ಆರೋಗ್ಯದಿಂದಿರಬಹುದು. ಆದರೆ 'ಮುಂದೆ ಅವನೇ ರೋಗಿಯಾಗಿ, ಲಕ್ಷಾಂತರ ಹಣ ಚಿಕಿತ್ಸೆಗಾಗಿ ಖರ್ಚುಮಾಡಿ ಮರಣ ಹೊಂದುತ್ತಾನೆ. ಯಾರೋ ಜನ್ಮತಃ ರೋಗಿಯಾಗಿರುತ್ತಾನೆ, ಜೀವನ ಪೂರ್ತಿ ಕಷ್ಟಪಟ್ಟು ಸಾಯುತ್ತಾನೆ, ಯಾರೋ ಬಡವನಿರಬಹುದು, ಯಾರೋ ಜನ್ಮದಿಂದಲೇ ಶ್ರೀಮಂತನಿರಬಹುದು, ಯಾರಿಗೋ ಮಕ್ಕಳು ಹುಟ್ಟುತ್ತಾರೆ, ಇನ್ಯಾರಿಗೋ ಮಕ್ಕಳೇ ಆಗುವುದಿಲ್ಲ, ಮತ್ತೊಬ್ಬರಿಗೆ ಗಂಡು ಮಕ್ಕಳಾಗದೆ, ಬರೀ ಹೆಣ್ಣು ಮಕ್ಕಳು ಹುಟ್ಟುತ್ತವೆ. ಇದೆಲ್ಲ ಮಾನವನು ಪೂರ್ವಜನ್ಮದ ಕರ್ಮಗಳ ಫಲ ಅನುಭವಿಸುತ್ತಾನೆ. ಎಲ್ಲಿಯವರೆಗೆ ಅವನು ಪುನಃ ಭಕ್ತಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಪೂರ್ವಜನ್ಮದ ಸಂಸ್ಕಾರಗಳೇ ಜೀವಾತ್ಮಕ್ಕೆ ಪ್ರಾಪ್ತವಾಗುತ್ತದೆ. ಯಾವಾಗ ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದುಕೊಂಡು, ನಿಯಮದಲ್ಲಿದ್ದು ಭಕ್ತಿ ಮಾಡಲಾಂಭಿಸುತ್ತಾನೆ ಆಗ ಶುಭ ಸಂಸ್ಕಾರದಲ್ಲಿ ವೃದ್ಧಿಯಾಗುವುದರಿಂದ ದುಃಖದ ಸಮಯ ಸುಖದಲ್ಲಿ ಬದಲಾಗುತ್ತದೆ.

## "ಮಾನವ ಜೀವನದ ಸಾಮಾನ್ಯ ಅನಿಸಿಕೆ"

ಯಥಾರ್ಥ ಆಧ್ಯಾತ್ಮಿಕ ಜ್ಞಾನವುಂಟಾಗದಿದ್ದಾಗ ಜನ ಸಾಮಾನ್ಯರ ಅನಿಸಿಕೆ ಈ ರೀತಿ ಇರುತ್ತದೆ.

**1)**ದೊಡ್ಡವನಾಗಿ, ಓದಿ, ಬರೆದು, ತನ್ನ ಜೀವನ ನಿರ್ವಹಣೆಗಾಗಿ ಹುಡುಕಾಟ ನಡೆಸಿ, ವಿವಾಹ ಮಾಡಿಕೊಂಡು, ಕುಟುಂಬದ ಪೋಷಣೆ ಮಾಡೋಣ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸೋಣ. ನಂತರ ಅವರಿಗೆ ನೌಕರಿ ಸಿಗುವಂತಾಗಲಿ. ಅವರಿಗೆ ಮದುವೆ ಮಾಡೋಣ. ದೇವರು ಆ ಮಕ್ಕಳಿಗೆಲ್ಲಾ ಮಕ್ಕಳನ್ನು ಕರುಣಿಸಲಿ. ನಂತರ ನಮ್ಮ ಕರ್ತವ್ಯವು ಪೂರ್ಣವಾಯಿತು. ಒಮ್ಮೊಮ್ಮೆ ಹಳ್ಳಿಯ ಅಥವಾ ಪಕ್ಕದ ಹಳ್ಳಿಯ ಯಾರಾದರೂ ವೃದ್ಧರು ಸಿಕ್ಕರೆ ಪರಸ್ಪರ ಕ್ಷೇಮ ಸಮಾಚಾರ ವಿಚಾರಿಸಿದಾಗ ಒಬ್ಬರು, "ಭಗವಂತನ ಕೃಪೆಯಿಂದ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರನ್ನು ಬಹಳ ಕಷ್ಟಪಟ್ಟು ಬೆಳೆಸಿದೆ, ಓದಿಸಿದೆ, ಮದುವೆಯನ್ನೂ ಮಾಡಿದೆ. ಈಗ ಎಲ್ಲರಿಗೂ ಮಕ್ಕಳಿವೆ, ನನ್ನ ಜವಾಬ್ದಾರಿ ಮುಗಿಯಿತು. 75 ವರ್ಷದವನಾಗಿದ್ದೇನೆ. ಈಗ ಒಳ್ಳೆಯ ಸಾವು ಬಂದುಬಿಟ್ಟರೆ ನನ್ನ ಜೀವನ ಸಾರ್ಥಕವಾಯಿತು. ವಂಶದ ಕುಡಿ ಬೆಳೆಯಿತು. ವಂಶೋದ್ಧಾರವಾಯಿತು. ಸಮಾಜದಲ್ಲಿ ಹೆಸರಿರುತ್ತದೆ" ಎನ್ನುತ್ತಾರೆ.

ವಿವೇಚನೆ:– ಮೇಲೆ ತಿಳಿಸಿದ ಪ್ರಸಂಗದಲ್ಲಿ ಅವರಿಗೆ ಏನೆಲ್ಲಾ ಸಿಕ್ಕಿದೆಯೋ, ಅದು ಪೂರ್ವ ನಿರ್ಧಾರಿತ ಸಂಸ್ಕಾರದಿಂದ ಪ್ರಾಪ್ತವಾಗಿದೆ. ಹೊಸದೇನೂ ಸಿಗಲಿಲ್ಲ.

ಒಬ್ಬ ವ್ಯಕ್ತಿಗೆ ಮದುವೆಯಾಯಿತು. ಅವನಿಗೆ ಒಬ್ಬಳು ಮಗಳು ಹುಟ್ಟಿದಳು. ಅವನಿಗೆ ಗಂಡುಮಗುವಾಗಲಿಲ್ಲ, ಅವನ ವಂಶ ಉದ್ಧಾರವಾಗುವುದಿಲ್ಲ ಎನ್ನುವುದು ಸಮಾಜದ ಅಭಿಪ್ರಾಯ. (ಆದರೆ ಆಧ್ಯಾತ್ಮಿಕ ಜ್ಞಾನದ ದೃಷ್ಟಿಯಲ್ಲಿ ಮಗ–ಮಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.) ಎರಡನೆಯ ಮಗು ಗಂಡುಮಗುವಾದೀತೆಂದು ಆಸೆ. ಆದರೆ 2ನೆಯದೂ ಹೆಣ್ಣುಮಗುವೇ ಆಯಿತು. ಪರಮಾತ್ಮನು ಮೂರನೆಯದನ್ನಾದರೂ ಗಂಡು ಮಗುವನ್ನು ಕೊಡುವನೆಂಬ

ಆಸೆ. ಆದರೆ ಮೂರನೆಯದೂ ಹೆಣ್ಣುಮಗುವಾಯಿತು. ಈ ರೀತಿ ಒಟ್ಟು ಐದು ಹೆಣ್ಣುಮಕ್ಕಳು ಹುಟ್ಟಿದವು. ಗಂಡುಮಗುವಾಗಲೇ ಇಲ್ಲ. ಈ ಉದಾಹರಣೆಯಿಂದ ಮಾನವನು ಇಷ್ಟಪಟ್ಟಿದ್ದೂ ಆಗಲಾರದು, ಅವನು ಪ್ರಯತ್ನ ಪಟ್ಟಿದ್ದೂ ಆಗಲಾರದು ಎಂದು ಸ್ಪಷ್ಟವಾಗುತ್ತದೆ. ಏನೆಲ್ಲಾ ಜರುಗಿತೋ, ಸಂಸ್ಕಾರದಿಂದಲೇ ಜರುಗಿದೆ. ಇದು ಪರಮಾತ್ಮನ ವಿಧಾನವಾಗಿದೆ. ಮಾನವಶರೀರ ಸಿಕ್ಕ ಜೀವಾತ್ಮವು ವರ್ತಮಾನ ಜನ್ಮದಲ್ಲಿ ಪೂರ್ಣಸಂತರಿಂದ ದೀಕ್ಷೆ ಪಡೆದು ಭಕ್ತಿ ಮಾಡಬೇಕು ಹಾಗೂ ದಾನ–ಧರ್ಮ, ಶುಭಕರ್ಮಗಳನ್ನು ಅವಶ್ಯ ಮಾಡಬೇಕು. ಇಲ್ಲದಿದ್ದರೆ ಪೂರ್ವಜನ್ಮದ ಪುಣ್ಯವು ವರ್ತಮಾನ ಜನ್ಮದಲ್ಲಿ ಖರ್ಚುಮಾಡಿ ಬರಿಗೈಯ್ಯಲ್ಲಿ ಪರಮಾತ್ಮನ ಆಸ್ಥಾನಕ್ಕೆ ಹೋಗುತ್ತಾನೆ. ನಂತರ ಪಶು ಮುಂತಾದ ಜೀವನದಲ್ಲಿ ಹುಟ್ಟಬೇಕಾಗುತ್ತದೆ.

ರೈತನು ತನ್ನ ಹೊಲದಲ್ಲಿ ಗೋಧಿ, ಕಡಲೆ ಬಿತ್ತುತ್ತಾನೆ. ನಂತರ ಪರಿಶ್ರಮದಿಂದ ಅದನ್ನು ಬೆಳೆದು ಮತ್ತೆ ಗೋಧಿ ಕಡಲೆಯನ್ನು ಮನೆಗೆ ತಂದು ತುಂಬುತ್ತಾನೆ. ಹಾಗೊಮ್ಮೆ ಅವನು ಪುನಃ ಬೀಜ ಬಿತ್ತಿ ಫಸಲನ್ನು ತೆಗೆಯದೆ ಹಿಂದಿನವರ್ಷದ ಬೆಳೆಯನ್ನು ತಿನ್ನುತ್ತಾ ಬಂದರೆ, ಸದ್ಯಕ್ಕೆ ಅವನಿಗೆ ಯಾವುದೇ ಆಪತ್ತು ಬರದಿರಬಹುದು, ಏಕೆಂದರೆ ಹಿಂದಿನ ವರ್ಷದ ಫಸಲು ಅವನ ಬಳಿ ಇದೆ. ಆದರೆ ಮುಂದೊಂದು ದಿನ ತನ್ನ ಬಳಿ ಸಂಗ್ರಹಿಸಿಟ್ಟುಕೊಂಡಿದ್ದ ಫಸಲು ಖಾಲಿಯಾಗಿ ಹೋದರೆ ಆಗ ಆ ರೈತ ಕುಟುಂಬ ಭಿಕ್ಷುಕರಾಗಿ ಬಿಡುವರು. ಅದೇ ರೀತಿ ಮಾನವ ಶರೀರದಲ್ಲಿರುವಾಗ ಏನೆಲ್ಲ ಪ್ರಾಪ್ತವಾಗುವುದೋ, ಅದೆಲ್ಲಾ ಪೂರ್ವ ಜನ್ಮದ ಸಂಗ್ರಹ. ಒಂದೊಮ್ಮೆ ಈ ಜನ್ಮದಲ್ಲಿ ಒಳ್ಳೆಯ ಕೆಲಸ, ಭಕ್ತಿ ಮಾಡದಿದ್ದರೆ ಭವಿಷ್ಯದಲ್ಲಿ ಜೀವನವು ನರಕವಾಗಿಬಿಡುವುದು.

ಆಧ್ಯಾತ್ಮಜ್ಞಾನ ಪ್ರಾಪ್ತಿಯಾದ ನಂತರ ಮಾನವನು ಬುದ್ಧಿವಂತ ರೈತನ ಹಾಗೆ ಪ್ರತೀ ವರ್ಷವೂ ಬೇರೆ ಬೇರೆ ಋತುಗಳಲ್ಲಿ ದಾನ, ಧರ್ಮ, ಸ್ಮರಣೆ, ಜಪ ಮುಂತಾದ ಬೀಜ ಬಿತ್ತುತ್ತಾನೆ ಮತ್ತು ತನ್ನ ಮನೆಯಲ್ಲಿ ಸಂಗ್ರಹಿಸಿ ತಿನ್ನುತ್ತಾನೆ ಹಾಗೂ ಅವುಗಳನ್ನು ಮಾರಿ ತನ್ನ ಖರ್ಚನ್ನೂ ನಿಭಾಯಿಸುತ್ತಾನೆ. ಅಂದರೆ ಪೂರ್ಣ ಗುರುವಿನಿಂದ ದೀಕ್ಷೆಯನ್ನು ಪಡೆದು ಅವರು ಹೇಳಿದಂತೆ ಸಾಧನೆಯನ್ನು ಮಾಡಬೇಕು ಮತ್ತು ದಾನಧರ್ಮವನ್ನು ಪ್ರತಿಯೊಂದು ಕಾರ್ಯಕ್ರಮದಲ್ಲಿ ಮಾಡಿ ಭಕ್ತಿ ಎಂಬ ಧನವನ್ನು ಸಂಗ್ರಹಿಸಿಡುವನು. ಆದ್ದರಿಂದ ಪರಮ ಸಂತರು ಮಾನವನಿಗೆ ಬದುಕುವ ದಾರಿಯನ್ನು ತಿಳಿಸುತ್ತಾರೆ. ಅವನ ಆಧಾರ ಸತ್ಯ ಆಧ್ಯಾತ್ಮಿಕಜ್ಞಾನ ಸರ್ವಗ್ರಂಥಗಳಿಂದ ಪ್ರಮಾಣಿತವಾಗಿರುತ್ತದೆ.

ಮೇಲೆ ಹೇಳಿದ ಪ್ರಸಂಗದಲ್ಲಿ ವೃದ್ಧನು ತನ್ನೆಲ್ಲ ಮಕ್ಕಳನ್ನು ಪೋಷಿಸಿ, ಮದುವೆ ಮಾಡಿದ್ದಾನೆ. ನನ್ನ ಮಾನವ ಜೀವನದ ಕಾರ್ಯವು ಪೂರ್ಣಗೊಂಡಿತು, ನನ್ನ ಜೀವನ ಸಾರ್ಥಕವಾಯಿತು. ಈಗ ಸಾವು ಬರಲಿ ಎನ್ನುತ್ತಾನೆ. ಆದರೆ ಇಲ್ಲಿ ಯೋಚಿಸಬೇಕಾದ ವಿಷಯವೆನೆಂದರೆ ಅವನು ಪೂರ್ವಜನ್ಮದಲ್ಲಿ ಸಂಗ್ರಹಿಸಿದ್ದನ್ನು ಖರ್ಚುಮಾಡಿದ್ದಾನೆ. ಭವಿಷ್ಯಕ್ಕಾಗಿ ಏನನ್ನೂ ಮಾಡಲಿಲ್ಲ. ಆ ಕಾರಣಕ್ಕಾಗಿ ವ್ಯಕ್ತಿಯ ಮಾನವ ಜೀವನವು ವ್ಯರ್ಥವಾಗಿ ಹೋಯಿತು.ಕಬೀರರು ಹೇಳುತ್ತಾರೆ :–

ಕ್ಯಾ ಮಾಂಗು ಕುಛ್ ಥಿರ್ ನಾ ರಹಾಈ । ದೇಖತ್ ನೈನ್ ಚಲಾ ಜಗ್ ಜಾಈ ॥
ಏಕ್ ಲಖ್ ಪೂತ್ ಸವಾ ಲಖ್ ನಾತೀ । ಉಸ್ ರಾವಣ್ ಕೈ ದೀವಾ ನ ಬಾತೀ ॥

ಭಾವಾರ್ಥ:– ಒಬ್ಬ ಮನುಷ್ಯ ಒಂದು ಗಂಡು ಮಗುವಿನಿಂದ ತನ್ನ ವಂಶವೃಕ್ಷವು ಬೆಳೆಯುವುದೆಂದು ತಿಳಿದರೆ ಅದು ಅವನ ತಪ್ಪು ಕಲ್ಪನೆ. ಶ್ರೀಲಂಕಾದ ರಾಜನಾದ ರಾವಣನಿಗೆ ಒಂದು ಲಕ್ಷ ಪುತ್ರರಿದ್ದರು ಹಾಗೂ ಒಂದುಕಾಲು ಲಕ್ಷ ಮೊಮ್ಮಕ್ಕಳಿದ್ದರು, ಆದರೆ ಈಗ ಅವನ ಮನೆಯ ದೀಪವನ್ನು ಹಚ್ಚಲು ಅವನ ವಂಶದ ಯಾವ ಕುಡಿಯೂ ಉಳಿದಿಲ್ಲ. ಎಲ್ಲರೂ ನಾಶವಾಗಿ ಹೋಗಿದ್ದಾರೆ. ಆದ್ದರಿಂದ ಹೇ ಮಾನವ! ಶಾಶ್ವತವಲ್ಲದ್ದನ್ನು ಪರಮಾತ್ಮನಲ್ಲಿ ಏಕೆ ಕೇಳುವೆ? ಇದೆಲ್ಲ ಆಧ್ಯಾತ್ಮಿಕ ಜ್ಞಾನದ ಅಭಾವದಿಂದಲೇ ಪ್ರೇರಣೆಯಾಗಿದೆ. ಪರಮಾತ್ಮನು ನಿಮಗೆ ನಿಮ್ಮ ಸಂಸ್ಕಾರ ನೀಡುತ್ತಾನೆ. ನೀನು ಮಾಡಿದ ಕಾರ್ಯ ಏನೂ ನಡೆಯುತ್ತಿಲ್ಲ. ಏಕೆಂದರೆ ಆ ವೃದ್ಧನ ಮಾತನ್ನು ಒಪ್ಪಿಕೊಂಡರೆ, ಪುತ್ರಪ್ರಾಪ್ತಿಯಾಗುವುದರಿಂದ, ವಂಶವೃದ್ಧಿಯಾಗುವುದರಿಂದ

ಪ್ರಪಂಚದಲ್ಲಿ ಹೆಸರುಳಿಯುತ್ತದೆ.

ಒಂದು ಹಳ್ಳಿಯಲ್ಲಿ ಪ್ರಾರಂಭದಲ್ಲಿ ಕೇವಲ 4–5 ವ್ಯಕ್ತಿಗಳಿದ್ದರು. ಅವರ ವಂಶದ ನೂರಾರು ಕುಟುಂಬಗಳಾದವು. ಅವರ ವಂಶ ನಡೆಯುತ್ತಿದೆ. ಸಮಾಜದಲ್ಲಿ ಅವರ ಹೆಸರೂ ಮುಂದುವರಿಯುತ್ತಿದೆ. ಆದರೆ ಶಾಸ್ತ್ರಬದ್ಧವಾಗಿ ಭಕ್ತಿಯನ್ನು ಮಾಡದೆ ಇದ್ದ ಕಾರಣ ಪರಮಾತ್ಮನ ವಿಧಾನಾನುಸಾರ ಆ ಒಳ್ಳೆಯ ಮನುಷ್ಯನೂ ಸಹ ಮುಂದಿನ ಜನ್ಮದಲ್ಲಿ ಕತ್ತೆಯಾಗಿ ಕಷ್ಟವನ್ನು ಪಡಬೇಕಾಗುತ್ತದೆ. ನಂತರ ಅವನು ಕತ್ತೆಯ ವಂಶವನ್ನು ವೃದ್ಧಿಮಾಡಿ ನಂತರ ನಾಯಿಯ ಜನ್ಮವನ್ನು ತಾಳಿ ಅಲ್ಲಿ ಆ ಕುಲದ ವೃದ್ಧಿಮಾಡಿ, ಅನ್ಯ ಪ್ರಾಣಿಗಳ ಜನ್ಮವನ್ನು ತಳೆದು ಅಶಂಖ್ಯ ಜನ್ಮಗಳನ್ನು ಪಡೆದು ಕಷ್ಟ ಅನುಭವಿಸುವನು. ಅಂದರೆ ಮಾನವ ಜನ್ಮ ಪ್ರಾಪ್ತವಾದ ಜೀವಾತ್ಮವು ಸಾಂಸಾರಿಕ ಕರ್ತವ್ಯಗಳನ್ನು ಮಾಡುತ್ತಾ–ಮಾಡುತ್ತಾ ಆತ್ಮ ಕಲ್ಯಾಣದ ಕಾರ್ಯವನ್ನೂ ಮಾಡಬೇಕು. ಆಗ ಕುಟುಂಬದಿಂದ ಉಂಟಾಗುವ ಪೂರ್ವಪಾಪವೂ ದೂರವಾಗುವುದು ಹಾಗೂ ಕುಟುಂಬ ಸಂತೋಷದಿಂದಿರುವುದು. ಇಲ್ಲದಿದ್ದಲ್ಲಿ ಶುಭ–ಅಶುಭ ಎನ್ನುವ ಎರಡೂ ಕರ್ಮಫಲಗಳನ್ನು ಅನುಭವಿಸುವುದರಿಂದ ಒಮ್ಮೊಮ್ಮೆ ಸುಖ, ಒಮ್ಮೊಮ್ಮೆ ದುಃಖವನ್ನು ಸಹಿಸಿಕೊಳ್ಳಬೇಕಾಗುತ್ತದೆ.

ಒಂದು ಬಾರಿ ದಾಸ(ಲೇಖಕ) ಒಂದು ಹಳ್ಳಿಯಲ್ಲಿ ಮೂರುದಿನ ಸತ್ಸಂಗ–ಪಾಠ ಮಾಡುತ್ತಿದ್ದೆ. ಅದೇ ಕುಟುಂಬದ ಒಬ್ಬ ಸಂಬಂಧಿಕ ತನ್ನ ನಾಲ್ಕು ವರ್ಷದ ಮಗನನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದನು. ಚರ್ಚೆಯಲ್ಲಿ, ಅವನು ನನಗೆ ನಾಲ್ಕು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದು ಹೇಳಿದನು. ಎಲ್ಲರಿಗೂ ಮದುವೆ ಮಾಡಿದೆ. ನನ್ನಂಥಾ ಸುಖಿ ಈ ಹಳ್ಳಿಯಲ್ಲಿ ಇನ್ಯಾರೂ ಇರಲಿಲ್ಲ. ಆದರೆ ಕೇವಲ ಎರಡು ವರ್ಷಗಳಲ್ಲಿ ನನ್ನ ಮನೆ ನಾಶವಾಗಿ ಹೋಯಿತು. ಇಬ್ಬರು ಗಂಡು ಮಕ್ಕಳು ಮೋಟಾರು ಸೈಕಲಿನಲ್ಲಿ ಅತ್ತೆಯ ಮನೆಗೆ ಹೋಗುತ್ತಿದ್ದರು, ದುರ್ಘಟನೆಯಲ್ಲಿ ದೇವರು ಅವರನ್ನು ತನ್ನ ಬಳಿ ಕರೆಸಿಕೊಂಡನು. ಅವರ ಪತ್ನಿಯರು ಬೇರೆ ಊರಿನಲ್ಲಿ ಮದುವೆ ಮಾಡಿಕೊಂಡರು. 1 ವರ್ಷದ ನಂತರ ಒಬ್ಬ ಮಗನಿಗೆ ಹೊಲದಲ್ಲಿ ರಾತ್ರಿಯಲ್ಲಿ ಹಾವು ಕಡಿದು ಸಾವನ್ನಪ್ಪಿದನು. ನಾಲ್ಕನೆಯವ ದುಃಖದಿಂದ ಹೃದಯಾಘಾತದಿಂದ ತೀರಿಕೊಂಡನು. ಸೊಸೆಯರು ಹೊರಟು ಹೋದರು. ಪತ್ನಿಯು ಇದರಿಂದ ಹುಚ್ಚಿಯಾದಳು. ಈ ಹುಡುಗ ನನ್ನ ದೊಡ್ಡಮಗಳ ಮಗ, ಇವನನ್ನು ನೋಡಿಕೊಂಡು ದಿನ ಕಳೆಯುತ್ತಿದ್ದೇನೆ. ಮಗಳನ್ನು ಮನೆಯಲ್ಲೇ ಇಟ್ಟುಕೊಂಡಿದ್ದೇನೆ ಎಂದನು. ಓದುಗರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ವಿವೇಕದಿಂದ ವರ್ತಿಸಿ ಮತ್ತು ಮಾನವ ಜೀವನದ ಸರಿಯಾದ ದಾರಿಯಲ್ಲಿ ಸಾಗಿರಿ, ಭಕ್ತಿ ಅವಶ್ಯಕ ಮಾಡಿ.

ಮಕ್ಕಳಾಗುವುದು, ಆಗದೇ ಇರುವುದು ನಿಮ್ಮ ಪೂರ್ವಕರ್ಮಗಳ ಫಲ. ಮಕ್ಕಳಿಗೆ ಧರ್ಮ–ಕರ್ಮದ ಜ್ಞಾನವಿಲ್ಲದಿದ್ದರೆ, ಅವರು ಎಷ್ಟೇ ಒಳ್ಳೆಯವರಾಗಿದ್ದರೂ, ಯಾವಾಗಲಾದರೂ ತಪ್ಪನ್ನು ಮಾಡಿಯೇ ಮಾಡುತ್ತಾರೆ. ಅದೆಲ್ಲಾ ಪಾಪ ಕರ್ಮಗಳ ಕಾರಣದಿಂದ ಆಗುತ್ತದೆ. ಒಬ್ಬ ಹೇಳಿದ್ದೇನೆಂದರೆ ನನ್ನ ಮಾವ 4 ಎಕರೆಯುಳ್ಳ ಒಬ್ಬ ರೈತ, ಹಗಲಿರುಳೂ ಶ್ರಮಿಸಿ 16 ಎಕರೆ ಜಮೀನನ್ನು ಖರೀದಿಸಿದರು, ಅಂದರೆ ಹನ್ನೆರಡು ಎಕರೆ ಜಮೀನನ್ನು ಕೊಂಡುಕೊಂಡರು. ಅವರಿಗೆ ನಾಲ್ಕು ಗಂಡು ಮಕ್ಕಳಿದ್ದರು ಹಾಗೂ ಒಬ್ಬಳು ಮಗಳಿದ್ದಳು. ಎಲ್ಲರಿಗೂ ಮದುವೆ ಮಾಡಿದರು. ಅರವತ್ತು ವರ್ಷದ ವಯಸ್ಸಿನಲ್ಲಿ ನನ್ನ ಮಾವನಿಗೆ ಲಕ್ವ ಹೊಡೆಯಿತು. 4 ಜನ ಮಕ್ಕಳು ಬೇರೆ ಬೇರೆಯಾಗಿ ವಾಸಿಸುತ್ತಿದ್ದರು. ಸ್ವಲ್ಪದಿನ ದೊಡ್ಡಮಗನ ಮನೆಯಲ್ಲಿದ್ದರು, ಆರು ತಿಂಗಳಲ್ಲೇ ಅವರ ಬಟ್ಟೆಗಳಲ್ಲಿ ಕೆಟ್ಟ ವಾಸನೆ ಬರತೊಡಗಿತು. ನಂತರ 3ನೇ ಮಗನ ಮನೆಯಲ್ಲಿರತೊಡಗಿದರು, ಸ್ವಲ್ಪ ದಿನದ ನಂತರ ಅವನೂ ಹಿಂದೆ ಸರಿದನು. ಹೀಗೆ 4 ಜನ ಗಂಡು ಮಕ್ಕಳು ಇವರ ಸೇವೆಯಿಂದ ದೂರಸರಿದರು. ಹಳ್ಳಿಯ ಪಂಚಾಯಿತಿಯಲ್ಲಿ, ಯಾರು ತಂದೆಯ ಸೇವೆ ಮಾಡುವರೋ, ಅವರಿಗೆ ಆಸ್ತಿಯಲ್ಲಿ 2 ಎಕರೆ ಹೆಚ್ಚಾಗಿ ಕೊಡುವುದಾಗಿ ತೀರ್ಮಾನವಾಯಿತು. ಈ ದುರಾಸೆಯಲ್ಲಿ ಕೊನೆ ಮಗನು ತಂದೆಯ ಸೇವೆ ಮಾಡಲು ಒಪ್ಪಿಕೊಂಡನು. ಆದರೆ 6 ತಿಂಗಳಲ್ಲೇ ನನಗೆ ಸಾಧ್ಯವಿಲ್ಲ

ಎಂದು ಕೈ ಚೆಲ್ಲಿದನು. ಸಂಬಂಧಿಕರೆಲ್ಲಾ ಒಂದೆಡೆ ಸೇರಿದರು. ಎಲ್ಲಾ ಮಕ್ಕಳಿಗೂ ಬುದ್ಧಿವಾದ ಹೇಳಿದರು. ಆದರೆ ಯಾರೂ ಇವರ ಸೇವೆ ಮಾಡಲು ಸಿದ್ಧರಾಗಲಿಲ್ಲ. ನನ್ನ ಮಾವ, ಮಾತನ್ನು ಸಹ ಆಡುತ್ತಿರಲಿಲ್ಲ. ಎಂದು ಆ ಭಕ್ತ ಹೇಳುತ್ತಿದ್ದ. ಯಾವಾಗ ಮೊಮ್ಮಗ ಮುಂದೆ ಬಂದನೋ ಆಗ ಅವನು ತನ್ನ ಮೊಮ್ಮಗನನ್ನು ಸಂಕೇತದಿಂದಲೇ ಬಳಿ ಬರುವಂತೆ ಕರೆಯುತ್ತಾ ಮುದ್ದು ಮಾಡಲು ಇಷ್ಟಪಟ್ಟನು. ಮಕ್ಕಳಂತು ನೋಡಿದ್ದಾಯ್ತು, ಈಗ ಮೊಮ್ಮಕ್ಕಳ ನಂಬರ್ ಇದೆ. ಆ 2 ಎಕರೆ ಜಮೀನನ್ನು ಗುತ್ತಿಗೆಗೆ ಕೊಟ್ಟು ತಾತನನ್ನು ನೋಡಿಕೊಳ್ಳಲು ಒಬ್ಬ ಕೆಲಸದವನನ್ನು ಇಟ್ಟನು. ಹೀಗೆ ಆ ಮಾವನು ದುರ್ಗತಿಯಿಂದ ತೀರಿಕೊಂಡನು.

ಈಗ ವಿಚಾರ ಮಾಡುವ ವಿಷಯವೇನೆಂದರೆ, ಆ ಪರಿಶ್ರಮೀ ವ್ಯಕ್ತಿಗೆ ಭಕ್ತಿ ಮತ್ತು ಧರ್ಮವಿಲ್ಲದಿದ್ದರೆ ಮಾನವ ಜೀವನ ನರಕವಾಗುವುದೆಂದು ತಿಳಿದಿದ್ದರೆ ಅವನು ಜೊತೆಯಲ್ಲಿ ಪರಮಾತ್ಮನ ಭಕ್ತಿ ಕೂಡಾ ಮಾಡುತ್ತಿದ್ದನು. ಆಗ ಅವನಿಗೆ ಈ ಗತಿ ಒದಗುತ್ತಿರಲಿಲ್ಲ. ಮಕ್ಕಳೂ ಅವನ ಸೇವೆ ಮಾಡುತ್ತಿದ್ದರು. ಸತ್ಸಂಗದಲ್ಲಿ ಇದೇ ಶಿಕ್ಷಣವನ್ನು ನೀಡಲಾಗುತ್ತದೆ. ಶ್ರದ್ಧಾಳುಗಳಿಗೆ ದಯೆ ಮತ್ತು ಧರ್ಮದ ಪಾಠವನ್ನು ಹೇಳಿಕೊಡಲಾಗುತ್ತದೆ. ಆಶ್ರಮದಲ್ಲಿ ಸತ್ಸಂಗದ ಸಮಯ ವೃದ್ಧರು, ರೋಗಿಗಳು, ವಿಕಲಾಂಗರು, ಚಿಕ್ಕಮಕ್ಕಳ ಸಹಿತ ತಾಯಂದಿರು, ಅಕ್ಕಂದಿರು, ಹೆಣ್ಣುಮಕ್ಕಳು ಬರುತ್ತಾರೆ. ಆಶ್ರಮದಲ್ಲಿ ಹಳೇ ಭಕ್ತರು-ಭಕ್ತಮತಿಯರಿಗೆ ಸೇವೆ ನೀಡಲಾಗುತ್ತದೆ. ಅವರು ವೃದ್ಧರ ಹಾಗೂ ರೋಗಿಗಳ ಮತ್ತು ಅನ್ಯ ಅಸಹಾಯಕರ ಸೇವೆ ಮಾಡುತ್ತಾರೆ. ಅವರಿಗೆ ಸ್ನಾನ ಮಾಡಿಸುತ್ತಾರೆ, ಅವರ ಬಟ್ಟೆ ಒಗೆಯುತ್ತಾರೆ. ಭೋಜನಾಲಯದಿಂದ ಭೋಜನ ಪ್ರಸಾದವನ್ನು ತಂದು ಪೆಂಡಾಲಿನಲ್ಲಿ ಕುಳಿತಿರುವವರಿಗೆ ತಿನ್ನಿಸುತ್ತಾರೆ. ಹಾಗೆ ಹಾಲು-ಟೀ ಅಲ್ಲೇ ತಂದು ಕುಡಿಸುತ್ತಾರೆ. ವಿಚಾರ ಮಾಡಿ ಯಾವ ಮಕ್ಕಳು (ಸತ್ಸಂಗದಲ್ಲಿ ಬರುವವರು) ಹಾಗು ಮಗಳು, ತಾಯಿ-ತಂಗಿಯರು ಮತ್ತು ಭಕ್ತರು ಸತ್ಸಂಗದಲ್ಲಿ ಬರುವವರ ಸಂಬಂಧವೇ ಇಲ್ಲದವರ ಸೇವೆ ಮಾಡುವವರು ಮನೆಯಲ್ಲಿ ತಮ್ಮ ಸ್ವಂತ ತಾಯಿ-ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿ, ಅತ್ತೆ-ಮಾವನ ಸೇವೆ ಮಾಡುವರು ಏಕೆಂದರೆ ಅವರ ಸ್ವಭಾವ ಹಾಗಾಗುತ್ತದೆ. ಅವರ ಮನಸ್ಸಿನಲ್ಲಿ ದಯೆಯೇ ತುಂಬಿರುತ್ತದೆ. ಅವರಿಗೆ ಪರಮಾತ್ಮನ ವಿಧಾನವು ಚೆನ್ನಾಗಿ ತಿಳಿದಿರುತ್ತದೆ. ಮೇಲೆ ತಿಳಿಸಿದ ಪ್ರಸಂಗದಲ್ಲಿ ಅಂದರೆ ಆ ಪರಿಶ್ರಮಿ ರೈತನು ಲಕ್ವದಿಂದ ನರಳುವುದು ಹಾಗೂ ಅವರ ಮಕ್ಕಳು ಅವರನ್ನು ನೋಡಿಕೊಳ್ಳದೇ ಇರುವುದು ಎಲ್ಲವೂ ಆಯಿತು. ಒಂದು ವೇಳೆ ಆ ಮಕ್ಕಳು ಹಾಗೂ ಸೊಸೆಯಂದಿರು ಸತ್ಸಂಗಕ್ಕೆ ಹೋಗಿದ್ದರೆ ಅವರು ತಮ್ಮ ತಂದೆಯ ಸೇವೆ ಮಾಡುತ್ತಿದ್ದರು. ಒಂದು ವೇಳೆ ಆ ರೈತನು ಪರಮಾತ್ಮನ ಭಕ್ತಿ ಮಾಡುತ್ತಿದ್ದರೆ ಅವನ ಶರೀರವು ಆರೋಗ್ಯಪೂರ್ಣವಾಗಿರುತ್ತಿತ್ತು ಮತ್ತು ಅವನ ಭಕ್ತಿಯ ಕಾರಣದಿಂದ ಭಜನೆಯಿಂದ ಪ್ರಭಾವಿತರಾಗಿ ಕುಟುಂಬದವರು ಸ್ವತಃವೇ ಗೌರವ ನೀಡುತ್ತಾರೆ. ಉದಾಹರಣೆಗೆ ಸಾಧು ಸಂತರು ಭಕ್ತಿಯೇ ಮಾಡುತ್ತಾರೆ ಹಾಗಾಗಿ ಇಡೀ ಹಳ್ಳಿಯೇ ಅವರ ಸೇವೆ-ಸತ್ಕಾರ ಮಾಡುತ್ತದೆ. ಇದೇ ರೀತಿ ಭಕ್ತಿ ಮಾಡುವುದರಿಂದ ಪರಮಾತ್ಮನ ಶಕ್ತಿಯು ತನ್ನಿಂದ ತಾನೇ ಬೇರೆಯವರಿಗೆ ಪ್ರೇರೇಪಿಸುತ್ತಾ ಭಕ್ತನಿಗೆ ಅನುಕೂಲಕರ ಪರಿಸ್ಥಿತಿ ಮಾಡುತ್ತದೆ. ಆದ್ದರಿಂದ ಸಂತರು ಭಕ್ತಿಮಾಡಲು ಪ್ರೇರಣೆ ನೀಡುತ್ತಾರೆ. ಸತ್ಸಂಗದಿಂದ ಒಳ್ಳೆಯ ಬದುಕುವ ದಾರಿ ಸಿಗುತ್ತದೆ.

ನಂತರ ಕಬೀರ ಪರಮೇಶ್ವರರು ಹೇಳುತ್ತಾರೆ:-

ಕಬೀರ್, ಕಾಯಾ ತೇರಿ ಹೈ ನಹೀಂ, ಮಾಯಾ ಕಹಾಂ ಸೆ ಹೋಯ್ ।
ಭಕ್ತಿ ಕರ್ ದಿಲ್ ಪಾಕ್ ಸೆ, ಜೀವನ್ ಹೈ ದಿನ್ ದೋಯ್ ॥
ಬಿನ್ ಉಪದೇಶ್ ಅಚಂಭ್ ಹೈ, ಕ್ಯೋಂ ಜಿವತ್ ಹೈ ಪ್ರಾಣ್ ।
ಭಕ್ತಿ ಬಿನಾ ಕಹಾಂ ಠೌರ್ ಹೈ, ಯೆ ನರ್ ನಾಹೀಂ ಪಾಷಾಣ್ ॥

ಭಾವಾರ್ಥ:- ಪರಮಾತ್ಮ ಕಬೀರ್ ಹೇಳುವುದೇನೆಂದರೆ, 'ಹೇ ಮುಗ್ಧ ಮನುಷ್ಯನೇ, ನನಗಂತು ಆಶ್ಚರ್ಯವಾಗುತ್ತದೆ ಗುರುವಿನಿಂದ ದೀಕ್ಷೆ ಪಡೆಯದೆ ಯಾವ ಆಸೆಯಿಂದ ಬದುಕಿರುವೆ?

ಶರೀರವೂ ನಿನ್ನದಲ್ಲ, ಅದನ್ನು ತ್ಯಜಿಸಿ ಹೋಗುವೆ. ಹಾಗಾದರೆ ಸಂಪತ್ತೆಲ್ಲಿಂದ ನಿನ್ನದಾಯ್ತು?'

**ಭಕ್ತಿ ಇಲ್ಲದೆ ಜೀವಾತ್ಮಕ್ಕೆ ಎಲ್ಲಿಯೂ ನೆಲೆಯೇ ಇಲ್ಲ ಎನ್ನುವ ವಿವೇಕ ಯಾರಿಗಿಲ್ಲವೋ ಅವರು ನರ ಅಂದರೆ ಮನುಷ್ಯ ಅಲ್ಲ, ಅವರಂತು ಒಂದು ಕಲ್ಲು, ಅವರ ಬುದ್ಧಿಗೆ ಮಂಕು ಕವಿದಿದೆ ಎಂದರ್ಥ. ಕಬೀರರು ಮತ್ತೆ ಹೇಳುವುದೇನೆಂದರೆ,**

ಅಗಮ್ ನಿಗಮ್ ಕೋ ಖೋಜ್ ಲೇ, ಬುದ್ಧಿ ವಿವೇಕ್ ವಿಚಾರ್।
ಉದಯ್-ಅಸ್ತ್ ಕಾ ರಾಜ್ ಮಿಲೆ, ತೋ ಬಿನ್ ನಾಮ್ ಬೇಗಾರ್ ॥

**ಭಾವಾರ್ಥ:- ಒಂದು ಕಾಲದಲ್ಲಿ ಪೊಲೀಸ್ ಠಾಣೆಯಲ್ಲಿ ಜೀಪು, ಕಾರುಗಳು ಇತ್ಯಾದಿ ವಾಹನಗಳು ಇರುತ್ತಿರಲಿಲ್ಲ. ಪೋಲೀಸರು ರೇಡ್ ಮಾಡಬೇಕಾದರೆ ಯಾವುದಾದರೂ ಖಾಸಗಿ ಥ್ರೀ ವ್ಹಿಲರ್ ಅಥವಾ ಫೊರ್ ವ್ಹಿಲರ್ ಬಲವಂತವಾಗಿ ಹಿಡಿದು ತರುತ್ತಿದ್ದರು. ಮತ್ತು ಅವನ ವಾಹನದಲ್ಲಿ(ಥ್ರೀ ವ್ಹಿಲರ್ ಅಥವಾ ಫೊರ್ ವ್ಹಿಲರ್) ಕುಳಿತು ಎಲ್ಲಿಗೆ ಹೋಗಬೇಕಿತ್ತೋ, ಅಲ್ಲಿಗೆ ಹೋಗುತ್ತಿದ್ದರು. ಡ್ರೈವರ್ ಕೂಡ ಅದೇ ವಾಹನದವನಾಗಿರುತ್ತಿದ್ದನು ಮತ್ತು ಪೆಟ್ರೋಲ್, ಡೀಸೆಲ್ ಸಹ ತನ್ನ ಜೇಬಿನಿಂದ ಹಾಕಿಸುತ್ತಿದ್ದನು. ಪೋಲೀಸರು ಇಡೀ ದಿನ ಅವನನ್ನು ಅಲ್ಲಿ-ಇಲ್ಲಿ ಸುತ್ತಾಡಿಸುತ್ತಿದ್ದರು. ಸಾಮಾನ್ಯ ಜನರು ಆಟೋವನ್ನು ನೋಡಿ, ಓ ಈ ದಿನ ಬಹಳ ಸಂಪಾದನೆ ಮಾಡಿದ್ದಾನೆ ಎಂದು ತಿಳಿಯುತ್ತಿದ್ದರು. ಇಡೀ ದಿನ ಓಡಿದೆ, ಆದರೆ ಅವನೊಂದಿಗೆ ಏನು ನಡೆದಿದೆಯೆಂದು ಅವನೊಬ್ಬನಿಗೆ ಮಾತ್ರ ಗೊತ್ತಿತ್ತು. ಇದೇ ರೀತಿ ರಾಜರೂ ಸಹ ಈ ಜನ್ಮದಲ್ಲಿ ಭಕ್ತಿ ಮಾಡದೆ ಕೇವಲ ರಾಜ್ಯಭಾರ ಮಾಡುವುದರಲ್ಲೇ ಜೀವನವನ್ನು ಕಳೆಯುತ್ತಿದ್ದಾರೆ. ಹಾಗಾದರೆ ಅವರು ಬೇಗಾರ್ ಮಾಡಿ (ವ್ಯರ್ಥ ದುಡಿದು) ಹೋಗುತ್ತಾರೆ. ಪೂರ್ವಜನ್ಮದ ಧರ್ಮ ಕರ್ಮಗಳಿಂದಲೇ ರಾಜನಾಗುತ್ತಾನೆ. ವರ್ತಮಾನ ಜನ್ಮದಲ್ಲಿ ಆ ಪುಣ್ಯವನ್ನು ಖರ್ಚು ಮಾಡುತ್ತಿದ್ದಾನೆ. ರಾಜನು ಮೋಜು ಮಾಡುತ್ತಿದ್ದಾನೆಂದು ಸಾಮಾನ್ಯ ಜನರು ತಿಳಿದುಕೊಳ್ಳುತ್ತಾರೆ. ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಅವನು ವ್ಯರ್ಥ ಕೆಲಸ ಮಾಡಿದ್ದಾನೆ. ಭಕ್ತಿಯ ಸಂಪಾದನೆ ಮಾಡುತ್ತಿಲ್ಲ. ಒಂದು ವೇಳೆ ವ್ಯಕ್ತಿ ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡದಿದ್ದರೆ, ಅವನಿಗೆ ಬೇಕಾದರೆ ಉದಯ-ಅಸ್ತ ಅಂದರೆ ಇಡೀ ಪೃಥ್ವಿಯೇ ರಾಜ್ಯವಾಳಲು ಸಿಕ್ಕರೂ ಅವನು ಆಟೋದವನದಂತೆ ಸಮಯ ವ್ಯರ್ಥಮಾಡುತ್ತಿದ್ದಾನೆ. ಅವನಿಗೆ ಯಾವುದೇ ಲಾಭಸಿಗುವುದಿಲ್ಲ. ಆದ್ದರಿಂದಲೇ ರಾಜನಾಗಲೀ, ಅಥವಾ ಪ್ರಜೆಯಾಗಲಿ, ಧನಿಕನಾಗಲೀ ಅಥವಾ ಭಿಕ್ಷುಕನಾಗಲೀ, ಎಲ್ಲರೂ ಹೊಸತಾಗಿ ಭಕ್ತಿ ಮಾಡಬೇಕು. ಅದರಿಂದಲೇ ಅವರ ಭವಿಷ್ಯವು ಉಜ್ವಲವಾಗುವುದು.**

**ಪರಮಾತ್ಮ ಕಬೀರರು ತಮ್ಮ ಶಿಷ್ಯ ಸಂತ ಗರೀಬ್‌ದಾಸರಿಗೆ ತತ್ವಜ್ಞಾನವನ್ನು ತಿಳಿಸಿದ್ದಾರೆ ಅದು ಈ ರೀತಿ ಇದೆ. (ರಾಗ್ ಆಸಾವರಿ ಶಬ್ದ ಸಂಖ್ಯೆ 1)**

ಮನ್ ತೂ ಚಲಿ ರೇ ಸುಖ್ ಕೇ ಸಾಗರ್, ಜಹಾಂ ಶಬ್ದ್ ಸಿಂಧು ರತ್ನಾಗರ್ । (ಟೇಕ್)
ಕೋಟಿ ಜನ್ಮ್ ತೋಹೇ ಮರತಾಂ ಹೋಗೆ, ಕುಛ್ ನಹೀಂ ಹಾಥ್ ಲಗಾ ರೇ ।
ಕುಕರ್-ಸುಕರ್ ಖರ್ ಭಯಾ ಬೌರೇ, ಕೌಆ ಹಂಸ್ ಬುಗಾ ರೇ ॥ (1)
ಕೋಟಿ ಜನ್ಮ್ ತೂ ರಾಜಾ ಕೀನ್ಹಾ, ಮಿಟಿ ನ ಮನ್ ಕೀ ಆಶಾ ।
ಭಿಕ್ಷುಕ್ ಹೋಕರ್ ದರ್-ದರ್ ಹಾಂಡ್ಯಾ, ಮಿಲ್ಯಾ ನ ನಿರ್ಗುಣ್ ರಾಸಾ ॥(2)
ಇಂದ್ರ್ ಕುಬೇರ್ ಈಶ್ ಕೀ ಪದವೀ, ಬ್ರಹ್ಮಾ, ವರುಣ್ ಧರ್ಮರಾಯಾ ।
ವಿಷ್ಣುನಾಥ್ ಕೇ ಪುರ್ ಕೂಂ ಜಾಕರ್, ಬಹುರ್ ಅಪೂಠಾ ಆಯಾ ॥ (3)
ಅಸಂಖ್ಯ್ ಜನ್ಮ್ ತೋಹೇ ಮರತೇ ಹೋಗೆ, ಜೀವಿತ್ ಕ್ಯೂಂ ನಾ ಮರೈ ರೇ ।
ದ್ವಾದಶ್ ಮಧ್ಯ್ ಮಹಲ್ ಮಠ್ ಬೌರೇ, ಬಹುರ್ ನ ದೇಹ್ ಧರೈ ರೇ ॥(4)
ದೋಜಖ್ ಬಹಿಶ್ತ್ ಸಭೀ ತೈ ದೇಖೆ, ರಾಜ-ಪಾಟ್ ಕೇ ರಸಿಯಾ ।
ತೀನ್ ಲೋಕ್ ಸೇ ತೃಪ್ತ್ ನಾಹೀಂ, ಯಹ್ ಮನ್ ಭೋಗೀ ಖಸಿಯಾ ॥(5)

ಸತಗುರು ಮಿಲ್ಯೆ ತೋ ಇಚ್ಛಾ ಮೇಟ್ಯೆಂ, ಪದ್ ಮಿಲ್ ಪದ್ಯೆ ಸಮಾನಾ ।
ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಆದಿ ಅಮರ್ ಅಸ್ಥಾನಾ ॥(6)
ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೆ, ಮಿಲ್ಯೆ ರಾಮ್ ಅವಿನಾಶೀ ॥(7)

**ಸೂಕ್ಷ್ಮವೇದದ ವಾಣಿಯ ಭಾವಾರ್ಥ:–**

**ವಾಣೀಯ ಸರಳಾರ್ಥ:–** ಆತ್ಮ ಮತ್ತು ಮನಸ್ಸನ್ನು ಪಾತ್ರ ಮಾಡಿ ಸಂತ ಗರೀಬ್‌ದಾಸರು ಪ್ರಪಂಚದ ಮಾನವನಿಗೆ ತಿಳಿಸಿದ್ದಾರೆ. 'ಈ ಪ್ರಪಂಚ ದುಃಖಗಳ ಸಾಗರ. ಇದರಿಂದ ಭಿನ್ನವಾದ ಮತ್ತೊಂದು ಪ್ರಪಂಚವಿದೆ. ಅಲ್ಲಿ ಯಾವುದೇ ದುಃಖವಿಲ್ಲ ಆ ಸ್ಥಾನವು (ಸನಾತನ ಪರಮಧಾಮ=ಸತ್ಯಲೋಕ) ವಾಗಿದೆ ಮತ್ತು ಅಲ್ಲಿಯ ಪ್ರಭು (ಅವಿನಾಶಿ ಪರಮೇಶ್ವರ) ಸುಖದ ಸಾಗರ. ಸುಖ ಸಾಗರವೆಂದರೆ ಅಮರ ಪರಮಾತ್ಮ ಮತ್ತು ಅವನ ರಾಜಧಾನಿಯಾದ ಅಮರ ಲೋಕದ ಸಂಕ್ಷಿಪ್ತ ಪರಿಭಾಷೆಯನ್ನು ಹೇಳಲಾಗಿದೆ.

ಶಂಖೋಂ ಲಹರ್ ಮೆಹರ್ ಕೀ ಊಪಜ್ಯೆಂ, ಕಹರ್ ನಹೀಂ ಜಹಾಂ ಕೋಈ ।
ದಾಸ್ ಗರೀಬ್ ಅಚಲ್ ಅವಿನಾಶೀ, ಸುಖ್ ಕಾ ಸಾಗರ್ ಸೋಈ ॥

**ಭಾವಾರ್ಥ:–** ಯಾವ ಸಮಯದಲ್ಲಿ ನಾನು (ಲೇಖಕ) ಒಬ್ಬಂಟಿಯಾಗುತ್ತೇನೋ, ಆಗಾಗ ಒಳಗಿನಿಂದ ಒಂದು ಅಲೆಯು ಏಳುತ್ತದೆ. ಆಗ ಎಲ್ಲರೂ ನನ್ನವರಂತೆ ಅನ್ನಿಸುತ್ತದೆ. ನನಗೆ ಯಾರು ಎಷ್ಟೇ ಕಷ್ಟ ಕೊಟ್ಟಿದ್ದರೂ, ಅವರ ಬಗ್ಗೆ ದ್ವೇಷ ಭಾವನೆ ಹುಟ್ಟುವುದಿಲ್ಲ. ಎಲ್ಲರ ಮೇಲೂ ದಯೆ ಉಂಟಾಗುತ್ತದೆ. ಈ ಸ್ಥಿತಿ ಕೆಲವೇ ನಿಮಿಷಗಳದ್ದಿರುತ್ತದೆ. ಸತ್ಯಲೋಕ ಅಂದರೆ ಸನಾತನ ಪರಮ ಧಾಮಕ್ಕೆ ಹೋದ ನಂತರ ಪ್ರತ್ಯೇಕ ಜೀವಾತ್ಮಕ್ಕೆ ಬಹಳ ಆನಂದವಾಗುತ್ತದೆ. ಅಲ್ಲಿ ಇಂತಹ ಅಸಂಖ್ಯ ಅಲೆಗಳು ಆತ್ಮದಲ್ಲಿ ಏಳುತ್ತಿರುತ್ತದೆ. ಯಾವಾಗ ಆ ಅಲೆಯು ನನ್ನ ಆತ್ಮದಿಂದ ದೂರವಾಗುತ್ತದೋ ಆಗ ನನಗೆ ಅದೇ ದುಃಖಮಯವಾದ ಸ್ಥಿತಿ ಪ್ರಾರಂಭವಾಗುತ್ತದೆ. ಅವನ್ಯಾಕೆ ಹಾಗೆ ಹೇಳಿದ? ಆ ವ್ಯಕ್ತಿ ಒಳ್ಳೆಯವನಲ್ಲ, ಇದು ನಷ್ಟವಾಯಿತು, ಇದಾಯಿತು, ಅದಾಯಿತು, ಎಂದು ಪ್ರಾರಂಭವಾಗುತ್ತದೆ. ಅದನ್ನು ದುಃಖದ ಅಲೆ ಎಂದು ಹೇಳುತ್ತಾರೆ.

ಆ ಸತ್ಯಲೋಕದಲ್ಲಿ ಅಶಂಖ್ಯ ದಯೆಯ ಅಲೆಗಳು ಹುಟ್ಟುತ್ತವೆ. ಅಲ್ಲಿ ಯಾವುದೇ ಭಯಂಕರ ದುಃಖವಿಲ್ಲ. ಹಾಗಂತು ಸತ್ಯಲೋಕದಲ್ಲಿ ಯಾವುದೇ ದುಃಖವಿಲ್ಲ. ದುಃಖದ ಅರ್ಥ ಭಯಂಕರ ಕಷ್ಟವಿರುತ್ತದೆ. ಹೇಗೆಂದರೆ, ಒಂದು ಹಳ್ಳಿಯಲ್ಲಿ ಪರಸ್ಪರ ದ್ವೇಷದ ಕಾರಣ ವಿರೋಧಿಗಳು ಬೇರೆ ಪಕ್ಷದ ಒಂದು ಕುಟುಂಬದ ಮೂರು ಸದಸ್ಯರ ಕೊಲೆ ಮಾಡಿದರು. ಇನ್ನೊಂದು ಕಡೆ ಭೂಕಂಪದಿಂದ ಸಾವಿರಾರು ಜನರು ಸತ್ತು ಹೋಗುತ್ತಾರೆ. ಅದನ್ನೇ ಕಷ್ಟ ಆವರಿಸಿತು ಎಂದು ಹೇಳುವುದು. ಮೇಲೆ ಬರೆದ ವಾಣೀಯಲ್ಲಿ ಸುಖ–ಸಾಗರದ ಪರಿಭಾಷೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಆ ಅಮರ ಲೋಕವು ಅಚಲ ಅವಿನಾಶಿಯಾಗಿದೆ. ಅಂದರೆ ಅದು ಎಂದಿಗೂ ನಾಶವಾಗುವುದಿಲ್ಲ ಮತ್ತು ಅಲ್ಲಿ ವಾಸಿಸುವ ಪರಮೇಶ್ವರನು ಅವಿನಾಶಿಯಾಗಿದ್ದಾನೆ. ಆ ಸ್ಥಾನ ಹಾಗೂ ಪರಮೇಶ್ವರ ಸುಖದ ಸಮುದ್ರ. ಹೇಗೆ ಹಡಗು ಬಂದರಿನ ದಡದಿಂದ 100 ಅಥವಾ 200 ಕಿ.ಮೀ ದೂರ ಹೋಗುತ್ತದೆ. ಸಮುದ್ರದ ಯಾತ್ರಿಗಳಿಗೆ ಸಮುದ್ರದ ನೀರಿನ ವಿನಃ ಮತ್ತೇನೂ ಕಾಣಿಸುವುದಿಲ್ಲ. ಸುತ್ತಲೂ ನೀರೇ ತುಂಬಿರುತ್ತದೆ. ಹಾಗೆ ಸತ್ಯಲೋಕದಲ್ಲಿ ಸುಖದ ವಿನಃ ಬೇರೆ ಏನೂ ಇರುವುದಿಲ್ಲ. ಅಲ್ಲಿ ಬೇರೆ ದುಃಖವೇ ಇರುವುದಿಲ್ಲ.

**ಈಗ ಪೂರ್ವದಲ್ಲಿ ಬರೆದ ವಾಣೀಯ ಸರಳಾರ್ಥ ಮಾಡಲಾಗುವುದು:–**

ಮನ್ ತೂ ಚಲ್ ರೇ ಸುಖ್ ಕೇ ಸಾಗರ್, ಜಹಾಂ ಶಬ್ದ್ ಸಿಂಧು ರತ್ನಾಗರ್ । (ಟೇಕ್)
ಕೋಟಿ ಜನ್ಮ್ ತೋಹೇ ಭ್ರಮತ್ ಹೋಗೆ, ಕುಛ್ ನಹೀಂ ಹಾಥ್ ಲಗಾ ರೇ ।
ಕುಕರ್–ಶುಕರ್ ಖರ್ ಭಯಾ ಬೌರೇ, ಕೌಆ ಹಂಸ್ ಬುಗಾ ರೇ ॥

ಭಾವಾರ್ಥ:- ಪರಮೇಶ್ವರ ಕಬೀರರು ತಮ್ಮ ಒಳ್ಳೆಯ ಆತ್ಮ ಸಂತ ಗರೀಬ್‌ದಾಸರಿಗೆ ಸೂಕ್ಷ್ಮವೇದದ ಜ್ಞಾನವನ್ನು ತಿಳಿಸಿದರು. ಅದನ್ನು ಸಂತ ಗರೀಬ್ ದಾಸರು (ಊರು-ಛುಡಾನೀ, ಜಿಲ್ಲೆ-ಝುಜ್ಜರ್, ಹರಿಯಾಣ) ಆತ್ಮ ಮತ್ತು ಮನಸ್ಸನ್ನು ಪಾತ್ರಗಳನ್ನಾಗಿ ಮಾಡಿ ವಿಶ್ವದ ಮಾನವರಿಗೆ ಕಾಲಬ್ರಹ್ಮನ ಲೋಕದ ಕಷ್ಟವನ್ನು ಹಾಗೂ ಸತ್ಯಲೋಕದ ಸುಖವನ್ನು ಹೇಳಿ ಆ ಪರಮಧಾಮಕ್ಕೆ ಹೋಗಲು ಸತ್ಯಸಾಧನೆ ಶಾಸ್ತ್ರೋಕ್ತವಾದದ್ದನ್ನು ಮಾಡಲು ಪ್ರೇರಣೆ ನೀಡಿದ್ದಾರೆ. ಮನ್ ತೂ ಚಲ್ ರೇ ಸುಖ್ ಕೇ ಸಾಗರ್, ಅಂದರೆ ಸನಾತನ ಪರಮಧಾಮಕ್ಕೆ ನಡೆ. ಅಲ್ಲಿ ಶಬ್ದ ನಷ್ಟವಾಗುವುದಿಲ್ಲ ಅದಕ್ಕಾಗಿ ಶಬ್ದದ ಅರ್ಥ ಅವಿನಾಶಿಯಾಗಿದೆ. ಆ ಸ್ಥಾನವು ಅಮರತ್ವದ ಸಿಂಧು ಅಂದರೆ ಸಾಗರವಾಗಿದೆ ಮತ್ತು ಮೋಕ್ಷ ರೂಪಿ ರತ್ನದ ಆಗಾರ ಅಂದರೆ ಗಣಿಯಾಗಿದೆ. ಈ ಕಾಲಬ್ರಹ್ಮನ ಲೋಕದಲ್ಲಿ ನೀವು ಭಕ್ತಿ ಕೂಡಾ ಮಾಡಿದಿರಿ. ಆದರೆ ಶಾಸ್ತ್ರಾನುಕೂಲ ಸಾಧನೆ ಹೇಳುವ ತತ್ವದರ್ಶಿ ಸಂತನು ಸಿಗದ ಕಾರಣ ನೀವು ಸಾವಿರಾರು ಜನ್ಮಗಳಿಂದ ಅಲೆದಾಡುತ್ತಿರುವಿರಿ. ನೂರಾರು ಕೋಟಿ ಹಣ ಸಂಗ್ರಹ ಮಾಡುವುದರಲ್ಲಿ ನೀವು ಇಡೀ ಜೀವನ ಕಳೆಯುತ್ತಿರಿ ನಂತರ ಮೃತ್ಯುವಾಗುತ್ತದೆ. ನಿಮ್ಮ ಪೂರ್ವಜನ್ಮದ ಸಂಸ್ಕಾರಗಳಿಂದ ನೀವು ಸಂಗ್ರಹಿಸಿದ ಹಣ, ಅದನ್ನು ಬಿಟ್ಟು ಪ್ರಪಂಚದಿಂದ ಹೊರಟು ಹೋದಿರಿ, ಆ ಹಣವನ್ನು ಸಂಗ್ರಹಿಸುವುದರಲ್ಲಿ ನೀವು ಮಾಡಿದ ಪಾಪಗಳು ಅವು ನಿಮ್ಮ ಜೊತೆ ಬಂದವು. ನೀವು ಆ ಮಾನವ ಜೀವನದಲ್ಲಿ ತತ್ವದರ್ಶಿ ಸಂತನಿಂದ ದೀಕ್ಷೆ ಪಡೆದು ಶಾಸ್ತ್ರವಿಧಿ ಅನುಸಾರ ಭಕ್ತಿ ಸಾಧನೆ ಮಾಡಲಿಲ್ಲ. ಆ ಕಾರಣದಿಂದ ನಿಮಗೆ ಏನೂ ಸಿಗಲಿಲ್ಲ. ಪೂರ್ವಜನ್ಮದ ಪುಣ್ಯಗಳ ಬದಲಿಗೆ ಹಣ ಗಳಿಸಿದಿರಿ, ಆದರೆ ಆ ಹಣವೂ ಇಲ್ಲಿಯೇ ಉಳಿಯಿತು, ನಿಮಗೆ ಮತ್ತಿನ್ನೇನೂ ಸಿಗಲಿಲ್ಲ. ನಿಮಗೆ ಹಣ ಸಂಗ್ರಹ ಮತ್ತು ಶಾಸ್ತ್ರಾನುಕೂಲ ಭಕ್ತಿ ಮಾಡದ ಕಾರಣ ಪಾಪ ಸಿಕ್ಕಿತು. ಹಾಗಾಗಿ ನೀವು ಕುಕರ್=ನಾಯಿ, ಖರ್=ಕತ್ತೆ, ಸುಕರ್=ಹಂದಿ, ಕೌಆ=ಕಾಗೆ, ಹಂಸ=ಸರೋವರದಲ್ಲಿ ಕೇವಲ ಮುತ್ತು ತಿನ್ನುವ ಪಕ್ಷಿ, ಬಕಪಕ್ಷಿ ಮುಂತಾದ ಜನ್ಮ ತಳೆದು ಕಷ್ಟ ಅನುಭವಿಸಿದ್ದಿರಿ.

ಕೋಟಿ ಜನ್ಮ್ ತೂ ರಾಜಾ ಕೀನ್ಹಾ, ಮಿಟಿ ನ ಮನ್ ಕೀ ಆಶಾ ।
ಭಿಕ್ಷುಕ್ ಹೋಕರ್ ದರ್-ದರ್ ಹಾಂಡ್ಯಾ, ಮಿಲಾ ನ ನಿರ್ಗುಣ್ ರಾಸಾ ॥

ಸರಳಾರ್ಥ:-ಹೇ ಮಾನವ! ನೀನು ಕಾಲ(ಬ್ರಹ್ಮ)ನ ಬಹಳ ಕಷ್ಟಕರ ಸಾಧನೆ ಮಾಡಿದೆ. ಮನೆ ತ್ಯಜಿಸಿ ಕಾಡಿನಲ್ಲಿ ವಾಸಿಸಿದೆ. ನಂತರ ಊರಿನಲ್ಲಿ ಮನೆ-ಮನೆ, ಬೀದಿ-ಬೀದಿ ಅಲೆದಾಡಿದೆ. ಬಿಕ್ಷೆಗಾಗಿ ಕಾಡಿನಲ್ಲಿ ಸಾಧನೆಯಲ್ಲಿರುವ ಸಾಧಕ ಹಳ್ಳಿ, ಹಳ್ಳಿ, ಪಟ್ಟಣಗಳಿಗೆ ಹೋಗುತ್ತಾನೆ. ಒಂದು ಮನೆಯಿಂದ ಅವರಿಗೆ ಬೇಕಾಗುವಷ್ಟು ಬಿಕ್ಷೆ ಸಿಗದಿದ್ದರೆ ಬೇರೆ ಮನೆಗಳಿಗೆ ತೆರಳಿ ಊಟವನ್ನು ಪಡೆದು ಮತ್ತೆ ಕಾಡಿಗೆ ಮರಳುತ್ತಾನೆ. ಒಮ್ಮೊಮ್ಮೆ ಸಾಧಕರು 1 ಬಾರಿ ಪಡೆದ ಬಿಕ್ಷೆಯಲ್ಲೇ 2-3 ದಿನ ಕಾಲ ಕಳೆಯುತ್ತಾರೆ. ರೊಟ್ಟಿಗಳನ್ನು ತೆಳುವಾದ ಬಟ್ಟೆಯಲ್ಲಿ ಕಟ್ಟಿ ಮರದ ಟೊಂಗೆಗೆ ನೇತು ಹಾಕುತ್ತಾರೆ. ಅವು ಒಣಗಿಹೋಗುತ್ತವೆ. ಅದನ್ನು ನೀರಿನಲ್ಲಿ ನೆನೆಸಿ, ಮೆತ್ತಗೆ ಮಾಡಿಕೊಂಡು ತಿನ್ನುತ್ತಾರೆ. ಪ್ರತಿದಿನ ಬಿಕ್ಷೆಗಾಗಿ ಹೋಗುವ ಸಮಯವನ್ನು ವ್ಯರ್ಥಮಾಡಲು ಇಚ್ಛಿಸದೇ ಆ ಸಮಯವನ್ನು ಉಳಿಸಿ ಕಾಲಬ್ರಹ್ಮನ ಸಾಧನೆಯಲ್ಲಿ ತೊಡಗುತ್ತಾರೆ. ಅಂದರೆ ಜನನ ಮರಣದಿಂದ ಮುಕ್ತಿ ಪಡೆಯಲು, ಮೋಕ್ಷ ಪ್ರಾಪ್ತಿಗಾಗಿ ವೇದಗಳಲ್ಲಿ ವರ್ಣಿಸಿದಂತೆ ಮತ್ತು ಲೋಕವೇದದಿಂದ ಘೋರ ತಪಸ್ಸನ್ನು ಮಾಡುತ್ತಿದ್ದರು. ಅವರಿಗೆ ತತ್ವದರ್ಶಿ ಸಂತನು ಸಿಗದ ಕಾರಣ ನಿರ್ಗುಣ ರಾಸಾ ಅಂದರೆ ಗುಪ್ತಜ್ಞಾನ ಅದನ್ನು ತತ್ವಜ್ಞಾನವೆನ್ನುತ್ತಾರೆ. ಅದು ಸಿಗಲಿಲ್ಲ ಏಕೆಂದರೆ ಯಜುರ್ವೇದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ಹಾಗೂ ನಾಲ್ಕೂ ವೇದಗಳ ಸಾರಾಂಶ ರೂಪಿ ಭಗವದ್ಗೀತೆಯ 4ನೇ ಅಧ್ಯಾಯದ 32 ಮತ್ತು 34ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಜ್ಞಗಳು ಅಂದರೆ ಧಾರ್ಮಿಕ ಅನುಷ್ಠಾನಗಳ ವಿಸ್ತೃತ ಜ್ಞಾನವನ್ನು ಸ್ವತಃ ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮ ತನ್ನ ಮುಖಕಮಲದಿಂದ ಹೇಳುತ್ತಾನೆ ಅದನ್ನೇ ತತ್ವಜ್ಞಾನ ಅರ್ಥಾತ್ ಸೂಕ್ಷ್ಮವೇದ ಎನ್ನುತ್ತಾರೆ. ಗೀತೆಯ ಜ್ಞಾನವನ್ನು ಕೊಡುವಾತ ಬ್ರಹ್ಮನು ಹೇಳಿರುವುದೇನೆಂದರೆ, ಆ ತತ್ವಜ್ಞಾನವನ್ನು ನೀನು ತತ್ವಜ್ಞಾನಿಗಳ ಬಳಿ ಹೋಗಿ ತಿಳಿದುಕೋ, ಅವರಿಗೆ ದಂಡವತ್ ಪ್ರಣಾಮ್ ಮಾಡುವುದರಿಂದ

ಹಾಗೂ ವಿನಮ್ರತೆಯಿಂದ ಪ್ರಶ್ನೆ ಕೇಳುವುದರಿಂದ ಆ ಪರಮಾತ್ಮ ತತ್ವವನ್ನು ಚೆನ್ನಾಗಿ ತಿಳಿದಿರುವ ತತ್ವದರ್ಶಿ ಸಂತನು ನಿನಗೆ ಆ ತತ್ವಜ್ಞಾನವನ್ನು ಉಪದೇಶಿಸುವನು. ಇದರಿಂದ ತತ್ವಜ್ಞಾನವು ವೇದಗಳಲ್ಲಿ ಅಥವಾ ಗೀತೆಯಲ್ಲಿ ಇಲ್ಲ ಎಂದು ಸ್ಪಷ್ಟವಾಗುತ್ತದೆ. ಅದು ಇದ್ದಿದ್ದರೆ ಇನ್ನೊಂದು ಅಧ್ಯಾಯ ಬರೆದು ತತ್ವಜ್ಞಾನ ಅದರಲ್ಲಿದೆ ಎಂದು ಹೇಳುತ್ತಿದ್ದ. ಸಂತ ಗರೀಬ್‌ದಾಸರು ಮನಸ್ಸಿನ ಮೂಲಕ ಮಾನವ ಶರೀರಧಾರಿ ಜೀವಾತ್ಮಗಳಿಗೆ ತಿಳಿಸುವುದೇನೆಂದರೆ, ಆ ನಿರ್ಗುಣ ರಾಸಾ ಅಂದರೆ ತತ್ವಜ್ಞಾನ ಸಿಗದ ಕಾರಣ ಕಾಲಬ್ರಹ್ಮನ ಸಾಧನೆ ಮಾಡಿ ಕೋಟ್ಯಾಂತರ ಜನ್ಮ ನೀವು ರಾಜರಾಗಿದ್ರಿ. ಆದರೂ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಏಕೆಂದರೆ ಆ ರಾಜನು ಸಹ ಸುಖ ಎನ್ನುವುದು ಸ್ವರ್ಗದಲ್ಲಿದೆ. ಇಲ್ಲಿ ರಾಜನಾಗಿ ಯಾವ ಸಂತೋಷವೂ ಇಲ್ಲ. ಸುಖವಿಲ್ಲ ಎಂದು ಚಿಂತಿಸುತ್ತಾನೆ.

ನಿರ್ಗುಣ ರಾಸಾ ಅಂದರೆ, ಆ ವಸ್ತುವಂತು ಇದೆ, ಆದರೆ ಅದರಿಂದ ಯಾವುದೇ ಲಾಭಸಿಗುವುದಿಲ್ಲ. ಮರದ ಬೀಜದಲ್ಲಿ ಹಣ್ಣು ಮತ್ತು ಮರ ನಿರ್ಗುಣ ರೂಪದಲ್ಲಿದೆ ಆ ಬೀಜವನ್ನು ಮಣ್ಣಿನಲ್ಲಿ ಬಿತ್ತಿ, ನೀರುಣಿಸಿ, ಆ ಸರ್ಗುಣ ವಸ್ತು(ಮರ, ಮರದ ಹಣ್ಣು) ಪ್ರಾಪ್ತಿಯಾಗುತ್ತದೆ. ಈ ಜ್ಞಾನವಿಲ್ಲದ ಕಾರಣ ನಾವು ಮಾವಿನಹಣ್ಣಿನಿಂದ ಹಾಗೂ ಮರದ ನೆರಳಿನಿಂದ ವಂಚಿತರಾಗುತ್ತಿದ್ದೇವೆ. ರಾಸಾ=ಸಮಸ್ಯೆ ಅಂದರೆ ಜಟಿಲವಾದ ಕಾರ್ಯ

ಸೂಕ್ಷ್ಮ ವೇದದಲ್ಲಿ ಪರಮೇಶ್ವರ ಕಬೀರರು ಹೇಳಿರುವುದೇನೆಂದರೆ:–

ನೌ ಮನ್ (360 ಕಿಲೋ ಗ್ರಾಂ) ನೂಲು = ದಾರ

ಕಬೀರ್, ನೌ ಮನ್ ಸೂತ್ ಉಲಝಿಯಾ, ಋಷಿ ರಹೇ ಝುಖ್ ಮಾರ್ ।
ಸತ್‌ಗುರು ಐಸಾ ಸುಲಝಾ ದೇ, ಉಲಝೇ ನ ದೂಜೀ ಬಾರ್ ॥

ಸರಳಾರ್ಥ:– ಆಧ್ಯಾತ್ಮ ಜ್ಞಾನ ರೂಪಿಯಾದ ನೌ ಮನ್(360 ಕಿ. ಗ್ರಾಂ.) ನೂಲು ಸಿಕ್ಕಿಹಾಕಿಕೊಂಡಿದೆ. ಒಂದು ಕೆಜಿ ಸಿಕ್ಕಿಹಾಕಿಕೊಂಡಿರುವ ನೂಲು ಬಿಡಿಸಲು ನೇಕಾರರಿಗೆ ಒಂದು ದಿನಕ್ಕಿಂತ ಹೆಚ್ಚು ಸಮಯ ಬೇಕಾಗುತ್ತಿತ್ತು. ಬಿಡಿಸುವಾಗ, ದಾರ ತುಂಡಾದರೆ, ಬಟ್ಟೆಯಲ್ಲಿ ಗಂಟಾಗುತ್ತಿತ್ತು. ಗಂಟು ಗಂಟಾದ ಬಟ್ಟೆಯನ್ನು ಯಾರೂ ಕೊಂಡುಕೊಳ್ಳುವುದಿಲ್ಲ. ಆದ್ದರಿಂದ ಪರಮೇಶ್ವರ ಕಬೀರ ನೇಕಾರನು, ನೇಕಾರರ ಉದಾಹರಣೆ ಕೊಟ್ಟು ತಿಳಿಸಿದ್ದಾರೆನೆಂದರೆ ಅಧಿಕ ಗಂಟಾದ ನೂಲನ್ನು ಬಿಡಿಸಲು ಯಾರಿಂದಲೂ ಸಾಧ್ಯವಿಲ್ಲ, ಆಧ್ಯಾತ್ಮ ಜ್ಞಾನವು ಅದೇ ನೌ ಮನ್ ಗಂಟಾದ ನೂಲಿನಂತೆ ಇದೆ, ಅದನ್ನು ಸದ್ಗುರು ಅಂದರೆ ತತ್ವದರ್ಶಿ ಸಂತನು ಹೀಗೆ ಬಿಡಿಸುವನು ಅಂದರೆ ಅದು ಮತ್ತೆ ಗಂಟಾಗುವುದಿಲ್ಲ. ಬಿಡಿಸದ ನೂಲಿನಂತಿರುವ ಆಧ್ಯಾತ್ಮದ ಜ್ಞಾನದಿಂದ ಅಂದರೆ ಲೋಕವೇದದ ಆಧಾರದಿಂದ ಸಾಧನೆ ಮಾಡಿ, ಸ್ವರ್ಗ–ನರಕ, 84 ಲಕ್ಷ ಪ್ರಕಾರದ ಪ್ರಾಣಿಗಳ ಜೀವನ, ಪೃಥ್ವಿಯ ಮೇಲೆ ಯಾವುದೋ ಸ್ಥಳದ ರಾಜನಾಗುವ, ಸ್ವರ್ಗದ ರಾಜನಾಗುತ್ತಾನೆ ಪುನಃ ಮತ್ತೆ ಜನನ–ಮರಣದ ಚಕ್ರದಲ್ಲಿ ಬಿದ್ದು ಕಷ್ಟದ ಮೇಲೆ ಕಷ್ಟ ಪಡುತ್ತಾನೆ. ಆದರೆ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವಂತೆ ವೇದಗಳಲ್ಲಿ ವರ್ಣಿಸಿರುವ ಕಾಲಬ್ರಹ್ಮನ ಸಾಧನೆ ಮಾಡುವುದರಿಂದ ಪರಮ ಶಾಂತಿ ಹಾಗೂ ಸನಾತನ ಪರಮಧಾಮ ಪ್ರಾಪ್ತಿಯಾಗಲಿಲ್ಲ. ಹಾಗೂ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ಪರಮೇಶ್ವರನ ಆ ಪರಮ ಪದವಿಯೂ ಪ್ರಾಪ್ತವಾಗಲಿಲ್ಲ. ಅಲ್ಲಿ ಹೋದ ಬಳಿಕ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಕಾಲಬ್ರಹ್ಮನ ಸಾಧನೆಯಿಂದ ಈ ಕೆಳಗಿನ ಲಾಭಗಳಾಗುತ್ತಿರುತ್ತವೆ.

ವಾಣಿ ಸಂಖ್ಯೆ.3:–

ಇಂದ್ರ್–ಕುಬೇರ್, ಈಶ್ ಕೀ ಪದವೀ, ಬ್ರಹ್ಮಾ ವರುಣ್ ಧರ್ಮರಾಯಾ ।
ವಿಷ್ಣುನಾಥ್ ಕೆ ಪುರ್ ಕೂಂ ಜಾಕರ್, ಬಹುರ್ ಅಪೂಠಾ ಆಯಾ ॥

ಸರಳಾರ್ಥ:– ಕಾಲಬ್ರಹ್ಮನ ಸಾಧನೆ ಮಾಡಿ ಸಾಧಕನು ಇಂದ್ರನ ಪದವಿಯನ್ನು ಗಳಿಸುತ್ತಾನೆ. ಇಂದ್ರ ಸ್ವರ್ಗದ ರಾಜನ ಪದವಿ. ಅವನಿಗೆ ದೇವರಾಜ ಅಂದರೆ ದೇವತೆಗಳ ರಾಜ ಮತ್ತು

ಸುರಪತಿ ಎಂದೂ ಕರೆಯುತ್ತಾರೆ. ಇವನು ನೀರಾವರಿ ವಿಭಾಗ ಅಂದರೆ ಮಳೆ ವಿಭಾಗವನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತಾನೆ.

ಪ್ರಶ್ನೆ:– ಇಂದ್ರ ಪದವಿ ಹೇಗೆ ಪ್ರಾಪ್ತವಾಗುತ್ತದೆ?

ಉತ್ತರ:– ಅಧಿಕ ತಪಸ್ಸನ್ನು ಮಾಡುವುದರಿಂದ ಹಾಗೂ 100 ಮನ್ ಅಂದರೆ 4 ಸಾವಿರ ಕೆ.ಜಿ ಹಸು ಅಥವಾ ಎಮ್ಮೆಯ ತುಪ್ಪವನ್ನು ಪ್ರಯೋಗಿಸಿ ಧರ್ಮಯಜ್ಞವನ್ನು ಮಾಡುವುದರಿಂದ ಒಂದು ಧರ್ಮಯಾಗ ಪೂರ್ಣಗೊಳ್ಳುತ್ತದೆ. ಇಂತಹ ನೂರು ಧರ್ಮಯಾಗಗಳನ್ನು ನಿರ್ವಿಘ್ನವಾಗಿ ಮಾಡುವುದರಿಂದ ಇಂದ್ರನ ಪದವಿಯನ್ನು ಸಾಧಕನು ಗಳಿಸಬಲ್ಲನು. ತಪಸ್ಸು ಅಥವಾ ಯಾಗಗಳನ್ನು ಮಾಡುವಾಗ ತಪಸ್ಸು ಅಥಾವಾ ಯಾಗದ ಮರ್ಯಾದೆ ಭಂಗವಾದರೆ ಮತ್ತೆ ಮೊದಲಿನಿಂದ ತಪಸ್ಸನ್ನು ಹಾಗೂ ಯಜ್ಞವನ್ನು ಪ್ರಾರಂಭಿಸಬೇಕಾಗುತ್ತದೆ. ಈ ರೀತಿ ಇಂದ್ರನ ಪದವಿ ಪ್ರಾಪ್ತವಾಗುತ್ತದೆ.

ಪ್ರಶ್ನೆ:– ಇಂದ್ರನ ಆಡಳಿತ ಕಾಲ ಎಷ್ಟು? ಸಾವಿನ ನಂತರ ಇಂದ್ರನ ಪದವಿಯನ್ನು ಬಿಟ್ಟು ಯಾವ ಜೀವಾತ್ಮ ಯಾವ ಜನ್ಮವನ್ನು ಪಡೆಯುತ್ತದೆ?

ಉತ್ತರ:– ಇಂದ್ರನು ಸ್ವರ್ಗದ ರಾಜನ ಪದವಿಯಲ್ಲಿ 72 ಚತುರ್ಯುಗದವರೆಗೆ ಇರುತ್ತಾನೆ. ಒಂದು ಚತುರ್ಯುಗವೆಂದರೆ ಸತ್ಯಯುಗ+ತ್ರೇತಾಯುಗ+ದ್ವಾಪರಯುಗ ಮತ್ತು ಕಲಿಯುಗದ ಸಮಯವಿರುತ್ತದೆ ಅದು 1728000+1296000+864000+432000 ಕ್ರಮಶಃ ಸತ್ಯಯುಗ+ ತ್ರೇತಾಯುಗ+ದ್ವಾಪರಯುಗ+ಕಲಿಯುಗದ ಸಮಯ ಅಂದರೆ 43 ಲಕ್ಷ 20 ಸಾವಿರ ವರ್ಷದ ಸಮಯ ಒಂದು ಚತುರ್ಯುಗದಲ್ಲಿ ಇರುತ್ತದೆ. ಅಂತಹ 72 ಚತುರ್ಯುಗದವರೆಗೆ ಸಾಧಕನು ಇಂದ್ರನ ಪದವಿ ಪಡೆದು ಸ್ವರ್ಗದ ರಾಜನಾಗಿ ಸುಖವನ್ನು ಅನುಭವಿಸುತ್ತಾನೆ. ಒಂದು ಕಲ್ಪವೆಂದರೆ ಬ್ರಹ್ಮಾನ ಒಂದು ದಿನದಲ್ಲಿ (ಅಂದರೆ 1008 ಚತುರ್ಯುಗ) 14 ಜನ ಇಂದ್ರನ ಪದವಿಯಲ್ಲಿದ್ದು ತಾನು ಮಾಡಿದ ಪುಣ್ಯಕರ್ಮವನ್ನು ಅನುಭವಿಸುತ್ತಾರೆ. ಇಂದ್ರನ ಪದವಿಯನ್ನು ಅನುಭವಿಸಿ ಆ ಜೀವಾತ್ಮಗಳಿಗೆ ನಂತರ ಕತ್ತೆಯ ಜೀವನ ಪ್ರಾಪ್ತವಾಗುತ್ತದೆ.

## "ಮಾರ್ಕಂಡೇಯ ಋಷಿ ಮತ್ತು ಅಪ್ಸರೆಯ ಸಂವಾದ"

ಒಮ್ಮೆ ಬಂಗಾಳ ಕೊಲ್ಲಿಯಲ್ಲಿ ಮಾರ್ಕಂಡೇಯ ಋಷಿ ತಪಸ್ಸು ಮಾಡುತ್ತಿದ್ದರು. ಇಂದ್ರನ ಪದವಿ ಮೇಲೆ ವಿರಾಜಮಾನವಾದ ಜೀವಾತ್ಮಕ್ಕೆ ಹೇಳಲಾಗಿರುತ್ತದೆ ಅವನ ಆಡಳಿತ ಕಾಲದಲ್ಲಿ 72 ಚತುರ್ಯುಗಗಳವರೆಗೆ ಯಾರಾದರೂ ಪೃಥ್ವಿಯ ಮೇಲೆ ಇಂದ್ರನ ಪದವಿ ಪಡೆಯಲು ಯೋಗ್ಯವಾದಂಥಾ ಧರ್ಮಯಜ್ಞವನ್ನು ಅಥವಾ ತಪಸ್ಸು ಮಾಡಿದರೆ ಮತ್ತು ಅವನ ಈ ಕಾರ್ಯದ ಮಧ್ಯದಲ್ಲಿ ಯಾವುದೇ ವಿಘ್ನಗಳಾಗದೆ ಇದ್ದರೆ ಆಗ ಆ ಸಾಧಕನಿಗೆ ಇಂದ್ರನ ಪದವಿ ಕೊಡಲಾಗುತ್ತದೆ ಮತ್ತು ವರ್ತಮಾನದಲ್ಲಿದ್ದ ಇಂದ್ರನಿಂದ ಆ ಪದವಿಯನ್ನು ಕಿತ್ತುಕೊಳ್ಳಲಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಇಂದ್ರನು ತನ್ನ ಆಡಳಿತ ಕಾಲದಲ್ಲಿ ಯಾವುದೇ ಸಾಧಕನ ತಪಸ್ಸು ಅಥವಾ ಧರ್ಮಯಜ್ಞ ಪೂರ್ತಿಯಾಗಲು ಬಿಡುವುದಿಲ್ಲ. ಅವನ ಸಾಧನೆಯನ್ನು ಭಂಗ ಮಾಡಿಸುತ್ತಾನೆ, ಯಾವದೇ ರೀತಿಯಲ್ಲಿ.

ಇಂದ್ರನಿಗೆ ಅವನ ದೂತರು ಬಂದು ಬಂಗಾಳ ಕೊಲ್ಲಿಯಲ್ಲಿ ಮಾರ್ಕಂಡೇಯನೆಂಬ ಋಷಿ ತಪಸ್ಸು ಮಾಡುತ್ತಿದ್ದಾನೆ ಎಂದು ಹೇಳಿದರು. ಇಂದ್ರನು ಮಾರ್ಕಂಡೇಯನ ತಪಸ್ಸನ್ನು ಭಂಗ ಮಾಡಲು ಊರ್ವಶಿ (ಇಂದ್ರನ ಪತ್ನಿ) ಯನ್ನು ಕಳುಹಿಸಿದನು. ದೇವಅಪ್ಸರೆ ಸಕಲ ಶೃಂಗಾರ ಮಾಡಿಕೊಂಡು ಮಾರ್ಕಂಡೇಯ ಋಷಿಯ ಮುಂದೆ ನೃತ್ಯ ಮಾಡತೊಡಗಿದಳು. ತನ್ನ ಸಿದ್ಧಿ ಶಕ್ತಿಯಿಂದ ಆ ಸ್ಥಾನವನ್ನು ವಸಂತ ಋತುವಿನಂತೆ ವಾತಾವರಣವನ್ನು ಮಾಡಿದಳು. ಮಾರ್ಕಂಡೇಯ ಋಷಿಯು ಊರ್ವಶಿಯ ಮೇಲೆ ಯಾವುದೇ ಉತ್ಸುಕತೆ ತೋರಿಸಲಿಲ್ಲ. ಊರ್ವಶಿಯು ತನ್ನ ಸೊಂಟದ ಲಾಡಿಯನ್ನು ಬಿಚ್ಚಿ ವಿವಸ್ತ್ರಳಾದಳು. ಆಗ ಮಾರ್ಕಂಡೇಯ ಋಷಿ, "ಹೇ ಮಗಳೇ, ಹೇ ಸಹೋದರಿಯೇ, ಹೇ ಅಮ್ಮಾ, ನೀನೇನು ಮಾಡುತ್ತಿರುವೆ? ನೀನು ಇಲ್ಲಿ ದಟ್ಟಅರಣ್ಯದಲ್ಲಿ ಒಬ್ಬಳೇ ಏಕೆ ಬಂದೆ?" ಎಂದು ಕೇಳಿದನು. ಆಗ ಊರ್ವಶಿಯು, "ಹೇ ಋಷಿಗಳೇ, ನನ್ನ ಈ ರೂಪವನ್ನು ನೋಡಿ ಈ ವನದಲ್ಲಿರುವ

ಎಲ್ಲಾ ಸಾಧಕರು ತಮ್ಮ ಸಂಯಮವನ್ನು ಕಳೆದುಕೊಂಡಿದ್ದಾರೆ. ಆದರೆ ನೀವು ಮಿಸುಕಾಡಲಿಲ್ಲ. ನಿಮ್ಮ ಧ್ಯಾನ ಎಲ್ಲಿತ್ತು ಎನ್ನುವುದು ತಿಳಿಯಲಿಲ್ಲ. ದಯಮಾಡಿ ನೀವು ನನ್ನ ಜೊತೆ ಇಂದ್ರಲೋಕಕ್ಕೆ ನಡೆಯಿರಿ. ಇಲ್ಲದಿದ್ದರೆ ನಾನು ಸೋತು ಬಂದಿದ್ದೇನೆಂದು ನನಗೆ ಶಿಕ್ಷೆಯಾಗುವುದು" ಎಂದಳು. ಆಗ ಮಾರ್ಕಂಡೇಯ ಮಹರ್ಷಿ, "ನನ್ನ ಧ್ಯಾನ ಬ್ರಹ್ಮಲೋಕಕ್ಕೆ ಹೋಗಿತ್ತು. ಅಲ್ಲಿ ನಾನು ಊರ್ವಶಿಯರ ನೃತ್ಯ ನೋಡುತ್ತಿದ್ದೆ. ಅವರು ಎಷ್ಟು ಸುಂದರಿಯರಾಗಿದ್ದರೆಂದರೆ, ನಿನ್ನಂಥಾ 7–7 ಜನ ಸುಂದರಿಯರು ಅವರಿಗೆ ಸೇವಕಿಯರು ಅಂದರೆ ದಾಸಿಯರಿದ್ದರು. ಹಾಗಾಗಿ ನಿನ್ನನ್ನು ನಾನೇಕೆ ನೋಡಲಿ? ನಾನೇಕೆ ಆಸಕ್ತಿ ತೋರಿಸಲಿ? ನಿನಗಿಂತ ಯಾರಾದರೂ ಸುಂದರವಾಗಿದ್ದರೆ ಅವಳನ್ನು ಕರೆದುಕೊಂಡು ಬಾ" ಎಂದು ಹೇಳಿದರು. ಆಗ ಆ ದೇವಕನ್ಯೆಯು "ಇಂದ್ರನ ಪಟ್ಟದರಾಣಿ ಅಂದರೆ ಮುಖ್ಯ ರಾಣಿ ನಾನೇ. ನನಗಿಂತ ಸುಂದರಿ ಈ ಸ್ವರ್ಗದಲ್ಲಿ ಯಾರೂ ಇಲ್ಲ" ಎಂದಳು. ಆಗ ಮಾರ್ಕಂಡೇಯ ಋಷಿಯು, ಇಂದ್ರನ ಮೃತ್ಯುವಾದ ಬಳಿಕ ನೀನೇನು ಮಾಡುವೆ' ಎಂದು ಕೇಳಿದನು. ಆಗ ಊರ್ವಶಿಯು 'ನಾನು 14 ಇಂದ್ರರನ್ನು ಅನುಭವಿಸುತ್ತೇನೆ' ಎಂದು ಹೇಳಿದಳು. ಅಂದರೆ ಬ್ರಹ್ಮಾನ ಒಂದು ದಿನದಲ್ಲಿ 1008 ಚತುರ್ಯುಗಗಳಿರುತ್ತವೆ. ಅದರಲ್ಲಿ 72–72 ಚತುರ್ಯುಗಗಳ ಆಡಳಿತ ಕಾಲವನ್ನು ಪೂರ್ಣಗೊಳಿಸಿ 14 ಇಂದ್ರರು ಮೃತ್ಯುವನ್ನು ಪಡೆಯುತ್ತಾರೆ. ಇಂದ್ರನ ರಾಣಿಯ ಆತ್ಮವು ಯಾವುದೋ ಮಾನವ ಜನ್ಮದಲ್ಲಿ ಸಾಕಷ್ಟು ಪುಣ್ಯವನ್ನು ಮಾಡಿದ್ದಿರಬಹುದು. ಆ ಕಾರಣದಿಂದ ಅವಳು 14 ಇಂದ್ರರ ಪಟರಾಣಿಯಾಗಿ ಸ್ವರ್ಗಸುಖ ಹಾಗೂ ಪುರುಷ ಸುಖವನ್ನು ಅನುಭವಿಸುತ್ತಾಳೆ.

ಮಾರ್ಕಂಡೇಯ ಋಷಿಯು ಹೇಳಿದರು, "ಆ 14 ಇಂದ್ರರೂ ಸಾಯುತ್ತಾರೆ, ಆಗ ನೀನೇನು ಮಾಡುವೆ?" ಆಗ ಊರ್ವಶಿ ಹೇಳಿದಳು, "ನಂತರ ನಾನು ಮೃತ್ಯು ಲೋಕದಲ್ಲಿ (ಪೃಥ್ವಿ ಲೋಕವನ್ನು ಮನುಷ್ಯ ಲೋಕ ಅಂದರೆ ಮರ್ತ್ಯ ಲೋಕ ಎಂದು ಕರೆಯುತ್ತಾರೆ) ಕತ್ತೆಯಾಗಿ ಹುಟ್ಟುತ್ತೇನೆ. ಎಷ್ಟು ಜನ ಇಂದ್ರರು ನನ್ನ ಪತಿಯಾಗುವರೋ ಅವರೂ ಸಹ ಪೃಥ್ವಿಯಲ್ಲಿ ಕತ್ತೆಯಾಗಿ ಹುಟ್ಟುವರು" ಆಗ ಮಾರ್ಕಂಡೇಯ "ಹಾಗಾದರೆ ನನ್ನನ್ನು ಅಂಥಾ ಲೋಕಕ್ಕೆ ಏಕೆ ಕರೆದೊಯ್ಯುತ್ತಿರುವೆ? ಎಲ್ಲಿ ರಾಜನು ಕತ್ತೆಯಾಗುವನು, ಎಲ್ಲಿ ರಾಣಿಯು ಕತ್ತೆಯಾಗುವಳು" ಎಂದರು. ಆಗ ಊರ್ವಶಿ ಹೇಳಿದಳು ನನ್ನ ಗೌರವವನ್ನು ಉಳಿಸಿಕೊಳ್ಳಲು, ಇಲ್ಲದಿದ್ದರೆ ಅವರು ನೀನು ಸೋತು ಬಂದಿರುವೆ ಎನ್ನುವರು.

ಮಾರ್ಕಂಡೇಯ ಋಷಿ ಹೇಳಿದ, "ಕತ್ತೆಗಳಿಗೆ ಎಂಥಾ ಗೌರವ? ನೀನು ಈಗಲೂ ಕತ್ತೆಯೇ. ಏಕೆಂದರೆ ನೀನು 14 ಜನರನ್ನು ಮದುವೆಯಾಗುವೆ ಮತ್ತು ಮೃತ್ಯು ಬಳಿಕ ನೀನು ಕತ್ತೆಯಾಗಿ ಹುಟ್ಟುವೆ ಎಂದು ನೀನೇ ಒಪ್ಪಿಕೊಳ್ಳುತ್ತಿರುವೆ". ಕತ್ತೆಗಳಿಗೆ ಎಂಥಾ ಗೌರವ? ಅಷ್ಟರಲ್ಲಿ ಇಂದ್ರ ಬಂದನು. ವಿಧಾನಾನುಸಾರವಾಗಿ ಇಂದ್ರನ ರಾಜ್ಯವನ್ನು ಮಾರ್ಕಂಡೇಯನಿಗೆ ನೀಡಲು ಬಂದನು. "ಋಷಿಗಳೇ, ನಾವು ಸೋತೆವು, ನೀವೇ ಗೆದ್ದಿರಿ. ನೀವು ಇಂದ್ರನ ಪದವಿಯನ್ನು ಸ್ವೀಕರಿಸಿ", ಎಂದನು. ಆಗ ಮಾರ್ಕಂಡೇಯನು, "ಹೇ ಇಂದ್ರ! ಇಂದ್ರನ ಪದವಿ ನನಗೇತಕ್ಕೆ? ನನಗೆ ಆ ಪದವಿಯು ಕಾಗೆಯ ಮಲಕ್ಕೆ ಸಮಾನ. ನಾನು ಹೇಳಿದಂತೆ ಸಾಧನೆ ಮಾಡು. ನಿನ್ನನ್ನು ಬ್ರಹ್ಮಲೋಕಕ್ಕೆ ಕರೆದೊಯ್ಯುವೆ. ಈ ಇಂದ್ರನ ರಾಜ್ಯವನ್ನು ಬಿಟ್ಟುಬಿಡು" ಎಂದನು. ಆಗ ಇಂದ್ರನು, "ಈಗ ನನ್ನನ್ನು ಮಜಾ ಮಾಡಲು ಬಿಟ್ಟು ಬಿಡಿ. ಮುಂದೆ ನೋಡೋಣ" ಎಂದನು.

ಓದುಗರೇ, ಯೋಚಿಸಿ, ಸಾವಿನ ನಂತರ ಕತ್ತೆಯ ಜನ್ಮ ಸಿಗುವುದೆಂದು ಇಂದ್ರನಿಗೆ ಗೊತ್ತಿದೆ. ಆದರೂ ಕ್ಷಣಿಕ ಸುಖವನ್ನು ಬಿಡಲು ಇಷ್ಟವಿಲ್ಲ. ಮುಂದೆ ನೋಡೋಣ ಎನ್ನುತ್ತಾನೆ. ಯಾವಾಗ ನೋಡುವುದು? ಕತ್ತೆಯಾದ ಮೇಲೆ ಕುಂಬಾರ ನೋಡುವನು. ಎಷ್ಟು ಭಾರ ಕತ್ತೆಯ ಸೊಂಟದ ಮೇಲಿಡಬೇಕು? ಎಲ್ಲೆಲ್ಲಿ ಕೋಲಿನಿಂದ ಹೊಡೆಯಬೇಕು? ಹಾಗೆಯೇ ಇದೇ ರೀತಿ ಈ ಭೂಮಿಯ ಮೇಲೆ ಯಾರಾದರೂ ಸ್ವಲ್ಪ ಭಾಗಕ್ಕೆ ಪ್ರಧಾನಮಂತ್ರಿ, ಮಂತ್ರಿ, ಮುಖ್ಯಮಂತ್ರಿಯಾದರೆ ಅಥವಾ ರಾಜ್ಯದ ಮಂತ್ರಿಯಾದರೆ ಅಥವಾ ಯಾವುದಾದರೂ ಸರ್ಕಾರದ ಅಧಿಕಾರಿಯಾದರೆ ಅಥವಾ ಧನಿಕನಾದರೆ. ಅವರಿಗೆ ಭಕ್ತಿಮಾಡಿ ಇಲ್ಲದಿದ್ದರೆ ಕತ್ತೆಯಾಗಿ ಹುಟ್ಟುವಿರಿ ಎಂದು ನೀವು ಅವರಿಗೆ ಹಾಗೆ ಹೇಳಿದರೆ ಅವರು ಕೋಪಗೊಂಡು ಕೇಳುವರು, ನಾವೇಕೆ ಕತ್ತೆಯಾಗುತ್ತೇವೆ? ಹಾಗೆಲ್ಲಾ

ಹೇಳಬೇಡಿ. ಮತ್ತೆ ಕೆಲವರು ಸಭ್ಯರಿರುತ್ತಾರೆ. ಅವರು, " ಕತ್ತೆಯಾಗುವುದನ್ನು ನೋಡಿದವರಾರು?" ಎನ್ನುತ್ತಾರೆ. ಆಗ ಅವರಿಗೆ ಸಂತರು ಹಾಗೂ ಗ್ರಂಥಗಳು ಹೇಳುತ್ತವೆ ಎಂದು ಹೇಳಿದಾಗ ಅವರು ಮುಂದೆ ನೋಡೋಣ ಎಂದು ಹೇಳುತ್ತಾರೆ.

ಅವರಲ್ಲಿ ಪ್ರಾರ್ಥಿಸುವುದೇನೆಂದರೆ, ಮೃತ್ಯುವಿನ ನಂತರ ಕತ್ತೆಯಾದ ಮೇಲೆ ನೀವೇನು ನೋಡಲು ಸಾಧ್ಯ? ನಂತರ ಕುಂಬಾರ ನಿಮ್ಮನ್ನು ನೋಡುತ್ತಾನಷ್ಟೇ ನಿಮ್ಮೊಂದಿಗೆ ಹೇಗೆ ವರ್ತಿಸಬೇಕೆಂದು. ನೋಡಬೇಕೆಂದರೆ ಈಗ ನೋಡಿ. ಕೆಟ್ಟದ್ದನ್ನು ಬಿಟ್ಟು ಶಾಸ್ತ್ರಬದ್ಧವಾಗಿ ಸಾಧನೆ ಮಾಡಿ. ಅದು ವರ್ತಮಾನದಲ್ಲಿ ವಿಶ್ವದಲ್ಲಿ ಕೇವಲ ನನ್ನ (ರಾಮ್‌ಪಾಲ್ ದಾಸ್‌ನ) ಬಳಿ ಇದೆ. ಬನ್ನಿ ದೀಕ್ಷೆ ಪಡೆದುಕೊಂಡು ನಿಮ್ಮ ಜೀವನವನ್ನು ಉದ್ಧಾರ ಮಾಡಿಕೊಳ್ಳಿ.

ಮೇಲೆ ತಿಳಿಸಿದ ವಾಣೀ ಸಂಖ್ಯೆ 3ರಲ್ಲಿ ಹೇಳಿರುವುದೇನೆಂದರೆ, ಇಂದ್ರ-ಕುಬೇರ ಮತ್ತು ಈಶನ ಪದವಿ ಪಡೆಯುವವರು ಹಾಗೂ ಬ್ರಹ್ಮಾನ ಪದವಿ ಹಾಗೂ ವರುಣ, ಧರ್ಮರಾಯನ ಪದವಿ ಪಡೆದು, ಹಾಗೂ ವಿಷ್ಣುವಿನ ಲೋಕವನ್ನು ಪಡೆದು, ದೇವ ಪದವಿಯನ್ನು ಪಡೆದವರೂ, ಮರಳಿ ಜನನ-ಮರಣದ ಚಕ್ರದಲ್ಲಿರುತ್ತಾರೆ.

ಸ್ವರ್ಗದಲ್ಲಿ 33 ಕೋಟಿ ದೇವರ ಪದವಿಗಳಿವೆ. ಭಾರತದ ಸಂವಿಧಾನದಲ್ಲಿ 540 ಸಂಸದರ ಪದವಿಗಳಿವೆ. ವ್ಯಕ್ತಿಗಳು ಬದಲಾಗುತ್ತಾರೆ. ಆ ಸಂಸದರಲ್ಲೇ ಪ್ರಧಾನಮಂತ್ರಿ ಮತ್ತು ಕೇಂದ್ರದ ಬೇರೆ ಬೇರೆ ಮಂತ್ರಿಗಳಾಗುತ್ತಿರುತ್ತಾರೆ.

ಅದೇ ರೀತಿ 33 ಕೋಟಿ ದೇವತೆಗಳಲ್ಲಿ ಕುಬೇರನ ಪದವಿ ಅಂದರೆ ಹಣದ ದೇವತೆಯ ಪದವಿ ಸಿಗುತ್ತದೆ. ಹಣಕಾಸು ಮಂತ್ರಿ ಇದ್ದಂತೆ ಈಶ ಪದವಿ ಅರ್ಥ ಪ್ರಭು ಪದವಿ ಲೋಕವೇದದ ಅನುಸಾರ ಒಟ್ಟು ಮೂರು ಪ್ರಭುಗಳ ಬಗ್ಗೆ ಹೇಳಿದ್ದಾರೆ:- 1)ಶ್ರೀಬ್ರಹ್ಮಾ 2)ಶ್ರೀವಿಷ್ಣು ಮತ್ತು 3) ಶ್ರೀಶಿವನು. ವರುಣದೇವನು ನೀರಿನ ದೇವತೆ. ಧರ್ಮರಾಯನು ಮುಖ್ಯ ನ್ಯಾಯಾಧೀಶ. ಅವನು ಎಲ್ಲರಿಗೂ ಕರ್ಮದಫಲವನ್ನು ನೀಡುತ್ತಾನೆ. ಅವನಿಗೆ ಧರ್ಮರಾಜ ಎಂದೂ ಕರೆಯುತ್ತಾರೆ. ಇವರೆಲ್ಲರೂ ಕಾಲಬ್ರಹ್ಮನ ಸಾಧನೆ ಮಾಡಿ ಪದವಿ ಪಡೆಯುತ್ತಾರೆ. ಪುಣ್ಯವು ಸಮಾಪ್ತಿಯಾದ ನಂತರ ಎಲ್ಲರನ್ನು ದೇವತೆ ಪದವಿಯಿಂದ ಮುಕ್ತಗೊಳಿಸಿ ಪಶು ಪಕ್ಷಿಗಳ ಇತ್ಯಾದಿ 84 ಲಕ್ಷ ಪ್ರಕಾರದ ಜೀವಿಯ ಶರೀರದಲ್ಲಿ ಹಾಕುತ್ತಾರೆ. ನಂತರ ಹೊಸ ಬ್ರಹ್ಮಾ, ಹೊಸ ವಿಷ್ಣು, ಹೊಸ ಶಿವನು ಆ ಪದವಿ ಪಡೆಯುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ದೇವತೆಗಳಿಗೂ ಹುಟ್ಟುತ್ತಾರೆ-ಸಾಯುತ್ತಾರೆ. ಅವರು ಅವಿನಾಶಿಗಳಲ್ಲ. ಇವರ ಸ್ಥಿತಿ ನಿಮಗೆ "ಸೃಷ್ಟಿರಚನೆಯ" ಅಧ್ಯಾಯದಲ್ಲಿ ಇದೇ ಪುಸ್ತಕದಲ್ಲಿ ಇದೇ ಪುಸ್ತಕದಲ್ಲಿ ಎಷ್ಟು ಜನ ಪ್ರಭುಗಳಿದ್ದಾರೆ? ಇವರ ತಂದೆ ಯಾರು? ತಾಯಿ ಯಾರು? ಎಂದು ಸ್ಪಷ್ಟವಾಗುವುದು.

ಅನ್ಯ ಪ್ರಮಾಣ:- **ಶ್ರೀ ದೇವಿ ಪುರಾಣ (ಗೀತಾ ಪ್ರೆಸ್, ಗೋರಖ್ ಪುರದಿಂದ ಪ್ರಕಾಶಿತ) ದ ಮೂರನೇ ಸ್ಕಂದದ 105ನೇ** ಪುಟದಲ್ಲಿ ಬರೆದಿರುವುದೇನೆಂದರೆ, ನೀನು ಶುದ್ಧ ಸ್ವರೂಪಳು, ಈ ಇಡೀ ಪ್ರಪಂಚ ನಿನ್ನಿಂದಲೇ ಉತ್ಪತ್ತಿಯಾಗುತ್ತಿದೆ. ನಾನು(ವಿಷ್ಣು), ಬ್ರಹ್ಮಾ ಮತ್ತು ಶಂಕರ ನಿನ್ನ ಕೃಪೆಯಿಂದಲೇ ವಿದ್ಯಮಾನರಿದ್ದೇವೆ. ನಮ್ಮದಂತು ಅವಿರ್ಭಾವ ಅಂದರೆ ಜನ್ಮ ಮತ್ತು ತಿರೊಭಾವ ಅಂದರೆ ಮೃತ್ಯು ಆಗುತ್ತಿರುತ್ತದೆ. ನೀನು ಪ್ರಕೃತಿ ದೇವಿ."

ಭಗವಂತ ಶಂಕರನು, "ದೇವಿ, ಒಂದು ವೇಳೆ ವಿಷ್ಣುವಿನ ನಂತರ ಉತ್ಪನ್ನವಾಗುವ ಬ್ರಹ್ಮಾ ನಿನ್ನಿಂದಲೇ ಹುಟ್ಟಿದ್ದರೆ ನಾನು ತಮೋಗುಣದ ಲೀಲೆಯನ್ನು ಮಾಡುವ ಶಂಕರ ನಿನ್ನ ಸಂತಾನವಲ್ಲವೇ? ಅಂದರೆ ನನ್ನನ್ನೂ ಉತ್ಪನ್ನಿಸಿದವಳು ನೀನೆಯಾಗಿರುವೆ. ನಾವಂತು ಕೇವಲ ನಿಯಮಿತ ಕಾರ್ಯವನ್ನೆ ಮಾಡುತ್ತೇವೆ. ಅಂದರೆ ಯಾರ ಹಣೆಯಲ್ಲಿ ಏನು ಬರೆದಿರುವುದೋ ಅದನ್ನೇ ನಾವು ಕೊಡುತ್ತೇವೆ ಹೆಚ್ಚು ಮಾಡಲಾಗುವುದಿಲ್ಲ. ಕಡಿಮೆಯೂ ಮಾಡಲಾಗುವುದಿಲ್ಲ.

ಓದುಗರೇ! ಈ ದೇವಿ ಪುರಾಣದಿಂದ ಸ್ಪಷ್ಟವಾಗುವುದೇನೆಂದರೆ ಬ್ರಹ್ಮಾ, ವಿಷ್ಣು ಹಾಗೂ ಶಿವನು ನಾಶಹೊಂದುವವರು. ಇವರ ತಾಯಿಯ ಹೆಸರು ಶ್ರೀದುರ್ಗಾದೇವಿ. ಇನ್ನೂ ಹೆಚ್ಚಿನ ಮಾಹಿತಿಗಾಗಿ ನೀವು ಇದೇ ಪುಸ್ತಕದ 'ಸೃಷ್ಟಿಯ ರಚನೆ' ಎಂಬ ಅಧ್ಯಾಯವನ್ನು ಓದಿರಿ. ಇವರು ಪ್ರಧಾನ ದೇವತೆಗಳು. ಉಳಿದವರು ಇವರಿಗಿಂತ ಭಿನ್ನ ಹಂತದ ದೇವತೆಗಳು. ಇವರೆಲ್ಲಾ ಹುಟ್ಟುತ್ತಾರೆ–ಸಾಯುತ್ತಾರೆ, ಅವಿನಾಶಿ ರಾಮ ಅಲ್ಲ, ಅವಿನಾಶಿ ಪರಮಾತ್ಮನೂ ಅಲ್ಲ.

ಶ್ರೀಮದ್ ಭಗವದ್ಗೀತೆಯ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಗೀತೆಯ ಜ್ಞಾನ ನೀಡುವ ಕಾಲಬ್ರಹ್ಮನು "ನನ್ನ ಉತ್ಪತ್ತಿಯು ದೇವಿ–ದೇವತೆಗಳಿಗೂ ಗೊತ್ತಿಲ್ಲ, ಮಹರ್ಷಿಗಳಿಗೂ ಗೊತ್ತಿಲ್ಲ, ಏಕೆಂದರೆ ಇವೆಲ್ಲರ ಆದಿ ಕಾರಣವೂ ನಾನೇ ಆಗಿದ್ದೇನೆ. ಅಂದರೆ ಇವರೆಲ್ಲಾ ನನ್ನಿಂದಲೇ ಉತ್ಪನ್ನರಾಗಿದ್ದಾರೆ.

ಶ್ರೀಮದ್‌ಭಗವದ್ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ. ನಿನಗೆ ಗೊತ್ತಿಲ್ಲ, ನನಗೆ ಗೊತ್ತಿದೆ. ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕದಿಂದ ಸ್ಪಷ್ಟವಾಗುವುದೇನೆಂದರೆ ನೀನು, ನಾನು ಮತ್ತು ಈ ರಾಜ, ಸೈನ್ಯ ಎಲ್ಲರೂ ಮೊದಲು ಜನ್ಮಿಸಿದ್ದರು. ಮುಂದೆಯೂ ಜನ್ಮಿಸುತ್ತಾರೆ".

ಗೀತೆಯ 14ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಗೀತೆ ಜ್ಞಾನದಾತನು ಹೇಳಿದ್ದಾನೆ, "ಹೇ ಅರ್ಜುನ! ನನ್ನ ಪ್ರಕೃತಿ ಅಂದರೆ ದುರ್ಗೆಯು ಗರ್ಭವನ್ನು ಧರಿಸುತ್ತಾಳೆ. ನಾನು ಅವಳ ಗರ್ಭದಲ್ಲಿ ಬೀಜವನ್ನು ಸ್ಥಾಪಿಸುತ್ತೇನೆ. ಅದರಿಂದ ಎಲ್ಲಾ ಜೀವಾತ್ಮಗಳ ಸೃಷ್ಟಿಯಾಗುತ್ತದೆ".

ಗೀತೆಯ 14ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ. "ಹೇ ಅರ್ಜುನ! ಎಲ್ಲಾ ರೀತಿಯ ಯೋನಿಗಳಿಂದ ಎಷ್ಟು ಶರೀರಧಾರಿ ಮೂರ್ತಿಗಳು ಹುಟ್ಟುತ್ತವೆಯೋ, (ಮಹತ್) ಪ್ರಕೃತಿಯಂತು ಅವರೆಲ್ಲರ ಗರ್ಭಧಾರಣೆ ಮಾಡುವ ತಾಯಿ. (ಅಹಂ ಬ್ರಹ್ಮ) ನಾನು ಬ್ರಹ್ಮ ಬೀಜವನ್ನು ಸ್ಥಾಪಿಸುವ ತಂದೆ.

ಗೀತೆಯ 14ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಸ್ಪಷ್ಟಪಡಿಸುವುದೇನೆಂದರೆ, "ಹೇ ಅರ್ಜುನ! ಸತ್ವಗುಣ ಶ್ರೀವಿಷ್ಣುವು, ರಜೋಗುಣ ಶ್ರೀಬ್ರಹ್ಮಾ, ಹಾಗೂ ತಮೋಗುಣ ಶ್ರೀಶಿವ ಈ ಮೂವರೂ ಪ್ರಕೃತಿ ಅರ್ಥಾತ್ ದುರ್ಗಾದೇವಿಯಿಂದ ಹುಟ್ಟಿದ ಮೂರು ದೇವತೆಗಳು. ಅಂದರೆ ಮೂರೂ ಗುಣಗಳು. ಅವರು ಅವಿನಾಶಿ ಜೀವಾತ್ಮನನ್ನು ಕರ್ಮಗಳ ಅನುಸಾರವಾಗಿ ಶರೀರದಲ್ಲಿ ಬಂಧಿಸುತ್ತಾರೆ.

ಮೇಲಿನ ಪ್ರಮಾಣಗಳಿಂದ ದೇವತೆಗಳೆಲ್ಲಾ ನಾಶಹೊಂದುವವರು ಮತ್ತು ಕಾಲಬ್ರಹ್ಮನ ಮಕ್ಕಳು ಎಂದು ಸ್ಪಷ್ಟವಾಯ್ತು.

ವಾಣಿ ಸಂಖ್ಯೆ 3ರ ಸರಳಾರ್ಥ:– ಇಂದ್ರ, ಕುಬೇರ, ಈಶ ಅರ್ಥಾತ್ ಬ್ರಹ್ಮಾ, ವಿಷ್ಣು, ಶಿವನ ವರೆಗಿನ ಪದವಿ ಗಳಿಸಿದರೂ, ವರುಣ, ಧರ್ಮರಾಯನ ಪದವಿ ಗಳಿಸಿದರೂ, ಶ್ರೀ ವಿಷ್ಣುವಿನ ಲೋಕ ಪ್ರಾಪ್ತಿಮಾಡಿಯೂ ಜನನ–ಮರಣದ ಚಕ್ರದಲ್ಲಿ ಇರುತ್ತಾರೆ.

ಮಾರ್ಕಂಡೇಯ ಋಷಿ ಬ್ರಹ್ಮ ಸಾಧನೆ ಮಾಡುತ್ತಿದ್ದರು. ಅದನ್ನೇ ಸರ್ವೋತ್ತಮ ಎಂದು ಭಾವಿಸಿದ್ದರು. ಆದ್ದರಿಂದ ಅವರು ಇಂದ್ರನಿಗೆ "ಬಾ ನಿನಗೆ ಬ್ರಹ್ಮ ಸಾಧನೆಯ ಜ್ಞಾನವನ್ನು ಹೇಳುವೆ" ಎಂದು ಹೇಳುತ್ತಿದ್ದರು. ಬ್ರಹ್ಮ ಲೋಕವನ್ನು ಸ್ವರ್ಗಕ್ಕೆ ಹೋಲಿಸಿದರೆ ಹಲ್ವಾವನ್ನು ಕಾಗೆಯ ಮಲಕ್ಕೆ ಹೋಲಿಸಿದಂತಾಗುತ್ತದೆ.

ಓದುಗರೇ! ಬ್ರಹ್ಮ ಸಾಧನೆ ಮಾಡಿರುವ ಚುಣಕ ಋಷಿ, ದೂರ್ವಾಸ ಋಷಿ ಮತ್ತು ಕಪಿಲ ಮುನಿ ಇವರು ಬ್ರಹ್ಮ ಸಾಧನೆ ಮಾಡಿದ್ದರು. ಅವರ ಸಾಧನೆಯನ್ನು ಗೀತೆಯ ಜ್ಞಾನದಾತನು ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಅನುತ್ತಮ ಅಂದರೆ ಉತ್ತಮವಲ್ಲದ ಎಂದು ಹೇಳಲಾಗಿದೆ.

ಅದೇ ರೀತಿಯ ಸಾಧನೆಯನ್ನು ಮಾರ್ಕಂಡೇಯ ಋಷಿ ಮಾಡಿದ್ದರು. ಅದನ್ನು ಅವರು ಅತ್ಯುತ್ತಮ ಸಾಧನೆ ಎಂದು ತಿಳಿದಿದ್ದರು. ಹಾಗಾಗಿ ಇಂದ್ರನಿಗೂ ಅವರು ಬ್ರಹ್ಮ ಸಾಧನೆ ಮಾಡಲು ತಿಳಿಸುತ್ತಿದ್ದರು.

**ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–**

ಔರೋಂ ಪಂಥ್ ಬತಾವಹೀಂ, ಆಪ್ ನ ಜಾನೆ ರಾಹ್ ॥ 1 ॥
ಮೋತೀ ಮುಕ್ತಾ ದರ್ಶತ್ ನಾಹೀಂ, ಯಹ್ ಜಗ್ ಹೈ ಸಬ್ ಅಂಧ್ ರೇ ।
ದಿಖತ್ ಕೇ ತೋ ನೈನ್ ಚಿಸಮ್ ಹೈ, ಫೀರಾ ಮೋತಿಯಾ ಬಿಂದ್ ರೇ ॥ 2 ॥
ವೇದ್ ಪಢೇಂ ಪರ್ ಭೇದ್ ನಾ ಜಾನೇಂ, ಬಾಂಚೆ ಪುರಾಣ್ ಅಠಾರಾ ।
ಪತ್ಥರ್ ಕೀ ಪೂಜಾ ಕರೇಂ, ಭೂಲೇ ಸಿರ್‌ಜನ್‌ಹಾರಾ ॥ 3 ॥

**ವಾಣಿ ಸಂ.1ರ ಭಾವಾರ್ಥ:–** ಅನ್ಯರಿಗೆ ಮಾರ್ಗದರ್ಶನ ಮಾಡುತ್ತಾರೆ, ಆದರೆ ಸ್ವತಃ ಅವರಿಗೆ ಭಕ್ತಿ ಮಾರ್ಗದ ಜ್ಞಾನವಿಲ್ಲ.

**ವಾಣಿ ಸಂ.2ರ ಭಾವಾರ್ಥ:–** ತತ್ವದರ್ಶಿ ಸಂತರ ಅಭಾವದ ಕಾರಣದಿಂದ ಮೋತೀ ಮುಕ್ತಾ ಅಂದರೆ ಮೋಕ್ಷವೆಂಬ ಮುತ್ತು ಅಂದರೆ ಮೋಕ್ಷ ಮಂತ್ರವು ಕಾಣಿಸುವುದಿಲ್ಲ. ಇಡೀ ಪ್ರಪಂಚವೇ ಆಧ್ಯಾತ್ಮ ಜ್ಞಾನಹೀನ ಕುರುಡರು. ಯಾರ ಕಣ್ಣಿಗೆ ಪೊರೆ ಬಂದಿದೆ ಅಂದರೆ ಇದೊಂದು ರೀತಿಯ ಕಣ್ಣಿನರೋಗ. ಈ ರೋಗ ಇರುವವರ ಕಣ್ಣುಗಳು ನೋಡಲು ಆರೋಗ್ಯವಂತವಾಗಿ ಕಂಡರೂ, ಆ ರೋಗಗ್ರಸ್ತ ವ್ಯಕ್ತಿಗಳಿಗೆ ಏನೂ ಕಾಣುವುದಿಲ್ಲ. ಈ ಉದಾಹರಣೆ ನೀಡಿ ಹೇಳಬಯಸುತ್ತಾರೆನೆಂದರೆ ಯಾರು ಸಂಸ್ಕೃತ ಭಾಷೆಯನ್ನು ಮಾತನಾಡುತ್ತಾರೊ. ಅವರು ಮಹಾವಿದ್ವಾಂಸರಂತೆ ಕಾಣುತ್ತಾರೆ. ಆದರೆ ಸದ್ಗ್ರಂಥಗಳ ಗೂಢ ರಹಸ್ಯವನ್ನು ಅವರು ತಿಳಿದಿಲ್ಲ. ಅವರ ಕಣ್ಣಿಗೆ ಅಜ್ಞಾನವೆಂಬ ಪೊರೆ ಆವರಿಸಿಕೊಂಡಿದೆ.

**ವಾಣಿ ಸಂ.3ರ ಭಾವಾರ್ಥ:–** ವೇದಗಳನ್ನು ಕಂಠಪಾಠ ಮಾಡಿರುವವರು ವೇದಗಳ ಗೂಡಾರ್ಥಗಳನ್ನು ತಿಳಿದುಕೊಳ್ಳದೆ ಅವುಗಳ ವಿರುದ್ಧವೇ ಸಾಧನೆ ಮಾಡುತ್ತಾ–ಮಾಡಿಸುತ್ತಿರುತ್ತಾರೆ. ವೇದಗಳಲ್ಲಿ ಮೂರ್ತಿಪೂಜೆಯ ಉಲ್ಲೇಖವು ಎಲ್ಲಿಯೂ ಇಲ್ಲ. ವೇದಗಳ ವಿದ್ವಾಂಸರೆಂದು ಕರೆಸಿಕೊಳ್ಳುವವರು ಕಲ್ಲಿನ ಪೂಜೆ ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ. ವೇದಗಳಲ್ಲಿ ಹೇಳಿರುವ ಪರಮಾತ್ಮನನ್ನು ಮರೆಸಿದ್ದಾರೆ.

ಶ್ರೀಮದ್ಭಗವದ್ಗೀತೆಯ 4ನೇ ಅಧ್ಯಾಯದ 25ರಿಂದ 29ನೇ ಶ್ಲೋಕದವರೆಗೆ ಹೀಗೆಂದು ಹೇಳಲಾಗಿದೆ, ಯಾವ ಸಾಧಕನು ಯಾವ ರೀತಿಯ ಸಾಧನೆ ಮಾಡಿದರೂ ಅವನು ಅದನ್ನೇ ಉತ್ತಮ ಎಂದು ತಿಳಿದು ಮಾಡುತ್ತಿರುತ್ತಾನೆ. ಎಲ್ಲಾ ಸಾಧಕರು ತಮ್ಮ ತಮ್ಮ ಭಕ್ತಿಯನ್ನು ಪಾಪನಾಶಮಾಡುವಂಥದ್ದೆಂದು ತಿಳಿದಿದ್ದಾರೆ.

ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ ಸ್ಪಷ್ಟಪಡಿಸಿರುವುದೇನೆಂದರೆ, ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಜ್ಞಾನವನ್ನು ಸ್ವತಃ ಸಚ್ಚಿದಾನಂದ ಘನಬ್ರಹ್ಮನು ತನ್ನ ಮುಖಕಮಲದಿಂದ ಹೇಳಿದ ವಾಣಿಯಲ್ಲಿ ಸವಿಸ್ತಾರವಾಗಿ ಹೇಳಿದ್ದಾನೆ. ಅದು ತತ್ವಜ್ಞಾನವಾಗಿದೆ. ಅದನ್ನು ಅರಿತ ಸಾಧಕನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ, ಆ ತತ್ವಜ್ಞಾನವನ್ನು ತತ್ವದರ್ಶಿಸಂತರು ತಿಳಿದಿರುತ್ತಾರೆ, ಅವರಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ವಿನಯವಾಗಿ ಪ್ರಶ್ನೆ ಕೇಳುವುದರಿಂದ, ತತ್ವಜ್ಞಾನವನ್ನು ತಿಳಿದ ಜ್ಞಾನಿ ಮಹಾತ್ಮ ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವರು ಎಂದು ಸ್ಪಷ್ಟಪಡಿಸಲಾಗಿದೆ.

ಮೇಲೆ ತಿಳಿಸಿದ ವಾಣಿಯಲ್ಲಿ ನಿರ್ಗುಣ ರಾಸಾ ಅಂದರೆ ತತ್ವಜ್ಞಾನ ಸಿಗದ ಕಾರಣ ಎಲ್ಲಾ ಸಾಧಕರು ಜನನ–ಮರಣದ ಚಕ್ರದಲ್ಲೇ ಉಳಿದು ಬಿಟ್ಟಿದ್ದಾರೆ.

ಮಾರ್ಕಂಡೇಯ ಋಷಿ ಬ್ರಹ್ಮಸಾಧನೆ ಮಾಡುತ್ತಿದ್ದರು. ಶ್ರೀಮದ್ಭಗವದ್ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಲಾಗಿದೆ, ಬ್ರಹ್ಮಲೋಕಕ್ಕೆ ಹೋದ ಸಾಧಕರೂ ಸಹ ಪುನರಾವರ್ತಿ

ಅರ್ಥಾತ್ ಮತ್ತೆ ಮತ್ತೆ ಜನನ–ಮರಣದ ಚಕ್ರದಲ್ಲೇ ಇರುತ್ತಾರೆ ಎಂದು ಹೇಳಲಾಗಿದೆ.

**ಮೊದಲಿನ ಶಬ್ದದ 4ನೇ ಸಂಖ್ಯೆಯ ವಾಣಿ:–**

ಅಸಂಖ್ಯ್ ಜನ್ಮ್ ತೋಹೆ ಮರತಾಂ ಹೋಗೆ, ಜೀವಿತ್ ಕ್ಯೋಂ ನ ಮರ್ರೈ ರೆ ॥
ದ್ವಾದಶ್ ಮಧ್ಯ್ ಮಹಲ್ ಮಠ್ ಬೋರೆ, ಬಹುರ್ ನ ದೇಹ್ ಧರ್ರೈ ರೆ ।

**ಸರಳಾರ್ಥ:–** ಹೇ ಮಾನವ! ನೀನು ಅಶಂಖ್ಯ ಬಾರಿ ಜನ್ಮತಾಳಿ–ಮರಣ ಹೊಂದಿರುವೆ. ಸತ್ಯ ಸಾಧನೆ ಮಾಡು ಹಾಗೂ ಜೀವಂತವಾಗಿ ಸಾಯಿ. ಜೀವಂತವಾಗಿ ಸಾಯುವುದು ಎಂದರೆ ಈ ಪ್ರಪಂಚದ ಪ್ರತಿಯೊಂದು ವಸ್ತುವೂ ಶಾಶ್ವತವಲ್ಲ ಎಂಬ ಅರಿವು ಭಕ್ತನಿಗೆ ಆಗುವುದು. ಈ ಶರೀರವೂ ಶಾಶ್ವತವಲ್ಲ, ಜನನ–ಮರಣವೆಂಬ ಜಂಜಟವೂ ಭಯಂಕರವಾಗಿರುತ್ತದೆ ಎಂದು ಅರಿಯುವುದೇ ಆಗಿದೆ. ಈ ಪ್ರಪಂಚದಲ್ಲಿ ದುಃಖದ ವಿನಃ ಇನ್ನೇನೂ ಇಲ್ಲ. ಮಾನವ ಶರೀರವನ್ನು ಪಡೆದ ನಂತರವೂ ಮೋಕ್ಷವನ್ನು ಪಡೆಯಲಿಲ್ಲವೆಂದರೆ ಪಶುವಿನಂತೆ ಜೀವನ ಕಳೆದಿರಿ. ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಹೇಳಿರುವಂತೆ ಯಾವ ಸಾಧಕನು ಕೇವಲ ವೃದ್ಧಾಪ್ಯದ ಕಷ್ಟ ಮತ್ತು ಮರಣದ ದುಃಖದಿಂದ ಬಿಡುಗಡೆ ಹೊಂದಲು ಸಾಧನೆ ಮಾಡುತ್ತಾನೋ, ಅವನು ತತ್ ಬ್ರಹ್ಮನನ್ನು ಹಾಗೂ ಸಂಪೂರ್ಣ ಆಧ್ಯಾತ್ಮವನ್ನು ಹಾಗೂ ಕರ್ಮವನ್ನು ತಿಳಿದವನಾಗಿರುತ್ತಾನೆ ಎಂದು ಹೇಳಲಾಗಿದೆ.

ಇದೇ ರೀತಿ ತತ್ವಜ್ಞಾನವನ್ನು ಪಡೆದ ನಂತರ ಮಾನವನಿಗೆ ಅನಾವಶ್ಯಕ ವಸ್ತುಗಳ ಮೇಲೆ ಆಸೆಯುಂಟಾಗುವುದಿಲ್ಲ. ತಂಬಾಕು, ಮದ್ಯ–ಮಾಂಸ ಸೇವನೆ ಮಾಡುವುದಿಲ್ಲ. ಹಾಡು, ಕುಣಿತ ಮೂರ್ಖರ ಕೆಲಸ ಎಂದು ಅನ್ನಿಸುತ್ತದೆ. ಎಂತಹ ಊಟ ಸಿಕ್ಕರೂ ಅದರಲ್ಲೇ ಸಂತುಷ್ಟನಾಗುತ್ತಾನೆ.

❖ ಆತ್ಮಕಲ್ಯಾಣಕ್ಕಾಗಿ ಸಾಧಕರು ಚಿಂತಿಸುತ್ತಾರೆ. ಸತ್ಸಂಗಕ್ಕೆ ಹೋಗದಿದ್ದರೆ ಗುರುಗಳ ದರ್ಶನ ಮಾಡಲು ಸಾಧ್ಯವಿಲ್ಲ ಎಂದು ಅವರು ಭಾವಿಸುತ್ತಾರೆ. ಸತ್ಸಂಗದ ವಿಚಾರ ಕೇಳದಿದ್ದರೆ ಮನಸ್ಸು ಮತ್ತೆ ಚಂಚಲವಾಗಬಹುದು ಎಂದು ತಿಳಿಯುತ್ತಾರೆ. ಆಗ ಆ ಸಾಧಕರು ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಸತ್ಸಂಗವನ್ನು ಕೇಳಲು ಹೊರಡುತ್ತಾರೆ. ನಾವು ಪ್ರತಿದಿನವೂ ಕೇಳುತ್ತಿರುತ್ತೇವೆ ಹಾಗೂ ನೋಡುತ್ತಿರುತ್ತೇವೆ, ಚಿಕ್ಕ ಚಿಕ್ಕ ಮಕ್ಕಳನ್ನು ಬಿಟ್ಟು ತಂದೆಯಾದವನು ಈ ಪ್ರಪಂಚದಿಂದ ಹೊರಟು ಹೋಗುತ್ತಾನೆ ಅಂದರೆ ಸತ್ತು ಹೋಗುತ್ತಾನೆ. ದೊಡ್ಡ ದೊಡ್ಡ ಉದ್ಯಮಿಗಳು ದುರ್ಘಟನೆಯಲ್ಲಿ ಮರಣ ಹೊಂದುತ್ತಾರೆ. ಜೀವಮಾನದಲ್ಲಿ ಸಂಗ್ರಹಿಸಿದ್ದ ಸಂಪತ್ತೆಲ್ಲವನ್ನೂ ಬಿಟ್ಟು ಹೊರಡುತ್ತಿರುತ್ತಾರೆ. ಆ ಸಂಪತ್ತನ್ನು ಕಾಪಾಡಲು ಮತ್ತೆ ಬರುವುದಿಲ್ಲ. ಸಾಯುವ ಮೊದಲು ಒಂದು ದಿನವೂ ಕೆಲಸ ಬಿಡಲು ಮನಸ್ಸು ಒಪ್ಪುವುದಿಲ್ಲ. ಆದರೆ ಇಂದು ಶಾಶ್ವತವಾಗಿ ಕೆಲಸವೆಲ್ಲಾ ಹೋಯಿತು ಎಂದು ಸಾಧಕನು ಚಿಂತನೆ ಮಾಡುತ್ತಾನೆ.

## "ಇಂದು ಸಹೋದರನಿಗೆ ಬಿಡುವು"

ಒಬ್ಬ ಭಕ್ತನು ಸತ್ಸಂಗಕ್ಕೆ ಹೋಗ ತೊಡಗಿದನು, ಜ್ಞಾನ ತಿಳಿದು ದೀಕ್ಷೆ ಪಡೆದು ಭಕ್ತಿ ಮಾಡಲು ಪ್ರಾರಂಭಿಸಿದನು. ತನ್ನ ಮಿತ್ರನಿಗೂ ಸತ್ಸಂಗಕ್ಕೆ ಹೋಗಲು ಮತ್ತು ಭಕ್ತಿ ಮಾಡಲು ವಿನಂತಿಸಿದನು. ಆದರೆ ಮಿತ್ರ ಒಪ್ಪಲಿಲ್ಲ. ತನಗೆ ಕೆಲಸದಿಂದ ಬಿಡುವಿಲ್ಲ(ಸಮಯವಿಲ್ಲ) ವೆಂದು ಹೇಳುತ್ತಿದ್ದನು ಹಾಗೂ ತನಗೆ ಚಿಕ್ಕ–ಚಿಕ್ಕ ಮಕ್ಕಳಿರುವುದಾಗಿಯೂ, ಅವುಗಳ ಪಾಲನೆ–ಪೋಷಣೆ ಮಾಡಬೇಕಾಗಿರುವುದರಿಂದ ಕೆಲಸ ಕಾರ್ಯ ಬಿಟ್ಟು ಸತ್ಸಂಗಕ್ಕೆ ಬಂದರೆ ಕೆಲಸವೆಲ್ಲಾ ಮಣ್ಣುಪಾಲಾಗುವುದೆಂದನು.

ಸತ್ಸಂಗಕ್ಕೆ ಹೋಗುವ ಭಕ್ತನು ತನ್ನ ಮಿತ್ರನನ್ನ ಸತ್ಸಂಗಕ್ಕೆ ಕರೆದಾಗಲೆಲ್ಲಾ ಅವನು ತನಗೆ ಕೆಲಸದಿಂದ ಬಿಡುವು ಇಲ್ಲವೆಂದು ಹೇಳುತ್ತಿದ್ದನು. 1 ವರ್ಷದ ನಂತರ ಆ ಮಿತ್ರನು ಸಾವನ್ನಪ್ಪಿದನು. ಅವನ ಕುಟುಂಬದವರು, ಬಂಧು ಮಿತ್ರರು ಅವನ ಹೆಣವನ್ನು ಹೊತ್ತು ಸಾಗಿದರು. ಆ ಊರಿನ ಸಾವಿರಾರು ಜನ ಶವದ ಜೊತೆ ನಡೆದರು. ಎಲ್ಲರೂ 'ರಾಮ ನಾಮ್ ಸತ್ ಹೈ, ಸತ್ ಬೋಲೊ ಗತ್ ಹೈ' ಎಂದು ಹೇಳುತ್ತಾ ಮುಂದೆ ಸಾಗಿದರು.

ರಾಮನಾಮವೇನೋ ಸತ್ಯ, ಆದರೆ ಇಂದು ಸಹೋದರನಿಗೆ ಬಿಡುವು ಇದೆ ಎಂದು ಆ ಭಕ್ತ ಹೇಳುತ್ತಿದ್ದನು. ಜನರೆಲ್ಲಾ ಹೇಳುತ್ತಿದ್ದರು "ಸತ್ ಬೋಲೊ ಗತ್ ಹೈ" ಆಗ ಭಕ್ತನು ಹೇಳುತ್ತಿದ್ದ ಇಂದು ಸಹೋದರನಿಗೆ ಬಿಡುವು ಇದೆ. ಆಗ ಬೇರೆ ಜನರೆಲ್ಲಾ ಆ ಭಕ್ತನಿಗೆ, 'ಹಾಗೆಲ್ಲಾ ಹೇಳಬೇಡ, ಅವನ ಮನೆಯವರಿಗೆ ಬೇಸರವಾಗುತ್ತದೆ' ಎಂದರು. ಆಗ ಆ ಭಕ್ತನು, 'ನಾನಂತೂ ಹಾಗೇ ಹೇಳುವೆ. ಏಕೆಂದರೆ ಈ ಮೂರ್ಖನಿಗೆ ಕೈ ಜೋಡಿಸಿ ಹೇಳಿದೆ, ಸತ್ಸಂಗಕ್ಕೆ ಬಾ, ಕೊಂಚ ಭಕ್ತಿಮಾಡು ಎಂದೆ. ಆದರೆ ಇವನು ನನಗೆ ಈಗ ಬಿಡುವಿಲ್ಲ (ಸಮಯವಿಲ್ಲ) ಎಂದು ಹೇಳುತ್ತಿದ್ದ. ಈ ದಿನ ಇವನಿಗೆ ಶಾಶ್ವತವಾಗಿ ಬಿಡುವು ಸಿಕ್ಕಿದೆ. ಚಿಕ್ಕ-ಚಿಕ್ಕ ಮಕ್ಕಳನ್ನು ಬಿಟ್ಟು ಹೊರಟು ಹೋದನು. ಇವರ ಪಾಲನೆ-ಪೊಷಣೆಯ ನೆಪವೊಡ್ಡಿ ಪರಮಾತ್ಮನಿಂದ ದೂರ ಉಳಿದಿದ್ದ. ಭಕ್ತಿ ಮಾಡಿದ್ದರೆ ಬರಿಗೈಯಲ್ಲಿ ಹೋಗುತ್ತಿರಲಿಲ್ಲ. ಭಕ್ತಿ ಎನ್ನುವ ಸಂಪತ್ತನ್ನು ತೆಗೆದುಕೊಂಡು ಹೋಗುತ್ತಿದ್ದ' ಎಂದನು. ಮಕ್ಕಳ ಪಾಲನೆ ಪೋಷಣೆಯಂತು ಪರಮಾತ್ಮ ಮಾಡುತ್ತಾನೆ. ಭಕ್ತಿ ಮಾಡುವುದರಿಂದ ಸಾಧಕನ ಆಯಸ್ಸನ್ನು ಪರಮಾತ್ಮ ಹೆಚ್ಚಿಸುತ್ತಾನೆ. ಭಕ್ತರು ಈ ರೀತಿಯಾಗಿ ಯೋಚಿಸಿ ಭಕ್ತಿ ಮಾಡಿದರೆ, ತಮ್ಮ ಕೆಲಸಗಳನ್ನೆಲ್ಲಾ ಬದಿಗೊತ್ತಿ ಸತ್ಸಂಗಕ್ಕೆ ತೆರಳಲು ಸಾಧ್ಯವಾಗುತ್ತದೆ.

ಭಕ್ತರು ಯೋಚಿಸುತ್ತಾರೆ ಪರಮಾತ್ಮ ಮಾಡದಿರಲಿ ನಮಗೆ ಸಾವು ಬಂದೊದಗಿದರೆ, ಆಗ ನಮ್ಮ ಕೆಲಸ ಮಾಡುವವರಾರು? ನಮಗೆ ಸಾವೇ ಬಂದು ಒದಗಿತು ಎಂದಿಟ್ಟುಕೊಳ್ಳೋಣ. ನಾವು 3 ದಿನ ಸತ್ತು ಹೋಗಿದ್ದೇವೆ ಎಂದಿಟ್ಟುಕೊಳ್ಳೋಣ. ಹಾಗೆಂದುಕೊಂಡು ಸತ್ಸಂಗಕ್ಕೆ ಹೋದರೆ, ಹಾಗಂತು ಪರಮಾತ್ಮನ ಭಕ್ತರ ಕೆಲಸವು ಬಿಗಡಾಯಿಸುವುದಿಲ್ಲ. ಆದರೂ ನಮ್ಮ ಅನುಪಸ್ಥಿತಿಯಲ್ಲಿ ನಮ್ಮ ಕೆಲಸ ಹಾಳಾಯಿತು ಎಂದಿಟ್ಟುಕೊಳ್ಳೋಣ. ಆಗ 3 ದಿನದ ನಂತರ ಹೋಗಿ ಸರಿ ಮಾಡಿಕೊಂಡರಾಯಿತು. ಒಂದು ವೇಳೆ ನಿಜವಾಗಿ ಸಾವೇನಾದರೂ ಬಂದು ಬಿಟ್ಟರೆ ಶಾಶ್ವತವಾಗಿ ಕೆಲಸ ಹಾಳಾಯಿತು. ಮತ್ತೇನು ಮಾಡಲು ಬರಲಾಗುವುದಿಲ್ಲ. ಈ ಸ್ಥಿತಿಯನ್ನು ಜೀವಂತ ಸಾಯುವುದು ಎನ್ನುತ್ತಾರೆ. ವಾಣಿಯ ಉಳಿದ ಸರಳಾರ್ಥ :-

ದ್ವಾದಶ್ ಮಧ್ಯ್ ಮಹಲ್ ಮಠ್ ಬೌರೆ, ಬಹುರ್ ನ ದೇಹಿ ಧರ್ರೈ ರೆ ।

ಸರಳಾರ್ಥ:- ಶ್ರೀ ಮದ್ಭಗವದ್ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ, ಹೇಳಿರುವುದೆನೆಂದರೆ ತತ್ವಜ್ಞಾನದ ಪ್ರಾಪ್ತಿಯನಂತರ ಪರಮೇಶ್ವರನ ಆ ಪರಮ ಪದದ ಹುಡುಕಾಟವನ್ನು ಮಾಡಬೇಕು, ಅಲ್ಲಿ ಹೋದನಂತರ ಸಾಧಕನು ಪ್ರಪಂಚಕ್ಕೆ ಮರಳಿ ಎಂದಿಗೂ ಬರುವುದಿಲ್ಲ. ಅಂದರೆ ಅವನಿಗೆ ಪೂನರ್ಜನ್ಮ ಆಗುವುದಿಲ್ಲ. ಅವನು ದೇಹಧಾರಣೆ ಮಾಡುವುದಿಲ್ಲ. ಸೂಕ್ಷ್ಮವೇದದ ಈ ವಾಣಿಯು ಸ್ಪಷ್ಟಪಡಿಸುವುದೇನೆಂದರೆ, ಆ ಪರಮಧಾಮವಾದ ದ್ವಾದಶ ಅಂದರೆ 12ನೇ ದ್ವಾರವನ್ನು ದಾಟಿ ಆ ಪರಮ ಧಾಮಕ್ಕೆ ಹೋಗುತ್ತಾರೆ. ಇಂದಿನ ತನಕ ಸರ್ವಋಷಿ, ಮಹರ್ಷಿಗಳು, ಸಂತರು, ಮಂಡಲೇಶ್ವರರು ಕೇವಲ 10 ದ್ವಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಆದರೆ ಕಬೀರ್ ಪರಮೇಶ್ವರರು ತನ್ನ ಸ್ಥಾನವನ್ನು ಪಡೆಯುವ ಸತ್ಯಮಾರ್ಗ, ಸತ್ಯಸ್ಥಾನವನ್ನು ತಾವೇ ತಿಳಿಸಿದ್ದಾರೆ. ಅವರು 12ನೇ ದ್ವಾರವನ್ನು ತಿಳಿಸಿಕೊಟ್ಟಿದ್ದಾರೆ. ಇದರಿಂದ ಇಂದಿನ ತನಕ (ಸನ್ 2012ರವರೆಗೆ) ಪೂರ್ವದ ಎಲ್ಲಾ ಋಷಿ, ಸಂತರ, ಪಂಥಗಳ ಭಕ್ತಿ ಕಾಲಬ್ರಹ್ಮನವರೆಗಿನದಿತ್ತು ಎಂದು ಸ್ಪಷ್ಟವಾಯ್ತು. ಆದ್ದರಿಂದ ಜನನ-ಮರಣದ ಚಕ್ರ ನಡೆಯುತ್ತಿತ್ತು.

**ವಾಣಿ ಸಂಖ್ಯೆ.5:-**

ದೋಜಖ್ ಬಹಿಶ್ತ್ ಸಭೀ ತೈ ದೇಖೆ, ರಾಜಪಾಟ್ ಕೇ ರಸಿಯಾ ।
ತೀನ್ ಲೋಕ್ ಸೇ ತೃಪ್ತ್ ನಾಹೀಂ, ಯಹ್ ಮನ್ ಭೋಗೀ ಖಸಿಯಾ ॥

ಸರಳಾರ್ಥ:- ತತ್ವಜ್ಞಾನದ ಅಭಾವದಿಂದ ಪೂರ್ಣ ಮೋಕ್ಷದ ದಾರಿ ಸಿಗದಿದ್ದ ಕಾರಣ ಒಮ್ಮೆ ದೋಜಖ್ ಅಂದರೆ ನರಕಕ್ಕೆ ಹೋಗುವುದು, ಒಮ್ಮೆ ಬಹಿಶ್ತ್ ಅಂದರೆ ಸ್ವರ್ಗಕ್ಕೆ ಹೋದರು, ಒಮ್ಮೆ ರಾಜನಾಗಿ ಸುಖ ಪಡೆದರು. ಒಂದು ವೇಳೆ ಈ ಮನುಷ್ಯನಿಗೆ 3 ಲೋಕಗಳ

ರಾಜ್ಯವನ್ನು ಕೊಟ್ಟರೂ ಅವನಿಗೆ ತೃಪ್ತಿಯಾಗುವುದಿಲ್ಲ.

ಉದಾಹರಣೆ:– ಯಾರಾದರೂ ಒಂದು ಹಳ್ಳಿಯ ಪಂಚಾಯಿತಿ ಸದಸ್ಯನಾದರೆ ಅವನು ಇಚ್ಛಿಸುತ್ತಾನೆ ಅಧ್ಯಕ್ಷನಾದರೆ ಮೋಜು ಆಗುವುದು. ಅಧ್ಯಕ್ಷ ಮಂತ್ರಿಯಾಗಲು ಇಚ್ಛಿಸುತ್ತಾನೆ. ಮಂತ್ರಿಯಾದರೆ ಅದು ಬೇರೆನೆ ಮಾತು. ಮಂತ್ರಿಯಾಗಿ ಮುಖ್ಯಮಂತ್ರಿಯಾಗಲು ಇಚ್ಛಿಸುತ್ತಾನೆ. ಮುಖ್ಯಮಂತ್ರಿಯಾದರೆ ಇಡೀ ರಾಜ್ಯ ತನ್ನ ಕೈಯಲ್ಲಿರುತ್ತದೆ, ಆ ಖುಷಿಯೇ ಬೇರೆಯದು. ಇಡೀ ರಾಜ್ಯ ನನ್ನ ಮಾತನ್ನು ಕೇಳುವುದು. ನಂತರ ಪ್ರಬಲ ಇಚ್ಛೆಯಾಗುವುದು ಪ್ರಧಾನಮಂತ್ರಿಯಾದರೆ ಜೀವನ ಸಾರ್ಥಕವಾಗುವುದೆಂದು. ಅಲ್ಲಿಯವರೆಗೆ ಅವನ ಜೀವನ ಸಮಾಪ್ತಿಯಾಗಿರುತ್ತದೆ. ನಂತರ ಕತ್ತೆಯಾಗಿ ಹುಟ್ಟಿ ಕುಂಬಾರನ ಕೋಲಿನ ಏಟು ತಿನ್ನುತ್ತಿರುವನು. ಆದ್ದರಿಂದ ಕಾಲಬ್ರಹ್ಮನ ಮೂಲಕ ಮಾಡಲ್ಪಟ್ಟ ಸ್ವರ್ಗ–ನರಕ ಮತ್ತು ಅಧಿಕಾರ ಪ್ರಾಪ್ತಿಯ ಭ್ರಮೆಯ ಜಾಲದಲ್ಲಿ ಇಡೀ ಜೀವನ ವ್ಯರ್ಥಮಾಡಿಕೊಂಡ ಎಂದು ತತ್ವಜ್ಞಾನದಲ್ಲಿ ತಿಳಿಸಲಾಗುತ್ತದೆ. ಎಲ್ಲೂ ಸಂತೋಷವಿಲ್ಲ, ಹೀಗೆ ಈ ಮನಸ್ಸು ಹೇಡಿ ಇದೆ.

ಇರಾಕ್ ದೇಶದ ಬಲಖ್ ನಗರದ ಅಬ್ರಾಹಿಮ್ ಸುಲ್ತಾನ್ ಅಧಮ್ ಎಂಬ ರಾಜನಿದ್ದನು. ಅವನು ಹಿಂದಿನ ಜನ್ಮದಲ್ಲಿ ಒಬ್ಬ ಪರಮ ಭಕ್ತನಾಗಿದ್ದನು. ಆದರೆ ಈ ಜನ್ಮದಲ್ಲಿ ಧನದ ಮದದಿಂದ ಪರಮಾತ್ಮನನ್ನು ಮರೆತು ಹೋಗಿದ್ದನು. ರಾಜನ ವೈಭೋಗದಲ್ಲಿ, ಅರಮನೆಯಲ್ಲಿ, ಸುಖದ ಕಾಲ ಕಳೆಯುತ್ತಿದ್ದನು. ಒಂದು ದಿನ ಪರಮಾತ್ಮ ಸತ್ಯಲೋಕದಿಂದ ಬಂದು ಒಬ್ಬ ಯಾತ್ರಿಕನಂತೆ ವೇಷಧರಿಸಿ ಆ ರಾಜನ ಅರಮನೆಗೆ ಹೋದನು. ಅವನ ಬಳಿ ಹೋಗಿ, "ಹೇ ಧರ್ಮಛತ್ರದವನೇ, 1 ಕೊಠಡಿಯನ್ನು ಬಾಡಿಗೆಗೆ ಕೊಡು, ಹಣವೆಷ್ಟು ಹೇಳು. ಈ ರಾತ್ರಿ ಇಲ್ಲಿ ಕಳೆಯಬೇಕಿದೆ" ಎಂದನು. ಆಗ ಆ ರಾಜನು ಆ ಯಾತ್ರಿಕನಿಗೆ, "ಹೇ ಯಾತ್ರಿಕನೇ, ಇದೇನು ನಿನಗೆ ಧರ್ಮಛತ್ರದಂತೆ ಕಾಣುತ್ತಿದೆಯೇ? ನಾನು ರಾಜ ಮತ್ತು ಇದು ನನ್ನ ಅರಮನೆ" ಎಂದನು. ಆಗ ಆ ಪರಮಾತ್ಮನು ಈ ಅರಮನೆಯಲ್ಲಿ ಈ ಮೊದಲು ಯಾರು ವಾಸಿಸುತ್ತಿದ್ದರು ಎಂದು ಕೇಳಿದನು. ಆಗ ಆ ರಾಜನು, 'ನನ್ನ ತಂದೆ, ತಾತಾ–ಮುತ್ತಾತಂದಿರು ವಾಸಿಸುತ್ತಿದ್ದರು ಎಂದನು. ಯಾತ್ರಿಕ ವೇಷದಲ್ಲಿದ್ದ ಪರಮಾತ್ಮನು, ನೀನೆಷ್ಟು ದಿನ ಈ ಅರಮನೆಯಲ್ಲಿರುತ್ತೀಯಾ? ಎಂದು ಕೇಳಿದನು. ಆಗ ರಾಜನು ಮುಂದೊಂದು ದಿನ ನಾನೂ ಈ ಅರಮನೆಯನ್ನು ಬಿಟ್ಟು ಹೋಗುವೆ ಎಂದನು. ಆಗ ಪರಮಾತ್ಮನು, ಈ ಅರಮನೆ ಧರ್ಮಛತ್ರವಲ್ಲದೆ ಮತ್ತೇನು? ಇದು ಧರ್ಮಛತ್ರ. ನಿನ್ನ ತಾತ ಮುತ್ತಾತಂದಿರು ಹೋದರು, ಹಾಗೇ ನೀನು ಒಂದು ದಿನ ಹೊರಟು ಹೋಗುವೆ, ಆದ್ದರಿಂದ ನಾನು ಅರಮನೆಯನ್ನು ಧರ್ಮಛತ್ರ ಎಂದಿದ್ದೇನೆ." ಎಂದು ಹೇಳಿದನು. ಆಗ ರಾಜನಿಗೆ ಜ್ಞಾನೋದಯವಾಯಿತು. ಪ್ರಪಂಚದ ಮೋಹವನ್ನು ತೊರೆದು ಆತ್ಮ ಕಲ್ಯಾಣ ಮಾಡಿಕೊಂಡನು. ಎಂದೆಂದಿಗೂ ಸುಖವಾಗಿರಲು ಮತ್ತು ಅಮರ ಜೀವನ ಪಡೆಯಲು ದೀಕ್ಷೆ ಪಡೆದನು ಮತ್ತು ಜೀವನಪರ್ಯಂತ ಭಕ್ತಿಮಾಡಿದನು. ತನ್ನ ಜೀವನವನ್ನು ಸಾರ್ಥಕ ಮಾಡಿಕೊಂಡನು.

**ವಾಣಿ ಸಂಖ್ಯೆ 6:–**

ಸತ್‌ಗುರು ಮಿಲೈಂ ತೋ ಇಚ್ಛಾ ಮೇಟೈಂ, ಪದ್ ಮಿಲ್ ಪದೇ ಸಮಾನಾ ।
ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಆದಿ ಅಮರ್ ಅಸ್ಥಾನಾ ॥

ಸರಳಾರ್ಥ:– ಒಂದು ವೇಳೆ ತತ್ವದರ್ಶಿ ಸಂತ ಸದ್ಗುರು ಸಿಕ್ಕಿದರೆ, ಮೇಲೆ ತಿಳಿಸಿದ ಜ್ಞಾನವನ್ನು ಹೇಳಿ. ಕಾಲಬ್ರಹ್ಮನ ಲೋಕದ ಎಲ್ಲಾ ವಸ್ತುಗಳ ಮತ್ತು ಪದವಿಗಳ ಇಚ್ಛೆಯನ್ನು ದೂರಮಾಡಿ, "ಪದ್ ಮಿಲ್ ಪದೇ ಸಮಾನಾ" ಇದರಲ್ಲಿ 1ನೇ ಪದ್ ದ ಅರ್ಥ ಪದ್ಧತಿ ಅಂದರೆ ಶಾಸ್ತ್ರವಿಧಿಯಂತೆ ಸಾಧನೆ ಮಾಡುವುದನ್ನು ತಿಳಿಸುತ್ತಾರೆ. 2ನೇ ಪದ್ ದ ಅರ್ಥ ಪರಮ ಪದವಿ ಅಂದರೆ ಪದವಿ ಸದ್ಗುರು ಶಾಸ್ತ್ರವಿಧಿ ಅನುಸಾರ ಪದ್ಧತಿ ಹೇಳಿ ಪರಮೇಶ್ವರನ ಆ ಪರಮ ಪದವಿಯನ್ನು ಪ್ರಾಪ್ತಿಸಿದ ಬಳಿಕ ಸಾಧಕನು ಮತ್ತೆ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಹೇ ಭಕ್ತ, ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವ ಸನಾತನ ಪರಮಧಾಮಕ್ಕೆ

ನಿನ್ನನ್ನು ಕಳುಹಿಸುವನು, ಅದು ಆದಿ ಅಮರ ಸ್ಥಾನವಾಗಿದೆ, ಅಲ್ಲಿ ಪರಮ ಶಾಂತಿ ಇದೆ.

**ವಾಣಿ ಸಂಖ್ಯೆ 7:–**

ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೆ, ಮಿಲೆ ರಾಮ್ ಅವಿನಾಶೀ ॥

ಸರಳಾರ್ಥ:– ಆ ಸನಾತನ ಪರಮಧಾಮದಲ್ಲಿ ಪರಮ ಶಾಂತಿ ಮತ್ತು ಅಧಿಕ ಸುಖವಿದೆ. ಕಾಲಬ್ರಹ್ಮನ ಲೋಕದಲ್ಲಿ ನಾಲ್ಕು ಮುಕ್ತಿಗಳನ್ನು ಹೇಳಲಾಗಿದೆ. ಅದನ್ನು ಪಡೆದು ಸಾಧಕನು ತನ್ನನ್ನು ಧನ್ಯನೆಂದು ತಿಳಿಯುತ್ತಾನೆ. ಆದರೆ ಅದು ಶಾಶ್ವತವಲ್ಲ. ಸ್ವಲ್ಪ ಸಮಯದ ನಂತರ ಪುಣ್ಯ ಖಾಲಿಯಾದಂತೆ 84 ಲಕ್ಷ ಪ್ರಕಾರಗಳ ಯೋನಿಗಳಲ್ಲಿ ಜನ್ಮ ತಾಳಿ ಕಷ್ಟ ಪಡುತ್ತಾನೆ. ಆದರೆ ಈ ಸತ್ಯಲೋಕದಲ್ಲಿ ನಾಲ್ಕೂ ಮುಕ್ತಿಯ ಸುಖ ಎಂದೆಂದಿಗೂ ಇರುವುದು. ಆಗ ಮಾಯೆ ನಿಮ್ಮ ಸೇವಕಿಯಾಗಿ ಇರುತ್ತಾಳೆ. ಸಂತ ಗರೀಬ್‌ದಾಸರು ಹೇಳುವುದೇನೆಂದರೆ, ಅಮರ ಲೋಕದಲ್ಲಿ ಹೋದ ನಂತರ ಜೀವಾತ್ಮ ನಿರ್ಭಯನಾಗುತ್ತಾನೆ ಮತ್ತು ಆ ಸನಾತನ ಪರಮಧಾಮದಲ್ಲಿ ಆ ಅವಿನಾಶಿ ರಾಮ ಅಂದರೆ ಪರಮೇಶ್ವರನು ಸಿಗುತ್ತಾನೆ. ಆದ್ದರಿಂದ ಪೂರ್ಣ ಮೋಕ್ಷಕ್ಕಾಗಿ ಶಾಸ್ತ್ರಾನುಸಾರವಾಗಿ ಭಕ್ತಿ ಮಾಡಬೇಕು. ಅದರಿಂದ ಆ ಭಗವಂತನ ಕಡೆ ಹೋಗಬಹುದು.

ಮೇಲಿನ ವಾಣಿ ಮತ್ತು ಅದರ ಸರಳಾರ್ಥದಿಂದ ಸ್ಪಷ್ಟವಾಗುವುದೇನೆಂದರೆ ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಇವರ ತಂದೆ ಕಾಲಬ್ರಹ್ಮ ಅರ್ಥಾತ್ ಕ್ಷರಪುರುಷ ಮತ್ತು ಅಕ್ಷರಪುರುಷ ಎಲ್ಲಾ ರಾಮ ಅರ್ಥಾತ್ ಪ್ರಭು ನಾಶವಾಗುವವರು. ಕೇವಲ ಪರಮ ಅಕ್ಷರ ಬ್ರಹ್ಮನೇ ಅವಿನಾಶೀ ರಾಮ ಅರ್ಥಾತ್ ಪ್ರಭು. ಅಂದರೆ ಈ ಪರಮೇಶ್ವರನ ಭಕ್ತಿಯಿಂದ ಪರಮಶಾಂತಿ ಮತ್ತು ಸನಾತನ ಪರಮ ಧಾಮ ಅರ್ಥಾತ್ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ. ಅಲ್ಲಿ ನಾಲ್ಕು ಮುಕ್ತಿಯ ಸುಖ ಯಾವಾಗಲೂ ಸಿಗುತ್ತದೆ. ಮಾಯೆ ಅಂದರೆ ಸಕಲ ಸೌಕರ್ಯಗಳು ಸಾಧಕನ ಸೇವಕನಾಗಿ ಇರುತ್ತವೆ. ಸೂಕ್ಷ್ಮವೇದದಲ್ಲಿ ಹೇಳಿರುವುದೇನೆಂದರೆ:–

ಕಬೀರ್, ಮಾಯಾ ದಾಸೀ ಸಂತ್ ಕೀ, ಉಭಯ್ ದೇ ಆಶೀಷ್ ।
ವಿಲಸೀ ಔರ್ ಲಾತೋಂ ಛಡೀ, ಸುಮರ್–ಸುಮರ್ ಜಗದೀಶ್ ॥

ಭಾವಾರ್ಥ:– ಹಣದಿಂದ ಸರ್ವ ಸುಖ–ಸೌಕರ್ಯಗಳು ದೊರಕುವವು. ಶಾಸ್ತ್ರವಿಧಿಯ ಅನುಸಾರವಾಗಿ ಭಕ್ತಿ ಮಾಡುವ ಸಂತ–ಭಕ್ತನು ಆ ಹಣವನ್ನು ಗಳಿಸುವ ಉದ್ದೇಶ ಇಟ್ಟುಕೊಳ್ಳದಿದ್ದರೂ ಅವನಿಗೆ ಹಣ ಪ್ರಾಪ್ತವಾಗುತ್ತದೆ. **By Product** ಆಗುತ್ತದೆ. ಅಂದರೆ ರೈತನು ಗೋಧಿಯನ್ನು ಬಿತ್ತಿದರೆ ಅವನ ಉದ್ದೇಶ ಗೋಧಿಯ ಕಾಳನ್ನು ಪಡೆಯುವುದು ಎಂದರ್ಥ. ಆದರೆ ಅದರ ಜೊತೆ ಹೊಟ್ಟು ಕೂಡಾ ಲಭ್ಯವಾಗುವುದು. ಹೊಟ್ಟು ಗೋಧಿಯ **By Product** ಆಗಿದೆ. ಅದೇ ರೀತಿ ಸತ್ಯ ಸಾಧನೆ ಮಾಡುವವನಿಗೆ ಸ್ವತಃವೇ ಮಾಯೆ ಎನ್ನುವ ಧನವೂ ಸಿಗುತ್ತದೆ. ಸಾಧಕನು ಅದನ್ನು ಅನುಭವಿಸುತ್ತಾನೆ. ಅದು ಅವನ ಪಾದಗಳಲ್ಲಿ ಬಿದ್ದಿರುತ್ತದೆ. ಅವನಿಗೆ ಹಣದ ಆಭಾವ ಇರುವುದಿಲ್ಲ ಬದಲಾಗಿ ಅವಶ್ಯಕತೆಗಿಂತ ಹೆಚ್ಚಿರುತ್ತದೆ. ಪರಮೇಶ್ವರನ ಭಕ್ತಿ ಮಾಡುವುದರಿಂದ ಭಕ್ತನು ಮಾಯೆಯ ಆನಂದ ಪಡೆಯುತ್ತಾನೆ ಹಾಗೂ ಪೂರ್ಣ ಮೋಕ್ಷವನ್ನು ಪಡೆಯುತ್ತಾನೆ.

❖ ಈ ಪ್ರಸಂಗವನ್ನು ಮುಂದುವರೆಸುತ್ತಾ, ಮಾನವ ಶರೀರ ಪಡೆದ ಜೀವಾತ್ಮ ತನ್ನ ಉದ್ದೇಶವನ್ನು ನೆನಪಿಟ್ಟುಕೊಳ್ಳಬೇಕು. ಭಕ್ತಿಮಾಡಿ ತನ್ನ ಉದ್ಧಾರ ಮಾಡಿಕೊಳ್ಳಬೇಕು. ಸೂಕ್ಷ್ಮವೇದದಲ್ಲಿ ಹೀಗೆ ಬರೆದಿದೆ:– ( ರಾಗ್ ಅಸಾವರೀ ಶಬ್ದ ಸಂಖ್ಯೆ 71 )

ಯಹ್ ಸೌದಾ ಫಿರ್ ನಾಹೀಂ ಸಂತೋ, ಯಹ್ ಸೌದಾ ಫಿರ್ ನಾಹೀಂ ।
ಲೋಹೆ ಜೈಸಾ ತಾವ್ ಜಾತ್ ಹೈ, ಕಾಯಾ ದೇಹ್ ಸರಾಹೀ ॥
ತೀನ್ ಲೋಕ್ ಔರ್ ಭುವನ್ ಚತುರ್ದಶ್, ಸಬ್ ಜಗ್ ಸೌದೇ ಆಹೀಂ ।
ದುಗನೆ–ತಿಗುನೆ ಕಿಯೆ ಚೌಗುನೆ, ಕಿನ್ಹೂಂ ಮೂಲ್ ಗವಾಹೀಂ ॥

ಭಾವಾರ್ಥ:– ಇಬ್ಬರು ವ್ಯಾಪಾರಿಗಳು (Businessmen) ವ್ಯಾಪಾರ ಮಾಡಲು ಒಂದೂರಿಗೆ ಹೋದರು. ತಲಾ 5–5 ಲಕ್ಷ ಬಂಡವಾಳ ತೆಗೆದುಕೊಂಡು ಹೋದರು. ಒಬ್ಬನು ತನ್ನ ಹಣವನ್ನು ಸದುಪಯೋಗ ಮಾಡಿಕೊಂಡನು. ಧರ್ಮಶಲೆ ಅಥವಾ ಹೋಟೆಲ್‌ನಲ್ಲಿ ಬಾಡಿಗೆ ರೂಮನ್ನು ಪಡೆದನು, ಸಾಮಾನನ್ನು ಖರೀದಿಸಿದನು. ಹೆಚ್ಚಿನ ಬೆಲೆಗೆ ಮಾರಿದನು. 20 ಲಕ್ಷ ರೂಪಾಯಿ ಸಂಪಾದನೆ ಮಾಡಿದನು. ಎರಡು ವರ್ಷದಲ್ಲಿ ಮನೆಗೆ ವಾಪಸ್ಸು ಬಂದನು. ಎಲ್ಲರೂ ಅವನನ್ನು ಹೊಗಳಿದರು. ಅವನು ಧನಿಕನಾದನು.

ಇನ್ನೊಬ್ಬನು ಧರ್ಮಶಾಲೆ ಅಥವಾ ಹೋಟೆಲ್‌ನಲ್ಲಿ ರೂಮನ್ನು ಬಾಡಿಗೆ ಪಡೆದನು. ಮದ್ಯವನ್ನು ಸೇವಿಸಿ. ವೇಶ್ಯೆಯರ ನೃತ್ಯ ನೋಡುತ್ತಿದ್ದ. ತಿಂದು, ಉಂಡು ಮಲಗಿ, ವ್ಯರ್ಥಮಾಡಿದನು. ಅವನು ತನ್ನ ಬಂಡವಾಳದಲ್ಲಿನ 5 ಲಕ್ಷ ರೂಪಾಯಿಗಳನ್ನು ನಷ್ಟಮಾಡಿದನು. ಮನೆಗೆ ಮರಳಿ ಬಂದಾಗ ಸಾಲವಾಯಿತು. ಯಾರಿಂದ 5 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದನೋ ಅವನು ತನ್ನ ಹಣವನ್ನು ಕೊಡುವಂತೆ ಕೇಳಿದನು. ಕೊಡಲು ಸಾಧ್ಯವಿಲ್ಲದಿದ್ದಾಗ ಅವನು ಆ ವ್ಯಾಪಾರಿಯನ್ನು ಕೆಲಸಕ್ಕೆ ಇಟ್ಟುಕೊಂಡನು. ಅವನು 5 ಲಕ್ಷ ಸಾಲ ತೀರಿಸಿದನು. ಮೇಲಿನ ವಾಣಿಯ ತಾತ್ಪರ್ಯವೇನೆಂದರೆ, ಸ್ವರ್ಗಲೋಕ, ಪಾತಾಳಲೋಕ ಮತ್ತು ಭೂಲೋಕ–3 ಲೋಕದಲ್ಲಿರುವ ಜೀವಾತ್ಮಗಳೆಲ್ಲಾ ರಾಮನಾಮದ ವ್ಯಾಪಾರ ಮಾಡಲು ಬಂದಿರುವರು. ಒಬ್ಬರು ಎರಡರಷ್ಟು, ಮೂರರಷ್ಟು, ನಾಲ್ಕರಷ್ಟು ಹಣ ಸಂಪಾದಿಸಿದರು. ಅಂದರೆ ಪೂರ್ಣ ಸಂತನಿಂದ ದೀಕ್ಷೆ ಪಡೆದು ಮನುಷ್ಯ ಜೀವನದ ಶ್ವಾಸದ ಬಂಡವಾಳವನ್ನು ಸತ್ಯಭಕ್ತಿ ಮಾಡಿ ಹೆಚ್ಚಿಸಿದರು. ಬೇರೆ ವ್ಯಕ್ತಿಗಳು ಯಾರು ಭಕ್ತಿ ಮಾಡಲಿಲ್ಲ ಅಥವಾ ಶಾಸ್ತ್ರವಿಧಿ ತ್ಯಜಿಸಿ ಮನಸ್ಸಿಗೆ ಬಂದಂತೆ ಮಾಡಿದರು ಅಥವಾ ಅಧಿಕಾರಿಅಲ್ಲದ ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡಿದರು. ಅವರಿಗೆ ಯಾವುದೇ ಲಾಭ ಸಿಗುವುದಿಲ್ಲ. ಇದು ಪವಿತ್ರ ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಪ್ರಮಾಣವಿದೆ. ಆದ್ದರಿಂದ ಅವನು ತನ್ನ ಮನುಷ್ಯ ಜೀವನದ ಶ್ವಾಸದ ರೂಪದಲ್ಲಿರುವ ಬಂಡವಾಳವನ್ನು ಸತ್ಯ, ಭಕ್ತಿ ಮಾಡದೆ ಹಾಳು ಮಾಡಿಕೊಂಡನು.

## “ಭಕ್ತಿ ಮಾಡದೆ ಇರುವುದರಿಂದ ಆಗುವ ನಷ್ಟದ ವಿವರಣೆ”

ಯಹ್ ದಮ್ ಟೂಟ್ಯೆ ಪಿಂಡಾ ಫೂಟ್ಯೆ, ಹೋ ಲೇಖಾ ದರ್‌ಗಾಹ್ ಮಾಂಹೀ ।
ಉಸ್ ದರಗಾಹ್ ಮೆಂ ಮಾರ್ ಪಡ್ಯೆಗೀ, ಜಮ್ ಪಕಡೇಂಗೆ ಬಾಂಹೀ ॥
ನರ್–ನಾರಾಯಣ್ ದೇಹಿ ಪಾಯ್ ಕರ್, ಫೇರ್ ಚೌರಾಸೀ ಜಾಂಹೀ ।
ಉಸ್ ದಿನ್ ಕೀ ಮೋಹೆ ಡರನೀ ಲಾಗೇ, ಲಜ್ಜಾ ರಹ್ ಕೇ ನಾಂಹೀ ॥
ಜಾ ಸತಗುರು ಕೀ ಮೈಂ ಬಲಿಹಾರೀ, ಜೋ ಜಾಮಣ್ ಮರಣ್ ಮಿಟಾಹೀಂ ।
ಕುಲ್ ಪರಿವಾರ್ ತೇರಾ ಕುಟಂಬ್ ಕಬೀಲಾ, ಮಸಲಿತ್ ಏಕ್ ಠಹರಾಹೀ ।
ಬಾಂಧ್ ಪೀಂಜರೀ ಆಗ್ಯೆ ಧರ್ ಲಿಯಾ, ಮರಘಟ್ ಕೂಂ ಲೇ ಜಾಹೀಂ ॥
ಅಗ್ನಿ ಲಗಾ ದಿಯಾ ಜಬ್ ಲಂಬಾ, ಫೂಂಕ್ ದಿಯಾ ಉಸ್ ಠಾಹೀಂ ।
ಪುರಾಣ್ ಉಠಾ ಫಿರ್ ಪಂಡಿತ್ ಆಯೆ, ಪೀಛೆ ಗರುಡ್ ಪಢಾಹೀಂ ॥

ಭಾವಾರ್ಥ:– ಈ ದಮ್ ಅಂದರೆ ಶ್ವಾಸ ಯಾವ ದಿನ ಮುಗಿಯುವುದು. ಆ ದಿನವೇ ಈ ಶರೀರ ರೂಪಿ ಪಿಂಡ್ ಹೊರಟು ಹೋಗುವುದು. ನಂತರ ಪರಮಾತ್ಮನ ಆಸ್ಥಾನದಲ್ಲಿ ಪಾಪ ಪುಣ್ಯಗಳ ಲೆಕ್ಕಾಚಾರ ನಡೆಯುವುದು. ಭಕ್ತಿ ಮಾಡದಿರುವ ಅಥವಾ ಶಾಸ್ತ್ರವಿರುದ್ಧವಾಗಿ ಭಕ್ತಿ ಮಾಡುವವರನ್ನು ಯಮದೂತರು ಕುತ್ತಿಗೆ ಹಿಡಿದು ಕರೆದೊಯ್ಯುತ್ತಾರೆ. ಬೇಕಾದರೆ ಅವನು ಯಾವುದೇ ದೇಶದ ರಾಜನಾಗಿರಲಿ, ಅವನನ್ನು ಹೊಡೆಯುತ್ತಾರೆ. ಸಂತ ಗರೀಬ್‌ದಾಸರಿಗೆ ಪರಮೇಶ್ವರ ಕಬೀರರು ಸಿಕ್ಕಿದರು. ಅವರ ಆತ್ಮವನ್ನು ಮೇಲೆ ಕರೆದುಕೊಂಡು ಹೋಗಿದ್ದರು. ಬ್ರಹ್ಮಾಂಡವನ್ನೆಲ್ಲಾ ತೋರಿಸಿ ಸಂಪೂರ್ಣ ಆಧ್ಯಾತ್ಮ ಜ್ಞಾನವನ್ನು ತಿಳಿಸಿ ಮರಳಿ ಶರೀರದಲ್ಲಿ ತಂದು

ಬಿಟ್ಟರು. ಸಂತ ಗರೀಬ್‌ದಾಸರು ತಮ್ಮ ಕಣ್ಣಾರೆ ನೋಡಿದ್ದನ್ನು ವರ್ಣಿಸುತ್ತಿದ್ದಾರೆ, "ಹೇ ಮಾನವ! ನಿನಗೆ ಮಾನವ ಶರೀರ ಸಿಕ್ಕಿದೆ. ಅದು ನಾರಾಯಣನ ಅಂದರೆ ಪರಮಾತ್ಮನ ಶರೀರದಂತೆ ಅಂದರೆ ಅವನದೇ ಸ್ವರೂಪವಿದೆ, ಅನ್ಯ ಜೀವಾತ್ಮಗಳಿಗೆ ಈ ಸುಂದರ ಶರೀರ ಲಭ್ಯವಾಗಿಲ್ಲ. ಈ ಶರೀರ ಸಿಕ್ಕಿದನಂತರ ಜೀವಾತ್ಮ ಜೀವನಪರ್ಯಂತ ಭಗವಂತನ ಭಕ್ತಿ ಮಾಡಬೇಕು. ಇಂತಹ ಪರಮಾತ್ಮನ ಸ್ವರೂಪ ಶರೀರ ಪ್ರಾಪ್ತಿಸಿ ಸತ್ಯಭಕ್ತಿ ಮಾಡದಕಾರಣ ನಂತರ 84 ಲಕ್ಷದ ಚಕ್ರದಲ್ಲಿ ಹೋಗುತ್ತಿದ್ದಾನೆ. ಇಂತಹ ಮಾನವ ಜೀವನಕ್ಕೆ ಧಿಕ್ಕಾರ. ಎಲ್ಲಾದರೂ ಭಕ್ತಿ ಕಡಿಮೆಯಾದರೆ ಆಗ ಪರಮಾತ್ಮನ ಆಸ್ಥಾನದಲ್ಲಿ ನಿನಗೆ ಗೌರವ ಇರುವುದೋ ಅಥವಾ ಇಲ್ಲವೋ ಎನ್ನುವುದೇ ನನಗೆ ಭಯವಾಗಿದೆ ಹಾಗೂ ಚಿಂತೆಯೂ ಆಗಿದೆ. ನಾನಂತೂ ಭಕ್ತಿ ಮಾಡುತ್ತಾ ಮಾಡುತ್ತಾ ಭಕ್ತಿ ಕಡಿಮೆಯಾಗಬಾರದೆಂದು ಹೆದರುತ್ತೇನೆ. ನೀವಂತು ಭಕ್ತಿಯನ್ನೇ ಮಾಡುವುದಿಲ್ಲ. ಮಾಡಿದರೂ ಶಾಸ್ತ್ರವಿರುದ್ಧವಾಗಿ ಮಾಡುತ್ತಿದ್ದಿರಾ. ಆದ್ದರಿಂದ ನಿಮ್ಮದಂತು ಸ್ಥಿತಿ ಗಂಭೀರವಾಗಿದೆ ಮತ್ತು ನಾನಂತು ಸಲಹೆ ನೀಡುತ್ತೇನೆ. ಜನನ-ಮರಣವೆಂಬ ದೀರ್ಘ ರೋಗವನ್ನು ನಿವಾರಿಸುವ, ಕತ್ತರಿಸುವ ಸದ್ಗುರುವನ್ನು ಹುಡುಕಿ". ಸತ್ಯಭಕ್ತಿ ಮಾಡದವರ ಸ್ಥಿತಿ ಏನಾಗುವುದು ಮೃತ್ಯುವಿನ ಬಳಿಕ ಅಕ್ಕ ಪಕ್ಕದ ಕುಲದ ಜನರು ಒಟ್ಟುಗೂಡುತ್ತಾರೆ. ನಂತರ ಎಲ್ಲರೂ ಒಂದೇ ಮಾತು ಹೇಳುತ್ತಾರೆ ಅಂದರೆ ಸಲಹೆ ನೀಡುತ್ತಾರೆ ಬೇಗ ಎತ್ತಿ. ಎತ್ತಿಕೊಂಡು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಸುಟ್ಟುಹಾಕುತ್ತಾರೆ. ಕೋಲಿನಿಂದ ಅಥವಾ ಬಡಿಗೆಯಿಂದ ಹೊಡೆದು ಹೊಡೆದು ಸುಡುತ್ತಾರೆ. ಸಂಪೂರ್ಣ ಶರೀರ ಸುಡುತ್ತಾರೆ. ಜೇಬಿನಲ್ಲಿರುವ ವಸ್ತುಗಳನ್ನೆಲ್ಲಾ ತೆಗೆದುಕೊಳ್ಳುತ್ತಾರೆ. ನಂತರ ಶಾಸ್ತ್ರವಿಧಿ ತ್ಯಜಿಸಿ ಮನಸೆಚ್ಛೆ ಆಚರಣೆ ಮಾಡಿಸುವ ಹಾಗೂ ಮಾಡುವ ಗುರುಗಳು, ಪ್ರಪಂಚ ಬಿಟ್ಟು ಹೋದ ಜೀವಾತ್ಮದ ಉದ್ಧಾರಕ್ಕಾಗಿ ಗರುಡ್ ಪುರಾಣದ ಪಠಣೆ ಮಾಡುತ್ತಾರೆ.

ಸೂಕ್ಷ್ಮವೇದ (ತತ್ವಜ್ಞಾನ) ದಲ್ಲಿ ಹೇಳಿರುವುದೇನೆಂದರೆ, ತನ್ನ ಮಾನವ ಜೀವನವನ್ನು ಪೂರ್ಣಗೊಳಿಸಿ ಆ ಜೀವಾತ್ಮವು ಹೊರಟು ಹೋಯಿತು. ಪರಮಾತ್ಮನ ಆಸ್ಥಾನದಲ್ಲಿ ಅದರ ಲೆಕ್ಕಾಚಾರ ಪ್ರಾರಂಭವಾಗುವುದು. ಅದು ಕರ್ಮಾನುಸಾರ ಕತ್ತೆಯೋ, ನಾಯಿಯೋ ಆಗುವ ಸಾಲಿನಲ್ಲಿ ನಿಲ್ಲುವುದು. ಸತ್ತ ನಂತರ ಗರುಡ ಪುರಾಣದ ಪಠಣೆ ಅದರ ಯಾವ ಕೆಲಸಕ್ಕೆ ಬರುವುದು? ಇದಂತೂ ಖಂಡಿತವಾಗಿಯೂ ಶಾಸ್ತ್ರಕ್ಕೆ ವಿರುದ್ಧವಾದ ವ್ಯರ್ಥ ಕ್ರಿಯಾಕ್ರಮವಾಗಿದೆ. ಆ ಜೀವಾತ್ಮ ಬದುಕಿದ್ದಾಗ ಅದಕ್ಕೆ ಭಗವಂತನ ಸಂವಿಧಾನದ ಜ್ಞಾನ ತಿಳಿಸಬೇಕಾಗಿತ್ತು. ಅದರಿಂದ ಅದಕ್ಕೆ ಒಳ್ಳೆಯ-ಕೆಟ್ಟದರ ಅರಿವಾಗುತ್ತಿತ್ತು. ಆಗ ಅದು ತನ್ನ ಮಾನವ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತಿತ್ತು.

ಪ್ರೇತ್ ಶಿಲಾ ಪರ್ ಜಾಯ್ ವಿರಾಜೇ, ಫಿರ್ ಪಿತರೋಂ ಪಿಂಡ್ ಭರಾಹೀಂ ।
ಬಹುರ್ ಶ್ರಾದ್ಧ್ ಖಾನ್ ಕೂಂ ಆಯಾ, ಕಾಗ್ ಭಯೇ ಕಲಿ ಮಾಹೀಂ ॥

ಭಾವಾರ್ಥ :- ಮೃತ್ಯುವಿನ ನಂತರ ಆ ಜೀವಾತ್ಮದ ಕಲ್ಯಾಣಕ್ಕಾಗಿ ಅಂದರೆ ಮೋಕ್ಷವನ್ನು ಪಡೆಯುವುದಕ್ಕಾಗಿ ಮಾಡುವ ಶಾಸ್ತ್ರವಿರುದ್ಧವಾದ ಕ್ರಿಯೆಗಳೆಲ್ಲಾ ವ್ಯರ್ಥವಾಗಿವೆ. ಹೇಗೆ ಗರುಡ ಪುರಾಣದ ಪಠಣೆ ಮಾಡಿಸಿದ್ರಿ, ಮರಣ ಹೊಂದಿದವನಿಗೆ ಗತಿ ಅಂದರೆ ಮೋಕ್ಷಸಿಗಲೆಂದು ನಂತರ ಅಸ್ಥಿಗಳನ್ನು ಗಂಗೆಯಲ್ಲಿ ಬಿಡುವುದು ಅವನಿಗೆ ಮೋಕ್ಷಸಿಗಲೆಂದು. ನಂತರ 13ನೇ ದಿವಸ ಅಥವಾ 17ನೇ ದಿವಸ ಯಾಗ ಮತ್ತು ಅನ್ನ ದಾಸೋಹ ಮಾಡುವುದು ಅವನಿಗೆ ಮೋಕ್ಷಸಿಗಲೆಂದು. ಮೊದಲು ಪ್ರತಿ ತಿಂಗಳು 1 ವರ್ಷದವರೆಗೆ ದಿವಸ ಮಾಡುವುದು ಅವನಿಗೆ ಮೋಕ್ಷಸಿಗಲೆಂದು. ನಂತರ 6ನೇ ತಿಂಗಳು, 6 ತಿಂಗಳಿಗೆ ಕ್ರಿಯೆ ಮಾಡುತ್ತಿದ್ದರು. ನಂತರ ವರ್ಷಕ್ಕೆ ಕ್ರಿಯೆ ಮಾಡುತ್ತಿದ್ದರು ಅವನಿಗೆ ಮೋಕ್ಷಸಿಗಲೆಂದು, ನಂತರ ಪಿಂಡಪ್ರದಾನ ಮಾಡುವುದು, ಅವನಿಗೆ ಮೋಕ್ಷ ಸಿಗಲೆಂದು ಶ್ರಾದ್ಧ ಮಾಡುವುದು ಅಂದರೆ ಶ್ರಾದ್ಧ ಕ್ರಿಯೆ ಮಾಡುವುದು ಮುಂತಾದವು ಕೇವಲ ಅವನಿಗೆ ಮುಕ್ತಿ ಕೊಡಿಸಲು ಅಷ್ಟೇ, ಶ್ರಾದ್ಧದ ದಿನ ಪುರೋಹಿತನು ಸ್ವತಃ ಅಡುಗೆ ಮಾಡುತ್ತಾನೆ ಹಾಗೂ ಮಾಡಿದ ಅಡಿಗೆಯನ್ನು ಮನೆಯ ಛಾವಣಿ ಮೇಲೆ ಇಡು ನಿಮ್ಮ ತಂದೆ ಕಾಗೆಯಾಗಿರಬಹುದು. ಕಾಗೆಯು ಊಟ ಮಾಡಿದರೆ, ನಿನ್ನ ತಂದೆ-ತಾಯಿ ಮುಂತಾದವರು ಯಾರ ಮೃತ್ಯುವಾಗಿದೆ. ಯಾರಿಗಾಗಿ ಈ

ಎಲ್ಲಾ ಕ್ರಿಯೆ ಮಾಡಲಾಗಿದೆ ಮತ್ತು ಈ ಶ್ರಾದ್ಧ ಮಾಡಲಾಗಿದೆ. ಅವನು ಕಾಗೆ ಯಾಗಿರುವನು. ಇವನ ಶ್ರಾದ್ಧವು ಸಫಲವಾಯಿತೆಂದು ಹೇಳುತ್ತಾನೆ. ಮೇಲೆ ತಿಳಿಸಿದ ವಿವರಣೆಯಿಂದ ಸ್ಪಷ್ಟವಾಯ್ತೆನೆಂದರೆ. ಯಾವ ವ್ಯಕ್ತಿ ಅವನಿಗಾಗಿ ಮೇಲಿನ ಕ್ರಿಯೆಗಳನ್ನು ಮಾಡಲಾಗಿತ್ತು ಅವನು ಕಾಗೆಯಾಗಿದ್ದಾನೆ.

ಶ್ರಾದ್ಧ ಮಾಡಿಸುವ ಪುರೋಹಿತನು, ಶ್ರಾದ್ಧ ಮಾಡುವುದರಿಂದ ಆ ಜೀವಾತ್ಮ ಒಂದು ವರ್ಷದವರೆಗೆ ತೃಪ್ತಿಗೊಂಡಿದೆ, ಮತ್ತೆ ಮುಂದಿನ ವರ್ಷ ತಿಥಿ ಮಾಡಬೇಕು ಎಂದು ಹೇಳುತ್ತಾನೆ.

**ಯೋಚಿಸಿ ನೋಡಿ:–** ಬದುಕಿದ್ದ ವ್ಯಕ್ತಿ 1 ದಿನಕ್ಕೆ 3 ಬಾರಿ ಊಟಮಾಡುತ್ತಿದ್ದನು. ಈಗ 1 ದಿನ ಊಟ ಮಾಡಿದರೆ ಒಂದು ವರ್ಷದವರೆಗೆ ಹೇಗೆ ತೃಪ್ತಗೊಳ್ಳಲು ಸಾಧ್ಯ? 1 ಪ್ರತಿದಿನವೂ ಛಾವಣಿಯ ಮೇಲೆ ಊಟವನ್ನಿಟ್ಟರೆ ಆ ಕಾಗೆಯು ಖಂಡಿತವಾಗಿಯೂ ತಿನ್ನುತ್ತದೆ.

**ಮತ್ತೊಂದು ಮಾತು:–** ಮೃತ್ಯುವಿನ ಬಳಿಕ ಮಾಡುವ ಎಲ್ಲ ಕ್ರಿಯೆಗಳು ಮೋಕ್ಷದ ಉದ್ದೇಶದಿಂದ ಮಾಡಲಾಗುತ್ತದೆ. ಆ ಅಜ್ಞಾನಿ ಗುರುಗಳು ಕೊನೆಯಲ್ಲಿ ಅವನನ್ನು ಕಾಗೆ ಮಾಡಿ ಬಿಟ್ಟು ಬಿಟ್ಟರು. ಅವನು ಪ್ರೇತ ಶಿಲೆಯ ಮೇಲೆ ಪ್ರೇತಯೋನಿ ಅನುಭವಿಸುತ್ತಿದ್ದಾನೆ. ಹಿಂದಿನಿಂದ ಗುರು ಮತ್ತು ಕಾಗೆ ಮೋಜು ಮಾಡಿಕೊಂಡು ಊಟ ಮಾಡುತ್ತಿದ್ದಾರೆ. ಪಿಂಡ ಪ್ರದಾನದಿಂದ ಪ್ರೇತ ಯೋನಿಯಿಂದ ಹೊರ ಬರುವುದು. ತಿಳಿಯಿರಿ ಪ್ರೇತಯೋನಿಯಿಂದ ಹೊರಬಂತು ನಂತರ ಕತ್ತೆ ಅಥವಾ ಎತ್ತು ಆದರೆ ಹಾಗಾದರೆ ಏನು ಮೋಕ್ಷ ಮಾಡಿಸಿದ್ರಿ?

ನರ್ ಸೇ ಫಿರ್ ಪಶುವಾ ಕೀಜ್ಯೈ, ಗಧಾ, ಬ್ಯೆಲ್ ಬನಾಈ ।
ಛಪ್ಪನ್ ಭೋಗ್ ಕಹಾಂ ಮನ್ ಬೌರೇ, ಕಹೀಂ ಕುರಡೀ ಚರನೇ ಜಾಈ ॥

**ಭಾವಾರ್ಥ:–** ಮನುಷ್ಯ ಜೀವನದಲ್ಲಿ ನಾವು ಎಷ್ಟು ಒಳ್ಳೆಯ 56 ಪ್ರಕಾರದ ಊಟ ಮಾಡುತ್ತೇವೆ. ಭಕ್ತಿ ಮಾಡದಿದ್ದರೆ ಅಥವಾ ಶಾಸ್ತ್ರವಿರುದ್ಧವಾದ ಸಾಧನೆ ಮಾಡುವುದರಿಂದ ಕತ್ತೆಯಾಗಿ ಹುಟ್ಟುವನು. ನಂತರ ಈ 56 ಪ್ರಕಾರದ ಊಟ ಎಲ್ಲಿ ಸಿಗಲು ಸಾಧ್ಯ? ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಮೈದಾನಕ್ಕೆ ಹುಲ್ಲು ತಿನ್ನಲು ಹೋಗುತ್ತಾನೆ. ಹಾಗೇ ಎತ್ತು ಬೇರೆ–ಬೇರೆ ಪ್ರಾಣಿಯಾಗಿ ಹುಟ್ಟಿ ಕಷ್ಟದ ಮೇಲೆ ಕಷ್ಟಪಡುವನು.

ಜೇ ಸತಗುರು ಕೀ ಸಂಗತ್ ಕರತೇ, ಸಕಲ್ ಕರ್ಮ್ ಕಟಿ ಜಾಈ ।
ಅಮರ್ ಪುರಿ ಪರ್ ಆಸನ್ ಹೋತೆ, ಜಹಾಂ ಧೂಪ್ ನ ಛಾಂಈ ॥

**ಭಾವಾರ್ಥ:–** ಸಂತ ಗರೀಬ್‌ದಾಸರು ಪರಮೇಶ್ವರರಿಂದ ಪ್ರಾಪ್ತವಾದ ಸೂಕ್ಷ್ಮವೇದದಲ್ಲಿ ಹೇಳಿರುವುದೇನೆಂದರೆ, ಸದ್ಗುರುವಿನ (ತತ್ವದರ್ಶಿ ಸಂತನ) ಆಶ್ರಯ ಪಡೆದು ದೀಕ್ಷೆ ಪಡೆದರೆ ಮೇಲೆ ತಿಳಿಸಿದ ಎಲ್ಲಾ ಕರ್ಮಗಳ ಕಷ್ಟವು ದೂರವಾಗುತ್ತದೆ. ಅಂದರೆ ಅವರು ಪ್ರೇತ ಆಗುವುದಿಲ್ಲ, ಎತ್ತು, ಕತ್ತೆಯೂ ಆಗುವುದಿಲ್ಲ. ಅಮರ ಪುರಿಯಲ್ಲಿ ಆಸೀನರಾಗಿರುತ್ತಾರೆ. ಅಂದರೆ ಗೀತೆಯ **18**ನೇ ಅಧ್ಯಾಯದ **62**ನೇ ಶ್ಲೋಕ ಮತ್ತು **15**ನೇ ಅಧ್ಯಾಯದ **4**ನೇ ಶ್ಲೋಕದಲ್ಲಿ ಹೇಳಿರುವಂತೆ ಅವರಿಗೆ ಸನಾತನ ಪರಮ ಧಾಮ ಪ್ರಾಪ್ತಿಯಾಗುತ್ತದೆ. ಪರಮ ಶಾಂತಿ ಲಭಿಸುತ್ತದೆ. ಮತ್ತೆಂದೂ ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಅಂದರೆ ಜನನ–ಮರಣವೆಂಬ ಕಷ್ಟದ ಚಕ್ರವು ಎಂದೆಂದಿಗೂ ಸಮಾಪ್ತವಾಗಿ ಹೋಗುತ್ತದೆ. ಆ ಸತ್ಯಲೋಕವೆಂಬ ಅಮರ ಲೋಕದಲ್ಲಿ ಬಿಸಿಲು–ನೆರಳಿಲ್ಲ. ಅಂದರೆ ಬಿಸಿಲು ದುಃಖ ಕೊಡುವಂತಾದರೆ ನೆರಳಿನ ಅವಶ್ಯಕತೆ ಇದೆ. ಆ ಸತ್ಯಲೋಕದಲ್ಲಿ ಬರೀ ಸುಖವೇ ಇದೆ, ದುಃಖ ಇಲ್ಲವೇ ಇಲ್ಲ.

ಸುರತ್ ನಿರತ್ ಮನ್ ಪವನ್ ಪಯಾನಾ, ಶಬ್ದೈ ಶಬ್ದ್ ಸಮಾಈ ।
ಗರೀಬ್‌ದಾಸ್ ಗಲತಾನ್ ಮಹಲ್ ಮೆಂ, ಮಿಲೇ ಕಬೀರ್ ಗೋಸಾಂಈ ॥

**ಭಾವಾರ್ಥ:–** ಸಂತ ಗರೀಬ್‌ದಾಸರು, 'ನನಗೆ ಕಬೀರ್ ಪರಮೇಶ್ವರರು ಸಿಕ್ಕಿದ್ದಾರೆ' ಎಂದು ಹೇಳಿದ್ದಾರೆ. 'ಅವರು ನನಗೆ ನನ್ನ ಮನಸ್ಸು ಮತ್ತು ಶ್ವಾಸದ ಮೇಲೆ ಗಮನ ಇಟ್ಟುಕೊಂಡು ನಾಮ ಸ್ಮರಣೆ ಮಾಡುವ ವಿಧಾನವನ್ನು ತಿಳಿಸಿದರು. ಆ ಸಾಧನೆಯಿಂದ ಸತ್ಯಲೋಕದಲ್ಲಿ ನಡೆಯುವ ಆ

ಶಬ್ದ ರಾಗವನ್ನು ಹಿಡಿದು ಸತ್ಯಲೋಕಕ್ಕೆ ಹೋದೆ. ಆ ಕಾರಣದಿಂದ ಸತ್ಯಲೋಕ (ಶಾಶ್ವತ ಸ್ಥಾನ) ದಲ್ಲಿ ತನ್ನ ಅರಮನೆಯಲ್ಲಿ ಆನಂದದಿಂದ ಇರುತ್ತೇನೆ ಏಕೆಂದರೆ ಪರಮೇಶ್ವರ ಕಬೀರರು ಯಾವ ಸತ್ಯಸಾಧನೆಯನ್ನು ಸಂತ ಗರೀಬ್‌ದಾಸರಿಗೆ ಹೇಳಿದ್ದರು ಮತ್ತು ಆ ಸ್ಥಾನವನ್ನು ನಾನು ಕಬೀರ್ ಪರಮೇಶ್ವರರ ಜೊತೆ ಹೋಗಿ ನೋಡಿ ಬಂದಿರುವೆನು. ಆ ಕಾರಣದಿಂದ ನಂಬಿಕೆಯಿಂದ ನಾನು ಮಾಡುತ್ತಿರುವ ಶಾಸ್ತ್ರಾನುಕೂಲ ಸಾಧನೆಯನ್ನು ಪರಮಾತ್ಮ ಹೇಳಿದ್ದಾರೆ. ಯಾವ ನಾಮ ಅಂದರೆ ಮಂತ್ರವನ್ನು ಜಪಿಸುವುದರಿಂದ ನಾನು ಖಂಡಿತ ಪೂರ್ಣ ಮೋಕ್ಷವನ್ನು ಪಡೆಯುವೆ ಇದರ ಬಗ್ಗೆ ಯಾವ ಸಂಶಯವೂ ಇಲ್ಲ. ಆ ಕಾರಣದಿಂದ ನಾನು (ಗರೀಬ್ ದಾಸ) ಸತ್ಯಲೋಕದಲ್ಲಿರುವ ನನ್ನ ಅರಮನೆಗೆ (ವಿಶಾಲ ಮನೆ) ಹೋಗಿವೆ ಆ ಕಾರಣದಿಂದ ನಿಶ್ಚಿಂತೆಯಿಂದ ಹಾಗು ಗಲತಾನ್ (ಅರಮನೆ ಸಿಕ್ಕ ಖುಷಿಯಲ್ಲಿ ಮಗ್ನನಾಗಿದ್ದೆನೆ) ಏಕೆಂದರೆ ನನಗೆ ಪೂರ್ಣ ಗುರು ಸ್ವತಃ ಪರಮಾತ್ಮ ಕಬೀರರು ತಮ್ಮ ಲೋಕದಿಂದ ಬಂದು ಭೇಟಿಯಾದರು.

ಗರೀಬ್, ಅಜಬ್ ನಗರ್ ಮೆಂ ಲೇ ಗಏ, ಹಮಕೋ ಸತ್‌ಗುರು ಆನ್ ।
ಝಿಲಕೇ ಬಿಂಬ್ ಅಗಾಧ್ ಗತಿ, ಸೂತೇ ಚಾದರ್ ತಾನ್ ॥

**ಭಾವಾರ್ಥ:–** ಗರೀಬ್‌ದಾಸರು ಹೀಗೆಂದರು, "ಸದ್ಗುರು ಅಂದರೆ ಸ್ವಯಂ ಪರಮೇಶ್ವರ ಕಬೀರರು ತನ್ನ ನಿಜ ಧಾಮವಾದ ಸತ್ಯಲೋಕದಿಂದ ಬಂದು ನನ್ನನ್ನು ಕರೆದುಕೊಂಡು ಅದ್ಭುತವಾದ ನಗರಕ್ಕೆ ಅಂದರೆ ಸತ್ಯಲೋಕದಲ್ಲಿ ಸ್ಥಾಪಿತವಾಗಿರುವ ನಗರಕ್ಕೆ ಕರೆದುಕೊಂಡು ಹೋದರು. ಆ ಸ್ಥಾನವನ್ನು ಈ ಕಣ್ಣಿಂದ ನೋಡಿದ ನಾನು ಪರಮಾತ್ಮನು ತಿಳಿಸಿರುವ ಭಕ್ತಿ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಸತ್ಯನಾಮ, ಸಾರನಾಮದ ಸಾಧನೆ ಮಾಡುತ್ತಿದ್ದೇನೆ. ಅದಕ್ಕಾಗಿ ನಾನು ಕಂಬಳಿಯನ್ನು ಹೊದ್ದುಕೊಂಡು ಮಲಗಿದ್ದೇನೆ. ಏಕೆಂದರೆ ನನಗೆ ಮೋಕ್ಷಸಿಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಕಂಬಳಿ ಹೊದಿಕೊಂಡು ಮಲಗುವುದು=ನಿಶ್ಚಿಂತೆಯಿಂದ ಮಲಗುವುದು. ಯಾರಿಗೆ ಯಾವುದೇ ಕೆಲಸವಿಲ್ಲದೆ ಚಾದರ ಹೊದ್ದುಕೊಂಡು ಮಲಗಿದ್ದಾನೆಂದರೆ ಹಳ್ಳಿಯಲ್ಲಿ ಎಲ್ಲರೂ ಏನು ಚಾದರ ಹೊದ್ದುಕೊಂಡು ಮಲಗಿರುವನಲ್ಲಾ, ಏನೂ ಕೆಲಸವಿಲ್ಲವೇ ಎಂದು ಕೇಳುವರು. ಅದೇ ರೀತಿ ಗರೀಬ್‌ದಾಸರು ಹೇಳುತ್ತಿದ್ದಾರೆ ದೊಡ್ಡ–ದೊಡ್ಡ ಮನೆ ಕಟ್ಟಿಸುವುದು ವ್ಯರ್ಥವೆನಿಸುತ್ತಿದೆ, ಈಗಂತು ಆ ಸತ್ಯಲೋಕಕ್ಕೆ ಹೋಗುವೆವು. ಅಲ್ಲಿ ಮೊದಲೇ ಕಟ್ಟಿರುವ ಅರಮನೆಗಳಿವೆ ಅದನ್ನು ಬಿಟ್ಟು ತಪ್ಪು ಮಾಡಿ ಕಾಲನ ಮೃತ್ಯು ಲೋಕದಲ್ಲಿ ಬಂದಿದ್ದೇವೆ. ಈಗ ಸಮಯ ಬಂದಿದೆ. ಸತ್ಯಭಕ್ತಿ ಸಿಕ್ಕಿದೆ ಮತ್ತು ತತ್ವಜ್ಞಾನ ಸಿಕ್ಕಿದೆ.

ಸಜ್ಜನರೇ, ಈ ಸತ್ಯ ಭಕ್ತಿ ವರ್ತಮಾನದಲ್ಲಿ ನನ್ನ (ರಾಮ್‌ಪಾಲ್ ದಾಸ್‌ನ)ಬಳಿ ಇದೆ. ಇದರಿಂದ ಈ ದುಃಖಗಳ ಮನೆ ಪ್ರಪಂಚದಿಂದ ಪಾರಾಗಿ. ಪರಮಶಾಂತಿ ಮತ್ತು ಶಾಶ್ವತ ಸ್ಥಾನ (ಸನಾತನ ಪರಮಧಾಮ) ಪ್ರಾಪ್ತವಾಗುತ್ತದೆ. ಗೀತೆಯ **18**ನೇ ಅಧ್ಯಾಯದ **62**ನೇ ಶ್ಲೋಕದಲ್ಲಿ ಮತ್ತು **15**ನೇ ಅಧ್ಯಾಯದ **4**ನೇ ಶ್ಲೋಕದಲ್ಲಿ ಇದರ ಬಗ್ಗೆ ಹೇಳಲಾಗಿದೆ. ತತ್ವದರ್ಶಿ ಸಂತನಿಂದ ತತ್ವಜ್ಞಾನವನ್ನು ಪಡೆದು, ಆ ತತ್ವಜ್ಞಾನದಿಂದ ಅಜ್ಞಾನವನ್ನು ನಾಶಪಡಿಸಿಕೊಂಡು, ಅದರ ನಂತರ ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮತ್ತೆ ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ.

## "ಭಕ್ತಿ ಮಾಡದಿದ್ದರೆ ಬಹಳ ದುಃಖವಾಗುವುದು"

**ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–**

ಯಹ್ ಸಂಸಾರ್ ಸಮಝುದಾ ನಾಹೀಂ, ಕಹಂದಾ ಶಾಮ್ ದುಪಹರೇ ನೂಂ ।
ಗರೀಬ್‌ದಾಸ್ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೇ ನೂಂ ॥

**ಭಾವಾರ್ಥ:–** ಆಧ್ಯಾತ್ಮಿಕ ಜ್ಞಾನದ ಅಭಾವದಿಂದ ಪರಮಾತ್ಮನ ವಿಧಾನವನ್ನು ತಿಳಿಯಲು

ಅಸಮರ್ಥನಾದ ಕಾರಣ ಈ ಮನುಷ್ಯನು ಈ ದುಃಖಗಳ ಮನೆಯಾದ ಈ ಪ್ರಪಂಚದಲ್ಲಿ ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದಾನೆ, ಅದನ್ನೇ ಸುಖವೆಂದು ತಿಳಿದಿದ್ದಾನೆ.

ಹರಿಯಾಣ ರಾಜ್ಯದಲ್ಲಿ ಒಬ್ಬ ವ್ಯಕ್ತಿ ಜೂನ್ ತಿಂಗಳಿನಲ್ಲಿ ಮಧ್ಯಾಹ್ನದ **12** ಅಥವಾ **1** ಗಂಟೆಗೆ ಮದ್ಯವನ್ನು ಕುಡಿದು, ಸುಡು ಬಿಸಿಲಿನಲ್ಲಿ ಬಿದ್ದಿದ್ದಾನೆ. ಬೆವರಿನಿಂದ ತೊಪ್ಪೆಯಾಗಿದ್ದಾನೆ. ಶರೀರಕ್ಕೆ ಮರಳು ಅಂಟಿಕೊಂಡಿದೆ. ಒಬ್ಬ ವ್ಯಕ್ತಿ ಬಂದು, "ಹೇ ಸಹೋದರ ಏಳು, ನಿನ್ನನ್ನು ಆ ಮರದ ಕೆಳಗೆ ಕೂರಿಸುತ್ತೇನೆ. ನೀನು ಈ ಬಿಸಿಲಿನಲ್ಲಿ ಉರಿದು ಹೋಗುತ್ತಿರುವೆ" ಎಂದು ಹೇಳಿದನು. ಆಗ ಆ ಕುಡುಕ, "ಇಲ್ಲ ಇಲ್ಲ, ನಾನು ಇಲ್ಲೇ ಇರುತ್ತೇನೆ, ಇಲ್ಲೇ ಚೆನ್ನಾಗಿದೆ. ಇಲ್ಲಿ ಯಾವ ಕಷ್ಟವೂ ಇಲ್ಲ", ಎನ್ನುತ್ತಾನೆ.

❖ ಒಬ್ಬ ವ್ಯಕ್ತಿ ಯಾವುದೋ ಕಾರಣದಿಂದ ನ್ಯಾಯಲಯಕ್ಕೆ ಹೋದನು. ಅಲ್ಲಿ ಅವನಿಗೆ ಅವನ ನೆಂಟನೊಬ್ಬನು ಸಿಕ್ಕಿದನು. ಅವರಿಬ್ಬರು ಒಬ್ಬರಿಗೊಬ್ಬರು ತಾವು ಕ್ಷೇಮವೆಂದು ವಿಚಾರಿಸಿದರು. ಇಬ್ಬರೂ ಹೇಳಿದರು ಎಲ್ಲವೂ ಸರಿಯಾಗಿದೆ.

❖ ಒಬ್ಬ ವ್ಯಕ್ತಿಯ ಏಕೈಕ ಪುತ್ರ ರೋಗಿಯಾಗಿದ್ದನು. ಅವನನ್ನು **P.G.I** ಆಸ್ಪತ್ರೆಗೆ ಸೇರಿಸಿದ್ದರು. ಹುಡುಗನು ಬದುಕುಳಿಯುವನೆಂದು ವಿಶ್ವಾಸ ಇರಲಿಲ್ಲ. ಅಂಥಾ ಸ್ಥಿತಿಯಲ್ಲಿ ತಂದೆ ತಾಯಿಗಳ ಮನಸ್ಥಿತಿ ಹೇಗಿರುತ್ತದೆ ಎಂದು ಸುಲಭವಾಗಿ ಹೇಳಬಹುದು. ಸಂಬಂಧಿಕರು ಅವನನ್ನು ನೋಡಲು ಬಂದರು, ಮಗನ ಸ್ಥಿತಿ ಹೇಗಿದೆ? ಎಂದು ಕೇಳಿದರು. ಆಗ ತಂದೆ ಮಗು ಉಳಿಯುವ ಭರವಸೆ ಇಲ್ಲ, ನಂತರ ಅವರು ಎಲ್ಲವೂ ಕ್ಷೇಮವೇ ಎಂದು ಕೇಳಿದರು. ಆಗ ಆ ತಂದೆಯು 'ಎಲ್ಲವೂ ಚೆನ್ನಾಗಿದ್ದೇವೆ' ಎಂದನು.

ಯೋಚಿಸುವ ವಿಷಯ:– ಮದ್ಯದ ಮತ್ತಿನಲ್ಲಿ, ಸುಡು ಬಿಸಿಲಿನ ಝಳದಲ್ಲಿ ಬೇಯುತ್ತಿದ್ದಾನೆ. ಆದರೂ ಚೆನ್ನಾಗಿದ್ದಾನೆ ಎಂದು ಹೇಳುತ್ತಿದ್ದಾನೆ.

❖ ಕೋರ್ಟು, ಕಛೇರಿಗಳಲ್ಲಿ ಸಂಬಂಧಿಕ ಸಿಕ್ಕಾಗ ಪರಸ್ಪರ ನಾವು ಚೆನ್ನಾಗಿದ್ದೇವೆ ಎಂದು ಹೇಳುತ್ತಾರೆ. ಯೋಚಿಸಿ ನೋಡಿ, ಯಾವ ವ್ಯಕ್ತಿಯು ಕೋರ್ಟಿನ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ, ಅವನು ಕನಸಿನಲ್ಲಿಯೂ ಸುಖವಾಗಿರಲಾರ, ಆದರೂ ಇಬ್ಬರೂ ಸುಖವಾಗಿದ್ದೇವೆ ಎಂದು ಹೇಳುತ್ತಾರೆ.

❖ ಯಾವ ವ್ಯಕ್ತಿಯ ಏಕೈಕ ಪುತ್ರನು ಮೃತ್ಯುವಿನ ಶಯ್ಯೆಯಲ್ಲಿ ಮಲಗಿದ್ದಾನೋ ಅವನು ಸುಖವಾಗಿರಲು ಹೇಗೆ ಸಾಧ್ಯ? ಹಾಗಾಗಿ ಸೂಕ್ಷ್ಮವೇದದಲ್ಲಿ ಈ ದುಃಖಮಯವಾದ ಪ್ರಪಂಚದಲ್ಲಿ ಮನುಷ್ಯನು ಮಹಾ ಕಷ್ಟವನ್ನು ಸುಖವೆಂದು ಭಾವಿಸಿದ್ದಾನೆ ಎಂದು ಹೇಳಲಾಗಿದೆ.

ಯಹ್ ಸಂಸಾರ್ ಸಮರುಧಾ ನಾಹೀಂ, ಕಹಂದಾ ಶಾಮ್ ದೋಪಹರೆ ನೂಂ ।
ಗರೀಬ್‌ದಾಸ್ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೇ ನೂಂ ॥

ಭಾವಾರ್ಥ:– ಸಂತ ಗರೀಬ್‌ದಾಸರು, ಈ ಮನುಷ್ಯನು ಜನ್ಮವನ್ನು ಪಡೆದು ಯಾವ ವ್ಯಕ್ತಿ ಭಕ್ತಿಮಾಡುವುದಿಲ್ಲವೊ, ಅವನು ನಾಯಿ, ಕತ್ತೆ ಮುಂತಾದ ಜನ್ಮಗಳಲ್ಲಿ ಕಷ್ಟಪಡುತ್ತಾನೆ. ನಾಯಿಯು ರಾತ್ರಿಯ ವೇಳೆ ಆಕಾಶದ ಕಡೆ ಮುಖ ಮಾಡಿ ಅಳುತ್ತದೆ. ಅದಕ್ಕಾಗಿ ಗರೀಬ್‌ದಾಸರು ಈ ಮಾನವ ಶರೀರ ಒಂದೇ ಬಾರಿ ಸಿಗುವುದು. ಅದು ಕೈಯಿಂದ ಜಾರಿ ಹೋದರೆ ಹಾಗೂ ಭಕ್ತಿ ಮಾಡದಿದ್ದರೆ ಮುಂದೆ ಆ ಸಮಯವನ್ನು ನೆನಪಿಸಿ ಅಳಬೇಕಾಗುತ್ತದೆ, ಎಂದು ಗರೀಬ್‌ದಾಸರು ಹೇಳಿದ್ದಾರೆ.

## "ಭಕ್ತಿ ಮಾರ್ಗದ ಯಾತ್ರೆ"

ಎಲ್ಲಿಯವರೆಗೆ ಆಧ್ಯಾತ್ಮಿಕ ಜ್ಞಾನ ಇರುವುದಿಲ್ಲವೋ ಅಲ್ಲಿಯವರೆಗೆ ಜೀವಾತ್ಮನು ಮಾಯೆಯ ಮತ್ತಿನಲ್ಲಿ ತನ್ನ ಗುರಿಯನ್ನು ಮರೆತುಬಿಡುತ್ತಾನೆ. ಮತ್ತು ಮೇಲೆ ಹೇಳಿದಂತೆ ಕುಡುಕನು ಕುಡಿದ ಮತ್ತಿನಲ್ಲಿ ಜೇಷ್ಠ ಮಾಸದ ಬೇಸಿಗೆ ಕಾಲದಲ್ಲಿ ಮಧ್ಯಾಹ್ನದ ಬಿಸಿಲಿನಲ್ಲಿ ಬಿದ್ದುಕೊಂಡು ಬೆವರು ಹಾಗೂ ಮಣ್ಣಿನಿಂದ ಆವರಿಸಿಕೊಂಡು ಒದ್ದಾಡುತ್ತಿದ್ದರೂ ನಾನು ಸುಖವಾಗಿದ್ದೇನೆಂದು

ಹೇಳುತ್ತಿದ್ದನು. ಆದರೆ ನಶೆ ಇಳಿದ ಮೇಲೆ, ನಾನು ಯಾವುದೋ ಕಾಡಿನಲ್ಲಿ ಬಿದ್ದಿದ್ದೇನೆ, ನನ್ನ ಮನೆ ಬಹಳ ದೂರವಿದೆ ಎಂದು ಅವನಿಗೆ ತಿಳಿಯುತ್ತದೆ.

ಕಬೀರ್ ಪರಮೇಶ್ವರರು ಹೇಳಿದ್ದಾರೆ:–

ಕಬೀರ್, ಯಹ್ ಮಾಯಾ ಅಟಪಟೀ, ಸಬ್ ಘಟ್ ಆನ್ ಅಡೀ ।
ಕಿಸ್–ಕಿಸ್ ಕೋ ಸಮಝಾವೂಂ, ಯಾ ಕೂಐ ಭಾಂಗ್ ಪಡೀ ॥

ಭಾವಾರ್ಥ:– ಆಧ್ಯಾತ್ಮ ಜ್ಞಾನವೆಂಬ ಔಷಧಿಯನ್ನು ಸೇವಿಸುವುದರಿಂದ ಜೀವಾತ್ಮದ ನಶೆಯು ಇಳಿದು ಹೋಗುತ್ತದೆ. ನಂತರ ಅವನು ಭಕ್ತಿಯ ಯಾತ್ರೆಯನ್ನು ಕೈಗೊಳ್ಳುತ್ತಾನೆ. ಏಕೆಂದರೆ ಅವನಿಗೆ ಪರಮಾತ್ಮನ ಬಳಿ ಹೋಗಬೇಕಿದೆ. ಆ ಪರಮಾತ್ಮ ಅವನ ತಂದೆಯಾಗಿರುವನು ಹಾಗೂ ಸತ್ಯಲೋಕ ಅವನ ಮನೆಯಾಗಿದೆ.

ಯಾತ್ರೆಗೆ ಹೋಗುವ ವ್ಯಕ್ತಿ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗುವುದಿಲ್ಲ. ತನಗೆ ಅವಶ್ಯಕತೆ ಇರುವ ವಸ್ತುಗಳನ್ನು ಮಾತ್ರ ತೆಗೆದುಕೊಂಡು ಯಾತ್ರೆಗೆ ಹೊರಡುತ್ತಾನೆ. ಇದೇ ರೀತಿ ಭಕ್ತಿಯ ಮಾರ್ಗದಲ್ಲಿ ಸಾಗಲು ಅವನಿಗೆ ಮಾನಸಿಕ ಶಾಂತಿ ಅನಿವಾರ್ಯವಾಗಿರುತ್ತದೆ. ಮಾನಸಿಕ ದುಗುಡತೆಗೆ ಕಾರಣವೆಂದರೆ, ತನ್ನ ಪರಂಪರೆ, ನಶೆ, ಆಡಂಬರ, ಅಹಂ ಮುಂತಾದವು, ದೊಡ್ಡಬಂಗಲೆ, ದುಬಾರಿಕಾರು, ಶೃಂಗಾರ, ಒಡವೆ ವಸ್ತ್ರಗಳು ಮುಂತಾದವನ್ನು ಸಂಗ್ರಹಿಸುವುದು, ವಿವಾಹದಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದು–ಕೊಡುವುದು, ಡಿ.ಜೆ ಬಾರಿಸುವುದು, ದಿಬ್ಬಣದ ಸಮಯದಲ್ಲಿ ಇಡೀ ಕುಟುಂಬ ನಾಚಿಕೆ ಬಿಟ್ಟು ನರ್ತಿಸುವುದು. ಶ್ರಾದ್ಧ, ತಿಥಿ ಊಟ ಮಾಡುವುದು, ಮಗು ಹುಟ್ಟಿದರೆ ಸಂತೋಷಪಡುವುದು, ಸಂತೋಷದ ಸಮಯದಲ್ಲಿ ಪಟಾಕಿ ಹೊಡೆಯುವುದು, ದುಂದುವೆಚ್ಚ ಮಾಡುವುದು ಮುಂತಾದವು ಜೀವನದ ಭಕ್ತಿ ಯಾತ್ರೆಯಲ್ಲಿ ತೊಂದರೆ ಉಂಟುಮಾಡುವುದರಿಂದ ಅವುಗಳನ್ನೆಲ್ಲಾ ಬಿಟ್ಟು ಬಿಡಬೇಕಾಗುವುದು.

## "ಮದುವೆ ಹೇಗೆ ಮಾಡಬೇಕು"

ಶ್ರೀ ದುರ್ಗಾದೇವಿ ತನ್ನ ಮೂವರು ಪುತ್ರರ (ಬ್ರಹ್ಮಾ, ವಿಷ್ಣು, ಮಹೇಶ್ವರರ) ವಿವಾಹವನ್ನು ಹೇಗೆ ಮಾಡಿದಳೋ, ಅದನ್ನು ಮುಂದೆ ಇದೇ ಪುಸ್ತಕದಲ್ಲಿ ಓದುವಿರಿ. ನನ್ನ (ಲೇಖಕನ) ಅನುಯಾಯಿಗಳು ಹಾಗೆಯೇ ಮಾಡುತ್ತಾರೆ. 17 ನಿಮಿಷದ ಅಸುರ ನಿಕಂದನ ರಮೈಣಿ ಇದೆ. ಪ್ರದಕ್ಷಿಣೆಯ ಸ್ಥಾನದಲ್ಲಿ ಅದನ್ನು ಹೇಳಲಾಗುತ್ತದೆ. ಅದು ಕೋಟಿ ಗಾಯತ್ರಿ ಮಂತ್ರ(ಓಂ ಭುರ್ಭವ.....)ಕ್ಕಿಂತ ಉತ್ತಮ ಹಾಗೂ ಲಾಭದಾಯಕವಾಗಿದೆ. ಅದರಲ್ಲಿ ವಿಶ್ವದ ಸರ್ವ ದೇವಿ–ದೇವತೆಗಳ ಹಾಗೂ ಪೂರ್ಣ ಪರಮಾತ್ಮನ ಆಹ್ವಾನ ಮತ್ತು ಸ್ತುತಿ–ಪ್ರಾರ್ಥನೆ ಇದೆ. ಈ ಕಾರಣದಿಂದ ಸರ್ವಶಕ್ತಿಗಳು ಆ ವಿವಾಹದ ಜೋಡಿಗಳನ್ನು ಯಾವಾಗಲೂ ರಕ್ಷಿಸುತ್ತವೆ ಮತ್ತು ಸಹಾಯ ಮಾಡುತ್ತವೆ. ಇದರಿಂದ ಮಗಳು ಉಳಿಯುವಳು, ಬದುಕುವ ದಾರಿ ಸುಗಮವಾಗುತ್ತದೆ.

### ವಿವಾಹದಲ್ಲಿ ಪ್ರಚಲಿತವಿರುವ ಇಂದಿನ ಪರಂಪರೆಯನ್ನು ತ್ಯಜಿಸುವ ವಿಧಾನ:–

ವಿವಾಹದಲ್ಲಿ ವ್ಯರ್ಥವಾಗಿ ಖರ್ಚುಮಾಡುವುದನ್ನು ಬಿಡಬೇಕು. ಮಗಳ ಮದುವೆಯಲ್ಲಿ ಅದ್ದೂರಿ ದಿಬ್ಬಣ ಬರುವುದು, ವರದಕ್ಷಿಣೆ ನೀಡುವುದು, ಇದು ವ್ಯರ್ಥವಾದ ಪರಂಪರೆಯಾಗಿದೆ. ಈ ಕಾರಣದಿಂದಲೇ ಹೆಣ್ಣು ಮಕ್ಕಳನ್ನು ಕುಟುಂಬಕ್ಕೆ ಭಾರವೆಂದು ಭಾವಿಸಲಾಗುತ್ತದೆ. ಹಾಗಾಗಿ ಗರ್ಭದಲ್ಲೇ ಅವಳನ್ನು ಕೊಲ್ಲುವ ವ್ಯವಸ್ಥೆ ಪ್ರಾರಂಭವಾಗಿದೆ. ಅದು ತಂದೆ ತಾಯಿಯರಿಗೆ ಅತ್ಯಂತ ಪಾಪವನ್ನುಂಟು ಮಾಡುವ ಕೆಲಸ. ಹೆಣ್ಣು ಮಗಳು ದೇವಿಯ ಸ್ವರೂಪ. ನಮ್ಮ ಕೆಟ್ಟ ಪರಂಪರೆಗಳು ಮಗಳನ್ನು ಶತ್ರುವನ್ನಾಗಿ ಮಾಡಿದವು. ಶ್ರೀ ದೇವಿಪುರಾಣದ ಮೂರನೇ ಸ್ಕಂದದಲ್ಲಿ ಹೇಳಿರುವುದೇನೆಂದರೆ, ಈ ಬ್ರಹ್ಮಾಂಡದ ಪ್ರಾರಂಭದಲ್ಲಿ ಮೂರೂ ದೇವರುಗಳ (ಶ್ರೀಬಹ್ಮಾ, ಶ್ರೀವಿಷ್ಣು ಹಾಗೂ ಶ್ರೀಮಹೇಶ್ವರ) ಮದುವೆಯನ್ನು ದೇವಿ ದುರ್ಗಾಮಾತೆಯು ಮಾಡಿಸಿದಳು, ಆ ಸಮಯದಲ್ಲಿ ಯಾವುದೇ ದಿಬ್ಬಣವೂ ಇರಲಿಲ್ಲ, ಯಾವುದೇ ಆಡಂಬರವಿರಲಿಲ್ಲ.

ಯಾವುದೇ ಭೋಜನವೂ ಮಾಡಿರಲಿಲ್ಲ. ಯಾವುದೇ ಸಂಗೀತವಿರಲಿಲ್ಲ, ನೃತ್ಯವಿರಲಿಲ್ಲ. ಶ್ರೀ ದುರ್ಗಾಮಾತೆಯು ತನ್ನ ದೊಡ್ಡ ಮಗನಾದ ಬ್ರಹ್ಮಾನಿಗೆ ಹೇಳಿದಳು, "ಹೇ ಬ್ರಹ್ಮಾ, ಈ ಸಾವಿತ್ರಿ ಎಂಬ ಹುಡುಗಿಯನ್ನು ನಿನಗೆ ನಿನ್ನ ಪತ್ನಿಯ ರೂಪದಲ್ಲಿ ನೀಡಲಾಗಿದೆ. ಇವಳನ್ನು ವರಿಸಿ ನಿನ್ನ ಮನೆಯಲ್ಲಿ ನೆಲೆಸು. ಇದೇ ರೀತಿ ವಿಷ್ಣುವಿಗೆ ಲಕ್ಷ್ಮಿಯನ್ನು ಕೊಟ್ಟು ಮತ್ತು ಶಿವನಿಗೆ ಪಾರ್ವತಿಯನ್ನು ಕೊಟ್ಟು ಹೇಳಿದಳು,' ಇವರು ನಿಮ್ಮ ಪತ್ನಿಯರು, ಇವರನ್ನು ಕರೆದುಕೊಂಡು ಹೋಗಿ ನಿಮ್ಮ ಮನೆಯಲ್ಲಿ ನೆಲೆಸಿಕೊಳ್ಳಿ" ಮೂವರೂ ತಮ್ಮ ತಮ್ಮ ಪತ್ನಿಯರ ಜೊತೆ ತಮ್ಮ ತಮ್ಮ ಲೋಕಕ್ಕೆ ತೆರಳಿದರು. ಇದರಿಂದ ವಿಶ್ವದ ವಿಸ್ತಾರವಾಯಿತು.

ಸಂಶಯ ನಿವಾರಣೆ:– ಕೆಲವರು ಹೇಳುವುದೇನೆಂದರೆ, ಪಾರ್ವತಿಯ ಮೃತ್ಯುವಾಗಿತ್ತು. ಆ ದೇವಿಯ ಪುನರ್ಜನ್ಮ ರಾಜ ದಕ್ಷನ ಮನೆಯಲ್ಲಾಯಿತು. ಸತಿ(ಪಾರ್ವತಿ)ಯು ಯುವತಿಯಾದಾಗ ನಾರದರು ಹೇಳಿದ ಮೇರೆಗೆ ಶಿವನನ್ನು ಪಡೆಯಲು ಧೃಡ ಸಂಕಲ್ಪ ಮಾಡಿ ಶಿವನನ್ನು ವರಿಸುವುದಾಗಿ ತನ್ನ ತಾಯಿಯ ಮೂಲಕ ತಂದೆಗೆ ಹೇಳಿದಾಗ, ರಾಜ ದಕ್ಷನು, 'ಶಿವನು ನನ್ನ ಅಳಿಯನಾಗಲು ಯೋಗ್ಯನಲ್ಲ, ಏಕೆಂದರೆ ಅವನು ಬೆತ್ತಲೆ ತಿರುಗುತ್ತಾನೆ. ಕೇವಲ ಒಂದು ಮೃಗ ಚರ್ಮವನ್ನು ಹೊದ್ದಿಕೊಳ್ಳುತ್ತಾನೆ. ಶರೀರದ ಮೇಲೆ ಬೂದಿ ಬಳಿದುಕೊಳ್ಳುತ್ತಾನೆ. ಬಂಗಿ ಕುಡಿದು ಮತ್ತಿನಲ್ಲಿ ತಿರುಗುತ್ತಾನೆ. ಹಾವುಗಳ ಜೊತೆ ಇರುತ್ತಾನೆ. ಅಂಥಾ ವ್ಯಕ್ತಿಯ ಜೊತೆ ನಾನು ನನ್ನ ಮಗಳ ವಿವಾಹ ಮಾಡಿ ನಗೆಪಾಟಲಿಗೆ ಈಡಾಗಲಾರೆ' ಎಂದನು. ಆದರೆ ಪಾರ್ವತಿದೇವಿಯು ಹಠ ಹಿಡಿದಳು. ಅವಳು ತನ್ನ ಇಂಗಿತವನ್ನು ಶಿವನವರೆಗೆ ತಲುಪಿಸಿದಳು. ಹಾಗೂ ನಾನು ನಿಮ್ಮನ್ನು ಮದುವೆಯಾಗಲು ಬಯಸುತ್ತೇನೆ ಎಂಬ ಸಂದೇಶ ಕಳುಹಿಸಿದಳು. ದಕ್ಷರಾಜನು ಪಾರ್ವತಿಯ ವಿವಾಹವನ್ನು ಬೇರೆಯವರ ಜೊತೆ ನಿಶ್ಚಯಮಾಡಿದ್ದನು, ಅದೇ ದಿನ ಶಿವನು ತನ್ನ ಜೊತೆ ಸಾವಿರಾರು ಭೂತ–ಪ್ರೇತ, ಭೈರವ ಹಾಗೂ ಗಣಗಳನ್ನು ಕರೆದುಕೊಂಡು ವಿವಾಹ ಮಂಟಪಕ್ಕೆ ಬಂದನು. ದಕ್ಷರಾಜನ ಸೈನಿಕರು ವಿರೋಧಿಸಿದರು. ಶಿವನ ಸೈನ್ಯ ಮತ್ತು ದಕ್ಷ ರಾಜನ ಸೈನ್ಯದ ನಡುವೆ ಯುದ್ಧವಾಯಿತು. ಪಾರ್ವತಿಯು ಶಿವನ ಕೊರಳಿಗೆ ಹೂ ಮಾಲೆ ಹಾಕಿದಳು. ಶಿವನು ಬಲಪೂರ್ವಕ ಪಾರ್ವತಿಯನ್ನು ಕರೆದುಕೊಂಡು ಕೈಲಾಸ ಪರ್ವತದ ಮೇಲಿರುವ ತನ್ನ ಮನೆಗೆ ನಡೆದನು. ಕೆಲವರು ಹೇಳುತ್ತಾರೆ, ನೋಡಿ, ಶಿವನೂ ಸಹ ಭವ್ಯವಾದ ದಿಬ್ಬಣ ತಂದು ಪಾರ್ವತಿಯನ್ನು ವರಿಸಲು ಬಂದಿದ್ದನು. ಆದ್ದರಿಂದ ದಿಬ್ಬಣದ ಪರಂಪರೆ ಬಹಳ ಪುರಾತನವಾದದ್ದು. ಆದ್ದರಿಂದ ದಿಬ್ಬಣವಿಲ್ಲದೆ ವಿವಾಹದ ಶೋಭೆ ಇರುವುದಿಲ್ಲ, ನಿಜ ಹೇಳಬೇಕೆಂದರೆ ಅದು ವಿವಾಹವಲ್ಲ, ಒಂದು ಪ್ರೇಮ ಪ್ರಸಂಗವೆನ್ನಬಹುದು. ಶಿವನು ಪಾರ್ವತಿಯನ್ನು ಬಲವಂತವಾಗಿ ಎತ್ತಿಕೊಂಡು ಹೋಗಲು ಸೈನ್ಯ ತಂದಿದ್ದನೇ ಹೊರತು ದಿಬ್ಬಣವನ್ನಲ್ಲ. ವಿವಾಹದ ಪುರಾತನ ಪರಂಪರೆಯೂ ದೇವಿ ಮಹಾ ಪುರಾಣದ ಮೂರನೇ ಸ್ಕಂದದಲ್ಲಿ ಬರೆದಿದ್ದನ್ನು ಮೇಲೆ ತಿಳಿಸಲಾಗಿದೆ. ತಮ್ಮ ತಂದೆ ತಾಯಿಯರ ಇಚ್ಛಾನುಸಾರ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಮದುವೆಯಾಗಬೇಕು. ಪ್ರೇಮ ವಿವಾಹವು ಮನಕ್ಲೇಷಕ್ಕೆ ಕಾರಣವಾಗುತ್ತದೆ. ಹೇಗೆ ಶಿವನ ಪಾರ್ವತಿಯ ಮಧ್ಯೆ ಯಾವುದೊ ಕಾರಣಕ್ಕೆ ಮನಸ್ತಾಪ ಉಂಟಾಯಿತು. ಶಿವನು ಪಾರ್ವತಿಯ ಮೇಲೆ ಕೋಪಗೊಂಡು ಪತ್ನಿಯಂತೆ ನಡೆಸಿಕೊಳ್ಳಲಿಲ್ಲ ಹಾಗೂ ಮಾತನಾಡುವುದನ್ನು ಬಿಟ್ಟುಬಿಟ್ಟನು. ಪಾರ್ವತಿಗೆ ಆ ಮನೆ ನರಕವಾಗಿ ಪರಿಣಮಿಸಿತು. ಆಗ ಪಾರ್ವತಿಯು ಕೆಲ ದಿನಗಳ ಕಾಲ ತಾಯಿಯ ಮನೆಗೆ ಹೋಗಲು ನಿಶ್ಚಯಿಸಿದಳು. ಆಗ ದಕ್ಷನ ಮನೆಗೆ ಹೊರಟು ಹೋದಳು.

ಆ ದಿನ ದಕ್ಷರಾಜನು ಹವನ ಯಾಗವನ್ನು ಮಾಡುತ್ತಿದ್ದನು. ದಕ್ಷರಾಜನು ಪಾರ್ವತಿಗೆ ಮಗಳಂತೆ ಸತ್ಕಾರ ಮಾಡದೆ ಕೇಳಿದನು "ನೀನೇಕೆ ಇಲ್ಲಿಗೆ ಬಂದೆ? ಏನನ್ನು ತೆಗೆದುಕೊಳ್ಳಲು ಬಂದೆ, ಅವನ ಪ್ರೇಮ ನೋಡಿದೆಯಾ? ಮನೆ ಬಿಟ್ಟು ಹೋಗು" ಎಂದು ಗದರಿದನು. ಆಗ ಪಾರ್ವತಿಯು ತನ್ನ ತಾಯಿಯ ಬಳಿ ಶಿವನು ಕೋಪಗೊಂಡ ಬಗ್ಗೆ ತಿಳಿಸಿದಳು. ತಾಯಿಯು ದಕ್ಷರಾಜನಿಗೆ ಎಲ್ಲವನ್ನೂ ತಿಳಿಸಿದಳು. ಪಾರ್ವತಿಗೆ ಅತ್ತ ತಾಯಿಯ ಮನೆಯೂ ಇಲ್ಲ, ಇತ್ತ

ಅತ್ತೆಯ ಮನೆಯೂ ಇಲ್ಲ ಎಂಬಂತಾಯಿತು. ಪ್ರೇಮ ವಿವಾಹವು ಎಂಥಾ ಪರಿಸ್ಥಿತಿಯನ್ನು ತಂದೊಡ್ಡಿತೆಂದರೆ, ಪಾರ್ವತಿಗೆ ಆತ್ಮಹತ್ಯೆಯ ವಿನಃ ಬೇರೆ ದಾರಿಯೇ ಇರಲಿಲ್ಲ. ಆಗ ದಕ್ಷರಾಜನ ವಿಶಾಲ ಹೋಮ ಕುಂಡದಲ್ಲಿ ಬಿದ್ದು ಸುಟ್ಟು ಹೋದಳು. ಧಾರ್ಮಿಕ ಅನುಷ್ಠಾನದ ನಾಶವಾಯಿತು. ತನ್ನ ಅಮೂಲ್ಯವಾದ ಮಾನವ ಜೀವನವನ್ನು ಕಳೆದುಕೊಂಡಳು. ವಿಷಯ ತಿಳಿದ ಶಿವನು ತನ್ನ ಸೈನ್ಯ ಸಮೇತ ಹೋಗಿ ದಕ್ಷರಾಜನ ಕತ್ತನ್ನು ಕೊಯ್ದನು. ಈ ರೀತಿ ತಂದೆ ಮನೆಯೂ ನಾಶವಾಯಿತು. ನಂತರ ಕುರಿಯ ಕತ್ತನ್ನು ಜೋಡಿಸಿ ಬದುಕಿಸಿದನು. ಈ ರೀತಿ ಪ್ರೇಮ ವಿವಾಹವು ಸರ್ವನಾಶಕ್ಕೆ ದಾರಿಯಾಯಿತು. ಹೀಗೆ ಶಿವಸೈನ್ಯವನ್ನು ದಿಬ್ಬಣವೆಂದು ತಿಳಿದು ತಪ್ಪು ಪರಂಪರೆ ಮಾಡಿದರು. ಇದು ಪ್ರೇಮ ವಿವಾಹವೆಂಬ ಅನಿಷ್ಟ ಪದ್ಧತಿಯ ಜನ್ಮವೆನ್ನಬಹುದು. ಅದು ಸಮಾಜವನ್ನು ನಾಶಮಾಡುವಂಥಾದ್ದು.

ಬ್ರಹ್ಮಾ ಮತ್ತು ವಿಷ್ಣುವಿನ ಮದುವೆಯ ರೀತಿ ಒಳ್ಳೆಯ ಪದ್ಧತಿಯ ಪ್ರಕಾರದಿಂದ ಆದ ವಿವಾಹದಿಂದ ಸುಖ ಜೀವನವನ್ನು ನಡೆಸುತ್ತಿದ್ದಾರೆ.

ಮದುವೆಯಾಗುವ ಉದ್ದೇಶ:– ಸಂತಾನೋತ್ಪತ್ತಿಯೇ ವಿವಾಹದ ಉದ್ದೇಶವಾಗಿದೆ. ನಂತರ ಗಂಡ–ಹೆಂಡತಿ ಸೇರಿ ಪರಿಶ್ರಮಪಟ್ಟು ಮಕ್ಕಳ ಪಾಲನೆ ಪೋಷಣೆ ಮಾಡುತ್ತಾರೆ. ಅವರ ಮದುವೆ ಮಾಡುತ್ತಾರೆ. ನಂತರ ಅವರಿಗೆ ಮನೆಮಾಡುತ್ತಾರೆ. ಆದರೆ ಪ್ರೇಮ ವಿವಾಹವು ಸಮಾಜದಲ್ಲಿ ಅಶಾಂತಿಯ ಬೀಜ ಬಿತ್ತುತ್ತದೆ. ಸಮಾಜದ ಪರಿಸ್ಥಿತಿ ಬಿಗಡಾಯಿಸುತ್ತದೆ.

## "ಪ್ರೇಮ ಪ್ರಸಂಗವು ಹೇಗಾಗುತ್ತದೆ?"

ಉತ್ತರ:– ಚಾರಿತ್ರ್ಯವಿಲ್ಲದ ಹುಡುಗ ಹುಡುಗಿಯರು ಅತ್ತಿತ್ತ ತಿರುಗಾಡುವಾಗ ವಿಚಿತ್ರವಾದ ಆಕ್ಟಿಂಗ್ ಮಾಡುತ್ತಾರೆ. ಅವರ ದೃಷ್ಟಿಯೂ ವಕ್ರವಾಗಿರುತ್ತದೆ. ಕೆಲವು ಬಾರಿ ಕೃತಕವಾಗಿ ನಗುತ್ತಾರೆ. ತಿರುತಿರುಗಿ ಹಿಂದೆ ಮುಂದೆ ನೋಡುವುದು, ಬಳಕುತ್ತಾ ನಡೆಯುವುದು ಮುಂತಾದವನ್ನು ಆ ಪಾಪಾತ್ಮಗಳು ಮಾಡುತ್ತವೆ. ಕೊನೆಗೆ ಪ್ರೇಮವಿವಾಹ ಮಾಡಿಕೊಳ್ಳುತ್ತಾರೆ. ನಂತರ ಅವರಿಬ್ಬರ ಇನ್ನು ಬೇರೆ ಪ್ರೇಮಿ–ಪ್ರೇಯಸಿಯರಿದ್ದರು ಎಂದು ತಿಳಿಯುತ್ತದೆ. ನಂತರ ಅವರ ಸ್ಥಿತಿ ಶಿವ ಪಾರ್ವತಿಯರಂತಾಗುತ್ತದೆ. ಎಲ್ಲಿಯೂ ನೆಲೆಯಿಲ್ಲದಂತೆ. ವಿವಾಹದ ಉದ್ದೇಶವನ್ನು ಮೇಲೆ ತಿಳಿಸಲಾಗಿದೆ. ಅದನ್ನು ಬಿಟ್ಟು ಯುವ ಜನತೆ ಬೇರೆ ಬಯಸಿದರೆ ಅವರ ಜೀವನದ ಪ್ರಯಾಣ ನರಕವಾಗುತ್ತದೆ. ಯಾರಿಗಾದರೂ ಪ್ರೇಮವಾದರೆ, ಸಮಾಜದ ಮರ್ಯಾದೆ(ಕುಲ, ಗೋತ್ರ, ಹಳ್ಳಿಯ) ಭಂಗವಾಗದಂತೆ ಮತ್ತು ತಮ್ಮ ತಂದೆ ತಾಯಿಯರ ಗೌರವಕ್ಕೆ ಧಕ್ಕೆಯಾಗದಂತೆ ನೋಡಬೇಕು. ತಪ್ಪಿ ಹೀಗಾದರೆ ಮತ್ತು ನಂತರ ಗೋತ್ತಾದರೆ ಆಗ ಅವರು ತಕ್ಷಣವೇ ಪ್ರೇಮ ಸಂಬಂಧವನ್ನು ಮುರಿದು ಹಾಕಬೇಕು. ಇಂದಿನ ಕಾಲದಲ್ಲಿ ಅಂತರ್ಜಾತಿಯ ವಿವಾಹ ಮಾಡಿಕೊಂಡರೆ ಯಾವುದೇ ಹಾನಿಯಾಗದು. ಆದರೆ ಮೇಲೆ ತಿಳಿಸಿದ ಮರ್ಯಾದೆಯ ಬಗ್ಗೆ ಅವಶ್ಯ ಗಮನವಿಡಬೇಕು. ಭಗವಂತ ಶಿವನು ಪಾರ್ವತಿಯನ್ನು ಇದೇ ಕಾರಣದಿಂದ ತ್ಯಜಿಸಿದ್ದನು.

## "ಭಗವಂತ ಶಿವನು ತನ್ನ ಪತ್ನಿಯನ್ನು ತ್ಯಜಿಸುವುದು"

ದಶರಥನ ಪುತ್ರನಾದ ಶ್ರೀರಾಮಚಂದ್ರನು(ಅಯೊಧ್ಯೆಯ ರಾಜ) ವನವಾಸದಲ್ಲಿದ್ದಾಗ ಲಂಕೆಯ ರಾಜನಾದ ರಾವಣನು ಸೀತೆಯನ್ನು ಅಪಹರಿಸಿದ್ದನು. ಶ್ರೀರಾಮನಿಗೆ ಇದು ಗೊತ್ತಿರಲಿಲ್ಲ. ಸೀತೆಯ ವಿರಹದಲ್ಲಿ ರಾಮನು ವಿಲಾಪಿಸುತ್ತಿದ್ದನು. ಆಕಾಶದಲ್ಲಿ ಶಿವ ಪಾರ್ವತಿಯರು ಇದನ್ನು ನೋಡಿದರು. ಪಾರ್ವತಿಯು ಶಿವನ ಬಳಿ ಕೇಳಿದಳು, "ಈ ವ್ಯಕ್ತಿ ಈ ರೀತಿ ಜೋರಾಗಿ ಏಕೆ ಅಳುತ್ತಿದ್ದಾನೆ. ಅವನಿಗೆ ಯಾವ ಕಷ್ಟ ಬಂದಿದೆ?" ಆಗ ಶಿವನು, ಅವನು ಸಾಧಾರಣ ವ್ಯಕ್ತಿ ಅಲ್ಲ. ಅವನು ಶ್ರೀವಿಷ್ಣು, ಈಗ ದಶರಥನ ಮನೆಯಲ್ಲಿ ಹುಟ್ಟಿದ್ದಾರೆ. ಈಗ ವನವಾಸದಲ್ಲಿದ್ದಾರೆ. ಅವರ ಪತ್ನಿಯಾದ ಸೀತೆಯೂ ಅವರ ಜೊತೆ ಬಂದಿದ್ದಳು. ಅವಳನ್ನು ಯಾರೋ ಅಪಹರಿಸಿದ್ದಾರೆ. ಆದ್ದರಿಂದ ದುಃಖಿಯಾಗಿದ್ದಾರೆ ಎಂದನು. ಆಗ ಪಾರ್ವತಿಯು, ನಾನು ಸೀತೆಯ ರೂಪ ಧರಿಸಿ ಅವರ ಮುಂದೆ ಹೋಗುವೆ.

ಅವರು ನನ್ನನ್ನು ಗುರುತುಹಿಡಿದರೆ ಅವರು ದೇವರೆಂದು ನಾನು ನಂಬುವೆ. ಎಂದಳು. ಆಗ ಶಿವನು, ಅಂಥಾ ಕೆಲಸ ಮಾಡಬೇಡ, ಸೀತೆಯ ರೂಪ ಧರಿಸಿದರೆ ನನಗೆ ಇಷ್ಟವಾಗುವುದಿಲ್ಲ ಎಂದನು. ಆಗ ಪಾರ್ವತಿಯು ಆ ಸಂದರ್ಭದಲ್ಲಿ ನಾನು ಪರೀಕ್ಷಿಸುವುದಿಲ್ಲ ಎಂದು ಹೇಳಿದಳು. ಆದರೆ ಶಿವನು ಮನೆಯಿಂದ ಹೊರ ಹೋದ ನಂತರ ಅವಳು ಸೀತೆಯ ರೂಪ ಧರಿಸಿ ರಾಮನ ಮುಂದೆ ನಿಂತಳು. ಆಗ ರಾಮನು ಹೇ ದಕ್ಷ ಪುತ್ರಿ ಮಾಯೆಯೇ, ನೀನು ಇಂದೇಕೆ ಒಬ್ಬಳೇ ಬಂದೆ? ಶಿವನನ್ನು ಎಲ್ಲಿ ಬಿಟ್ಟು ಬಂದೆ? ಎಂದನು. ಆಗ ದೇವಿಗೆ ನಾಚಿಕೆಯಾಯಿತು. ನಂತರ ಹೀಗೆಂದಳು, "ಪರಮಾತ್ಮನಾದ ಶಿವನು ಸತ್ಯವನ್ನೇ ಹೇಳಿದನು. ನೀವು ತ್ರಿಲೋಕಕ್ಕೂ ಪರಮಾತ್ಮ, ನೀವು ನನ್ನನ್ನು ಗುರುತಿಸಿಬಿಟ್ಟಿರಿ, ನಾನು ಪರೀಕ್ಷಿಸಲು ಬಂದಿದ್ದೆ". ಇತ್ತ ಶಿವನಿಗೆ ಪಾರ್ವತಿಯು ಸೀತೆಯ ರೂಪ ಧರಿಸಿ ರಾಮನನ್ನು ಪರೀಕ್ಷಿಸಿದ್ದು ತಿಳಿಯಿತು. ಆಗ ಶಿವನು 'ನಾನು ಬೇಡವೆಂದಿದ್ದು ಕೊನೆಗೂ ಮಾಡಿಬಿಟ್ಟೆಯಾ' ಎಂದು ಕೇಳಿದನು. ಆಗ ಪಾರ್ವತಿಯು ನಾನು ಯಾವ ಪರೀಕ್ಷೆಯನ್ನೂ ಮಾಡಲಿಲ್ಲವೆಂದು ಸುಳ್ಳು ಹೇಳಿದಳು. ಆಗ ಶಿವನಿಗೆ ಕೋಪ ಬಂದಿತು. ಆ ಕಾರಣಕ್ಕೆ ಅವನು ಪಾರ್ವತಿಯನ್ನು ತೊರೆದನು. ಹೀಗೆ ಪ್ರೇಮ ವಿವಾಹವು ನರಕದ ಕಾರಣವಾಯಿತು.

ಆದ್ದರಿಂದ ಯುವ ಪೀಳಿಗೆಗೆ ವಿನಂತಿಸುವುದೇನೆಂದರೆ, ತಮ್ಮ ದೌರ್ಬಲ್ಯದ ಕಾರಣ ತಂದೆ ತಾಯಿ ಹಾಗೂ ಸಮಾಜದಲ್ಲಿ ವಿಷವನ್ನು ಹಾಕಬೇಡಿ. ವಿವಾಹವಾಗುವುದು ಒಳ್ಳೆಯ ವಿಷಯ, ಪ್ರೀತಿಸುವುದು ತಪ್ಪು. ತಂದೆ ತಾಯಿಗಳು ಸಮಯ ಬಂದಾಗ ತಮ್ಮ ಮಕ್ಕಳ ವಿವಾಹದ ಬಗ್ಗೆ ಚಿಂತಿಸುತ್ತಾರೆ ಮತ್ತು ವಿವಾಹವನ್ನು ಮಾಡಿಯೇ, ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ಹಾಗಿದ್ದೂ ಯುವ ಪೀಳಿಗೆ ಈ ತಲೆನೋವನ್ನು ಏಕೆ ತೆಗೆದುಕೊಳ್ಳುತ್ತಾರೆ. ವಿವಾಹವಾಗುವವರೆಗೂ ಒಂದು ಭ್ರಮೆ ಇರುತ್ತದೆ. ವಿವಾಹದ ನಂತರ ಮಕ್ಕಳಾದ ಮೇಲೆ ಏಳು ವರ್ಷಗಳ ನಂತರ ಏಕೆ ಮದುವೆಯಾದೆನೆಂದು ಅನ್ನಿಸುತ್ತದೆ. ಹರಿಯಾಣದ ಕವಿ ಜಾಟ್ ಮೆಹರ್‌ಸಿಂಗ್ ಹೇಳಿದ್ದಾರೆ.

ವಿವಾಹ್ ಕರ್ ಕೇ ದೇಖ್ ಲಿಯೋ, ಜಿಸ್‌ನೇ ದೇಖೀ ಜೇಲ್ ನಹೀಂ ಹೈ ।

ಹೇಗೆ ಜೈಲಿನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಇರುವುದು ಅನಿವಾರ್ಯ. ಹಾಗೆಯೇ ವಿವಾಹದ ನಂತರ ತಂದೆ ತಾಯಿಗಳು ತಮ್ಮ ಕುಟುಂಬ ಪೋಷಣೆಗಾಗಿ ಹಾಗೂ ಗೃಹಸ್ಥ ಜೀವನ ನಡೆಸಲು ಸಾಮಾಜಿಕ ಮರ್ಯಾದೆ ಎಂಬ ನಾಲ್ಕು ಗೋಡೆಗಳ ಮಧ್ಯೆ ಇರುವುದು ಅನಿವಾರ್ಯವಾಗುತ್ತದೆ. ಅವನು ತನ್ನ ಇಚ್ಚೆಯಂತೆ ಬದುಕಲಾರ ಅಂದರೆ ಕೆಲಸ ಮಾಡುವವನು ಕೆಲಸಕ್ಕೆ ಹೋಗುತ್ತಾನೆ. ಕಾರ್ಮಿಕನು ಕೆಲಸಕ್ಕೆ ಹೋಗುವುದು, ರೈತನು ಹೊಲದ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗಿದೆ. ಆದ್ದರಿಂದ ವೈವಾಹಿಕ ಜೀವನ ಮರ್ಯಾದೆ ರೂಪಿ ಬಂದೀಖಾನೆ ಎನ್ನಬಹುದು, ಆದರೆ ಈ ಬಂದೀಖಾನೆ ಇಲ್ಲದೆ ಸಂಸಾರದ ಉತ್ಪತ್ತಿ ಆಗಲು ಸಾಧ್ಯವಿಲ್ಲ. ನಮ್ಮ ತಂದೆ ತಾಯಿಯರು ಮದುವೆಯಾದ ಕಾರಣವೇ ನಮಗೆ ಈ ಅಮೂಲ್ಯವಾದ ಮಾನವ ಶರೀರ ಸಿಕ್ಕಿದೆ. ಈ ಶರೀರದ ಮೂಲಕ ಭಕ್ತಿಮಾಡಿ ಮಾನವ ಮೋಕ್ಷವನ್ನು ಪಡೆಯಬಹುದು. ಇದು ವಿವಾಹದ ವರವೆಂದೇ ಹೇಳಬಹುದು. ಈ ಪವಿತ್ರ ಸಂಬಂಧವನ್ನು ಚಾರಿತ್ರ್ಯವಿಲ್ಲದ ವ್ಯಕ್ತಿ ಕಾಮುಕ ಕತೆಗಳನ್ನು ಹೇಳುತ್ತಾ ಮತ್ತು ಹಾಡುಗಳನ್ನು ಹಾಡಿ, ಯುವ ಪೀಳಿಗೆಯಲ್ಲಿರುವ ವಿಕಾರವನ್ನು ಕೆರಳಿಸುತ್ತಾರೆ. ಇದರಿಂದ ಶಾಂತವಾಗಿರುವ ಮಾನವ ಸಮಾಜದಲ್ಲಿ ಬೆಂಕಿಯ ಭುಗಿಲೇಳುತ್ತದೆ. ಇದರಿಂದ ಎಷ್ಟೋ ಕುಟುಂಬಗಳು ಒಡೆದು ಹೋಗುತ್ತವೆ. ಸಮಾಚಾರ ಪತ್ರಿಕೆಗಳಲ್ಲಿ ಓದಲು ಸಿಗುತ್ತವೆ. ಅದರಲ್ಲಿ ಯುವಕ ಯುವತಿ ತಮ್ಮ ಹಳ್ಳಿಯಲ್ಲಿ ಪರಸ್ಪರ ಪ್ರೀತಿಸಿ ನಾಶದ ಬೀಜವನ್ನು ಬಿತ್ತಿದರು. ಹುಡುಗಿಯ ಕಡೆಯವರು ಎಷ್ಟೇ ಬುದ್ಧಿ ಹೇಳಿದರೂ ಕೆಟ್ಟ ಸಿನಿಮಾಗಳ ಪ್ರಭಾವದಿಂದ ಹುಡುಗಿಯು ಕೇಳಲಿಲ್ಲ, ಕುಟುಂಬದವರು ಅವಳನ್ನು ಕೊಂದು ಹಾಕುತ್ತಾರೆ. ಈ ಕಾರಣದಿಂದ ಹುಡುಗಿಯ ತಂದೆ, ತಾಯಿ, ಅಣ್ಣ, ಅತ್ತಿಗೆ ಜೈಲಿಗೆ ಹೋಗುತ್ತಾರೆ. ಅವರಿಗೆ ಜೀವಾವಧಿ ಶಿಕ್ಷೆಯಾಗುತ್ತದೆ, ಅವರಿಬ್ಬರು ಅವರ ಪ್ರೇಮಪ್ರಸಂಗ ಎನ್ನುವ ಬೆಂಕಿಯಿಂದ ಇಡೀ ಕುಟುಂಬ ನಾಶಮಾಡಿದರು. ಚೆನ್ನಾಗಿ ನೆಲೆಸಿದ್ದ ಕುಟುಂಬವನ್ನು ನಾಶಮಾಡಿಬಿಟ್ಟರು. ಇಂಥಹ ಎಷ್ಟೋ ಪ್ರಸಂಗಗಳು ನಮ್ಮ ಮುಂದಿವೆ, ಅದರಲ್ಲಿ

ಕೊಲೆಯ ಮೊಕದ್ದಮೆ ಹತ್ತುವುದರಿಂದ ಮರಣ ದಂಡನೆಯವರೆಗೂ ಶಿಕ್ಷೆ ನೀಡಲಾಗುತ್ತದೆ. ಹೇ ಯುವಕರೆ, ಕೊಂಚ ಯೋಚಿಸಿ, ತಂದೆ ತಾಯಿಗಳು ನಿಮ್ಮ ಮೇಲೆ ಏನೆಲ್ಲಾ ಆಸೆಗಳನ್ನಿಟ್ಟುಕೊಂಡು ಬದುಕುತ್ತಾರೆ. ನಿಮ್ಮನ್ನು ಓದಿಸಿ, ಬೆಳೆಸುತ್ತಾರೆ. ನೀವು ಸಮಾಜದ ಗೌರವವನ್ನು ಮರೆತು ಒಂದು ಸಣ್ಣ ತಪ್ಪು ಮಾಡಿ ಜೀವನವನ್ನೇ ಹಾಳು ಮಾಡಿಕೊಳ್ಳುವಿರಿ. ಆದ್ದರಿಂದ ಮಕ್ಕಳಿಗೆ ಸತ್ಸಂಗ ಕೇಳಿಸುವುದು ಅನಿವಾರ್ಯವಾಗಿದೆ. ಸಮಾಜದ ಬಗ್ಗೆ ಅರಿವು ಮೂಡಿಸುವುದು ಅನಿವಾರ್ಯ. ಇತ್ತೀಚೆಗೆ ಆ ಅರಿವಿನ ಕೊರತೆ ಹೆಚ್ಚಾಗಿದೆ.

ಪ್ರಶ್ನೆ:– ದಿಬ್ಬಣ ಎನ್ನುವುದು ಯಾವಾಗ ಮತ್ತು ಹೇಗೆ ಹುಟ್ಟಿಕೊಂಡಿತು?

ಉತ್ತರ:– ದಿಬ್ಬಣ ಎನ್ನುವುದು ರಾಜರಿಂದ ಪ್ರಾರಂಭವಾಯಿತು. ಇವರು ತಮ್ಮ ಮಗನ ಮದುವೆಗೆ ಸೈನ್ಯ ತೆಗೆದುಕೊಂಡು ಹೋಗುತ್ತಿದ್ದರು. ದಾರಿಯಲ್ಲಿ ರಾಜನ ಸುರಕ್ಷೆಗಾಗಿ ಸೈನ್ಯ ಹೋಗುತ್ತಿತ್ತು. ಇದರ ಸಂಪೂರ್ಣ ಖರ್ಚನ್ನು ಹುಡುಗಿಯ ಕಡೆಯವರು ನೋಡಿಕೊಳ್ಳುತ್ತಿದ್ದರು.

ಸೇಠ್, ಸಾಹುಕಾರರು ವರದಕ್ಷಿಣೆಯಲ್ಲಿ ಅತ್ಯಧಿಕ ಒಡವೆ ಹಾಗೂ ಹಣ ನೀಡುತ್ತಿದ್ದರು. ಅವರು ಹಳ್ಳಿಯ ಬಹಳಷ್ಟು ಜನರನ್ನು ಮಾರ್ಗಮಧ್ಯೆಯ ಸುರಕ್ಷತೆಗಾಗಿ ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಮೊದಲನೇ ದಿನ ಹುಡುಗನ ಕಡೆಯವರು ತಮ್ಮ ಮನೆಯಲ್ಲಿ ಸಿಹಿ ತಿನ್ನಿಸುತ್ತಿದ್ದರು. ಹುಡುಗಿಯ ಕಡೆಯವರಿಂದ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ನಾಣ್ಯ ಹಾಗೂ ಒಂದೊಂದು ಹಿತ್ತಾಳೆಯ ಲೋಟ ಕೊಡಲ್ಪಡುತ್ತಿತ್ತು. ಒಮ್ಮೊಮ್ಮೆ ಹೆಚ್ಚೆಚ್ಚು ಕೊಡುವ ಪರಿಪಾಠವೂ ಇತ್ತು. ಏಕೆಂದರೆ ಹಿಂದೆಲ್ಲಾ ಅರಣ್ಯದ ಮೂಲಕ ಹೋಗಬೇಕಾಗುತ್ತಿತ್ತು ಹಾಗೂ ಪ್ರಯಾಣಕ್ಕೆ ಬೇರೆ ವಾಹನಗಳ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಈ ದಿಬ್ಬಣ ಹೊರಡುವುದು ಒಂದು ಪರಂಪರೆಯಾಯ್ತು. ಒಮ್ಮೊಮ್ಮೆ ಬರಗಾಲ ಬಂದಾಗ ಎಲ್ಲರೂ ಬಡವರಾಗಿ ಬಿಡುತ್ತಿದ್ದರು ಯಾರೋ ಒಬ್ಬನು ಧನಿಕ ಸಿಕ್ಕಿದರೆ ಅವನನ್ನು ಲೂಟಿ ಮಾಡುವುದು ಸಾಮಾನ್ಯ ಸಂಗತಿಯಾಗಿತ್ತು. ಆ ಕಾರಣದಿಂದ ದಿಬ್ಬಣವೆಂಬ ಸೈನ್ಯ ಹುಟ್ಟಿಕೊಂಡಿತು. ನಂತರ ಇದೊಂದು ಆಡಂಬರದ ಪರಂಪರೆಯಾಯ್ತು. ಇದರ ಅವಶ್ಯಕತೆ ಖಂಡಿತವಾಗಿಯೂ ಇಲ್ಲ.

ಪ್ರಶ್ನೆ:– ಕೊಡುಗೆ ಅಥವಾ ಆತಿಥ್ಯ ಹೇಗೆ ಪ್ರಾರಂಭವಾಯಿತು?

ಉತ್ತರ:– ಇದರ ಮೂಲ ದಿಬ್ಬಣ ಬರುವುದು, ವರದಕ್ಷಿಣೆ ಕೊಡುವುದು. ದಿಬ್ಬಣ ತಗೊಂಡು ಹೋಗಲು ಹುಡಗನ ಕಡೆಯವರ ಮೂಲಕ ಸಿಹಿ ತಿನ್ನಿಸುವುದು. ಹುಡುಗಿಯವರು ಸಹ ದಿಬ್ಬಣದಲ್ಲಿ ಬರುವವರಿಗೆ ಸಿಹಿ, ಹಣ–ಕೊಡುಗೆ ನೀಡುವುದು ಇತ್ಯಾದಿಯ ಕಾರಣ ವರದಕ್ಷಿಣೆ ಪ್ರಾರಂಭವಾಯ್ತು. ಸಮಾರಂಭದಲ್ಲಿ ಊರಿನವರು ಮತ್ತು ಅಕ್ಕಪಕ್ಕದ ಊರಿನವರು ಒಳ್ಳೆಯ ವ್ಯಕ್ತಿ ಇರುತ್ತಿದ್ದರು. ಯಾರ ಮಗನ ಅಥವಾ ಮಗಳ ಮದುವೆಯಾಗುತ್ತಿದ್ದರೆ ಇದನ್ನೆಲ್ಲಾ ಕೇವಲ ವಧುವಿನ ಕುಟುಂಬದವರಿಗೆ ಹೊರಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಸಮಾರಂಭದಲ್ಲಿ ನೂರು ಅಥವಾ ಅಧಿಕ ಜನ ಇರುತ್ತಿದ್ದರು. ಯಾರ ಮಕ್ಕಳ ವಿವಾಹ ಇರುತ್ತಿತ್ತು ಆಗ ಎಲ್ಲರೂ ತಮ್ಮ ಸಾಮರ್ಥ್ಯದನುಸಾರ ಹಣವನ್ನು ವಧುವಿನ ತಂದೆಗೆ ಕೊಡುತ್ತಿದ್ದರು. ಯಾರೋ ನೂರು ರೂಪಾಯಿ, ಯಾರೋ ಎರಡ ನೂರು ರೂಪಾಯಿ ಯಾರೋ ಕಡಿಮೆ, ಯಾರೋ ಹೆಚ್ಚು ಇದೊಂದು ಪ್ರಕಾರದ ಬಡ್ಡಿ ಇಲ್ಲದ ಸಾಲವಿರುತ್ತದೆ. ಎಲ್ಲರೂ ಕೊಟ್ಟ ಹಣವನ್ನು ಬರೆಯಲಾಗುತ್ತಿತ್ತು. ಪ್ರತ್ಯೇಕ ಸದಸ್ಯನ ಪುಸ್ತಕದಲ್ಲಿ ಪ್ರತಿಯೊಂದು ವಿವಾಹದ ಸಮಯದಲ್ಲಿ ಕೊಟ್ಟ ಹಣದ ವಿವರವನ್ನು ಬರೆಯಲಾಗುತ್ತದೆ. ಈ ರೀತಿ ಮದುವೆ ಮಾಡುವವರಿಗೆ ಹಣದ ಕೊರತೆ ಉಂಟಾಗುವುದಿಲ್ಲ.

ಕೊಡುಗೆ:– ಕೊಡುಗೆಯೂ ಇದೇ ರೀತಿ ಪ್ರಾರಂಭವಾಯಿತು. ಅಕ್ಕ ತಂಗಿಯರ ಮಕ್ಕಳ ಮದುವೆಯಲ್ಲಿ ಬಟ್ಟೆ, ನಗದು ಕೊಡುವುದು ಕೊಡುಗೆ ಎನ್ನಬಹುದು. ಇದನ್ನು ಮತ್ತೆ ವಾಪಸ್ಸು ಕೊಡುವಂತಿಲ್ಲ. ಅಕ್ಕತಂಗಿಯರಿಗೆ ಅಣ್ಣ ತಮ್ಮಂದಿರು ಇಲ್ಲದಿದ್ದರೆ ಅವರು ಅತ್ಯಂತ ದುಃಖಿಯಾಗುತ್ತಾರೆ. ಅವರೆಲ್ಲ ಏಕಾಂತದಲ್ಲಿ ಕುಳಿತು ಅಳುತ್ತಾರೆ. ಇನ್ನು ಮಗಳಿಗೆ ಮಗುವಾದರೆ

ತಾಯಿಯ ಮನೆಯವರು ಬಾಣಂತನಕ್ಕಾಗಿ ಶುದ್ಧ ತುಪ್ಪ, ಅಂಟಿನುಂಡೆ ನವಜಾತ ಮಗುವಿಗೆ ಚಿಕ್ಕ-ಚಿಕ್ಕ ಬಟ್ಟೆ ಇವೆಲ್ಲಾ ತವರು ಮನೆಯವರು ಮತ್ತು ಹುಡುಗಿಯ ನಾದಿನಿಯರು ತಂದು ಕೊಡುತ್ತಾರೆ. ಬಟ್ಟೆಗಳೆಲ್ಲಾ ಒಂದು ವರ್ಷದ ನಂತರ ವ್ಯರ್ಥವಾಗಿ ಬಿಡುತ್ತವೆ. ಇಂಥಾ ಪರಂಪರೆಯನ್ನು ಬಿಡಬೇಕು. ಏಕೆಂದರೆ ಇದು ಜೀವನದ ಮಾರ್ಗದಲ್ಲಿ ವ್ಯರ್ಥ ಭಾರವಾಗಿ ಪರಿಣಮಿಸುತ್ತದೆ. ನೀವು ಬೇಕಾದರೆ ನಿಮ್ಮ ಮಗಳಿಗೆ ಸಹಾಯ ಮಾಡಬಹುದು. ಅಂದರೆ ಹಸು, ಎಮ್ಮೆ ಕೊಂಡುಕೊಳ್ಳುವುದಿದೆ, ಮಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೆ ಅವಳಿಗೆ ದುಡ್ಡು ಕೊಡಬಹುದು. ಆದರೆ ಮದುವೆ ಸಮಯದಲ್ಲಿ ವರದಕ್ಷಿಣೆ ರೂಪದಲ್ಲಿ ಕೊಡಬಾರದು. ನಿಮ್ಮ ಮಗಳು ಒಪ್ಪಿದರೆ, ಅವಳಿಗೆ ನಿಮ್ಮ ಆಸ್ತಿಯಲ್ಲಿ ಒಂದು ಭಾಗವನ್ನು ನೀವು ಕೊಡಬಹುದು. ಮಗಳು ಅವಶ್ಯಕತೆ ಬಂದಾಗ ಹಣವನ್ನು ತೆಗೆದುಕೊಂಡು ಆದರೆ ಮತ್ತೆ ಹಿಂದಿರುಗಿಸಬೇಕು. ಪರಮಾತ್ಮನಲ್ಲಿ ನಂಬಿಕೆ ಇಡಿ. ಆಗ ನಿಮ್ಮ ಗೌರವ ಉಳಿಯುವುದು.

ಪರಿಹಾರ:- ಇದಕ್ಕೆಲ್ಲಾ ಪರಿಹಾರವೆಂದರೆ ವಿವಾಹವನ್ನು ಸೂಕ್ಷ್ಮವೇದದ ಪ್ರಕಾರ ಮಾಡುವುದು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದವೆಂಬ ನಾಲ್ಕು ವೇದಗಳನ್ನು ನೀವು ಕೇಳಿರುವಿರಿ, ಆದರೆ ಐದನೇ ವೇದವಾದ ಸೂಕ್ಷ್ಮವೇದವನ್ನು ಸ್ವತಃ ಪೂರ್ಣಬ್ರಹ್ಮನು ಭೂಮಿಗೆ ಬಂದು ತನ್ನ ಮುಖಕಮಲದಿಂದ ಅಮೃತವಾಣಿಯ ಮೂಲಕ ತಿಳಿಸಿದ್ದಾನೆ.

ನನ್ನ(ರಾಮ್‌ಪಾಲ್ ದಾಸ) ಅನುಯಾಯಿಗಳು ಅದೇ ಐದನೇ ವೇದದ ಪ್ರಕಾರ ಮದುವೆ ಮಾಡುತ್ತಾರೆ. ಇದರಲ್ಲಿ ಮೇಲೆ ತಿಳಿಸಿರುವ ಯಾವುದೇ ಆಡಂಬರದ ಅವಶ್ಯಕತೆ ಇರುವುದಿಲ್ಲ. ಮದುವೆಯಲ್ಲಿ ಹಾಗೂ ಇನ್ನಿತರೇ ಸಂದರ್ಭದಲ್ಲಿ ವಧು-ವರ ಕಡೆಯವರು ವ್ಯರ್ಥವಾದ ಖರ್ಚು ಮಾಡುವ ಅವಶ್ಯಕತೆ ಇರುವುದಿಲ್ಲ. ಕೇವಲ ಕನ್ಯಾದಾನ ಅಂದರೆ ಮಗಳನ್ನು ದಾನಮಾಡಬೇಕು ಅಷ್ಟೇ. ವಧುವು ತನಗಾಗಿ ನಾಲ್ಕು ಜೊಡಿ ಬಟ್ಟೆ ತೆಗೆದುಕೊಂಡು ಹೋಗಬಹುದು, ಚಪ್ಪಲಿ ತೊಟ್ಟಿರುತ್ತಾಳೆ ಅಷ್ಟೇ. ವಧು ಯಾರ ಮನೆಗೆ ಹೋಗುತ್ತಾಳೋ ಅವಳನ್ನು ಅವರ ಮನೆಯವರು ಆದರದಿಂದ ನೋಡುತ್ತಾರೆ. ತನ್ನ ಮನೆಯ ಆರ್ಥಿಕ ಸ್ಥಿತಿಗನುಗುಣವಾಗಿ ಅನ್ಯ ಸದಸ್ಯರಂತೆ ಅವಶ್ಯಕ ವಸ್ತುಗಳನ್ನು ಅವಳಿಗೆ ನೀಡುವರು. ಆಗ ಮಗಳು ತನ್ನ ತಾಯಿ ತಂದೆಗೆ ಭಾರವಾಗಲಾರಳು. ತಾಯಿಯ ಮನೆಗೆ ಬಂದಾಗ ಯಾವುದೇ ಒಡವೆ ವಸ್ತ್ರ ಪಡೆಯುವುದಿಲ್ಲ. ಆಗ ಅಣ್ಣ ಅತ್ತಿಗೆಗೂ ಪ್ರೀತಿ ಪಾತ್ರಳಾಗುತ್ತಾಳೆ. ಏಕೆಂದರೆ ಅತ್ತಿಗೆಯು ಇವಳು ಬಂದು 5-6 ಸಾವಿರ ಖರ್ಚುಮಾಡಿಸಿ ಹೋಗುವಳು, ಎಂದು ಕೊರಗುವುದು ತಪ್ಪುತ್ತದೆ. ನಮ್ಮ ಮಗಳು ಗೌರವದಿಂದ ಬರುವಳು ಮತ್ತು ಗೌರವದಿಂದ ಹೋಗುವಳು ತನ್ನ ತವರು ಮನೆಯಿಂದ ಯಾವುದೇ ವಸ್ತು ಪಡೆಯುವುದಿಲ್ಲ. ಇದರಿಂದ ಎರಡು ಕುಟುಂಬದಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ಹೆಚ್ಚುತ್ತದೆ. ಭಕ್ತಿ ಕೂಡಾ ಚೆನ್ನಾಗಿ ನಡೆಯುವುದು, ಈ ರೀತಿ ಬದುಕುವ ಯಥಾರ್ಥ ದಾರಿ ಮೇಲೆ ನಡೆದು ನಾವು ಬೇಗನೇ ಮೋಕ್ಷವನ್ನು ಪಡೆಯುವೆವು.

ಪ್ರಶ್ನೆ:- ಶುಭಕಾರ್ಯಗಳಿಗೆ ಹೋದಾಗ ಮಕ್ಕಳಿಲ್ಲದವರ ಮುಖ ನೋಡುವುದೂ ಸಹ ಕೆಟ್ಟದೆಂದು ಹೇಳುತ್ತಾರೆ, ಏಕೆ?

ಉತ್ತರ:- ಇದು ಸಂಪೂರ್ಣ ಆಧ್ಯಾತ್ಮಿಕ ಜ್ಞಾನದ ಕೊರತೆಯಿಂದ ಇದು ತಪ್ಪು ಕಲ್ಪನೆಯಾಗಿದೆ. ಓದುಗರೇ ಇದೇ ಪುಸ್ತಕದ ಪುಟ 7ರಲ್ಲಿ ಓದಿ ಒಬ್ಬ ವ್ಯಕ್ತಿಗೆ ನಾಲ್ಕು ಜನ ಮಕ್ಕಳಿದ್ದರೂ, ಅವನಿಗೆ ಲಕ್ವ ಹೊಡೆದಾಗ ಯಾರೂ ಅವನ ಸೇವೆ ಮಾಡಲಿಲ್ಲ. ಅವನಿಗೆ ಮಕ್ಕಳಿದ್ದಾರೆ ಎಂದಾಕ್ಷಣ ಅವನ ದರ್ಶನ ಭಾಗ್ಯದಿಂದ ಶುಭವಾಗುವುದೇ? ಅವನ ದುರ್ಗತಿಯನ್ನು ನೋಡಲು ಯಾರು ಇಷ್ಟ ಪಡುತ್ತಾರೆ?

## "ಕೃತಘ್ನ ಮಗ"

ಒಬ್ಬ ವ್ಯಕ್ತಿಗೆ ಇಬ್ಬರು ಮಕ್ಕಳಿದ್ದರು. ಅವನು ಸೈನ್ಯದಿಂದ ನಿವೃತ್ತಿ ಹೊಂದಿದ್ದನು. ಪೆನ್‌ಷನ್ ಬರುತ್ತಿತ್ತು. ಮಕ್ಕಳು ಬೇರೆ ಬೇರೆಯಾದರು, ಚಿಕ್ಕ ಮಗನು ತನ್ನ ಮಕ್ಕಳು ಚಿಕ್ಕವರಾದ ಕಾರಣ ತಾಯಿಯನ್ನು ತನ್ನ ಮನೆಯಲ್ಲಿಟ್ಟುಕೊಂಡನು. ತಾಯಿಯು ಅವರನ್ನು ನೋಡಿಕೊಳ್ಳಬೇಕಾಗಿತ್ತು.

ದೊಡ್ಡ ಮಗ ತಂದೆಯನ್ನು ಇಟ್ಟುಕೊಂಡನು, ತಂದೆಯು, ಪೆನ್‌ಷನ್ ಹಣ ನಾನು ಅವನಿಗೆ ಕೊಟ್ಟು, ಅದರಲ್ಲಿ ನಾನು ತಿನ್ನುವೆ ಎಂದನು. ಚಿಕ್ಕ ಮಗನು, ನನಗೆ ಅರ್ಧ ಪೆನ್‌ಷನ್ ಕೊಡು ಎಂದನು. ತಂದೆ ಒಪ್ಪದಿದ್ದಾಗ ಒಂದು ದಿನ ಅವನು ತಂದೆಯ ತಲೆ ಮೇಲೆ ಹೊಡೆದು ಅವನನ್ನು ಕೊಂದು ಹಾಕಿದನು. ಮಗನಿಗೆ ಜೀವಾವಧಿ ಶಿಕ್ಷೆಯಾಯಿತು. ಮಗ ಹುಟ್ಟಿದ್ದಕ್ಕಾಗಿ ಆ ಸೈನಿಕನನ್ನು ಕೊಂಡಾಡುತ್ತಿದ್ದವರು ಈಗ ನೋಡಿ ಏನಾಯಿತು? ಈಗ ಆಧ್ಯಾತ್ಮಿಕ ತಕ್ಕಡಿಯಲ್ಲಿ ತೂಗಿಸಿ ನೋಡೋಣ, ಮಕ್ಕಳಿಲ್ಲದವರ ದರ್ಶನದಿಂದ ಶುಭವಾಗುವುದೇ ಅಥವಾ ಅಶುಭವಾಗುವುದೇ? ಮೇಲೆ ತಿಳಿಸಿರುವಂತೆ ಸಂಸ್ಕಾರದಿಂದಲೇ ಕುಟುಂಬ ಏರ್ಪಡುತ್ತದೆ. ಸಾಲ ತೀರಿಸಲು ತಂದೆ–ಮಗ, ಹೆಂಡತಿ, ತಂದೆ–ತಾಯಿ, ಅಕ್ಕ–ತಂಗಿ, ಅಣ್ಣ–ತಮ್ಮ ಮುಂತಾದ ರೂಪದಲ್ಲಿ ಜನ್ಮತಾಳಿ ಕುಟುಂಬದಲ್ಲಿ ಮರ್ಯಾದೆಯಿಂದ ಬದುಕುವುದನ್ನು ನೋಡುತ್ತೇವೆ. ಆದರೆ ಕೆಲ ಯುವಕರು ಅಕಾಲ ಮರಣವನ್ನು ಅಪ್ಪುತ್ತಾರೆ. ಮತ್ತೆ ಕೆಲವರು ಮದುವೆಯಾದ ತಕ್ಷಣ ಸಾಯುತ್ತಾರೆ. ಇವರೆಲ್ಲಾ ತಮ್ಮ ಸಾಲ ತೀರಿದ ತಕ್ಷಣ ತಮ್ಮ ಶರೀರವನ್ನು ತ್ಯಜಿಸುತ್ತಾರೆ. ಯಾರಿಗೆ ಮಕ್ಕಳಾಗಲಿಲ್ಲ ಅವರಿಗೆ ಯಾವುದೇ ಕೊಳ್ಳುವ–ಕೊಡುವ ಶೇಷ ಉಳಿದಿರುವುದಿಲ್ಲ. ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡುತ್ತಿದ್ದರೆ ಅಂಥಾ ಸೌಭಾಗ್ಯವಂತರು ಬೇರೊಬ್ಬರಿಲ್ಲ. ಅವರಿಗೆ ಹುಟ್ಟಿನ ಸಂತೋಷವೂ ಇಲ್ಲ, ಸಾವಿನ ದುಃಖವೂ ಇಲ್ಲ. ಮಕ್ಕಳಿಲ್ಲದವರ ದರ್ಶನವಂತು ಅತಿ ಶುಭ. ಭಕ್ತಿ ಮಾಡದಿದ್ದರೆ ಮಕ್ಕಳಿದ್ದವರು ಮತ್ತು ಮಕ್ಕಳಿಲ್ಲದವರು ಇಬ್ಬರೂ ತಮ್ಮ ಜೀವನ ನಾಶಮಾಡುತ್ತಿದ್ದಾರೆ. ಭಕ್ತಿ ಮಾಡುತ್ತಿದ್ದರೆ ಇಬ್ಬರ ದರ್ಶನವೂ ಶುಭವೇ ಆಗಿರುತ್ತದೆ.

## "ಮಕ್ಕಳಿಲ್ಲದವರೇ, ಎಚ್ಚರ!!"

ಯಾವ ಪುಣ್ಯಾತ್ಮರಿಗೆ ಮಕ್ಕಳಿಲ್ಲವೋ, ಅವರು ಆಧ್ಯಾತ್ಮಜ್ಞಾನದ ಕೊರತೆಯಿಂದ ಸಂತಾನ ಪ್ರಾಪ್ತಿಗೆ ಹಾತೊರೆಯುತ್ತಿರುತ್ತಾರೆ. ಅದಕ್ಕಾಗಿ ಏನೆಲ್ಲಾ ಪ್ರಯತ್ನ ಮಾಡುತ್ತಾರೆ. ಆದರೂ ಸಂತಾನ ಪ್ರಾಪ್ತಿಯಾಗಲ್ಲ, ಹಾಗಾಗಿ ಜೀವನ ಪರ್ಯಂತ ಸಂತಾನ ಪ್ರಾಪ್ತಿಯಾಗದ ದುಃಖವನ್ನು ಸಹಿಸುತ್ತಾರೆ. ವಿಶೇಷವಾಗಿ ಮಹಿಳೆಯರು ಮಕ್ಕಳನ್ನು ಪಡೆಯಲು ಹೆಚ್ಚಾಗಿ ಹಂಬಲಿಸುತ್ತಾರೆ, ಹೆಣ್ಣು ತನ್ನನ್ನು ಯಾರೂ ಬಂಜೆ ಎಂದು ಕರೆಯಬಾರದೆಂದು ಬಯಸುತ್ತಾಳೆ. ವೈದ್ಯರು ತಪಾಸಣೆ ನಡೆಸಿ ಬಂಜೆಯ ಯಾವ ಲಕ್ಷಣಗಳೂ ಇಲ್ಲವೆಂದು ಹೇಳುತ್ತಾರೆ. ಎಲ್ಲಾ ಭಗವಂತನ ಲೀಲೆ, ಆದರೆ ತತ್ವಜ್ಞಾನವಿಲ್ಲದ ಸ್ತ್ರೀ ಅದೇ ಕೊರಗಿನಲ್ಲಿ ಸಾಯುತ್ತಾಳೆ. ಭಕ್ತಿ ಮಾಡದ ಕಾರಣ ಅವಳು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುತ್ತಾಳೆ. ಆಗ ಯಮನ ದೂತರು, "ಅಕ್ಕಾ, ಈಗ ನೀನು ಮಕ್ಕಳನ್ನು ಹುಟ್ಟಿಸಿ ನಿನ್ನ ದುಃಖ, ನಿವಾರಿಸಿಕೋ ಎನ್ನುತ್ತಾನೆ. "ಒಂದೇ ಬಾರಿಗೆ 7–8 ಮರಿಗಳನ್ನು ಹಡೆಯುತ್ತಾಳೆ. ಮತ್ತೆ ಮುಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟುತ್ತಾಳೆ. ಒಂದು ಸಾರಿಗೆ ಹನ್ನೆರಡು ಮರಿಗಳಿಗೆ ಜನ್ಮ ನೀಡುವಳು ಮತ್ತು 7–8 ಹಡೆಯುವಳು. ಮಕ್ಕಳ ಆಸೆಯೆಲ್ಲಾ ತೀರಿಸಿಕೊ.

ಹೇ ಪುಣ್ಯಾತ್ಮ ಓದುಗರೇ, ಅಕ್ಕ–ತಂಗಿಯರೇ, ಆಧ್ಯಾತ್ಮ ಜ್ಞಾನವನ್ನು ಪಡೆಯಿರಿ. ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಿ. ಬದುಕುವ ದಾರಿ ಕಂಡುಕೊಳ್ಳಿ, ಅಂದರೆ ಪೂರ್ಣ ಗುರುವಿನಿಂದ ದೀಕ್ಷೆ ಪಡೆದು ಭಕ್ತಿಮಾಡಿ, ಉದ್ಧಾರ ಮಾಡಿಕೊಳ್ಳಿ.

## "ಮದುವೆಯಲ್ಲಿ ಜ್ಞಾನಹೀನರು ನರ್ತಿಸುತ್ತಾರೆ"

ಒಂದು ದಿನ, ಸಮಾಚಾರಪತ್ರದಲ್ಲಿ ಹೀಗೆ ಬರೆದಿತ್ತು, ರೋಹತಕ್‌ನ ಒಬ್ಬ ಮದುಮಗ ಮದುವೆಗಾಗಿ ಕಾರಿನಲ್ಲಿ ತೆರಳುತ್ತಿದ್ದನು. ಅವನ ಜೊತೆ ಅವನ ಭಾವಂದಿರು ಸಹ ಕಾರಿನಲ್ಲಿದ್ದರು. ಮೊದಲ ದಿನ ಕುಟುಂಬದವರೆಲ್ಲಾ (ತಂಗಿ, ತಂದೆ–ತಾಯಿ, ಅಕ್ಕ, ಭಾವಂದಿರು, ಚಿಕ್ಕಪ್ಪ–ಚಿಕ್ಕಮ್ಮ) ಡಿ.ಜೆ ಹಾಕಿಕೊಂಡು ಕುಣಿಯುತ್ತಿದ್ದರು. ಬಹಳ ಮಜಾಮಾಡುತ್ತಿದ್ದರು. ಕಲಾನೌರ್ ಎಂಬ ಊರಿನಲ್ಲಿ ಮದುಮಗನ ಕಾರು ಒಂದು ಟ್ರಕ್ಕಿಗೆ ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದವರೆಲ್ಲಾ ಸತ್ತು ಹೋದರು, ಮದುಮಗ ಸತ್ತ, ಅಕ್ಕಂದಿರು ವಿಧವೆಯರಾದರು. ಇದ್ದ ಒಬ್ಬ ಮಗನು ಸತ್ತು

ಕುಟುಂಬವೆಲ್ಲಾ ಸರ್ವನಾಶವಾಯಿತು. ಈಗ ನರ್ತಿಸಿ ಡಿ.ಜೆ ಹಾಕಿಕೊಂಡು? ಪರಮಾತ್ಮನ ಭಕ್ತಿ ಮಾಡುವುದರಿಂದ ಈ ರೀತಿಯ ಕಷ್ಟಗಳು ಎದುರಾಗುವುದಿಲ್ಲ. ಆದ್ದರಿಂದ ನನ್ನ (ರಾಮ್‌ಪಾಲ್ ದಾಸ್‌ನ) ಅನುಯಾಯಿಗಳು ಪರಮಾತ್ಮನಿಗೆ ಹೆದರಿ ಕೆಲಸ ಮಾಡುವಂತೆ ಆದೇಶವಿದೆ. ಸಾಮಾನ್ಯ ವಿಧಾನದಿಂದ ವಿವಾಹಮಾಡಿಕೊಳ್ಳಿ. ಈ ಹೊಲಸು ಲೋಕದಲ್ಲಿ (ಕಾಲನ ಲೋಕದಲ್ಲಿ) ಒಂದು ಕ್ಷಣದ ವಿಶ್ವಾಸವಿಲ್ಲ. ಯಾವಾಗ ಸಿಡಿಲು ಬಡಿಯುವುದೋ ಯಾರಿಗೆ ಗೊತ್ತು?

## "ಸಂತರ ಶಿಕ್ಷಣ"

ಒಂದು ಹಳ್ಳಿಯ ಒಬ್ಬ ವ್ಯಕ್ತಿ ಮೊದಲ ಬಾರಿ ಗುರುನಾನಕ್ ದೇವರ ಬಳಿ ಹೋದನು. ಅವನು ನೋಡಿದ ಗುರುಗಳು ಒಬ್ಬರೇ ನಿಶ್ಯಬ್ದವಾಗಿ ಏಕಾಂತದಲ್ಲಿ ಕುಳಿತಿದ್ದಾರೆ. (ಸ್ಮರಣೆ ಮಾಡುತ್ತಿದ್ದರು) ಆ ವ್ಯಕ್ತಿಯು ಸತನಾಮ್-ವಾಹೇಗುರು ಎಂದು ಹೇಳಿದನು, ಶ್ರೀ ನಾನಕ್‌ರೂ ಉತ್ತರಿಸಿದರು. ಊಟ ಮಾಡಿಸಿದರು. ಜ್ಞಾನ ತಿಳಿಸಿದರು. ಇದಾದ ನಂತರ ಆ ವ್ಯಕ್ತಿ ಹೊರಟು ಹೋದನು. ಒಂದು ದಿನ ಮತ್ತೆ ಆ ವ್ಯಕ್ತಿ ಬಂದು ಕೇಳಿದನು, "ಗುರುಗಳೇ, ನೀವೆಂದಿಗೂ ಖುಷಿಯಾಗಿರುವಂತೆ ಕಾಣುವುದಿಲ್ಲ? ಕಾರಣವೇನು?" ಆಗ ಸಂತ ನಾನಕ್‌ರು ಹೇಳಿದರು:-

ನಾ ಜಾನೆ ಕಾಲ್ ಕೀ ಕರ್ ಡಾರೇ, ಕಿಸ್ ವಿಧಿ ಢಲ್ ಜಾ ಪಾಸಾ ವೇ ।
ಜಿನ್ಹಾತೆ ಸಿರ್ ತೇ ಮೌತ್ ಖುಡಕದೀ, ಉನ್ಹಾನೂಂ ಕೇಹಡಾ ಹಾಂಸಾ ವೇ ॥

ಭಾವಾರ್ಥ:- ಸಂತ ನಾನಕ್‌ರು ಹೇಳಿದರು ಹೇ ಸಹೋದರ! ಈ ಮೃತ್ಯುಲೋಕದಲ್ಲಿ ಎಲ್ಲವೂ ನಾಶವಾಗುವುದು, ಯಾರು ಯಾವಾಗ ಹೋಗಬೇಕಾಗುವುದೋ ಯಾರಿಗೂ ತಿಳಿಯದು. ಆದ್ದರಿಂದ ಯಾರ ತಲೆಯ ಮೇಲೆ ಸಾವು ಸುತ್ತುತ್ತಿರುವುದೋ ಆ ವ್ಯಕ್ತಿಯು ದುಡಿದು, ತಿಂದು, ಹಾಡಿ, ಕುಣಿದು, ಕುಪ್ಪಳಿಸಿಕೊಂಡಿರುವುದು ಹೇಗೆ ಸಾಧ್ಯ? ಮೂರ್ಖ ಅಥವಾ ನಶೆ ಮಾಡಿದ ಮನುಷ್ಯ ಈ ಹೊಲಸು ಲೋಕದಲ್ಲಿ ಮಜಾ ಮಾಡುತ್ತಾನೆ. ಅಂದರೆ ಒಬ್ಬ ವ್ಯಕ್ತಿಯ ಹೆಂಡತಿಗೆ ಹತ್ತು ವರ್ಷದ ನಂತರ ಒಬ್ಬ ಮಗ ಹುಟ್ಟಿದನು. ಆ ಮಗು ಹುಟ್ಟಿದ ಸಂತೋಷಕ್ಕೆ ಲಡ್ಡು ಮಾಡಿದರು, ಬ್ಯಾಂಡು ಬಾರಿಸಿ, ಮಜಾ ಮಾಡಿದರು. ಆದರೆ ಮುಂದಿನ ವರ್ಷದ ಜನ್ಮದಿನದಂದು ಆ ಮಗು ಸಾವನ್ನಪ್ಪಿತು. ಜನ್ಮದಿನದ ಸಂತೋಷದ ತಯಾರಿಯಲ್ಲಿ. ಅಳು, ಗೋಳು ಪ್ರಾರಂಭವಾಯಿತು. ಮನೆ ನರಕವಾಯಿತು. ಈಗ ಖುಷಿಯನ್ನು ಆಚರಿಸಿ?" ಈ ಮಾತನ್ನು ಕೇಳಿದ ಆ ವ್ಯಕ್ತಿ ನಡುಗಿ ಹೋದನು, ಹಾಗೂ ಹೇಳಿದನು, "ಹೇ ಪ್ರಭು! ನಿಮ್ಮ ಮಾತು ಸತ್ಯ. ಆದರೆ ನೀವು ಯಾವಾಗಲೂ ಖುಷಿಯಾಗಿರುವುದಿಲ್ಲವೇ?" 'ಖುಷಿಯಾಗಿರುತ್ತೇನೆ' ಎಂದು ನಾನಕ್‌ರು ಹೇಳಿದರು.

ಸಾಧ್ ಮಿಲೇ ಸಾಡೆ ಶಾದೀ ಹೂಂದೀ, ಬಿಛುಡದಾ ದಿಲ್ ಗೀರೀ ವೇ ।
ಅಖದೇ ನಾನಕ್ ಸುನೋ ಜಿಹಾನಾ, ಮುಶ್ಕಿಲ್ ಹಾಲ್ ಫಕೀರೀ ವೇ ॥

ಭಾವಾರ್ಥ:- ಯಾವಾಗ ನನ್ನ ಶಿಷ್ಯರು ಸತ್ಸಂಗಕ್ಕೆ ಬರುತ್ತಾರೋ. ಆಗ ನನಗೆ ಸಂತೋಷವಾಗುತ್ತದೆ. ಓಹೋ, ಎಲ್ಲರೂ ಭಕ್ತಿ ಮಾಡುತ್ತಿದ್ದಾರೆ, ಯಾರು ವಿಚಲಿತರಾಗಿಲ್ಲ. ಸತ್ಸಂಗದ ನಂತರ ಅವರೆಲ್ಲ ಹೊರಟು ಹೋದ ನಂತರ ಒಂದು ರೀತಿ ಶೂನ್ಯ ಆವರಿಸುತ್ತದೆ. ಅಂದರೆ ಎಲ್ಲಿ ಯಾರೋ ಅಜ್ಞಾನಿ ಇವರನ್ನು ಭ್ರಮೆಗೊಳಿಸಿ ಪರಮಾತ್ಮನಿಂದ ದೂರ ಮಾಡದಿರಲೆಂದು. ಶ್ರೀನಾನಕ್‌ರು ಹೇಳಿದರು ಜ್ಞಾನಹೀನ ಸಂತರು ಭಕ್ತಿಯನ್ನು ಕಷ್ಟಕರವನ್ನಾಗಿಸಿದ್ದಾರೆ. ಅವರಿಗೆ ಪೂರ್ಣ ಮೋಕ್ಷಮಾರ್ಗವು ತಿಳಿದಿಲ್ಲ. ಅವರೆಲ್ಲಾ ಭ್ರಮೆಗೊಳಿಸಲು ಗುರುಗಳಾಗಿದ್ದಾರೆ. ಸಿಹಿಯಾದ ಮಾತುಗಳಿಂದ ನನ್ನ ಭಕ್ತರನ್ನೆಲ್ಲಾ ಕಾಲನ ದವಡೆಗೆ ದೂಕುತ್ತಿದ್ದಾರೆ. ಆದ್ದರಿಂದ ಎಲ್ಲಿ ಇವರೆಲ್ಲಾ ಸತ್ಸಂಗಕ್ಕೆ ಪುನಃ ಬರುವುದಿಲ್ಲವೋ ಅಲ್ಲಿವರೆಗೆ ಚಿಂತೆ ನನ್ನನ್ನು ಕಾಡುತ್ತಿರುತ್ತದೆ. ಎಲ್ಲರೂ ಪುನಃ ಬಂದಾಗ ಸಂತೋಷವಾಗುತ್ತದೆ. ಆದರೆ ನಾವು ಕುಣಿದು ಕುಪ್ಪಳಿಸುವುದಿಲ್ಲ. ನಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ. ಮೃತ್ಯುವನ್ನು ಎಂದಿಗೂ ಮರೆಯುವುದಿಲ್ಲ. ಕಬೀರರು ಹೇಳಿದ್ದಾರೆ:-

ಮೌತ್ ಬಿಸಾರೀ ಮೂರ್ಖಾ, ಅಚರಜ್ ಕಿಯಾ ಕೌನ್ ।

ತನ್ ಮಿಟ್ಟೀ ಮೆಂ ಮಿಲ್ ಜಾಯೆಗಾ, ಜ್ಯೋಂ ಆಟೇ ಮೆಂ ಲೌನ್ ॥

ಶಬ್ದಾರ್ಥ:– ಹೇ ಮೂರ್ಖ ಮನುಷ್ಯನೇ! ನೀನು ಸಾವನ್ನು ಮರೆತು ಎಂಥಾ ಕೆಲಸ ಮಾಡಿರುವೆ! ನಿನ್ನ ಶರೀರ ಒಂದಲ್ಲ ಒಂದು ದಿನ ಸಾವನ್ನು ಪಡೆದುಕೊಂಡು ಮಣ್ಣಲ್ಲಿ ಸೇರಿಹೋಗುವುದು. ಆಗ ನಿನ್ನ ನಾಮಾವಶೇಷವೂ ಇರುವುದಿಲ್ಲ. ಹಿಟ್ಟಿನಲ್ಲಿ ಉಪ್ಪು ಸೇರಿಕೊಂಡರೆ ಕಾಣದಿರುವ ಹಾಗೆ. ಸಾವನ್ನು ಮರೆತು ಮನುಷ್ಯನು(ಸ್ತ್ರೀ–ಪುರುಷ) ಸ್ವಾರ್ಥದಿಂದ ತಪ್ಪುಗಳನ್ನು ಮಾಡುತ್ತಾನೆ ಮತ್ತು ಪ್ರಪಂಚದಲ್ಲಿ ಆರಾಮವಾಗಿರುತ್ತಾನೆ. ಅವನಿಗೆ ಸಾವಿನ ನೆನಪು ಇದ್ದಿದ್ದರೆ ಅವನು ಪಾಪವಾಗಲೀ–ತಪ್ಪಾಗಲೀ ಮಾಡಲು ಸಾಧ್ಯವಿಲ್ಲ.

ಅನ್ಯ ಉದಾಹರಣೆಗಳು:– ಒಂದು ದಿನ ಒಬ್ಬ ಸೇಠ್ ಒಬ್ಬ ಸಂತನ ಆಶ್ರಮಕ್ಕೆ ಹೋದನು. ಸಂತನ ಕೃಪೆಯಿಂದ ಅವನಿಗೆ ತುಂಬಾ ಲಾಭವಾಯಿತು. ಆ ಸೇಠ್ ಸೇಬು, ಕಿತ್ತಲೆ ಮತ್ತು ಬಾಳೆ ಹಣ್ಣುಗಳ ಬುಟ್ಟಿ ತೆಗೆದುಕೊಂಡು ಹೋಗಿದ್ದನು. ನಂತರ ಸಂತನು ಅದನ್ನು ಹಣ್ಣಿನ ಪ್ರಸಾದದ ಬುಟ್ಟಿಯಲ್ಲಿ ಹಾಕಿದನು. ಎರಡು ದಿನಗಳ ನಂತರ ಸೇಠ್ ಬಂದು ನೋಡಿದಾಗ, ಆ ಬುಟ್ಟಿ ಹಣ್ಣುಗಳಿಂದ ತುಂಬಿತ್ತು. ಗುರುಗಳು ಕೊಂಚ ಪ್ರಸಾದವನ್ನು ಭಕ್ತರಿಗೆ ಹಂಚಿದರು. ಕೆಲ ಭಕ್ತರು ಫಲಗಳನ್ನು ಪ್ರಸಾದವಾಗಿ ತಂದರು. ಅದನ್ನು ಬುಟ್ಟಿಯಲ್ಲಿ ತುಂಬಲಾಯಿತು. ಗುರುಗಳಿಗೆ ಸೇಠ್ ಕೇಳಿದನು. "ಗುರುಗಳೇ ನೀವೇಕೆ ಹಣ್ಣು ತಿನ್ನುವುದಿಲ್ಲ" ಆಗ ಗುರುಗಳೆಂದರು, "ನನಗೆ ಸಾವು ಕಾಣಿಸುತ್ತಿದೆ, ಆದ್ದರಿಂದ ತಿನ್ನಲಾಗುತ್ತಿಲ್ಲ" ಆಗ ಸೇಠ್ ಕೇಳಿದನು. "ಗುರುಗಳೇ ಈ ಪ್ರಪಂಚದಿಂದ ಯಾವಾಗ ಹೋಗುತ್ತಿರುವಿರಿ?" ಆಗ ಗುರುಗಳೆಂದರು, "ಇಂದಿನಿಂದ ಸರಿಯಾಗಿ ನಲವತ್ತು ವರ್ಷಗಳ ನಂತರ ನನ್ನ ಮರಣವಾಗುತ್ತದೆ". ಆಗ ಸೇಠ್, "ಅಯ್ಯೋ ಗುರುಗಳೇ ಹೀಗೆ ಎಲ್ಲರೂ ಸಾಯಲೇಬೇಕು. ಸಾವಿಗೆ ಏಕೆ ಭಯಪಡಬೇಕು? ಇಂಥಾ ಸಾವಿಗೆ ಸಾಮಾನ್ಯ ಮನುಷ್ಯನು ಹೆದುರುವುದಿಲ್ಲ. ಇನ್ನೂ ನೀವೇಕೆ ಹೀಗೆ?" ಎಂದನು. ನಂತರ ಆ ಸೇಠ್‌ಜೀ ಎರಡನೇ ದಿನ, ಮೂರನೇ ದಿನ ಬಂದು ಅದೇ ಮಾತನ್ನು ಆಡಿದನು.

ಆ ನಗರದ ರಾಜನು ಆ ಗುರುಗಳ ಭಕ್ತನಾಗಿದ್ದನು. ಗುರುಗಳು ರಾಜನಿಗೆ ಹೇಳಿದರು, "ನಿಮ್ಮ ನಗರದಲ್ಲಿ ಕಿರೋಡಿಮಲ್ ಎಂಬ ಸೇಠ್ ಇದ್ದಾನೆ. ಅವನಿಗೆ ಗಂಧದ ತುಂಡುಗಳ ಅಂಗಡಿಗಳಿವೆ. ಅವನಿಗೆ ಗಲ್ಲು ಶಿಕ್ಷೆ ಕೊಡು. ಮುಂದಿನ ತಿಂಗಳ ಹುಣ್ಣಿಮೆಯದಿನ ಅವನಿಗೆ ಗಲ್ಲಿಗೇರಿಸಲು ದಿನವನ್ನು ನಿರ್ಧರಿಸಿ ಅವನಿಗೆ ತಿಳಿಸು ಅಲ್ಲಿಯವರೆಗೆ ಅವನನ್ನು ಜೈಲಿನಲ್ಲಿಟ್ಟು, ಅಲ್ಲಿ ಒಂದು ಬುಟ್ಟಿಯತುಂಬ ಹಣ್ಣುಗಳನ್ನು ಇಡು. ಅದರ ಜೊತೆಗೆ ಒಂದು ಕೆ.ಜಿ ಹಾಲನ್ನು ಬಟ್ಟಲಲ್ಲಿ ತುಂಬಿಸಿಡು. ತಿನ್ನಲು ಹಲ್ವ, ಪಾಯಸ, ಹೋಳಿಗೆ, ಚಿತ್ರಾನ್ನ ಪಲ್ಯಗಳು ಇರಲಿ" ಎಂದನು. ಆಗ ರಾಜನು ಗುರುಗಳ ಆಜ್ಞೆಯನ್ನು ಪಾಲಿಸಿದನು. ರಾಜನು ಆ ಸೇಠ್‌ಜೀಯನ್ನು 20 ದಿನಗಳವರೆಗೆ ಬಂಧಿಸಿಟ್ಟಿದ್ದನು. ಆಗ ಸೇಠ್ ಕೃಶವಾಗಿಬಿಟ್ಟನು. ಗುರುಗಳು ಸೇಠ್‌ಜೀಯನ್ನು ನೋಡಲು ಹೋದರು. ಆಗ ಅವನನ್ನು ಕೇಳಿದರು. "ನೀನ್ಯಾರು? ಎಲ್ಲಿಯವನು?" ಎಂದರು. ಆಗ ಸೇಠ್‌ಜೀ "ಹೇ ಗುರುಗಳೇ ನೀವು ನನ್ನನ್ನು ಗುರುತಿಸಲಿಲ್ಲವೇ? ನಾನು ಕಿರೋಡಿಮಲ್ ಸೇಠ್, ಅದೇ ಗಂಧದ ಅಂಗಡಿಯ ಮಾಲೀಕ" ಎಂದನು. ಆಗ ಗುರುಗಳು, "ಹೇ, ಕಿರೋಡಿಮಲ್, ನೀನ್ಯಾಕೆ ಇಷ್ಟು ಕೃಶವಾಗಿದ್ದೀಯಾ? ಏಕೆ ತಿಂದುಂಡು ಮಲಗುತ್ತಿಲ್ಲ? ಅರೆ, ಹಣ್ಣಿನ ಬುಟ್ಟಿ ಇಲ್ಲೇ ಇದೆ, ಲೋಟದ ತುಂಬಾ ಹಾಲಿದೆ, ಪಂಚಭಕ್ಷ್ಯ ಪರಮಾನ್ನಗಳು ತಟ್ಟೆಯಲ್ಲಿದೆ." ಎಂದರು. ಆಗ ಸೇಠ್‌ಜೀ, "ಗುರುಗಳೇ, ನನಗೆ ಗಲ್ಲಿಗೇರಿಸಲಿದ್ದಾರೆ. ನಾನು ನಿರಪರಾಧಿ, ನನಗೆ ಚಿಕ್ಕ ಚಿಕ್ಕ ಮಕ್ಕಳಿವೆ" ಎಂದನು. ಆಗ ಗುರುಗಳೆಂದರು, "ಅರೆ ಸಹೋದರ, ಎಲ್ಲರೂ ಸಾಯಲೇ ಬೇಕು. ಮತ್ಯಾಕೆ ಹೆದರಬೇಕು? ತಿಂದುಂಡು ಮಜಾ ಮಾಡು" ಎಂದರು. ಆಗ ಸೇಠ್‌ಜೀ ಜೈಲಿನ ಸರಳುಗಳಿಂದ ಗುರುಗಳ ಕಾಲು ಹಿಡಿದು ಹೇಳಿದನು, "ನನ್ನನ್ನು ಕಾಪಾಡಿ ಗುರುಗಳೇ, ಏನನ್ನೂ ತಿನ್ನಲು ಮನಸ್ಸಾಗುತ್ತಿಲ್ಲ. ಹುಣ್ಣಿಮೆಯ ದಿನ ನೆನಪಿಗೆ ಬರುತ್ತದೆ ಎಂದನು. ಆಗ ಗುರುಗಳು, "ಹೇ ಕಿರೋಡಿಮಲ್, ಹೇಗೆ ನಿನಗೆ ಹುಣ್ಣಿಮೆಯ ದಿನ

ಸಾವು ನಿಶ್ಚಿತವಾಗಿದೆಯೋ ಹಾಗೆ ಸಾಧು ಸಂತರಿಗೆ ಅವರ ಸಾವು ಕಾಣುತ್ತದೆ. ಅದು ನಲವತ್ತು ವರ್ಷಗಳ ನಂತರವಾದರೂ ಸರಿ!" ಎಂದರು.

ಆಧ್ಯಾತ್ಮಜ್ಞಾನವಿಲ್ಲದ ವ್ಯಕ್ತಿಯು ಮಜಾಮಾಡುತ್ತಿರುತ್ತಾನೆ. ಆಗ ಆಕಸ್ಮಿಕವಾಗಿ ಸಾವು ನಿನ್ನನ್ನು ಎತ್ತಿಕೊಂಡು ಹೋಗುತ್ತದೆ. ಹಾಗೆಯೇ ಅದು ನಲವತ್ತು ವರ್ಷಗಳ ನಂತರ ಬಂದರೂ ನನಗೆ ನನ್ನ ಸಾವು ಕಾಣಿಸುತ್ತದೆ. ಈ ಕಾರಣದಿಂದ ಊಟ ತಿಂಡಿ ಅಷ್ಟು ರುಚಿಸುವುದಿಲ್ಲ. ಮಜಾ ಮಾಡಲು ಮನಸ್ಸಾಗುವುದಿಲ್ಲ. ಪರಮಾತ್ಮನ ನೆನಪಾಗುತ್ತದೆ. ನಿಮ್ಮ ಜ್ಞಾನ ಕಣ್ಣುಗಳಿಗೆ ಅಜ್ಞಾನದ ಪೊರೆ ಆವರಿಸಿದೆ. ಸತ್ಸಂಗದಲ್ಲಿ ಆ ಪೊರೆಯನ್ನು ಕಳಚಲಾಗುತ್ತದೆ. ಇದರಿಂದ ಬದುಕುವ ದಾರಿ ಕಾಣಿಸುತ್ತಿದೆ, ಮುಕ್ತಿಯೂ ಸಿಗುತ್ತದೆ." ಎಂದರು. ಸಂತನು ರಾಜನಿಗೆ ಹೇಳಿ ಸೇಠ್ ನನ್ನು ಬಿಡುಗಡೆಗೊಳಿಸಿದನು. ಸೇಠ್ ದೀಕ್ಷೆ ಪಡೆದುಕೊಂಡು ಉದ್ಧಾರ ಮಾಡಿಕೊಂಡನು.

## "ವಿವಾಹದ ನಂತರದ ಯಾತ್ರೆ"

ವಿವಾಹದ ನಂತರ ಪತಿಪತ್ನಿಗೆ ತಮ್ಮದೇ ಕರ್ತವ್ಯಗಳಿರುತ್ತವೆ. ಒಬ್ಬರು ಇನ್ನೊಬ್ಬರ ಮೇಲೆ ನಂಬಿಕೆ ಇಡಬೇಕಾಗುತ್ತದೆ. ತನ್ನ ಪತ್ನಿಯು ಪರಪುರುಷನ ಬಳಿ ಹೋಗಲಾರಳು ಎಂಬ ನಂಬಿಕೆ ಪತಿಗೂ, ನನ್ನ ಪತಿ ಪರಸ್ತ್ರೀಯು ಎಷ್ಟೇ ಅಪ್ಸರೆಯಾದರೂ ಅವಳ ಸಂಗ ಮಾಡಲಾರನು ಎಂಬ ನಂಬಿಕೆ ಪತ್ನಿಗೂ ಇರಬೇಕು.

➢ ಕಥೆ:– ಒಬ್ಬ ಯುವ ಸೈನಿಕನಿದ್ದನು. ಅವನ ಪತ್ನಿಯು ಸತಿ ಅಂದರೆ ಪತಿವ್ರತೆಯಾಗಿದ್ದಳು. ಈ ಮಾತನ್ನು ಸೈನ್ಯದಲ್ಲಿದ್ದ ತನ್ನ ಸಹೋದ್ಯೋಗಿಗಳಿಗೆ ಹೇಳಿದ್ದನು. ಈ ಮಾತು ಆ ಊರಿನ ಮಂತ್ರಿಯಾದ ಶೇರ್‌ಖಾನ್ ಎಂಬ ಮುಸಲ್ಮಾನನಿಗೆ ತಲುಪಿತು. ಇದನ್ನು ಅವನು ರಾಜನಿಗೆ ತಿಳಿಸಿದನು ಹಾಗೂ ಸತ್ಯಾಂಶವನ್ನು ಪರೀಕ್ಷಿಸಲು ವಿನಂತಿಸಿದನು. ರಾಜನು ಸಭೆ ಏರ್ಪಡಿಸಿ, ಸೈನಿಕ ಚಾಪ್ ಸಿಂಗ್ ಚೌಹಾನ್ ನನ್ನು ಕರೆಸಿದನು. ಸಭೆಯಲ್ಲಿ ರಾಜನು ಸೈನಿಕನನ್ನು ಕುರಿತು ಹೀಗೆಂದನು "ನಿನ್ನ ಪತ್ನಿ ಪತಿವ್ರತೆ. ಅವಳು ಯಾವ ದುರಾಸೆಗೂ ಒಳಗಾಗದೆ ಅನ್ಯ ಪುರುಷನ ಮಿಲನ್ ಮಾಡಲಾರಳು." ಆಗ ಸೈನಿಕನು, "ಹೌದು ಮಹಾರಾಜರೇ ಇದು ನೂರಕ್ಕೆ ನೂರರಷ್ಟು ಸತ್ಯ." ಎಂದನು. ಆಗ ರಾಜನು "ಒಂದು ವೇಳೆ ಸುಳ್ಳಾದರೆ?" ಎಂದನು. ಆಗ ಸೈನಿಕನು "ನೀವು ಯಾವ ಶಿಕ್ಷೆ ಕೊಟ್ಟರೂ ನಾನು ಸಿದ್ಧ" ಎಂದನು. ಆಗ ಮಂತ್ರಿಯೂ, "ರಾಜ, ಈ ಪರೀಕ್ಷೆಯನ್ನು ನಾನೇ ಖುದ್ದಾಗಿ ಮಾಡುವೆ" ಎಂದನು. ಆಗ ರಾಜನು, "ಸರಿ" ಎಂದನು. ಸೈನಿಕನು ಹೇಳಿದನು. "ನನ್ನ ಮದುವೆ ಸಮಯದಲ್ಲಿ ಕೊಟ್ಟಿರುವ ಚೂರಿ ಹಾಗೂ ಪೇಟ ಈ ಮಂತ್ರಿಯಾದ ಶೇರ್‌ಖಾನ್ ತರಲಾರ, ನನ್ನ ಪತ್ನಿ ಅದನ್ನು ನೀಡಲಾರಳು. ಒಂದುವೇಳೆ ಶೇರ್‌ಖಾನ್ ಇದನ್ನು ತಂದರೆ ನಾನು ಸೋಲು ಒಪ್ಪಿಕೊಳ್ಳುವೆ ಹಾಗೂ ನನ್ನ ಪತ್ನಿಯ ಯಾವುದಾದರೂ ಚಿಹ್ನೆ ಹೇಳಿಬಿಡು. ನನ್ನ ಪತ್ನಿ ಧರ್ಮಬಿಟ್ಟವಳೆಂದು ನಾನು ನಂಬುತ್ತೇನೆ" ಎಂದನು.

ಶೇರ್‌ಖಾನ್ ಆ ಸೈನಿಕನ ನಗರಕ್ಕೆ ಹೋಗಿ ಒಬ್ಬಳು ಮುಖಬಿರ್ ಸ್ತ್ರೀ ಗೆ ಹೇಳಿದನು, ಚಾಪ ಸಿಂಗ್ ಸೈನಿಕನ ಹೆಂಡತಿ ಇರುತ್ತಾಳೆ ಇಲ್ಲಿ, ಅವಳೊಂದಿಗೆ ನನ್ನ ಮಿಲನ್ ಮಾಡಿಸು ನಿನಗೆ ಹೆಚ್ಚು ದುಡ್ಡು ಕೊಡುವೆನು ಎಂದನು. ಆಗ ಆ ಹೆಂಗಸು, ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ" ಎಂದಳು. ಆಗ ಶೇರ್‌ಖಾನ್, ನೀನು ಹೇಗಾದರೂ ಮಾಡಿ ಅವಳ ಬಳಿ ವಿವಾಹದಲ್ಲಿ ಸಿಗುವ ಆ ಚೂರಿ ಮತ್ತು ಆ ಪೇಟವನ್ನು ತಂದುಕೊಡು. ಬೇಕಾದರೆ ಕಳ್ಳತನ ಮಾಡು. ಹಾಗೇ ಚಾಪ ಸಿಂಗ್‌ನ ಹೆಂಡತಿ ಸೋಮವತಿಯ ಗುಪ್ತಾಂಗದ ಬಳಿ ಅಥವಾ ಅವಳ ತೊಡೆಯ ಮೇಲಿರುವ ಯಾವುದಾದರೂ ಮಚ್ಚೆ ಅಥವಾ ಗುರುತನ್ನು ನೋಡಿ ನನಗೆ ತಿಳಿಸು" ಎಂದನು. ಆ ಹೆಂಗಸು ಒಪ್ಪಿಕೊಂಡು ಆ ಸೈನಿಕನ ದೂರದ ಬಂಧು ಎಂದು ಹೇಳಿಕೊಂಡು ಆ ಸೈನಿಕನ ನಕಲೀ ಅತ್ತೆಯಾಗಿ ಸೋಮವತಿಯ ಮನೆಗೆ ಹೋದಳು. ಸೋಮವತಿಯ ವಿವಾಹದ ಸಮಯ ಹಾಗೂ ನಂತರ ಚಾಪಸಿಂಗ್‌ನ ಅತ್ತೆ ಬಂದಿರಲಿಲ್ಲ. ತನಗೆ ಕಾಯಿಲೆ ಇದ್ದ ಕಾರಣ ಇವರ ಮದುವೆಗೆ ಬರಲಾಗಲಿಲ್ಲವೆಂದು ಸುಳ್ಳು

ಹೇಳಿದಳು. ನಂತರ ಕೆಲವು ದಿನಗಳವರೆಗೆ ನಿಂತಳು. ಸೋಮವತಿಯು ಸ್ನಾನಮಾಡುತ್ತಿರುವಾಗ ಸಮೀಪ ಹೋಗಿ ಅವಳ ಸುಂದರ ಶರೀರದ ಪ್ರಶಂಸೆ ಮಾಡುತ್ತಾ ಅವಳ ದೇಹವನ್ನು ನೋಡಿದಳು. ಸೋಮವತಿಯ ಗುಪ್ತಾಂಗದ ಬಳಿ ಒಂದು ದೊಡ್ಡ ಮಚ್ಚೆ ಇತ್ತು. ಈ ಎಲ್ಲಾ ಚಿಹ್ನೆಯನ್ನು ನೋಡಿದ ನಂತರ ಒಂದು ದಿನ ಆ ಚೂರಿ ಮತ್ತು ಪೇಟ ಕದ್ದು, ಅಲ್ಲಿಂದ ತಂದು ಶೇರ್‌ಖಾನ್‌ಗೆ ಕೊಟ್ಟಳು. ಆಗ ಶೇರ್‌ಖಾನ್ ಮರಳಿ ಬಂದು, "ಆ ಸೈನಿಕನ ಹೆಂಡತಿ ನನ್ನ ಜೊತೆ ಸಂಬಂಧ ಇಟ್ಟುಕೊಂಡಳು. ಅವಳ ತೊಡೆಯಲ್ಲಿ ಕಪ್ಪು ಮಚ್ಚೆ ಇದೆ. ಅವಳು ನನ್ನ ಪ್ರೇಮದಿಂದ ಮತ್ತು ಹಣದ ಆಸೆಯಿಂದ ನನಗೆ ಈ ಚೂರಿ ಮತ್ತು ಪೇಟ ಕೊಟ್ಟಳು" ಎಂದು ರಾಜನಿಗೆ ಹೇಳಿದನು.

ಮತ್ತೆ ಸಭೆ ಸೇರಿತು. ರಾಜನು ಸೈನಿಕನನ್ನು ಕರೆಸಿ, ಆ ಚೂರಿ ಮತ್ತು ಪೇಟವನ್ನು ತೋರಿಸಿದನು. ಸೈನಿಕನು ಅದನ್ನು ನೋಡಿ, "ಇವೆರಡೂ ನನ್ನದೇ ಎಂದು ಹೇಳಿದನು. ಆಗ ಶೇರಖಾನ್ ಹೇಳಿದ ಇನ್ನೂ ಹೇಳಲೇ ಕೇಳು ನಿನ್ನ ಪತ್ನಿಯ ತೊಡೆಯ ಮೇಲೆ ಗುಪ್ತಾಂಗದ ಬಳಿ ಕಪ್ಪು ಮಚ್ಚೆ ಇದೆ. ಚಾಪ ಸಿಂಗ್‌ನು ಎಲ್ಲವೂ ನಿಜ ಎಂದು ಹೇಳಿದನು. ಆದರೆ ನನ್ನ ಹೆಂಡತಿ ಚಾರಿತ್ರ್ಯ ಹೀನಳೆಂದು ನಾನು ನಂಬುವುದಿಲ್ಲ" ಎಂದು ಬಲವಾಗಿ ಹೇಳಿದನು. ಆಗ ರಾಜನು ನೀನು ಈಗಲೂ ಅದನ್ನೇ ಹೇಳುತ್ತಿರುವೆ, ನೀನು ಸುಳ್ಳುಗಾರ. ನಿನಗೆ ಇಂದಿನಿಂದ ಒಂದು ತಿಂಗಳ ಬಳಿಕ ಗಲ್ಲು ಶಿಕ್ಷೆ ನೀಡಲಾಗುವುದು. ಆ ಸೈನಿಕನ ಅಂತಿಮ ಇಚ್ಛೆಯನ್ನು ಕೇಳಿದಾಗ, ಆ ಸೈನಿಕನು ತನ್ನ ಹೆಂಡತಿಯನ್ನು ಕಡೆಯ ಬಾರಿ ನೋಡುವುದಾಗಿ ಇಚ್ಛೆ ವ್ಯಕ್ತಪಡಿಸಿದನು. ಅದರಂತೆ ಅವನು ಅವಳ ಬಳಿ ಹೋದನು, ಅವಳು ಮೋಸಮಾಡಿದಳೆಂದು ತಿಳಿದು ಬೈದನು ಮತ್ತು ನಿನ್ನ ಕಾರಣ ನನಗೆ ಗಲ್ಲು ಶಿಕ್ಷೆ ನೀಡುವರೆಂದು ಹೇಳಿದನು. ಒಬ್ಬಳು ಹೆಂಗಸು ನಿಮ್ಮ ಅತ್ತೆ ಎಂದು ಹೇಳಿ ಬಂದಿದ್ದಳು. ಅವಳು ನನ್ನ ದೇಹದ ಚಿಹ್ನೆಯನ್ನು ನೋಡಿದಳು ಹಾಗೂ ಆ ಚೂರಿ ಮತ್ತು ಪೇಟ ಕಳುವು ಮಾಡಿದಳು. ಚಾಪ ಸಿಂಗ್ ಹೇಳಿದ ಶೇರಖಾನ್ ಬಂದಿದ್ದನು. ಅವನೇ ಇದೆಲ್ಲಾ ಷಡ್ಯಂತ್ರ ರಚಿಸಿದ್ದಾನೆ. ಚಾಪ ಸಿಂಗ್ ಮರಳಿ ಹೋದನು.

ಗಲ್ಲು ಶಿಕ್ಷೆಯ ಒಂದು ವಾರ ಮೊದಲು ಸೋಮವತಿಯು ನರ್ತಕಿಯ ವೇಷದಲ್ಲಿ ರಾಜನ ನಗರದಲ್ಲಿ ಬಂದಳು, ತಾನು ನೃತ್ಯ ಮಾಡಬೇಕೆಂದೂ, ತಾವು ಅದನ್ನು ನೋಡಬೇಕೆಂದೂ ವಿನಂತಿಸಿಕೊಂಡಳು. ಅದಕ್ಕೆ ರಾಜನು ಸಮ್ಮತಿಸಿದನು. ಆಗ ಶೇರ್‌ಖಾನ್ ಸಹ ಇದ್ದನು. ನೃತ್ಯವಾದ ನಂತರ ರಾಜನು ಪ್ರಸನ್ನಗೊಂಡು 'ಏನು ಬೇಕು' ಎಂದು ನರ್ತಕಿಗೆ ಕೇಳಿದನು. ಆಗ ಅವಳು "ಮೊದಲು ನೀವು ಮಾತು ಕೊಡಿ, ಆ ನಂತರ ನಾನು ಕೇಳುತ್ತೇನೆ" ಎಂದಳು. ಆಗ ಆ ರಾಜನು ಈ ರಾಜ್ಯವೊಂದನ್ನು ಬಿಟ್ಟು ಏನನ್ನು ಕೇಳಿದರೂ ನಾನು ಕೊಡಲು ಸಿದ್ಧ ಎಂದನು. ಆಗ ನರ್ತಕಿಯು, ನಿಮ್ಮ ಸಭೆಯಲ್ಲಿ ನನ್ನ ಕಳ್ಳನಿದ್ದಾನೆ. ನನ್ನ ಮನೆಯಿಂದ ಕದ್ದು ತಂದಿದ್ದಾನೆ. ಅವನ ಹೆಸರು ಶೇರ್‌ಖಾನ್. ಅವನಿಗೆ ಮರಣದಂಡನೆ ನೀಡಬೇಕು' ಎಂದಳು. ಆಗ ರಾಜನು ಶೇರ್‌ಖಾನ್‌ನಿಗೆ ನಿಜಾಂಶದ ಬಗ್ಗೆ ಕೇಳಿದನು. ಆಗ ಶೇರ್‌ಖಾನ್, ಮಹಾರಾಜರೇ, ಇದೆಲ್ಲಾ ಸುಳ್ಳು, ನಾನು ಈ ಸ್ತ್ರೀಯ ಮುಖವನ್ನೇ ನೋಡಿಲ್ಲ. ಆಗ ಸೋಮಮತಿ ಹೇಳಿದಳು ಒಂದು ವೇಳೆ ನೀವು ಇಂದಿನ ತನಕ ನನ್ನ ಮುಖವನ್ನು ನೋಡದಿದ್ದರೆ ಈ ಚೂರಿ ಮತ್ತು ಪೇಟ ಯಾರ ಮನೆಯಿಂದ ತಂದಿರುವೆ? ನಾನು ಆ ಚಾಪ ಸಿಂಗ್‌ನ ಪತಿವ್ರತೆ ಪತ್ನಿ, ನಿನ್ನ ಒಂದು ಸುಳ್ಳಿನ ಕಾರಣ ನನ್ನ ಪತಿಗೆ ಗಲ್ಲು ಶಿಕ್ಷೆ ನೀಡಲಾಗುತ್ತಿದೆ. ಆಗ ಚಾಪಸಿಂಗ್‌ನನ್ನು ಕರೆಯಲಾಯ್ತು. ರಾಜನು ಚಾಪಸಿಂಗ್‌ಗೆ ತನ್ನ ಅರ್ಧರಾಜ್ಯವನ್ನು ನೀಡಿದನು ಹಾಗೂ ಮಂತ್ರಿಗೆ ಗಲ್ಲು ಶಿಕ್ಷೆ ವಿಧಿಸಿದನು. ಇಂಥಾ ನಾರಿಯರ ಮೇಲೆ ಭಾರತಕ್ಕೆ ಹೆಮ್ಮೆ ಇದೆ.

ಗರೀಬ್ ದಾಸರಿಗೆ ಪರಮೇಶ್ವರ ಕಬೀರರು ಹೇಳಿದ್ದರೆನೆಂದರೆ:–

ತುರಾ ನ ತೀಖಾ ಕೂದ್‌ನಾ, ಪುರುಷ್ ನಹೀಂ ರಣಧೀರ್ ।
ನಹೀಂ ಪದ್‌ಮನೀ ನಗರ್ ಮೆಂ, ಯಾ ಮೋಟೀ ತಕಸೀರ್ ॥

**ಭಾವಾರ್ಥ:–** ಕಬೀರರು ಹೇಳಿದ್ದಾರೆ, ಹೇ ಗರೀಬ್‌ದಾಸ್, ಯಾವ ದೇಶದಲ್ಲಿ, ಯಾವ

ಊರಿನಲ್ಲಿ ವೇಗವಾಗಿ ಓಡುವ ಮತ್ತು ಎತ್ತರ ಜಿಗಿಯುವ ತುರಾ ಅಂದರೆ ಕುದುರೆಗಳಿಲ್ಲವೋ ಮತ್ತು ನಾಗರಿಕರು (ರಣಧೀರ್) ಶೂರ ವೀರನಾಗಿರುವುದಿಲ್ಲವೋ ಮತ್ತು ಯಾವ ದೇಶ ಮತ್ತು ನಗರದಲ್ಲಿ ಪದ್‌ಮನೀ ಅಂದರೆ ಪತಿವ್ರತಾ ಸ್ತ್ರೀಯರಿರುವುದಿಲ್ಲವೋ ಇದೊಂದು ಬಹಳ ದೊಡ್ಡ ತಪ್ಪು ಅಂದರೆ ಕೊರತೆಯಾಗಿದೆ. ಈ ರೀತಿಯ ಚಾರಿತ್ರ್ಯವುಳ್ಳ ಸ್ತ್ರೀ–ಪುರುಷರಿರುವುದು ಅನಿವಾರ್ಯ.

❖ ವಿವಾಹದ ನಂತರ ಕೆಲವು ಹೆಣ್ಣುಮಕ್ಕಳು ಅತ್ತೆಯ ಮನೆಗೆ ಬಂದ ನಂತರ ತುಂಬಾ ಶೃಂಗಾರ ಮಾಡಿಕೊಳ್ಳುತ್ತಾರೆ. ಬೀದಿಯಲ್ಲಿ ಸುತ್ತುತ್ತಾರೆ. ವಿಚಿತ್ರವಾಗಿ ವರ್ತಿಸುತ್ತಿರುತ್ತಾರೆ. ಅಸಹಜವಾಗಿ ವರ್ತಿಸುತ್ತಾ, ಹೊಳೆಯುವ, ಆಕರ್ಷಿಸುವ ವಸ್ತ್ರಗಳನ್ನು ತೊಟ್ಟು ಪೇಟೆಯಲ್ಲಿ ಅಥವಾ ಹೊಲದಲ್ಲಿ ಅಥವಾ ನೀರು ತರಲು ಬಾವಿಗೆ ಹೋಗುತ್ತಾರೆ. ಅವರ ಉದ್ದೇಶವೇನಿರುತ್ತದೆ? ಇದಂತೂ ಸ್ಪಷ್ಟ, ತನ್ನ ಪತಿಯ ವಿನಃ ಇನ್ನೂ ಅನ್ಯ ಪುರುಷರನ್ನು ಆಕರ್ಷಿಸುವುದೇ ಆಗಿದೆ. ತನ್ನ ಸೌಂದರ್ಯ ಹಾಗೂ ವೈಭವದ ಪ್ರದರ್ಶನವು ಒಬ್ಬ ಒಳ್ಳೆಯ ಮಗಳ, ಒಳ್ಳೆಯ ಸೊಸೆಯ ಲಕ್ಷಣವಲ್ಲ. ಕೇವಲ ಪತಿಯನ್ನು ಆಕರ್ಷಿಸಲು ಆ ರೀತಿ ಮಾಡಿದರೆ, ಅದೆಲ್ಲಾ ಮನೆಯವರೆಗೆ ಸೀಮಿತವಾಗಿದ್ದರೆ ಒಳ್ಳೆಯದು. ಆದರೆ ಇಂಥ ಲಕ್ಷಣ ಮನದಲ್ಲಿ ದೋಷದ ಪ್ರತಿಕವಾಗಿರುತ್ತದೆ.

ಎಷ್ಟೇ ಬೆಲೆ ಬಾಳುವುದಿದ್ದರೂ, ಎಷ್ಟೇ ಕಡಿಮೆ ಬೆಲೆಯದ್ದಾದರೂ ಸರಿ, ಸಾಧಾರಣ ವಸ್ತ್ರವನ್ನು ತೊಡಬೇಕು. ಹೆಣ್ಣು ಮಕ್ಕಳ ದೃಷ್ಟಿ ಕೇವಲ 12 ಅಡಿಯವರೆಗಿದ್ದರೆ ಸಾಕು, ನಡೆಯುವಾಗ, ಕೂತಾಗ, ಎದ್ದಾಗ, ಯಾರಿಗೂ ಉತ್ತೇಜನ ಬರುವಂತೆ ವರ್ತಿಸಬಾರದೆಂದು ಗಮನ ಹರಿಸಬೇಕು. ಹೆಣ್ಣಿನ ತಪ್ಪು ವರ್ತನೆಯಿಂದ ದುಷ್ಟ ವ್ಯಕ್ತಿಗಳಿಗೆ ಇನ್ನೂ ಧೈರ್ಯ ಬರುತ್ತದೆ. ಅವರು ತೊಂದರೆ ಕೊಡುತ್ತಾರೆ. ಮಹಿಳೆಯು ಜೋರಾಗಿ ನುಗು–ನಗುತ್ತಾ ಮಾತಾಡುವುದು ಉತ್ತೇಜನ ಮತ್ತು ಅಸಭ್ಯವಾಗಿರುತ್ತದೆ. ಹೇಗೆ ಮಗಳು, ಸೊಸೆ ಅಂದರೆ ಯುವತಿ ತನ್ನ ಕುಟುಂಬದೊಂದಿಗೆ ಇರುತ್ತಾಳೆ ಅದೇ ರೀತಿಯ ಆಚರಣೆ ಮನೆಯಿಂದ ಹೊರಗೆ ಮಾಡಬೇಕು. ಸಭ್ಯ ಸಮಾಜ ಅವಳ ಪ್ರಶಂಸನೆ ಮಾಡುತ್ತದೆ. ಅನ್ಯರಿಗೆ ಅವಳ ಉದಾಹರಣೆ ನೀಡುತ್ತಾರೆ. ಪೆಟ್ರೋಲಿಗೆ ಬೆಂಕಿ ಕಿಡಿ ಸಿಗದಿದ್ದರೆ, ಅದು ಸ್ಫೋಟಿಸಲು ಹೇಗೆ ಸಾಧ್ಯ?

❖ ಮೇಲೆ ಹೇಳಿದ ಉದಾಹರಣೆಯಿಂದ ತಿಳಿಯುವುದೇನೆಂದರೆ, ಇದಕ್ಕೆ ವಿರುದ್ಧವಾಗೇನಾದರೂ ಜರುಗಿದರೆ ಸಮಾಜಕ್ಕೆ ಬೆಂಕಿ ಇಟ್ಟಂತೆ. ಈ ಉದಾಹರಣೆಯು ಸಮಾಜದ ಎಲ್ಲಾ ಯುವಕ ಯುವತಿಯರಿಗೆ ಅನ್ವಯಿಸುತ್ತದೆ.

ಯೌವ್ವನವು ಮದ್ದುಗುಂಡಿದ್ದಂತೆ. ಯಾರಾದರೂ ಕಿಡಿ ಹೊತ್ತಿಸಿದರೆ, ಸರ್ವನಾಶವಾಗುವುದು. ಕಿಡಿ ಹೊತ್ತಿಸದಿದ್ದರೆ ಎಷ್ಟೋ ವರ್ಷಗಳವರೆಗೆ ಸುರಕ್ಷಿತವಾಗಿರುತ್ತದೆ.

❖ ಎಲ್ಲಾ ಪುರುಷರು ತಮ್ಮ ಅಕ್ಕ, ತಂಗಿ, ಮಗಳು, ಸೊಸೆ, ಹೆಂಡತಿ ಪತಿವ್ರತೆಯಾಗಿರಲಿ ಎಂದು ಆಶಿಸುತ್ತಾರೆ. ಅವರ ಮನೆತನ ಚೆನ್ನಾಗಿಲ್ಲ ಎಂದು ಯಾರೂ ಹೇಳದಂತೆ.

❖ ಎಂದಾದರೂ ಒಬ್ಬಳು ಹುಡುಗಿಯನ್ನು ನೋಡಿ, ಕೆಟ್ಟ ಆಸೆ ಬಂತೆಂದರೆ, ತಕ್ಷಣ ನಾವು ಯೋಚಿಸಬೇಕು. ನಮ್ಮ ತಾಯಿ, ಅಕ್ಕ, ತಂಗಿ, ಮಗಳು, ಸೊಸೆಯರ ವಿಷಯದಲ್ಲಿ ಇನ್ಯಾರಾದರೂ ಕೆಟ್ಟ ದೃಷ್ಟಿಯಿಂದ ನೋಡಿದರೆ, ಅವರನ್ನು ಕೆಣಕಿದರೆ, ಅವರ ಜೊತೆ ದುಷ್ಟತನ ಮಾಡುವ ಉದ್ದೇಶದಿಂದ ಅಸಭ್ಯವಾಗಿ ವರ್ತಿಸಿದರೆ (ವ್ಯಂಗ್ಯ ನುಡಿದು ತನ್ನ ಕೆಟ್ಟ ವಿಚಾರಗಳನ್ನು ಪ್ರಕಟಿಸುವುದು, ತಪ್ಪು ಸಂಕೇತವನ್ನು ಮಾಡುವುದು, ಕಣ್ಣು ಹೊಡೆಯುವುದು, ವಕ್ರ ದೃಷ್ಟಿಯಿಂದ ನೋಡುವುದು. ಇಂಥ ತಪ್ಪು ವರ್ತನೆ) ಮಾಡಿದರೆ ಹೇಗಾಗುತ್ತದೆ. ಆಗ ಅವರ ಕೈ ಕಾಲು ಮುರಿಯಬೇಕೆನ್ನಿಸುತ್ತದೆ ಎನ್ನುವುದಂತೂ ಸತ್ಯ. ಯಾರು ದುರ್ಬಲರೋ, ಅವರು ಒಂದು ಮೂಲೆಯಲ್ಲಿ ಕುಳಿತು ಅಳುತ್ತಾರೆ. ಚಿಂತಿಸಬೇಕಾದ ವಿಷಯವೆಂದರೆ:–

ಜೈಸಾ ದರ್ದ್ ಅಪನೆ ಹೋವೆ, ಏಸಾ ಜಾನ್ ಬಿರಾನ್ಯೆ ।
ಜೋ ಅಪನ್ಯೆ ಸೋ ಔರ್ ಕೈ, ಏಕೈ ಪೀಡ್ ಪಿಛಾನ್ಯೆ ॥

ಕಬೀರ್, ಪರನಾರೀ ಕೋ ದೇಖಿಯೆ, ಬಹನ್–ಬೇಟೀ ಕೇ ಭಾವ್ ।
ಕಹ್ ಕಬೀರ್ ಕಾಮ್ (Sex) ನಾಶ್ ಕಾ, ಯಹೀ ಸಹಜ್ ಉಪಾಯ್ ॥

**ಪರಮೇಶ್ವರ ಕಬೀರರು ಇದಕ್ಕೆ ಉಪಾಯವನ್ನು ತಿಳಿಸಿದ್ದಾರೆ:–**

**ಲೈಂಗಿಕ ಕಿರುಕುಳದ ಪ್ರೇರಕಗಳು:–** ಸಿನೆಮಾಗಳಲ್ಲಿ ನಕಲೀ, ಸುಳ್ಳು ಕಥೆಗಳನ್ನು ಹಾಗೂ ವರ್ತನೆ ತೋರಿಸಲಾಗುತ್ತದೆ. ಅದನ್ನು ನೋಡಿ ಯುವ ಜನರು ಅದರ ನಕಲು ಮಾಡಿ ನಾಚಿಕೆ ಬಿಟ್ಟು ವರ್ತಿಸುತ್ತಾರೆ. ಸಿನೆಮಾಗಳಲ್ಲಿ ತೋರಿಸುವಂಥಾ ವರ್ತನೆಗಳನ್ನು ಮನೆಯಲ್ಲಾಗಲೀ, ಯಾವುದೇ ಊರಿನಲ್ಲಾಗಲೀ, ಸಭ್ಯ ಸಮಾಜದಲ್ಲಾಗಲಿ ಮಾಡಬಾರದು. ಅದನ್ನು ನೋಡುವ ಉದ್ದೇಶವಾದರೂ ಏನು? ಏನು ಇಲ್ಲ. ಬರೀ ಮನೋರಂಜನೆ. ಆ ಮನೋರಂಜನೆ ಸಮಾಜದ ನಾಶದ ಮೂಲ ಕಾರಣವಾಗಿದೆ. ಆದ್ದರಿಂದ ನನ್ನ(ಲೇಖಕನ) ಅನುಯಾಯಿಗಳು ಸಿನೆಮಾವನ್ನು ನೋಡುವುದಿಲ್ಲ. ಅಶ್ಲೀಲ ಹಾಡು, ಸಿನೆಮಾ ಹಾಡು, ನಾಟಕ ಹಾಗೂ ಅಶ್ಲೀಲವಾದ ಚರ್ಚೆಯನ್ನು ಕೇವಲ ಅಯೋಗ್ಯ ಯುವ ಜನರು ಮಾಡುತ್ತಾರೆ. ಅವರ ಸಹವಾಸದಿಂದ ಒಳ್ಳೆಯ ಯುವ ಜನರೂ ಸಹ ಕೆಟ್ಟು ಹೋಗುತ್ತಾರೆ. ಕಬೀರ್ ಪರಮೇಶ್ವರರು ಹೇಳುತ್ತಾರೆ:–

ಕಥಾ ಕರೋ ಕರ್ತಾರ್ ಕೀ, ಸುನೋ ಕಥಾ ಕರ್ತಾರ್ ।
ಕಾಮ್ (Sex) ಕಥಾ ಸುನೋಂ ನಹೀಂ, ಕಹ್ ಕಬೀರ್ ವಿಚಾರ್ ॥

**ಭಾವಾರ್ಥ:–** ಪರಮಾತ್ಮನ ಗುಣಗಾನ ಮಾಡು ಅಥವಾ ಎಲ್ಲಿ ಪರಮಾತ್ಮನ ಗುಣಗಾನ (ಕಥೆ) ಮಾಡಿ ಅಥವಾ ಎಲ್ಲಾದರೂ ಪರಮಾತ್ಮನ ಚರ್ಚೆ ನಡೆಯುತ್ತಿದ್ದರೆ ಅದನ್ನು ಕೇಳು. ಕಾಮ ಅಂದರೆ ಅಶ್ಲೀಲ ಚರ್ಚೆ ಎಂದಿಗೂ ಕೇಳ ಬೇಡ. ಇದನ್ನೇ ಕಬೀರ ಪರಮೇಶ್ವರರು ತಿಳಿಸಿದ್ದಾರೆ.

## "ವಿಶೇಷ ಮಂಥನ"

ಕಾಮ(**Sex**) ಪ್ರಕ್ರಿಯೆಯನ್ನು ವಿಶೇಷ ವಿವೇಕದಿಂದ ತಿಳಿಯೋಣ. ಪತಿ ಪತ್ನಿಯ ಮಿಲನಕ್ಕೆ ಸಮಾಜ ಮಾನ್ಯತೆ ನೀಡುತ್ತದೆ. ನೀವು ಪರಸ್ಪರ ನಿಮ್ಮ ಸಂತಾನವನ್ನು ಪಡೆಯಬಹುದೆಂದು ಸಮಾಜ ಒಪ್ಪಿಗೆ ನೀಡುತ್ತದೆ. ಎಲ್ಲರ ತಂದೆ–ತಾಯಿ ಸಂತಾನೋತ್ಪತ್ತಿಯ ಪ್ರಕ್ರಿಯೆಯನ್ನು ಮಾಡಿದ್ದಾರೆ ಅದನ್ನು ಸಂಭೋಗವೆಂದು ಕರೆಯುತ್ತಾರೆ. ಇದರಿಂದ ನಮ್ಮ ಮತ್ತು ನಮ್ಮ ಸಹೋದರ–ಸಹೋದರಿಯರ ಜನ್ಮವಾಗಿದೆ. ಈ ಪ್ರಕ್ರಿಯೆಯು ಎಷ್ಟು ಪವಿತ್ರವಾದದ್ದು ಎಂದು ಯೋಚಿಸಿ. ಇದರಿಂದಲೇ ನಮಗೆ ಅಮೂಲ್ಯವಾದ ಮಾನವ ಶರೀರವು ಲಭ್ಯವಾಗಿದೆ. ಒಬ್ಬರು ಡಾಕ್ಟರ್ ಆದರೆ, ಒಬ್ಬರು ಸೈನಿಕ. ಇನ್ನೊಬ್ಬರು ಮಂತ್ರಿಯಾದರೆ, ಮತ್ತೊಬ್ಬರು ಇಂಜಿನಿಯರ್, ಯಾರೋ ರೈತನಾಗಿ ಅವನು ಎಲ್ಲರಿಗೂ ಅನ್ನ ಕೊಟ್ಟರೆ, ಇನ್ಯಾರೋ ಕಾರ್ಮಿಕನಾಗಿ ನಮಗೆ ಮನೆ ಕಟ್ಟಿಕೊಟ್ಟಿದ್ದಾನೆ. ಮಾನವ ಶರೀರ ಪಡೆದ ನಾವು ಭಕ್ತಿ, ದಾನ, ಧರ್ಮದ ಕರ್ಮಮಾಡಿ ನಮ್ಮ ಕಲ್ಯಾಣ ಮಾಡಿಕೊಳ್ಳಬಹುದು. ಸಂಭೋಗ ಕ್ರಿಯೆ ಇದಾಗಿದೆ. ಇದನ್ನು ಎಷ್ಟೇ ಕೆಟ್ಟದಾಗಿ ಹೇಳಿದರೂ, ಹಾಡು ಹಾಡಿ, ಸಿನೆಮಾ ಹಾಡು ಹಾಡಿ ಕೆಟ್ಟದಾಗಿ ನೋಡಿದರೂ ಮಾತು ಇಷ್ಟೇ. ಇದನ್ನು ಮರೆಯಲ್ಲಿ ಮಾಡಿದರೆ ಸಭ್ಯತೆ. ಪಶು ಪಕ್ಷಿಗಳೂ ಸಹ ಪ್ರಜನನ ಕಾರ್ಯದಲ್ಲಿ ತೊಡಗುತ್ತವೆ. ಅವುಗಳಿಗೆ ಯಾವುದೇ ಮುಚ್ಚುಮರೆ ಇಲ್ಲ ಅದು ನಮಗೆ ಒಳ್ಳೆಯದನ್ನಿಸುವುದಿಲ್ಲ. ಆದರೆ ಮನುಷ್ಯ ಸಭ್ಯ ಜೀವಿ. ಹಾಗಾಗಿ ಪರದೆಯಲ್ಲಿ ಹಾಗೂ ಮರ್ಯಾದೆಯಲ್ಲಿದ್ದೂ ಸಭ್ಯತೆ ಕಾಪಾಡಿಕೊಳ್ಳುವುದು ಅನಿವಾರ್ಯ.

ಮೇಲಿನ ವಿಷಯ ಓದಿದ ಮೇಲೆ ನಿಮಗೆ ಯಾರ ತಂಗಿ, ಮಗಳು ಸೊಸೆಯನ್ನು ನೋಡಿದರೂ ಅಶ್ಲೀಲ ವಿಚಾರ ಬರಲಿಕ್ಕಿಲ್ಲ. ಇದೇ ಕ್ರಿಯೆಯನ್ನು ಅಜ್ಜಿ–ತಾತ ಮಾಡಿದರು, ಇದರಿಂದ ನಮ್ಮ ತಂದೆಯ ಜನ್ಮವಾಯಿತು. ಹಾಗೇ ನಮ್ಮ ತಾಯಿಯ ಜನ್ಮವಾಯಿತು. ಹಾಗೆಯೇ ನಮ್ಮ ತಂದೆ ತಾಯಿಯಿಂದ ನಮ್ಮ ಜನ್ಮವಾಯಿತು. ನಮ್ಮನ್ನು ಅವರು ಬೆಳೆಸಿದರು. ಎಷ್ಟು ಒಳ್ಳೆಯವರು ನಮ್ಮ ತಾಯಿ ತಂದೆ ಅವರ ಉತ್ಪತ್ತಿ ಕೂಡಾ ಕಾಮಕ್ರಿಯೆಯಿಂದ ಆಯಿತು. ಇದು ಅಶ್ಲೀಲವೇ? ಆದರೆ ಕೆಟ್ಟ ಜನರು ಇದನ್ನು ಅಶ್ಲೀಲವಾಗಿ ತೋರಿಸಿ ಅಶ್ಲೀಲ ಬಣ್ಣ ಕೊಟ್ಟು ಸಮಾಜದಲ್ಲಿ ಬೆಂಕಿ ಹಚ್ಚುತ್ತಾರೆ.

❖ ದೇಶದ ಸಂವಿಧಾನದಲ್ಲಿ ಬರೆಯಲಾಗಿದೆ ಏನೆಂದರೆ ಯಾರೋ ಒಬ್ಬ ಪುರುಷ ಒಬ್ಬಳು ಸ್ತ್ರೀಯನ್ನು ರೇಗಿಸಿದರೆ ಅವನಿಗೆ ಮೂರು ವರ್ಷ ಶಿಕ್ಷೆ ನೀಡಲಾಗುತ್ತದೆ. ಪರಸ್ತ್ರೀಯ ಮೇಲೆ ಅತ್ಯಾಚಾರ ಮಾಡಿದರೆ ಅವನಿಗೆ ಹತ್ತು ವರ್ಷ ಶಿಕ್ಷೆ ನೀಡಲಾಗುತ್ತದೆ. ಕಾನೂನಿನ ಅರಿವಿದ್ದರೆ ಮನುಷ್ಯ ಕೆಟ್ಟತನ ಮತ್ತು ದುರಾಚಾರಕ್ಕೆ ಭಯಗೊಳ್ಳುತ್ತಾನೆ. ಕಾನೂನಿನ ಜ್ಞಾನವಿರುವುದು ಅವಶ್ಯಕವಾಗಿದೆ. ಈ ರೀತಿಯ ಪಾಪಗಳನ್ನು ಕಾಲಬ್ರಹ್ಮನು ಮಾಡಿಸುತ್ತಾನೆ. ಕಾಲಬ್ರಹ್ಮ ಯಾರು? ಎಂದು ಇದೆ ಪುಸ್ತಕದ "ಸೃಷ್ಟಿ ರಚನೆ" ಅಧ್ಯಾಯದಲ್ಲಿ ಓದಿ.

❖ ಸಿನೆಮಾ ನೋಡಬಾರದು:– ಸಿನೆಮಾ ಒಂದು ಸುಳ್ಳಿನಿಂದ ಹೆಣೆದ ಕತೆಯಾಗಿರುತ್ತದೆ. ಅದನ್ನು ನೋಡುತ್ತಾ ನಾವು ಸಮಯವನ್ನೇ ಮರೆತು ಬಿಡುತ್ತೇವೆ. ನಟರು ತಮ್ಮ ಹೊಟ್ಟೆ ಹೊರೆಯಲು ನಟಿಸುತ್ತಾರೆ. ಇತ್ತೀಚೆಗೆ ಒಂದು ಸಿನಿಮಾಗೆ ಕೋಟಿಗಟ್ಟಲೆ ಹಣ ಪಡೆಯುತ್ತಾರೆ. ಮುಗ್ಧ ಯುವಕರು ವಿವೇಕ ಮರೆತು ಅವರ ಅಭಿಮಾನಿಗಳಾಗುತ್ತಾರೆ. ಅವರು ತಮ್ಮ ವ್ಯಾಪಾರ ಮಾಡಿಕೊಳ್ಳುತ್ತಾರೆ. ನೀವು ಮೂರ್ಖರಾಗಿ ಸಿನೆಮಾ ನೋಡುತ್ತಾ ಹಣವನ್ನು ಕಳೆದುಕೊಳ್ಳುತ್ತೀರಿ. ನೀವು ಯಾವ ನಾಯಕ ನಟ ನಟಿಯರ ಅಭಿಮಾನಿಗಳಾಗುತ್ತೀರೋ ಅವರ ಮನೆಗೊಮ್ಮೆ ಹೋಗಿ ನೋಡಿ ಕಾಫಿ ಟೀ ಮಾತಿರಲಿ, ಅವರು ನಿಮಗೆ ಒಂದು ಲೋಟ ನೀರನ್ನೂ ಕುಡಿಸುವುದಿಲ್ಲ. ಯೋಚಿಸಿ ನೋಡಿ, ನಾನು ಲಾಡು ತಿನ್ನುತ್ತಿದ್ದೇನೆ, ನೀವು ನೋಡುತ್ತಿದ್ದೀರಿ, ಎಷ್ಟು ಸ್ಟೈಲಾಗಿ ಲಾಡು ತಿನ್ನುತ್ತಿದ್ದಾನೆ ಎಂದು ನೀವು ಹೇಳುವಿರಿ. ಆದರೆ ನಿಮಗೇನು ಸಿಕ್ಕಿತು? ಇದೇ ಪರಿಸ್ಥಿತಿ ಸಿನೆಮಾ ನಟ ಹಾಗೂ ದರ್ಶಕರದ್ದಾಗಿರುತ್ತದೆ.

❖ ನಮ್ಮ ಯೋಚನೆ ಬದಲಿಸಿಕೊಳ್ಳಬೇಕು:–

➢ ನಾವು ಅಶ್ಲೀಲ ಮೂರ್ತಿಯನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಕೆಟ್ಟತನ ಹುಟ್ಟುತ್ತದೆ. ಏಕೆಂದರೆ ಉತ್ತೇಜಿಸುವ ಮೂರ್ತಿಯು ನಮ್ಮ ಒಳಗಿರುವ ಕಿಡಿಯನ್ನು ಹೊತ್ತಿಸುತ್ತದೆ. ಆದ್ದರಿಂದ ಅಂಥಾ ಚಿತ್ರಗಳನ್ನು, ಮೂರ್ತಿಗಳನ್ನು ನೋಡಬಾರದು.

➢ ನಾವು ದೇಶಭಕ್ತರ ಜೀವನ ಚರಿತ್ರೆ ಓದಿದಾಗ, ಅವರ ಚಿತ್ರಗಳನ್ನು ನೋಡಿದಾಗ ನಮ್ಮ ಒಳಗಿರುವ ದೇಶಭಕ್ತಿಗೆ ಪ್ರೇರಣೆ ಸಿಗುವುದು, ಅಂಥಾ ಚಿತ್ರಗಳನ್ನು ಮನೆಯಲ್ಲಿಟ್ಟುಕೊಂಡರೆ ಯಾವುದೇ ಹಾನಿಯಾಗುವುದಿಲ್ಲ.

➢ ಒಂದು ವೇಳೆ ನಾವು ಸಾಧು–ಸಂತ–ಫಕೀರ ಮತ್ತು ಒಳ್ಳೆಯ ಚಾರಿತ್ರ್ಯವುಳ್ಳ ನಾಗರೀಕರ ಜೀವನ ಚರಿತ್ರೆಯನ್ನು ಓದಿದಾಗ–ಕೇಳಿದಾಗ ನಮ್ಮ ಎಲ್ಲ ದೋಷಗಳು ಶಾಂತವಾಗಿ ನಾವು ಒಳ್ಳೆಯ ನಾಗರೀಕರಾಗಲು ಪ್ರಯತ್ನಿಸುತ್ತೇವೆ. ಆದ್ದರಿಂದ ನಮಗೆ ಸಂತರ ಮತ್ತು ಸತ್ಸಂಗದ ಅವಶ್ಯಕತೆ ಇದೆ. ಅಲ್ಲಿ ಒಳ್ಳೆಯ ವಿಚಾರಗಳನ್ನು ಹೇಳಲಾಗುತ್ತದೆ.

➢ ನಾವು ನಮ್ಮ ಚಿಕ್ಕ ಮಗಳಿಗೆ ಸ್ನಾನ ಮಾಡಿಸುತ್ತೇವೆ, ಬಟ್ಟೆ ತೊಡಿಸುತ್ತೇವೆ. ಈ ರೀತಿ ಎಲ್ಲರೂ ಮಾಡುತ್ತಾರೆ. ಅದೇ ಮಗಳು ಅವಳ ಮದುವೆಯ ನಂತರ ಅವಳು ಅತ್ತೆಯ ಮನೆಗೆ ತೆರಳುತ್ತಾಳೆ. ಹಾಗೆಯೇ ಬೇರೆಯವರ ಮಗಳು ನಮ್ಮ ಮನೆಗೆ ಸೊಸೆಯಾಗಿ ಬರುತ್ತಾಳೆ. ಇದರಲ್ಲಿ ಹೊಸದೇನಿದೆ? ಎಂದು ಶುದ್ಧ ಮನಸ್ಸಿನಿಂದ ಯೋಚಿಸಿದಾಗ ವಿವೇಕವುಂಟಾಗುತ್ತದೆ. ಈ ರೀತಿ ಮಾಡುವುದರಿಂದ ಕೆಟ್ಟ ವಿಚಾರಗಳು ನಾಶವಾಗುತ್ತವೆ. ಸಾಧು ಭಾವನೆ ಉತ್ಪನ್ನವಾಗುತ್ತದೆ.

➢ ಸಮಾಚಾರ ಪತ್ರಿಕೆಗಳಲ್ಲೂ ಎಷ್ಟೊಂದು ಅಶ್ಲೀಲ ಚಿತ್ರಗಳನ್ನು ಪ್ರಕಟಿಸುತ್ತಾರೆಂದರೆ ಯುವ ಜನತೆ ತಪ್ಪುದಾರಿಗಿಳಿಯುತ್ತಾರೆ. ಕೆಲವು ಬಟ್ಟೆಗಳ ಪ್ರಸಿದ್ಧಿಗಾಗಿ ಕೆಲ ಹುಡುಗಿಯರು ಕೇವಲ ಅಂಡರವಿಯರ್ ಹಾಗೂ ಬ್ರೇಜಿಯರ್ ಧರಿಸುತ್ತಾರೆ ಇದು ತಪ್ಪು. ಇದೇ ರೀತಿ ಪುರುಷರೂ ಅಂಡರವಿಯರ್ ಪ್ರಸಿದ್ಧಿಗಾಗಿ ಕೇವಲ ಅಂಡರವಿಯರ್ ಧರಿಸಿ ನಿಂತಿರುತ್ತಾರೆ ಇದು ಬಹಳ ನೀಚತೆಯ ಪ್ರತೀಕವಾಗಿದೆ. ಇದನ್ನೆಲ್ಲಾ ಮೊದಲು ನಿಷೇಧಿಸಬೇಕು. ಇದಕ್ಕೆಲ್ಲ ಸಭ್ಯ ಸಂಘಟನೆಯ ಅವಶ್ಯಕತೆ ಇದೆ. ಅವರು ಸಂವಿಧಾನಿಕ ರೀತಿಯಲ್ಲಿ ಈ ಪ್ರಕಾರದ ಅಶ್ಲೀಲತೆಯನ್ನು ನಿಲ್ಲಿಸಲು

ಹೊರಾಡಬೇಕು ಮತ್ತು ಮನುಷ್ಯನನ್ನು ಚಾರಿತ್ರ್ಯವಂತೆ ಹಾಗೂ ಒಳ್ಳೆಯ ವ್ಯಕ್ತಿಯಾಗಿ ಮಾಡಲು ಒಳ್ಳೆಯ ಪುಸ್ತಕಗಳನ್ನು ಓದಲು ಪ್ರೇರೇಪಿಸಬೇಕು. ಸತ್ಸಂಗಗಳನ್ನು ಏರ್ಪಡಿಸಬೇಕು.

➢ ಒಳ್ಳೆಯ ವಿಚಾರಗಳನ್ನು ಕೇಳುವ ಮಕ್ಕಳು ಸಂಯಮದಿಂದಿರುತ್ತಾರೆ. ಕೆಲ ಯುವತಿಯರ ಗಂಡಂದಿರು ವಿವಾಹವಾದ ಕೆಲ ದಿನಗಳಲ್ಲೇ ಸೈನ್ಯದಲ್ಲಿ ತನ್ನ ಡ್ಯೂಟಿಗೆ ಹೋಗುತ್ತಾರೆ. **8–10** ತಿಂಗಳು ಬರುವುದಿಲ್ಲ. ಇನ್ನೂ ಕೆಲ ಯುವತಿಯರ ಗಂಡಂದಿರು ಕೆಲಸಕ್ಕಾಗಿ ವಿದೇಶಕ್ಕೆ ತೆರಳುತ್ತಾರೆ. **2–3** ವರ್ಷಗಳವರೆಗೂ ಬರುವುದಿಲ್ಲ. ಇವರೆಲ್ಲಾ ಸಂಯಮದಿಂದಲೇ ಇರುತ್ತಾರೆ. ಯಾವುದೇ ಪರ ಪುರುಷನನ್ನು ಕನಸಿನಲ್ಲೂ ನೆನಪಿಸಿಕೊಳ್ಳುವುದಿಲ್ಲ. ಇವರೆಲ್ಲಾ ಉತ್ತಮ ಮನೆತನದ ಹೆಣ್ಣು ಮಕ್ಕಳು. ಪುರುಷರೂ ಸಹ ಅಷ್ಟು ದಿನ ಸಂಯಮದಿಂದಿರುತ್ತಾರೆ. ಇವರು ಒಳ್ಳೆಯ ಮನೆತನದ ಮಕ್ಕಳು. ಇನ್ನು ಕೆಲವು ಪೋಕರಿಗಳು ಆಕಡೆ–ಇಕಡೆ ನೋಡುತ್ತಿರುತ್ತವೆ. ತಲೆಯ ಕೂದಲನ್ನು ಹೊಸ ಸ್ಟೈಲಿನಲ್ಲಿ ಕಟಿಂಗ್ ಮಾಡಿಸಿಕೊಂಡು, ಕೂಲಿಂಗ್ ಗ್ಲಾಸ್ ಹಾಕಿಕೊಂಡು ನಾಯಿಗಳಂತೆ ಗಲ್ಲಿ–ಗಲ್ಲಿ ಸುತ್ತುತ್ತಿರುತ್ತಾರೆ. ಅವರು ದುಷ್ಟರಿರುತ್ತಾರೆ. ಅವರು ಯಾವುದೋ ಕೆಟ್ಟ ಕೆಲಸ ಮಾಡಿ ಇಡೀ ಮನೆಯನ್ನು ಹಾಳು ಮಾಡುತ್ತಾರೆ. ಯಾರದೋ ಅಕ್ಕ ತಂಗಿಯರನ್ನು ರೇಗಿಸುತ್ತಾರೆ, ಇದರಿಂದ ಜಗಳಗಳಾಗುತ್ತವೆ. ಜಗಳ ಕದನಗಳು ತಾರಕಕ್ಕೇರಿ ಕೊನೆಗೆ ಎಷ್ಟೋ ಸಾವುಗಳಾಗುತ್ತವೆ. ಇಂಥಹವರಿಂದ ಎರಡೂ ಮನೆಗಳು ನಾಶವಾಗುತ್ತವೆ. ಆದ್ದರಿಂದ ನಮ್ಮ ಮಕ್ಕಳನ್ನು ಬಾಲ್ಯದಿಂದಲೇ ಸತ್ಸಂಗಕ್ಕೆ ಕಳುಹಿಸಿ, ವಿಚಾರವಂತರನ್ನಾಗಿ ಹಾಗೂ ಚಾರಿತ್ರ್ಯವಂತರನ್ನಾಗಿ ಮಾಡಬೇಕು.

## "ಚಾರಿತ್ರ್ಯವಂತನ ಕತೆ"

ಶುಕದೇವ ಎಂಬ ಋಷಿ ಇದ್ದರು. ಅವರು ವೇದವ್ಯಾಸರ ಪುತ್ರರಾಗಿದ್ದರು. ಒಂದು ದಿನ ಅವರು ದೀಕ್ಷೆ ಪಡೆಯುವ ಉದ್ದೇಶದಿಂದ ಮಿಥಿಲೆಯ ಜನಕ ರಾಜನ ಬಳಿ ಬಂದರು. ಜನಕರಾಜನು ಶುಕದೇವನಿಗೆ ನಾಳೆ ಬೆಳಿಗ್ಗೆ ನಾಮದೀಕ್ಷೆ ನೀಡುವುದಾಗಿ ಹೇಳಿದನು. ಅವನಿಗೆ ಉಳಿದುಕೊಳ್ಳಲು ಬೇರೆ ವ್ಯವಸ್ಥೆ ಮಾಡಿದನು. ಅವರನ್ನು ಪರೀಕ್ಷಿಸಲು ಒಬ್ಬಳು ಸುಂದರ ಯುವತಿಯನ್ನು ಅವರ ಸೇವೆಗಾಗಿ ನೇಮಿಸಿದನು. ಆ ಯುವತಿಯು ಅವರ ಕಾಲಗಳ ಬಳಿ ಬಂದು ಕುಳಿತಳು. ಋಷಿಗಳು ಸಂಕೋಚದಿಂದ ತಮ್ಮ ಕಾಲನ್ನು ಮಡಚಿಕೊಂಡರು. ಯುವತಿಯೂ ಋಷಿಯ ಬಳಿ ಜರುಗಿದಾಗ ಅವರು ಎದ್ದು ನಿಂತರು. ನಂತರ ಹೀಗೆ ಹೇಳಿದರು. "ಹೇ ತಂಗಿ, ನೀನು ಒಳ್ಳೆಯ ಮನೆಯಿಂದ ಬಂದವಳಂತೆ ಕಾಣುತ್ತಿರುವೆ. ದಯಮಾಡಿ ಈ ಕೊಠಡಿಯಿಂದ ಹೊರಗಡೆ ಹೋಗು, ಇಲ್ಲದಿದ್ದರೆ ನಾನೇ, ಹೋಗುತ್ತೇನೆ" ಎಂದರು. ಆಗ ಆ ಯುವತಿಯು ಹೊರಟು ಹೋದಳು. ರಾಜ ಜನಕನ ಬಳಿ ಬಂದು ಎಲ್ಲವನ್ನು ವಿವರಿಸಿದರು, ಬೆಳಿಗ್ಗೆ ಜನಕರಾಜನು ಶುಕದೇವನಿಗೆ ಹೇಳಿದನು, "ನಿಮ್ಮನ್ನು ಭೇಟಿಯಾಗಲು ಒಬ್ಬಳು ಹುಡುಗಿ ಬಂದಿದ್ದಳು. ನೀವು ಅವಳನ್ನು ಅಂಗೀಕರಿಸದೆ ಸಂಯಮವನ್ನು ತೋರಿಸಿದಿರಿ. ನೀವೊಬ್ಬ ಸಂಯಮಿ ವ್ಯಕ್ತಿ. ನಿಮ್ಮ ತಂದೆ ತಾಯಿಯರು ಧನ್ಯರು" ಎಂದನು.

❖ ಕಬೀರ್ ಪರಮೇಶ್ವರರ ವಿಚಾರ ಇದಕ್ಕಿಂತ ಶ್ರೇಷ್ಠವಾಗಿದೆ. ಅವರು ಹೇಳುವುದೇನೆಂದರೆ, ಋಷಿ ಶುಕದೇವನು ಆತ್ಮಜ್ಞಾನಿಯಾಗಿರಲಿಲ್ಲ. ಏಕೆಂದರೆ ಆ ಸ್ತ್ರೀಯು ಶುಕದೇವನ ಹಾಸಿಗೆಯ ಬಳಿ ಕುಳಿತಾಗ ಶುಕದೇವ ಅವಳನ್ನು ಸ್ತ್ರೀ ಎಂದು ತಿಳಿದು ತನ್ನ ದೇಹವನ್ನು ಮುಟ್ಟಲು ಕೊಡಲಿಲ್ಲ, ಮತ್ತು ಎದ್ದು ನಿಂತು ಹೊರ ಹೋಗಲು ಸಿದ್ಧನಾದನು. ಇದರಿಂದ ಶುಕದೇವ ಋಷಿಗೆ ಆತ್ಮ ಜ್ಞಾನ ಇಲ್ಲವೆಂದು ಸ್ಪಷ್ಟವಾಯ್ತು. ವಿಚಾರ ಮಾಡಿ ಒಂದೊಮ್ಮೆ ಅದೇ ಆ ಸ್ತ್ರೀ ಹೆಣ್ಣಾಗದೇ ಪುರುಷನಾಗಿದ್ದಿದ್ದರೆ ಶುಕದೇವನು ಹಾಗೆ ಹೇಳುತ್ತಿದ್ದನೇ? ಅವನು ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದ ಹಾಗೂ ಮಂಚದಿಂದ ಎದ್ದು ನಿಲ್ಲುತ್ತಿರಲಿಲ್ಲ. ಮತ್ತು ಹೇಳುತ್ತಿದ್ದ "ಹೇ ಸಹೋದರ, ಒಂದೇ ಮಂಚವಿದೆ, ಇದರ ಮೇಲೆ ನೀನು ಮಲಗಿಕೋ, ನಾನು ನೆಲದ ಮೇಲೆ ಮಲಗಿಕೊಳ್ಳುತ್ತೇನೆ" ಎಂದು ಹೇಳುತ್ತಿದ್ದ. ಆ ಯುವಕನು ಸಭ್ಯನಾಗಿದ್ದರೆ, ಅವನು, "ಹೇ ಋಷಿಗಳೇ, ನೀವೇ ಮಂಚದ ಮೇಲೆ ಮಲಗಿಕೊಳ್ಳಿ, ನಾನು ನೆಲದ ಮೇಲೆ ಮಲಗಿಕೊಳ್ಳುತ್ತೇನೆ ಎನ್ನುತ್ತಿದ್ದ. ಹುಡುಗಿಯಾದ ಕಾರಣ ಶುಕದೇವರಿಗೆ ಕಾಮ ದೋಷದಿಂದ ಭಯವಾಗಿತ್ತು.

ಕಬೀರ ಪರಮೇಶ್ವರರು ಹೇಳಿದ್ದಾರೆ, ಸ್ತ್ರೀ ಮತ್ತು ಪುರುಷ ಆತ್ಮಗಳ ಮೇಲೆ ಎರಡು ವಸ್ತ್ರಗಳಿವೆ. ಗೀತೆಯ 2ನೇ ಅಧ್ಯಾಯದ 22ನೇ ಶ್ಲೋಕದಲ್ಲಿ ಹೇಳಿರುವಂತೆ "ಅರ್ಜುನ, ಜೀವಾತ್ಮವು ಒಂದು ಶರೀರವನ್ನು ತ್ಯಜಿಸಿ ಮತ್ತೊಂದು ಶರೀರವನ್ನು ಧಾರಣೆ ಮಾಡುತ್ತದೆ. ಅದನ್ನೇ ಮೃತ್ಯು ಎನ್ನುವರು. ಒಬ್ಬ ವ್ಯಕ್ತಿ ಹಳೆಯ ಬಟ್ಟೆ ಬಿಚ್ಚಿ ಹೊಸ ಬಟ್ಟೆ ತೊಡುವಂತೆ ಈ ಪ್ರಕ್ರಿಯೆ. ಆದ್ದರಿಂದ ಆತ್ಮ ತತ್ವವನ್ನು ಮೊದಲು ತಿಳಿ."

ಉದಾಹರಣೆ:– ಒಂದು ಹಳ್ಳಿಗೆ 1 ನಾಟಕ ಮಂಡಳಿ ಬಂದಿತು. ಕೆಲವು ದಿನಗಳು ನಾಟಕವಾಡಿದರು. ಹಳೆಯ ಕಾಲದಲ್ಲಿ ನಾಟಕದಲ್ಲಿ ಪುರುಷರೇ ಸ್ತ್ರೀಯರ ಪಾತ್ರವನ್ನು ನಿರ್ವಹಿಸುತ್ತಿದ್ದರು. ಒಬ್ಬ ಹುಡುಗ ತನ್ನ ಗೆಳೆಯನ ಜೊತೆ ಮೊದಲ ಬಾರಿಗೆ ನಾಟಕ ನೋಡಲು ಬಂದನು. ನಾಟಕದಲ್ಲಿ ಒಬ್ಬ ಹುಡುಗನಿಗೆ ಹುಡುಗಿಯ ವಸ್ತ್ರ ತೊಡಿಸಿದ್ದರು. ಎದೆಯನ್ನು ಹುಡುಗಿಯಂತೆ ಮಾಡಲಾಗಿತ್ತು. ಮೊದಲ ಬಾರಿ ನೋಡಲು ಹೋದವನು ತನ್ನ ಗೆಳೆಯನಿಗೆ (ಅನೇಕ ಬಾರಿ ನಾಟಕ ನೋಡಿದವನು) ಆ ಗೆಳೆಯನು ಹೇಳಿದ. "ಆಹಾ– ನೋಡು ಆ ಹುಡುಗಿ ಎಷ್ಟು ಸುಂದರವಾಗಿದ್ದಾಳೆ". ಗೆಳೆಯ ಹೇಳಿದ ಇವಳು ಹುಡುಗಿ ಅಲ್ಲ ಹುಡುಗ. ಆದರೆ ಮೊದಲ ಬಾರಿ ಹೋದ ಆ ಹುಡುಗ ಒಪ್ಪಲು ಸಿದ್ಧವಾಗಿರಲಿಲ್ಲ. ಅವನಿಗೆ ತನ್ನ ಗೆಳೆಯನ ಮಾತುಗಳಲ್ಲಿ ನಂಬಿಕೆ ಬರಲಿಲ್ಲ. ನಾಟಕ ಮುಗಿದ ನಂತರ ನಾಟಕದವರೆಲ್ಲಾ ತಂಗಿದ್ದ ಸ್ಥಳಕ್ಕೆ ಈ ಗೆಳೆಯರಿಬ್ಬರೂ ಹೊರಟರು ಆ ನಾಟಕದ ಸ್ತ್ರೀ ಪಾತ್ರಧಾರಿ ತನ್ನ ಸ್ತ್ರೀವೇಷದ ವಸ್ತ್ರಗಳನ್ನು ಬಿಚ್ಚಿ ಗೂಟಕ್ಕೆ ಹಾಕಿದನು. ಅಂಡರವಿಯರ್ ಮೇಲೆ ಸ್ನಾನ ಮಾಡಲು ಹೋದನು. ಇದನ್ನು ನೋಡಿದ ಹೊಸ ದರ್ಶಕನಿಗೆ ಅವಳು ಹುಡುಗಿಯಲ್ಲ, ಹುಡುಗ' ಎನ್ನುವುದು ವಿಶ್ವಾಸವಾಯಿತು. ಮರುದಿನ ನಾಟಕ ನೋಡಲು ಹೋದಾಗ ಆ ಹುಡುಗಿಯ ವೇಷದಲ್ಲಿದ್ದ ಹುಡುಗನನ್ನು ನೋಡಿ ಆ ಗೆಳೆಯನ ಮನಸ್ಸಿನಲ್ಲಿ ಯಾವುದೇ ಕೆಟ್ಟ ಭಾವನೆ ಬರಲಿಲ್ಲ. ಅವನಿಗೆ ಆ ಹುಡುಗನೇ ಕಾಣಿಸುತ್ತಿದ್ದನು. ಇದೇ ರೀತಿ ಶುಕದೇವ ಋಷಿಗೆ ಆಧ್ಯಾತ್ಮದಿಂದ ವಿವೇಕದ ಆತ್ಮಜ್ಞಾನದ ಅರಿವಿರುತ್ತಿದ್ದರೆ, ಅವನಿಗೆ ಅವಳು ಸ್ತ್ರೀ ಅಲ್ಲ, ಆತ್ಮರೂಪದಲ್ಲಿರುವ ಪುರುಷನೆಂದು ತಿಳಿದು ಹೇಳಿರುತ್ತಿದ್ದ, "ನಾನು ನೆಲದ ಮೇಲೆ ಮಲಗುತ್ತೇನೆ. ನೀನು ಮಂಚದ ಮೇಲೆ ಮಲಗು", ಎನ್ನುತ್ತಿದ್ದ. ಹೀಗೆ ಸಾಧು, ಸಂತರು ಈ ವಿಚಾರಧಾರೆಯಿಂದ ಜೀವನ ನಡೆಸುತ್ತಾರೆ. ಸಾಧನೆಯನ್ನು ಮಾಡಿ ಮೋಕ್ಷವನ್ನು ಪಡೆಯುತ್ತಾರೆ.

## "ಸಹವಾಸದ ಪ್ರಭಾವ ಮತ್ತು ಪ್ರಭುವಿನ ವಿಶ್ವಾಸ"

ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿಗೆ ಮದುವೆಯಾಗಿ 10–12 ವರ್ಷವಾದರೂ ಮಕ್ಕಳಾಗಿರಲಿಲ್ಲ. ಆ ಹಳ್ಳಿಯಿಂದ 2ಕಿ.ಮೀ ದೂರದಲ್ಲಿ 1 ಆಶ್ರಮವಿತ್ತು ಅದರಲ್ಲಿ ಒಬ್ಬ ಸಿದ್ಧ ಸಾಧು ಇದ್ದನು. ಅವನು ಹಳ್ಳಿಗೆ ಹೋಗಿ ಬಿಕ್ಷೆ ಬೇಡಿ ತಂದು 3–4 ಅಥವಾ ಅದಕ್ಕೂ ಹೆಚ್ಚು ದಿನಗಳವರೆಗೆ ಇಟ್ಟುಕೊಂಡು ತಿನ್ನುತ್ತಿದ್ದನು. 1 ದಿನ ಆ ಸಾಧು ಮಕ್ಕಳಿಲ್ಲದವನ ಮನೆಗೆ ಬಿಕ್ಷೆ ಬೇಡಲು ಬಂದನು. ಆಗ ಆ ದಂಪತಿಗಳು ಪುತ್ರಪ್ರಾಪ್ತಿಗಾಗಿ ಆ ಸಾಧುವಿನ ಕಾಲು ಹಿಡಿದು ಪ್ರಾರ್ಥಿಸತೊಡಗಿದರು. ಆಗ ಆ ಸಾಧುವು "1 ಷರತ್ತಿನ ಮೇಲೆ ನಿಮಗೆ ಸಂತಾನವಾಗುತ್ತದೆ ಎಂದನು. ನಿಮಗೆ ಮೊದಲು 1 ಗಂಡುಮಗುವಾಗುತ್ತದೆ. 2 ವರ್ಷದ ನಂತರ ಆ ಮಗುವನ್ನು ನನಗೊಪ್ಪಿಸಬೇಕು. ಅವನನ್ನು ನನ್ನ ಉತ್ತರಾಧಿಕಾರಿಯನ್ನಾಗಿ ಮಾಡುವೆ, ಈ ಷರತ್ತಿಗೆ ಒಪ್ಪುವಿರಾ" ಎಂದು ಕೇಳಿದನು. ಅದಾದ ನಂತರ ನಿಮಗೆ 1 ಹೆಣ್ಣು ಮಗು, 1 ಗಂಡು ಮಗು ಹುಟ್ಟುತ್ತದೆ. ಆ ದಂಪತಿಗಳು ಒಪ್ಪಿದರು. ಇದಾದ ನಂತರ ಸಾಧುವಿನ ಆಶೀರ್ವಾದದಿಂದ ಹತ್ತನೇ ತಿಂಗಳು ಅವರಿಗೆ 1 ಗಂಡು ಮಗು ಹುಟ್ಟಿತು. 2 ವರ್ಷದ ನಂತರ ಆ ಮಗುವನ್ನು ಆ ಸಾಧುವಿಗೆ ಒಪ್ಪಿಸಿದರು. ಆ ಸಮಯ ಆ ಸ್ತ್ರೀ ಪುನಃ ಗರ್ಭವತಿಯಾಗಿದ್ದಳು. ನಂತರ ಆ ದಂಪತಿಗೆ 1 ಹೆಣ್ಣು ಮಗು ಹುಟ್ಟಿತು. ನಂತರದಲ್ಲಿ ಗಂಡು ಮಗು ಹುಟ್ಟಿತು. ಇದರಿಂದ ಸಾಧುವಿನ ಮಹಿಮೆ ಎಲ್ಲೆಡೆ ಹರಡಿತು. ಆ ಆಶ್ರಮಕ್ಕೆ ಹುಡುಗಿಯ ಪ್ರವೇಶಕ್ಕೆ ನಿಷೇಧವಿತ್ತು. ಆ ಹುಡುಗ 16 ವರ್ಷದವನಾದಾಗ ಒಮ್ಮೆ ಸಾಧುವಿಗೆ ಅವನ ಎದೆಯ

ಬಳಿ 1 ಕುರು ಎದ್ದಿತು. ಆದ್ದರಿಂದ ಸಾಧು ನೋವಿನಿಂದ ನರಳಾಡುತ್ತಿದ್ದನು. ನಾರು ಬೇರನ್ನು ತಂದು ಅದನ್ನು ಅರೆದು ಕುರುವಿನ ಮೇಲೆ ಲೇಪಿಸಿದನು. 4–5 ದಿನದಲ್ಲಿ ಆ ಕುರು ಒಡೆದು ಸಾಧು ಗುಣಮುಖನಾದನು. ನಂತರ ಕೆಲವು ದಿನಗಳ ಬಳಿಕ ಸಾಧುವಿಗೆ ಜ್ವರ ಬಂದಿತು. ವೃದ್ಧಾಪ್ಯ ಹಾಗೂ ಜ್ವರದ ತಾಪದಿಂದ ಸಾಧುವಿಗೆ ದುರ್ಬಲತೆ ಉಂಟಾಗಿ ಓಡಾಡುವುದು ಕಷ್ಟವಾಯಿತು. ಸಾಧು ಆ ಹುಡುಗನನ್ನು ಬಿಕ್ಷೆಗಾಗಿ ಒಂದು ದಿನವೂ ಊರ ಜನರ ಬಳಿ ಕಳುಹಿಸಿರಲಿಲ್ಲ. ಯೌವನದಲ್ಲಿರುವ ಹುಡುಗ ಬೇರೆ ಹುಡುಗರ ಸಹವಾಸದಿಂದ ಎಲ್ಲಿ ದುಶ್ಚಟಗಳಿಗೆ ಗುರಿಯಾಗುವನೋ ಎಂಬ ಚಿಂತೆ ಸಾಧುವಿಗಿತ್ತು. ಅವನಿಗೆ ವಿವಾಹವಾಗುವ ಇಚ್ಛೆ ಉಂಟಾಗದಿರಲೆಂದು ಸಾಧುವಿನ ಆಶಯವಾಗಿತ್ತು.

ಆದರೆ 1 ದಿನ ಸಾಧು ಅಸಹಾಯಕನಾಗಿ ಅವನನ್ನು ಕರೆದು ಹೇಳಿದನು, “ಮಗು, ಬಿಕ್ಷೆ ಬೇಡಿ ತಾ, ಆದರೆ ಊರಿನ ಮೊದಲನೆ ಗಲ್ಲಿಯ 4ನೇ ಮನೆಗೆ ಹೋಗಿ ಏನು ಸಿಗುವುದೋ ಅದನ್ನು ತೆಗೆದುಕೊಂಡು ಬಾ, ಮುಂದೆ ಹೋಗಬೇಡ” ಎಂದನು. ಆ ಶಿಷ್ಯನು ಗುರುಗಳ ಆದೇಶದಂತೆ ಆ ಗಲ್ಲಿಗೆ ತೆರಳಿ ಆ ಮನೆಯ ಮುಂದೆ ನಿಂತು ‘ಅಲಕ್ ನಿರಂಜನ್’ ಎಂದು ಕೂಗಿದನು. ಆ ಮನೆಯ ಒಳಗಿಂದ 14 ವರ್ಷದ ಹುಡುಗಿ ಭಿಕ್ಷೇ ನೀಡಲು ಹೊರ ಬಂದಳು. ಆ ಶಿಷ್ಯನು ಹುಡುಗಿಯ ಎದೆಯನ್ನು ದಿಟ್ಟಿಸಿ ನೋಡುತ್ತಿದ್ದನು. ಸಾಧುವಿನ ದೃಷ್ಟಿಯಲ್ಲಿ ದೋಷವಿರುವುದನ್ನು ಅರಿತ ಆ ಹುಡುಗಿಯು ಸಂಕೋಚದಿಂದ. “ಹೇ ಬಾಬಾ, ಬಿಕ್ಷೆ ತೆಗೆದುಕೋ” ಎಂದಳು. ಆಗ ಆ ಹುಡುಗನು, ಹೇ ತಾಯಿಯ ಮಗಳೇ! ನಿನ್ನ ಎದೆಯ ಮೇಲೆ ಎರಡು ಕುರು ಎದ್ದಿರುವಂತಿದೆ. ನೀವು ಆಶ್ರಮಕ್ಕೆ ಬಂದರೆ ನಿನ್ನ ಕುರುಗಳನ್ನು ಗುರುಗಳು ಸರಿಮಾಡುವರು ಎಂದನು. ಹೇ ತಾಯಿಯ ಮಗಳೇ! ನಿನಗೆ ಆ ಕುರುಗಳು ತುಂಬಾ ನೋವನ್ನು ಉಂಟುಮಾಡುತ್ತಿರಬೇಕು. ಏಕೆಂದರೆ ನನ್ನ ಗುರುವಿಗೆ ಒಂದು ಕುರುವೇ ಅತ್ಯಂತ ನೋವು ಕೊಟ್ಟಿತ್ತು” ಎಂದನು. ಈ ಮಾತನ್ನು ಕೇಳಿದ ಹುಡುಗಿಗೆ, ಆ ಹುಡುಗನು ಒಳ್ಳೆಯವನಲ್ಲವೆಂದು ದೃಢವಾಯಿತು. ಆ ಹುಡುಗಿ ಜೋರಾಗಿ ಹೇಳತೊಡಗಿದಳು, “ನಿನ್ನ ತಾಯಿ, ಅಕ್ಕ, ತಂಗಿಯರ ಕುರು ವಾಸಿ ಮಾಡು ಹೋಗು, ನಾಚಿಕೆ ಇಲ್ಲದವನೇ, ನಿನಗೆ ಚಪ್ಪಲಿ ಏಟು ಬೇಕಾ? ಎನ್ನುತ್ತಾ ತನ್ನ ಕಾಲಲ್ಲಿದ್ದ ಚಪ್ಪಲಿ ತೆಗೆದು, “ಮೊದಲು ಇಲ್ಲಿಂದ ತೊಲಗು, ಮತ್ತೆ ಇಲ್ಲಿ ಬಂದರೆ ನಿನ್ನ ಗತಿ ನೆಟ್ಟಗಾಗುವುದಿಲ್ಲ” ಎಂದಳು. ಗಲಾಟೆ ಕೇಳಿ ಹುಡುಗಿಯ ತಾಯಿಯೂ ಬಾಗಿಲ ಬಳಿ ಬಂದಳು. ಮತ್ತು ಕೇಳಿದಳು ಮಗಳೇ ಏನಾಯ್ತು? ಹುಡುಗಿಯು ಆ ಸಾಧು ಹೇಳಿದ್ದನ್ನು ತಾಯಿಗೆ ಹೇಳಿದಳು. ತಾಯಿ ಕೇಳಿದಳು ಮಹಾತ್ಮರೇ ಎಲ್ಲಿಂದ ಬಂದಿರುವಿರಿ? ಸಾಧು ಹೇಳಿದ ನಾನು ಈ ಆಶ್ರಮದಿಂದ ಬಂದಿರುವೆ. ನಮ್ಮ ಗುರುಗಳು ಅಸ್ವಸ್ಥರಾಗಿದ್ದಾರೆ ನಡೆದಾಡಲು ಸಾಧ್ಯವಿಲ್ಲ. ಆದ್ದರಿಂದ ಮೊದಲು ಬಾರಿ ನನಗೆ ಭಿಕ್ಷೆ ಬೇಡಲು ಕಳುಹಿಸಿದ್ದಾರೆ. ನಾನು ಅವರ ಶಿಷ್ಯನು. ನಾನಂತು ಈ ಸಹೋದರಿಗೆ ಕೇಳಿದ್ದೇ ನಿನ್ನ ಎದೆಯ ಮೇಲೆ ಎರಡು ಕುರು ಆಗಿವೆ ಬಹಳ ದುಃಖವಾಗುತ್ತಿರಬಹುದು. ನಮ್ಮ ಗುರುಗಳಿಗಂತು ಒಂದೇ ಕುರು ಆಗಿತ್ತು, ಹಗಲಿರುಳು ದುಃಖಿಯಾಗಿರುತ್ತಿದ್ದರು. ಅವರಿಗೆ ಔಷಧಿ ಗೋತ್ತಿದೆ ನೀವು ಗುರುಗಳ ಬಳಿ ಹೋಗಿ ನಿವಾರಿಸಿಕೊಳ್ಳಿ. ಆ ಸಾಧು ಹುಡುಗ ಆ ತಾಯಿಯ ಮಗನಾಗಿದ್ದನು ಅವನನ್ನು ಸಾಧುವಿಗೆ ನೀಡಿದ್ದರು. ಆ ಹುಡುಗಿಯು ಅ ಸಾಧು ಹುಡುಗನ ಚಿಕ್ಕ ಸಹೋದರಿಯಾಗಿದ್ದಳು. ಆಗ ಆ ತಾಯಿಯು, ಈ ಹುಡುಗ ನಿನ್ನ ಅಣ್ಣ, ನಾವು ಇವನನ್ನು ಆ ಸಾಧುವಿಗೆ ಸಮರ್ಪಿಸಿದ್ದೆವು. ಇವನು ಈ ಪ್ರಪಂಚದ ಕೆಟ್ಟ ವಿಚಾರಗಳಿಂದ ದೂರವಿದ್ದಾನೆ. ಅವನಿಗೆ ಏನೂ ತಿಳಿಯದು. ಹೇ ಮಗಳೇ! ಯಾವ ದೋಷವು ನಿನಗೆ ಕಂಡಿತೋ ಆ ದೋಷ ಈ ನಿನ್ನ ಅಣ್ಣನಲ್ಲಿಲ್ಲ. ಇವನು ಶುದ್ಧ ಆತ್ಮದಿಂದ ಮಾತನಾಡುತ್ತಿದ್ದಾನೆ. ನೀನು ಈ ಹಳ್ಳಿಯ ಕೆಟ್ಟ ಹುಡುಗರ ತುಂಟತನದ ಅನುಸಾರವಾಗಿ ಚಿಂತಿಸಿ ಅವನನ್ನು ಗದರಿಸುತ್ತಿರುವೆ” ಎಂದಳು. ತಾಯಿ ಹೇಳಿದಳು ಮಹಾರಾಜರೇ, ನನ್ನ ಮಗಳ ಎದೆಯ ಮೇಲೆ ಕುರುವಿಲ್ಲ. ನೋಡು ಇದು ಸ್ತನ ಇದೆ. ಹೇಗೆ ನನ್ನ ಎದೆಯ ಮೇಲೆ ಇದ್ದಂತೆ. ಇವಳ ಮದುವೆ ಮಾಡುವೆವು. ಇವಳಿಗೆ ಸಂತಾನ ಉತ್ಪನ್ನವಾಗುವುದು. ಆಗ ಈ ಸ್ತನಗಳಿಂದ ಮಗು ಹಾಲು ಕುಡಿಯುವುದು. ಸಾಧು ಕೇಳಿದ ತಾಯಿ ಇವಳ ಮದುವೆ ಯಾವಾಗ ಆಗುವುದು? ಯಾವಾಗ ಇವಳಿಗೆ ಸಂತಾನವಾಗುವುದು? ತಾಯಿ ಹೇಳಿದಳು 3–4

ವರ್ಷಗಳ ನಂತರ ಮದುವೆಯಾಗುವುದು. ನಂತರ 2–3 ವರ್ಷಗಳ ಬಳಿಕ ಸಂತಾನವಾಗುವುದು. ಆ ಹುಡುಗನು ಆಧ್ಯಾತ್ಮಿಕ ದೃಷ್ಟಿಕೋನದಿಂದ ಚಿಂತಿಸಿದನು. ಹುಟ್ಟುವ ಮಗುವಿನ ಬಗ್ಗೆ ಪರಮಾತ್ಮ ಎಷ್ಟು ಕಾಳಜಿ ವಹಿಸುತ್ತಾನೆ? ಆ ಮಗುವಿನ ಜನ್ಮದ 7–8 ವರ್ಷಗಳ ಹಿಂದೆಯೇ ಹಾಲು ಕುಡಿಯಲು ವ್ಯವಸ್ಥೆ ಮಾಡಿಟ್ಟಿದ್ದಾನೆ. ಹಾಗಾದರೆ ನಮಗೆ ತಿನ್ನಲು ಆಶ್ರಮದಲ್ಲಿ ವ್ಯವಸ್ಥೆ ಮಾಡಲಾರನೇ? ನಾನು ಮತ್ತು ನನ್ನ ಗುರುಗಳು ಭಗವಂತನನ್ನೇ ನಂಬಿ ಕುಳಿತಿದ್ದೇವೆ, ಇಂದಿನಿಂದ ಯಾವುದೇ ಕಾರಣಕ್ಕೂ ನಾನು ಬಿಕ್ಷೆ ಬೇಡುವುದಿಲ್ಲ ಎಂದು ನಿರ್ಧರಿಸಿದನು. ಆಗ ಆ ತಾಯಿಯು, 'ಏನು ಯೋಚನೆ ಮಾಡುತ್ತಿರುವೆ' ಎಂದು ಕೇಳಿದಳು. ಆಗ ಆ ಶಿಷ್ಯನು, ಇಂದಿನಿಂದ ಚಿಂತೆ ಮುಗಿಯಿತು ಎಂದು ಹೇಳುತ್ತಾ ಬಿಕ್ಷೆಯ ಜೋಳಿಗೆಯನ್ನು ಅಲ್ಲೇ ಬಿಸಾಡಿ ಬರಿಗೈಯ್ಯಲ್ಲಿ ಆಶ್ರಮಕ್ಕೆ ತೆರಳಿದನು. ಗುರುಗಳು ಕೇಳಿದರು ಭಿಕ್ಷೆ ಏಕೆ ತರಲಿಲ್ಲ? ಜೋಳಿಗೆ ಯಾರಾದರೂ ಕಸಿದು ಕೊಂಡರೇನು? ಆಗ ಹುಡುಗ ಹೇಳಿದ ಗುರುಗಳೇ "ಪರಮಾತ್ಮನು ಮಗು ಹುಟ್ಟುವ 7–8 ವರ್ಷಗಳ ಮೊದಲೇ ಅದರ ಊಟದ ವ್ಯವಸ್ಥೆ ಮಾಡಿರುವಾಗ ನಮಗೆ ನಮ್ಮ ಆಶ್ರಮದಲ್ಲಿ ಅದರ ವ್ಯವಸ್ಥೆ ಮಾಡಲಾರನೇ? ಖಂಡಿತ ಮಾಡುವನು, ಅದಕ್ಕಾಗಿ ನಾನು ಜೋಳಿಗೆಯನ್ನು ಬಿಸಾಕಿ ಬಂದೆ. ಸಾಧುವು 'ಇವನೊಬ್ಬ ಮೈಗಳ್ಳ ದಿನವೂ ಭಿಕ್ಷೆಗೆ ಹೋಗಬೇಕಾಗುವುದೆಂದು ತಿಳಿದು ಜೋಳಿಗೆಯನ್ನು ಬಿಸಾಡಿ ಬಂದಿದ್ದಾನೆ' ಎಂದು ತಿಳಿದನು. ಆದರೆ ಸಾಧುವಿಗೆ ನಡೆದಾಡಲು ಸಾಧ್ಯವಿರಲಿಲ್ಲ. ಅವನು ಅಸಹಾಯಕನಾಗಿದ್ದನು. ಆದರೂ ಮಾರನೇ ದಿನ ಕಷ್ಟವೋ ಸುಖವೋ ತಾನೇ ಬಿಕ್ಷೆಗೆ ಹೋಗಲು ನಿರ್ಧರಿಸಿದನು.

ಆ ಹುಡುಗನು ಜೋಳಿಗೆಯನ್ನು ಬಿಸಾಕಿ ಹೊರಟು ಹೋದ ಮೇಲೆ ಪರಮಾತ್ಮನು ನಗರದ ಕೆಲ ಜನರಲ್ಲಿ ಅರಿವು ಮೂಡಿಸಿದನು. ದೊಡ್ಡ ಸಾಧು ಅಸ್ವಸ್ಥರಾಗಿದ್ದಾರೆ. ಚಿಕ್ಕ ಸಾಧುವಿಗೆ ಯಾರೋ ಏನೋ ಅಂದಿದ್ದಾರೆ. ಅದಕ್ಕೆ ಅವನು ಜೋಳಿಗೆ ಬಿಸಾಡಿ ಹೊರಟು ಹೋಗಿದ್ದಾನೆ ಸಾಧು ಮತ್ತು ಆ ಹುಡುಗ ಹಸಿವಿನಿಂದ ಇದ್ದಾರೆ. ಹೀಗೆ ಯೋಚಿಸಿ ಒಳ್ಳೆ ಊಟ ಸಿದ್ಧಪಡಿಸಿದರು. ಪಾಯಸಾ, ಪುರಿ ಮಾಡಿ ಒಬ್ಬ ವ್ಯಕ್ತಿ ಅದನ್ನೆಲ್ಲಾ ತೆಗೆದುಕೊಂಡು ಬಂದನು, "ಈ ಹುಡುಗ ಯಾರೋ ಏನೋ ಹೇಳಿದ್ದಕ್ಕೆ ಕೋಪಗೊಂಡು ಭಿಕ್ಷೆ ತರಲಿಲ್ಲ ಗುರುಗಳೇ" ಎಂದು ಹೇಳಿದನು, ಭಿಕ್ಷೆಯ ಜೋಳಿಗೆ ಅಲ್ಲಿಯೇ ಬಿಸಾಕಿದ್ದಾನೆ. ನೀವು ಊಟ ಮಾಡಿ, ಆಗ ಆ ಸಾಧು, ಮೊದಲು ಬಾಲಕನಿಗೆ ಊಟ ಬಡಿಸಿ" ಎಂದನು. ಆಗ ಆ ಹುಡುಗನು, ಮೊದಲು ಗುರುಗಳು ತಿಂದ ಮೇಲೆ ಶಿಷ್ಯ ಊಟ ಮಾಡುತ್ತಾನೆ" ಎಂದನು. ಸಾಧು ಊಟಮಾಡ ತೊಡಗಿದನು, ಅಷ್ಟರಲ್ಲಿ ಇನ್ನೊಬ್ಬ ಊಟ ತಂದನು. ಹೀಗೆ ಸುಮಾರು 10 ಜನ ಊರಿನವರು ಇದೇ ವಿಚಾರ ಮಾಡಿ ಆಶ್ರಮದಲ್ಲಿ ಊಟ ತಂದರು. ಆಗ ಶಿಷ್ಯನು, "ಹೇ ಭಗವಂತ, ನೀನೆಷ್ಟು ಒಳ್ಳೆಯವನೆಂದು ತಿಳಿದಿರಲಿಲ್ಲ. ಆದ್ದರಿಂದ ನಿಮ್ಮ ಮಂತ್ರದ ಜಪ ಕಡಿಮೆ ಹಾಗೂ ಊಟದ ಬಗ್ಗೆ ಹೆಚ್ಚು ಚಿಂತೆ ಇರುತ್ತಿತ್ತು, ಎಂದನು. ಅಂದಿನಿಂದ ಊರಿನವರು ಒಬ್ಬೊಬ್ಬರು ಒಂದೊಂದು ದಿನ ಊಟ ತಂದು ಕೊಡಲು ಒಪ್ಪಿಕೊಂಡರು. ಹೀಗೆಯೇ ಆಯ್ತು.

ಶಿಕ್ಷಣ:– ಸಹವಾಸವಿದ್ದಂತೆ ಗುಣ, ತಮ್ಮ ದೋಷ ಬೇರೆಯವರಲ್ಲಿ ಕಾಣುತ್ತದೆ. ಪರಮಾತ್ಮನಲ್ಲಿ ನಂಬಿಕೆ ಇಡದಿದ್ದರೆ ಭಕ್ತ ಅಪೂರ್ಣನು. ಭಿಕ್ಷೆ ಬೇಡಿ ತಿನ್ನುವುದೂ ಸಹ ಶಾಸ್ತ್ರಕ್ಕೆ ವಿರುದ್ಧವಾದುದು, ಏಕೆಂದರೆ ಭಕ್ತನ ಶ್ರದ್ಧೆ ಮತ್ತು ಭಾವನೆ ನಿಜವಾಗಿದ್ದರೆ ಪರಮಾತ್ಮನೇ ಎಲ್ಲಾ ವ್ಯವಸ್ಥೆ ಮಾಡುತ್ತಾನೆ. ಆದರೆ ಗೃಹಸ್ಥಿ ಕೆಲಸಮಾಡಿ ಊಟ ಮಾಡುವುದು ಸರ್ವೋತ್ತಮ ಎಂದು ಹೇಳಿದ್ದಾರೆ. ಸಾಧು ಸಂತರ ಕರ್ಮ ಸತ್ಸಂಗ ಮಾಡುವುದು ಭಕ್ತಿ ಮಾಡುವುದು. ಒಂದು ವೇಳೆ ನಿಜವಾದ ಶ್ರದ್ಧೆಯಿಂದ ಮಾಡಿದರೆ ಅವನಿಗೆ ಬೇಡುವ ಅವಶ್ಯಕತೆ ಇರುವುದಿಲ್ಲ. ಪರಮಾತ್ಮ ಕಬೀರರಿಂದ ಪ್ರಾಪ್ತವಾದ ಜ್ಞಾನದಿಂದ ಸಂತ ಗರೀಬ್‌ದಾಸರು ತಮ್ಮ ಅಮೃತವಾಣಿಯಲ್ಲಿ ಹೇಳಿದ್ದಾರೆ:–

"ವೈರಾಗ್ ಪ್ರಕರಣದ ಅಂಗ್‌ದಿಂದ ಕೆಲವು ವಾಣಿಗಳು"

ಗರೀಬ್, ನಟ್ ಪೇರಣಾ ಕಾಂಜರ್ ಸಾಂಶೀ ಮಾಂಗತ್ ಹೈಂ ಭಠಿಯಾರೇ ।
ಜಾಕೀ ತಾರೀ ಲಾಗೀ ತತ್ ಮೆಂ ಮೋತಿ ದೇತ್ ಉಧಾರೇ ॥ (3)

ಗರೀಬ್, ದ್ರೋಪದ್ ಸುತಾ ಕೇ ಚೀರ್ ಬಢಾಯೇ ಬಿನ್ ಹೀ ತಾನೇ ಕಾತೇ ।
ಸಕಲ್ ಮನೋರಥ್ ಪೂರ್ಣ್ ಸಾಹಿಬ್ ತುಮ್ ಕ್ಯೋಂ ಮಾಂಗನ್ ಜಾತೇ ॥(2)
ಗರೀಬ್, ಆಪ್ ತೆಂ ಆವೈ ರತ್ನ್ ಬರಾಬರ್ ಮಾಂಗ್ಯಾ ಆವೈ ಲೋಹಾ ।
ಲಕ್ಷಣ್ ನಹೀಂ ಜೋಗ್ ಕೇ ಜೋಗೀ ಜಾ ಬಸ್ಯಾ ಬನ್ ಖೋಹಾ ॥ (6)
ಗರೀಬ್, ಟೂಕಾಂ ಕಾರಣ್ ಫಿರ್ಯೆ ಕುಕರಾ (ಕುತ್ತಾ) ಸತಘರ್ ಫಿರ್ ಆವೈ ।
ಯೇ ತೋ ಲಕ್ಷಣ್ ನಹೀಂ ಜೋಗ್ ಕೇ ಕ್ಯೋಂ ಬಾಣಾ ಬಿರದಲ್ ಜಾವೈ ॥(10)
ಗರೀಬ್, ಜಿನಕೋ ಆತ್ಮಜ್ಞಾನ್ ನಹೀಂ ಹೈ ವೇ ಮಾಂಗೈ ರೇ ಭಾಯೀ ।
ಚಾವಲ್ ಚೂನ್ ಇಕಟ್ಠಾ ಕರಕೈ ಬ್ಯಾಜ್ ಬಧಾವೈ ಜಾಯೀ ॥(24)
ಗರೀಬ್, ಜೋ ಮಾಂಗೈ ಸೋ ಭಡವಾ ಕಹಿಯೇ ದರ್-ದರ್ ಫಿರ್ಯೆ ಅಜ್ಞಾನೀ ।
ಯೋಗೀ ಯೋಗ್ ಸಂಪೂರ್ಣ್ ಜಿಸಕಾ ಜೋ ಮಾಂಗ್ ನ ಪೀವೈ ಪಾನೀ ॥(41)
ಗರೀಬ್, ಕದ್ ನಾರದ್ ಜಮಾತ್ ಚಲಾಯೀ ವ್ಯಾಸ್ ನ ಟುಕಡಾ ಮಾಂಗ್ಯಾ ।
ವಸೀಷ್ಠ ವಿಶ್ವಾಮಿತ್ರ ಜ್ಞಾನೀ ಶಬ್ದ್ ಬಿಹಂಗಮ್ ಜಾಗ್ಯಾ ॥(50)
ಗರೀಬ್, ಕಬೀರ್ ಪುರುಷ್ ಕೈ ಬಾಲದ್ ಆಯೀ ನೌ ಲಖ್ ಬೋಡೀ ಲಾಹಾ ।
ಕೇಶವ್ ಸೇ ಬಣಜಾರೇ ಜಿಸ್ ಕೈ ದೇವೈಂ ಯಜ್ಞ್ ಜುಲಾಹಾ ॥(55)

**ಭಾವಾರ್ಥ:–** ಯಾರು ಸತ್ಯ, ಭಕ್ತಿ ಹಾಗೂ ಶಾಸ್ತ್ರಕ್ಕೆ ಅನುಸಾರ ಮಾಡುವುದಿಲ್ಲವೋ ಅವರು ಸಾಧು ವೇಷ ಮಾಡಿಕೊಂಡು ತುಂಡು ರೊಟ್ಟಿಗಾಗಿ ನಾಯಿಯು 70 ಮನೆಗಳನ್ನು ಅಲೆದಾಡುವಂತೆ ಅಲೆದಾಡುತ್ತಿರುತ್ತಾರೆ. ಅಂದರೆ ಅನ್ಯ ಜಾತಿಯವರು ಆಹಾರಕ್ಕಾಗಿ ಅಲೆದಾಡುತ್ತಿದ್ದರು. ಒಂದು ವೇಳೆ ಸಾಧುಗಳು ಕೂಡಾ ಹಾಗೇ ಮಾಡಿದರೆ ಅವರ ಸಾಧನೆಯಲ್ಲಿ ಏನೋ ಕೊರತೆ ಇದೆ. ಪರಮೇಶ್ವರ ಕಬೀರರು ತನ್ನ ದೈನಿಕ ಕೆಲಸವಾದ ನೇಯುವ ಕೆಲಸ ಮಾಡುತ್ತಿದ್ದರು. ಹಾಗೇ ಸತ್ಯ ಸಾಧನೆಯನ್ನೂ ಮಾಡುತ್ತಿದ್ದರು ಮತ್ತು ಸತ್ಸಂಗವನ್ನೂ ಮಾಡುತ್ತಿದ್ದರು. ಸತ್ಯಭಕ್ತಿ ಮಾಡುವವರಿಗೆ ಪರಮಾತ್ಮನು ಹೇಗೆ ಸಹಾಯ ಮಾಡುತ್ತಾನೆ ಎನ್ನುವುದನ್ನು ಸ್ವತಃ ಕಬೀರರು ಹೇಳಿದ್ದಾರೆ. ಅದರ ಕತೆ ಈ ರೀತಿ ಇದೆ.

## “ಕಬೀರ್ ಪರಮೇಶ್ವರರಿಂದ ಕಾಶೀ ನಗರದಲ್ಲಿ ಭೋಜನ-ಭಂಡಾರ ಅಂದರೆ ಅನ್ನ ದಾಸೋಹ(ಧರ್ಮಯಜ್ಞ)ದ ವ್ಯವಸ್ಥೆ ಮಾಡುವುದು”

ಶೇಖ್‌ತಕೀ ಎಂಬುವವನು ಮುಸಲ್ಮಾನರ ಮುಖಂಡ ಅಂದರೆ ಮುಖ್ಯ ಗುರುವಾಗಿದ್ದನು. ಅವನು ಮೊದಲಿನಿಂದಲೂ ಕಬೀರರನ್ನು ನೋಡಿ, ಹೊಟ್ಟೆ ಉರಿದುಕೊಳ್ಳುತ್ತಿದ್ದನು. ಸರ್ವ ಬ್ರಾಹ್ಮಣರು ಮತ್ತು ಮುಲ್ಲಾ-ಕಾಜಿಗಳು ಮತ್ತು ಶೇಖ್‌ತಕೀ ಮೀಟಿಂಗ್ ಮಾಡಿ ಕಬೀರನು ಒಬ್ಬ ದರಿದ್ರದವನೆಂದು ತಿಳಿದು ಕುತಂತ್ರ ಮಾಡಿದರು, ಎಲ್ಲರಿಗೂ ಕಬೀರನ ಹೆಸರಿನಲ್ಲಿ ಪತ್ರ ಬರೆಯಿರಿ ಏನೆಂದರೆ, ಕಾಶಿಯಲ್ಲಿ ಕಬೀರರು ಬಹಳ ದೊಡ್ಡ ಶ್ರೀಮಂತ ವ್ಯಕ್ತಿ. ಅವರ ಪೂರ್ತಿ ವಿಳಾಸ ನೂರ್‌ಅಲಿ ಅಂಸಾರಿಯ ಮಗ ಕಬೀರ, ನೇಕಾರರ ಕಾಲೋನಿ, ಕಾಶೀ ನಗರ. ಕಬೀರರು ಮೂರು ದಿನ ಧರ್ಮ ದಾಸೋಹ ಮಾಡಿಸುವರು. ಎಲ್ಲಾ ಸಾಧು ಸಂತರಿಗೆ ಸ್ವಾಗತ. ಪ್ರತಿದಿನ ಊಟಮಾಡುವ ಪ್ರತಿಯೊಬ್ಬನಿಗೂ 1 ಕಂಬಳಿ(ಆ ಸಮಯದಲ್ಲಿನ ಅತ್ಯಂತ ಬೆಲೆ ಬಾಳುವ ಕಂಬಳಿ) ಮತ್ತು ಒಂದು ಚಿನ್ನದ ನಾಣ್ಯ (10 ಗ್ರಾಮ ಸ್ವರ್ಣದಿಂದ ಮಾಡಲ್ಪಟ್ಟದ್ದು) ಉಡುಗೊರೆಯಾಗಿ ಕೊಡುವರು. ಪ್ರತಿದಿನ ಒಬ್ಬ ವ್ಯಕ್ತಿ ಎಷ್ಟು ಬಾರಿ ಊಟ ಮಾಡುವನೋ, ಅಷ್ಟು ಬಾರಿ ಅವನಿಗೆ ಕಬೀರರು ಕಂಬಳಿ ಮತ್ತು ನಾಣ್ಯ ಉಡುಗೊರೆ ಕೊಡುವರು. ಊಟದಲ್ಲಿ ಲಾಡು, ಜಿಲೇಬಿ, ಹಲ್ವಾ, ಪಾಯಸ, ವಡೆ, ರಸಗುಲ್ಲಾ ಮುಂತಾದ ಪಂಚಭಕ್ಷ್ಯ ಪರಮಾನ್ನಗಳಿರುತ್ತವೆ. ಆಹಾರ ಪದಾರ್ಥ (ಹಿಟ್ಟು, ಅಕ್ಕಿ, ಬೇಳೆ, ತುಪ್ಪ, ಸಕ್ಕರೆ ಮುಂತಾದವು) ಕೊಡುವರು. 1 ಪತ್ರ ಶೇಖ್‌ತಖೀಯು ತನ್ನ ಹೆಸರಿಗೆ ಹಾಗೂ ದಿಲ್ಲಿಯ ರಾಜನಾದ ಸಿಕಂದರ್ ಲೋಧಿಗೆ ಬರೆದು ಕಳುಹಿಸಿದನು, ನಿಗದಿತ ದಿನದ ಮೊದಲದಿನದ ರಾತ್ರಿಯಿಂದಲೇ ಸಾಧು ಸಂತರು ಆಗಮಿಸತೊಡಗಿದರು. ಮರುದಿನವೇ ಅನ್ನ ದಾಸೋಹ

ಏರ್ಪಡುವುದಿತ್ತು. ಸಂತ ರವಿದಾಸರು ಪರಮೇಶ್ವರ ಕಬೀರರಿಗೆ ಹೇಳಿದರು, "ನಿಮ್ಮ ಹೆಸರಿನಿಂದ ಬಂದ ಪತ್ರ ಹಿಡಿದು 18 ಲಕ್ಷ ಸಾಧು ಸಂತರು ಮತ್ತು ಭಕ್ತರು ಕಾಶೀ ನಗರಕ್ಕೆ ಬಂದಿದ್ದಾರೆ. ಅನ್ನ ದಾಸೋಹಕ್ಕೆ ಆಮಂತ್ರಿಸಲಾಗಿದೆ. ನಾವು ಈಗ ಈ ಊರು ಬಿಟ್ಟು ಹೋಗಬೇಕಾಗಬಹುದು", ಕಬೀರರಿಗಂತು ಎಲ್ಲವೂ ತಿಳಿದಿತ್ತು. ಆದರೂ ಏನೂ ತಿಳಿಯದವರಂತೆ, "ರವಿದಾಸರೆ, ನೀವು ಗುಡಿಸಿಲಿನ ಒಳಗೆಬಂದು ಕುಳಿತುಕೊಂಡು ಚಿಲಕ ಹಾಕಿಕೊಳ್ಳಿ. ಅವರೆಲ್ಲಾ ಹಾಗೆಯೇ ಹೊರಟು ಹೋಗುವರು. ನಾವು ಹೊರಗಡೆ ಹೋಗುವುದೇ ಇಲ್ಲ." ಎಂದರು. ಪರಮೇಶ್ವರ ಕಬೀರರು ತಮ್ಮ ರಾಜಧಾನಿ ಸತ್ಯಲೋಕಕ್ಕೆ ತೆರಳಿದರು. ಅಲ್ಲಿಂದ 9 ಲಕ್ಷ ಎತ್ತುಗಳ ಮೇಲೆ ಕತ್ತೆಗಳಂತೆ ಮೂಟೆ ಕಟ್ಟಿ ಅದರಲ್ಲಿ ಸಿದ್ಧಪಡಿಸಿದ ಆಹಾರ ತುಂಬಿ ಹಾಗೂ ಅಕ್ಕಿ, ಬೇಳೆ, ತುಪ್ಪ ಮುಂತಾದವುಗಳ ಮೂಟೆ ಹೊರೆಸಿ, ಭೂಮಿಗೆ ಬಂದರು. ಸತ್ಯಲೋಕದಿಂದಲೇ ಸೇವಾದಾರರು ಬಂದರು. ಸ್ವತಃ ಕಬೀರರು ಬನಜಾರಾ ರೂಪ ಧರಿಸಿದರು. ಮತ್ತು ತನ್ನ ಹೆಸರು ಕೇಶವ ಎಂದು ಹೇಳಿದರು. ಇತ್ತ ದಿಲ್ಲಿಯ ರಾಜ ಸಿಕಂದರ್‌ಲೋಧಿ ಮತ್ತು ಧಾರ್ಮಿಕ ಗುರು ಶೇಖ್‌ತಕೀ ಬಂದರು. ಕಾಶಿಯಲ್ಲಿ ದಾಸೋಹ ನಡೆಯುತ್ತಿತ್ತು. ಎಲ್ಲರಿಗೂ ಊಟವಾದ ಬಳಿಕ ಒಂದು ಕಂಬಳಿ ಮತ್ತು 1 ನಾಣ್ಯ (10 ಗ್ರಾಮ) ಚಿನ್ನ (Gold) ಉಡುಗೊರೆಯೂ ಕೊಡುತ್ತಿದ್ದರು. ಕೆಲ ಕಳ್ಳ ಸಾಧುಗಳು 3-4 ಬಾರಿ ಊಟ ಮಾಡಿ 3-4 ಬಾರಿ ಕಂಬಳಿ ಮತ್ತು ನಾಣ್ಯ ಪಡೆಯುತ್ತಿದ್ದರು. ಕೆಲವರು ಅಕ್ಕಿ, ಹಿಟ್ಟು, ತುಪ್ಪ ಇತ್ಯಾದಿ ಕೂಡಾ ತಗೊಂಡು ಹೋಗುತ್ತಿದ್ದರು.

ಇದನ್ನೆಲ್ಲಾ ನೋಡಿದ ಶೇಖ್‌ತಕೀ ಅಳುಮೋರೆ ಹಾಕಿಕೊಂಡನು. ನಂತರ ಸಿಕಂದರ್ ಲೋಧಿ ರಾಜನೊಂದಿಗೆ, ಕಬೀರ್ ಪರಮೇಶ್ವರರು ವೇಷ ಬದಲಿಸಿಕೊಂಡು ಕೇಶವ ಹೆಸರಿನಿಂದ ಬನಜಾರಾ (ಆ ಸಮಯದ ವ್ಯಾಪಾರಿಗಳನ್ನು ಬನಜಾರಾ ಎನ್ನುತ್ತಿದ್ದರು) ರೂಪದಲ್ಲಿ ತಂಗಿದ್ದ ಟೆಂಟಿಗೆ ಹೋದನು. ಸಿಕಂದರ್ ಲೋಧಿ ರಾಜನು ನೀವ್ಯಾರು? ನಿಮ್ಮ ಹೆಸರೇನು? ನಿಮಗೂ ಕಬೀರರಿಗೂ ಏನು ಸಂಬಂಧ?" ಎಂದು ಕೇಳಿದನು. ಕೇಶವ ರೂಪದಲ್ಲಿದ್ದ ಪರಮಾತ್ಮ ಹೇಳಿದರು."ನನ್ನ ಹೆಸರು ಕೇಶವ, ನಾನು ಬನಜಾರಾ ಇದ್ದೇನೆ. ಕಬೀರರು ನನ್ನ ಆತ್ಮೀಯ ಮಿತ್ರರು. ಕಬೀರರು ನನಗೊಂದು ಪತ್ರ ಬರೆದಿದ್ದರು. ಇಲ್ಲೊಂದು ಸಣ್ಣ ಭೋಜನಕೂಟ ಅಂದರೆ ಅನ್ನ ದಾಸೋಹ ಏರ್ಪಡಿಸಬೇಕಿದೆ. ಸ್ವಲ್ಪ ಸಾಮಾನು ತಗೊಂಡು ಬನ್ನಿ. ಅವರ ಆದೇಶದ ಪಾಲನೆಗಾಗಿ ಸೇವಕನು ಹಾಜರಾಗಿದ್ದಾನೆ. ದಾಸೋಹ ನಡೆಯುತ್ತಿದೆ. ಚಿಕ್ಕ ದಾಸೋಹ ಮಾಡುವುದಿದೆ ಇದನ್ನು ಕೇಳಿದ ಶೇಖ್‌ತಕೀ ತಲೆಗೆ ಕೈ ಹಿಡಿದು ಭೂಮಿ ಮೇಲೆ ಕುಳಿತುಕೊಂಡ 18 ಲಕ್ಷ ಜನರು ಊಟ ಮಾಡಲು ಬಂದಿದ್ದಾರೆ. ಪ್ರತಿಯೊಬ್ಬರಿಗೂ ಚಿನ್ನದ ನಾಣ್ಯ, ಕಂಬಳಿ, ಗೋಧಿಹಿಟ್ಟು, ಬೇಳೆ, ಅಕ್ಕಿ, ತುಪ್ಪ ಎಲ್ಲವನ್ನೂ ಕೊಡಲಾಗುತ್ತಿದೆ. ಇದನ್ನು ಚಿಕ್ಕ ದಾಸೋಹ ಎಂದು ಹೇಳುತ್ತಿದ್ದಾರೆ. ಆದರೆ ಈರ್ಷ್ಯೆಯ ಬೆಂಕಿಯಲ್ಲಿ ಉರಿಯುತ್ತಾ ವಿಶ್ರಾಂತಿ ಗೃಹಕ್ಕೆ ಹೊರಟು ಹೋದನು, ಅಲ್ಲಿ ರಾಜ ತಂಗಿದ್ದನು. ಸಿಂಕದರ್ ಲೋಧಿ ಕೇಶವನನ್ನು ಕಬೀರರು ಏಕೆ ಬರಲಿಲ್ಲವೆಂದು ಕೇಳಿದನು. ಆಗ ಕೇಶವನು, "ಅವರ ಸೇವಕನೇ ಇಲ್ಲಿ ಹಾಜರಿರುವಾಗ ಅವರು ಕಷ್ಟವೇಕೆಪಡಬೇಕು? ಅವರಿಗೆ ಇಷ್ಟ ಬಂದಾಗ ಬರುತ್ತಾರೆ. ಈ ಕೂಟವಂತೂ ಮೂರು ದಿನ ನಡೆಯಲಿದೆ". ಎಂದನು. ಆಗ ಸಿಕಂದರ್ ಲೋಧಿ ಆನೆಯ ಮೇಲೇರಿ ಅಂಗರಕ್ಷಕಗಳೊಡನೆ ಕಬೀರರ ಗುಡಿಸಲಿನ ಕಡೆಗೆ ಬಂದನು. ಆನೆಯಿಂದಿಳಿದು, ಬಾಗಿಲನ್ನು ಬಡಿಯುತ್ತಾ ಈ ರೀತಿ ಹೇಳಿದನು, "ಹೇ ಭಗವಂತ, ಬಾಗಿಲು ತೆರೆಯಿರಿ. ನಿಮ್ಮ ಮಗ ಸಿಕಂದರ್ ಬಂದಿದ್ದಾನೆ." ಆಗ ಕಬೀರ್ ಪರಮೇಶ್ವರರು ಹೇಳಿದರು, "ಹೇ ರಾಜ, ಕೆಲ ವ್ಯಕ್ತಿಗಳು ನನ್ನ ಹಿಂದೆ ಬಿದ್ದಿದ್ದಾರೆ. ದಿನವೂ ಒಂದಲ್ಲಾ ಒಂದು ಕುತಂತ್ರ ರಚಿಸಿ ನನಗೆ ತೊಂದರೆ ಕೊಡುತ್ತಾರೆ. ಇಂದು ಸುಳ್ಳು ಪತ್ರ ಬರೆದು ಲಕ್ಷಗಟ್ಟಲೆ ಜನರನ್ನು ಕರೆಸಿದ್ದಾರೆ. ನಾನು ಬಡ ನೇಕಾರ ಬಟ್ಟೆ ನೇಯ್ದು ಕುಟುಂಬದ ಪಾಲನೆ ಪೋಷಣೆ ಮಾಡುತ್ತಿದ್ದೇನೆ. ನನ್ನ ಬಳಿ ಭೋಜನ ಕೂಟ ಏರ್ಪಡಿಸಲು ಹಾಗೂ ಉಡುಗೊರೆ ದಕ್ಷಿಣೆ ನೀಡಲು ಹಣವಿಲ್ಲ, ನಾನು ಈ ರಾತ್ರಿ ಕುಟುಂಬ ಸಹಿತ ಕಾಶಿ ನಗರವನ್ನು ತ್ಯಜಿಸಿ ಎಲ್ಲಾದರೂ ದೂರ ಹೊರಟು ಹೋಗುತ್ತೇನೆ. ನಾನು

ಬಾಗಿಲನ್ನು ತೆರೆಯಲಾರೆ." ಎಂದರು. ಆಗ ಸಿಕಂದರ್ ಲೋಧಿಯು, "ಹೇ ಕಾದಿರ್ ಅಲ್ಲಾಹ (ಸಮರ್ಥ ಪರಮಾತ್ಮ) ನಾನು ನಿಮ್ಮನ್ನು ಗುರುತಿಸಿದ್ದೇನೆ. ನೀವು ನನ್ನನ್ನು ಯಾಮಾರಿಸಲಾರಿರಿ. ನೀವು ಚೌಪಡ್‌ದ ಮೈದಾನದಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುವಿರಿ. ನಿಮ್ಮ ಮಿತ್ರ ಕೇಶವ ಬಂದಿದ್ದಾನೆ. ಅಪಾರವಾದ ಖಾದ್ಯ ಸಾಮಗ್ರಿಗಳನ್ನು ತಂದಿದ್ದಾನೆ. ಲಕ್ಷಗಟ್ಟಲೆ ಜನ ಊಟ ಮಾಡಿ ನಿಮ್ಮನ್ನು ಕೊಂಡಾಡುತ್ತಿದ್ದಾರೆ. ನಿಮ್ಮ ದರ್ಶನ ಪಡೆಯಲು ಆತುರರಾಗಿದ್ದಾರೆ. ಒಮ್ಮೆ ಬಾಗಿಲು ತೆಗೆದು ನಿಮ್ಮ ಗುಲಾಮನಾದ ಸಿಕಂದರನಿಗೆ ದರ್ಶನಕೊಡಿ" ಎಂದನು.

ಆಗ ಕಬೀರರು ಸಂತ ರವಿದಾಸರಿಗೆ, 'ಬಾಗಿಲು ತೆಗೆ' ಎಂದರು. ಬಾಗಿಲು ತೆರೆಯುತ್ತಿದ್ದಂತೆ ಸಿಕಂದರ್ ರಾಜನು ಚಪ್ಪಲಿ ತೆಗೆದು, ಕಿರೀಟ ಸಮೇತ ದೀರ್ಘದಂಡ ನಮಸ್ಕಾರ ಮಾಡಿದರು, ಕಾಶಿಯಲ್ಲಿ ನಡೆಯುತ್ತಿದ್ದ ಭೋಜನ ಕೂಟದಲ್ಲಿ ಪಾಲ್ಗೊಳ್ಳಲು ವಿನಂತಿಸಿದನು. ಕಬೀರರು ಹೊರಗೆ ಬಂದೊಡನೆ ಆಕಾಶದಿಂದ ಸುಂದರವಾದ ಕಿರೀಟವೊಂದು ಬಂದು, ಪರಮೇಶ್ವರ ಕಬೀರರ ತಲೆಯ ಮೇಲೆ ಅಲಂಕರಿಸಿತು. ಆಕಾಶದಿಂದ ಸುಗಂಧಿತ ಪುಷ್ಪವೃಷ್ಟಿಯಾಯಿತು. ರಾಜನು ಅವರನ್ನು ಆನೆಯ ಮೇಲೆ ಹತ್ತುವಂತೆ ಪ್ರಾರ್ಥಿಸಿದನು. ಕಬೀರರು ರವಿದಾಸನನ್ನು ಜೊತೆಗೆ ಕರೆದುಕೊಂಡರು. ರಾಜ, ರವಿದಾಸ್ ಮತ್ತು ಪರಮಾತ್ಮ ಕಬೀರರು, ಈ ಮೂವರೂ ಆನೆಯ ಮೇಲೆ ಹತ್ತಿ ಭೋಜನ ಕೂಟದ ಜಾಗಕ್ಕೆ ಬಂದರು. ಎಲ್ಲರಿಗಿಂತ ಮೊದಲು ಕಬೀರ ಸೇಠ್‌ರ ಪರಿಚಯ ಮಾಡಿಸಿದರು ಮತ್ತು ಕೇಶವನ ರೂಪದಲ್ಲಿ ಡಬಲ್ ರೋಲ್ ಮಾಡುತ್ತಾ ಅಲ್ಲಿ ಉಪಸ್ಥಿತಿ ಸಾಧು ಸಂತರ, ಭಕ್ತರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಸತ್ಸಂಗವನ್ನು ನೆರವೇರಿಸಿದರು. ಸತ್ಸಂಗವು 24 ಗಂಟೆಗಳವರೆಗೆ ನಡೆಯಿತು. ಲಕ್ಷಾಂತರ ಸಾಧುಗಳು ತಮ್ಮ ನಕಲಿ ಭಕ್ತಿಯನ್ನು ತ್ಯಜಿಸಿ, ಕಬೀರರಿಂದ ದೀಕ್ಷೆ ಪಡೆದರು. ತಮ್ಮ ಉದ್ಧಾರ ಮಾಡಿಕೊಂಡರು. ಭೋಜನಕೂಟ ಮುಗಿದ ನಂತರ ಉಳಿದ ಸಾಮಗ್ರಿಗಳನ್ನು ಎತ್ತುಗಳ ಮೇಲೆ ಹೇರಿಕೊಂಡು ಹೊರಟರು. ಆಗ ಸಿಕಂದರ್ ಲೋಧಿ ಹಾಗೂ ಶೇಖ್‌ತಕೀ, ಕೇಶವ್ ಮತ್ತು ಕಬೀರರು ಒಂದೆಡೆ ನಿಂತಿದ್ದರು. ಎಲ್ಲಾ ಎತ್ತುಗಳು ಮತ್ತು ಸೇವಾದಾರರು ಬನಜಾರಾ ವೇಷಭೂಷದಲ್ಲಿದ್ದವರು ಗಂಗಾ ನದಿ ದಾಟಿ ಹೊರಟು ಹೋದರು. ಸ್ವಲ್ಪ ಹೊತ್ತಿನ ನಂತರ ಸಿಕಂದರ್ ಲೋಧಿ ರಾಜನು ಕೇಶವನಿಗೆ ಹೇಳಿದನು ನೀವು ಹೋಗಿ ನಿಮ್ಮ ಎತ್ತುಗಳು ಮತ್ತು ಸೇವಾದಾರರು ಹೋಗುತ್ತಿದ್ದಾರೆ. ನಂತರ ಸಿಕಂದರ್ ಲೋಧಿಯು ಕೇಶವನನ್ನು ಹೋಗಲು ಹೇಳಿದನು. ಸ್ವಲ್ಪ ಹೊತ್ತಿನ ನಂತರ ಸೇವಕರು ಮತ್ತು ಮೂಟೆ ಹೊತ್ತ ಎತ್ತುಗಳು ಹೋದ ಕಡೆ ಸಿಕಂದರ್ ನೋಡಿದಾಗ, ಅಲ್ಲಿ ಯಾರೂ ಕಾಣಲಿಲ್ಲ. ಆಶ್ಚರ್ಯಗೊಂಡು ರಾಜನು "ಕಬೀರರೇ ಆ ಎತ್ತುಗಳು ಮತ್ತು ಸೇವದಾರರು ಇಷ್ಟು ಬೇಗ ಎಲ್ಲಿಗೆ ಹೋದರು?" ಎಂದು ಕೇಳಿದನು. ಅಷ್ಟರಲ್ಲಿ ನೋಡು ನೋಡುತ್ತಲೇ ಕೇಶವ್ ಸಹ ಕಬೀರರ ಶರೀರದಲ್ಲಿ ಲೀನವಾದನು, ಕೇವಲ ಕಬೀರರು ಒಬ್ಬರೇ ನಿಂತಿದ್ದರು. ಇದನ್ನು ನೋಡಿದ ರಾಜನು, "ಹೇ ಪರಮಾತ್ಮ ಈ ಲೀಲೆಯೆಲ್ಲಾ ನಿನ್ನದೇ! ನೀವು ಸ್ವತಃ ಪರಮಾತ್ಮ" ಎಂದನು. ಆಗ ಈರ್ಷೆಯಿಂದ ಶೇಖ್‌ತಕೀಯ ಮೈಯೆಲ್ಲಾ ಉರಿಯಿತು. ಇಂಥಾ ನೂರಾರು ಭೋಜನ ಕೂಟಗಳನ್ನು ನಾವು ಮಾಡಬಲ್ಲೆವು. ಇದೊಂದು ಭೋಜನ ಕೂಟವೇ? ಮಹೌಥಾ ಮಾಡಿದ್ದಾರೆ.

ಮಹೌಥಾ ಅಂದರೆ ಯಾರೋ ಗುರುವಿನ ಮೂಲಕ ಯಾವುದೋ ವೃದ್ಧನ ಮೋಕ್ಷಕ್ಕಾಗಿ ಮಾಡಲು ಹೇರಲಾಗುವ ಅನುಷ್ಠಾನ, ಅದಕ್ಕಾಗಿ ಎಲ್ಲಾ ಕೀಳಾದ ಸಾಮನು ತರಲಾಗುತ್ತದೆ. ಜಗ್ ಜೌನಾರ್ ಅಂದರೆ ವಿಶೇಷ ಖುಷಿಯ ಸಂದರ್ಭದಲ್ಲಿ ಮಾಡಲಾಗುವ ಅನುಷ್ಠಾನ, ಅದರಲ್ಲಿ ಅನುಷ್ಠಾನ ಮಾಡುವವನು ಮನಸ್ಸುಬಿಚ್ಚಿ ಹಣ ಖರ್ಚುಮಾಡುತ್ತಾನೆ.

ಸಂತ ಗರೀಬ್ ದಾಸರು ಹೇಳಿದ್ದಾರೆ:–

ಗರೀಬ್, ಕೋಈ ಕಹ್ ಜಗ್ ಜೌನಾರ್ ಕರೀ ಹೈ, ಕೋಈ ಕಹೆ ಮಹೌಥಾ ।
ಬಡೇ ಬಡಾಈ ಕಿಯಾ ಕರೇಂ, ಗಾಲೀ ಕಾಢೆ ಔಛಾ ॥

ಶಬ್ದಾರ್ಥ:– ಆ ಭೋಜನಕೂಟ ಅಂದರೆ ಅನ್ನ ದಾಸೋಹವನ್ನು ನೋಡಿ ಒಳ್ಳೆಯ ವ್ಯಕ್ತಿಗಳು

ಏನು ಹೇಳುತ್ತಿದ್ದರೆಂದರೆ, ಜಗ್ ಜೌನಾರ್ ಎಂದರೆ ಮನಸ್ಸು ಬಿಚ್ಚಿ ಧರ್ಮಕ್ಕಾಗಿ ಹಣವನ್ನು ವ್ಯಯಿಸಿ, ಧರ್ಮದ ಕಾರ್ಯವನ್ನು ಮಾಡಿದ್ದಾರೆ. ಧರ್ಮಯಜ್ಞವನ್ನು ಮಾಡಿ ಊಟ ಮಾಡಿಸಿದ್ದಾರೆ ಎನ್ನುತ್ತಿದ್ದರು. ಅಹಂಕಾರಿ ದುಷ್ಟ ವ್ಯಕ್ತಿಗಳು ಮಹೌಥಾ ಮಾಡಿದ್ದಾರೆ ಅಂದರೆ ಮನಸ್ಸಿಲ್ಲದೇ ಕಡಿಮೆ ಖರ್ಚು ಮಾಡಿ ಭೋಜನ ಕೂಟವನ್ನು ಏರ್ಪಡಿಸಿದ್ದಾರೆ ಎಂದು ಹೇಳುತ್ತಿದ್ದರು.

ಸಾರಾಂಶ:– ಕಬೀರರು ಭಕ್ತರಿಗೆ ಉದಾಹರಣೆ ಸಹಿತ ವಿವರಿಸಿದ್ದಾರೆ, ಒಂದು ವೇಳೆ ನೀವು ನನ್ನ ಹಾಗೆ ಒಳ್ಳೆಯ ಮನಸ್ಸಿನಿಂದ ಭಕ್ತಿ ಮಾಡುತ್ತಿದ್ದರೆ ಹಾಗೂ ಪ್ರಾಮಾಣಿಕತೆಯಿಂದ ಇದ್ದರೆ ಪರಮಾತ್ಮನು ನಿಮಗೆ ಹೀಗೆ ಸಹಾಯ ಮಾಡುವನು. ಭಕ್ತನೇ ವಾಸ್ತವದಲ್ಲಿ ಸೇಠ್ ಅಂದರೆ ಧನವಂತನು, ಭಕ್ತನ ಬಳಿ ಎರಡೂ ಆಸ್ತಿಗಳಿವೆ. ಒಂದು, ಪ್ರಪಂಚದಲ್ಲಿ ಬೇಕಾಗಿರುವ ಹಣವೆಂಬ ಧನ, ಎರಡನೆಯದು ಸತ್ಯ ಸಾಧನೆಯೆಂಬ ಧನ ಭಕ್ತನ ಬಳಿ ಇರುತ್ತದೆ.

## "ಆ ಭೋಜನ ಕೂಟದಲ್ಲಿ ನಡೆದ ಇನ್ನೊಂದು ಚಮತ್ಕಾರ"

ಆ ಉತ್ಸವವು (ದಾಸೋಹ) ಮೂರು ದಿನಗಳವರೆಗೆ ನಡೆಯಿತು. ಒಂದು ದಿನದಲ್ಲಿ ಪ್ರತೀ ವ್ಯಕ್ತಿಯು ಎರೆಡುಬಾರಿ ಊಟ ಮಾಡುತ್ತಿದ್ದನು. ಕೆಲವರು 3–4 ಸಾರಿ ಊಟಮಾಡುತ್ತಿದ್ದರು. ಏಕೆಂದರೆ ಪ್ರತ್ಯೇಕ ಊಟವಾದ ನಂತರ 1 ಚಿನ್ನದ ನಾಣ್ಯ (10 ಗ್ರಾಮ) ಹಾಗೂ ಒಂದು ಕಂಬಳಿ(ಬಹಳ ಅಮೂಲ್ಯವಾದ ಶಾಲ್) ದಕ್ಷಿಣೆ ಕೊಡಲಾಗುತ್ತಿತ್ತು. ಈ ದುರಾಸೆಯಿಂದ ಮತ್ತೆ ಮತ್ತೆ ಊಟ ಮಾಡುತ್ತಿದ್ದರು. ಮೂರುದಿನಗಳ ತನಕ 18 ಲಕ್ಷ ಜನ ಶೌಚಕ್ಕೆ ಹೋಗಿ ಜನ ಶೌಚಕ್ಕೆ ಹೋದರೆ ಕಾಶಿಯ ಸುತ್ತಲೂ ಮಲದ ಗುಡ್ಡೆ ಏರ್ಪಡುತ್ತಿತ್ತು. ಕಾಶಿಯನ್ನು ಕೊಳೆತು ನಾರುವಂತೆ ಮಾಡುತ್ತಿತ್ತು. ಕಾಶಿ ನಿವಾಸಿಗಳು ಮತ್ತು ಆ 18 ಲಕ್ಷ ಅತಿಥಿಗಳಲ್ಲದೆ 1 ಲಕ್ಷ ಸೇವಾದಾರರು ಸತ್ಯ ಲೋಕದಿಂದ ಬಂದಿದ್ದರು. ಆ ಮಲದ ಗುಡ್ಡ ಹತ್ತುತ್ತಿದ್ದರೆ, ಉಸಿರಾಡುವುದೇ ಕಷ್ಟವಾಗುತ್ತಿತ್ತು. ಆದರೆ ಈ ರೀತಿ ಆಗಲೇ ಇಲ್ಲ. ಎಲ್ಲರೂ ದಿನಕ್ಕೆ 3–4 ಬಾರಿ ಊಟ ಮಾಡುತ್ತಿದ್ದರು. ಆದರೆ ಒಂದು ಬಾರಿಯೂ ಶೌಚಕ್ಕೆ ಹೋಗುತ್ತಿರಲಿಲ್ಲ. ತುಂಬಾ ಸ್ವಾದಿಷ್ಟವಾದ ಊಟವಾಗಿತ್ತು. ಎಲ್ಲರೂ ಹೊಟ್ಟೆ ಬಿರಿಯುವಷ್ಟು ತಿನ್ನುತ್ತಿದ್ದರು. ಮೊದಲಿಗಿಂತ ಎರಡುಪಟ್ಟು ಹೆಚ್ಚು ಊಟ ಮಾಡುತ್ತಿದ್ದರು. ಆದರೆ, ಅವರಿಗೆ ಹೊಟ್ಟೆ ಉಬ್ಬರವಾಗಲಿಲ್ಲ ಹಾಗೂ ಹಸಿವೂ ಚೆನ್ನಾಗೇ ಆಗುತ್ತಿತ್ತು, ಆದ್ದರಿಂದ ಅವರಿಗೆ ತಾವು ರೋಗಿ ಅಲ್ಲ ತಾನೇ ಎಂಬ ಸಂದೇಹ ಮೂಡಿತು. ಸತ್ಯಲೋಕದಿಂದ ಬಂದ ಸೇವಾದಾರರಿಗೆ ಈ ವಿಷಯ ತಿಳಿಸಿದಾಗ ಅವರು, ಈ ಊಟವನ್ನು ಗಿಡ ಮೂಲಿಕೆಗಳನ್ನು ಸೇರಿಸಿ ತಯಾರಿಸಲಾಗಿದೆ. ಇದರಿಂದ ಶರೀರದಲ್ಲಿ ಊಟವು ಲೀನವಾಗುತ್ತದೆ" ಎಂದರು. ನಾವು ದಿನವೂ ಇಂಥಾ ಊಟವನ್ನೇ ತಯಾರಿಸಿ, ತಿನ್ನುತ್ತೇವೆ. ನಾವು ಎಂದಿಗೂ ಶೌಚಕ್ಕೆ ಹೋಗುವುದಿಲ್ಲ. ಮೂತ್ರ ವಿಸರ್ಜನೆಗೆ ಹೋಗುವುದಿಲ್ಲ. ನೀವು ನಿಶ್ಚಿಂತೆಯಿಂದ ಇರಿ, ಎಂದರು. ಆದರೂ ಇಷ್ಟು ಊಟ ಮಾಡಿದರೂ ಕೊಂಚವಾದರೂ ಮಲ ಹೊರಬರಲೇ ಬೇಕಲ್ಲಾ ಎಂದು ಅವರು ಚಿಂತಿಸುತ್ತಿದ್ದರು. ಅವರಿಗೆ ಶೌಚಕ್ಕೆ ಹೋಗಲು ಒತ್ತಡ ಬಂತು, ಎಲ್ಲರೂ ನಗರದ ಹೊರಗಡೆ ಏಕಾಂತ ಸ್ಥಳವನ್ನು ಹುಡುಕಿಕೊಂಡು ಹೋಗಿ ಶೌಚಕ್ಕೆ ಕುಳಿತರು. ಮಲವಂತೂ ಹೊರ ಬರಲಿಲ್ಲ. ಗುದದ್ವಾರದಿಂದ ಒಂದು ರೀತಿಯ ಸುಗಂಧ ಭರಿತ ವಾಯು ಹೊರಬಂದಿತು, ಕೇತಕಿ ಹೂವಿನ ನೀರು ಸಿಂಪಡಿಸಿದಂತೆ. ಇದನ್ನು ನೋಡಿ ಸೇವಾದರರು ಹೇಳಿದ್ದು ನಿಜವೆಂದು ನಂಬಿದರು. ಆಗ ಅವರ ಭಯವೆಲ್ಲಾ ದೂರವಾಯಿತು. ಆದರೂ ಅವರ ಕಣ್ಣುಗಳಿಗೆ ಅಜ್ಞಾನದ ಪೊರೆ ಆವರಿಸಿತ್ತು. ಅವರು ಪರಮೇಶ್ವರ ಕಬೀರರನ್ನು ಪರಮೇಶ್ವರರೆಂದು ಸ್ವೀಕರಿಸಲಿಲ್ಲ.

ಪುರಾಣಗಳಲ್ಲೂ ಒಂದು ಪ್ರಕರಣವಿದೆ. ಅಯೋಧ್ಯೆಯ ರಾಜ ಋಷಭದೇವನು ರಾಜ್ಯವನ್ನು ತೊರೆದು ಕಾಡುಗಳಲ್ಲಿ ಸಾಧನೆ ಮಾಡುತ್ತಿದ್ದನು. ಅವನ ಭೋಜನವು ಸ್ವರ್ಗದಿಂದ ಬರುತ್ತಿತ್ತು. ಅವನ ಮಲದಿಂದ ಸುಗಂಧ ಬರುತ್ತಿತ್ತು. ಅಕ್ಕ ಪಕ್ಕದಲ್ಲಿದ್ದ ಜನರು ಇದನ್ನು ನೋಡಿ ಆಶ್ಚರ್ಯಚಕಿತರಾಗುತ್ತಿದ್ದರು. ಇದೇ ರೀತಿ ಸತ್ಯಲೋಕದ ಆಹಾರ ತಿನ್ನುವುದರಿಂದ ಕೇವಲ ಸುಗಂಧವೇ ಹೊರ ಬರುತ್ತದೆ,

ಮಲವಲ್ಲ. ಸ್ವರ್ಗವಂತೂ ಸತ್ಯಲೋಕದ ನಕಲು, ನಕಲೀ (**Duplicate**) ಇದೆ.

**ಪ್ರಶ್ನೆ:– ಭಕ್ತಿ ಮಾಡಲು ಮನೆ ತ್ಯಜಿಸಿ ಹೋಗಬೇಕೋ ಅಥವಾ ಮನೆಯಲ್ಲೇ ಇದ್ದು ಭಕ್ತಿ ಮಾಡಬೇಕು ಇದರಲ್ಲಿ ಶ್ರೇಷ್ಠಯಾವುದು?**

ಉತ್ತರ:– ಶಾಸ್ತ್ರವಿಧಿಯ ಪ್ರಕಾರ ಪೂರ್ಣಗುರುವಿನಿಂದ ದೀಕ್ಷೆಪಡೆದು ಭಕ್ತಿ, ಮರ್ಯಾದೆಯನ್ನು ನಿರ್ವಹಿಸುತ್ತಾ, ಜೀವನಪರ್ಯಂತ ಸಾಧನೆ ಮಾಡುವುದರಿಂದ ಮೋಕ್ಷ ಪ್ರಾಪ್ತಿಯಾಗುವುದು. ಮನೆ ಬಿಟ್ಟು ಕಾಡಿನಲ್ಲಿರಲು ಹೋದರೆ ಊಟಕ್ಕಾಗಿ ಮತ್ತೆ ಊರಿಗೆ ಬಂದು ಯಾರದಾದರೂ ಗೃಹಸ್ಥರ ಬಾಗಿಲು ತಟ್ಟಬೇಕಾಗುವುದು. ಬಿಸಿಲು, ಮಳೆ, ಚಳಿ ಗಾಳಿಯಿಂದ ತಪ್ಪಿಸಿಕೊಳ್ಳಲು ಗುಡಿಸಲು ಕಟ್ಟಬೇಕಾಗಬಹುದು. ಬಟ್ಟೆ ಕೇಳಬೇಕು. ಮತ್ತೆ ಅಲ್ಲೇ ಇನ್ನೊಂದು ಮನೆ ಕಟ್ಟಬೇಕು. ಆದ್ದರಿಂದ "ಮನೆಯಲ್ಲೇ ಇದ್ದು ಸತ್ಯಸಾಧನೆ ಮಾಡಿ, ಮೋಕ್ಷ ಕಟ್ಟಿಟ್ಟ ಬುತ್ತಿ. ಮದುವೆಯಾಗಿರಲಿ, ಆಗದಿರಲಿ, ಎಲ್ಲರೂ ಭಕ್ತಿ ಮಾಡಿದರೆ ಮೋಕ್ಷ ಪಡೆಯಬಹುದು. ಕೆಲವರು ಕೇವಲ ಬ್ರಹ್ಮಚಾರಿಗಳಾಗಿದ್ದರೆ ಮಾತ್ರ ಮೋಕ್ಷವಾಗುವುದೆಂದು ಹೇಳುತ್ತಾರೆ. ಇದರ ಉತ್ತರ ನಾವು ಸತ್ಯ ಸಾಧನೆ ಶಾಸ್ತ್ರಾನುಕೂಲ ಮಾಡಿದರೆ ಇಬ್ಬರೂ ಮೋಕ್ಷ ಪಡೆಯಬಹುದು.

ಉದಾಹರಣೆ:– ಭಕ್ತ ಧ್ರುವ ಮತ್ತು ಭಕ್ತ ಪ್ರಹ್ಲಾದ ಇಬ್ಬರಿಗೂ ಮೋಕ್ಷ ಪ್ರಾಪ್ತಿಯಾಗಿದೆ ಎಂದು ನಾವು ನಂಬುತ್ತೇವೆ. ಇವರಿಬ್ಬರಿಗೂ ಮದುವೆ ಮಾಡಿಕೊಂಡಿದ್ದರು, ಮಕ್ಕಳೂ ಇದ್ದರು. ಪ್ರಹ್ಲಾದನ ಮಗ ಬೈಲೋಚನ, ಮೊಮ್ಮಗ ಬಲಿ ಚಕ್ರವರ್ತಿ, ಇವನು ನೂರು ಯಜ್ಞಗಳನ್ನು ಮಾಡಿದ್ದನು. ಪರಮಾತ್ಮನು ವಾಮನನ ರೂಪದಲ್ಲಿ ಬಂದು ಮೂರು ಹೆಜ್ಜೆ ಜಾಗವನ್ನು ದಾನವಾಗಿ ಪಡೆದಿದ್ದನು. ಬ್ರಹ್ಮಚಾರಿಗಳು ಮಾತ್ರ ಮೋಕ್ಷ ಪಡೆಯುವರು ಎಂದಾದರೆ ಮಂಗಳಮುಖಿಗಳು ಯಾವಾಗಲೂ ಬ್ರಹ್ಮಚಾರಿಗಳೇ, ಹಾಗಾದರೆ ಅವರಿಗೆಲ್ಲಾ ಮೋಕ್ಷ ಸಿಗುವುದೇ?

ಸತ್ಯ ಸಾಧನೆ ಮಾಡಿದರೆ ಮಂಗಳಮುಖಿಗಳು, ಬ್ರಹ್ಮಚಾರಿಗಳು, ಗೃಹಸ್ಥರು, ಹೆಂಗಸರು, ಗಂಡಸರು ಎಲ್ಲರಿಗೂ ಮೋಕ್ಷ ಪ್ರಾಪ್ತಿಯಾಗುತ್ತದೆ. ಸಂತ ಗರೀಬ್‌ದಾಸರು ಕಬೀರರ ಜ್ಞಾನವನ್ನು ಹೇಳಿದ್ದಾರೆ ಅಂದರೆ:–

ಗರೀಬ್, ಡೇರೆ ಡಾಂಡ್ಯೆ ಖುಶ್ ರಹೋ, ಖುಸರೇ ಲಹೆಂ ನಾ ಮೋಕ್ಷ್ ।
ಧ್ರುವ್–ಪ್ರಹಲಾದ್ ಪಾರ್ ಹುಯೆ, ಫಿರ್ ಡೇರೇ (ಘರ್) ಮೆಂ ಕ್ಯಾ ದೋಷ್ ॥1॥
ಗರೀಬ್, ಕೇಲೇ ಕೀ ಕೋಪೀನ್ ಹೈ, ಫೂಲ್–ಪಾತ್–ಫಲ್ ಖಾಂಈ ।
ನರ್ ಕಾ ಮುಖ್ ನಹೀಂ ದೇಖ್ತೆ, ಬಸ್ತೀ ನಿಕಟ ನಹೀಂ ಜಾಈಂ ॥2॥
ಗರೀಬ್, ವೇ ಜಂಗಲ್ ಕೇ ರೋಝ್ ಹೈಂ, ಜೋ ಮನುಷ್ಯೋಂ ಬಿದಕೇ ಜಾಹೀಂ ।
ನಿಶ್ ದಿನ್ ಫಿರೋ ಉಜಾಡ್ ಮೆಂ, ಯೂಂ ಸಾಂಯೀ ಪಾವೈ ನಾಹೀಂ ॥3॥
ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಂಈ ಸಿರ್ ಪರ್ ರಾಖಿಯೇ, ಸಹೀ ಭಕ್ತ್ ಹರ್‌ಲಾಲ್ ॥4॥

ಭಾವಾರ್ಥ:– ವಾಣಿ ಸಂಖ್ಯೆ 1ರ ಭಾವಾರ್ಥ ಮೇಲೆ ತಿಳಿಸಲಾಗಿದೆ.

ವಾಣಿ ಸಂಖ್ಯೆ 2–3ರ ಭಾವಾರ್ಥ:– ನಾವು ಸಂತರ ಹುಡುಕಾಟದಲ್ಲಿ ಬೆಟ್ಟ ಗುಡ್ಡ ಕಾಡುಮೇಡು ಅಲೆದಿದ್ದೇವೆ ಎಂದು ಕೆಲವರು ಹೇಳುತ್ತಿದ್ದರು. ಒಂದು ಕಾಡಿನಲ್ಲಿ ಒಬ್ಬ ಸಾಧು ಇರುತ್ತಿದ್ದನು. ಆ ಸಾಧುವು ಬಾಳೆ ಎಲೆಯನ್ನು ಲಂಗೋಟಿಯಂತೆ ಧರಿಸುತ್ತಾನೆ ಹಾಗೂ ಕಾಡಿನಲ್ಲಿ ಎಲೆ, ಹೂವು ಹಣ್ಣುಗಳನ್ನು ತಿನ್ನುತ್ತಾನೆ ಎಂದು ಅಲ್ಲಿಯ ಸುತ್ತಮುತ್ತಲಿನ ಜನರೆಲ್ಲಾ ಹೇಳುತ್ತಿದ್ದರು. ಹಳ್ಳಿಯ ಹತ್ತಿರವೂ ಅವನು ಸುಳಿಯುತ್ತಿರಲಿಲ್ಲ. ಮನುಷ್ಯರ ಮುಖವನ್ನೇ ನೋಡುತ್ತಿರಲಿಲ್ಲ, ನೋಡಿದಾಕ್ಷಣ ಒಂದೇ ಉಸಿರಿಗೆ ಓಡಿಹೋಗಿ ಕಾಡನ್ನು ಸೇರುತ್ತಿದ್ದ, ಯಾರಿಗೆ ಅವನ ದರ್ಶನವಾಗುವುದೋ ಅವರ ಅದೃಷ್ಟ ತರೆಯುತ್ತದೆ ಎಂದು ಜನರೆಲ್ಲಾ ಹೇಳುತ್ತಿದ್ದರು. ಅವನ ದರ್ಶನಕ್ಕಾಗಿ ಎಷ್ಟೋ ದಿನ ನಾವು ಕಾಡಿಗೆ ಬೆಳಿಗ್ಗೆ ಹೋಗಿ ಸಂಜೆ ಮರಳಿ ಬರುತ್ತಿದ್ದವು. 1 ದಿನ ಓಡಿ ಹೋಗುತ್ತಿರುವ ಸಾಧು

ಕಂಡನು. ಅವನ ಬೆನ್ನು ಮಾತ್ರ ಕಾಣಿಸಿತು. ದರ್ಶನವಾಗುತ್ತಿದ್ದಂತೆ ಮಾಯವಾಗಿ ಹೋದನು. ಇಲ್ಲಿ ಯೋಚಿಸಬೇಕಾದ ವಿಷಯವೆಂದರೆ, ಆ ವ್ಯಕ್ತಿ ಅಪರಾಧಿಯಾಗಿದ್ದು, ಪೋಲಿಸರಿಂದ ತಪ್ಪಿಸಿಕೊಳ್ಳಲು ಈ ರೀತಿ ನಾಟಕವಾಡುತ್ತಿರಬೇಕಲ್ಲವೇ? ಸಂತ ಗರೀಬ್‌ದಾಸರು ಇಂಥಾ ವ್ಯಕ್ತಿಯನ್ನು ನೀಲ್‌ಗಾಯ್ ಎಂಬ ಪ್ರಾಣಿಗೆ ಹೋಲಿಸಿದ್ದಾರೆ. ಈ ಪ್ರಾಣಿಯು ಮನುಷ್ಯರನ್ನು ನೋಡಿದಾಕ್ಷಣ ಹೆದರಿ, ಓಡುತ್ತಿರುತ್ತವೆ. ಇಂಥಾ ವ್ಯಕ್ತಿಗಳು ಹಗಲಿರುಳೂ ಕಾಡಿನಲ್ಲಿದ್ದರೂ ಪರಮಾತ್ಮನು ಪ್ರಾಪ್ತಿಯಾಗುವುದಿಲ್ಲ.

**ವಾಣಿ ಸಂಖ್ಯೆ 4ರ ಭಾವಾರ್ಥ:–**

ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಂಈ ಸಿರ್ ಪರ್ ರಾಖಿಯೇ, ಸಹೀ ಭಕ್ತ್ ಹರ್‌ಲಾಲ್ ॥

**ಭಾವಾರ್ಥ:–**

## "ಹರ್‌ಲಾಲ್ ರೈತನ ಕತೆ"

ಹರಿಯಾಣ ರಾಜ್ಯದ ಝಜ್ಜರ್ ಜಿಲ್ಲೆಯ ಬೆರೀ ಎಂಬ ಹಳ್ಳಿಯಲ್ಲಿ ಒಬ್ಬ ಹರ್‌ಲಾಲ್ ಹೆಸರಿನ ರೈತನಿದ್ದನು. ಅವನು ಧಾರ್ಮಿಕನಾಗಿದ್ದನು. ಅವನ ಕುಟುಂಬದವರೆಲ್ಲರೂ ಧಾರ್ಮಿಕರಾಗಿದ್ದರು. ಸಂತನ ವೇಷದಲ್ಲಿ ಒಬ್ಬ ವ್ಯಕ್ತಿಯು ಆ ಊರಿಗೆ ಬಂದು ಒಂದು ಧರ್ಮಛತ್ರದಲ್ಲಿ ತಂಗಿದ್ದನು. ಕೆಲವು ದಿನ ಸತ್ಸಂಗ ನಡೆಸಿದನು. ಹರ್‌ಲಾಲ್ ಅವನ ಪರಿಚಯ ಕೇಳಿದಾಗ, ಅವನಿಗೆ ಯಾರೂ ಇಲ್ಲವೆಂದು ತಿಳಿಯಿತು. ಬಾಲ್ಯದಲ್ಲೇ ತಂದೆ ತಾಯಿಯರು ತೀರಿಕೊಂಡಿದ್ದರು. ಭಕ್ತಿ ಮಾಡಲು ಮನೆ ಬಿಟ್ಟಿರುವನು ಹಾಗಾಗಿ ಆ ವ್ಯಕ್ತಿಯನ್ನು ತಮ್ಮ ಮನೆಯಲ್ಲಿರುವಂತೆ ಹರ್‌ಲಾಲರು ಒತ್ತಾಯಿಸಿದರು. ನಮಗೆ ಸಂತರ ಸೇವೆ ಸಿಗುವುದು ಹಾಗೂ ಭಕ್ತಿ ಮಾಡಲು ಸಮಯ ಸಿಗುವುದೆಂದು ಹೇಳಿದಾಗ ಆ ವ್ಯಕ್ತಿಯು ಒಪ್ಪಿಕೊಂಡನು. ಭಕ್ತ ಹರ್‌ಲಾಲ್‌ನ ಎರಡು ಮನೆಗಳಿದ್ದವು. ಒಂದರಲ್ಲಿ ಸ್ತ್ರೀಯರು ಇರುತ್ತಿದ್ದರು. ಇನ್ನೊಂದು ಮನೆ ಸ್ವಲ್ಪ ದೂರದಲ್ಲಿತ್ತು. ಅಲ್ಲಿ ಪಶುಗಳನ್ನು ಸಾಕಿದ್ದ ಹಾಗೂ ಪುರುಷ ಸದಸ್ಯರು ಇರುತ್ತಿದ್ದರು. ಆ ಮನೆಯ ಮಹಡಿಯ ಮೇಲೆ ಆ ಸಾಧುಗೆ ಇರಲು ವಿನಂತಿಸಿದನು. ಇಡೀ ಕುಟುಂಬ ಆ ವ್ಯಕ್ತಿಯ ಸೇವೆ ಮಾಡತೊಡಗಿತು. 2–3 ಹೊತ್ತು ಊಟ ನೀಡುತ್ತಿದ್ದರು. ಹೀಗೆ ಕೆಲ ವರ್ಷಗಳ ನಂತರ ಆ ವ್ಯಕ್ತಿ ಅಲ್ಲೇ ತೀರಿಕೊಂಡನು. ಅವನ ಸಂಸ್ಕಾರವನ್ನು ಮಾಡಿ, ಅವನ ಸ್ಮಾರಕವನ್ನು ತನ್ನ ಹೊಲದಲ್ಲಿ ಸ್ಥಾಪಿಸಿದನು.

ಹರ್‌ಲಾಲ್ ರೈತ ಎತ್ತಿನಬಂಡಿ ಮೂಲಕ ವ್ಯಾಪಾರಿಗಳ ಸಾಮಾನು ಒಂದು ಮಾರುಕಟ್ಟೆಯಿಂದ ಇನ್ನೊಂದು ಮಾರುಕಟ್ಟೆಗೆ ಬಾಡಿಗೆ ತಗೊಂಡು ಹೋಗುತ್ತಿದ್ದನು. ಹೇಗೆ ಟ್ರಕ್ ಅಥವಾ ಟ್ರೈಂಕರ್ ಇತ್ಯಾದಿಗಳ ಮೇಲೆ ಬಾಡಿಗೆ ಸಾಮನು ತಗೊಂಡು ಬೇರೆ ಮಾರುಕಟ್ಟೆಗೆ ಸಾಗಿಸುತ್ತಿದ್ದರು. ಇಸವಿ 1750ರ ಸಮಯ. ಎತ್ತಿನಗಾಡಿಗಳಲ್ಲಿ ಸಕ್ಕರೆ, ಅಕ್ಕಿ, ಗೋಧಿ, ನವಣೆ, ಜೋಳ, ಬೆಲ್ಲ ಮುಂತಾದವುಗಳನ್ನು ಬಾಡಿಗೆ ಆಧಾರದ ಮೇಲೆ ಸಾಗಿಸುತ್ತಿದ್ದರು. ಬೇರಿ ಹಳ್ಳಿಯಿಂದ ನಜಫ್‌ಗಢ್‌ಗೆ ಹೋಗಬೇಕಾದರೆ ಛುಡಾನೀ ಎನ್ನುವ ಹಳ್ಳಿಯ ಮೂಲಕ ಹೋಗಬೇಕಿತ್ತು. ಹರ್‌ಲಾಲ್‌ನ 1 ಎತ್ತು ಬಿಳಿ ಬಣ್ಣದ್ದಾಗಿತ್ತು ಮತ್ತು ಕೆಲಸ ಮಾಡುತ್ತಿರಲಿಲ್ಲ, ಮಾರ್ಗ ಮಧ್ಯೆ ಅಲ್ಲಲ್ಲಿ ಕುಳಿತುಬಿಡುತ್ತಿತ್ತು. ಅದನ್ನು ಕೋಲಿನಿಂದ ಹೊಡೆದು–ಹೊಡೆದು ಎಬ್ಬಿಸುತ್ತಿದ್ದನು ಸ್ವಲ್ಪ ದೂರದಲ್ಲಿ ಹೋಗಿ ಮತ್ತೆ ಕುಳಿತು ಬಿಡುತ್ತಿತ್ತು. ಇದು ಹೀಗೆಯೇ ನಡೆಯುತ್ತಿತ್ತು. 1 ದಿನ ಬೇಸಿಗೆ ಕಾಲದಲ್ಲಿ ಬೆಳಗ್ಗಿನ ಜಾವ 4 ಗಂಟೆಗೆ ಹರ್‌ಲಾಲ್ ನಜಫಗಢ್ ಮಾರುಕಟ್ಟೆಯಿಂದ ಸಾಮಾನು ತುಂಬಿ ಬರುತ್ತಿದ್ದನು, ಛುಡಾನಿ ಹಳ್ಳಿಯ ಸ್ವಲ್ಪ ದೂರದ 1 ಬಾವಿಯ ಬಳಿ ಆ ಎತ್ತು ಕುಳಿತುಬಿಟ್ಟಿತು. ಹರ್‌ಲಾಲ್ ಕೋಲಿನಿಂದ ಅದಕ್ಕೆ ಹೊಡೆಯಲಾರಂಭಿಸಿದನು. ಆ ಬಾವಿಯ ಬಳಿ ಸಂತ ಗರೀಬ್‌ದಾಸರು ಸ್ನಾನ ಮಾಡುತ್ತಿದ್ದರು. ಅದನ್ನು ನೋಡಿ ಎತ್ತಿಗೆ ಹೊಡಿಯಬೇಡವೆಂದು ಹರ್‌ಲಾಲ್‌ಗೆ ತಿಳಿಸಿದರು, ಸಂತ ಗರೀಬ್‌ದಾಸರು ಜಾಟ್ ರೈತರಾಗಿದ್ದರು. ಅವರು ಹರಿಯಾಣದ ಸಾಧಾರಣವಾದ ಪಂಚೆ ಕುರ್ತ ಧರಿಸಿದ್ದರು. ಹರ್‌ಲಾಲ್, ಹೇಳಿದ "ಸಹೋದರ, ನೋಡು ಇದು ನನ್ನ ರಕ್ತ ಕುಡಿದಿದೆ. ಅರ್ಧ

ಮೈಲಿ ನಡೆಯುತ್ತದೆ, ನಂತರ ಕುಳಿತು ಬಿಡುತ್ತದೆ". ಆಗ ಸಂತ ಗರೀಬ್‌ದಾಸರು ಆ ಎತ್ತಿನ ಬಳಿ ಹೋಗಿ ಅದರ ಕಿವಿಯಲ್ಲಿ ಏನೋ ಹೇಳಿದರು. ತಕ್ಷಣವೇ ಆ ಎತ್ತು ಎದ್ದು ನಿಂತುಕೊಂಡಿತು. ಸಂತ ಗರೀಬ್‌ದಾಸರು, ಈಗ ಈ ಎತ್ತು ಸರಿಯಾಗಿ ನಡೆಯುವುದು ಎಂದು ಹೇಳಿದರು. ಹರ್‌ಲಾಲ್‌ನಿಗೆ ನಂಬಿಕೆಯಾಗಲಿಲ್ಲ. ಗಾಡಿ ತೆಗೆದುಕೊಂಡು ಹೊರಟನು. ಆ ಬಿಳಿ ಎತ್ತು ಇನ್ನೊಂದು ಎತ್ತಿಗಿಂತ ವೇಗವಾಗಿ ಹೊರಡಲಾರಂಭಿಸಿತು. ಛುಡಾನಿಯಿಂದ ಬೇರಿಯವರೆಗೆ ಒಮ್ಮೆಯೂ ಕುಳಿತುಕೊಳ್ಳಲಿಲ್ಲ. ಹರ್‌ಲಾಲ್‌ನಿಗೆ ಸಂತೋಷದ ಜೊತೆಗೆ ಆಶ್ಚರ್ಯವೂ ಆಯಿತು. ಈ ವಿಷಯವನ್ನು ಮನೆಯವರಿಗೆ ತಿಳಿಸಿದರೆ ಅವರೂ ನಂಬಲಿಲ್ಲ. ನಂತರ ಹರ್‌ಲಾಲ್ ರೈತ ಛುಡಾನಿ ಹಳ್ಳಿಗೆ ತೆರಳಿದನು. ಅವನು ಸ್ನಾನ ಮಾಡುತ್ತಿದ್ದ ವ್ಯಕ್ತಿಯ ಹೆಸರನ್ನು ಕೇಳಿರಲಿಲ್ಲ. ಹಾಗಾಗಿ ಅವನು ಛುಡಾನೀ ದಿಂದ ಹೊರಟನು. ಪ್ರತಿದಿನವೂ ಸ್ನಾನಕ್ಕಾಗಿ ಅಲ್ಲಿಗೆ ಬರಬಹುದೆಂದು ಯೋಚಿಸಿದನು. ಆದ್ದರಿಂದ ಮರುದಿನ ಬೆಳಗ್ಗಿನ ನಾಲ್ಕು ಗಂಟೆಗೆ ಆ ಬಾವಿಯ ಬಳಿ ತೆರಳಿದನು. ಆಗ ಗರೀಬ್‌ದಾಸರು, "ಹೇ ಸಹೋದರ ಹರ್‌ಲಾಲ್ ಆ ಎತ್ತಿನ ಬಗ್ಗೆ ಕೇಳಲು ಬಂದಿರುವೆಯಾ?" ಎಂದು ಕೇಳಿದರು. ಹರ್‌ಲಾಲ್ "ನಿಮಗೆ ಎಲ್ಲವೂ ಗೊತ್ತಿದೆ. ನೀವು ಆ ಎತ್ತಿಗೆ ಏನು ಜಾದೂ ಮಾಡಿದಿರಿ? ಆ ಎತ್ತು ಎಲ್ಲರಿಗಿಂತ ವೇಗವಾಗಿ ನಡೆಯುತ್ತಿದೆ" ಎಂದನು. ಆಗ ಗರೀಬ್‌ದಾಸರು ಕೇಳಿದರು. "ನಿಮ್ಮ ಮನೆಯಲ್ಲಿ ಒಬ್ಬ ಸಾಧುವಿದ್ದನು. ಅವನು ಈಗ ಹೇಗಿದ್ದಾನೆ? ನಾನು ಅವನನ್ನು ಭೇಟಿಯಾಗಿದ್ದೆ, ಆಗ ನೀವು ಗಾಡಿ ತೆಗೆದುಕೊಂಡು ಎಲ್ಲೋ ಹೋಗುತ್ತಿದ್ದರಿ" ಎಂದರು. ಆಗ ಹರ್‌ಲಾಲ್ "ಆ ವ್ಯಕ್ತಿ ನಾಲ್ಕು ವರ್ಷಗಳ ಮೊದಲೇ ದೇಹ ತ್ಯಜಿಸಿದ್ದಾನೆ. ಅವನ ನೆನಪಿಗೆ ಒಂದು ಸ್ಮಾರಕವನ್ನೂ ಸ್ಥಾಪಿಸಿದ್ದೇನೆ" ಎಂದನು. ಆಗ ಗರೀಬ್‌ದಾಸರು, ಈ ಬಿಳಿ ಎತ್ತು ಅದೇ ಪಾಖಂಡಿ ಬಾಬಾ. ನಾನು ಅವನ ಜೊತೆ ಜ್ಞಾನ ಚರ್ಚೆ ಮಾಡಿದೆ. ಹಾಗೂ ನಿಮ್ಮ ಭಕ್ತಿ ಸರಿಯಾಗಿಲ್ಲ. ನೀವು ಭಕ್ತಿ ಮಾಡುವುದಿಲ್ಲ ಬರೀ ತಿನ್ನುತ್ತೀರಾ, ಮಲಗುತ್ತೀರಾ. ಪರಮಾತ್ಮನ ಆಸ್ಥಾನದಲ್ಲಿ ಎಲ್ಲಾ ಲೆಕ್ಕವಾದಾಗ ನಿಮಗೆ ನಂತರ ತಿಳಿಯುತ್ತದೆ. ಈಗ ಕುಳಿತು ತಿಂದರೆ ಮುಂದೆ ತೀರಿಸಬೇಕಾಗುತ್ತದೆ' ಎಂದು ಹೇಳಿದೆ.

ಗರೀಬ್, ನರ್ ಸೇ ಫಿರ್ ಪಶುವಾ ಕೀಜೈ, ಗಧಾ-ಬೈಲ್ ಬನಾಯ್ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೇ, ಕುರಡೀ ಚರನೇ ಜಾಯ್ ॥
ಗರೀಬ್ ತುಮನೇ ಉಸ್ ದರಗಾಹ್ ಕಾ ಮಹಲ್ ನಾ ದೇಖಾ ।
ಧರ್ಮರಾಜ್ ಕೈ ತಿಲ್-ತಿಲ್ ಕಾ ಲೇಖಾ ॥

ಆದರೆ ಅವನು ಕೋಪಗೊಂಡು ಹೇಳಿದ, ನಾನು ಬಾಲ ಬ್ರಹ್ಮಚಾರಿ, ನೀವು ಗೃಹಸ್ಥ. ಇಲ್ಲಿಂದ ಮೊದಲು ಹೊರಡಿ, ಒಬ್ಬ ಸಾಧುವಿಗೆ ಹೇಳಿ ಕೊಡಲು ಬರಬೇಡಿ ಎಂದನು.

ಕಬೀರ್, ರಾಮ್ ನಾಮ್ ಸೇ ಖಿಜ್ ಮರೈಂ, ಕುಷ್ಟಿ ಹೋ ಗಲ್ ಜಾಯ್ ।
ಶುಕರ್ ಹೋಕರ್ ಜನ್ಮ್ ಲೇ, ನಾಕ್ ಡೂಬತಾ ಖಾಯ್ ॥

ಭಾವಾರ್ಥ:- ಕಬೀರರು ಹೇಳಿದ್ದಾರೆ, ಅಭಿಮಾನಿ ವ್ಯಕ್ತಿಗಳು ರಾಮ ನಾಮದ ಚರ್ಚೆಯಿಂದ ದೂರಹೋಗುತ್ತಾರೆ ಅವರು ಕುಷ್ಟರೋಗದಿಂದ ನರಳಿ ನರಳಿ ಸಾಯುತ್ತಾರೆ. ಮುಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟಿ ಹೊಲಸು ತಿನ್ನುತ್ತಾರೆ. ಹಂದಿಯ ಮೂಗೂ ಸಹ ಹೊಲಸಿನಿಂದ ತುಂಬಿರುತ್ತದೆ. ಹೀಗೆ ಮನುಷ್ಯನು ಕಷ್ಟ ಪಡಬೇಕಾಗುತ್ತದೆ. ಯಾರು ಭಕ್ತಿ ಮಾಡುವುದಿಲ್ಲವೋ ಅಥವಾ ನಕಲೀ ಸಂತರಾಗಿ ಜನರ ಮಧ್ಯೆ ವ್ಯರ್ಥ ಮಹಿಮೆ ಮಾಡುತ್ತಾರೆ.

"ಹೇ ಹರಲಾಲ್, ನಾನು ಆ ಎತ್ತಿನ ಕಿವಿಯಲ್ಲಿ ಹೇಳಿದೆನೆಂದರೆ ನಾನು ಹೇಳಿದ ಆ ದಿನ ನೆನಪಿಸು, ನೀನು ಒಪ್ಪಲಿಲ್ಲ. ಹೇ ಜೀವಾತ್ಮ ನೀನು ಈ ರೈತನ ಸಾಲ ತೀರಿಸಬೇಕಾಗುವುದು. ಏಟು ತಿಂದಾದರೂ ತೀರಿಸು ಅಥವಾ ಸಂತೋಷದಿಂದಲಾದರೂ ತೀರಿಸು. ಹಾಗೆ ಸಾಲ ತೀರಲ್ಲ." ಎಂದು ಹೇಳಿದೆ. ಆಗ ಎತ್ತಿನ ಶರೀರದಲ್ಲಿದ್ದ ನಕಲಿ ಬಾಬಾಗೆ ನನ್ನ ಮಾತು ಅರ್ಥವಾಯಿತು. ಇವನು ಯಾವುದೋ ಜನ್ಮದಲ್ಲಿ ಪರಮೇಶ್ವರ ಕಬೀರರ ಶಿಷ್ಯನಾಗಿದ್ದ. ಆದರೆ ನಂತರ ಗಿರಿ ಪಂಥದಲ್ಲಿ ಹೋದನು. ಹಾಗಾಗಿ ಒಳ್ಳೆಯ ದಾರಿ ಬಿಟ್ಟು ಜನ್ಮ-ಮರಣದ ಕಷ್ಟ ಪಡೆಯುತ್ತಿದ್ದಾನೆ. ಇನ್ನು ಮುಂದೆ

ಈ ಎತ್ತು ಎಂದಿಗೂ ಕೂರುವುದಿಲ್ಲ" ಎಂದರು. ಹರ್‌ಲಾಲ್ ಗರೀಬ್‌ದಾಸರ ಕಾಲಿಗೆ ಬಿದ್ದು ಹೇಳಿದ, ಹೇ ಸಂತ ಮಹಾರಾಜರೇ, ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ. ನಾನು ಮನೆ ಮಠ ಬಿಟ್ಟು ನಿಮ್ಮ ಜೊತೆ ಇರುತ್ತೇನೆ. ನನ್ನ ಕಣ್ಣು ತೆರೆಯಿತು. ಭಕ್ತಿ ಮಾಡದಿದ್ದರೆ ಜೀವಾತ್ಮವು ಎಷ್ಟು ಕಷ್ಟ ಪಡುತ್ತದೆ ಎಂದು ತಿಳಿಯಿತು. ಸಂತ ಗರೀಬ್ ದಾಸರು ಈ ವಾಣಿ ಹೇಳಿದರು:–

ಗರೀಬ್, ಗಾಡೀ ಬಾಹೋ ಘರ್ ರಹೋ, ಖೇತೀ ಕರೋ ಖುಶ್‌ಹಾಲ್ ।
ಸಾಯೀ ಸಿರ್ ಪರ್ ರಾಖಿಯೇ, ಸಹೀ ಭಗತ್ ಹರ್‌ಲಾಲ್ ॥

ಭಾವಾರ್ಥ:– ಪರಮಾತ್ಮನ ಪ್ರಾಪ್ತಿಗಾಗಿ ಮನೆ ಬಿಡುವ ಅವಶ್ಯಕತೆ ಇಲ್ಲ. ನಿಮ್ಮ ವ್ಯವಸಾಯ ಮತ್ತು ಟ್ರಾನ್ಸ್‌ಪೋರ್ಟ್ ಕೆಲಸವನ್ನು ಸಂತೋಷದಿಂದ ಮಾಡಿ ಮನೆಯಲ್ಲೇ ಇರಿ. ನಾನು ಹೇಳಿದಂತೆ ಪರಮಾತ್ಮನ ಭಕ್ತಿ ಮಾಡುತ್ತಿರು. ಆಗ ನೀವು ನಿಜವಾದ ಭಕ್ತನೆನ್ನಿಸಿಕೊಳ್ಳುವಿರಿ.

ಗರೀಬ್, ನಾಮ್ ಉಠತ್ ನಾಮ್ ಬೈಠತ್, ನಾಮ್ ಸೋವತ್ ಜಾಗ್ ರೇ ।
ನಾಮ್ ಖಾತೇ ನಾಮ್ ಪೀತೇ, ನಾಮ್ ಸೇತೀ ಲಾಗ್ ರೇ ॥

**ಇದೇ ಪ್ರಮಾಣ ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಲ್ಲಿ ಹೇಳಲಾಗಿದೆ:–**

ವಾಯು ಅನಿಲಮ್ ಅಥಯಿದಮ್ ಅಮೃತಮ್ ಭಸ್ಮಂತಮ್ ಶರೀರಂ ।
ಓಮ್ ಕೃತು ಸ್ಮರ್ ಕಿಲವೇ ಸ್ಮರ್ ಕೃತಮ್ ಸ್ಮರ್ ॥

ಭಾವಾರ್ಥ:– ಸಂತ ಗರೀಬ್‌ದಾಸರು ಹೇಳಿದ್ದಾರೆ, ಯಾವ ಸತ್ಯ ಸಾಧನೆಯ ಸತ್ಯ ಮಂತ್ರವನ್ನು ನಾನು ನಿಮಗೆ ನೀಡುವೆನೋ, ಅದನ್ನು ನೀವು ತಿನ್ನುತ್ತಾ, ಕುಡಿಯುತ್ತಾ, ಎದ್ದಾಗ, ಜಪಿಸುತ್ತಿರಿ. ಬೆಳಿಗ್ಗೆ ನಿದ್ದೆಯಿಂದ ಎದ್ದಾಗ ಜಪಿಸಿ. ಮಲಗುವ ಮುಂಚೆ ಜಪಿಸಿ, ಕುಳಿತಾಗ, ಎದ್ದಾಗ ಪರಮಾತ್ಮನ ಹೆಸರನ್ನು ಜಪಿಸಿ. ಈ ರೀತಿ ಸ್ಮರಣೆಯೂ ಆಗುತ್ತದೆ, ಮನೆಯ ಕೆಲಸವೂ ಆಗುತ್ತದೆ. ಕೆಲವು ಹಳ್ಳಿಗಳಲ್ಲಿ ಜನರು ದಿನವೆಲ್ಲಾ ಇಸ್ಪೀಟು ಆಡುತ್ತಾರೆ. ಬೀಡಿ, ಸಿಗರೇಟ್ ಸೇದುತ್ತಿರುತ್ತಾರೆ, ರಾಜಕೀಯದ ಮಾತನ್ನಾಡುತ್ತಿರುತ್ತಾರೆ ಅಥವಾ ಯಾರನ್ನಾದರೂ ನಿಂದಿಸುತ್ತಿರುತ್ತಾರೆ, ಸಿನೆಮಾ ನೋಡುತ್ತಾ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಾರೆ. ಆ ಸಮಯವನ್ನು ಪರಮಾತ್ಮನ ಭಕ್ತಿ ಮತ್ತು ಸತ್ಸಂಗ ಕೇಳುವುದರಲ್ಲಿ ಸದುಪಯೋಗ ಮಾಡಿದರೆ ಮೋಕ್ಷ ಪ್ರಾಪ್ತವಾಗುವುದು.

ಶ್ರೀ ಹರ್‌ಲಾಲ್ ರೈತ ದೀಕ್ಷೆ ಪಡೆದು ಮನೆಗೆ ಬಂದನು. ಮನೆಯವರಿಗೆಲ್ಲಾ ಈ ಮಾತನ್ನು ತಿಳಿಸಿದನು. ನಕಲಿ ಬಾಬಾನ ಸ್ಮಾರಕವನ್ನು ಕೆಡವಿಹಾಕಿದನು. ಇಡೀ ಕುಟುಂಬವನ್ನು ಛುಡಾನಿಗೆ ಕರೆದೊಯ್ದನು. ಸಂತ ಗರೀಬ್‌ದಾಸರಿಂದ ದೀಕ್ಷೆ ಕೊಡಿಸಿದನು. ತನ್ನ ಮತ್ತು ತನ್ನ ಕುಟುಂಬದ ಉದ್ಧಾರ ಮಾಡಿಸಿದನು. ಸಂತ ಗರೀಬ್‌ದಾಸರ ಆದೇಶದಂತೆ ಮತ್ತೆ ಆ ಬಿಳಿ ಎತ್ತನ್ನು ಗಾಡಿಗಾಗಲೀ, ನೇಗಿಲಿಗಾಗಲೀ ಕಟ್ಟಲಿಲ್ಲ. ಎಲ್ಲಾ ಪಶುಗಳಿಂದ ದೂರವಿಟ್ಟು ಒಳ್ಳೆ ಮೇವನ್ನು ತಿನ್ನಿಸಿದನು. ಈ ಎತ್ತು ಮೊದಲು ಭಕ್ತನಾಗಿತ್ತು, ಕರ್ಮ ಹಾಳುಮಾಡಿಕೊಂಡಿದ್ದರಿಂದ ಎತ್ತಾಗಿ ಹುಟ್ಟಿದೆ ಇದನ್ನು ಕೆಲಸಕ್ಕೆ ಉಪಯೋಗಿಸ ಬೇಡ ಎಂದು ಗರೀಬ್‌ದಾಸರು ಹೇಳಿದರು. ಆ ಎತ್ತು 5ವರ್ಷ ಬದುಕಿತ್ತು. ಭಕ್ತನಾದ ಹರ್‌ಲಾಲ್ ಆ ಎತ್ತನ್ನು ಭಕ್ತನೆಂದು ತಿಳಿದು ಚೆನ್ನಾಗಿ ನೋಡಿಕೊಂಡರು. ಪರಮಾತ್ಮ ಕಬೀರರು ದಾರಿ ತಪ್ಪಿದ್ದ ಪಶುವಿನ ಶರೀರದಲ್ಲಿದ್ದ ಭಕ್ತನಿಗೆ ಸಹಾಯ ಮಾಡಿದರು. ಅವನಿಗೆ ಮತ್ತೆಂದಾದರೂ ಮನುಷ್ಯ ಜನ್ಮ ಲಭಿಸಿದರೆ ಹಾಗೂ ಮುಂದೆ ಅವನ ಅದೃಷ್ಟದಲ್ಲಿ ಯಾರಾದರೂ ಪೂರ್ಣಗುರು ಸಿಕ್ಕರೆ ಮುಕ್ತಿ ಸಿಗುವುದು ಇಲ್ಲದಿದ್ದರೆ ಮತ್ತೆ ಎಂಭತ್ತನಾಲ್ಕು ಲಕ್ಷ ಯೋನಿಗಳಲ್ಲಿ ಕಷ್ಟಪಡುವನು. ಬೇರಿ ಹಳ್ಳಿಯಲ್ಲಿರುವ ಭಕ್ತ ಹರ್‌ಲಾಲ್‌ನ ಸಂತಾನವು ಇಂದಿಗೂ ಈ ಘಟನೆಗೆ ಸಾಕ್ಷಿಯಾಗಿದೆ.

## "ತಂಬಾಕು ಸೇವನೆ ಮಹಾಪಾಪ"

ಸಂತ ಗರೀಬ್‌ದಾಸರು ಹರ್‌ಲಾಲ್‌ಗೆ ಹೇಳಿದರು, "ನೀವು (ಯಾರು ದೀಕ್ಷೆ ಪಡೆದುಕೊಳ್ಳುವರೋ) ತಂಬಾಕ (ಹುಕ್ಕಾ, ಬೀಡಿ, ಸಿಗರೇಟು ಮುಂತಾದವುಗಳಲ್ಲಿ ತುಂಬಿ) ಎಂದಿಗೂ ಸೇವನೆ ಮಾಡಬಾರದು. ಮತ್ತು ಬೇರೆ ಯಾವುದೇ ಮಾದಕ ವಸ್ತುಗಳನ್ನು

ಉಪಯೋಗಿಸಬಾರದು. ಆಗ ಭಕ್ತನೆಂದನು, "ಗುರುಗಳೇ, ಇಲ್ಲಿ ಎಲ್ಲಾ ರೈತರು ತಂಬಾಕಿನ ಸೇವನೆ ಮಾಡುತ್ತಾರೆ. ಇದರಿಂದ ನಷ್ಟವೇನು?"

ಉತ್ತರ:– ಸಂತ ಗರೀಬ್‌ದಾಸರೆಂದರು, ನೀವು ರಾಮಾಯಣ ಮತ್ತು ಮಹಾಭಾರತದ ಕತೆಯನ್ನು ಕೇಳಿರಬಹುದು. ಇದರಲ್ಲಿ ಹುಕ್ಕಾ ಸೇವನೆಯ ವರ್ಣನೆ ಎಲ್ಲೂ ಇಲ್ಲ. ತಂಬಾಕಿನ ಉತ್ಪತ್ತಿ ಹೇಗಾಗಿದೆ ಎಂದು ಹೇಳಲೇ, ಕೇಳು!

## "ತಂಬಾಕಿನ ಉತ್ಪತ್ತಿಯ ಕತೆ"

ಒಬ್ಬ ಋಷಿ ಮತ್ತು ಒಬ್ಬ ರಾಜ ಶಡ್ಕ ಇದ್ದರು. ಇವರು ಅಕ್ಕ–ತಂಗಿಯರನ್ನು ಮದುವೆಯಾಗಿದ್ದರು. ಒಂದು ದಿನ ರಾಜನ ರಾಣಿಯು ಋಷಿಯ ಪತ್ನಿಗೆ ಕುಟುಂಬ ಸಮೇತ ಊಟಕ್ಕೆ ಆಮಂತ್ರಿಸಿದಳು. ನಾನು ಭೇಟಿಯಾಗ ಬಯಸುತ್ತೇನೆ ಬಹಳ ನೆನಪು ಬರುತ್ತಿದೆ. ಈ ವಿಷಯವನ್ನು ಋಷಿ ಪತ್ನಿಯು ತನ್ನ ಪತಿಗೆ ತಿಳಿಸಿದಾಗ ಆ ಋಷಿಯೂ ಧನಿಕರ ಗೆಳೆತನ ಒಳ್ಳೆಯದಲ್ಲ. ನಿನ್ನ ಆ ತಂಗಿ ವೈಭವದ ಜೀವನ ಬದುಕುತ್ತಿದ್ದಾಳೆ. ರಾಜನಿಗೆ ಹಣ ಹಾಗೂ ರಾಜ್ಯದ ಶಕ್ತಿ–ಇವೆರಡರ ಅಹಂಕಾರವಿರುತ್ತದೆ. ಅವರು ನಿನ್ನನ್ನು ಅವಮಾನಿಸಲು ಕರೆಯುತ್ತಿದ್ದಾರೆ. ಏಕೆಂದರೆ ಅವರು ಕರೆದ ಮೇಲೆ ನಾವೂ ಒಂದುದಿನ ಅವರನ್ನು ಭೋಜನಕ್ಕೆ ಕರೆಯಬೇಕಾಗುತ್ತದೆ. ನಾವು ಅವರಂಥಾ ಭೋಜನದ ವ್ಯವಸ್ಥೆ ಈ ಕಾಡಿನಲ್ಲಿ ಮಾಡಲು ಸಾಧ್ಯವಿಲ್ಲ. ಇದೆಲ್ಲಾ ಆ ರಾಜನ ಕುತಂತ್ರ. ನಿನ್ನ ಮುಂದೆ ತನ್ನನ್ನು ದೊಡ್ಡವನನ್ನಾಗಿ ಹಾಗೂ ನನ್ನನ್ನು ಸಣ್ಣವನನ್ನಾಗಿ ತೋರಿಸುವುದೇ ಅವನ ಆಶಯ. ನೀನು ಈ ವಿಷಯವನ್ನು ಇಲ್ಲಿಗೇ ಬಿಟ್ಟುಬಿಡು. ನಾವು ಹೋಗದಿರುವುದೇ ಕ್ಷೇಮ ಎಂದನು. ಆದರೆ ಋಷಿ ಪತ್ನಿಯು ಕೇಳಲಿಲ್ಲ. ಹಠಹಿಡಿದಾಗ ಋಷಿ ಬೇರೆ ದಾರಿ ಕಾಣದೆ ಕುಟುಂಬ ಸಹಿತ ರಾಜನ ಅರಮನೆಗೆ ಹೋದನು. ರಾಣಿಯು ಅಮೂಲ್ಯವಾದ ಒಡವೆ ಧರಿಸಿದ್ದಳು. ಬೆಲೆಬಾಳುವ ಬಟ್ಟೆ ತೊಟ್ಟಿದ್ದಳು. ಋಷಿ ಪತ್ನಿಯ ಸಾಧಾರಣವಾದ ಬಟ್ಟೆ ಮತ್ತು ಕೊರಳಲ್ಲಿದ್ದ ರಾಮನಾಮದ ಜಪಮಾಲೆಯನ್ನು ನೋಡಿ ರಾಣಿಯ ಸೇವಕರು ಮತ್ತು ಅಧಿಕಾರಿಗಳು ತಮ್ಮಲ್ಲೇ ಹಾಸ್ಯ ಮಾಡಿಕೊಳ್ಳುತ್ತಿದ್ದರು. ರಾಜನ ಶಡ್ಕ ಇವರೇನಾ? ಎಲ್ಲಿ ರಾಜನು ಎಲ್ಲಿ ಈ ಬಡವ?" ಎನ್ನುತ್ತಿದ್ದರು. ಇದನ್ನೆಲ್ಲಾ ಋಷಿ ಕುಟುಂಬದವರು ಕೇಳಿಸಿಕೊಳ್ಳುತ್ತಿದ್ದರು. ಊಟವಾದ ನಂತರ ಋಷಿ ಪತ್ನಿಯು ರಾಜನ ಕುಟುಂಬದವರನ್ನು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದಳು.

ನಿಶ್ಚಿತವಾದ ದಿನ ರಾಜನು ಸಾವಿರಾರು ಸೈನಿಕರನ್ನು ಕರೆದುಕೊಂಡು ತನ್ನ ಶಡ್ಕನಾದ ಋಷಿಯ ಆಶ್ರಮಕ್ಕೆ ಬಂದನು. ಋಷಿಯು ಸ್ವರ್ಗಲೋಕದ ರಾಜ ಇಂದ್ರನಿಗೆ ಪ್ರಾರ್ಥಿಸಿಕೊಂಡು ಕಾಮಧೇನುವನ್ನು (ಸರ್ವ ಕಾಮನೆ ಅಂದರೆ ಇಚ್ಛೆ ಪೂರ್ತಿ ಮಾಡುವ ಆಕಳು, ಅದರ ಉಪಸ್ಥಿತಿಯಲ್ಲಿ ತಿನ್ನುವ ಯಾವುದೇ ಪದಾರ್ಥದ ಇಚ್ಛೆ ಮಾಡುವುದರಿಂದ ಸಿಗುತ್ತದೆ. ಇದು ಪೌರಾಣಿಕ ಸಿದ್ಧಾಂತವಾಗಿದೆ) ಕೇಳಿದ. ಅದರ ಬದಲಾಗಿ ಋಷಿಯು ತನ್ನ ಪುಣ್ಯಕರ್ಮವನ್ನು ಸಂಕಲ್ಪ ಮಾಡಿದನು. ಇಂದ್ರನು 1 ಉದ್ದ–ಅಗಲ ದೊಡ್ಡ ಟೆಂಟನ್ನು ಮತ್ತು ಕಾಮಧೇನುವಿನ ಜೊತೆ ಕೆಲವು ಸೇವಕರನ್ನು ಕಳುಹಿಸಿದ್ದನು. ಕಾಮಧೇನುವನ್ನು ಟೆಂಟಲ್ಲಿ ಇರಿಸಲಾಗಿತ್ತು. ಋಷಿಯು ಆ ಹಸುವಿಗೆ ಆರತಿ ಮಾಡಿ ತನ್ನ ಮನೋಕಾಮನೆಯನ್ನು ತಿಳಿಸಿದನು. ತಕ್ಷಣವೇ 56 ತರಹದ ಭೋಜನ ಬೆಳ್ಳಿಯ ತಟ್ಟೆ, ಬಟ್ಟಲುಗಳಲ್ಲಿ, ಪಾತ್ರೆಗಳಲ್ಲಿ ಸ್ವರ್ಗದಿಂದ ಬಂತು ಮತ್ತು ಟೆಂಟಿನಲ್ಲಿ ಇಡಲಾಯಿತು. ಲಡ್ಡು, ಜಲೇಬಿ, ಕಚೌರಿ, ಪಾಯಸಾ, ಹಲ್ವ, ರೊಟ್ಟಿ, ಪಲ್ಯ ಪುರಿ, ಬುಂದಿ, ಬರ್ಫಿ, ಜಾಮೂನ್ ಮುಂತಾದವುಗಳಿಂದ ಅರ್ಧ ಎಕರೆ ಟೆಂಟ್ ಭೋಜನಗಳಿಂದ ತುಂಬಿಹೋಯಿತು. ಋಷಿಯು ಭೋಜನ ಮಾಡಿರೆಂದು ರಾಜನನ್ನು ಪ್ರಾರ್ಥಿಸಿದ, ಅದರೆ ರಾಜನು ಋಷಿಯನ್ನು ಅವಮಾನಿಸಲು ನಿರ್ಧರಿಸಿ, "ನನ್ನ ಸೈನ್ಯವೂ ನನ್ನ ಜೊತೆ ಊಟಮಾಡುತ್ತದೆ ಹಾಗೂ ಕುದುರೆಗಳು ಮೇವು ತಿನ್ನುತ್ತವೆ" ಎಂದನು. ಋಷಿಯು ಭಗವಂತನ ಕೃಪೆಯಿಂದ ಎಲ್ಲವೂ ಆಗುವುದು, ಮೊದಲು ನೀವು ಮತ್ತು ನಿಮ್ಮ ಸೈನ್ಯ ಊಟಮಾಡಿ ಎಂದು ಹೇಳಿದನು. ಆಗ ರಾಜ ಭೋಜನದ ಸ್ಥಾನಕ್ಕೆ ಹೋದನು

ಅಲ್ಲಿ ಸುಂದರ ಬಟ್ಟೆ ಹಾಸಿದ್ದರು, ಅದನ್ನು ನೋಡಿ ರಾಜನು ಆಶ್ಚರ್ಯಚಕಿತನಾದನು. ನಂತರ ಬೆಳ್ಳಿಯ ತಟ್ಟೆಯಲ್ಲಿ ಭಿನ್ನ-ಭಿನ್ನ ಪ್ರಕಾರದ ಪಂಚ ಭಕ್ಷ್ಯಪರಮಾನ್ನಗಳನ್ನು ಸೇವಕರು ತಂದು ತಂದು ಇಡಲಾರಂಭಿಸಿದರು, ಅನ್ನದೇವನ ಸ್ತುತಿಯನ್ನು ಮಾಡುತ್ತಾ ಋಷಿಯು ಊಟ ಮಾಡಿರೆಂದು ರಾಜನನ್ನು ವಿನಂತಿಸಿದನು. ಈ ಭೋಜನದ ಮುಂದೆ ನನ್ನ ಭೋಜನಕೂಡ ಏನೇನೂ ಇರಲಿಲ್ಲ ಎಂದು ರಾಜನು ಯೋಚಿಸಿದನು. ನಾನು ಕೇವಲ 3-4 ರೀತಿಯ ಭಕ್ಷ್ಯಗಳನ್ನು, ಅದೂ ಋಷಿ ಕುಟುಂಬದವರಿಗೆ ಮಾತ್ರ ಮಾಡಿಸಿದ್ದೆ ಎಂದು ತಿಳಿದು ನಾಚಿಕೆಯಾಯಿತು. ಊಟ ಮಾಡುವಾಗಲೂ ಚಿಂತೆಗೊಳಗಾಗಿದ್ದನು. ಹೊಟ್ಟೆಕಿಚ್ಚು ಉಂಟಾಯಿತು, ಇದು ತನ್ನ ಅವಮಾನವೆಂದು ತಿಳಿದನು. ಸೈನಿಕರೆಲ್ಲಾ ತಿಂದು, ಋಷಿಯನ್ನು ಕೊಂಡಾಡಿದರು. ರಾಜನ ರಕ್ತ ಕುದಿಯುತ್ತಿತ್ತು. ನಂತರ ಟೆಂಟಿಗೆ ಹೋಗಿ ಈ ಊಟ ಹೇಗೆ ತಯಾರಿಸಿದೆ ಕಾಡಿನಲ್ಲಿ ಎಂದು ಋಷಿಯನ್ನು ಕೇಳಿದನು. ಯಾವ ಒಲೆಯೂ ಉರಿದಿಲ್ಲ, ಯಾವ ಪಾತ್ರೆಯನ್ನು ಒಲೆಯ ಮೇಲಿಟ್ಟಿಲ್ಲ, ಇದು ಹೇಗೆ ಸಾಧ್ಯ ಎಂದನು. ಆಗ ಋಷಿಯು, ಭಕ್ತಿ ಮತ್ತು ಪುಣ್ಯದ ಫಲದಿಂದ ನಾನು ಸ್ವರ್ಗದಿಂದ ಹಸುವನ್ನು ಕರೆಸಿದೆ. ನಾವು ಎಷ್ಟು ಖಾದ್ಯಗಳನ್ನು ಕೇಳುತ್ತೇವೆಯೋ ಅಷ್ಟನ್ನು ತಕ್ಷಣವೇ ಒದಗಿಸಿಕೊಡುವುದೇ ಆ ಹಸುವಿನ ವಿಶೇಷ ಲಕ್ಷಣ" ಎಂದನು. ಆಗ ರಾಜನು ನನ್ನ ಮುಂದೆ ತಂದು ತೋರಿಸಿದರೆ ನನಗೆ ನಂಬಿಕೆ ಬರುವುದು ಎಂದನು.

ಆಗ ರಾಜ ಮತ್ತು ಋಷಿ ಟೆಂಟಿನ ಬಾಗಿಲ ಬಳಿ ಹೋದರು. ಒಳಗೆ ಹಸುವೊಂದೇ ನಿಂತಿತ್ತು. ಬಾಗಿಲ ಕಡೆ ಮುಖ ಮಾಡಿತ್ತು. ಎಲ್ಲರೂ ಊಟ ಮಾಡಿದ್ದರಿಂದ ಟೆಂಟ್ ಖಾಲಿಯಾಗಿತ್ತು. ಉಳಿದ ಸಾಮಾನನ್ನು ಸೇವಕರು ತೆಗೆದುಕೊಂಡು ಹೋಗಿದ್ದರು. ಹಸುವೂ ಋಷಿಯ ಅನುಮತಿಗಾಗಿ ಕಾಯುತ್ತಿತ್ತು. ಅಷ್ಟರಲ್ಲಿ ರಾಜನು ಋಷಿಗೆ, ಹೇ ಋಷಿ, ಈ ಹಸುವನ್ನು ನನಗೆ ಕೊಡು. ನನ್ನ ಬಳಿ ದೊಡ್ಡ ಸೈನ್ಯವಿದೆ. ಇವರಿಗೆಲ್ಲಾ ಊಟ ತಯಾರಿಸಿಕೊಳ್ಳುವೆ. ನಿನಗೇಕೆ ಈ ಹಸು" ಎಂದನು. ಆಗ ಋಷಿಯು ಹೇ ರಾಜ, ನಾನು ಈ ಗೋಮಾತೆಯನ್ನು ಸಾಲವಾಗಿ ಪಡೆದಿದ್ದೇನೆ. ಸ್ವರ್ಗದಿಂದ ತರಿಸಿರುವೆ. ಇದರ ಮಾಲೀಕ ನಾನಲ್ಲ, ನಾನು ಇದನ್ನು ನಿಮಗೆ ನೀಡಲಾರೆ,' ಎಂದನು. ರಾಜನು ಕೋಪಗೊಂಡು ಆ ಹಸುವನ್ನು ಬಲವಂತವಾಗಿ ಹೊತ್ತೊಯ್ಯುವಂತೆ ತನ್ನ ಸೈನಿಕರಿಗೆ ಆದೇಶಿಸಿದನು. ಋಷಿಗೆ ರಾಜನ ವರ್ತನೆ ದುರ್ವರ್ತನೆಯಾಗಿ ಬದಲಾದುದನ್ನು ಕಂಡನು. ಆಗ ಅವನು ಗೋಮಾತೆಗೆ ತನ್ನ ಆ ವಾಸಸ್ಥಾನವಾದ ಇಂದ್ರನ ಸ್ವರ್ಗಲೋಕಕ್ಕೆ ಮರಳಿ ಹೋಗುವಂತೆ ಪ್ರಾರ್ಥಿಸಿದನು. ತಕ್ಷಣವೇ ಕಾಮಧೇನು ಟೆಂಟನ್ನು ಹರಿದು ಹಾಕುತ್ತಾ ಆಕಾಶದ ಕಡೆಗೆ ಹಾರಿ ಹೋಯಿತು. ರಾಜನು ಹಸುವನ್ನು ಕೆಳಗೆ ಬೀಳಿಸಲು ಹಸುವಿನ ಕಾಲಿಗೆ ಬಾಣ ಹೊಡೆದನು. ಅದರ ಕಾಲಿನಿಂದ ಚಿಮ್ಮಿದ ರಕ್ತವು ಭೂಮಿಯ ಮೇಲೆ ಬೀಳತೊಡಗಿತು. ಗಾಯಗೊಂಡ ಹಸು ಸ್ವರ್ಗಲೋಕಕ್ಕೆ ಸೇರಿತು. ಎಲ್ಲೆಲ್ಲಿ ರಕ್ತ ಬಿದ್ದಿತ್ತೋ, ಅಲ್ಲೆಲ್ಲಾ ತಂಬಾಕು ಬೆಳೆಯಿತು. ನಂತರ ತಂಬಾಕಿನ ಬೀಜ ಹುಟ್ಟಿ ನೂರಾರು ಗಿಡಗಳಾಗಿ ಬೆಳೆಯಿತು. ಸಂತ ಗರೀಬ್‌ದಾಸರು ಹೇಳಿದ್ದಾರೆನೆಂದರೆ:-

ಖು ನಾಮ ಖುನ್ ಕಾ ತಮಾ ನಾಮ ಗಾಯ। ಸೌ ಬಾರ್ ಸೌಗಂಧ ಇಸೆ ನ ಪಿಯೆ-ಖಾಯ॥

ತಮಾ+ಖು=ತಮಾಖು (ತಂಬಾಕು)

ಭಾವಾರ್ಥ:- ಫಾರಸಿ ಭಾಷೆಯಲ್ಲಿ ತಮಾ ಎಂದರೆ ಹಸು ಎಂದರ್ಥ. ಖು ಎಂದರೆ ಹಿಂದಿಯಲ್ಲಿ ಖುನ್ ಅಂದರೆ ರಕ್ತ ಎಂದರ್ಥ, ಈ ತಂಬಾಕು ಹಸುವಿನ ರಕ್ತದಿಂದ ಹುಟ್ಟಿದೆ. ಇದರ ಮೇಲೆ ಹಸುವಿನ ರೋಮದಂಥಾ ಕೂದಲಿರುತ್ತದೆ. ಹೇ ಮಾನವ, ನಿನಗೆ 100ಬಾರಿ ಆಣೆ ಮಾಡಿ ಹೇಳುವೆ, ಯಾವುದೇ ಸಂದರ್ಭದಲ್ಲೂ ಇದನ್ನು ನೀನು ತಿನ್ನಬೇಡ. ತಂಬಾಕನ್ನು ತಿಂದರೆ ಹಸುವಿನ ರಕ್ತ ಕುಡಿದಂತೆ. ನಿನಗೆ ಪಾಪ ಸುತ್ತಿಕೊಳ್ಳುತ್ತದೆ. ಮುಸಲ್ಮಾನರಿಗೆ ಹಿಂದೂಗಳಿಂದ ತಂಬಾಕು ಹೇಗೆ ಹುಟ್ಟಿತು ಎಂಬ ವಿಷಯ ತಿಳಿಯಿತು. ಇದರಿಂದ ಹಸುವಿನ ರಕ್ತವೆಂದು ತಿಳಿದು ತಂಬಾಕನ್ನು ತಿನ್ನುವುದು ಮತ್ತು ಹುಕ್ಕಾ ಸೇದುವುದನ್ನು ಅವರು ಪ್ರಾರಂಭಿಸಿದರು. ಏಕೆಂದರೆ ತಪ್ಪು ಜ್ಞಾನದಿಂದ ಮುಸಲ್ಮಾನರು ಹಸುವಿನ ಮಾಂಸ ತಿನ್ನುವುದು ಧರ್ಮದ ಪ್ರಸಾದ ಎಂದು ತಿಳಿಯುತ್ತಾರೆ. ವಾಸ್ತವವಾಗಿ ಮುಸಲ್ಮಾನರ

**ಧರ್ಮಗುರುವಾದ ಹಜರತ್ ಮುಹಮ್ಮದ್‌ರವರು ಎಂದೂ ಪ್ರಾಣಿಯ ಮಾಂಸವನ್ನು ತಿಂದಿಲ್ಲ.**

ಗರೀಬ್, ನಬೀ ಮುಹಮ್ಮದ್ ನಮಸ್ಕಾರ್ ಹೈ, ರಾಮ್ ರಸೂಲ್ ಕಹಾಯಾ ।
ಏಕ್ ಲಾಖ್ ಅಸ್ಸೀ ಕೂ ಸೌಗಂಧ್, ಜಿನ್ ನಹೀಂ ಕರದ್ ಚಲಾಯಾ ॥
ಗರೀಬ್, ಅರ್ಸ್ ಕುರ್ಶ್ ಪರ್ ಅಲ್ಲಹ್ ತಖ್ತ್ ಹೈ, ಖಾಲಿಕ್ ಬಿನ್ ನಹೀಂ ಖಾಲೀ ।
ವೈ ಪೈಗಂಬರ್ ಪಾಕ್ ಪುರುಷ್ ಥೇ, ಸಾಹೇಬ್ ಕೇ ಅಬದಾಲೀ ॥

**ಭಾವಾರ್ಥ:– ನಬೀ ಮುಹಮ್ಮದರು ಗೌರವಾನ್ವಿತ ಮಹಾಪುರುಷರಾಗಿದ್ದರು. ಅವರು ಪರಮಾತ್ಮನ ದೂತರಾಗಿದ್ದರು. ಮುಸಲ್ಮಾನ ಧರ್ಮದಲ್ಲಿ(ಬಾಬಾ ಆದಮ್‌ನಿಂದ ಮುಹಮ್ಮದ್ ರವರೆಗೆ) ಇಂಥಿಂಥ 1 ಲಕ್ಷ 80 ಸಾವಿರ ಪೈಗಂಬರರಾಗಿದ್ದಾರೆ. ಅವರೆಲ್ಲಾ ಪವಿತ್ರ ವ್ಯಕ್ತಿಗಳಾಗಿದ್ದರು, ಅವರು ಎಂದಿಗೂ ಪಶು ಪಕ್ಷಿಗಳ ಮೇಲೆ ಆಯುಧ ಅಂದರೆ ಖಡ್ಗ ಚಲಾಯಿಸಿರಲಿಲ್ಲ. ಅವರಿಗೆ ದೇವರಲ್ಲಿ ಭಯವಿತ್ತು. ದೇವರ ಕೃಪೆಗೂ ಪಾತ್ರರಾಗಿದ್ದರು. ನಂತರದಲ್ಲಿ ಕೆಲ ಮುಲ್ಲಾ–ಕಾಜಿಗಳು ಮಾಂಸ ತಿನ್ನುವ ಪರಂಪರೆ ಹುಟ್ಟು ಹಾಕಿದರು. ಇದನ್ನು ಧಾರ್ಮಿಕತೆಯ ಅಪವಾದ ಎಂದೇ ಹೇಳಬಹುದು. ಹೀಗಾಗಿ ಎಲ್ಲಾ ಮುಸಲ್ಮಾನರು ಪಾಪವನ್ನೇ ಮಾಡುತ್ತಿದ್ದಾರೆ. ನಂತರ ಕೆಲವು ಮುಸಲ್ಮಾನರು ಭ್ರಮೆಗೊಳಗಾಗಿ ತಂಬಾಕು ಸೇವನೆಯನ್ನು(ತಿನ್ನುವುದು, ಹುಕ್ಕಾ ಸೇದುವುದು) ಪ್ರಾರಂಭಿಸಿದರು. ಮುಗ್ಧ ಹಿಂದೂ ಧರ್ಮದವರಿಗೆ ಈ ಬಗ್ಗೆ ಅರಿವಿರಲಿಲ್ಲ. ಮುಸಲ್ಮಾನರ ಜೊತೆಗೂಡಿ ಅವರೂ ತಂಬಾಕು ಸೇವನೆ ಪ್ರಾರಂಭಿಸಿದರು. ವರ್ತಮಾನದಲ್ಲಿ ಎಲ್ಲರೂ ಸೇವಿಸುತ್ತಿದ್ದಾರೆ. ಇದು ದೊಡ್ಡ ತಪ್ಪು. ಅಜ್ಞಾನದ ಪರದೆ ಇದೆ. ಹಾಗಾಗಿ ಇದನ್ನು ಅಪ್ಪಿತಪ್ಪಿಯೂ ಸೇವಿಸಬಾರದು. ಸಂತ ಗರೀಬ್‌ದಾಸರು ಹರ್‌ಲಾಲ್‌ರನ್ನು ಕುರಿತು. ತಂಬಾಕು ಸೇವನೆಯಿಂದ ಉಂಟಾಗುವ ಪಾಪವನ್ನು ಕೇಳು ಎಂದರು:–**

ಗರೀಬ್, ಪರದ್ವಾರಾ ಸ್ತ್ರೀ ಕಾ ಖೋಲೈ । ಸತ್ತರ್ ಜನ್ಮ ಅಂಧಾ ಹೋ ಡೋಲೈ ॥1॥
ಮದಿರಾ ಪೀವೈ ಕಡವಾ ಪಾನೀ । ಸತ್ತರ್ ಜನ್ಮ ಶ್ವಾನ್ ಕೇ ಜಾನೀ ॥2॥
ಮಾಂಸ್ ಆಹಾರೀ ಮಾನವಾ, ಪ್ರತ್ಯಕ್ಷ್ ರಾಕ್ಷಸ್ ಜಾನ್ ।
ಮುಖ್ ದೇಖೋ ನ ತಾಸ್ ಕಾ, ವೋ ಫಿರೈ ಚೌರಾಸೀ ಖಾನ್ ॥3॥
ಸುರಾಪಾನ ಮದ್ಯ ಮಾಂಸಾಹಾರೀ । ಗಮನ್ ಕರೈ ಭೋಗೈ ಪರ್ ನಾರೀ ॥4॥
ಸತ್ತರ್ ಜನ್ಮ ಕಟತ್ ಹೈ ಶೀಶಂ । ಸಾಕ್ಷೀ ಸಾಹೇಬ್ ಹೈ ಜಗದೀಶಂ ॥5॥
ಸೌ ನಾರೀ ಜಾರೀ ಕರೈ, ಸುರಾಪಾನ್ ಸೌ ಬಾರ್ ।
ಏಕ್ ಚಿಲಮ್ ಹುಕ್ಕಾ ಭರೈ, ಡೂಬೈ ಕಾಲೀ ಧಾರ್ ॥6॥
ಹುಕ್ಕಾ ಹರದಮ್ ಪೀವತೇ, ಲಾಲ್ ಮಿಲಾಂವೇ ಧೂರ್ ।
ಇಸಮೆಂ ಸಂಶಯ್ ಹೈ ನಹೀಂ, ಜನ್ಮ ಪೀಛಲೇ ಸೂಅರ್ ॥7॥

**ಮೇಲೆ ಹೇಳಿದ ವಾಣಿಗಳ ಭಾವಾರ್ಥ:–**

**ವಾಣಿ ಸಂಖ್ಯೆ.1:– ಯಾರು ಪರಸ್ತ್ರೀ ಜೊತೆ ಸಂಬಂಧ ಇಟ್ಟುಕೊಳ್ಳುವರೋ, ಅವರು ಮುಂದಿನ 70 ಜನ್ಮಗಳು ಕುರುಡರಾಗಿ ಹುಟ್ಟುತ್ತಾರೆ. ಕುರುಡ ಕತ್ತೆ, ಕುರುಡ ಎತ್ತು, ಕುರುಡ ಪುರುಷ, ಕುರುಡ ಮಹಿಳೆ ಹೀಗೆ 70 ಜನ್ಮಗಳಲ್ಲಿ ಕಷ್ಟ ಅನುಭವಿಸುತ್ತಾರೆ.**

**ವಾಣಿ ಸಂಖ್ಯೆ.2:– ಮದ್ಯವನ್ನು ಸೇವಿಸುವುದರಿಂದ ಅವರು 70 ಜನ್ಮಗಳವರೆಗೆ ನಾಯಿಯಾಗಿ ಹುಟ್ಟಿ ಕಷ್ಟ ಅನುಭವಿಸುತ್ತಾನೆ. ಚರಂಡಿಯ ನೀರನ್ನು ಕುಡಿಯುತ್ತಾನೆ, ರೊಟ್ಟಿ ಸಿಗದಿದ್ದರೆ ಮಲ ತಿನ್ನುತ್ತಾನೆ.**

**ವಾಣಿ ಸಂಖ್ಯೆ.3:– ಮಾಂಸ ತಿನ್ನುವ ವ್ಯಕ್ತಿಗಳು ರಾಕ್ಷಸರೇ ಸರಿ. ಅವರ ಮುಖವನ್ನು ನೋಡಬಾರದು. ಅಂದರೆ ಅವರ ಸಹವಾಸದಿಂದ ಬೇರೆಯವರೂ ಮಾಂಸ ತಿನ್ನತೊಡಗುತ್ತಾರೆ. ಆದ್ದರಿಂದ ಅಂಥವರಿಂದ ದೂರವಿರಬೇಕು, ಅಂಥವರು 84 ಲಕ್ಷ ಯೋನಿಗಳಲ್ಲಿ ಅಲೆದಾಡುತ್ತಾರೆ.**

ವಾಣಿ ಸಂಖ್ಯೆ.4–5:– (ಸುರಾ) ಮದ್ಯ (ಪಾನ್) ಕುಡಿಯುವವರು, ಪರಸ್ತ್ರೀಯನ್ನು ಅನುಭವಿಸುವವರು, ಮಾಂಸ ತಿನ್ನುವವರು ಅನ್ಯ ಪಾಪದ ಎಲ್ಲಾ ಕಷ್ಟವನ್ನೂ ಅನುಭವಿಸಬೇಕಾಗುತ್ತದೆ. ಅವರು 70 ಜನ್ಮಗಳ ತನಕ ಮನುಷ್ಯ ಅಥವಾ ಕುರಿ, ಕತ್ತೆ, ಕೋಳಿ, ನಾಯಿ ಇತ್ಯಾದಿಯ ಜೀವನದಲ್ಲಿ ತಲೆ ಕತ್ತರಿಸಲಾಗುತ್ತದೆ. ಈ ಮಾತನ್ನು ನಾನು ಪರಮಾತ್ಮನನ್ನು ಸಾಕ್ಷಿ ಎಂದು ತಿಳಿದು ಹೇಳುತ್ತಿದ್ದೇನೆ. ಸತ್ಯವೆಂದು ತಿಳಿಯಿರಿ.

ವಾಣಿ ಸಂಖ್ಯೆ.6:– ಒಂದು ಚಿಲಮ್ ಹುಕ್ಕಾದಲ್ಲಿ ತಂಬಾಕು ತುಂಬಿ ಹುಕ್ಕಾ ಕುಡಿಯುವವರಿಗೆ ತುಂಬಿ ಕೊಡುವವನಿಗೆ ಎಷ್ಟು ಪಾಪ ತಗಲುವುದೆಂದು ಕೇಳಿ. ಒಂದು ಬಾರಿ ಮದ್ಯಕುಡಿಯುವವ, ಒಂದು ಬಾರಿ ಮಾಂಸತಿನ್ನುವವ, ಒಂದು ಬಾರಿ ಪರಸ್ತ್ರೀ ಸಂಗ ಮಾಡುವವ ಮೇಲಿನ ಕಷ್ಟಗಳನ್ನು ಅನುಭವಿಸುತ್ತಾನೆ. 100 ಪರಸ್ತ್ರೀಯರನ್ನು ಭೋಗಿಸುವ ಮತ್ತು 100 ಬಾರಿ ಮದ್ಯ ಕುಡಿಯುವವನಿಗೆ ತಗಲುವಷ್ಟು ಪಾಪ ಒಂದು ಚಿಲಮ್ ಹುಕ್ಕಾ ತುಂಬಿ ಕೊಡುವವನಿಗೆ ತಗಲುತ್ತದೆ. ವಿಚಾರ ಮಾಡಿ ತಂಬಾಕು ಸೇವನೆ ಮಾಡುವವನಿಗೆ (ಹುಕ್ಕಾದಲ್ಲಿ, ಬಿಡಿ–ಸಿಗರೇಟ್ ಸೇದುವವನಿಗೆ) ಎಷ್ಟು ಪಾಪ ತಗಲುವುದೆಂದು? ಆದ್ದರಿಂದ ಮೇಲಿನ ಈ ಎಲ್ಲಾ ಪದಾರ್ಥಗಳ ಸೇವನೆಯನ್ನು ಎಂದಿಗೂ ಮಾಡಬೇಡಿ.

ವಾಣಿ ಸಂಖ್ಯೆ.7:– ಸಮಾಜದಲ್ಲಿ ಕೆಲ ವ್ಯಕ್ತಿಗಳನ್ನು ನೋಡಿ ಮತ್ತೆ ಕೆಲವರು ಮಾದಕ ವಸ್ತುಗಳನ್ನು ಬಳಸಲು ಪ್ರಾರಂಭಿಸುತ್ತಾರೆ. ಸತ್ಸಂಗಕ್ಕೆ ಬಂದು ಅದನ್ನು ಬಿಟ್ಟು ಬಿಡುತ್ತಾರೆಂದರೆ ಅವರು ಹಿಂದಿನ ಜನ್ಮದಲ್ಲಿ ಮನುಷ್ಯರಾಗಿದ್ದರು ಎಂದರ್ಥ ಅವರಿಗೆ ಮಾದಕ ವಸ್ತುಗಳ ಚಟ ಹತ್ತುವುದಿಲ್ಲ. ಸತ್ಸಂಗಕ್ಕೆ ಹೋದ ನಂತರವೂ ಈ ದುರಭ್ಯಾಸವನ್ನು ಬಿಡಲಿಲ್ಲವೆಂದರೆ ಅವರು ಹಿಂದಿನ ಜನ್ಮದಲ್ಲಿ ಹಂದಿಯಾಗಿ ಹುಟ್ಟಿದ್ದರು ಎಂದರ್ಥ. ಹಂದಿಯಾಗಿ ದುರ್ಗಂಧ ಮೂಸುವುದರಿಂದ ತಂಬಾಕಿನ ದುರ್ಗಂಧ ಕುಡಿಯುವ ಮತ್ತು ಸೇದುವ ಅಭ್ಯಾಸವಾಗಿರುವುದರಿಂದ ಅಂಥವರು ಈ ದುರಭ್ಯಾಸದಿಂದ ಹೊರ ಬಾರದೆ, ಅಮೂಲ್ಯವಾದ ಮಾನವ ಜನ್ಮವನ್ನು ಹಾಳು ಮಾಡಿಕೊಳ್ಳುತ್ತಾರೆ. ಅಂಥವರಿಗೆ ಅಧಿಕ ಸತ್ಸಂಗ ಕೇಳುವ ಸಲಹೆ ನೀಡಲಾಗುತ್ತದೆ. ನಿರಾಶರಾಗುವ ಭಯ ಬೇಡ. ನಿಜವಾದ ಮನಸ್ಸಿನಿಂದ ಪರಮೇಶ್ವರ ಕಬೀರ ಭಗವಂತನಲ್ಲಿ ನಶೆ ಬಿಡಿಸಲು ಪ್ರಾರ್ಥಿಸಿದರೆ, ಎಲ್ಲಾ ದುರಭ್ಯಾಸ(ನಶೆ) ದೂರವಾಗುತ್ತದೆ.

## "ತಂಬಾಕಿನ ವಿಷಯದಲ್ಲಿ ಇನ್ನುಳಿದ ವಿಚಾರಗಳು"

**ತಂಬಾಕು ಅಂದರೆ ಹುಕ್ಕಾ ಸೇದುವವರ ಸ್ಥಿತಿಯ ಬಗ್ಗೆ ಹೇಳಲಗಿದೆ.**

**(ಸಂತ ಗರೀಬ್‌ದಾಸರ ಗ್ರಂಥದಲ್ಲಿ "ಅಥ್ ತಮಾಖೂ ಕೀ ಬೈಂತ್" ಎಂಬ ಅಧ್ಯಾಯ)**

ಪಿತ್ ಬಾಈ ಖಾಂಸೀ ನಿಬಾಸೀ ನಿಬಾಸ್ । ಕಫ್ ದಲ್ ಕಲೇಜಾ ಲಿಯಾ ಹೈ ಗಿರಾಸ್ ॥
ಕಾಲಾ ತಮಾಖೂ ಅರೂ ಗೋರಾ ಪಿವಾಕ್ । ದಸ್ ಬೀಸ್ ಲಂಗರ್ ಜಹಾಂ ಬೈಠೇ ಗುಟಾಕ್॥
ಬಾಜೇ ನೈ ಗುಡ್ ಗುಡ್ ಅರೂ ಹುಕ್ಕೇ ಹಜೂಮ್ । ಕೋರೇ ಕುಬುದ್ಧಿ ಬೀಸಾ ಹೈಂ ನ ಸೂಮ್॥
ಬಾಂಕೀ ಪಗಡೀ ಅರೂ ಬಾಂಕೀ ಹೀ ನೈ ಖುದ್ ಡೂಬೈ ಅರೂ ಡುಬೋಏ ಹೈ ಕೈ ॥
ಗುಟಾಕಡ್ ಅಟಾಕಡ್ ಮಟಾಕಡ್ ಲಹೂರ್। ಏಕ್ ಬೈಠೇಗಾ ಅಡಕರ್ ಏಕ್ ಬೇಠೈಗಾ ದೂರ್॥
ಪೀವೈ ತಮಾಖೂ ಪಡೈ ಕರ್ಮ್ ಮಾರ್। ಅಮಲೀ ಕೇ ಮುಖ್ ಮೆಂ ಮುತ್ರ್ ಕೀಧಾರ್॥
ಕಡವಾ ಹೀ ಕಡವಾ ತೂ ಕರತಾ ಹಮೇಶ್। ಕಡವಾ ಹೀ ಲೇ ಪ್ಯಾರೇ ಕಡವಾ ಹೀ ಪೇಶ್ ॥
ಕಾಮೀ ಕ್ರೋಧೀ ತೂ ಲೋಭೀ ಲಬೂಟ್। ಬಚನ್ ಮಾನ್ ಮೇರಾ ಧೂಂಮಾ ನ ಘೂಂಟ್॥
ಹುಕ್ಕಾ ಹರಾಮೀ ಗುಲಾಮೀ ಗುಲಾಮ್ । ಧನೀ ಕೇ ಸರೇ ಮೆಂ ನ ಪಹುಂಚೆ ಅಲಾಮ್ ॥
ಪಾಮರ್ ಪರಮ್ ಧಾಮ್ ಜಾತೇ ನಕೋಈ। ಝೂಠೆ ಅಮಲ್ ಪರ್ ದಈ ಜಾನ್ ಖೋಈ॥
ಮುರದಾ ಮಜಾವರ್ ಹರಾಮೀ ಹರಾಮ್। ಪೀವೈಂ ತಮಾಖೂ ಸೋ ಇಂದ್ರೀ ಕೇ ಗುಲಾಮ್॥
ಅಜ್ಞಾನ್ ನೀಂದ್ ನ ಸೋ ಉಠ್ ಜಾಗ್, ಪೀವೈ ತಮಾಖೂ ಗಯೆ ಫುಟಿ ಭಾಗ್ ॥

ಭಾಂಗ್ ತಮಾಖೂ ಪೀವೈಂ ಹೀ, ಸುರಾಪಾನ್ ಸೇ ಹೇತ್ ।
ಗೋಸತ್ ಮಿಟ್ಟೀ ಖಾಯ್‌ಕರ್ ಜಂಗಲೀ ಬನೈಂ ಪ್ರೇತ್ ॥
ಗರೀಬ್, ಪಾನ್ ತಮಾಖೂ ಚಾಬಹೀಂ, ಸಾಂಸ್ ನಾಕ್ ಮೆಂ ದೇತ್ ।
ಸೋ ತೋ ಅಕಾರ್ಥ್ ಗಏ, ಜ್ಯೋಂ ಭಡಭೂಜೇ ಕಾ ರೇತ್ ॥
ಭಾಂಗ್ ತಮಾಖೂ ಪೀವಹೀಂ, ಗೋಸತ್ ಗಲಾ ಕಬಾಬ್ ।
ಮೋರ್ ಮೃಗ್ ಕೂಂ ಭಖತ್ ಹೈ, ದೇಂಗೇ ಕಹಾಂ ಜವಾಬ್ ॥
ಭಾಂಗ್ ತಮಾಖೂ ಪೀವತೇ, ಚಿಸಮ್ಯೋಂ ನಾಲಿ ತಮಾಮ್ ।
ಸಾಹಿಬ್ ತೇರೀ ಸಾಹಿಬೀ, ಜಾನೇ ಕಹಾಂ ಗುಲಾಮ್ ॥
ಗವೂ ಆಪನೀ ಅಮ್ಮಾ ಹೈ, ಇಸ್ ಪರ್ ಛುರೀ ನಾ ಬಾಹಯ್।
ಗರೀಬ್‌ದಾಸ್ ಘೀ ದೂಧ್ ಕೋ, ಸಬ್ ಹೀ ಆತ್ಮ ಖಾಯ್ ॥

**ಭಾವಾರ್ಥ:–** ಮಾನವನ ಶರೀರಕ್ಕೆ ಆಮ್ಲಜನಕದ ಅವಶ್ಯಕತೆ ಇದೆ. ಅದರ ಬದಲಾಗಿ ತಂಬಾಕಿನ ಹೊಗೆ(ಕಾರ್ಬನ ಡೈ ಆಕ್ಸೈಡ್) ಪ್ರವೇಶಿಸಿದರೆ ಅವನಿಗೆ ದಮ್ಮು ಬರುತ್ತದೆ. ಪಿತ್ತಿನ ರೋಗವಾಗಬಹುದು, ಕ್ಯಾನ್ಸರ್ ರೋಗ ಬರುತ್ತದೆ. ಹುಕ್ಕಾ ಸೇದುವವರು ಕುಳಿತುಕೊಳ್ಳುವ ಸ್ಟೈಲ್ ಹೇಳಿದ್ದಾರೆ. ಹುಕ್ಕಾ ಸೇದುವವರು ಒಬ್ಬಿಬ್ಬರು ಹುಕ್ಕಾದ ಸಮೀಪ ಕುಳಿತುಕೊಳ್ಳುವರು ಒಬ್ಬ ಸ್ವಲ್ಪ ದೂರದಲ್ಲಿ ಕುಳಿತುಕೊಳ್ಳುವ ಮತ್ತು ಹೇಳುವ ಸ್ವಲ್ಪ ಇಕಡೆ ಸರಿಸಿ, ನಂತರ ಬೇರೆಯವನಿಗೆ ಕೊಡುವರು ನಂತರ ಅದು(ಹುಕ್ಕಾ ಸೇದುವ ಪೈಪ್) ಗುರಡ್–ಗುರಡ್ ಶಬ್ದ ಮಾಡುವುದು. ಸ್ವತಃ ಹುಕ್ಕಾ ಸೇದುವುದರಿಂದ ಜೀವನ ನಷ್ಟಮಾಡಿಕೊಂಡರು. ಚಿಕ್ಕ ಮಕ್ಕಳು ಇವರನ್ನು ನೋಡಿ ಇದೇ ಕೆಲಸ ಮಾಡಿ ಪಾಪ ಮಾಡುವರು ಮತ್ತು ನರಕಕ್ಕೆ ಹೋಗುವರು. ತಂಬಾಕು ಸೇದುವವರದಂತು ನಾಶವೇ ಆಗಿದೆ. ಅನ್ಯರನ್ನು ತಂಬಾಕು ಸೇವಿಸುವಂತೆ ಪ್ರೇರೇಪಿಸುತ್ತಾ ಅವರನ್ನೂ ಮುಳುಗಿಸುತ್ತಾರೆ. ಮೇಲೆ ತಿಳಿಸಿದ ದುಷ್ಟತನ ಮಾಡುವವರು ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಾರೆ. ಹೇಗೆ ಭಟ್ಟಿಯಲ್ಲಿ ಮರಳನ್ನು ಚೆನ್ನಾಗಿ ಕಾಯಿಸಿ ಕಡಲೆ ಹುರಿಯುತ್ತಾರೋ, ಹುರಿದ ನಂತರ ಕಡಲೆಯನ್ನು ತೆಗೆದುಕೊಂಡು ಮರಳನ್ನು ಬೀದಿಗೆ ಬಿಸಾಡುತ್ತಾರೋ ಹಾಗೆ ಮನುಷ್ಯನು ಮೇಲೆತಿಳಿಸಿದ ಕೆಟ್ಟ ಕೆಲಸ ಮಾಡಿ ತನ್ನ ಮಾನವ ಜೀವನವನ್ನು ವ್ಯರ್ಥಗೊಳಿಸುತ್ತಿದ್ದಾನೆ. ಆ ಜೀವಾತ್ಮವನ್ನು ನರಕ ಹಾಗೂ ಅನ್ಯ ಪ್ರಾಣಿಗಳ ಜೀವನ ರೂಪಿ ಬೀದಿಯಲ್ಲಿ ಬಿಸಡುತ್ತಾರೆ. ಯಾರು ಮೇಲೆ ತಿಳಿಸಿದ ಪಾಪಗಳನ್ನು ಮಾಡುವರೋ ಅವರು ಭಗವಂತನ ಆಸ್ಥಾನದಲ್ಲಿ ಏನು ಉತ್ತರ ನೀಡುವರು ಅಂದರೆ ಮಾತನಾಡುವ ಯೋಗ್ಯರಿರುವುದಿಲ್ಲ.

ಭಕ್ತಿಮಾರ್ಗದಲ್ಲಿ ತಂಬಾಕು ಅತ್ಯಂತ ತೊಂದರೆ ಕೊಡುತ್ತದೆ ಹೇಗೆಂದರೆ ನಮ್ಮ ಮೂಗಿನ ಮಧ್ಯದಲ್ಲಿ ಒಂದು ಮೂರನೇ ದಾರಿ ಇದೆ. ಅದು ಸೂಜಿಯ ಮೊನೆಯಷ್ಟು ಚಿಕ್ಕದು. ಯಾರು ತಂಬಾಕಿನ ಹೊಗೆಯನ್ನು ಮೂಗಿನಿಂದ ಬಿಡುತ್ತಾರೋ, ಆ ಹೊಗೆಯು ಆ ದಾರಿಯನ್ನು ಮುಚ್ಚಿಬಿಡುತ್ತದೆ. ಅದೇ ದಾರಿಯು ಮೇಲಿನ ತ್ರಿಕುಟಿಯ ಕಡೆಗೆ ಹೋಗುತ್ತದೆ. ಅಲ್ಲಿ ಪರಮಾತ್ಮ ನೆಲೆಸಿರುತ್ತಾನೆ. ಯಾವ ಮಾರ್ಗದಿಂದ ನಾವು ದೇವರನ್ನು ಭೇಟಿಯಾಗಬೇಕೋ ಅದೇ ದಾರಿಯನ್ನು ತಂಬಾಕು ಮುಚ್ಚಿ ಬಿಡುತ್ತದೆ. ಹುಕ್ಕಾ ಕುಡಿಯುವವರನ್ನು ನೋಡಿದ್ದೇವೆ. ದಿನವೂ ಹುಕ್ಕಾದ ನಳಿಕೆಯಲ್ಲಿ ಲೋಹದ ಸಲಕೆಯನ್ನು ಬಳಸಿಕೊಂಡು ಸಿಲುಕಿಕೊಂಡಿರುವ ಹೊಗೆಯ ಕಸವನ್ನು ತೆಗೆಯುತ್ತಾರೆ. ಆ ನಳಿಕೆ ಮುಚ್ಚುತ್ತದೆ. ಮಾನವ ಜೀವನವು ಪರಮಾತ್ಮನ ಪ್ರಾಪ್ತಿಗಾಗಿ ಸಿಕ್ಕಿದೆ. ಪರಮಾತ್ಮನನ್ನು ಪಡೆಯುವ ದಾರಿಯನ್ನು ತಂಬಾಕುವಿನ ಹೋಗೆ ಮುಚ್ಚಿ ಬಿಡುತ್ತದೆ. ಆದ್ದರಿಂದ ಭಕ್ತನಿಗೆ ತಂಬಾಕು ಒಂದು ದೊಡ್ಡ ಶತ್ರು, ತಂಬಾಕು ಒಳ್ಳೆಯದಲ್ಲವೆಂದು ಹುಕ್ಕಾ ಕುಡಿಯುವವರಿಗೂ ಗೊತ್ತು. ಮನೆಯಲ್ಲಿ ತಂದೆ, ತಾತ, ಚಿಕ್ಕಪ್ಪ ಹುಕ್ಕಾ ಸೇವನೆ ಮಾಡುವುದನ್ನು ನೋಡಿ ಮಗು ಅದನ್ನು ಅನುಕರಿಸುತ್ತದೆ. ಮಗು ಹುಕ್ಕಾ ಸೇವಿಸ ತೊಡಗಿದರೆ, ದೊಡ್ಡವರು ತಾವು ಹುಕ್ಕಾ ಸೇವಿಸುತ್ತಾರೆ. ಮಕ್ಕಳಿಗೆ ಸೇವಿಸದಂತೆ ಧಮಕಿ ಹಾಕುತ್ತಾರೆ. ಇದು ಒಳ್ಳೆಯದಲ್ಲ. ನೀವು ತಂಬಾಕು ಒಳ್ಳೆಯದೆಂದು ನಂಬುತ್ತಿದ್ದರೆ, ನಿಮ್ಮ ಮಕ್ಕಳಿಗೆ ಸೇದಲು ಬಿಡಿ. ನೀವು ಮಕ್ಕಳಿಗೆ ಬೇಡವೆಂದು ಹೇಳಿದರೆ ಅದು ಒಳ್ಳೆಯದಲ್ಲ ಹಾನಿಕಾರಕವಾಗಿದೆ

ಎಂದರ್ಥ. ಚಳಿಗಾಲದಲ್ಲಿ 1 ಮನೆಯಲ್ಲಿ ಚಿಕ್ಕ ಮಕ್ಕಳೂ ಮಲಗಿಕೊಂಡಿದ್ದರು, ಅಲ್ಲಿಯೇ ಹುಕ್ಕಾ ಸೇದುವವನು ಹುಕ್ಕಾ ಸೇದುತ್ತಿದ್ದ, ಅವನು ಸ್ವತಃ ಪಾಪ ಮಾಡುತ್ತಿದ್ದಾನೆ ಮತ್ತು ತನ್ನ ಕುಟುಂಬಕ್ಕೆ ಹೋಗೆ ಸೇದುಸುವ ಮೂಲಕ ಪಾಪದ ಭಾಗಿ ಮಾಡಿಸುತ್ತಿದ್ದಾನೆ. ಚಿಕ್ಕ ಮಕ್ಕಳಿಗೆ ಅಜ್ಜ–ತಂದೆ ತಮ್ಮ ಪಾಲಿನ ಹಾಲನ್ನು ಕುಡಿಸಲು ಪ್ರಯತ್ನಿಸುತ್ತಾರೆ ಇನ್ನು ಸ್ವಲ್ಪ ಕುಡಿ ನೋಡು ನಿನ್ನ ಕೂದಲು ಬೆಳೆಯುತ್ತಿದೆ ಇನ್ನು ಸ್ವಲ್ಪ ಕುಡಿ. ಈ ರೀತಿ ಅದಕ್ಕೆ ಹಾಲನ್ನು ಕುಡಿಸಿಯೇ ನಿಟ್ಟುಸಿರುಬಿಡುತ್ತಾರೆ. ಏಕೆಂದರೆ ಹಾಲು ಮಗುವಿನ ಆರೋಗ್ಯಕ್ಕೆ ಒಳ್ಳೆಯದು. ಹುಕ್ಕಾ, ಬಿಡಿ ಸೇದುವುದರಿಂದ ನಿರಾಕರಿಸಿದರೆ, ಮನಸ್ಸು ಹೇಳುವುದು ತಂಬಾಕು ಸೇದುವುದು ಒಳ್ಳೆಯದಲ್ಲ. ಆದರೆ ತಂಬಾಕು ಸೇವನೆ ಸಮಾಜದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಅದ್ದರಿಂದ ಪಾಪ ತಗಲುವುದಿಲ್ಲ, ಹೇಗೆ ಅನೇಕ ಭಿಲ್ಲರು ಮಾಂಸ ತಿನ್ನುತ್ತಾರೆ, ಅವರ ಮಕ್ಕಳಿಗೆ ಆ ಪಾಪವೂ ಸಾಮಾನ್ಯವಾಗಿ ಬಿಟ್ಟಿದೆ.

ಇದೇ ರೀತಿ ತಂಬಾಕು ಸೇವನೆ ಮಹಾಪಾಪ, ಆದರೆ ಇತ್ತೀಚೆಗೆ ಇದು ಪರಂಪರೆ ಆಗಿಬಿಟ್ಟಿದೆ ಪಾಪ ತಗಲುವುದಿಲ್ಲ. ಇದನ್ನು ಬಿಟ್ಟು ಬಿಡಬೇಕು. ಭಕ್ತ ಹರ್‌ಲಾಲ್ ಆ ದಿನವೇ ಹುಕ್ಕಾವನ್ನು ಮುರಿದು ಬಿಸಾಕಿದನು. ಕುಟುಂಬದವರಿಗೆ ಎಲ್ಲಾ ವಿಷಯ ತಿಳಿಸಿದನು. ನಾಮ ದೀಕ್ಷೆ ಕೊಡಿಸಿದನು. ಅದನ್ನು ನೋಡಿ ಕುಟುಂಬದವರು ಸಂತೋಷಿಸಿದರು. ಎಲ್ಲರೂ ದೀಕ್ಷೆ ಪಡೆದರು. ಹಲವಾರು ಪೀಳಿಗೆಯವರೆಗೂ ಆ ಕುಟುಂಬದಲ್ಲಿ ಹುಕ್ಕಾ ಎಂಬ ಹೆಸರೇ ಇರಲಿಲ್ಲ. ನಂತರ ಸತ್ಸಂಗದ ಅಭಾವದಿಂದ ನಂತರ ಕೆಲವರು ಸೇವಿಸಲಾರಂಭಿಸಿದರು.

## "ತಂಬಾಕನ್ನು ಕತ್ತೆ–ಕುದುರೆಗಳೂ ಅಸಹ್ಯ ಪಟ್ಟುಕೊಳ್ಳುತ್ತವೆ"

ಒಂದು ದಿನ ಸಂತ ಗರೀಬ್‌ದಾಸರು (ಝುಜ್ಜರ್ ಜಿಲ್ಲೆಯ ಛುಡಾನಿ ಹಳ್ಳಿಯವರು) ಯಾವುದೋ ಕೆಲಸದ ನಿಮಿತ್ತ ಕುದುರೆಯೇರಿ ಜಿಂದ್ ಜಿಲ್ಲೆಯ ಯಾವುದೋ ಹಳ್ಳಿಗೆ ಹೊರಟಿದ್ದರು. ದಾರಿಯಲ್ಲಿ ಮಾಲ್‌ಖೇಡ್ ಎಂಬ ಹಳ್ಳಿಯನ್ನು ತಲುಪಿದರು. ಗೋಧಿಯ ಫಸಲು ಬಂದಿತ್ತು. ಕುದುರೆ ಇದ್ದಕ್ಕಿದ್ದಂತೆ ರಸ್ತೆಯಿಂದ ಹೊಲದ ಕಡೆಗೆ ಹೊರಟಿತು. ಹೊಲದಲ್ಲಿ ಕಾವಲುಗಾರರಿದ್ದರು. ಕೋಲನ್ನು ಹಿಡಿಯುತ್ತಾ ಗರೀಬ್‌ದಾಸರನ್ನು ಅಟ್ಟಾಡಿಸಿಕೊಂಡು ನಿನ್ನ ತಲೆ ಕೆಟ್ಟಿದೆಯಾ? ನಮ್ಮ ಬೆಳೆಯನ್ನೆಲ್ಲಾ ಹಾಳು ಮಾಡಿದೆಯಲ್ಲಾ? ಕುದುರೆಯನ್ನು ಸರಿಯಾಗಿ ಓಡಿಸಲು ನಿನಗೇನಾಗಿದೆ? ಎಂದು ಬಯ್ಯುತ್ತಾ ಕೋಲಿನಿಂದ ಹೊಡೆಯಲು ಕೈ ಮೇಲೆತ್ತಿದವರೇ. ಎಲ್ಲರೂ ಕಲ್ಲಿನಂತೆ ಮೂರ್ತಿಯಾಗಿ ನಿಂತಲ್ಲೇ ನಿಂತು ಬಿಟ್ಟರು. ಇದೆ ಪ್ರಕಾರ 5 ನಿಮಿಷದವರೆಗೆ ನಿಂತಿದ್ದರು. ನಂತರ ಸಂತ ಗರೀಬ್‌ದಾಸರು ಅವರಿಗೆ ಆಶೀರ್ವಾದ ನೀಡಿದರು. ಆಗ ಕಾವಲುಗಾರರು ಎಚ್ಚರಗೊಂಡು ಕೆಳಗೆ ಬಿದ್ದರು. ಕೈಯಿಂದ ಕೋಲು ಬಿತ್ತು. ಲಕ್ವ ಹೊಡೆದಂತೆ ಆಗಿತ್ತು. ಕಾವಲುಗಾರರಿಗೆ ಇವರೊಬ್ಬರು ಸಾಮಾನ್ಯ ವ್ಯಕ್ತಿಯಲ್ಲ ಎಂದು ತಿಳಿಯಿತು. ಅಗ ಅವರ ಕಾಲಿಗೆ ಬಿದ್ದು ಎಲ್ಲರೂ ಕ್ಷಮೆ ಯಾಚಿಸಿದರು. ಆಗ ಸಂತ ಗರೀಬ್‌ದಾಸರು, "ಮಹಾನುಭಾವರೇ, ಈ ದಾರಿಯಲ್ಲಿ ಹೋಗುವವನ ಜೊತೆ ಹೀಗೆ ವರ್ತಿಸುತ್ತೀರಾ? ಹೊಡೆಯಲು ಬರುವಿರಾ? ಮೊದಲು ಕುದುರೆ ದಾರಿ ಬಿಟ್ಟು ಹೊಲಕ್ಕೆ ಏಕೆ ನುಗ್ಗಿತು ಎನ್ನುವುದನ್ನು ತಿಳಿಯಲು ಪ್ರಯತ್ನಿಸಬೇಕು. ರೈತರು ಕೇಳಿದರು ಕುದುರೆ ಯಾವ ಕಾರಣದಿಂದ ಬೆಳೆಯಲ್ಲಿ ಹೋಯಿತು ಎಂದು ಈಗ ಹೇಳಿ. ಈ ಹೊಲದಲ್ಲಿ ಗೋಧಿಗೆ ಮೊದಲು ಏನನ್ನು ಬೆಳೆದಿದ್ದಿರಿ?" ಎಂದು ಸಂತ ಗರೀಬ್‌ದಾಸರು ಕೇಳಿದರು. ಆಗ ರೈತರು. 'ಜೋಳ ಹಾಕಿದ್ದೆವು' ಎಂದರು. ಅದಕ್ಕಿಂತ ಮೊದಲು ಏನನ್ನು ಬೆಳೆದಿದ್ದಿರಿ? ಎಂದು ಕೇಳಿದರು. ಆಗ ರೈತರು 'ತಂಬಾಕನ್ನು ಬೆಳೆದಿದ್ದೆವು' ಎಂದರು. ಸಂತ ಗರೀಬ್‌ದಾಸರು, ತಂಬಾಕಿನ ದುರ್ವಾಸನೆ ಇನ್ನೂ ಈ ಹೊಲದಿಂದ ಬರುತ್ತಿದೆ. ಅದರ ದುರ್ವಾಸನೆಯಿಂದ ನನ್ನ ಕುದುರೆ ಕಂಗೆಟ್ಟು ಈ ರೀತಿ ದೂರ ಓಡಲು ಪ್ರಯತ್ನಿಸಿ ಅಡ್ಡಾದಿಡ್ಡಿ ಓಡುತ್ತಿದೆ. ನೀವು ತಂಬಾಕು ಸೇವನೆ ಮಾಡುತ್ತೀರಾ, ನೀವು ಪ್ರಾಣಿಗಳಿಗಿಂತ ಕಡೆ, ಗಮನವಿಟ್ಟು ಕೇಳಿ. ಈ ದಿನದಿಂದ ಯಾರೂ ಈ ಊರಿನಲ್ಲಿ ತಂಬಾಕನ್ನು ಸೇವಿಸಬಾರದು. ಹುಕ್ಕಾ ಕುಡಿಯಬಾರದು. ಒಂದು ವೇಳೆ ಆದೇಶ ಪಾಲಿಸದಿದ್ದರೆ ಇಡೀ ಹಳ್ಳಿ

ಹಾಳಾಗಿ ಹೋಗುತ್ತದೆ." ಎಂದರು. ಆ ಸಮಯ ಎಲ್ಲರೂ ಅವರ ಮಾತನ್ನು ಒಪ್ಪಿದರು. ನಂತರ ಗರೀಬ್‌ದಾಸರು ಅಲ್ಲಿಂದ ಹೊರಟು ಹೋದ ಮೇಲೆ ರೈತರು ಹುಕ್ಕಾ ಕುಡಿಯಲು ನಿರ್ಧರಿಸಿ, ನಳಿಕೆಗೆ ಹುಕ್ಕಾ ತುಂಬಿದರು. ಕ್ಷಣಾರ್ಧದಲ್ಲಿ ಹುಕ್ಕಾ ಕೈಯಿಂದ ಜಾರಿ ಕೆಳಗೆ ಬಿದ್ದು ಚೂರಾಯಿತು. ಮತ್ತೊಂದು ನಳಿಕೆಗೆ ತುಂಬಿದರು. ಅದೂ ಕೈಯಲ್ಲಿಯೇ ಚೂರು-ಚೂರಾಯಿತು. ಹೊಲದಲ್ಲಿದ್ದ ಹುಕ್ಕಾ ನಳಿಕೆಗಳಿಗೆಲ್ಲಾ ಅದೇ ಗತಿಯಾಯಿತು. ಕಾವಲುಗಾರರಿಗೆ ಇದೆಲ್ಲಾ ಆ ಗುರುಗಳ ಮಹಿಮೆ ಎಂದು ತಿಳಿಯಿತು. ಹಳ್ಳಿಗೆ ಹೋಗಿ ನೋಡಿದಾಗ ಎಲ್ಲರ ಹುಕ್ಕಾಗಳಿಗೂ ಅದೇ ಗತಿಯಾಗಿತ್ತು. ಇಡೀ ಹಳ್ಳಿಯಲ್ಲಿ ಕೋಲಾಹಲವುಂಟಾಯಿತು. ಭಯದ ವಾತಾವರಣ ಉಂಟಾಯಿತು. ಕಾವಲುಗಾರರು ವಿಷಯವನ್ನೆಲ್ಲಾ ತಿಳಿಸಿದ ನಂತರ ಹಳ್ಳಿಯವರಿಗೆ ಗೊತ್ತಾಯಿತು. ಆ ದಿನದಿಂದ ಮಾಲ್‌ಖೇಡ್ ಹಳ್ಳಿಯಲ್ಲಿ ಯಾರೂ ತಂಬಾಕು ಸೇವನೆ ಮಾಡುವುದಿಲ್ಲ. ಹುಕ್ಕಾ ಸೇದುವವರು ಹೇಳುತ್ತಾರೆ, ನನ್ನ ಬಳಿ ಕಹಿ ತಂಬಾಕು ಇದೆ. ಇದನ್ನು ಚಿಲಮ್ ನಲ್ಲಿ ತುಂಬಿಕೊ. ಇನ್ನೊಬ್ಬ ಹೇಳುತ್ತಾನೆ ನನ್ನ ಬಳಿ ಅಧಿಕ ಕಹಿ ತಂಬಾಕು ಇದೆ. ಸಂತ ಗರೀಬ್‌ದಾಸರು ಹೇಳಿದರು ಮೃತ್ಯುವಿನ ಬಳಿಕ ಯಮನ ದೂತರು ಕಹಿ ತಂಬಾಕು ಸೇದುವವನ ಬಾಯಿಯಲ್ಲಿ ಮೂತ್ರ ವಿಸರ್ಜನೆ ಮಾಡುತ್ತಾರೆ. ಹೇಳುತ್ತಾರೆ ನೀನು ಅಧಿಕ ಕಹಿ-ಕಹಿ ತಂಬಾಕು ಸೇದಲು ಬಯಸುತ್ತಿಯಾ ತಗೊ ಕಹಿ ಮೂತ್ರ ಕುಡಿ, ಅವನ ಬಾಯಿ ತೆರೆದು ಮೂತ್ರ ವಿಸರ್ಜನೆ ಮಾಡುತ್ತಾರೆ.

ಸಂತ ಗರೀಬ್‌ದಾಸರು ತಮ್ಮ ಲೀಲೆಯಿಂದ ಹುಕ್ಕಾ ಸೇವನೆ ಎಂಬ ದುಶ್ಚಟದಿಂದ ಜನರನ್ನು ಮುಕ್ತಗೊಳಿಸಿದರು. ಜ್ಞಾನದ ಪ್ರಭಾವದಿಂದ ದುಷ್ಟತನ ಸದಾಕಾಲಕ್ಕೆ ದೂರವಾಗುತ್ತದೆ. ಸತ್ಸಂಗದಿಂದ ಜ್ಞಾನ ಉಂಟಾಗುತ್ತದೆ. ಸತ್ಸಂಗ ಕೇಳುವ ಅಭ್ಯಾಸ ಮಾಡಿಕೊಳ್ಳಿ. ಸತ್ಸಂಗ ಕೇಳಿ.

ನಿವೇದನೆ:- ಮೇಲೆ ತಿಳಿಸಿದ ದುಶ್ಚಟಗಳನ್ನು ಬಿಟ್ಟರೆ ಜೀವನ ಸುಖಮಯವಾಗುವುದು.

## "ಮಾದಕತೆ ನಮ್ಮನ್ನು ನಾಶಮಾಡುತ್ತದೆ"

ನಶೆ ಬೇಕಾದರೆ ಮದ್ಯ, ಅಫೀಮ್, ಹೆರೊಯಿನ್ ಮುಂತಾದ ಮಾದಕ ವಸ್ತುಗಳದ್ದು ಸೇವನೆ ಮಾಡುತ್ತಿದ್ದರೆ, ಇದು ನಿಮ್ಮ ಸರ್ವನಾಶದ ಕಾರಣವಾಗುವುದು. ಮಾದಕತೆ ಮೊದಲನೆಯದಾಗಿ ಮನುಷ್ಯನನ್ನು ರಾಕ್ಷಸರನ್ನಾಗಿ ಮಾಡುತ್ತದೆ ನಂತರ ಶರೀರವನ್ನು ಹಾಳು ಮಾಡುತ್ತದೆ. ಶರೀರದ ನಾಲ್ಕು ಮಹತ್ವಪೂರ್ಣ ಭಾಗಗಳೆಂದರೆ 1)ಶ್ವಾಸಕೋಶ 2)ಲಿವರ್ 3)ಕಿಡ್ನಿ 4)ಹೃದಯ. ಮದ್ಯ ಸೇವನೆ ಈ ನಾಲ್ಕೂ ಅಂಗಗಳನ್ನು ಹಾಳುಮಾಡುತ್ತದೆ. ಚರಸ್ ಬುದ್ಧಿಯನ್ನು ಸಂಪೂರ್ಣವಾಗಿ ಹಾಳುಮಾಡುತ್ತದೆ. ಹೆರೊಯಿನ್ ಮದ್ಯಕ್ಕಿಂತ ಹೆಚ್ಚು ಹಾನಿಕರ. ಅಫೀಮಿನಿಂದ ಶರೀರ ದುರ್ಬಲವಾಗುತ್ತದೆ. ಅಫೀಮನಿಂದಲೇ ಚಾರ್ಜ ಆಗಿ ನಡೆಯಲಾರಂಭಿಸುತ್ತಾನೆ. ರಕ್ತ ಮಲಿನವಾಗುತ್ತದೆ. ಆದ್ದರಿಂದ ಯಾರೂ ಅವರನ್ನು ನಗರದಲ್ಲಾಗಲೀ, ಊರಿನಲ್ಲಾಗಲೀ ಇಟ್ಟುಕೊಳ್ಳಲ್ಲ ಮನೆಯ ಮಾತಂತು ಬಿಡಿ. ಅದನ್ನು ಸೇವಿಸುವ ಬಗ್ಗೆ ಯೋಚಿಸುವುದು ಸಹ ಮಹಾಪಾಪ.

❖ ಒಬ್ಬ ವ್ಯಕ್ತಿ ದಿಲ್ಲಿಯ ಪಾಲಮ್ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದನು. ಇಸವಿ 1997ರ ಮಾತು. ಆ ಸಮಯದಲ್ಲಿ ಅವನಿಗೆ 12,000 ಸಂಬಳ ಸಿಗುತ್ತಿತ್ತು. ದಿಲ್ಲಿಯ ಹತ್ತಿರದ ಒಂದು ಹಳ್ಳಿಯಲ್ಲಿ ಈ ದಾಸ (ರಾಮ್‌ಪಾಲ್ ದಾಸ್) ಸತ್ಸಂಗ ಮಾಡುವುದಕ್ಕೆ ಹೋದನು. ಅಲ್ಲಿ ಒಬ್ಬಳು ಮುದುಕಿಯು ತನ್ನ ಮೂರು ಜನ ಮೊಮ್ಮಕ್ಕಳ ಜೊತೆ ಸತ್ಸಂಗಕ್ಕೆ ಬಂದಿದ್ದಳು. ಅವಳು ಸತ್ಸಂಗ ಮಾಡಿಸಿದ್ದವರ ಚಿಕ್ಕಮ್ಮನಾಗಿದ್ದಳು. ಹಳ್ಳಿಯ ಸ್ವಲ್ಪ ಹೊರಗೆ ಒಂದು ಮನೆ ಕಟ್ಟಿಕೊಂಡು ವಾಸವಿದ್ದಳು. ವಿಮಾನ ನಿಲ್ದಾಣದಲ್ಲಿ ಕೆಲಸ ಮಡುವವನ ತಾಯಿ ಅವಳಾಗಿದ್ದಳು. ಆ ನೌಕರ ಮದ್ಯ ಸೇವಿಸುತ್ತಿದ್ದ. ಮನೆಯ ಸ್ಥಿತಿ ದನದ ಕೊಟ್ಟಿಗೆಯಂತೆ ಮಾಡಿದ್ದನು. ಹೆಂಡತಿ ಮಕ್ಕಳನ್ನು ಹೊಡೆಯುತ್ತಿದ್ದ. ಏಕೆಂದರೆ ಅವನು ದಿನನಿತ್ಯ ಮದ್ಯ ಸೇವಿಸಿ ಬರುವುದು, ಹೆಂಡತಿ ಅವನನ್ನು ತಡೆಯುವುದು ಇದು ದಿನನಿತ್ಯದ ಮಹಾಭಾರತವಾಗಿತ್ತು.ಒಂದು ದಿನ ಅವನ ಹೆಂಡತಿ ಮಕ್ಕಳನ್ನು ಬಿಟ್ಟು ತನ್ನ ತಾಯಿಯ ಮನೆಗೆ ಹೊರಟು ಹೋದಳು. ಆ ವೃದ್ಧಳು ಮೊಮ್ಮಕ್ಕಳನ್ನು ಸಾಕಿದಳು. ಒಂದು ದಿನ ತನ್ನ ಸೊಸೆಗೆ ಸಮಾಧಾನ

ಮಾಡಿ ಮತ್ತೆ ಮನೆಗೆ ಕರೆತಂದಳು. ಆ ರಾತ್ರಿ ಆ ಮುದುಕಿಯು ತನ್ನ ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಸತ್ಸಂಗಕ್ಕೆ ಬಂದಳು, ಏಕೆಂದರೆ ಅವಳ ದೊಡ್ಡ ಮೈದುನನ ಮನೆಯಲ್ಲಿ ಸತ್ಸಂಗವಿತ್ತು. ಅದಕ್ಕಾಗಿ ಬರಬೇಕಾಯಿತು. ಸತ್ಸಂಗದಲ್ಲಿ ಪ್ರತಿ ಸಾರಿಯೂ ವರ್ಣನೆ ನೀಡುವ ಅವಶ್ಯಕತೆ ಇರುತ್ತದೆ. ಮೊದಲು ಪರಮಾತ್ಮನ ಭಕ್ತಿಮಾಡುವುದರಿಂದ ಆಗುವ ಲಾಭ ಮತ್ತು ಮಾಡದಿದ್ದರೆ ಉಂಟಾಗುವ ನಷ್ಟದ ಬಗ್ಗೆ ಹೇಳಲಾಗುತ್ತದೆ. ಪೂರ್ತಿ ವಿಸ್ತಾರದಿಂದ ಹೇಳಲಾಗುತ್ತದೆ. ಆ ದಿನ ಆ ಕುಡುಕನು ಮನೆಗೆ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಸ್ವಲ್ಪ ಹೊತ್ತು ಅಲ್ಲೇ ಕುಳಿತಿದ್ದನು. ಆಗ ನೆರಮನೆಯವನು, "ನಿಮ್ಮ ತಾಯಿ ಎಲ್ಲರನ್ನು ಕರೆದುಕೊಂಡು ನಿಮ್ಮ ದೊಡ್ಡಪ್ಪನ ಮನೆಗೆ ಹೋಗಿದ್ದಾಳೆ. ಅಲ್ಲಿ ಸತ್ಸಂಗ ನಡೆಯುತ್ತಿದೆ. ಅಲ್ಲೆ ಎಲ್ಲರ ಊಟದ ವ್ಯವಸ್ಥೆ ಮಾಡಲಾಗಿದೆ" ಎಂದನು. ಪರಮಾತ್ಮನ ಕೃಪೆಯಾಯ್ತು, ಅವನೂ ಸತ್ಸಂಗಕ್ಕೆ ಹೋದನು. ಎಲ್ಲರಿಗಿಂತ ಹಿಂದೆ ಹೋಗಿ ಕುಳಿತನು ಏಕೆಂದರೆ ಮದ್ಯಪಾನ ಸೇವಿಸಿದ್ದನು.

ಸತ್ಸಂಗದ ವಚನ:– ಮಾನವ ಜನ್ಮ ಪಡೆದು ಯಾರು ಒಳ್ಳೆಯ ಕರ್ಮ ಮಾಡದಿದ್ದರೆ ಅವನ ಭವಿಷ್ಯ ನರಕವಾಗುತ್ತದೆ. ಮಾದಕ ವಸ್ತುವಿನ ಸೇವನೆಯಿಂದ ಅವನ ವರ್ತಮಾನ ಮತ್ತು ಭವಿಷ್ಯ ಎರಡೂ ನರಕವಾಗುತ್ತದೆ. ಯಾವ ವ್ಯಕ್ತಿ ತನ್ನ ಪೂರ್ವ ಜನ್ಮದ ಪುಣ್ಯಗಳಿಸಿರುತ್ತಾನೋ ಪ್ರತಿಫಲವಾಗಿ ಅವನಿಗೆ ಒಳ್ಳೆಯ ನೌಕರಿ ಸಿಗುತ್ತದೆ ಅಥವಾ ಒಳ್ಳೆಯ ವ್ಯಾಪಾರ ನಡೆಯುತ್ತದೆ. ಒಂದು ವೇಳೆ ವರ್ತಮಾನದಲ್ಲಿ ಶುಭ ಕರ್ಮ, ಭಕ್ತಿ ಮತ್ತು ದಾನ–ಧರ್ಮ ಮಾಡದಿದ್ದರೆ ಮುಂದಿನ ಜನ್ಮಗಳಲ್ಲಿ ನಾಯಿ, ಕತ್ತೆ, ಹಂದಿ, ಎತ್ತಾಗಿ ಹುಟ್ಟಿ ಹೊಲಸು ತಿನ್ನಬೇಕಾಗುತ್ತದೆ ಮತ್ತು ಕಷ್ಟ ಅನುಭವಿಸಬೇಕಾಗುತ್ತದೆ.

ಈಗ ಮಾನವ ಜನ್ಮದಲ್ಲಿ ಹಿಂದಿನ ಒಳ್ಳೆಯ ಕರ್ಮದ ಅನುಸಾರ ಒಳ್ಳೆಯ ಊಟ ಸಿಕ್ಕಿದೆ. ಒಳ್ಳೆಯ ಮಾನವ ಶರೀರ ಸಿಕ್ಕಿದೆ. ಇಷ್ಟಬಂದಾಗ ಊಟ ಮಾಡಬಹುದು, ಬಾಯಾರಿಕೆಯಾದಾಗ ನೀರು ಕುಡಿಯಬಹುದು. ಇಚ್ಛೆಯಾದಾಗ ಚಹಾ–ಹಾಲು ಕುಡಿಯಬಹುದು, ಹಣ್ಣು–ಪಿಸ್ತಾ, ಬಾದಾಮಿ ತಿನ್ನಬಹುದು. ಒಂದು ವೇಳೆ ಪೂರ್ಣಗುರು ಮಾಡಿಕೊಂಡು ಮನಸ್ಸಿನಿಂದ ಭಕ್ತಿ ಮತ್ತು ಸತ್ಸಂಗ ಸೇವೆ, ದಾನ ಧರ್ಮಮಾಡದಿದ್ದರೆ ಮುಂದಿನ ಜನ್ಮದಲ್ಲಿ ಕತ್ತೆ–ನಾಯಿ–ಎತ್ತು ಆಗಿ ದುರ್ಗತಿ ಕಾಣಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಊಟ, ನೀರು ಸಿಗುವುದಿಲ್ಲ. ಬಿಸಿಲು–ಶೀತದಿಂದ, ಸೊಳ್ಳೆಗಳಿಂದ ರಕ್ಷಿಸಿಕೊಳ್ಳಲು ಯಾವುದೇ ಸಾಧನ ಕಾಣದು. ಮಾನವ ಜೀವನದಲ್ಲಿ ಸೊಳ್ಳೆಪರದೆ, ಆಲ್‌ಆವುಟ್ ದಿಂದ ರಕ್ಷಿಸಿಕೊಳ್ಳಬಹುದು. ಪಶುವಾದಾಗ ಏನು ಸಿಗುವುದು? ಪರಮೇಶ್ವರ ಕಬೀರರಿಂದ ಲಭ್ಯವಾದ ಜ್ಞಾನವನ್ನು ಸಂತ ಗರೀಬ್‌ದಾಸರು ಈ ರೀತಿ ಹೇಳಿದ್ದಾರೆ:–

ಗರೀಬ್, ನರ್ ಸೇತೀ ತೂ ಪಶುವಾ ಕೀಜ್ಯೆ, ಗಧಾ ಬೈಲ್ ಬನಾಈ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೇ, ಕುರಡೀ ಚರನೇ ಜಾಈ ॥

ಭಾವಾರ್ಥ:– ಮಾನವ ಶರೀರಬಿಟ್ಟ ಮೇಲೆ ಭಕ್ತಿಹೀನ ಹಾಗೂ ಶುಭ ಕರ್ಮಹೀನರಾಗಿ ಜೀವಾತ್ಮವು ಕತ್ತೆ, ಎತ್ತು ಮುಂತಾದ ಯೋನಿಗಳನ್ನು (ಶರೀರಗಳಲ್ಲಿ) ಪ್ರಾಪ್ತಿಸುತ್ತದೆ. ನಂತರ ಮಾನವನಿಗೆ ಸಿಗುವಂತಹ ಆಹಾರವು ಸಿಗುವುದಿಲ್ಲ. ಕತ್ತೆಯಾಗಿ ಕಸದಲ್ಲಿ ಹೊಲಸನ್ನೇ ತಿನ್ನಬೇಕಾಗುತ್ತದೆ. ಎತ್ತಾಗಿ ಹುಟ್ಟಿ ಮೂಗಿಗೆ ಮೂಗುದಾರ ಹಾಕಿಸಿಕೊಂಡು, ಹಗ್ಗದಿಂದ ಬಿಗಿಸಿಕೊಂಡು ಬದುಕಬೇಕು. ಬಾಯಾರಿದಾಗ ನೀರು ಕುಡಿಯುವಂತಿಲ್ಲ, ಹಸಿವಾದಾಗ ಊಟ ಮಾಡುವಂತಿಲ್ಲ. ನೊಣ, ಸೊಳ್ಳೆಗಳಿಂದ ಪಾರಾಗಲು 1 ಬಾಲವಿರುತ್ತದೆ ಅಷ್ಟೇ. ಅದನ್ನೇ ಕೂಲರ್ ತರಹ, ಫ್ಯಾನ್ ತರಹ ಸೊಳ್ಳೆಪರದೆಯಂತೆ ಉಪಯೋಗಿಸಿಕೊಳ್ಳಬೇಕು. ಯಾವ ಪ್ರಾಣಿಗಳು ಹೆಚ್ಚು ಪಾಪಕರ್ಮ ಮಾಡಿರುತ್ತವೋ, ಅವುಗಳ ಬಾಲವೂ ಕತ್ತರಿಸಲ್ಪಡುತ್ತದೆ. ಒಂದೂವರೆ ಫುಟ್ ಕೋಲು ಶೇಷ ಉಳಿದಿರುತ್ತದೆ ಅದನ್ನು ತಿರುಗಿಸುತ್ತಿರುತ್ತದೆ.

ಒಮ್ಮೆ 1 ಎತ್ತಿನ ಹಿಂದಿನ ಕಾಲಿಗೆ ಒಂದು ದೊಡ್ಡ ಮೊಳೆ ತಗುಲಿತು. ನಡೆದಾಡುತ್ತಾ ನಡೆದಾಡುತ್ತಾ ಅದು ಇನ್ನು ಒಳಗೆ ಹೋಗಿ ಬಿಟ್ಟಿತು. ಎತ್ತಿಗೆ ನೋವಾಗಿ ಅದು ಕುಂಟಲಾರಂಭಿಸಿತು. ಮಾಲೀಕನಿಗೆ ಈ ವಿಷಯ ತಿಳಿಯದೇ, ಕಾಲಿಗೆ ಏನೋ ಏಟಾಗಿರಬಹುದು, ನರ ಹೊರಳಿರಬಹುದು, ಓಡಾಡಿದರೆ

ಸರಿ ಹೋಗಬಹುದು ಎಂದು ತಿಳಿದನು. ಒಮ್ಮೊಮ್ಮೆ 1 ನರದ ಮೇಲೆ ಇನ್ನೊಂದು ನರ ಕುಳಿತರೆ, ನಡೆದಾಡಿದರೆ ಸರಿ ಹೋಗುತ್ತಿತ್ತು, ಆದರೆ ಈ ಎತ್ತಿಗೆ ಹಾಗಾಗಲಿಲ್ಲ. ಇಡೀ ದಿನ ಎತ್ತು ನೇಗಿಲಿಗೆ ಕಟ್ಟಿಸಿಕೊಂಡು ಉತ್ತುವ ಕೆಲಸ ಮಾಡಿತು. ಮನೆಗೆ ಬರುವ ವೇಳೆಗೆ ಕಾಲಿಗೆ ಹೆಚ್ಚು ನೋವಾಗಿ ಆ ಎತ್ತಿಗೆ ನೆಲದ ಮೇಲೆ ಕಾಲನ್ನು ಊರುವುದೇ ಕಷ್ಟವಾಯಿತು. ನಿಧಾನವಾಗಿ ನಡೆಯುತ್ತಿತ್ತು. ಮನೆ ಸೇರಿದೊಡನೆ ಎತ್ತು ಕುಳಿತು ಬಿಟ್ಟಿತು. ಮೇವನ್ನು ಮುಟ್ಟಲಿಲ್ಲ. ನೋವು ಹೆಚ್ಚಾಗಿದ್ದ ಕಾರಣ ಕಣ್ಣುಗಳಿಂದ ನೀರು ಬರುತ್ತಿತ್ತು. ಬೆಳಿಗ್ಗೆ ಆ ಎತ್ತು ಏಳಲೇ ಇಲ್ಲ. ಅಲ್ಲೇ ಮಲಗಿಬಿಟ್ಟಿತು. ಆಗ ದನಗಳ ವೈದ್ಯ ಬಂದು ಪರೀಕ್ಷಿಸಿದನು, ಅವನಿಗೂ ಸರಿಯಾಗಿ ತಿಳಿಯಲಿಲ್ಲ. ಎಲ್ಲೋ ಕಾಲಿನಲ್ಲಿ ಬಾವು ಆಗಿರಬೇಕೆಂದು ತಿಳಿದು ಹಳೇ ಬೆಲ್ಲವನ್ನು ಕುಟ್ಟಿ ಪುಡಿ ಮಾಡಿ ಪಟ್ಟಿಕಟ್ಟಿದರು. ಸರಿಯಾಗುತ್ತದೆ. ಎಂದು ಹೇಳಿದನು. ಮೊಳೆ ಚುಚ್ಚಿದ್ದು ಪಾದಕ್ಕಾದರೆ ಚಿಕಿತ್ಸೆ ಕಾಲಿಗೆ ಮಾಡುತ್ತಿದ್ದರು. ಹೀಗೆ ಒಂದು ತಿಂಗಳು ಕಳೆದು ಹೋಯಿತು. ನಂತರ 1 ದಿನ ಆ ಕಾಲಿನಿಂದ ಕೀವು ಬರಲು ಪ್ರಾರಂಭವಾಯಿತು. ಅದನ್ನು ಮನೆಯವರು ನೋಡಿದಾಗ ಸ್ವಚ್ಛಗೊಳಿಸಿದಾಗ ಅಲ್ಲಿ ಸಣ್ಣದಾಗಿ ಮೊಳೆಯ ತುದಿ ಕಾಣಲಾರಂಭಿಸಿತು. ಆಗ ತಕ್ಷಣವೇ ಇಕ್ಕಳದಿಂದ ಆ ಮೊಳೆಯನ್ನು ತೆಗೆಯಲಾಯಿತು. ಒಂದು ವಾರದಲ್ಲಿ ಎತ್ತು ಸರಿಯಾಯಿತು. ಹೊಟ್ಟೆ ತುಂಬಾ ಹುಲ್ಲು ತಿಂದು ನೀರು ಕುಡಿಯಿತು.

ಯೋಚಿಸುವ ವಿಷಯ:– ಈ ಪ್ರಾಣಿಯು ಮಾನವ ಶರೀರದಲ್ಲಿದ್ದಾಗ ಅದು ಮುಂದೆ ನಾನು ಎತ್ತಾಗಿ ಹುಟ್ಟುವೆ ಎಂದು ಕನಸ್ಸಿನಲ್ಲೂ ಯೋಚಿಸಿರಲಿಲ್ಲ. ಬಾಯಿ ಬಿಟ್ಟು ಎಲ್ಲಿ ನೋವು ಆಗುತ್ತಿದೆ ಎಂದು ಹೇಳಲೂ ಆ ಎತ್ತಿಗೆ ಸಾಧ್ಯವಿರಲಿಲ್ಲ.

ಕಬೀರ್, ಜಿವ್ಹಾ ತೋ ವೋಹೇ ಭಲೀ, ಜೋ ರಟ್ಯೈ ಹರಿನಾಮ್ ।
ನಾ ತೋ ಕಾಟ್ ಕೇ ಫ್ಯೆಂಕ್ ದಿಯೋ, ಮುಖ್ ಮೆಂ ಭಲೋ ನಾ ಚಾಮ್ ॥

ಭಾವಾರ್ಥ:– ಹೇಗೆ ನಾಲಿಗೆ ದೇಹದ ಬಹಳ ಮಹತ್ವಪೂರ್ಣವಾದ ಅಂಗ. ಪರಮಾತ್ಮನ ಗುಣಗಾನ, ನಾಮಸ್ಮರಣೆ ಮಾಡಲು ಉಪಯೋಗಿಸದಿದ್ದರೆ ವ್ಯರ್ಥವಾಗಿದೆ. ಏಕೆಂದರೆ ಈ ನಾಲಿಗೆಯಿಂದ ಏನು ಬೇಕಾದರೂ ಕೆಟ್ಟ ಮಾತನ್ನಾಡಿ ಪಾಪಮಾಡಬಹುದು. ಬಲಶಾಲಿ ವ್ಯಕ್ತಿಯು ದುರ್ಬಲ ವ್ಯಕ್ತಿಗೆ ಕೆಟ್ಟಮಾತನ್ನು ಆಡಬಹುದು. ಇದರಿಂದ ಅವನ ಆತ್ಮ ಅಳುತ್ತದೆ. ಶಾಪ ನೀಡುತ್ತದೆ. ಮಾತನಾಡಿ ಹೇಳಲು ಸಾಧ್ಯವಿಲ್ಲ ಇಲ್ಲದಿದ್ದರೆ ಮತ್ತೆ ಹೊಡೆಯುವ ಇದು ಪಾಪವಾಯ್ತು. ಯಾರನ್ನಾದರೂ ಬೈಯ್ದು, ಯಾರ ಬಗ್ಗೆಯೋ ಸುಳ್ಳು ಸಾಕ್ಷಿ ಹೇಳಿ, ಯಾರ ವ್ಯಾಪಾರದಲ್ಲೋ ಮೋಸ ಮಾಡಿ, ಅನೇಕ ರೀತಿಯಲ್ಲಿ ಮಾನವನು ತನ್ನ ನಾಲಿಗೆಯಿಂದ ಪಾಪ ಮಾಡುತ್ತಾನೆ. ಯಾರು ನಾಲಿಗೆಯ ಸದುಪಯೋಗ ಮಾಡಿಕೊಳ್ಳುವುದಿಲ್ಲವೋ, ಒಳ್ಳೆಯ ಮಾತು, ಮಧುರವಾದ ವಾಣಿ, ಪರಮಾತ್ಮನ ಗುಣಗಾನ ಅಂದರೆ ದೇವರ ಬಗ್ಗೆ ಚರ್ಚೆ, ಧಾರ್ಮಿಕ ಗ್ರಂಥಗಳ ಪಠಣೆ, ದೇವರ ಹೆಸರಿನಲ್ಲಿ ಜಪ, ತಪ ಮುಂತಾದವುಗಳನ್ನು ತಮ್ಮ ನಾಲಿಗೆಯಿಂದ ಮಾಡದಿದ್ದರೆ ಅದನ್ನು ಕತ್ತರಿಸಿ ಬಿಸಾಕು, ಬಹಳ ಪಾಪ ಒಟ್ಟುಗೂಡಿಸುತ್ತಿದ್ದಾನೆ ಎಂದು ಪರಮೇಶ್ವರ ಕಬೀರರು ಹೇಳಿದ್ದಾರೆ.

(ನಾಲಿಗೆ ಕತ್ತರಿಸು ಎಂದು ಹೇಳುವುದು ಮಾತ್ರ ಉದಾಹರಣೆ ಅದರ ಸದುಪಯೋಗ ಮಾಡಲು ಹೇಳಲಾಗಿದೆ. ನಾಲಿಗೆಯನ್ನು ಎಂದಿಗೂ ಕತ್ತರಿಸಬಾರದು. ಒಳ್ಳೆಯ ಕಾರ್ಯವನ್ನು, ಒಳ್ಳೆಯದಾಗಿ ಮಾತನಾಡುವುದು, ಪ್ರಾರಂಭಿಸು ಎಂದರ್ಥ. ಒಂದು ವೇಳೆ ರಾಮನಾಮ ಅಥವಾ ಭಗವಂತನ ಗುಣಗಾನ ಮಾಡದಿದ್ದರೆ ಈ ನಾಲಿಗೆ ಇದ್ದು ವ್ಯರ್ಥ ಎಂದರ್ಥ.)

❖ ಇಂದಿನ ಕಾಲದಲ್ಲಿ (1970ನೇ ಇಸವಿಯಿಂದ) ಮಾನವನಿಗೆ ಅನೇಕ ಸೌಲಭ್ಯಗಳು ಲಭಿಸುತ್ತಿದೆ. ಆದರೆ ಅವನು ಎಷ್ಟು ವೇಗವಾಗಿ ಪರಮಾತ್ಮನಿಂದ ದೂರ ಸರಿಯುತ್ತಿದ್ದಾನೋ, ಅಷ್ಟೇ ವೇಗವಾಗಿ ಅವನಿಗೆ ದುಃಖ ಸಮೀಪಿಸುತ್ತಿದೆ. ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ ಆದರೆ ಮಾನಸಿಕ ಶಾಂತಿ ದೂರವಾಗುತ್ತಿದೆ. ಇದಕ್ಕೆ ಮಾದಕತೆಯೇ ಮುಖ್ಯ ಕಾರಣ. ಒಬ್ಬ ತಂದೆ ಕೆಲಸಕ್ಕೆ ಹೋಗಿದ್ದರೆ ಅವನ ಮಕ್ಕಳು ತನ್ನ ತಂದೆ ಬರುವಾಗ ತಮಗೆ ಬೇಕಾದ ವಸ್ತುಗಳನ್ನು ತರಬಹುದೆಂದು

ಮಕ್ಕಳು ಕಾಯುತ್ತಿರುತ್ತಾರೆ. ತಂದೆ ಬಂದ ತಕ್ಷಣ ಚಿಕ್ಕ ಚಿಕ್ಕ ಮಕ್ಕಳು ಓಡಿ ಹೋಗಿ ಅಪ್ಪನನ್ನು ತಬ್ಬಿಕೊಳ್ಳುತ್ತಾರೆ. ಆದರೆ ಯಾರ ತಂದೆ ಮಾದಕ ವ್ಯಸನಿಯಾಗಿರುತ್ತಾನೋ ಆ ಮನೆಯಲ್ಲಿ ಜಗಳ ಬಿಟ್ಟು ಪ್ರೀತಿ ಸಿಗಲು ಹೇಗೆ ಸಾಧ್ಯ? ಮಕ್ಕಳು ಅಪ್ಪನ ಬಳಿ ಹೋಗಲು ಹೆದರುತ್ತಾರೆ. ಅವರ ಶಾರೀರಿಕ, ಮಾನಸಿಕ ವಿಕಾಸವಾಗುವುದಿಲ್ಲ. ಆ ಮನೆ ನರಕದ ಸಮಾನವಾಗುತ್ತದೆ. ಮದ್ಯ ಕುಡಿಯುವ ವ್ಯಕ್ತಿಗೆ ಸಮಾಜದಲ್ಲಿ ಯಾವ ಗೌರವವೂ ಇರುವುದಿಲ್ಲ.

ಮುಂದಿನ ಜನ್ಮದಲ್ಲಿ ಆ ವ್ಯಕ್ತಿ ನಾಯಿಯಾಗಿ ಮಲ ತಿನ್ನಬೇಕಾಗುತ್ತದೆ. ಅವನು ಚರಂಡಿ ನೀರು ಕುಡಿಯುತ್ತಾನೆ. ನಂತರ ಪಶು-ಪಕ್ಷಿಯಾಗಿ ಹುಟ್ಟಿ ಕಷ್ಟಪಡುತ್ತಾನೆ. ಆದ್ದರಿಂದ ಮಾದಕ ವಸ್ತುಗಳ ಸೇವನೆ ಬಿಟ್ಟು ಮನುಷ್ಯನಂತೆ ಜೀವನವನ್ನು ಬಾಳು. ಸಭ್ಯ ಸಮಾಜವನ್ನು ನೆಮ್ಮದಿಯಿಂದ ಬದುಕಲು ಬಿಡು. ಒಬ್ಬ ಕುಡುಕ ನೂರಾರು ವ್ಯಕ್ತಿಗಳಿಗೆ ದುಃಖ ತಂದಿಡುತ್ತಾನೆ. ಹೆಂಡತಿ, ಹೆಂಡತಿಯ ತಂದೆ, ತಾಯಿ, ಅಕ್ಕ, ತಮ್ಮ, ತನ್ನ ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ ಮುಂತಾದವರಿಗೆ ಕಷ್ಟ ಕೊಡುತ್ತಾನೆ. ಕೇವಲ 1 ಗಂಟೆಯ ನಶೆಯು, ಹಣಹಾಳು ಮಾಡಿತು, ಗೌರವ ಹಾಳು ಮಾಡಿತು, ಮಾನ ಮರ್ಯಾದೆ ಮಣ್ಣುಪಾಲು, ಕುಟುಂಬದ ನೆಮ್ಮದಿ ಹಾಳುಮಾಡಿತು. ಭವಿಷ್ಯದಲ್ಲಿ ಆ ವ್ಯಕ್ತಿಯು ಸುಖವಾಗಿರುವನೇ? ಎಂದಿಗೂ ಇಲ್ಲ. ನರಕದಂತೆ ಜೀವನ ನಡೆಸುವನು, ಆದ್ದರಿಂದ ಕೆಟ್ಟದ್ದನ್ನು ಬೇಗ ಬಿಡಲು ತೀರ್ಮಾನಿಸಬೇಕು.

ಪ್ರಶ್ನೆ:- ಮುಂದಿನ ಜನ್ಮದಲ್ಲಿ ಏನಾಗುತ್ತದೆ ಎಂದು ನೋಡಿದವರ್‍ಯಾರು?

ಉತ್ತರ:- ಉದಾಹರಣೆಗೆ, ಒಬ್ಬ ಕುರುಡ ಒಮ್ಮೆ ಒಂದು ಕಾಡಿನ ಕಡೆಗೆ ಹೋಗುತ್ತಿದ್ದನು. ಮುಂದೆ ಒಬ್ಬ ಸಜ್ಜನ ವ್ಯಕ್ತಿ ನಿಂತಿದ್ದರು. ಆ ವ್ಯಕ್ತಿ ಕುರುಡನಿಗೆ, ಸೂರ್‌ದಾಸರೆ, ಈ ಕಡೆ ಹೋಗಬೇಡಿ, ಅದು ದಟ್ಟವಾದ ಕಾಡಿಗೆ ಹೋಗುತ್ತದೆ, ಅಲ್ಲಿ ಭಯಂಕರವಾದ ಹುಲಿ, ಸಿಂಹ, ಚಿರತೆಗಳಿರುತ್ತವೆ. ನೀವು ಮರಳಿ ಹೋಗಿ ಎಂದು ಹೇಳಿದನು. ಆಗ ಆ ಕುರುಡನು ನಶೆ ಮಾಡದ್ದಿದ್ದರೆ ಅವನು ತಕ್ಷಣವೇ ಹಿಂತಿರುಗಿ ಹೋಗುತ್ತಿದ್ದನು. ಒಂದು ವೇಳೆ ಅವನು ನಶೆ ಮಾಡಿದ್ದರೆ, ಅವನು ನೋಡಿದವರ್‍ಯಾರು? ಈ ಕಾಡಿನಲ್ಲಿ ಹುಲಿ, ಚಿರತೆ ಇದೆ ಎಂದು ಹೇಗೆ ನಂಬುವುದು?' ಎಂದು ಹೇಳುತ್ತಾ ಮುಂದುವರಿಯುತ್ತಾನೆ.

ಯೋಚಿಸಬೇಕಾದ ವಿಷಯ:- ಕುರುಡನಿಗೆ ಕಾಣುವುದಿಲ್ಲ, ಕಣ್ಣಿದ್ದವರ ಮಾತಿನ ಮೇಲೆ ನಂಬಿಕೆ ಇಲ್ಲ. ಹಾಗಾದರೆ ಅವನಿಗೆ ತಿಳಿಸುವುದು ಹೇಗೆ? ನಂಬದಿದ್ದರೆ ಆ ಸಜ್ಜನನ ಮಾತು ಕೇಳದಿದ್ದರೆ ಅವನು ಯಾವುದೋ ಸಿಂಹ, ಹುಲಿಗೆ ಆಹಾರವಾಗಬೇಕಾಗುತ್ತದೆ.

ಇದೇ ರೀತಿ ಸಂತರು ಜ್ಞಾನವೆಂಬ ಕಣ್ಣುಳ್ಳವರಾಗಿರುತ್ತಾರೆ. ನಾವು ಕುರುಡರಾಗಿರುತ್ತೇವೆ. ನಾವು ಸಂತರ ಮಾತನ್ನು ಕೇಳದೆ ನಮ್ಮ ಜೀವನದ ದಾರಿಯನ್ನು ಬದಲಿಸಿಕೊಳ್ಳದೇ ಹೋದರೆ ಮೇಲೆ ಹೇಳಿದಂತೆ ಆಗುತ್ತದೆ.

ನರ್ ಸೇ ಫಿರ್ ಪೀಛೇ ತೂ ಪಶುವಾ ಕೀಜೈ, ಗಧಾ ಬೈಲ್ ಬನಾಈ ।
ಛಪ್ಪನ್ ಭೋಗ್ ಕಹಾಂ ಮನ್ ಬೌರೇ, ಕುರಡೀ ಚರನೇ ಜಾಈ ॥

❖ ಕೆಲವರು ಮುಂದೆ ಏನಾಗುತ್ತೋ ನೋಡೋಣ ಎನ್ನುತ್ತಾರೆ. ಅವರಲ್ಲಿ ವಿನಂತಿಸುವುದೇನೆಂದರೆ, ಕತ್ತೆಯಾದ ಮೇಲೆ ನೀವು ನೋಡೋದೇನು? ನಂತರ ಕುಂಬಾರ ನೋಡುವನು ಅಷ್ಟೇ. ಈ ರೀತಿಯ ಪ್ರವಚನಗಳನ್ನು ಸತ್ಸಂಗದಲ್ಲಿ ಖಂಡಿತ ಹೇಳಲಾಗುತ್ತದೆ.

ಆ ಕುಡುಕನೂ ಸತ್ಸಂಗಕ್ಕೆ ಬಂದನು. ಏಕೆಂದರೆ ಮನೆಗೆ ಬೀಗ ಹಾಕಿತ್ತು, ಸ್ವಲ್ಪ ಸಮಯದ ನಂತರ ನಶೆಯೆಲ್ಲಾ ಇಳಿಯಿತು. ಆಗ ಸತ್ಸಂಗ ಕೇಳಲಾರಂಭಿಸಿದನು. ಆ ದಿನದಿಂದ ಆ ಕುಡುಕ ಎಂದಿಗೂ ಮದ್ಯ ಕುಡಿಯಲಿಲ್ಲ, ಯಾವ ನಶೆ ಕೂಡಾ ಮಾಡಲಿಲ್ಲ ದೀಕ್ಷೆ ಪಡೆದು ಇಡೀ ಕುಟುಂಬಕ್ಕೆ ದೀಕ್ಷೆ ಕೊಡಿಸಿದನು. ಇದಕ್ಕೆ ಮೊದಲು ನಾವು(ಲೇಖಕ ಮತ್ತು ಸತ್ಸಂಗಕ್ಕೆ ಬಂದ ಕೆಲ ಭಕ್ತರು) ಒಂದು ದಿನ ಬೆಳಿಗ್ಗೆ ಊರಿನ ಹೊರಗಡೆ ಸುತ್ತಾಡಲು ಹೋದಾಗ. ದಾರಿಯಲ್ಲಿ ಆ ವ್ಯಕ್ತಿಯ (**Airport** ದವನ) ಮನೆ ಇತ್ತು. ಗಲ್ಲಿಯಲ್ಲಿ ಅವನ ತಾಯಿ ನಿಂತಿದ್ದಳು. ಅವಳು, ಮಹಾರಾಜರೇ

ಚಹಾ ಕುಡಿದು ಹೋಗಿ' ಎಂದಳು. ಊರಿನ ಒಬ್ಬ ಭಕ್ತನೆಂದ, "ಖಂಡಿತವಾಗಿಯೂ ಅವರ ಮನೆಗೆ ಹೋಗೋಣ. ಏಕೆಂದರೆ ಅವರ ಮನೆ ಹಾಳು ಬಿದ್ದಿದೆ. ಇಡೀ ಕುಟುಂಬ ಹಾಳಾಗಿದೆ, ಸಾಧುಸಂತರ ಚರಣ ಸ್ಪರ್ಶದಿಂದ ಅದು ಪವಿತ್ರವಾಗಬಹುದು."ನಾವೆಲ್ಲಾ ಅವನ ಮನೆಗೆ ಹೋದೆವು. ನಾವು ಐದು ಜನರಿದ್ದೆವು. ಅಂಗಳದಲ್ಲಿ ಮಂಚ ಹಾಕಿದ್ದರು. ಮೇ ತಿಂಗಳಿನಲ್ಲಿ. ಮರದ ನೆರಳಿತ್ತು. ಅವನ ತಾಯಿಯು, ಸೊಸೆಯನ್ನು ಕರೆದು, ಚಹಾ ತಯಾರಿಸಲು ಹೇಳಿದಳು. ಅವಳು ಒಲೆ ಹತ್ತಿಸಿ, ಪಾತ್ರೆಯಲ್ಲಿ ನೀರು ಹಾಕಿ ಚಹಾ ಮಾಡಲು ಪ್ರಾರಂಭಿಸಿದಳು. ಅರ್ಧಗಂಟೆಯ ಬಳಿಕ ನಾವೆಲ್ಲಾ ಚಹಾ ಬೇಗ ತರುವಂತೆ ಹೇಳಿದೆವು, ನಾವು ತಿರುಗಾಡಲು ಹೋಗುವುದಿದೆ, ನಂತರ ಬೇರೆ ಊರಿಗೆ ಸತ್ಸಂಗ ಮಾಡಲು ಹೋಗಬೇಕಿದೆ ಆದರೂ ಅ ಮಗಳು ಪಾತ್ರೆಯ ಕೆಳಗೆ ಒಲೆ ಹೊತ್ತಿಸುತ್ತಲೆ ಇದ್ದಳು. ಮತ್ತೆ ಮತ್ತೆ ಹೇಳಿದಾಗ. ಅವಳು ಅಳಲು ಪ್ರಾರಂಭಿಸಿದಳು. ಊರಿನ ಭಕ್ತ ಹೋಗಿ ನೋಡಿದಾಗ ಮನೆಯಲ್ಲಿ ಸಕ್ಕರೆ ಇಲ್ಲ, ಚಹಾಪುಡಿ ಇಲ್ಲ ಮತ್ತು ಹಾಲೂ ಇಲ್ಲ ಎಂದು ತಿಳಿಯಿತು. ಆ ವ್ಯಕ್ತಿಯ ತಾಯಿ ಕೂಡಾ ಅಳಲಾರಂಬಿಸಿದಳು ಹಾಳಾಗಿ ಹೋಗಿದ್ದೇವೆ ಮಹಾರಾಜರೇ! ಉಳಿಸಿ ಕೊಳ್ಳಬಹುದಾದರೆ ಉಳಿಸಿಕೊಳ್ಳಿ. ಆ ವ್ಯಕ್ತಿ ದೀಕ್ಷೆ ಪಡೆದು ಸಮಯಕ್ಕೆ ಡ್ಯೂಟಿಗೆ ಹೋಗಿದ್ದನು. ಕೆಲವು ದಿನಗಳ ನಂತರ ನಾವು ದಿಲ್ಲಿಯಲ್ಲಿ ಪಂಜಾಬ್‌ಖೇಡ್ ಎನ್ನುವ ಹಳ್ಳಿಯಲ್ಲಿ ಸತ್ಸಂಗ ಮಡುತ್ತಿದ್ದೆ. ಆ ವ್ಯಕ್ತಿ ತನ್ನ ತಾಯಿ, ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಅಲ್ಲಿ ಬಂದಿದ್ದನು. ಅವನು ಕಾರಿನಲ್ಲಿ ಕರೆತಂದಿದ್ದನು. ಮೊದಲು ಒಂದು ಹಾಳಾದ ಮೊಟರಸೈಕಲ್ ಇತ್ತು. ಮಕ್ಕಳೆಲ್ಲಾ ಒಳ್ಳೆಯ ಬಟ್ಟೆ ತೊಟ್ಟಿದ್ದರು. ಮಕ್ಕಳು ತಂದೆ ಈಗ ತಾಯಿಯೊಡನೆ ಮನೆಯಲ್ಲಿ ಜಗಳ ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ಬರುವ ಸಂಬಳವೆಲ್ಲಾ ಅಜ್ಜಿಗೆ ನೀಡುತ್ತಾನೆ. ನಾವಂತು ಸ್ವರ್ಗದಲ್ಲಿ ಇರತೊಡಗಿದೆವು. ವೃದ್ಧೆ ಹೇಳಿದಳು 'ಆ ದಿನ ನೀವು ಬಂದಾಗ ನಿಮ್ಮ ದರ್ಶನದಿಂದ ಹಾಳಾಗಿ ಹೋದ ನಾವು ಪುನಃ ಸುಧಾರಿಸಿದೆವು. ಆಗ ನಾನು ಹೇಳಿದೆ ಅಮ್ಮಾ, ನಿನ್ನ ಮಗ ಕೆಟ್ಟವನಲ್ಲ, ಆದರೆ ಒಳ್ಳೆಯ ವಿಚಾರಗಳನ್ನು ಅವನು ಎಂದಿಗೂ ಕೇಳಿರಲಿಲ್ಲ ಅಷ್ಟೇ. ಈ ಮೊದಲೇ ಸತ್ಸಂಗದ ವಿಚಾರ ಕೇಳಿದ್ದಿದ್ದರೆ ಕೆಟ್ಟತನ ಮಾಡುತ್ತಿರಲಿಲ್ಲ. ಇದೆಲ್ಲಾ ಪರಮೇಶ್ವರ ಕಬೀರರ ಕೃಪೆ. ಆ ದಿನ ಇವನು ಸತ್ಸಂಗಕ್ಕೆ ಬಂದಿದ್ದರಿಂದ ಅವನ ಆತ್ಮದ ಮೈಲಿಗೆಯೆಲ್ಲಾ ತೊಳೆದು ಹೋಯಿತು. ನಿಮ್ಮ ಕುಟುಂಬ ನರಕದಿಂದ ಸ್ವರ್ಗಕ್ಕೆ ಹೋಗಿ ವಾಸ ಮಾಡುತ್ತಿದೆ. ಪರಮಾತ್ಮನ ನಿಯಮದಲ್ಲಿರಿ ಎಂದಿಗೂ ಕಷ್ಟ ಬರುವುದಿಲ್ಲ. ಭಕ್ತಿ ಮಾಡುತ್ತಿರಿ. ನಿಮ್ಮ ಅನೇಕ ಪೀಳಿಗೆಯ ಉದ್ಧಾರವಾಗುವುದು. ಹೀಗೆ ಸತ್ಸಂಗದಿಂದ ಮಾನವನ ಉದ್ಧಾರವಾಗಿ ವಿಶ್ವದಲ್ಲಿ ಶಾಂತಿ, ಪರಸ್ಪರ ಪ್ರೇಮ ಹೆಚ್ಚಾಗುತ್ತದೆ. ಸತ್ಸಂಗದ ವಿಚಾರವನ್ನು ಖಂಡಿತವಾಗಿಯೂ ಕೇಳುತ್ತಿರಿ.

## "ತಂದೆ-ತಾಯಿಯ ಸೇವೆ ಮಾಡುವುದು ಮತ್ತು ಅವರನ್ನು ಗೌರವಿಸುವುದು ನಮ್ಮ ಪರಮ ಕರ್ತವ್ಯ"

ಪ್ರತಿಯೊಬ್ಬ ತಂದೆ ತಾಯಿಗೂ ತಮ್ಮ ಮಗು ಯೋಗ್ಯನಾಗಿರಬೇಕೆಂಬ ಅಭಿಲಾಷೆ ಇರುತ್ತದೆ. ಸಮಾಜದಲ್ಲಿ ಕೆಟ್ಟ ಹೆಸರು ಬರಬಾರದು. ಒಳ್ಳೆಯ ಚಾರಿತ್ರ್ಯ ಇರಬೇಕು. ಹೇಳಿದಂತೆ ಕೇಳಬೇಕು ಎಂಬ ಆಸೆ ಇರುತ್ತದೆ. ಮುದಿಕಾಲದಲ್ಲಿ ನಮ್ಮ ಸೇವೆ ಮಾಡಬೇಕು. ನಮ್ಮ ಮಾತು ಕೇಳುವಂಥಾ ಸೊಸೆ ಬರಬೇಕು. ಸಮಾಜದಲ್ಲಿ ನಮಗೆ ಗೌರವ ನೀಡಬೇಕು. ಪ್ರೀತಿಯಿಂದ ನಮ್ಮನ್ನು ಕಾಣಬೇಕು ಎಂಬ ಆಸೆ ಇರುತ್ತದೆ. ತ್ರೇತಾಯುಗ, ಸತ್ಯಯುಗ, ದ್ವಾಪರಯುಗದವರೆಗೆ ಎಲ್ಲರಿಗೂ ಗೌರವವಿತ್ತು, ಎಲ್ಲರೂ ಸುಖದ ಜೀವನ ನಡೆಸುತ್ತಿದ್ದರು. ಕಲಿಯುಗದಲ್ಲಿ ಕೆಲ ಕಾಲದವರೆಗೆ ಸರಿಯಾಗಿತ್ತು, ಆದರೆ ಈಗ ಪರಿಸ್ಥಿತಿ ವಿರುದ್ಧವಾಗಿದೆ. ಇದನ್ನು ಸುಧಾರಿಸುವ ಉದ್ದೇಶ ಲೇಖಕ (ರಾಮಾಪಾಲ್ ದಾಸ್) ರಿಗಿದೆ. ದೇವರ ದಯೆಯಿಂದ ಹಾಗೂ ಜ್ಞಾನದ ಬೆಳಕಿನಿಂದ ಎಲ್ಲವೂ ಸಾಧ್ಯವಾಗುತ್ತದೆ, ಸಾಧ್ಯವಾಗುತ್ತಿದೆ, ಸಾಧ್ಯವಾಗುತ್ತಾ ಹೋಗುತ್ತದೆ ಎಂದು ಭಾವಿಸುತ್ತೇನೆ, ಇದನ್ನು ನನ್ನ ಆತ್ಮ ನಂಬುತ್ತದೆ.

➢ ಮಗುವಿನ ಬಗ್ಗೆ ತಾಯಿಯ ಪ್ರೀತಿ:- ಒಬ್ಬ ಹುಡುಗನಿದ್ದ, ಅವನ ತಂದೆ ತೀರಿಕೊಂಡಿದ್ದರು.

ಆಗ ಆ ಹುಡುಗನಿಗೆ 10–11 ವರ್ಷ ವಯಸ್ಸು. ತಾಯಿಯು ಆ ಏಕೈಕ ಪುತ್ರನನ್ನು ಸಾಕಿ ಬೆಳೆಸಿದಳು. ತಂದೆ ಮತ್ತು ತಾಯಿಯ ಪ್ರೀತಿಯನ್ನು ತಾಯಿಯೊಬ್ಬಳೇ ನೀಡಿದಳು. ತಂದೆ ಇಲ್ಲ ಎನ್ನುವ ಕೊರತೆ ಮಗನಿಗೆ ಉಂಟಾಗದಂತೆ ನೋಡಿಕೊಂಡಳು, ಆದರೆ ಹುಡುಗನು ದೊಡ್ಡವನಾದ ಮೇಲೆ ಮದ್ಯ ವ್ಯಸನಿಯಾದನು ಹಾಗೂ ವೇಶ್ಯೆಯರ ಸಂಗ ಮಾಡಲಾರಂಭಿಸಿದನು. ತಾಯಿಯಿಂದ ದಿನವೂ ಹಣ ಪಡೆದು ಹಾಳು ಮಾಡುತ್ತಿದ್ದನು. ಒಂದು ದಿನ ತಾಯಿಯ ಬಳಿ ಹಣವಿರಲಿಲ್ಲ. ಕುಡಿದ ಅಮಲಿನಲ್ಲಿ ತಾಯಿಗೆ ಹೊಡೆದು, ವೇಶ್ಯೆಯ ಮನೆಗೆ ಹೋದನು. ಆ ದಿನ ಹಣವಿರದ ಕಾರಣ ವೇಶ್ಯೆಯು ಅವನ ತಾಯಿಯ ಹೃದಯವನ್ನು ತರಲು ಹೇಳಿದಳು. ಮನೆಗೆ ಬಂದಾಗ ತಾಯಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಮಗನು ಆ ತಾಯಿಯನ್ನು ಕೊಂದು, ಅವಳ ಹೃದಯವನ್ನು ಕಿತ್ತು ಹೊರ ನಡೆದನು. ಕುಡಿದ ಅಮಲಿನಲ್ಲಿ ಎಡವಿ ಬಿದ್ದುಬಿಟ್ಟನು. ಆಗ ತಾಯಿಯ ಹೃದಯದಿಂದ ಧ್ವನಿ ಕೇಳಿಸಿತು. "ಮಗನೇ, ನಿನಗೆ ಪೆಟ್ಟಾಗಲಿಲ್ಲ ತಾನೇ?"

ಆದರೂ ಲೆಕ್ಕ ಮಾಡದೆ ಆ ಮಗನು ತಾಯಿಯ ಹೃದಯವನ್ನು ಹಿಡಿದುಕೊಂಡು ವೇಶ್ಯೆಯ ಮನೆಗೆ ಹೋದನು. ಆಗ ಆ ವೇಶ್ಯೆಯು "ನೀನು ತಾಯಿಯ ಹಿತೈಷಿಯೇ ಆಗಲಿಲ್ಲವೆಂದ ಮೇಲೆ ನನಗೆ ಹೇಗೆ ಹಿತೈಷಿಯಾಗುವೆ? ಇನ್ನಾರೋ ಹೇಳಿದರೆ ನೀನು ನನ್ನನ್ನು ಸಾಯಿಸುವೆ. ನಾನು ನಿನ್ನಿಂದ ಬಿಡಿಸಿಕೊಳ್ಳಬೇಕಿತ್ತು ನೀನು ಬಡವನಾಗಿರುವೆ. ನಿನ್ನ ಬಳಿ ನನಗೇನು ಕೆಲಸ? ನಿನ್ನ ತಾಯಿ ನಿನ್ನ ಯಾವ ಕೋರಿಕೆಯನ್ನೂ ತಿರಸ್ಕರಿಸಿರಲಿಲ್ಲ. ಹಾಗಾಗಿ ನೀನು ಅವಳ ಹೃದಯವನ್ನು ತರಲಾರೆ ಎಂಬ ನಂಬಿಕೆಯಿಂದ ನಿನಗೆ ನಾನು ಆ ಷರತ್ತನ್ನು ವಿಧಿಸಿದ್ದೆ, ಆದರೆ ನೀನೊಬ್ಬ ರಾಕ್ಷಸ. ಈಗಲೇ ಇಲ್ಲಿಂದ ತೊಲಗು" ಎನ್ನುತ್ತಾ ಆ ವೇಶ್ಯೆಯು ಅವನನ್ನು ತನ್ನ ಮನೆಯಿಂದ ಒದ್ದು ಹೊರಹಾಕಿದಳು. ಆ ರಾಕ್ಷಸ ಮನೆಗೆ ಬಂದನು, ತಾಯಿ ಸತ್ತು ಬಿದ್ದಿದ್ದಳು ಅವಳ ಹೆಣದ ಮುಂದೆ ಗೋಳಾಡತೊಡಗಿದನು. "ಅಮ್ಮಾ ದೇವರ ಆಸ್ಥಾನದಲ್ಲಿಯೂ ನನ್ನನ್ನು ರಕ್ಷಿಸು" ಎಂದು ಗೋಳಾಡಿದನು. ಆಗ ತಾಯಿಯ ಧ್ವನಿ ಕೇಳಿಸಿತು, "ಮಗನೇ ನಿನಗೇನು ಆಗುವುದಿಲ್ಲ, ಬರೀ ನೀನು ಸುಖವಾಗಿರುವುದನ್ನು ನೋಡಲು ನಾನು ಇಷ್ಟ ಪಡುತ್ತೇನೆ." ಅಷ್ಟರಲ್ಲಿ ನಗರದ ಜನರು ಬಂದರು. ಪೋಲಿಸ್ ಠಾಣೆಯಲ್ಲಿ ಸೂಚಿಸಿದರು. ರಾಜನು ಆ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸಿದನು. ಗಲ್ಲಿಗೇರಿಸುವ ಮುನ್ನ ರಾಜನು ಅವನ ಅಂತಿಮ ಇಚ್ಛೆ ಏನೆಂದು ಕೇಳಿದನು. ಆಗ ಆ ಯುವಕನು "ನಗರವಾಸಿಗಳನ್ನೆಲ್ಲಾ ಕರೆಸಿ, ಅವರ ಮುಂದೆ ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ" ಎಂದನು. ಅದರಂತೆ ಎಲ್ಲರ ಮುಂದೆ ತಪ್ಪೊಪ್ಪಿಕೊಂಡನು, ಅವನೆಂದನು, "ನನ್ನ ತಾಯಿ ಆತ್ಮ ಕೊನೆಯವರೆಗೂ ನನ್ನ ಸುಖವನ್ನೇ ಬಯಸಿದಳು, ಆದರೆ ಕುಡಿದ ಅಮಲಿನಲ್ಲಿ ನಾನು ರಾಕ್ಷಸನಾಗಿದ್ದೆ, ನಾನು ಪರಸ್ತ್ರೀ ಸಹವಾಸ ಮಾಡಿ ಸಮಾಜವನ್ನು ಹಾಳುಮಾಡಿದೆ. ನೀವೆಲ್ಲಾ ನನ್ನಿಂದ ಸಲಹೆ ಪಡೆದುಕೊಳ್ಳಿ. ನಾನು ನನ್ನ ತಾಯಿಗೆ ಕಷ್ಟ ಕೊಟ್ಟು ಘೋರವಾದ ಪಾಪ ಮಾಡಿದೆ. ಹೀಗೆ ಯಾರು ಮಾಡದಿರಿ. ತಾಯಿಯಂಥಾ ಸಹೃದಯಿ ಪ್ರಪಂಚದಲ್ಲಿ ಹೆಂಡತಿಯೂ ಇರುವುದಿಲ್ಲ. ಅವಳು ಎಷ್ಟೇ ಒಳ್ಳೆಯವಳಾಗಿದ್ದರೂ ತಾಯಿಯಷ್ಟು ಸಹೃದಯತೆ ಇರುವುದಿಲ್ಲ. ತಾಯಿ ತನ್ನ ಮಕ್ಕಳನ್ನು ಇಷ್ಟು ಪ್ರೀತಿಸುತ್ತಾಳೆ ಅಂದರೆ ಚಳಿಗಾಲದಲ್ಲಿ ಚಿಕ್ಕ ಮಕ್ಕಳು ಮೂತ್ರ ವಿಸರ್ಜಿಸಿದರೆ, ಆ ಬಟ್ಟೆಗಳ ಮೇಲೆಯೇ ಯಾವ ಅಸಹ್ಯವೂ ಇಲ್ಲದೆ ಆ ಒದ್ದೆ ಬಟ್ಟೆಯ ಮೇಲೆ ಮಲಗುತ್ತಾಳೆ, ತನ್ನ ಮಗುವನ್ನು ಒಣಗಿದ ಶುಭ್ರ ವಸ್ತ್ರದ ಮೇಲೆ ಮಲಗಿಸುತ್ತಾಳೆ. ಮಗು ಅಳುತ್ತಿದ್ದರೆ ಊಟದ ಮಧ್ಯದಿಂದ ಓಡಿ ಬಂದು, ಹಾಲು ಕುಡಿಸಿ ಆ ಮಗುವನ್ನು ಸುಮ್ಮನಾಗಿಸುತ್ತಾಳೆ.

## "ತಂದೆಯು ಮಕ್ಕಳ ಪ್ರತಿಯೊಂದು ತಪ್ಪನ್ನು ಮನ್ನಿಸುತ್ತಾನೆ"

**ತಂದೆಯು ತನ್ನ ಮಕ್ಕಳ ಎಲ್ಲಾ ಅಪರಾಧಗಳನ್ನು ಕ್ಷಮಿಸುತ್ತಾನೆ ಎಂದು ಪರಮಾತ್ಮ ಕಬೀರರು ಹೇಳಿದ್ದಾರೆ.**

ಅವಗುಣ್ ಮೇರೇ ಬಾಪ್ ಜೀ, ಬಕ್ಶೋ ಗರೀಬ್ ನವಾಜ್ ।
ಜೋ ಮೈಂ ಪೂತ್–ಕಪೂತ್ ಹೂಂ, ತೋ ಭೀ ಪಿತಾ ಕೋ ಲಾಜ್ ॥

ಭಾವಾರ್ಥ:– ಪರಮಾತ್ಮನೇ ಎಲ್ಲಾ ಜೀವಾತ್ಮಗಳ ತಂದೆ. ತನ್ನ ಮಕ್ಕಳು ಅಜ್ಞಾನದಿಂದ ತಪ್ಪನ್ನು ಮಾಡಿದಾಗ ಹಾಗೂ ನಂತರದಲ್ಲಿ ಎಂದಿಗೂ ಆ ತಪ್ಪನ್ನು ಮಾಡುವುದಿಲ್ಲವೆಂದು ತಂದೆಯ ಬಳಿ ಬಂದು ಕ್ಷಮೆ ಕೇಳಿದಾಗ ತಂದೆಯು ತಕ್ಷಣವೇ ಕ್ಷಮಿಸಿಬಿಡುತ್ತಾನೆ. ಆದ್ದರಿಂದ ಭಕ್ತನು ಪರಮಾತ್ಮನಲ್ಲಿ ವಿನಯವಾಗಿ ಕೇಳುತ್ತಾನೆ, "ಹೇ ದೀನ ದಯಾಳು! ನೀವಂತು ನಮ್ಮೆಲ್ಲರ ತಂದೆ? ನೀವು ನನ್ನ ತಂದೆಯಾದ ಕಾರಣ ನನ್ನ ಅವಗುಣ (ಅಪರಾಧ) ಗಳನ್ನು ಕ್ಷಮಿಸು. ನಾನು ಕೆಟ್ಟ ಮಗನಾದರೂ, ಕೆಲಸಕ್ಕೆ ಬಾರದಿರುವ ಮಗನಾದರೂ, ನೀವು ತಂದೆಯ ಕರ್ತವ್ಯವನ್ನು ಪಾಲಿಸಿ ನನ್ನನ್ನು ಕ್ಷಮಿಸಿ".

➢ ಒಬ್ಬ ರಾಮಭಕ್ತನ ಪತ್ನಿ ತೀರಿಕೊಂಡಳು. ಆಗ ಅವನ ಮಗನಿಗೆ ಮೂರು ವರ್ಷ ವಯಸ್ಸು ಆ ವ್ಯಕ್ತಿಯ ಸಂಬಂಧಿಕರಲ್ಲಿ ಒಂದು ಘಟನೆ ನಡೆಯಿತು. ಕಥೆ ಈ ರೀತಿ ಇದೆ.

ಆ ರಾಮಭಕ್ತನಿಗೆ ಒಬ್ಬ ಸೋದರಮಾವನಿದ್ದನು. ಅವನು ರಾಮಭಕ್ತನ ತಾಯಿಗಿಂತ 10 ವರ್ಷ ದೊಡ್ಡವನಿದ್ದನು. ಆ ಮಾವನಿಗೆ ಇಬ್ಬರು ಪುತ್ರರಿದ್ದರು. ರಾಮಭಕ್ತನ ಅತ್ತೆ ತೀರಿಕೊಂಡಳು. ಮಾವ ಎರಡನೇ ಮದುವೆ ಮಾಡಿಕೊಂಡನು. ಎರಡನೇ ಹೆಂಡತಿಗೆ ಒಬ್ಬ ಮಗ ಹುಟ್ಟಿದನು. ಎರಡನೆ ಹೆಂಡತಿ ಸವತಿಯ ಮಕ್ಕಳನ್ನು ನೋಡಿದರೆ ಉರಿದು ಬೀಳುತ್ತಿದ್ದಳು. 15 ಎಕರೆ ಜಮೀನನ್ನು ಹಂಚಲು ಇಷ್ಟಪಡದೆ, ಆ ಮಕ್ಕಳಿಗೆ ಸ್ವಲ್ಪ ಸ್ವಲ್ಪವೇ ಗಾಜು ಪುಡಿಮಾಡಿ ಹಾಲಿನಲ್ಲಿ, ಊಟದಲ್ಲಿ ಬೆರೆಸಿ ಕೊಡಲಾರಂಭಿಸಿದಳು. ಆ ಮಕ್ಕಳಿಬ್ಬರೂ ನಿಧಾನವಾಗಿ ರೋಗಗ್ರಸ್ಥರಾಗಿ ಕೊನೆಗೆ ಸತ್ತು ಹೋದರು. ಡಾಕ್ಟರ್ ಬಂದು ಗಾಜು ತಿಂದಿರುವ. ಆ ಕಾರಣ ಇವರ ಮೃತ್ಯುವಾಗಿದೆ ಎಂದು ಹೇಳಿದರು. ಒಂದು ದಿನ ಆ ಎರಡನೇ ಹೆಂಡತಿ ಅವಳ ನೆರೆಮನೆಯವಳಿಗೆ ನಾನು ಹೀಗಿಗೆ ಮಾಡಿದೆ ನನ್ನ ಮಗನಿಗೆ 15 ಎಕರೆ ಜಮೀನು ಸಿಕ್ಕಿತು ಎಂಬ ಈ ಗುಟ್ಟಿನ ವಿಷಯ ಹೇಳಿಬಿಟ್ಟಳು. ಆ ನೆರೆಮನೆಯವಳು ನನ್ನ ಮಾವನಿಗೆ ಈ ವಿಷಯವನ್ನು ಹೇಳಿದಳು. ಮಾವನು ಹೆಂಡತಿಯನ್ನು ಅತಿಯಾಗಿ ಪ್ರೀತಿಸುತ್ತಿದ್ದನು. ಅವಳ ಮೇಲೆ ಬಹಳ ವಿಶ್ವಾಸ ಮಾಡುತ್ತಿದ್ದನು. ಹಾಗಾಗಿ ನಂಬಿಕೆ ಬರಲಿಲ್ಲ. ಆದರೆ ಆ ಎರಡನೇ ಹೆಂಡತಿಯು 1 ದಿನ ತನ್ನ ಅಣ್ಣನ ಬಳಿ ಈ ವಿಷಯವನ್ನು ಹೇಳುತ್ತಿದ್ದಳು ನಿನ್ನ ಸೋದರಳಿಯನಿಗೆ 15 ಎಕರೆ ಜಮೀನು ಸಿಕ್ಕಿತು. ಈ ಮಾತನ್ನು ನನ್ನ ಮಾವ ಕಿಟಕಿಯ ಬಳಿ ನಿಂತು ಕೇಳಿಸಿಕೊಂಡು ಬಿಟ್ಟನು, ಮಾವನ ಹೆಂಡತಿಯ ಅಣ್ಣ ಹೇಳಿದ ತಂಗಿ, ನೀನು ಬಹಳ ತಪ್ಪು ಮಾಡಿದೆ. ಈ ಪಾಪವನ್ನು ಎಲ್ಲಿ ಕಳೆಯುವೆ. ಇಂದಿನ ಬಳಿಕ ನಾನು ನಿನ್ನ ಮುಖ ನೋಡಲೂ ಬರುವುದಿಲ್ಲ. ಮಾವನಿಗೆ ಬಹಳ ಕೋಪ ಬಂತು. ಅವನ ಮನಸ್ಸು ಚೂರು ಚೂರಾಯಿತು, ಆ ದಿನವೇ ಮನೆ ಬಿಟ್ಟು ತನ್ನ ತಂಗಿಯ ಮನೆಗೆ ಅಂದರೆ ನಮ್ಮ (ರಾಮಭಕ್ತನ) ಮನೆಗೆ ಬಂದು ಜೀವನ ಕಳೆದನು. ಅಲ್ಲೇ ವಾಸಿಸತೊಡಗಿದನು. ಕೆಲ ವರ್ಷಗಳ ನಂತರ ಎರಡನೇ ಹೆಂಡತಿಯ ಮಗನೂ ತೀರಿಕೊಂಡನು. ಆ ಎರಡನೇ ಹೆಂಡತಿ ಯಾರ ಜೊತೆಯೋ ಓಡಿ ಹೋದಳು. ನಂತರ ಆ ವ್ಯಕ್ತಿ ಅವಳ ಒಡವೆಯನ್ನೆಲ್ಲಾ ಕಿತ್ತುಕೊಂಡು, ಅವಳನ್ನು ಹೊಡೆದು ಬಾವಿಗೆ ತಳ್ಳಿದನೆಂದು ತಿಳಿಯಿತು. ಆ ವ್ಯಕ್ತಿಯೂ ಪೋಲಿಸರಿಗೆ ಸಿಕ್ಕಿ ಬಿದ್ದು ಗಲ್ಲು ಶಿಕ್ಷೆ ಅನುಭವಿಸಿದನು. ಈ ಸರ್ವನಾಶ, ಮಹಾಭಾರತವನ್ನು ತಿಳಿದ ರಾಮಭಕ್ತನು ತನ್ನ ಹೆಂಡತಿಯ ಮರಣಾನಂತರ ಎರಡನೇ ಮದುವೆ ಮಾಡಿಕೊಳ್ಳಲಿಲ್ಲ. ಮಕ್ಕಳನ್ನು ತನ್ನ ಜೊತೆಯಲ್ಲೇ ಇಟ್ಟುಕೊಂಡು ಸಾಕಿದನು, ಹೊಲ ಉಳುತ್ತಿದ್ದನು. ಊಳುವಾಗಲೂ ಮಗನನ್ನು ಹೆಗಲ ಮೇಲೆ ಇಟ್ಟುಕೊಳ್ಳುತ್ತಿದ್ದನು. ದಣಿವಾದಾಗ ಮರದ ಕೆಳಗೆ ಮಲಗಿಸಿ ಬಿಡುತ್ತಿದ್ದನು. ತಾನೇ ಅಡಿಗೆ ಮಾಡುತ್ತಿದ್ದನು, ಮಗನಿಗೆ ಸ್ನಾನ ಮಾಡಿಸುತ್ತಿದ್ದನು, ಬಟ್ಟೆ ಒಗೆಯುತ್ತಿದ್ದನು, ಊಟ ಮಾಡಿಸುತ್ತಿದ್ದನು. ಹೀಗೆ ಮಗ ಬೆಳೆದು ದೊಡ್ಡವನಾದನು. ಅವನಿಗೆ ಮದುವೆ ಮಾಡಿದನು. ಮಗನೂ ಇವನ ಕೆಲಸದಲ್ಲಿ ಕೈ ಜೋಡಿಸುತ್ತಿದ್ದನು, ಆದರೆ ಕಠಿಣ ಕೆಲಸ ಸ್ವತಃ ಮಾಡುತ್ತಿದ್ದನು. ಕಾಲ ಕಳೆದಂತೆಲ್ಲಾ ಮುದಿತನ ಆವರಿಸಿತು. ಆಗ ಕೆಲಸ ಮಾಡಲು ಕೈಯಲ್ಲಿ ಆಗುತ್ತಿರಲಿಲ್ಲ. ಆಗ ಸೊಸೆಗೆ ಇವನು ಭಾರವಾಗತೊಡಗಿದನು. ಆ ಕಾರಣ ಅವಳು ಮಾವನಿಗೆ ಒಣ, ತಂಗಳು ರೊಟ್ಟಿ ಕೊಡತೊಡಗಿದಳು. ಹೊಟ್ಟೆ ತುಂಬಾ ಊಟ ಕೊಡುತ್ತಿರಲಿಲ್ಲ. ಎಲ್ಲವೂ ಸರಿಯಾಗಿದೆಯೇ ಎಂದು ಮಗ ಅಪ್ಪನನ್ನು ಕೇಳಿದಾಗ ಅಪ್ಪನು, 'ಯಾವ ಚಿಂತೆಯೂ ಇಲ್ಲ

ಮಗನೇ, ಬಹಳ ಒಳ್ಳೆಯ ಸೊಸೆ ಸಿಕ್ಕಿದ್ದಾಳೆ. ನನ್ನನ್ನು ಹೆಚ್ಚು ಸಂಭಾಳಿಸುತ್ತಾಳೆ' ಎನ್ನುತ್ತಿದ್ದನು. ಈ ಮಾತನ್ನು ಸೊಸೆಯೂ ಕೇಳಿಸಿಕೊಳ್ಳುತ್ತಿದ್ದಳು, ಗಂಡನಿಗೆ ಗೊತ್ತಾಗುತ್ತಿಲ್ಲವೆಂದು ತಿಳಿದು ಮಾವನನ್ನು ಇನ್ನೂ ಹೆಚ್ಚಾಗಿ ತೊಂದರೆ ಕೊಡಲಾರಂಭಿಸಿದಳು.

ಒಂದು ದಿನ ತಂದೆಗೆ ಸರಿಯಾಗಿ ಊಟ ಸಿಗದಿರುವುದನ್ನು ನೋಡಿ ಹೆಂಡತಿಯ ಬಳಿ ವಿಚಾರಿಸಿದನು. ಅವಳು ಪತಿಗೆ ಜೋರು ಮಾಡಿದಳು. "ನಿಮಗೆ ಮನೆಯ ಚಿಂತೆ ಇಲ್ಲ. ನನ್ನಿಂದಲೇ ಮನೆ ನಡೆಯುತ್ತಿದೆ. ಮನೆ ಹೇಗೆ ನಡೆಸಬೇಕು, ಎಷ್ಟು ಖರ್ಚು ಮಾಡಬೇಕೆಂದು ನನಗೆ ಗೊತ್ತಿದೆ" ಎಂದು ಗದರಿದಳು. 1 ದಿನ ಆ ವೃದ್ಧನು ತಲೆತಿರುಗಿ ಬಿದ್ದು ಬಿಟ್ಟನು. ಕಾಲು ಮುರಿದು ಹೋಯಿತು. ವೈದ್ಯರು ಬಂದು ಪರೀಕ್ಷಿಸಿ, "ಆಹಾರ ಸರಿಯಾಗಿ ಸಿಗದ ಕಾರಣ ಶರೀರ ಕೃಷವಾಗಿದೆ. ಎರಡು ಹೊತ್ತು ಅರ್ಧರ್ಧ ಲೀಟರ್ ಹಾಲನ್ನು ಕುಡಿಸಿ, ಒಳ್ಳೆ ಊಟ ಕೊಡಿ," ಎಂದರು. ವೈದ್ಯರು ಹೊರಟು ಹೋದ ಮೇಲೆ ಸೊಸೆಯು, ಹೀಗೆ ಮಾಡಿದರೆ ಮನೆ ದಿವಾಳಿಯಾಗುವುದು' ಗಂಡ ಅಂದರೆ ಮಗನಿಗೂ ಇದೇ ಸರಿ ಏನಿಸಿತು. ವೃದ್ಧನ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ, ವೃದ್ಧನ ಅತ್ತೆ ಮನೆಯವರು ಸುದ್ಧಿ ತಿಳಿದು ಬಂದರು ಹಾಗೂ ಮಗ–ಸೊಸೆ ಚೆನ್ನಾಗಿ ಸೇವೆ ಮಾಡುತ್ತಿದ್ದಾರಲ್ಲವೇ ಎಂದು ವಿಚಾರಿಸಿದಾಗ ಆ ವೃದ್ಧ ರಾಮ್‌ಭಕ್ತನು, "ಕೇಳಲೇ ಬೇಡಿ, ಇಂಥಾ ಮಗ ಸೊಸೆ ಭಗವಂತ ಎಲ್ಲರಿಗೂ ಕೊಡಲಿ, ನನಗೆ ಯಾವ ಕಷ್ಟವನ್ನೂ ಕೊಡುವುದಿಲ್ಲ. ಏನೋ ನನ್ನ ಕರ್ಮ, ಹೀಗೆ ಪೆಟ್ಟಾಯಿತು" ಎಂದನು, ಅದೇ ಊರಿನಲ್ಲಿ ಇಬ್ಬರು ಸಹೋದರಿಯರ ಮದುವೆಯಾಗಿತ್ತು. ಒಬ್ಬಳನ್ನು ರಾಮ್‌ಭಕ್ತನ ಜೊತೆ ಮತ್ತೊಬ್ಬಳನ್ನು ಅವರ ನೆರೆಮನೆಯಲ್ಲಿ ಕೊಟ್ಟು ವಿವಾಹ ಮಾಡಿದ್ದರು. ರಾಮ್‌ಭಕ್ತನ ಅತ್ತೆ ಮಾವ ತನ್ನ ಎರಡನೇ ಮಗಳ ಮನೆಗೆ ಹೋದಾಗ ರಾಮಭಕ್ತನನ್ನು ಅವನ ಮಗ ಸೊಸೆ ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂಬ ವಿಷಯ ತಿಳಿಯಿತು. ಅವರಿಗೆ ವಿಶ್ವಾಸವಾಗಲಿಲ್ಲ ಏಕೆಂದರೆ ರಾಮ್‌ಭಕ್ತನ ಬಾಯಿಂದ ಕೇಳಿದ್ದರು ಯಾವ ತೊಂದರೆ ಇಲ್ಲವೆಂದು. ಅವರು ಸ್ವಲ್ಪ ಸಮಯದ ಬಳಿಕ ಪುನಃ ರಾಮ್‌ಭಕ್ತನ ಮನೆಗೆ ಹೋದಾಗ ರಾಮಭಕ್ತನು ಹಳಸಿದ ರೊಟ್ಟಿಯನ್ನು ನೀರಿನಲ್ಲಿ ನೆನೆಸಿ, ನೆನೆಸಿ ತಿನ್ನುತ್ತಿದ್ದನು. ಅದನ್ನು ನೋಡಿ ಅವರಿಗೆ ಅಳು ಬಂದಿತು. ಮಗನನ್ನು ಕರೆದು, "ನಿನಗೆ ಸ್ವಲ್ಪವೂ ನಾಚಿಕೆಯಾಗುವುದಿಲ್ಲವೇ? ನಿನ್ನನ್ನು ಹೇಗೆ ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದಾರೆ ಎಂದು ನಿನಗೆ ಗೊತ್ತಾ?" ಎಂದು ಬೈಯ್ದರು. ಸೊಸೆಯೂ ಹೊರಗೆ ಬಂದಳು. ಇಬ್ಬರೂ ಹೇಳಿದರು ನಾವಂತು ಹೀಗೆಯೇ ಸೇವೆ ಮಾಡುವೆವು. ರಾಮ್‌ಭಕ್ತನು ಹೇಳಿದ "ನೀವು ಇಲ್ಲಿಂದ ಹೋಗಿ, ಮನೆಯಲ್ಲಿ ಜಗಳ ಮಾಡಿಸಬೇಡಿ ಎಂದನು.

ರಾಮ್‌ಭಕ್ತನ ಅತ್ತೆಯ ಮಗನಾದ ರಾಮ್‌ನಿವಾಸ ಸತ್ಸಂಗಿಯಾಗಿದ್ದನು. ಅವನು ಯಾವಾಗಲೂ ರಾಮ್‌ಭಕ್ತನಿಗೆ ಹೇಳುತ್ತಿದ್ದ ನೀವು ಸ್ವಲ್ಪ ಸಮಯವಾದರೂ ಭಗವಂತನ ಭಕ್ತಿಮಾಡುತ್ತಿರಿ, ನನ್ನ ಜೊತೆ ಸಂತರ ಸತ್ಸಂಗವನ್ನು ಕೇಳಲು ಬನ್ನಿ, ಆಗ ರಾಮಭಕ್ತನು. ನಾನು ನನ್ನ ಮಗನನ್ನು ಪೂಜಿಸುತ್ತೇನೆ. ಅವನು ಸುಖವಾಗಿರಲಿ ಎನ್ನುವುದೇ ನನ್ನ ಜೀವನದ ಆಶಯ, ಅತ್ತೆಯ ಮಗನು ಹೇಳಿದ ಮಗನ ಪೂಜೆ ಮುಗಿದಿದ್ದರೆ ಈಗಲಾದರೂ ಸ್ವಲ್ಪ ಭಕ್ತಿ ಮಾಡು. ಆದರೂ ನನ್ನ ಮಗ–ಸೊಸೆಯನ್ನು ನೋಡಿಕೊಂಡು ಬದುಕು ಸಾಗಿಸುತ್ತಿದ್ದೇನೆ"ಎಂದನು. ಬಹಳ ಒತ್ತಾಯಿಸುವುದರಿಂದ ರಾಮ್‌ನಿವಾಸನೊಡನೆ ಸತ್ಸಂಗಕ್ಕೆ ಹೋದನು. ನಂತರ ರಾಮ್‌ನಿವಾಸ ತನ್ನ ಮನೆಗೆ ಕರೆದುಕೊಂಡು ಹೋಗಿ ಅವನ ಸೇವೆ ಮಾಡಿದನು. ಒಳ್ಳೆಯ ಊಟ ತಿನ್ನಿಸಿದನು. ಕೆಲವು ದಿನಗಳವರೆಗೆ ತನ್ನ ಹತ್ತಿರ ಇಟ್ಟುಕೊಂಡನು.

ರಾಮ್‌ಭಕ್ತನು ಭಕ್ತಿಯ ಮೇಲೆ ಪೂರ್ತಿ ದೃಢವಾದನು. ಮನೆಗೆ ಹೋಗಿ ಹೀಗೆಂದನು, "ಮಕ್ಕಳೇ, ನಾನು ಇದುವರೆಗೂ ನಿಮ್ಮ ಹತ್ತಿರ ಏನನ್ನೂ ಕೇಳಿಲ್ಲ. ಈ ದಿನ ಬಂದು ಬಿಕ್ಷೆ ಬೇಡುತ್ತಿದ್ದೇನೆ. ನೀವು ನನ್ನ ಜೊತೆ ಸತ್ಸಂಗಕ್ಕೆ ಒಮ್ಮೆ ಬನ್ನಿ", ಆಗ ಅವರು ಹಿಂದಿನಿಂದ ಮಕ್ಕಳನ್ನು ಹಾಗೂ ದನಕರುಗಳನ್ನು ಯಾರು ನೋಡಿಕೊಳ್ಳುವರು?" ಎಂದರು. ಆಗ ರಾಮಭಕ್ತನು ಮಗನು

ಮನೆಯಲ್ಲಿ ಉಳಿದುಕೊಂಡು ನೋಡುವನು, ಸೊಸೆ ಮತ್ತು ಮೊಮ್ಮಕ್ಕಳು ನನ್ನೊಡನೆ ನಡೆಯಿರಿ. ಹೀಗೆಯೆ ಮಾಡಲಾಯ್ತು. ಅವನ ಸೊಸೆ ಸತ್ಸಂಗದ ವಚನಗಳನ್ನು ಕೇಳಿದಳು. ಅಲ್ಲಿಗೆ ಬರುವ ಎಲ್ಲಾ ಭಕ್ತರ ಸೇವೆಯನ್ನು ಹಳೆಯ ಭಕ್ತರು ಮನೆಯಲ್ಲಿ ಬರುವ ವಿಶೇಷ ಅತಿಥಿಗಳಿಗೆ ಮಾಡುವಂತೆ ಮಾಡುತ್ತಿದ್ದರು. ವೃದ್ಧರ, ರೋಗಿಗಳ, ವಿಕಲಚೇತನರ ವಿಶೇಷ ಸೇವೆ ಮಾಡುತ್ತಿದ್ದರು. ಬೇರೆಯವರ ಮೇಲೆ ದಯೆ ತೋರಿದರೆ ಪರಮಾತ್ಮನು ಒಲಿಯುವನೆಂದು ಸತ್ಸಂಗದಲ್ಲಿ ಹೇಳಲಾಗುತ್ತಿತ್ತು. ದುಃಖಿಗಳಿಗೆ, ಅಸಹಾಯಕರಿಗೆ ಸಹಾಯ ಮಾಡುವುದು ಮಾನವನ ಪರಮ ಕರ್ತವ್ಯ.

ದಯಾ–ಧರ್ಮ್ ಕಾ ಮೂಲ್ ಹೈ, ಪಾಪ್ ಮೂಲ್ ಅಭಿಮಾನ್ ।
ಕಹ್ ಕಬೀರ್ ದಯಾವಾನ್ ಕೇ ಪಾಸ್ ರಹೇ ಭಗವಾನ್ ॥

ಶಬ್ದಾರ್ಥ:– ಯಾರ ಹೃದಯದಲ್ಲಿ ದಯೆ ಇದೆಯೋ, ಅವನು ಧರ್ಮವನ್ನು ಮಾಡುತ್ತಾನೆ. ದಯೆಯೇ ಧರ್ಮದ ಮೂಲ. ಯಾರಲ್ಲಿ ಅಹಂಕಾರ ಇರುವುದೋ ಅವನು ಪಾಪ ಮಾಡುತ್ತಾನೆ. ಅಹಂಕಾರವು ಪಾಪದ ಮೂಲ. ದಯೆ ಇರುವವನ ಜೊತೆ ಪರಮಾತ್ಮನು ಇರುತ್ತಾನೆ, ಅಹಂಕಾರಿಯ ಬಳಿ ಸುಳಿಯುವುದೂ ಇಲ್ಲ ಎಂದು ಕಬೀರ್ ಪರಮಾತ್ಮ ಹೇಳಿದ್ದಾರೆ.

ರಾಮಭಕ್ತನ ಸೊಸೆ ಸತ್ಸಂಗದಲ್ಲಿ ಕುಳಿತಿದ್ದಳು. ಒಬ್ಬಳು ಭಕ್ತೆಯು 'ಅವಳಿಗೆ ನೀನು ಸೇವೆ ಮಾಡು' ಎಂದು ಹೇಳಿದಳು.

ಸತ್ಸಂಗ ವಚನ:– ಯಾರು ಸೇವೆ, ಭಕ್ತಿ ಮಾಡುವರೋ, ಅವರಿಗೆ ಫಲದೊರಕುವುದು. ಎಂದು ಗುರುವೇ ಹೇಳುತ್ತಾರೆ. ನಾನು ಊಟಮಾಡಿದರೆ ನನ್ನ ಹೊಟ್ಟೆ ತುಂಬುತ್ತದೆ. ನೀವು ತಿಂದರೆ ನಿಮ್ಮ ಹೊಟ್ಟೆ ತುಂಬುತ್ತದೆ. ಎಲ್ಲರೂ ದೇವರ ಮಕ್ಕಳೇ. ನೀವು ಧನಿಕನ ಮಕ್ಕಳೆಂದು ತಿಳಿದು ಸೇವೆ ಮಾಡಿ. ಒಬ್ಬ ಧನಿಕನಿಗೆ. 8–9 ವರ್ಷದ ಮಗಳಿದ್ದಳು. ಅವಳನ್ನು ನೋಡಿಕೊಳ್ಳಲು ಒಬ್ಬಳು ಕೆಲಸದವಳಿದ್ದಳು. ಅವಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಬಿಸಿಲಿದ್ದರೆ. ಅವಳ ತಲೆಯ ಮೇಲೆ ಛತ್ರಿ ಇಟ್ಟು ತಾನು ಬಿಸಿಲಿನಲ್ಲಿ ನಡೆದು ಹೋಗುತ್ತಿದ್ದಳು. ಇದನ್ನು ನೋಡಿದ ಧನಿಕನು ಸಂತೋಷಗೊಂಡು ಅವಳಿಗೆ ಹೆಚ್ಚು ಸಂಬಳ ನೀಡುತ್ತಿದ್ದನು. ನೀವೇ ಇದರ ಬಗ್ಗೆ ಯೋಚಿಸಿ, ನೀವು ಬೇರೆಯವರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಅತ್ತೆ ಮಾವನ ಸೇವೆ, ದೊಡ್ಡವರ ಸೇವೆ ಮಾಡುವುದು ಎಲ್ಲರನ್ನೂ ಗೌರವಿಸುವುದು ನಿಮ್ಮ ಪರಮ ಕರ್ತವ್ಯ. ಒಂದು ವೇಳೆ ನೀವು ನಿಮ್ಮ ಅತ್ತೆ–ಮಾವನ, ಅಥವಾ ಅನ್ಯ ಆಶ್ರಿತರ ಸೇವೆ ನೀವು ಮಾಡಿದರೆ ದೇವರು ನಿಮ್ಮ ಸೇವೆಗೆ ವ್ಯವಸ್ಥೆಮಾಡುತ್ತಾನೆ. ನೀವು ನಿಮ್ಮ ದೊಡ್ಡ–ಚಿಕ್ಕ ಮಕ್ಕಳನ್ನು ಸತ್ಸಂಗಕ್ಕೆ ಅವಶ್ಯ ಕರೆತನ್ನಿ. ಅವರಿಗೂ ಸೇವೆ ಮಾಡುವ, ಬೇರೆಯವರ ಜೊತೆ ವ್ಯವಹರಿಸುವ ಸಂಸ್ಕಾರ ಬರುತ್ತದೆ. ನಿಮ್ಮ ಮಕ್ಕಳು ದೊಡ್ಡವರಾದ ಮೇಲೆ (ನೀವು ವೃದ್ಧರಾದ ಮೇಲೆ) ಹೀಗೆಯೇ ನಿಮ್ಮ ಸೇವೆ ಮಾಡುವರು. ಹೇಗೆ ಒಬ್ಬಳು ಹೆಣ್ಣು ಮಗಳು ತಂದೆ ತಾಯಿಯನ್ನು ಬಿಟ್ಟು ಹೊಸ ತಾಯಿ(ಅತ್ತೆ), ತಂದೆಯ(ಮಾವನ) ಮನೆಗೆ ಹೋಗುತ್ತಾಳೆ. ಆ ಅತ್ತೆ ಮಾವರು ತಮ್ಮ ಮನೆಗೆ ಬಂದ ಸೊಸೆಯನ್ನು ಮಗಳಂತೆ ಕಾಣಬೇಕು. ತನ್ನ ಮಗಳ ಮತ್ತು ಸೊಸೆಯ ಮಧ್ಯೆ ಭೇದಭಾವ ತೋರಬಾರದು. ಏಕೆಂದರೆ ಅದೇ ಜಗಳಕ್ಕೆ ಮೂಲವಾಗುತ್ತದೆ. ಸೊಸೆ ತನ್ನ ಅತ್ತೆ ಮನೆಯ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು. ತಾಯಿಯ ಮನೆಯ ಒಡನಾಟವನ್ನು ಕಡಿಮೆ ಮಾಡಬೇಕು. ಈಗ ಅತ್ತೆಯ ಮನೆಯೇ ಅವಳಿಗೆ ಸರ್ವಸ್ವವಾಗಬೇಕು.

ಕಥೆ:– ಒಬ್ಬಳು ಸೊಸೆ ತನ್ನ ಅತ್ತೆಗೆ ಬಹಳ ಕಷ್ಟ ಕೊಡುತ್ತಿದ್ದಳು. ಅವಳು ತನ್ನ ಅತ್ತೆಗೆ ನಾಯಿಗೆ ಕೊಡುವಂತೆ ಒಡೆದ ಮಡಕೆಯ ಚೂರಿನಲ್ಲಿ ಊಟ ಬಡಿಸುತ್ತಿದ್ದಳು. ಕೆಲವೊಮ್ಮೆ ಸ್ವಚ್ಛಗೊಳಿಸುತ್ತಿದ್ದಳು. ಅವಳ ಮಗನಿಗೆ ಮದುವೆಯಾಗಿ ಸೊಸೆ ಮನೆಗೆ ಬಂದಳು. ಕೆಲವು ದಿನಗಳಲ್ಲೇ ಆ ಅತ್ತೆಯು ಸತ್ತು ಹೋದಳು. ಆಗ ಆ ಸೊಸೆಯು ಹೊಸದಾಗಿ ಬಂದ ತನ್ನ ಸೊಸೆಯನ್ನು ಕರೆದು, ಆ ಮಡಕೆಯ ಚೂರನ್ನು ಬಿಸಾಡುವಂತೆ ಹೇಳಿದಳು. ಆಗ ಆ ಹೊಸ ಸೊಸೆಯು, 'ಅತ್ತೆ ನಿಮಗೂ ಇದೇ ಮಡಕೆಯ ತುಂಡಿನಲ್ಲಿ ಊಟ ಕೊಡುತ್ತೇನೆ. ನೀವು ನಿಮ್ಮ ಅತ್ತೆಗೆ ತುಂಬಾ ಕಷ್ಟ ಕೊಟ್ಟಿದ್ದೀರಾ' ಎಂದಳು. ಆಗ

ಅವಳಿಗೆ ತನ್ನ ತಪ್ಪಿನ ಅರಿವಾಗಿ ಬಹಳ ಅತ್ತಳು. ಹೊಸ ಸೊಸೆ ಬುದ್ಧಿವಂತಳಾಗಿದ್ದಳು. ಅವಳು ಸಂಜೆಯವರೆಗೆ ಆ ಮಡಕೆ ತುಂಡನ್ನು ಬಿಸಾಡಲಿಲ್ಲ. ಆಗ ಆ ಅತ್ತೆಗೆ ಆ ಮಡಕೆ ತುಂಡು ಶತ್ರುವಿನಂತೆ ಭಾಸವಾಯಿತು. ಆಗ ಸೊಸೆಯು, 'ಅತ್ತೇ, ನಾನು ಸತ್ಸಂಗ ಕೇಳಿದ್ದೇನೆ. ನಾನು ನನ್ನ ಕರ್ಮ ಹಾಳುಮಾಡಿಕೊಳ್ಳುವುದಿಲ್ಲ, ಎಂದು ಹೇಳುತ್ತಾ ಮಡಕೆಯ ತುಂಡನ್ನು ಎತ್ತಿ ಬಿಸಾಕಿದಳು. ತಾನು ಮಾಡಿದ ಪಾಪ ಕರ್ಮದ ಫಲವಾಗಿ ಅತ್ತೆಗೆ ಕ್ಯಾನ್ಸರ್ ರೋಗವಾಯಿತು. ಪೂರ್ತಿದಿನ ಅಳುತ್ತಿದ್ದಳು. ಸೊಸೆ ಅತ್ತೆಯ ಸೇವೆ ಮಾಡುತ್ತಿದ್ದಳು. ಅವಳಿಗೆ ಯಾವ ಕೊರತೆಯೂ ಬಾರದಂತೆ ನೋಡಿಕೊಂಡಳು. ಆದರೆ ಅವಳೆಂದಳು, "ಅತ್ತೆ ನಾನೇನೋ ನಿಮ್ಮ ಸೇವೆ ಮಾಡುವೆ ಆದರೆ ನಿಮ್ಮ ಪಾಪವನ್ನು ನಾನು ಹಂಚಿಕೊಳ್ಳಲಾರೆ. ಈ ಕಷ್ಟವಂತು ನೀವೇ ಅನುಭವಿಸಬೇಕು. ನೀವು ಸತ್ಸಂಗಕ್ಕೆ ಬಂದಿದ್ದರೆ ನಿಮಗೆ ಈ ದಿನ ನೋಡಲು ಬರುತ್ತಿರಲಿಲ್ಲ. ಆಗ ಆ ರಾಕ್ಷಸಿ ಹೇಳಿದಳು. ಮಗಳೇ, ನಾನು ಮಹಾಪಾಪಿ. ನನ್ನದು ಉದ್ಧಾರವಾಗಬಹುದೇ? ನಾನು ದೀಕ್ಷೆ ಪಡೆದುಕೊಳ್ಳಬೇಕೆಂದು ಇಚ್ಛಿಸುತ್ತೇನೆ." ಸೊಸೆ ಒಳ್ಳೆಯ ಮನೆತನದವಳಾದ್ದರಿಂದ ಅವಳಿಗೆ ಸತ್ಸಂಗಕ್ಕೆ ಹೋದರೆ ಪಾಪವು ತೊಡೆದು ಹೋಗುತ್ತದೆಂದು ತಿಳಿದಿತ್ತು. ಯಾರ ಅಧಿಕ ಪಾಪವಿದೆ, ಭಕ್ತಿ ಮಾಡುವುದರಿಂದ ಲಾಭವೇ ಆಗುವುದು. ಪಾಪಗಳು ಕಡಿಮೆಯಾಗುವವು ಭವಿಷ್ಯದಲ್ಲಿ ಮಾನವ ಜನ್ಮವೂ ಲಭಿಸುವುದು. ಮರ್ಯಾದೆಯಲ್ಲಿದ್ದು ಅಂತಿಮ ಶ್ವಾಸದ ತನಕ ಭಕ್ತಿ ಮಾಡುತ್ತಿರಿ. ಗುರುಗಳು ಸತ್ಸಂಗದಲ್ಲಿ ಉದಾಹರಣೆಯ ಮೂಲಕ ತಿಳಿಸಿ ಹೇಳುತ್ತಾರೆ. ಹೇಗೆ ಯಾರ ಬಟ್ಟೆಯು ಕಡಿಮೆ ಕೊಳೆಯಾಗಿದ್ದರೆ, ಸ್ವಲ್ಪ ಪ್ರಯತ್ನ ಪಟ್ಟರೆ ಸಾಕು, ಸ್ವಚ್ಛವಾಗುತ್ತದೆ. ಬಟ್ಟೆ ಹೆಚ್ಚು ಕೊಳೆಯಾಗಿದ್ದರೆ, ಹೆಚ್ಚೆಚ್ಚು ಸಾಬೂನು ಹಾಕಿ ಎರಡು ಮೂರು ಬಾರಿ ನೀರಿನಲ್ಲಿ ತೊಳೆದರೆ ಸ್ವಚ್ಛವಾಗುತ್ತದೆ. ಇನ್ನು ಹೆಚ್ಚು ಕೊಳೆಯಾಗಿದ್ದರೆ ಹಾಗೂ ಕಲೆಗಳಾಗಿದ್ದರೆ, ಡ್ರೈ ಕ್ಲೀನಿಂಗ್‌ಗೆ ಕೊಡಬೇಕಾಗುತ್ತದೆ. ಸ್ವಚ್ಛಗೊಳಿಸಲೇಬೇಕೆಂಬ ಧೃಢ ಸಂಕಲ್ಪವಿದ್ದರೆ ಮೆಕ್ಯಾನಿಕನ್ ಕಪ್ಪು ಕಲೆಯ ಬಟ್ಟೆಯನ್ನೂ ಸ್ವಚ್ಛಗೊಳಿಸಬಹುದು.

ಸೊಸೆಗೆ ಅತ್ತೆಯು ಮೆಕ್ಯಾನಿಕ್‌ನಂತೆ ಸ್ಥಿತಿ ಮಾಡಿಕೊಂಡಿದ್ದಾಳೆಂದು ಗೊತ್ತಿತ್ತು, ಆದರೂ ಪರಮಾತ್ಮನ ಶರಣದಲ್ಲಿ ಖಂಡಿತ ಲಾಭವಾಗುತ್ತದೆ. ಈ ಉದ್ದೇಶದಿಂದ ಅವಳು ತನ್ನ ಅತ್ತೆಗೆ ದೀಕ್ಷೆ ಕೊಡಿಸಿದಳು. ಸ್ವಲ್ಪ ದಿನದ ನಂತರ ಅವಳ ಕ್ಯಾನ್ಸರ್‌ನಿಂದ ಉಂಟಾದ ನೋವು ಸ್ವಲ್ಪ ಶಮನವಾಯಿತು. ಸತ್ಸಂಗ ಕೇಳಿ ಅವಳಿಗೆ ಅಳು ಬಂತು. ಅಂದರೆ ತಾಯಿ-ತಂದೆಗೆ, ಸೊಸೆ-ಮಗನಿಂದ ಏನು ಆಕಾಂಕ್ಷೆ ಇರುತ್ತದೆ. ಪಾಪಿಯಾದ ನಾನು ನನ್ನ ಅತ್ತೆಯ ಜೊತೆ ನಡೆದುಕೊಂಡ ರೀತಿಯಿಂದ ನನಗೆ ಈ ತಗಲುವುದೇ ಇತ್ತು. ಒಂದು ವೇಳೆ ಮೊದಲೇ ಈ ಸತ್ಸಂಗ ಕೇಳಲು ಸಿಕ್ಕಿದ್ದರೆ, ಇಂದು ಈ ಅವಸ್ಥೆ ಬರುತ್ತಿರಲಿಲ್ಲ. ನಿರ್ಮಲ ಜೀವನ ಸಾಗಿಸುತ್ತಿದ್ದೆ, ಅತ್ತೆಯ ಆತ್ಮಕ್ಕೂ ಖುಷಿಯಾಗುತ್ತಿತ್ತು. ತನ್ನ ಜೀವನ ಸಫಲಗೊಳಿಸುತ್ತಿದ್ದೇ ಎಂದು ಚಿಂತಿಸಿದಳು.

ಈ ಕತೆಯನ್ನು ಕೇಳಿದ ರಾಮ್‌ಭಕ್ತನ ಸೊಸೆಯೂ ಬಿಕ್ಕಿ-ಬಿಕ್ಕಿ ಅತ್ತಳು. ಅರ್ಧಗಂಟೆಯಂತು ಅತ್ತಳು. ಎಲ್ಲರೂ ಸಮಾಧಾನ ಮಾಡಿದ ನಂತರ ಅವಳು ಅಳುವುದನ್ನು ನಿಲ್ಲಿಸಿದಳು. ಹಾಗೂ ತಾನು ಮಾಡಿದ ಪಾಪದ ಕೆಲಸವನ್ನು ತನ್ನ ಮಾವನಿಗೆ ನೀಡಿದ ಕಷ್ಟವನ್ನು ಅಳುತ್ತಾ ಎಲ್ಲರಿಗೂ ತಿಳಿಸಿದಳು. ನಂತರ ಪಶ್ಚಾತ್ತಾಪ ಪಟ್ಟಳು ಮತ್ತು ತನ್ನ ಮಾವನ ಮಾನವೀಯತೆಯ ಬಗ್ಗೆ ಹೇಳಿದಳು ತನ್ನ ಮಗನಿಗೆ ಎಂದೂ ನಿನ್ನ ಹೆಂಡತಿ ನನ್ನೊಡನೆ ಇಷ್ಟು ಕೆಟ್ಟದಾಗಿ ವರ್ತಿಸುತ್ತಾಳೆಂದು ಹೇಳಲಿಲ್ಲ. ಮಗನು ಕೇಳಿದಾಗ ಮಗನೇ ಸೇವೆಯಲ್ಲಿ ಯಾವುದೇ ರೀತಿಯ ಕೊರತೆ ಇಲ್ಲ, ಬಹಳ ಒಳ್ಳೆ ಮನೆತನದ ಮಗಳು, ಬುದ್ಧಿವಂತಳು. ಇವಳು ನಮ್ಮ ಮನೆಗೆ ಬಂದಿದ್ದು ಇದು ನಮ್ಮ ಸೌಭಾಗ್ಯ. ಈ ಮಗಳು ನಮ್ಮ ಮನೆ ನೆಲೆಸಿದಳು ಎಂದು ಹೇಳುತ್ತಿದ್ದರು. ಪಾಪಿಯಾದ ನನಗೆ ಈ ಮಾತುಗಳನ್ನು ಕೇಳಿಯೂ ಕರುಣೆ ಬರಲಿಲ್ಲ, ಏಕೆಂದರೆ ನನ್ನ ಆತ್ಮದ ಮೇಲೆ ಪಾಪ ಕರ್ಮಗಳ ಪದರು ಇತ್ತು. ಎರಡು-ಮೂರು ದಿನ ಸತ್ಸಂಗ ಕೇಳಿದ ನಂತರ ಪಾಪದ ಪದರು ಇಳಿದಿದೆ. ಆತ್ಮದಲ್ಲಿ ಒಳ್ಳೆಯ ಸಂಸ್ಕಾರ ಉತ್ಪನ್ನವಾಗುತ್ತಿದೆ. ಮೂರು ದಿನ ಸತ್ಸಂಗ ಕೇಳಿದ ನಂತರ ತನ್ನ ರಾಮ್‌ಭಕ್ತನು ತನ್ನ ಸೊಸೆ ಮತ್ತು ಮೊಮ್ಮಕ್ಕಳ ಜೊತೆ ಮನೆಗೆ ಮರಳಿ ಬಂದನು. ಮಕ್ಕಳೂ ಅಲ್ಲಿ ಹಳೆಯ ಭಕ್ತರ ಚಿಕ್ಕ ಮಕ್ಕಳು

ಊಟ ಬಡಿಸುವ ಹಾಗೂ ನೀರು ಕುಡಿಸುವ ಸೇವೆ ಮಾಡುವುದನ್ನು ನೋಡಿ ಅವರೂ ಸೇವೆ ಮಾಡಲಾರಂಭಿಸಿದರು. ನಂತರ ಮನೆಗೆ ಬಂದು ತನ್ನ ತಾತನ ಸೇವೆ ಮಾಡಲು ಪ್ರಾರಂಭಿಸಿದರು. ಇಬ್ಬರೂ ಅಣ್ಣ–ತಂಗಿ ದೊಡ್ಡ ಬಕೆಟ್ಟಿನಲ್ಲಿ ನೀರು ತಂದು ತನ್ನ ತಾತನಿಗೆ ಸ್ನಾನಮಾಡಲು ಹೇಳಿದರು. ಆಗ ರಾಮ್‌ಭಕ್ತನು ಅಯ್ಯೋ ಇಷ್ಟೊಂದು ಭಾರ ಎತ್ತಬೇಡಿ, ನಿಮ್ಮ ಹೊಟ್ಟೆ ನೋವುವುದು ನಾನು ತೆಗೆದುಕೊಳ್ಳುತ್ತೇನೆ ಎಂದನು. ಆಗ ಮಕ್ಕಳು ತಾತ "ಸತ್ಸಂಗದಲ್ಲಿ ಗುರುಗಳು ಹೇಳುತ್ತಾರೆ, ಸೇವೆ ಮಾಡುವುದರಿಂದ ಲಾಭವೇ ಲಾಭವಾಗುತ್ತದೆ, ಯಾವುದೇ ಕಷ್ಟವಾಗುವುದಿಲ್ಲ. ನಾವು ಊಟ ಮಾಡಿದರೆ ನಮ್ಮ ಹೊಟ್ಟೆ ತುಂಬುತ್ತದೆ. ನಾವು ಸೇವೆ ಮಾಡಿದರೆ ನಮಗೆ ಪುಣ್ಯ ಸಿಗುತ್ತದೆ. ರೋಗ ಇದ್ದರೂ ಭಕ್ತಿ ಮಾಡುವುದರಿಂದ, ಸೇವೆ ಮಾಡುವುದರಿಂದ ಸಮಾಪ್ತವಾಗುತ್ತದೆ. ಆಶ್ರಮದಲ್ಲಿದ್ದ ಭಕ್ತರು ನಾವು ಮೊದಲು ರೋಗಗ್ರಸ್ಥರಾಗಿದ್ದೆವು, ನಾಮದೀಕ್ಷೆ ಪಡೆದನಂತರ ಸಾಧ್ಯವಾದಷ್ಟು ಸೇವೆ ಮಾಡುವುದರಿಂದ ನಮ್ಮ ರೋಗ ದೂರವಾಯಿತು. ವೈದ್ಯ ಕೂಡಾ ಹೇಳಿದ್ದನು ಸಾಯುವರೆಂದು, ನೋಡಿ ನಮ್ಮ ಔಷಧಿಯ ಚೀಟಿ, ನಾಲ್ಕು ವರ್ಷಗಳಿಂದ ಚಿಕಿತ್ಸೆ ನಡೆಯುತ್ತಿತ್ತು. ಈಗ ನಾವು ಯಾವ ಔಷಧವನ್ನೂ ಸೇವಿಸುತ್ತಿಲ್ಲ. (ಋಗ್ವೇದದ **10**ನೇ ಮಂಡಲದ **161**ನೇ ಸೂಕ್ತಿಯ **2**ನೇ ಮಂತ್ರದಲ್ಲಿಯೂ ಪ್ರಮಾಣವಿದೆ, ಏನೆಂದರೆ ಒಂದು ವೇಳೆ ಒಬ್ಬ ರೋಗಿಯು ಸಾವಿಗೆ ಹತ್ತಿರವಾಗಿದ್ದರೂ, ಅವನಿಗೆ ಅಸಾಧ್ಯವಾದ ರೋಗ ಕಾಡುತ್ತಿದ್ದರೂ, ಅವನೇನಾದರೂ ಭಕ್ತಿ ಮಾಡುತ್ತಿದ್ದರೆ ಭಗವಂತನು ಅವನನ್ನು ಸಾವಿನ ದವಡೆಯಿಂದ ಕಾಪಾಡಬಲ್ಲನು. ಅವನನ್ನು ರೋಗಮುಕ್ತವನ್ನಾಗಿಸಿ ಅವನಿಗೆ ಪೂರ್ಣ ಆಯಸ್ಸನ್ನು ಪ್ರದಾನಿಸುತ್ತಾನೆ. –ಲೇಖಕ).

ಅಷ್ಟರಲ್ಲಿ ಸೊಸೆ ಬಂದು ಅಪ್ಪಾ! ಸ್ನಾನಮಾಡಿ ಪಂಚೆ ಇಲ್ಲಿಯೇ ಬಿಟ್ಟುಬಿಡಿ, ನಾನು ಸ್ವತಃ ಬಟ್ಟೆ ತೊಳೆಯುತ್ತೇನೆ ಎಂದು ಹೇಳಿದಳು. ರಾಮ್‌ಭಕ್ತನು ಹೇಳಿದ ಮಗಳೇ! ನೀನು ಸಾಕಷ್ಟು ಮನೆಯ ಕೆಲಸಗಳನ್ನು ಮಾಡಬೇಕು, ಊಟ ತಯಾರಿಸುವುದು, ನೀರು ತರುವುದು. ಪಶುಗಳನ್ನು ನೋಡಿಕೊಳ್ಳುವುದು. ನಾನು ಸ್ವತಃ ಬಟ್ಟೆ ತೊಳೆದುಕೊಳ್ಳುವೆ. ನನ್ನ ಕಾಲು ಕೂಡಾ ಈಗ ಸರಿಯಾಗಿದೆ. ಬರಿ ಸ್ವಲ್ಪ ಕುಂಟುತ್ತಿದ್ದೇನೆ. ರಾಮ್‌ಭಕ್ತನು ಸ್ನಾನಮಾಡಿ ಪಂಚೆ ಬದಲಿಸಿ, ಪಂಚೆ ತೊಳೆಯಲಾರಂಭಿಸಿದನು. ಅದೇ ಸಮಯ ಮಕ್ಕಳು ಬಂದು ಪಂಚೆ ಕಸಿದುಕೊಂಡರು. ಮತ್ತು ತೆಗೆದುಕೊಂಡು ಒಳಗೆ ಹೋಗಿ ತಮ್ಮ ತಾಯಿಗೆ ಕೊಟ್ಟರು. ನಂತರ ಕುರ್ತಾ ಕೂಡಾ ತೆಗೆದು ಕೊಂಡು ಹೋದರು. ಬೇರೆ ಕುರ್ತಾ ತಂದು ಕೊಟ್ಟರು. ಮಗನು ಹೊಲದಿಂದ ಪಶುಗಳಿಗಾಗಿ ಮೇವು ತಂದನು ಮತ್ತು ತಂದೆಯನ್ನು ನೋಡಿ ಮೊದಲಿನಂತೆ ನೋಡಿ ಮಾತನಾಡದೆ ಮನೆಯೊಳಗೆ ಹೋದನು. ಪತ್ನಿ ನಿರ್ಮಲಾ ಹಲ್ವ ಮಾಡುತ್ತಿರುವುದನ್ನು ಅವನು ನೋಡಿದ, ಯಾವುದೋ ಹಬ್ಬವಿರಬೇಕೆಂದು ಯೋಚಿಸಿದನು. ನಂತರ ರೊಟ್ಟಿ ಪಲ್ಯ ಮಾಡಿದಳು. ಸರ್ವಪ್ರಥಮ ಗುರು ಭಗವಂತನಿಗೆ **2** ಬಟ್ಟಲಲ್ಲಿ ನೈವೇದ್ಯ ತೋರಿಸಿದಳು. ನಂತರ ಒಂದು ತಟ್ಟೆಯಲ್ಲಿ ರೊಟ್ಟಿ, ಬಟ್ಟಲಲ್ಲಿ ಹಲ್ವಾ, ಪಲ್ಯ ಹಾಕಿ ತನ್ನ ಮಾವನಿಗೆ ತಗೊಂಡು ಬಂದಳು. ಮತ್ತು ಹೇಳಿದಳು ಅಪ್ಪಾ! ಊಟಮಾಡಿ, ಹಸಿವಾಗಿರಬಹುದು, ದೂರದಿಂದ ಬಂದಿದ್ದೇವೆ. ರಾಮ್‌ಭಕ್ತ ಹೇಳಿದ ಮಗಳೇ ನನಗೆ ಇದು ಸರಿಹೋಗುವುದಿಲ್ಲ. ಒಣ ರೊಟ್ಟಿ ಕೊಟ್ಟು ಬಿಡು ಇಲ್ಲದಿದ್ದರೆ, ರೋಗಿಯಾಗುವೆ. ಭಾವನೆಯಲ್ಲಿ ಮುಳುಗಿ ಮಗಳು ಇಂದು ಎಲ್ಲಾ ಸೇವೆ ಮಾಡುವಳು, ಆದರೆ ಮಗನು ಇವಳನ್ನು ಬೆದರಿಸುವನು ಏಕೆಂದರೆ ಅವನಿಗೆ ಸತ್ಸಂಗದ ಜ್ಞಾನವಿಲ್ಲ. ಮನೆಯಲ್ಲಿ ಜಗಳ ಬೇಡ, ಅಷ್ಟರಲ್ಲಿ ಮಗನು ಬಂದನು. ತನ್ನ ಹೆಂಡತಿಗೆ ಹೇಳಿದ, ಅಪ್ಪಾ ಸರಿಯಾಗಿಯೇ ಹೇಳುತ್ತಿದ್ದಾರೆ ನಡೆ ಒಳಗಡೆ. ತಂದೆಯ ಕೋಣೆ ದ್ವಾರದ ಬಳಿ ಇತ್ತು, ಮಕ್ಕಳಿಗೆ ಇರಲು ಒಳಗಡೆ ಇತ್ತು. ಹೆಂಡತಿ ಹೇಳಿದಳು ಸುಮ್ಮನಿರು, ನಾನು ಬಹಳ ಪಾಪ ಒಟ್ಟುಗೂಡಿಸಿದೆ. ಈಗ ತಂದೆಯ ಸೇವೆ ಸ್ವತಃ ನಾನೇ ಮಾಡುವೇ. ಗಂಡ ಸುಮ್ಮನಾಗಿ ಬಿಟ್ಟ. ರಾಮ್‌ಭಕ್ತನು ಇಬ್ಬರೂ ಮಕ್ಕಳಿಗೆ ಸ್ವಲ್ಪ ಸ್ವಲ್ಪ ಹಲ್ವಾ ಕೊಟ್ಟನು. ಸೊಸೆಗೆ ಕೊಡುವಾಗ ನೀವೇನು ತಿನ್ನುವಿರಿ? ಎಂದು ಕೇಳಿದಳು. ಮನೆಯಲ್ಲಿ ಇನ್ನೂ ಹೆಚ್ಚು ಹಲ್ವಾ ಪ್ರಸಾದ ಉಳಿದಿದೆ. ಅಪ್ಪಾ ನೀವು ತಿನ್ನಿ, ತಿನ್ನದಿದ್ದರೆ ನನ್ನ ಆತ್ಮ ಅಳುವುದು. ರಾಮ್ ಭಕ್ತನು ಗುರುದೇವರ ಸ್ಮರಣೆಮಾಡಿ ಊಟ ಮಾಡಿದನು. ಪ್ರತಿದಿನ ಸೊಸೆಯು ಸ್ವತಃ ಮೃದು ಬಿಸಿ–ಬಿಸಿ ರೊಟ್ಟಿ ತಂದು ತನ್ನ ಕೈಯಿಂದ

ತಿನ್ನಿಸುತ್ತಿದ್ದಳು. ಪ್ರತಿದಿನ ಬಟ್ಟೆ ತೊಳೆಯುತ್ತಿದ್ದಳು ಮತ್ತು ಅಪ್ಪಾ ನೀವು ಭಕ್ತಿಮಾಡಿ ಎಂದು ಹೇಳುತ್ತಿದ್ದಳು.

ಒಂದು ದಿನ ರಾಮಭಕ್ತನ ಅತ್ತೆಯ ಮಗ ರಾಮ್‌ನಿವಾಸ್ ಮನೆಗೆ ಬಂದನು. ರಾಮ್‌ಭಕ್ತನು ಅವನನ್ನು ಆಲಂಗಿಸಿಕೊಳ್ಳುತ್ತಾ ಹೇಳಿದನು, "ನಿನ್ನ ಕೃಪೆಯಿಂದ ನಮ್ಮ ಮನೆ ಇಂದು ಸ್ವರ್ಗವಾಗಿದೆ. ಆಗ ರಾಮ್‌ನಿವಾಸನೆಂದನು, "ಇದು ನನ್ನ ಕೃಪೆಯಿಂದಲ್ಲ, ಗುರುಗಳ ಶಬ್ದ–ಶಕ್ತಿಯ ಚಮತ್ಕಾರ. ನಾನು ಮತ್ತು ನೀವು ಮೊದಲು ಆಟವಾಡುತ್ತಿದ್ದೇವು, ನಾನು ಮಾಡುವುದರಿಂದ ಆಗುತ್ತಿದ್ದರೆ ಮೊದಲೇ ಆಗುತ್ತಿತ್ತು. ಗುರುಗಳು ಹೇಳುತ್ತಿದ್ದರು, ರಾಮ್‌ಭಕ್ತನು ಹಿಂದಿನ ಜನ್ಮದಲ್ಲಿ ಭಕ್ತನಾಗಿದ್ದನು. ಅವನಿಗೆ ಕುಟುಂಬದಲ್ಲಿ ಮೋಹವಿದ್ದ ಕಾರಣ ನಿಯಮ ಉಲ್ಲಂಘಿಸಿದ್ದನು. ಆದ್ದರಿಂದ ಇಷ್ಟೆಲ್ಲಾ ಕಷ್ಟ ಅನುಭವಿಸಬೇಕಾಯಿತು. ಈಗ ಇವನು ಬಹಳ ದುಃಖಿಯಾಗಿದ್ದನು. ಆದ್ದರಿಂದ ನಿನ್ನೊಡನೆ ಬಂದನು. ಇಲ್ಲದಿದ್ದರೆ ನೀನು ಎಷ್ಟು ಬಾರಿ ರಾಮ್‌ಭಕ್ತನಿಗೆ ಈ ಮೊದಲೇ ಸತ್ಸಂಗಕ್ಕೆ ಬರಲು ತಿಳಿಸಿದ್ದೆ, ಆದರೆ ಮೋಹ–ಮಾಯೆ ಆವರಿಸಿದ್ದರಿಂದ ಅವನು ನಿನ್ನ ಮಾತನ್ನು ಕೇಳಲಿಲ್ಲ. ಅವನ ಮಗ–ಸೊಸೆಯ ವರ್ತನೆಯೆಲ್ಲಾ ಅವನಿಗೆ ವರದಾನವಾಯಿತು" ಎಂದರು.

ಕಬೀರರು ಹೇಳಿದ್ದಾರೆ:–

ಕಬೀರ್, ಸುಖ್ ಕೇ ಮಾಥೇ ಪತ್ಥರ್ ಪಡೋ, ಜೋ ನಾಮ್ ಹೃದಯ್ ಸೇ ಜಾಯ್ ।
ಬಲಿಹಾರೀ ವಾ ದುಃಖ್ ಕೇ, ಜೋ ಪಲ್–ಪಲ್ ರಾಮ್ ರಟಾಯ್ ॥

ಭಾವಾರ್ಥ:– ಹೇ ಪರಮಾತ್ಮ! ನಿನ್ನನ್ನು ಮರೆತು ಹೋಗುವಷ್ಟು ಸುಖವನ್ನು ನೀಡಬೇಡ. ಯಾವ ದುಃಖದಿಂದ ನಿನ್ನ ನೆನಪು ಕ್ಷಣಕ್ಷಣವೂ ಇರುವುದೋ ಅಂಥಾ ದುಃಖವನ್ನು ಸದಾ ಕೊಡುತ್ತಿರು. ಯಾವ ದುಃಖದಿಂದ ಪರಮಾತ್ಮನ ಆಶ್ರಯ ಲಭಿಸುವುದೋ ಅಂಥಾ ದುಃಖಕ್ಕೆ ನಾನು ನನ್ನನ್ನು ಅರ್ಪಿಸಿಕೊಳ್ಳುವೆ.

ರಾಮ್‌ಭಕ್ತನು ತನ್ನ ಮಗನನ್ನು ಸತ್ಸಂಗಕ್ಕೆ ಕರೆದೊಯ್ಯುವಂತೆ ಭಕ್ತ ರಾಮ್‌ನಿವಾಸ್‌ಗೆ ಹೇಳಿದನು. ಮುಂಬರುವ ಸತ್ಸಂಗಕ್ಕೆ ಮಗ ಪ್ರೇಮ್‌ಸಿಂಗ್ ನನ್ನು ಕರೆದುಕೊಂಡು ಹೋಗು. ಮುಂದಿನ ಸತ್ಸಂಗ ಒಂದು ತಿಂಗಳ ನಂತರ ಆಗುವುದಿತ್ತು. ಭಕ್ತ ರಾಮ್‌ನಿವಾಸ್‌ನು ಬಂದು ಪ್ರೇಮ್ ಸಿಂಗ್ ನನ್ನು ತನ್ನ ಮನೆಗೆ ಕರೆದುಕೊಂಡು ಹೊಗುವ ನೆಪದಿಂದ ಅವನನ್ನು ಸತ್ಸಂಗಕ್ಕೆ ಕರೆದೊಯ್ದನು. ಮೂರು ದಿನ ಅವರಿಬ್ಬರೂ ಆಶ್ರಮದಲ್ಲಿದ್ದರು, ಸತ್ಸಂಗ ಕೇಳಿದರು. ಅಲ್ಲಿಯ ಹಳೆಯ ಭಕ್ತರಿಂದ ಅವರ ಜೀವನದ ಅನುಭವಗಳನ್ನು ಕೇಳಿದರು. ನಂತರ ಅವರ ಕುಟುಂಬ ಸಂಪೂರ್ಣ ಬದಲಾಯಿತು. ಭಕ್ತಿ ಮತ್ತು ಸೇವೆ ಮಾಡಿ ಉದ್ಧಾರ ಮಾಡಿಕೊಂಡರು.

## "ಸತ್ಸಂಗದಿಂದ ಮನೆಯಲ್ಲಿನ ಜಗಳ ಅಂತ್ಯವಾಗುತ್ತದೆ"

ಒಬ್ಬಳು ಹೆಂಗಸು ತನ್ನ ಸೊಸೆಯ ಮೇಲೆ ಮಾತು ಮಾತಿಗೂ ಸಿಟ್ಟಾಗುತ್ತಿದ್ದಳು. ಅವಳ ಸಣ್ಣ ಪುಟ್ಟ ತಪ್ಪುಗಳನ್ನು ಉಪ್ಪು ಖಾರಾ ಸೇರಿಸಿ ತನ್ನ ಮಗನಿಗೆ ಹೇಳುತ್ತಿದ್ದಳು. ಮಗ ಹೆಂಡತಿಯನ್ನು ಬೈಯ್ಯುತ್ತಿದ್ದ. ಹೀಗೆ ಮನೆ ನರಕವಾಗಿ ಹೋಗಿತ್ತು. ಸೊಸೆ ಆಗಾಗ ಅತ್ತೆಗೆ ಸತ್ಸಂಗಕ್ಕೆ ಹೋಗುವಂತೆ ಹೇಳುತ್ತಿದ್ದಳು. ಏಕೆಂದರೆ ಅವಳ ನೆರೆಮನೆಯವಳು ಸತ್ಸಂಗಕ್ಕೆ ಹೋಗುತ್ತಿದ್ದಳು. ಅತ್ತೆಗೆ ಈ ಮಾತು ಸರಿ ಅನ್ನಿಸುತ್ತಿರಲಿಲ್ಲ. 'ಬುದ್ಧಿ ಇಲ್ಲದವರು, ಚಾರಿತ್ರ್ಯವಿಲ್ಲದವರು ಸತ್ಸಂಗಕ್ಕೆ ಹೋಗುತ್ತಾರೆ' ಅವರು ಒಳ್ಳೆ ಕುಲದವರಲ್ಲ, ನಾವು ಒಳ್ಳೆಯ ಮನೆತನದವರು, ಸತ್ಸಂಗದಲ್ಲಿ ನಮಗೇನು ಕೆಲಸ? ಎನ್ನುತ್ತಿದ್ದಳು. ಸೊಸೆ ಎಷ್ಟೇ ಪ್ರಯತ್ನ ಪಟ್ಟರೂ ಅತ್ತೆ ಸೊಸೆಯ ಮಾತು ಕೇಳಲು ಸಿದ್ಧಳಾಗಿರಲಿಲ್ಲ. ಒಂದು ದಿನ ಊರಿನ ಒಬ್ಬಳು ಹೆಂಗಸು ಯಾವುದೋ ಕೆಲಸದ ನಿಮಿತ್ತ ಮನೆಗೆ ಬಂದಳು. ಆಗ ಅತ್ತೆ ಸೊಸೆಗೆ ಬೈಯ್ಯುತ್ತಿದ್ದಳು, ಗದರಿಸುತ್ತಿದ್ದಳು. ಬರಲಿ ನಿನ್ನ ಗಂಡ ಇಂದು ನಿನ್ನ ಚರ್ಮ ಸುಲಿಯುತ್ತೇನೆ ಎಂದು ಬೈಯ್ಯುತ್ತಿದ್ದಳು. ಆಗಿದ್ದಿಷ್ಟೇ. ಸೊಸೆ ಅತ್ತೆಗೆ ಚಹಾ ಮಾಡಿ, ಲೋಟದಲ್ಲಿ ಚಹಾ ಹಾಕಿ ಇಟ್ಟಿದ್ದಳು. ಮಲಗಿದ್ದ ಮಗು ಅಳಲು ಪ್ರಾರಂಭಿಸಿತು. ಮಗುವನ್ನು ತರಲು ಸೊಸೆ ರೂಮಿನ ಒಳಗೆ ಹೋದಳು. ಆ ಮಗುವನ್ನು ತರಲು 1 ನಿಮಿಷ ಕೂಡಾ ಹತ್ತಿರಲಿಲ್ಲ. ಅಷ್ಟರಲ್ಲಿ ನಾಯಿ ಲೋಟಕ್ಕೆ ಬಾಯಿಹಾಕಿತು.

ಲೋಟ ನೆಲದ ಮೇಲೆ ಬಿದ್ದು ಚಹಾ ಚೆಲ್ಲಿ ಹೋಯಿತು. ಅತ್ತೆ ಆ ಚಹಾ ಲೋಟದಿಂದ ಸ್ವಲ್ಪ ದೂರದಲ್ಲಿ ಮಂಚದ ಮೇಲೆ ಕುಳಿತಿದ್ದಳು, ವ್ಯಾಯಾಮ ಎಲ್ಲಾ ಮಾಡಿ ಕಟ್ಟು ಮಸ್ತಾದ ಆಳಾಗಿದ್ದರೂ ಮನೆಯಲ್ಲಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಈ ಮಾತಿನ ಮೇಲೆ ಜಗಳ ಮಾಡುತ್ತಿದ್ದಳು. ಆ ಹಳ್ಳಿಯ ಪಕ್ಕದ ಗಲ್ಲಿಯಿಂದ ಬಂದ ಮಹಿಳೆಯು ಸತ್ಸಂಗಕ್ಕೆ ಹೋಗುತ್ತಿದ್ದಳು. ಇದನ್ನೆಲ್ಲಾ ನೋಡಿ ಅವಳು ಭತೆರೀ(ಆ ಅತ್ತೆಯ ಹೆಸರು ಭತೆರೀ ಇತ್ತು)ಗೆ ಸತ್ಸಂಗಕ್ಕೆ ನಡೆಯಲು ಹೇಳಿದಳು. ಅವಳ ಉತ್ತರ ಅದೇ ಆಗಿತ್ತು. ಆ ಸತ್ಸಂಗದ ಭಕ್ತೆಯೂ ಬಹಳ ಹೊತ್ತು ಸತ್ಸಂಗದಲ್ಲಿ ಹೇಳಿದ ಮಾತನ್ನು ಹೇಳಿದಳು. ಆದರೆ ಭತೆರೀ ಒಪ್ಪಲು ಸಿದ್ಧಳಾಗಿರಲಿಲ್ಲ. ಭತೆರೀಯ ತಂಗಿಯನ್ನು ಅದೇ ಊರಿನಲ್ಲಿ ಕೊಟ್ಟು ಮದುವೆ ಮಾಡಲಾಗಿತ್ತು. ಭತೆರೀಗೆ ಸತ್ಸಂಗದ ಬಗ್ಗೆ ತಿಳಿಸಿದ ಆ ಮಹಿಳೆಯ ಹೆಸರು ಜಾನಕೀ ಎಂದಿತ್ತು. ಭತೆರೀಯ ತಂಗಿಯ ಹೆಸರು ದಯಾಕೌರ್ ಎಂದಿತ್ತು. ಜಾನಕೀ ಹೋಗಿ ದಯಾಕೌರ್‌ಗೆ ಹೇಳಿದಳು ನಿನ್ನ ಅಕ್ಕ ಭತೆರೀಯಂತು ಮನೆಯನ್ನು ನರಕವನ್ನಾಗಿಸಿದ್ದಾಳೆ. ಅರ್ಥವಿಲ್ಲದೇ ಜಗಳ ಮಾಡುತ್ತಾಳೆ. ನಿನ್ನೆ ಯಾವುದೋ ಕೆಲಸದಿಂದ ಅಲ್ಲಿ ಹೋಗಿದ್ದೆ, ಒಂದು ಚಹಾ ಲೋಟವನ್ನು ನಾಯಿ ಬಿಳಿಸಿತು. ಅದನ್ನು ಮಹಾಭಾರತ ಮಾಡಿ ಬಿಟ್ಟಳು. ದಯಾಕೌರ್ ಕೂಡ ಜಾನಕೀ ಹೇಳಿದರಿಂದ ಸತ್ಸಂಗಕ್ಕೆ ಹೋಗಿದ್ದಳು ಮತ್ತು ದೀಕ್ಷೆ ಪಡೆದಿದ್ದಳು. ಜಾನಕೀ ಹೇಳಿದಳು ಹೇಗಾದರೂ ಮಾಡಿ ಅವಳನ್ನು ಸತ್ಸಂಗಕ್ಕೆ ಕರೆದುಕೊಂಡು ಬಾ. ಎಲ್ಲಿಯವರೆಗೆ ಸಂತರ ವಚನಗಳು ಕೇಳಲು ಸಿಗುವುದಿಲ್ಲವೋ ಮನುಷ್ಯ ಸ್ವತಃ ಚಿಂತೆ ಮಾಡುತ್ತಾನೆ ಹಾಗೂ ಮನೆಯ ಸದಸ್ಯರನ್ನೂ ಚಿಂತೆಯಲ್ಲಿಡುತ್ತಾನೆ. ದಯಾಕೌರ್ ಮರುದಿನವೇ ತನ್ನ ಅಕ್ಕನ ಮನೆಗೆ ಹೋದಳು. ಯಾವುದೋ ನೆಪದಿಂದ ಭತೆರೀಯನ್ನು ತನ್ನ ಮನೆಗೆ ಕರೆದುಕೊಂಡು ಬಂದಳು. ಅಲ್ಲಿ ಸತ್ಸಂಗಕ್ಕೆ ಹೋಗಲು ಅನ್ಯ ಮಹಿಳೆಯರು ಜಾನಕೀಯ ಮನೆ ಮುಂದೆ ನಿಂತಿದ್ದರು. ಅವರು ದಯಾಕೌರ್‌ಗೆ ಸತ್ಸಂಗಕ್ಕೆ ಬರಲು ಹೇಳಲು ಅವಳ ಮನೆಗೆ ಬಂದರು. ಅಲ್ಲಿ ಅವಳ ಅಕ್ಕ ಭತೆರೀಯನ್ನು ನೋಡಿ ಅವಳಿಗೂ ಹೇಳಿ ಜೊತೆಗೆ ಕರೆದುಕೊಂಡು ಹೋದರು. ಭತೆರೀ ಜೀವನದಲ್ಲಿ ಮೊದಲ ಬಾರಿ ಸತ್ಸಂಗ ಕೇಳಿದಳು. ಆಶ್ರಮದಲ್ಲಿ ಎಂಥ ವ್ಯಕ್ತಿಗಳು ಇರುತ್ತಾರೆಂದು ಕಣ್ಣಾರೆ ಕಂಡು ಒಳ್ಳೆಯದೇನಿಸಿತು. ಹೇಗೆ ಕೆಟ್ಟದ್ದು ಕೇಳುತ್ತಿದ್ದಳು ಹಾಗೇ ಅಶ್ರಮದಲ್ಲಿ ಏನೂ ಇರಲಿಲ್ಲ. ಅನೇಕ ವ್ಯಕ್ತಿಗಳು ತನ್ನ ಅಕ್ಕ, ತಂಗಿ, ಮಕ್ಕಳು, ಸೊಸೆಯನ್ನು ಹಾಗೂ ಹೆಂಡತಿಯನ್ನು ಸತ್ಸಂಗಕ್ಕೆ ಕಳುಹಿಸುವುದಿಲ್ಲ ಹಾಗೂ ಸ್ವತಃವೂ ಬರುವುದಿಲ್ಲ. ಸತ್ಸಂಗಕ್ಕೆ ಹೋದರೆ ಮರ್ಯಾದೆ ಮಣ್ಣು ಪಾಲಾಗುತ್ತದೆ, ನಮ್ಮ ಹೆಣ್ಣು ಮಕ್ಕಳು ಹಾಳಾಗುತ್ತಾರೆ ಎಂದು ತಿಳಿದಿದ್ದಾರೆ. ಆದರೆ ಸತ್ಸಂಗಕ್ಕೆ ಹೋಗದಿದ್ದರೆ ಪರಮಾತ್ಮನ ವಿಧಾನದ ಜ್ಞಾನದ ಅರಿವಾಗುವುದಿಲ್ಲ ಮತ್ತು ಭಕ್ತಿ ಮಾಡದಿದ್ದರೆ ಮುಂದಿನ ಜೀವನದಲ್ಲಿ ಎಷ್ಟು ಕಷ್ಟ ಪಡಬೇಕಾದೀತು ಎಂದು ಅವರು ಯೋಚಿಸಬೇಕು.

➢ **ಯಾರು ಮನುಷ್ಯ ಶರೀರವನ್ನು ಹೊಂದಿದ್ದರೂ ಭಕ್ತಿಮಾಡದಿದ್ದರೆ ಅವನಿಗೆ ಆಗುವ ನಷ್ಟವೇನು ಎಂದು ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–**

ಕಬೀರ್, ಹರಿ ಕೇ ನಾಮ್ ಬಿನಾ, ನಾರಿ ಕುತಿಯಾ ಹೋಯ್ ।
ಗಲೀ–ಗಲೀ ಭೌಕತ್ ಫಿರ್ೈ, ಟೂಕ್ ನಾ ಡಾಲ್ೈ ಕೋಯ್ ॥

**ಸಂತ ಗರೀಬ್‌ದಾಸರ ವಾಣೀಯಿಂದ:–**

ಬೀಬೀ ಪಡದ್ೈ ರಹೇ ಥೀ, ಡ್ಯೋಡೀ ಲಗತೀ ಬಾಹರ್ ।
ಅಬ್ ಗಾತ್ ಉಘಾಡ್ೈ ಫಿರತೀ ಹೈಂ, ಬನ್ ಕುತಿಯಾ ಬಾಜಾರ್ ॥
ವೇ ಪಡದೇ ಕೀ ಸುಂದರೀ, ಸುನೋ ಸಂದೇಶಾ ಮೋರ್ ।
ಗಾತ್ ಉಘಾಡ್ೈ ಫಿರತೀ ಹೈ ಕರೇಂ ಸರಾಯೋಂ ಶೋರ್ ॥
ನಕ್ ಬೇಸರ್ ನಕ್ ಪರ್ ಬನಿ, ಪಹರೇಂ ಥೀ ಹಾರ್ ಹಮೇಲ್ ।
ಸುಂದರೀ ಸೇ ಕುತಿಯಾ ಬನೀ, ಸುನ್ ಸಾಹೇಬ್ (ಪ್ರಭು) ಕೇ ಖೇಲ್ ॥

ಭಾವಾರ್ಥ:– ಮನುಷ್ಯ ಜೀವನವನ್ನು ಪಡೆದ ಜೀವಾತ್ಮವು ಭಕ್ತಿಮಾಡದಿದ್ದರೆ ಅವನು ಮರಣಾನಂತರ ಪಶು ಪಕ್ಷಿಗಳ ಜನ್ಮ ತಾಳುತ್ತಾನೆ. ಪರಮಾತ್ಮನ ನಾಮಸ್ಮರಣೆ ಮಾಡದ ಸ್ತ್ರೀಯು ಮುಂದಿನ ಜೀವನದಲ್ಲಿ ನಾಯಿಯಾಗಿ ಹುಟ್ಟುತ್ತಾಳೆ. ನಂತರ ಬೆತ್ತಲೆಯಾಗಿ ಗಲ್ಲಿಗಳಲ್ಲಿ ಅಲೆದಾಡಬೇಕಾಗುತ್ತದೆ. ಹಸಿವಿನಿಂದ ನರಳಬೇಕಾಗುತ್ತದೆ. ಅವಳಿಗೆ ಅನ್ನ ಹಾಕುವವರು ಯಾರೂ ಇರುವುದಿಲ್ಲ. ಯಾವಾಗ ಆ ಆತ್ಮ ಸ್ತ್ರೀ ರೂಪದಲ್ಲಿ ಯಾವುದಾದರೂ ಒಬ್ಬ ರಾಜನ ಅಥವಾ ಅಧಿಕಾರಿಯ ಹೆಂಡತಿಯಾಗಿದ್ದಳು, ಅದು ಅವಳ ಪೂರ್ವ ಜನ್ಮದ ಪುಣ್ಯದ ಫಲ, ಹಿಂದಿನ ಯಾವುದೋ ಜನ್ಮದಲ್ಲಿ ಅವಳು ಭಕ್ತಿ–ದಾನ ಧರ್ಮ ಮಾಡಿದ್ದಿರಬೇಕು. ಆ ಎಲ್ಲ ಭಕ್ತಿ ಹಾಗೂ ಪುಣ್ಯ ಸ್ತ್ರೀ ರೂಪದಲ್ಲಿ ಪಡೆದು ಆ ಆತ್ಮ ದೊಡ್ಡ ಮನೆತನದ ಮಗಳು–ಸೊಸೆಯಾಗಿದ್ದಳು. ಆಗ ಪರದೆಯಲ್ಲಿ ಇರುತ್ತಿದ್ದಳು. ದ್ರಾಕ್ಷಿ ಗೋಡಂಬಿ ಹಾಕಿದ ಹಲ್ವಾ, ಪಾಯಸಾ ತಿನ್ನುತ್ತಿದ್ದಳು ಅವರು ತಿಂದು ಬಿಟ್ಟ ಎಂಜಲನ್ನು ಅವರ ಕೆಲಸದವರು ತಿನ್ನುತ್ತಿದ್ದರು. ಆದರೆ ಅವರನ್ನು ಸತ್ಸಂಗಕ್ಕೆ ಹೋಗಲು ಬಿಡುತ್ತಿರಲಿಲ್ಲ, ಏಕೆಂದರೆ ಅವರೆಲ್ಲಾ ದೊಡ್ಡ ಮನೆತನದ ಮಗಳು ಹಾಗೂ ಸೊಸೆಯಾಗಿರುತ್ತಿದ್ದಳು. ಹೊರ ಹೋದರೆ ಮರ್ಯಾದೆ ಕಡಿಮೆಯಾಗುವುದೆಂದು ಭಾವಿಸುತ್ತಿದ್ದರು. ದೊಡ್ಡ ಮನೆತನದವರ ಗೌರವವು ಮಗಳು–ಸೊಸೆಯರು ಮನೆಯಲ್ಲಿ ಪರದೆಯಲ್ಲಿ ಇರುವುದು ಸೂಕ್ತವೆಂದು ನಂಬಿದ್ದರು.  ಈ ಕಾರಣದಿಂದ ಆ ಪುಣ್ಯಾತ್ಮಗಳು ಸತ್ಸಂಗ ವಿಚಾರವನ್ನು ಕೇಳದಿರುವ ಕಾರಣ ಭಕ್ತಿಯಿಂದ ವಂಚಿತರಾಗುತ್ತಾರೆ. ಮಾನವ ಶರೀರದಲ್ಲಿ ಆ ಸ್ತ್ರೀ ಕೊರಳಲ್ಲಿ ಒಂಬತ್ತು–ಒಂಬತ್ತು ಲಕ್ಷದ ಮುತ್ತಿನ ಸರ, ಮೂಗಿನಲ್ಲಿ ಚಿನ್ನದ ಮೂಗುತಿ ಅದೇ ಶೃಂಗಾರದಲ್ಲಿ ತನ್ನ ಜೀವನ ಧನ್ಯ ಎಂದು ಭಾವಿಸುತ್ತಿದ್ದಳು. ಭಕ್ತಿ ಮಾಡದಿರುವ ಕಾರಣ ಈಗ ಅವಳು ನಾಯಿಯ ಜನ್ಮ ಪಡೆದು ನಗ್ನ ಶರೀರ ಗಲ್ಲಿಗಳಲ್ಲಿ ಒಂದೊಂದು ರೊಟ್ಟಿಯ ತುಂಡಿಗಾಗಿ ಅಲೆದಾಡುತ್ತಿರುತ್ತದೆ. ನಗರಗಳಲ್ಲಿ ಮೊದಲು ಧರ್ಮಛತ್ರಗಳಿರುತ್ತಿದ್ದವು. ಯಾತ್ರಿಕರು ರಾತ್ರಿಯಲ್ಲಿ ಉಳಿದುಕೊಂಡು ಬೆಳಿಗ್ಗೆ ಊಟ ಮಾಡಿ ಹೋಗುತ್ತಿದ್ದರು. ಪರದೆಯಲ್ಲಿರುವ ಆ ಸುಂದರ ಸ್ತ್ರೀ ನಾಯಿಯಾಗಿ ಧರ್ಮಛತ್ರಗಳಲ್ಲಿದ್ದ ಯಾತ್ರಿಕರು ಹಾಕಿದ ತುಂಡು ತಿನ್ನಲು ಧರ್ಮಛತ್ರದಲ್ಲಿ ಬೊಗಳುತ್ತದೆ. ರೊಟ್ಟಿಯ ತುಂಡು ನೆಲದ ಮೇಲೆ ಎಸೆಯುತ್ತಾರೆ, ಅದರೊಂದಿಗೆ ಸ್ವಲ್ಪ ಮರಳು, ಮಣ್ಣು ಮೆತ್ತಿಕೊಂಡಿರುತ್ತದೆ. ಆ ಸುದಂರಿ ದ್ರಾಕ್ಷಿ, ಗೊಡಂಬಿ ಹಾಕಿದ ಹಲ್ವಾ–ಪಾಯಸಾ ತಿನ್ನುತ್ತಿದ್ದಳು, ಭಕ್ತಿ ಮಾಡುತ್ತಿರಲಿಲ್ಲ. ಆದರೆ ಈಗ ಮಣ್ಣು ಅಂಟಿಕೊಂಡಿರುವ ರೊಟ್ಟಿ ತಿನ್ನುತ್ತಿದ್ದಾಳೆ. ಒಂದು ವೇಳೆ ಮಾನವ ಶರೀರವಿದ್ದಾಗ ಪೂರ್ಣ ಸಂತರಿಂದ ದೀಕ್ಷೆ ಪಡೆದು ಭಕ್ತಿ ಮಾಡಿದಿದ್ದರೆ ಇಂಥ ದಿನ ನೋಡುತ್ತಿರಲಿಲ್ಲ.

## "ಪುಹಲೋ ಬಾಈಯ ಕತೆ"

ಒಬ್ಬ ರಾಜನು ಪುಹಲೋಬಾಈಯ ಜ್ಞಾನ–ವಿಚಾರ ಕೇಳಿದನು. ಅದರಿಂದ ಬಹಳ ಪ್ರಭಾವಿತನಾದನು. ಆ ರಾಜನಿಗೆ ಮೂವರು ರಾಣಿಯರಿದ್ದರು. ರಾಜನು ತನ್ನ ಮೂವರು ರಾಣಿಯರ ಬಳಿ ಪುಹಲೋಬಾಈಯ ಬಗ್ಗೆ ಹೇಳಿದನು. ರಾಜನು ಅನೇಕ ಬಾರಿ ಪುಹಲೋಬಾಈಯನ್ನು ಅವರ ಮುಂದೆ ಹೊಗಳುತ್ತಿದ್ದನು. ಪರಸ್ತ್ರೀಯ ಪ್ರಶಂಸೆಯನ್ನು ತನ್ನ ಪತಿಯ ಬಾಯಿಂದ ಕೇಳಿದ ಆ ರಾಣಿಯರು ಕೋಪಗೊಂಡರು. ಆದರೆ ಏನನ್ನೂ ಹೇಳಲಿಲ್ಲ. ಅವರೆಲ್ಲಾ ಭಕ್ತೆ ಪುಹಲೋಬಾಈಯನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದರು. ರಾಜನು ತನ್ನ ಅರಮನೆಯಲ್ಲಿ ಸತ್ಸಂಗ ಮಾಡಲು ಪುಹಲೋಬಾಈಗೆ ಹೇಳಿದಾಗ ಪುಹಲೋ ಬಾಈ ಸತ್ಸಂಗದ ತಿಥಿ ಹಾಗೂ ಸಮಯ ರಾಜನಿಗೆ ಹೇಳಿದಳು. ಸತ್ಸಂಗದ ದಿನ ರಾಣಿಯರು ಬಹಳ ಬೆಲೆಬಾಳುವ ವಸ್ತ್ರಗಳನ್ನುಟ್ಟು, ಒಡವೆಗಳನ್ನೆಲ್ಲಾ ತೊಟ್ಟುಕೊಂಡು, ಚೆನ್ನಾಗಿ ಅಲಂಕರಿಸಿಕೊಂಡರು, ಪುಹಲೋಬಾಈ ಬಹಳ ಸುಂದರಿಯಾಗಿರಬಹುದು ಎಂದು ಅವರು ಅಂದುಕೊಂಡಿದ್ದರು. ಭಕ್ತೆ ಪುಹಲೋಬಾಈ ರಾಜನ ಅರಮನೆಗೆ ಬಂದಳು. ಅವಳು ಕೊಳೆಯಾದ ಖಾದಿಯ ಬಟ್ಟೆಯನ್ನುಟ್ಟಿದ್ದಳು. ಕೈಯ್ಯಲ್ಲಿ ಜಪಮಾಲೆ ಇತ್ತು. ಅತಿಯಾಗಿ ಬೆಳ್ಳಗೂ ಇರಲಿಲ್ಲ. ಅವಳನ್ನು ನೋಡಿದ ರಾಣಿಯರು ಜೋರಾಗಿ ನಗುತ್ತಾ, 'ಅಯ್ಯೋ ಇವಳಾ ಪುಹಲೋಬಾಈ, ನಾವು ಇವಳು ಬಹಳ ಸುಂದರಿ ಎಂದು

ಕೊಂಡಿದ್ದೆವು' ಎಂದರು, ಅವರ ಮಾತು ಕೇಳಿದ ಮುಹಲೋಬಾಈ ಹೀಗೆಂದಳು.

ವಸ್ತ್ರ–ಆಭೂಷಣ್ ತನ್ ಕೀ ಶೋಭಾ, ಯಹ್ ತನ್ ಕಾಚ್ಚೋ ಭಾಂಡೋ ।
ಭಕ್ತಿ ಬಿನಾ ಬನೋಗೀ ಕುತಿಯಾ, ರಾಮ್ ಭಜೋ ನ ರಾಂಡೋ ॥

**ಭಾವಾರ್ಥ:–** ಸುಂದರವಾದ ವಸ್ತ್ರ ಹಾಗೂ ಒಡವೆಗಳು ಶರೀರದ ಅಂದವನ್ನು ಹೆಚ್ಚಿಸುತ್ತವೆ. ಈ ಶರೀರ ನಶ್ವರ. ಈ ಶರೀರ ಕಚ್ಚಾ ಮಡಕೆ ಇದ್ದಂತೆ. ಈ ಶರೀರ ಕ್ಷಣ ಮಾತ್ರದ್ದು. ಯಾವಾಗ ಏನಾಗುವುದೋ, ಯಾವ ವಯಸ್ಸಿನಲ್ಲಿ, ಯಾವ ಕಷ್ಟ ಬರುವುದೋ ತಿಳಿಯದು. ಭಕ್ತಿ ಮಾಡದಿದ್ದರೆ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುವೆ, ನಂತರ ಬೆತ್ತಲೆಯಾಗಿ ಅಲೆಯುವೆ. ಆದ್ದರಿಂದ ಹೇಳಲಾಗಿದೆ ರಾಂಡೋ ಅಂದರೆ ಸ್ತ್ರೀಯರೇ ಭಕ್ತಿ ಮಾಡಿ "ರಂಡೆ" ಎಂಬ ಶಬ್ದ ವಿಧವೆಯರಿಗೆ ಉಪಯೋಗಿಸಲಾಗುತ್ತದೆ. ಆದರೆ ಸಾಮಾನ್ಯವಾಗಿ ಮಹಿಳೆಯರು ತಮ್ಮ ಆತ್ಮೀಯ ಗೆಳತಿಯರನ್ನು ಪ್ರೀತಿಯಿಂದ ಸಂಬೋಧಿಸಲು (ಪ್ರೀತಿಯಿಂದ ಬೈಯ್ಯುವ ರೀತಿಯಲ್ಲಿ) ಉಪಯೋಗಿಸುತ್ತಾರೆ. ಈಗ ಶಿಕ್ಷಿತರಾದ ನಂತರ ಈ ಶಬ್ದದ ಪ್ರಯೋಗವಾಗಿಲ್ಲ. ಭಕ್ತಿ ಮುಹಲೋಬಾಈ ಸತ್ಸಂಗ ಮಾಡಿದಳು. ಕಬೀರ್ ಪರಮೇಶ್ವರರ ದ್ವಿಪದಿಗಳನ್ನು ಎಲ್ಲರಿಗೂ ತಿಳಿಸಿದಳು.

ಕಬೀರ್, ಹರಿ ಕೆ ನಾಮ್ ಬಿನಾ, ನಾರೀ ಕುತಿಯಾ ಹೋಯ್ ।
ಗಲೀ–ಗಲೀ ಭೌಂಕತ್ ಫಿರೆ, ಟೂಕ್ ನಾ ಡಾಲೆ ಕೋಯ್ ॥
ಕಬೀರ್, ರಾಮ್ ರಟತ್ ಕೋಢೀ ಭಲೋ, ಚೂ–ಚೂ ಪಡೇ ಜೋ ಚಾಮ್ ।
ಸುಂದರ್ ದೇಹಿ ಕಿಸ್ ಕಾಮ್ ಕೀ, ಜಾ ಮುಖ್ ನಾಹೀಂ ನಾಮ್ ॥
ಕಬೀರ್, ನಹೀಂ ಭರೋಸಾ ದೇಹಿ ಕಾ, ವಿನಶ್ ಜಾಎ ಛಿನ್ ಮಾಹೀಂ ।
ಶ್ವಾಂಸ್–ಉಶ್ವಾಂಸ್ ಮೆಂ ನಾಮ್ ಜಪೋ, ಔರ್ ಯತ್ನ್ ಕುಛ್ ನಾಹೀಂ ॥
ಕಬೀರ್, ಶ್ವಾಂಸ್–ಉಶ್ವಾಂಸ್ ಮೆಂ ನಾಮ್ ಜಪೋ, ವ್ಯರ್ಥಾ ಶ್ವಾಂಸ್ ಮತ್‌ಖೋವೋ ।
ನಾ ಜಾನೇ ಇಸ್ ಶ್ವಾಂಸ್ ಕಾ, ಆವನ್ ಹೋ ಕೇ ನಾ ಹೋಯ್ ॥
ಗರೀಬ್, ಸರ್ವ್ ಸೋನೇ ಕೀ ಲಂಕಾ ಥೀ, ರಾವಣ್ ಸೇ ರಣಧೀರಮ್ ।
ಏಕ್ ಪಲಕ್ ಮೆಂ ರಾಜ್ಯ್ ಗಯಾ, ಜಮ್ ಕೇ ಪಡೇ ಜಂಜೀರಮ್ ॥
ಗರೀಬ್, ಮರ್ದ್–ಗರ್ದ್ ಮೆಂ ಮಿಲ್ ಗಯೇ, ರಾವಣ್ ಸೇ ರಣಧೀರಮ್ ॥
ಕಂಸ್, ಕೇಸಿ, ಚಾಣೂರ್ ಸೇ, ಹಿರಣಾಕುಶ್ ಬಲಬೀರಮ್ ॥
ಗರೀಬ್, ತೇರೀ ಕ್ಯಾ ಬುನಿಯಾದ್ ಹೈ, ಜೀವ್ ಜನ್ಮ್ ಧರಿ ಲೇತ್ ।
ದಾಸ್ ಗರೀಬ್ ಹರಿ ನಾಮ್ ಬಿನ್, ಖಾಲೀ ರಹ್ ಜಾ ಖೇತ್ ॥

❖ **ಶಬ್ದಾರ್ಥ:–** ಕಬೀರ್ ಪರಮೇಶ್ವರರು ಆಧ್ಯಾತ್ಮದ ವಿಧಾನವನ್ನು ತಿಳಿಸಿದ್ದಾರೆ. ಯಾವ ಸ್ತ್ರೀಯು ಭಕ್ತಿ ಮಾಡುವುದಿಲ್ಲವೊ, ಅವಳು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಿ ಬೀದಿ ಬೀದಿ ಅಲೆದಾಡಬೇಕಾಗುತ್ತದೆ. ಯಾರೂ ಅವಳಿಗೆ ಒಂದು ತುತ್ತು ಊಟವನ್ನೂ ಕೊಡುವುದಿಲ್ಲ. ಮಾನವ ಜೀವನವಿದ್ದಾಗ ಅವಳಿಗೆ ಸಮಯಕ್ಕೆ ಊಟ ಸಿಗುತ್ತಿತ್ತು. ಭಕ್ತಿ ಮಾಡದಿದ್ದರೆ ಇಂಥಾ ಸ್ಥಿತಿ ಬರಬಹುದು.

❖ ಪರಮಾತ್ಮನ ಭಕ್ತಿಯನ್ನು ಕುಷ್ಟರೋಗಿಯೂ (ಯಾರ ಶರೀರದ ಚರ್ಮವು ಸೀಳಿಕೊಂಡು–ಸ್ವಲ್ಪ ಸ್ವಲ್ಪವಾಗಿಯೇ ಉದುರುತ್ತಿರುತ್ತದೋ, ಅದರಿಂದ ರಕ್ತವು ಬರುತ್ತಿರುತ್ತದೋ) ಸಹ ಮಾಡುತ್ತಾನೆಂದರೆ ಬಹಳ ಒಳ್ಳೆಯದು. ಭಕ್ತಿ ಮಾಡುವುದರಿಂದ ಅವನ ಕುಷ್ಟರೋಗವೂ ಸಹ ನಿವಾರಣೆಯಾಗುವುದು. ಭವಿಷ್ಯವು ಉಜ್ವಲವಾಗುವುದು. ಯಾರು ಭಕ್ತಿ ಮಾಡುವುದಿಲ್ಲವೋ, ಅವರು ಎಷ್ಟೇ ಸುಂದರವಾಗಿದ್ದರೂ, ಆ ಸುಂದರ, ಆರೋಗ್ಯ ಶರೀರವು ಯಾವ ಕೆಲಸಕ್ಕೂ ಬರುವುದಿಲ್ಲ.

❖ ಮಾನವ ಶರೀರವು ಯಾವಾಗ, ಯಾವ ಕಾರಣಕ್ಕೆ, ಎಲ್ಲಿ ನಾಶವಾಗುವುದೋ ಯಾರಿಗೆ ಗೊತ್ತು? ಅದನ್ನು ಕಾಪಾಡಿಕೊಂಡಿರಲು ಸಾಧ್ಯವಿಲ್ಲ. ಇದಕ್ಕೆ ಒಂದೇ ಉಪಾಯವೆಂದರೆ ಭಕ್ತಿ ಮಾಡು. ಒಂದು ಉಸಿರೂ ಸಹ ನಾಮಸ್ಮರಣೆಯ ವಿನಃ ಹಾಗೆ ವ್ಯರ್ಥವಾಗದಂತೆ ನಾಮಸ್ಮರಣೆ ಮಾಡು.

❖ ಉಸಿರು ತೆಗೆದುಕೊಳ್ಳುವಾಗ, ಉಸಿರು ಬಿಡುವಾಗ ಅಂದರೆ ಪ್ರತಿಯೊಂದು ಉಸಿರಿನಲ್ಲೂ ನಾಮಸ್ಮರಣೆ ಮಾಡು. ನಾಮಸ್ಮರಣೆ ಇಲ್ಲದೆ ಉಸಿರನ್ನು ವ್ಯರ್ಥ ಮಾಡಬೇಡ. ಒಳಗಡೆ ಹೋಗಿರುವ ಉಸಿರಿಗೆ ತಾನು ಹೊರ ಬರುವೆನೆಂಬ ನಂಬಿಕೆಯೂ ಇಲ್ಲ. ಆದ್ದರಿಂದ ವ್ಯರ್ಥಗೊಳಿಸದೆ ಭಕ್ತಿಯಲ್ಲಿ ತೊಡಗು.

❖ ನಿಮ್ಮ ಬಳಿ ಹಣವಿದ್ದರೂ, ಸಕಲ ಸೌಕರ್ಯಗಳಿದ್ದರೂ ಭಕ್ತಿಯನ್ನು ಮರೆಯಬೇಡಿ. ಶ್ರೀಲಂಕೆಯ ರಾಜನಾದ ರಾವಣನ ಬಳಿ ಬಹಳ ಹಣವಿತ್ತು. ಅವನು ಚಿನ್ನದ ಅರಮನೆ ಕಟ್ಟಿದ್ದನು. ಅವನು ಸ್ವತಃ ವೀರನಾಗಿದ್ದನು. ಆದರೆ ಶ್ರೀ ರಾಮಚಂದ್ರನ ಜೊತೆ ಯುದ್ಧವಾಯಿತು. ಆಗ ಅವನು ಸತ್ತು ಹೋದ, ಚಿನ್ನವೆಲ್ಲಾ ಲೂಟಿ ಆಯಿತು, ರಾಜ್ಯವೂ ಹೋಯಿತು. ಇದೆಲ್ಲವೂ ಒಂದು ಕ್ಷಣಮಾತ್ರದಲ್ಲಿ ಆಗಿ ಹೋಯಿತು. ಅಂದರೆ ರಾಮನ ಬಾಣದಿಂದ ರಾವಣನು ಸತ್ತು ಹೋದನು. ಸ್ವಲ್ಪ ಸಮಯದಲ್ಲೇ ಎಲ್ಲವೂ ನಾಶವಾಯಿತು. ಯಮದೂತನು ಅಂದರೆ ಮೃತ್ಯು ದೇವತೆಯ ಸೇವಕರು ಆ ರಾವಣನನ್ನು ಸರಪಳಿಯಲ್ಲಿ ಬಂಧಿಸಿ ಎಳೆದುಕೊಂಡು ಹೋದರು. ನರಕಕ್ಕೆ ಹಾಕಲಾಯಿತು.

❖ ರಾವಣನಂಥಾ ಧೀರನು (ಶೂರವೀರನು) ಮಣ್ಣುಪಾಲಾದನು. ಮಥುರೆಯ ರಾಜನಾದ ಕಂಸ, ಅವನ ಪ್ರಸಿದ್ಧ ಕುಸ್ತಿಪಟುವಾದ ಚಾಣೂರ್, ಕಂಸನ ಸೇವಕನಾದ ಕೇಶಿ ಎಂಬ ರಾಕ್ಷಸ ಮತ್ತು ಹಿರಣ್ಯಕಶಪುವಿನಂಥಾ ಶಕ್ತಿಶಾಲಿಗಳು ಭಕ್ತಿ ಮಾಡದೆ ತಮ್ಮ ಜೀವನವನ್ನು ನಾಶಮಾಡಿಕೊಂಡರು. ಹೇ ಸಾಮಾನ್ಯ ಮನುಷ್ಯ! ನಿನ್ನದ್ಯಾವ ಲೆಕ್ಕ? ಅಂದರೆ ನೀನು ಯಾವ ಆಧಾರದಿಂದ ಉಳಿದುಕೊಳ್ಳುವೆ? ನೀನು ಕರ್ಮಗಳಿಗೆ ಅನುಸಾರವಾಗಿ ಬೇರೆ ಬೇರೆ ಜೀವಿಗಳ ಶರೀರವನ್ನು ಪಡೆಯುವೆ. ಸಂತ ಗರೀಬ್‌ದಾಸರು ಕಬೀರ ಪರಮೇಶ್ವರರ ಮೂಲಕ ತಿಳಿಸಿದ ಜ್ಞಾನದಿಂದ ಹೇಳುವುದೇನೆಂದರೆ, ಭಕ್ತಿ ಮಾಡದಿದ್ದರೆ ನಿನಗೆ ಎಷ್ಟು ಹಾನಿಯಾಗುವುದು ಅಂದರೆ ರೈತನು ಬೀಜವನ್ನು ಬಿತ್ತದಿದ್ದರೆ ಹಸಿವಿನಿಂದ ಸಾಯುತ್ತಾನೆ. ಅದರಿಂದ ಏನು ಲಾಭವಾಗುವುದಿಲ್ಲ.

ಪುಹಲೋಬಾಈಯು ಈ ಪ್ರಪಂಚದ ವಾಸ್ತವಿಕತೆಯನ್ನು ತಿಳಿಸಿದಳು ಹಾಗೂ ಭಕ್ತಿ ಮಾಡದಿದ್ದರೆ ಬರುವ ಕಷ್ಟವನ್ನು ತಿಳಿಸಿದಳು. ಒಂದು ಸಣ್ಣ ರಾಜ್ಯಗಳಿಸಿದ್ದಕ್ಕೆ ಇಷ್ಟು ಅಹಂಕಾರ ಪಡುವಿರಲ್ಲಾ, ಇದು ವ್ಯರ್ಥವಾಗಿದೆ, ಲಂಕೆಯ ರಾಜ ರಾವಣನು ಚಿನ್ನದ ಅರಮನೆಯನ್ನೇ ಕಟ್ಟಿಸಿದ್ದನು. ಆದರೆ ಸತ್ಯಭಕ್ತಿ ಮಾಡದ ಕಾರಣ ರಾಜ್ಯವೂ ಉಳಿಯಲಿಲ್ಲ, ಚಿನ್ನವೂ ಹೋಯಿತು. ಮೇಲಾಗಿ ಅವನು ನರಕಕ್ಕೆ ಹೋದನು. ಪುಹಲೋಬಾಈಯ ಸತ್ಸಂಗವನ್ನು ಕೇಳಿದ ರಾಜ, ರಾಣಿಯರು ಭಕ್ತಿಮಾಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡರು.

ಕಬೀರ್, ಹರಿ ಕೇ ನಾಮ್ ಬಿನ್, ರಾಜಾ ರಷಭ್ ಹೋಯ್ ।
ಮಿಟ್ಟೀ ಲದೇ ಕುಮ್ಹಾರ್ ಕೇ, ಘಾಸ್ ನ ನೀರೈ ಕೋಎ ॥

ಪರಮಾತ್ಮನ ಭಕ್ತಿ ಮಾಡದಿದ್ದರೆ ರಾಜನು ಕತ್ತೆಯ ಜನ್ಮ ತಾಳುತ್ತಾನೆ. ಕುಂಬಾರನ ಮನೆಯಲ್ಲಿ ಮಣ್ಣು ಹೊರುತ್ತಾನೆ. ಸ್ವತಃ ಕಾಡಿಗೆ ಹೋಗಿ ಹುಲ್ಲು ತಿನ್ನುತ್ತಾನೆ.

ಫಿರ್ ಪೀಛೇ ತೂ ಪಶುವಾ ಕಿಜೈ, ದೀಜೈ ಬೈಲ್ ಬನಾಯ್ ।
ಚಾರ್ ಪಹರ್ ಜಂಗಲ್ ಮೆಂ ಡೋಲೇ, ತೋ ನಹೀಂ ಉದರ್ ಭರಾಯ್ ॥
ಸಿರ್ ಪರ್ ಸೀಂಗ್ ದಿಎ ಮನ್ ಬೌರೇ, ದೂಮ್ ಸೇ ಮಚ್ಛರ್ ಉಡಾಯ್ ।
ಕಾಂಧೈ ಜೂಆ ಜೋತೈ ಕೂಆ, ಕೋಂದೋಂ ಕಾ ಭುಸ್ ಖಾಯ್ ॥

ಭಾವಾರ್ಥ :– ಕತ್ತೆಯ ಜನ್ಮ ಪೂರ್ತಿಯಾದ ನಂತರ ಎತ್ತಾಗಿ ಹುಟ್ಟುತ್ತಾನೆ. ಮಾನವ ಶರೀರದಲ್ಲಿದ್ದಾಗ ಜೀವಾತ್ಮಾಗೆ ಎಷ್ಟೊಂದು ಸೌಲಭ್ಯಗಳಿದ್ದವು? ಹಸಿವಾದಾಗ ಊಟ ಮಾಡು, ಹಾಲು ಕುಡಿ, ಚಹಾ ಕುಡಿ, ಬಾಯಾರಿಕೆಯಾದಾಗ ನೀರು ಕುಡಿ. ಅದೇ ಭಕ್ತಿ ಮಾಡದೆ ಅವನು ಎತ್ತಾಗಿ ಹುಟ್ಟಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ನಾಲ್ಕು ಹೊತ್ತು ಅಂದರೆ 12 ಗಂಟೆಗಳೂ ಕಾಡಿನಲ್ಲಿ ಅಲೆಯಬೇಕು, ಹೊಲ ಊಳಬೇಕು. ದಿನದಲ್ಲಿ ಎರಡು ಬಾರಿ ಮಾತ್ರ ಊಟ ಸಿಗುತ್ತದೆ. ಮಧ್ಯಾಹ್ನ

12 ಗಂಟೆಗೆ ಮತ್ತು ರಾತ್ರಿ. ಅದರೆ ಎತ್ತಿಗೆ ಮಧ್ಯದಲ್ಲಿ ಹಸಿವಾಗಿದೆ ಮತ್ತು ಸುತ್ತಮುತ್ತಲು ಮೇವು ಇದೆ. ಆದರೆ ತಿನ್ನಲು ಸಾಧ್ಯವಿಲ್ಲ, ಉಳ್ಳುವವನು ಅದಕ್ಕೆ ಮೇವು ತಿನ್ನಲು ಬಿಡುವುದಿಲ್ಲ. ನೀರು ಕೂಡಾ ಸಮಯಕ್ಕೆ ಸರಿಯಾಗಿ ದಿನದಲ್ಲಿ 2 ಅಥವಾ 3 ಬಾರಿ ಕುಡಿಸುತ್ತಾರೆ. ತಲೆಯ ಮೇಲೆ ಎರಡು ಕೊಂಬು ಮತ್ತು ಒಂದು ಬಾಲ ಇಟ್ಟುಕೊಂಡು ತಿರುಗಬೇಕು. ಮನುಷ್ಯನಾಗಿದ್ದಾಗ ಕೂಲರ್, ಫ್ಯಾನ್, ಎ.ಸಿ. ಎಲ್ಲವೂ ಇತ್ತು. ಈಗ ಬಾಲವಿದೆ. ಈಗ ಅದನ್ನೇ ಕೂಲರ್ ಅಥವಾ ಫ್ಯಾನ್ ಬದಲಿಗೆ ಪ್ರಯೋಗಿಸು, ಅದರಿಂದಲೇ ಸೊಳ್ಳೆಗಳನ್ನು ಓಡಿಸುತ್ತಾನೆ.

❖ ಪರಮಾತ್ಮನ ವಿಧಾನವನ್ನು ಅನುಸರಿಸದೇ ಸಾಂಸಾರಿಕ ಭಾವದಿಂದ ನಡೆದರೆ ನರಕವೇ ಗತಿ ಎಂದು ಸತ್ಸಂಗದಲ್ಲಿ ಹೇಳಿಕೊಡಲಾಗುತ್ತದೆ. ಮನೆಯ ಯಾವುದೇ ಸದಸ್ಯನು ಮನೆಯಲ್ಲಿ ಹಾನಿಯಾಗಬೇಕೆಂದು ಇಷ್ಟಪಡಲ್ಲ. ಯಾವುದೋ ಕಾರಣದಿಂದ, ಮನೆಯಲ್ಲಿ ಏನಾದರೂ ನಷ್ಟವಾದರೆ ಅದರ ವಿಷಯವಾಗಿ ಜಗಳವಾಡಕೂಡದು. ಏನು ನಷ್ಟವಾಗುವುದಿತ್ತು, ಅದು ಆಗಿದೆ, ಅದಂತು ಈಗ ಸರಿಯಾಗದು. ವ್ಯರ್ಥ ಜಗಳಮಾಡುವುದು ಸರಿಯಲ್ಲ. ಯಾರಿಂದಾದರೂ ತಪ್ಪಿ ನಷ್ಟವಾದರೆ ಅವರಿಗೆ ಹೇಳಬೇಕು ಹೇ ಮಗ–ಮಗಳೇ, ತಂದೆ–ತಾಯಿ ಅಥವಾ ಅತ್ತೆ–ಸೊಸೆ, ಇದು ನಮ್ಮ ಭಾಗ್ಯದಲ್ಲಿ ಇರಲಿಲ್ಲ, ನೀವು ಬೇಕಂತಲೆ ಮಾಡಿಲ್ಲ ಹಾಗಾಗಿ ಮನೆಯಲ್ಲಿ ಶಾಂತಿ ನೆಲೆಸುತ್ತದೆ. ಜಗಳದಲ್ಲಿ ಕಾಲ ವಾಸಿಸುತ್ತಾನೆ. ಭೂತ–ಪ್ರೇತಗಳು ಆ ಮನೆಯಲ್ಲಿರುತ್ತವೆ. ಯಾರು ಜಗಳವಾಡುವುದಿಲ್ಲವೋ, ಅವರು ಸುಖದಿಂದ ನೆಲೆಸುತ್ತಾರೆ. ಯಾರ ಮನೆಯಲ್ಲಿ ಪರಮಾತ್ಮನ ಭಕ್ತಿ (ಆರತಿ–ಸ್ತುತಿ ಹೋಮ, ಹವನಗಳು) ನಡೆಯುತ್ತದೆ, ಆ ಮನೆಯಲ್ಲಿ ದೇವತೆಗಳು ನೆಲೆಸುತ್ತಾರೆ.

ಸತ್ಸಂಗ ಕೇಳಿ ಎಲ್ಲರೂ ತಮ್ಮ–ತಮ್ಮ ಮನೆಗೆ ಹೋದರು. ಸತ್ಸಂಗವು ದಿನದ 12 ಗಂಟೆಯಿಂದ 2 ಗಂಟೆಯವರೆಗೆ ಸತ್ಸಂಗ ನಡೆಯಿತು. ಅತ್ತೆ ಸತ್ಸಂಗಕ್ಕೆ ಹೋಗಿದ್ದು ಸೊಸೆಗೆ ಗೊತ್ತಿರಲಿಲ್ಲ. ಮರುದಿನ ಬೆಳಿಗ್ಗೆ ಎದ್ದು ಎಮ್ಮೆಯ ಹಾಲನ್ನು ಕರೆದ ಸೊಸೆ ಆ ಹಾಲಿನಿಂದ ತುಂಬಿದ ಆ ಪಾತ್ರೆಯನ್ನು ಮೇಲೆ ನೇತುಹಾಕುತ್ತಿದ್ದಳು. ಅವಳು ಪಾತ್ರೆಯು ನೇತಾಡಿದೆ ಎಂದು ಭಾವಿಸಿದಳು. ಆದರೆ ಆ ಪಾತ್ರೆ ಸಿಕ್ಕಿಕೊಳ್ಳದ ಕಾರಣ ಅದು ನೆಲದ ಮೇಲೆ ಬಿದ್ದು ಹಾಲೆಲ್ಲಾ ಚೆಲ್ಲಿ ಹೋಯಿತು. ಶಬ್ದ ಕೇಳಿ ಭತೆರೀ ಬಂದಳು. ಆಗ ಸೊಸೆ ಹಾಲು ಕಡೆ ನೋಡದೆ ಅತ್ತೆಯ ಕಡೆ ಮುಖ ಸಪ್ಪೆ ಮಾಡಿ ನೋಡುತ್ತಿದ್ದಳು. ಅತ್ತೆ ಯಾವ ಮಾತನ್ನೂ ಕೇಳುವುದಿಲ್ಲ ಆದ್ದರಿಂದ ಕಾರಣ ಹೇಳುವುದು ಸೂಕ್ತವಲ್ಲವೆಂದು ತಿಳಿದಳು. ಹೇ ದೇವರೆ, ಇದೇನಾಯಿತು? ಈ ರೀತಿ ಯಾವತ್ತೂ ಆಗಿರಲಿಲ್ಲ. ಹೇ ಸದ್ಗುರು, ಇಂದಿನ ಇಡೀ ದಿನ ಜಗಳದಲ್ಲಿ ಹೋಗುವುದೆಂದು ಚಿಂತಿಸುತ್ತಿದ್ದಳು. ಸಂಜೆ ಗಂಡ ಬರುವನು ಅವನಿಗೂ ಹೊಡೆಯಲು ಹೇಳುವಳು. ಪರಮಾತ್ಮ ಇದೇನಾಯ್ತು? ಇಂಥ ತಪ್ಪು ಎಂದಿಗೂ ಆಗಿರಲಿಲ್ಲ. ಹೇ ಸತ್ಗುರು ನನ್ನ ಮೇಲೆ ದಯೆತೋರು. ನಾನಂತು ನಿಮ್ಮ ಭಕ್ತಿ ಕೂಡಾ ಮರೆತು ಹೋಗುವ ಸ್ಥಿತಿಯಲ್ಲಿದ್ದೇನೆ, ನನಗಂತು ದಿನವೆಲ್ಲಾ ಅತ್ತೆಯ ಶ್ಲೋಕಗಳು ನೆನಪಿರುತ್ತವೆ ಎಂದು ಅಳತೊಡಗಿದಳು. ಆದರೆ ಭತೆರೀ ಬಂದು, ಮಗಳೇ, ಏನಾಗಬೇಕಿತ್ತೋ, ಅದಾಗಿದೆ. ಈ ದಿನ ನಮ್ಮ ಹಣೆಬರಹದಲ್ಲಿ ಹಾಲು ಬರೆದಿಲ್ಲ. ಚಿಂತೆ ಮಾಡಬೇಡ, ಚೆಲ್ಲಿರುವ ಹಾಲನ್ನು ಮೇಲಿನಿಂದ ತೆಗೆದು ಪಾತ್ರೆಯಲ್ಲಿ ಹಾಕಿಕೊಂಡು ದನಕರುಗಳಿಗೆ ಕುಡಿಸಿಬಿಡು" ಎಂದು ಹೇಳುತ್ತಾ, ನಾಮದೀಕ್ಷೆ ಪಡೆದ ಮಂತ್ರವನ್ನು ಜಪಿಸತೊಡಗಿದಳು. ಸೊಸೆಗೆ ತನ್ನ ಕಿವಿಯನ್ನೇ ನಂಬಲಾಗಲಿಲ್ಲ. ಅತ್ತೆ ಇಂದು ಯಾವ ಸ್ಟೇಷನ್ (ರೇಡಿಯೋ ಆಕಾಶವಾಣಿ) ಹಿಡಿದಳೆಂದು ಯೋಚಿಸುತ್ತಿದ್ದಳು. ಅತ್ತೆಯ ಮನಸ್ಸೆಂಬ ಖಜಾನೆಯಲ್ಲಿ ಇಂಥಾ ನುಡಿಮುತ್ತುಗಳಿರಲಿಲ್ಲ. ಇವಳಲ್ಲಂತು ದುಷ್ಟತನ ತುಂಬಿತ್ತು, ಅಕ್ಕ–ಪಕ್ಕದಿಂದ ಹೋಗುವಾಗಲೂ ಬಡಬಡಿಸುತ್ತಿದ್ದಳು. ಸೊಸೆಯ ಹೆಸರು ನಿಶಾ ಇತ್ತು. ಅವಳು ಯೋಚಿಸುತ್ತಿದ್ದಳೆನೆಂದರೆ:– ನಿಶಾ ಇಂದು ರಾತ್ರಿಯಲ್ಲಿ ನಿನ್ನ ಸ್ಥಿತಿ ಕೆಡುವುದು.

ಗಂಡನಿಗೆ ಹೇಳುವಳೆಂದು ನಿಶಾ ಯೋಚಿಸುತ್ತಿದ್ದಳು. ಅವನು ತಾಯಿಯ ಮಾತು ಕೇಳಿ ನನ್ನ ಮಾತು ಕೇಳುವುದಿಲ್ಲ. ಏನಾದರೂ ಒಳ್ಳೆಯದು ಕೆಟ್ಟದು ಹೇಳುವನು. ಇಡೀ ದಿನ ಮತ್ತು ರಾತ್ರಿ ಅಳುವುದರಲ್ಲಿ ಹೋಗುವುದು. ನಿಶಾ ಹಾಲು ಬಕೆಟ್‌ನಲ್ಲಿ ಹಾಕಿ ಎಮ್ಮೆಗೆ ಕುಡಿಸಿದಳು. ಬಕೆಟ್

ತೊಳೆದು ಇಟ್ಟಳು. ಭತೆರೀ ಸೊಸೆಯ ಬಳಿ ಬಂದು 'ಮಗಳೇ ಊಟ ಮಾಡಿಕೊ, ಚಿಂತಿಸಬೇಡ. ಮಗಳೇ ನಾನು ನಿನ್ನೆ ನನ್ನ ತಂಗಿ ದಯಾಕೌರ್‌ನೊಂದಿಗೆ ಸತ್ಸಂಗಕ್ಕೆ ಹೋಗಿದ್ದೆ, ನನ್ನ ಕಣ್ಣು ತೆರೆಯಿತು. ನಾನು ಬಹಳ ಜಗಳಗಂಟಿಯಾಗಿದ್ದೇ, ನನ್ನನ್ನು ಕ್ಷಮಿಸಿಬಿಡು. ಮೊದಲು ಏನಾಯ್ತು ಅದು ಆಗಿ ಹೊಯ್ತು. ಇಂದಿನಿಂದ ನನ್ನ ಮಗಳನ್ನು ಬಹಳ ಸುಖವಾಗಿಡುವೆ. ನೀನೇ ನನ್ನ ನಿಜವಾದ ಮಗಳು, ಜನ್ಮ ನೀಡಿದ ಮಗಳಂತು ಮದುವೆಯಾಗಿ ಬೇರೆಯವರ ಮನೆ ಬೆಳಗಿಸಲು ಹೋಗಿದ್ದಾಳೆ. ಒಂದೇ ದಿನದ ಸತ್ಸಂಗದಿಂದ ನನ್ನ ಕಣ್ಣು ತೆರೆಯಿತು. ಮಗಳು ಹೇಳಿದಳು, ಮುಂದಿನ ಭಾನುವಾರ ತಾವೂ ಸತ್ಸಂಗಕ್ಕೆ ಬನ್ನಿ. ಅತ್ತೆ ಹೇಳಿದಳು, ನಾನು ಬರುವೆ. ಸ್ವಲ್ಪ ದಿನದ ನಂತರ ಮಗನನ್ನು ಕರೆದುಕೊಂಡು ಹೋಗೋಣ" ಎಂದಳು. ನಿಶಾ ತನ್ನ ಗುರುಗಳ ಫೋಟೋ ಬಟ್ಟೆಯಲ್ಲಿ ಮುಚ್ಚಿಟ್ಟಿದ್ದಳು. ಫೋಟೋ ತೆಗೆದು ಅವರ ಕಾಲುಗಳನ್ನು ಮುಟ್ಟಿ ನಮಸ್ಕರಿಸುತ್ತಾ, ಹೇಳಿದಳು, "ಗುರುಗಳೇ ಇಂದು ನೀವು ನಿಮ್ಮ ಮಗಳ ಕೂಗನ್ನು ಕೇಳಿದಿರಿ. ಮನೆಯನ್ನು ಸ್ವರ್ಗವನ್ನಾಗಿ ಮಾಡಿದಿರಿ" ಎಂದಳು.

ಸಂಜೆ ಚತ್ತರ್ ಸಿಂಗ್ ಬಂದನು. ತಾಯಿ ಹಾಲು ಚೆಲ್ಲಿದ ಬಗ್ಗೆ ಹೇಳಲಿಲ್ಲ. ಸ್ವಲ್ಪ ಸಮಯದ ನಂತರ ಸೊಸೆಯ ಗುರುಗಳು ಬಂದರು, ಕೆಲವು ದಿನಗಳ ನಂತರ ಚತ್ತರ್ ಸಿಂಗ್ ನಿಗೂ ನಾಮದೀಕ್ಷೆ ಕೊಡಿಸಿದರು. ಸ್ವಲ್ಪ ಸಮಯದ ನಂತರ ನಿಶಾಳ ಗುರುಗಳು ಬಂದರು. ನಿಶಾ ಹೇಳಿದಳೆಂದರೆ ಗುರುಗಳೇ ನನ್ನ ಅತ್ತೆ ಬಹಳ ಒಳ್ಳೆಯವಳು. ಇವಳು ಗುರುವಿನಿಂದ ನಾಮದೀಕ್ಷೆ ಪಡೆದಿದ್ದಾಳೆ. ಭತೆರೀ ಹೇಳಿದಳು "ಗುರುಗಳೇ, ನಿಶಾ ದೀಕ್ಷೆ ಪಡೆದ ವಿಷಯ ನನ್ನ ಬಳಿ ಯಾವತ್ತೂ ಹೇಳಲೇ ಇಲ್ಲ. ನನ್ನ ಜಗಳದಿಂದ ಭಯ ಪಟ್ಟಿರಬೇಕು" ಎಂದಳು. ನಾನು ನಾಮದೀಕ್ಷೆ ಪಡೆದ ಬಳಿಕ ಈಗ ಹೇಳಿದ್ದಾಳೆ. ಇವಳು ಒಳ್ಳೆಯದೇ ಮಾಡಿದಳು, ಒಂದುವೇಳೆ ಮೊದಲೇ ಹೇಳಿದಿದ್ದರೆ ನಾನು ಇನ್ನು ಅಧಿಕ ದುಃಖಿ ಮಾಡುತ್ತಿದ್ದೆ ಮತ್ತು ಪಾಪದ ಭಾಗಿಯಾಗುತ್ತಿದ್ದೆ. ಆಗ ನಿಶಾಳ ಗುರುಗಳು ಹೇಳಿದರು, ಅಮ್ಮ! ಭತೆರೀ ನೀನಂತು ಬಾಂಡ್ಲಿಯಿಂದ ಜಾರಿ ಬೆಂಕಿಯಲ್ಲಿ ಬಿದ್ದಿದಿಯಾ ಏಕೆಂದರೆ ನೀನು ಪಡೆದ ದೀಕ್ಷೆ ಶಾಸ್ತ್ರಾನುಸಾರವಿಲ್ಲ. ಸತ್ಯ ಸಾಧನೆಯ ವಿನಃ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಹೇಗೆ ಸರಿಯಾದ ಔಷಧಿ ತಿಂದರೆ ರೋಗ ವಾಸಿಯಾಗುವುದೋ ಹಾಗೆ ಸತ್ಯ ಸಾಧನೆಯಿಂದಲೇ ಜನ್ಮ-ಮರಣದ ರೋಗ ನಿವಾರಣೆಯಾಗುತ್ತದೆ" ಅತ್ತೆ ಕೋಪಗೊಳ್ಳುವಳೆಂದು ಯೋಚಿಸಿ ನಿಶಾ ಮಧ್ಯದಲ್ಲೇ ಹೇಳತೊಡಗಿದಳು "ಗುರುಗಳೇ ನೀವು ಒಂದು ಹೊಸ ಪುಸ್ತಕವನ್ನು ಬರೆದಿದ್ದೀರಿ ಎಂದು ತಿಳಿಯಿತು. ಅದು ಮುದ್ರಣಗೊಂಡಿದೆಯಂತೆ, ನಿಮ್ಮ ಬಳಿ ಇದೆಯೇನು?" ಆಗ ಗುರುಗಳೆಂದರು, "ಇದೆ ಮಗಳೇ, ನಾನು ನಿಮಗೆ ಕೊಡಲೆಂದೇ ಬಂದಿರುವೆ ಎಂದು ಹೇಳಿ, ಗುರುಗಳು ಬೇರೆ ಕೋಣೆಗೆ ಹೋದರು, ಅಲ್ಲಿ ಜೋಳಿಗೆ ಇಟ್ಟಿದ್ದರು. ನಿಶಾ ಕೂಡಾ ಜೊತೆಗೆ ಹೋದಳು ಮತ್ತು ಹೇಳಿದಳು ಗುರುಗಳೇ ಕಣಜ ಗೂಡನ್ನು ಕೆಣಕಬೇಡಿ, ಕಠಿಣದಿಂದ ಶಾಂತವಾಗಿದೆ. ಗುರುಗಳು ನಿಮ್ಮ ಅತ್ತೆಯ ಗಮನ ಈಗ ಸಂಪೂರ್ಣವಾಗಿ ಭಕ್ತಿಯ ಕಡೆಗಿದೆ. ಅವಳು ತತ್ವಜ್ಞಾನವನ್ನು ಕೇಳುವಳು" ಎಂದರು. ಮೂರು ದಿನ ಗುರುಗಳು ಅಲ್ಲೇ ಇದ್ದು, ತತ್ವಜ್ಞಾನವನ್ನು ತಿಳಿಸಿದರು. ಭತೆರೀ ಕೂಡಾ ಗುರುವನ್ನು ಬದಲಿಸಿಕೊಂಡಳು ಹಾಗೂ ತನ್ನ ಉದ್ಧಾರ ಮಾಡಿಕೊಂಡಳು. ಸತ್ಸಂಗದಿಂದ ಮನೆ ಸ್ವರ್ಗವಾಯಿತು. ಎಲ್ಲೆಲ್ಲೂ ಶಾಂತಿ ನೆಲೆಸಿತು. ಎಲ್ಲಿ ಇಡೀ ದಿನ ಬೈಗುಳಗಳ ಗುಂಡು ಹಾರುತ್ತಿತ್ತು ಈಗ ಆ ಮನೆಯಲ್ಲಿ ಪರಮಾತ್ಮನ ಜ್ಞಾನದ ಗಂಗೆ ಹರಿಯುತ್ತಿದ್ದಾಳೆ.

ಭಕ್ತೆ ನಿಶಾಳ ಗುರು, ಪರಮೇಶ್ವರ ಕಬೀರರೇ ಆಗಿದ್ದರು. ಎಲ್ಲಾ ಕಡೆಯೂ ಸತ್ಯ ಭಕ್ತಿಯ ಪ್ರಚಾರ ಮಾಡಲು ಅನ್ಯರೂಪ ಧರಿಸಿಕೊಂಡು ತಿರುಗಾಡುತ್ತಿದ್ದರು. ಯಾವ ಪ್ರಭುವಿನ ಭಕ್ತಿ ಮಾಡಬೇಕೆಂದು ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಇದೇ ಪುಸ್ತಕದ "ಯಾವ ಪ್ರಭುವನ್ನು ಆರಾಧಿಸಬೇಕು, ಗೀತೆಯ ಪ್ರಕಾರ" ಎಂಬ ಹೆಡ್ಡಿಂಗ್‌ನಲ್ಲಿ ಓದಿರಿ.

ನಿಷ್ಕರ್ಷೆ:- ಕಬೀರ್ ಪರಮೇಶ್ವರರು ಹೇಳಿದ್ದಾರೆ:-


ಮನ್ ನೇಕೀ ಕರ್ ಲೇ, ದೋ ದಿನ್ ಕಾ ಮೆಹಮಾನ್ ॥ಟೇಕ್॥

ಮಾತ-ಪಿತಾ ತೇರಾ ಕುಟಮ್ ಕಬೀಲಾ, ಕೋಎ ದಿನ್ ಕಾ ರಲ್ ಮಿಲ್ ಕಾ ಮೇಲಾ ।
ಅಂತ್ ಸಮಯ್ ಉಠ್ ಚಲೆ ಅಕೇಲಾ, ತಜ್ ಮಾಯಾ ಮಂಡಾನ್ ॥1॥
ಕಹಾಂ ಸೆ ಆಯಾ, ಕಹಾಂ ಜಾಎಗಾ, ತನ್ ಛೂಟ್ಯೈ ತಬ್ ಕಹಾಂ ಸಮಾಎಗಾ ।
ಆಖಿರ್ ತುಝ್‌ಕೋ ಕೌನ್ ಕಹೇಗಾ, ಗುರು ಬಿನ್ ಆತ್ಮ್ ಜ್ಞಾನ್ ॥2॥
ಕೌನ್ ತುಮ್ಹಾರಾ ಸಚ್ಚಾ ಸಾಯೀ, ಝೂಠೀ ಹೈ ಯೆ ಸಕಲ್ ಸಗಾಯೀ ।
ಚಲ್‌ನೇ ಸೆ ಪಹಲೇ ಸೋಚ್ ರೇ ಭಾಯೀ, ಕಹಾಂ ಕರೇಗಾ ವಿಶ್ರಾಮ್ ॥3॥
ರಹಟ್ ಮಾಲ್ ಪನಘಟ್ ಜ್ಯೋಂ ಭರಿತಾ, ಆವತ್ ಜಾತ್ ಭರ್ರೈ ಕರ್ರೈ ರೀತಾ ।
ಜುಗನ್-ಜುಗನ್ ತೂ ಮರ್‌ತಾ ಜೀತಾ, ಕರವಾ ಲೇ ರೇ ಕಲ್ಯಾಣ್ ॥4॥
ಲಖ್-ಚೌರಾಸೀ ಕೀ ಸಹ್ ತ್ರಾಸಾ, ಊಂಚ್-ನೀಚ್ ಘರ್ ಲೇತಾ ಬಾಸಾ ।
ಕಹ್ ಕಬೀರ್ ಸಬ್ ಮಿಟಾಊಂ, ರಾಸಾ ಕರ್ ಮೇರೀ ಪಹಚಾನ್ ॥5॥

**ಭಾವಾರ್ಥ:-** ಪರಮೇಶ್ವರ ಕಬೀರರು ತಮ್ಮ ಮನಸ್ಸನ್ನು ಸಂಬೋಧಿಸುತ್ತಾ ಜೀವಾತ್ಮಗಳಾದ ನಮಗೆ ಎಚ್ಚರಿಸಿದ್ದಾರೆ. ನಾವು ಈ ಪ್ರಪಂಚದಲ್ಲಿ ಎರಡು ದಿನದ ಅಂದರೆ ಸ್ವಲ್ಪ ಸಮಯದ ಅತಿಥಿಗಳು. ಸ್ವಲ್ಪ ಹೊತ್ತಿನ ಮಾನವ ಜೀವನದಲ್ಲಿ ಆತ್ಮಜ್ಞಾನದ ಅಭಾವದಿಂದ ಅನೇಕ ಪಾಪಗಳ ಮೂಟೆ ಕಟ್ಟಿಕೊಂಡು ಅಮೂಲ್ಯವಾದ ಮಾನವ ಜೀವನವನ್ನು ನಷ್ಟ ಮಾಡಿಕೊಳ್ಳುತ್ತೇವೆ. ಹಣ ಸಂಪಾದಿಸುವುದನ್ನು ಪ್ರಪಂಚದಲ್ಲಿ ಯಾರು ಬೇಕಾದರೂ ತಿಳಿಸಿಕೊಡುತ್ತಾರೆ. ಆದರೆ ಗುರುಗಳಿಲ್ಲದೆ ಆತ್ಮಜ್ಞಾನ ಅಂದರೆ ಜೀವಾತ್ಮ ಎಲ್ಲಿಂದ ಬಂದಿತು? ಮನುಷ್ಯ ಜೀವನದ ಮೂಲ ಉದ್ದೇಶವೇನು? ಪೂರ್ಣ ಗುರುವನ್ನು ಧರಿಸದಿದ್ದರೆ ಅಂದರೆ ದೀಕ್ಷೆ ತೆಗೆದುಕೊಳ್ಳದಿದ್ದರೆ ಮಾನವ ಜೀವನವು ನಷ್ಟವಾಗುತ್ತದೆ? ಈ ಮಾತನ್ನು ಗುರುವಿನ ಹೊರತು ಯಾರು ಹೇಳುವುದಿಲ್ಲ. ಬೇಕಾದರೆ ಪೃಥ್ವಿಯ ರಾಜನಾಗಿದ್ದರೂ ಸರಿ, ಆದರೆ ಭವಿಷ್ಯದಲ್ಲಿ ಪಶುವಿನ ಜನ್ಮ ತಾಳಬೇಕಾಗುವುದು. ಗುರುವಿನಿಂದ ಜ್ಞಾನ ಹಾಗೂ ದೀಕ್ಷೆಯ ಮಂತ್ರವನ್ನು ಪಡೆಯದಿದ್ದರೆ ಜನನ-ಮರಣದ ಚಕ್ರವು ಅಂತ್ಯವಾಗುವುದಿಲ್ಲ.

ಯಹ್ ಜೀವನ್ ಹರಹಟ್ ಕಾ ಕುಂಆ ಲೋಈ । ಯಾ ಗಲ್ ಬಂಧಾ ಹೈ ಸಬ್ ಕೋಈ ॥
ಕೀಡೀ-ಕುಂಜರ್ ಔರ್ ಅವತಾರಾ । ಹರಹಟ್ ಡೋರ್ ಬಂಧೇ ಕಈ ಬಾರಾ ॥

**ಭಾವಾರ್ಥ:-** ಹೇಗೆ ಹರಹಟದ ಬಾವಿಯಲ್ಲಿ ಕಬ್ಬಿಣದ ಚಕ್ರ ಅಳವಡಿಸಿರುತ್ತಾರೆ, ಅದಕ್ಕೆ ಬಕೆಟ್‌ಗಳ ಚೈನ್ ವೆಲ್ಡಿಂಗ್ ಮಾಡಲಾಗುತ್ತದೆ. ಅದನ್ನು ಹರಹಟ ಚಕ್ರ ಎನ್ನುತ್ತಾರೆ. ಮೊದಲು ಎತ್ತು ಅಥವಾ ಒಂಟೆಯಿಂದ ನಡೆಸುತ್ತಿದ್ದರು. ಹೇಗೆ ಗಾಣ ಎತ್ತು-ಒಂಟೆಯಿಂದ ನಡೆದಂತೆ. (ಮೊದಲು ಹೆಚ್ಚು ಉಪಯೋಗಿಸುತ್ತಿದ್ದರು) ಹರಹಟದ ಬಕೆಟ್‌ಗಳು ಕೆಳಗಿಂದ ನೀರು ತುಂಬಿ ತರುತ್ತವೆ ಮೇಲೆ ಅದನ್ನು ಖಾಲಿ ಮಾಡುತ್ತವೆ. ಈ ಚಕ್ರ ಸದಾ ನಡೆಯುತ್ತಿರುತ್ತದೆ. ಹಾಗೆ ಭೂಮಿಯ ರೂಪದಲ್ಲಿರುವ ಬಾವಿಯಿಂದ ಪಾಪ-ಪುಣ್ಯಗಳೆಂಬ ನೀರನ್ನು ತೆಗೆದು ಮೇಲೆ ಸ್ವರ್ಗ, ನರಕದಲ್ಲಿ ಖಾಲಿ ಮಾಡಲಾಗುತ್ತದೆ. ಈ ರೀತಿ ಜನನ-ಮರಣವೆಂಬ ಚಕ್ರದಲ್ಲಿ ಜೀವಾತ್ಮ ಸದಾ ಇರುತ್ತದೆ. ಮೇಲಿನ ವಾಕ್ಯದಲ್ಲಿ ತಿಳಿಸಿರುವುದೆನೆಂದರೆ ಮನುಷ್ಯನು ಒಂದಲ್ಲ ಒಂದು ದಿನ ಕುಟುಂಬ, ಹಣ, ಆಸ್ತಿ ಎಲ್ಲವನ್ನು ಬಿಟ್ಟು ಒಬ್ಬನೇ ಹೊರಟು ಹೋಗುತ್ತಾನೆ. ನಂತರ ಇನ್ನೆಲ್ಲೋ ಬೇರೆ ಕಡೆ ಜನ್ಮತಾಳಿ ಇದೇ ಕ್ರಿಯೆ ಮಾಡಿ ಹೋಗುವನು. ಒಂದು ವೇಳೆ ನೀವು ಮನೆಯಿಂದ ಬೇರೆ ನಗರಕ್ಕೆ ಹೋಗುವುದಾದರೆ ಹೊರಡುವ ಮುಂಚೆ ಎಲ್ಲಿಗೆ ಹೋಗಬೇಕೆಂದು ಮೊದಲೇ ನಿರ್ಧರಿಸಿರುತ್ತೀರಿ ಅಲ್ಲಿ ಹೋಗುವುದು. ನಂತರ ಅಲ್ಲಿ ವಿಶ್ರಾಂತಿ ಪಡೆಯುವುದು. ಆದರೆ ಪ್ರಪಂಚ ಬಿಟ್ಟು ಹೋಗುವಾಗ ಎಲ್ಲಿ ವಿಶ್ರಾಂತಿ ಮಾಡುವಿರೆಂದು ಯೋಚಿಸುತ್ತೀರಾ? ಹೇ ಜೀವಾತ್ಮ! **84**ಲಕ್ಷ ಪ್ರಕಾರದ ಜೀವರಾಶಿಗಳ ಶರೀರದಲ್ಲಿ ಕಷ್ಟ ಅನುಭವಿಸಬೇಕಾಗುತ್ತದೆ. ಸಾಯುವುದು-ಹುಟ್ಟುವುದು (ಹೊಸ ಜನ್ಮ ಪಡೆಯುವುದು) ಇದೆ. ಒಮ್ಮೆ ರಾಜನಾಗಿ ಶ್ರೇಷ್ಠ ಕರೆಯಲ್ಪಡುತ್ತಾನೆ, ಒಮ್ಮೆ ಭಿಕಾರಿಯಾಗಿ ನೀಚ ಕರೆಯಲ್ಪಡುತ್ತಾನೆ. ಪರಮಾತ್ಮ ಕಬೀರರು ತಿಳಿಸುತ್ತಿದ್ದಾರೆ, "ಅವತಾರ ಪುರುಷರು (ಶ್ರೀರಾಮ, ಶ್ರೀಕೃಷ್ಣ ಇತ್ಯಾದಿ) ಸಹ ಸತ್ಯ ಸಾಧನೆಯ ದಾರಿ ಸಿಗದ ಕಾರಣ ಜನನ-ಮರಣದ ಚಕ್ರದಲ್ಲಿ ಸಿಲುಕಿದ್ದಾರೆ. ನನ್ನ ಬಳಿ ಸತ್ಯ




ಯೊಹ್ ಹರಹಟ್ ಕಾ ಕುಆಂ ಲೋಈ, ಯಾ ಗಲ್ ಬಂಧ್ಯಾ ಹೈ ಸಬ್ ಕೋಈ ।
ಕೀಢೀ ಕುಂಜರ್ ಔರ್ ಅವತಾರಾ, ಹರಹಟ್ ಡೋರೀ ಬಂಧೆ ಕಈ ಬಾರಾ ॥

**ಕಾಲನ ಲೋಕದಲ್ಲಿ ಜನನ-ಮರಣರೂಪಿ ಹರಹಟ್ (ಚಕ್ರ)**

ಸಾಧನೆ ಇದೆ. ಹೇ ಮಾನವ, ನನ್ನನ್ನು ಗುರುತಿಸು. ನಾನು ಸಮರ್ಥ ಪರಮಾತ್ಮನು. ನಾನು ನಿನ್ನ ಜನನ-ಮರಣದ ಎಲ್ಲಾ ಜಂಜಾಟವನ್ನು ಸಮಾಪ್ತಮಾಡುವೆ".

ಶಬ್ದ ನಂ.2

ನಾಮ್ ಸುಮರಲೇ ಸುಕರ್ಮ್ ಕರಲೇ, ಕೌನ್ ಜಾನೇ ಕಲ್ ಕೀ॥ಖಬರ್ ನಹೀಂ ಪಲ್ ಕೀ (ಟೇಕ್)
ಕೋಡಿ-ಕೋಡಿ ಮಾಯಾ ಜೋಡೀ ಬಾತ್ ಕರೇ ಛಲ್ ಕೀ,
ಪಾಪ್ ಪುಣ್ಯ್ ಕೀ ಬಾಂಧೀ ಪೋಟರಿಯಾ, ಕೈಸೆ ಹೋವೆ ಹಲ್ಕೀ ॥1॥
ಮಾತ್-ಪಿತಾ ಪರಿವಾರ್ ಭಾಈ ಬಂಧು, ತ್ರೀರಿಯಾ ಮತಲಬ್ ಕೀ,
ಚಲತೀ ಬರಿಯಾಂ ಕೋಈ ನಾ ಸಾಥೀ, ಯಾ ಮಾಟೀ ಜಂಗಲ್ ಕೀ ॥2॥
ತಾರೋಂ ಬೀಚ್ ಚಂದ್ರಮಾ ಜ್ಯೋಂ ಝುಲಕ್ಯೆ, ತೇರೀ ಮಹಿಮಾ ಝುಲಾ ಝುಲ್ಕೀ,
ಬನ್ಯೆ ಕುಕರಾ, ವಿಷ್ಟಾ ಖಾವ್ಯೆ, ಅಬ್ ಬಾತ್ ಕರ್‍ಯೆ ಬಲ್ ಕೀ ॥3॥
ಯೇ ಸಂಸಾರ್ ರೈನ್ ಕಾ ಸಪನಾ, ಓಸ್ ಬೂಂದ್ ಜಲ್ ಕೀ,
ಸತನಾಮ್ ಬಿನಾ ಸಬ್ಯೆ ಸಾಧನಾ ಗಾರಾ ದಲ್‍ದಲ್ ಕೀ ॥4॥
ಅಂತ್ ಸಮಯ್ ಜಬ್ ಚಲ್ಯೆ ಅಕೇಲಾ, ಆಂಸೂ ನೈನ್ ಢಲಕೀ,
ಕಹ್ ಕಬೀರ್ ಗಹ್ ಶರಣ್ ಮೇರೀ ಹೋ ರಕ್ಷಾ ಜಲ್ ಥಲ್ ಕೀ ॥5॥

ಭಾವಾರ್ಥ:- ಪರಮಾತ್ಮ ಕಬೀರರು ಹೇಳುತ್ತಾರೆ, ಹೇ ಮಾನವ (ಸ್ತ್ರೀ-ಪುರುಷ), ಪರಮಾತ್ಮನ ನಾಮಸ್ಮರಣೆ ಮಾಡು ಮತ್ತು ಒಳ್ಳೆಯ ಕೆಲಸ ಮಾಡು, ನಾಳೆ ಅಂದರೆ ಭವಿಷ್ಯದಲ್ಲಿ ಯಾವ ದುರ್ಘಟನೆಯಾಗುವುದೆಂದು ಗೊತ್ತಿಲ್ಲ. ಒಂದು ಕ್ಷಣದೂ ಜ್ಞಾನವಿಲ್ಲ.

ಹಣ ಸಂಗ್ರಹ ಮಾಡುವುದು ಮೋಸದಿಂದ ಮಾತ್ರ ಸಾಧ್ಯ. ಅದರಲ್ಲಿ ಸ್ವಲ್ಪ ಧರ್ಮಕ್ಕಾಗಿ ವ್ಯಯಿಸುತ್ತಾನೆ. ಹೀಗೆ ಪಾಪ ಮತ್ತು ಪುಣ್ಯದ ಎರಡು ಗಂಟು ಕಟ್ಟಿಕೊಂಡನು. ಇವು ಕಡಿಮೆ ಹೇಗಾಗುವವು. ಪಾಪ ನರಕದಲ್ಲಿ, ಪುಣ್ಯ ಸ್ವರ್ಗದಲ್ಲಿ ಅನುಭವಿಸುತ್ತಾನೆ. ತಂದೆ-ತಾಯಿ, ಅಣ್ಣ-ಹೆಂಡತಿ ಇತ್ಯಾದಿ ತಮ್ಮ ತಮ್ಮ ಪ್ರಯೋಜನಕ್ಕೆ ಮಾತನಾಡುತ್ತಾರೆ. ಪೂರ್ವಜನ್ಮದ ಕಾರಣ ಪರಿವಾರ ರೂಪದಲ್ಲಿ ಸೇರಿದ್ದಾರೆ. ಯಾರ್‍ಯಾರ ಸಮಯವು ಮುಗಿಯುತ್ತಾ ಹೋಗುವುದೋ, ಸಂಸ್ಕಾರವು ಅಂತ್ಯವಾಗುತ್ತಾ ಹೋಗುವುದು, ಅವರು ತಕ್ಷಣವೇ ಕುಟುಂಬ ಬಿಟ್ಟು ಹೊರಡುವರು. ಹೇಗೆ ರೈಲಿನಲ್ಲಿ ಎಲ್ಲರೂ ಟಿಕೆಟ್ ತೆಗೆದುಕೊಂಡು ಹತ್ತಿದರೆ ರೈಲು ಭರ್ತಿಯಾಗುತ್ತದೆ. ಯಾರ್‍ಯಾರು ಎಲ್ಲೆಲ್ಲಿಯ ಟಿಕೆಟ್ ತೆಗೆದುಕೊಂಡಿರುತ್ತಾರೋ, ಅಲ್ಲಿ ಇಳಿಯುತ್ತಾರೆ. ಹಾಗೆಯೇ ಕುಟುಂಬವೂ ರೈಲಿನ ಡಬ್ಬಿಯಂತೆ. ಸಾವಿನನಂತರ ನಮ್ಮ ದೇಹವು ಮಣ್ಣಾಗುತ್ತದೆ. ಆಗ ನಿನ್ನ ಕುಟುಂಬದ ಯಾವ ಸದಸ್ಯನೂ ನಿನ್ನ ಜೊತೆ ಬರುವುದಿಲ್ಲ.

ಒಬ್ಬ ವ್ಯಕ್ತಿ ತನ್ನ ಪತ್ನಿಯನ್ನು ಬಹಳ ಪ್ರೀತಿಸುತ್ತಿದ್ದನು. ವೃದ್ಧನಾದಾಗ ಅವನ ಸಾವು ಸಮೀಪಿಸಿತು. ಆಗ ಅವನು. ಪತ್ನಿಯನ್ನು ಕರೆದು, ನನ್ನ ಜೊತೆ ಬರುವೆಯಾ? ಎಂದು ಕೇಳಿದನು. ಆಗ ಅವಳು ತಕ್ಷಣವೇ "ಇಲ್ಲ, ನಾನ್ಯಾಕೆ ನಿನ್ನ ಜೊತೆ ಸಾಯಲಿ? ನಾನು ನಿನಗಿಂತ ಮೂರು ವರ್ಷ ಚಿಕ್ಕವಳು," ಎಂದಳು. ಆ ವೃದ್ಧನಿಗೆ ಆಘಾತವಾಯಿತು. ಆ ದಿನದಿಂದ ಅವಳ ಜೊತೆ ಮಾತನಾಡುವುದನ್ನು ನಿಲ್ಲಿಸಿದನು. ಸಮೀಪ ಬಂದರೆ ಮುಖ ತಿರುಗಿಸುತ್ತಿದ್ದನು. ಏನೂ ಮಾತನಾಡುತ್ತಿರಲಿಲ್ಲ. ಆ ವೃದ್ಧನಿಗೆ 60 ವರ್ಷವಾದ ಮೇಲೆ ನನ್ನ ಜೊತೆ ಯಾರೂ ಇಲ್ಲ ಎನ್ನುವ ಕಟು ಸತ್ಯ ಅರಿವಾಯಿತು. ಆ ಪತ್ನಿಗೆ ಬುದ್ಧಿ ಇದ್ದಿದ್ದರೆ, "ನಾನು ನಿನ್ನ ಜೊತೆ ಬರಲು ಸಿದ್ಧ" ಎಂದು ಹೇಳುತ್ತಿದ್ದಳು, ವೃದ್ಧನೇನು ಅವಳನ್ನು ಕರೆದೊಯ್ಯಲು ಸಾಧ್ಯವಿರಲಿಲ್ಲ, ಬದಲಾಗಿ ಅವನು ಸಂತೋಷದಿಂದ ಸಾಯಿತ್ತಿದ್ದ ಅಷ್ಟೇ. ಸಮಯಕ್ಕಿಂತ ಮುಂಚೆ ಅವಳು ಹೇಗೆ ಸಾಯುತ್ತಿದ್ದಳು? ಅಂದರೆ ನಿಜವಾದ ಪ್ರೀತಿಯೆಲ್ಲಾ ಬರೀ ಸುಳ್ಳು ಎಂದು ಸ್ಪಷ್ಟವಾಯ್ತು ಎಲ್ಲರೂ ಸ್ವಾರ್ಥದಿಂದ ಕೂಡಿರುತ್ತಾರೆ. ಹೇ ಮಾನವ, ಹಿಂದಿನ ಜನ್ಮದಲ್ಲಿ ಜಪ, ತಪ ಮತ್ತು ಧರ್ಮ ಸಂಸ್ಕಾರ ಮಾಡಿದ ಕಾರಣ ಈಗ ಮಂತ್ರಿ, ಪ್ರಧಾನ ಮಂತ್ರಿ ಅಥವಾ ಉನ್ನತ ಅಧಿಕಾರಿಯಾಗಿ ಸುಶೋಭಿತನಾಗುತ್ತಿದ್ದಾನೆ ಹೇಗೆ ರಾತ್ರಿಯಲ್ಲಿ ನಕ್ಷತ್ರಗಳ ಮಧ್ಯೆ

ಚಂದ್ರ ಸುಶೋಭಿತನಾಗುವಂತೆ. ಒಂದೊಮ್ಮೆ ಸತ್ಸಂಗಗಳ ವಿಚಾರ ಕೇಳದಿದ್ದರೆ, ಆತ್ಮ ಜ್ಞಾನವನ್ನು ಪಡೆಯದೆ, ಪರಮಾತ್ಮನ ಭಕ್ತಿ ಮಾಡದಿದ್ದರೆ ಭವಿಷ್ಯದಲ್ಲಿ ನಾಯಿಯಾಗಿ, ಗೊಬ್ಬರ ತಿನ್ನಬೇಕಾಗುತ್ತದೆ. ಈಗ ನೀನು ನಿನ್ನ ಶಾರೀರಿಕ ಬಲದಿಂದ, ಪದವಿಯ ಬಲದಿಂದ ಮಾತನಾಡಬಹುದು ಆದರೆ ಮುಂದೆ ಪಶುವಾಗಿ ಬಹಳ ಕಷ್ಟ ಪಡಬೇಕಾಗುತ್ತದೆ.

ನರ್ ಸೆ ಫಿರ್ ಪಶುವಾ ಕೀಜೈ, ಗಧಾ-ಬೈಲ್ ಬನಾಈ ।
ಛಪ್ಪನ್ ಭೋಗ್ ಕಹಾಂ ಮನ್ ಬೋರೆ, ಕುರಡೀ ಚರ್‌ನೇ ಜಾಈ ॥

ಶಬ್ದಾರ್ಥ:- ಯಾವ ಮನುಷ್ಯನು (ಸ್ತ್ರೀ/ಪುರುಷ) ಸತ್ಯಭಕ್ತಿಯನ್ನು ಶಾಸ್ತ್ರಕ್ಕೆ ಅನುಸಾರವಾಗಿ ಗುರುವಿನಿಂದ ದೀಕ್ಷೆ ಪಡೆದು ಮಾಡುವುದಿಲ್ಲವೋ, ಅವನು ತನ್ನ ಮರಣಾನಂತರ ಪ್ರಾಣಿಯ ಜೀವನವನ್ನು ಪಡೆಯುತ್ತಾನೆ. ಅವನು ಕತ್ತೆಯಾಗಿಯೋ, ಎತ್ತಾಗಿಯೋ, ಹುಟ್ಟುತ್ತಾನೆ. ಮಾನವ ಶರೀರವಿದ್ದಾಗ ಸ್ವಾದಿಷ್ಟ ಊಟವನ್ನು ಮಾಡುತ್ತಿದ್ದ. ಕತ್ತೆಯಾದ ಮೇಲೆ ಒಳ್ಳೆಯ ಊಟ ಸಿಗುವುದಿಲ್ಲ. ಕತ್ತೆಯ ಶರೀರ ಪಡೆದು, ಕಾಡಿನಲ್ಲಿ ಕಸದ ರಾಶಿಯಿಂದ ಕೊಳತ ಊಟವನ್ನೋ, ಹುಲ್ಲನ್ನೋ ತಿನ್ನುತ್ತಾನೆ. ಆದ್ದರಿಂದ ಭಕ್ತಿ ಮಾಡು.

ಹೇ ಮಾನವ ಹೇಗೆ ಬೆಳಿಗ್ಗೆಯ ಇಬ್ಬನಿ ಇರುವುದೋ, ಅದು ಹುಲ್ಲಿನ ಮೇಲೆ ಬಿದ್ದು ಸ್ವಲ್ಪ ಸಮಯದ ನಂತರ ಮಾಯವಾಗುವುದೋ ಹಾಗೆ ಮನುಷ್ಯನ ಜೀವನವೂ ಕ್ಷಣಿಕ. ಆದ್ದರಿಂದ ಪೂರ್ಣ ಸದ್ಗುರುವಿನಿಂದ ಸತ್ಯನಾಮ ಅಂದರೆ ನಿಜವಾದ ಮಂತ್ರ ಜಪ ಪಡೆದು ಜೀವನವನ್ನು ಸಾರ್ಥಕಪಡಿಸಿಕೊಳ್ಳಿ. ನಿಜವಾದ ಶಾಸ್ತ್ರಾನುಕೂಲ ಭಕ್ತಿ ಮಂತ್ರದ ಹೊರತಾಗಿ ಎಲ್ಲಾ ಶಾಸ್ತ್ರ ವಿರುದ್ಧವಾದ ಸಾಧನೆಯಂತು ಕೆಸರಿದ್ದಂತೆ. ಹೊರತೆಗೆಯುವ ಬದಲು ಕೆಸರಿನಲ್ಲಿ ಇನ್ನೂ ಅಧಿಕ ಸಿಲುಕಿಸುತ್ತದೆ. ಆ ಸಾಧನೆಯು ಪರಮೇಶ್ವರ ಕಬೀರರ ಬಳಿ ಇತ್ತು. ಅದನ್ನು ಕೆಲ ಸಂತರಿಗೆ ಮಾತ್ರ ಪರಮೇಶ್ವರರೇ ತಿಳಿಸಿದ್ದರು. ಆದರೆ ಅವರಿಗೆ ಅನ್ಯರಿಗೆ ತಿಳಿಸಬೇಡಿರೆಂದು ಹೇಳಿದ್ದರು. ಈಗ ವರ್ತಮಾನದಲ್ಲಿ (ಇಸವಿ 1997 ರಿಂದ) ನನ್ನ (ರಾಮ್‌ಪಾಲ್ ದಾಸನ) ಬಳಿ ಇದೆ. ವರ್ತಮಾನದಲ್ಲಿ ನನ್ನನ್ನು ಬಿಟ್ಟರೆ ಇನ್ಯಾರೋ ಸಂತ ಮತ್ತು ಗುರುವಿನ ಬಳಿಯೂ ಶಾಸ್ತ್ರ ಪ್ರಮಾಣಿತ ಭಕ್ತಿ ಮಂತ್ರವಿಲ್ಲ. ಬನ್ನಿ, ದೀಕ್ಷೆ ಪಡೆದುಕೊಳ್ಳಿ. ಮತ್ತು ನಿಮ್ಮ ಹಾಗೂ ನಿಮ್ಮ ಕುಟುಂಬದ ಜೀವನವನ್ನು ಸಾರ್ಥಕಮಾಡಿಕೊಳ್ಳಿ. ನೀವು ನನ್ನ (ರಾಮ್‌ಪಾಲ್ ನ) ಹೊರತು ಬೇರೆ ಪಂಥದ ಸಂತನ ಬಳಿ ದೀಕ್ಷೆ ಪಡೆದರೆ ಅದೇ ಮಾತಾಗುವುದು, ಬಾಂಡ್ಲಿಯಿಂದ ಜಾರಿ ಬೆಂಕಿಯಲ್ಲಿ ಬಿದ್ದಂತೆ, ನೀವು ಅಲ್ಲಿಯೂ ಸಲ್ಲುವುದಿಲ್ಲ, ಇಲ್ಲಿಯೂ ಸಲ್ಲುವುದಿಲ್ಲ. ಮೊದಲು ನಾನು ಹಳ್ಳಿ-ಹಳ್ಳಿ ಸತ್ಸಂಗ ಮಾಡುತ್ತಿದ್ದೆ. ನನ್ನ ಸತ್ಸಂಗ ಕೇಳುತ್ತಿದ್ದರು ಅದು ಆತ್ಮವನ್ನು ಬೆಚ್ಚಿ ಬೀಳಿಸುತ್ತಿತ್ತು. ನನ್ನಿಂದ ದೀಕ್ಷೆ ಪಡೆಯುತ್ತಿರಲಿಲ್ಲ, ಜನರು ಬೇರೆಯವರಲ್ಲಿ ದೀಕ್ಷೆ ಪಡೆಯುತ್ತಿದ್ದರು. ಆದರೆ ಅಲ್ಲಿಂದ ಯಾವುದೇ ಲಾಭವಾಗಲಿಲ್ಲ. ಅನೇಕ ವರ್ಷ ಅಲೆದಾಡಿ ನನ್ನ ಬಳಿ ಬಂದು ದೀಕ್ಷೆ ಪಡೆದನಂತರ ಅವರೆಲ್ಲಾ ಸುಖಿಯಾದರು.

ಇದರಿಂದ ತಿಳಿಯುವುದೇನೆಂದರೆ ಸತ್ಸಂಗದ ವಚನ ಕೇಳಲು ಅವಕಾಶ ಸಿಕ್ಕರೆ ಮನೆ ಸ್ವರ್ಗವಾಗುತ್ತದೆ. ಇಲ್ಲದಿದ್ದರೆ ನರಕವಾಗುತ್ತದೆ. ಹೀಗೆ ವಿಶ್ವದ ಉದ್ಧಾರ ಸಾಧ್ಯ. ಎಲ್ಲರೂ ಪ್ರೀತಿ-ಪ್ರೇಮದಿಂದ ಜೀವನ ನಡೆಸಿ ಮೋಕ್ಷ ಪಡೆಯಬಹುದು. ಇದು ಅತ್ಯಂತ ಅನಿವಾರ್ಯವಾಗಿದೆ.

## "ವರ್ತಮಾನದ ಕೆಲವು ಸತ್ಯ ಕತೆಗಳು"

## "ಭಕ್ತ ಸುರೇಶ್‌ನ ಹಾಳಾದ ಸಂಸಾರವನ್ನು ಸರಿ ಮಾಡಿದ್ದು"

ಡೀಘಲ್ ಹಳ್ಳಿಯ ಪಾನಾ-ಗಂಜಾ ಭಕ್ತನ ಹೆಸರು ಸುರೇಶ್ ಅಹಲಾವತ್ ಹಾಗೂ ಭಕ್ತಿಮತಿ ಹೆಸರು ಯಶವಂತೀ. ಸುರೇಶ್ ಒಬ್ಬ ಕುಡುಕ. ಅಷ್ಟೇ ಅಲ್ಲದೇ ತಂಬಾಕು ಹಾಗೂ ಗುಟ್ಕಾ ವ್ಯಸನಿಯಾಗಿದ್ದ ಎನ್ನುವುದಕ್ಕೆ ಇಡೀ ಡೀಗಲ್ ಹಳ್ಳಿಯೇ ಸಾಕ್ಷಿಯಾಗಿದೆ. ಮನೆಯ ದುರ್ಗತಿಯಾಗಿತ್ತು. ಸುರೇಶನ ಹೆಂಡತಿ ಅಸಾಧ್ಯ ರೋಗದಿಂದ ನರಳುತ್ತಿದ್ದಳು. ಅವರಿಗೆ ಎರಡು ಚಿಕ್ಕ ಚಿಕ್ಕ ಮಕ್ಕಳಿದ್ದರು. ತಂದೆ ಮನೆಗೆ ಬರುವುದನ್ನು ಕಂಡು ಭಯಭೀತರಾಗಿ ಬಚ್ಚಿಕೊಳ್ಳುತ್ತಿದ್ದರು.

ಮನೆಯಲ್ಲಿ ಯಾವಾಗಲೂ ಜಗಳವಾಗುತ್ತಿತ್ತು. ಯಶವಂತೀಯ ಒಬ್ಬ ಅಣ್ಣ ಹರಿಯಾಣದಲ್ಲಿ ಪೋಲೀಸ್ ಇಲಾಖೆಯಲ್ಲಿ **D.S.P.** ಆಗಿದ್ದನು. ಈಗ ನಿವೃತ್ತನಾಗಿದ್ದನು. ಅವನ ಹೆಸರು ಭಕ್ತ ರಾಜೇಂದ್ರ ಸಿಂಗ್ ರಾಠೀ, ಊರು–ಭಾಪ್‌ಡೋದಾ ತಂಗಿಯ ರೋಗವನ್ನು ಗುಣಪಡಿಸಲು ಎಷ್ಟೋ ಕಡೆ ತೋರಿಸಿದರು ಎಲ್ಲವೂ ವ್ಯರ್ಥವಾಗಿತ್ತು. ನನ್ನ ಭಕ್ತನೊಬ್ಬ ಹರಿಯಾಣ ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾನೆ. ಅವನು ಆರ್ಯ ಸಮಾಜದ ಪ್ರಚಾರಕರಾದ ಚೌಹರೀ ಸಿಂಗ್‌ನ ಮಗ. (ಊರು–ಜಸರಾನಾ ಜಿಲ್ಲೆ–ಸೋನೀಪತ್) ಅವನ ಜೊತೆ ನನ್ನ (ರಾಮ್‌ಪಾಲ್‌ದಾಸನ) ತಮ್ಮನೂ ಮಹೇಂದ್ರ ಸಿಂಗ್ ಹರಿಯಾಣ ಪೋಲೀಸ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದನು. ಅವನು **2016**ರಲ್ಲಿ ನಿವೃತ್ತನಾಗುವವನಿದ್ದನು. ಆದರೆ ಪರಮಾರ್ಥದ ಉದ್ದೇಶವನ್ನು ತಿಳಿದ ಕಾರಣದಿಂದ **2005**ರಲ್ಲೇ ಸ್ವಯಂ ನಿವೃತ್ತಿ ಹೊಂದಿ ನನ್ನ ಜೊತೆ ಸೇರಿ ನನಗೆ ಸಹಾಯ ಮಾಡುತ್ತಿದ್ದಾನೆ. ನನ್ನ ತಮ್ಮ ರೋಹತಕ್ ನಗರದ ಎಸ್.ಪಿ.ಗೆ ಡ್ರೈವರ್ ಆಗಿದ್ದನು. ಭಕ್ತ ಜಯವೀರ್ ಮಲಿಕ್ ಝಜ್ಜರ್ ನಗರದ ಡಿ.ಎಸ್.ಪಿ. ಗೆ ಡ್ರೈವರ್ ಆಗಿದ್ದನು. ಇವರಿಬ್ಬರೂ ಆಗಾಗ ಭೇಟಿಯಾಗುತ್ತಿದ್ದರು. ನನ್ನ ತಮ್ಮ ಅವನಿಗೆ ಆಗಾಗ ಜ್ಞಾನದ ಬಗ್ಗೆ ಹೇಳುತ್ತಿದ್ದನು. ಭಕ್ತ ಜಯವೀರನು ಆರ್ಯಸಮಾಜದ ಅನುಯಾಯಿಯಾದ ಕಾರಣ ಮೊದಲು ಇದನ್ನೆಲ್ಲಾ ಒಪ್ಪಲಿಲ್ಲ. ನಂತರ ಬಹಳಷ್ಟು ವಿದ್ವಾಂಸರನ್ನು ಭೇಟಿಯಾಗಿ ಕೊನೆಗೆ ಸತ್ಯವೇನೆಂದು ಅರಿವಾಯಿತು. **1994**ರಲ್ಲಿ ಅವನು ಬಂದು ದೀಕ್ಷೆ ಪಡೆದನು. **1995–96**ರವರೆಗೆ ಡಿ.ಎಸ್.ಪಿ ರಾಜೇಂದ್ರಸಿಂಗ್‌ನು ಝಜ್ಜರ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು, ಜಯವೀರಸಿಂಗ್‌ನು ಅವರ ಡ್ರೈವರ್ ಆಗಿದ್ದು, ಭಕ್ತ ರಾಜೇಂದ್ರನ ತಮ್ಮನೂ ಪೋಲೀಸ್ ಇಲಾಖೆಯಲ್ಲಿದ್ದನು. ಅವನಿಗೂ ಯಶವಂತಿಗಿದ್ದ ಕಾಯಿಲೆ ಇತ್ತು. ಈ ರೋಗಕ್ಕೆ ತುತ್ತಾಗಿ **1995**ರಲ್ಲಿ ಅಕಾಲ ಮರಣವನ್ನಪ್ಪಿದನು. ಒಂದು ದಿನ ಜಯವೀರಸಿಂಗ್‌ನು **D.S.P.** ಯ ಡ್ರೈವರ್ ಆದ ಕಾರಣ ಯಶವಂತಿಯ ಮನೆಗೆ ಹೋಗಿದ್ದರು. ಎಲ್ಲಾ ಸ್ಥಿತಿ ಗೊತ್ತಾಯಿತು. ಒಂದು ದಿನ ಜಯವೀರಸಿಂಗ್‌ನು ಡಿ.ಎಸ್.ಪಿ ಯವರಿಗೆ, ನೀವು ನಿಮ್ಮ ಕುಟುಂಬವನ್ನು ಕಾಪಾಡಲು ಇಚ್ಛಿಸುವಿರಾದರೆ ಸಂತ ರಾಮ್‌ಪಾಲ್ ರವರ ಬಳಿ ಹೋಗಿ ಅವರಿಂದ ದೀಕ್ಷೆ ಪಡೆಯಿರಿ ಎಂದು ವಿನಂತಿಸಿದನು. ಮೊದಮೊದಲು ಒಪ್ಪದಿದ್ದರೂ, ನಂತರ ಅವನು ಪರೀಕ್ಷಿಸೋಣವೆಂದು ಸಹೋದರಿ ಯಶವಂತಿಯನ್ನು ತನ್ನ ತಮ್ಮ ಸುಖವೀರ್‌ನ ಜೋತೆ ದೀಕ್ಷೆ ಪಡೆಯಲು ಕಳುಹಿಸಿದನು. ಈ ದಾಸ (ರಾಮ್‌ಪಾಲ್ ದಾಸ್) ನೀರಾವರಿ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್ **(J.E)** ಪದವಿಯಲ್ಲಿದ್ದು ಸೇವೆ ಸಲ್ಲಿಸುತ್ತಿದ್ದೆ. ಗುರುಗಳ ಆದೇಶಾನುಸಾರ ನಾಮದೀಕ್ಷೆ ನೀಡಲು ಪ್ರಾರಂಭಿಸಿದೆ ಹಾಗೂ ಪ್ರಚಾರ ಮಾಡಲಾರಂಭಿಸಿದೆ. ಮಿಶನದ ಉದ್ದೇಶ ತಿಳಿದು ಜನರ ಹಾಗೂ ಲೋಕ ಕಲ್ಯಾಣಕ್ಕಾಗಿ ಇಸವಿ **1995**ರಲ್ಲಿ ನೌಕರಿಯಿಂದ ರಾಜಿನಾಮೆ ಕೊಟ್ಟು ಪ್ರಚಾರ ಪ್ರಸಾರ ಮಾಡಲು ಪ್ರಾರಂಭಿಸಿದೆ (ಹರಿಯಾಣ ಸರ್ಕಾರದ ಮೂಲಕ ರಾಜಿನಾಮೆ ಸ್ವೀಕರಿಸಲಾಗಿದೆ). ಹಳ್ಳಿ ಹಳ್ಳಿಗೆ ಹೋಗಿ ಸಂತ ಗರೀಬ್‌ದಾಸ್ ಮಹಾರಾಜರ ವಾಣಿಯ ಅಖಂಡ ಪಾಠ ಮಾಡುತ್ತಿದ್ದೇ, ಸತ್ಸಂಗ ಮಾಡುತ್ತಿದ್ದೆ. **3** ದಿನಗಳ ತನಕ ಈ ಅನುಷ್ಠಾನ ನಡೆಯುತ್ತಿತ್ತು. ಜ್ಞಾನ ತಿಳಿಸಿ ಎಲ್ಲ ಕೆಟ್ಟತನ ಬಿಡಿಸಿ, ದೀಕ್ಷೆ ಕೊಡುತ್ತಿದ್ದೆ, ಆ ಕರಣದಿಂದ ಉಪದೇಶಿಗೆ ಆಶ್ಚರ್ಯಕರ ಲಾಭವಾಗುತ್ತಿತ್ತು.

ಇದೇ ಕ್ರಮದಲ್ಲಿ **1996**ರಲ್ಲಿ ಒಂದು ದಿನ ಪಂಜಾಬ್‌ಖೋಡ್ (ದೆಹಲಿ) ಎಂಬಲ್ಲಿ ಭಕ್ತನಾದ ಜಗದೀಶನ ಮನೆಯಲ್ಲಿ ಪಾಠ ನಡೆಯುತ್ತಿತ್ತು. ಭಕ್ತ ಜಗದೀಶನೂ ಹಿಂದೊಮ್ಮೆ ಕುಡುಕನಾಗಿದ್ದನು. ಮದ್ಯ ಸೇವಿಸುತ್ತಿದ್ದನು ಹಾಗೂ **D.T.C** ದಿಲ್ಲಿಯಲ್ಲಿ ಕೆಲಸ ಮಾಡುತ್ತಾನೆ. ಅವನ ಹೆಂಡತಿಗೂ ಚಿಕಿತ್ಸೆಗೆ ಗುಣವಾಗದಂತಹ ಕಾಯಿಲೆ ಇತ್ತು. ನನ್ನಿಂದ ದೀಕ್ಷೆ ಪಡೆದ ನಂತರ ಎಲ್ಲವೂ ಸರಿಯಾಯಿತು. ಮಾಡುವುದೆಲ್ಲಾ ಪರಮಾತ್ಮನೇ. ಆದರೆ ಗುರುಗಳ ಮೂಲಕ ಮನುಷ್ಯನಿಗೆ ಶಕ್ತಿ ಸಿಗುತ್ತದೆ. ಹೇಗೆ ತಂತಿಯ ಮೂಲಕ ವಿದ್ಯುತ್ ಪ್ರವಹಿಸುತ್ತದೋ ಹಾಗೆ. ಆದರೆ ತಂತಿಯೇ ವಿದ್ಯುತ್ ಅಲ್ಲ" ಹಾಗೆ ಸಂತ ಪರಮಾತ್ಮ ಅಲ್ಲದಿದ್ದರೂ, ತಂತಿ ಅವಶ್ಯವಾಗಿರುತ್ತಾರೆ. ಆಗ ಯಶವಂತಿಯ ನಾಲಿಗೆಯು ಕೆಲಸಮಾಡುತ್ತಿರಲಿಲ್ಲ. ಅವಳು ಮೂಗಿಯಾಗಿದ್ದಳು.

ಸುಖಬೀರ್‌ಸಿಂಗ್‌ನು ತನ್ನ ತಂಗಿಯನ್ನು ಕರೆದುಕೊಂಡು ಜಗದೀಶನ ಮನೆಗೆ ಬಂದನು. ನನಗೆ ಎಲ್ಲ ಸಮಸ್ಯೆ ತಿಳಿಸಿದರು. ಆ ಇಬ್ಬರೂ ಅಣ್ಣ–ತಂಗಿ ಸತ್ಸಂಗವನ್ನು ಕೇಳಿ ಆ ರಾತ್ರಿ ಅಲ್ಲೇ ತಂಗಿದರು. ಯಶವಂತಿಗೆ ದೀಕ್ಷೆಕೊಟ್ಟು ಪ್ರಸಾದ ತಿನ್ನಿಸಿದರು. ಬೆಳಿಗ್ಗೆ ಎದ್ದ ತಕ್ಷಣ ಅವಳು ತನ್ನ ಸಹೋದರನಿಗೆ ಹೇಳಿದಳು. ಅಣ್ಣ! ನಾನು ಮಾತನಾಡಲಾರಂಭಿಸಿದೆ.

ಈ ಚಮತ್ಕಾರವನ್ನು ನೋಡಿ ಇಬ್ಬರೂ ಅಣ್ಣ–ತಂಗಿ ಅಲ್ಲಿಗೆ ಬಂದಿದ್ದ ಜನರಿಗೆ (ಸತ್ಸಂಗ ಕೇಳುವಾಗ ಅಲ್ಲಿ ಬಂದ ಜನರಿಗೆ) ಈ ಚಮತ್ಕಾರವನ್ನು ಹೇಳಿದರು. ನಂತರ ಡಿ.ಎಸ್.ಪಿ ಹಾಗೂ ಅವರ ಕುಟುಂಬದವರೆಲ್ಲಾ, ಸಂಬಂಧಿಕರೆಲ್ಲಾ ದೀಕ್ಷೆ ಪಡೆದರು. ಈಗ ಅವರೆಲ್ಲಾ ಕ್ಷೇಮದಿಂದಿದ್ದಾರೆ ಹಾಗೂ ಭಕ್ತಿ ಮಾಡುತ್ತಿದ್ದಾರೆ. ಹಾಗೆಯೇ ಸುರೇಶನು ಪಕ್ಕಾ ಕುಡುಕನಾಗಿದ್ದನು. ತನ್ನ ಪತ್ನಿ ಯಶವಂತಿಯು ಸರಿಯಾಗಿದ್ದನ್ನು ನೋಡಿ ತಾನೂ ಆಶ್ರಮಕ್ಕೆ ಬಂದು ಸಾರಾಯಿ ಹಾಗೂ ಎಲ್ಲಾ ನಶೆಯನ್ನು ತ್ಯಜಿಸಿ ದೀಕ್ಷೆ ಪಡೆದನು. ಅಲ್ಲಿಯವರೆಗೆ ಯಾವುದೇ ಆಶ್ರಮ ಕಟ್ಟಿರಲಿಲ್ಲ. ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರ ಮಾಡಲಾಗುತ್ತಿತ್ತು. ಯಶವಂತಿಯ ಕುಟುಂಬವು ಈಗ ಇಡೀ ಹಳ್ಳಿಗೆ ಉದಾಹರಣೆಯಾಗಿದೆ. ಸುರೇಶ್ ಚೌಧರೀ ಭಕ್ತನಾದನು. ಎಲ್ಲಾ ದುಶ್ಚಟಗಳನ್ನು ಬಿಟ್ಟನು. ಇಬ್ಬರು ಮಕ್ಕಳು ದೊಡ್ಡವರಾಗಿ ಒಂದೇ ದಿನ ದಿಲ್ಲಿ ಪೋಲಿಸ್‌ನಲ್ಲಿ ಸಿಪಾಯಿಯಾಗಿ ಭರ್ತಿಯಾದರು.  ಜನರಿಗೆ ದುಡ್ಡು ಕೊಟ್ಟು ಭರ್ತಿಯಗಿರುವರೆಂದು ಅನ್ನಿಸಿರಬಹುದು. ಆದರೆ ಸತ್ಯವೇನೆಂದರೆ ಒಂದು ಪೈಸಾ ಕೂಡಾ ಯಾರಿಗೂ ಕೊಟ್ಟಿಲ್ಲ. ನೀವು ಸ್ವತಃ ಪರೀಕ್ಷಿಸಿ ನೋಡಬಹುದು. ಇಬ್ಬರ ಮದುವೆಯಾಯಿತು. ಒಂದು ಪೈಸೆ ವರದಕ್ಷಿಣೆಯನ್ನು ತೆಗೆದುಕೊಳ್ಳಲಿಲ್ಲ, ಇದನ್ನೂ ನೀವು ಪರೀಶಿಲಿಸಬಹುದು. ಹೀಗೆ ಅವರ ಕುಟುಂಬಕ್ಕೆ ಎಲ್ಲವೂ ಒಳ್ಳೆಯದಾಯಿತು". ಅಂತಹ ಅನೇಕ ಉದಾಹರಣೆಗಳಿವೆ. "ನಾನು ಈ ಕತೆಯನ್ನು ಹೇಳುವ ಉದ್ದೇಶವೇನೆಂದರೆ, ಗೀತೆಯ 16ನೇ ಅಧ್ಯಾಯದ 23 ಮತ್ತು 24ನೇ ಶ್ಲೋಕದಲ್ಲಿ ಹೇಳಿರುವಂತೆ ಶಾಸ್ತ್ರಾನುಸಾರ ಭಕ್ತಿ ಮಾಡದೆ ಮನಸ್ಸಿಗೆ ಬಂದಂತೆ ಆಚರಣೆ ಮಾಡುವವನಿಗೆ ಪರಮಾತ್ಮನಿಂದ ಯಾವುದೇ ಲಾಭ ಸಿಗುವುದಿಲ್ಲ. ಶಾಸ್ತ್ರೋಕ್ತವಾದ ಭಕ್ತಿಯನ್ನು ಮಾಡುವುದರಿಂದ ಪರಮಾತ್ಮನ ಶಕ್ತಿಯಿಂದ ಅಸಂಭವ ಕಾರ್ಯವೂ ಸಂಭವವಾಗುತ್ತದೆ. ಮುಕ್ತಿಯೂ ಸಿಗುತ್ತದೆ. ಋಗ್ವೇದ 10ನೇ ಮಂಡಲದ 161ನೇ ಸೂಕ್ತಿಯ 2ನೇ ಮಂತ್ರದಲ್ಲಿ ಇದರ ಬಗ್ಗೆ ಪ್ರಮಾಣವಿದೆ. ಪರಮಾತ್ಮನ ಭಕ್ತಿ ಮಾಡುವವನ ಅಸಾಧ್ಯ ರೋಗವೂ ಗುಣವಾಗುವುದು. ರೋಗಿಯ ಸಾವು ಸಮೀಪಿಸುತ್ತಿದ್ದರೂ ಸತ್ಯಭಕ್ತಿ ಮಾಡುವವನಿಗೆ ಸ್ವಸ್ಥಗೊಳಿಸಿ  ಪರಮಾತ್ಮ ಅವನಿಗೆ ನೂರರಷ್ಟು ಆಯುಸ್ಸನ್ನು ನೀಡುತ್ತಾನೆ ಅಂದರೆ ಭಕ್ತನು ಪೂರ್ತಿ ಆಯಸ್ಸು ಬದುಕುತ್ತಾನೆ.

ಈ ಮೊದಲು ವಿದ್ಯುತ್ತಿನ ಆವಿಷ್ಕಾರವಾಗಿರಲಿಲ್ಲ. ಹೆಂಗಸರು ಧಾನ್ಯಗಳನ್ನು ಬೀಸುವ ಕಲ್ಲಿನಿಂದ ಬೀಸಿ ಹಿಟ್ಟು ತಯಾರಿಸುತ್ತಿದ್ದರು, ಪುರುಷರು ಕೈಯಿಂದ ಕೊಡಲಿಯಿಂದ ದನಕರುಗಳಿಗೆ ಮೇವು ಕತ್ತರಿಸಿ ತಿನ್ನಿಸುತ್ತಿದ್ದರು ನಂತರ ಕೈಯಿಂದ ಚಲಾಯಿಸುವ ಯಂತ್ರದ ಆವಿಷ್ಕಾರವಾಯಿತು. ಅದು ಕೂಡಾ ಕಠಿಣ ಕೆಲಸವಿತ್ತು. ಈಗ ವಿದ್ಯುತ್ತಿನಿಂದ ಹಿಟ್ಟು ಮಾಡುವ ಗಿರಣಿಗಳು ನಡೆಯುತ್ತವೆ, ಮೇವು ಕತ್ತರಿಸುವ ಯಂತ್ರ ನಡೆಯುತ್ತದೆ. ಅಸಂಭವ ಕಾರ್ಯಗಳಾಗುತ್ತಿವೆ. ಕೆಲಸಗಳು ಶೀಘ್ರ ಹಾಗೂ ಸುಗಮವಾಗಿವೆ. ಆದರೆ ವಿದ್ಯುತ್ತಿನ ಕನೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಹಾಗೂ ವಿದ್ಯುತ್ತಿನ ನಿಯಮಗಳ ಪಾಲನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸುಖ ನೀಡುವ ವಿದ್ಯುತ ಸರ್ವನಾಶದ ಕಾರಣವಾಗುತ್ತದೆ. ಇದೇ ರೀತಿ ಪರಮಾತ್ಮನ ಕನೆಕ್ಷನ್ ಪಡೆಯಬೇಕಾಗುತ್ತದೆ ಮತ್ತು ಪರಮಾತ್ಮನ ನಿಯಮಗಳ ಪಾಲನೆ ಮಾಡಬೇಕಾಗುತ್ತದೆ. ಆಗ ಪರಮಾತ್ಮನು ಸುಖವನ್ನೂ, ಮೋಕ್ಷವನ್ನು ನೀಡುತ್ತಾನೆ. ಕ್ರಮತಪ್ಪಿದರೆ ಪರಮಾತ್ಮನಿಂದ ಲಾಭ ಸಿಗುವುದು ನಿಲ್ಲುತ್ತದೆ. ಎಲ್ಲಾ ಸವಲತ್ತುಗಳು ಸಿಗುವವು ನಿಂತು ಹೊಗುತ್ತದೆ. ಡೀಘಲ್ ಊರಿನ ಜನ ನಕಲೀ ಗುರುಗಳ ಮಾತು ಕೇಳಿ ತಮ್ಮ ಊರಿನಿಂದ ಕರೌಂಥಾ ಆಶ್ರಮಕ್ಕೆ ಹೋಗುವ ಜನರನ್ನು ತಡೆಯುತ್ತಿದ್ದರು. ಹಾಗಾಗಿ ಭಕ್ತ ಸುರೇಶ್ ಮತ್ತು ಯಶವಂತಿ ಊರಿನ ಆ ವ್ಯಕ್ತಿಗಳಿಗೆ ಹೇಳುತ್ತಿದ್ದರು ಹೊಡೆಯಿರಿ ಅಥವಾ ಬಿಡಿ ನಾವು ಹೋಗುವುದನ್ನು ನಿಲ್ಲಿಸುವುದಿಲ್ಲ. ನಮ್ಮ ಮನೆಯಂತು ಅಲ್ಲಿಂದ ನೆಲೆಸಿದೆ, ಇಲ್ಲದಿದ್ದರೆ ನಾವು ಹಾಳಾಗುತ್ತಿದ್ದೇವು. ಪರಮಾತ್ಮನು ಅವರ

ನಿಜವಾದ ಭಕ್ತಿಯನ್ನು ನೋಡಿ ಇದೇ ರೀತಿಯ ಪ್ರತಿಫಲವನ್ನು ನೀಡಿದನು.

ಭಕ್ತ ಸುರೇಶನ ಮೊಬೈಲ್ ನಂ.9034029495.

## "ಸತ್ಸಂಗ ಕೇಳದಿದ್ದಕ್ಕೆ ಸರ್ವನಾಶವಾಯಿತು"

ಕಬೀರ್, ರಾಮ್-ನಾಮ್ ಕಡ್ವಾ ಲಾಗ್ಯೆ, ಮೀಠೆ ಲಾಗೆಂ ದಾಮ್ ।
ದುವಿಧಾ ಮೆ ದೋನೋ ಗಏ, ಮಾಯಾ ಮಿಲೀ ನಾ ರಾಮ್ ॥

ಭಾವಾರ್ಥ:- ಸತ್ಸಂಗ ಕೇಳದಿರುವ ಮನುಷ್ಯನಿಗೆ (ಸ್ತ್ರೀ/ಪುರುಷ) ಪರಮಾತ್ಮನ ವಿಧಾನದ ಜ್ಞಾನವಿರುವುದಿಲ್ಲ. ಆ ಕಾರಣದಿಂದ ಅವನಿಗೆ ಪರಮಾತ್ಮನಿಗೆ ಸಂಬಂಧಪಟ್ಟ ಚರ್ಚೆಯೂ ರುಚಿಸುವುದಿಲ್ಲ. ಕೇವಲ ಹಣಗಳಿಕೆ ಇಷ್ಟವಾಗುತ್ತದೆ. ಮುಂದೆ ಅವನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಅಂದರೆ ಅವನಿಗೆ ಪರಮಾತ್ಮನೂ ಸಿಗುವುದಿಲ್ಲ. ಸಾವಿನ ನಂತರ ಹಣವೂ ಇರುವುದಿಲ್ಲ. ಇವೆರಡೂ ಅವನ ಕೈಯಿಂದ ಜಾರಿ ಹೋಗುತ್ತದೆ.

1998ರ ಮಾತು, ಪಂಜಾಬ್ ಪ್ರಾಂತ್ಯದ "ತಲವಂಡಿ ಭಾಯಿ" ಎಂಬ ಹಳ್ಳಿಯಲ್ಲಿ ನನ್ನ (ರಾಮ್‌ಪಾಲ್ ದಾಸ್‌ನ) ಗುರುಗಳ ಆಶ್ರಮವಿದೆ. ಅವರು ಸತ್ಯಲೋಕಕ್ಕೆ ತೆರಳಿದ ನಂತರ ನಾನು(ರಾಮ್‌ಪಾಲ್‌ದಾಸರು) ಪ್ರತಿ ತಿಂಗಳ ಎರಡನೇ ಭಾನುವಾರ ಸತ್ಸಂಗ ನಡೆಸಲು ಅಲ್ಲಿಗೆ ಹೋಗುತ್ತಿದ್ದೆನು. ಆ ಹಳ್ಳಿಯ ಕೆಲವು ಸಾಹುಕರರು ನನ್ನ ಗುರುಗಳ ಶಿಷ್ಯರಾಗಿದ್ದರು. ಅವರ ಸಂಬಂಧಿಕರು ಒಬ್ಬಳು ವೃದ್ಧೆಯ ಸಾವಿನ ಶೋಕಾಚರಣೆಗೆ ಕುಟುಂಬಸಮೇತ ಶುಕ್ರವಾರ ಬಂದಿದ್ದರು. ಶನಿವಾರ ಅಲ್ಲಿಂದ ಮಧ್ಯಾಹ್ನ 2 ಗಂಟೆಗೆ ತಮ್ಮ ಊರು ಚಂಡೀಗಢ್‌ಗೆ ತೆರಳಬೇಕೆಂದಿದ್ದಾಗ, ನಾಳೆ 8ರಿಂದ 10ರವರೆಗೆ ಸತ್ಸಂಗವಿದೆ. ಅದನ್ನು ಕೇಳಿಕೊಂಡು ಪ್ರಸಾದ ಸ್ವೀಕರಿಸಿ ಹೋಗಿ ಎಂದು ಅವರ ಸಂಬಂಧಿಕರೊಬ್ಬರು ಹೇಳಿದರು. ಆಗ ಅವರು ನಾಳೆ ನಮಗೆ ವ್ಯವಹಾರವಿದೆ. ಆ ವ್ಯಾಪಾರದಲ್ಲಿ 5 ಲಕ್ಷ ಲಾಭವಿದೆ ಎಂದರು. ಸತ್ಸಂಗದ ಭಕ್ತರು ಎಷ್ಟೇ ಆಗ್ರಹಿಸಿದರೂ ಅವರು ಕೇಳಲಿಲ್ಲ. ನಾಳೆ 11 ಗಂಟೆಗೆ ಹೊರಡಿದರೂ ನೀವು ಸರಿಯಾದ ಸಮಯಕ್ಕೆ ಹೋಗುವಿರಿ ಮತ್ತು ಫೋನ್ ಮಾಡಿ ಹೇಳಿದರೆ ಆಯ್ತು ಸ್ವಲ್ಪ ತಡವಾಗುತ್ತದೆಯೆಂದು. ಆದರೂ ಕೇಳಲಿಲ್ಲ, ಅವನ ಕುಟುಂಬದಲ್ಲಿ ಒಟ್ಟು 4 ಜನ ಸದಸ್ಯರಿದ್ದರು. ಪತ್ನಿ, ಮಗ ಮತ್ತು ಮಗಳನ್ನು ಕರೆದುಕೊಂಡು ಮಾರುತಿ ಕಾರಿನಲ್ಲಿ ಶನಿವಾರ ಹೊರಡಿದರು.

ಚಂಡೀಗಢ್ ತಲುಪುವ ಸ್ವಲ್ಪ ಮುಂಚೆ ಅಂಬಾಲಾ ಎನ್ನುವ ಊರಿನ ಬಳಿ ಲೋಡ್ ತುಂಬಿದ ಟ್ರಕ್ ಒಂದು ನಿಂತಿತ್ತು. ಆ ಟ್ರಕ್‌ನ ಹಿಂದಿನ ಚಕ್ರ ತೆಗೆದಿದ್ದರು, ಜಾಕ್ ಹಾಕಿದ್ದರು. ಮಾರುತಿ ಕಾರು ಬಹಳ ವೇಗವಾಗಿ ಚಲಿಸುತ್ತಿತ್ತು. ಏಕೆಂದರೆ ಮಾಯೆಯ ಲೋಭಿಗೆ ಕೇವಲ ಐದು ಲಕ್ಷದ ಲಾಭ ಕಾಣುತ್ತಿತ್ತು. ಕಾರು ನೇರವಾಗಿ ಹೋಗಿ ಟ್ರಕ್ ಕೆಳಗೆ ನುಗ್ಗಿತು, ಜಾಕ್ ಸರಿಯಿತು ಲೋಡ್ ತುಂಬಿದ ಟಕ್ರ್ ಕೆಳಗೆ ಕಾರು ನಜ್ಜು ಗುಜ್ಜಾಗಿ ಹೋಯಿತು. ಇಡೀ ಪರಿವಾರ ನಾಶವಾಯಿತು. ಅವರು ಸತ್ಸಂಗ ಕೇಳಲು ಉಳಿದುಕೊಂಡಿದ್ದರೆ, ಅವರು ಸಾಯುತ್ತಿರಲಿಲ್ಲ ಎಂದು ಹೇಳಲು ದುಃಖವಾಗುತ್ತದೆ. ಮಾಯೆಯಿಲ್ಲದಿದ್ದರೆ ಹೇಗಾದರೂ ಕೆಲಸ ನಡೆಯುತ್ತದೆ. ಆದರೆ ಶರೀರವಿಲ್ಲದಿದ್ದರೆ ನಡೆಯುವುದಿಲ್ಲ. ಶರೀರವಿದ್ದರೆ ಪರಮಾತ್ಮನ ಭಕ್ತಿಮಾಡಿ ಉದ್ಧಾರಮಾಡಿಕೊಳ್ಳಬಹುದು. ಪರಮೇಶ್ವರ ಕಬೀರರು ಎಚ್ಚರಿಸಿದ್ದಾರೆ.

ಕಬೀರ್, ರಾಮ್ ನಾಮ್ ಕಡವಾ ಲಗ್ಯೆ, ಮೀಠೇ ಲಾಗೇಂ ದಾಮ್ ।
ದುವಿಧಾ ಮೆಂ ದೋನೋಂ ಗಏ, ಮಾಯಾ ಮಿಲೀ ನಾ ರಾಮ್ ॥

ಭಾವಾರ್ಥ:- ಸತ್ಸಂಗ ಕೇಳದಿರುವ ಮನುಷ್ಯನಿಗೆ(ಸ್ತ್ರೀ/ಪುರುಷ) ಪರಮಾತ್ಮನ ವಿಧಾನದ ಜ್ಞಾನವಿರುವುದಿಲ್ಲ. ಆ ಕಾರಣದಿಂದ ಅವನಿಗೆ ಪರಮಾತ್ಮನಿಗೆ ಸಂಬಂಧಪಟ್ಟ ಚರ್ಚೆಯೂ ರುಚಿಸುವುದಿಲ್ಲ. ಕೇವಲ ಹಣಗಳಿಕೆ ಇಷ್ಟವಾಗುತ್ತದೆ. ಮುಂದೆ ಅವನು ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಅಂದರೆ ಅವನಿಗೆ ಪರಮಾತ್ಮನೂ ಸಿಗುವುದಿಲ್ಲ. ಸಾವಿನ ನಂತರ ಹಣವೂ

ಇರುವುದಿಲ್ಲ. ಇವೆರಡೂ ಅವನ ಕೈಯಿಂದ ಜಾರಿ ಹೋಗುತ್ತವೆ.

ಆದ್ದರಿಂದ ಅಕ್ಕ-ತಂಗಿಯರೇ, ಅಣ್ಣ-ತಮ್ಮಂದಿರೇ, ಸತ್ಸಂಗದ ಕಡೆಗೆ ಒಲವು ತೋರಿಸಿ. ಆತ್ಮ ಕಲ್ಯಾಣಕ್ಕಾಗಿ ಶ್ರಮಿಸಿ ಮತ್ತು ಬದುಕುವ ದಾರಿಯನ್ನು ಸುಗಮಗೊಳಿಸಿ.

## "ಸತ್ಸಂಗಕ್ಕೆ ಹೋದರೆ ದೊಡ್ಡ ವಿಪತ್ತಿನಿಂದ ಪಾರಾಗಬಹುದು"

ಕಬೀರ್, ಸಂತ ಶರಣ್ ಮೆಂ ಆನೇ ಸೇ, ಆಈ ಟಲ್ಯೈ ಬಲಾ ।
ಜೈ ಭಾಗ್ಯ ಮೆಂ ಸೂಲೀ ಹೋ, ಕಾಂಟೇ ಮೆಂ ಟಲ್ ಜಾಯ್ ॥

ಭಾವಾರ್ಥ :- ಕಬೀರ ಪರಮೇಶ್ವರರ ಕೃಪಾ ಪಾತ್ರರಾದ ನಿಜವಾದ ಗುರು (ಸದ್ಗುರು) ವಿನಿಂದ ದೀಕ್ಷೆ ಪಡೆಯುವ ಭಕ್ತ/ಭಕ್ತೆಯನ್ನು ಪರಮಾತ್ಮನು ರಕ್ಷಿಸುತ್ತಾನೆ. ಒಂದು ವೇಳೆ ಪೂರ್ವಜನ್ಮದ ಪಾಪದಿಂದ ಸಾಧಕನನ್ನು ಗಲ್ಲಿಗೇರಿಸುವ ಮೂಲಕ ಮರಣ ದಂಡ ಅವನ ಹಣೆಯಲ್ಲಿ ಬರೆದಿದ್ದರೆ ಪರಮಾತ್ಮನು ಆ ಸಾಧಕನ ಆ ಮರಣದಂಡನೆಯನ್ನು ಕೊನೆಗೊಳಿಸಿ, ಯಾವುದಾದರೂ ಸಣ್ಣ ಪುಟ್ಟ ಶಿಕ್ಷೆಯನ್ನು ಕೊಡುತ್ತಾನೆ. ಅಂದರೆ ಕಾಲಿಗೆ ಮುಳ್ಳು ಚುಚ್ಚುವಂತೆ ಮಾಡುವಂಥಾ ಪುಟ್ಟ ಶಿಕ್ಷೆಯನ್ನು ನೀಡುತ್ತಾನೆ. ಭಯಂಕರವಾದಂತಹ ಬಹಳ ಕಷ್ಟವನ್ನು ಕೊಡುವಂತಹ ಶಿಕ್ಷೆಯನ್ನು ಹೆಸರಿಗೆ ಮಾತ್ರ ಶಿಕ್ಷೆ ಎನ್ನುವಂತೆ ಬದಲಿಸಿಬಿಡುತ್ತಾನೆ.

ಒಂದು ಹಳ್ಳಿಯಲ್ಲಿ ಒಬ್ಬ ಸಂತನ ಆಶ್ರಮವಿತ್ತು. ಅದು ಹಳ್ಳಿಯಿಂದ 2 ಕಿ.ಮೀ ದೂರದಲ್ಲಿತ್ತು. ವರ್ಷದಲ್ಲಿ ಕೇವಲ ಎರಡು ಬಾರಿ ಮಾತ್ರ ಗುರುಗಳು ಆಶ್ರಮಕ್ಕೆ ಬರುತ್ತಿದ್ದರು. ಆ ಹಳ್ಳಿಯಲ್ಲಿ ಅನೇಕ ಕುಟುಂಬಗಳು ಅವರ ಶಿಷ್ಯರಾಗಿದ್ದವು. ಗುರುಗಳ ಜೊತೆ ಹಲವಾರು ಶಿಷ್ಯರೂ ಬರುತ್ತಿದ್ದರು. ಗುರುಗಳು ತಮ್ಮ ಶಿಷ್ಯರೊಡನೆ ಎರಡು ತಿಂಗಳು ಆಶ್ರಮದಲ್ಲಿ ಉಳಿಯುತ್ತಿದ್ದರು. ಉಳಿದ ಸಮಯದಲ್ಲಿ ಬೇರೆ ಬೇರೆ ಆಶ್ರಮಗಳಿಗೆ ತೆರಳುತ್ತಿದ್ದರು. ಈ ಬಾರಿಯೂ ಗುರುಗಳು ಬಂದಾಗ ಭಕ್ತರು ಅವರವರ ಮನೆಯಿಂದ ಊಟದ ವ್ಯವಸ್ಥೆ ಮಾಡಿದ್ದರು. ಒಂದು ಕುಟುಂಬ ಒಂದು ದಿನದ ಊಟವನ್ನು ತಯಾರಿಸಿ ಊಟ ಮಾಡಿಸುತ್ತಿತ್ತು, ಗುರುಗಳಿಗೆ ರೊಟ್ಟಿ-ಪಲ್ಯ, ಪಾಯಸಾವನ್ನು ಬಡಿಸುವ ಇಚ್ಛೆ ಪ್ರತಿ ಭಕ್ತರಿಗಿತ್ತು. ಒಂದು ಕುಟುಂಬದ ಊಟದ ದಿನವಿತ್ತು. ಆ ದಿನ ಹಾಲು ಒಡೆದು ಹೋಗಿತ್ತು. ಆ ತಾಯಿಯ ಹೆಸರು ಕಸ್ತೂರಿ ಇತ್ತು. ಅವಳ ಪಕ್ಕದ ಮನೆಯಲ್ಲಿ ತಾಯಿ ಮಗ ವಾಸಿಸುತ್ತಿದ್ದರು. ಆ ತಾಯಿಯ ಹೆಸರು ರಾಮೋ. ಮಗ 2 ವರ್ಷದವನಿದ್ದಾಗ ಅವಳ ಪತಿ ತೀರಿಕೊಂಡಿದ್ದನು. ಅವಳ ಸಂಬಂಧಿಕರಲ್ಲಿ ಒಂದು ಘಟನೆ ನಡೆದಿತ್ತು. ಅವಳ ಸೋದರತ್ತೆಯ ಮಗಳೂ ಸಹ ಅವಳ ಮಗನಿಗೆ 3 ವರ್ಷವಾಗಿದ್ದಾಗ ಅವಳ ಪತಿ ತೀರಿಕೊಂಡನು, ಅವಳು ಮೈದುನನ್ನು ಮದುವೆಯಾದಳು. ಮೈದುನನಿಗೆ ಈ ಮೊದಲೇ ಮದುವೆಯಾಗಿತ್ತು. ಮೈದುನನಿಂದ ಅವಳಿಗೊಂದು ಮಗು ಹುಟ್ಟಿತು. ಕೆಲವು ದಿನಗಳಲ್ಲೇ ಅವಳ ಜೀವನ ನರಕವಾಯಿತು. ಮೈದುನ ಮತ್ತು ಅವನ ಪತ್ನಿ ಅವಳನ್ನು ಮತ್ತು ಅವಳ ಮಗನನ್ನು ಕೆಲಸದವರಂತೆ ನೋಡಿಕೊಳ್ಳುತ್ತಿದ್ದರು. ತಂಗಳು, ಹಳಸಲು ತಿನ್ನಲು ಕೊಡುತ್ತಿದ್ದರು. ಮಗ ಸ್ವಲ್ಪ ದೊಡ್ಡವನಾದ ಮೇಲೆ ಇವರ ವ್ಯವಹಾರದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡನು. ಇದನ್ನು ನೋಡಿದ ತಾಯಿ ಹುಚ್ಚಿಯಾಗಿ ಎಲ್ಲಿಗೋ ಓಡಿಹೋದಳು. (ಎಲ್ಲಾ ಮೈದುನರು ಕೆಟ್ಟವರಿರುವುದಿಲ್ಲ) ಈ ಘಟನೆಯಿಂದ ಹೆದರಿಕೊಂಡು ರಾಮೋ ಬೇರೆ ಮದುವೆಯಾಗಲಿಲ್ಲ. ಅವಳ ಮಗನಾದ ಕರ್ಮಪಾಲನನ್ನೂ ಸಾಕಿ ಬೆಳೆಸಿದಳು. ಇದ್ದ ಅಲ್ಪ ಸ್ವಲ್ಪ ಜಮೀನಿನಲ್ಲಿ ಕೆಲಸ ಮಾಡಿ, ದನ ಕರುಗಳನ್ನು ಸಾಕುತ್ತಾ, ತನ್ನ ಮಗನಿಗೆ ಹಾಲು, ಹಣ್ಣು, ಸ್ವಾದಿಷ್ಟ ಭೋಜನ, ತುಪ್ಪ ತಿನ್ನಿಸುತ್ತಿದ್ದಳು. 'ದೊಡ್ಡವನಾದ ಮೇಲೆ ಅವನಿಗೆ ಮದುವೆ ಮಾಡಬೇಕು. ಆಗ ಅವನು ಕುಟುಂಬದ ಪೋಷಣೆ ಮಾಡುತ್ತಾನೆ'. ನಂತರ ನಾನು ಸುಖವಾಗಿರಬಹುದು ಎಂದು ಭಾವಿಸಿದಳು. ಆದರೆ ಸತ್ಸಂಗವಿಲ್ಲದೆ ಜ್ಞಾನವಿಲ್ಲ, ಗುರುವೇ ಜ್ಞಾನ ನೀಡುವವನು. ಎಷ್ಟೇ ಶ್ರೀಮಂತರಾಗಿದ್ದರೂ ಭಕ್ತಿ ಇಲ್ಲದಿದ್ದರೆ ಸುಖವಿಲ್ಲ. ತಾಯಿಗೆ ತನ್ನ ಮಕ್ಕಳನ್ನು ಸುಖವಾಗಿ ಇಡುವ ಅಭಿಲಾಷೆ ಇರುತ್ತದೆ. ಆದರೆ ತಂದೆ ಇಲ್ಲದ ಮಗ ತಾಯಿಯ ಮುದ್ದಿನಿಂದ ಹಾಳಾಗುತ್ತಾನೆ. ವಿಧವೆಯ ಮಗ, ವಿಧುರನ ಮಗಳು ಹಾಳಾಗುತ್ತಾರೆ

ಎಂಬ ಗಾದೆಯೇ ಇದೆ. ಏಕೆಂದರೆ ತಂದೆ ತನ್ನ ಕೆಲಸದಲ್ಲಿ ಮಗಳ ಮೇಲೆ ಗಮನ ಕೊಡುವುದಿಲ್ಲ. ತಾಯಿ ಮಗನ ಮೇಲೆ ಗಮನ ಕೊಡುವುದಿಲ್ಲ. ಮಗಳನಂತು ತನ್ನ ಜೊತೆಯಲ್ಲಿಡುತ್ತಾಳೆ. ಹೀಗಾಗಿ ಕರ್ಮಪಾಲ್ ಮದ್ಯವ್ಯಸನಿಯಾದನು. ತಾಯಿಯ ಜೊತೆ ಜಗಳವಾಡಿ ಹಣ ಅಥವಾ ಜೋಳ, ಗೋಧಿ ಒಯ್ದು ಮಾರಾಟ ಮಾಡಿ ಬಂದ ಹಣದಿಂದ ಸಾರಾಯಿ ಕುಡಿಯುತ್ತಿದ್ದನು. ತಾಯಿಯು ಇಡೀ ದಿನ ಅಳುತ್ತಿದ್ದಳು. 'ಏನಾಗಬೇಕೆಂದು ಯೋಚಿಸಿದ್ದೆ, ಏನಾಗಿಹೊಯ್ತು' ಎಂದು ಗೋಳಾಡಿದಳು. ಇದೇ ಚಿಂತೆಯಲ್ಲಿ ಸ್ವರಗಿದ್ದಳು.

ಭಕ್ತಮತಿ ಕಸ್ತೂರಿ ಪಕ್ಕದ ಮನೆಯ ರಾಮ್‌ಪ್ಯಾರಿಯ(ರಾಮೋ) ಮನೆಗೆ ಹೋದಳು. ಮೊದಲು ಕ್ಷೇಮ ಸಮಾಚಾರವಾಯಿತು. ನಂತರ ಮಗನು ಏನು ಮಾಡುತ್ತಿದ್ದಾನೆ? ತಾಯಿ–ಮಗ ಕ್ಷೇಮವೇ? ಎಂದು ಕೇಳಿದಳು, ಇದನ್ನು ಕೇಳಿ ರಾಮೋ ಅಳಲು ಪ್ರಾರಂಭಿಸಿದಳು. "ನನ್ನ ಮಗ ಅಡ್ಡ ದಾರಿ ಹಿಡಿದಿದ್ದಾನೆ. ಮದ್ಯವ್ಯಸನಿಯಾಗಿದ್ದಾನೆ. ಯಾವಾಗಲೂ ಜಗಳವಾಡುತ್ತಾನೆ. ಬೈಯುತ್ತಾನೆ. ನನ್ನ ಗಂಡನ ಅಣ್ಣನನ್ನು ಮದುವೆ ಮಾಡಿಕೊಳ್ಳಬೇಕೆಂದು ಊರಿನವರು, ನಮ್ಮ ಕುಟುಂಬದವರೆಲ್ಲಾ ನನ್ನನ್ನು ಎಷ್ಟು ಒತ್ತಾಯಿಸಿದರು. ಆದರೆ ನಾನು ರಾಜವಂತಿಯ ಘಟನೆಯಿಂದ ಹೆದರಿ ಮೈದುನನ್ನು ಮದುವೆಮಾಡಿಕೊಳ್ಳಲಿಲ್ಲ, ನನ್ನ ಮಗನನ್ನು ಸುಖವಾಗಿಡಲು. ಇಂದು ಅವನು ಅದಕ್ಕಿಂತ ಹೆಚ್ಚು ದುಃಖ ನೀಡುತ್ತಿದ್ದಾನೆ. ಎಲ್ಲಾದರೂ ಓಡಿ ಹೋಗಿ ಅಥವಾ ಆತ್ಮಹತ್ಯೆ ಮಾಡಿಕೊಳ್ಳೋಣವೆನ್ನಿಸುತ್ತಿದೆ" ಎಂದಳು ಆಗ ಕಸ್ತೂರಿಯು, "ತಂಗಿ, ತಪ್ಪು ಮಾಡುತ್ತಿರುವೆ. ದೊಡ್ಡವನಾದ ಮೇಲೆ ಸುಧಾರಿಸುವನು. ನೀನು ಸತ್ತು ಹೋದರೆ ನಿನ್ನ ಸಂಬಂಧಿಕರು ಇರುವ ಜಮೀನನ್ನು ಕಬಳಿಸುತ್ತಾರೆ. ನಿನ್ನ ಮಗನನ್ನು ಅಧಿಕ ನಶೆ ಮಾಡಿಸಿ ಕೊಂದು ಹಾಕುವರು. ಹಾಗೆಲ್ಲಾ ಕೆಟ್ಟ ಯೋಚನೆ ಮಾಡಬೇಡ. ಒಂದು ಕೆಲಸ ಮಾಡು, ನನ್ನ ಜೊತೆ ಸತ್ಸಂಗಕ್ಕೆ ಬಾ, ನೀನೊಬ್ಬಳೇ ಇದ್ದರೆ ಬರೀ ಕೆಟ್ಟ ಯೋಚನೆಗಳೇ ಬರುವುವು. ನೋಡು, ಎಷ್ಟು ಸಣ್ಣಗಾಗಿದ್ದೀಯಾ" ಎಂದಳು. ಆಗ ರಾಮೋ ಅಂದಳು, "ಅಕ್ಕಾ, ನನ್ನನ್ನು ಈ ಜನರೆಲ್ಲಾ ಸಂದೇಹದ ದೃಷ್ಟಿಯಿಂದ ನೋಡುತ್ತಾರೆ. ಯಾರಾದರೂ ಕೆಲಸದ ಮೇಲೆ ನಮ್ಮ ಮನೆಗೆ ಬಂದರೆ ಜನರೆಲ್ಲಾ ಕಣ್ಣುಗಳಿಂದ ದಿಟ್ಟಿಸಿ ನೋಡುತ್ತಾರೆ. ನಿಮಗೇನೋ ನಿಮ್ಮ ಪತಿ ಇದ್ದಾರೆ, ನಾನು ಸತ್ಸಂಗಕ್ಕೇನಾದರೂ ಬಂದರೆ ನನ್ನನ್ನು ಸುಮ್ಮನೆ ಬಿಟ್ಟಾರೆಯೇ? ನಾನಂತೂ ಸಾಯಲೇ ಬೇಕು. ಹೋಗಲಿ, ಹೇಳು. ಇಂದು ಬೆಳಗ್ಗೆ ಬಂದಿರುವೆ ಏನು ಕೆಲಸ?" ಎಂದಳು. ಆಗ ಕಸ್ತೂರಿಯು "ತಂಗಿ, ನಿನಗೆ ಗೊತ್ತಿರಬಹುದು, ನಮ್ಮ ಗುರುಗಳು ಆಶ್ರಮದಲ್ಲಿ ತಂಗಿದ್ದಾರೆ. ಈ ದಿನ ಊಟ ಕಳುಹಿಸುವ ಸರದಿ ನನ್ನದಾಗಿದೆ. ಸ್ವಲ್ಪ ಪಾಯಸಾ ಮಾಡಬೇಕಿತ್ತು. ಹಾಲೆಲ್ಲಾ ಒಡೆದು ಹೋಗಿದೆ. ಸ್ವಲ್ಪ ಹಾಲನ್ನು ಸಾಲವಾಗಿ ಕೊಟ್ಟರೆ ನಾಳೆ ಹಿಂತಿರುಗಿಸುತ್ತೇನೆ" ಎಂದಳು. ಈ ಮಾತನ್ನು ಕೇಳಿದ ರಾಮೋಗೆ ಕರೆಂಟ್ ಬಂದಂತಾಯ್ತು ಮತ್ತು ಬಕೆಟ್‌ನಲ್ಲಿ ಹಾಲು ಕರೆದು ಇಟ್ಟಿದ್ದಳು. ತಗೊಂಡು ಎಲ್ಲಾ ಹಾಲನ್ನು ಕಸ್ತೂರಿಯ ಬಕೆಟ್‌ನಲ್ಲಿ ತಂದು ಸುರಿದಳು. ಕಸ್ತೂರಿಯು ಸ್ವಲ್ಪ ಅವಳಿಗಾಗಿ ಇಟ್ಟುಕೊಳ್ಳಲು ಹೇಳಿದರೂ ಸಹ, ರಾಮೋ ನಿರಾಕರಿಸುತ್ತಾ ಹೇಳಿದಳು, "ಯಾವ ಜನ್ಮದ ಪುಣ್ಯವೋ ಗೊತ್ತಿಲ್ಲ, ನನ್ನಂಥಾ ನತದೃಷ್ಟೆಯ ಮನೆಯ ಹಾಲು ಪುಣ್ಯಕಾರ್ಯಕ್ಕೆ ಉಪಯೋಗವಾಗುತ್ತಿದೆ. ಅಕ್ಕಾ ತೆಗೆದುಕೊಂಡು ಹೋಗಿ, ಗುರುಗಳ ಮತ್ತು ಭಕ್ತರ ಊಟಕ್ಕೆ ಉಪಯೋಗಿಸಿ" ಎಂದಳು.

ಕಸ್ತೂರಿ ಆಶ್ಚರ್ಯದಿಂದ ನೋಡುತ್ತಾ, ನಾನು ಸತ್ಸಂಗಿಯಾಗಿದ್ದರೂ ಇಡೀ ಹಾಲನ್ನು ನೀಡುತ್ತಿರಲಿಲ್ಲ, ಆದರೆ ಇವಳೆಷ್ಟು ಒಳ್ಳೆಯವಳು! ಇವಳಿಗೆ ಸತ್ಸಂಗದ ಪ್ರೇರಣೆಯ ಅವಶ್ಯಕತೆ ಇದೆ ಎಂದುಕೊಂಡಳು. ಆ ದಿನವಂತು ಕಸ್ತೂರಿಗೆ ಸಮಯಸಿಗಲಿಲ್ಲ. ಮಾರನೇ ದಿನ 10–11 ಗಂಟೆಗೆ ಕಸ್ತೂರಿ ರಾಮೋ ಮನೆಗೆ ಹೋದಳು, ಹಳ್ಳಿಯಲ್ಲಿ ದಿನದ 12 ರಿಂದ 2ರ ತನಕ ಮಹಿಳೆಯರಿಗೆ ಮಾತನಾಡಲು ಸಮಯ ಸಿಗುತ್ತದೆ. ಗುರುವಿನಿಂದ ಕೇಳಿಸಿಕೊಂಡಿದ್ದ ಸತ್ಸಂಗದ ಮಾತುಗಳನ್ನೆಲ್ಲಾ ರಾಮೋಗೆ ತಿಳಿಸಿದಳು. ಆದರೆ ಸಮಾಜಕ್ಕೆ ಹೆದರಿ ರಾಮೋ ಒಪ್ಪಲು

ಸಿದ್ಧಳಿರಲಿಲ್ಲ. ಆಗ ಕಸ್ತೂರಿಯು, "ತಂಗಿ, ನೀವು ಮೀರಾಬಾಯಿಯ ಕತೆ ಕೇಳಿಲ್ಲವೇ?" ಎಂದಳು. ಆಗ ರಾಮೋ, "ಅವಳು ಕೃಷ್ಣನ ಭಕ್ತೆ ಅಲ್ಲವೇ" ಎಂದಳು. ಕಸ್ತೂರಿಯು ಹೇಳಿದಳು, "ಹೌದು ಅವಳು ದೇವಸ್ಥಾನಕ್ಕೆ ಹೋಗುತ್ತಿದ್ದಳು, ಠಾಕೂರ್ ವಂಶದಲ್ಲಿ ಜನಿಸಿದ್ದಳು. ಆ ವಂಶದ ಮಹಿಳೆಯು ಮನೆ ಬಿಟ್ಟು ಹೊರಹೋಗುವುದು ನಿಷೇಧವಿತ್ತು. ಮೀರಾಬಾಯಿ ಯಾರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಿಲ್ಲ. ಅವಳ ಮದುವೆ ರಾಜನ ಜೊತೆ ಆಯಿತು. ರಾಣಾ ಧಾರ್ಮಿಕನಾಗಿದ್ದನು. ಅವನು ಮೀರಾಳನ್ನು ದೇವಸ್ಥಾನಕ್ಕೆ ಹೋಗುವುದನ್ನು ತಡೆಯಲಿಲ್ಲ.

ಆದರೆ ಸಮಾಜಕ್ಕೆ ಹೆದರಿ ಅವಳ ಜೊತೆ 3–4 ಮಹಿಳಾ ಸೇವಕಿಯರನ್ನು ಕಳುಹಿಸುತ್ತಿದ್ದನು. ಆದ್ದರಿಂದ ಎಲ್ಲವೂ ಚೆನ್ನಾಗಿ ನಡೆಯುತ್ತಿತ್ತು. ಕೆಲವು ವರ್ಷಗಳ ನಂತರ ರಾಣಾ ಸಾವನ್ನಪ್ಪಿದನು, ನಂತರ ಅವನ ತಮ್ಮನು ಸಿಂಹಾಸನವನ್ನೇರಿದನು, ಕುಲದ ಜನರು ಹೇಳುವುದರಿಂದ ಅವನು ಮೀರಾಳನ್ನು ದೇವಸ್ಥಾನಕ್ಕೆ ಹೋಗುವುದರಿಂದ ತಡೆದನು. ಆದರೆ ಮೀರಾಬಾಯಿ ಕೇಳಲಿಲ್ಲ. ಹಾಗಾಗಿ ರಾಜನು ಮೀರಾಬಾಯಿಯನ್ನು ಹೇಗಾದರೂ ಮಾಡಿ ಸಾಯಿಸಬೇಕೆಂದು ಯೋಚಿಸಿದನು, ಅದಕ್ಕಾಗಿ ಒಂದು ಉಪಾಯವನ್ನು ಮಾಡಿದನೆಂದರೆ ಇವಳು ಸಾಯಲಿ ಮತ್ತು ರಾಜನು ಯೋಚಿಸಿದ ಇವಳನ್ನು ಹೇಗೆ ಸಾಯಿಸುವುದು? ಹಾವಾಡಿಗನನ್ನು ಕರೆಸಿ ಅತ್ಯಂತ ವಿಷಪೂರಿತ ಹಾವು ಪೆಟ್ಟಿಗೆ ತೆಗೆಯುತ್ತಿದ್ದಂತೆ ಪೆಟ್ಟಿಗೆ ತೆಗೆದವನನ್ನು ಕಡಿಯಬೇಕು ಮತ್ತು ವ್ಯಕ್ತಿ ಮರಣ ಹೊಂದಬೇಕು ಎಂದು ಹೇಳಿದನು. ಹಾಗೆಯೇ ಮಾಡಲಾಯ್ತು. ಮರುದಿನ ರಾಜನು ತನ್ನ ಮಗನ ಜನ್ಮದಿನ ಆಚರಿಸಿದನು, ಅದರಲ್ಲಿ ಸಂಬಂಧಿಕರನ್ನು, ದೊಡ್ಡ ವ್ಯಕ್ತಿಗಳನ್ನು ಕರೆದನು. ಆ ದಿನ ಮೀರಾಬಾಯಿಯ ಸೇವಕಿಯನ್ನು ಕರೆದು, "ಇದನ್ನು ಮೀರಾಬಾಯಿಗೆ ಕೊಟ್ಟು ಬಾ, ಇದರಲ್ಲಿ ಬೆಲೆ ಬಾಳುವ ವಜ್ರದ ಹಾರವಿದೆ. ಈ ದಿನ ಸಂಜೆ ನನ್ನ ಮಗನ ಜನ್ಮ ದಿನಕ್ಕೆ ಎಲ್ಲಾ ಗಣ್ಯರು ಆಗಮಿಸುತ್ತಾರೆ, ಅತ್ತಿಗೆಯನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ ಎಂದು ಹೇಳುವರು. ನನ್ನ ಮಾನದ ಪ್ರಶ್ನೆಯಾಗಿದೆ. ಆಗ ಮೀರಾಬಾಯಿ ಅತ್ಯಂತ ದುಬಾರಿಯಾದ ಬಟ್ಟೆ ತೊಟ್ಟುಕೊಂಡು, ಈ ಬೆಲೆ ಬಾಳುವ ಹಾರವನ್ನು ಹಾಕಿಕೊಂಡು ಬರಲಿ, ಈ ವಿಷಯವನ್ನು ಅವಳಿಗೆ ತಿಳಿಸು" ಎಂದು ಹೇಳಿದನು.ಸೇವಕಿ ಅದೇ ರೀತಿ ಹೇಳಿ, ಮೀರಾಬಾಯಿಗೆ ಆ ಪೆಟ್ಟಿಗೆಯನ್ನು ಕೊಟ್ಟು ಬಂದಳು ಮತ್ತು ರಾಜನ ಆದೇಶ ತಿಳಿಸಿದಳು.

ಆ ಪೆಟ್ಟಿಗೆಯಲ್ಲಿ ಕಪ್ಪು ಬಣ್ಣದ ಅತ್ಯಂತ ವಿಷಕಾರಿ ಸರ್ಪವಿತ್ತು. ಮೀರಾಬಾಯಿಗೆ ಇಷ್ಟವಿಲ್ಲದಿದ್ದರೂ ಮೈದುನನಿಗೆ ಬೇಸರವಾಗಬಹುದೆಂದು ತಿಳಿದು ಸೇವಕಿಯ ಮುಂದೆ ಆ ಪೆಟ್ಟಿಗೆಯನ್ನು ತೆರೆದಳು. ಅದರಲ್ಲಿ ನಿಜವಾಗಲೂ ಬೆಲೆಬಾಳುವ ವಜ್ರದ ಹಾರವಿತ್ತು. ಮೀರಾಬಾಯಿ ಯೋಚಿಸಿದಳು ನಾನು ಹಾರವನ್ನು ಹಾಕಿಕೊಳ್ಳದಿದ್ದರೆ ಸುಮ್ಮನೆ ಜಗಳವಾಗುವುದು. ನನಗಂತು ಇದು ಮಣ್ಣು, ಹೀಗೆ ಯೋಚಿಸಿ ಮೀರಾ ಆ ಹಾರವನ್ನು ಕೊರಳಲ್ಲಿ ಹಾಕಿಕೊಂಡಳು. ಹಾವು ಕಡಿತದಿಂದ ಮೀರಾ ಸಾಯುವಳು ಮತ್ತು ನನ್ನ ಮೇಲೆ ಯಾರೂ ಸಂಶಯಪಡುವುದಿಲ್ಲ ಎಂಬ ರಾಜನ ಉದ್ದೇಶವಿತ್ತು. ಸ್ವಲ್ಪ ಸಮಯದ ನಂತರ ರಾಜನು ಮಂತ್ರಿಗಳ ಜೊತೆಗೆ ಹಾಗೂ ಕೆಲವು ಸಂಬಂಧಿಕರ ಜೊತೆ ಮೀರಾನ ಅರಮನೆಗೆ ಹೋದಾಗ ಮೀರಾಬಾಯಿಯ ಕೊರಳಲ್ಲಿ ಸುಂದರ ಹಾರವನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು ಮತ್ತು ಕೋಪದಿಂದ ಹೇಳಿದ ನಿನ್ನ ಚಾರಿತ್ರ್ಯ ಚೆನ್ನಾಗಿಲ್ಲ, ಯಾವ ಪ್ರೀಯತಮ ನಿನಗೆ ಈ ಹಾರ ಕೊಟ್ಟನು? ಎಂದು ಬಯ್ದನು, ಮೀರಾಬಾಯಿ ಅಳುತ್ತಾ, "ಈ ಹಾರ ನೀವೇ ಸೇವಕಿಯ ಮೂಲಕ ಕಳುಹಿಸಿದ್ದು, ಸೇವಕಿಯನ್ನು ಕರೆಸಿದರು ಆ ಪೆಟ್ಟಿಗೆ ಎಲ್ಲಿದೆ ಎಂದು ಕೇಳಿದ? ಸೇವಕಿ ಮಂಚದ ಕೆಳಗಿನಿಂದ ಪೆಟ್ಟಿಗೆಯನ್ನು ತೆಗೆದು ತೋರಿಸಿದಳು, ಇದು ನೋಡಿ ರಾಜ ನೀವು ಕಳುಹಿಸಿದ್ದು. ರಾಜನು ಮರು ಮಾತಿಲ್ಲದೆ ಮರಳಿ ಬಂದನು. ಅವಳನ್ನು ಹೇಗಾದರೂ ಮಾಡಿ ಸಾಯಿಸಬೇಕೆಂದು ಯೋಚಿಸುತ್ತಾ, ಈ ಬಾರಿ ನಾನೇ ಇವಳಿಗೆ ವಿಷ ಕುಡಿಸುತ್ತೇನೆ, ಕುಡಿಯದಿದ್ದರೆ ತಲೆ ಕತ್ತರಿಸುತ್ತೇನೆ, ಎಂದು ಮನಸ್ಸಿನಲ್ಲೇ ಅಂದುಕೊಂಡನು.

## "ಮೀರಾಬಾಯಿಯನ್ನು ವಿಷ ಕುಡಿಸಿ ಕೊಲ್ಲುವ ವ್ಯರ್ಥ ಪ್ರಯತ್ನ"

ಈ ಬಾರಿ ಹಾವಾಡಿಗನನ್ನು ಕರೆದು ಕಾರ್ಕೋಟಕ ವಿಷ, ನಾಲಿಗೆ ಮೇಲೆ ಇಡುತ್ತಿದ್ದಂತೆ ತಕ್ಷಣ ಯಾರೇ ಆಗಲಿ ಸತ್ತು ಬೀಳುವಂಥಾ ವಿಷವನ್ನು ತರಸಿಕೊಂಡನು, ನಂತರ ಮೀರಾಬಾಯಿಯನ್ನು ಕರೆದು "ವಿಷವನ್ನು ಕುಡಿ, ಇಲ್ಲದಿದ್ದರೆ ನಿನ್ನ ತಲೆ ಕತ್ತರಿಸುತ್ತೇನೆ" ಎಂದು ಗದರಿಸಿದನು, ಮೀರಾಬಾಯಿ ತಲೆ ಕಡಿಯುವುದರಿಂದ ಹೆಚ್ಚು ನೋವಾಗುತ್ತದೆ, ವಿಷ ಕುಡಿಯುವುದೇ ಲೇಸೆಂದು ತಿಳಿದು, ಭಗವಂತನ ಧ್ಯಾನ ಮಾಡುತ್ತಾ, ವಿಷದ ಬಟ್ಟಲನ್ನು ತೆಗೆದುಕೊಂಡು ಒಂದೇ ಗುಟುಕಿಗೆ ಕುಡಿದು ಬಿಟ್ಟಳು, ಆದರೆ ಅವಳಿಗೆ ಏನೂ ಆಗಲಿಲ್ಲ, ರಾಜನು ಕೋಪಗೊಂಡು ಹಾವಾಡಿಗನಿಗೆ ಬಯ್ದನು. ಆ ವಿಷ ನಕಲಿ ಎಂದು ಆರೋಪಿಸಿದನು. ಹಾವಾಡಿಗನು ಅದೇ ಬಟ್ಟಲಿಗೆ ಹಾಲು ತುಂಬಿ ಒಂದು ನಾಯಿಗೆ ಕುಡಿಸಿದನು. ಆ ಬಟ್ಟಲಿಗೆ ಮೆತ್ತಿಕೊಂಡಿದ್ದ ಒಂದು ತೊಟ್ಟು ವಿಷದಿಂದ ಆ ನಾಯಿ ಆ ಕ್ಷಣವೇ ಸತ್ತುಹೋಯಿತು. ಇವಳು ಹೀಗೆಲ್ಲಾ ಸಾಯಿವವಳಲ್ಲ ಎಂದು ರಾಜನು ಯೋಚಿಸಿದನು. ಆಗ ಅವನು ಅವಳಿಗೆ ದೇವಸ್ಥಾನಕ್ಕೆ ಹೋಗಲು ಅನುಮತಿ ನೀಡಿದನು. ಅವಳೊಂದಿಗೆ ಅನೇಕ ಸೇವಕಿಯರನ್ನು ಹಾಗೂ ಪುರುಷ ರಕ್ಷಕರನ್ನು ಕಳುಹಿಸಲಾರಂಭಿಸಿದನು.

## "ಮೀರಾಬಾಯಿಗೆ ಸದ್ಗುರುವಿನ ಆಶ್ರಯ ಸಿಕ್ಕಿತು"

ಮೀರಾಬಾಯಿ ಕೃಷ್ಣನನ್ನು ಪೂಜಿಸಲು ಹೋಗುವ ಮಾರ್ಗದಲ್ಲಿ ಒಂದು ಪುಟ್ಟ ಉದ್ಯಾನವನವಿತ್ತು. ಅಲ್ಲಿ ಹಲವಾರು ದೊಡ್ಡ ದೊಡ್ಡ ಮರಗಳಿದ್ದವು. ಅಲ್ಲಿ ಪರಮೇಶ್ವರ ಕಬೀರರು ಮತ್ತು ಸಂತ ರವಿದಾಸರು ಸತ್ಸಂಗ ನಡೆಸುತ್ತಿದ್ದರು. ಬೆಳಗ್ಗಿನ 10 ಗಂಟೆಯ ಸಮಯ. ಅಲ್ಲಿ ಪರಮಾತ್ಮನ ಬಗ್ಗೆ ಚರ್ಚೆ ಮತ್ತು ಅವನ ಕತೆಯನ್ನು ಹೇಳಲಾಗುತ್ತಿತ್ತು. ಮೀರಾ ಸ್ವಲ್ಪ ಸಮಯ ಅಲ್ಲಿದ್ದು ಹೊರಡಲು ನಿರ್ಧರಿಸಿದಳು.

ಪರಮೇಶ್ವರರ ಕಬೀರರು ಸತ್ಸಂಗದಲ್ಲಿ ಸಂಕ್ಷಿಪ್ತವಾಗಿ ಸೃಷ್ಟಿ ರಚನೆಯ ಜ್ಞಾನ ತಿಳಿಸಿದರು. "ಕೃಷ್ಣ ಅಂದರೆ ವಿಷ್ಣುವಿಗಿಂತ ಮೇಲೆ ಸರ್ವಶಕ್ತಿಮಾನನಾದ ಪರಮಾತ್ಮನಿದ್ದಾನೆ. ಜನನ ಮರಣವು ಅಂತ್ಯವಾಗದಿದ್ದರೆ ಭಕ್ತಿ ಮಾಡಿದರೂ ಒಂದೇ, ಬಿಟ್ಟರೂ ಒಂದೇ. ಜನನ–ಮರಣವಂತೂ ವಿಷ್ಣುವಿನದೂ ಸಮಾಪ್ತವಾಗಿಲ್ಲ. ಇನ್ನು ಅವರ ಉಪಾಸಕರದು ಹೇಗೆ ಸಮಾಪ್ತವಾಗುವುದು?" ಎಂದು ಹೇಳಿದರು. ಹೇಗೆ ಹಿಂದೂ ಸಂತರು ಹೇಳುವುದೇನೆಂದರೆ ಗೀತೆಯ ಜ್ಞಾನವನ್ನು ಕೃಷ್ಣ ಅರ್ಥಾತ್ ವಿಷ್ಣುವು, ಅರ್ಜುನನಿಗೆ ಹೇಳಿದನು. ಗೀತೆಯ ಜ್ಞಾನದಾತನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಹೇಳಿದ್ದಾನೆ, "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ" ನಿನಗೆ ಗೊತ್ತಿಲ್ಲ, ನನಗೆ ಗೊತ್ತು." ಇದರಿಂದ ಕೃಷ್ಣನಿಗೂ ಜನನ–ಮರಣ ಅಂತ್ಯವಾಗಿಲ್ಲ ಎನ್ನುವುದು ಸ್ಪಷ್ಟ. ಅವನು ಅವಿನಾಶಿಯಲ್ಲ. ಆದ್ದರಿಂದ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ. ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರನ ಶರಣದಲ್ಲಿ ಹೋಗು. ಆ ಪರಮೇಶ್ವರನ ಕೃಪೆಯಿಂದ ನೀನು ಸನಾತನ ಪರಮ ಧಾಮಕ್ಕೆ ಹೋಗುವೆ ಮತ್ತು ಪರಮ ಶಾಂತಿಯನ್ನು ಪಡೆಯುವೆ."

ಪರಮೇಶ್ವರರ ಕಬೀರರ ಬಾಯಿಂದ ಈ ಮಾತುಗಳನ್ನು ಕೇಳಿದ ಪರಮಾತ್ಮನಿಗಾಗಿ ಅಲೆಯುತ್ತಿರುವ ಆತ್ಮಕ್ಕೆ ಹೊಸ ಬೆಳಕು ಸಿಕ್ಕಿತು. ಸತ್ಸಂಗದ ನಂತರ ಮೀರಾಬಾಯಿ ಕೇಳಿದಳು, "ಮಹಾತ್ಮಾ! ನಿಮ್ಮ ಅನುಮತಿ ಇದ್ದರೆ ನನ್ನ ಸಂದೇಹ ನಿವಾರಿಸಿಕೊಳ್ಳುವೆ," ಆಗ ಕಬೀರರು, "ಪ್ರಶ್ನೆ ಕೇಳು ಮಗಳೇ" ಎಂದರು.

ಪ್ರಶ್ನೆ:–"ಹೇ ಮಹಾತ್ಮಾ! ಕೃಷ್ಣನಿಗಿಂತ ಮಿಗಿಲಾದ ಪರಮಾತ್ಮನಿರುವನೆಂದು ನಾನು ಇದುವರೆಗೆ ಯಾರಿಂದಲೂ ಕೇಳಿಲ್ಲ. ಇಂದು ನಿಮ್ಮ ಬಾಯಿಂದ ಕೇಳಿ ನಾನು ದ್ವಂದ್ವದಲ್ಲಿ ಬಿದ್ದಿದ್ದೇನೆ. ಸಂತರು ಸುಳ್ಳು ಹೇಳುವುದಿಲ್ಲವೆಂದು ನಾನು ನಂಬುತ್ತೇನೆ" ಎಂದಳು. ಆಗ ಕಬೀರರು, "ಇದೆಲ್ಲಾ ನಿಮ್ಮ ಅಜ್ಞಾನಿ ಗುರುಗಳ ಪ್ರಭಾವ, ಅವರಿಗೇ ಜ್ಞಾನವಿರುವುದಿಲ್ಲ. ನಿಮಗೆ ಏನು ಜ್ಞಾನ

ಕೊಡಬಲ್ಲರು? ದೇವಿ ಪುರಾಣದ ಮೂರನೇ ಸ್ಕಂದದಲ್ಲಿ ವಿಷ್ಣುವು ಸ್ವತಃ ಸ್ವೀಕರಿಸುತ್ತಿದ್ದಾನೆ, ನಾನು(ವಿಷ್ಣು), ಬ್ರಹ್ಮಾ ಮತ್ತು ಶಂಕರ ನಾಶಹೊಂದುವವರು.

ನಮ್ಮ ಆವಿರ್ಭಾವ ಅಂದರೆ ಜನನ ಹಾಗೂ ತಿರೋಭಾವ ಎಂದರೆ ಮರಣವಾಗುತ್ತದೆ". ಆಗ ಮೀರಾಬಾಯಿ ಹೇಳಿದಳು, "ಹೇ ಗುರುಗಳೇ! ಭಗವಂತ ಶ್ರೀ ಕೃಷ್ಣನು ನನಗೆ ದರ್ಶನ ನೀಡುತ್ತಾನೆ. ನಾನು ಅವನ ಜೊತೆ ಸಂವಾದ ಮಾಡುತ್ತೇನೆ." ಆಗ ಕಬೀರರು, "ಹೇ ಮೀರಾ, ನೀವು ಒಂದು ಕೆಲಸ ಮಾಡಿ. ನೀವೇ ಕೃಷ್ಣನ ಬಳಿ ನಿನಗಿಂತ ಮೇಲೆ ಯಾರಾದರೂ ಮಾಲೀಕರಿದ್ದಾರಾ ಎಂದು ಪ್ರಶ್ನಿಸಿ. ಅವರು ದೇವತೆಗಳು, ಸುಳ್ಳು ಹೇಳುವುದಿಲ್ಲ" ಎಂದರು. ಒಂದು ವೇಳೆ ಕೃಷ್ಣನ ಮೇಲೆ ಮತ್ತೊಬ್ಬ ದೇವರಿದ್ದಾನೆ ಎಂದಾದರೆ ನಾನು ಹುಚ್ಚಿಯಾಗಿ ಬಿಡುತ್ತೇನೆ ಎಂದು ಮೀರಾಳಿಗೆ ಅನ್ನಿಸಿತು. ರಾತ್ರಿಯಲ್ಲಿ ಮೀರಾ ಕೃಷ್ಣನ ಆಹ್ವಾನೆ ಮಾಡಿದಳು. ತ್ರಿಲೋಕನಾಥನು ಪ್ರತ್ಯಕ್ಷನಾದನು. ಆಗ ಮೀರಾ ತನ್ನ ಸಂದೇಹ ನಿವಾರಣೆಗಾಗಿ ಕೃಷ್ಣನನ್ನು ಕುರಿತು, ನಿಮ್ಮ ಮೇಲೆ ಮತ್ತೊಬ್ಬ ದೇವರಿದ್ದಾನೆಯೇ' ಎಂದು ಕೇಳಿದಳು. ಒಬ್ಬರು ಸಂತರು ಸತ್ಸಂಗದಲ್ಲಿ ಹೇಳಿದ್ದಾರೆ. ಆಗ ಕೃಷ್ಣನು, "ಹೇ ಮೀರಾ, ಪರಮಾತ್ಮನಿದ್ದಾನೆ. ಆದರೆ ಅವನು ಯಾರಿಗೂ ದರ್ಶನ ಕೊಡುವುದಿಲ್ಲ. ನಾವು ಸಾಧನೆ ಮಾಡಿ ನೋಡಿದ್ದೇವೆ ಎಂದನು. ಮೀರಾಬಾಯಿ ಸತ್ಸಂಗದಲ್ಲಿ ಪರಮಾತ್ಮ ಕಬೀರರಿಂದ ಕೇಳಿದ್ದಳು ಆ ಪರಮಾತ್ಮನ ದರ್ಶನ ನಾನು ಮಾಡಿಸುವೆನೆಂದು. ಸತ್ಯ ಸಾಧನೆ ಮಾಡಿ ಅವನ ಹತ್ತಿರ ಸತ್ಯಲೋಕಕ್ಕೆ ಕಳುಹಿಸುವೆ' ಎನ್ನುವ ಮಾತನ್ನು ಕೇಳಿದ್ದಳು. ಮೀರಾಬಾಯಿ ಕೃಷ್ಣನಿಗೆ ಮತ್ತೆ ಪ್ರಶ್ನೆ ಹಾಕಿದಳು. "ನೀವು ಜೀವಾತ್ಮದ ಜನನ–ಮರಣವನ್ನು ಅಂತ್ಯ ಗೊಳಿಸುವಿರಾ." ಆಗ ಕೃಷ್ಣನು ಅದು ಸಾಧ್ಯವಿಲ್ಲವೆಂದನು. ಕಬೀರರೆಂದಿದ್ದರು, ನನ್ನ ಬಳಿ ಒಂದು ಭಕ್ತಿ ಮಂತ್ರವಿದೆ. ಅದರಿಂದ ಜನನ–ಮರಣವು ಶಾಶ್ವತವಾಗಿ ಅಂತ್ಯಗೊಳ್ಳುವುದು. ಆ ಪರಮಧಾಮ ಪ್ರಾಪ್ತವಾಗುತ್ತದೆ. ಅದರ ಕುರಿತು ಗೀತೆಯ **15**ನೇ ಅಧ್ಯಾಯದ **4**ನೇ ಶ್ಲೋಕದಲ್ಲಿ ತತ್ವಜ್ಞಾನ ಮತ್ತು ತತ್ವದರ್ಶಿ ಸಂತನು ಸಿಕ್ಕ ಮೇಲೆ ಪರಮಾತ್ಮನ ಆ ಪರಮಧಾಮವನ್ನು ಹುಡುಕಬೇಕು. ಆ ಪರಮಧಾಮಕ್ಕೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಆ ಒಬ್ಬ ಪರಮಾತ್ಮನ ಭಕ್ತಿ ಮಾಡಬೇಕು ಎನ್ನುವ ಮಾತನ್ನು ಕೇಳಿದ್ದಳು. ಆಗ ಮೀರಾ ಕೃಷ್ಣನನ್ನು ಕೇಳಿದಳು, "ಸಂತರು ಜನನ–ಮರಣವನ್ನು ಅಂತ್ಯಗೊಳಿಸುತ್ತೇನೆ ಎಂದಿದ್ದಾರೆ. ಹೇ ಕೃಷ್ಣ, ನಾನೇನು ಮಾಡಲಿ? ನನಗೆ ಪೂರ್ಣ ಮೋಕ್ಷ ಬೇಕು" ಎಂದಳು. ಆಗ ಶ್ರೀ ಕೃಷ್ಣನು, "ಮೀರಾ, ನೀನು ಹೋಗಿ ಆ ಸಂತನ ಆಶ್ರಯ ಪಡೆದುಕೊ, ನಿನ್ನ ಉದ್ಧಾರ ಮಾಡಿಕೋ. ನನಗೇನು ಎಷ್ಟು ಜ್ಞಾನವಿತ್ತೋ ಅಷ್ಟು ನಿನಗೆ ಹೇಳಿದ್ದೇನೆ" ಎಂದನು. ಮಾರನೆ ದಿನ ಮೀರಾ ದೇವಸ್ಥಾನಕ್ಕೆ ಹೋಗದೆ ನೇರವಾಗಿ ಸಂತನ ಬಳಿ ಹೋದಳು. ದೀಕ್ಷೆ ಪಡೆಯುವ ಇಚ್ಛೆ ಪ್ರಕಟಿಸಿದಳು. ಕೃಷ್ಣನ ಜೊತೆ ನಡೆದ ಸಂವಾದವನ್ನು ಕಬೀರರಿಗೆ ತಿಳಿಸಿದಳು.

ಆ ದಿನಗಳಲ್ಲಿ ಅಸ್ಪೃಶ್ಯತೆ ಉತ್ತುಂಗದಲ್ಲಿತ್ತು. ಠಾಕೂರರು ತಮ್ಮನ್ನು ಶ್ರೇಷ್ಠರೆಂದು ತಿಳಿದಿದ್ದರು. ಪರಮಾತ್ಮ ಅಹಂಕಾರಿ ವ್ಯಕ್ತಿಗೆ ಎಂದಿಗೂ ಸಿಗುವುದಿಲ್ಲ. ಮೀರಾಬಾಯಿಯನ್ನು ಪರೀಕ್ಷೆಗೆ ಒಡ್ಡಲು ಕಬೀರರು ಸಂತ ರವಿದಾಸರನ್ನು ಕರೆದು, 'ಮೀರಾ ಠಾಕೂರ್‌ಗೆ ಪ್ರಥಮ ಮಂತ್ರ ದೀಕ್ಷೆ ನೀಡಿ' ಎಂದರು. ಇದು ನನ್ನ ಆದೇಶ. ರವಿದಾಸರು ಕಬೀರರ ಆದೇಶವನ್ನು ಪಾಲಿಸಿದರು. ಕಬೀರರು ಮೀರಾಗೆ ಅಲ್ಲಿ ಸಂತರು ಕುಳಿತಿರುವರು ದೀಕ್ಷೆ ಪಡೆದುಕೊ ಎಂದರು. ತಕ್ಷಣವೇ ಮೀರಾ ರವಿದಾಸರ ಬಳಿ ಹೋಗಿ ದೀಕ್ಷೆ ನೀಡಿ ಉದ್ಧಾರ ಮಾಡುವಂತೆ ವಿನಂತಿಸಿದಳು. ಸಂತ ರವಿದಾಸರು, "ಹೇ ಮೀರಾಬಾಯಿ, ನಾನು ಜಾತಿಯಲ್ಲಿ ಚಮ್ಮಾರ, ನೀನು ಠಾಕೂರರ ಮಗಳು. ನಾನು ದೀಕ್ಷೆ ಕೊಟ್ಟರೆ ಸಮಾಜದ ಜನರು ಏನೆನ್ನುವರು?" ಜಾತಿಯಿಂದ ಹೊರ ತೆಗೆಯುವರು ನೀನು ವಿಚಾರ ಮಾಡು. ಮೀರಾಬಾಯಿ ಅಧಿಕಾರಿಯಗಿದ್ದಳು. ಪರಮತ್ಮನಿಗಾಗಿ ಸದಾ ತತ್ಪರರಾಗಿರುತ್ತಿದ್ದಳು. ಅವಳೆಂದಳು, "ಹೇ ಗುರುಗಳೇ, ನೀವು ನನ್ನ ತಂದೆ, ನಾನು ನಿಮ್ಮ ಮಗಳು. ಸಮಾಜ ಹಾಳಾಗಲಿ, ನನಗೆ ಮೊದಲು ದೀಕ್ಷೆ ಕೊಡಿ. ನಾಳೆ ನಾನು ನಾಯಿಯಾಗಿ ಹುಟ್ಟಿದರೆ ಆಗ ಈ ಠಾಕೂರ್ ಸಮಾಜ ನನ್ನನ್ನು ಉಳಿಸುವುದೇ?" ಎಂದು ಕೇಳಿದಳು. ಸತ್ಸಂಗದಲ್ಲಿ ದೊಡ್ಡ ಗುರುಗಳು ಕಬೀರರು ಹೇಳಿದ್ದಾರೆ:–

ಕಬೀರ್, ಕುಲ್ ಕರನೀ ಕೆ ಕಾರಣೇ, ಹಂಸಾ ಗಯಾ ಬಿಗೋಯ್ ।
ತಬ್ ಕುಲ್ ಕ್ಯಾ ಕರ್ ಲೇಗಾ, ಜಬ್ ಚಾರ್ ಪಾವೋಂ ಕಾ ಹೋಯ್ ॥

**ಶಬ್ದಾರ್ಥ :–** ಕಬೀರ್ ಪರಮೇಶ್ವರರು ಎಚ್ಚರಿಸುತ್ತಿದ್ದಾರೆ, "ಹೇ ಭಕ್ತ (ಸ್ತ್ರೀ/ಪುರುಷ) ಯಾರು ಕುಲ, ಕುಟುಂಬ ಅಥವಾ ಪ್ರಪಂಚಕ್ಕೆ ಅಂಜಿ ಭಕ್ತಿ ಮಾಡುವುದಿಲ್ಲವೋ, ಅವರು ಹೇಳುತ್ತಾರೆ ಮನೆಯವರು, ಕುಟುಂಬದವರು ಅಥವಾ ಪ್ರಪಂಚದ ವ್ಯಕ್ತಿಗಳು ನಮ್ಮನ್ನು ನೋಡಿ ತಮಾಷೆ ಮಾಡುತ್ತಾರೆ ದೀಕ್ಷೆ ಪಡೆದು ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಬೇರೆ ದೇವಿ ದೇವತೆಗಳ ಪೂಜೆ ಮಾಡುವುದಿಲ್ಲ. ಶ್ರಾದ್ಧ–ಪಿಂಡ ಪ್ರದಾನ ಮಾಡುವುದಿಲ್ಲ. ನಿಮಗೆ ನಾಚಿಕೆಯಾಗಬೇಕು, ಎಂದೆಲ್ಲಾ ಹೇಳುವರೋ, ಅವರು ತಮ್ಮ ಮಾನವ ಜೀವನವನ್ನು ನಾಶ ಮಾಡಿಕೊಂಡಿದ್ದಾರೆ. ಭಕ್ತಿ ಮಾಡದೆ ಇದ್ದ ಕಾರಣ, ನಾಲ್ಕು ಕಾಲುಗಳುಳ್ಳ ಪಶು ಎಂದರೆ ಕತ್ತೆ, ನಾಯಿ, ಹಂದಿ, ಎತ್ತು ಮುಂತಾದ ಪ್ರಾಣಿಗಳಾಗಿ ಹುಟ್ಟುವಿರಿ. ಆಗ ಈ ಕುಲದ, ಈ ಕುಟುಂಬದ ವ್ಯಕ್ತಿಗಳು ನಿಮ್ಮನ್ನು ಹೇಗೆ ಕಾಪಾಡಬಲ್ಲರು. ಭಕ್ತಿಯು ನಿಮ್ಮನ್ನು ಉಳಿಸಬಹುದಿತ್ತು. ಆದರೆ ನೀವು ಭಕ್ತಿ ಮಾಡಲಿಲ್ಲ, ಆದ್ದರಿಂದ ಭಕ್ತಿ ಮಾಡು.

ಸಂತ ರವಿದಾಸರು ಎದ್ದು ಸಂತ ಕಬೀರರ ಬಳಿ ಬಂದು ಎಲ್ಲವನ್ನೂ ತಿಳಿಸಿದರು. ಆಗ ಪರಮಾತ್ಮರೆಂದರು "ತಡ ಮಾಡಬೇಡ, ದೀಕ್ಷೆ ಕೊಟ್ಟು ಬಿಡು" ಎಂದರು. ರವಿದಾಸರು ತಕ್ಷಣವೇ ಮೀರಾಳಿಗೆ ಪ್ರಥಮ ಮಂತ್ರದಲ್ಲಿ ಐದು ಮಂತ್ರಗಳನ್ನು ನೀಡಿದರು. {ಈ ಐದು ಮಂತ್ರಗಳು ಶರೀರದಲ್ಲಿನ ಕಮಲ(ಚಕ್ರ)ಗಳನ್ನು ಅರಳಿಸುವಂತಹದ್ದಾಗಿದೆ. ರಾಧಾಸ್ವಾಮಿ ಪಂಥ ಹಾಗೂ ದಾಮಾಖೇಡಾ ಪೀಠದವರು ಕೊಡುವಂತಹದ್ದಾಗಿಲ್ಲ. ಈ ಮಂತ್ರಗಳು ಅವುಗಳಿಗಿಂತ ಭಿನ್ನವಾಗಿವೆ ಹಾಗೂ ಮೋಕ್ಷಕ್ಕೆ ಸಹಾಯಕವಾಗಿವೆ} ಮೀರಾಬಾಯಿಗೆ ಹೇಳಿದರು. 'ಇದು ಇವರ ಪೂಜೆಯಲ್ಲ, ಸಾಧನೆಯಾಗಿದೆ'. ಇವರ ಲೋಕದಲ್ಲಿ ಇರಲು, ತಿನ್ನಲು–ಕುಡಿಯಲು ಭಕ್ತಿ ಎನ್ನುವ ಯಾವ ಹಣವಿದೆಯೋ ಆ ಹಣ ಮಂತ್ರದಿಂದ ಮಾತ್ರ ಸಿಗಲು ಸಾಧ್ಯ. ಇಲ್ಲಿಯ ಋಣ ಮುಗಿಯುತ್ತದೆ. ನಂತರದಲ್ಲಿ ಮೋಕ್ಷದ ಅಧಿಕಾರಿಯಾಗುತ್ತಾರೆ' ಎಂದರು.

ಪರಮಾತ್ಮ ಕಬೀರರು ಮತ್ತು ರವಿದಾಸರು ಒಂದು ತಿಂಗಳವರೆಗೆ ಅಲ್ಲೇ ತಂಗಿದ್ದರು. ಮೀರಾಬಾಯಿ ಹಗಲಿರುಳು ಸತ್ಸಂಗಕ್ಕೆ ಬರಲು ಪ್ರಾರಂಭಿಸಿದಳು. ಏಕೆಂದರೆ ರಾತ್ರಿಯ ವೇಳೆಯೇ ಸತ್ಸಂಗವು ಹೆಚ್ಚಾಗಿ ನಡೆಯುತ್ತಿತ್ತು. ಒಬ್ಬೊಬ್ಬರಿಗೆ ಬೆಳಿಗ್ಗೆ ಸಮಯ ಸಿಗುತ್ತಿತ್ತು, ಒಬ್ಬೊಬ್ಬರಿಗೆ ರಾತ್ರಿ ಬಿಡುವು ಸಿಗುತ್ತಿತ್ತು. ಮೀರಾಳ ಮೈದುನ ಮೀರಾಬಾಯಿಯು ರಾತ್ರಿಯ ವೇಳೆ ಮನೆ ಬಿಟ್ಟು ಹೋಗುತ್ತಿದ್ದುದನ್ನು ನೋಡಿ ಕೋಪಗೊಂಡನು. ಆದರೆ ಮೀರಾಳನ್ನು ತಡೆಯುವುದು ಬಿರುಗಾಳಿಯನ್ನು ತಡೆಯುವಷ್ಟೇ ಕಷ್ಟವಾಗಿತ್ತು. ಆದ್ದರಿಂದ ಮೀರಾಳ ತಾಯಿಯನ್ನು ಕರೆದು ಅವಳಿಗೆ ಬುದ್ಧಿ ಹೇಳುವಂತೆ ಹೇಳಿದನು. ಇವಳು ನಮ್ಮ ಮಾನ ಭಂಗ ಮಾಡುತ್ತಿದ್ದಾಳೆ ಮೀರಾಳ ತಾಯಿಯು ಮೀರಾಳಿಗೆ ಬುದ್ಧಿವಾದ ಹೇಳಿದಳು. ಆದರೆ ಮೀರಾ ತಕ್ಷಣ ಅದರ ಉತ್ತರ ಕೊಡುತ್ತಿದ್ದಳು:–

**"ಶಬ್ದ"**

ಸತ್‌ಸಂಗ್ ಮೆಂ ಜಾನಾ ಮೀರಾಂ ಛೋಡ್ ದೆ ಏ, ಆಏ ಮ್ಹಾರೀ ಲೋಗ್ ಕರ್‍ಯೆಂ ತಕರಾರ್ ।
ಸತ್‌ಸಂಗ್ ಮೆಂ ಜಾನಾ ಮೇರಾ ನಾ ಛೂಟ್ಟೈ ರೀ, ಚಾಹೆ ಜಲಕ್ಯೈ ಮರೋ ಸಂಸಾರ್ ॥ಟೇಕ್॥
ಥಾರೆ ಸತ್‌ಸಂಗ್ ಕೆ ರಾಹೆ ಮ್ಯೆಂ ಏ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಕಾಲೇ ನಾಗ್,
ಕೋಏ–ಕೋಏ ನಾಗ್ ತನ್ಯೆ ಡಸ್ ಲೇವ್ಯೆ ।
ಜಬ್ ಗುರು ಮ್ಹಾರೆ ಮೆಹರ್ ಕರ್‍ಯೆ ರೀ, ಆರೀ ವ್ಯೆ ತೋ ಸರ್ಪ್ ಗಂಡೆವೆ ಬನ್ ಜಾವ್ಯೆಂ ॥1॥
ಥಾರೇ ಸತ್‌ಸಂಗ್ ಕೆ ರಾಹೇ ಮೆಂ ಏ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಬಬರೀ ಶೇರ್,
ಕೋಏ–ಕೋಏ ಶೇರ್ ತನ್ಯೆ ಖಾ ಲೇವ್ಯೆ ।
ಜಬ್ ಗುರುವಾಂ ಕೀ ಮೆಹರ್ ಫಿರ್‍ಯೆ ರೀ, ಆರೀ ವ ತೋ ಶೇರಾಂ ಕೆ ಗೀದಡ್ ಬನ್ ಜಾವ್ಯೆಂ ॥2॥
ಥಾರೆ ಸತ್‌ಸಂಗ್ ಕೆ ಬೀಚ್ ಮೆಂ ಏ, ಆಹೆ ವಹಾಂ ಪ್ಯೆ ರಹತೆ ಹ್ಯೆಂ ಸಾಧು ಸಂತ್,

ಕೋಎ–ಕೋಎ ಸಂತ್ ತನ್ಯೆ ಲೆ ರಮ್ಯೆ ಎ ।ತೇರೆ ರೀ ಮನ್ ಮ್ಯೆಂ ಮಾತಾ ಪಾಪ್ ಹೈ ರೀ,
ಸಂತ್ ಮೇರೆ ಮಾಂ ಬಾಪ್ ಹೈಂ ರೀ,ಆ ರೀ ಯೇ ತೋ ಕರ್ ದೇಂಗೆ ಬೇಡಾ ಪಾರ್ ॥3॥
ವೋ ತೋ ಜಾತ್ ಚಮಾರ್ ಹೈ ಏ, ಇಸಮ್ಯೆಂ ಮ್ಹಾರೀ ಹಾರ ಹೈ ಎ ।
ತೇರೆ ರೀ ಲೆಖ್ಯೆ ಮಾತಾ ಚಮಾರ ಹೈ ರೀ, ಮೇರಾ ಸಿರಜನ್‌ಹಾರ್ ಹೈ ರೀ ।
ಆರೀ ವೈ ತೋ ಮೀರಾಂ ಕೆ ಗುರು ರವಿದಾಸ್ ॥4॥

ಶಬ್ದಾರ್ಥ:– ಮೀರಾಬಾಯಿಯ ತಾಯಿಯು ಹೀಗೆಂದಳು, "ಮೀರಾ ನೀನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸು. ಪ್ರಪಂಚದಲ್ಲಿ ಎಲ್ಲರೂ ನಮ್ಮನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಆಗ ಮೀರಾ ಹೇಳಿದಳು, "ಅಮ್ಮಾ, ನಾನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸುವುದಿಲ್ಲ. ಬೇಕಾದರೆ ಪ್ರಪಂಚ ಹೊಟ್ಟೆ ಉರಿದುಕೊಂಡು ಸಾಯಲಿ". ಆಗ ಮೀರಾಳ ತಾಯಿಯು ಅವಳಿಗೆ ಭಯಹುಟ್ಟಿಸಲು ಹೀಗೆಂದಳು, "ನೀನು ಸತ್ಸಂಗ ಕೇಳಲು ಯಾವ ದಾರಿಯಲ್ಲಿ ಹೋಗುವೆಯೋ, ಆ ದಾರಿಯಲ್ಲಿ ಬರೀ ಹಾವು, ಸಿಂಹಗಳೇ ಓಡಾಡುತ್ತವೆ. ಅವು ನಿನ್ನನ್ನು ಸಾಯಿಸಿಬಿಡುತ್ತವೆ." ಆಗ ಮೀರಾ ಹೀಗೆಂದು ಉತ್ತರಿಸಿದಳು, "ಗುರುಗಳು ಎಷ್ಟು ಸಮರ್ಥರೆಂದರೆ, ಅವರು ಕೃಪೆ ತೋರಿದರೆ ಸಿಂಹವು ಸಹ ನರಿಯಂತೆ ವರ್ತಿಸುತ್ತದೆ. ಹಾವುಗಳು ಎರೆಹುಳುಗಳಂತಾಗಿ ಬಿಡುತ್ತವೆ. ಎರೆಹುಳುಗಳು **6–8** ಇಂಚು ಉದ್ದವಿದ್ದು ಅರ್ಧ ಇಂಚು ದಪ್ಪಗಿರುತ್ತವೆ. ಅವು ಕಚ್ಚುವುದಿಲ್ಲ". ಆಗ ಮೀರಾಳ ತಾಯಿಯು ಉತ್ತರಿಸಿದಳು, "ಪ್ರವಚನ ಕೇಳುವ ಜಾಗದಲ್ಲಿ ಕೆಲವು ಯುವಭಕ್ತರೂ ಇರುತ್ತಾರೆ ಯಾರಾದರೂ ನಿನ್ನನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಿ ತಪ್ಪು ಕೆಲಸ ಮಾಡಬಹುದು." ಆಗ ಮೀರಾ, "ಅಮ್ಮಾ , ನಿಮ್ಮ ಮನಸ್ಸಿನಲ್ಲಿ ದೋಷವಿದೆ. ಆದ್ದರಿಂದ ನಿಮ್ಮ ಮನಸ್ಸಿನಲ್ಲಿ ಇಂಥಾ ವಿಚಾರಗಳು ಬರುತ್ತಿವೆ. ಅಮ್ಮಾ, ಆ ಸಂತರು ಹಾಗೂ ಭಕ್ತರು ನನಗೆ ತಂದೆ ತಾಯಿಗಳ ಸಮಾನ. ಅವರು ಎಂದಿಗೂ ಅಂತಹ ತಪ್ಪು ಕೆಲಸ ಮಾಡಲಾರರು" ಎಂದಳು. ಮೀರಾಳ ತಾಯಿಯು ಅಸ್ಪೃಶ್ಯತೆಯ ಕಾರಣ ನೀಡಿ ಮೀರಾಳನ್ನು ತಡೆಯಲು ನೋಡಿದಳು. ಹಾಗೂ ಹೀಗೆಂದಳು "ಮೀರಾ! ನಿನ್ನ ಗುರುಗಳಾದ ರವಿದಾಸರು ಅನುಸೂಚಿತ ಜನ ಜಾತಿಯವರಾದ ಚಮ್ಮಾರರು, ಇದರಿಂದ ನಮ್ಮ ರಜಪೂತರಿಗೆ ಅವಮಾನವಾಗುತ್ತಿದೆ, ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸು". ಆಗ ಮೀರಾ, "ಅಮ್ಮಾ, ನಿಮ್ಮ ದೃಷ್ಟಿಯಲ್ಲಿ ನನ್ನ ಗುರುಗಳು ಅನುಸೂಚಿತ ಜನಜಾತಿಯ ಚಮ್ಮಾರರು, ಆದರೆ ನನಗೆ ಅವರೇ ಪರಮಾತ್ಮ, ನಾನು ಅವರ ಮಗಳು, ಅವರು ನನ್ನ ತಂದೆ, ನಾನು ಸತ್ಸಂಗಕ್ಕೆ ಹೋಗುವುದನ್ನು ನಿಲ್ಲಿಸಲಾರೆ?" ಎಂದಳು.

ಈ ಕತೆ ಕೇಳಿದ ರಾಮ್‌ಪ್ಯಾರಿಯ (ರಾಮೋ) ಕಣ್ಣು ತೆರೆಯಿತು. ಮಾರನೇ ದಿನ ಕಸ್ತೂರಿಯ ಜೊತೆ ತಾನೂ ಸತ್ಸಂಗಕ್ಕೆ ಹೋದಳು. ಒಂದೇ ಸತ್ಸಂಗದಿಂದ ಪ್ರಭಾವಿತಳಾಗಿ ದೀಕ್ಷೆ ಪಡೆದಳು. ನಂತರ ಒಂದು ದಿನದ ಊಟದ ಸೇವೆ ಕೇಳಿದಳು. ಭಕ್ತರೆಲ್ಲಾ ನಾವು ನಮ್ಮ ಸೇವೆಯನ್ನು ಬಿಟ್ಟು ಕೊಡುವುದಿಲ್ಲವೆಂದರು. ಗುರುಗಳು ಮುಂದಿನ ಬಾರಿ ಬಂದಾಗ ನಿನಗೆ ಸೇವೆ ಕೊಡುವೆವು. ರಾಮೋಗೆ ಬಹಳ ದುಃಖವಾಯಿತು. ಅಳುಮುಖ ಮಾಡಿಕೊಂಡಳು. ಆಗ ಕಸ್ತೂರಿಯು, 'ನನ್ನ ಬಾರಿ ಬಂದಾಗ ಬೆಳಗ್ಗಿನ ಊಟ ನಾನು ಮಾಡಿಸುತ್ತೇನೆ, ರಾತ್ರಿಯ ಊಟ ನೀವು ತನ್ನಿ' ಎಂದಳು. ರಾಮೋಗೆ ಬಹಳ ಸಂತಸವಾಯಿತು. ನಂತರ ಬಾರಿ ಬಂದಾಗ ಅವಳು ರಾತ್ರಿಯ ಊಟ ತಯಾರಿಸಿದಳು. ಪಯಸಾ, ಹಲ್ವಾ, ಪಲ್ಯ, ರೊಟ್ಟಿಯನ್ನು ಮಾಡಿದಳು, ಆದರೆ ಸತ್ಗುರುವಿನ ಲೀಲೆ, ಇದ್ದಕ್ಕಿದ್ದಂತೆ ಅವಳಿಗೆ ಜ್ವರ ಬಂದುಬಿಟ್ಟಿತು. ದೇಹ ಕೆಂಡದಂತೆ ಸುಡಲಾರಂಭಿಸುತು, ಒಂದು ಹೆಜ್ಜೆ ಕೂಡಾ ನಡೆಯಲು ಕಷ್ಟವಾಯ್ತು. ಅಷ್ಟರಲ್ಲಿ ಅವಳ ಮಗ ಮನೆಗೆ ಬಂದನು. ಆಗ ಅವಳು ಮಗನನ್ನು ಕರೆದು, 'ಮಗನೇ ಇಂದು ನನ್ನ ಒಂದು ಕೆಲಸ ಮಾಡು, ಜೀವನಪರ್ಯಂತ ನಿನ್ನ ಉಪಕಾರ ಮರೆಯಲ್ಲ. ನಾನು ಗುರು ಮಾಡಿಕೊಂಡಿರುವೆ. ನಾನು ಈ ದಿನ ರಾತ್ರಿಯ ಊಟವನ್ನು ಗುರುಗಳ ಆಶ್ರಮಕ್ಕೆ ಕಳುಹಿಸಲು ಒಪ್ಪಿಕೊಂಡಿರುವೆ, ಕಸ್ತೂರಿ ಅಕ್ಕನ ಬಳಿಯಿಂದ ಈ ಸೇವೆಯನ್ನು ಪಡೆದಿರುವೆ. ಊಟವೆಲ್ಲಾ ಸಿದ್ಧವಾಗಿದೆ. ಆದರೆ ನನಗೆ ಜ್ವರ ಬಂದು ಮೇಲೆ ಏಳಲು ಆಗುತ್ತಿಲ್ಲ, ಹುಡುಗ

ಹೇಳಿದ ನನಗೆ ಸಮಯವಿಲ್ಲ. ನಾನು ಆಶ್ರಮದಲ್ಲಿ ಊಟ ಕೊಟ್ಟು ಬರುವುದಿಲ್ಲ. ಅಮ್ಮಾ ನೀವು ಆ ಆಶ್ರಮಕ್ಕೆ ಹೋಗಬೇಡಿ. ನನಗೆ ನಿಮ್ಮ ಬಗ್ಗೆ ಬಹಳಷ್ಟು ಕೆಳಬೇಕಾಗುತ್ತದೆ. ಇದನ್ನು ಕೇಳಿ ರಾಮೋ ಅಳಲಾರಂಭಿಸಿದಳು. ಮಗನಿಗೆ ಕರುಣೆಬಂತು, ಸಿಟ್ಟಿನಿಂದ ಹೇಳಿದ ಊಟ ಎಲ್ಲಿದೆ ನಾನು ಕೊಟ್ಟು ಬರುತ್ತೇನೆ ಎಂದನು. ರಾಮೋ ತಕ್ಷಣ ಎದ್ದು ಎಲ್ಲಾ ಊಟವನ್ನು ಕಟ್ಟಿಕೊಟ್ಟಳು. ಹುಡುಗನು ಆ ಊಟವನ್ನು ಒಂದು ಕೈಚೀಲದಲ್ಲಿ ಹಾಕಿಕೊಂಡು ಆಶ್ರಮದಲ್ಲಿ ತಗೊಂಡು ಬಂದನು. ರಾಮೋ ಪ್ರತಿ ಬಾರಿ ಗುರುಗಳಲ್ಲಿ ವಿನಂತಿಸುತ್ತಿದ್ದಳು ಗುರುಗಳೇ ಹುಡುಗನು ನಶೆ ಮಾಡುತ್ತಾನೆ. ಮನೆಯ ದುರ್ಗತಿ ಮಾಡಿರುವನು. ಮಾತು ಕೇಳಲ್ಲ. ಮಹಾರಾಜರೇ ಅವನನ್ನು ಶರಣದಲ್ಲಿ ತೆಗೆದುಕೊಳ್ಳಿ. ಹುಡುಗನನ್ನು ಆಶ್ರಮದಲ್ಲಿ ನೋಡಿ ಅನ್ಯ ಭಕ್ತರು ಹೇಳಿದರು ಗುರುಗಳು ಕೇಳಿಕೊಂಡರು ರಾಮೋಳ ಮಾತು. ಮಗನು ಸ್ವತಃ ಊಟ ತಗೊಂಡು ಬಂದಿರುವನು. ಗುರುಗಳಿಗೆ ತಿಳಿದಾಗ ಅವರಿಗೆ ಸಂತಸವಾಯಿತು ರಾಮೋ ನೆಲೆಸಿದಳೆಂದು. ಭಗವಂತ ನೋಡಿಕೊಂಡನು. ಹುಡುಗನು ಹೇಳಿದನು ಮಹಾರಾಜರೇ ನನ್ನ ತಾಯಿಗೆ ಜ್ವರ ಬಂದಿದೆ, ಅದಕ್ಕಾಗಿ ನಾನು ಬಂದಿರುವೆನು ಊಟ ಮಾಡಿಕೊಳ್ಳಿ. ಸಂತನು ಊಟಕ್ಕಾಗಿ ಕುಳಿತುಕೊಂಡ ಮತ್ತು ಯೋಚಿಸಿದ ಹುಡುಗನು ಮೊದಲಬಾರಿ ಬಂದಿರುವನು ಸ್ವಲ್ಪ ಜ್ಞಾನ ಹೇಳೋಣ. ಸಂತನು ಹೇಳಲಾರಂಭಿಸಿದನು ಮಗು ತಂದೆ-ತಾಯಿಯ ಸೇವೆ ಮಾಡಬೇಕು. ಅವರ ಆಜ್ಞೆಯ ಪಾಲನೆ ಮಾಡಬೇಕು. ಮೋಕ್ಷಕ್ಕಾಗಿ ಗುರು ಮಾಡಿಕೊಂಡು ಸತ್ಯಸಾಧನೆ ಮಾಡಬೇಕು. ನಶೆಯಂತು ದೊಡ್ಡ-ದೊಡ್ಡ ಮನೆಯನ್ನೆ ಹಾಳುಮಾಡಿತು. ಹುಡುಗನಿಗಂತು ಬಹಳ ಕೊಪಬಂತು. ಅವನಿಗಂತು ಕ್ಷಣ-ಕ್ಷಣ ತಡವಾಯ್ತೆಂದು ಅನ್ನಿಸುತ್ತಿತ್ತು.

ಆದರೆ ಆ ಕರ್ಮಪಾಲನಿಗೆ ಬಡಿಸುವ ವ್ಯವಧಾನವಿರಲಿಲ್ಲ. ಅವನು ಆ ದಿನ ರಾತ್ರಿ ತನ್ನ ಮಿತ್ರರ ಜೊತೆ ಸೇರಿ ರಾಜನ ಅರಮನೆಗೆ ಕನ್ನ ಹಾಕಿ ರಾಣಿಯರ ಒಡವೆಗಳನ್ನು ದೋಚುವ ಉಪಾಯ ಹಾಕಿದ್ದನು. ಹಾಗಾಗಿ ರಾತ್ರಿ 12 ಗಂಟೆಗೆ ನಗರದ ಹೊರಗೆ ದೇವಾಲಯದಲ್ಲಿ ತನ್ನ ಗೆಳೆಯರನ್ನು ಸೇರಬೇಕೆಂಬ ತವಕದಲ್ಲಿದ್ದನು. ಹಾಗಾಗಿ ಗುರುಗಳಿಗೆ ಅವನೆಂದನು. "ಗುರುಗಳೇ, ಬೇಗ ಊಟ ಮಾಡಿ, ನನಗೆ ನಿಮ್ಮ ಬುದ್ಧಿಮಾತಿನ ಅವಶ್ಯಕತೆ ಇಲ್ಲ." ಗುರುಗಳಿಗೆ ಬಹಳ ಬೇಸರವಾಯಿತು. ಈ ರಾಕ್ಷಸನಿಂದ ಪಾಪ ರಾಮೋಳಿಗೆ ಸುಖವಿಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡರು. ಊಟಮಾಡಿದ ತಕ್ಷಣ ಪಾತ್ರೆಗಳನ್ನೂ ತೊಳೆಯದೆ, ಬೇಗ-ಬೇಗ ಜೋಡಿಸಿಕೊಂಡು ಮನೆಯ ಕಡೆಗೆ ನಡೆದನು. ಅರ್ಧ ದೂರ ಹೋಗಿರಬಹುದು, ಅಷ್ಟರಲ್ಲಿ ಇದ್ದಕ್ಕಿದ್ದಂತೆ ಅವನ ಕಾಲಿಗೆ ಜಾಲಿ ಮರದ ಮುಳ್ಳು ಚುಚ್ಚಿಕೊಂಡಿತು. ಅವನಿಗೆ ಬಹಳ ನೋವು ಆಗುತ್ತಿತ್ತು. ನೋವನ್ನು ತಾಳಲಾರದೆ ಕುಂಟುತ್ತಾ ಅವನು ಮನೆಗೆ ಬಂದು ಅಂಗಳದಲ್ಲಿ ಪಾತ್ರೆ ಬಿಸಾಕಿ, ತನ್ನ ತಾಯಿಯನ್ನು ಹಿಗ್ಗಾ ಮುಗ್ಗಾ ಬೈಯ್ದನು. "ಈ ದಿನ ನಿನ್ನ ಗುರುವಿನ ದರ್ಶನವಾಯಿತು. ಈ ದಿನವೇ ನನ್ನ ಅದೃಷ್ಟ ಕೈ ಕೊಟ್ಟಿತು, ನೋಡು ನನ್ನ ಕಾಲಿಗೆ ಮುಳ್ಳು ಚುಚ್ಚಿ ಅಸಾಧ್ಯ ನೋವಾಗುತ್ತಿದೆ. ನನಗೆ ನಡೆಯಲೇ ಆಗುತ್ತಿಲ್ಲ. ಇಂದಿನಿಂದ ಆ ಆಶ್ರಮದ ಕಡೆ ಮುಖ ಮಾಡಿಯೂ ಮಲಗುವುದಿಲ್ಲ" ಎಂದನು. ರಾಮೋಳ ಜ್ವರ ಕಡಿಮೆಯಾಗಿತ್ತು. ನಿಧಾನವಾಗಿ ಎದ್ದು ಬಂದು ಅವನ ಕಾಲನ್ನು ನೀರಿನಿಂದ ತೊಳೆದು ಕೊಳೆಯನ್ನೆಲ್ಲಾ ತೆಗೆದು, ಎಣ್ಣೆಯ ಕೆಳಗೆ ಉಳಿದದ್ದನ್ನು ಹಚ್ಚಿ ಒಂದು ಬಟ್ಟೆಯಿಂದ ಕಟ್ಟಿದಳು. ಬೆಳಿಗ್ಗೆ ಮುಳ್ಳು ತೆಗೆಸುವುದಾಗಿ ಹೇಳಿದಳು. ಮಗ ರಾತ್ರಿಯೆಲ್ಲಾ ಅಮ್ಮನನ್ನು ಬೈಯ್ಯುತ್ತಿದ್ದನು. ಏಕೆಂದರೆ ಕರ್ಮಪಾಲ್ ಕಳ್ಳತನದಲ್ಲಿ ಪಾಲ್ಗೊಳ್ಳದ ಕಾರಣ ಬಹಳ ಹಾನಿ ಆಯಿತೆಂದು ತನ್ನ ದುರಾದೃಷ್ಟವನ್ನು ಹಳಿಯುತ್ತಾ ಹೊರಳಾಡುತ್ತಿದ್ದನು.

ಬೆಳಗಾಯಿತು, ರಾಮೋ ತನ್ನ ಮಗನ ಕಾಲಿಗೆ ಚುಚ್ಚಿದ್ದ ಮುಳ್ಳನ್ನು ತೆಗೆಸಿದಳು. ಅವಳಿಗೆ ಜ್ವರ, ಇಳಿದಿತ್ತು. ರಾಮೋ ತನ್ನ ಕೆಲಸಕಾರ್ಯದಲ್ಲಿ ತೊಡಗಿಕೊಂಡಳು. ಸ್ವಲ್ಪ ಸಮಯದಲ್ಲೇ ರಾಜನ ಸೈನಿಕ ಡಂಗುರ ಸಾರುತ್ತಾ ಬರುತ್ತಿದ್ದನು. ನಗರದ ಜನರಿಗೆ ಈ ರೀತಿಯ ಡಂಗುರ ಯಾರಿಗೋ ಮರಣ ದಂಡನೆ ನೀಡಿದಾಗ ಬರಿಸುತ್ತಾರೆ ಎಂದು ಗೊತ್ತಿತ್ತು. ಊರಿನ ಜನರೆಲ್ಲಾ ಯಾರಿಗೆ ಮರಣ

ದಂಡನೆ ವಿಧಿಸಲಾಗಿದೆಯೆಂದು ತಿಳಿಯಲು ತಮ್ಮ ತಮ್ಮ ಮನೆಗಳ ಮುಂದೆ ಬಂದು ನಿಂತರು. ರಾಜನ ಸೈನಿಕರು ಆ ನಾಲ್ಕು ವ್ಯಕ್ತಿಗಳಿಗೆ ಹೇಳಿದರು ನಿಮ್ಮ ದೋಷ ಹೇಳಿ. ಅವರು ಹೇಳುತ್ತಿದ್ದರು ನಾವು ರಾಜನ ಮನೆಗೆ ಕಳ್ಳತನ ಮಾಡಲು ಹೋಗಿದ್ವಿ. ನಾವು ಘೋರ ಅಪರಾಧ ಮಾಡಿದೆವು. ಇಂದು ಸಂಜೆ ನಮ್ಮನ್ನು ಗಲ್ಲಿಗೇರಿಸಲಾಗುವುದು. ಹಾಗಾಗಿ ಯಾರೂ ಇಂಥ ತಪ್ಪು ಮಾಡದಿರಿ. ಕರ್ಮಪಾಲನಿಗೆ ತಮ್ಮ ಸ್ನೇಹಿತರನ್ನು ಗುರುತಿಸಲು ತಡವಾಲಿಲ್ಲ. ಮತ್ತು ಎಲ್ಲ ಸ್ಥಿತಿಯನ್ನು ತಿಳಿದನು. ರಾಮೋ ಸರಿಯಾಗಿಯೇ ಆಯ್ತು ಎಂದಳು, ಇನ್ನೂ ಮಾಡಿ ಕಳ್ಳತನ ನಿಮಗೆ ಇದೇ ಶಿಕ್ಷೆಯಾಗಬೇಕು. ಕೆಲಸ ಮಾಡಿ ತಿನ್ನಲು ಆಗುವುದಿಲ್ಲವೇ. ರಾಮೋ ಮನೆಯೊಳಗೆ ಹೋದಳು.  ಎಂದರು. ಕರ್ಮಪಾಲನ ಬಾಯಿಂದ ಮಾತೇ ಬರಲಿಲ್ಲ. ಭಯಭೀತನಾಗಿ ನಿಂತಿದ್ದನು. ನಂತರ ಮನೆಯೊಳಗೆ ಹೋಗಿ ಅಳಲಾರಂಭಿಸಿದನು. ರಾಮೋ ನೋಡಿ ಕರ್ಮಪಾಲ ಏಕೆ ಅಳುತ್ತಿರುವೆ? ಏನಾಗಿದೆ ಎಂದು ಕೇಳಿದಳು. ಮುಳ್ಳುವಂತು ತೆಗೆಯಲಾಗಿದೆ. ಈಗ ನೋವುವಾಗುತ್ತಿದೆಯಾ? ಕರ್ಮಪಾಲ ಎದ್ದು ತನ್ನ ತಾಯಿಗೆ ತಬ್ಬಿಕೊಂಡನು. ಅಮ್ಮ ಈ ದಿನ ನಿನ್ನ ಮಗನ ಗಲ್ಲು ಶಿಕ್ಷೆ ನಿಮ್ಮ ಗುರುಗಳು ಅದನ್ನು ಮುಳ್ಳಿನಲ್ಲಿ ತಪ್ಪಿಸಿದರು" ಅಮ್ಮಾ ಇಂದು ನಿನ್ನ ಮಗನಿಗೆ ಗಲ್ಲುಶಿಕ್ಷೆಯಾಗುವುದಿತ್ತು. ನೀನು ಹೇಗೆ ಬದುಕುತ್ತಿದೆ? ಆಗ ರಾಮೋ, 'ಏಕೆ ಮಗನೇ, ನೀನೇನು ಕಳ್ಳನೇ, ನೀನು ಏಕೆ ನೇಣುಗಂಬ ಏರುವೆ?' ಕಳ್ಳರಿಗೆ ಶಿಕ್ಷೆಯಾಗುತ್ತದೆ ಎಂದಳು. ಆಗ ಕರ್ಮಪಾಲನು, 'ಹೌದಮ್ಮ ನಾನು ಒಬ್ಬ ಕಳ್ಳ, ದರೋಡೆಕೋರ. ನಿನ್ನಾನೆ ಇಂದಿನಿಂದ ನಾನು ನಶೆ ಮಾಡುವುದಿಲ್ಲ. ನಿನ್ನೊಂದಿಗೆ ನಾನು ಸತ್ಸಂಗಕ್ಕೆ ಬರುತ್ತೇನೆ. ನೀನು ಹೇಳಿದ ಕೆಲಸವನ್ನೆಲ್ಲಾ ಮಾಡುತ್ತೇನೆ. ಇನ್ನೆಂದಿಗೂ ನಾನು ನಿನಗೆ ಕಷ್ಟ ಕೊಡುವುದಿಲ್ಲ" ಎಂದು ಗೋಳಾಡಿದನು. ಆಗ ರಾಮೋ ಹೇಳಿದಳು ಕಳ್ಳತನ ಕೂಡಾ ಮಾಡಲಾರಂಭಿಸಿದೆಯಾ. ಹುಡಗನು ಹೇಳಿದ ಹೌದಮ್ಮಾ ಪಕ್ಕಾ ಕಳ್ಳನಾಗಿದ್ದೆ. ಧನ್ಯ ನಿಮ್ಮ ಸತ್ಗುರು, ಧನ್ಯ ನನ್ನ ತಾಯಿ ಅವಳಿಗೆ ಇಂತಹ ಮಹಾಪುರುಷರ ಶರಣು ಸಿಕ್ಕಿದೆ. ಅಮ್ಮಾ ಇಂದೇ ನಡೆ ನನಗೆ ದೀಕ್ಷೆ ಕೊಡಿಸು.

ಆಗ ರಾಮೋವಿಗೆ ಸಂತಸದಿಂದ ಕಣ್ಣಲ್ಲಿ ನೀರು ಬಂತು. ತಕ್ಷಣವೇ ಅವಳು ಮಗನನ್ನು ಕರೆದುಕೊಂಡು ಕಸ್ತೂರಿಯ ಮನೆಗೆ ಬಂದು ನಡೆದಿದ್ದನ್ನೆಲ್ಲಾ ತಿಳಿಸಿದಳು. ಆಗ ಕಸ್ತೂರಿಯು ಸಂತಸಗೊಂಡು ತಕ್ಷಣವೇ ಅವರನ್ನು ಕರೆದುಕೊಂಡು ಗುರುಗಳ ಆಶ್ರಮಕ್ಕೆ ಬಂದು ಅವರಿಗೆ ಧನ್ಯವಾದವನ್ನು ತಿಳಿಸಿದಳು. ಎಲ್ಲಾ ಘಟನೆ ತಿಳಿಸಿದಳು. ಹುಡುಗನು ನಾಮದೀಕ್ಷೆ ಪಡೆದುಕೊಂಡ ನಂತರದಲ್ಲಿ ಬೇರೆ ಊರಿನ ಒಂದು ಒಳ್ಳೆಯ ಸತ್ಸಂಗಿ ಕುಟುಂಬದ ಹುಡುಗಿಯ ಜೊತೆ ಅವನ ಮದುವೆಯಾಯಿತು. ಎಲ್ಲರೂ ಸತ್ಸಂಗಕ್ಕೆ ಬರತೊಡಗಿದರು ಹಾಗೂ ಸೇವೆ ಮಾಡಿ ಸುಖದಿಂದ ಬದುಕಲಾರಂಭಿಸಿದರು.

ರಾಮೋ ಆಶ್ರಮದಲ್ಲಿ ಸತ್ಸಂಗ ಕೇಳುತ್ತಾ ಕೇಳುತ್ತಾ, ಸತ್ಸಂಗಕ್ಕೆ ತನ್ನನ್ನು ಅರ್ಪಿಸಿಕೊಂಡಳು. ಗುರುಗಳು ಬಂದಾಗ ಬೇರೆ ಭಕ್ತರ ಸೇವೆ ಮಾಡುತ್ತಿದ್ದಳು. ಬೆಳಿಗ್ಗೆಯೇ ಆಶ್ರಮಕ್ಕೆ ಬಂದು ಪಾತ್ರೆ ತೊಳೆಯುವುದು, ಗುರುಗಳ ಬಟ್ಟೆ ತೊಳೆಯುವುದು, ಮುಂತಾದ ಸೇವಾ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು ತಡರಾತ್ರಿಯವರೆಗೆ ಆಶ್ರಮದಲ್ಲೇ ಇದ್ದು ನಂತರ ಮನೆಗೆ ತೆರಳುತ್ತಿದ್ದಳು. ಚಳಿಗಾಲದ ಒಂದು ದಿನ, 10 ಗಂಟೆಗೆ ಸತ್ಸಂಗ ಶುರುವಾಯಿತು. ಗುರುಗಳು ರಾಮೋನನ್ನು ಕರೆದು, "ಮಗಳೇ, ನೀನಾಗಲೇ ನದಿಗೆ ಹೋಗಿ ಈ ಬಟ್ಟೆಗಳನ್ನು ಒಗೆದು, ಒಣಗಿಸಿಕೊಂಡು ಬಾ, ಸತ್ಸಂಗದ ನಂತರ ಹೋದರೆ ಬಟ್ಟೆ ಒಣಗುವುದಿಲ್ಲ" ಎಂದರು. ರಾಮೋ ಗುರುಗಳ ಮಾತಿನಂತೆ ಬಟ್ಟೆಗಳನ್ನೆಲ್ಲಾ ಬಕೆಟ್ಟಿಗೆ ತುಂಬಿಕೊಂಡು ನದಿಯ ಬಳಿ ಬಂದಳು. ನದಿ ಆಶ್ರಮದ ಹತ್ತಿರದಲ್ಲೇ ಹರಿಯುತ್ತಿತ್ತು. ಬಟ್ಟೆಗಳನ್ನೆಲ್ಲಾ ಸೋಪಿನಲ್ಲಿ ನೆನೆಸಿಟ್ಟಳು, ಸ್ವಲ್ಪ ನೆನೆದರೆ ಕೊಳೆ ಚೆನ್ನಾಗಿ ಹೋಗುವುದೆಂದು ಯೋಚಿಸಿ, ಅಲ್ಲಿಯವರೆಗೆ ವ್ಯರ್ಥವಾಗಿ ಕಾಲ ಕಳೆಯಬಾರದೆಂದು ನಿರ್ಧರಿಸಿ ಆಶ್ರಮದ ಗೋಡೆಗೆ ಕಿವಿಯಾನಿಸಿಕೊಂಡು ಸತ್ಸಂಗದ ವಚನವನ್ನು ಕೇಳಲಾರಂಭಿಸಿದಳು. ಸತ್ಸಂಗ ಮುಗಿಯುವ ಸಮಯವಾಯಿತು. ಸತ್ ಸಾಹೇಬ್' ಎಂದು ಕೇಳಿಸಿದಾಗ ರಾಮೋಗೆ ಬಟ್ಟೆಯ

ನೆನಪಾಯಿತು. ಅವಳಿಗೆ ಅತ್ಯಂತ ಭಯವಾಯಿತು. ನಾನು ಬಟ್ಟೆ ಒಗೆಯುವುದು ಯಾವಾಗ? ಅವುಗಳನ್ನು ಒಣಗಿಸುವುದು ಯಾವಾಗ? ಆ ಬಟ್ಟೆಗಳೇನಾದರೂ ಒಣಗದಿದ್ದರೆ ಗುರುಗಳ ಮಾತು ಮೀರಿದಂತಾಗುತ್ತದೆ. ಗುರುಗಳು ಕೋಪಗೊಂಡರೆ ನನ್ನ ಸೇವೆ ಮೇಲೆ ನೀರು ಚೆಲ್ಲಿದಂತಾಗುವುದು. ಈಗೇನು ಮಾಡುವುದು? ಇದೇ ವಿಚಾರಗಳಿಂದ ಗಾಬರಿಗೊಂಡು ನದಿಯ ಕಡೆಗೆ ಓಡಿದಳು.

ಅಲ್ಲಿ ಬಂದು ನೋಡಿದಾಗ ಆಶ್ಚರ್ಯವೊಂದು ಕಾದಿತ್ತು. ಬಟ್ಟೆ ನೆನೆಸಿಟ್ಟಿದ್ದ ಬಕೆಟ್ ಖಾಲಿಯಾಗಿತ್ತು. ಬಟ್ಟೆಗಳನ್ನೆಲ್ಲಾ ಪೊದೆಗಳ ಮೇಲೆ ಹರವಿ ಹಾಕಲಾಗಿತ್ತು. ರಾಮೋ ಹೋಗಿ ಮುಟ್ಟಿ ನೋಡಿದಾಗ ಆ ಬಟ್ಟೆಗಳೆಲ್ಲಾ ಆಗಲೇ ಒಣಗಿ ಹೋಗಿದ್ದವು. ಅವಳಿಗೆ ಏನಾಯಿತೆಂದು ತಿಳಿಯಲೇ ಇಲ್ಲ. ಅಲ್ಲಿ ಬೇರೆ ಹೆಂಗಸರನ್ನು ಈ ಬಟ್ಟೆಗಳನ್ನು ನೀವು ಒಗೆದಿರುವಿರಾ ಎಂದು ಇದರ ಬಗ್ಗೆ ಕೇಳಿದಾಗ ಅವರೆಲ್ಲಾ ಆಕ್ಷೇಪಿಸುವ ಧ್ವನಿಯಲ್ಲಿ," ಇದೇನು ಹೀಗೆ ಹೇಳುತ್ತಿರುವೆ? ನಿನ್ನ ತಲೆ ಕೆಟ್ಟಿದೆಯೇ ನೀನೇ ಅಲ್ಲವೇ ಬಟ್ಟೆಯನ್ನೆಲ್ಲಾ ಒಗೆದದ್ದು. ನೀನು ಒಗೆಯಬೇಕಾದರೆ ನಮಗೆಲ್ಲಾ ನೀನು ನೀರು ಹಾರಿಸಿದೆ. ಅದಕ್ಕಾಗಿ ನಿನ್ನನ್ನು ನಾವೆಲ್ಲಾ ಗದರಿಸಿದೆವು. ನೀನು ಯಾವ ಮಾತನ್ನು ಆಡದೆ, ಬಟ್ಟೆಗಳನ್ನು ಒಣಗಲು ಹಾಕಿ ಹೊರಟು ಹೋದೆಯಲ್ಲಾ" ಎಂದರು. ಏನೂ ನಶೆ ಮಾಡಿ ಬಂದಿರುವೆಯಾ. ಏನೂ ತೋಚದೆ ರಾಮೋ ಅಳುತ್ತಾ ಬಟ್ಟೆಗಳನ್ನೆಲ್ಲಾ ಎತ್ತಿಕೊಂಡು ಬಕೆಟ್ಟಿನಲ್ಲಿ ತುಂಬಿಕೊಂಡು ಆಶ್ರಮದ ಕಡೆಗೆ ಹೊರಟಳು. ಅಷ್ಟರಲ್ಲಿ ರಾಮೋ ಬಟ್ಟೆ ಒಗೆಯದೆ, ಆಶ್ರಮದ ಗೋಡೆಗೆ ಕಿವಿಯಾನಿಸಿಕೊಂಡು ನಿಂತಿದ್ದನ್ನು ಕಂಡಿದ್ದ ಒಬ್ಬ ವ್ಯಕ್ತಿ ಗುರುಗಳ ಬಳಿ ಬಂದು ಹೇಳಿದ್ದನು. ಬಟ್ಟೆ ಒಗೆಯದೆ ರಾಮೋ ಇಲ್ಲಿ ನಿಂತಿದ್ದಳು. ಅಷ್ಟರಲ್ಲಿ ರಾಮೋ ಗುರುಗಳ ಬಳಿ ಬಂದು ಬಟ್ಟೆ ಇಟ್ಟು ಅಳತೊಡಗಿದಳು. ಗುರುಗಳು ಬಟ್ಟೆಯನ್ನು ಮುಟ್ಟಿ ನೋಡಿದಾಗ ಅವುಗಳೆಲ್ಲಾ ಒಣಗಿ ಹೋಗಿದ್ದವು. ರಾಮೋಗೆ ಕಾರಣ ಕೇಳಿದಾಗ ನೀವು ಸ್ವತಃ ದುಃಖಿಯಾಗಿ ಬಟ್ಟೆ ತೊಳೆದಿರುವಿರಿ. ನನ್ನಿಂದ ತಪ್ಪಾಯ್ತು. ನಾನು ಸ್ವಲ್ಪ ಸಮಯ ಸತ್ಸಂಗ ಕೇಳಿ ನಂತರ ಬಟ್ಟೆ ತೊಳೆಯೋಣ ಎಂದು ಯೋಚಿಸಿದ್ದೆ. ಆದರೆ ಗಮನ ಕೊಡಲಿಲ್ಲ. ಆಗ ಗುರುಗಳು ರಾಮೋಳ ಮೇಲೆ ಕೋಪಗೊಳ್ಳದೆ ಪ್ರಸನ್ನರಾಗಿ ಅವಳಿಗೆ ಹೀಗೆಂದರು, "ಮಗಳೇ, ಪರಮಾತ್ಮ ಕಬೀರರು ರಾಮೋ ವೇಷದಲ್ಲಿ ಬಂದು ಬಟ್ಟೆ ಒಗೆದಿದ್ದಾರೆ.

ಜ್ಯೋಂ ಬಚ್ಚಾ ಗಊ ಕೀ ನಜರ್ ಮೆಂ, ಯೂಂ ಸಾಂಈ ಕೂ ಸಂತ್ ।
ಭಕ್ತೋಂ ಕೆ ಪೀಛೆ ಫಿರೆ, ಭಕ್ತ್ ವಚ್ಛಲ್ ಭಗವಂತ್ ॥

ಶಬ್ದಾರ್ಥ:– ಹೇಗೆ ಹಸುವು ಯಾವುದೇ ಪಶು, ಪಕ್ಷಿ, ಮನುಷ್ಯನು ತನ್ನ ಮರಿಯನ್ನು ಹೊಡೆಯದಿರಲಿ ಎಂದು ತನ್ನ ಕರುವಿನ ಮೇಲೆ ನಿಗಾ ಇಡುವುದೋ, ಹಾಗೆ ಪರಮಾತ್ಮನು ತನ್ನ ಭಕ್ತನ ಮೇಲೆ ನಿಗಾ ಇಡುತ್ತಾನೆ. ಹೇಗೆ ಕರುವು ನೆಗೆಯುತ್ತಾ, ಕುಣಿಯುತ್ತಾ ಎಲ್ಲೆಲ್ಲೋ ಓಡಿದಾಗ ಹಸುವೂ ಸಹ ಅದರ ರಕ್ಷಣೆಗಾಗಿ ಹಿಂದೆ–ಹಿಂದೆ ಓಡುವುದೋ, ಹಾಗೆ ಪರಮಾತ್ಮನೂ ಸಹ ಭಕ್ತರ ಹಿತಕಾರಿಯವನು, ತನ್ನ ಭಕ್ತರ ಹಿಂದೆ–ಹಿಂದೆ ಓಡಾಡುವನು. ಅವರ ರಕ್ಷಣೆಗಾಗಿ ಯಾವಾಗಲೂ ಜೊತೆಯಲ್ಲಿರುತ್ತಾನೆ.

ಪರಮಾತ್ಮನು ಅಬ್ರಾಹಿಮ್ ಸುಲ್ತಾನ ಅಧಮ್‌ನನ್ನು ನರಕದಿಂದ ಹೊರತರಲು ಸೇವಕಿಯ ರೂಪದಲ್ಲಿ ಬಂದು ಶರೀರದ ಮೇಲೆ ಚಾವಟಿಯಿಂದ ಪೆಟ್ಟು ತಿಂದಿದ್ದರು. ಮಗಳೇ, ದುಃಖ ಪಡಬೇಡ. ನಿನ್ನ ಉದ್ದೇಶ ತಪ್ಪಾಗಿರಲಿಲ್ಲ. ಪರಮಾತ್ಮನು ನಿಜವಾದ ಭಕ್ತಿ ಭಾವವನ್ನು ಎದುರು ನೋಡುತ್ತಿರುತ್ತಾನೆ". ಎಂದು ಗುರುಗಳು ಹೇಳಿದರು. ಇದರಿಂದ ರಾಮೋಗೆ ಸಮಾಧಾನವಾಯಿತು. ಸತ್ಸಂಗದಲ್ಲಿ ರಾಮೋ ನೆಲೆಸಿದಳು. ಮೋಕ್ಷ ಕೂಡಾ ಪಡೆದಳು.

ಕಬೀರ್, ಸತಗುರು ಶರಣ್ ಮೆಂ ಆನೇ ಸೆ, ಆಯೀ ಟಲ್ಲೈ ಬಲಾ ।
ಜೈ ಭಾಗ್ಯ ಮೆಂ ಸೂಲೀ ಲಿಖೀ ಹೋ, ಕಾಂಟೇ ಮೆಂ ಟಲ್ ಜಾಯ್ ॥

ಭಾವಾರ್ಥ:– ಸಮರ್ಥ ಕಬೀರ ಪರಮೇಶ್ವರರ ಕೃಪಾ ಪಾತ್ರರಾದ ನಿಜವಾದ ಗುರು (ಸದ್ಗುರು)ವಿನಿಂದ ದೀಕ್ಷೆ ಪಡೆಯುವ ಭಕ್ತ/ಭಕ್ತೆಯರನ್ನು ಪರಮಾತ್ಮನು ರಕ್ಷಿಸುತ್ತಾನೆ. ಒಂದು ವೇಳೆ

ಪೂರ್ವ ಜನ್ಮದ ಪಾಪದ ಕಾರಣದಿಂದ ಸಾಧಕನಿಗೆ ಶೂಲಕ್ಕೇರಿಸಿ ಶಿಕ್ಷೆ ಕೊಟ್ಟು ಸಾವು ಎನ್ನುವುದು ಅವನ ಭಾಗ್ಯದಲ್ಲಿ ಬರೆಯಲ್ಪಟ್ಟಿದ್ದರೆ, ಅದು ಎಷ್ಟೇ ಕಷ್ಟದಾಯಕವಾಗಿದ್ದರೂ ಆ ಸಾವಿನ ಶಿಕ್ಷೆಯನ್ನು ಪರಮಾತ್ಮನು ಕೇವಲ ಕಾಲಿಗೆ ಮುಳ್ಳು ಚುಚ್ಚುವಷ್ಟು ಸಣ್ಣ ಶಿಕ್ಷೆಯನ್ನಾಗಿ ಪರಿವರ್ತಿಸಿ ಬಿಡುತ್ತಾನೆ. ದೊಡ್ಡ ಶಿಕ್ಷೆಯನ್ನು ಸಹ ಹೆಸರಿಗೆ ಮಾತ್ರ ಶಿಕ್ಷೆ ಎನ್ನುವಂತೆ ಸಣ್ಣ ಶಿಕ್ಷೆಯನ್ನು ನೀಡುತ್ತಾನೆ.

## "ಕಳ್ಳನು ಎಂದಿಗೂ ಧನಿಕನಾಗುವುದಿಲ್ಲ"

ಕಬೀರ ಪರಮೇಶ್ವರರು ತಮ್ಮ ನಿಯಮಾನುಸಾರ ಒಂದು ಊರಿನ ಹೊರಗೆ ಕಾಡಿನಲ್ಲಿ ಒಂದು ಆಶ್ರಮ ಕಟ್ಟಿ ಇರುತ್ತಿದ್ದರು. ಕೆಲವು ದಿನಗಳವರೆಗೆ ಅಲ್ಲಿದ್ದು ಸತ್ಸಂಗ ಮಾಡುತ್ತಿದ್ದರು. ನಂತರ ತಿರುಗಾಟದಲ್ಲಿ ಹೋಗುತ್ತಿದ್ದರು. ಅವರಿಗೆ ಒಬ್ಬ ರೈತ ಭಕ್ತನಿದ್ದನು. ರೈತನ ಬಳಿ ಹಣವಿರಲಿಲ್ಲ. ಅವನ ಬಳಿ ಒಂದು ಎತ್ತು ಇತ್ತು. ಅವನು ಅನ್ಯ ರೈತನೊಂದಿಗೆ ಕೂಡಿ ಉಳುಮೆ ಮಾಡುತ್ತಿದ್ದನು. ಎರಡು ದಿನ ಅನ್ಯ ರೈತನ ಎತ್ತು ತಗೊಂಡು ಎರಡು ಎತ್ತುಗಳಿಂದ ಉಳುಮೆ ಮಾಡುತ್ತಿದ್ದ ನಂತರ ಎರಡು ದಿನ ಬೇರೆ ರೈತ ಅವನ ಎತ್ತು ತಗೊಂಡು ತನ್ನ ಎತ್ತಿನೊಂದಿಗೆ ಉಳುಮೆ ಮಾಡುತ್ತಿದ್ದನು. ರೈತ ತನ್ನ ಮನೆಯ ಅಂಗಳದಲ್ಲಿ ಎತ್ತು ಕಟ್ಟುತ್ತಿದ್ದನು. ಒಂದು ದಿನ ರಾತ್ರಿ ಅವನು ಮಲಗಿರುವಾಗ ಒಬ್ಬ ಕಳ್ಳನು ಆ ಊರಿಗೆ ಬಂದನು. ಅಂಗಳದಲ್ಲಿ ಕಟ್ಟಿದ್ದ ಎತ್ತನ್ನು ನೋಡಿ ಅದನ್ನು ಕದ್ದುಕೊಂಡು ಪರಾರಿಯಾದನು. ಬೆಳಿಗ್ಗೆ ರೈತನು ಎದ್ದು ನೋಡಿದಾಗ ತನ್ನ ಎತ್ತು ಕಳುವಾಗಿರುವುದು ತಿಳಿಯಿತು. ಅತ್ಯಂತ ದುಃಖದಿಂದ ಗುರುಗಳ ಬಳಿ ಹೋಗಿ ತನ್ನ ದುಃಖವನ್ನು ತೋಡಿಕೊಂಡನು. ಆಗ ಗುರುಗಳು, "ಚಿಂತಿಸಬೇಡ ಮಗನೇ, ದೇವರ ಮೇಲೆ ನಂಬಿಕೆ ಇಡು ದಾನ ಧರ್ಮ ಪುಣ್ಯ ಮಾಡುತ್ತಿರು ನಿನಗೆ ಎರಡು ಎತ್ತುಗಳನ್ನು ಕೊಡುತ್ತಾನೆ" ಎಂದು ಸಂತೈಸಿದರು. ಕಳ್ಳತನ ಮಾಡಿರುವವನಿಗೆ ಪಾಪ ತಗಲುವುದು. ಪರಮಾತ್ಮನ ಕೃಪೆಯಿಂದ ಮಳೆ ಚೆನ್ನಾಗಿ ಆಯ್ತು. ಹೊಲದಲ್ಲಿ ಬೆಳೆ ಚೆನ್ನಾಗಿ ಬೆಳೆದು ಒಂದಕ್ಕೆ ಎರಡರಷ್ಟು ಲಾಭ ಬಂದಿತು. ರೈತನು ಬಹಳ ಸಂತೋಷದಿಂದ ಎರಡು ಎತ್ತುಗಳನ್ನು ಖರೀದಿಸಿದನು. ಆ ಎತ್ತುಗಳಿಗೆ ಹುಲ್ಲು ಭೂಸ ತಿನ್ನಿಸಿ ಚೆನ್ನಾಗಿ ಬೆಳೆಸಿದನು. ಆ ಎರಡೂ ಎತ್ತುಗಳು ಗೂಳಿಗಳಂತೆ ತಯಾರಾದವು. ನೋಡುವವರು ಹೊಟ್ಟೆ ಕಿಚ್ಚು ಪಡುವಷ್ಟು ಸುಂದರವಾಗಿದ್ದವು. ಇತ್ತ ಒಂದು ಎತ್ತನ್ನು ಕದ್ದ ಕಳ್ಳನ ಕೈ ಖಾಲಿಯಾಗಿತ್ತು. ಅವನು ಮತ್ತೆ ಆ ಊರಿಗೆ ಕಳ್ಳತನ ಮಾಡಲು ಬಂದ ಆದರೆ ಎಲ್ಲಿ ಏನೂ ಸಿಗಲಿಲ್ಲ. ರೈತನ ಮನೆಗೆ ಬಂದನು. ಗೂಳಿಯಂತಿದ್ದ ಆ ಎತ್ತುಗಳನ್ನು ನೋಡಿ ಆ ಎರಡು ಎತ್ತುಗಳನ್ನು ಅವನು ಕದ್ದುಕೊಂಡು ಹೋದನು. ಮರುದಿನ ಎದ್ದು ರೈತನು ನೋಡಿದಾಗ ಎತ್ತುಗಳು ಕಳ್ಳತನವಾಗಿದ್ದವು. ಅವನು ಗುರುಗಳಿಗೆ ತಿಳಿಸಿದನು. ಗುರುಗಳು "ಮಗನೇ ದೇವರು ನಿನಗೆ ನಾಲ್ಕು ಎತ್ತು ಕೊಡುತ್ತಾನೆ ಚಿಂತಿಸಬೇಡ" ಎಂದರು. ಕಳ್ಳ ಎಂದೂ ಸಾಹುಕಾರನಾಗಲು ಸಾಧ್ಯವಿಲ್ಲ, ಪಾಪವನ್ನೇ ಒಟ್ಟುಗೂಡಿಸುತ್ತಾನೆ.

ಅದೇ ರೀತಿ ಆ ವರ್ಷವೂ ದೇವರ ದಯೆಯಿಂದ ಹಾಗೂ ಗುರುಗಳ ಆಶೀರ್ವಾದದಿಂದ ಬೆಳೆ ಚೆನ್ನಾಗಿ ಬಂತು. ಒಂದಕ್ಕೆ ನಾಲ್ಕರಷ್ಟು ಲಾಭ ಬಂದು 2 ಎತ್ತುಗಳನ್ನು ಖರೀದಿಸಿ, 2 ಎತ್ತುಗಳನ್ನು ಸಾಲದ ಮೇಲೆ ಪಡೆದನು. ಅಧಿಕ ಜಮೀನಿನಲ್ಲಿ ಬೆಳೆ ಬೆಳೆದನು. ಉಳ್ಳಲು ಒಬ್ಬ ಸೇವಕನನ್ನು ಕೆಲಸ ಮೇಲೆ ಇಟ್ಟುಕೊಂಡನು. ಒಂದು ವರ್ಷದಲ್ಲಿ ಎಲ್ಲಾ ಸಾಲವನ್ನು ತೀರಿಸಿದನು. 4 ಎತ್ತುಗಳಾದವು ಗೂಳಿಗಳಂತೆ ದಷ್ಟ ಪುಷ್ಟ. ಮನೆಯನ್ನು ಕಟ್ಟಿಸಿಕೊಂಡನು, ಕುಟುಂಬದವರ ಜೊತೆ ಸಂತೋಷವಾಗಿದ್ದನು. ಕಳ್ಳನು 2 ವರ್ಷಗಳ ನಂತರ ಅಲ್ಲಿಗೆ ಹೋದನು. ಮತ್ತು ಮೊದಲು ಅದೇ ರೈತನ ಬಳಿ ಹೋದನು. ಕಳ್ಳ ನೋಡಿದ ನಾಲ್ಕು ಎತ್ತುಗಳು ಗೂಳಿಗಳಂತೆ ಕಟ್ಟಿದ್ದವು. ಕಳ್ಳನ ಹತ್ತಿರ 2 ದಿನದ ಆಹಾರ ಉಳಿದಿತ್ತು. ಆಗ ಅವನಿಗೆ ತಪ್ಪಿನ ಅರಿವಾಗಿ ರೈತನನ್ನು ಎಬ್ಬಿಸಿ ತಾನು ಎತ್ತುಗಳನ್ನು ಕದ್ದ ವಿಷಯವನ್ನು ತಿಳಿಸಿದನು. ಆಗ ರೈತನು, "ಸಹೋದರ, ನನ್ನನ್ನು ರಾತ್ರಿಯಲ್ಲಿ ನಿದ್ದೆಯಿಂದ ಎಬ್ಬಿಸಬೇಡ, ನಿನ್ನ ಕೆಲಸ ನೀನು ಮಾಡಿಕೋ ಹೋಗು. ದೇವರು ನನಗೆ ಕೊಡುತ್ತಿದ್ದಾನೆ. ನನ್ನನ್ನು ಮಲಗಲು ಬಿಡು" ಎಂದನು.

ಆಗ ಕಳ್ಳನು ಪಶ್ಚಾತ್ತಾಪದಿಂದ ಭಕ್ತನ ಕಾಲಿಗೆ ಬಿದ್ದು, ಅಣ್ಣಾ, ನಿಮ್ಮ ಕಳ್ಳ ನಿಮ್ಮ ಮುಂದಿದ್ದಾನೆ. ನೀವು ನನ್ನನ್ನು ಏಕೆ ಹಿಡಿದುಕೊಳ್ಳುತ್ತಿಲ್ಲ? ನಾನು ನಿಮ್ಮ ಒಂದು ಎತ್ತನ್ನು ಕಳ್ಳತನ ಮಾಡಿದೆ. ವರ್ಷದ ನಂತರ ನಿಮ್ಮ ಅಂಗಳದಲ್ಲಿ 2 ದಷ್ಟ ಪುಷ್ಟ ಎತ್ತುಗಳು ನಿಂತಿದ್ದವು. ಆ ಎರಡೂ ಎತ್ತುಗಳನ್ನು ನಾನು ಕದ್ದೆ 2 ವರ್ಷಗಳ ನಂತರ ಅಂಗಳದಲ್ಲಿ 4 ಎತ್ತುಗಳು ಗೂಳಿಗಳಂತೆ ದಷ್ಟ ಪುಷ್ಟ ಕಟ್ಟಿದ್ದವು. ಮೂರು ಎತ್ತುಗಳನ್ನು ಕದ್ದಿದ್ದೇನೆ. ನನ್ನದಂತು ಸರ್ವನಾಶವಾಗಿದೆ. ಈ ದಿನ ನನ್ನ ಮಕ್ಕಳು ಮರಿ ಹಸಿವಿನಿಂದ ಕಂಗೆಟ್ಟಿದ್ದಾರೆ. ನನ್ನ ವಿಕಾಸದ ದಾರಿ ನೀವೇ ತೋರಿಸಿ. ನಾನು ಒಬ್ಬ ರೈತನು ನನ್ನದು ಜಮೀನಿದೆ ಆದರೆ ಬಹಳ ಬಡವನು. ಆಗ ಆ ರೈತನು ಅವನನ್ನು ಸ್ನಾನ ಮಾಡಲು ತಿಳಿಸಿದನು. ನಂತರ ಹೊಟ್ಟೆ ತುಂಬಾ ಊಟ ನೀಡಿದನು. ನಂತರ ಅವನನ್ನು ಕರೆದುಕೊಂಡು ಆಶ್ರಮಕ್ಕೆ ಹೋದನು. ಗುರುಗಳನ್ನು ಭೇಟಿ ಮಾಡಿಸಿ ವೃತ್ತಾಂತವನ್ನೆಲ್ಲಾ ಹೇಳಿದನು. ಗುರುಗಳು ಅವನಿಗೆ ತಿಳಿಸಿದರು. 8–10 ದಿನ ತನ್ನ ಮನೆಯಲ್ಲೇ ಇಟ್ಟುಕೊಂಡು ದಿನಾಲೂ ಆಶ್ರಮಕ್ಕೆ ಸತ್ಸಂಗ ಕೇಳಲು ಕರೆದೊಯ್ಯುತ್ತಿದ್ದನು. ಕಳ್ಳನು ದೀಕ್ಷೆ ಪಡೆದುಕೊಂಡನು. ಗುರುಗಳು ರೈತನನ್ನು ಕರೆದು ಹೊಸ ಭಕ್ತನಿಗೆ ಒಂದು ಎತ್ತು ಸಾಲದ ಮೇಲೆ ಕೊಡಲು ತಿಳಿಸಿದರು, ಉಳುಮೆ ಮಾಡಿ ನಿನ್ನ ಹಣ ತೀರಿಸುವನು. ಭಕ್ತನು ಸರಿ ಗುರುಗಳೇ ಎಂದನು. ರೈತನು ಗುರುಗಳ ಆಜ್ಞೆಯಂತೆ ಒಂದು ಎತ್ತು ಅವನಿಗೆ ಸಾಲವಾಗಿ ಕೊಟ್ಟನು. ಹೊಸ ಭಕ್ತನು ಪ್ರತಿ ತಿಂಗಳು ಸತ್ಸಂಗಕ್ಕೆ ಬರುತ್ತಿದ್ದನು. ಇಡೀ ಕುಟುಂಬಕ್ಕೆ ನಾಮದೀಕ್ಷೆ ಕೊಡಿಸಿದನು. ಕ್ರಮೇಣ 2 ವರ್ಷಗಳಲ್ಲಿ ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಆಗ ಎತ್ತುಗಳಿಗೆ ಬೆಲೆ ಕಟ್ಟಿ ಅದರ ಹಣವನ್ನು ಮತ್ತು ಈ ಮೊದಲೇ ಕದ್ದಿದ್ದ ಎತ್ತುಗಳಿಗೆ ಬೆಲೆ ಕಟ್ಟಿ ಅದರ ಹಣವನ್ನು ರೈತನಿಗೆ ಕೊಡಲು ಅವನ ಮಕ್ಕಳೊಂದಿಗೆ ಬಂದನು. ರೈತನಿಗೆ ಹೊಸ ಭಕ್ತನು ಎಲ್ಲಾ ದುಡ್ಡು ಕೊಟ್ಟು ಕ್ಷಮೆಯಾಚಿಸಿದನು. ನಿಮ್ಮ ಉಪಕಾರವನ್ನು ನನ್ನ 7 ಪೀಳಿಗೆ ಕೂಡಾ ಮರೆಯಲಾರವು. ಆಗ ಆ ರೈತನು ಇದೆಲ್ಲಾ ಗುರುಗಳ ಕೃಪೆ ಎಂದು ಹೇಳಿದನು. ನೀವು ಈ ಎಲ್ಲಾ ಗುರುಗಳಿಗೆ ದಾನ ಮಾಡಿ. ನನಗಂತು ಅವರು ಮೊದಲೇ ಎತ್ತುಗಳ ಆ ಹಣವನ್ನೆಲ್ಲಾ ಕೊಟ್ಟಿರುವರು. ನನ್ನ ಕೆಲಸದಲ್ಲ. ಇಬ್ಬರೂ ಗುರುಗಳು ಬಳಿ ಹೋಗಿ ಆ ಹಣವನ್ನೆಲ್ಲಾ ದಾನ ಧರ್ಮಗಳಿಗೆ ವಿನಿಯೋಗಿಸಿದರು. ಈ ರೀತಿ ಕಳ್ಳತನದ ಹಣ ಯಾವಾಗಲೂ ಹಾಳಾಗಿಯೆ ಹೋಗುತ್ತದೆ. ಭಕ್ತನು ಯಾವಾಗಲೂ ಬೆಳೆಯುತ್ತಿರುತ್ತಾನೆ.

➢ ಸಂಸ್ಕಾರವು ಸಾಂಕ್ರಾಮಿಕ ರೋಗದಂತೆ ಹರಡುತ್ತದೆ :–

ಒಳ್ಳೆಯ ಹಾಗೂ ಕೆಟ್ಟ ಸಂಸ್ಕಾರಗಳು ಸಾಂಕ್ರಾಮಿಕ ರೋಗದಂತೆ ಹರಡುತ್ತವೆ. ಹೇಗೆ ಭಕ್ತನ ಕೈಯಿಂದ ಬಿತ್ತಿದ ಬೀಜದಲ್ಲೂ ಭಕ್ತಿ ಸಂಸ್ಕಾರವು ಪ್ರವೇಶಿಸುತ್ತದೆ. ಯಾರು ಆ ಅನ್ನವನ್ನು ತಿನ್ನುತ್ತಾರೋ, ಅವರಿಗೂ ಭಕ್ತಿಯ ಪ್ರೇರಣೆ ಆಗುವುದು.

ಒಂದು ವೇಳೆ ಮದ್ಯವಸನಿಯು ಕೆಟ್ಟ ಆಲೋಚನೆಯಿಂದ ಬೀಜವನ್ನು ಬಿತ್ತಿದರೆ ಆ ಬೀಜದಲ್ಲಿ ಅವರ ವಿಚಾರಗಳು ಪ್ರವೇಶಿಸಿ, ಆ ಅನ್ನ ತಿನ್ನುವವರಿಗೆ ಅದೇ ಪ್ರೇರಣೆ ಸಿಗುತ್ತದೆ.

ಉದಾಹರಣೆಗೆ :– ಒಬ್ಬಳು ಸಹೋದರಿ ಗುರುಗಳಿಂದ ದೀಕ್ಷೆ ಪಡೆದಿದ್ದಳು. ಅವಳ ಮನೆಗೆ ಗುರುಗಳು ಬಂದರು ಮತ್ತು ಜೊತೆಯಲ್ಲಿ ಒಬ್ಬ ಶಿಷ್ಯನು ಇದ್ದನು. ಅವಳ ತಂಗಿ ಕೂಡಾ ಅದೇ ದಿನ ಯಾವುದೋ ಕೆಲಸದಿಂದ ಬಂದಳು. ತಂಗಿಗೆ ಒಬ್ಬ ಮಗಳಿದ್ದಳು. ಅಳಿಯ ಅಕಾಲ ಮರಣವನ್ನಪ್ಪಿದ್ದನು. ಮಗಳಿಗೆ ಚಿಕ್ಕ ಚಿಕ್ಕ ಮಕ್ಕಳಿದ್ದರು. ಅವಳು ಆ ಮಕ್ಕಳ ಬಗ್ಗೆ ಬಹಳ ಚಿಂತಿತಳಾಗಿದ್ದಳು. ಅವರನ್ನು ಯಾರು ಸಾಕಿ ಸಲಹುತ್ತಾರೆ? ನನ್ನ ಮಗಳಿಗೆ ಗಂಡನೂ ಇಲ್ಲ, ಅತ್ತೆ ಮನೆಯ ಸಂಬಂಧವೂ ಕಡಿದು ಹೋಗಿದೆ. ಅಯ್ಯೋ ದೇವರೆ, ಮುಂದೆ ಇವರಿಗೆ ಯಾರು ಗತಿ? ಎನ್ನುತ್ತಾ ಚಿಂತಿಸುತ್ತಿದ್ದಳು. ದೀಕ್ಷೆ ಪಡೆದವಳು ಅಡುಗೆ ಮಾಡುತ್ತಿದ್ದಳು ಅವಳ ಅಕ್ಕ ಅವಳಿಗೆ ಸಹಾಯ ಮಾಡುತ್ತಿದ್ದಳು. ಹೆಚ್ಚಾಗಿ ಅಡಿಗೆ ಅವಳ ಅಕ್ಕ ಮಾಡಿದಳು. ಸಂತ ಭಕ್ತರು ಊಟ ಮಾಡಿ ಮಲಗಿಕೊಂಡರು. ಬೆಳಿಗ್ಗೆ ಭಕ್ತನು ಗುರುಗಳಿಗೆ ಹೇಳಿದ ಗುರುಗಳೇ ರಾತ್ರಿ ಮಲಗಿಕೊಂಡಾಗ ಮನಸ್ಸು ಬಹಳ ದುಃಖಿಯಾಯ್ತು. ಅಂದರೆ

ನನ್ನ ಅಳಿಯ ಮರಣಹೊಂದಿದ, ಮಗಳಿಗೆ ಚಿಕ್ಕ ಚಿಕ್ಕ ಮಕ್ಕಳಿವೆ, ಅವರ ಬಗ್ಗೆ ಚಿಂತೆಯಾಗುತ್ತಿದೆ. ಇವರ ಗತಿ ಏನು? ನಿರ್ವಹಣೆ ಹೇಗಾಗುವುದು? ಗುರುಗಳು ಮಾರನೇದಿನ ಅಡಿಗೆ ಯಾರು ಮಾಡಿದ್ದೆಂದು ತನ್ನ ಶಿಷ್ಯೆಗೆ ಕೇಳಿದರು. ನನ್ನ ತಂಗಿಯು ಬಂದಿದ್ದಾಳೆ, ಅವಳು ಮಾಡಿದ್ದೆಂದು ಹೇಳಿದಳು. ಅವಳಿಗೆ ಏನಾದರೂ ಕಷ್ಟವಿದೆಯಾ ಎಂದು ಗುರುಗಳು ಪ್ರಶ್ನಿಸಿದರು. ಆಗ ಹೇಳಿದಳು ಅವಳ ಅಳಿಯ ತೀರಿಕೊಂಡಿದ್ದಾನೆ. ಅವಳ ಮಗಳಿಗೆ ಚಿಕ್ಕ ಚಿಕ್ಕ ಮಕ್ಕಳಿವೆ. ಯಾವಾಗಲೂ ಅವಳಿಗೆ ಅವರ ಬಗ್ಗೆಯೇ ಚಿಂತೆ ಎಂದು ಹೇಳಿದಳು. ಅನೇಕ ಬಾರಿ ಹೇಳುತ್ತಿದ್ದಳು ಮಗಳದು ಏನಾಗುವುದು, ಮಕ್ಕಳ ಪಾಲನೆ ಹೇಗೆ ಮಾಡುವಳು? ಆಗ ಗುರುಗಳು ಅವಳ ಚಿಂತೆ ಈ ಊಟದಲ್ಲಿ ಪ್ರವೇಶಿಸಿದೆ. ಅದು ತಿನ್ನುವವರ ಮೇಲೆ ಪ್ರಭಾವ ಬೀರಿದೆ. ಅದೇ ಚಿಂತೆ ಇಡೀ ರಾತ್ರಿ ನನ್ನನ್ನೂ ಕಾಡುತ್ತಿತ್ತು. ಅದೇ ರೀತಿ ಭಕ್ತಿ, ನಾಮಸ್ಮರಣೆ ಅಥವಾ ಸಂತರ ವಾಣಿಯನ್ನು ಮನನ ಮಾಡಿಕೊಳ್ಳುತ್ತಾ ಅಡಿಗೆ ಮಾಡಿದರೆ ತಿನ್ನುವವರಲ್ಲೂ ಭಕ್ತಿಭಾವದ ಪ್ರೇರಣೆ ನೀಡುತ್ತದೆ. ಭಕ್ತಿಯ ಅಭಿರುಚಿ ಹೆಚ್ಚುತ್ತದೆ. ಯಾರೋ ರೈತ ಹಾಡು ಹಾಡುತ್ತಾ ಬೀಜ ಬಿತ್ತಿದರೆ ಅಥವಾ ಅಡಿಗೆ ಮಾಡುವವರು ಹಾಡು ಹಾಡುತ್ತಾ ಅಡಿಗೆ ಮಾಡಿದರೆ ಆ ಊಟದಲ್ಲಿ ಆ ಸಂಸ್ಕಾರವು ಪ್ರವೇಶಿಸುತ್ತದೆ. ಕೆಟ್ಟ ಯೋಚನೆ ಮಾಡುತ್ತಾ ಅಡಿಗೆ ಮಾಡಿದರೆ ಅವರಲ್ಲೂ ಕೆಟ್ಟತನಕ್ಕೆ ಪ್ರೇರಣೆ ನೀಡುತ್ತದೆ. ಇತ್ತೀಚೆಗೆ ಈ ರೀತಿಯ ಸಂಸ್ಕಾರವು ಹೆಚ್ಚಾಗಿ ನೋಡಲು ಸಿಗುತ್ತಿದೆ. ಒಳ್ಳೆಯದರಲ್ಲಿ ಕಡಿಮೆ ಮತ್ತು ಕೆಟ್ಟತನದಲ್ಲಿ ಅಧಿಕ ತೊಡಗಿದ್ದಾರೆ.

ಒಂದು ವೇಳೆ ಸಂತರ ವಾಣಿ, ಪ್ರವಚನ, ಆರತಿ, ಸ್ಮರಣೆ ಮಾಡುವವರ ಸಂಖ್ಯೆ ಹೆಚ್ಚಾದರೆ ವಾತಾವರಣ ಭಕ್ತಿಮಯವಾಗುತ್ತದೆ. ಪ್ರತಿಯೊಬ್ಬನ ಮನಸ್ಸಿನಲ್ಲೂ ಭಕ್ತಿ ಹುಟ್ಟುತ್ತದೆ. ಅಂಥಹ ವಾತಾವರಣ ಉಂಟು ಮಾಡಲು ಮನೆ ಮನೆಯಲ್ಲೂ ಆರತಿ, ಸ್ತುತಿ, ನಿತ್ಯನಿಯಮ, ರಮೈಣಿ ನಡೆಯಬೇಕು ಮತ್ತು ಗುರುವಿನಿಂದ ದೀಕ್ಷೆ ಪಡೆದು ನಾಮಸ್ಮರಣೆ ಮಾಡಬೇಕು. ಇದರಿಂದ ವಾತಾವರಣದಲ್ಲಿ ಭಕ್ತಿಯ ವಿಚಾರಗಳು ಅಧಿಕ ತುಂಬುತ್ತವೆ ಮತ್ತು ಕೆಟ್ಟ ವಿಚಾರಗಳು ದೂರವಾಗುತ್ತವೆ. ಭಕ್ತಿ ಸಂಸ್ಕಾರಗಳು ಆಕ್ಸಿಜನ್ ಆದರೆ ಕೆಟ್ಟ ಸಂಸ್ಕಾರಗಳು ಕಾರ್ಬನ್ ಡೈಯಾಕ್ಸೈಡ್ ಇದ್ದಂತೆ. ಆಕ್ಸಿಜನ್‌ರೂಪದಲ್ಲಿರುವ ಭಕ್ತಿ ಸಂಸ್ಕಾರದ ಸಿಲೆಂಡರ್‌ನ್ನು ತೆರೆಯಬೇಕು ಅಂದ್ರೆ "ಸದ್ಗ್ರಂಥ್ ಸಾಹಿಬ್‌ದ ಪಾಠದ ಮೇಲೆ ಪಾಠ ಮಾಡಬೇಕು. ಹಾಗೂ ಮೂರು ಹೊತ್ತು ನಿತ್ಯ ಭಜನೆಯಲ್ಲಿ ತೊಡಗಿದರೆ, ಸ್ಮರಣೆ ಮಾಡಬೇಕು. ಭಕ್ತಿ ಮಾಡುವವರ ಸಂಖ್ಯೆ ಹೆಚ್ಚಾದರೆ. ಭಕ್ತಿ ವಿಚಾರಗಳು ಭೂಮಿಯ ಮೇಲೆ ಎಲ್ಲೆಡೆ ಹರಡುತ್ತವೆ. ಆಗ ಪ್ರತಿಯೊಬ್ಬರ ಮನಸ್ಸಿನಲ್ಲಿ ಶಾಂತಿ ನೆಲೆಸುತ್ತದೆ. ಸತ್ಸಂಗ ಮಾಡಲು ಯಾರದೋ ಮನೆಗೆ ಹೋದರೆ ಮೊದಲ ದಿನವಂತು ನಮ್ಮ ಮನಸ್ಸು ಅಶಾಂತವಾಗಿರುತ್ತಿತ್ತು. ನಂತರ ಪ್ರತಿಯೊಬ್ಬ ಭಕ್ತ ತಮ್ಮ ತಮ್ಮ ರಮೈಣಿ, ನಿತ್ಯ ನಿಯಮ, ಸಂಧ್ಯಾ ಆರತೀ ಮತ್ತು ಸ್ಮರಣೆ ಮಾಡುತ್ತಿದ್ದರು. ನಂತರ ಸತ್ಸಂಗ ಮಾಡುತ್ತಿದ್ದೆ ಆಗ ಅವರ ಮನೆಯಿಂದ ಕೆಟ್ಟ ಸಂಸ್ಕಾರಗಳು ಹೊರಟು ಹೋಗುತ್ತಿದ್ದವು. ಭಕ್ತಿ ಸಂಸ್ಕಾರ ಅಧಿಕವಾಗಿರುವ ಕಾರಣ ಮನಸ್ಸು ಶಾಂತವಾಗಿರುತ್ತಿತ್ತು. ನಾವು ಸತ್ಸಂಗ ಅಥವಾ ಪಾಠ ಮಾಡಿ ನಂತರ ಮುಂದಿನ ಹಳ್ಳಿಗೆ ಹೋಗಬೇಕಾಗಿ ಬಂದಾಗ ಇಡೀ ಕುಟುಂಬ ಅಳುತ್ತಿತ್ತು. ನಮ್ಮ ಮತ್ತು ಭಕ್ತರ ಸಂಗದಿಂದ ಇಡೀ ಕುಟುಂಬಕ್ಕೆ ಅಷ್ಟು ಶಾಂತಿ ಸಿಗುತ್ತಿತ್ತು. ಆ ಸಂಸ್ಕಾರಗಳ ಪ್ರಭಾವ ತಿಂಗಳುಗಟ್ಟಲೇ ಇರುತ್ತಿತ್ತು. ಒಂದು ವೇಳೆ ಪ್ರತಿ ಕುಟುಂಬದ ಸದಸ್ಯರು ನಾಮ ಸ್ಮರಣೆ ಮತ್ತು 3 ಸಮಯದ ಆರತೀ ಮಾಡಲಾರಂಭಿಸಿದರೆ, ಅಲ್ಲಿ ಶಾಂತಿ ಸದಾ ಉಳಿಯುತ್ತದೆ.

❖ ಯಾರು ಮದ್ಯವಸನಿಗಳಾಗುವರೋ, ಯಾರು ಬೀಡಿ, ತಂಬಾಕು ಸೇವನೆ ಮಾಡುವರೋ, ಅವರು ಬೀಜ ಬಿತ್ತಿದರೆ ಆ ಅನ್ನ ದಲ್ಲಿಯೂ ಸಹ ತಂಬಾಕಿನ ವಾಸನಾ (ಸೂಕ್ಷ್ಮ ತತ್ವ) ಪ್ರವೇಶಿಸುತ್ತದೆ ಆ ಅನ್ನ ವನ್ನು ಸೇವಿಸುವವರಲ್ಲಿ ತಂಬಾಕು ಸೇವನೆಯ ಪ್ರೇರಣೆಯಾಗುತ್ತದೆ. ಆ ಕಾರಣ ಯುವಜನತೆಯಲ್ಲಿ ನಶೆ ಬಹಳ ವೇಗದಿಂದ ಹರಡುತ್ತದೆ. ಮಕ್ಕಳಾಗಿದ್ದಾಗ ತಂದೆ, ತಾಯಿ, ಚಿಕ್ಕಪ್ಪ, ಮಾವ, ದೊಡ್ಡಪ್ಪ, ತಾತ ಇವರುಗಳಿಗೆ ಹೆದರಿ ತಂಬಾಕು ಸೇವನೆ ಮಾಡದಿರಬಹುದು. ಆದರೆ ಯುವಕರಾದ ಮೇಲೆ ಮಾದಕತೆಯ ಸೆಳೆತ ಜಾಸ್ತಿಯಾಗುತ್ತದೆ. ಮಾನವ ಸಮಾಜದಿಂದ

ಮಾದಕತೆ ಮತ್ತು ಬೇರೆ ಕೆಟ್ಟ ಚಟಗಳು ದೂರವಾಗಿ ಭೂಮಿಯನ್ನು ಸ್ವರ್ಗವಾಗಿಸುವುದೇ ನನ್ನ (ಲೇಖಕನ) ಉದ್ದೇಶ. ಪರಮಾತ್ಮ ಕಬೀರರ ವಚನವು ಸಾಕಾರವಾಗುವುದನ್ನು ನೋಡಲು ಇಚ್ಛಿಸುತ್ತೇನೆ. ಅವರ ಪ್ರೇರಣೆ ಮತ್ತು ಶಕ್ತಿಯಿಂದ ಇಂಥ ಅಮೂಲ್ಯವಾದ ಕೆಲಸ ಸಾಧ್ಯವಾಗತ್ತದೆ. ಈ ದಾಸ ಮತ್ತು ನನ್ನ ಅನುಯಾಯಿಗಳು ಒಳ್ಳೆಯ ಮನಸ್ಸಿನಿಂದ ಈ ಮಿಷನವನ್ನು ಸಫಲಗೊಳಿಸಲು ಪ್ರಯತ್ನಶಿಲರಾಗಿದ್ದಾರೆ. ಯಶಸ್ಸಿನ ಬಗ್ಗೆ ನನಗೆ ಭರವಸೆ ಇದೆ.

## "ಸಾಂಸಾರಿಕ ಜಂಜಾಟದಲ್ಲಿದ್ದುಕೊಂಡೇ ಭಕ್ತಿ ಮಾಡಬೇಕಾಗುತ್ತದೆ"

ಹರಿಯಾಣ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ್ ಇದ್ದನು. ಇದು ಆಗಿನ ಕಾಲದ ಮಾತು. ಆಗೆಲ್ಲಾ ಅವರು ಕುದುರೆಯ ಮೇಲೆ ಓಡಾಡುತ್ತಿದ್ದರು. ಬೇಸಿಗೆ ಕಾಲದ ಒಂದು ದಿನ, ಮಧ್ಯಾನ್ಹದ ಸುಡು ಬಿಸಿಲು, ಇನ್ಸ್‌ಪೆಕ್ಟರ್‌ಗೆ ಕಾರ್ಯ ನಿಮಿತ್ತ ಪಕ್ಕದ ಹಳ್ಳಿಗೆ ಹೋಗಬೇಕಾಗಿ ಬಂದಿತು. ಕುದುರೆಯನ್ನೇರಿ ಆ ಹಳ್ಳಿಯ ಕಡೆ ಹೊರಟನು. ಮಾರ್ಗಮಧ್ಯೆ ಅವನಿಗೆ ಮತ್ತು ಕುದುರೆಗೆ ದಣಿವಾಯಿತು. ಕುದುರೆ ಸುಸ್ತಾಗಿತ್ತು. ಕಣ್ಣು ಹಾಯಿಸಿದಾಗ ಒಬ್ಬ ರೈತ ತನ್ನ ಜಮೀನಿಗೆ ನೀರು ಹಾಯಿಸುತ್ತಿದ್ದುದು ಕಂಡಿತು. ಎತ್ತುಗಳ ಮೂಲಕ ಗಾಣದಂತೆ ಹರಹಟ ಚಕ್ರವನ್ನು ನಡೆಸಲಾಗುತ್ತಿತ್ತು. ಬಕೆಟ್‌ಗಳ ಚೈನ್ ಚಕ್ರದ ಮೇಲೆ ನಡೆಯುತ್ತಿತ್ತು. ಅದರಿಂದ ಬಾವಿಯಿಂದ ನೀರು ಎತ್ತುವಾಗ ರಾಟೆಯೂ ಚಿ ಚೂಂ ಎಂದು ಸದ್ದನ್ನು ಮಾಡುತ್ತಿತ್ತು. ಇನ್ಸ್‌ಪೆಕ್ಟರ್ ಮತ್ತು ಕುದುರೆ ಬಾಯಾರಿತ್ತು. ಇನ್ಸ್‌ಪೆಕ್ಟರ್ ನೀರು ಕುಡಿಯಲು ಹಾಗೂ ಕುದುರೆಗೆ ನೀರು ಕುಡಿಸಲು ರೈತನ ಬಳಿ ನಡೆದನು. ಹರಹಟ ಚಕ್ರದ ಚಿ ಚೂಂ ಶಬ್ದದಿಂದ ಕುದುರೆ ಹೆದರಿ ಓಡಿಹೊಯ್ತು. ಇನ್ಸ್‌ಪೆಕ್ಟರ್ ರೈತನಿಗೆ ಹೇಳಿದ ಈ ಚಿಚೂಂ ಶಬ್ದ ನಿಲ್ಲಿಸು. ರೈತನು ಎತ್ತುಗಳನ್ನು ನಿಲ್ಲಿಸಿದನು. ಹರಹಟ್ ಚಕ್ರ ನಿಂತು ಹೊಯ್ತು. ಬಾವಿಯಿಂದ ನೀರು ಬರುವುದು ನಿಂತು ಹೊಯ್ತು. ಮೊದಲು ಬಂದ ನೀರು ಭೂಮಿಯಲ್ಲಿ ಇಂಗಿತು. ಇನ್ಸ್‌ಪೆಕ್ಟರ್ ಕುದುರೆಯನ್ನು ಸಮೀಪ ಕರೆದು ತಂದಾಗ ನೀರು ಖಾಲಿಯಾಗಿತ್ತು. ಇನ್ಸ್‌ಪೆಕ್ಟರ್ ಹೇಳಿದ ನೀರು ತೆಗೆ. ರೈತನು ಎತ್ತುಗಳನ್ನು ನಡೆಸಿದನು. ಹರಹಟ ಚಕ್ರದಿಂದ ನೀರು ಮತ್ತು ಚಿ ಚೂಂ ಶಬ್ದ ಬರಲಾರಂಭಿಸಿತು. ಕುದುರೆ ಮತ್ತೆ ಹೆದರಿ ದೂರ ಓಡಿತು. ಇನ್ಸ್‌ಪೆಕ್ಟರ್ ರೈತನಿಗೆ ಶಬ್ದ ನಿಲ್ಲಿಸಲು ಹೇಳಿದನು. ಅವನ ಬಳಿ ನೀರು ಕುಡಿಯಲು ಬಂದ ತಕ್ಷಣ ಕುದುರೆಯು ರಾಟೆಯ ಸದ್ದಿಗೆ ಬೆದರಿ ದೂರ ಹೋಗಿ ನಿಂತಿತು. ಇನ್ಸ್‌ಪೆಕ್ಟರ್ ರೈತನಿಗೆ ಏತವನ್ನು ನಿಲ್ಲಿಸಲು ಹೇಳಿದನು. ನೀರು ಮತ್ತೆ ಭೂಮಿಯಲ್ಲಿ ಇಂಗಿತು. ಹರಹಟ ಚಕ್ರ ನಡೆಯುತ್ತಿದ್ದಂತೆ ಕುದುರೆ ಓಡಿತು. ಆಗ ರೈತನು, ನೀರು ಬೇಕಾದರೆ ಈ ಶಬ್ದದ ನಡುವೆಯೇ ಬಂದು ಕುಡಿಯಬೇಕು ಇಲ್ಲದಿದ್ದರೆ ಇಬ್ಬರೂ ಸಾಯುವಿರಿ ಎಂದು ಹೇಳಿದನು. ಇನ್ಸ್‌ಪೆಕ್ಟರ್ ಕುದುರೆಯಿಂದ ಕೆಳಗಿಳಿದು ನಿಧಾನವಾಗಿ ಕುದುರೆಯನ್ನು ತಂದು ಆ ರಾಟೆಯ ಸದ್ದಿನ ನಡುವೆಯೇ ಇಬ್ಬರೂ ನೀರನ್ನು ಕುಡಿದರು. ಮತ್ತು ತಮ್ಮ ಜೀವ ಉಳಿಸಿಕೊಂಡರು. ಹೀಗೆ ನಾವೂ ಸಹ ಸಾಂಸಾರಿಕ ಕೆಲಸಗಳನ್ನು ಮಾಡುತ್ತಲೇ ಭಕ್ತಿ, ದಾನ, ಧರ್ಮ, ನಾಮಸ್ಮರಣೆ ಅವಶ್ಯವಾಗಿ ಮಾಡಬೇಕು.

## ❖ ಈಗ ಭಕ್ತಿ ಮಾಡುವುದರಿಂದ ಏನಾಗುವುದು? ಆಯಸ್ಸಂತು ಸ್ವಲ್ಪವೇ ಉಳಿದಿದೆ.

ಜೀಂದ್ ಎನ್ನುವ ಜಿಲ್ಲೆಯಲ್ಲಿ ಮನೋರ್‌ಪುರ್ ಎಂಬ ಹಳ್ಳಿಯಿದೆ. ಅಲ್ಲಿ ರಾಮ್‌ಕುಮಾರ್ ಎಂಬ ಭಕ್ತನಿದ್ದನು. ಅವನ ಮನೆಯಲ್ಲಿ 3ದಿನದ ಪಾಠ ಹಾಗೂ ಸತ್ಸಂಗ ನಡೆಯುತ್ತಿತ್ತು. ಹಳ್ಳಿಯಲ್ಲಿ ಪುರುಷರು ಸತ್ಸಂಗ್‌ವನ್ನು ಪಾಕಂಡ ಎನ್ನುತ್ತಿದ್ದರು. ಏಕೆಂದರೆ ಮೊದಲಿನ ಕಾಲದಲ್ಲಿ ಸತ್ಸಂಗದ ಆಯೋಜನೆ ವೃದ್ಧ ಸ್ತ್ರೀಯರು ಮಾಡುತ್ತಿದ್ದರು. ರಾತ್ರಿಯಲ್ಲಿ ಸತ್ಸಂಗ ಮಾಡುತ್ತಿದ್ದರು ಬೆಳಿಗ್ಗೆ ಸೊಸೆಗೆ ಅಣ್ಣ–ತಮ್ಮರ ಮೇಲೆ ಬೈಯುತ್ತಿದ್ದಳು. ಯಾರ್‍ಯಾರೋ ಬೇರೆಯವರ ಸಗಣಿಯ ಬೆರಣಿಗಳನ್ನು ಕಳುವುಮಾಡುತ್ತಿದ್ದರು. ಎಂದಾದರೂ ಸಿಕ್ಕಿಬಿದ್ದಾಗ ಅವರ ಅಪಮಾನವಾಗುತ್ತಿತ್ತು. ಹಾಗಾಗಿ ಜನರಿಗೆ ಸತ್ಸಂಗದಿಂದ ಅಲರ್ಜಿ ಇತ್ತು. ರಾಮ್‌ಕುಮಾರ ಇಡೀ ಕುಟುಂಬ ದೀಕ್ಷೆ ಪಡೆದುಕೊಂಡಿತ್ತು. ಅವರಿಗೆ ಗೋತ್ತಿತ್ತು ಈ ಸತ್ಸಂಗ ಭಿನ್ನವಾಗಿದೆಯೆಂದು. ರಾಮ್‌ಕುಮಾರನ

ತಂದೆಗೆ ಮನೆಯಲ್ಲಿ ದೊಡ್ಡಮಗ ಸತ್ಸಂಗ ಮಾಡಿಸುತ್ತಿದ್ದ ವಿಷಯ ತಿಳಿದು. ಅವಮಾನವಾಗುವುದು ಊರಿನ ಜನ ಏನು ಹೇಳುವರೆಂದು ಯೋಚಿಸಿದ. ಆದ್ದರಿಂದ ವೃದ್ಧ 3ದಿನಗಳ ವರೆಗೆ ದೊಡ್ಡಮಗನ ಮನೆಗೆ ಬರಲಿಲ್ಲ. ಚಿಕ್ಕ ಮಗನ ಮನೆಯ ಚೌಬಾರಾದಲ್ಲಿ ಇದ್ದನು. ದಿನದಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದನು. ಸಂಜೆಯಾದ ಮೇಲೆ ಮನೆಯ ಚೌಬಾರಾದಲ್ಲಿ ಹುಕ್ಕಾ ಸೇದುತ್ತಿದ್ದನು, ಮತ್ತು ಎಂಥ ದಿನ ನೋಡುತ್ತಿದೆನೆಂದು ದುಃಖಿಯಾಗುತ್ತಿದ್ದನು. ರಾತ್ರಿಯಲ್ಲಿ ಈ ದಾಸ (ರಾಮ್‌ಪಾಲ್‌ದಾಸ)ನು ಸತ್ಸಂಗ ಮಾಡಿದನು. ಲೌಡ್ ಸ್ಪೀಕರ್ ಹಾಕಿ ಜೋರಾಗಿ ಎಲ್ಲರಿಗೂ ಕೇಳಿಸುವಂತೆ ಮಾಡಲಾಗಿತ್ತು. ರಾಮ್‌ಕುಮಾರನ ಮಗನಿಗೆ ತಾತನು ಮನೆಯ ಚೌಬಾರಾದಲ್ಲಿರುವ ಬಗ್ಗೆ ಗೊತ್ತಿತ್ತು. ಲೌಡ್‌ಸ್ಪೀಕರ್‌ನನ್ನು ನಿಧಾನವಾಗಿ ತನ್ನ ತಾತ ಕುಳಿತಿದ್ದ ಕಡೆಗೆ ತಿರುಗಿಸಿದನು. ಆಗ ವಿಧಿ ಇಲ್ಲದೆ ಅವನ ತಾತ ಸತ್ಸಂಗದ ಪ್ರವಚನವನ್ನು ಕೇಳಬೇಕಾಗಿ ಬಂದಿತು. ಹೀಗೆ ಎರಡು ದಿನ ಪ್ರವಚನ ಕೇಳಿದೊಡನೆ ಅವನಲ್ಲಿ ಬಹಳ ಬದಲಾವಣೆ ಕಂಡಿತು. 3ನೇ ದಿನ ಅವನು ನೇರವಾಗಿ ರಾಮ್‌ಕುಮಾರನ ಮನೆಗೆ ಬಂದನು. ಅವನನ್ನು ನೋಡಿದ ಅವನ ಸೊಸೆಯು, ನಮ್ಮನ್ನೆಲ್ಲ ಬಯ್ಯಲು ಬಂದಿರುವನೆಂದು ಹೆದರಿದಳು. ನೈವೇದ್ಯದ ಆರತೀ ಆದನಂತರ ರಾಮ್‌ಕುಮಾರನ ತಂದೆ ನನ್ನ ಮುಂದೆ ಮಂಡಿಯೂರಿ ಕುಳಿತು ಬಿಟ್ಟನು ಮತ್ತು ಹೇಳತೊಡಗಿದ "ಹೇ ಗುರುಗಳೇ, ನಾನು ಪ್ರವಚನದಿಂದ ಕೋಪಗೊಂಡಿದ್ದೆ, ಆದರೆ ಎರಡು ದಿನ ನಿಮ್ಮ ಪ್ರವಚನ ಕೇಳಿದ ಮೇಲೆ ನನ್ನ ಮನಸ್ಸು ಪರಿವರ್ತನೆಯಾಯಿತು. ನಾನು ನನ್ನ ಜೀವನವನ್ನೆಲ್ಲಾ ನಷ್ಟ ಮಾಡಿಕೊಂಡುಬಿಟ್ಟೆ. 8 ಎಕರೆ ಜಮೀನನ್ನು ಖರೀದಿಸಿದೆ. ಇಬ್ಬರು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದ್ದೇನೆ. ಹಗಲಿರುಳೂ ಜಮೀನಿನಲ್ಲಿ ಕೆಲಸದಲ್ಲಿ ತೊಡಗಿದೆ. ನನ್ನ ಜೀವನ ಹಾಳು ಮಾಡಿಕೊಂಡಿರುವೆ ಎಂದು ನಿಮ್ಮ ಪ್ರವಚನದಿಂದ ತಿಳಿಯಿತು. ಈಗ ನನಗೆ 75 ವರ್ಷಗಳಾಗಿವೆ. ಈಗ ಭಕ್ತಿ ಮಾಡುವುದರಿಂದ ಏನಾಗುವುದು?" ಎಂದು ಬಿಕ್ಕಿ-ಬಿಕ್ಕಿ ಅಳಲು ಪ್ರಾರಂಭಿಸಿದನು.

ಆಗ ನಾನು ಅವನನ್ನು ಸಂತೈಸುತ್ತಾ, "ಈಗಲೂ ಕಾಲ ಮಿಂಚಿಲ್ಲ ಎಂದು ಹೇಳಿದೆ, ಒಂದು ಉದಾಹರಣೆ ನಾನು ನನ್ನ ಗುರುಗಳಿಂದ ಕೇಳಿದ್ದೆ, ಏನೆಂದರೆ ಕೈಯಿಂದ ಹಗ್ಗ ಕಳಚಿ ಬಾವಿಯಲ್ಲಿ ಬಕೆಟ್ ಹೋಗುತ್ತಿದೆ ಮತ್ತು ಅದರ ಹಗ್ಗ (ಬಕೆಟ್‌ಗೆ ಕಟ್ಟಿದ ಹಗ್ಗ ಅದರಿಂದ ಬಕೆಟ್ ಮೂಲಕ ಬಾವಿಯಿಂದ ನೀರೆತ್ತಲಾಗುತ್ತದೆ. ಹಳೆಯ ಕಾಲದಲ್ಲಿ ಬಾವಿ ಸುಮಾರು 100-150 ಅಡಿ ಆಳವಾಗಿರುತ್ತಿದ್ದವು) ಕೂಡ ಬಾವಿಯಲ್ಲಿ ಹೋಗುತ್ತಿರುತ್ತದೆ ಒಂದೊಮ್ಮೆ ಓಡಿಹೋಗಿ ಹಗ್ಗ ಹಿಡಿಯುವ ಪ್ರಯತ್ನ ಮಾಡುವುದರಿಂದ ಹಗ್ಗ ಕೈಗೆ ಸಿಕ್ಕಿದರೆ ಏನೂ ಹೋಗಿಲ್ಲ, ಬಕೆಟ್ ಮತ್ತು ನೀರು ಕೂಡ ಸಿಗುವುದು. ಒಂದು ವೇಳೆ ಹಗ್ಗ ನಮ್ಮ ಕೈ ತಪ್ಪಿತು ಹೋಗಲಿ ಎಂದುಕೊಂಡರೆ ಅದು ನಮ್ಮ ಮೂರ್ಖತೆ. ಅದೇ ರೀತಿ ನಿಮ್ಮ ಆಯಸ್ಸು ರೂಪಿ ಹಗ್ಗದ ಅಂತಿಮ ಭಾಗ (ಎಂಡ್) ಉಳಿದಿದೆ. ಈಗ ದೀಕ್ಷೆ ಪಡೆದು ಎಲ್ಲಾ ವ್ಯಸನವನ್ನು ತ್ಯಜಿಸಿ ಮರ್ಯಾದೆಯಲ್ಲಿದ್ದು ಸಾಧನೆ ಮಾಡಿ ಮೋಕ್ಷ ಸಿಗುವುದು. ಅದೇ ಸಮಯ ಅ ಭಕ್ತಾತ್ಮನು ದೀಕ್ಷೆ ಪಡೆದನು ಮತ್ತು ಶ್ರದ್ಧೆಯಿಂದ ಭಕ್ತಿ ಮಾಡಿದನು. ಅವನು 85ನೇ ವಯಸ್ಸಿನಲ್ಲಿ ಶರೀರ ತ್ಯಜಿಸಿ ಹೋದನು. ಜೀವನ ಉದ್ಧಾರ ಮಾಡಿಕೊಂಡನು. ಅವನು ಹುಕ್ಕಾ ಸೇದುತ್ತಿದ್ದನು. ಆ ದಿನ ತ್ಯಜಿಸಿದನು ಮತ್ತು ಜೀವನಪರ್ಯಂತ ಎಂದೂ ಮುಟ್ಟಲಿಲ್ಲ. ರಾಮ್‌ಕುಮಾರನ ತಮ್ಮನೂ ಕುಟುಂಬ ಸಮೇತ ನಾಮದೀಕ್ಷೆ ಪಡೆದನು. ಅ ವೃದ್ಧ ಭಕ್ತ ಸ್ವತಃ ಅವರನ್ನು ಕರೆದುಕೊಂಡು ಸತ್ಸಂಗಕ್ಕೆ ಬರುತ್ತಿದ್ದನು. ಭಕ್ತಿ ಮಾಡಲು ಹೇಳುತ್ತಿದ್ದನು. ಇಷ್ಟು ಹುಕ್ಕಾ ಸೇದುವವನು ಹೇಗೆ ಬಿಟ್ಟನೆಂದು ಮನೋರ್‌ಪುರ್ ಊರಿನವರು ಆಶ್ಚರ್ಯಚಕಿತರಾಗಿದ್ದರು. ಹುಕ್ಕಾ ಸೇದುವವರ ಹತ್ತಿರ ಕೂಡ ಕುಳಿತುಕೊಳ್ಳಲ್ಲ.

ಏಕೈ ಚೋಟ್ ಸಿಧಾರಿಯಾ ಜಿನ್ ಮಿಲನ್ ದಾ ಚಾಹ್ ।

**ಹರಿಯಾಣ ಬಾಷೆಯಲ್ಲಿ ಒಂದು ಗಾದೆ ಇದೆ:-**

ಘಾಮ್ ಕಾ ಔರ್ ಜ್ಞಾನ್ ಕಾ ಚಮ್‌ಕಾ-ಸಾ ಲಾಗ್ಯಾ ಕರ್ರೈ ।

ಶಬ್ದಾರ್ಥ:– ಬಾದ್ರಪದ ಮಾಸದಲ್ಲಿ ಬಿಸಿಲು (ಘಾಮ್) ಬಹಳ ಅಧಿಕವಾಗಿರುತ್ತದೆ. ಹೊಲದಲ್ಲಿ ಕೆಲಸ ಮಾಡುವವರಿಗೆ ಆ ಬಿಸಿಲು ಹೊಡೆಯುತ್ತದೆ. (ಬಿಸಿಲು ಹೊಡೆಯುವುದು ಅಂದರೆ ಬಿಸಿಲಿನಿಂದ ಶರೀರದಲ್ಲಿ ಹಾನಿಯುಂಟಾಗುವುದು. ಆ ಕಾರಣದಿಂದ ಶರೀರದಲ್ಲಿ ಉಷ್ಣ ಹೆಚ್ಚುತ್ತದೆ. ಜ್ವರವೂ ಬರುತ್ತದೆ. ಇದನ್ನು ಬಿಸಿಲು ಹೊಡೆಯುವುದು ಎನ್ನುತ್ತಾರೆ) ವೈದ್ಯನ ಬಳಿ ಹೋಗಿ ಆ ವ್ಯಕ್ತಿ, ನನಗೆ ಯಾವಾಗ ಬಿಸಿಲು ಹೊಡೆಯಿತೆಂದು ಗೊತ್ತಾಗಲಿಲ್ಲ, ವೈದ್ಯ ಹೇಳುತ್ತಿದ್ದ ಬಿಸಿಲಂತು ಮಿಂಚಿನಂತಿರುತ್ತದೆ ಅಂದರೆ ಒಮ್ಮೆಲೆ ಪ್ರಭಾವಬಿರುತ್ತದೆ. ಇದೇ ರೀತಿ ಯಾರಿಗೆ ಜ್ಞಾನದ ಪ್ರಭಾವವಾಗುವುದಿದೆ ಒಂದೆರಡು ಪಾಯಿಂಟ್ ನಲ್ಲಿಯೇ ಜ್ಞಾನವಾಗುತ್ತದೆ. ಭಕ್ತಿ ಮಾಡಲಾರಂಭಿಸುತ್ತಾನೆ.

## "ಚೌಧರಿ ಎಂಬ ಜಮೀನ್ದಾರನಿಗೆ ಜ್ಞಾನೋದಯವಾಯಿತು"

ಉತ್ತರ ಪ್ರದೇಶದ ಬಾಗ್‌ಪತ್ ಎಂಬ ಜಿಲ್ಲೆಯ ಖೇಖಡಾ ಎಂಬ ಹಳ್ಳಿಯಲ್ಲಿ ಸುಮಾರು 275 ವರ್ಷಗಳ ಹಿಂದೆ ಒಬ್ಬ ಜೀತಾ ರಾಮ್ ಜಾಟ್ ಇದ್ದನು. 900 ಬಿಘಾ (550 ಎಕರೆ) ಜಮೀನಿತ್ತು. ಆ ಹಳ್ಳಿಯಲ್ಲಿ ಜಮೀನ್ದಾರನಿದ್ದನು. ಆ ಊರಿಗೆ ಅವನೇ ಅತೀ ಶ್ರೀಮಂತ. ಪಂಚಾಯಿತಿಯನ್ನು ಅವನೇ ನಡೆಸುತ್ತಿದ್ದನು. ಯಾವಾಗಲೂ ಸತ್ಯದ ಕಡೆಗೆ ತೀರ್ಪು ನೀಡುತ್ತಿದ್ದನು. ಸುಳ್ಳಿಗೆ ಎಂದಿಗೂ ಮಹತ್ವ ನೀಡುತ್ತಿರಲಿಲ್ಲ. ಅದೇ ಹಳ್ಳಿಯಲ್ಲಿ ಘೀಸಾದಾಸ್ ಎಂಬ ಸಂತರು ಸತ್ಸಂಗ ಮಾಡುತ್ತಿದ್ದರು. ಆಗಿನ ಕಾಲದಲ್ಲಿ ಅಸ್ಪೃಶ್ಯತೆ ಎನ್ನುವುದು ಉತ್ತುಂಗ ಸ್ಥಿತಿಯಲ್ಲಿತ್ತು. ಅವರು ಜಾತಿಯಲ್ಲಿ ಚಮ್ಮಾರರಾಗಿದ್ದರು. ಪರಮೇಶ್ವರ ಕಬೀರರು ಘೀಸಾದಾಸರಿಗೆ ಅವರು 7–8 ವರ್ಷದವರಿದ್ದಾಗ ಕಾಡಿನಲ್ಲಿ ಸಿಕ್ಕಿದ್ದರು. ಅವರಿಗೆ ಯಥಾರ್ಥ ಜ್ಞಾನ ಮತ್ತು ದೀಕ್ಷೆ ನೀಡಿ ಅಂತರ್ಧಾನರಾಗಿದ್ದರು. ಘೀಸಾದಾಸರು ದೊಡ್ಡವರಾದ ಮೇಲೆ ತಾವೇ ಸತ್ಸಂಗ ನಡೆಸುತ್ತಿದ್ದರು. ಅಕ್ಕ ಪಕ್ಕದ ಜನರು ಇವರ ಸತ್ಸಂಗ ಕೇಳಿ, ದೀಕ್ಷೆಯನ್ನು ಪಡೆದು ಸಂಕಟದಿಂದ ಮುಕ್ತರಾಗಿದ್ದರು. ಬೆಳಗ್ಗಿನ ಹೊತ್ತು ತಮ್ಮ ಜೀವನ ನಿರ್ವಹಣೆಗಾಗಿ ಅವರು ಕೆಲಸ ಮಾಡುತ್ತಿದ್ದರು. ರಾತ್ರಿಯ ವೇಳೆ ಸತ್ಸಂಗ ಕೇಳುತ್ತಿದ್ದರು. ತಿಂಗಳಿನಲ್ಲಿ ಎರಡು ದಿನ ಸತ್ಸಂಗ ನಡೆಯುತ್ತಿತ್ತು. ರಾತ್ರಿಯ ವೇಳೆ ಪ್ರವಚನದಲ್ಲಿ ಸ್ತ್ರೀ–ಪುರುಷರು ಇಬ್ಬರೂ ಭಾಗವಹಿಸುತ್ತಿದ್ದರು. ಹಳ್ಳಿಯ ಜನರು ರಾತ್ರಿಯ ವೇಳೆ ಸ್ತ್ರೀಯರು ಪ್ರವಚನಕ್ಕೆ ಹೋಗುವುದು ಒಳ್ಳೆಯದಲ್ಲವೆಂದು ಚರ್ಚೆ ನಡೆಯಿತು.

ಹಾಗಾಗಿ ಏನಾದರೂ ಅಪ್ರಿಯವಾದ ಘಟನೆ ನಡೆಯಬಹುದು. ಹಾಗಾಗಿ ಏನಾದರೂ ಮಾಡಿ ಸತ್ಸಂಗವನ್ನು ನಿಲ್ಲಿಸಬೇಕೆಂದು ಅವರೆಲ್ಲಾ ಯೋಚಿಸಿದರು. ಹಳ್ಳಿಯಲ್ಲಿ ಪಂಚಾಯಿತಿ ಏರ್ಪಡಿಸಲಾಯಿತು. ಅದರ ಪ್ರಕಾರ ಊರವರೆಲ್ಲಾ ಪ್ರವಚನ, ಸತ್ಸಂಗ ನಿಲ್ಲಿಸಬೇಕೆಂದು ಆಗ್ರಹಪಡಿಸಿದರು. ಅದರಂತೆ ಚೌಧರಿ ಜೀತಾರಾಮ್ ಅವರಿಗೆ ಸತ್ಸಂಗ ನಿಲ್ಲಿಸಬೇಕೆಂದು ಸಂದೇಶ ನೀಡಿದರು. ಹಳ್ಳಿಯ ಜನರ ತೀರ್ಪನ್ನು ಘೀಸಾದಾಸರಿಗೆ ತಿಳಿಸಲು ಚೌಧರಿ ಜೀತಾರಾಮ್ ಅವರ ಮನೆಗೆ ಹೋದನು. ಆ ದಿನ ಸತ್ಸಂಗ ನಡೆಯುತ್ತಿತ್ತು. ಇಡೀ ಹಳ್ಳಿಯಲ್ಲಿ ಪಂಚಾಯತಿಯ ತೀರ್ಪಿನ ಚರ್ಚೆ ನಡೆಯುತ್ತಿತ್ತು. ಚೌಧರಿ ಜೀತಾರಾಮ್ ಅಲ್ಲಿ ತಲುಪಿದಾಗ ಶ್ರದ್ಧಾಳುಗಳಿಗೆ ಚೌಧರಿ ಸಾಹಬ್ ರೈತನು ಸಂತರೊಂದಿಗೆ ಜಗಳ ಮಾಡುವನು. ಜೀತಾರಾಮ್ ಹೋಗುವಾಗ ಒಂದು ಕೋಲನ್ನು ತೆಗೆದುಕೊಂಡು ಹೋಗುತ್ತಿದ್ದರು. ಅವನು ಯೋಚಿಸಿದ ಭಕ್ತರಂತು ಜಗಳವಾಡುತ್ತಾರೆಯೇ, ಕೋಲನ್ನು ಒಂದು ವೃಕ್ಷದ ಜೊತೆಗೆ ನಿಲ್ಲಿಸಿ ನಡೆದನು. ಒಳ್ಳೆಯ ಸಭೆಯಲ್ಲಿ ಕೋಲು ತೆಗೆದುಕೊಂಡು ಹೋಗುವುದು ಪಂಚಾಯಿತಿಗೆ ಉಚಿತವಲ್ಲ.

ಅಲ್ಲಿ ಸತ್ಸಂಗ ನಡೆಯುತ್ತಿತ್ತು. ಒಂದೆರಡು ನಿಮಿಷ ನಿಂತು ಕೇಳಿ ನಂತರ ಮಾತನಾಡೋಣ ಎಂದು ಯೋಚಿಸಿದನು. ನೀವು ಹರ್‌ಲಾಲ್‌ನ ಕಥೆಯಲ್ಲಿ ಓದಿದ ಜ್ಞಾನವನ್ನೇ ಸತ್ಸಂಗದಲ್ಲಿ ಹೇಳಲಾಗುತ್ತಿತ್ತು. ಅವನ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. ಅವನು ನೇರವಾಗಿ ಹೋಗಿ ಘೀಸಾದಾಸರ ಕಾಲಿಗೆ ಬಿದ್ದು ಸತ್ಸಂಗ ಮಾಡದಂತೆ ತೀರ್ಪನ್ನು ಹೇಳಲು ಬಂದಿರುವುದಾಗಿ ಅಳುತ್ತಾ ಹೇಳಿದನು. ಅಪರಾಧಿಯಾದ ನನ್ನನ್ನು ಹೊಡೆಯಿರಿ ಅಥವಾ ಬಿಡಿ ನಾನಂತು ಬಹಳ ದೊಡ್ಡ ತಪ್ಪು ಮಾಡಿದೆ ಗುರುಗಳೇ, ನನ್ನದು ತಪ್ಪಾಯಿತು, ನನಗೆ ಕ್ಷಮಿಸಿ ನೀವು ಸತ್ಸಂಗ ಮಾಡಿ ಯಾರೂ

ತಡೆಯುವುದಿಲ್ಲ. ಸಂತ ಘೀಸಾದಾಸರು ಚೌಧರಿ ಸಾಹೇಬರೆ ಯಾವ ಕೆಲಸಕ್ಕಾಗಿ ಬಂದಿರುವಿರಿ ಅದನ್ನು ಮಾಡಿ ಎಂದು ಹೇಳಿದರು. ಜೀತಾ ಜಮೀನ್ದಾರ ಮತ್ತೆ ಅಳಲಾರಂಭಿಸಿದ ಕ್ಷಮಿಸಿ, ದೀಕ್ಷೆ ಕೊಡಿ". ಚೌಧರಿ ಜೀತಾರಾಮ್ ರೈತ ಭಕ್ತನಾಗಿಬಿಟ್ಟನು. ಸ್ವತಃ ರಾತ್ರಿಯಲ್ಲಿ ಸತ್ಸಂಗ ಕೇಳಲು ಹೋಗಲಾರಂಭಿಸಿದನು. ಈ ವಿಷಯ ಕಾಡ್ಗಿಚ್ಚಿನಂತೆ ಖೇಖಡಾ ಹಳ್ಳಿಯಲ್ಲಿ ಹರಡಿತು. ಹಳ್ಳಿಯ ಜನರೆಲ್ಲಾ ಘೀಸಾದಾಸರಿಗೆ ಬಯ್ಯಲು ಪ್ರಾರಂಭಿಸಿದರು. ಹಾಗೂ ಚೌಧರಿಗೆ ಏನೋ ಮಾಟಮಂತ್ರ ಮಾಡಿ ತಮ್ಮ ವಶಮಾಡಿಕೊಂಡಿದ್ದಾರೆ ಎಂದು ಬಯ್ಯತೊಡಗಿದರು. ಘೀಸಾರಾಮ್‌ಗೆ ತಂತ್ರ–ಮಂತ್ರ ಬರುತ್ತದೆ ಎಂದು ಹೇಳತೊಡಗಿದರು. ಚೌಧರಿ ಜೀತಾರಾಮ್‌ನ ಮನೆಯವರು ಮಕ್ಕಳು ಎಲ್ಲರೂ ಜೀತಾರಾಮ್ ಮತ್ತು ಘೀಸಾದಾಸರ ವಿರೋಧಿಯಾದರು. ಊರಿನವರು ಚೌಧರಿ ಜೀತಾರಾಮ್‌ಗೆ ವೃದ್ಧಾವಸ್ಥೆಯಲ್ಲಿ ನಿಮ್ಮ ತಲೆ ಕೆಟ್ಟುಹೋಗಿದೆ ಎಂದು ಹೇಳತೊಡಗಿದರು. ಚೌಧರಿ ಜೀತಾರಾಮ್‌ಗೆ ಆಧ್ಯಾತ್ಮಿಕ ಜ್ಞಾನದ ಬಹಳ ಪ್ರಭಾವವಾಗಿತ್ತು. ಊರಿನವರೇ ನನ್ನ ಭಾಗ್ಯೋದಯವಾಯಿತು ನಾನು ಭಕ್ತನಾದೆ ಮತ್ತು ನಿಮ್ಮ ದೃಷ್ಟಿಯಲ್ಲಿ ಕೆಟ್ಟು ಹೋದೆ. ನನಂತೆ ನೀವೆಲ್ಲರೂ ಕೆಟ್ಟು ಹೋಗಿ. ಕೆಟ್ಟು ಹೋಗದೆ ಕೆಲಸ ನಡೆಯಲ್ಲ. ಜೀತಾರಾಮ್‌ನು ಎಷ್ಟೇ ಹೇಳಿದರೂ ಹಳ್ಳಿಯವರು ಕೇಳಲು ಸಿದ್ಧರಿರಲಿಲ್ಲ. ಮತ್ತೊಮ್ಮೆ ಪಂಚಾಯಿತಿ ಏರ್ಪಟ್ಟಿತು. ಅದರಲ್ಲಿ ಜೀತಾರಾಮ್ ಮತ್ತು ಘೀಸಾದಾಸರಿಗೆ ಹಳ್ಳಿಯನ್ನು ಬಿಟ್ಟು ಹೋಗಲು ಹೇಳಲಾಯಿತು. ಇಬ್ಬರೂ ಗುರು–ಶಿಷ್ಯರು ತಕ್ಷಣ ಊರನ್ನು ಬಿಟ್ಟು ಬೇರೆ ಊರಿನಲ್ಲಿ ಸತ್ಸಂಗ ಮಾಡಿ ಜನರಿಗೆ ತಿಳಿಸಲಾರಂಭಿಸಿದರು. ಬಹಳಷ್ಟು ಜನ ಅವರ ಅನುಯಾಯಿಗಳಾದರು. ಆದರೆ ಸಂತರು ಹೋದ ಸ್ವಲ್ಪ ದಿನಗಳಲ್ಲೇ ಖೇಖಡಾ ಹಳ್ಳಿಗೆ ಕೆಟ್ಟಕಾಲ ಬಂದಿತು. ಅಕಾಲ ಮರಣ ಉಂಟಾಯಿತು. ಪಂಚಾಯತಿಯ ಮನೆಗಳಲ್ಲಿ ಪರಮಾತ್ಮನ ಪ್ರಕೋಪ ಪ್ರಾರಂಭವಾಯಿತು. ಯಾರೋ ಮೇವು ಸುಟ್ಟು ಹೋಗುವುದು. ಯಾರದೋ ಪಶುಗಳು ಮರಣಹೊಂದಿದವು. ಯಾರದೋ ಪರಿವಾರದಲ್ಲಿ ಪ್ರೇತಗಳು ಮಾತನಾಡಲಾರಂಭಿಸಿದವು. ಯಾರದೋ ಮಗಳು ವಿಧವೆಯಾದಳು, ಬರಗಾಲವೇರ್ಪಟ್ಟಿತು. ಬೆಳೆಗೆ ಬೆಂಕಿ ಬಿದ್ದಿತು. ಮನೆಗಳಲ್ಲಿ ಜಗಳ ಕದನಗಳೇರ್ಪಟ್ಟವು. ಜಾನುವಾರುಗಳು ಸತ್ತು ಹೋದವು. ಕೆಲವರು ರೋಗದಿಂದ ನರಳುತ್ತಿದ್ದರು. ಕೊನೆಗೆ ಹಳ್ಳಿಯವರು ದಿಕ್ಕು ತೋಚದೆ ಒಬ್ಬ ಜ್ಯೋತಿಷಿಯ ಬಳಿ ಹೋಗಿ ಕೇಳಿದಾಗ ಆ ಜೋತಿಷಿಯು, "ನಿಮ್ಮ ಹಳ್ಳಿಯಲ್ಲಿ ಇಬ್ಬರು ಸಂತರಿದ್ದರು. ಅವರಿಬ್ಬರೂ ಮತ್ತೆ ಹಳ್ಳಿಗೆ ಬಂದರೆ ಈ ಹಳ್ಳಿ ಉಳಿಯುತ್ತದೆ ಇಲ್ಲದಿದ್ದರೆ ಹಳ್ಳಿ ನಾಶವಾಗಿ ಹೋಗುತ್ತದೆ" ಎಂದನು. ಆಗ ಹಳ್ಳಿಯವರಿಗೆಲ್ಲಾ ಜ್ಞಾನೋದಯವಾಯಿತು. ಹಳ್ಳಿಯ ಕೆಲ ಜನರು ಆ ಇಬ್ಬರು ಸಂತರನ್ನು ಕರೆತರಲು ಹೊರಟರು.

ಆ ಜನರನ್ನು ನೋಡಿ ಜೀತಾರಾಮನು ಘೀಸಾದಾಸರ ಬಳಿ ಹೋಗಿ, "ಹಳ್ಳಿಯ ಜನರೆಲ್ಲಾ ನಮ್ಮನ್ನು ಇಲ್ಲಿಂದಲೂ ಎತ್ತಂಗಡಿ ಮಾಡಲು ಬರುತ್ತಿದ್ದಾರೆ" ಎಂದನು. ಘೀಸಾದಾಸರು, "ಹಾಗಾದರೆ ಜೋಳಿಗೆಯನ್ನು ತೆಗೆದುಕೋ. ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಹೊರಡೋಣ ನಡೆ" ಎಂದು ಏಳಲು ಪ್ರಯತ್ನಿಸಿದರು. ಅಷ್ಟರಲ್ಲಿ ಊರಿನ ಮುಖಂಡರು ಬಂದು ತಮ್ಮ ತಲೆಯ ಮೇಲಿದ್ದ ಪಗಡಿಯನ್ನು ತೆಗೆದು ಅವರಿಬ್ಬರ ಕಾಲಿನಲ್ಲಿ ಇಟ್ಟು, "ಗುರುಗಳೇ, ನಮ್ಮ ತಪ್ಪನ್ನು ಕ್ಷಮಿಸಿಬಿಡಿ. ನೀವು ಅಲ್ಲಿಂದ ಹೊರಟು ಹೋದ ನಂತರ ನಮ್ಮ ಊರೇ ಹಾಳಾಗುತ್ತಿದೆ. ಏನಾದರೂ ಮಾಡಿ ಉಳಿಸಿ. ಇಲ್ಲದಿದ್ದರೆ ನಾವೆಲ್ಲಾ ನಿಮ್ಮ ಜೊತೆ ಬರುತ್ತೇವೆ ಎಂದರು, ಆ ಊರಿನ ಜನರೂ ಬಂದು ಅಲ್ಲಿ ಸೇರಿದರು. ಅವರೆಲ್ಲಾ ಹೇಳತೊಡಗಿದರು ಚೌಧರಿಗಳೇ ನೀವು ನೆಲೆಸಿದರೆ ನಾವು ಹಾಳಾಗುವೆವು "ಈ ಇಬ್ಬರು ಸಂತರು ಬಂದಾಗಿನಿಂದ ನಮ್ಮ ಊರು ಉದ್ಧಾರವಾಗಿದೆ. ಯಾರೂ ಪರಸ್ಪರ ಜಗಳವಾಡುತ್ತಿಲ್ಲ. ಒಳ್ಳೆಯ ಬೆಳೆ ಬಂದಿದೆ." ಎಂದರು. ಆದರೆ ಖೇಖಡಾ ಹಳ್ಳಿಯ ಜನರು ಬಹಳ ವಿನಂತಿಸಿಕೊಂಡ ನಂತರ ಆ ಸಂತರು ಅವರ ಹಳ್ಳಿಗೆ ಹೋಗಲು ಒಪ್ಪಿಕೊಂಡರು. ಪ್ರತಿ ಹುಣ್ಣಿಮೆಗೆ ಖೇಖಡಾಗೆ ಹೋಗಲು ಒಪ್ಪಿದರು. ಪರಮಾತ್ಮ ಕಬೀರರು ಎಲ್ಲವೂ ಸರಿಯಾಗಿಡುವರು. ಇಬ್ಬರೂ ಮಹಾಪುರುಷರು ಹಳ್ಳಿಗೆ ಬಂದಾಗ ಅಲ್ಲಿ ಸಂಪೂರ್ಣ ಶಾಂತಿ ನೆಲೆಸಿತು. ಜಾನುವಾರುಗಳ ರೋಗ ವಾಸಿಯಾಯಿತು. ಮರುದಿನ ಒಳ್ಳೆ ಮಳೆಯಾಯಿತು.

ರೈತರು ಬಹಳ ಸಂತೋಷ ಪಡುತ್ತಿದ್ದರು. ಎಲ್ಲರೂ ನೆಮ್ಮದಿಯಿಂದ ಇರಲಾರಂಭಿಸಿದರು. ಎಲ್ಲಾ ಕಷ್ಟಗಳೂ ದೂರವಾದವು. ಇಂದಿಗೂ ಆ ಹಳ್ಳಿಯಲ್ಲಿ ಸಂತ ಘೀಸಾದಾಸ್ ಮತ್ತು ಭಕ್ತ ಜೀತಾರಾಮ್‌ರ ಹೆಸರಿನಲ್ಲಿ ಜಾತ್ರೆಯಾಗುತ್ತದೆ. ಸಂತ ಗರೀಬ್‌ದಾಸರು ಹೇಳಿದ್ದಾರೆ:–

ಗರೀಬ್, ಜಿಸ್ ಮಂಡಲ್ ಸಾಧು ನಹೀಂ, ನದೀ ನಹೀಂ ಗುಂಜಾರ್ ।
ತಜ್ ಹಂಸಾ ವಹ್ ದೇಶಡಾ, ಜಮ್ ಕೀ ಮೋಟೀ ಮಾರ್ ॥

ಶಬ್ದಾರ್ಥ:– ಯಾವ ಕ್ಷೇತ್ರದಲ್ಲಿ ಮಹಾತ್ಮ, ಗುರುಜನರು ಇರುವುದಿಲ್ಲವೋ ಮತ್ತು ಯಾವ ಪ್ರದೇಶದ ಸುತ್ತಮುತ್ತಲೂ ನದಿ ಹರಿಯುವುದಿಲ್ಲವೋ, ಹೇ ಭಕ್ತ! ಆ ಪ್ರದೇಶವನ್ನು ತೊರೆದುಬಿಡು. ಅಲ್ಲಿ ಕಾಲನ ಭಯಂಕರ ಪ್ರಕೋಪವಿದೆ.

ಹಾಗಾಗಿ ಓದುಗರೇ, ನಿಮಗೆ ಯಾವ ವಯಸ್ಸಿನಲ್ಲಿಯೂ ಸದ್ಗುರು ಸಿಕ್ಕರೂ ನೀವು ಭಕ್ತಿ ಪ್ರಾರಂಭ ಮಾಡಿಬಿಡಿ. ಸಂತ ಗರೀಬ್‌ದಾಸರು ಹೇಳಿದ್ದಾರೆ.

ಗರೀಬ್, ಚಲೀ ಗಈ ಸೋ ಜಾನ್ ದೇ, ಲೇ ರಹತೀ ಕೂಂ ರಾಖ್ ।
ಉತರೀ ಲಾವ್ ಚಢಾಈಯೋ, ಕರೋ ಅಪೂಠೀ ಚಾಕ್ ॥

ಭಾವಾರ್ಥ:– ಹೇ ಮಾನವಾ! ಗುರು ಸಿಗುವ ಮುನ್ನ ಕಳೆದ ಆಯುಷ್ಯವೆಲ್ಲಾ ಬರೀ ವ್ಯರ್ಥ. ಇನ್ನುಳಿದಿರುವ ಆಯುಷ್ಯದಲ್ಲಿ ಚಿಂತೆಯೆಲ್ಲವನ್ನೂ ಮರೆತು ಶ್ರದ್ಧೆಯಿಂದ ಭಕ್ತಿ ಮಾಡಿ ನಿನ್ನ ಉದ್ಧಾರ ಮಾಡಿಕೊ. ಭಕ್ತಿಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಾಂಸಾರಿಕ ಕಾರ್ಯಗಳು ಸುಲಭವಾಗುತ್ತವೆ. ಬಾವಿಯಿಂದ ನೀರನ್ನು ಮೇಲೆತ್ತುವಾಗ ರಾಟೆಯಿಂದ ಹಗ್ಗವು ಜಾರಿದರೆ, ನೀರೆಳೆಯುವುದು ಬಹಳ ಕಷ್ಟವಾಗುತ್ತದೆ. ಪುನಃ ಹಗ್ಗವನ್ನು ರಾಟೆಯ ಚಕ್ರದಲ್ಲಿ ಸರಿಯಾಗಿ ಕೂರಿಸಿದರೆ ನೀರನ್ನು ಮೇಲೆತ್ತುವುದು ಸುಲಭವಾಗುತ್ತದೆ. ಸದ್ಗುರುವಿನ ಶರಣದಲ್ಲಿ ಬರುವ ಮೊದಲು ಹಗ್ಗವು ಚಕ್ರದಿಂದ ಜಾರಿದಂತೆ ನೀರು ತೆಗೆಯುವುದು ಬಹಳ ಕಷ್ಟಕರವಾಗಿರುತ್ತದೆ. ಅದೇ ರೀತಿ ಹಗ್ಗವನ್ನು ರಾಟೆಯ ಚಕ್ರದಲ್ಲಿ ಸರಿಯಾಗಿ ಕೂರಿಸಿದಾಗ ಅಂದರೆ ಭಕ್ತಿಯನ್ನು ಪ್ರಾರಂಭಿಸಿದಾಕ್ಷಣ ಕೆಲಸಗಳೆಲ್ಲಾ ಸುಲಭವಾಗಿ ಜರುಗುವುದು. ಈಗ ಆಯುಷ್ಯ ಬಹಳ ಕಡಿಮೆ ಇದೆ ಎಂದು ಚಿಂತಿಸಬಾರದು. ಈಗ ಆಗಿದ್ದಾದರೂ ಏನು? ಭಕ್ತಿ ಮಾಡೋಣ. ಸತ್ಸಂಗದಿಂದ ಯಾವಾಗ ಬೇಕಾದರೂ ಜ್ಞಾನವಾದಾಗ. ಅದೇ ವಯಸ್ಸಿನಲ್ಲಿ ದೃಢ ಚಿತ್ತದಿಂದ ಭಕ್ತಿ ಮಾಡುವುದರಲ್ಲಿ ತೊಡಗಬೇಕು.

ಭಾವಾರ್ಥ:– ಕಳೆದುಹೋದ ವಯಸ್ಸಿನ ಚಿಂತೆ ಬಿಟ್ಟು, ಉಳಿದ ಜೀವನ ರಕ್ಷಿಸಿ ಅಂದರೆ ದಾನ–ಧರ್ಮ, ಭಕ್ತಿ, ಸೇವೆ ಮಾಡು. ಹಿಂದಿನ ಕಾಲದಲ್ಲಿ ಹೊಲಕ್ಕೆ ನೀರು ಹಾಯಿಸಲು ಬಾವಿಯಿಂದ ನೀರೆತ್ತಲು ಚರ್ಮದ ಚೀಲಗಳನ್ನು ಉಪಯೋಗಿಸಲಾಗುತ್ತಿತ್ತು. ಅದರಲ್ಲಿ 2–3 ಕ್ವಿಂಟಾಲ್ ನೀರು ತುಂಬುತ್ತಿತ್ತು. ಆ ಚೀಲವನ್ನು ದಪ್ಪ ಹಗ್ಗಕ್ಕೆ ಕಟ್ಟಿ, ಆ ಹಗ್ಗವನ್ನು ರಾಟೆಯ ಚಕ್ರದ ಮೇಲೆ ನಿಲ್ಲಿಸಲಾಗುತ್ತಿತ್ತು. ಒಮ್ಮೊಮ್ಮೆ ಜೋರಾಗಿ ಎಳೆದಾಗ ಹಗ್ಗವು ಚಕ್ರದಿಂದ ಹೊರ ಬಂದು ಬಿಡುತ್ತಿತ್ತು. ಆಗ ನೀರೆಳೆಯುವುದು ಬಹಳ ಕಷ್ಟವಾಗುತ್ತಿತ್ತು. ತಕ್ಷಣವೇ ಹಗ್ಗವನ್ನು ರಾಟೆಯ ಚಕ್ರದ ಮಧ್ಯಕ್ಕೆ ಸೇರಿಸುವ ಕೆಲಸ ಮಾಡಲಾಗುತ್ತಿತ್ತು. ಆಗ ನೀರು ಚರ್ಮದ ಚೀಲದ ಮೂಲಕ ಸುಲಭವಾಗಿ ಮೇಲೆ ಬರುತ್ತಿತ್ತು. ಹೀಗೆ ಗುರುವಿನ ಆಶ್ರಯ ಪಡೆಯದಿದ್ದರೆ ನಿಮ್ಮ ಜೀವನವೆಂಬ ಹಗ್ಗ ಚಕ್ರದಿಂದ ಹೊರಬರುತ್ತದೆ. ಜೀವನದ ಪ್ರತಿ ಕೆಲಸವೂ ಕಷ್ಟವಾಗುತ್ತದೆ. ಆ ಜೀವನವೆಂಬ ಹಗ್ಗವನ್ನು ಮತ್ತೆ ಚಕ್ರದ ಮಧ್ಯೆ ಕೂರಿಸಿ, ಅಂದರೆ ಗುರುವಿನ ಆಶ್ರಯ ಪಡೆದು ನಿಮ್ಮ ಬದುಕುವ ದಾರಿ ಸುಗಮಗೊಳಿಸಿ.

## "ವೇಶ್ಯೆಯ ಉದ್ಧಾರ"

ಪರಮೇಶ್ವರ ಕಬೀರರು ರಾತ್ರಿಯಲ್ಲಿ ಮನೆ ಮನೆ ತೆರಳಿ ಸತ್ಸಂಗ ನಡೆಸುತ್ತಿದ್ದರು. ಹಗಲಿನಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಎಲ್ಲಾ ಶ್ರದ್ಧಾಳುಗಳು ಹಾಗೂ ಕಬೀರರು ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಕಾಶಿ ಎನ್ನುವ ಊರಿನಲ್ಲಿ ಒಬ್ಬ ವೇಶ್ಯೆ ಇದ್ದಳು. ಒಂದು ರಾತ್ರಿ ಸತ್ಸಂಗ ನಡೆಯುತ್ತಿತ್ತು. ಸ್ವಲ್ಪ ದೂರದಲ್ಲಿ ಕಾಶಿಯ ಪ್ರಸಿದ್ಧ ವೇಶ್ಯೆ ಚಂಪಾಕಲೀಯ ಮನೆ ಇತ್ತು. ವೇಶ್ಯೆಯು ಆ ದಿನ ರಾತ್ರಿ ಯಾವುದೇ

ಗಿರಾಕಿಗಳಿಲ್ಲದೆ ಮಹಡಿಯ ಮೇಲೆ ಕುಳಿತಿದ್ದಳು. ಅವಳು ಬಹಳ ದೊಡ್ಡ ಬಂಗಲೆ ಕಟ್ಟಿಸಿಕೊಂಡಿದ್ದಳು. ಆ ರಾತ್ರಿ ಅವಳು ಮಹಡಿಯ ಮೇಲೆ ಕುಳಿತು ಗಿರಾಕಿಯನ್ನು ಎದುರು ನೋಡುತ್ತಿದ್ದಳು. ಸತ್ಸಂಗದ ವಚನಗಳು ಅವಳ ಕಿವಿಗೆ ಬಿದ್ದವು. ಪರಮಾತ್ಮ ಕಬೀರರು ಹೇಳುತ್ತಿದ್ದರು. "ಮಾನವನ ಜನ್ಮವು ಬಹಳ ಪುಣ್ಯದಿಂದ ಲಭಿಸುತ್ತದೆ. ಯಾವ ಸ್ತ್ರೀ, ಪುರುಷನು ಭಕ್ತಿ ಮಾಡುವುದಿಲ್ಲವೋ, ದಾನ, ಧರ್ಮ, ಸೇವೆ ಮಾಡುವುದಿಲ್ಲವೋ ಅವರು ಪರಮಾತ್ಮನ ಕಳ್ಳರು. (ಗೀತೆಯ 3ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಹೇಳಿರುವಂತೆ ಪರಮಾತ್ಮನಿಂದ ಪಡೆದ ಹಣದ ಕೊಂಚ ಭಾಗವನ್ನು ದಾನ ಧರ್ಮದಲ್ಲಿ ವಿನಿಯೋಗಿಸದಿದ್ದರೆ, ಅವನೇ ಅನುಭವಿಸುತ್ತಿದ್ದರೆ ಅವನು ಪರಮಾತ್ಮನ ದೃಷ್ಟಿಯಲ್ಲಿ ಒಬ್ಬ ಕಳ್ಳ. ಯಾರು ಕಳ್ಳತನ, ದರೋಡೆ, ಮೋಸ, ವೇಶ್ಯಾವೃತ್ತಿ ಮಾಡುತ್ತಾರೋ ಅವರು ನಿಜವಾಗಲೂ ಮಹಾಪರಾಧಿಗಳು. ಪರಮಾತ್ಮನ ಆಸ್ಥಾನದಲ್ಲಿ ಅವರಿಗೆ ಕಠಿಣ ಶಿಕ್ಷೆ ನೀಡಲಾಗುವುದು.

ಕಬೀರ್, ಚೋರೀ ಜಾರೀ ವೈಶ್ಯಾ ವೃತಿ, ಕಬಹು ನಾ ಕರಯೋ ಕೋಎ ।
ಪುಣ್ಯ್ ಪಾಯೀ ನರ್ ದೇಹೀ, ಓಚ್ಛೀ ಠೌರ್ ನ ಖೋಎ ॥

ಶಬ್ದಾರ್ಥ:- ಹೇ ಮಾನವಾ! ಪರಸ್ತ್ರೀಯನ್ನು ಸೇರುವ, ವೇಶ್ಯಾವೃತ್ತಿ ಅಂದರೆ ಪರಪುರುಷರಿಂದ ಹಣದ ದುರಾಸೆಯಲ್ಲಿ ಸ್ತ್ರೀಯು ಸಂಭೋಗ ಎಂದಿಗೂ ಮಾಡಬಾರದು. ಈ ಮಾನವ ಶರೀರವು (ಸ್ತ್ರೀ/ಪುರುಷ) ಬಹಳ ಪುಣ್ಯದಿಂದ ಪ್ರಾಪ್ತವಾಗಿದೆ. ಇದರಿಂದ ಪಾಪ ಕಾರ್ಯಗಳನ್ನು ಮಾಡಿ ಕೆಟ್ಟ ಜಾಗಗಳಿಗೆ ಹೋಗಿ, ಈ ದೇಹವನ್ನು ನಾಶ ಮಾಡಬೇಡ. ಒಳ್ಳೆಯ ಕೆಲಸ ಮಾಡಿ, ಗುರು ಧಾರಣೆ ಮಾಡಿ, ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಮಾನವ ಶರೀರ ಪಡೆದ ವ್ಯಕ್ತಿ ಮೊಟ್ಟ ಮೊದಲಿಗೆ ಪೂರ್ಣಗುರುವಿನ ಬಳಿ ಹೋಗಿ ದೀಕ್ಷೆ ಪಡೆಯಬೇಕು. ಜೀವನಪರ್ಯಂತ ನೇಮ, ನಿಷ್ಠೆಯಿಂದ ಇದ್ದು, ಸಾಧನೆ, ಸೇವೆ, ದಾನ-ಧರ್ಮ ಮಾಡುತ್ತಿರಬೇಕು. ತನ್ನ ದೈನಂದಿನ ಕಾರ್ಯಗಳಲ್ಲಿ ತೊಡಗಿರಬೇಕು. ಆದರೆ ಕೆಟ್ಟ ಕೆಲಸ ಮಾಡಬಾರದು. ಆಗ ಅವನ ಉದ್ಧಾರವಾಗುತ್ತದೆ. ಆಧ್ಯಾತ್ಮ ಜ್ಞಾನದ ಕೊರತೆಯಿಂದ ಮಾನವನು (ಸ್ತ್ರೀ-ಪುರುಷ) ಕೇವಲ ಧನ ಸಂಪಾದನೆಯನ್ನೇ ತನ್ನ ಮುಖ್ಯ ಗುರಿಯಾಗಿರಿಸಿಕೊಂಡು ಜೀವನವೆಂಬ ಯಾತ್ರೆಯನ್ನು ನಿಶ್ಚಯಿಸಿಕೊಳ್ಳುತ್ತಾನೆ. ಒಂದು ವೇಳೆ ನಿಮ್ಮ ಬಳಿ ಕೋಟ್ಯಾಂತರ ಧನ-ಸಂಪತ್ತು ಇದೆ, ಅದನ್ನು ನೀವು ಇಡೀ ಜೀವನದಲ್ಲಿ ಮೋಸಮಾಡಿ ಸಂಗ್ರಹಿಸುವಿರಿ, ಇದ್ದಕ್ಕಿದ್ದಹಾಗೆ ಮೃತ್ಯುವಾಗುತ್ತದೆ. ಆಗ ಇಡೀ ಜೀವನದಲ್ಲಿ ಕೂಡಿಸಿದ ಹಣ ಇಲ್ಲಿಯೇ ಉಳಿಯಿತು. ಜೊತೆಯಂತು ನಿಮ್ಮ ಶರೀರವೂ ಹೋಗುವುದಿಲ್ಲ. ಕೇವಲ ನೀವು ಹಣಗಳಿಸುವಾಗ ಮಾಡಿದ ಪಾಪವಷ್ಟೇ ನಿಮ್ಮ ಜೊತೆ ಬರುತ್ತದೆ.

ಕಾಯಾ ತೇರೀ ಹೈ ನಹೀಂ, ಮಾಯಾ ಕಹಾಂ ಸೆ ಹೋಯ್ ।
ಗುರು ಚರಣೋಂ ಮೆಂ ಧ್ಯಾನ್ ರಖ್, ಇನ್ ದೋನೋಂ ಕೋ ಖೋಯ್ ॥
ಕಬೀರ್, ಸಬ್ ಜಗ್ ನಿರ್ಧನಾ, ಧನವಂತಾ ನಾ ಕೋಯ್ ।
ಧನವಾನ್ ವಹ್ ಜಾನಿಯೇ, ಜಾಪೇ ರಾಮ್ ನಾಮ್ ಧನ್ ಹೋಯ್ ॥

ಭಾವಾರ್ಥ:- ಮಾನವನು ತನ್ನ ಶರೀರವನ್ನು ರೋಗಮುಕ್ತಗೊಳಿಸಲು ತನ್ನ ಸಂಪತ್ತನ್ನೆಲ್ಲಾ ಖರ್ಚು ಮಾಡಿ ಉಪಚರಿಸಿಕೊಳ್ಳುತ್ತಾನೆ. ನಿಮ್ಮ ಶರೀರವೂ ನಿಮ್ಮ ಜೊತೆ ಬರುವುದಿಲ್ಲ. ಹಾಗಾದರೆ ಇನ್ನು ಹಣ ಹೇಗೆ ಬರುವುದು. ಪೂರ್ಣ ಗುರುವಿನಿಂದ ದೀಕ್ಷೆಪಡೆದು ಹಗಲಿರುಳೂ ಭಕ್ತಿ ಮಾಡಿ. ಗುರುವಿನಿಂದ ಪಡೆದ ಜ್ಞಾನದ ಆಧಾರದಿಂದ ಜೀವನದ ದಾರಿಯನ್ನು ಕಂಡುಕೊಳ್ಳಿ. ಕಾಯಾ (ಶರೀರ) ಮತ್ತು ಮಾಯಾದ (ಹಣ) ಮೋಹವನ್ನು ತ್ಯಜಿಸಿ ಭಕ್ತಿ ಎನ್ನುವ ಹಣವನ್ನು ಸಂಗ್ರಹಿಸಿ.

ಹೇ ಮಾನವ! ಮಾನವ ಜನ್ಮದ ಹಿಂದಿನ ಇತಿಹಾಸವನ್ನು ನೋಡಿಕೊ!

ಸರ್ವ್ ಸೋನೇ ಕೀ ಲಂಕಾ ಥೀ, ರಾವಣ್ ಸೆ ರಣಧೀರಂ ।
ಏಕ ಪಲಕ್ ಮೆಂ ರಾಜ್ ನಷ್ಟ್ ಹುವಾ, ಜಮ್ ಕೆ ಪಡೇ ಜಂಜೀರಂ ॥
ಗರೀಬ್, ಭಕ್ತಿ ಬಿನಾ ಕ್ಯಾ ಹೋತ್ ಹೈ, ಭ್ರಮ್ ರಹಾ ಸಂಸಾರ್ ।

ರತೀ ಕಂಚನ್ ಪಾಯಾ ನಹೀಂ, ರಾವಣ್ ಚಲೀ ಬಾರ್ ॥

**ಭಾವಾರ್ಥ:– ಸಂತ ಗರೀಬ್ ದಾಸರು ಇದೇ ಮಾತಿನ ಸಮರ್ಥನೆ ಮಾಡುತ್ತಾ ಭಕ್ತಿ ಮಾಡದೇ ಜೀವಾತ್ಮಾಗೆ ಯಾವುದೇ ಲಾಭವಾಗುವುದಿಲ್ಲ. ಹಣ ಗಳಿಸುವಲ್ಲಿ ಇಡೀ ಜೀವನ ಅಲೆದಾಡುತ್ತಿರುತ್ತಾನೆ. ಶ್ರೀಲಂಕಾದ ರಾಜನಾದ ರಾವಣನ ಬಳಿ ಬಹಳ ಚಿನ್ನವಿತ್ತು, ಚಿನ್ನದ ಅರಮನೆಯೂ ಇತ್ತು. ಆದರೆ ಶರೀರಬಿಟ್ಟು ಹೋಗುವಾಗ ಅವನು ಒಂದು ಗ್ರಾಂ ಚಿನ್ನವನ್ನೂ ತನ್ನ ಜೊತೆ ತೆಗೆದುಕೊಂಡು ಹೋಗಲಿಲ್ಲ. ಸತ್ಯ ಭಕ್ತಿ ಸತ್ಯಪುರುಷನ ಮಾಡದಿರುವ ಕಾರಣ ಯಮದೂತರ ಮೂಲಕ ಸರಪಳಿಯಿಂದ ಕಟ್ಟಿ ಯಮರಾಜನ ಬಳಿ ಕರೆದುಕೊಂಡು ಹೋದರು. ನರಕದಲ್ಲಿ ತಳ್ಳಲಾಯಿತು. ಆದ್ದರಿಂದ ಹೇ ಮಾನವ! ಕೆಟ್ಟ ಕೆಲಸಗಳಿಂದ ದೂರವಿದ್ದು, ಗುರು ಧಾರಣೆ ಮಾಡಿಕೊಂಡು ಸತ್ಯಭಕ್ತಿ ಮಾಡು. ಸಂದೇಹ ನಿವಾರಣೆ ಮಾಡುತ್ತಾ ಪರಮೇಶ್ವರ ಕಬೀರರು ಸತ್ಸಂಗದಲ್ಲಿ ಹೇಳಿದರೆನೆಂದರೆ ಆಧ್ಯಾತ್ಮಿಕ ಜ್ಞಾನವಿಲ್ಲದಿರುವ ಕಾರಣ ಒಳ್ಳೆಯ ವ್ಯಕ್ತಿಗಳಿಂದಲೂ ಪಾಪದ ಕೆಲಸಗಳಾಗಿವೆ. ಅವರು ಸತ್ಸಂಗಕ್ಕೆ ಬಂದು ಕೇಳಿ, ಅವರು ಎಲ್ಲಾ ಅಪರಾಧಗಳನ್ನು ತ್ಯಜಿಸಿ ಭಕ್ತಿಮಾಡಿ ತಮ್ಮ ಉದ್ಧಾರವನ್ನು ಮಾಡಿಕೊಂಡರು. ಪರಮಾತ್ಮ ಕಬೀರರು ಹೇಳುವುದೇನೆಂದರೆ, ನನ್ನ ಬಳಿ ಸಾಧನೆಯ ಯಥಾರ್ಥ ಮಂತ್ರವಿದೆ. ಅದು ಸರ್ವಪಾಪಗಳನ್ನು ನಾಶಪಡಿಸುತ್ತದೆ. ಪುಣ್ಯ ಉಳಿಯುತ್ತವೆ. (ಹೇಗೆ ಇಂದಿನ ವಿಜ್ಞಾನಿಗಳು ಕಂಡುಹಿಡಿದಿರುವ ಔಷಧಿಯು ಹೇಗೆ ಹುಲ್ಲು, ಕಳೆಯನ್ನು ಹಾಳುಮಾಡಿ, ಬೆಳೆಯನ್ನು ಮಾತ್ರ ಉಳಿಸುವುದೋ, ಹಾಗೇ ಆ ದಿವ್ಯ ಮಂತ್ರವು ಪಾಪಗಳನ್ನು ತೊಡೆದು ಪುಣ್ಯವನ್ನು ಉಳಿಸುವುದು.) ಆ ಮಂತ್ರವನ್ನು ನಾನು ನನ್ನ ಲೋಕದಿಂದ ತಂದಿರುವೆ.**

ಸೋಹಂ ಶಬ್ದ್ ಹಮ್ ಜಗ್ ಮೆಂ ಲಾಏ । ಸಾರ್ ಶಬ್ದ್ ಹಮ್ ಗುಪ್ತ ಛಿಪಾಏ ॥

**(ಋಗ್ವೇದದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರದಲ್ಲಿ ಪ್ರಮಾಣವಿದೆ ಏನೆಂದರೆ "ಪರಮಾತ್ಮನು (ಪ್ರಪಂಚ) ಈ ಸಂಸಾರದಲ್ಲಿ ಪ್ರತ್ಯಕ್ಷನಾಗಿ ತನ್ನ ಅಮೃತವಾಣಿಯಿಂದ ಮುಕ್ತಿಯ ಸತ್ಯಮಾರ್ಗದ ಪ್ರೇರಣೆ ನೀಡುವನು. ಆ ಪರಮಾತ್ಮನು ಎಲ್ಲಾ ದೇವರುಗಳ ದೇವರು. ಅಂದರೆ ಎಲ್ಲರ ಮಾಲೀಕ. ಅವನು ಭಕ್ತಿಯ ಗುಪ್ತನಾಮಗಳ ಆವಿಷ್ಕಾರ ಮಾಡುತ್ತಾನೆ.) ಯಾರಾದರೂ ಮಹಾಪಾಪಿಗಳಿದ್ದರೆ, ಒಂದು ವೇಳೆ ಅವನು ಸತ್ಯ ಸಾಧನೆ ಮಾಡುತ್ತಿದ್ದರೆ, ಭವಿಷ್ಯದಲ್ಲಿ ಅವನು ಮುಂದೆಂದೂ ಪಾಪ ಮಾಡದಿದ್ದರೆ ಅವನ ಎಲ್ಲಾ ಪಾಪಗಳು ಸಮಾಪ್ತವಾಗುತ್ತವೆ. ಅವನು ಭಕ್ತಿ ಮಾಡಿ ತನ್ನ ಉದ್ಧಾರವು ಮಾಡಿಕೊಳ್ಳಬಹುದು.**

**ಈ ಅಮೃತವಾಣಿಯನ್ನು ಕೇಳಿದ ವೇಶ್ಯೆಯು ನಿದ್ದೆಯಿಂದ ಎಚ್ಚೆತ್ತುಕೊಂಡಂತೆ ಬೆಚ್ಚಿದಳು. ನಂತರ ಮನೆಗೆ ಬೀಗಹಾಕಿ ಸತ್ಸಂಗದಲ್ಲಿ ಬಂದಳು, ಮಹಿಳೆಯರ ಹಿಂದೆ ಹೋಗಿ ಸಾಲಿನಲ್ಲಿ ಕುಳಿತಳು. ಸತ್ಸಂಗ ಮುಗಿದ ನಂತರ ದೀಕ್ಷೆ ಪಡೆಯಲು ಇಚ್ಛಿಸುವವರು ಮುಂದೆ ಬರಬೇಕೆಂದು ಹೇಳಿದರು. ಆಗ ಕೆಲ ಸ್ತ್ರೀ, ಪುರುಷರು ಎದ್ದು ಮುಂದೆ ಬಂದರು. ಆಗ ವೇಶ್ಯೆಯೂ ಎದ್ದು ಗುರುಗಳ ಬಳಿ ಬಂದು ತನ್ನ ವೃತ್ತಾಂತವನ್ನೆಲ್ಲಾ ಹೇಳಿ ಅಳತೊಡಗಿದಳು ಹಾಗೂ ಗುರುಗಳ ಬಳಿ ಹೀಗೆಂದಳು, "ನನಗೆ 40 ವರ್ಷಗಳ ಜೀವನದಲ್ಲಿ ಮೊದಲ ಬಾರಿ ಇಂಥ ಅಮೃತವಾಣಿ ಕೇಳಲು ಸಿಕ್ಕಿದೆ. ಹೇ ಪರಮಾತ್ಮ ನನ್ನಂಥಾ ಪಾಪಿಯ ಜೀವನ ಉದ್ಧಾರವಾಗುವುದೇ?", ಹಾಗಂತು ನೀವು ಸರ್ವ ಸಮಾಧಾನ ಸತ್ಸಂಗದಲ್ಲಿ ಹೇಳಿದಿರಿ, ಆದರೆ ಯಾವಾಗ ನಾನು ಈ ನನ್ನ ಪಾಪಿ ಜೀವನದ ಬಗ್ಗೆ ಯೋಚಿಸುತ್ತೇನೆ ಆಗ ಪಶ್ಚಾತ್ತಾಪವಾಗುತ್ತದೆ ಹಾಗೂ ವಿಶ್ವಾಸವಾಗುತ್ತಿಲ್ಲ ನನ್ನಂಥ ಅಪರಾಧಿಯನ್ನೂ ಕ್ಷಮಿಸುವವರೆಂದು, ಪರಮೇಶ್ವರ ಕಬೀರರು ಹೇಳಿದ್ದಾರೆನೆಂದರೆ :–**

ಕಬೀರ್, ಜಬ್ ಹೀ ಸತ್ಯನಾಮ್ ಹೃದಯ್ ಧರಾ, ಭಯೋ ಪಾಪ್ ಕೋ ನಾಶ್ ।
ಜೈಸೆ ಚಿನಂಗೀ ಅಗ್ನಿ ಕೀ, ಪಡ್ಯೆ ಪುರಾನ್ಯೆ ಘಾಸ್ ॥

**ಭಾವಾರ್ಥ:– ಹೇಗೆ ಟನ್‌ಗಟ್ಟಲೇ ಹುಲ್ಲನ್ನು ಒಂದು ಸಣ್ಣ ಬೆಂಕಿ ಕಿಡಿ ಸುಟ್ಟು ಬೂದಿ ಮಾಡಿಬಿಡುವುದೋ, ನಂತರ ಗಾಳಿ ಬೀಸಿದಾಗ ಆ ಬೂದಿಯನ್ನು ಎತ್ತಿಕೊಂಡು ಹೋಗುವುದೋ**

ಹಾಗೆ ನನ್ನ ಸತ್ಯಮಂತ್ರದ ಜಪದಿಂದ ಜನ್ಮ ಜನ್ಮಾಂತರದ ಪಾಪಗಳು ಕೂಡಾ ಸುಟ್ಟು ಭಸ್ಮವಾಗುವುದು. ಭವಿಷ್ಯದಲ್ಲಿ ಯಾವುದೇ ತಪ್ಪನ್ನು ಮಾಡದಿದ್ದರೆ, ಮೋಕ್ಷ ಕಟ್ಟಿಟ್ಟ ಬುತ್ತಿ.(ಯಜುರ್ವೇದ 8ನೇ ಅಧ್ಯಾಯದ 13ನೇ ಮಂತ್ರದಲ್ಲೂ ಸಹ ಪ್ರಮಾಣವಿದೆ, ಪರಮಾತ್ಮನು ತನ್ನ ಭಕ್ತನ (ಏನಸಃ ಏನಸಃ) ಘೋರ ಪಾಪವನ್ನು ನಾಶಮಾಡಿ ಜೀವಾತ್ಮದ ಉದ್ಧಾರ ಮಾಡುತ್ತಾನೆ) ಅದೇ ದಿನ ಆ ಸಹೋದರಿಯು ಪಾಪದ ಕಾರ್ಯವನ್ನು (ವೇಶ್ಯಾವೃತ್ತಿಯನ್ನು) ಬಿಟ್ಟುಬಿಟ್ಟಳು. ಪರಮಾತ್ಮ ಕಬೀರರಿಂದ ದೀಕ್ಷೆ ಪಡೆದು. ಮರ್ಯಾದೆಯಲ್ಲಿದ್ದುಕೊಂಡು ಜೀವನಪರ್ಯಂತ ಭಕ್ತಿಮಾಡಿ ಚಂಪಾಕಲೀ ಮೋಕ್ಷ ಪಡೆದಳು.

## "ರಂಕಾ–ಬಂಕಾನ ಕತೆ"

ಚಂಪಾಕಲಿಯು ಪರಮೇಶ್ವರ ಕಬೀರರನ್ನು ಕೇಳಿದಳು, "ಹೇ ಭಗವಂತ, ಈ ಪಾಪದ ಹಣವನ್ನು ಏನು ಮಾಡಲಿ?" ಆಗ ಗುರುಗಳೆಂದರು, ಮಗಳೇ ಈ ನರಕದ ಸಂಪತ್ತನ್ನು ದಾನ ಮಾಡಿಬಿಡು". ಮನೆಗೆ ಹೋದ ಚಂಪಾಕಲಿ 'ಎಲ್ಲಾ ಹಣವನ್ನು ದಾನ ಮಾಡಿ ಬಿಟ್ಟರೆ ನಾನು ಏನನ್ನು ತಿನ್ನಲಿ? ನನಗೆ ಬೇರೆ ಕೆಲಸವೂ ಇಲ್ಲ' ಎಂದು ಯೋಚಿಸಿದಳು. ಚಂಪಾಕಲೀ ಸತ್ಸಂಗದಲ್ಲಿ ಅಧಿಕ ಸಮಯ ಹೋಗಲಾರಂಭಿಸಿದಳು. ಒಂದು ದಿನ ಸತ್ಸಂಗದಲ್ಲಿ ಹೇಳಿದರೆನೆಂದರೆ.

ಒಂದೂರಿನಲ್ಲಿ ಒಬ್ಬ ರಂಕಾ (ಪುರುಷ) ಮತ್ತು ಬಂಕಾ (ಸ್ತ್ರೀ) ಎಂಬ ದಂಪತಿಗಳಿದ್ದರು. ಅವರು ಪರಮಾತ್ಮನ ಪರಮಭಕ್ತರಾಗಿದ್ದರು. ಅವರು ತತ್ವಜ್ಞಾನವನ್ನು ಚೆನ್ನಾಗಿ ಅರಿತಿದ್ದರು, ಅದೇ ಆಧಾರದಿಂದ ತಮ್ಮ ಜೀವನ ನಡೆಸುತ್ತಿದ್ದರು. ಅವರಿಗೆ ಅಬಂಕಾ (ಅಂಬಿಕಾಳನ್ನು ಅಬಂಕಾ ಎನ್ನುತ್ತಿದ್ದರು) ಎಂಬ ಹೆಸರಿನ ಮಗಳಿದ್ದಳು. ಅವರ ಬಳಿ ಹಣವಿರಲಿಲ್ಲ. ಜೀವನ ನಿರ್ವಹಣೆಗೆ ಕಾಡಿನಿಂದ ಸೌದೆ ತಂದು ಮಾರುತ್ತಿದ್ದರು. ಒಂದು ದಿನ ನಾಮದೇವ ಭಕ್ತನು ತಮ್ಮ ಗುರುಗಳಿಗೆ ಹೀಗೆಂದನು, "ಗುರುಗಳೇ ರಂಕಾ ಮತ್ತು ಬಂಕಾ ಬಹಳ ಬಡವರು. ಕಾಡಿನಿಂದ ಸೌದೆ ಆರಿಸಿ ತರುವುದು ಕಷ್ಟವಾಗುತ್ತಿದೆ, ಅವರಿಗೆ ನೀವೇಕೆ ಸ್ವಲ್ಪ ಹಣ ಕೊಡಬಾರದು? ಇಬ್ಬರೂ ಅರಣ್ಯಕ್ಕೆ ಹೋಗಿ ಕಟ್ಟಿಗೆಗಳನ್ನು ಆರಿಸಿ ತರುವುರು, ಊಟ ಬಹಳ ಕಷ್ಟದಿಂದ ಸಿಗುತ್ತದೆ ಎಂದನು.

ಆಗ ಗುರುಗಳು, ಸಹೋದರ "ನಾನೂ ಎಷ್ಟೋ ವೇಳೆ ಅವರಿಗೆ ಹಣ ಕೊಟ್ಟಿರುವೆ, ಆದರೆ ಅವರಿಬ್ಬರು ಆ ಹಣವನ್ನು ಇಟ್ಟುಕೊಳ್ಳದೆ, ದಾನ ಮಾಡಿ ಬಿಡುತ್ತಾರೆ. 3–4 ಬಾರಿ ನಾನೇ ವೇಷ ಬದಲಿಸಿಕೊಂಡು ಅವರು ಕಟ್ಟಿಗೆ ಮಾರುವ ಜಾಗಕ್ಕೆ ಹೋಗಿ ಒಂದಕ್ಕೆ ನೂರರಷ್ಟು ಬೆಲೆ ಕೊಟ್ಟು ಖರೀದಿಸಿದೆ, ಅವರ ಕಟ್ಟಿಗೆ ದಿನಾಲೂ 2 ಆಣೆಗೆ ಮಾರುತ್ತಿತ್ತು ನಾನು 10 ರೂಪಾಯಿಗೆ ಖರೀದಿಸಿದೆ. ಅವರು 4 ಆಣೆ ಇಟ್ಟುಕೊಂಡು ಉಳಿದ ಹಣ ಸತ್ಸಂಗದಲ್ಲಿ ನನಗೆ ಆ ಹಣವನ್ನೂ ದಾನ ಮಾಡಿಬಿಡುತ್ತಾರೆ. ನಾನೇನು ಮಾಡುವುದು?" ಎಂದರು. ಆದರೂ ನಾಮದೇವನು ಮತ್ತೊಮ್ಮೆ ಅವರಿಗೆ ಹಣ ನೀಡುವಂತೆ ಆಗ್ರಹಿಸಿದನು. ಈ ಬಾರಿ ಅವರು ತೆಗೆದುಕೊಳ್ಳುವರು ಎಂದನು.

ಗುರುಗಳು ಒಪ್ಪಿದರು. ಆ ದಂಪತಿಗಳು ಕಟ್ಟಿಗೆ ಹೊತ್ತು ಬರುವ ದಾರಿಯಲ್ಲಿ ಗುರುಗಳು ಕೆಲವು ಲಕ್ಷಾಂತರ ರೂಪಾಯಿಯ ಬೆಲೆ ಬಾಳುವ ಒಡವೆಗಳನ್ನು ನೆಲದ ಮೇಲೆ ಬಿಸಾಕಿದರು. ನಂತರ ಗುರುಗಳು ಮತ್ತು ನಾಮದೇವ ಒಂದು ಪೊದೆಯಲ್ಲಿ ಬಚ್ಚಿಟ್ಟುಕೊಂಡರು. ರಂಕಾ ಸೌದೆ ಹೊರೆಯನ್ನು ತಲೆಯಮೇಲೆ ಇಟ್ಟುಕೊಂಡು ಮುಂದೆ ಮುಂದೆ ಹೋಗುತ್ತಿದ್ದನು. ಅವನ ಹೆಂಡತಿ ಬಂಕಾ ಸಹ ಸೌದೆ ಹೊರೆಯನ್ನು ಹೊತ್ತುಕೊಂಡು ಸ್ವಲ್ಪ ದೂರದಲ್ಲಿ ಅವನ ಹಿಂದೆ ಹಿಂದೆ ಬರುತ್ತಿದ್ದಳು.

ರಂಕಾನ ಕಣ್ಣಿಗೆ ಒಡವೆಗಳು ಕಂಡವು ಅವನು ತಕ್ಷಣವೇ, ನನ್ನ ಹೆಂಡತಿಯ ಕಣ್ಣಿಗೆ ಬಿದ್ದರೆ, ಅವಳ ಮನಸ್ಸಿನಲ್ಲಿ ಆಸೆ ಮೂಡಬಹುದು, ಮೊದಲೇ ಹೆಣ್ಣು ಜಾತಿ. ಒಡವೆಯ ಮೇಲೆ ಮೋಹ ಜಾಸ್ತಿ ಎಂದು ಯೋಚಿಸುತ್ತಾ, ಆ ಒಡವೆಯ ಮೇಲೆ ಕಾಲಿನಿಂದ ಮಣ್ಣನ್ನು ಮುಚ್ಚುತ್ತಾ ಮುಂದೆ ಹೋಗುತ್ತಿದ್ದನು. ಭಕ್ತೆ ಬಂಕಾ ಕೂಡಾ ಗುರುಗಳ ಪಕ್ಕಾ ಶಿಷ್ಯೆಯಾಗಿದ್ದಳು. ಆದರೆ ಅವನ ಈ ಕೆಲಸವನ್ನು ಬಂಕಾ ನೋಡುತ್ತಿದ್ದಳು, ಅವಳಿಗೆ ಉದ್ದೇಶವೂ ತಿಳಿಯಿತು. ನಂತರ ಅವಳು ತನ್ನ ಪತಿಯನ್ನು ಕೂಗಿ ಕರೆದು ಹೀಗೆಂದಳು, "ಯಾಕೆ ಮಣ್ಣಿನ ಮೇಲೆ ಮಣ್ಣು ಹಾಕಿ ಮುಚ್ಚುತ್ತಿರುವಿರಿ? ನಡೆಯಿರಿ"

ರಂಕಾನಿಗೆ ತನ್ನ ಹೆಂಡತಿಯ ಬಗ್ಗೆ ನಂಬಿಕೆ ಬಂದಿತು. ಇವಳ ಭಕ್ತಿ ಮತ್ತು ಸಾಧನೆ ನಿಜವಾದದ್ದು ಎಂದುಕೊಂಡನು. ಇವರಿಬ್ಬರೂ ಲಕ್ಷಾಂತರ ಬೆಲೆಬಾಳುವ ಸಂಪತ್ತನ್ನು ತಿರಸ್ಕರಿಸಿ ಊರಿಗೆ ಬಂದು ತಲುಪಿದರು. ಆಗ ಗುರುಗಳು ನಾಮದೇವನನ್ನು ಕುರಿತು, "ಭಕ್ತರೆಂದರೆ ಹೀಗಿರಬೇಕು" ಎಂದರು.

ಒಂದು ಸಂಜೆ ನಾಲ್ಕು ಗಂಟೆಯ ಸಮಯ ಗುರುಗಳು ಸತ್ಸಂಗ ಮಾಡುತ್ತಿದ್ದರು. ರಂಕಾ ಮತ್ತು ಬಂಕಾ ದಂಪತಿಗಳು ಗುರುಗಳ ಆಶ್ರಮದಲ್ಲಿ ಪ್ರವಚನ ಕೇಳುತ್ತಿದ್ದರು. ಅವರ ಮಗಳಾದ ಅಬಂಕಾ ಆಶ್ರಮದಿಂದ 1 ಕಿ.ಮೀ ದೂರದಲ್ಲಿರುವ ತನ್ನ ಗುಡಿಸಲಿನ ಹೊರಗೆ ಮಂಚದ ಮೇಲೆ ಕುಳಿತಿದ್ದಳು. (ಅವಳಿಗೆ ಆಗ 19 ವರ್ಷ ವಯಸ್ಸಾಗಿತ್ತು.) ಗುಡಿಸಿಲಿಗೆ ಬೆಂಕಿ ಬಿದ್ದಿತು. ಕ್ಷಣದಲ್ಲಿ ಗುಡಿಸಿಲಿಗೆಲ್ಲಾ ಬೆಂಕಿಯ ಜ್ವಾಲೆಗಳು ಹರಡಿದವು. ಎಲ್ಲಾ ಸಾಮಾನು ಸುಟ್ಟುಹೊಯ್ತು. ಅಬಂಕಾ ಓಡೋಡಿ ಸತ್ಸಂಗ ನಡೆಯುತ್ತಿದ್ದ ಜಾಗಕ್ಕೆ ಬಂದಳು. ಗುರುಗಳು ಸತ್ಸಂಗ ಹೇಳುತ್ತಿದ್ದರು, ಭಕ್ತರು ವಿಶೇಷವಾಗಿ ಗಮನವಿಟ್ಟು ಸತ್ಸಂಗ ಕೇಳುತ್ತಿದ್ದರು. ಶಾಂತ ವಾತಾವರಣವಿತ್ತು.

ಅಬಂಕಾ ಜೋರಾಗಿ ಕೂಗಿದಳು ಅಮ್ಮಾ ಗುಡಿಸಲಿಗೆ ಬೆಂಕಿ ಬಿದ್ದಿದೆ. ಎಲ್ಲಾ ಸಾಮಾನು ಸುಟ್ಟು ಭಸ್ಮವಾಗಿದೆ. ಅವಳ ತಾಯಿ ಸತ್ಸಂಗದಿಂದ ಎದ್ದು ಹೊರಬಂದಳು. ಸತ್ಸಂಗಕ್ಕೆ ಯಾವುದೇ ಭಂಗ ಬರಬಾರದೆಂದು ಅವಳ ಆಶಯವಾಗಿತ್ತು. ಅವಳು ಹೊರ ಬಂದೊಡನೆ ಅವಳ ಪತಿಯು ಹೊರಬಂದು ವಿಷಯವೇನೆಂದು ಕೇಳಿದನು. ಅಬಂಕಾ ಮಂಚಬಿಟ್ಟು ಎಲ್ಲವೂ ಸುಟ್ಟುಹೋಗಿದೆ ಎಂದು ತಿಳಿಸಿದಳು. ಆಗ ಅವರಿಬ್ಬರೂ ಶಾಂತ ಚಿತ್ತರಾಗಿ, "ಮಗಳೇ, ನೀನು ಮತ್ತೆ ಅಲ್ಲಿಗೆ ಹೋಗಿ ನೀನು ಕುಳಿತಿದ್ದ ಮಂಚವನ್ನೂ ಸಹ ಬೆಂಕಿಗೆ ಹಾಕಿ ಬಾ" ಎಂದು ಹೇಳಿದರು. ಗುಡಿಸಲು ಇಲ್ಲದೆ ಇದ್ದಿದ್ದರೆ ಬೆಂಕಿ ಬೀಳುತ್ತಿರಲಿಲ್ಲ, ಬೆಂಕಿ ಬೀಳದೆ ಇದ್ದಿದ್ದರೆ ಸತ್ಸಂಗಕ್ಕೆ ಭಂಗ ಬರುತ್ತಿರಲಿಲ್ಲ ಎಂದು ಅವರಿಬ್ಬರೂ ಯೋಚಿಸಿದರು.

ನಂತರ ಅವರು ಮರು ಮಾತಾಡದೆ ಸತ್ಸಂಗದಲ್ಲಿ ಹೋಗಿ ಕುಳಿತರು. ಅವರ ಮಗಳು ಗುಡಿಸಿಲಿನ ಬಳಿ ಹೋಗಿ ಉಳಿದಿದ್ದ ಮಂಚವನ್ನು ಬೆಂಕಿಗೆ ಹಾಕಿ ಬಂದಳು. ರಾತ್ರಿಯ ಊಟ ಆಶ್ರಮದಲ್ಲಾಯಿತು. ಮೂವರೂ ಯಾವ ಚಿಂತೆಯೂ ಇಲ್ಲದೆ ಸುಟ್ಟ ಗುಡಿಸಲಿನ ಬಳಿಯ ಮರದ ಕೆಳಗೆ ಮಲಗಿಕೊಂಡರು. ಭಕ್ತಿ ಮಾಡಲು ಬೆಳಿಗ್ಗೆ ಬೇಗ ಎದ್ದರು. ಅವರ ಸುತ್ತಲೂ ಒಂದು ಗುಡಿಸಲು ನಿರ್ಮಾಣವಾಗಿತ್ತು. ಪಕ್ಕದಲ್ಲಿ ದವಸ ಧಾನ್ಯಗಳು ತುಂಬಿದ್ದ ಮಣ್ಣಿನ ಮಡಿಕೆಗಳು ಓರಣವಾಗಿ ಜೋಡಿಸಲ್ಪಟ್ಟಿದ್ದವು. ಅದೇ ಕ್ಷಣ ಆಕಾಶವಾಣಿ ಆಯ್ತು ಇದೆಲ್ಲಾ ಪರಮಾತ್ಮನ ಕೃಪೆಯಿಂದಾಗಿದೆ. ನೀವು ಈ ಗುಡಿಸಲಿನಲ್ಲಿಯೇ ಇರಿ, ಇದು ಗುರುಗಳ ಆಜ್ಞೆಯಾಗಿದೆ. ಮೂವರು ಹೇಳಿದರು ನಿಮ್ಮ ಆಜ್ಞೆಯಂತೆ ಗುರುಗಳೇ. ಸೂರ್ಯೋದಯದ ನಂತರ ಊರಿನ ಜನ ನೋಡಿ ಆಶ್ಚರ್ಯವೋ ಆಶ್ಚರ್ಯ. ಏಕೆಂದರೆ ಒಂದು ವಾರ ಶ್ರಮಿಸಿದರೂ ಅಂಥಾ ಗುಡಿಸಲನ್ನು ನಿರ್ಮಿಸಲು ಸಾಧ್ಯವಿರಲಿಲ್ಲ. ಬೆಳಗಾಗುವುದರೊಳಗೆ ಗುಡಿಸಲು ಸಿದ್ಧವಾಗಿತ್ತು. ಅವರೆಲ್ಲಾ ಗುರುಗಳ ಚಮತ್ಕಾರದಿಂದ ಆಗಿದೆ ಎಂದರು. ಇದೆಲ್ಲವನ್ನೂ ನೋಡಿ ಎಲ್ಲರೂ ಗುರುಗಳಿಂದ ಬಳಿ ದೀಕ್ಷೆ ಪಡೆಯಲು ಇಚ್ಛಿಸಿದರು. ಸಾವಿರಾರು ನಗರವಾಸಿಗಳು ದೀಕ್ಷೆಪಡೆದರು. (ಈ ಲೀಲೆಯನ್ನು ಕಬೀರ್ ಪರಮೇಶ್ವರರು ಕಾಶಿಯಲ್ಲಿ ಪ್ರಕಟವಾದ ಸುಮಾರು 200 ವರ್ಷಗಳ ಪೂರ್ವದಲ್ಲಿ ಮಾಡಿದರು. ಆ ಸಮಯದಲ್ಲಿ ಭಕ್ತ ನಾಮದೇವರಿಗೂ ದೀಕ್ಷೆ ನೀಡಿದ್ದರು).

ಮೇಲೆ ತಿಳಿಸಿದ ಕತೆಯನ್ನು ಕೇಳಿದ ವೇಶ್ಯೆ ಚಂಪಾಕಲೀಯು ತನ್ನ ಮನಸ್ಸಿನಲ್ಲಿದ್ದ ಭಯವೂ ಸಮಾಪ್ತವಾಯ್ತು. ಮತ್ತು ತನ್ನ ಎಲ್ಲಾ ಸಂಪತ್ತನ್ನು ಪರಮಾತ್ಮ ಕಬೀರ ಗುರುಗಳಿಗೆ ಸಮರ್ಪಿಸಿದಳು, ಪರಮಾತ್ಮನೆಂದರು. "ಮಗಳೇ, ನೀನೇ ನನ್ನವಳಾದ ಮೇಲೆ ಈ ಸಂಪತ್ತೆಲ್ಲವೂ ನನ್ನದೇ, ಆ ಸಂಪತ್ತಿನಲ್ಲಿ ನಿನ್ನ ಜೀವನ ನಿರ್ವಹಣೆಗಾಗಿ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೋ. ಮಿಕ್ಕಿದ್ದನ್ನು ದಾನ ಮಾಡು". ಭಕ್ತೆ ಚಂಪಾಕಲೀ ಹಾಗೆಯೇ ಮಾಡಿದಳು. ಮನೆ ಇಟ್ಟುಕೊಂಡು ಉಳಿದ ಹಣದಲ್ಲಿ ಬಹುಪಾಲನ್ನು ಗುರುಗಳ ಆಜ್ಞೆಯಂತೆ ದಾನ ಮಾಡಿದಳು.

## "ಕಬೀರರ ಮೂಲಕ ಶಿಷ್ಯರಿಗೆ ಪರೀಕ್ಷೆ"

ಕಬೀರ್ ಪರಮೇಶ್ವರರ ಅನೇಕ ಲೀಲೆಗಳನ್ನು ನೋಡಿ **64** ಲಕ್ಷ ಜನರು ಅವರ ಶಿಷ್ಯರಾಗಿದ್ದರು. ಕಬೀರರು ಭೂತ, ವರ್ತಮಾನ ಹಾಗೂ ಭವಿಷ್ಯವನ್ನು ತಿಳಿದಿರುವವರು. ನನ್ನ ಆಶೀರ್ವಾದದಿಂದ ಆದ ಲಾಭಗಳು ಹಾಗೂ ನಾನು ಮಾಡುವ ಚಮತ್ಕಾರದಿಂದ ಇವರೆಲ್ಲಾ ನನ್ನ ಭಕ್ತರಾಗಿದ್ದಾರೆ ಎಂದು ತಿಳಿದರು. ನಾನೇ ಪರಮಾತ್ಮ ಎಂದು ಇವರಿಗೆ ನನ್ನ ಮೇಲೆ ನಂಬಿಕೆ ಇಲ್ಲ. ಆದರೆ ಬೇರೆಯವರನ್ನು ನೋಡಿ ಕಬೀರರು ನಮ್ಮ ಸದ್ಗುರುಗಳು ಇವರೇ ಸ್ವತಃ ಪರಮಾತ್ಮ ಎಂದು ಖಂಡಿತ ಹೇಳುತ್ತಾರೆ. ತಮ್ಮ ಲಾಭಗಳ ಬಗ್ಗೆ ಹೇಳುತ್ತಾರೆ. ಒಂದು ದಿನ ಕಬೀರರು ಅವರ ಶಿಷ್ಯರನ್ನೆಲ್ಲಾ ಪರೀಕ್ಷಿಸಲು ನಿರ್ಧರಿಸಿದರು. ಇವರಿಗೆಲ್ಲಾ ಎಷ್ಟರ ಮಟ್ಟಿಗೆ ಜ್ಞಾನವಿದೆ? ನಿಜವಾಗಲೂ ಗುರುವಿನ ಮೇಲೆ ನಂಬಿಕೆ ಇಲ್ಲದಿದ್ದರೆ ಇವರಿಗೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಸುಮ್ಮನೆ ಇಷ್ಟು ಶಿಷ್ಯರಿರುವುದು ವ್ಯರ್ಥ ಎಂದು ಯೋಚಿಸಿ, ಒಂದು ಉಪಾಯವನ್ನು ಹೂಡಿದರು. ತನ್ನ ಪರಮ ಶಿಷ್ಯನಾದ ರವಿದಾಸನನ್ನು ಕರೆದು ಒಂದು ಆನೆಯನ್ನು ಬಾಡಿಗೆಗೆ ತರಲು ಹೇಳಿದರು.

ಕಾಶಿ ನಗರದಲ್ಲಿ ಒಬ್ಬಳು ಸುಂದರ ವೇಶ್ಯೆ ಇದ್ದಳು. ಅವಳ ಮನೆಯ ಸ್ವಲ್ಪದೂರದಲ್ಲಿ ಕಬೀರರ ಒಬ್ಬ ಶಿಷ್ಯನಿದ್ದನು. ಕಬೀರರು ಅವನ ಅಂಗಳದಲ್ಲಿ ರಾತ್ರಿಯ ಸಮಯ ಸತ್ಸಂಗ ಮಾಡುತ್ತಿದ್ದರು. ಅದೇ ದಿನ ಆ ವೇಶ್ಯೆಯ ಬಳಿ ಗ್ರಾಹಕರು ಇರಲಿಲ್ಲ. ಸತ್ಸಂಗದ ವಚನಗಳನ್ನು ಕೇಳಲು ಅವಳು ತನ್ನ ಮನೆಯ ಮಹಡಿಯಲ್ಲಿ ಕುರ್ಚಿ ಹಾಕಿಕೊಂಡು ಕುಳಿತಳು. ಪೂರ್ತಿ ರಾತ್ರಿ ಸತ್ಸಂಗ ಕೇಳಿದಳು ಮತ್ತು ಎದ್ದು ಸತ್ಸಂಗ ಸ್ಥಳಕ್ಕೆ ಬಂದಳು. ಹಾಗೂ ಪರಮಾತ್ಮ ಕಬೀರರಿಗೆ ತನ್ನ ಪರಿಚಯ ನೀಡಿದಳು. ಮತ್ತು ಗುರುಗಳೇ ನನ್ನಂಥ ಪಾಪಿಯ ಉದ್ಧಾರವಾಗಬಹುದೇ? ನಾನು ನನ್ನ ಜೀವನದಲ್ಲಿ ಮೊದಲ ಬಾರಿ ಆತ್ಮ ಕಲ್ಯಾಣದ ಬಗ್ಗೆ ಕೇಳಿದೆ. ಈಗ ನನ್ನ ಬಳಿ ಎರಡೆ ವಿಕಲ್ಪಗಳಿವೆ. ಒಂದಂತು ಉದ್ಧಾರಾ ವಾಗಬೇಕು ಅಥವಾ ನಾನು ಆತ್ಮಹತ್ಯೆ ಮಾಡಿಕೊಂಡು ಪಾಪಗಳ ಪ್ರಾಯಶ್ಚಿತ್ತ ಮಾಡಿಕೊಳ್ಳುವೆ. ಪರಮಾತ್ಮ ಕಬೀರರು ಹೇಳಿದರು ಮಗಳೇ ಆತ್ಮಹತ್ಯೆ ಮಾಡಿಕೊಳ್ಳುವುದು ಮಹಾಪಾಪ. ಭಕ್ತಿ ಮಾಡುವುದರಿಂದ ಪರಮಾತ್ಮ ಎಲ್ಲ ಪಾಪವನ್ನು ನಾಶ ಮಾಡುತ್ತಾನೆ. ನೀನು ನನ್ನಿಂದ ದೀಕ್ಷೆ ಪಡೆದು ಸಾಧನೆ ಮಾಡು ಮತ್ತು ಭವಿಷ್ಯದಲ್ಲಿ ಅಂಥ ಪಾಪಗಳನ್ನು ಮಾಡಬೇಡಾ. ಆ ಸಹೋದರಿಯೂ ಪ್ರತಿಜ್ಞೆ ಮಾಡಿದಳು ಮತ್ತು ಪರಮಾತ್ಮ ಕಬೀರರಿಂದ ದೀಕ್ಷೆ ಪಡೆದು ಭಕ್ತಿ ಮಾಡಲಾರಂಭಿಸಿದಳು ಮತ್ತು ಪರಮಾತ್ಮ ಸತ್ಸಂಗವನ್ನು ಎಲ್ಲಿ ಮಾಡುತ್ತಿದ್ದರು ಅಲ್ಲಿಯೇ ಸತ್ಸಂಗ ಕೇಳಲು ಹೋಗುತ್ತಿದ್ದಳು. ಆ ಕಾರಣದಿಂದ ಸತ್ಸಂಗಕ್ಕೆ ಬರುವ ಜನರಿಗೆ ಅವಳು ಬರುವುದು ಇಷ್ಟವಾಗುತ್ತಿರಲಿಲ್ಲ. "ನಿನ್ನ ಕಾರಣದಿಂದ ಗುರುಗಳಿಗೆ ಕೆಟ್ಟ ಹೆಸರು ಬರುತ್ತಿದೆ. ನೀನು ಸತ್ಸಂಗಕ್ಕೆ ಬರಬೇಡ. ಗುರುಗಳ ಮುಂದೆಯೇ ನೀನು ಕುಳಿತುಕೊಳ್ಳುವುದು ಸರಿಯಲ್ಲ, ಅಲ್ಲಿ ಕುಳಿತುಕೊಳ್ಳಬೇಡ" ಎಂದು ಹೇಳಿದರು. ಹುಡುಗಿಯು ಇದನ್ನೆಲ್ಲಾ ಅಳುತ್ತಾ ಗುರುಗಳಿಗೆ ತಿಳಿಸಿದಳು. ಆಗ ಗುರುಗಳು, "ಮಗಳೇ, ನೀನು ಸತ್ಸಂಗಕ್ಕೆ ಬರುತ್ತಿರು. ಕಬೀರರು ಸತ್ಸಂಗದ ವಚನಗಳ ಮೂಲಕ ಸ್ಪಷ್ಟಪಡಿಸಿದರೆನೆಂದರೆ. ಸಾಬೂನು ಮತ್ತು ನೀರಿಲ್ಲದೆ ಕೊಳೆ ಬಟ್ಟೆ ಹೇಗೆ ಶುದ್ಧವಾಗುವುದು? ಪಾಪಿಯು ಸತ್ಸಂಗದಿಂದ ಹಾಗೂ ಗುರುವಿನಿಂದ ದೂರವಿದ್ದು ಆತ್ಮಕಲ್ಯಾಣ ಹೇಗೆ ಮಾಡಿಕೊಳ್ಳಲು ಸಾಧ್ಯ? ನಿಜವಾದ ಭಕ್ತನು ರೋಗಿಯನ್ನು ಹಾಗೂ ವೇಶ್ಯೆಯನ್ನು ನೋಡಿ ಅಸಹ್ಯ ಪಟ್ಟುಕೊಳ್ಳುವುದಿಲ್ಲ, ಬದಲಾಗಿ ಗೌರವಿಸುತ್ತಾನೆ. ಅವರೊಂದಿಗೆ ಜ್ಞಾನ ಚರ್ಚೆಮಾಡಿ ಮೋಕ್ಷಪ್ರಾಪ್ತಿಗಾಗಿ ಪ್ರೇರೇಪಿಸುತ್ತಾನೆ". ಪರಮಾತ್ಮ ಕಬೀರರು ಪ್ರತಿಬಾರಿ ಹೇಳಿದರೂ ಭಕ್ತರು ಆ ಹುಡುಗಿಯನ್ನು ಸತ್ಸಂಗಕ್ಕೆ ಬರಲು ನಿರಾಕರಿಸುತ್ತಿದ್ದರು ಮತ್ತು ನಿನ್ನ ಕಾರಣದಿಂದ ಗುರುಗಳಿಗೆ ಕೆಟ್ಟ ಹೆಸರು ಬರುತ್ತಿದೆ. ಕಾಶಿಯ ಜನರೆಲ್ಲಾ 'ನಿಮ್ಮ ಗುರುಗಳು ಎಂಥಹವರು? ವೇಶ್ಯೆಯಂಥಾವರೆಲ್ಲಾ ಅವರ ಬಳಿ ಹೋಗುತ್ತಾರೆ?' ಎಂದು ಹೇಳುತ್ತಾರೆ.

ಕಬೀರರು, "ಮಗಳೇ ನನ್ನ ಜೊತೆ ಆನೆಯ ಮೇಲೆ ಕುಳಿತು ಬರುವೆಯಾ?" ಎಂದು ಕೇಳಿದರು. ಆಗ ಅವಳು "ನಿಮ್ಮ ಆಜ್ಞೆಯಂತೆ ಬರುತ್ತೇನೆ" ಎಂದಳು. ಮರುದಿನ ಬೆಳಿಗ್ಗೆ **10:00**

ಗಂಟೆಗೆ ಮೂವರು ಆನೆ ಮೇಲೆ ಕುಳಿತು ಕೊಂಡು ನಗರದ ಮುಖ್ಯ ಮಾರುಕಟ್ಟೆಯಿಂದ ಹೊರಟರು. ಸಂತ ರವಿದಾಸರು ಆನೆಯನ್ನು ನಡೆಸುತ್ತಿದ್ದರು. ಹುಡುಗಿ ರವಿದಾಸರ ಹಿಂದೆ ಕಬೀರರ ಮುಂದೆ ಅಂದರೆ ಇಬ್ಬರ ಮಧ್ಯದಲ್ಲಿ ಕುಳಿತ್ತಿದ್ದಳು. ನಂತರ ಕಬೀರರು ಗಂಗೆಯ ನೀರನ್ನು ಒಂದು ಬಾಟಲಿಯಲ್ಲಿ ತುಂಬಿಕೊಂಡು ಬಾಯಿಂದ ಸ್ವಲ್ಪ-ಸ್ವಲ್ಪ ಕುಡಿಯಲಾರಂಭಿಸಿದರು. ಕಬೀರರು ಸಾರಾಯಿ ಕುಡಿಯುತ್ತಿರುವರೆಂದು ಜನರು ಭಾವಿಸಿದರು. ನಶೆಯಲ್ಲಿ ವೇಶ್ಯೆಯ ಜೊತೆ ಎಲ್ಲರೆದುರೂ ತಿರುಗಾಡುತ್ತಿದ್ದಾನೆ. ಕಾಶಿಯ ಜನರು ಒಬ್ಬರಿಗೊಬ್ಬರು ಹೇಳುತ್ತಿರುವರು ನೋಡಿ ನೇಕಾರ ಕಬೀರ ದೊಡ್ಡ ದೊಡ್ಡ ಉಪದೇಶ ನೀಡುತ್ತಿದ್ದ, ಇಂದು ಇವನ ಗುಟ್ಟು ರಟ್ಟಾಗಿದೆ. ಇಂಥ ಜನ ಸತ್ಸಂಗದ ನೆಪದಲ್ಲಿ ಇಂಥ ಕೆಲಸ ಮಾಡುತ್ತಾರೆ. ಕಾಶೀಯ ಜನರು ಗುರುಗಳ ಭಕ್ತರನ್ನೆಲ್ಲಾ ಎಳೆದೆಳೆದು ತಂದು ಆ ದೃಶ್ಯವನ್ನು ತೋರಿಸಿದರು. ನೋಡಿ ನಿಮ್ಮ ಪರಮಾತ್ಮನ ಕೆಲಸ ಸಾರಾಯಿ ಕುಡಿಯುತ್ತಿರುವನು, ವೇಶ್ಯೆಯ ಜೊತೆ ಊರೆಲ್ಲಾ ಸುತ್ತಾಡುತ್ತಿರುವನು. ಈ ಲೀಲೆಯನ್ನು ನೋಡಿ ಆ 64 ಲಕ್ಷ ನಕಲೀ ಭಕ್ತರೆಲ್ಲಾ ಕಬೀರರನ್ನು ತ್ಯಜಿಸಿ ದೂರವಾದರು. ಮೊದಲಿನ ಸಾಧನೆಯನ್ನು ಮಾಡಲಾರಂಭಿಸಿದರು. ಸಮಾಜದ ಮಾತನ್ನು ನಂಬಿ ಗುರುಗಳಿಂದ ವಿಮುಖರಾದರು.

ದಿಲ್ಲಿಯ ರಾಜನಾದ ಸಿಕಂದರ್ ಲೋಧಿಯು ಕಾಶಿಗೆ ಬಂದಾಗ ಪರಮಾತ್ಮ ಕಬೀರರು ಇಂಥಾ ಲೀಲೆಗಳನ್ನು ಮಾಡುತ್ತಿದ್ದರು. ಹೀಗೆ ಆನೆಯ ಮೇಲೆ ಕುಳಿತು ವೇಶ್ಯೆಯ ಜೊತೆ ಸುತ್ತಾಡಿದ್ದನ್ನು ಕೂಡ ಜನರು ಸಿಕಂದರ್ ಲೋಧಿಗೆ ದೂರನ್ನು ಕೊಟ್ಟರು. ಲೋಧಿಯು ಕಬೀರರನ್ನು ಬಂಧಿಸಿ, ಕೈ ಕಾಲುಗಳನ್ನು ಕಬ್ಬಿಣದ ಸರಪಳಿಯಿಂದ ಬಿಗಿದು, ಕೊರಳಿಗೆ ಕಬ್ಬಿಣದ ಸರಪಳಿ ಸುತ್ತಿ, ಗಂಗಾನದಿಯಲ್ಲಿ ಮುಳುಗಿಸಿ ಬರುವಂತೆ ಸೈನಿಕರಿಗೆ ಆದೇಶಿಸಿದನು. ಸೈನಿಕರು ರಾಜನು ಹೇಳಿದಂತೆ ಕಬೀರರನ್ನು ಬಂಧಿಸಿ, ಕೈಕಾಲುಗಳಿಗೆ ಕೊರಳಿಗೆ ಸರಪಳಿ ಬಿಗಿದು. ದೋಣಿಯಲ್ಲಿ ಕುಳ್ಳಿರಿಸಿಕೊಂಡು ಗಂಗಾನದಿಯ ಮಧ್ಯಭಾಗಕ್ಕೆ ಹೋಗಿ, ಅವರನ್ನು ನದಿಗೆ ತಳ್ಳಿ ಬಂದರು. ಒಂದೇ ಕ್ಷಣದಲ್ಲಿ ಅವರಿಗೆ ಕಟ್ಟಿದ್ದ ಸರಪಳಿ ಕಳಚಿಕೊಂಡು ನೀರಿಗೆ ಬಿದ್ದಿತು. ಕಬೀರರು ನೀರಿನ ಮೇಲೆ ಬಂದು ಪದ್ಮಾಸನ ಹಾಕಿ ಕುಳಿತರು. ಅವರ ಕೆಳಗೆ ನೀರು ಸುಳಿಯಂತೆ ಸುತ್ತುತ್ತಿತ್ತು. ಪರಮಾತ್ಮ ನೀರಿನ ಮೇಲೆ ಆರಾಮವಾಗಿ ಕುಳಿತ್ತಿದ್ದರು. ಸ್ವಲ್ಪ ಸಮಯದ ಬಳಿಕ ಪರಮಾತ್ಮ ಕಬೀರರು ಗಂಗಾ ನದಿಯ ದಡಕ್ಕೆ ಬಂದರು. ಸೈನಿಕರು ಶೇಖ್‌ತಕೀಯ ಆದೇಶದಿಂದ ಕಬೀರರನ್ನು ಹಿಡಿದು ದೋಣಿಯಲ್ಲಿ ಕುಳಿಸಿಕೊಂಡು, ಕಬೀರ ಪರಮಾತ್ಮನ ಕೈ ಕಾಲಿಗೆ ಸೊಂಟಕ್ಕೆ ಭಾರವಾದ ಕಲ್ಲು ಕಟ್ಟಿ ಗಂಗಾ ನದಿಯಲ್ಲಿ ತಳ್ಳಿದರು. ಹಗ್ಗ ಕಟ್ಟಾಗಿ ಕಲ್ಲುಗಳು ಮುಳುಗಿದವು. ಕಬೀರ ಪರಮೇಶ್ವರರು ನೀರಿನ ಮೇಲೆ ಕುಳಿತ್ತಿದ್ದರು. ಕಬೀರರು ಗಂಗಾ ನದಿಯಲ್ಲಿ ಮುಳುಗದಿದ್ದಾಗ ಶೇಖ್‌ತಕೀ ಕೊಪಗೊಂಡು ರಾಜನಿಗೆ ಹೇಳಿ ಫೀರಂಗಿ ಗುಂಡು ಹಾರಿಸಲು ಆದೇಶಿಸಿದನು.

ಮೊದಲು ಸೈನಿಕರು ಕಬೀರರ ಮೇಲೆ ಕಲ್ಲು ತೂರಿದರು, ಗುಂಡು ಹಾರಿಸಿದರು, ಬಾಣ ಹೊಡೆದರು. ಕೊನೆಯಲ್ಲಿ ಕಬೀರರ ಮೇಲೆ ಫೀರಂಗಿ ಗುಂಡು 12 ಗಂಟೆಗಳ ವರೆಗೆ ನಿರಂತರ ಹಾರಿಸಿದರು. ಒಂದು ಕಲ್ಲೂ ಕಬೀರರಿಗೆ ತಾಕಲಿಲ್ಲ. ಗುಂಡು ಹಾರಿಸಲು ಪ್ರಾರಂಭಿಸಿದರು. ಯಾವುದಾದರೂ ಒಂದು ಅಲ್ಲೇ ದಡದಲ್ಲಿ ಬೀಳುತ್ತಿತ್ತು. ಯಾವುದೋ ದೂರ ಕೆರೆಯಲ್ಲಿ ಬೀಳುತ್ತಿತ್ತು. ಒಂದು ಗುಂಡು, ಕಲ್ಲು, ಬಾಣ ಕಬೀರರ ಬಳಿಯೂ ಸುಳಿಯಲಿಲ್ಲ. ಇಷ್ಟಾದರೂ ಕಾಶಿಯ ಜನರಿಗೆ ಬುದ್ಧಿ ಬರಲಿಲ್ಲ. ಪರಮೇಶ್ವರ ಕಬೀರರು 'ಇವರೆಲ್ಲಾ ಪೆದ್ದರು' ಎಂದು ಯೋಚಿಸುತ್ತಾ ಗಂಗಾನದಿಯಲ್ಲಿ ಮುಳುಗಿ ಭಕ್ತ ರವಿದಾಸನ ಮನೆಯಲ್ಲಿ ಪ್ರಕಟರಾದರು. ಜನರೆಲ್ಲಾ ಕಬೀರರು ನೀರಲ್ಲಿ ಮುಳುಗಿ ಸತ್ತು ಹೋದರು ಎಂದು ತಿಳಿದರು. ಅವರ ಮೇಲೆ ಕೆಸರು ತುಂಬಿಕೊಂಡಿರಬಹುದು, ಎಲ್ಲರೂ ತಮ್ಮ ತಮ್ಮಲ್ಲೇ ಸಂತಸ ಹಂಚಿಕೊಂಡರು ಕುಣಿಯುತ್ತಾ ನಗರಕ್ಕೆ ಹೋರಟರು. ಶೇಖ್‌ತಖಿಯು ಕಬೀರರ ಭಕ್ತ ರವಿದಾಸರಿಗೆ, ಕಬೀರರ ಸಾವಿನ ಸುದ್ದಿ ಹೇಳಲು ಅವರ ಮನೆಗೆ ತೆರಳಿದನು. ಸಂತ ರವಿದಾಸರ ಮನೆಗೆ ಹೋಗಿ ನೋಡಿದಾಗ ಅಲ್ಲಿ ಕಬೀರರು ತಂಬೂರಿಯನ್ನು ಹಿಡಿದು ವಚನಗಳನ್ನು ಹಾಡುತ್ತಿದ್ದರು.

ಆ ದೃಶ್ಯವನ್ನು ನೋಡಿ ಶೇಖ್‌ತಖಿಗೆ ಮಾತೇ ಹೊರಡಲಿಲ್ಲ. ತಕ್ಷಣವೇ ಅಲ್ಲಿಂದ ಓಡಿ ಹೋಗಿ ಸಿಕಂದರ್ ಲೋಧಿಗೆ ಚಾಡಿ ಹೇಳಿದನು. ಕಬೀರರು ಎಲ್ಲರ ಕಣ್ಣು ತಪ್ಪಿಸಿ, ರವಿದಾಸರ ಮನೆಗೆ ಹೋಗಿ ಕುಳಿತಿದ್ದಾನೆ ಎಂದು ಹೇಳಿದನು. ಲೋಧಿಯು ತಕ್ಷಣವೇ ತಾನೇ ಖುದ್ದಾಗಿ ರವಿದಾಸರ ಮನೆಗೆ ಬಂದನು. ಆಗ ಕಬೀರರು ಅಲ್ಲಿಂದ ಅಂತರ್ಧ್ಯಾನರಾಗಿ ಗಂಗಾ ನದಿಯ ಮಧ್ಯದಲ್ಲಿ ಪದ್ಮಾಸನ ಹಾಕಿ ಪೃಥ್ವಿ ಮೇಲೆ ಕುಳಿತಂತೆ ಕುಳಿತರು. ಕಬೀರರು ರವಿದಾಸನ ಮನೆಯಲ್ಲಿ ಇಲ್ಲದ್ದನ್ನು ಕಂಡ ಲೋಧಿಯು, 'ಕಬೀರರು ಎಲ್ಲಿ' ಎಂದು ಪ್ರಶ್ನಿಸಿದನು. ಆಗ ರವಿದಾಸನು "ಮಹಾರಾಜರೇ, ಅವರು ಪೂರ್ಣ ಪರಮಾತ್ಮ, ಅವರೇ ಅಲಖ್ ಅಲ್ಲಾಹ್. ನೀವು ಅವರನ್ನು ಗುರುತಿಸಿ, ಅವರು ತಮ್ಮ ಇಚ್ಛೆಯಂತೆ ನಡೆಯುವವರು. ಅವರು ಎಲ್ಲಿಗೆ ಬೇಕಾದರೂ ತೆರಳಲು ಸಾಧ್ಯ. ಅವರು ಎಲ್ಲಿಗೆ ಹೋಗಿದ್ದಾರೆಂದು ನನಗೇನು ಗೊತ್ತು? ಅವರು ಎಲ್ಲರ ಜೊತೆಯಲ್ಲೂ ಇರುತ್ತಾರೆ" ಎಂದನು. ಅಷ್ಟರಲ್ಲಿ ಯಾರೋ ಬಂದು, 'ಕಬೀರರು ಗಂಗಾ ನದಿಯ ನೀರ ಮೇಲೆ ಪದ್ಮಾಸನ ಹಾಕಿ ಕುಳಿತು ಭಕ್ತಿ ಮಾಡುತ್ತಿದ್ದಾರೆ ಎಂದು ತಿಳಿಸಿದರು. ರಾಜ ಮತ್ತು ಊರ ಜನರೆಲ್ಲಾ ಗಂಗಾ ನದಿಯ ಬಳಿ ಬಂದರು. ಅಂಬಿಗರನ್ನು ಕರೆದು ದೋಣಿಯಲ್ಲಿ ಕುಳಿತು ದಡದ ಬಳಿ ಬರಬೇಕೆಂದು ಲೋಧಿಯು ಕಬೀರರಿಗೆ ಕರೆ ಕಳುಹಿಸಿದನು. ಅಂಬಿಗರು ಕಬೀರರ ಬಳಿ ಹೋಗಿ ರಾಜನ ಆದೇಶ ತಿಳಿಸಿದರು. ಪರಮೇಶ್ವರ ಕಬೀರರು ದೋಣಿಯಲ್ಲಿ ಕುಳಿತು ದಡಕ್ಕೆ ಬಂದರು.

ಸಿಕಂದರ್ ಲೋಧಿಯು ಮತ್ತೆ ಕಬೀರರನ್ನು ಬಂಧಿಸಿ ಆನೆಯಿಂದ ತುಳಿಸಲು ಆಜ್ಞೆ ಮಾಡಿದನು. ಸುತ್ತಲೂ ಜನರು ಸೇರಿದ್ದರು. ಲೋಧಿಯು ಎತ್ತರವಾದ ಸ್ಥಳದಲ್ಲಿ ಕುಳಿತಿದ್ದನು. ಮಾವುತನು ಆನೆಯನ್ನು ಕರೆತಂದು ಅದಕ್ಕೆ ಮದ್ಯವನ್ನು ಕುಡಿಸಿದನು. ಕಬೀರರ ಕೈ ಕಾಲು ಕಟ್ಟಿಹಾಕಿ ನೆಲದ ಮೇಲೆ ಮಲಗಿಸಿದ್ದರು. ಕಬೀರರನ್ನು ಕೊಲ್ಲಲು ಮಾವುತನು ಆನೆಯನ್ನು ಕಬೀರರ ಕಡೆಗೆ ಓಡಿಸಿದನು, ಆನೆಯು ಹತ್ತಿರ ಬಂದ ತಕ್ಷಣ ಕಬೀರರು ಆನೆಗೆ ಸಿಂಹದ ರೂಪವನ್ನು ತೋರಿಸಿದರು. ಅದು ಕೇವಲ ಆನೆಗೆ ಕಾಣಿಸುತ್ತಿತ್ತು. ಸಿಂಹವನ್ನು ನೋಡಿದಾಕ್ಷಣ ಆನೆ ಹೆದರಿ ಕಬೀರರಿಂದ ದೂರ ಓಡಿತು. ಮಾವುತನು ಎಷ್ಟೇ ಪ್ರಯತ್ನ ಪಟ್ಟರೂ ಅವನ ಮಾತನ್ನು ಕೇಳಲಿಲ್ಲ. ಮಾವುತನು ತನ್ನ ಕೆಲಸ ಹೋಗುವುದೆಂಬ ಭಯದಿಂದ ಆನೆಯನ್ನು ಮತ್ತೆ ಮತ್ತೆ ಕಬೀರರ ಬಳಿ ಓಡಿಸಿದನು. ಆಗ ಕಬೀರರು ಮಾವುತನಿಗೂ ಸಿಂಹದ ರೂಪವನ್ನು ತೋರಿಸಿದರು. ಅದನ್ನು ನೋಡಿದ ಕೂಡಲೇ ಮಾವುತನ ಕೈಯಿಂದ ಅಂಕುಶ ಕೆಳಗೆ ಬಿತ್ತು. ಆನೆಯು ಅಲ್ಲಿಂದ ಓಡಿ ಹೋಯಿತು. ಪರಮೇಶ್ವರ ಕಬೀರರನ್ನು ಬಂಧಿಸಿದ್ದ ಹಗ್ಗ ತಾನಾಗಿ ಕಳಚಿ ಬಿದ್ದಿತು. ಕಬೀರರು ಎದ್ದು ನಿಂತರು ಮತ್ತು ಮೈ ಮುರುದಾಗ. ಇದ್ದಕ್ಕಿದ್ದಂತೆ ವಿರಾಟರೂಪವಾಗಿ ಬೆಳೆದರು. ಅವರ ತಲೆಯು ಆಕಾಶವನ್ನು ಮುಟ್ಟುತ್ತಿದೆಯೋನೋ ಎಂದು ಅನ್ನಿಸುತ್ತಿತ್ತು. ಅವರ ದೇಹದಿಂದ ಪ್ರಕಾಶ ಹೊರ ಹೊಮ್ಮುತ್ತಿತ್ತು. ಸಿಕಂದರ್ ಲೋಧಿಗೆ ಭಯವಾಗಿ ಕಂಪಿಸಲು ಪ್ರಾರಂಭಿಸಿದನು. ನಂತರ ಪರಮೇಶ್ವರ ಕಬೀರರ ಚರಣಗಳಿಗೆರಗಿ ಕ್ಷಮಿಸುವಂತೆ ಕೇಳಿಕೊಂಡನು. ನಂತರ "ಹೇ ದೇವ, ನೀವೇ ಪರಮೇಶ್ವರ, ನೀವೇ ನನ್ನನ್ನು ಉದ್ಧರಿಸುವವರು. ನನ್ನಿಂದ ದೊಡ್ಡ ತಪ್ಪಾಗಿದೆ. ನಾನು ಈಗ ನಿಮ್ಮನ್ನು ಗುರುತಿಸಿದ್ದೇನೆ. ನೀವೇ ಸ್ವತಃ ಅಲ್ಲಾಹ್. ಭೂಮಿಯ ಮೇಲೆ ಬಂದಿರುವಿರಿ" ಎಂದು ಹೇಳಿದನು. ಆಗ ಪರಮೇಶ್ವರ ಕಬೀರರು ಕಾಶಿ ನಗರಕ್ಕೆ ಬಂದು ಆ ವೇಶ್ಯೆಯ ಮನೆಯ ಅಂಗಳದಲ್ಲಿ ಕುಳಿತಳು. ಆ ಹುಡುಗಿ ಪರಮೇಶ್ವರ ಕಬೀರರ ಕಾಲನ್ನು ಒತ್ತಲು ಪ್ರಾರಂಭಿಸಿದಳು. ಅವರ ಕಾಲನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡಳು.

**ಸೂಚನೆ :-** ಈ ವಾಣಿಗಳ ಶಬ್ದಾರ್ಥವನ್ನು ಸಂಕ್ಷಿಪ್ತವಾಗಿ ಮೇಲೆ ತಿಳಿಸಲಾಗಿದೆ.

ಫಿರ್ ಗಣಿಕಾ ಕೈ ಸಂಗ್ ಚಲೆ, ಶೀಶೀ ಭರೀ ಶರಾಬ್ ।
ಗರೀಬ್‌ದಾಸ್ ಉಸ್ ಪುರೀ ಮೆಂ, ಜುಲಹಾ ಭಯಾ ಖರಾಬ್ ॥ 726 ॥
ತಾರೀ ಬಾಜೀ ಪುರೀ ಮೆಂ, ಭಿಷ್ಟ್ ಜುಲಹದೀ ನೀಚ್ ।
ಗರೀಬ್‌ದಾಸ್ ಗನಿಕಾ ಸಜೀ, ದಹೂಂ ಸಂತೌಂ ಕೈ ಬೀಚ್ ॥ 727 ॥

ಗಾವತ್ ಬೈಂನ್ ಬಿಲಾಸ್ ಪದ್, ಗಂಗಾಜಲ್ ಪೀವಂತ್ ।
ಗರೀಬ್‌ದಾಸ್ ವಿಹ್ವಲ್ ಭಯೇ, ಮತವಾಲೇ ಘೂಮಂತ್ ॥ 728 ॥
ಭಡುವಾ ಭಡುವಾ ಸಬ್ ಕಹೈಂ, ಕೋಈ ನ ಜಾನ್ಯೆಂ ಖೋಜ್ ।
ದಾಸ್ ಗರೀಬ್ ಕಬೀರ್ ಕರಮ್, ಬಾಂಟತ್ ಶಿರಕಾ ಬೋಝ್ ॥ 729 ॥
ದೇಖೋ ಗನಿಕಾ ಸಂಗಿ ಲಈ, ಕಹತೇ ಕೌಂಮ್ ಛತೀಸ್ ।
ಗರೀಬ್‌ದಾಸ್ ಇಸ್ ಜುಲಹದೀ ಕಾ, ದರ್ಶನ್ ಆನ್ ಹದೀಸ್ ॥ 730 ॥
ಶಾಹ್ ಸಿಕಂದರ್ ಕೂಂ ಸುನೀ, ಭಿಷ್ಟ ಹುಯೆ ದೋ ಸಂತ್।
ಗರೀಬ್‌ದಾಸ್ ಚ್ಯಾರೋಂ ವರಣ್, ಉಠಿ ಲಾಗೆ ಸಬ್ ಪಂಥ್ ॥ 731 ॥
ಚ್ಯಾರಿ ವರಣ್ ಷಟ್ ಆಶ್ರಮ್, ದೋನೌಂ ದೀನ್ ಖುಶಾಲ್ ।
ಗರೀಬ್‌ದಾಸ್ ಹಿಂದೂ ತುರಕ್, ಪಡ್ಯಾ ಶಹರ್ ಗಲಿ ಜಾಲ್ ॥732॥
ಶಾಹ್ ಸಿಕಂದರಕೈ ಗಯೇ, ಸುನಿ ಕಬಲೇ ಅರದಾಸ್ ।
ಗರೀಬ್‌ದಾಸ್ ತಲಬಾಂ ಹುಈ, ಪಕರೆ ದೋನೌಂ ದಾಸ್ ॥733॥
ಕಹೌ ಕಬೀರ್ ಯೌಹ್ ಕ್ಯಾ ಕಿಯಾ, ಗನಿಕಾ ಲಿನ್ಹೀ ಸಂಗ್ ।
ಗರೀಬ್‌ದಾಸ್ ಭೂಲೆ ಭಕ್ತಿ, ಪರ್ಯಾ ಭಜನ್ ಮೆಂ ಭಂಗ್ ॥734॥
ಸುನೌ ಸಿಕಂದರ್ ಬಾದಶಾಹ್, ಹಮರೀ ಅರಜ್ ಅವಾಜ್ ।
ಗರೀಬ್‌ದಾಸ್ ವಹ್ ರಾಖಿಸೀ, ಜಿನ್ ಯೌಹ್ ಸಾಜ್ಯಾ ಸಾಜ್ ॥735॥
ಜಡಿಯಾ ತೌಂಕ್ ಜಂಜೀರ್ ಗಲ್, ಶಾಹ್ ಸಿಕಂದರ್ ಆಪ್ ।
ಗರೀಬ್‌ದಾಸ್ ಪದ್ ಲೀನ್ ಹೈ, ತಾರೀ ಅಜಪಾ ಜಾಪ ॥736॥
ಹಾಥೌಂ ಜಡೀ ಹಥಕಡೀ, ಪಗ್ ಬೇಡೀ ಪಹಿರಾಯ ।
ಗರೀಬ್‌ದಾಸ್ ಬೀಚ್ ಗಂಗ್ ಮೆಂ, ತಹಾಂ ದೀನ್ಹಾ ಛಿಟಕಾಯ್ ॥737॥
ಝುಡಿ ಗಯೆ ತೌಂಕ್ ಜಂಜೀರ್ ಸಬ್, ಲಗೈ ಕಿನಾರೈ ಆಯ್ ।
ಗರೀಬ್‌ದಾಸ್ ದೇಖೈ ಖಲಕ್, ಸ್ಯೌಂ ಕಾಜೀ ಬಾದಶಾಹ್ ॥738॥
ನೀಚೈ ನೀಚೈ ಗಂಗಾಜಲ್, ಊಪರ್ ಆಸನ್ ಧೀರ್ ।
ಗರೀಬ್‌ದಾಸ್ ಬೂಡೈ ನಹೀಂ, ಬೈಠೆ ಅಧರ್ ಕಬೀರ್ ॥739॥
ಯೋಹ್ ಅಚರಜ್ ಕೈಸಾ ಭಯಾ, ದೇಖೈ ದೋನೌಂ ದೀನ್ ।
ಗರೀಬ್‌ದಾಸ್ ಕಾಜೀ ಕಹೈ, ಬಾಂಧಿ ದಿಯಾ ಜಲ್ ಸೀನ್ ॥740॥
ಗಲ್ ಮೆಂ ಫಾಂಸೀ ಡಾರಿ ಕರಿ, ಬಾಂಧೌ ಶಿಲಾ ಸುಧಾರಿ ।
ಗರೀಬ್‌ದಾಸ್ ಯೌಹ್ ಜುಲಹದೀ, ಜಬ್ ಬೂಡೈ ಗಂಗಧಾರ್ ॥741॥
ಶಿಲಾ ಧರೀ ಜಬ್ ನಾವ್ ಮೆಂ, ಬಾಂಧೀ ಗಲೈ ಕಬೀರ್ ।
ಗರೀಬ್‌ದಾಸ್ ಫಂದ್ ಟೂಟಿ ಕೈ, ನಾ ಡೂಬೈ ಜಲನೀರ್ ॥742॥
ಶಿಲಾ ಚಲೀ ಶಾಹ ಔರ್ ಕೌ, ದೇಖತ್ ಕಾಶೀ ಖ್ಯಾಲ್ ।
ಗರೀಬ್‌ದಾಸ್ ಕಬೀರ್ ಕಾ ಆಸನ್ ಅಧರ ಹಮಾಲ್ ॥743॥
ತೀರ್ ಬಾಣ್ ಗೋಲೀ ಚಲೈಂ, ತೋಪ್ ರಹಕಲ್ಯೌಂ ಶೋರ್।
ಗರೀಬ್‌ದಾಸ್ ಉಸ್ ಜುಲಹದೀಕೈ, ಗಈ ಏಕ ನಹೀಂ ಓರ್॥744॥
ಅಧರ್ ಧಾರ್ ಗೋಲೇ ಬಹೈಂ, ಜಲಕೈ ಬೀಚ್ ಗಭಾಕ್ ।
ಗರೀಬ್‌ದಾಸ್ ಉಸ್ ಜುಲಹದೀ ಪರ್, ಶಸ್ತ್ರ ಛೂಟೈಂ ಲಾಖ್ ॥745॥
ತೋಪ್ ರಹಕಲೇ ಸಬ್ ಚಲೈಂ, ತೀರ್ ಬಾಣ್ ಕಮಾನ್ ।
ಗರೀಬ್‌ದಾಸ್ ವಹ್ ಜುಲಹದೀ, ಜಲ್ ಪರ್ ರಹೈ ಅಮಾನ್ ॥746॥
ಅಧರಿ ಧಾರ್ ಅಪಾರ್ ಗತಿ, ಜಲ್ ಪರಿ ಲಗೀ ಸಮಾಧಿ ।
ಗರೀಬ್‌ದಾಸ್ ನಿಜ್ ಬ್ರಹ್ಮಪದ್, ಖೇಲೈ ಆದಿ ಅನಾದಿ ॥747॥

ಜುಲಮ್ ಹುಆ ಬೂಡ್ಯೈ ನಹೀಂ, ಶಸ್ತ್ರ ಲಗ್ಯೈ ನ ಬಾಣ್ ।
ಗರೀಬ್‌ದಾಸ್ ಇಬ್ ಕೌನ್ ಗತಿ, ಕೈಸ್ಯೈಂ ತೀಜ್ಯೈ ಪ್ರಾಣ್ ॥748॥
ಲಗೀ ಸಮಾಧೀ ಅಗಾಧ್ ಮೆಂ, ಬಿಚರ್ಯೆ ಕಾಶೀ ಗಂಗ್ ।
ಗರೀಬ್‌ದಾಸ್ ಕಿಲೋಲ್ ಸರ್, ಛೂಹ್ಯೈಂ ಚರಣ್ ತರಂಗ್ ॥749॥
ಚ್ಯಾರಿ ಪಹರ್ ಗೋಲೆ ಬಗೆ, ಧರ್ಮೀ ಮುಲಕ್ ಮೈದಾನ್ ।
ಗರೀಬ್‌ದಾಸ್ ಪೋಖರ್ ಸುಖ್ಯೆಂ, ರಹೆ ಕಬೀರ್ ಅಮಾನ್ ॥750॥
ಅಪನೀ ಕರನೀ ಸಬ್ ಕರೀ, ಥಾಕೆ ದೋನೌಂ ದೀನ್ ।
ಗರೀಬ್‌ದಾಸ್ ಅಬ್ ಜುಲಹದೀ, ಪೈಠಿ ಗಯೆ ಜಲಮೀನ್ ॥751॥
ಡೂಬ್ಯಾ ಡೂಬ್ಯಾ ಸಬ್ ಕಹ್ಯೈಂ, ಹೋ ಗಯೆ ಗಾರತ್ ಗೋರ್ ।
ಗರೀಬ್‌ದಾಸ್ ಕಬಲೇ ಧನೀ, ತುಮ್ ಆಗ್ಯೈ ಕ್ಯಾ ಜೋರ್ ॥752॥
ಆನಂದ್ ಮಂಗಲ್ ಹೋತ್ ಹೈ, ಬಟ್ಯೈಂ ಬಧಾಈ ಬೇಗ್ ।
ಗರೀಬ್‌ದಾಸ್ ಉಸ್ ಜುಲಹದೀ ಪರ್ ಫಿರ್ ಗಈ ರೇತೀ ರೇಘ್ ॥753॥
ಹಸ್ತೀ ಘೋಡೆ ಚಢತ್ ಹೈ, ಪಾನ್ ಮಿಠಾಈ ಚೀರ್ ।
ಗರೀಬ್‌ದಾಸ್ ಕಾಶೀ ಖುಸೀ, ಬೂಡೆ ಗಂಗ್ ಕಬೀರ್ ॥754॥
ಜಾವೋ ಘರಿ ರೈದಾಸ್ ಕೈ, ಹಿಲಕಾರೆ ಹಜೂರ್ ।
ಗರೀಬ್‌ದಾಸ್ ಖುಸಿಯಾ ಕಹೌ, ಕಹಿಯೋ ನಹೀಂ ಕಸೂರ್ ॥755॥
ಝೂಲರಿ ಢೋಲಕ್ ಬಜತ್ ಹೈಂ, ಗಾವೈಂ ಶಬ್ದ್ ಕಬೀರ್ ।
ಗರೀಬ್‌ದಾಸ್ ರೈದಾಸ್ ಸಂಗಿ, ದೋನೌಂ ಏಕಹೀ ತೀರ್ ॥756॥
ಕಾಜೀ ಪಂಡಿತ್ ಸಬ್ ಗಯೇ, ಶಾಹ್ ಸಿಕಂದರ್ ಉಠ್ ।
ಗರೀಬ್‌ದಾಸ್ ರೈದಾಸಕೈ, ಭೇಷ್ ಗಯೇ ಜಟಜೂಟ್ ॥757॥
ಕೋಠೀ ಕುಠಲೇ ಸಬ್ ಝುಕೇ, ಬಾಸನ್ ಟೀಂಡರ್ ಗೋಲಿ ।
ಗರೀಬ್‌ದಾಸ್ ರಹದಾಸ್ ಸುನೀ, ಕಹಾಂ ಗಯೇ ವಹ್ ಬೋಲ್ ॥758॥
ವೆ ಪ್ರಗಟ್ ಪೂರಣ್ ಪುರುಷ್ ಹೈಂ, ಅಬಿನಾಶೀ ಅಲಖ್ ಅಲ್ಲಾಹ್ ।
ಗರೀಬ್‌ದಾಸ್ ರೈದಾಸ್ ಕಹ್ಯೈಂ, ಸುನೌಂ ಸಿಕಂದರ್ ಶಾಹ್ ॥759॥
ಸೂರಜ್ ಮುಖೀ ಸುಭಾಂನ್ ಸರ್, ಖಿಲೇ ಫೂಲ್ ಗುಲಜಾರ್ ।
ಗರೀಬ್‌ದಾಸ್ ಕಾಜೀ ಪಂಡಿತ್ ಕರತಾ ಶಾಹ್ ಪುಕಾರ್ ॥760॥
ಶಾಹ್ ಸಿಕಂದರ್ ಫಿರ್ ಗಯೇ, ಉಸ್ ಗಂಗಾ ಕೈ ತೀರ್ ।
ದಾಸ್ ಗರೀಬ್ ಕಬೀರ್ ಹರೀ, ಬೈಠೆ ಊಪರ್ ನೀರ್ ॥761॥
ಬೈಠಿ ಮಲಾಹ್ ಜಿಹಾಜ್ ಮೆಂ, ಗಯೆ ಧಾರ್ ಕೈ ಬೀಚ್ ।
ಗರೀಬ್‌ದಾಸ್ ಹರಿ ಹರಿ ಕರ್ಯೈಂ, ಪ್ರೇಮ್ ಫುಹಾರೆ ಸೀಚ್ ॥762॥
ಕರೀ ಅರಜ್ ಮಲಾಹ್ ತಹಾಂ, ದೀನ್ ದುನೀ ಬಾದಶಾಹ್ ।
ಗರೀಬ್‌ದಾಸ್ ಆಸನ್ ಉಧರ್, ಲಗೀ ಸಮಾಧಿ ಜುಲಾಹ್ ॥763॥
ಭಂವರ್ ಫಿರತ್ ಹೈಂ ಗಂಗ್ ಜಲ್, ಫೂಲ್ ಉಗಾನೆಂ ಕೋಟಿ ।
ಗರೀಬ್‌ದಾಸ್ ತಹಾಂ ಬಂದಗೀ, ಹರಿಜನ್ ಹರಿ ಕೀ ಓಟ್ ॥764॥
ಸಂಕಲ್ ಸೀಢೀ ಲಾಯ್ ಕರಿ, ಉತರೆ ತಹಾಂ ಮಲಾಹ್ ।
ಗರೀಬ್‌ದಾಸ್ ಹಮ್ ಬಂದಗೀ, ಯಾದ್ ಕಿಯೆ ಬಾದ್ ಶಾಹ್ ॥765॥
ಬೈಠ್ ಕಬೀರ್ ಜಹಾಜ್ ಮೆಂ, ಆಯೆ ಗಂಗಾ ಘಾಟ್ ।
ಗರೀಬ್‌ದಾಸ್ ಕಾಶೀ ಥಕೀ, ಹಾಂಡೆ ಬೌಹ್ ಬಿಧಿ ಬಾಟ್ ॥766॥

**ಶಬ್ದಾರ್ಥ:– 726–730 ರ ವಾಣಿಗಳ ಶಬ್ದಾರ್ಥ:–**

**ಪರಮಾತ್ಮ ಕಬೀರರು ಶಿಷ್ಯರನ್ನು ಪರೀಕ್ಷಿಸುವ ಉದ್ದೇಶದಿಂದ ಒಂದು ಬಾಟಲಿಯಲ್ಲಿ**

ಗಂಗಾನದಿಯ ನೀರನ್ನು ತುಂಬಿಕೊಂಡರು. ಕಾಶೀ ನಗರದ ಪ್ರಸಿದ್ಧ ವೇಶ್ಯೆ ಮತ್ತು ಸಂತ ರವಿದಾಸರ ಜೊತೆಯಲ್ಲಿ ಬಾಡಿಗೆಗೆ ಪಡೆದಿದ್ದ ಆನೆಯ ಮೇಲೆ ಕುಳಿತು ಕಾಶೀ ನಗರದ ಮುಖ್ಯ ಬೀದಿಗಳಲ್ಲಿ ತಿರುಗಾಡಲಾರಂಬಿಸಿದರು. ಬಾಟಲಿಯಿಂದ ಅವರು ನೀರನ್ನು ಕುಡಿಯುತ್ತಿದ್ದರು. ಆದರೆ ಮದ್ಯವನ್ನು ಸೇವಿಸುತ್ತಿರುವಂತೆ ನಾಟಕವಾಡುತ್ತಿದ್ದರು. ರವಿದಾಸರು ಆನೆಯನ್ನು ಮುನ್ನಡೆಸುತ್ತಿದ್ದರು. ಹಿಂದೆ ವೇಶ್ಯೆ ಕುಳಿತಿದ್ದಳು. ವೇಶ್ಯೆಯ ಹಿಂದೆ ಕಬೀರದಾಸರು ವೇಶ್ಯೆಯ ಕೊರಳಲ್ಲಿ ಕೈ ಹಾಕಿ ಪ್ರೇಮಿಯ ರೀತಿಯಲ್ಲಿ ಅಭಿನಯಿಸುತ್ತಿದ್ದರು. ಕಾಶೀ ನಗರದ ಜನರೆಲ್ಲಾ ಇದನ್ನು ನೋಡಿ, ಚಪ್ಪಾಳೆ ತಟ್ಟಿ, ನೋಡು, ಕಬೀರ್ ಎಂಬ ನೀಚ ನೇಕಾರನು ವೇಶ್ಯೆಯ ಜೊತೆ ಮದ್ಯದ ಮತ್ತಿನಲ್ಲಿ ಸುತ್ತಾಡುತ್ತಿದ್ದಾನೆ. ಅವಳ ಕೊರಳನ್ನು ತಬ್ಬಿಕೊಂಡು ಹುಚ್ಚನಂತೆ ಸುತ್ತುತ್ತಿದ್ದಾನೆ. ಮಾನ ಮರ್ಯಾದೆಯ ಬಗ್ಗೆ ಚಿಂತಿಸುತ್ತಿಲ್ಲ. ಕಬೀರ ಪರಮಾತ್ಮ ಭಕ್ತಿಯ ಹಾಡುಗಳನ್ನು ಹಾಡುತ್ತಿದ್ದರು ಹಾಗೂ ಆನಂದಿಸುತ್ತಿದ್ದರು. ವೇಶ್ಯೆಯನ್ನು ತಬ್ಬಿಕೊಂಡು ಹಾಡು ಹಾಡುತ್ತಿದ್ದಾರೆ ಎಂದು ಜನತೆ ಅರ್ಥೈಸಿಕೊಂಡಿತು. ಕಾಶೀ ನಗರದ ಎಲ್ಲಾ ನಾಗರೀಕರು ಕಬೀರರನ್ನು ವ್ಯಭಿಚಾರಿ ಎಂದು ಕರೆಯಲಾರಂಭಿಸಿದರು. ಆದರೆ ಕಬೀರ ಪರಮಾತ್ಮರು ಸದ್ಗುರುವಿನ ರೂಪದಲ್ಲಿ ಅನೇಕ ಶಿಷ್ಯರಿಗೆ ದೀಕ್ಷೆ ಕೊಡಿಸಿದ್ದರು ಎನ್ನುವುದನ್ನು ಯಾರೂ ತಿಳಿದುಕೊಳ್ಳಲಿಲ್ಲ. ಅವರೆಲ್ಲರ ಪಾಪದ ಕೊಡವನ್ನು ತಾವು ಹೊತ್ತುಕೊಂಡಿದ್ದರು. ಶಿಷ್ಯರು ಗುರುವಿನ ಆದೇಶವನ್ನು ಪಾಲಿಸುತ್ತಿರಲಿಲ್ಲ. ಶಿಷ್ಯರೆಲ್ಲ ಕಬೀರರ ಈ ವರ್ತನೆಯನ್ನು ನೋಡಿ ನಾಮ ದೀಕ್ಷೆಯನ್ನು ತೊರೆದು ಕಬೀರರಿಂದ ದೂರವಾದರು. ಅವರ ಸತ್ಸಂಗದಲ್ಲಿ ನಡೆಯುವ ಪ್ರವಚನ ಕೇಳಲೂ ಸಹ ಬರಲಿಲ್ಲ. ಎಷ್ಟು ಜನರು ಸತ್ಸಂಗ ಬಿಟ್ಟರೋ, ಎಷ್ಟು ಜನ ದೀಕ್ಷೆ ತ್ಯಜಿಸಿದರು ಅಷ್ಟು ಜನರ ಭಾರ ಕಬೀರರ ತಲೆಯಿಂದ ಇಳಿಯಿತು. ಕಾಶೀ ನಗರದ ಮೂವತ್ತಾರು ಮನೆತನದವರು. ನೋಡು, ವೇಶ್ಯೆಯನ್ನು ಕರೆದುಕೊಂಡು ಹೇಗೆ ತಿರುಗುತ್ತಿದ್ದಾನೆ, ಇವನ ದರ್ಶನದಿಂದಲೇ ನಮಗೆ ಪಾಪ ಸುತ್ತಿಕೊಳ್ಳುತ್ತದೆ ಎಂದು ಆಡಿಕೊಳ್ಳತೊಡಗಿದರು.

ವಾಣೀ ಸಂಖ್ಯೆ **731–754** ರವರೆಗಿನ ಶಬ್ದಾರ್ಥ:– ಆ ದಿನಗಳಲ್ಲಿ ದಿಲ್ಲಿಯ ರಾಜನಾದ ಸಿಕಂದರ್ ಲೋಧಿ ಕಾಶಿಯಲ್ಲಿ ನೆಲೆಸಿದ್ದನು. ಏಕೆಂದರೆ ಅವನು ಇಡೀ ಹಳೇ ಭಾರತದ ಸಾಮ್ರಾಟನಾಗಿದ್ದನು. ಅವನ ಅಧೀನದಲ್ಲಿ ಚಿಕ್ಕ ಚಿಕ್ಕ ರಾಜ್ಯಗಳಿದ್ದವು. ಕಾಶೀ ನಗರದ ರಾಜನಾದ ಬೀರದೇವ ಸಿಂಗ್ ಬಘೇಲನೂ ಸಹ ಸಿಕಂದರನ ಅಧೀನದಲ್ಲಿದ್ದನು. ಪರಮಾತ್ಮ ಕಬೀರರೂ ಸಹ ಸಿಕಂದರ್ ಲೋಧಿ ಕಾಶಿಗೆ ಬಂದು ನೆಲೆಸಿದ್ದಾಗ ಅಂಥ ಲೀಲೆಗಳನ್ನು ಮಾಡುತ್ತಿದ್ದರು. ಯಾವ ಮನುಷ್ಯನು ಯಾವ ಧರ್ಮಕ್ಕೆ ಸೇರಿದವನು ಹಾಗೂ ಅನ್ಯ ಜೀವಿಗಳು ಎಲ್ಲಾ ಅವರದೇ ಮಕ್ಕಳು ಎಂದು ಪರಮೇಶ್ವರನಿಗೆ ತಿಳಿದಿತ್ತು, ಅವರದೇ ವಚನದಿಂದ ಉತ್ಪನ್ನರಾಗಿದ್ದರು. ತಂದೆಯಾದ ಕಾರಣ ಪರಮೇಶ್ವರ ಕಬೀರರು ತಮ್ಮ ಮಕ್ಕಳನ್ನು ಕಾಲಬ್ರಹ್ಮನ ಬಲೆಯಿಂದ ಬಿಡಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಪರಮೇಶ್ವರ ಕಬೀರರು ಹೇಗಾದರೂ ಮಾಡಿ ಸಿಕಂದರ್ ಲೋಧಿಯು ನನ್ನ ಸಾಮರ್ಥ್ಯವನ್ನು ಅರಿತುಕೊಳ್ಳಲಿ ಹಾಗೂ ಅವನ ರಾಜ್ಯದಲ್ಲಿ ನನ್ನ ಜ್ಞಾನದ ಪ್ರಚಾರಕ್ಕೆ ಸಹಯೋಗ ನೀಡಿ ತನ್ನ ಉದ್ಧಾರ ಮಾಡಿಕೊಳ್ಳಲಿ ಎಂದು ಆಶಿಸುತ್ತಿದ್ದರು.

ಭಾರತದಲ್ಲಿ ಹಿಂದೂ ಬ್ರಾಹ್ಮಣ ಗುರುಗಳ ಮತ್ತು ಮುಸಲ್ಮಾನ ಕಾಜೀ ಧರ್ಮ ಗುರುಗಳ ಮಧ್ಯೆ ಎಂದೂ ಸಾಮರಸ್ಯವಿರಲಿಲ್ಲ. ಧರ್ಮದ ಹೆಸರಿನಲ್ಲಿ ಜಗಳವಾಡುತ್ತಿದ್ದರು. ಆದರೆ ಕಬೀರರ ವಿಷಯ ಬಂದಾಗ ಇವರಿಬ್ಬರೂ ಒಂದಾಗಿ ಕಬೀರರನ್ನು ವಿರೋಧಿಸುತ್ತಿದ್ದರು. ಏಕೆಂದರೆ ಕಬೀರರು ಎರಡೂ ಧರ್ಮದ ಪ್ರಚಾರಕರ ಜ್ಞಾನವನ್ನು ತಪ್ಪು ಎಂದು ಸಾಬೀತುಪಡಿಸುತ್ತಿದ್ದರು. ಈ ಧರ್ಮ ಪ್ರಚಾರಕರಿಗೆ ಧರ್ಮಗ್ರಂಥದ ಬಗ್ಗೆ ತಿಳುವಳಿಕೆ ಇಲ್ಲ ಎಂದು ಹೇಳುತ್ತಿದ್ದರು. ಇವರೆಲ್ಲಾ ಶಾಸ್ತ್ರ ವಿರುದ್ಧವಾದ ಜ್ಞಾನ ಮತ್ತು ಭಕ್ತಿಯನ್ನು ತಿಳಿಸುತ್ತಿದ್ದಾರೆ, ಹಾಗಾಗಿ ಸಾಧಕರಿಗೆ ಯಾವುದೇ ಆಧ್ಯಾತ್ಮಿಕ ಲಾಭ ಪರಮಾತ್ಮನ ಕಡೆಯಿಂದ ಸಿಗುತ್ತಿಲ್ಲ ಎಂದು ಹೇಳುತ್ತಿದ್ದರು.

ಕಬೀರರಿಂದ ದೀಕ್ಷೆ ಪಡೆದವರಿಗೆ ತಕ್ಷಣವೇ ಲಾಭವಾಗುತ್ತಿತ್ತು. ಈ ಕಾರಣದಿಂದ **64** ಲಕ್ಷ

ಜನರು ಕಬೀರರ ಶಿಷ್ಯರಾಗಿದ್ದರು. ಎಲ್ಲರೂ ಬಹಳ ದುಃಖಿಗಳಾಗಿದ್ದರು. ಆದರೆ ದೀಕ್ಷೆ ಮತ್ತು ಆಶೀರ್ವಾದದಿಂದ ಎಲ್ಲರ ಕಷ್ಟ ದೂರವಾಗಿ ಎಲ್ಲರೂ ಸುಖಿಯಾಗಿದ್ದರು. (ಕಬೀರರ ಶಿಷ್ಯರಲ್ಲಿ) ಬಹು ಸಂಖ್ಯೆಯಲ್ಲಿ ಹಿಂದೂ ಮತ್ತು ಮುಸಲ್ಮಾನರಿದ್ದರು. ಈ ಕಾರಣದಿಂದ ಧರ್ಮ ಪ್ರಚಾರಕರು ಕಬೀರರನ್ನೂ ಕಂಡು ಹೊಟ್ಟೆಕಿಚ್ಚು ಪಡುತ್ತಿದ್ದರು. ಈ ಘಟನೆಯಿಂದ ಧರ್ಮ ಪ್ರಚಾರಕರಿಗೆ ಇನ್ನೂ ರೆಕ್ಕೆಗಳು ಬಂದ ಹಾಗಾಯಿತು. ದಿಲ್ಲಿಯ ಸಾಮ್ರಾಟರು ಬಂದಿದ್ದಾರೆ, ಈ ದಿನ ಈ ನೇಕಾರನಿಗೆ ಮರಣದಂಡನೆಯ ಶಿಕ್ಷೆ ಕೊಡಿಸೋಣ ಎಂದು ಯೋಚಿಸುತ್ತಾ, ಸಾವಿರಾರು ಸಂಖ್ಯೆಯಲ್ಲಿ ಎರಡೂ ಧರ್ಮದ ಧರ್ಮ ಪ್ರಚಾರಕರು ಸಿಕಂದರ್ ಲೋಧಿಯ ವಿಶ್ರಾಂತಿ ಗೃಹಕ್ಕೆ ಬಂದರು. ಸಿಕಂದರ್ ಲೋಧಿಯು ಜನರನ್ನು ಸಂತೃಪ್ತಿಗೊಳಿಸಲು, 'ಈಗಲೇ ಅವನನ್ನು ಬಂಧಿಸಿ, ಅವನಿಗೆ ಮರಣದಂಡನೆ ನೀಡುವೆನು ಎಂದನು. ಸಂತ ರವಿದಾಸರನ್ನು ಹಾಗೂ ಪರಮಾತ್ಮ ಕಬೀರರನ್ನು ಸೈನಿಕರು ಬಂಧಿಸಿದರು. ಸಂತ ರವಿದಾಸರನ್ನು ನಂತರದಲ್ಲಿ ಬಿಡುಗಡೆ ಮಾಡಿದರು. ಏಕೆಂದರೆ ತಪ್ಪೆಲ್ಲವೂ ನನ್ನದೇ ಎಂದು ಕಬೀರರು ಒಪ್ಪಿಕೊಂಡರು. ಇದರಲ್ಲಿ ರವಿದಾಸರ ತಪ್ಪು ಇಲ್ಲ, ವೇಶ್ಯೆಯ ತಪ್ಪೂ ಇಲ್ಲ, ಎಲ್ಲವನ್ನು ನಾನೇ ಮಾಡಿದ್ದೇನೆ ಎಂದರು.

ಕಬೀರ ಪರಮೇಶ್ವರರ ಆಶೀರ್ವಾದದಿಂದ ಸಿಕಂದರ್ ಲೋಧಿಯ ಅಸಾಧಾರಣ ರೋಗವು ವಾಸಿಯಾಗಿತ್ತು. ತನ್ನ ಮಗನಾದ ಕಮಾಲ್ ಹಾಗೂ ಮಗಳಾದ ಕಮಾಲಿ ಮತ್ತು ಸ್ವಾಮಿ ರಾಮಾನಂದರನ್ನು ಸಿಕಂದರ್ ಲೋಧಿಯು ಹತ್ಯೆ ಮಾಡಿದ್ದನು. ಆದರೆ ಕಬೀರರು ಆ ರಾಜನ ಮುಂದೆಯೇ ಸತ್ತವರನ್ನು ಬದುಕಿಸಿದ್ದರು. ಸಿಕಂದರ್ ಲೋಧಿಯು ಕಬೀರರನ್ನು ಗುರುಗಳೆಂದು ನಂಬಿದ್ದನು. ಆದರೆ ಅತ್ಯಧಿಕ ಜನರು ಸೇರಿದ್ದ ಕಾರಣ ಮತ್ತು ಅಕ್ಷಮ್ಯ ಅಪರಾಧವೆಂದು ಭಾವಿಸಿ ಹಾಗೂ ಕಾನೂನಿನ ಸುವ್ಯವಸ್ಥೆಯನ್ನು ರಾಜ್ಯದಲ್ಲಿ ಕಾಪಾಡಲು ಅವನು ಕಬೀರರನ್ನು ಬಂಧಿಸಿದನು. ಆದರೂ ಸಹ ಶಿಷ್ಟಾಚಾರವನ್ನು ಕಾಪಾಡಲು ಹೀಗೆಂದು ಪ್ರಶ್ನಿಸಿದನು, "ಕಬೀರರೇ, ನೀವು ಒಳ್ಳೆಯ ವಿಚಾರವಂತರು, ನೀವೇನು ಮಾಡಿಬಿಟ್ಟಿರಿ? ವೇಶ್ಯೆಯನ್ನು ಕರೆದುಕೊಂಡು ಬಂದು ಭಕ್ತಿಯನ್ನು ಮರೆತಿರಿ. ನಿಮ್ಮ ಭಜನೆ ಭಂಗವಾಯಿತು. ಭಕ್ತಿ ನಾಶವಾಯಿತು." ಆಗ ಕಬೀರರು, "ಸಿಕಂದರ್ ಮಹಾರಾಜರೇ, ನಿಮ್ಮ ಪ್ರಶ್ನೆಗೆ ಉತ್ತರ ಕೇಳಿ. ಯಾವ ಪರಮೇಶ್ವರನು ಎಲ್ಲಾ ಬ್ರಹ್ಮಾಂಡಗಳನ್ನು ರಚಿಸಿ, ಸುರಕ್ಷಿತವಾಗಿ ಇಟ್ಟಿದ್ದಾನೋ, ಅವನು ನನ್ನ ರಕ್ಷಣೆಯನ್ನೂ ಮಾಡುತ್ತಾನೆ" ಎಂದರು. ಆದರೂ ಸಹ ಜನತೆಯನ್ನು ತೃಪ್ತಿಗೊಳಿಸಲು ಸಿಕಂದರ್ ಲೋಧಿಯು ಕಬೀರರ ಕೈಗಳಿಗೆ ಬೇಡಿ ತೊಡಿಸಿ, ಕಾಲುಗಳಿಗೆ ಸರಪಳಿ ತೊಡಿಸಿ, ಕತ್ತಿಗೆ ಕಬ್ಬಿಣದ ಸರಪಳಿ ಹಾಕಿ ಗಂಗಾ ನದಿಯ ಮಧ್ಯದಲ್ಲಿ ಮುಳುಗಿಸಿ ಸಾಯಿಸುವಂತೆ ಆದೇಶ ನೀಡಿದನು.

ರಾಜನ ಆಜ್ಞೆಯಂತೆ ಕಬೀರರನ್ನು ಗಂಗಾನದಿಯ ಮಧ್ಯಕ್ಕೆ ದೋಣಿಯಲ್ಲಿ ಕರೆದುಕೊಂಡು ಹೋಗಿ, ಅಲ್ಲಿ ನೀರಲ್ಲಿ ತಳ್ಳಿದರು. ತಕ್ಷಣವೇ ಕಬೀರರ ಕೈಯಲ್ಲಿದ್ದ ಬೇಡಿ, ಕಾಲಲ್ಲಿ, ಕೊರಳಲ್ಲಿ ಇದ್ದ ಕಬ್ಬಿಣದ ಸರಪಳಿಗಳು ತುಂಡಾಗಿ ನೀರಲ್ಲಿ ಬಿದ್ದುಬಿಟ್ಟವು. ಪರಮಾತ್ಮ ಕಬೀರರು ನೀರಿನಿಂದ ಮೇಲೆ ಬಂದು ಕುಳಿತರು. ಇದನ್ನು ನೋಡಿದ ಕಾಜಿಗಳು ಬಹುಶಃ ಮಾಟ ಮಂತ್ರದಿಂದ ನೀರನ್ನು ಬಂಧಿಸಿಟ್ಟಿದ್ದಾರೆ ಹಾಗಾಗಿ ಇವರು ಮುಳುಗುತ್ತಿಲ್ಲ ಎಂದು ಹೇಳತೊಡಗಿದರು. ಸ್ವಲ್ಪ ಸಮಯದವರೆಗೆ ಕಬೀರರು ನೀರಿನ ಮೇಲೆ ಕುಳಿತಿದ್ದರು. ನಂತರ ಮೊದಲು ಹೇಗೆ ದೋಣಿಯಲ್ಲಿ ಬಂದಿದ್ದರೋ, ಅದೇ ಮಾರ್ಗವಾಗಿ ಮರಳಿ ಬಂದರು. ಅಲ್ಲಿ ಸಾವಿರಾರು ಜನ ಈ ದೃಶ್ಯವನ್ನು ನೋಡಲು ಸೇರಿದ್ದರು. ಸಿಕಂದರ್ ಲೋಧಿಯೂ ಹಾಜರಿದ್ದನು. ಕಾಜಿಗಳು, ಧರ್ಮಗುರುಗಳು ಯೋಚಿಸಿ, ಇವನ ಕೊರಲಿಗೆ ಭಾರವಾದ ಕಲ್ಲನ್ನು ಕಟ್ಟಿದರೆ ಇವನು ಮುಳುಗುತ್ತಾನೆ ಎಂದು ಸಿಕಂದರ್ ಲೋಧಿಗೆ ಹೇಳಿದರು.

ಮತ್ತೆ ಕಬೀರರ ಕೊರಳಿಗೆ ಕಬ್ಬಿಣದ ಸರಪಳಿಯಿಂದ ಕಟ್ಟಿದ ಭಾರೀ ಗಾತ್ರದ ಕಲ್ಲನ್ನು ನೇತುಹಾಕಿ ಗಂಗಾನದಿಯ ಮಧ್ಯಕ್ಕೆ ಕರೆದುಕೊಂಡು ಹೋಗಿ ಮುಳುಗಿಸಲಾಯಿತು. ಮತ್ತೆ ಸರಪಳಿ ತುಂಡಾಯಿತು. ಭಾರೀ ಗಾತ್ರದ ಕಲ್ಲು ತೇಲುತ್ತಾ ಬಂದು ಬಹಳ ವೇಗವಾಗಿ ಸಿಕಂದರ್

ಲೋಧಿಯ ಬಳಿ ಬಂದಿತು. ಕಬೀರರು ನೀರಿನ ಮೇಲೆ ಪದ್ಮಾಸನ ಹಾಕಿ ಆರಾಮವಾಗಿ ಕುಳಿತಿದ್ದರು. ಅಗಾಧವಾದ ನೀರು ಹರಿಯುತ್ತಿತ್ತು. ಆದರೆ ಕಬೀರ ಪರಮಾತ್ಮರು ಮುಳುಗಲಿಲ್ಲ. ನೀರಿನ ಅಲೆಗಳು ಪರಮೇಶ್ವರರ ಚರಣಗಳನ್ನು ಸ್ಪರ್ಶಿಸಿ, ಕುಣಿಯುತ್ತಾ, ನರ್ತಿಸುತ್ತಿತ್ತು. ಆಗ ರಾಜನು ಬಾಣವನ್ನು ಬಿಟ್ಟು ಕಬೀರರನ್ನು ಕೊಲ್ಲಲು ಆದೇಶವನ್ನಿತ್ತನು. ಎಷ್ಟೇ ಬಾಣಗಳನ್ನು ಬಿಟ್ಟರೂ ಕಬೀರರು ಸಾಯಲಿಲ್ಲ. ಆಗ ತೋಪನ್ನು ತರಿಸಲಾಯಿತು. ತೋಪಿಗೆ ಮದ್ದು ಗುಂಡುಗಳನ್ನು ತುಂಬಿ ಕಬೀರರ ಮೇಲೆ ಪ್ರಯೋಗಿಸಲಾಯಿತು. ಆದರೆ ಕಬೀರರಿಗೆ ಏನೂ ಆಗಲಿಲ್ಲ. ಮದ್ದು ಗುಂಡುಗಳಲ್ಲಿ ಒಂದು ನದಿಗೆ ಬಿದ್ದರೆ, ಇನ್ನೊಂದು ಗುಡ್ಡಕ್ಕೆ ಬಿತ್ತು. ಒಂದು ಎಡಕ್ಕೆ ಬಿದ್ದರೆ, ಒಂದು ಬಲಕ್ಕೆ ಬಿತ್ತು. ಒಂದು ಗುಂಡೂ ಸಹ ಕಬೀರರ ಹತ್ತಿರವೂ ಬರಲಿಲ್ಲ. ಸುಮಾರು ಹನ್ನೆರಡು ಗಂಟೆಗಳವರೆಗೆ ಈ ಪ್ರಯತ್ನ ನಡೆಯಿತು. ಆದರೆ ಕಬೀರರು ಸಾಯಲಿಲ್ಲ. ಪೂರ್ಣ ಪರಮಾತ್ಮ ಕಬೀರರು ಅವಿನಾಶಿಯಾಗಿರುವರು. ಅವಿನಾಶಿಯನ್ನು ಯಾರು ಸಾಯಿಸಲು ಸಾಧ್ಯ? ಅವರ ಈ ಲೀಲೆಗಳಿಂದ ಜನರಿಗೆ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿದ್ದರು. ಆದರೆ ಕಾಲಬ್ರಹ್ಮನು ಜನರ ಬುದ್ಧಿಯನ್ನು ಕೆಡಿಸಿದ್ದನು ಹಾಗಾಗಿ ಇವರು ಸಾಮಾನ್ಯ ವ್ಯಕ್ತಿಯಲ್ಲ ಎಂದು ಯಾರ ಮನಸ್ಸಿಗೂ ತಿಳಿಯಲೇ ಇಲ್ಲ. ರಾಜ ಹಾಗೂ ಪ್ರಜೆ ಎಲ್ಲರೂ ಪ್ರಯತ್ನಿಸಿದರು ಹೇಗೆ ಸಾಯಿಸುವುದು? ಎಂದು

ಇವರೆಲ್ಲಾ ಹೀಗೆ ವಿಚಾರ ಮಾಡುತ್ತಿರುವಾಗ ಕಬೀರರು ನದಿಯಲ್ಲಿ ಧುಮುಕಿದರು. ಆಗ ರಾಜ ಹಾಗೂ ಪ್ರಜೆಗಳೆಲ್ಲರೂ ಕಬೀರರು ಸತ್ತು ಹೋದರೆಂದು ತಿಳಿದರು, ಇವರ ಶರೀರವು ಮೇಲೆ ಬರದ ಕಾರಣ ಯಾವುದೋ ಕೇಸರಿನಲ್ಲಿ ಸಿಕ್ಕಿ ಹಾಕಿಕೊಂಡಿರಬಹುದು ಎಂದು ತಿಳಿದರು. ಕಬೀರರು ಸತ್ತ ಖುಷಿಗೆ ಜನರು ವಾದ್ಯಗಳನ್ನು ನುಡಿಸುತ್ತಾ ನರ್ತಿಸಲಾರಂಭಿಸಿದರು, ಸಿಹಿ ಹಂಚಿದರು, ರಾಜನು ವಿಶ್ರಾಂತಿಗೃಹಕ್ಕೆ ಹೊರಟು ಹೋದನು. ಕಾಜಿಗಳು, ಧರ್ಮಗುರುಗಳು ಸೇರಿ ರವಿದಾಸರ ಮನೆಗೆ ತೆರಳಿದರು. ಅಲ್ಲಿ ಅವರಿಗೆ ಒಳಗಿನಿಂದ ಕಬೀರರ ಧ್ವನಿ ಕೇಳಿಸಿತು. ಅವರು ಪರಮಾತ್ಮನ ಮಹಿಮೆಯ ಹಾಡನ್ನು ಹಾಡುತ್ತಿದ್ದರು. ನೀವು ಯಾರನ್ನು ಅವಿನಾಶಿ ಎಂದು ಹೇಳುತ್ತಿದ್ದಿರೋ, ಆ ಕಬೀರರು ಸತ್ತುಹೋಗಿದ್ದಾರೆ ಎಂದು ಹೇಳಲು ಅವರೆಲ್ಲಾ ಬಂದಿದ್ದರು. ಆದರೆ ಮನೆಯ ಒಳಗಡೆ ಹೋದರೆ ಕಬೀರರು ರವಿದಾಸರ ಬಳಿ ಕುಳಿತಿದ್ದರು. ಇಬ್ಬರೂ ಭಕ್ತಿ ಪದಗಳನ್ನು ಹಾಡುತ್ತಿದ್ದರು. ಇದನ್ನು ನೋಡಿದ ಜನರು, ಕಬೀರರು ಸತ್ತಿಲ್ಲ, ಅವರು ರವಿದಾಸರು ಬಳಿ ಕುಳಿತಿದ್ದಾರೆ ಎಂದು ಹೋಗಿ ಸಿಕಂದರ್ ಲೋಧಿಗೆ ಹೇಳಿದರು. ಸಾವಿರಾರು ಮುಲ್ಲಾಗಳು, ಧರ್ಮ ಪ್ರಚಾರಕರು, ಸಾಮಾನ್ಯ ಜನರು ರವಿದಾಸರ ಮನೆಗೆ ತೆರಳಿದರು. ಅಲ್ಲಿ ಕಬೀರರು ಇರಲಿಲ್ಲ. ಕಬೀರರು ಎಲ್ಲಿ ಎಂದು ರವಿದಾಸರನ್ನು ಎಲ್ಲರೂ ಕೇಳಿದರು. ಆಗ ರವಿದಾಸರು, ಈಗಷ್ಟೇ ಇಲ್ಲಿಂದ ಹೊರಟರು. ಗಂಗಾನದಿಯಲ್ಲಿ ಸ್ನಾನ ಮಾಡಿ ಬರುತ್ತೇನೆ ಎಂದು ಹೇಳಿದರು. ಆಗ ರಾಜ ಹಾಗೂ ಎಲ್ಲಾ ಜನರು ಗಂಗಾನದಿಯ ದಡಕ್ಕೆ ಬಂದರು. ಅಲ್ಲಿ ಕಬೀರರು ನೀರಿನ ಮೇಲೆ ಮೊದಲಿನ ಸ್ಥಿತಿಯಲ್ಲೇ ಕುಳಿತಿದ್ದರು. ನದಿಯ ಮಧ್ಯದಲ್ಲಿ ಅವರು ಕುಳಿತಿದ್ದರು. ಒಂದು ಚಿಕ್ಕ ದೋಣಿಯಲ್ಲಿ ಅಂಬಿಗ ಹಾಗೂ ಕೆಲ ವ್ಯಕ್ತಿಗಳು ಅಲ್ಲಿಗೆ ಹೋಗಿ ರಾಜ ಸಿಕಂದರನು ಕರೆಯುತ್ತಿದ್ದಾನೆ ಎಂದು ಹೇಳಿದರು. ಆಗ ದೋಣಿಯಲ್ಲ ಕುಳಿತು ಕಬೀರರು ಹೊರಬಂದ ಕೂಡಲೇ ಮತ್ತೆ ಅವರನ್ನು ಬಂಧಿಸಲಾಯಿತು.

## "ಮದವೇರಿದ ಆನೆಯ ಕಾಲಿನಿಂದ ತುಳಿಸಿ ಪರಮೇಶ್ವರ ಕಬೀರರನ್ನು ಕೊಲ್ಲುವ ವ್ಯರ್ಥ ಪ್ರಯತ್ನ"

ಖೂನೀ ಹಾಥೀ ಮಸ್ತ್ ಹೈ, ಪಗ್ ಬಂಧೇ ಜಂಜೀರ್ ।
ಗರೀಬ್‌ದಾಸ್ ಜಹಾಂ ಡಾರಿಯಾ, ಮಸಕ್ ಬಾಂಧಿ ಕಬೀರ್ ॥767॥
ಸಿಂಹ್ ರೂಪ್ ಸಾಹಿಬ್ ಧರ್ಯಾ, ಭಾಗೆ ಉಲಟೆ ಫೀಲ್ ।
ಗರೀಬ್‌ದಾಸ್ ನಹೀಂ ಸಮಝುತೀ, ಯಾಹ್ ದುನಿಯಾ ಖಲೀಲ್ ॥768॥
ಬನೆ ಕೇಹರೀ ಸಿಂಹ್ ಜಿತ್, ಚೌಂರ್ ಶಿಖರ್ ಅಸಮಾಂನ್ ।

ಗರೀಬ್‌ದಾಸ್ ಹಸ್ತೀ ಲಖ್ಯಾ, ದೀಖ್ಯೆ ನಹೀಂ ಜಿಹಾಂನ್ ॥769॥
ಕೂಟ್ಯೆ ಶೀಶ್ ಮಹಾವತಂ, ಅಂಕುಶ್ ಶೀರ್ ಗರಗಾಪ್ ।
ಗರೀಬ್‌ದಾಸ್ ಉಲಟಾ ಭಗ್ಯೆ, ತಾರೀ ದೀಜ್ಯೆಂ ಥಾಪ್ ॥770॥
ಭಾಲೇ ಕೋಖೌಂ ಮಾರಿಯೇ, ಚರಖೀ ಛೂಟ್ಯೆಂ ಪಾಖ್ ।
ಗರೀಬ್‌ದಾಸ್ ನಹೀಂ ನಿಕಟ್ ಜಾಯ್, ಕಿಲಕೀ ದೇವ್ಯೆಂ ಲಾಖ್ ॥771॥
ಜೈಸೀ ಭಕ್ತಿ ಕಬೀರ್ ಕೀ, ಐಸೀ ಕರ್ರೈ ನ ಕೋಯ್ ।
ಗರೀಬ್‌ದಾಸ್ ಕುಂಜರ್ ಥಕೆ, ಉಲಟೇ ಭಾಗೆ ರೋಯ್ ॥772॥
ದುಂಮ್ ಗೋವ್ಯೆಂ ಮೂಂಡೀ ಧುನ್ಯೆಂ, ಸೈಂನ್ ನ ಸಮರ್‍ಝೈ ಏಕ್। ।
ಗರೀಬ್‌ದಾಸ್ ದೀಖ್ಯೆ ನಹೀಂ, ಆಗ್ಯೆ ಖಡಾ ಅಲೇಖ್ ॥773॥
ಪೀಲವಾನ್ ದೇಖ್ಯಾ ತಬ್ಯೆ, ಖಡಾ ಕೇಹರೀ ಸಿಂಘ್ ।
ಗರೀಬ್‌ದಾಸ್ ಆಯೇ ತಹಾಂ, ಧರಿ ಮೌಲಾ ಬಹು ರಂಗ್ ॥774॥
ಉತರೇ ಮೌಲಾ ಅರಸ್ ತೈಂ, ಭಾವ್ ಭಕ್ತಿ ಕೈ ಹೇತ್ ।
ಗರೀಬ್‌ದಾಸ್ ತಬ್ ಶಾಹ್ ಲಖೇ, ಕಬೀರ್ ಪುರುಷ್ ಸಹೇತ್ ॥775॥
ಲೀಲಾ ಕೀ ಕಬೀರ್ ನೆ, ದೋ ರೂಪ್ ಮೆಂ ರಹೆ ದೀಸ್ ।
ದಾಸಗರೀಬ್ ಕಬೀರ್ ಕೈ, ಪಾಸ್ ಖಡೇ ಜಗದೀಶ್ ॥776॥
ಜಂಭಾಈ ಅಂಗಡಾಈಯಾಂ, ಲಂಬೇ ಭಯೇ ದಯಾಲ್ ।
ಗರೀಬ್‌ದಾಸ್ ಉಸ್ ಶಾಹ್ ಕೂಂ, ಮಾನೌಂ ದರ್ಶ್ಯಾ ಕಾಲ್ ॥777॥
ಕೋಟಿ ಚಂದ್ರ ಶಶಿ ಭಾನ್ ಮುಖ್, ಗಿರದ್ ಕುಂಡ್ ದುಮ್ ಲೀಲ್ ।
ಗರೀಬ್‌ದಾಸ್ ತಹಾಂ ನಾ ಟಿಕೆ, ಭಾಗಿ ಗಯೇ ರನಫೀಲ್ ॥778॥
ನಯನ್ ಲಾಲ್ ಭೌಂಹ್ ಪೀತ್ ಹೈಂ, ಡೂಂಗರ್ ನಕ್ ಪಹಾರ್ ।
ಗರೀಬ್‌ದಾಸ್ ಉಸ್ ಶಾಹ್ ಕೂಂ, ಸಿಂಹ್ ರೂಪ್ ದೀದಾರ್ ॥779॥
ಮಸ್ತಕ್ ಶಿಖರ್ ಸ್ವರ್ಗ ಲಗ್, ದೀರಘ್ ದೇಹ್ ಬಿಲಂದ್ ।
ಗರೀಬ್‌ದಾಸ್ ಹರಿ ಊತರೆ, ಕಾಟನ್ ಜಮ್ ಕೇ ಫಂದ್ ॥780॥
ಗಿರದ್ ನಾಭಿ ನಿರಭೈ ಕಲಾ, ದುದಕಾರ್ರೈ ನಹೀಂ ಕೋಯ್ ।
ಗರೀಬ್‌ದಾಸ್ ತ್ರಿಲೋಕಿ ಮೆಂ, ಗಾಜ್ ತಾಸ್ ಕೀ ಹೋಯ್ ॥781॥
ಜ್ಯೂಂ ನರಸಿಂಹ್ ಪ್ರಹ್ಲಾದಕೈ, ಯೂಂ ವಹ್ ನರಸಿಂಹ್ ಏಕ್ ।
ಗರೀಬ್‌ದಾಸ್ ಹರಿ ಆಈಯಾ, ರಾಖನ್ ಜನಕೀ ಟೇಕ್ ॥782॥
ಬಾರ್-ಬಾರ್ ಸತಾಯ್ ಕರ್, ಮಸ್ತಕ್ ಲೀನಾ ಭಾರ್ ।
ಗರೀಬ್‌ದಾಸ್ ಶಾಹ್ ಯೌಂ ಕಹ್ಯೆ, ಬಕಸೌ ಇಬಕೀ ಬಾರ್ ॥783॥
ತಹಾಂ ಸಿಂಹ್ ಲ್ಯೌಲೀನ್ ಹುಆ, ಪರಚಾ ಇಬಕೀ ಬಾರ್ ।
ಗರೀಬ್‌ದಾಸ್ ಶಾಹ್ ಯೌಂ ಕಹ್ಯೆ, ಅಲ್ಲಹ್ ದಿಯಾ ದೀದಾರ್ ॥784॥
ಸುನ್ ಕಾಶೀ ಕೆ ಪಂಡಿತೌ, ಕಾಜೀ ಮುಲ್ಲಾಂ ಪೀರ್ ।
ಗರೀಬ್‌ದಾಸ್ ಇಸಕೇ ಚರಣ್ ಲ್ಯೌಹ್, ಅಲಹ್ ಅಲೇಖ್ ಕಬೀರ್ ॥785॥
ಯೌಹ್ ಕಬೀರ್ ಅಲ್ಲಾಹ್ ಹೈ, ಉತರೆ ಕಾಶೀ ಧಾಮ್ ।
ಗರೀಬ್‌ದಾಸ್ ಶಾಹ್ ಯೌ ಕಹ್ಯೆಂ, ಝುಗರ್ ಮೂಂಯೆ ಬೇ ಕಾಮ್ ॥786॥
ಕಾಜೀ ಪಂಡಿತ್ ರೂಠಿಯಾ, ಹಮ್ ತ್ಯಾಗ್ಯಾ ಯೋಹ್ ದೇಶ್।
ಗರೀಬ್‌ದಾಸ್ ಷಟದಲ್ ಕಹ್ಯೆಂ, ಜಾದೂ ಸಿಹರ್ ಹಮೇಶ್ ॥787॥
ಇನ್ ಜಾದೂ ಜಂತರ್ ಕಿಯಾ, ಹಸ್ತೀ ದಿಯಾ ಭಗಾಯ್ ।
ಗರೀಬ್‌ದಾಸ್ ಇತ್ ನಾ ರಹ್ಯೆಂ, ಕಾಶೀ ಬಿಡರೀ ಜಾಯ್ ॥788॥

ಕಾಶೀ ಬಿಡರೀ ಚಹೌಂ ದಿಶಾ, ಥಾಂಭನ್ ಹಾರಾ ಏಕ್ ।
ಗರೀಬ್‌ದಾಸ್ ಕೈಸೇ ಥಂಭೈ, ಬಿಡರೆ ಬೌಹತ್ ಅನೇಕ್ ॥789॥

**ಶಬ್ದಾರ್ಥ:– ಕ್ರಮಸಂಖ್ಯೆ 767–789ರ ವಾಣಿಗಳು :–** ಪರಮಾತ್ಮ ಕಬೀರರ ಕಾಲನ್ನು ಕಟ್ಟಿ ಒಂದು ಮೈದಾನದಲ್ಲಿ ಬಿಸಾಡಲಾಯಿತು. ಅಲ್ಲಿ ಮಹಾಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಆ ಮೈದಾನವು ಇಂದಿನ ಸ್ಟೇಡಿಯಂಗೆ ಹೋಲಿಕೆಯಾಗುತ್ತಿತ್ತು. ರಾಜ ಹಾಗೂ ಪದಾಧಿಕಾರಿಗಳು ವೇದಿಕೆಯ ಮೇಲೆ ಕುಳಿತಿರುತ್ತಿದ್ದರು. ಪ್ರೇಕ್ಷಕರು ನಾಲ್ಕಾರು ಕಡೆ ನಿಂತಿರುತ್ತಿದ್ದರು. ಮನುಷ್ಯರನ್ನು ಕೊಲ್ಲಲು ಆನೆಗಳಿಗೆ ಮೊದಲೇ ತರಬೇತಿ ನೀಡಿರುತ್ತಿದ್ದರು. ಅವುಗಳಿಗೆ ಮದ್ಯ ಹಾಗೂ ರಕ್ತವನ್ನು ಕುಡಿಯುವ ಚಟ ಹತ್ತಿಸುತ್ತಿದ್ದರು. ಆ ಆನೆಗಳನ್ನು ಕೊಲೆಗಾರ ಆನೆಗಳು ಎಂದು ಕರೆಯುತ್ತಿದ್ದರು. ಸಿಕಂದರ್ ರಾಜ ಹಾಗೂ ಉಳಿದ ಮಂತ್ರಿಗಳು ಕುಳಿತಿದ್ದರು. ಪ್ರಜೆಗಳು ನಾಲ್ಕಾರು ಕಡೆ ನಿಂತಿದ್ದರು. ಕೊಲೆಗಾರ ಆನೆಯ ಮಾವುತನು (ಆನೆಯನ್ನು ನಿಯಂತ್ರಿಸುವ ವ್ಯಕ್ತಿ) ಕಬೀರರ ಕಡೆಗೆ ಆನೆಯನ್ನು ಓಡಿಸಿದನು. ಆಗ ಕಬೀರರು ಒಂದು ಸಿಂಹದ ರೂಪವನ್ನು ತೋರಿಸಿದರು. ಅದು ಕೇವಲ ಆನೆಗೆ ಮಾತ್ರ ಕಾಣುತ್ತಿತ್ತು. ಆನೆ ಮೊದಲೇ ಮದ್ಯ ಕುಡಿದಿತ್ತು. ಸಿಂಹವನ್ನು ನೋಡಿ ಆನೆ ಭಯದಿಂದ ಹಿಂದೆ ಓಡಲಾರಂಭಿಸಿತು. ಮಾವುತನು ಆನೆಯನ್ನು ಭರ್ಚಿಯಿಂದ ತಿವಿದನು.

ಆದರೆ ಆನೆಯು ಕಬೀರರ ಕಡೆಗೆ ಹೋಗಲೇ ಇಲ್ಲ. ಪರಮಾತ್ಮ ಕಬೀರರು ಮಾವುತನಿಗೂ ಸಿಂಹದ ದರ್ಶನ ಮಾಡಿಸಿದರು. ಆಗ ಮಾವುತನೂ ಭಯದಿಂದ ಕೆಳಗೆ ಬಿದ್ದನು. ಆನೆ ಅಲ್ಲಿಂದ ಓಡಿಹೋಯಿತು. ಪರಮಾತ್ಮ ಕಬೀರರ ಸರಪಳಿ ಮುರಿಯಿತು ಆಗ ಕಬೀರರು ಎದ್ದು ನಿಂತು ಒಮ್ಮೆ ಮೈ ಮುರಿದರು, ನಂತರ ಆಕಳಿಸಿದರು. ಬಹಳ ಎತ್ತರವಾಗಿ ಬೆಳೆದರು. ಅವರ ತಲೆ ಆಕಾಶವನ್ನು ಮುಟ್ಟುತ್ತಿತ್ತು. ಶರೀರದಿಂದ ಅಸಂಖ್ಯಾತ ಸೂರ್ಯರ ಪ್ರಕಾಶವು ಹೊರಹೊಮ್ಮುತ್ತಿತ್ತು. ಇದು ಕೇವಲ ಸಿಕಂದರ್ ಲೋಧಿಗೆ ಕಾಣುತ್ತಿತ್ತು. ಆಗ ರಾಜನು ಭಯಭೀತನಾಗಿ ಎದ್ದು ನಿಂತು ಮೈದಾನಕ್ಕೆ ಬಂದು ಹೀಗೆ ಹೇಳಿದನು, "ನನ್ನ ಪ್ರಾಣ ಉಳಿಸಿ, ನನ್ನಿಂದ ಬಹಳ ದೊಡ್ಡ ತಪ್ಪಾಯಿತು. ನನಗೆ ಪರಮಾತ್ಮನ ದರ್ಶನವಾಯಿತು." ನಂತರ ಪ್ರಜೆಗಳಿಗೆ ಹೀಗೆಂದನು, "ಪ್ರಜೆಗಳೇ, ಇವರು ಅಲ್ಲಾಹು ಅಕ್ಬರ್, ಕಬೀರರ ರೂಪದಲ್ಲಿ ಭೂಮಿಗೆ ಬಂದಿದ್ದಾರೆ, ಇವರ ಪಾದಗಳನ್ನು ಸ್ಪರ್ಶಿಸಿ, ನಿಮ್ಮ ಉದ್ಧಾರ ಮಾಡಿಕೊಳ್ಳಿ". ಆದರೆ ಕರ್ಮಹೀನರಾದ ಕಾಜಿಮುಲ್ಲಾಗಳು ಹಾಗೂ ಪಂಡಿತರು ಹೇಳಿದರು, "ಕಬೀರನು ಮಾಟ ಮಂತ್ರ ಮಾಡಿ ಆನೆಯನ್ನು ಓಡಿಸಿದ್ದಾನೆ. ನಾವು ಇಲ್ಲಿಂದ ಹೋಗುತ್ತಿದ್ದೇವೆ." ಹೀಗೆನ್ನುತ್ತಾ ಆ ಪಾಪಾತ್ಮಗಳೆಲ್ಲಾ ಅಲ್ಲಿಂದ ತೆರಳಿದವು. ಪರಮಾತ್ಮನು ತನ್ನ ಶರೀರವನ್ನು ಸಾಮಾನ್ಯ ಸ್ಥಿತಿಗೆ ತಂದು ಸಿಂಹವನ್ನು ಅದೃಶ್ಯ ಮಾಡಿದನು. ನಂತರ ಕಬೀರರು ತಮ್ಮ ಕುಟೀರಕ್ಕೆ ತೆರಳಿದರು.

## "ದೀಕ್ಷೆಯ ನಂತರ"

**ಪೂರ್ಣ ಗುರುದೇವರಿಂದ ದೀಕ್ಷೆ ಪಡೆದು ಪೂರ್ಣ ನಂಬಿಕೆಯಿಂದ ಗುರುದೇವರ ಮೂಲಕ ಹೇಳಿದ ಸಾಧನೆಯನ್ನು ಪೂರ್ತಿ ನಿಷ್ಠೆಯಿಂದ ಮಾಡಿ.**

➢ **ಕಬೀರರು ಹೇಳಿದ್ದಾರೆ, (1) ತಾಳ್ಮೆ ಇರಲಿ.**

ಕಬೀರ್, ಧೀರೆ–ಧೀರೆ ರೇ ಮನಾ, ಧೀರೆ ಸಬ್ ಕುಛ್ ಹೋಯ್ ।
ಮಾಲೀ ಸೀಂಚೆ ಸೌಂ ಘಡಾ, ಸಮಯ್ ಆಏ ಫಲ್ ಹೋಯ್ ॥

**ಭಾವಾರ್ಥ:–** ಹೇಗೆ ಮಾಲಿ ಮಾವಿನ ಗಿಡವನ್ನು ನೆಡುತ್ತಾನೆ. ಅದಕ್ಕೆ ನೀರೆರೆದು ಪೋಷಿಸುತ್ತಾನೆ. ಸ್ವಲ್ಪ ದಿನಗಳ ನಂತರ ಅದು ಚಿಗುರುತ್ತದೆ, ಆದರೂ ಸಮಯ ಸಮಯಕ್ಕೆ ನೀರೆರೆದು ಪೋಷಿಸುತ್ತಿರುತ್ತಾನೆ ರಕ್ಷಣೆಗಾಗಿ ಮುಳ್ಳಿನ ಗಿಡಗಂಟಿಗಳ ಬೇಲಿ (Fence) ತಯಾರಿಸುವನು. ಒಂದು ಮಾವಿನ ಗಿಡವು ಮರವಾಗಿ ಬೆಳೆಯಲು ಸುಮಾರು 8–10 ವರ್ಷಗಳು ಬೇಕು. ಅಲ್ಲಿಯ ವರೆಗೆ ಮಾಲಿ (ಸಸ್ಯ ನೆಡುವ ಉದ್ಯಾನವನದ ಮಾಲೀಕ ಅಥವಾ ನೌಕರ) ಆ

ಗಿಡದ ಪೋಷಣೆ ಮಾಡುತ್ತಾನೆ. ನಂತರ ಅದು ಮರವಾದಾಗ ಮಾವಿನ ಹಣ್ಣುಗಳನ್ನು ಕೊಡಲು ಪ್ರಾರಂಭಿಸುತ್ತವೆ. ಅದು ಎಷ್ಟು ಹಣ್ಣುಗಳನ್ನು ನೀಡುತ್ತದೆ ಎಂದರೆ ಮಾಲಿಯ ಇಡೀ ಕುಟುಂಬವು ತೃಪ್ತಿಯಾಗಿ ತಿನ್ನುವುದಲ್ಲದೆ, ಉಳಿದ ಹಣ್ಣುಗಳನ್ನು ಮಾರಿ ಲಾಭವನ್ನೂ ಗಳಿಸಬಹುದು. ಇದೇ ರೀತಿ ಭಕ್ತಿ ಎಂಬ ಬೀಜವನ್ನು ಬಿತ್ತಿ ಅಂದರೆ ದೀಕ್ಷೆ ಪಡೆದು ಅದರ ಸ್ಮರಣೆ ದಾನ ರೂಪಿ ನೀರುಣಿಸುತ್ತಿರಬೇಕು.ಮಾವಿನ ಗಿಡದಂತೆ ನಿಧಾನ–ನಿಧಾನವಾಗಿ ಭಕ್ತಿ ರೂಪಿ ಮರ ಆದನಂತರ ಸುಖದ ಸುರಿಮಳೆಯಾಗುವುದು. ಹೇಗೆ ಮಾವಿನ ಮರಕ್ಕೆ ಟನಗಳಷ್ಟು ಹಣ್ಣು ಹತ್ತಿದೆ, ತಿನ್ನುವುದಲ್ಲದೆ ಮಾರಾಟ ಮಾಡಿ ಹಣ ಸಂಪಾದಿಸಬಹುದು. ಸಮಯ ಬಂದಾಗ ಫಲ ತಾನಾಗಿ ದೊರಕುವುದು, ಹಾಗಾಗಿ ಇದೇ ರೀತಿ ಭಕ್ತನು ತಾಳ್ಮೆಯಿಂದಿರಬೇಕು.

➢ (2) ವಿಶ್ವಾಸ:– ಯಾರು ಪರಮಾತ್ಮನಲ್ಲಿ ವಿಶ್ವಾಸ ಇಡುವರೋ ಅವರಿಗೆ ಪರಮಾತ್ಮನ ಭಕ್ತಿಯ ಲಾಭ ಖಂಡಿತವಾಗಿಯೂ ಸಿಗುತ್ತದೆ.

## “ಪರಮಾತ್ಮನಿಗೆ ಯಾವುದೂ ಅಸಾಧ್ಯವಲ್ಲ”

ಒಂದೂರಿನಲ್ಲಿ ಇಬ್ಬರು ಭಕ್ತರಿದ್ದರು. ಒಬ್ಬ ಭಕ್ತನು ನಗರದ ಪಶ್ಚಿಮ ಭಾಗದಲ್ಲಿರುವ ಕಾಡಿನಲ್ಲಿ ಆಶ್ರಮ ಕಟ್ಟಿಸಿಕೊಂಡು ನಲ್ವತ್ತು ವರ್ಷಗಳಿಂದ ಸಾಧನೆ ಮಾಡುತ್ತಿದ್ದನು. ಇನ್ನೊಬ್ಬ ಭಕ್ತನು ನಗರದ ಪೂರ್ವ ಭಾಗದಲ್ಲಿ ಆಶ್ರಮ ಸ್ಥಾಪಿಸಿ ಕೇವಲ ಎರಡು ವರ್ಷಗಳಿಂದ ಸಾಧನೆ ಮಾಡುತ್ತಿದ್ದನು. ಪರಮಾತ್ಮನ ಆಸ್ಥಾನದಿಂದ ದೇವದೂತನೊಬ್ಬ ದಿನವೂ ಆ ಸಾಧಕರ ಬಳಿ ತೆರಳುತ್ತಿದ್ದನು. ಪ್ರತಿಯೊಬ್ಬ ಭಕ್ತನ ಬಳಿ ಒಂದೊಂದು ಗಂಟೆ ಕುಳಿತು ಪರಮಾತ್ಮನ ಚರ್ಚೆ ಮಾಡುತ್ತಿದ್ದನು. ಇಬ್ಬರೂ ಸಾಧಕರ ಒಳ್ಳೆ ಸಮಯ ಕಳೆಯುತ್ತಿತ್ತು. ಒಂದು ದಿನ ದೇವದೂತನು ಭಗವಂತ ವಿಷ್ಣುವಿನ ಬಳಿ ಹೇಳಿದ ತೆರಳಿ, “ಭಗವಂತ! ಕಪಿಲಾನಗರಿಯ ಕಾಡಿನಲ್ಲಿ ತಮ್ಮ ಇಬ್ಬರು ಪರಮ ಭಕ್ತರಿರುತ್ತಾರೆ. ನಿಮ್ಮ ನಾಮ ಸ್ಮರಣೆಯಲ್ಲಿ ತೊಡಗಿದ್ದಾರೆ” ಎಂದನು. ಆಗ ವಿಷ್ಣು, “ಒಬ್ಬ ನಿಜವಾದ ಭಕ್ತನು ಇನ್ನೊಬ್ಬ ಡೊಂಗಿ ಭಕ್ತ” ಎಂದನು. ದೇವದೂತನು ನಲ್ವತ್ತು ವರ್ಷಗಳಿಂದ ಸಾಧನೆ ಮಾಡುತ್ತಿರುವವನು ನಿಜವಾದ ಭಕ್ತನಿರಬೇಕು ಹಾಗೂ ಕೇವಲ ಎರಡು ವರ್ಷಗಳಿಂದ ಸಾಧನೆ ಮಾಡುತ್ತಿರುವವನು ಡೋಂಗಿ ಭಕ್ತನಿರಬೇಕು. ಏಕೆಂದರೆ ದೊಡ್ಡ ಗಡ್ಡ, ತಲೆಯ ಮೇಲೆ ಜಟೆ, ನಲ್ವತ್ತು ವರ್ಷಗಳ ಸಾಧನೆ ಕಡಿಮೆ ಏನಲ್ಲ ಎಂದುಕೊಂಡನು. ದೇವದೂತ ಹೇಳಿದ ಪ್ರಭು, 40 ವರ್ಷಗಳಿಂದ ಭಕ್ತಿ ಮಾಡುತ್ತಿರುವವನೆ ಪರಮ ಭಕ್ತನಾಗಿರಬೇಕು. ಪ್ರಭು ಹೇಳಿದರು ಇಲ್ಲ. ಬೇರೆಯವನು 2 ವರ್ಷಗಳಿಂದ ಸಾಧನೆ ಮಾಡುತ್ತಿರುವವನು, ಪ್ರಭು ದೇವದೂತನಿಗೆ ಕೇಳಿದ “ನನ್ನ ಮಾತಿನ ಮೇಲೆ ನಿನಗೆ ನಂಬಿಕೆ ಬರಲಿಲ್ಲವೇ?” ಆಗ ದೇವದೂತನು, “ಹಾಗಲ್ಲ ಪ್ರಭು, ಆದರೂ ನಲ್ವತ್ತು ವರ್ಷದಿಂದ ಸಾಧನೆ ಮಾಡುತ್ತಿರುವವನೂ ನಿಜವಾದ ಭಕ್ತ ಎಂದು ನನ್ನ ತುಚ್ಛ ಬುದ್ಧಿ ಹೇಳುತ್ತಿದೆ” ಎಂದನು. ವಿಷ್ಣು ದೇವದೂತನನ್ನು ಕುರಿತು, “ಹಾಗಾದರೆ ನಾಳೆಯ ದಿನ ನೀನು ಅವರ ಆಶ್ರಮಗಳಿಗೆ ತಡವಾಗಿ ಹೋಗು. ಅವರು ಇಬ್ಬರೂ ಏಕೆ ತಡವಾಯಿತೆಂದು ಕೇಳಿದರೆ, ಪರಮಾತ್ಮನು ಸೂಜಿಯ ರಂಧ್ರದೊಳಗಿಂದ ಆನೆಯನ್ನು ಹೊರತೆಗೆದರು. ಆ ಲೀಲೆಯನ್ನು ನೋಡಿ ಬರಲು ತಡವಾಯಿತು ಎಂದು ಹೇಳು ಆಗ ನಿನಗೆ ಗೊತ್ತಾಗುವುದು ಪರಮ ಭಕ್ತ ಯಾರು ಎಂದು” ಎಂದನು. ದೇವದೂತನಿಗೆ ಇವರಿಬ್ಬರಲ್ಲಿ ಅಸಲಿ ಭಕ್ತನು ಯಾರು ಎಂದು ತಿಳಿಯುವ ಕುತೂಹಲವಿತ್ತು. ಹಾಗಾಗಿ ಪರಮಾತ್ಮನ ಮಾತಿಗೆ ಒಪ್ಪಿಕೊಂಡು, ಮೊದಲು ಪ್ರತಿದಿನ ದೇವದೂತ ಬೆಳಿಗ್ಗೆ 8 ಗಂಟೆಯ ಸಮೀಪ ದೊಡ್ಡವನ ಬಳಿ ಮತ್ತು 10 ಗಂಟೆಯ ಸಮೀಪ ಚಿಕ್ಕವನ ಬಳಿ ಹೋಗುತ್ತಿದ್ದನು. ಮಾರನೇ ದಿನ ನಲ್ವತ್ತು ವರ್ಷಗಳ ಸಾಧನೆ ಮಾಡಿದ್ದ ಭಕ್ತನ ಬಳಿ ಮಧ್ಯಾನ 12 ಗಂಟೆಗೆ ಹೋದನು. ಆ ಭಕ್ತನು ದೇವದೂತನನ್ನು ಏಕೆ ತಡವಾಗಿ ಬಂದೆಯೆಂದು ಪ್ರಶ್ನಿಸಿದನು. ದೇವದೂತನು ಹೇಳಿದನು, ಪರಮಾತ್ಮನು ಒಂದು ಲೀಲೆ ಮಾಡುವವನಿದ್ದನು, ಅದನ್ನು ನೋಡಿಬಂದೆ ಎಂದನು. 40 ವರ್ಷದವನು ಕೇಳಿದ ಏನು ಲೀಲೆ ಮಾಡಿದನು ಪ್ರಭು? ದೇವದೂತ ಹೇಳಿದನು, ಭಗವಂತ ವಿಷ್ಣು ಅದ್ಭುತ ಮಾಡಿದರು ಆನೆಯನ್ನು

ಸೂಜಿಯ ರಂಧ್ರದಿಂದ ಹೊರತೆಗೆದರು. ಇದನ್ನು ಕೇಳಿ ಭಕ್ತನೆಂದನು ದೇವದೂತ "ಏನು ತಮಾಷೆ ಮಾಡುತ್ತಿರುವೆಯಾ? ಸುಳ್ಳು ಹೇಳಿದರೂ ಎಲ್ಲರೂ ನಂಬುವಂಥಾ ಸುಳ್ಳನ್ನು ಹೇಳಬೇಕು. ಭಗವಂತ ಆನೆಯನ್ನು ಸೂಜಿಯ ರಂಧ್ರದಿಂದ ಹೊರತೆಗೆಯುವುದು ಹೇಗೆ ಸಾಧ್ಯ?" ಎಂದು ಗದರಿದನು. ನನ್ನ ಮುಂದೆ ಮಾಡಿ ತೋರಿಸಿ. ದೇವದೂತನಿಗೆ ತಿಳಿಯಿತು ಭಗವಂತ ಸತ್ಯವೇ ಹೇಳುತ್ತಿದ್ದರು, ಇವನಂತು ಪಶು, ಭಕ್ತನಲ್ಲ ಅವನಿಗೆ ಪರಮಾತ್ಮನ ಮೇಲೆ ವಿಶ್ವಾಸವಿಲ್ಲ, ಭಗವಂತ ಸಮರ್ಥನೆಂದು. ಮನುಷ್ಯ ಮಾಡದ ಕೆಲಸ ಪರಮಾತ್ಮ ಮಾಡಬಲ್ಲನು. ಅವನ ಭಕ್ತಿ ವ್ಯರ್ಥವಾಗಿದೆ. ದೇವದೂತ ನಮಸ್ಕಾರ ಹೇಳಿ ನಡೆದನು

ಮತ್ತು ಇನ್ನೊಬ್ಬ ಭಕ್ತನ ಬಳಿ ತಡವಾಗಿ ಹೋದನು. ಮತ್ತೆ ಆ ಭಕ್ತನು ಏಕೆ ತಡವಾಯಿತು ಎಂದು ಪ್ರಶ್ನೆ ಮಾಡಿದನು. ದೇವದೂತನು ಸಂಕೋಚ ಪಟ್ಟು ಹೇಳಿದನು ಇವನು ಏನೋ ತಪ್ಪಾಗಿ ಹೇಳಬಾರದೆಂದು, ಹೇಳಿದ ಏನು ಹೇಳಲಿ ಭಕ್ತ. ಪರಮಾತ್ಮನಂತು ಅದ್ಭುತ ಮಾಡಿದನು, ಆಶ್ಚರ್ಯವಾಗುವಂತೆ ಮಾಡಿಬಿಟ್ಟನು. ನೋಡಿ ಕಣ್ಣು ಬೇರಗಾದವು. ಪರಮಾತ್ಮನು ಆನೆಯನ್ನು ಸೂಜಿಯ ರಂಧ್ರ (ದಾರ ಹಾಕುವ ರಂಧ್ರ) ದೊಳಗಿಂದ ಹೊರತೆಗೆದರು. ಇದನ್ನು ಕೇಳಿದ ಭಕ್ತ ಹೇಳಿದ ದೇವದೂತ ಇದರಲ್ಲಿ ಏನು ಆಶ್ಚರ್ಯದ ಮಾತು. ಇದೆಲ್ಲಾ ಪರಮಾತ್ಮನ ಲೀಲೆ. ಇಡೀ ಬ್ರಹ್ಮಾಂಡವನ್ನೇ ಒಂದು ಸೂಜಿಯ ರಂಧ್ರದಿಂದ ಹೊರತೆಗೆಯುವ ಶಕ್ತಿ ಪರಮಾತ್ಮನಿಗೆ ಇದೆ. ಇನ್ನು ಈ ಆನೆಯೇನು ಮಹಾ?" ಎಂದನು. ಇದನ್ನು ಕೇಳಿದ ದೇವದೂತನು ಆ ಭಕ್ತನನ್ನು ಆಲಂಗಿಸಿಕೊಂಡು, "ನಿನಗೆ ಜನ್ಮ ನೀಡಿದ ತಂದೆ–ತಾಯಿ ಧನ್ಯರು, ಪರಮಾತ್ಮನ ಮೇಲೆ ನೀನಿಟ್ಟಿರುವ ನಂಬಿಕೆಗೆ ನಾನು ಸಮರ್ಪಿತನು" ಎಂದನು.

ಓದುಗರೇ, ಇದೊಂದು ಉದಾಹರಣೆ ಅಷ್ಟೆ. ವಾಸ್ತವವಾಗಿ ಪರಮಾತ್ಮನ ಮೇಲೆ ಭಕ್ತನು ಪೂರ್ಣ ನಂಬಿಕೆಯನ್ನಿಡಬೇಕು. ಪರಮಾತ್ಮನು ಏನೂ ಮಾಡಬಲ್ಲನು. ಒಂದು ವೇಳೆ ಯಾರಾದರೂ ಪರಮಾತ್ಮನು ಇದನ್ನು ಮಾಡಲಾರ, ಅದನ್ನು ಮಾಡಲಾರ ಎಂದು ಹೇಳಿದರೆ ಅವನು ಭಕ್ತಿ ಮಾಡುವ ಯೋಗ್ಯನಲ್ಲ. ಭಕ್ತಿಯ ನಾಟಕವಾಡಿ ನಿಮ್ಮ ಸಮಯವನ್ನು ಏಕೆ ವ್ಯರ್ಥಮಾಡುತ್ತಿರುವಿರಿ? ಪರಮಾತ್ಮನ ಮೇಲೆ ಪೂರ್ತಿ ನಂಬಿಕೆ ಇಟ್ಟು ಭಕ್ತಿಯ ದಾರಿಯಲ್ಲಿ ನಡೆದರೆ ಗುರಿ ತಲುಪುವಿರಿ.

➢ **(3) ಪರಮಾತ್ಮನು ಮಾಡುವುದೆಲ್ಲಾ ಒಳ್ಳೆಯದಕ್ಕೇ ಮಾಡುತ್ತಾನೆ :–**

ದೀಕ್ಷೆ ಪಡೆದ ನಂತರ ಭಕ್ತನ ಮೇಲೆ ಭಕ್ತಿಯ ಮಾರ್ಗದಲ್ಲಿ ಎಷ್ಟೇ ಕಷ್ಟ ಬಂದರೂ, ಪರಮಾತ್ಮನು ಮಾಡುವುದೆಲ್ಲಾ ಭಕ್ತನ ಒಳಿತಿಗೇ ಎನ್ನುವ ಭಾವನೆ ಭಕ್ತನ ಮನಸ್ಸಿನಲ್ಲಿ ಬರಬೇಕು.

ಕಥೆ:– ರಾಜ ಹಾಗೂ ಮಹಾಮಂತ್ರಿ ಒಬ್ಬ ಗುರುವಿನ ಶಿಷ್ಯರು, ಮಹಾಮಂತ್ರಿಗೆ ಪೂರ್ಣ ವಿಶ್ವಾಸವಿತ್ತು. ಆದರೆ ರಾಜನಿಗೆ ಸತ್ಸಂಗ ಕೇಳಲು ಬಹಳ ಸಮಯ ಸಿಗುತ್ತಿರಲಿಲ್ಲ. ಆ ಕಾರಣದಿಂದ ಅವನು ಪರಮಾತ್ಮನ ವಿಧಾನವನ್ನು ತಿಳಿದಿರಲಿಲ್ಲ. ಆದರೆ ಶ್ರದ್ಧೆಯಿಂದ ಭಕ್ತಿ ಮಾಡುತ್ತಿದ್ದನು. ರಾಜನು ಹೋದಡೆಯಲ್ಲೆಲ್ಲಾ ಮಹಾಮಂತ್ರಿಯನ್ನು ತನ್ನ ಜೊತೆ ಕರೆದೊಯ್ಯುತ್ತಿದ್ದನು. ಅವನಿಗೆ ಹೆಚ್ಚು ಗೌರವ ನೀಡುತ್ತಿದ್ದನು. ಇದನ್ನು ನೋಡಿ ಆ ರಾಜನ ಮತ್ತೊರ್ವ ಮಂತ್ರಿ ಹೊಟ್ಟೆ ಕಿಚ್ಚು ಪಡುತ್ತಿದ್ದನು. ಸಮಯ ಸಿಕ್ಕಾಗಲೆಲ್ಲಾ ಅವನು ರಾಜನ ಬಳಿ ತೆರಳಿ ಆ ಮಹಾಮಂತ್ರಿಯ ಬಗ್ಗೆ ರಾಜನಿಗೆ ಚಾಡಿ ಹೇಳುತ್ತಿದ್ದನು. ಅವನೊಬ್ಬ ಮೋಸಗಾರ ಎಂದು ಹೇಳುತ್ತಿದ್ದನು. ಏನಾದರೂ ಮಾಡಿ ಆ ಮಹಾಮಂತ್ರಿಯ ಪದವಿಯನ್ನು ತಾನು ಗಿಟ್ಟಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದನು. ಒಂದು ದಿನ ಯಾವುದೋ ಕಾರ್ಯನಿಮಿತ್ತ ರಾಜನು ಮಹಾಮಂತ್ರಿ, ದಂಡನಾಯಕ, ಮಿಕ್ಕೆಲ್ಲಾ ಮಂತ್ರಿಗಳ ಜೊತೆ ಬೇರೆ ಊರಿಗೆ ಪ್ರಯಾಣ ಬೆಳಸಬೇಕಾಗಿ ಬಂದಿತು. ಅವರೆಲ್ಲಾ ಅರಮನೆಯ ಒಂದು ಕೋಣೆಯಲ್ಲಿ ಬಂದು ಸೇರಿದ್ದರು. ರಾಜನು ಕತ್ತಿಯನ್ನು ತನ್ನ ಓರೆಗೆ ಇಳಿಸುವ ಸಂದರ್ಭದಲ್ಲಿ ಆಕಸ್ಮಾತ್ತಾಗಿ ಅನ್ಯ ಮಂತ್ರಿಗಳೊಡನೆ ಮಾತನಾಡುತ್ತಿದ್ದನು, ಈ ಕಾರಣದಿಂದ ರಾಜನ ಒಂದು ಬೆರಳು ತುಂಡಾಗಿ ಬಿತ್ತು. ಬೆರಳಿನಿಂದ ರಕ್ತ ಸೋರಲಾರಂಭಿಸಿತು. ಆಗ ಮಂತ್ರಿಯು ಬೊಬ್ಬೆ ಹೊಡೆಯುತ್ತಾ, "ಅಯ್ಯೋ

ರಾಜ, ಇದೇನಾಗಿ ಹೋಯಿತು. ನಿಮ್ಮ ಬೆರಳು ತುಂಡಾಗಿ ಹೋಯಿತಲ್ಲಾ, ಈ ದಿನ ಎಂತಹ ದುರ್ದಿನ, ಇದನ್ನು ನಮ್ಮ ಕಣ್ಣ ಮುಂದೆ ನೋಡಬೇಕಾಯಿತಲ್ಲಾ" ಎಂದು ವಿಲಾಪಿಸಿದನು, ಆದರೆ ಮಹಾಮಂತ್ರಿಯು, "ರಾಜರೇ, ಆಗಿದ್ದೆಲ್ಲಾ ಒಳ್ಳೆಯದಕ್ಕೇ ಎಂದು ತಿಳಿಯಬೇಕು. ಪರಮಾತ್ಮನು ಮಾಡುವುದೆಲ್ಲಾ ಒಳ್ಳೆಯದಕ್ಕೆ ಮಾಡುವನು" ಎಂದನು. ಮೊದಲೇ ಗಾಯದ ನೋವಿನಿಂದ ನರಳುತ್ತಿದ್ದ ರಾಜನಿಗೆ ಗಾಯದ ಮೇಲೆ ಉಪ್ಪು ಹಾಕಿದಂತಾಯ್ತು. ತಕ್ಷಣವೇ ಮಹಾಮಂತ್ರಿಯನ್ನು ಬಂಧಿಸಿ, ಜೈಲಿಗೆ ಹಾಕಲು ಆದೇಶವನ್ನಿತ್ತನು. ಇದೇ ಸಮಯ ಕಾಯುತ್ತಿದ್ದ ಮಂತ್ರಿಯು ಮಹಾಮಂತ್ರಿಯ ಬಗ್ಗೆ ಕುರಿತು ರಾಜನಿಗೆ ಚಾಡಿ ಹೇಳಿದನು. "ನೋಡಿದಿರಾ ರಾಜ, ಇವನೆಂಥಾ ಮೋಸಗಾರ, ನಿಮ್ಮ ಬೆರಳು ಕತ್ತರಿಸಿಕೊಂಡಿರುವುದು ಒಳ್ಳೆಯದು ಎಂದು ಹೇಳುತ್ತಿದ್ದಾನೆ. ಅವನು ನಿಜವಾಗಲೂ ನಿಮ್ಮ ಶತ್ರು", ಎಂದನು. ರಾಜನು ಅವನ ಮಾತುಗಳಿಗೆ ಮರಳಾಗಿ ಮಹಾಮಂತ್ರಿಯನ್ನು ಜೈಲಿಗೆ ಕಳುಹಿಸಿ, ಮಂತ್ರಿಯನ್ನು ಮಹಾಮಂತ್ರಿಯನ್ನಾಗಿ ಮಾಡಿದನು. ಬೆರಳಿಗೆ ಉಪಚಾರವಾಯಿತು, ಆದರೆ ಬೆರಳು ತುಂಡಾಗಿತ್ತು. ಆದರೆ ಯಾವ ನೋವು ಇರಲಿಲ್ಲ. ಈಗ ರಾಜನ ಕೈಯಲ್ಲಿ ಮೂರು ಬೆರಳು ಮತ್ತು ಒಂದು ಹೆಬ್ಬೆರಳು ಉಳಿದಿತ್ತು.

ಒಮ್ಮೆ ರಾಜನು ಮಂತ್ರಿ ಹಾಗೂ ಬೇಟೆಗಾರರ ಜೊತೆ ಬೇಟೆಯಾಡಲು ಕಾಡಿಗೆ ಹೋದನು. ಬೇಟೆಯಾಡುತ್ತಾ ರಾಜ ಮತ್ತು ಮಂತ್ರಿ ದೂರವಾಗಿ ದಟ್ಟವಾದ ಕಾಡಿನೊಳಗೆ ಹೊದರು. ಅಷ್ಟರಲ್ಲಿ ಗುಟ್ಟಗಾಡಿನ ಜನರಿಗೆ ಅವರಿಬ್ಬರು ಸೆರೆ ಸಿಕ್ಕರು, ಆ ದಿನ ಆದಿವಾಸಿಗಳ ಹಬ್ಬವಿತ್ತು. ದೇವಿಗೆ ಮನುಷ್ಯರನ್ನು ಬಲಿ ಕೊಡಬೇಕಿತ್ತು. ಹಾಗಾಗಿ ಇವರಿಬ್ಬರನ್ನು ಬಂಧಿಸಿ ಅವರ ಪುರೋಹಿತರ ಬಳಿ ಎಳೆದೊಯ್ದರು. ಪುರೋಹಿತನು ಬಹಳ ಸಂತಸಗೊಂಡನು ಇಬ್ಬರ ಬಲಿ ಕೊಟ್ಟರೆ ದೇವಿ ಇನ್ನೂ ಅಧಿಕ ಪ್ರಸನ್ನಗೊಳ್ಳುವಳು. ಆದರೆ ಮೊದಲು ಅವರನ್ನು ಪರೀಕ್ಷಿಸಿ, ದೇಹದ ಯಾವುದೇ ಭಾಗ ತುಂಡಾಗಿರಬಾರದು. ಇಲ್ಲದಿದ್ದರೆ ದೇವಿ ಕೋಪಗೊಳ್ಳುವಳು" ಎಂದನು. ಗುಡ್ಡಗಾಡಿನ ಜನರು ಅವರಿಬ್ಬರನ್ನು ಪರೀಕ್ಷಿಸಿದಾಗ ರಾಜನ ಕೈ ಬೆರಳು ತುಂಡಾಗಿರುವುದು ಗಮನಕ್ಕೆ ಬಂದಿತು. ಇನ್ನೊಬ್ಬ ಚೆನ್ನಾಗಿದ್ದಾನೆ ಎಂದು ಹೇಳಿದರು. ಪುರೋಹಿತ ಹೇಳಿದ ಅವನ ತಲೆ ಕಡಿದುಬಿಡಿ ಎಂದನು, ಹಾಗಾಗಿ ರಾಜನನ್ನು ಬಿಟ್ಟು ಆ ಮಂತ್ರಿಯ ತಲೆ ರಾಜನ ಮುಂದೆಯೇ ಕಡಿದು ದೇವಿಗೆ ಅರ್ಪಿಸಿದರು. ಈ ಘಟನೆ ನೋಡಿದ ರಾಜನಿಗೆ ಜ್ಞಾನೋದಯವಾಯಿತು. ಮಹಾಮಂತ್ರಿ 'ಆಗಿದ್ದೆಲ್ಲಾ ಒಳ್ಳೆಯದಕ್ಕೆ' ಎಂದು ಹೇಳಿದ ಮಾತು ಜ್ಞಾಪಕಕ್ಕೆ ಬಂದಿತು. ಕಾಡಿನಿಂದ ಅರಮನೆಗೆ ಬಂದವನೇ ಜೈಲಿಗೆ ಹೋಗಿ ಮಹಾಮಂತ್ರಿಯ ಬಳಿ ತೆರಳಿ ಅವನನ್ನು ಬಂಧನ ಮುಕ್ತಗೊಳಿಸಿದನು. ನಂತರ ಮಹಾಮಂತ್ರಿಯನ್ನು ಕುರಿತು, "ನನಗೇನೋ ಕೈ ಬೆರಳು ತುಂಡಾಗಿದ್ದು ಮತ್ತು ನೀವು ಹೇಳಿದ್ರಿ ಒಳ್ಳೆಯದಾಯಿತು, ಭಗವಂತ ಮಾಡುವುದೆಲ್ಲಾ ಒಳ್ಳೆಯದಕ್ಕೆ ಮಾಡುತ್ತಾನೆ. ಆ ಮಾತು ಸತ್ಯ. ನನ್ನ ಬೆರಳು ಆ ದಿನ ತುಂಡಾಯಿತು ಆದ್ದರಿಂದ ಇಂದು ನಾನು ಬದುಕಿದ್ದೇನೆ. ಒಳ್ಳೆಯದೇ ಆಯಿತು. ಇಲ್ಲದಿದ್ದರೆ ನಾನಿಂದು ಜೀವಂತವಾಗಿ ಉಳಿಯುತ್ತಿರಲಿಲ್ಲ. ಆದರೆ ನಿನಗೇನು ಒಳ್ಳೆಯದಾಯಿತು? ನೀನು ವ್ಯರ್ಥ ಆರು ತಿಂಗಳು ಜೈಲಿನಲ್ಲಿರಬೇಕಾಯಿತಲ್ಲಾ? ಎಂದನು. ಆಗ ಆ ಮಹಾಮಂತ್ರಿಯೂ, "ರಾಜ, ಇಲ್ಲಿಯೂ ನನಗೆ ಒಳ್ಳೆಯದೇ ಆಯಿತು. ನಾನು ಜೈಲಿನಲ್ಲಿ ಇರದೇ ಹೋಗಿದ್ದರೆ, ನಾನು ನಿಮ್ಮ ಜೊತೆಯಲ್ಲಿ ಬರುತ್ತಿದ್ದೆ, ಆಗ ನನ್ನ ತಲೆ ಕಡಿಯುತ್ತಿದ್ದರು. ಈಗ **6** ತಿಂಳಿನ ಜೈಲು ಶಿಕ್ಷೆ ನನ್ನ ಪ್ರಾಣ ಉಳಿಸಿತು, ನನಗೆ ಇದು ಒಳ್ಳೆಯದೇ ಆಯಿತು ಎಂದನು. ಹೀಗೆ ಪರಮಾತ್ಮನ ಮೇಲೆ ನಂಬಿಕೆ ಇಟ್ಟು ತಮ್ಮ ಜೀವನದ ದಾರಿಯಲ್ಲಿ ನಡೆಯಬೇಕು.

❖ ಏಕ್ ಲೇವಾ ಏಕ್ ದೇವಾ ದೂತಂ । ಕೋಈ ಕಿಸೀ ಕಾ ಪಿತಾ ನ ಪೂತಂ ॥

ಒಬ್ಬ ರೈತನಿಗೆ ಒಬ್ಬ ಮಗ ಹುಟ್ಟಿದನು. ಮಗನು **8** ವರ್ಷದವನಾಗಿದ್ದಾಗ ರೈತನ ಹೆಂಡತಿ ಸತ್ತು ಹೋದಳು. ರೈತನು ಎರಡನೇ ಮದುವೆ ಮಾಡಿಕೊಂಡನು. ಅವನಿಗೆ ಇನ್ನೊಬ್ಬ ಮಗ ಹುಟ್ಟಿದನು. ಕೆಲವು ವರ್ಷಗಳ ನಂತರ ಆ ರೈತನ **2**ನೇ ಹೆಂಡತಿಯೂ ತೀರಿಕೊಂಡಳು. ರೈತನಿಗೆ

16 ಎಕರೆ ಜಮೀನಿತ್ತು. ಕೆಲವೇ ವರ್ಷಗಳಲ್ಲಿ, ಮೊದಲನೇ ಹೆಂಡತಿಯ ಮಗ ಮದುವೆ ವಯಸ್ಸಿಗೆ ಬಂದಿದ್ದರಿಂದ ರೈತನು ಅವನಿಗೆ ಮದುವೆ ಮಾಡಿ ಸೊಸೆಯನ್ನು ಮನೆ ತುಂಬಿಸಿಕೊಂಡನು. ಅಷ್ಟರಲ್ಲಿ ರೈತನಿಗೆ ಕಾಯಿಲೆ ಬಂದು ಅವನೂ ತೀರಿಕೊಂಡನು. ಚಿಕ್ಕಮಗ 10–12 ವರ್ಷದ ವಯಸ್ಸಿನಲ್ಲಿ ರೋಗಗ್ರಸ್ಥನಾದನು. ಕೆಲವು ದಿನ ಉಪಚಾರ ಮಾಡಿಸಿದರು. ನಂತರ ಅವನಿಗೆ ಚಿಕಿತ್ಸೆ ಕೊಡುವ ಬದಲು ಅವನು ಸಾಯಬೇಕೆಂದು ಅವರಿಬ್ಬರೂ ಆಶಿಸಿದರು. ಅವನು ಸತ್ತು ಹೋದರೆ ಆ 8 ಎಕರೆ ಜಮೀನು ತಮ್ಮದಾಗುವುದೆಂದು ತಿಳಿದರು. ಅವನನ್ನು ಉಪಚರಿಸುವ ವೈದ್ಯನಿಗೆ 500ರೂ ಲಂಚಕೊಟ್ಟು, ಅವನಿಗೆ ಕೊಡುವ ಔಷಧಿಯಲ್ಲಿ ವಿಷ ಬೆರೆಸಿ ಕೊಡುವಂತೆ ಹೇಳಿದರು. ಆ ವೈದ್ಯನು ಹಣದ ದುರಾಸೆಗೆ ಒಳಗಾಗಿ ಆ ಕೆಲಸ ಮಾಡಲು ಒಪ್ಪಿಕೊಂಡನು. ಅದರಂತೆ ಔಷಧಿಯಲ್ಲಿ ವಿಷ ಬೆರಸಿ ಕುಡಿಸಿದನು. ತಮ್ಮನು ಇಹಲೋಕ ತ್ಯಜಿಸಿದನು. ಮೊದಲ ಹೆಂಡತಿಯ ಮಗ ಮತ್ತು ಸೊಸೆಯ ಸಂತೋಷಕ್ಕೆ ಪಾರವೇ ಇರಲಿಲ್ಲ, ತಮ್ಮನು ರೋಗದಿಂದ ಮರಣಿಸಿದನೆಂದು ಜನರೆಲ್ಲಾ ನಂಬಿದರು. ತಮ್ಮನ ಮರಣದ ಒಂದು ವರ್ಷದ ನಂತರ ಆ ದಂಪತಿಗೆ ಒಬ್ಬ ಮಗ ಹುಟ್ಟಿದನು. ಅದರಿಂದ ಅವರಿಬ್ಬರೂ ಇನ್ನೂ ಸಂತೋಷಗೊಂಡರು. ಮಗನು ಹುಟ್ಟಿದ ಖುಷಿಯಲ್ಲಿ ಊರಿಗೆಲ್ಲಾ ಸಿಹಿ ಹಂಚಿದರು, ನಂತರ ಯವ ಸಂತಾನವಾಗಲಿಲ್ಲ. ಒಬ್ಬನೇ ಮಗನನ್ನು ಬಹಳ ಪ್ರೀತಿಯಿಂದ ಬೆಳೆಸಿದರು. ಒಳ್ಳೆ ತುಪ್ಪ–ಹಾಲು, ದ್ರಾಕ್ಷಿ ಗೋಡಂಬಿ ತಿನ್ನಿಸಿ ದಷ್ಟ–ಪುಷ್ಟ ಮಾಡಿದರು. ಅವನು 16 ವರ್ಷದವನಾದಾಗ ಅವನಿಗೆ ಮದುವೆ ಮಾಡಿದರು. ಆ ಸಮಯ ಬಾಲ್ಯ ವಿವಾಹವಾಗುತ್ತಿತ್ತು. ಆ ಹುಡುಗನಿಗೆ ಯಾವುದೋ ಕಾಯಿಲೆ ಬಂದಿತು. ದೊಡ್ಡ ದೊಡ್ಡ ವೈದ್ಯರನ್ನು ಕರೆಸಿದರು. ಎಷ್ಟೇ ಚಿಕಿತ್ಸೆ ಕೊಡಿಸಿದರೂ ವಾಸಿಯಾಗಲಿಲ್ಲ. ತನ್ನ ಬಳಿ ಇದ್ದ ಹಣವನ್ನು ಖರ್ಚು ಮಾಡಿದರು. ಮುತ್ತು ಮತ್ತು ವಜ್ರದ ಭಸ್ಮ ಕೂಡಾ ಔಷಧಿಯಲ್ಲಿ ಬೇರೆಸಿ ಕೊಟ್ಟರು.

ಆ ಕಾರಣ 8 ಎಕರೆ ಜಮೀನನ್ನು ಮಾರಿ ಅವನಿಗೆ ಚಿಕಿತ್ಸೆ ಕೊಡಿಸಿದರು. ಆದರೂ ವಾಸಿಯಾಗಲಿಲ್ಲ. ಅಂತಿಮ ದಿನ ಬಂತು ಆಗ ಮಗನ ಪಕ್ಕದಲ್ಲಿ ಕುಳಿತು ಅವನು ಚಿಂತಿಸತೊಡಗಿದನು, ಆಗ ಇದ್ದಕ್ಕಿದ್ದಂತೆ ಮಗ 'ಅಣ್ಣಾ' ಎಂದು ಕೂಗಿದನು. ಆಗ ತಂದೆಯು, "ಮಗನೇ, ನಾನು ನಿನ್ನ ಅಣ್ಣನಲ್ಲ, ನಿನ್ನ ತಂದೆ" ಎಂದನು. ಆಗ ಮಗನು, "ನಾನು ನಿನ್ನ ಮಗನಲ್ಲ ನಿನ್ನ ತಮ್ಮ, ನೀನು ಕೈಯಾರೆ ಸಾಯಿಸಿದ ತಮ್ಮನೇ ನಿನ್ನ ಮಗನಾಗಿ ಹುಟ್ಟಿದ್ದೇನೆ, ನನಗೆ ಸೇರಬೇಕಾದ 8 ಎಕರೆ ಜಮೀನನ್ನು ಪಡೆದಿದ್ದೇನೆ. ಇನ್ನೇನಿದ್ದರೂ ನನ್ನನ್ನು ಸುಡಲು ನಿನಗೆ ಬೇಕಾಗಿರುವುದು ಸೌದೆ ಮತ್ತು ಹೆಣದ ಬಟ್ಟೆ ಮಾತ್ರ. ನಿನ್ನ ಸಾಲವೆಲ್ಲಾ ತೀರಿದೆ" ಎಂದು ಹೇಳಿದನು. ಆಗ ಪತಿ ಪತ್ನಿ ಇಬ್ಬರೂ ಪಶ್ಚಾತ್ತಾಪಟ್ಟರು. "ಇದೆಲ್ಲಾ ಪರಮಾತ್ಮನ ನಿಯಮ. ಅದು ಅಚಲ. ನಾವು ದುರಾಸೆಯಿಂದ ಪಾಪ ಮಾಡಿದೆವು. ದೇವರು ನಮಗೆ ಬುದ್ಧಿ ಕಲಿಸಿದನು. ಯಾವ ಆಸ್ತಿಗಾಗಿ ನಾವು ನಿನ್ನನ್ನು ಕೊಂದೆವೋ, ಆ 8 ಎಕರೆ ಜಮೀನು ಉಳಿಯಲಿಲ್ಲ, ನೀನು ತೀರಿಕೊಂಡರೆ ನಮಗೆ ಇನ್ಯಾವ ಮಕ್ಕಳೂ ಇಲ್ಲ, ಇನ್ನು ಮಿಕ್ಕ ಆಸ್ತಿ ಬೇರೆ ಯಾರೋ ಇಟ್ಟುಕೊಳ್ಳುವರು. ಪರಮಾತ್ಮನು ನ್ಯಾಯವನ್ನೇ ಮಾಡಿದ್ದಾನೆ, ಆದರೆ ನೀನು ತೀರಿಕೊಂಡರೆ ನಿನ್ನ ಪತ್ನಿ ವಿಧವೆಯಾಗುತ್ತಾಳೆ. ಸತಿ ಪದ್ಧತಿಯಂತೆ ನಿನ್ನ ಜೊತೆ ಅವಳನ್ನು ಜೀವಂತ ಸುಡುವರು ಅವಳಿಗೆ ಯಾಕೆ ಈ ಶಿಕ್ಷೆ?" ಇವಳೊಂದಿಗೆ ಭಗವಂತ ಅನ್ಯಾಯ ಮಾಡಿದನು ಎಂದು ಪ್ರಶ್ನಿಸಿದರು. ಆಗ ಆ ಮಗನ ರೂಪದಲ್ಲಿದ್ದ ತಮ್ಮನು ಹೇಳಿದನು. ಅವಳಿಗೆ ಸರಿಯಾದ ಶಾಸ್ತಿಯಾಗುತ್ತದೆ. ಅವಳು ಮತ್ತಿನ್ಯಾರೂ ಅಲ್ಲ. ನನಗೆ ಔಷಧಿಯ ರೂಪದಲ್ಲಿ ವಿಷ ಕೊಟ್ಟ ವೈದ್ಯನ ಆತ್ಮವಾಗಿದೆ. ಅವನ ದುರಾಸೆಯಿಂದ ನಾನು ತೀರಿಕೊಂಡೆ, ಈಗ ಆ ಶಿಕ್ಷೆ ಅವಳು ಅನುಭವಿಸುತ್ತಾಳೆ ಏಕೆಂದರೆ ಆಗ ಸತಿ ಪದ್ಧತಿ ಉತ್ತುಂಗದಲ್ಲಿತ್ತು. ಗಂಡ ಸತ್ತರೆ ಹೆಂಡತಿಯನ್ನು ಪತಿಯ ಹೆಣದ ಜೊತೆ ಜೀವಂತವಾಗಿ ಸುಡುತ್ತಾರೆ. ಇವಳನ್ನು ನನ್ನ ಹೆಣದ ಜೊತೆ ಸುಟ್ಟು ಹಾಕುತ್ತಾರೆ. ಮಾಡಿದ ಪಾಪಕ್ಕೆ ತಕ್ಕ ಶಿಕ್ಷೆ ಸಿಗುತ್ತದೆ" ಎಂದನು.

ಓದುಗರೇ, ಸ್ವಲ್ಪ ಯೋಚಿಸಿ ನೋಡಿ. ಪರಮಾತ್ಮನ ದೃಷ್ಟಿಯಿಂದ ಯಾವುದನ್ನೂ ಮುಚ್ಚಿಡಲಾಗದು, ಮಾಡಿದ್ದುಣ್ಣೋ ಮಹರಾಯ. ಪ್ರತಿ ಕುಟುಂಬವೂ ಇದೇ ರೀತಿ

ಒಬ್ಬರಿಗೊಬ್ಬರು ಸಂಬಂಧಿಸಿದವರಾಗಿರುತ್ತಾರೆ. ಒಬ್ಬರು ಹಿಂದಿನ ಜನ್ಮದ ಸಾಲ ಪಡೆಯಲು ಬಂದಿದ್ದಾರೆ, ಇನ್ನೊಬ್ಬರು ಪೂರ್ವ ಜನ್ಮದ ಸಾಲ ತೀರಿಸಲು ಬಂದಿರುತ್ತಾರೆ.

ಉದಾಹರಣೆಗೆ:– ಒಬ್ಬ ತಂದೆಯು ಮಗನನ್ನು ಸಾಕಿ ಬೆಳೆಸಿ, ಓದಿಸಿದನು. ಮಗನಿಗೆ ಮದುವೆ ಮಾಡಲು ಎಲ್ಲಾ ಏರ್ಪಾಟು ಮಾಡಿದನು. ಮದುವೆ ಎರಡು ದಿನವಿರುವಾಗ ಮದುಮಗನು ಯಾವುದೋ ದುರ್ಘಟನೆಯಿಂದ ತೀರಿಕೊಂಡನು. ಇದರರ್ಥ ಆ ಮಗನು ಹಿಂದಿನ ಜನ್ಮದ ಸಾಲವನ್ನು ಅಪ್ಪನಿಂದ ಪಡೆಯಲು ಬಂದಿದ್ದನು ಎಂಬುದೇ ಅಲ್ಲವೇ?

ಒಬ್ಬ ಅಪ್ಪನು ರೋಗಿಯಾದನು. ಮಗ ಎಷ್ಟೇ ಖರ್ಚುಮಾಡಿದರೂ ತಂದೆಯ ರೋಗ ವಾಸಿಯಾಗಲಿಲ್ಲ. ಸಾಕಷ್ಟು ಹಣ ಖರ್ಚಾದ ಮೇಲೆ ತಂದೆ ತೀರಿಕೊಂಡನು. ಅಂದರೆ ಮಗನು ಹಿಂದಿನ ಜನ್ಮದ ಸಾಲವನ್ನು ತೀರಿಸಲು ಬಂದಿದ್ದಾನೆ ಎಂದರ್ಥ.

ಅಪ್ಪ ಮಗಳ ಮದುವೆ ಮಾಡಿದ್ದಾನೆ. ಸಾಕಷ್ಟು ವರದಕ್ಷಿಣೆ ಕೊಟ್ಟಿದ್ದಾನೆ. ಸ್ವಲ್ಪ ದಿನದಲ್ಲೇ ಮದುಮಗಳು ತೀರಿಕೊಂಡಳು. ಅಂದರೆ ಅಳಿಯನು ತನ್ನ ಹಿಂದಿನ ಜನ್ಮದ ಸಾಲವನ್ನು ಪಡೆಯಲು ಬಂದಿದ್ದಾನೆ. ವರ್ತಮಾನದಲ್ಲಿ ಯಾರು ಮೋಸಮಾಡಿ ಹಣ ಸಂಗ್ರಹಿಸುತ್ತಾರೆ, ಅವನು ಮುಂದಿನ ಜನ್ಮದಲ್ಲಿ ಅಳಿಯನಾಗಿ ಪಡೆಯುವನು. ಪರಮಾತ್ಮನ ಅಟಲ ನಿಯಮವಿದೆ. ಬುದ್ಧಿವಂತನಿಗೆ ಸಂಕೇತವೇ ಸಾಕು. ಈ ಮೇಲಿನ ಘಟನೆಗಳೆಲ್ಲಾ ಕಥೆಗಳಲ್ಲ, ವಾಸ್ತವವಾಗಿದೆ. ಯಾರಾದರೂ ಇದು ಕಟ್ಟುಕತೆ, ಇದನ್ನೆಲ್ಲಾ ನೋಡಿದವರ್‍ಯಾರು? ನಂಬುವುದು ಹೇಗೆ ಎನ್ನಬಹುದು. ಹೇಗೆಂದರೆ ಕಳ್ಳನನ್ನು ನೋಡಿದ ಒಬ್ಬ ಸಭ್ಯ ಮನುಷ್ಯ, "ಅರೆ, ನೀನು ಕಳ್ಳತನ ಮಾಡಬೇಡ, ಸಿಕ್ಕಿ ಹಾಕಿಕೊಂಡರೆ ಮೊದಲು ಸಾರ್ವಜನಿಕರು ನಿನ್ನನ್ನು ಹೊಡೆಯುತ್ತಾರೆ. ನಂತರ ಪೋಲೀಸರು ಹೊಡೆಯುವರು, ಜೈಲಿಗೂ ಹೋಗಬೇಕಾಗಬಹುದು. ಯಾರಾದರೂ ಇದು ಕಟ್ಟುಕತೆ, ಕಳ್ಳನಿಗೆ ಏನಾಗುವುದೆಂದು ಯಾರಿಗೆ ಗೊತ್ತು ಎಂದು ಹೇಳಿದಂತೆ ಆಯಿತು. ಕಳ್ಳನಿಗೆ ನಿಜಾಂಶ ಹೇಳಿ ಎಚ್ಚರಿಕೆ ನೀಡಲಾಗಿದೆ. ಅದು ನಿಜವೂ ಹೌದು, ಕಳ್ಳನು ನಿಜವನ್ನು ನಂಬಿ ಕಳ್ಳತನ ಬಿಟ್ಟು ಬಿಟ್ಟರೆ ಅವನಿಗೇ ಒಳ್ಳೆಯದು, ಅದೇ ಕಳ್ಳನು, ಏನಾಗುತ್ತೆ ನೋಡೋಣ ಏನಾಗುವುದೆಂದು ಯಾರಿಗೆ ಗೊತ್ತು ಎಂದು ಚಿಂತಿಸಿದರೆ ಮುಂದೆ ಅವನೇ ಕಷ್ಟ ಪಡಬೇಕಾಗಬಹುದು.

ಈ ರೀತಿ ಮೇಲೆ ಹೇಳಿರುವ ಕತೆ ಬರೀ ಕಟ್ಟು ಕತೆ, ಹೆದರಿಸಲು ಹೇಳುವಂಥದ್ದು ಎಂದು ತಿಳಿದರೆ ಅದೊಂದು ದೌರ್ಭಾಗ್ಯ. ಇದನ್ನು ಅಷ್ಟೇ ಸತ್ಯವೆಂದು ತಿಳಿಯಿರಿ ಅಂದರೆ ಕಳ್ಳನಿಗೆ ಎಚ್ಚರಿಕೆ ನೀಡುವಷ್ಟು.

❖ ಲೇಖಕರು **1978**ರಲ್ಲಿ ಈ ಕತೆಯನ್ನು ಒಬ್ಬ ದನದ ಡಾಕ್ಟರ್‌ನಿಂದ ಕೇಳಿದ್ದರು. ರೈತನ ಇಬ್ಬರು ಮಕ್ಕಳ ಕತೆ ಅವನು ಈ ಕತೆಯನ್ನು ತನ್ನ ಬಳಿ ಬಂದವರಿಗೆಲ್ಲಾ ಹೇಳುತ್ತಿದ್ದನು, ಆದರೆ ಅದನ್ನು ಪಾಲಿಸುತ್ತಿರಲಿಲ್ಲ. ಆ ಡಾಕ್ಟರ್ ಹೇಳುವುದೇ ಒಂದು, ಮಾಡುವುದೇ ಇನ್ನೊಂದು ಎನ್ನುವ ಹಾಗೆ ತನ್ನ ವೈದ್ಯವೃತ್ತಿ ಮಾಡುತ್ತಿದ್ದನು. **10** ರೂಪಾಯಿಯ ಔಷಧಿ ನೀಡಿ **4** **Distilled Water** ಇಂಜೆಕ್ಷನ್‌ಕೊಟ್ಟು **200–300**ರೂ ಪಡೆಯುತ್ತಿದ್ದನು. ಸಂಜೆಯವೇಳೆ ಭೇಟಿಯಾದಾಗ ತನ್ನ ಕೆಲಸದ ಬಗ್ಗೆ ಹೇಳುತ್ತಿದ್ದ ಅಂದರೆ ಒಂದೊಮ್ಮೆ ಕಡಿಮೆ ದುಡ್ಡು ತೆದುಕೊಳ್ಳದಿದ್ದರೆ ರೈತನು ಒಳ್ಳೆಯ ಔಷಧಿ ಕೊಡಲಿಲ್ಲವೆಂದು ಯೋಚಿಸುತ್ತಾನೆ ಎಮ್ಮೆಯಂತು **10** ರೂಪಾಯಿಯ ಔಷಧಿಯಿಂದಲೇ ಸ್ವಸ್ಥವಾಗುವುದಿತ್ತು. ಇಂಥ ವ್ಯಕ್ತಿಯ ಮಾತಿನಲ್ಲಿ ಮತ್ತು ಮಾಡುವ ಕೆಲಸದಲ್ಲಿ ಅಂತರವಿದೆ. ಅವರ ಮೂಲಕ ಹೇಳಲ್ಪಡುವ ಈ ಕಥೆಗಳು ಅನ್ಯರ ಮೇಲೆ ಏನು ಪ್ರಭಾವ ಬೀರುವುದು. ಸಂತ ಗರೀಬ್‌ದಾಸರು, ಕೇವಲ ಹೇಳುವುದರಿಂದ– ಕೇಳುವುದರಿಂದ ಅಲ್ಲ, ಅದನ್ನು ಕಾರ್ಯಾರೂಪಕ್ಕೆ ತಂದರೆ ಜೀವನ ಸಫಲವಾಗುವುದು ಎಂದು ಹೇಳಿದ್ದಾರೆ. ಪರಮಾತ್ಮನ ನಿಯಮವನ್ನು ತಿಳಿದುಕೊಂಡು ಪರಿಶುದ್ಧ ಜೀವನವನ್ನು ಮಾಡಿ, ಜೀವನದ ದಾರಿಯನ್ನು ಮುಳ್ಳುಗಳಿಂದ ಮುಕ್ತಗೊಳಿಸಿ ಎಂದು ತಿಳಿಸಿದ್ದಾರೆ.

## "ಒಂದು ಕೊಟ್ಟರೆ ಒಂದು ತೆಗೆದುಕೊಳ್ಳಬೇಕು"

ಶಿವನು ಅಮರನಾಥ್ ಎಂಬ ಸ್ಥಳದಲ್ಲಿ ತನ್ನ ಪತ್ನಿಯಾದ ಪಾರ್ವತಿಗೆ ಒಂದು ಒಣಗಿದ ಮರದ ಕೆಳಗೆ ಕುಳಿತು ದೀಕ್ಷೆ ನೀಡಿದ್ದನು. ಆ ವೃಕ್ಷದ ಪೊಟರೆಯಲ್ಲಿ ಒಂದು ಹೆಣ್ಣು ಗಿಳಿಯು ಮೊಟ್ಟೆಗಳನ್ನಿಟ್ಟಿತ್ತು. ಆರೋಗ್ಯವಂತ ಮೊಟ್ಟೆಗಳು ಶಿವನ ಕೈಗಳಿಂದ ಹೊಡೆಯಲ್ಪಟ್ಟ ಚಪ್ಪಾಳೆಯಿಂದ ಮರಿಗಳಾಗಿ ಹೊರಬಂದು ಹಾರಿ ಹೋದವು. ಅವುಗಳಲ್ಲಿ ಒಂದು ಮೊಟ್ಟೆ ಅಸ್ವಸ್ಥವಾಗಿತ್ತು. ಆ ಮೊಟ್ಟೆಯೊಳಗೊಂದು ಜೀವವಿತ್ತು. ಶಿವನು ಪಾರ್ವತಿಗೆ ದೀಕ್ಷೆ ಕೊಡುವ ವೇಳೆ ಆ ಮೊಟ್ಟೆಯಲ್ಲಿದ್ದ ಜೀವವು ದೀಕ್ಷಾ ಮಂತ್ರವನ್ನು ಕೇಳಿಸಿಕೊಂಡು ಆರೋಗ್ಯವಂತ ಮರಿಯಾಗಿ ಮಾರ್ಪಟ್ಟಿತು. ಆ ಮರಿಗೆ ರೆಕ್ಕೆಗಳು ಬಂದವು. ಹಾರಲು ಸಾಮರ್ಥ್ಯಬಂದಿತು. ಇತ್ತ ಪಾರ್ವತಿ ಸಮಾಧಿಸ್ಥಳಾದಳು. ಅವಳು ಹೂಂ ಗುಡುವುದನ್ನು ನಿಲ್ಲಿಸಿದಳು. ಗಿಳಿಮರಿಯು ಹೂಂಗುಡಲಾರಂಭಿಸಿತು. ಶಿವನು ನೋಡಿದಾಗ ಪಾರ್ವತಿಯೂ ಸಮಾಧಿಸ್ಥಳಾಗಿದ್ದಾಳೆ. ಮಾತನಾಡುತ್ತಿಲ್ಲ, ಕೇಳಿಸಿಕೊಳ್ಳುತ್ತಿಲ್ಲ. ಹೂಂಗುಡುವ ಶಬ್ದ ಎಲ್ಲಿಂದ ಬರುತ್ತಿದೆ ಎಂದು ನೋಡಿದನು. ಆಗ ಮರದ ಪೊಟರೆಯಿಂದ ಗಿಳಿಮರಿ ಮಾತನಾಡುತ್ತಿತ್ತು. ಆಗ ಶಿವನು ಅದನ್ನು ಕೊಲ್ಲಬೇಕೆಂದಿದ್ದಾಗ ಅದು ಅಲ್ಲಿಂದ ಹಾರಿಹೋಯಿತು. ಶಿವನು ಸಹ ತನ್ನ ಸಿದ್ಧಿ ಶಕ್ತಿಯಿಂದ ಹಾರಿ ಅದನ್ನು ಕೊಲ್ಲಲು ಮುಂದಾದನು. ಋಷಿ ವೇದವ್ಯಾಸರ ಪತ್ನಿಯು ಆಗ ತಾನೇ ಆಕಳಿಸಲು ಬಾಯಿ ತೆಗೆದಿದ್ದಳು. ಆಗ ಆ ಗಿಳಿ ಮರಿಯ ಆತ್ಮವು ತನ್ನ ದೇಹ ತ್ಯಾಗ ಮಾಡಿ ಅವಳ ಗರ್ಭದಲ್ಲಿ ಬಾಯಿಯಿಂದ ಪ್ರವೇಶಿಸಿತು. ಆಗ ಶಿವನು ಅಲ್ಲಿಗೆ ಬಂದು ವೇದವ್ಯಾಸರ ಪತ್ನಿಯನ್ನು ಕುರಿತು, ನನ್ನ ಜ್ಞಾನವನ್ನು ಕದ್ದು ಜೀವವು ಗಿಳಿ ಮರಿಯ ದೇಹವನ್ನು ತ್ಯಜಿಸಿ ನಿಮ್ಮ ಗರ್ಭದಲ್ಲಿ ಪ್ರವೇಶಿಸಿದೆ. ಆ ಕಳ್ಳನನ್ನು ನಾನು ಕೊಲ್ಲುವೆ, ಎಂದನು. ಆ ಸಮಯಕ್ಕೆ ಸರಿಯಾಗಿ ವೇದವ್ಯಾಸರು ಅಲ್ಲಿಗೆ ಬಂದರು. ಎಲ್ಲವನ್ನೂ ಕೇಳಿ ಶಿವನಿಗೆ ಹೀಗೆಂದರು. "ಹೇ ದೇವಾ! ಯಾರು ಕಳ್ಳರು, ಎಂಥಾ ಕಳ್ಳರು? ಆಗ ಶಿವನು "ನಾನು ಪಾರ್ವತಿಗೆ ದೀಕ್ಷೆ ಕೊಡುತ್ತಿದ್ದೆ. ಮಂತ್ರದ ರಹಸ್ಯವನ್ನು ಹೇಳುತ್ತಿದ್ದೆ. ಈ ಗಿಳಿಯು ಕೇಳಿಸಿಕೊಂಡು ಬಿಟ್ಟಿದೆ. ಹಾಗೂ ಅಮರವಾಗಿದೆ. ಆ ಗಿಳಿಯು ಇನ್ಯಾರ ಬಳಿಯಾದರೂ ಆ ಮಂತ್ರದೀಕ್ಷೆ ಹೇಳಿಬಿಟ್ಟರೆ ಅವರು ಅಮರರಾಗುತ್ತಾರೆ. ಹಾಗೂ ಸಮಾಜಕ್ಕೆ ಘಾತಕರಾಗಬಹುದು ಎಂದನು. ಆಗ ವ್ಯಾಸರು. "ಹೇ ದೇವಾ, ಈ ಗಿಳಿ ಮರಿಯು ಅಮರವಾಗಿದೆ ಎಂದರೆ ನೀವು ಹೇಗೆ ಅದನ್ನು ಕೊಲ್ಲುವಿರಿ? ಎಂದರು, ಇದನ್ನು ಕೇಳಿದ ಶಿವನು ಪಾರ್ವತಿಯ ಬಳಿ ಮರಳಿ ಬಂದನು. ಪಾರ್ವತಿಗೆ ಎಲ್ಲವನ್ನು ತಿಳಿಸಿದನು. ವೇದವ್ಯಾಸರು ತಮ್ಮ ದಿವ್ಯದೃಷ್ಟಿಯಿಂದ ನೋಡಿದಾಗ ಅವರ ಪತ್ನಿಯ ಗರ್ಭದಲ್ಲಿ ಪುತ್ರನಿರುವುದು ತಿಳಿಯಿತು. 12 ವರ್ಷಗಳ ನಂತರ ಪುತ್ರನ ಜನ್ಮವಾಯಿತು. ವೇದವ್ಯಾಸರ ಹೆಂಡತಿಯು ತನ್ನ ಮಗನು ಗರ್ಭದಲ್ಲಿದ್ದಾಗ ಯಾವ ಕಷ್ಟವೂ ಆಗದ ಕಾರಣ ಅವನ ಹೆಸರನ್ನು ಸುಖದೇವ್ ಎಂದು ಇಡಲು ಇಚ್ಛಿಸಿದಳು. ಬೇರೆ ಬ್ರಾಹ್ಮಣರು ಅದು ಶುಕ (ಗಿಳಿಯ) ಶರೀರವನ್ನು ತ್ಯಜಿಸಿ ಮಾನವ ಶರೀರ ಪಡೆದ ಕಾರಣ ಅವನನ್ನು ಶುಕದೇವ ಎಂದು ಕರೆದರು. ಶುಕದೇವನು ಗರ್ಭದಲ್ಲೇ ಹನ್ನೆರಡು ವರ್ಷವಿದ್ದ ಕಾರಣ ಅವನು ಹುಟ್ಟಿದ ಕೂಡಲೇ ಹನ್ನೆರಡು ವರ್ಷದವನಾಗಿದ್ದನು. ಹುಟ್ಟಿದ ಕೂಡಲೇ ನಡೆದು ಹೊರಡಲಾರಂಭಿಸಿದನು. ವೇದವ್ಯಾಸರು ಅವನನ್ನು ಎಲ್ಲಿಗೆ ಹೋಗುತ್ತಿರುವೆ ಎಂದು ಕೇಳಿದರು. ಆಗ ಶುಕದೇವ ಋಷಿಯು "ನನ್ನ ಮತ್ತು ನಿಮ್ಮ ಋಣ ಇಷ್ಟು ಮಾತ್ರ ಎಂದು ಹೇಳಿದನು. ವೇದವ್ಯಾಸರು, ಹೇ ಪುತ್ರ! ನಿನ್ನ ಆಗಮನಕ್ಕೆ ನಾವು 12 ವರ್ಷ ನಿರೀಕ್ಷಿಸಿದೆವು. ಈ ದಿನ ನಮ್ಮನ್ನು ಬಿಟ್ಟು ಹೊರಟಿರುವೆಯಲ್ಲಾ, ಒಂದು ಬಾರಿ ನಿನ್ನ ಮುಖ ತೋರಿಸು" ಎಂದರು. ಆಗ ಶುಕದೇವನು, "ಬಹಳ ಸಾರಿ ನಾನು ನಿಮ್ಮ ತಂದೆಯಾಗಿರುವೆ, ನೀವು ನನ್ನ ತಂದೆಯಾಗಿದ್ದಿರಿ, ಇದೊಂದು ಮಾಯಾಜಾಲ. ನಾನು ಇನ್ನು ಮುಂದೆ ಸಾಧನೆ ಮಾಡುವೆ. ನಿಮಗೆ ನನ್ನ ಮೇಲೆ ಮೋಹ ಉಂಟಾಗಬಹುದೆಂದು ನಾನು ನಿಮಗೆ ನನ್ನ ಮುಖ ತೋರಿಸುತ್ತಿಲ್ಲ". ಎಂದನು. ಇದನ್ನೇ ಸಂತ ಗರೀಬ್‌ದಾಸರು ತಮ್ಮ ವಾಣಿಯಲ್ಲಿ ಹೇಳಿದ್ದಾರೆ:–

ಏಕ್ ಲೇವಾ ಏಕ್ ದೇವಾ ದೂತಂ, ಕೋಈ ಕಾಹೂ ಕಾ ಪಿತಾ ನ ಪೂತಂ ।

ಋಣ್ ಸಂಬಂಧ್ ಜುಡಾ ಏಕ್ ಠಾಠಾ, ಅಂತ್ ಸಮಯ್ ಸಬ್ ಬಾರಾ ಬಾಟಾ ॥

**ಭಾವಾರ್ಥ :–** ಯಾರು ತಂದೆ, ತಾಯಿ, ಮಗಳು, ಮಗ ಮುಂತಾದ ಸಂಬಂಧದಲ್ಲಿರುವರೋ, ಅವರೆಲ್ಲಾ ಪೂರ್ವ ಜನ್ಮದ ಸಾಲ ತೀರಿಸಲು ಅಥವಾ ಕೊಡಲು ಬಂದವರಾಗಿರುತ್ತಾರೆ. ವಾಸ್ತವದಲ್ಲಿ ಯಾರೂ ಯಾರ ತಂದೆ, ಯಾರ ಮಗನೂ ಅಲ್ಲ. ಮರಣಾನಂತರ ಅವರೆಲ್ಲಾ ತಮ್ಮ ತಮ್ಮ ಸಂಸ್ಕಾರಕ್ಕೆ, ಅನುಗುಣವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಶರೀರವನ್ನು ಸೇರುತ್ತಾರೆ. ಆದ್ದರಿಂದ ಯಾರೂ ಯಾರಿಗೂ ತಂದೆ–ಮಗ ಅಲ್ಲ. ಇಷ್ಟನ್ನು ಹೇಳಿ ಶುಕದೇವನು ಹಾರುತ್ತಾ ಬೇರೆ ಸ್ಥಳಕ್ಕೆ ಸೇರಿದನು.

ಪ್ರಿಯ ಓದುಗರೇ, ಮೇಲೆ ಹೇಳಿದಂತೆ ರೈತನ ಮಕ್ಕಳ ಕತೆಯಲ್ಲಿ ಓದಿರುವಿರಿ ದೊಡ್ಡ ಮಗನು ತನ್ನ ತಮ್ಮ ನನ್ನು 8 ಎಕರೆ ಜಮೀನಿನ ದುರಾಸೆಯಲ್ಲಿ ಕೊಂದನು, ಅದೇ ಜೀವಾತ್ಮ ಅವನ ಪುತ್ರನ ರೂಪದಲ್ಲಿ ತನ್ನ ಸಾಲ ಪಡೆಯಲು ಬಂದನು ಮತ್ತು ಸಾಲ ತೀರಿದ ನಂತರ ಮರಣ ಹೊಂದಿದನು. ಆದ್ದರಿಂದ ಹೇಳುತ್ತಾರೆ:– ಏಕ್ ಲೇವಾ (ಸಾಲ ಪಡೆಯುವ) ಏಕ್ ದೇವಾ (ಸಾಲ ತೀರಿಸುವ) ದೂತಮ್, ಕೋಈ ಕಾಹು ಕಾ ಪಿತಾ ನಹೀಂ ಪೂತಂ ಋಣ್ ಸಂಭಂಧ ಜುಡಾ ಏಕ್ ಠಾಠಾ ಅಂದರೆ ಕುಟುಂಬದಲ್ಲಿ ಚೆನ್ನಾಗಿರುವಂತೆ ಕಾಣುತ್ತಾರೆ, ಒಮ್ಮೆಲೆ ಮೃತ್ಯುವಾಗುತ್ತದೆ. ನಂತರ ಯಾರೋ ಎಲ್ಲೋ ಜನ್ಮ ಪಡೆಯುವರು ಅಂದರೆ ಬಾರಾ (12) ಬಾಟ್ (ರಸ್ತೆಗಳ) ಮೇಲೆ ನಡೆಯುವರು. ಪ್ರಿಯ ಓದುಗರೇ ಅದಕ್ಕಾಗಿ ಭಕ್ತಿ ಮಾಡಿ ಹಾಗೂ ನಿಮ್ಮ ಉದ್ಧಾರ ಮಾಡಿಕೊಳ್ಳಿ. ಕೇವಲ ಕುಟುಂಬದ ಸಂಬಂಧದಲ್ಲಿ ಸಿಲುಕಿಕೊಂಡು ನಿಮ್ಮ ಜೀವನ ವ್ಯರ್ಥಮಾಡಿಕೊಳ್ಳಬೇಡಿ. ಪರಮಾತ್ಮನ ಭಕ್ತಿಯಿಂದ ಋಣವು ಸುಲಭವಾಗಿ ತೀರಿ ಹೋಗುವುದು.

## "ಹೇಳುವುದು ಮತ್ತು ಮಾಡುವುದರಲ್ಲಿ ಅಂತರವಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ"

ಒಂದೂರಿನಲ್ಲಿ ಒಬ್ಬ ವ್ಯಕ್ತಿ ಕಥಾ ವಾಚಕನಿದ್ದನು. ದಿನನಿತ್ಯ ರಾಮಾಯಣದ ಪಠಣೆ ಮಾಡುತ್ತಿದ್ದನು. ಒಂದು ದಿನ ಅವನು ಯಾವುದೋ ಕೆಲಸದ ಮೇಲೆ ಪಟ್ಟಣಕ್ಕೆ ಹೋಗಬೇಕಾಗಿತ್ತು. ಅವನ ಗೆಳೆಯನೂ ಇವನ ಜೊತೆ ಹೊರಡಬೇಕಾಯಿತು. ಮಾರನೇದಿನ ಬೆಳಗ್ಗಿನ ಜಾವ 5 ಗಂಟೆಗೆ ರೈಲು ಹತ್ತಬೇಕಾಗಿತ್ತು. ಹಾಗಾಗಿ ಆ ದಿನ ಅವನಿಗೆ ನಿತ್ಯನಿಯಮ ಮಾಡಲು ಸಾಧ್ಯವಾಗಲಿಲ್ಲ. ರೈಲಿಗೆ ಹೋಗಲು ಸಮಯವಾಗಿತ್ತು. ಇಂದು ಗಾಡಿಯಲ್ಲೆ ನಿತ್ಯನಿಯಮ ಮಾಡುವೆ ಎಂದುಕೊಂಡು ಅವನು ಮತ್ತು ಅವನ ಗೆಳೆಯ–ಇಬ್ಬರೂ ಓಡಿ ಹೋಗಿ ರೈಲು ಹತ್ತಿದರು. ಅಷ್ಟರಲ್ಲಿ ರೈಲುಗಾಡಿ ಮುಂದೆ ಸಾಗಿತು, ಬೋಗಿಯಲ್ಲಿ ಜನಸಂದಣಿ ಹೆಚ್ಚಿತ್ತು. ಬಹಳ ಜನ ನಿಂತಿದ್ದರು. ಸೀಟಿನ ತುಂಬೆಲ್ಲಾ ಪ್ರಯಾಣಿಕರು ಕುಳಿತಿದ್ದರು, ಹಾಗಾಗಿ ಇವನಿಗೆ ಕೂರಲು ಜಾಗ ಸಿಗಲಿಲ್ಲ. ಈ ದಿನ ನಿತ್ಯನಿಯಮ ಮಾಡಲಿಲ್ಲವೆಂಬ ಕೊರಗು ಕಾಡುತ್ತಿತ್ತು. ಹಾಗಾಗಿ ಅವನು ಸೀಟಿನ ಮೇಲೆ ಕುಳಿತಿರುವ ಪ್ರಯಾಣಿಕರಲ್ಲಿ ಈ ರೀತಿ ವಿನಂತಿಸಿದನು. "ಸಜ್ಜನರೇ, ನಾನು ಈ ದಿನ ಮನೆಯಲ್ಲಿ ರಾಮಾಯಣದ ಪಾಠ ಮಾಡಲು ಸಾಧ್ಯವಾಗಲಿಲ್ಲ, ನೀವು ಸ್ವಲ್ಪ ಜಾಗ ಕೊಟ್ಟರೆ, ನಾನು ಅಲ್ಲಿ ಕುಳಿತು, ಇಲ್ಲಿಯೇ ಪ್ರವಚನ ಹೇಳುವೆ," ಇದನ್ನು ಕೇಳಿದ ಪ್ರಯಾಣಿಕರು ಸಂತೋಷವಾಗಿ ಜಾಗ ಕೊಡುತ್ತಾ, "ಸಹೋದರ, ಈ ದಿನ ನಮ್ಮ ಅದೃಷ್ಟವೆಂದು ತಿಳಿಯುತ್ತೇವೆ. ನಮಗೂ ಪ್ರವಚನ ಕೇಳುವ ಸೌಭಾಗ್ಯ ಒದಗಿ ಬಂತು" ಹಾಗೆಯೇ ಅವರು ಇಡೀ ಸೀಟನ್ನು ಆ ವ್ಯಕ್ತಿಗೆ ಬಿಟ್ಟುಕೊಟ್ಟರು. ರಾಮಾಯಣದ ಭರತನ ಕತೆಯನ್ನು ಆರಿಸಿಕೊಂಡು ಆ ವ್ಯಕ್ತಿಯು ಅಂದಿನ ಪ್ರವಚನವನ್ನು ಪ್ರಾರಂಭಿಸಿದನು. ರಾಮನು ವನವಾಸದಲ್ಲಿದ್ದಾಗ ತಮ್ಮನಾದ ಭರತನು ಅಯೋಧ್ಯೆಯ ರಾಜ್ಯಭಾರವನ್ನು ಸ್ವೀಕರಿಸದೆ, ಅಣ್ಣನಾದ ರಾಮನ ಪಾದುಕೆಗಳನ್ನು ತಂದು, ಅವುಗಳನ್ನು ಸಿಂಹಾಸನದ ಮೇಲಿಟ್ಟು, ತಾನು ನೆಲದ ಮೇಲೆ ಕುಳಿತು ರಾಜ್ಯವನ್ನು ಆಳುವ ಕತೆಯನ್ನು ಮನಮುಟ್ಟುವಂತೆ ಹೇಳಿದನು. ಅಣ್ಣ–ತಮ್ಮರ ಅನುಬಂಧವನ್ನು ವರ್ಣಿಸಿದನು. ಇದನ್ನು ಕೇಳಿದ ಪ್ರಯಾಣಿಕರು ಗದ್ಗದಿತರಾದರು.

ಆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬ ಪ್ರಯಾಣಿಕನ ತಂದೆಯ ವರ್ಷದ ತಿಥಿ ಮರುದಿನವೇ

ಇತ್ತು. ಆ ವರ್ಷದ ತಿಥಿಯಲ್ಲಿ ಪ್ರವಚನ ಏರ್ಪಡಿಸಬೇಕೆಂಬ ಇಚ್ಛೆ ಅವನಲ್ಲಿತ್ತು. ಆದರೆ ಪ್ರವಚನಕಾರರು ಯಾರೂ ಸಿಕ್ಕಿರಲಿಲ್ಲ. ಆ ಪ್ರಯಾಣಿಕನು ಇವನ ಬಳಿ ಬಂದು ಕೈ ಮುಗಿದು, "ಮಹಾತ್ಮರೆ, ನಾಳೆಯ ದಿನ ನಮ್ಮ ಮನೆಗೆ ಬಂದು ನಮ್ಮ ತಂದೆಯವರ ವಾರ್ಷಿಕ ತಿಥಿಯಂದು ಪ್ರವಚನ ಮಾಡಬೇಕು" ಎಂದು ಪ್ರಾರ್ಥಿಸಿದನು. ಆಗ ಆ ಪಂಡಿತನು ನಾಳೆ ಸಾಧ್ಯವಿಲ್ಲವೆಂದನು. ಸಹ ಪ್ರಯಾಣಿಕರೆಲ್ಲಾ, "ಪಂಡಿತರೇ, ನಿಮ್ಮ ಕೆಲಸವೇ ಪ್ರವಚನ ಮಾಡುವುದು, ಇವರಿಗೆ ಬೇರೆ ಪ್ರವಚನಕಾರರು ಸಿಕ್ಕಿಲ್ಲವಂತೆ, ನೀವು ಒಪ್ಪಿಕೊಳ್ಳಿ" ಎಂದರು. ಆದರೆ ಪಂಡಿತನು ಕಾರಣ ಹೇಳದೆ ಪ್ರವಚನ ಮಾಡುವುದಿಲ್ಲ ಎಂದನು. ಆಗ ಅವನ ಗೆಳೆಯನು "ನನ್ನ ಮಿತ್ರ ನಾಳೆ ಏಕೆ ಪ್ರವಚನ ಮಾಡುವುದಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ನಾಳೆ ಪಟ್ಟಣದಲ್ಲಿ ಇವರ ಅಣ್ಣನ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಅವರ ಮತ್ತು ಅವರ ಅಣ್ಣನ ಮಧ್ಯೆ ಆಸ್ತಿ ವಿಷಯದಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ. ಅದಕ್ಕೆ ನಾನು ಸಾಕ್ಷಿಯಾಗಿರುವೆ. ನಾಳೆ ಕೋರ್ಟಿನ ದಿನಾಂಕವಿದೆ ಎಂದನು. ಇದನ್ನು ಕೇಳಿದ ಆ ವ್ಯಕ್ತಿಯು, "ಪಂಡಿತರೇ, ಎಂಥಾ ಮಾರ್ಮಿಕ ಕತೆ ನೀವು ಹೇಳಿದ್ದಿರಿ. ಆದರೆ ನೀವು ಹೇಳಿದ್ದೇ ಒಂದು, ಮಾಡುತ್ತಿರುವುದೇ ಒಂದು. ಇಂಥಾ ವ್ಯಕ್ತಿಯಿಂದ ಪ್ರವಚನ ಮಾಡಿಸಿದರೆ ಜನರ ಮೇಲೆ ಯಾವ ಪ್ರಭಾವ ಬೀರಬಹುದು?

ಕಬೀರರು ಹೇಳಿದ್ದಾರೆ:–

ಕಬೀರ್, ಕರನೀ ತಜ್ ಕಥನೀ ಕಥೈಂ, ಅಜ್ಞಾನೀ ದಿನ್ ರಾತ್ ।
ಕುಕರ್ (ಕುತ್ತೇ) ಜ್ಯೋಂ ಭೌಂಕತ್ ಫಿರೈಂ, ಸುನೀ ಸುನಾಈ ಬಾತ್ ॥(1)

ಗರೀಬ್‌ದಾಸರು ಹೇಳಿದ್ದಾರೆ:–

ಗರೀಬ್, ಬೀಜಕ್ ಕೀ ಬಾತಾಂ ಕಹೈಂ, ಬೀಜಕ್ ನಾಹೀ ಹಾಥ್ ।
ಪೃಥ್ವೀ ಡೋಬನ್ ಉತರೆ, ಯೇ ಕಹ್ ಕಹ್ ಮೀಠೀ ಬಾತ್ ॥(2)

ಶಬ್ದಾರ್ಥ:– ಯಾರು ಜ್ಞಾನದ ಮಾತುಗಳನ್ನು ಹೇಳುತ್ತಾರೋ, ಬೇರೆಯವರಿಗೆ ಕೆಟ್ಟದ್ದನ್ನು ಮಾಡಬೇಡಿರೆಂದು ಹೇಳುತ್ತಾರೋ, ಅವರೇ ತಪ್ಪು ಮಾಡುತ್ತಿರುತ್ತಾರೆ. ಅವರು ಸುಮ್ಮ ಸುಮ್ಮನೆ ಬೊಗಳುವ ನಾಯಿಗೆ ಸಮಾನ, ಇದೇ ರೀತಿ ಕೆಲ ಧರ್ಮಗುರುಗಳು ಅವರಿವರಿಂದ ಕತೆಗಳನ್ನು ಕೇಳಿ ಶಿಷ್ಯರಿಗೆ ಹೇಳುತ್ತಿರುತ್ತಾರೆ. ತಾವು ಪಾಲಿಸುವುದಿಲ್ಲ.(1)

ವಾಣಿ ಸಂಖ್ಯೆ 2:– ಅಜ್ಞಾನಿ ಧರ್ಮಗುರು ತತ್ವಜ್ಞಾನ ಎಂದು ಹೇಳುತ್ತಾ ಬರೀ ಅಜ್ಞಾನದ ಪ್ರಚಾರ ಮಾಡುತ್ತಾರೆ. ಏಕೆಂದರೆ ಅವರಿಗೆ ತತ್ವಜ್ಞಾನದ ಅರಿವೇ ಇರುವುದಿಲ್ಲ. ಇಂಥಾ ವ್ಯಕ್ತಿಗಳು ಮಾನವನ ಅಮೂಲ್ಯವಾದ ಜೀವನವನ್ನು ನಾಶಮಾಡಲೆಂದೇ ಹುಟ್ಟಿರುತ್ತಾರೆ.(2)

## "ಸತ್ಸಂಗದಿಂದ ಭಕ್ತಿಯ ದಾರಿ ಸಿಕ್ಕಿತು"

ಸಂತ ನಿತ್ಯಾನಂದರ ಬಾಲ್ಯದ ಹೆಸರು ನಂದಲಾಲ್. ಅವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರಾಗಿದ್ದರು. ಅವರು ಸಂತ ಗರೀಬ್‌ದಾಸರಿಗೆ ಕೆಲವು ಕಾಲ ಸಮಕಾಲೀನರಾಗಿದ್ದರು. ಸಂತ ಗರೀಬ್‌ದಾಸರ ಜೀವನ ಇಸವಿ 1717–78ರವರೆಗೆ ಇತ್ತು. ಆಗಿನ ಕಾಲದಲ್ಲಿ ಬ್ರಾಹ್ಮಣರಿಗೆ ವಿಶೇಷ ಗೌರವವಿತ್ತು. ಬ್ರಾಹ್ಮಣರನ್ನು ಸರ್ವೋಚ್ಚ ಜಾತಿಯವರೆಂದು ಪರಿಗಣಿಸಲಾಗುತ್ತಿತ್ತು. ಹಾಗಾಗಿ ಅವರು ಅಹಂಕಾರ ಪಡುತ್ತಿದ್ದರು. ನಂದಲಾಲರ ತಂದೆ–ತಾಯಿಯರ ದೇಹಾಂತವಾಗಿತ್ತು. ಆಗ ನಂದಲಾಲರಿಗೆ 7–8 ವರ್ಷ ವಯಸ್ಸು. ಅವರನ್ನು ಅವರ ತಾತ ನಾರ್‌ನೌಲ್‌ನ ನವಾಬನ ಬಳಿ ಉಚ್ಚ ಪದವಿಯಲ್ಲಿದ್ದರು. ಅಜ್ಜಿ–ತಾತ ಸಾಕಿ ದೊಡ್ಡವರನ್ನಾಗಿ ಮಾಡಿದರು. ವಿದ್ಯೆ ಪಡೆದ ನಂತರ ನಂದಲಾಲರಿಗೆ ತಾತ ತಹಸೀಲ್ದಾರ್ ಪದವಿ ಕೊಡಿಸಿದರು, ಮೊದಲೇ ಬ್ರಾಹ್ಮಣ, ಮೇಲಾಗಿ ತಹಸೀಲ್ದಾರ್. ಇದರಿಂದ ಅಹಂಕಾರ ಹೆಚ್ಚಾಗಿತ್ತು. ಅಜ್ಜಿ–ತಾತ ನಂದಲಾಲರ ಮದುವೆಯನ್ನೂ ಮಾಡಿ ಮುಗಿಸಿದ್ದರು. ತಹಸೀಲ್ದಾರರ ಮನೆಯ ಸ್ವಲ್ಪ ದೂರದಲ್ಲಿ ಒಬ್ಬ ವೈಷ್ಣವ ಸಂತರಾದ ಶ್ರೀ ಗುಮಾನಿದಾಸರು ತಮ್ಮ ಭಕ್ತನ ಮನೆಯಲ್ಲಿ ಸತ್ಸಂಗ ನಡೆಸುತ್ತಿದ್ದರು. ಅವರು ವಿಷ್ಣುವಿನ

ಭಕ್ತರಾಗಿದ್ದರು. ಎಲ್ಲಾ ಸಂತರೂ ತಮ್ಮ ಸತ್ಸಂಗದಲ್ಲಿ ಪರಮಾತ್ಮ ಕಬೀರರ ಅಮೃತವಾಣಿಯನ್ನು ಉಚ್ಚರಿಸುತ್ತಿದ್ದರು. ಮಾನವ ಜೀವನ ಏತಕ್ಕಾಗಿ ಸಿಗುವುದು? ಸತ್ಸಂಗ ಕೇಳದೆ ಇದ್ದರೆ ಅವರ ಜೀವನ ಹೇಗೆ ಹಾಳಾಗುವುದು? ಸಂಪತ್ತು, ಪದವಿ, ಜಾತಿ ಮುಂತಾದವುಗಳ ಮೇಲೆ ಅಹಂಕಾರ ಪಡುವುದು ಕೇವಲ ಅಜ್ಞಾನದಿಂದಲೇ, ಭಕ್ತಿ ಮಾಡದ ವ್ಯಕ್ತಿಯು ಮುಂದಿನ ಜನ್ಮದಲ್ಲಿ ನಾಯಿ, ಕತ್ತೆ, ಎಮ್ಮೆ, ಎತ್ತು ಮುಂತಾದ ಪ್ರಾಣಿಗಳಾಗಿ ಕಷ್ಟನುಭವಿಸುತ್ತಾನೆ. ಆದ್ದರಿಂದ ಅಹಂಕಾರ ಬಿಟ್ಟು ಪೂರ್ಣ ಸಂತರಿಂದ ದೀಕ್ಷೆ ಪಡೆದು ತಮ್ಮ ಉದ್ದಾರ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬೆಟ್ಟದಷ್ಟು ಕಷ್ಟಪಡಬೇಕಾಗುತ್ತದೆ ಎಂಬುದು ಸತ್ಸಂಗದ ವಿಷಯವಾಗಿತ್ತು.

ಸ್ವಾಮಿ ಗುಮಾನಿದಾಸರ ಆಶ್ರಮ ನಾರನೌಲ್ ನಗರದಿಂದ ಸುಮಾರು 1.5 ಕಿ. ಮೀ ದೂರದಲ್ಲಿತ್ತು ಸತ್ಸಂಗದ ಶಬ್ದ ಕೇಳಿ ತಹಸೀಲ್‌ದಾರ್ ತನ್ನ ಮನೆಯ ತಾರಸಿಯ ಮೇಲೆ ಒಂದು ಕುರ್ಚಿಹಾಕಿಕೊಂಡು ಕುಳಿತರು. ಇಡೀ ಪ್ರವಚನ ಕೇಳಿದರು. ಅವರಿಗೆ ದೀಕ್ಷೆ ಪಡೆಯುವ ಇಚ್ಛೆಯಾಯಿತು. ಆದರೆ ಜಾತಿ ಮತ್ತು ಪದವಿಯ ಅಹಂಕಾರ ಅಡ್ಡ ಬಂದಿತು. 'ನಾನು ಮೇಲ್ಜಾತಿಯ ಬ್ರಾಹ್ಮಣ, ಮೇಲಾಗಿ ತಹಸೀಲ್ದಾರ್' ಎನ್ನುವ ಅಹಂಕಾರದಿಂದ ಸುಮ್ಮನಿದ್ದುಬಿಟ್ಟರು. ಪ್ರವಚನ ಕೇಳಿದ ನಂತರ ಆಶ್ರಮಕ್ಕೆ ಹೋಗದೆ ಇರಲು ಆಗಲೇ ಇಲ್ಲ. ಕೊನೆಗೆ ಯಾರಿಗೂ ತಿಳಿಯದಂತೆ ಬೆಳಗ್ಗಿನ ಜಾವವೇ ಆಶ್ರಮಕ್ಕೆ ಹೋಗಿ ದೀಕ್ಷೆ ಪಡೆದು ಬರಲು ನಿರ್ಧರಿಸಿದರು. ಎಲ್ಲರೂ ಏಳುವ ಮುಂಚೆ ಎದ್ದು ಆಶ್ರಮಕ್ಕೆ ಹೋದರೆ ಯಾರಿಗೂ ತಿಳಿಯುವುದಿಲ್ಲವೆಂದು ಚಿಂತಿಸಿದರು. ಅದರಂತೆ ಮಾರನೇ ದಿನ ಬೆಳಗ್ಗಿನ ಜಾವ ಎದ್ದು ದೀಕ್ಷೆ ಪಡೆಯಲು ಆಶ್ರಮದ ಕಡೆಗೆ ಕುದುರೆಯೇರಿ ಹೊರಟರು. ಸ್ವಲ್ಪದೂರ ಹೋದ ಬಳಿಕ ಎದುರುಗಡೆಯಿಂದ ಒಬ್ಬ ವ್ಯಕ್ತಿ ತಲೆ ಮುಂಡನೆ ಮಾಡಿಸಿಕೊಂಡು ತಿರುಗಾಡಲು ಬರುತ್ತಿದ್ದನು. ಆ ವ್ಯಕ್ತಿ ಬೇರ್‍ಯಾರೂ ಅಲ್ಲದೆ ಸಂತ ಗುಮಾನಿದಾಸರೇ ಆಗಿದ್ದರು. ಅವರು ತಮ್ಮ ತಲೆ ಬೋಳಿಸಿಕೊಂಡಿದ್ದರು.

ತಲೆಯ ಮೇಲೆ ಬಟ್ಟೆ ಇರಲಿಲ್ಲ, ಇವರ ಗುರುತು ಯಾರಿಗೂ ಸಿಗುತ್ತಿರಲಿಲ್ಲ. ಎದುರಿಗೆ ಬಂದ ಆ ವ್ಯಕ್ತಿಯನ್ನು ನೋಡಿ ತಹಸೀಲ್ದಾರ್‌ನ ಕೋಪ ನೆತ್ತಿಗೇರಿತು. ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೋಗುವಾಗ ತಲೆ ಬೋಳಿಸಿಕೊಂಡು ಯಾರಾದರೂ ಎದುರಾದರೆ ಅಪಶಕುನವೆಂದು ಆಗಿನ ಕಾಲದಲ್ಲಿ ನಂಬಲಾಗುತ್ತಿತ್ತು. ಹೇಳಿ ಕೇಳಿ ನಂದಲಾಲ್ ಬ್ರಾಹ್ಮಣ ಬೇರೆ. ಈ ಮೂಢನಂಬಿಕೆಯನ್ನು ಅಧಿಕವಾಗಿ ನಂಬುತ್ತಿದ್ದರು. ದೀಕ್ಷೆ ತೆಗೆದುಕೊಳ್ಳುವಂಥಾ ಪವಿತ್ರ ಕೆಲಸಕ್ಕೆ ಹೋಗುವಾಗ ಹೀಗಾಗಬೇಕೆ? ಎಂದು ಯೋಚಿಸಿದರು. ಇದಕ್ಕೆ ಪರಿಹಾರವಾಗಿ ಆ ವ್ಯಕ್ತಿಯ ಬಳಿ ಹೋಗಿ ಅವನ ತಲೆಯ ಮೇಲೆ ತನ್ನ ಬೆರಳುಗಳಿಂದ ಒಮ್ಮೆ ಹೊಡೆದರೆ ಆ ಅಪಶಕುನ ನಿವಾರಣೆಯಾಗುವುದೆಂದು ತಿಳಿದು, ಸೀದಾ ಗುಮಾನಿದಾಸರ ಎದುರಿಗೆ ನಿಂತು ಅವರ ತಲೆಯ ಮೇಲೆ ತನ್ನ ಬೆರಳಿನಿಂದ ಹೊಡೆದರು. ಈ ದಿನವೇ ನೀನು ನನ್ನ ಎದುರಿಗೆ ಬರಬೇಕಾಗಿತ್ತಾ?" ನಾನು ನನ್ನ ಜೀವನದ ಉತ್ತಮ ಕಾರ್ಯಕ್ಕೆ ಆಶ್ರಮಕ್ಕೆ ಹೊರಟಿದ್ದೆ ಎಂದು ಬಯ್ದರು. ನಂತರ ಕುದುರೆಯೇರಿ ದೀಕ್ಷೆ ಪಡೆಯಲು ಆಶ್ರಮದ ಕಡೆಗೆ ಹೊರಟರು. ಸಂತರಿಗೆ ಇದೆಲ್ಲಾ ಮಾಮೂಲಾಗಿತ್ತು.

ಸಮಾಜದಲ್ಲಿ ಎಲ್ಲಾ ರೀತಿಯ ಜನರಿರುತ್ತಾರೆ ಉಚ್ಚ ಪದವಿ, ಒಳ್ಳೆಯ ವ್ಯಕ್ತಿ ಕಾಣುತ್ತಾನೆ ಆದರೆ ದನ ಕಾಯುವರಂತೆ ಮಾಡುತ್ತಾನೆ ಎಂದುಕೊಂಡು ನಗುತ್ತಾ ಮುಂದೆ ನಡೆದರು. ನಂದ್‌ಲಾಲ್ ಆಶ್ರಮಕ್ಕೆ ತೆರಳಿ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಹಾಕಿದರು. ಅಲ್ಲಿ ಆಗಲೇ ಕೆಲವು ಭಕ್ತರು ಸೇರಿದ್ದರು. ಉಭಯ ಕುಶಲೋಪರಿಯಾಯಿತು. ಆಗ ನಂದ್‌ಲಾಲ್ ತಾನು ಬಂದ ಕಾರಣ ತಿಳಿಸಿದರು. ನಂತರ ಅಲ್ಲಿ ಹಾಸಿದ್ದ ಜಮಖಾನದ ಮೇಲೆ ಕುಳಿತುಕೊಂಡರು. ಗುಮಾನಿದಾಸರು ತಮ್ಮ ತಿರುಗಾಟವನ್ನು ಮುಗಿಸಿ, ಆಶ್ರಮಕ್ಕೆ ತೆರಳಿ ಸ್ನಾನಾದಿಗಳನ್ನು ಮುಗಿಸಿ, ತಮ್ಮ ಗದ್ದಿಗೆಯ ಮೇಲೆ ಕುಳಿತುಕೊಳ್ಳುತ್ತಾ ಮರಕ್ಕೆ ಕಟ್ಟಿ ಹಾಕಿದ್ದ ಕುದುರೆಯನ್ನು ನೋಡಿದರು. ಅವರಿಗೆ ಎಲ್ಲವೂ ಅರ್ಥವಾಯಿತು. ನಂದ್‌ಲಾಲ್ ಗುಮಾನಿದಾಸರನ್ನು ನೋಡಿದೊಡನೆ ನಾಚಿಕೆಯಿಂದ ತಲೆ

ತಗ್ಗಿಸುವಂಥಾಯಿತು. ಆಶ್ರಮವಾಸಿಗಳು ಗುಮಾನಿದಾಸರಿಗೆ, 'ಇವರು ದೊಡ್ಡ ತಹಸೀಲ್ದಾರರು, ದೀಕ್ಷೆ ಪಡೆಯಲು ಬಂದಿದ್ದಾರೆ' ಎಂದು ಹೇಳಿದರು. ನಂದ್‌ಲಾಲರು ಗುರುಗಳ ಪಾದಗಳಿಗೆರಗಿ, ತಾವು ಬೆರಳಿನಿಂದ ತಲೆಯ ಮೇಲೆ ಹೊಡೆದ ಕಾರಣವನ್ನು ತಿಳಿಸಿದರು. ಆಗ ಗುಮಾನಿದಾಸರು ಹೇ ಭಕ್ತ! ನಾವು ಒಂದು ಮಡಿಕೆ ಕೊಳ್ಳಬೇಕಾದರೇನೇ ಆ ಮಡಿಕೆಯ ಮೇಲೆ ನಮ್ಮ ಬೆರಳುಗಳಿಂದ ಹೊಡೆದು ಪರಿಕ್ಷೀಸಿ ಖರೀದಿಸುತ್ತೇವೆ. ನೀವು ಬದುಕಿನ ವ್ಯಾಪಾರ ಮಾಡಲು ಬಂದಿರುವಿರಿ. ನೀವು ಗುರುವಿನ ತಲೆಯ ಮೇಲೆ ಹೊಡೆದು ಪರೀಕ್ಷಿಸಿದ್ದೀರಿ" ಯಾವುದೇ ಪಾಪ ಮಾಡಿಲ್ಲವೆಂದರು. ಇದನ್ನು ಕೇಳಿ ನಂದ್‌ಲಾಲ್ ಗುರುಗಳಿಂದ ಇನ್ನೂ ಪ್ರಭಾವಿತರಾದರು. ತಕ್ಷಣವೇ ದೀಕ್ಷೆ ಪಡೆದರು. ಸಂತ ಗುಮಾನಿದಾಸರು ಅವರ ಹೆಸರನ್ನು ನಿತ್ಯಾನಂದನೆಂದು ಮರು ನಾಮಕರಣ ಮಾಡಿದರು. ಆ ಸತ್ಸಂಗದಿಂದ ಅವರಿಗೆ ಬದುಕುವ ದಾರಿ ಸಿಕ್ಕಿತು. ಹಾಗಾಗಿ ನಿತ್ಯಾನಂದರು ಹೇಳಿದ್ದಾರೆ:–

ಬ್ರಾಹ್ಮಣ್ ಕುಲ್ ಮೆಂ ಜನ್ಮ್ ಥಾ, ಮೈಂ ಕರತಾ ಬಹುತ್ ಮರೋಡ್ ।
ಗುರು ಗುಮಾನೀ ದಾಸ್ ನೇ, ದಿಯಾ ಕುಬುದ್ಧಿ ಗಢ್ ತೋಡ್ ॥(1)

**ಅವರು ಗುರುಗಳಿಗೆ ಮತ್ತೆಷ್ಟು ಅಧೀನರಾದರೆಂದು ಈ ವಾಣಿಯ ಮುಖಾಂತರ ತಿಳಿಯಬಹುದಾಗಿದೆ.**

ಸಿರ್ ಸೌಂಪಾ ಗುರುದೇವ್ ಕೋ, ಸಫಲ್ ಹುಆ ಯಹ್ ಶೀಶ್ ।
ನಿತ್ಯಾನಂದ್ ಇಸ್ ಶೀಶ್ ಪರ್, ಆಪ್ ಬಸ್ಯೆ ಜಗದೀಶ್ ॥ (2)

ಭಾವಾರ್ಥ:– ಎಲ್ಲಿಯವರೆಗೆ ಸತ್ಸಂಗ ಕೇಳಲು ಮನುಷ್ಯನಿಗೆ ಅವಕಾಶ ಸಿಗುವುದಿಲ್ಲವೋ, ಅಲ್ಲಿಯವರೆಗೆ ಅವನು ಅಹಂಕಾರದಲ್ಲಿ ಕೊಳೆಯುತ್ತಾ ಇರುತ್ತಾನೆ. ಜ್ಞಾನ ಪ್ರಾಪ್ತಿಯಾದರೆ, ಇಂದು ತಾನು ರಾಜನೆಂದು ತಿಳಿದಿರುವನು ಆದರೆ ಮರಣದ ನಂತರ ನಾಯಿ, ಕತ್ತೆಯಾಗಿ ಹುಟ್ಟಿದರೆ ಆಗ ಮೊದಲಿನ ಅಹಂಕಾರ ಎಲ್ಲಿಗೆ ಹೋಗುತ್ತದೆ? ಆದ್ದರಿಂದ ಭಕ್ತರು ಅಹಂಕಾರ ಪಡದೆ ಭಕ್ತಿಮಾರ್ಗದಲ್ಲಿ ನಡೆಯುತ್ತಾರೆ ಮತ್ತು ಯಶಸ್ಸನ್ನು ಕಾಣುತ್ತಾರೆ. ಶ್ರೀಲಂಕಾದ ರಾಜ ರಾವಣನು ಭಕ್ತನಾಗಿದ್ದರೂ ಅಹಂಕಾರ ಬಿಡಲಿಲ್ಲ. ಹಾಗಾಗಿ ಅವನಿಗೆ ವಿನಾಶ ತಪ್ಪಲಿಲ್ಲ. ರಾವಣನು ಬ್ರಾಹ್ಮಣನಾಗಿದ್ದನು, ನಿತ್ಯಾನಂದರು ಬ್ರಾಹ್ಮಣರಾಗಿದ್ದರು ಸತ್ಸಂಗ ಕೇಳಿ ನಿರ್ಮಲರಾದರು. ರಾವಣನಿಗೆ ಸತ್ಸಂಗಕ್ಕೆ ಹೋಗುವ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ಅವನ ಜೀವನ ವ್ಯರ್ಥವಾಗುವುದಷ್ಟೇ ಅಲ್ಲದೆ ಅವನ ಹೆಸರಿಗೆ ಕಳಂಕ ಹತ್ತಿಕೊಂಡಿತು. ನಿತ್ಯಾನಂದರು, "ನಾನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದೇನೆಂಬ ಅಹಂಕಾರ ಇತ್ತು. ಗುರುಗಳ ಸತ್ಸಂಗದಿಂದ ನನ್ನ ಅಹಂಕಾರ ದೂರವಾಯಿತು. ಜೀವನ ಸಾರ್ಥಕವಾಯಿತು" ಎಂದರು.

ವಾಣಿ ಸಂಖ್ಯೆ 2ರ ಭಾವಾರ್ಥ:– ಸತ್ಸಂಗದ ಪ್ರವಚನ ಕೇಳಿ ನಿತ್ಯಾನಂದರು ಶರಣಾಗತರಾಗಿ. ಅಹಂಕಾರವನ್ನು ತೊರೆದರು. ಅವರು ಹೀಗೆಂದು ಹೇಳುತ್ತಿದ್ದರು, "ನಾನು ಗುರುವಿಗೆ ನನ್ನ ತಲೆ ಒಪ್ಪಿಸಿದ್ದೇನೆ." ಅಂದರೆ ಗುರುಗಳು ನನ್ನನ್ನು ಹೇಗೆ ಇಡುತ್ತಾರೋ, ನಾನು ಹಾಗೇ ಇರುವೆ. ನನ್ನ ತಲೆ ಉಳಿಯಿತು. ಇಲ್ಲದಿದ್ದರೆ ಯಾವುದೋ ರೋಗದಿಂದ ನನ್ನ ಜೀವನ ಮುಗಿಯುತ್ತಿತ್ತು. ತಲೆಯ ಮೇಲೆ ಪರಮಾತ್ಮ ವಾಸಿಸುತ್ತಿದ್ದಾನೆ. ನನ್ನ ರಕ್ಷಣೆಯನ್ನು ಅವನೇ ಮಾಡುತ್ತಾನೆ. ನನಗೆ ಯಾವುದೇ ಚಿಂತೆ ಇಲ್ಲ.

ನಿತ್ಯಾನಂದರು ಹೇಳಿದ್ದಾರೆ:–

ಔರ್ ಬಾತ್ ತೇರೇ ಕಾಮ್ ನಾ ಆವ್ಯೆ ಸಂತೋಂ ಶರಣ್ಯೆ ಲಾಗ್ ರೇ ।
ಕ್ಯಾ ಸೋವ್ಯೆ ಗಫಲತ್ ಮೆಂ ಬಂದೇ ಜಾಗ್–ಜಾಗ್ ನರ್ ಜಾಗ್ ರೇ ॥
ತನ್ ಸರಾಯ್ ಮೆಂ ಜೀವ್ ಮುಸಾಫಿರ್ ಕರತಾ ರಹೆ ದಿಮಾಗ್ ರೆ ।
ರಾತ್ ಬಸೇರಾ ಕರಲೇ ಡೇರಾ ಚಲ್ಯೆ ಸವೇರಾ ತ್ಯಾಗ್ ರೇ । ಔರ್ ಬಾತ್–––––।
ಉಮದಾ ಚೋಲಾ ಬನಾ ಅನಮೋಲಾ ಲಗೇ ದಾಗ್ ಪರ್ ದಾಗ್ ರೇ ।
ದೋ ದಿನ್ ಕ ಗುಜರಾನ್ ಜಗತ್ ಮೆಂ ಜಲ್ಯೆ ಬಿರಾನೀ ಆಗ್ ರೇ । ಔರ್ ಬಾತ್–––।

ಕುಬುದ್ಧ್ ಕಾಂಚಲೀ ಚಢ್ ರಹೀ ಚಿತ್ ಪರ್ ತೂ ಹುಆ ಮನುಷ್ ಸೇ ನಾಗ್ ರೇ ।
ಸೂಝ್ಯೆ ನಹೀಂ ಸಜನ್ ಸುಖ್ ಸಾಗರ್ ಬಿನಾ ಪ್ರೇಮ್ ಬೈರಾಗ್ ರೇ । ಔರ್ ಬಾತ್–।
ಹರ್ ಸುಮರೈ ಸೋ ಹಂಸ್ ಕಹಾವ್ಯೆ ಕಾಮೀ ಕ್ರೋಧೀ ಕಾಗ್ ರೇ ।
ಭಂವರಾ ನಾ ಭರಮ್ಯೆ ವಿಷ್ ಕೇ ಬನ್ ಮೆಂ ಚಲ್ ಬೇಗಮ್ ಪುರ್ ಬಾಗ್ ರೇ। ಔರ್ ಬಾತ್––।
ಶಬ್ದ್ ಸೈನ್ ಸತಗುರು ಕೀ ಪಹಚಾನೀ ಪಾಯಾ ಅಟಲ್ ಸುಹಾಗ್ ರೇ ।
ನಿತಾನಂದ್ ಮಹಬೂಬ್ ಗುಮಾನೀ ಪ್ರಕಟೆ ಪೂರ್ಣ ಭಾಗ್ ರೆ । ಔರ್ ಬಾತ್–––––।

**(ಮೇಲ್ಕಂಡ ಶಬ್ದವು ವಾಸ್ತವದಲ್ಲಿ ಕಬೀರ್ ಪರಮೇಶ್ವರರ ಶಬ್ದವಾಗಿದೆ)**

**ಶಬ್ದಾರ್ಥ:–** ಹೇ ಮಾನವ (ಸ್ತ್ರೀ/ಪುರುಷ) ಪರಮಾತ್ಮನ ಚರ್ಚೆಯ ವಿನಃ ಬೇರೆ ಯಾವ ಮಾತೂ ಪ್ರಯೋಜನಕ್ಕೆ ಬರುವುದಿಲ್ಲ. ನಿಮಗೆಲ್ಲಾ ತತ್ವಜ್ಞಾನ ಇಲ್ಲ. ಆದ್ದರಿಂದ ಮೋಹ–ಮಮತೆ ಮತ್ತು ಅಜ್ಞಾನವೆಂಬ ನಿದ್ರೆಯಲ್ಲಿ ಮಲಗುತ್ತಿರುವಿರಿ. ಅಂದರೆ ಪರಮಾತ್ಮನನ್ನು ಮರೆತು ಬಿಟ್ಟಿದ್ದೀರಿ. ಎದ್ದೇಳು, ಎದ್ದೇಳು, ನಿನ್ನನ್ನು ನೀನು ಸಂಭಾಳಿಸಿಕೊಂಡು ಸಂತರ ಸತ್ಸಂಗ ಕೇಳುತ್ತಾ, ನಿನ್ನ ಉದ್ಧಾರ ಮಾಡಿಕೋ, ನಾವು ಯಾವುದೋ ಹೋಟೆಲಿನಲ್ಲಿ ಒಂದು ರೂಮನ್ನು ಬಾಡಿಗೆಗೆ ಪಡೆದು, ರಾತ್ರಿ ಅಲ್ಲಿ ತಂಗಿ, ಮಾರನೇ ದಿನ ಬೆಳಿಗ್ಗೆ ಅದನ್ನು ಖಾಲಿ ಮಾಡಿ ತಮ್ಮ ತಮ್ಮ ಕಾರ್ಯಗಳಿಗೆ ಹೊರಡುವಂತೆ ಈ ಮಾನವ ಶರೀರದಲ್ಲಿ ಈ ಜೀವಾತ್ಮವು ಇದೆ. ಇದೇ ರೀತಿ ಶರೀರವೆಂಬ ಹೋಟೆಲಿನಲ್ಲಿ ಜೀವಾತ್ಮವು ಯಾತ್ರಿಕನಂತಿದೆ. ಸಾವಿನ ಸಮಯ ಬಂದಾಗ ಬೆಳಗಾದಂತೆ, ಶರೀರವೆಂಬ ಕೊಠಡಿಯನ್ನು ಖಾಲಿ ಮಾಡುವ ಸಮಯ ಬಂದಿದೆ ಎಂದರ್ಥ. ನೀವು ಭಕ್ತಿ ಮಾಡದೆ ಶರೀರ ಬಿಟ್ಟು ಖಾಲಿ ಕೈಯಲ್ಲಿ ಹೋಗಬೇಕಾಗುತ್ತದೆ.

❖ ಮಾನವ ಶರೀರವೆಂಬ ವಸ್ತ್ರವು ಅಮೂಲ್ಯವಾದದ್ದು, ತತ್ವಜ್ಞಾನದ ಅಭಾವದಿಂದ ಭಕ್ತಿಯನ್ನು ಮಾಡದೆ ಪಾಪದ ಮೇಲೆ ಪಾಪವನ್ನು ಮಾಡಿ ಆ ಬಟ್ಟೆಯ ಮೇಲೆ ಕಲೆ ಮೂಡಿಸುತ್ತಿದ್ದಾನೆ. ಈ ಪ್ರಪಂಚದಲ್ಲಿ ಜೀವನದ ಸಮಯ ಹೆಚ್ಚಿರುವುದಿಲ್ಲ. ತಮ್ಮ ಕುಟುಂಬದ ಪೋಷಣೆ ಹಾಗೂ ಧನಾರ್ಜನೆಯಲ್ಲಿ ಚಿಂತಿತನಾಗಿರುತ್ತಾನೆ. ಪಾಪ ಮಾಡಿ ಹಣ ಸಂಗ್ರಹಿಸಿಡುತ್ತಾನೆ. ಸಾವಿನ ನಂತರ ಕುಟುಂಬ ಮತ್ತು ಹಣ ನಿನ್ನನ್ನು ತೊರೆಯುತ್ತದೆ. ಇದಕ್ಕೋಸ್ಕರ ನೀನು ಮಾಡಿರುವ ಪಾಪವು ನಿನ್ನನ್ನು ನರಕದಲ್ಲಿ ಸುಡುತ್ತದೆ. ಪಾಪ ಮಾಡಿ ಬೇರೆಯವರ ಬೆಂಕಿಯಲ್ಲಿ ಬೇಯಬೇಡ.

❖ ಸತ್ಸಂಗ ಕೇಳದೆ ಪಾಪ–ಪುಣ್ಯ ಹಾಗೂ ಶಿಷ್ಟಾಚಾರದ ಜ್ಞಾನವಾಗುವುದಿಲ್ಲ, ಮನುಷ್ಯ ಗೇಲಿ ಮಾಡುವ ಸ್ವಭಾವದವನಾಗುತ್ತಾನೆ. ಮಾನವೀಯತೆಯನ್ನು ಮರೆತು ತನ್ನ ಶಕ್ತಿಯ ಮೂಲಕ ನಿರ್ಬಲ ನನ್ನು ಸತಾಯಿಸಿ ಸರ್ಪದ ಕೆಲಸ ಮಾಡುತ್ತಿರುವನು, ಅದು ನಿನ್ನ ವಿನಾಶದ ಕಾರಣವಾಗುತ್ತದೆ. ಹೇ ಸಜ್ಜನ ಪುರುಷ ಈ ಜ್ಞಾನ ಪ್ರೀತಿಯನ್ನು ಮತ್ತು ನಿಜವಾದ ಶ್ರದ್ಧೆಯಿಂದ ಸತ್ಸಂಗ ಕೇಳದೆ ಆಗುವುದಿಲ್ಲ.

❖ ಯಾವ ವ್ಯಕ್ತಿ ಭಕ್ತಿ ಮಾಡುವನೋ, ಅವನನ್ನು ಭಕ್ತನೆನ್ನುವರು. ಅಂದರೆ ಹಂಸ ಪಕ್ಷಿಯಂತೆ ಅಹಿಂಸಾವಾದಿ ಎನ್ನುತ್ತಾರೆ. ಅಂದರೆ ಭಕ್ತನು ಯಾರಿಗೂ ತೊಂದರೆ ಕೊಡುವುದಿಲ್ಲ. ಹಂಸ ಪಕ್ಷಿಯು ಸರೋವರದ ಮೀನನ್ನಾಗಲೀ, ಹುಳು ಹುಪ್ಪಟೆಯನ್ನಾಗಲೀ ತಿನ್ನುವುದಿಲ್ಲ. ಕೇವಲ ಮುತ್ತನ್ನು ತಿನ್ನುತ್ತದೆ. ಕಾಗೆ ತನ್ನ ಸ್ವಾರ್ಥಕ್ಕಾಗಿ ಜೀವಂತವಿರುವ ಪಶು ಪಕ್ಷಿಗಳ ಮಾಂಸವನ್ನು ಕಿತ್ತು ಕಿತ್ತು ತಿನ್ನುತ್ತದೆ, ಕಷ್ಟ ಕೊಡುತ್ತದೆ, ಇದೇ ರೀತಿ ಸತ್ಸಂಗ ಕೇಳದಿರುವ ವ್ಯಕ್ತಿ ಜ್ಞಾನದ ಕೊರತೆಯಿಂದ ಸ್ವಾರ್ಥದಿಂದ ಬೇರೆಯವರಿಂದ ಹಣ ಲೂಟಿ ಮಾಡುತ್ತಾನೆ. ಕಳ್ಳತನ ಮಾಡುತ್ತಾನೆ ಅಥವಾ ಬೇರೆ ರೀತಿಯ ಕಷ್ಟ ಕೊಡುತ್ತಾನೆ ಅದು ಪಾಪವಾಗಿದೆ" ಹೇ ಜೀವವೆಂಬ ದುಂಬಿಯೇ ಕಾಮ, ಕ್ರೋಧ, ಮೋಹ, ಲೋಭವೆಂಬ ವಿಷದ ಕಾಡಿನಲ್ಲಿ ಅಲೆದಾಡಬೇಡ, ಈ ಕಾಲ ಲೋಕವೆಂಬುದು ಕಷ್ಟಗಳ ಮನೆ. ಇದನ್ನು ಬಿಟ್ಟು ಕಷ್ಟವಿಲ್ಲದ ಸತ್ಯಲೋಕಕ್ಕೆ ನಡೆ. ಅದು ಸುಖದಾಯಕವಾದ ತೋಟ.

❖ ನಿತ್ಯಾನಂದರು ಹೇಳಿದ್ದಾರೆ, "ನಾನು ನನ್ನ ಗುರುವಿನ ಸತ್ಸಂಗ ಕೇಳಿದೆನು ಮತ್ತು ಅವರ ಸಂಕೇತ ತಿಳಿದುಕೊಂಡೆನು. ನನ್ನ ಜೀವನವನ್ನು ಪಾವನಗೊಳಿಸಿಕೊಂಡೆನು. ನನಗೆ ನನ್ನ

ಪ್ರೀತಿಪಾತ್ರರಾದ ಗುರು ಗುಮಾನೀ ದಾಸರು ಸಿಕ್ಕಿದರು. ಇದು ನನ್ನ ಪೂರ್ವಜನ್ಮದ ಸೌಭಾಗ್ಯ."

**ಶಬ್ದ**

ತನ್ ಮನ್ ಶೀಶ್ ಈಶ್ ಅಪನೇ ಪೈ, ಪಹಲಮ್ ಚೋಟ್ ಚಢಾವ್ಯೆ ।
ಜಬ್ ಕೋಏ ರಾಮ್ ಭಕ್ತ್ ಗತಿ ಪಾವ್ಯೆ, ಹೋ ಜೀ ॥ಟೇಕ್॥
ಸತಗುರು ತಿಲಕ್ ಅಜಪಾ ಮಾಲಾ, ಯುಕ್ತ್ ಜಟಾ ರಖಾವಾವ್ಯೆ ।
ಜತ್ ಕೋಪೀನ್ ಸತ್ ಕಾ ಚೋಲಾ, ಭೀತರ್ ಭೇಖ್ ಬನಾವ್ಯೆ ॥1॥
ಲೋಕ್ ಲಾಜ್ ಮರ್ಯಾದ್ ಜಗತ್ ಕೀ, ತೃಣ್ ಜ್ಯೋಂ ತೋಡ್ ಬಗಾವ್ಯೆ ।
ಕಾಮನಿ ಕನಕ್ ಜಹರ್ ಕರ್ ಜಾನ್ಯೆ, ಶಹರ್ ಅಗಮಪುರ್ ಜಾವ್ಯೆ ॥2॥
ಜ್ಯೋಂ ಪತಿ ಭ್ರತಾ ಪತಿ ಸೇ ರಾತೀ, ಆನ್ ಪುರುಷ್ ನಾ ಭಾವ್ಯೆ ।
ಬಸ್ಯೆ ಪೀಹರ್ ಮೆಂ ಪ್ರೀತ್ ಪ್ರೀತಮ್ ಮೆಂ, ನ್ಯೂಂ ಕೋಏ ಧ್ಯಾನ್ ಲಗಾವ್ಯೆ ॥3॥
ನಿಂದಾ ಸ್ತುತಿ ಮಾನ್ ಬಡಾಈ, ಮನ್ ಸೇ ಮಾರ್ ಗಿರಾವ್ಯೆ ।
ಅಷ್ಟ್ ಸಿದ್ಧಿ ಕೀ ಅಟಕ್ ನ ಮಾನ್ಯೆ, ಆಗ್ಯೆ ಕದಮ್ ಬಢಾವ್ಯೆ ॥4॥
ಆಶಾ ನದೀ ಉಲ್ಟ್ ಕರ್ ಡಾಟ್ಯೆ, ಆಢಾ ಬಂಧ್ ಲಗಾವ್ಯೆ ।
ಭವಜಲ್ ಖಾರ್ ಸಮುಂದ್ರ್ ಮೆಂ ಬಹುರ್ ನಾ ಖೋಡ್ ಮಿಲಾವ್ಯೆ ॥5॥
ಗಗನ್ ಮಹಲ್ ಗೋವಿಂದ್ ಗುಮಾನೀ, ಪಲಕ್ ಮಾಂಹಿ ಪಹುಂಚಾವ್ಯೆ ।
ನಿತಾನಂದ್ ಮಾಟೀ ಕಾ ಮಂದಿರ್, ನೂರ್ ತೇಜ್ ಹೋ ಜಾವ್ಯೆ ॥6॥

**ಶಬ್ದಾರ್ಥ:–** ಸಂತ ನಿತ್ಯಾನಂದರು ಭಕ್ತಿಯನ್ನು ಸಫಲಗೊಳಿಸುವಂಥಾ ವಿಧಾನವನ್ನು ತಿಳಿಸಿದರು. ಅವರು ಹೀಗೆ ಹೇಳಿದರು, "ಗುರುಗಳಿಂದ ದೀಕ್ಷೆ ಪಡೆದ ನಂತರ ಪರಮೇಶ್ವರನಿಗೆ ಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು. ನಮ್ಮ ತನು–ಮನ–ಧನವನ್ನು ಪರಮೇಶ್ವರನಿಗೆ ಒಪ್ಪಿಸಬೇಕು. ಅಂದರೆ ಪ್ರಾರಂಭದಿಂದಲೂ ತ್ಯಾಗದ ಮನೋಭಾವ ಹೊಂದಬೇಕು. ಆಗ ಭಕ್ತನಿಗೆ ಗತಿ ಅಂದರೆ ಮುಕ್ತಿ ದೊರೆಯುವುದು."

❖ ವಾಣಿ ಸಂಖ್ಯೆ **1:–** ಕೆಲವು ಸಾಧಕರು ನಾಟಕವಾಡುತ್ತಾರೆ. ಅವರು ಹಣೆಗೆ ತಿಲಕವಿಡುತ್ತಾರೆ. ಜಪಮಾಲೆಯಿಂದ ಜಪ ಮಾಡುತ್ತಾರೆ. ತಲೆಯಲ್ಲಿ ಉದ್ದುದ್ದ ಕೂದಲು ಬಿಡುತ್ತಾರೆ. ಧೋತ್ರದ ಬದಲಾಗಿ ಬರೀ ಕೌಪೀನ ಧರಿಸುತ್ತಾರೆ. ಇನ್ನೂ ಕೆಲವರು ಉದ್ದ ನಿಲುವಂಗಿ ಧರಿಸುತ್ತಾರೆ. ಈ ವೇಷಕ್ಕೆ ಬದಲಾಗಿ ನಿಮ್ಮ ಸದ್ಗುರುವಿಗೆ ಮರ್ಯಾದೆ ಕೊಡಿ. ಅವರನ್ನು ನಿಮ್ಮ ತಲೆಯ ಮೇಲೆ ಕೂರಿಸಿಕೊಳ್ಳಿ ಅಂದರೆ ಗುರುವಿನ ಭಕ್ತನಾಗಿ ಅವರ ಆಜ್ಞೆಯನ್ನು ಪಾಲಿಸಿ ಜನತೆಗೆ ಮಾದರಿಯಾಗಿ ಭಕ್ತನಾಗಿದ್ದರೆ ಹೀಗಿರಬೇಕು ಎನ್ನುವಂತಿರಬೇಕು. ಗುರುಗಳ ಜ್ಞಾನದ–ದೀಕ್ಷೆಯ ಪರಿಣಾಮ ದೂರದಿಂದಲೇ ಕಾಣುವುದು ಅಂದರೆ ಹಣೆಯ ಮೇಲಿನ ತಿಲಕ್ ದೂರದಿಂದಲೇ ಕಾಣಿಸುವುದು ಅದು ಭಕ್ತನ ಗುರುತು. ಭಕ್ತನ ಗುರುತು ಅವನ ಬಾಹ್ಯಾಡಂಬರದ ಬದಲಾಗಿ ಅವನ ಕ್ರಿಯೆಯಿಂದ ಆಗಬೇಕು. ಒಳ್ಳೆಯದನ್ನೇ ಮಾಡಬೇಕು. ಕೆಟ್ಟತನದಿಂದ ದೂರವಿರಬೇಕು. ಜಪಮಾಲೆಯಿಂದ ಅಲ್ಲ, ಉಸಿರು ತೆಗೆದುಕೊಳ್ಳುವಾಗ ಹಾಗೂ ಬಿಡುವಾಗ ಜಪವನ್ನು ಮಾಡಬೇಕು. ತಲೆಯಲ್ಲಿ ಉದ್ದುದ್ದ ಜಟೆ ಬಿಡುವುದರ ಬದಲಾಗಿ ಸದ್ಗುರುವಿನ ಮೂಲಕ ಹೇಳಲ್ಪಟ್ಟ ಭಕ್ತಿಯ ಯುಕ್ತಿಯನ್ನು ದೃಢತೆಯಿಂದ ನಿಮ್ಮದಾಗಿಸಿಕೊಳ್ಳಿ. ಗುಪ್ತಾಂಗಕ್ಕೆ ಕೇವಲ ಕೌಪೀನ ಕಟ್ಟಿಕೊಳ್ಳುವುದರಿಂದ ಸಂಯಮ ಬರುವುದಿಲ್ಲ. ಯತಿ ಭಾವವನ್ನು ತನ್ನದಾಗಿಸಿಕೊಂಡರೆ ಸಂಯಮವು ಬರುವುದು. ಯುವತಿಯರನ್ನು ನೋಡಿದಾಗ ಮನಸ್ಸಿನಲ್ಲಿ ಕೆಟ್ಟ ಭಾವನೆ ಬಾರದಂತೆ ನೋಡಿಕೊಳ್ಳಬೇಕು. ಸತ್ಯವನ್ನೇ ಹೇಳಬೇಕು. ಇದೇ ಭಕ್ತನು ಧರಿಸುವ ನಿಜವಾದ ನಿಲುವಂಗಿ ಅಂದರೆ ಭಕ್ತನು ತೋರಿಸುವ ವಸ್ತ್ರ. ಸತ್ಯಜ್ಞಾನದಿಂದ ಇವನು ಸತ್ಯಭಕ್ತಿ ಮಾಡುತ್ತಿದ್ದಾನೆ ಅಥವಾ ತನ್ನ ಜೀವನವನ್ನು ತಪ್ಪು ದಾರಿಗೆ ಎಳೆದು ನಷ್ಟ ಮಾಡಿಕೊಳ್ಳುತ್ತಿದ್ದಾನೆ ಎಂಬುದು ತಿಳಿಯುತ್ತದೆ.

❖ ವಾಣಿ ಸಂಖ್ಯೆ 2:– ಪ್ರಪಂಚದಲ್ಲಿರುವ ವ್ಯಕ್ತಿಗಳ ಮಾತಿನಿಂದ ಭಕ್ತಿಗೆ ಭಂಗ ತಂದುಕೊಳ್ಳಬಾರದು. ಆ ಜನರು ಏನು ಹೇಳಲು ಸಾಧ್ಯ? ನಾನು ಸತ್ಸಂಗಕ್ಕೆ ಹೋಗುತ್ತೇನೆ. ಅಲ್ಲಿ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ಪಾರಂಪರಿಕ ಭಕ್ತಿಯನ್ನು ಬಿಟ್ಟು ಬಿಟ್ಟಿದ್ದೇನೆ. ಹೀಗೆಂದರೆ ಅವರೇನು ಮಾಡಲು ಸಾಧ್ಯ? ಈ ಲೋಕಮರ್ಯಾದೆಯನ್ನು ಹುಲ್ಲುಕಡ್ಡಿಯನ್ನು ಕೀಳುವಂತೆ ಕಿತ್ತು ಬಿಸಾಡಬೇಕು ಅಂದರೆ ನಿಮಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಚಿನ್ನ ಮತ್ತು ಕಾಮಿನಿ ಅಂದರೆ ಸುಂದರ ಸ್ತ್ರೀಯನ್ನು ನೋಡಿ ನಿಮ್ಮ ವರ್ತನೆಯಲ್ಲಿ ದುರಾಸೆ ಬೇಡ. ಅದನ್ನು ವಿಷದಂತೆ ಭಾವಿಸಬೇಕು. ಆಗ ಮಾತ್ರ ಸಾಧಕನು ಅಮರ ಲೋಕಕ್ಕೆ ತೆರಳುವನು.

❖ ವಾಣಿ ಸಂಖ್ಯೆ 3:– ನಿಮ್ಮ ಇಷ್ಟದೇವರ ಬಗ್ಗೆ ಪತಿವ್ರತಾ ಸ್ತ್ರೀಯಂತೆ ನಿಷ್ಠೆಯಿಂದ ಇರಬೇಕು. ಹೇಗೆ ಪತಿವ್ರತಾ ಸ್ತ್ರೀಯು (ಪರಪುರುಷನು ಎಷ್ಟೇ ಸುಂದರವಾಗಿದ್ದರೂ, ಧನಿಕನಾಗಿದ್ದರೂ) ತನ್ನ ಪತಿಯನ್ನು ಬಿಟ್ಟು ಬೇರೆ ಪುರುಷನನ್ನು ತನ್ನ ಪತಿಯಂತೆ ನೋಡಲು ಇಚ್ಛಿಸುವುದಿಲ್ಲ ಹಾಗೆ ನಿಮ್ಮ ಪರಮಾತ್ಮನ ಭಕ್ತಿಯನ್ನು ಎಂದಿಗೂ ಮರೆಯಬಾರದು. ಯಾರೂ ಬರೀ ತೋರಿಕೆಗಾಗಿ ಭಕ್ತಿ ಮಾಡದೆ ಹೃದಯಪೂರ್ವಕವಾಗಿ, ದೃಢ ಮನಸ್ಸಿನಿಂದ, ಉಚ್ಛ್ವಾಸ, ನಿಶ್ವಾಸದಿಂದಲೂ ಪರಮಾತ್ಮನ ನಾಮಸ್ಮರಣೆ ಮಾಡುತ್ತಿರಬೇಕು. (ಭಕ್ತನೆಂದರೆ ಸ್ತ್ರೀಯಾಗಬಹುದು ಅಥವಾ ಪುರುಷನಾಗಬಹುದು) ಪತಿವ್ರತಾ ಸ್ತ್ರೀ ತನ್ನ ತಾಯಿಯ ಮನೆಗೆ ಹೋದಾಗ ಅವಳ ಕುಟುಂಬಕ್ಕೆ ಅವಳು ತನ್ನ ಪತಿಯನ್ನು ನೆನಪಿಸಿಕೊಳ್ಳುತ್ತಿದ್ದಾಳೆ ಎನ್ನುವುದು ತಿಳಿಯುವುದಿಲ್ಲ. ಇದೇ ರೀತಿ ಸಾಧಕನು ತನ್ನ ಪ್ರಭುವಿನ ಬಗ್ಗೆ ಗಮನಹರಿಸಬೇಕು.

❖ ವಾಣಿ ಸಂಖ್ಯೆ 4:– ಪೂರ್ಣ ಸದ್ಗುರುವಿನಿಂದ ಸತ್ಯ ಭಕ್ತಿಯನ್ನು ಪಡೆದ ನಂತರ ಯಾರಾದರೂ ಭಕ್ತನನ್ನು ನಿಂದಿಸಿದರೆ ತಪ್ಪಾಗಿ ತಿಳಿಯಬಾರದು. ಯಾರಾದರೂ ಪ್ರಶಂಸಿಸಿದರೆ ಅದರಿಂದ ಪ್ರಭಾವಿತವಾಗಬಾರದು. ಶಾಸ್ತ್ರಾನುಸಾರ ಸತ್ಯ ಭಕ್ತಿಯನ್ನು ಮಾಡುವುದರಿಂದ ಸಾಧಕನಿಗೆ ಕೆಲವು ಸಿದ್ಧಿಗಳು ದೊರೆಯುತ್ತವೆ. ಆದರೆ ಅವು ಮೋಕ್ಷಕ್ಕೆ ಉಪಯೋಗವಾಗುವುದಿಲ್ಲ. ಅವು ಸಂಖ್ಯೆಯಲ್ಲಿ ಎಂಟಿವೆ. ಅವುಗಳ ಮೂಲಕ ಸಾಧಕನು ಕೆಲವರಿಗೆ ಲಾಭ ಉಂಟು ಮಾಡಿ, ಕೆಲವರಿಗೆ ನಷ್ಟ ಉಂಟು ಮಾಡಿ ತನ್ನ ಭಕ್ತಿಯನ್ನು ನಷ್ಟ ಮಾಡಿಕೊಳ್ಳುತ್ತಾನೆ. ಯಾವುದಾದರೂ ಚಮತ್ಕಾರವನ್ನು ತೋರಿಸಿ ಪ್ರಸಿದ್ಧನಾಗುತ್ತಾನೆ. ಆದರೆ ಅವನ ಭವಿಷ್ಯ ನರಕವಾಗುತ್ತದೆ. ಅವನು ಪಶು–ಪಕ್ಷಿಗಳ ಯೋನಿಯನ್ನು ಪಡೆಯುತ್ತಾನೆ. ಆದ್ದರಿಂದ ಮೋಕ್ಷ ಪ್ರಾಪ್ತಿಯನ್ನು ಇಚ್ಛಿಸುತ್ತಾ ಅಷ್ಟ ಸಿದ್ಧಿಗಳೆಂಬ ನಕಲೀ ಅಧಿಕಾರದ ಆಸೆ ಪಡಬಾರದು. ಇದನ್ನೆಲ್ಲಾ ಬಿಟ್ಟು ಮೋಕ್ಷ ಪ್ರಾಪ್ತಿಯ ಉದ್ದೇಶದಿಂದ ಮುಂದುವರೆಯಬೇಕು.

❖ ವಾಣಿ ಸಂಖ್ಯೆ 5:– ಈ ಪೃಥ್ವೀ ಲೋಕದ ಧನ ವೈಭವ, ರಾಜ ವೈಭೋಗ, ಸಂಪತ್ತಿನ ಅನೇಕ ಇಚ್ಛೆಗಳೆಂಬ ನದಿಯನ್ನು ತಡೆಯಬೇಕು. ಈ ಆಸೆಗಳಿಗೆಲ್ಲಾ ಒಂದು ಅಣೆಕಟ್ಟು ಕಟ್ಟಬೇಕು. ಅಂದರೆ ದೃಢ ನಿಶ್ಚಯವೆಂಬ ಅಣೆಕಟ್ಟು ಕಟ್ಟಬೇಕು. ಸಂಸಾರವೆಂಬ ಉಪ್ಪಿನ ಸಮುದ್ರ ಅಂದರೆ ದುಃಖಗಳಿಂದ ತುಂಬಿದ ಸಮುದ್ರದಲ್ಲಿ ಮತ್ತೆ ಜನ್ಮ ತಾಳಬಾರದು.

❖ ವಾಣಿ ಸಂಖ್ಯೆ 6:– ಯಾವ ಇಷ್ಟದೈವದ ಭಕ್ತಿಯನ್ನು ಗುರುವು ತಿಳಿಸುತ್ತಾನೋ, ಆ ಗುರುವು ತನ್ನ ಅನುಯಾಯಿಗಳನ್ನು ಆಕಾಶದಲ್ಲಿರುವ ಆ ಇಷ್ಟ ದೈವದ ಧಾಮಕ್ಕೆ ಪೂರ್ಣ ಸಹಯೋಗ ನೀಡಿ ಕಳುಹಿಸಿಕೊಡುತ್ತಾನೆ. ನಿತ್ಯಾನಂದರ ಗುರುಗಳಾದ ಶ್ರೀ ಗುಮಾನಿದಾಸರು ಶ್ರೀ ವಿಷ್ಣುವಿನ ಭಕ್ತರಾಗಿದ್ದರು. ನಿತ್ಯಾನಂದರು ಅದರ ಪ್ರಾಪ್ತಿಗಾಗಿ ಮಹಿಮೆಯನ್ನು ತಿಳಿಸುತ್ತಾ ಹೀಗೆ ಹೇಳಿದ್ದಾರೆ, ತಮ್ಮ ಸಾಧನೆಯ ಶಕ್ತಿಯನ್ನು ಸುರಕ್ಷಿತವಾಗಿ ಇಡುವುದರಿಂದ ಸ್ಥೂಲ ಶರೀರದ ಒಳಗಿರುವ ಸೂಕ್ಷ್ಮ ಶರೀರವು ಭಕ್ತಿಯ ಶಕ್ತಿಯಿಂದ ತೇಜೋಮಯವಾಗುತ್ತದೆ. ಭಕ್ತಿ ಮಾಡದಿದ್ದರೆ ಆ ಶರೀರವು ಮಣ್ಣಿಗೆ ಸಮಾನ. ಇದರಿಂದ ತಿಳಿಯುವುದೇನೆಂದರೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಆಡುವ ಆಟಗಾರರ ನಿಯಮಗಳಂತೆಯೇ, ಜಿಲ್ಲಾಮಟ್ಟದಲ್ಲಿ ಆಡುವ ಆಟಗಾರರ ನಿಯಮಗಳು ಇರುತ್ತವೆ. ನಿತ್ಯಾನಂದರು ರಾಜ್ಯ ಮಟ್ಟದಲ್ಲಿ ಆಟವಾಡುತ್ತಿದ್ದರು. ಅದನ್ನು ಯಶಸ್ವಿಗೊಳಿಸಿದರು.

ನಾವು ಕಬೀರ ಪರಮಾತ್ಮರನ್ನು ಇಷ್ಟದೈವ ಎಂದು ಭಾವಿಸಿ ಭಕ್ತಿ ಮಾಡಿದರೂ ನಿಯಮ ಅದೇ ಆಗಿರುತ್ತದೆ. ನಾವು ಅಂತರರಾಷ್ಟ್ರೀಯ ಮಟ್ಟದ ಆಟಗಾರರು.(6)

ಸಂತ ನಿತ್ಯಾನಂದರು ತಮ್ಮ ಅಂತಿಮ ದಿನಗಳನ್ನು ಜಟೈಲಾ ಎಂಬ ಕೆರೆಯ ಬಳಿ ಸಾಧನೆ ಮಾಡಿ ಕಾಲ ಕಳೆದರು. ಜಟೈಲಾ ಕೆರೆ ಭಿವಾನೀ ಜಿಲ್ಲೆಯ ದಾದರಿ ತಾಲೂಕಿನ ಅನೇಕ ಗ್ರಾಮಗಳ ಸೀಮೆಯಲ್ಲಿ ಕಟ್ಟಲಾಗಿದೆ (ಊರು–ಮಾಜರಾ, ಬಿಗೋವಾ, ಬಾಸ್ ಇತ್ಯಾದಿಗಳ ಸೀಮೆಯಲ್ಲಿದೆ) ಸಂತ ನಿತ್ಯಾನಂದರು ಶ್ರೀ ವಿಷ್ಣುವಿನ ಭಕ್ತರು. ಇವರ ಗುರುಗಳಾದ ಗುಮಾನಿದಾಸರು ದಿಲ್ಲಿಯ ಸಂತರಾದ ಶ್ರೀ ಚರಣದಾಸ ವೈಷ್ಣವರ ಶಿಷ್ಯರು. "ಸೃಷ್ಟಿರಚನೆ" ಎಂಬ ಗದ್ಯಭಾಗದಲ್ಲಿ ತಿಳಿಸಿರುವಂತೆ ನಿತ್ಯಾನಂದರಿಗೆ ಯಾವ ಶ್ರೇಣಿಯ ಮೋಕ್ಷ ಪ್ರಾಪ್ತಿಯಾಯಿತೆಂದು ಓದುಗರು ಇದೆಲ್ಲವನ್ನು ಪುಟಸಂಖ್ಯೆ 255ರಲ್ಲಿ ಓದಿ ತಿಳಿಯಿರಿ. ಸಂತ ಗರೀಬ್‌ದಾಸರಿಗೆ ಪರಮಾತ್ಮ ಕಬೀರರು ಸಿಕ್ಕಿದರು. ಅವರು ಗರೀಬ್‌ದಾಸರಿಗೆ ಹೇಳಿದ್ದರು. ಭಕ್ತರು ಯಾವ ರೀತಿಯ ಸಾಧನೆ ಮಾಡಿದರೂ ಅದು ಆದರಣೀಯವೇ. ಆದರೆ ಎಲ್ಲಿಯವರೆಗೆ ಪರಮ ಸದ್ಗುರು ಸಿಗುವುದಿಲ್ಲವೋ, ಎರಡು ಅಕ್ಷರದ ನಾಮಸ್ಮರಣೆಯ ದೀಕ್ಷೆಯನ್ನು ಕೊಡುವುದಿಲ್ಲವೋ, ಅಲ್ಲಿಯವರೆಗೆ ಗುರುವಿಗೂ ಮುಕ್ತಿ ಇಲ್ಲ, ಶಿಷ್ಯನಿಗೂ ಇಲ್ಲ.

ಗರೀಬ್, ಸಾಧ್–ಸಾಧ್ ಸಬ್ ನೇಕ್ ಹೈಂ, ಆಪ್ ಆಪನೀ ಠೌರ್ ।
ಜೋ ನಿಜ್ ಧಾಮ್ ಪಹುಂಚಾವಹೀಂ, ಸೋ ಸಾಧು ಕೋಈ ಔರ್ ॥
ಗರೀಬ್, ಸಾಧ್ ಹಮಾರೆ ಸಗೆ ಹೈಂ, ನಾ ಕಾಹೂ ಕೋ ದೋಷ್ ।
ಜೋ ಸಾರನಾಮ್ ಬತಾವಹೀಂ, ಸೋ ಸಾಧು ಸಿರ್ ಪೋಷ್ ॥

ಶಬ್ದಾರ್ಥ:– ಸಂತ ಗರೀಬ್‌ದಾಸರು ಹೇಳಿದ್ದಾರೆ, ಯಾರು ಪರಮಾತ್ಮನ ಸತ್ಯಮಾರ್ಗವನ್ನು ಹೇಳುವವರೋ ಆ ಸಂತರು ಒಳ್ಳೆಯ ಆತ್ಮ ಉಳ್ಳವರು. ಅವರ ಉದ್ದೇಶವು ತಪ್ಪಾಗಿರುವುದಿಲ್ಲ. ಅವರು ಎಷ್ಟರಮಟ್ಟಿಗೆ ಜ್ಞಾನ ಹೊಂದಿರುತ್ತಾರೆ, ಅಲ್ಲಿಯವರೆಗೆ ಸರಿ. ಅಂದರೆ ಒಬ್ಬರು ವಿಷ್ಣುವಿನ ಸಾಧನೆಯನ್ನು ಹೇಳುತ್ತಾರೆ, ಒಬ್ಬರು ಶಿವನ ಹಾಗೂ ಇನ್ನೊಬ್ಬರು ಬ್ರಹ್ಮನ ಸಾಧನೆಯನ್ನು ವೇದಗಳ ಪ್ರಕಾರ ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ. ಒಂದು ಹಂತದವರೆಗೆ ಅದು ಸರಿ. ಆದರೆ ಆ ಸಾಧನೆಯಿಂದ ನಿಜವಾದ ಹಂತ ಅಂದರೆ ಸನಾತನ ಪರಮಧಾಮವನ್ನು (ಸತ್ಯಲೋಕ) ಪಡೆಯಲಾರರು. ಯಾವ ಸಂತನು ಸತ್ಯಲೋಕದ ಪ್ರಾಪ್ತಿಗಾಗಿ ಮಾರ್ಗದರ್ಶನ ನೀಡುವರೋ, ಆ ಸಂತರು ಮೇಲೆ ತಿಳಿಸಿದ ಸಂತರಿಗಿಂತ ಭಿನ್ನವಾಗಿರುತ್ತಾರೆ.

ಯಾವ ಸಂತರು ಪರಮಾತ್ಮನಿಗಾಗಿ ಪ್ರಯತ್ನಶೀಲರಾಗಿರುತ್ತಾರೋ, ಆ ಸಂತರೆಲ್ಲಾ ನಮ್ಮ ಸ್ವಂತ ಸಂಬಂಧಿಗಳು. ನಮ್ಮ ನಿಜವಾದ ಜೊತೆಗಾರರು. ಅವರಿಗೆ ನಾವು ದೋಷ ನೀಡುವುದಿಲ್ಲ ಏಕೆಂದರೆ ಅವರಿಗೆ ಪೂರ್ಣ ಮೋಕ್ಷ ಮಂತ್ರ ಸಾರನಾಮದ ಜ್ಞಾನವಿಲ್ಲ. ಆ ಸಂತರ ಶಿಷ್ಯರಾಗುವುದರಿಂದ ಜೀವಾತ್ಮಕ್ಕೆ ಪೂರ್ಣ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಜನನ–ಮರಣವು ಅವರನ್ನು ಬಾಧಿಸುತ್ತದೆ. ಯಾವ ಸಂತನು ಸಾರನಾಮದ ದೀಕ್ಷೆ ನೀಡುವನೋ, ಅವನು ನಮ್ಮ ತಲೆ ಕಾಯುವನು. ಅಂಥಾ ಗುರುಗಳು ಗೌರವಕ್ಕೆ ಪಾತ್ರರು.

ಗೀತೆಯ 15ನೆಯ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ, ವಿಷ್ಣುವಿಗೇ ಜನನ ಮರಣಗಳಿರುವಾಗ ಉಪಾಸಕನಿಗೆ ಮೋಕ್ಷವು ಪ್ರಾಪ್ತಿಯಾಗುವುದಿಲ್ಲ. ತತ್ವದರ್ಶಿ ಸಂತನಿಂದ ತತ್ವಜ್ಞಾನಪ್ರಾಪ್ತಿಯಾದ ನಂತರ ಪರಮೇಶ್ವರನ ಆ ಪರಮ ಪದದ ಹುಡುಕಾಟವನ್ನು ನಡೆಸಬೇಕು. ಅಲ್ಲಿಗೆ ತೆರಳಿದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಈ ಪ್ರಪಂಚದ ವಿಸ್ತಾರವನ್ನು ಮಾಡಿರುವ ಹಾಗೂ ಪ್ರಪಂಚವೆಂಬ ವೃಕ್ಷವನ್ನು ರಚಿಸಿರುವ ಆ ಪರಮೇಶ್ವರನ ನಾಮಸ್ಮರಣೆ ಮಾಡು.

ಹಿಂದೂ ಸಮಾಜದ ಗುರುಗಳು, ಶ್ರೀ ಕೃಷ್ಣನು ಅರ್ಜುನನಿಗೆ ಗೀತೆಯನ್ನು ಬೋಧಿಸಿದ್ದಾನೆ ಎಂದು ಹೇಳಿದ್ದಾರೆ. ಕೃಷ್ಣನು ವಿಷ್ಣುವಿನ ಅವತಾರ ಅಂದರೆ ಸ್ವಯಂ ವಿಷ್ಣುವೇ. ಗೀತೆಯ 4ನೇ

ಅಧ್ಯಾಯದ 5ನೇ ಶ್ಲೋಕದಲ್ಲಿ ಹೇಳಿದೆ–ಅರ್ಜುನ, ನಿನ್ನ ಮತ್ತು ನನ್ನ ಅನೇಕ ಜನ್ಮಗಳಾದವು. ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತು. (ಇದರಿಂದ ವಿಷ್ಣುವೂ ನಶ್ವರನಾದವನು, ಅವನಿಗೂ ಜನನ–ಮರಣವಿದೆ ಎಂದು ತಿಳಿಯುತ್ತದೆ) ದೇವಿಪುರಾಣದ 3ನೇ ಸ್ಕಂದದಲ್ಲಿ ವಿಷ್ಣು ಸ್ವತಃ ಹೇಳಿದ್ದಾನೆ, "ನಾನು, ಬ್ರಹ್ಮಾ ಮತ್ತು ಶಿವ ಈ ಮೂವರೂ ಹುಟ್ಟುತ್ತೇವೆ, ಸಾಯುತ್ತೇವೆ. ನಮ್ಮ ಆವಿರ್ಭಾವ ಮತ್ತು ತಿರೋಭಾವ ಆಗುತ್ತಿರುತ್ತದೆ" ಎಂದಿದ್ದಾರೆ. ಇದರಿಂದ ವಿಷ್ಣುವು ಅವಿನಾಶಿಯಲ್ಲ ಎಂದು ತಿಳಿಯುತ್ತದೆ. ಗೀತೆಯ 2ನೇ ಅಧ್ಯಾಯದ 17ನೇ ಶ್ಲೋಕ, 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅವಿನಾಶಿ ಪರಮಾತ್ಮನು ಗೀತೆಯ ಜ್ಞಾನವನ್ನು ಕೊಟ್ಟವನಿಗಿಂತ ಬೇರೆ ಎಂದು ತಿಳಿಯುತ್ತದೆ. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದಾತನು ಹೇಳಿದ್ದಾನೆ, "ಹೇ ಭಾರತ! ಸರ್ವಭಾವದಿಂದ ನೀನು ಪರಮೇಶ್ವರನ ಆಶ್ರಯ ಪಡೆ. ಆ ಪರಮೇಶ್ವರನ ಕೃಪೆಯಿಂದ ನೀನು ಪರಮ ಶಾಂತಿಯನ್ನು ಮತ್ತು ಸನಾತನ ಪರಮ ಧಾಮವನ್ನು ಪಡೆಯುವೆ."

ಇದರಿಂದ ತಿಳಿಯುವುದೇನೆಂದರೆ, ನಿತ್ಯಾನಂದರಿಗೆ ಗೀತೆಯಲ್ಲಿ ವರ್ಣಿಸಿರುವಂಥಾ ಪೂರ್ಣ ಮುಕ್ತಿಯು ಪ್ರಾಪ್ತವಾಗಲಿಲ್ಲ. ಕಬೀರರು ಹೇಳಿದ್ದಾರೆ:–

ಜೋ ಜಾಕಿ ಶರಣಾ ಬಸ್ಸೈ, ತಾಕೋ ತಾಕೀ ಲಾಜ್ ।
ಜಲ್ ಸೌಂಹೀ ಮಛಲೀ ಚಢೇ, ಬಹ್ ಜಾತೇ ಗಜರಾಜ್ ॥

ಭಾವಾರ್ಥ:– ಯಾವ ಭಕ್ತನು ದೇವ–ದೇವತೆಯನ್ನು ಆರಾಧಿಸುತ್ತಾನೋ, ಆ ದೇವಿ–ದೇವತೆ ಆ ಭಕ್ತನ ಇಷ್ಟಾರ್ಥಗಳನ್ನು ಖಂಡಿತ ಪೂರೈಸುತ್ತಾರೆ. ಸಾಮಾನ್ಯ ಮನುಷ್ಯನಿಂದ ಸಾಧ್ಯವಾಗದು. ಉದಾಹರಣೆಗೆ ಒಬ್ಬ ಇನ್ಸ್‌ಪೆಕ್ಟರ್ ಜೊತೆಗೆ ಒಬ್ಬ ವ್ಯಕ್ತಿ ಗೆಳೆತನ ಬೆಳೆಸಿದರೆ ಆ ಇನ್ಸ್‌ಪೆಕ್ಟರ್ ಗೆಳೆಯ ಠಾಣೆಗೆ ಬಂದೊಡನೆ ಅವನಿಗೆ ಕುರ್ಚಿ ಕೊಟ್ಟು ಕಾಫಿ ತಿಂಡಿ ಕೊಡಿಸಿ ಸತ್ಕರಿಸುತ್ತಾನೆ. ಆದರೆ ಅದು ಸಾಮಾನ್ಯ ವ್ಯಕ್ತಿಗೆ ಅದು ಸಾಧ್ಯವಿಲ್ಲ. ಪೊಲೀಸ್ ಸೂಪರಿಂಟೆಂಡೆಂಟ್ ಜೊತೆ ಗೆಳೆತನವಿದ್ದರೆ ಅವನಿಗೆ ಅತಿಥ್ಯ ಬೇರೆ ರೀತಿಯದೇ ಆಗುತ್ತದೆ. ಒಬ್ಬನಿಗೆ ಮುಖ್ಯಮಂತ್ರಿಯ ಜೊತೆ ಗೆಳೆತನವಿದ್ದರೆ ಅದರ ಲಾಭವೇ ಬೇರೆ. ಪ್ರಧಾನ ಮಂತ್ರಿಯ ಜೊತೆ ಗೆಳೆತನವಿದ್ದರೆ ಕೇಳುವುದೇ ಬೇಡ.

ಲೇಖಕರ (ರಾಮ್‌ಪಾಲ್ ದಾಸ್) ಅಭಿಪ್ರಾಯವೇನೆಂದರೆ, ಯಾರಾದರೂ ದೇವಿ–ದೇವತೆಗಳನ್ನು ಆರಾಧಿಸಿದರೆ ಲಾಭ ಖಂಡಿತ. ಆದರೆ ಪೂರ್ಣ ಪರಮಾತ್ಮನನ್ನು ಆರಾಧಿಸಿದರೆ ಸರ್ವ ಲಾಭಗಳೂ ಅವನಿಗೆ ಲಭಿಸುತ್ತದೆ. ಪ್ರಧಾನಮಂತ್ರಿಯ ಗೆಳೆತನವಿದ್ದರೆ ದೇಶದ ಎಲ್ಲಾ ಮುಖ್ಯಮಂತ್ರಿಗಳು, ಅಧಿಕಾರಿಗಳು, ನೌಕರರು ಎಲ್ಲರೂ ಅವನಿಗೆ ಸಹಕಾರ ನೀಡುತ್ತಾರೆ. ಯಾರೂ ಅವನನ್ನು ವಿರೋಧಿಸುವುದಿಲ್ಲ. ಇದೇ ರೀತಿ ಪೂರ್ಣ ಪರಮೇಶ್ವರನನ್ನು ಆರಾಧಿಸುವ ಭಕ್ತನ ಜೊತೆ ವಿಶ್ವದ ಎಲ್ಲಾ ದೇವಿ–ದೇವತೆಗಳು ಇರುತ್ತಾರೆ. ಅವರೆಲ್ಲಾ ಇವನಿಗೆ ಯಾವಾಗಲೂ ಸಹಾಯ ಮಾಡುತ್ತಿರುತ್ತಾರೆ. ತೊಂದರೆ ಕೊಡುವುದಿಲ್ಲ. ಯಾವುದಾದರೂ ದೆವ್ವ, ಭೂತ, ಪಿಶಾಚಿಗಳು ಭಕ್ತನನ್ನು ಸತಾಯಿಸಲು ಬಂದರೆ ದೇವಿ–ದೇವತೆಗಳು ಅವುಗಳನ್ನು ದೂರ ಓಡಿಸುತ್ತಾರೆ. ಹಾಗೂ ಅವುಗಳಿಗೆ ಈ ಭಕ್ತನು ಯಾರ ಆಶ್ರಯದಲ್ಲಿದ್ದಾನೆ ಎಂದು ನಿಮಗೆ ತಿಳಿದಿದೆಯೇ ಎಂದು ಪ್ರಶ್ನಿಸುತ್ತಾರೆ. ಆಗ ಆ ರಾಕ್ಷಸ ದೈತ್ಯರು ಹೆದರಿ ಯಾವುದೇ ಕೆಟ್ಟದ್ದನ್ನು ಮಾಡುವುದಿಲ್ಲ. ಯಾವುದಾದರೂ ಭೂತ, ಪ್ರೇತಗಳು ಭಕ್ತನನ್ನು ಕಾಡಿದರೆ, ಪರಮೇಶ್ವರನ ಗಣಗಳು ಅವುಗಳನ್ನು ಹಿಡಿದು ಚೆನ್ನಾಗಿ ಬಡಿದು, ಅವುಗಳನ್ನು ಬಂಧಿಸಿಡುತ್ತಾರೆ. ಪರಮಾತ್ಮ ಕಬೀರರು ಹೇಳಿದ್ದಾರೆ:–

ಏಕೈ ಸಾಧೈ ಸಬ್ ಸಧೈ, ಸಬ್ ಸಾಧೇಂ ಸಬ್ ಜಾಯ್ ।
ಮಾಲೀ ಸೀಂಚೈ ಮೂಲ್ ಕೋ, ಫೂಲೈ–ಫಲೈ ಅಘಾಯ್ ॥

ಶಬ್ದಾರ್ಥ:– ಮಾವಿನಹಣ್ಣಿನ ಅಥವಾ ಬೇರೆ ಮರದ ಸಸ್ಯದ ಬೇರನ್ನು ಭೂಮಿಯಲ್ಲಿ ಗುಂಡಿ ತೋಡಿ ನೆಡುತ್ತಾರೆ. ನಂತರ ಅದಕ್ಕೆ ನೀರೆರೆಯುತ್ತಾರೆ. ಒಂದು ಬೇರನ್ನು ಪೋಷಿಸುವುದರಿಂದ ಅಂದರೆ ಪೂಜೆ ಮಾಡುವುದರಿಂದ ಆ ಗಿಡದ ಎಲ್ಲಾ ಅಂಗಗಳು ವಿಕಸಿತವಾಗಿರುತ್ತದೆ. ಗಿಡ

ಹೂವು ಹಣ್ಣುಗಳಿಂದ ತುಂಬಿ ಹೋಗುತ್ತದೆ. ಗಿಡವು ಮರವಾಗಿ ಬೆಳೆದು ನೆರಳು, ಸೌದೆ ಮತ್ತು ಹಣ್ಣುಗಳನ್ನು ನೀಡುತ್ತದೆ. ಒಂದು ವೇಳೆ ಆ ಗಿಡದ ರೆಂಬೆಗಳನ್ನು ನೆಲದಲ್ಲಿ ಗುಂಡಿ ತೋಡಿ ನೆಟ್ಟು, ಎಲ್ಲಾ ರೆಂಬೆ ಕೊಂಬೆಗಳಿಗೂ ನೀರೆರೆದರೆ ಹಾಗೂ ಬೇರಿಗೆ ನೀರನ್ನು ಹಾಕದಿದ್ದರೆ ಆಗ ಎಲ್ಲವೂ ಹಾಳಾಗಿ ಹೋಗುತ್ತದೆ. ಮಾಲಿಯು ಬೇರನ್ನು ನೆಲಕ್ಕೆ ನೆಟ್ಟು, ಅದಕ್ಕೆ ನೀರನ್ನು ಹಾಕುತ್ತಾನೆ. ಅದರಿಂದ ಲಾಭ ಪಡೆಯುತ್ತಾನೆ. ಇದೇ ರೀತಿ ತತ್ವದರ್ಶಿ ಸಂತನು ಸಂಸಾರವೆಂಬ ಗಿಡದ ಬೇರನ್ನು ಅಂದರೆ ಪರಮ ಅಕ್ಷರ ಬ್ರಹ್ಮನನ್ನು ಇಷ್ಟದೈವ ಎಂದು ಭಾವಿಸಿ ಪೂಜೆ ಮಾಡುತ್ತಾನೆ ಹಾಗೂ ಮಾಡಿಸುತ್ತಾನೆ. ಅವನು ಅದೊಂದನ್ನು ಪೂಜೆ ಮಾಡಿ ಎಲ್ಲವನ್ನೂ ಸಾಧಿಸುತ್ತಾನೆ. ಎಲ್ಲಾ ದೇವತೆಗಳು ಅದೇ ಸತ್ಯಪುರುಷನ ಆಜ್ಞೆಯನ್ನು ಪಾಲಿಸುತ್ತಾರೆ. ಸಾಧಕನ ಕಾರ್ಯವನ್ನು ಸಿದ್ಧಿಗೊಳಿಸುತ್ತಾರೆ. ಒಂದು ವೇಳೆ ಎಲ್ಲಾ ದೇವರ ಪೂಜೆ ಮಾಡಿದರೆ ಸತ್ಯಪುರುಷನು ಸಿಟ್ಟಾಗುವನು ಅವನ ಆಜ್ಞೆ ಇಲ್ಲದೆ ಯಾವ ದೇವತೆಯು ಅನುಕೂಲ ಮಾಡುವುದಿಲ್ಲ. ಅಂದರೆ ಸಾಧಕನ ಸಾಧನೆಯು ಶಾಸ್ತ್ರಕ್ಕೆ ವಿರುದ್ಧವಾದ ಕಾರಣ ಯಾವುದೇ ಲಾಭ ಸಿಗುವುದಿಲ್ಲ.

ಆದ್ದರಿಂದ ಪೂರ್ಣ ಪರಮಾತ್ಮನನ್ನು ಆರಾಧಿಸಿ ವರ್ತಮಾನದಲ್ಲಿ ನನ್ನನ್ನು (ರಾಮ್‌ಪಾಲ್ ದಾಸ್) ಬಿಟ್ಟು ಬೇರೆ ಯಾರಿಗೂ ಸತ್ಯಜ್ಞಾನವಿಲ್ಲ. ನೀವೆಲ್ಲಾ ಬಂದು, ದೀಕ್ಷೆ ಪಡೆದು ನಿಮ್ಮ ಕುಟುಂಬದ ಉದ್ಧಾರ ಮಾಡಿಕೊಳ್ಳಿ.

## “ಮನೀರಾಮ್ ಎಂಬ ಪಂಡಿತ ಕಥಾವಾಚಕನ ಕೆಲಸ”

ಒಂದೂರಿನಲ್ಲಿ ಮನೀರಾಮ್ ಎಂಬ ಪ್ರವಚನ ಮಾಡುವವನಿದ್ದನು. ಅವನು ಹರಿಯಾಣದ ಒಂದು ಹಳ್ಳಿಯಲ್ಲಿ ರಾಮಾಯಣದ ಪ್ರವಚನ ನಡೆಸಿದನು. ರಾಮಾಯಣದ ಕತೆಯನ್ನು ಹೆಚ್ಚೆಂದರೆ 11 ದಿನಗಳಲ್ಲಿ ಹೇಳಿ ಮುಗಿಸಬಹುದಿತ್ತು. ಆದರೆ ಮನೀರಾಮನು ತುಂಬಾ ದುರಾಸೆಯುಳ್ಳವನಾಗಿದ್ದನು. ಹರಿಕತೆಯನ್ನು ಹೆಚ್ಚು ದಿನಗಳ ಕಾಲ ಎಳೆದರೆ ದಿನವೂ ಜನರು ದಾನ ದಕ್ಷಿಣೆಗಳನ್ನು ಕೊಡಬಹುದೆಂದು ಯೋಚಿಸಿ 30 ದಿನಗಳ ಕಾಲ ರಾಮಾಯಣದ ಪ್ರವಚನ ನಡೆಸಿದನು. ಕೊನೆಯದಿನ ಹಾಗೂ 30ನೇ ದಿನ ಬಹಳ ದಕ್ಷಿಣೆ ಬರಬಹುದೆಂದು ನಿರೀಕ್ಷಿಸಿದ್ದನು. ಆದರೆ ಅವನಿಗೆ ಕೇವಲ 30 ರೂ. ಸಿಕ್ಕಿತು. ಅದಕ್ಕೆ ಕಾರಣವೇನೆಂದರೆ ಅದೇ ದಿನ ಆ ಹಳ್ಳಿಯ ಇನ್ನೊಂದು ಗುಂಪು ದಿಲ್ಲಿಯಿಂದ ಚಂಪಾಕಲಿ ಎಂಬ ನೃತ್ಯಗಾರ್ತಿಯನ್ನು ಕರೆಸಿ ಹಾಡು–ಕುಣಿತ ಏರ್ಪಡಿಸಿದ್ದರು. ಊರಿನ ಜನರೆಲ್ಲಾ ನೃತ್ಯ ನೋಡಲು ಹೋಯಿತು, ಅವಳಿಗೆ ಕೇವಲ 2 ಗಂಟೆಯಲ್ಲಿ 500 ರೂಪಾಯಿ ಸಂದಾಯವಾಯಿತು ಮತ್ತು ಮನೀರಾಮನಿಗೆ 30ದಿನಗಳಲ್ಲಿ ಕೇವಲ 30 ರೂಪಾಯಿ ಸಿಕ್ಕಿತು. ಮನೀರಾಮನ ದುಃಖಕ್ಕೆ ಪಾರವೇ ಇರಲಿಲ್ಲ. ದಾರಿಯಲ್ಲಿ ಛುಡಾನೀ ಊರಿತ್ತು. ಅಲ್ಲಿ ಗರೀಬ್ ದಾಸರೆಂಬ ಪರಮ ಸಂತರಿರುವರೆಂದು ಮನೀರಾಮನಿಗೆ ಗೊತ್ತಿತ್ತು. ಅವರನ್ನು ಭೇಟಿಯಾಗಿ ಮುಂದೆ ನಡೆಯೋಣವೆಂದು ಯೋಚಿಸಿದನು. ಅಲ್ಲಿ ಊರಿನ 15–16 ಭಕ್ತರು ಸಂತ ಗರೀಬ್‌ದಾಸರ ಬಳಿ ಕುಳಿತ್ತಿದ್ದರು. ಆಗ ಮನೀರಾಮನು ಬಂದನು, ಕುಳಿತುಕೊಳ್ಳಲು ಆಸನ ಕೊಟ್ಟರು ಮತ್ತು ಕ್ಷೇಮ ವಿಚಾರಿಸಿದಾಗ ಅವನು ಹೇಳಿದ ಹೇ ಮಹಾರಾಜರೇ, ಕಲಿಯುಗದ ಸಮಯ ಬಂದಿದೆ ಧರ್ಮವೆಲ್ಲಾ ನಾಶವಾಗಿದೆ. ಜನರಿಗೆ ಧರ್ಮ, ಶ್ರದ್ಧೆ ಹೊರಟುಹೋಗಿದೆ. ಆಕಾಶ ಭೂಮಿ ಒಂದಾಗುತ್ತಿದೆ ಅಂದರೆ ಇನ್ನೇನು ಪ್ರಳಯವಾಗಬಹುದು ಎಂದು ಗೋಳಿಟ್ಟನು. ಆಗ ಭಕ್ತರೆಲ್ಲಾ ‘ಮನೀರಾಮನು ಹಾಗೇಕೆ ಹೇಳುತ್ತಿದ್ದಾನೆ ಎಂದು ಗರೀಬ್‌ದಾಸರನ್ನು ಕೇಳಿದರು. ಆಗ ಗರೀಬ್‌ದಾಸರು ಹೇಳಿದರು:–

ಗರೀಬ್, ಫೂಟಿ ಆಂಖ್ ವಿವೇಕ್ ಕೀ, ಅಂಧಾ ಹೈ ಜಗದೀಶ್ ।<br>
ಚಂಪಾಕಲೀ ಕೋ ಪಾಂಚ್ ಸೌ, ಮನೀರಾಮ್ ಕೋ ತೀಸ್ ॥

ಭಾವಾರ್ಥ:– ಜಗದೀಶ್ ಎಂಬ ವ್ಯಕ್ತಿಯು ಬೇಕಂತಲೇ ತಮಾಷೆ ಮಾಡುವ ಸಲುವಾಗಿ ಮನೀರಾಮನಿಗೆ ದಕ್ಷಿಣೆ ಕೊಡುವ ದಿನ ಹಳ್ಳಿಯಲ್ಲಿ ಚಂಪಾಕಲಿ ಎನ್ನುವ ಹುಡುಗಿಯಿಂದ ಕುಣಿತ ಏರ್ಪಡಿಸಿದ್ದನು. ಅವನು ಜ್ಞಾನನೇತ್ರಹೀನ ಕುರುಡನು. ಊರಿನ ಜನರಿಗೂ ವಿವೇಕವಿಲ್ಲ

ಅಂದರೆ ಧರ್ಮಕಥೆ ನಡೆಯುತ್ತಿದೆಯೆಂದು ಯೋಚಿಸಲಿಲ್ಲ. ಹಾಗಾಗಿ ಮನೀರಾಮನಿಗೆ ಕೇವಲ **30** ರೂಪಾಯಿಗಳು ದೊರಕಿದವು. ಇದರಲ್ಲಿ ಮನೀರಾಮನದ್ದೂ ತಪ್ಪಿದೆ. **11** ದಿನದಲ್ಲಿ ಮುಗಿಯಬೇಕಾಗಿದ್ದ ರಾಮಾಯಣವನ್ನು ಗೊತ್ತಿದ್ದೂ **30** ದಿನಗಳವರೆಗೆ ಎಳೆದಿದ್ದನು. ಹಳ್ಳಿಯ ಕೆಲ ಹುಡುಗರು ಅವನಿಗೆ ಪಾಠ ಕಲಿಸಲು ಈ ರೀತಿ ಕುಣಿತ ಏರ್ಪಡಿಸಿ ಮಹಾಪಾಪ ಮಾಡಿದರು. ಈ ಸತ್ಯವನ್ನು ಸಂತ ಗರೀಬ್ ದಾಸರಿಂದ ಕೇಳಿದ ಮನೀರಾಮನಿಗೆ ಬಹಳ ಆಶ್ಚರ್ಯವಾಯಿತು. 'ಈ ದಿನವಷ್ಟೇ ಇಂಥಾ ಘಟನೆ ನಡೆದಿದೆ. ತಕ್ಷಣವೇ ನಾನು ಹೊರಟು ಇಲ್ಲಿಗೆ ಬಂದಿದ್ದೇನೆ. ಸಂತ ಗರೀಬ್‌ದಾಸರಿಗೆ ಹೇಗೆ ತಿಳಿಯಿತು? ಇವರು ನಿಜವಾಗಲೂ ಪರಮಾತ್ಮ. ಎಲ್ಲವನ್ನು ತಿಳಿದಿರುವವರು.' ಎಂದು ಚಿಂತಿಸಿ ಮನೀರಾಮನು ಎದ್ದು ಸಂತ ಗರೀಬ್‌ದಾಸರ ಕಾಲಿಗೆ ಬಿದ್ದು ಹೇಳಿದನು, "ಪ್ರಭು, ನೀವು ಹೇಳಿದ್ದು ಸತ್ಯ. ನಾನು ದುರಾಸೆಯಿಂದ ರಾಮಾಯಣವನ್ನು **30** ದಿನಗಳವರೆಗೆ ಎಳೆದೆ, ನಿಮಗೆ ಎಲ್ಲಾ ತಿಳಿದಿದೆ, ಹೇ ಪ್ರಭು! ಧರ್ಮ-ಕರ್ಮದ ಮತ್ತು ಬದುಕುವ ದಾರಿಯನ್ನು ತೋರಿಸಿ." ಎಂದನು. ಆಗ ಗರೀಬ್‌ದಾಸರು ಮನೀರಾಮನನ್ನು ಕುರಿತು ಹೀಗೆಂದರು, "ಹೇ ಮನೀರಾಮ್, ನೀವು ಪ್ರವಚನ ಮಾಡಿ ಜನರಿಂದ ಹಣ ಪಡೆಯುವಿರಿ. ಇದು ನಿಮ್ಮ ಮೇಲೆ ಸಾಲದ ಹೊರೆ ಏರುತ್ತದೆ. ಅದನ್ನು ಬಡ್ಡಿ ಸಮೇತ ತೀರಿಸಬೇಕಾಗುತ್ತದೆ. ನಿಮಗೆ ಯಥಾರ್ಥ ಆಧ್ಯಾತ್ಮಿಕ ಜ್ಞಾನವಿಲ್ಲ. ಆದ್ದರಿಂದ ನಿಮಗೆ ಪ್ರವಚನ ಮಾಡುವ ಹಕ್ಕಿಲ್ಲ. ನೀವು ಜನರನ್ನು ಆಕರ್ಷಿಸಲು ಮಾಲೆ (ಒಂದು ತುಳಸೀಯ ಕಟ್ಟಿಗೆಯ ಮಣಿಗಳ ಮಾಲೆ ಧರಿಸುತ್ತಾರೆ ಅದು ವೈಷ್ಣವ ಪಂಥದ ಗುರುತು) ಒಂದು ಮಾಲೆಯು **108** ರುದ್ರಾಕ್ಷಿಗಳಿಂದ ಕೂಡಿರುತ್ತದೆ. ಅದನ್ನು ಮಂತ್ರ ಜಪಕ್ಕಾಗಿ ಬಳಸುತ್ತಾರೆ. ಅದನ್ನು ಸಂತರು ಸ್ಮರಣೆ ಎನ್ನುತ್ತಾರೆ. ಹಣೆಯಲ್ಲಿ ತಿಲಕವಿಡುತ್ತಾರೆ, ಕಾವಿ ಬಟ್ಟೆ ತೊಡುತ್ತಾರೆ. ಸಂತ ಗರೀಬ್ ದಾಸರು ವಾಣಿ ಮೂಲಕ ತಿಳಿಸಿದ್ದಾರೆನೆಂದರೆ:-

ಕಂಠೀ ಮಾಲಾ ಸುಮರಣೀ, ಪಹರೇ ಸೇ ಕ್ಯಾ ಹೋಯ್ ।
ಊಪರ್ ಡೂಂಡಾ ಸಾಧ್ ಕಾ, ಅಂತರ್ ರಾಖಾ ಖೋಯ್ ॥

ಭಾವಾರ್ಥ:- ಹೇ ಮನೀರಾಮ್, ಹೊರಗಿನಿಂದ ನೋಡಿದರೆ ನೀವೊಬ್ಬ ಸಂತರಂತೆ ಕಾಣುವಿರಿ. ನಿಮ್ಮ ವೇಷ ಭೂಷಣದಿಂದ ಸಾಮಾನ್ಯ ಜನರು ಮರಳಾಗುವುದರಲ್ಲಿ ಸಂಶಯವಿಲ್ಲ. ಆದರೆ ನಿಮ್ಮ ಆಂತರ್ಯ ಸಂತಗುಣಗಳಿಂದ ತುಂಬಿಲ್ಲ. ದುರಾಸೆಯಿಂದ ನಿಮ್ಮ ಅಂತಃಕರಣ ಮಲಿನವಾಗಿದೆ. ಹೀಗಾಗಿ ಜಪಮಾಲೆ ಕೊರಳಲ್ಲಿ ಧರಿಸಿ, ಹಣೆಗೆ ತಿಲಕವಿಟ್ಟು, ಕಾವಿ ಬಟ್ಟೆಯನ್ನು ತೊಡುವುದರಿಂದ ಸಂತರಾಗುವುದಿಲ್ಲ. ಆತ್ಮ ಕಲ್ಯಾಣಕ್ಕಾಗಿ ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದು, ಜೀವನ ಪರ್ಯಂತ ಸಾಧನೆ ಮಾಡಿದಾಗ ಕಲ್ಯಾಣವಾಗುವುದು. ಮನಸ್ಸಿನಲ್ಲಿ ಮಲಿನವಿಟ್ಟುಕೊಂಡು ಪ್ರವಚನ ಮಾಡುವ ಹಕ್ಕು ನಿಮಗಿಲ್ಲ, ನಿಮ್ಮ ಪೂರ್ವಜರು ಬಹಳ ವಿದ್ವಾಂಸರಾಗಿದ್ದರು. ವಾಸ್ತವವಾಗಿ ಅವರು ಪಂಡಿತರಾಗಿದ್ದರು. ಅವರು ಎಂದಿಗೂ ಇಂಥಾ ತಪ್ಪನ್ನು ಮಾಡುತ್ತಿರಲಿಲ್ಲ" ಎಂದು ಹೇಳುತ್ತಾ ಒಂದು ಉದಾಹರಣೆ ಮನೀರಾಮನ ಮುಂದಿಟ್ಟರು:-

## "ಪರೀಕ್ಷಿತ ರಾಜನ ಉದ್ಧಾರ"

ಋಷಿಯ ಶಾಪದಿಂದ ಪರೀಕ್ಷಿತ ರಾಜನು ತಕ್ಷಕವೆಂಬ ಸರ್ಪದ ಕಡಿತವನ್ನು ಅನುಭವಿಸಲೇ ಬೇಕಾಗಿತ್ತು. ಪರೀಕ್ಷಿತ ರಾಜನ ಉದ್ಧಾರಕ್ಕಾಗಿ ಶ್ರೀಮದ್‌ಭಾಗವತದ ಕತೆ ಅವನಿಗೆ ತಿಳಿಸಿ ಹೇಳಬೇಕಿತ್ತು. ಪ್ರಪಂಚದಲ್ಲಿರುವ ಋಷಿಗಳು ಮತ್ತು ಪಂಡಿತರನ್ನು ಭಾಗವತದ ಕಥೆ ಹೇಳುವಂತೆ ಪ್ರಾರ್ಥಿಸಲಾಯಿತು. ವಾಸ್ತವವಾಗಿ ಅವರೆಲ್ಲಾ ಪಂಡಿತರಾಗಿದ್ದರು. ಅವರು ಪರಮಾತ್ಮನ ನಿಯಮವನ್ನು ಅರಿತವರಾಗಿದ್ದರು. 7ನೇ ದಿನ ಏನಾಗಬಹುದು ಎಂದು ಅವರಿಗೆ ಗೊತ್ತಿತ್ತು. ವಿಶ್ವದ ಬುದ್ಧಿಜೀವಿಗಳ ದೃಷ್ಟಿಯೆಲ್ಲಾ ಆ 7ನೇ ದಿನದ ಮೇಲೆ ನೆಟ್ಟಿತ್ತು. ಯಾವ ಋಷಿಮುನಿಯೂ ಭಾಗವತದ ಪ್ರವಚನ ಮಾಡಲು ಒಪ್ಪಿಕೊಳ್ಳಲಿಲ್ಲ. ಯಾವುದೇ ಮನುಷ್ಯನ ಜೀವನದ ಜೊತೆ ಚೆಲ್ಲಾಟವಾಡಿ ಪಾಪವನ್ನು ಕಟ್ಟಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಶ್ರೀಮದ್‌ಭಾಗವತವನ್ನು ರಚಿಸಿದ್ದ

ಸ್ವಯಂ ವೇದವ್ಯಾಸರೂ ಸಹ ಆ ಕತೆಯನ್ನು ಹೇಳಲು ತಿರಸ್ಕರಿಸಿದರು. ಆಗ ಎಲ್ಲಾ ಋಷಿಗಳು ಸೇರಿ ಸ್ವರ್ಗದಿಂದ ಸುಖದೇವನನ್ನು ಕರೆಸಿ ಕತೆ ಹೇಳುವಂತೆ ಪ್ರಾರ್ಥಿಸಬೇಕೆಂದು ಒಮ್ಮತದಿಂದ ಒಪ್ಪಿದರು. ಅವರಿಗೆ ಮಾತ್ರ ಕತೆ ಹೇಳುವ ಹಕ್ಕಿದೆ ಎಂದು ನಿರ್ಧರಿಸಿ ಸುಖದೇವನನ್ನು ಸ್ವರ್ಗದಿಂದ ಕರೆಸಲಾಯಿತು. ಆಗ ಯುದಿಷ್ಠಿರನು ಕೊಂಚ ನರಕವನ್ನು ಅನುಭವಿಸಿ ಸ್ವರ್ಗದಲ್ಲಿ ವಾಸವಾಗಿದ್ದನು. ತನ್ನ ವಂಶದ ಮೋಹಕ್ಕೆ ಬಿದ್ದು ಅರ್ಜುನನ ಮೊಮ್ಮಗನಾದ ಪರೀಕ್ಷಿತನ ಉದ್ಧಾರಕ್ಕಾಗಿ ಸ್ವಲ್ಪ ಪುಣ್ಯವನ್ನು ಶುಕದೇವನಿಗೆ ದಾನ ಮಾಡಿದನು. ಆ ಪುಣ್ಯದ ಫಲದಿಂದ ಸುಖದೇವನು ವಿಮಾನದಲ್ಲಿ ಕುಳಿತು ಭಾಗವತದ ಕತೆ ಹೇಳಲು ಭೂಮಿಗೆ ಬಂದನು. 7ದಿನದ ಕತೆ ಹೇಳಿ ಪರೀಕ್ಷಿತ ರಾಜನ ರಾಜ್ಯದ ಮತ್ತು ಕುಟುಂಬದ ಮೋಹವನ್ನು ದೂರ ಮಾಡಿದನು. ತಕ್ಷಕ ಸರ್ಪವು ಪರೀಕ್ಷಿತನನ್ನು ಕಚ್ಚಿತು. ತಕ್ಷಣವೇ ರಾಜನು ಸಾವನ್ನಪ್ಪಿದನು. ಆದರೆ ಭಾಗವತದ ಕತೆ ಕೇಳಿದ ಪರೀಕ್ಷಿತನ ಗಮನವು ಪ್ರಪಂಚದಿಂದ ಸರಿದು ಸ್ವರ್ಗದ ಸುಖದಲ್ಲಿ ಲೀನವಾಯಿತು. ರಾಜನಾಗಿದ್ದಾಗ ಪರೀಕ್ಷಿತನು ದೊಡ್ಡ ದೊಡ್ಡ ಹೋಮ ಹವನಗಳನ್ನು ಮಾಡಿದ್ದನು. ಆದ್ದರಿಂದ ಅವನಿಗೆ ಪುಣ್ಯದ ಮೂಟೆಯೇ ಲಭಿಸಿತ್ತು. ವಾಣಿಯಲ್ಲಿ ಪರಮಾತ್ಮನ ವಿಧಾನವನ್ನು ಹೇಳಲಾಗಿದೆನೆಂದರೆ:–

ಕಬೀರ್, ಜಹಾಂ ಆಶಾ ತಹಾಂ ಬಾಸಾ ಹೋಈ ।
ಮನ್ ಕರ್ಮ್ ವಚನ್ ಸುಮರಿಯೋ ಸೋಈ ॥

ಶಬ್ದಾರ್ಥ:– ಗೀತೆಯ **8**ನೇ ಅಧ್ಯಾಯದ **6**ನೇ ಶ್ಲೋಕದಲ್ಲಿಯೂ ಇದೇ ಬರೆದಿದೆ, "ಹೇ ಭಾರತ! ಪರಮಾತ್ಮನ ನಿಯಮದಂತೆ ಅಂತ್ಯಸಮಯದಲ್ಲಿ ಯಾವ ಭಾವನೆ ಹೊಂದಿರುತ್ತೀಯೋ ಅಂದರೆ ಯಾವುದರಲ್ಲಿ ಆಸಕ್ತಿ ಹೊಂದಿ ಸ್ಮರಣೆ ಮಾಡುತ್ತಾನೆ ಅವನು ಅದನ್ನೇ ಪಡೆಯುವನು". ಅದೇ ನಿಯಮದಂತೆ ರಾಜ ಪರೀಕ್ಷಿತನ ಜೀವವು ಸ್ಥೂಲ ಶರೀರವನ್ನು ತ್ಯಜಿಸಿ (ಸರ್ಪದ ವಿಷದಿಂದ ಸತ್ತು ಹೋಯಿತು) ಸೂಕ್ಷ್ಮ ಶರೀರವು ಸುಖದೇವನ ಜೊತೆ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೊರಟು ಹೋಯಿತು.

ಸಂತ ಗರೀಬ್‌ದಾಸರು (ಛುಡಾನಿ ಹಳ್ಳಿ–ಝಜ್ಜರ್ ಜಿಲ್ಲೆ) ಮನೀರಾಮನಿಗೆ, ಸುಖದೇವನ ಮೂಲಕ ಹೇಳಲ್ಪಟ್ಟ ಕತೆಯಿಂದ ರಾಜ ಪರೀಕ್ಷಿತನ ಮನಸ್ಸು ಪ್ರಪಂಚದಿಂದ ವಿಮುಖವಾಗಿ ಮೋಕ್ಷಪ್ರಾಪ್ತಿಗಾಗಿ ಪ್ರೇರೇಪಣೆಗೊಂಡಿತು. ಅವನು ಬದುಕಿರುವಾಗ ಮಾಡಿದ ಪುಣ್ಯದ ಫಲದಿಂದ ಅವನ ಆತ್ಮವು ನೇರವಾಗಿ ಸ್ವರ್ಗಕ್ಕೆ ಹೋಗಿ ತಲುಪಿತು. ಜನನ–ಮರಣದ ಚಕ್ರವು ಇನ್ನೂ ಉಳಿದಿದೆ. ಕಾಲಬ್ರಹ್ಮನ ಲೋಕದಲ್ಲಿ ಸ್ವರ್ಗ–ಮಹಾಸ್ವರ್ಗ (ಬ್ರಹ್ಮಲೋಕ) ಪ್ರಾಪ್ತಿಯನ್ನೇ ಉದ್ಧಾರ ಎಂದು ಭಾವಿಸುತ್ತಾರೆ. ಅದು ಸಂಪೂರ್ಣ ಆಧ್ಯಾತ್ಮಿಕ ಜ್ಞಾನದ ಕೊರತೆಯ ಪರಿಣಾಮವಾಗಿದೆ. ಕಾಲಬ್ರಹ್ಮನ ಲೋಕದ ಉದ್ಧಾರವೂ ಭೂಮಿಯ ಯಾವುದೇ ಋಷಿಯ ಅಥವಾ ಪಂಡಿತನ ಕೈಯ್ಯಲ್ಲಿಲ್ಲ. ಏಕೆಂದರೆ ಅವರೆಲ್ಲಾ ಪ್ರವಚನ ಅಥವಾ ಸತ್ಸಂಗ ನಡೆಸುವುದು ಬರೀ ಆಡಂಬರಕ್ಕೆ ಮತ್ತು ತಮ್ಮ ದೊಡ್ಡತನವನ್ನು ತೋರಿಸಿಕೊಳ್ಳಲು ಮಾತ್ರ. ಒಬ್ಬ ಇನ್ನೊಬ್ಬ ಋಷಿಯ ಬಗ್ಗೆ ಹೊಟ್ಟೆಕಿಚ್ಚು ಪಡುವುದು ವಾಡಿಕೆ. ಸುಖದೇವನು ಸಂತನಾದ ಜನಕನ ಶಿಷ್ಯನಾಗಿದ್ದನು. ಜನಕರಾಜನಿಗೆ ಪೂರ್ಣ ಪರಮಾತ್ಮನಾದ ಕಬೀರರು ಸಿಕ್ಕಿದ್ದರು. ಅವರಿಗೆ 'ಸೋಹಂ' ಎಂಬ ಮಂತ್ರ ದೀಕ್ಷೆ ಕೊಟ್ಟಿದ್ದರು. ಜನಕರಾಜನ ಪ್ರೀತಿಪಾತ್ರನಾದ ಶಿಷ್ಯನು ಸುಖದೇವನೇ ಆಗಿದ್ದನು. ಜನಕನು ಕೇವಲ ಸುಖದೇವನಿಗೆ ಈ ಮಂತ್ರವನ್ನು ಉಪದೇಶಿಸಿದ್ದನು. ಆದ್ದರಿಂದ ಸುಖದೇವನ ಸ್ವರ್ಗದ ಸಮಯ ಅಧಿಕವಿತ್ತು. ಕಾಲನು ರಾಜ ಜನಕನಿಗೆ ಮೋಸ ಮಾಡಿದನು. ಏಕೆಂದರೆ ಜನಕನು ತನ್ನ ಅರ್ಧ ಪುಣ್ಯವನ್ನು ನರಕವನ್ನು ಅನುಭವಿಸುತ್ತಿದ್ದ **12** ಕೋಟಿ ಜೀವಾತ್ಮಗಳಿಗೆ ದಾನ ನೀಡಿದನು. ಆದ್ದರಿಂದ ಅವನ ಸ್ವರ್ಗದ ಸಮಯ ಕಡಿಮೆ ಇತ್ತು. ಆದ್ದರಿಂದ **1469** ನೇ ಇಸವಿಯಲ್ಲಿ ಪಂಜಾಬ್ ಪ್ರಾಂತ್ಯದಲ್ಲಿ (ಭಾರತದಲ್ಲಿ) ಶ್ರೀ ಕಾಲೂರಾಮ್ ಮೆಹತಾ (ಖತ್ರಿ–ಅರೊಡಾ) ಎನ್ನುವವರ ಮನೆಯಲ್ಲಿ ನಾನಕ್ ಎಂಬ ಹೆಸರಿನಿಂದ ಹುಟ್ಟಿದ್ದರು. (ವರ್ತಮಾನದಲ್ಲಿ ಇದು ಪಾಕಿಸ್ತಾನದಲ್ಲಿದೆ.) ಸುಖದೇವನಿಗೆ

ಭೂಮಿಯ ಮೇಲೆ ಯಾವುದೇ ಮೋಹ, ಸ್ವಾರ್ಥ, ದೊಡ್ಡತನದ ಇಚ್ಛೆ ಇರಲಿಲ್ಲ. ಸುಖದೇವನು ಹೇಳಿದ ಕತೆಯು ಪರೀಕ್ಷಿತನ ಮನಸ್ಸಿನ ಮೇಲೆ ಪ್ರಭಾವ ಬೀರಿತು. ಹಾಗಾಗಿ ಅವನಿಗೆ ಸ್ವರ್ಗ ಸಿಕ್ಕಿತು. ಸುಖದೇವನಲ್ಲದೆ ಬೇರೆ ಋಷಿಗಳು ಕತೆ ಹೇಳಿದ್ದಿದ್ದರೆ ಪರೀಕ್ಷಿತನ ಮನಸ್ಸು ಸಾಂಸಾರಿಕ ಭೋಗದಲ್ಲೇ ಉಳಿಯುತ್ತಿತ್ತು. ಪುನಃ ಭೂಮಿಯ ಮೇಲೆ ಹುಟ್ಟಿ, ರಾಜನಾಗಿ ತಾನು ಸಂಪಾದಿಸಿದ ಪುಣ್ಯವನ್ನು ಕಳೆದುಕೊಳ್ಳುತ್ತಿದ್ದನು. ಸಂತ ಗರೀಬ್‌ದಾಸರು ಮನೀರಾಮನಿಗೆ, "ಎಲ್ಲಿಯವರೆಗೆ ಜೀವಾತ್ಮದ ಜನನ–ಮರಣ ಅಂತ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಅವನಿಗೆ ಪರಮ ಶಾಂತಿ ಸಿಗುವುದಿಲ್ಲ" ಎಂದು ಹೇಳಿದರು.

ಸಂತ ಗರೀಬ್‌ದಾಸರು ಹೇಳಿದರು, ಅವನು ರಾಜನಾಗಿ ಹುಟ್ಟಿದರೆ ರಾಜ್ಯದ ಲಾಭ–ನಷ್ಟದ ಬೆಂಕಿಯಲ್ಲಿ ಬೇಯುತ್ತಾನೆ. ಧನಿಕನು ಬಡವನಾಗಿ ಕಷ್ಟ ಪಡುತ್ತಾನೆ. ಪಶು ಪಕ್ಷಿಗಳಾಗಿ ಹುಟ್ಟಿ ನರಳುತ್ತಾರೆ. ನೀವು ಶ್ರೀ ವಿಷ್ಣು ಅಂದರೆ ಶ್ರೀ ಕೃಷ್ಣನ ಭಕ್ತರು. (ವೈಷ್ಣವ ಸಾಧುಗಳು ವಿಷ್ಣುವನ್ನು ಇಷ್ಟ ರೂಪದಲ್ಲಿ ನಂಬುತ್ತಾರೆ) ಗೀತೆಯ ಜ್ಞಾನವನ್ನು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ ಎನ್ನುವುದನ್ನು ನೀವು ನಂಬುತ್ತೀರಿ. ಗೀತೆಯ ಜ್ಞಾನವನ್ನು ಹೇಳುವಾತನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ನನಗಿಂತ ಬೇರೆ ಪರಮೇಶ್ವರನಿದ್ದಾನೆ ಎಂಬುದಾಗಿ ಹೇಳಿದ್ದಾನೆ. ಹೇ ಭಾರತ! ನೀನು ಸರ್ವಭಾವದಿಂದ ಪರಮೇಶ್ವರನ ಆಶ್ರಯ ಪಡೆ. ಆ ಪರಮೇಶ್ವರನ ಕೃಪೆಯಿಂದ ನೀನು ಪರಮ ಶಾಂತಿಯನ್ನು ಮತ್ತು ಸನಾತನ ಪರಮ ಧಾಮ (ಸತ್ಯಲೋಕ) ವನ್ನು ಪಡೆಯುವೆ.

ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆ ಜ್ಞಾನದಾತನು ಹೇಳುವುದೇನೆಂದರೆ ಯಾವ ಸಾಧಕನು ಜರಾ (ವೃಧಾಪ್ಯ) ಹಾಗೂ ಮರಣ (ಮೃತ್ಯು) ಬಿಡಿಸಿಕೊಳ್ಳುವುದು ಅಂದರೆ ಮೋಕ್ಷ ಪ್ರಾಪ್ತಿಗಾಗಿ ಪ್ರಯತ್ನಶೀಲರಾಗಿರುವರು. (ಕಾಲ ಲೋಕದ ರಾಜ್ಯ ಹಾಗೂ ಸ್ವರ್ಗ ಮತ್ತು ಮಹಾಸ್ವರ್ಗದವರೆಗೆ ಇಚ್ಛಿಸುವುದಿಲ್ಲ.) ಅವರು ತತ್ ಬ್ರಹ್ಮ್‌ನಿಂದ ಸಂಪೂರ್ಣ ಆಧ್ಯಾತ್ಮದಿಂದ ಹಾಗೂ ಎಲ್ಲಾ ಕರ್ಮಗಳನ್ನು ತಿಳಿದವರು.

ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಗೀತೆಯ ಜ್ಞಾನದಾತನಿಗೆ ಪ್ರಶ್ನಿಸುತ್ತಾನೆ, 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ "ತತ್ ಬ್ರಹ್ಮನ ಬಗ್ಗೆ ಹೇಳಲಾಗಿದೆ. ಈ ತತ್ ಬ್ರಹ್ಮ್ ಯಾರು?" ಆಗ ಗೀತೆಯ ಜ್ಞಾನದಾತನು ಇದರ ಉತ್ತರವಾಗಿ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳುತ್ತಾನೆ, "ಅವನು ಪರಮ ಅಕ್ಷರ ಬ್ರಹ್ಮನು".

ಗೀತೆಯ 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನ್ನನ್ನು ಆರಾಧಿಸುವಂತೆ ಹೇಳಿದ್ದಾನೆ. ಅದರಿಂದ ತಾನು ಸಿಗುವೆನೆಂದು ಹಾಗೂ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ತನಗಿಂತ ಅನ್ಯ ಪರಮ ಅಕ್ಷರ ಬ್ರಹ್ಮನನ್ನು ಆರಾಧಿಸುವುದರಿಂದ ಪರಮ ಪದವು ಪ್ರಾಪ್ತಿಯಾಗುವುದೆಂದು ಹೇಳಿದ್ದಾನೆ.

ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ. 4ನೇ ಅಧ್ಯಾಯದ 5ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ಹೇ ಅರ್ಜುನ, ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ, ಮುಂದೆಯೂ ಆಗುತ್ತಿರುವವು".

ಗೀತೆಯ 2ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಯಾರನ್ನು ಅವಿನಾಶಿ ಪರಮಾತ್ಮನು ಎಂದು ಹೇಳಲಾಗಿದೆ. ಹಾಗೂ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಮೂರು ಪುರುಷರನ್ನು (ಪ್ರಭು) ಹೇಳಲಾಗಿದೆ. ಶ್ಲೋಕ 16ರಲ್ಲಿ ಕ್ಷರ ಪುರುಷ ಮತ್ತು ಅಕ್ಷರ ಪುರುಷನ ವರ್ಣನೆಯಿದೆ, ಇಬ್ಬರೂ ನಾಶವಾಗುವವರು ಎಂದು ಹೇಳಿದ್ದಾರೆ. ನಂತರ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಅವಿನಾಶಿ ಪರಮ ಅಕ್ಷರ ಬ್ರಹ್ಮನ ಬಗ್ಗೆ ಹೇಳಲಾಗಿದೆ ಅವನನ್ನು ಉತ್ತಮ ಪುರುಷ ಅಂದರೆ ಸರ್ವಶ್ರೇಷ್ಠ ಪರಮಾತ್ಮ ಎಂದು ಹೇಳಲಾಗಿದೆ. ಅವನು ಮೂರೂ ಲೋಕದಲ್ಲಿ ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ವಾಸ್ತವದಲ್ಲಿ ಅವನೇ ಅವಿನಾಶಿ ಪರಮಾತ್ಮನು. ಗೀತೆಯ 15ನೇ ಅಧ್ಯಾಯದ 4ನೇ

ಶ್ಲೋಕದಲ್ಲಿ ಗೀತಾಜ್ಞಾನವನ್ನು ನೀಡುವಾತನು ಸ್ಪಷ್ಟಪಡಿಸಿದ್ದಾನೆ, ತತ್ವದರ್ಶಿ ಸಂತನು ಸಿಕ್ಕ ನಂತರ ಪರಮೇಶ್ವರನ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ನಂತರ ಸಾಧಕನು ಮತ್ತೆ ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ. ಆ ಪರಮಾತ್ಮನದೇ ಭಕ್ತಿ ಮಾಡಬೇಕು ಯಾರಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿ ವಿಸ್ತಾರವನ್ನು ಪಡೆದಿದೆ, ಅಂದರೆ ಯಾವ ಪರಮಾತ್ಮನು ವಿಶ್ವವನ್ನು ಸೃಷ್ಟಿಸಿದ್ದಾನೋ ಆ ಪರಮಾತ್ಮನ ಭಕ್ತಿ ಮಾಡಬೇಕು (ಗೀತೆಯ ಉಲ್ಲೇಖ ಮುಕ್ತಾಯ)

ಸಂತ ಗರೀಬ್‌ದಾಸರು ಮನೀರಾಮನಿಗೆ ಹೀಗೆಂದರು, "ಪರಮ ಅಕ್ಷರ ಬ್ರಹ್ಮ ಅಂದರೆ ತತ್ ಬ್ರಹ್ಮನ ಭಕ್ತಿ ನನ್ನ (ಸಂತ ಗರೀಬ್‌ದಾಸನ) ಬಳಿ ಇದೆ. ನಿಮಗೆ ಪೂರ್ಣ ಮೋಕ್ಷ ಪ್ರಾಪ್ತಿಯಾಗಬೇಕಿದ್ದರೆ ದೀಕ್ಷೆ ಪಡೆಯಿರಿ ಮತ್ತು ಸಾಧನೆ ಮಾಡಿ". ಮನೀರಾಮನಿಗೆ ಗೀತೆಯ ಶ್ಲೋಕಗಳೆಲ್ಲಾ ಕಂಠಪಾಠವಾಗಿತ್ತು. ಹಾಗಾಗಿ ತಕ್ಷಣವೇ ತಿಳಿದುಕೊಂಡರು ಮತ್ತು ದೀಕ್ಷೆ ಪಡೆದುಕೊಂಡು ಪಾಖಂಡ ತ್ಯಜಿಸಿ ಉದ್ಧಾರ ಮಾಡಿಕೊಂಡನು.

## "ಪಂಡಿತನ ಪರಿಭಾಷೆ"

ವಿದ್ವಾಂಸರನ್ನು ಪಂಡಿತರೆಂದು ಕರೆಯುತ್ತಾರೆ. ನನ್ನ ಪೂಜ್ಯ ಗುರುಗಳು ಬ್ರಾಹ್ಮಣ ಜಾತಿಯಲ್ಲಿ ಹರಿಯಾಣ ಪ್ರಾಂತ್ಯದ ಭಿವಾನಿ ಜಿಲ್ಲೆಯ ದಾದರಿ ಎನ್ನುವ ಹೋಬಳಿಯ ದೊಡ್ಡ ಪೈಂತಾವಾಸ್ ಎನ್ನುವ ಹಳ್ಳಿಯಲ್ಲಿ ಹುಟ್ಟಿದ್ದರು. ಅವರು ತಮ್ಮನ್ನು ತಾವು ಎಂದಿಗೂ ಪಂಡಿತರೆಂದು ಹೇಳಿಕೊಳ್ಳುತ್ತಿರಲಿಲ್ಲ.

ನನ್ನ ತಾತ ಗುರುಗಳು (ನನ್ನ ಗುರುಗಳ ಗುರುಗಳು) ಅವರು ದೆಹಲಿಯಲ್ಲಿ ನಜಫ್‌ಗಢ್ ಹತ್ತಿರ ಭಾವಲಾ ಎಂಬ ಹಳ್ಳಿಯಲ್ಲಿ ಜಾಟ್ ಜಾತಿಯಲ್ಲಿ ಜನಿಸಿದ್ದರು. ಚಿಕ್ಕವಯಸ್ಸಿನಲ್ಲೇ ಅವರು ಸಂತ ಗಂಗೇಶ್ವರಾನಂದರ ಸತ್ಸಂಗದಿಂದ ಪ್ರಭಾವಿತರಾಗಿ ಅವರ ಜೊತೆ ಹರಿದ್ವಾರಕ್ಕೆ ಹೊರಟು ಹೋಗಿದ್ದರು. ಗಂಗೇಶ್ವರಾನಂದರು ಅವರನ್ನು ಕಾಶಿಯ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮಾಡಲು ಕಳುಹಿಸಿದರು. ಅವರು ಬಹಳ ಚುರುಕು ಬುದ್ಧಿಯುಳ್ಳವರಾಗಿದ್ದರು. ನಾಲ್ಕು ವಿಷಯಗಳಲ್ಲಿ ಆಚಾರ್ಯ ಪದವಿ ಗಳಿಸಿದರು. ಜಾಟ ಜಾತಿಯವರಾಗಿದ್ದರೂ ಸಹ ಅವರು ಪಂಡಿತ ಚಿದಾನಂದ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಹರಿಯಾಣದ ಸೋನಿಪತ್ ಜಿಲ್ಲೆಯ, ಖರಖೋದಾ ತಾಲೂಕಿನ, ಗೋಪಾಲ್‌ಪುರ್ ಎಂಬಲ್ಲಿ ಅವರ ಆಶ್ರಮವಿದೆ. ಆ ಆಶ್ರಮದ ಹೆಸರು ಪಂಡಿತ ಚಿದಾನಂದರ (ಗರೀಬ್ ದಾಸೀ) ಆಶ್ರಮ, ಗೋಪಾಲ್‌ಪುರ್. ಅವರ ಹೆಸರು ಚಿದಾನಂದ್ ಎಂದಿತ್ತು. ಬ್ರಾಹ್ಮಣ ಭಕ್ತರು ತಪ್ಪು ತಿಳಿಯಬೇಡಿ. ಪಂಡಿತರ ಪರಿಭಾಷೆ ಮಾಡುವುದು ಅನಿವಾರ್ಯವಾಗಿತ್ತು ಹಾಗಾಗಿ ಹೇಳಿದೆ.

## "ಸುಧಾಮ ಪಂಡಿತರಾಗಿದ್ದರು"

ಸುಧಾಮನು ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದನು. ಬಡತನ ಉತ್ತುಂಗ ಸ್ಥಿತಿಯಲ್ಲಿತ್ತು. ಅವನ ಮಕ್ಕಳು ರಾತ್ರಿಯ ವೇಳೆ ಹಸಿವಿನಿಂದ ಕಂಗೆಟ್ಟು ಹಾಗೆಯೇ ಮಲಗುತ್ತಿದ್ದರು. ಸುಧಾಮ ಹಾಗೂ ದ್ವಾರಕೆಯ ರಾಜನಾದ ಕೃಷ್ಣನಲ್ಲಿ ಆಗಾಧವಾದ ಸ್ನೇಹವಿತ್ತು. ಹಾಗಾಗಿ ಸುಧಾಮನ ಹೆಂಡತಿ ದ್ವಾರಕೆಗೆ ಹೋಗಿ ಕೃಷ್ಣನ ಬಳಿ ಹಣ ಕೇಳಿ ಪಡೆದುಕೊಂಡು ಬರುವಂತೆ ಹೇಳುತ್ತಿದ್ದಳು. ಆದರೆ ಸುಧಾಮನು, "ಪಂಡಿತರ ಕೆಲಸ ಬೇಡುವ ಕೆಲಸವಲ್ಲ, ಬದಲಾಗಿ ಪರಮಾತ್ಮ ನಡೆಸಿದಂತೆ ನಡೆಯುವುದೇ ಧರ್ಮ" ಎಂದು ಹೇಳುತ್ತಿದ್ದನು. ಗರೀಬ್‌ದಾಸರು ಹೇಳಿದ್ದಾರೆ.

ಗರೀಬ್, ನಟ್, ಪೇರಣಾ ಕಾಂಜರ್ ಸಾಂಸೀ, ಮಾಂಗತ್ ಹೈಂ ಭಠಿಯಾರೇ ।
ಜಿನಕೀ ಭಕ್ತಿ ಮೆಂ ಲೌ ಲಾಗೀ, ವೋ ಮೋತೀ ದೇತ್ ಉಧಾರೇ ॥
ಗರೀಬ್, ಜೋ ಮಾಂಗ್ಯೆ ಸೋ ಭಡೂವಾ ಕಹಿಏ, ದರ್–ದರ್ ಫಿರೈ ಅಜ್ಞಾನೀ ।
ಜೋಗೀ ಜೋಗ್ ಸಂಪೂರ್ಣ್ ಜಾಕಾ, ಮಾಂಗ್ ನಾ ಪೀವೈ ಪಾನೀ ॥

ಶಬ್ದಾರ್ಥ:– ದೊಂಬರಾಟದಲ್ಲಿ ಜನರ ಮುಂದೆ ಒಂದು ಆಟ ಆಡಲಾಗುತ್ತದೆ. ಹೇಗೆಂದರೆ ಉದ್ದವಾದ ಬಿದಿರಿನ ಕಟ್ಟಿಗೆಯನ್ನು ನೆಲದಲ್ಲಿ ನೆಡದೆ ಅದರ ಮೇಲೆ ಹತ್ತುತ್ತಾರೆ. ಅದು ತುಂಬಾ ಅದ್ಭುತ ಹಾಗೂ ಕಠಿಣ ಕೆಲಸ. ಈ ಆಟವನ್ನು ಆಡಿದ ನಂತರ ಕೈಯ್ಯಲ್ಲಿ ಒಂದು ಬಟ್ಟಲನ್ನು ಹಿಡಿದು ಆಟವನ್ನು ನೋಡಿದ ಗುಂಪಿನ ಬಳಿ ಹೋಗಿ ಹಣವನ್ನು ಬೇಡುತ್ತಾರೆ. ಅದೇ ಪ್ರಕಾರ ಬೇರೆ ಜಾತಿಯ ಜನರು ಸಹ ತಮ್ಮ ತಮ್ಮ ಜಾತಿಗೆ ಬಂದ ಆಟಗಳನ್ನು ತೋರಿಸಿ ಹಣ ಅಥವಾ ಗೋಧಿ, ನವಣೆ, ಅಕ್ಕಿ ಮುಂತಾದವುಗಳನ್ನು ಬೇಡುತ್ತಾರೆ. ಒಂದುವೇಳೆ ಯೋಗಿ ಅಂದರೆ ಸಾಧಕನೂ ಇಂಥಾ ಸಿದ್ಧಿಗಳನ್ನು ಪ್ರದರ್ಶಿಸಿ ಹಣವನ್ನೋ, ಬೇರೆ ಪದಾರ್ಥಗಳನ್ನೋ ಸಂಗ್ರಹಿಸುತ್ತಾನೆಂದರೆ ಅದು ಅವನ ಸತ್ಯ ಸಾಧನೆಯಾಗುವುದಿಲ್ಲ. ಸತ್ಯ ಸಾಧಕನಾದರೆ ಅವನು ಶಿಷ್ಯರಿಗೆ ಆಶೀರ್ವಾದವೆಂಬ ಮುತ್ತನ್ನು ನೀಡಿ ಅವರನ್ನು ಧನಿಕರನ್ನಾಗಿ ಮಾಡುತ್ತಾನೆ. ಅದು ಸಾಧಕನ ಭಾಗ್ಯದಲ್ಲಿ ತನ್ನ ಕಡೆಯಿಂದ ಕೊಟ್ಟ ಸಾಲದ ರೂಪದಲ್ಲಿರುತ್ತದೆ. ಸಾಧಕರು ಮನೆ ಮನೆಗೆ ತೆರಳಿ ಬೇಡುತ್ತಾರೆಂದರೆ ಅವರು ನಿಜವಾಗಲೂ ಅಜ್ಞಾನಿಗಳು. ಅವರ ಬಳಿ ಶಾಸ್ತ್ರಾನುಸಾರವಾದ ಸಾಧನೆ ಖಂಡಿತವಾಗಿಯೂ ಇಲ್ಲ. ಅವನು ಸಂತನಲ್ಲ, ಅಂದರೆ ನಾಚಿಕೆಗೆಟ್ಟವನು ಎಂದರ್ಥ. ಯೋಗಿ ಎಂದರೆ ಸಾಧಕನ ಭಕ್ತಿಯು ಸಂಪೂರ್ಣವಾಗಿ ಎಂದು ಹೇಳುತ್ತಾರೆ, ಯಾರು ಯಾರ ಬಳಿಯೂ ಏನನ್ನೂ ಬೇಡುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಿಜವಾದ ಸಾಧಕನಾದವನು ವಸ್ತುಗಳನ್ನು ಬಿಡಿ, ನೀರನ್ನೂ ಸಹ ಬೇಡುವುದಿಲ್ಲ.

ಆದರೆ ಪತ್ನಿ ಮತ್ತೆ ಮತ್ತೆ ಹಠ ಹಿಡಿದಾಗ ವಿಧಿಇಲ್ಲದೆ ಸುಧಾಮನು ತನ್ನ ಮಿತ್ರನಾದ ಕೃಷ್ಣನ ಮನೆಗೆ ಬಂದನು. ಸುಧಾಮನನ್ನು ನೋಡಿದ ಕೃಷ್ಣನು ಬಹಳ ಪ್ರೀತಿಯಿಂದ ಅತಿಥಿ ಸತ್ಕಾರ ಮಾಡಿದನು. ಸುಧಾಮನು ತನ್ನ ಜೊತೆ ಒಂದು ಮುಷ್ಟಿ ಅಕ್ಕಿ ತಂದಿದ್ದನ್ನು ಶ್ರೀ ಕೃಷ್ಣನು ತೆಗೆದುಕೊಂಡು ಬಹಳ ಪ್ರೀತಿಯಿಂದ ತಿಂದನು. ಅವನ ಪಾದಗಳನ್ನು ಸಹ ತೊಳೆದನು. ಕ್ಷೇಮ ವಿಚಾರಿಸಿದಾಗ ಸುಧಾಮನು  ಹೇಳಿದ ಹೇ ಭಗವಂತಾ ನಿನ್ನ ಕೃಪೆಯಿಂದ ನಾವೆಲ್ಲಾ ಚೆನ್ನಾಗಿದ್ದೇವೆ. ನನಗೆ ಯಾವ ವಸ್ತುವಿನ ಅವಶ್ಯಕತೆಯೂ ಇಲ್ಲ." ಕೃಷ್ಣನ ಬಳಿ ಹಣವನ್ನು ಬೇಡದೆ, ಒಂದು ವಾರ ಅವನ ಜೊತೆ ಇದ್ದು, ತನ್ನ ಊರಿಗೆ ಹಿಂತಿರುಗಿದನು.

ಕಬೀರ್, ಬಿನ್ ಮಾಂಗೇ ಮೋತೀ ಮಿಲೇಂ, ಮಾಂಗೇ ಮಿಲೇ ನ ಭೀಖ್ ।
ಮಾಂಗನ್ ಸೇ ಮರನಾ ಭಲಾ, ಯಹ್ ಸತಗುರು ಕೀ ಸೀಖ್ ॥

ಶಬ್ದಾರ್ಥ:– ಕಬೀರ ಪರಮಾತ್ಮ ಹೇಳಿದ್ದಾರೆ, ಯಾರು ಪೂರ್ಣ ಪರಮಾತ್ಮನ ಸತ್ಯಸಾಧನೆ ಮಾಡುವರೋ ಅವರು ಬೇಡುವ ಅವಶ್ಯಕತೆಯಿಲ್ಲ. ಬೇಡುವುದರಿಂದ ಪರಮಾತ್ಮ ದೂರವಾಗುತ್ತಾನೆ. ಅವನಿಗೆ ಭಿಕ್ಷೆಯೂ ಸಿಗುವುದಿಲ್ಲ. ಆ ಸಾಧಕನು ಪರಮಾತ್ಮನ ಮೇಲೆ ನಂಬಿಕೆ ಇಟ್ಟು ಬೇಡದೇ ಇದ್ದರೆ, ಪರಮಾತ್ಮನು ಅವನ ಇಚ್ಛೆಯನ್ನು ಪೂರೈಸುತ್ತಾನೆ ಅಂದರೆ ಮುತ್ತಿನಂತಹ ಅತ್ಯಮೂಲ್ಯವಾದ ವಸ್ತುವನ್ನು ಕೊಡುತ್ತಾನೆ. ಬೇಡಿದರೆ ಆ ವ್ಯಕ್ತಿಯು ಬದುಕಿದ್ದರೂ ಸತ್ತಂತೆ ಎಂಬ ಶಿಕ್ಷಣವನ್ನು ಪೂರ್ಣ ಸದ್ಗುರು ನೀಡುತ್ತಾನೆ. ಬೇಡುವುದಕ್ಕಿಂತ ಸಾಯುವುದೇ ಲೇಸು. ಇದರರ್ಥ ಆತ್ಮಹತ್ಯೆ ಅಲ್ಲ, ತಮ್ಮ ಇಚ್ಛೆಗಳನ್ನು ಮುಗಿಸಿ ಸತ್ತಂತೆ ಇರುವುದು ಎಂದರ್ಥ.

ಶ್ರೀ ಕೃಷ್ಣನು ರಾಜನಾಗಿದ್ದನು. ಅವನು ಸುಧಾಮನ ಪರಿಸ್ಥಿತಿಯನ್ನು ಅರಿತು. ಒಂದು ವಾರದಲ್ಲಿ ವಿಶ್ವಕರ್ಮನಿಗೆ ಹೇಳಿ ಸುಧಾಮನಿಗೆ ಅರಿವಿಲ್ಲದಂತೆ ಅವನ ಊರಿನಲ್ಲಿ ಒಂದು ಅರಮನೆಯನ್ನು ಕಟ್ಟಿಸಿಬಿಟ್ಟನು. ಸುಧಾಮನು ಧರ್ಮ ಕರ್ಮದ ಮೇಲೆ ಧೃಡವಾದ ನಂಬಿಕೆ ಇಟ್ಟಿದ್ದನು. ಈ ಕಾರಣದಿಂದಲೇ ಸುಧಾಮನಿಗೆ ಲಾಭವಾಯಿತು. ಇಂಥವರನ್ನು ಪಂಡಿತರೆನ್ನುತ್ತಾರೆ. ಯಾರು ಬೇಡುತ್ತಾರೋ ಅವರನ್ನು ನೀಚರೆನ್ನುತ್ತಾರೆ. ಪಂಡಿತನ ಪರಿಭಾಷೆ ಇದಾಗಿದೆ.

ಪ್ರಸಂಗ ನಡೆಯುತ್ತಿದೆ:– ದೀಕ್ಷೆ ಪಡೆದ ನಂತರ ಈ ಪ್ರಪಂಚ ಮತ್ತು ಪರಮಾತ್ಮನಲ್ಲಿ ಭಕ್ತನ ಶ್ರದ್ಧೆ ಹೇಗಿರಬೇಕು. ಎನ್ನುವುದಕ್ಕೆ ಪವಿತ್ರ ಕಬೀರ್ ಸಾಗರ್ ಗ್ರಂಥದ 'ಅನುರಾಗ್ ಸಾಗರ್' ಎಂಬ ಅಧ್ಯಾಯದಲ್ಲಿ ಪರಮೇಶ್ವರ ಕಬೀರರು ತಮ್ಮ ಶಿಷ್ಯನಾದ ಧರ್ಮದಾಸರಿಗೆ ಈ ರೀತಿ ಹೇಳಿದ್ದಾರೆ:–

# ಅಧ್ಯಾಯ 'ಅನುರಾಗ್ ಸಾಗರ್'ದ ಸಾರಾಂಶ

**ಅನುರಾಗ್ ಸಾಗರ್‌ದ ಪುಟ ಸಂಖ್ಯೆ 3ರಿಂದ 5ರ ತನಕ ಇರುವ ಸಾರಾಂಶ**

**ಪುಟ 3ರಿಂದ:–** ಧರ್ಮದಾಸರು ಪರಮೇಶ್ವರ ಕಬೀರರನ್ನು ಪ್ರಶ್ನಿಸಿದರು.

**ಪ್ರಶ್ನೆ:–** ಪ್ರಭು! ದೀಕ್ಷೆ ಪಡೆದ ನಂತರ ಪರಮಾತ್ಮನಲ್ಲಿ ಯಾವ ರೀತಿ ಶ್ರದ್ಧೆ ಇರಬೇಕು?

**ಉತ್ತರ:–** ಪರಮೇಶ್ವರ ಕಬೀರರು ಹೇಳಿದರು, ಹೇಗೆ ಜಿಂಕೆಯು ವಾದ್ಯದ ಶಬ್ದಕ್ಕೆ ಮರಳಾಗುವುದೋ ಹಾಗೆ ಸಾಧಕನು ಪರಮಾತ್ಮನ ಮೇಲೆ ಶ್ರದ್ಧೆ ಇಡಬೇಕು.

❖ ಜಿಂಕೆಯನ್ನು ಹಿಡಿಯುವ ಬೇಟೆಗಾರನು ಒಂದು ವಾದ್ಯದಿಂದ ವಿಶೇಷವಾದ ಶಬ್ದವನ್ನು ಮಾಡುತ್ತಾನೆ. ಅದನ್ನು ಕೇಳಿದ ಜಿಂಕೆಯು ಆಕರ್ಷಿತಗೊಳ್ಳುತ್ತದೆ ಹಾಗೂ ಶಬ್ದ ಬರುತ್ತಿರುವ ಕಡೆಗೆ ಬರುತ್ತದೆ. ಬೇಟೆಗಾರನು ಆ ವಾದ್ಯವನ್ನು ನುಡಿಸುತ್ತಲೇ ಇರಬೇಕಾಗುತ್ತದೆ. ಜಿಂಕೆಯು ಅವನ ಮುಂದೆ ಬಂದು ಕುಳಿತು ತನ್ನ ಮುಖವನ್ನು ನೆಲದ ಕಡೆಗೆ ಮಾಡಿ, ಅವನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತದೆ. ತನ್ನ ಜೀವನ ಮುಡಿಪಾಗಿಡುತ್ತದೆ. ಇದೇ ರೀತಿ ಸಾಧಕನು ಪರಮಾತ್ಮನಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು. ತನ್ನ ಜೀವನವನ್ನು ಸಮರ್ಪಿಸಿಕೊಳ್ಳಬೇಕು.

❖ ಎರಡನೇ ಉದಾಹರಣೆ:– ಹೇಗೆ ಪತಂಗವು ದೀಪದ ಬೆಳಕಿಗೆ ಆಕರ್ಷಿತವಾಗಿ ದೀಪದ ಮೇಲೆ ಬಿದ್ದು ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಾ ಸಾವನ್ನಪ್ಪುವುದೋ, ಹಾಗೆ ಸಾಧಕನು ಪರಮಾತ್ಮನಿಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ಎಷ್ಟೇ ಕಷ್ಟಗಳು ಎದುರಾದರೂ ಸರಿ, ಹಿಂದೆ ಸರಿಯಬಾರದು. ಅದನ್ನು ಎದುರಿಸಬೇಕು. ಅದಕ್ಕಾಗಿ ಏನೇ ತ್ಯಾಗ ಮಾಡಬೇಕಾಗಿ ಬಂದರೂ ಹಿಂದೆ ಸರಿಯಬಾರದು.

❖ ಮೂರನೇ ಉದಾಹರಣೆ:– ಹಿಂದಿನ ಕಾಲದಲ್ಲಿ ಹೆಂಡತಿಯು ತನ್ನ ಗಂಡನನ್ನು ಎಷ್ಟು ಪ್ರೀತಿಸುತ್ತಿದ್ದಳೆಂದರೆ ಅವನ ಸಾವಿನ ನಂತರ ಅವಳು ಜೀವಂತವಾಗಿ ಅವನ ಚಿತೆಯೇರಿ ಸುಟ್ಟು ಬೂದಿಯಾಗುತ್ತಿದ್ದಳು. ಅದಕ್ಕಾಗಿ ಅವರ ಕುಟುಂಬದವರು ವಿರೋಧಿಸುತ್ತಿದ್ದರೂ ಲೆಕ್ಕಿಸದೇ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಿದ್ದಳು. ಅವಳ ಚಿಕ್ಕ ಚಿಕ್ಕ ಮಕ್ಕಳನ್ನು ತೋರಿಸಿ, ಅವರನ್ನು ಸಾಕಲು ಬದುಕಿರಬೇಕೆಂದು ಅವರ ಕುಟುಂಬದವರು ಹೇಳಿದರೂ ಅವಳು ಅವರ ಮಾತನ್ನು ಕೇಳುತ್ತಿರಲಿಲ್ಲ. ತಂದೆ ಸತ್ತಿದ್ದಾರೆ, ಇನ್ನು ತಾಯಿಯೂ ಸತ್ತು ಹೋದರೆ ಮಕ್ಕಳಿಗೆ ಯಾರು ದಿಕ್ಕು, ಅಜ್ಜಿ ತಾತ, ದೊಡ್ಡಮ್ಮ, ದೊಡ್ಡಪ್ಪ ಇವರೆಲ್ಲಾ ಎಂದಿಗೂ ತಂದೆ ತಾಯಿ ಆಗಲಾರರು, ಹಾಗಾಗಿ ಮಕ್ಕಳಿಗಾಗಿ ಬದುಕಿರು ಎಂದು ಕೇಳಿದರೂ ಅವಳು ತನ್ನ ನಿಲುವನ್ನು ಬದಲಿಸುತ್ತಿರಲಿಲ್ಲ. ವಿಧವಿಧವಾದ ಬೆಲೆಬಾಳುವ ಒಡವೆ ವಸ್ತ್ರಗಳನ್ನು ಅಷ್ಟ ಐಶ್ವರ್ಯಗಳ ಆಸೆ ತೋರಿಸಿದರೂ ಅವಳು ತನ್ನ ಧೃಢ ಚಿತ್ತವನ್ನು ಬದಲಿಸದೆ ತನ್ನ ಪತಿಯ ಜೊತೆ ಚಿತೆಯೇರಿ ಭಸ್ಮವಾಗುತ್ತಿದ್ದಳು. ಇದನ್ನೇ ಸತಿ ಸಹಗಮನ ಎನ್ನುವರು. ನಂತರದಲ್ಲಿ ಇದೊಂದು ಪದ್ಧತಿಯಾಗಿ ಮಾರ್ಪಟ್ಟು ಕುಟುಂಬದವರ ಮರ್ಯಾದೆಯ ಪ್ರಶ್ನೆಯಾಗಿ ಬದಲಾವಣೆ ಕಂಡಿತು. ಇದನ್ನೇ ಸತಿ ಸಹಗಮನ ಎಂದು ಕರೆಯಲಾರಂಭಿಸಿದರು. ನಂತರ ಸಂಘರ್ಷಗಳು ನಡೆದ ನಂತರ ಈ ಪದ್ಧತಿ ರದ್ದಾಯಿತು.

ಇದರಿಂದ ತಿಳಿಯುವುದೇನೆಂದರೆ ಹೇಗೆ ಪತ್ನಿಯು ತನ್ನ ಪತಿಗಾಗಿ ವೈರಾಗ್ಯದಿಂದ ಸುಟ್ಟು ಭಸ್ಮವಾಗುತ್ತಾಳೆ, ರಾಮ–ರಾಮ ಹೇಳುತ್ತಾ ಚಿತೆಯಲ್ಲಿ ಸುಟ್ಟುಬಿಡುತ್ತಾಳೆ.

ಜಗತ್ ಮೆಂ ಜೀವನ್ ದಿನ್–ಚಾರ್ ಕಾ, ಕೋಈ ಸದಾ ನಹೀಂ ರಹೇ ।
ಯಹ್ ವಿಚಾರ್ ಪತಿ ಸಂಗ್ ಚಾಲಿ ಕೋಈ ಕುಛ್ ಕಹ್ಯೆ ॥

**ಶಬ್ದಾರ್ಥ:–** ಬಹಳ ಹಿಂದಿನ ಕಾಲದಲ್ಲಿ ಹೆಂಡತಿಯು ತನ್ನ ಸತ್ತ ಗಂಡನ ಜೊತೆಯಲ್ಲಿ ಚಿತೆಗೆ ಹಾರಿ ಸುಟ್ಟು ಹೋಗುತ್ತಿದ್ದಳು. ಆಗ ಅವಳ ಮನಸ್ಸಿನಲ್ಲಿ ತನ್ನ ಪತಿಯ ವಿನಃ ಬೇರೆ ಹಣ, ಸಂಪತ್ತು, ಮಕ್ಕಳು, ಒಡವೆ, ವಸ್ತ್ರಗಳ ಬಗ್ಗೆ ಯೋಚನೆ ಇರುತ್ತಿರಲಿಲ್ಲ. ಈವತ್ತಲ್ಲ, ನಾಳೆಯಾದರೂ ಸಾಯಲೇಬೇಕು ಎಂದು ಅವಳು ಯೋಚಿಸುತ್ತಿದ್ದಳು. ಯಾರೇ ಬಂದು ಏನೇ ಹೇಳಿದರೂ ಅವಳು

ಯಾರೊಬ್ಬರ ಮಾತನ್ನೂ ಕೇಳಲು ಸಿದ್ಧವಾಗಿರುತ್ತಿರಲಿಲ್ಲ. ಹೀಗೆ ಅವಳು ತನ್ನ ಪತಿಯ ಚಿತೆಗೆ ಹಾರಿ ಪ್ರಾಣ ಬಿಡುತ್ತಿದ್ದಳು. ಇದೊಂದು ಕೆಟ್ಟ ಪದ್ಧತಿ. ಆದರೆ ಅಂದಿನ ಕಾಲದಲ್ಲಿ ಅದನ್ನು ಬಹಳ ಒಳ್ಳೆಯ ಪದ್ಧತಿ ಎನ್ನುತ್ತಿದ್ದರು. ಆದರೆ ಇಂದು ಶಿಕ್ಷಿತ ಸಮಾಜವು ಆ ಪದ್ಧತಿಯನ್ನು ಕೊನೆಗೊಳಿಸಿದೆ. ಭಕ್ತಿಯಲ್ಲಿ ದೃಢತೆಯನ್ನು ಉಂಟು ಮಾಡಲು ಈ ಉದಾಹರಣೆ ಸರಿ ಇದೆ, ಅಂದರೆ ಭಕ್ತನಿಗೂ ಇಂತಹ ದೃಢ ಚಿತ್ತವಿರಬೇಕು ಎಂದು ಹೇಳಬಹುದು. ಹೀಗೆ ಸಾಂಸಾರಿಕ ವಿಷಯಗಳ ಬಗ್ಗೆ ಗಮನಹರಿಸದೆ ತನ್ನ ಉದ್ದೇಶದ ಸಫಲತೆಗಾಗಿ ದೃಢತೆಯಿಂದ ಭಕ್ತಿ ಮಾಡಬೇಕು. ಮರ್ಯಾದೆಯ ಪಾಲನೆಮಾಡಬೇಕು. ಸತ್ಯಪುರುಷನ ಪ್ರಾಪ್ತಿಗಾಗಿ ಯಾವ ರೀತಿ ಶ್ರದ್ಧೆಯಿಂದ ಇರಬೇಕು ಎನ್ನುವುದನ್ನು ಈ ಕೆಳಗಿನ ಪದ್ಯಗಳಲ್ಲಿ ವಿವರಿಸಲಾಗಿದೆ. ಪ್ರಾಪಂಚಿಕವಾದ ಸಂಬಂಧಗಳು, ಸಂಪತ್ತು ಮುಂತಾದವುಗಳನ್ನು ಮರೆತು ಕೇವಲ ಪರಮಾತ್ಮನ ಧ್ಯಾನದಲ್ಲಿ ತೊಡಗಬೇಕು.

ಹೇ ಧರ್ಮದಾಸನೇ! ಈ ರೀತಿ ಭಕ್ತನ ವಿಚಾರ ಇರಬೇಕು.

ಐಸೆ ಹೀ ಜೋ ಸತ್‌ಪುರುಷ್ ಲೌ ಲಾವ್ಯೆ । ಕುಲ್ ಪರಿವಾರ್ ಸಬ್ ಬಿಸರಾವ್ಯೆ ॥1
ನಾರಿ ಸುತ್ ಕಾ ಮೋಹ್ ನ ಆನೇ । ಜಗತ್ ರೂ ಜೀವನ್ ಸ್ವಪನ್ ಕರ್ ಜಾನ್ಯೆ ॥2
ಜಗ್ ಮೆಂ ಜೀವನ್ ಥೋಡಾ ಭಾಈ । ಅಂತ್ ಸಮಯ್ ಕೋಈ ನಹೀಂ ಸಹಾಈ ॥3
ಬಹುತ್ ಪ್ಯಾರೀ ನಾರಿ ಜಗ್ ಮಾಂಹೀ । ಮಾತಾ–ಪಿತಾ ಜಾ ಕೇ ಸಮ್ ನಾಹೀಂ ॥4
ತೇಹೀ ಕಾರಣ್ ನರ್ ಶೀಶ್ ಜೋ ದೇಹೀ । ಅಂತ್ ಸಮಯ್ ಸೋ ನಹೀಂ ಸಂಗ್ ದೇಹೀ ॥5
ಚಾಹೇ ಕೋಈ ಜಲ್ಯೆ ಪತಿ ಕೇ ಸಂಗಾ । ಫಿರ್ ದೋನೋಂ ಬನ್ಯೆಂ ಕೀಟ್ ಪತಂಗಾ ॥6
ಫಿರ್ ಪಶು–ಪಕ್ಷೀ ಜನ್ಮ್ ಪಾವ್ಯೆ । ಬಿನ್ ಸತ್‌ಗುರು ದುಃಖ್ ಕೌನ್ ಮಿಟಾವ್ಯೆ ॥7
ಏಸೀ ನಾರಿ ಬಹುತೇರೀ ಭಾಈ । ಪತಿ ಮರ್ಯೆ ತಬ್ ರೂಧನ್ ಮಚಾಈ ॥8
ಕಾಮ್ ಪೂರ್ತಿ ಕೀ ಹಾನಿ ವಿಚಾರ್ಯೆ । ದಿನ್ ತೇರಹ್ ಏಸೇ ಪುಕಾರ್ಯೆ ॥9
ನಿಜ್ ಸ್ವಾರ್ಥ್ ಕೋ ರೋದನ್ ಕರಹೀ । ತುರಂತ್ ಹೀ ಖಸಮ್ ದೂಸರೋ ಕರಹೀ ॥10
ಸುತ್ ಪರಿಜನ್ ಧನ್ ಸ್ವಪನ್ ಸ್ನೇಹೀ । ಸತ್ಯನಾಮ್ ಗಹು ನಿಜ್ ಮತಿ ಏಹೀ ॥11
ಸ್ವ ತನ್ ಸಮ್ ಪ್ರಿಯ್ ಔರ್ ನ ಆನಾ। ಸೋ ಭೀ ಸಂಗ್ ನಹೀಂ ಚಲತ್ ನಿದಾನಾ ॥12
ಏಸಾ ಕೋಈ ನಾ ದಿಖ್ ಭಾಈ । ಅಂತ್ ಸಮಯ್ ಮೆಂ ಹೋಯ್ ಸಹಾಈ ॥13
ಆದಿ ಅಂತ್ ಕಾ ಸಖಾ ಭುಲಾಯಾ । ಝೂಠ್ಯೆ ಜಗ್ ನಾತೋಂ ಮೆಂ ಫಿರ್ಯೆ ಉಮಾಹಯಾ ॥14
ಅಂತ್ ಸಮಯಾ ಜಮ್ ದೂತ್ ಗಲಾ ದಬಾವ್ಯೆ । ತಾ ಸಮಯ್ ಕಹೋ ಕೌನ್ ಛುಡಾವ್ಯೆ ॥15
ಸತ್‌ಗುರು ಹೈ ಏಕ್ ಛುಡಾವನ್ ಹಾರಾ । ನಿಶ್ಚಯ್ ಕರ್ ಮಾನಹೂ ಕಹಾ ಹಮಾರಾ ॥16
ಕಾಲ್ ಕೋ ಜೀತ್ ಹಂಸ್ ಲೇ ಜಾಹೀ । ಅವಿಚಲ್ ದೇಶ್ ಜಹಾಂ ಪುರುಷ್ ರಹಾಹೀ ॥17
ಜಹಾಂ ಜಾಯ್ ಸುಖ್ ಹೋಯ್ ಅಪಾರಾ । ಬಹುರ್ ನ ಆವ್ಯೆ ಇಸ್ ಸಂಸಾರಾ ॥18
ಏಸಾ ದೃಢ್ ಮತಾ ಕರಾಹೀ । ಜೈಸೆ ಸೂರಾ ಲೇತ್ ಲಡಾಈ ॥19
ಟೂಕ್–ಟೂಕ್ ಹೋ ಮರ್ಯೆ ರಣ್ ಕೆ ಮಾಂಹೀ । ಪೂಠಾ ಕದಮ್ ಕಬಹೂ ಹಟಾವ್ಯೆ ನಾಂಹೀ ॥20
ಜೈಸೆ ಸತೀ ಪತಿ ಸಂಗ್ ಜರಹೀ । ಏಸಾ ದೃಢ್ ನಿಶ್ಚಯ್ ಜೋ ಕರಹೀ ॥21
ಸಾಹೇಬ್ ಮಿಲ್ಯೆ ಜಗ್ ಕೀರ್ತಿ ಹೋಈ । ವಿಶ್ವಾಸ್ ಕರ್ ದೇಖೋ ಕೋಈ ॥22
ಹಮ್ ಹೈಂ ರಾಹ್ ಬತಾವನ್ ಹಾರಾ । ಮಾನ್ಯೆ ಬಚನ್ ಭವ್ ಉತರ್ಯೆ ಪಾರಾ ॥23
ಛಲ್ ಕಪಟ್ ಹಮ್ ನಹೀಂ ಕರಾಹೀಂ । ನಿಸ್ವಾರ್ಥ್ ಪರಮಾರ್ಥ್ ಕರ್ಯೆಂ ಭಾಈ ॥24
ಜೀವ್ ಏಕ ಜೋ ಶರಣ್ ಪುರುಷ್ ಕೀ ಜಾವ್ಯೆ । ಪ್ರಚಾರಕ್ ಕೋ ಘನಾ ಪುಣ್ಯ್ ಪಾವ್ಯೆ ॥25
ಕೋಟಿ ಧೇನು ಜೋ ಕಟತ್ ಬಚಾಈ । ಏತಾ ಧರ್ಮ್ ಮಿಲ್ಯೆ ಪ್ರಚಾರಕ್ ತಾಂಹೀ ॥26
ಲಾವ್ಯೆ ಗುರು ಶರಣ್ ದೀಕ್ಷಾ ದಿಲಾವ್ಯೆ । ಆಪಾ ನಾ ಥಾಪ್ಯೆ ಸಬ್ ಕುಛ್ ಗುರು ಕೋ ಬತಾವ್ಯೆ ॥27
ಜೋ ಕೋಈ ಪ್ರಚಾರಕ್ ಗುರು ಬನಿ ಬೈಠ್ಯೆ ।ಪರಮಾತ್ಮಾ ರೂಠೆ ಕಾಲ್ ಕಾನ್ ಏಠ್ಯೆ ॥28
ಲಾಖ್ ಅಠಾಈಸ್ ಝೂಠೆ ಗುರು ರೋವ್ಯೆಂ ।ಪಡೆ ನರಕ್ ಮೆಂ ನಾ ಸುಖ್ ಸೋವ್ಯೆಂ ॥29

ಅಬ್ ಕಹೇ ಹೈಂ ಭೂಲ್ ಭಈ ಭಾರೀ । ಹೇ ಸತ್‌ಗುರು ಸುಧ್ ಲೇವ್ಹೋ ಹಮಾರೀ ॥30॥
ಬೋಏ ಬಬೂಲ್ ಆಮ್ ಕಹಾಂ ಖಾಈ । ಕೋಟಿ ಜೀವನ್ ಕೋ ನರಕ್ ಪಠಾಈ ॥31
ಏಸೀ ಗಲತೀ ನಾ ಕರಹೂಂ ಸುಜಾನಾ । ಸತ್ಯ ವಚನ್ ಮಾನೋ ಪ್ರಮಾನಾ ॥32

ಶಬ್ದಾರ್ಥ:– ಒಬ್ಬ ಹುಡುಗನು ಬೆಳೆದು ದೊಡ್ಡವನಾದ ಮೇಲೆ ಯುವಕನಾಗುತ್ತಾನೆ. ಆಗ ಅವನಿಗೆ ವಿವಾಹವಾಗುತ್ತದೆ. ಅವನ ಪ್ರೀತಿ ತಂದೆ ತಾಯಿಗಳಿಂದ ದೂರವಾಗಿ ಹೆಂಡತಿಯ ಮೇಲೆ ಉಂಟಾಗುತ್ತದೆ. ನಂತರ ಮಕ್ಕಳ ಮೇಲೆ ಮಮತೆ ಉಂಟಾಗುತ್ತದೆ. ಪತಿ ಸತ್ತಾಗ ಪತ್ನಿ ಜೊತೆಗೆ ಹೋಗುವುದಿಲ್ಲ. ಕೆಲವು ದಿನ ಅಳುತ್ತಾಳೆ. ನಂತರ ಪತಿಯ ಅಣ್ಣ, ತಮ್ಮಂದಿರಲ್ಲಿ ಒಬ್ಬರನ್ನು ಮದುವೆಯಾಗುತ್ತಾಳೆ. ತನ್ನ ಪತ್ನಿಗಾಗಿ ಸರ್ವಸ್ವವನ್ನು ಸಮರ್ಪಿಸಿದ ಪತಿಯನ್ನು ಅವಳು ಮರೆತು ಹೋಗುತ್ತಾಳೆ. ಒಂದು ವೇಳೆ ಪತ್ನಿಯು ತನ್ನ ಪತಿಯ ಜೊತೆಗೆ ಹಾರಿ ಸತ್ತು ಹೋದರೆ ಮುಂದಿನ ಜನ್ಮದಲ್ಲಿ ಯಾವುದೋ ಪಶು ಅಥವಾ ಪಕ್ಷಿಯಾಗಿ ಅಲೆದಾಡುತ್ತಿರುತ್ತಾರೆ. ಯಾವ ಹೆಂಡತಿಗೋಸ್ಕರ ಪತಿ ತನ್ನ ಸರ್ವಸ್ವವನ್ನು ಅರ್ಪಿಸುತ್ತಾನೋ, ಯಾರಾದರೂ ತನ್ನ ಹೆಂಡತಿಯನ್ನು ಕೆಟ್ಟ ದೃಷ್ಟಿಯಿಂದ ನೋಡಿದರೆ, ತನ್ನ ಪತ್ನಿಗಾಗಿ ಎಂತಹ ಕಷ್ಟವನ್ನಾದರೂ ಎದುರಿಸಲು ಸಿದ್ಧವಾಗಿರುತ್ತಾನೋ, ಅದೇ ಪತ್ನಿಯು ತನ್ನ ಪತಿಯ ಮೃತ್ಯುವಿನ ನಂತರ ಬೇರೆ ವ್ಯಕ್ತಿಯನ್ನು ಮದುವೆಯಾಗುತ್ತಾಳೆ. ಪರಿಸ್ಥಿತಿಯ ಕಾರಣದಿಂದ ಅವಳು ಹಾಗೆ ಮಾಡಿದರೂ ಭಕ್ತನಿಗೆ ಮಾತ್ರ ಇದೊಂದು ಒಳ್ಳೆಯ ಪಾಠ.

ಇದೇ ರೀತಿ ಒಬ್ಬ ವ್ಯಕ್ತಿಯು ತನ್ನ ಪತ್ನಿ ತೀರಿಕೊಂಡರೆ, ಕೆಲವೇ ದಿನಗಳಲ್ಲಿ ಅವಳನ್ನು ಮರೆತು ಬೇರೆ ಮದುವೆಯಾಗುತ್ತಾನೆ. ಪತ್ನಿಯು ತನ್ನ ಪತಿಗಾಗಿ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ತನ್ನ ಊರು–ಕೇರಿ ಎಲ್ಲಾ ಬಿಟ್ಟು ಬಂದು ಅವನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ. ಪತ್ನಿಯ ಮೃತ್ಯುವಿನ ಬಳಿಕ ಸ್ವಾರ್ಥದ ಕಾರಣ ಅಳುತ್ತಿರುತ್ತಾನೆ. ಆದರೆ ಬೇರೆ ಜನರು ವಿವಾಹ ಮಾಡಿಕೊಳ್ಳಲು ಹೇಳಿದಾಗ ಎಲ್ಲವನ್ನೂ ಮರೆತು ಮದುವೆಯಾಗುತ್ತಾನೆ.

ಇದರಿಂದ ತಿಳಿಯುವುದೇನೆಂದರೆ, ಎಲ್ಲರೂ ಸ್ವಾರ್ಥಪರರೇ. ಆದ್ದರಿಂದ ಸತ್ಯಭಕ್ತಿ ಮಾಡಿ, ಆ ಸತ್ಯಲೋಕಕ್ಕೆ ನಡೆಯಿರಿ, ಅಲ್ಲಿ ವೃದ್ಧಾಪ್ಯ ಹಾಗೂ ಮರಣವೆಂಬುದೇ ಇರುವುದಿಲ್ಲ.

ಮುಂದಿನ ಪಂಕ್ತಿಗಳಲ್ಲಿ ಎಚ್ಚರಿಕೆಯನ್ನು ನೀಡಲಾಗಿದೆ. ಮನುಷ್ಯನಿಗೆ ತನ್ನ ಶರೀರಕ್ಕಿಂತ ಮಿಗಿಲಾದದ್ದು ಏನೂ ಇಲ್ಲ. ತನ್ನ ಶರೀರವನ್ನು ರಕ್ಷಿಸಿಕೊಳ್ಳಲು ಲಕ್ಷಾಂತರ ಹಣವನ್ನು ಖರ್ಚು ಮಾಡಲು ಹಿಂದೆ ಮುಂದೆ ನೋಡುವುದಿಲ್ಲ. ತನ್ನ ಶರೀರ ಉಳಿದರೆ ಮುಂದೆ ಕೂಲಿ ಮಾಡಿ ಹಣ ಸಂಪಾದಿಸಬಹುದು ಎಂದು ಯೋಚಿಸಿ ತನ್ನ ಆಸ್ತಿಯನ್ನು ಮಾರಲೂ ಹಿಂಜರಿಯುವುದಿಲ್ಲ ಮತ್ತು ತನ್ನ ಶರೀರವನ್ನು ರಕ್ಷಿಸುತ್ತಾನೆ. ಪರಮೇಶ್ವರ ಕಬೀರರು ಹೇಳಿದ್ದಾರೆ ಹೇ ಧರ್ಮದಾಸ!

ಸ್ವ ತನು ಸಮ್ ಪ್ರಿಯ್ ಔರ್ ನ ಆನಾ । ಸೋ ಭೀ ಸಂಗ್ ನ ಚಲತ್ ನಿದಾನಾ ॥

ಶಬ್ದಾರ್ಥ:– ತಮ್ಮ ಶರೀರದಂತೆ ಬೇರೆ ಯಾವ ವಸ್ತುವೂ ಇಷ್ಟವಿರಲ್ಲ. ಆ ಶರೀರವೂ ನಿಮ್ಮ ಜೊತೆ ಬರುವುದಿಲ್ಲ. ಇನ್ನು ಮನುಷ್ಯರು ವಸ್ತುಗಳ ಮೋಹದಲ್ಲಿ ಬಿದ್ದು, ಪರಮಾತ್ಮನನ್ನು ಮರೆತು ತಿರುಗಾಡುತ್ತಿರುತ್ತಾರೆ. ನಿಮ್ಮ ಸಂಪತ್ತು, ಬಂಧು ಬಳಗವೆಲ್ಲಾ ಒಂದು ಕನಸಿನಂತೆ ಜೊತೆಯಾಗಿರುತ್ತಾರೆ. ಕಬೀರ ಪರಮೇಶ್ವರರು ಹೇಳಿದ್ದಾರೆನೆಂದರೆ ನನ್ನ ಅಭಿಪ್ರಾಯವೆನೆಂದರೆ ಪೂರ್ಣ ಸಂತನಿಂದ ಸತ್ಯನಾಮ (ಸತ್ಯ ಸಾಧನೆಯ ಮಂತ್ರ) ಪಡೆದು ತಮ್ಮ ಉದ್ಧಾರ ಮಾಡಿಕೊಳ್ಳಿ, ಎಲ್ಲಿಯವರೆಗೆ ನೀವು ಕನಸಿನಲ್ಲಿರುತ್ತೀರೋ, ಅಲ್ಲಿಯವರೆಗೆ ಪೂರ್ಣ ಸಂತನ ಶರಣದಲ್ಲಿ ಹೋಗಿ ನಿಜವಾದ ಮಂತ್ರ ಪಡೆದುಕೊಂಡು ಮೋಕ್ಷ ಪಡೆದುಕೊಳ್ಳಿ. ಎಲ್ಲರೂ ಜೀವನವೆಂಬ ರೈಲಿ **(Train)**ನಲ್ಲಿ ಪ್ರಯಾಣಿಸುತ್ತೀರಿ. ಯಾವ ಬೋಗಿಯಲ್ಲಿ **(Compartment)**ಕುಳಿತಿರುತ್ತೀರೋ ಅದೇ ನಿಮ್ಮ ಊರು. ಯಾವ ಸೀಟಿನಲ್ಲಿ ಕುಳಿತಿರುತ್ತೀರೋ ಅದು ನಿಮ್ಮ ಕುಟುಂಬ. ಯಾರ ಯಾತ್ರೆಯು ಪೂರ್ಣಗೊಳ್ಳುವುದೋ ಅವರು ಆಯಾಯಾ ನಿಲ್ದಾಣದಲ್ಲಿ ಇಳಿದು ಹೋಗುತ್ತಾರೆ. ಇದೇ ಸ್ಥಿತಿ ಈ ಪ್ರಪಂಚದ್ದು, ನಾವು ಸ್ವಲ್ಪ ಸಮಯದವರೆಗೆ ಮಾತ್ರ ಜೊತೆಯಲ್ಲಿರುತ್ತೇವೆ

ಎಂದು ಯಾತ್ರಿಕರಿಗೆ ತಿಳಿದಿರುತ್ತದೆ. ಸಭ್ಯವ್ಯಕ್ತಿಗಳು ಆ ಯಾತ್ರೆಯಲ್ಲಿ ಪ್ರೀತಿಯಿಂದ ಇರುತ್ತಾರೆ. ಒಬ್ಬರಿಗೊಬ್ಬರು ಸಹಕರಿಸುತ್ತಿರುತ್ತಾರೆ. ಅದೇ ರೀತಿ ನಮ್ಮ ಕನಸಿನಂಥಾ ಮಾನವ ಜೀವನದ ಸಮಯವನ್ನು ಕಳೆಯಬೇಕು. ಯಾವಾಗ ಕನಸು ಕೊನೆಗೊಳ್ಳುವುದೋ ಅಂದರೆ ಶರೀರ ಬಿಡುತ್ತೇವೆಯೋ ಆಗ, ಇದೆಲ್ಲಾ ಏನು? ಈ ಕುಟುಂಬ ಮತ್ತು ಸಂಪತ್ತನ್ನು ಸಂಪಾದಿಸಲು ಈ ಜೀವನವನ್ನು ನಷ್ಟ ಮಾಡಿಕೊಂಡೆವಲ್ಲಾ, ಆ ಕುಟುಂಬ ಮತ್ತು ಸಂಪತ್ತು ಈಗೆಲ್ಲಿ? ಅನ್ನಿಸುತ್ತದೆ. ಪ್ರಪಂಚದಲ್ಲಿ ಪರಮಾತ್ಮನಲ್ಲದೆ ಬೇರೆ ಯಾರೂ ಇಲ್ಲ. ಮೃತ್ಯುವಿನ ಸಮಯದಲ್ಲಿ ಯಮದೂತರು ಬಂದು ನಿಮ್ಮ ಕಂಠದಿಂದ ಪ್ರಾಣವನ್ನು ತೆಗೆದುಕೊಂಡು ಹೋಗುತ್ತಿರಬೇಕಾದರೆ, ಪರಮಾತ್ಮನಲ್ಲದೆ ಬೇರೆ ಯಾರೂ ಸಹಾಯ ಮಾಡಲಾರರು. ಯಾರು ಪೂರ್ಣಸಂತರಿಂದ ದೀಕ್ಷೆ ಪಡೆಯುವರೋ ಅವರನ್ನು ಪರಮಾತ್ಮನು ರಕ್ಷಿಸುತ್ತಾನೆ. ಪರಮೇಶ್ವರನು ಸದ್ಗುರುವಿನ ರೂಪದಲ್ಲಿ ಭಕ್ತನಿಗೆ ಸಹಾಯ ಮಾಡುತ್ತಾನೆ. ಹಾಗಾಗಿ ಸದ್ಗುರುವಿನ ಆಶ್ರಯದಲ್ಲಿ ಇರುವ ಭಕ್ತನು ಸದ್ಗುರುವಿನ ಮೇಲೆ ಜಿಂಕೆ, ಪತಂಗ, ಹಾಗೂ ಪತಿವ್ರತೆಯಂತೆ, ಸಮರ್ಪಣಾ ಭಾವವನ್ನು ಹೊಂದಿರಬೇಕು. ಶೂರರು ಚೂರು ಚೂರಾಗಿ ಭೂಮಿಗೆ ಬಿದ್ದರೂ ಯುದ್ಧದಿಂದ ಹಿಂದೆ ಸರಿಯುವುದಿಲ್ಲ. ಪುರಾಣಗಳಲ್ಲಿ ಹಾಗೂ ಗೀತೆಯ 2ನೇ ಅಧ್ಯಾಯದ 38ನೇ ಶ್ಲೋಕದಲ್ಲಿ ಹೇಳಿದೆ, "ಅರ್ಜುನ, ಯೋಧನು ಯುದ್ಧದಲ್ಲಿ ಸತ್ತರೆ ಅವನು ಸ್ವರ್ಗಸುಖ ಪಡೆಯುತ್ತಾನೆ. ಭಕ್ತನು ಭಕ್ತಿ ಮಾರ್ಗದಲ್ಲಿ ನಡೆದರೆ, ಶರೀರವನ್ನು ತ್ಯಜಿಸಿದರೆ ಅವನು ಸತ್ಯಲೋಕದಲ್ಲಿ ಸ್ಥಾನ ಪಡೆದು ಸುಖ ಸಾಗರವನ್ನು ತಲುಪಿ ಶಾಶ್ವತವಾದ ಸುಖ ಪಡೆಯುತ್ತಾನೆ. ಜನನ–ಮರಣವೆಂಬ ಸಂಕಟ ಶಾಶ್ವತವಾಗಿ ದೂರವಾಗುವುದು. ಹೇಗೆ ಭೂಮಿಯ ಮೇಲೆ ನಮ್ಮ ಜನನವಾಗಿದ್ದು, ನಾವು ಯಾರ ಮಗುವಾಗಿ ಹುಟ್ಟುತ್ತೇವೆ ಎಂದು ಗೊತ್ತಿರುವುದಿಲ್ಲ, ಯಾರನ್ನು ವಿವಾಹವಾಗುತ್ತೇವೆ, ನಮಗೆ ಮಗ ಹುಟ್ಟುವನೋ ಅಥವಾ ಮಗಳು ಹುಟ್ಟುವಳೋ ಎನ್ನುವುದೂ ಗೊತ್ತಿರುವುದಿಲ್ಲ. ಇದೆಲ್ಲಾ ನಮ್ಮ ಪೂರ್ವಜನ್ಮದ ಸಂಸ್ಕಾರದಿಂದ ನಡೆಯುತ್ತಿರುತ್ತದೆ. ಕುಟುಂಬದ ಸದಸ್ಯರ ಜೊತೆ ಪ್ರೀತಿ ವಾತ್ಸಲ್ಯವಿರುತ್ತದೆ ಹಾಗೂ ಎಂದಿಗೂ ಜೊತೆಯಲ್ಲಿರುವ ಆಸೆ ಉಂಟಾಗುತ್ತದೆ. ಯಾರೂ ಸಾಯಬಾರದೆಂದು ಆಶಿಸುತ್ತೇವೆ. ಆದರೆ ಈ ಕಾಲಬ್ರಹ್ಮನ ಲೋಕದಲ್ಲಿ ಯಾರೂ ಶಾಶ್ವತರಲ್ಲ. ಎಲ್ಲರೂ ಒಬ್ಬರ ಹಿಂದೆ ಒಬ್ಬರು ಹೋಗಬೇಕಾಗುತ್ತದೆ. ಇಡೀ ಜೀವನದಲ್ಲಿ ಗಳಿಸಿದ ಸಂಪತ್ತಿ ಇಲ್ಲಿಯೇ ಉಳಿಯುವುದು. ಜೀವಾತ್ಮ ಖಾಲಿ ಕೈಯಿಂದ ಹೋಗುವುದು. ಆದರೆ ಯಾರು ಪೂರ್ಣ ಸಂತರಿಂದ ನಾಮದೀಕ್ಷೆಯನ್ನು ಪಡೆದು ಸತ್ಯ ಸಾಧನೆ ಮಾಡುವರೋ ಅವರು ಸತ್ಯಲೋಕಕ್ಕೆ ಹೋಗುವರು. ಅಲ್ಲಿ ಪೃಥ್ವಿ ಮೇಲೆ ಜನ್ಮವಾದಂತೆ ಜನ್ಮವಾಗುವುದು. ಅದೇ ರೀತಿ ಕುಟುಂಬವಿರುವುದು, ಅಲ್ಲಿ ಯಾವುದೇ ಕರ್ಮ ಮಾಡುವಂತಿಲ್ಲ. ಸದಾ ಹಚ್ಚ ಹಸಿರು ಗಿಡ ಮರಗಳಿವೆ, ಗೋಡಂಬಿ, ಒಣದ್ರಾಕ್ಷಿ ಇತ್ಯಾದಿಗಳಿವೆ. ಹಾಲಿನ ಸಮುದ್ರಗಳಿವೆ. ಸತ್ಯಲೋಕದಲ್ಲಿ ವೃದ್ಧಾಪ್ಯವೂ ಇರುವುದಿಲ್ಲ. ಮೃತ್ಯುವೂ ಆಗುವುದಿಲ್ಲ. ಇದನ್ನು ಅಕ್ಷಯ ಮೋಕ್ಷವೆನ್ನುತ್ತಾರೆ. ಪೂರ್ಣ ಮುಕ್ತಿಯೆಂದು ಹೇಳುತ್ತಾರೆ.

ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ ಹಾಗೂ 15ನೇ ಅಧ್ಯಾಯದ ಶ್ಲೋಕ 4ರಲ್ಲಿ ಹೇಳಿರುವಂತೆ, ಯಾವ ಸಿದ್ಧಿ ಮೋಕ್ಷ ಶಕ್ತಿಯನ್ನು 'ನೈಷ್ಕರ್ಮ್ಯ' ಸಿದ್ಧಿ ಎನ್ನುತ್ತಾರೆ. ಅದರ ವರ್ಣನೆಯನ್ನು ಗೀತೆಯ 3ನೇ ಅಧ್ಯಾಯದ 4ನೇ ಶ್ಲೋಕ, 18ನೇ ಅಧ್ಯಾಯದ 49ರಿಂದ 62ನೇ ಶ್ಲೋಕದಲ್ಲಿ ಕಾಲಬ್ರಹ್ಮ ಅಂದರೆ ಜ್ಯೋತಿ ನಿರಂಜನನ 21 ಬ್ರಹ್ಮಾಂಡಗಳ ಕ್ಷೇತ್ರದಲ್ಲಿ ಎಲ್ಲಾ ಜೀವಾತ್ಮಾಗಳು ಕರ್ಮಮಾಡಿಯೇ ಆಹಾರವನ್ನು ಪಡೆದುಕೊಳ್ಳುತ್ತವೆ. ಆದರೆ ಸತ್ಯಲೋಕದಲ್ಲಿ ಹಾಗಿಲ್ಲ, ಕರ್ಮ ಮಾಡದೆಯೇ ಅಲ್ಲಿ ಸರ್ವ ಸುಖ ದೊರೆಯುತ್ತದೆ. ತಂತಾನೇ ಆಹಾರ ದೊರಕುತ್ತದೆ. ಹೇಗೆ ತೋಟದಲ್ಲಿ ಫಲಭರಿತ ವೃಕ್ಷಗಳಿರುತ್ತವೆ. ಹಣ್ಣು ತೆಗೆದುಕೊಂಡು ತಿನ್ನಿ. ಅಲ್ಲಿ ಆಹಾರ ತಯಾರಿಸುವ ಅವಶ್ಯಕತೆ ಇಲ್ಲ. ನಿಮಗೆ ಇಷ್ಟವಾದದ್ದು ತಂತಾನೆ ತಯಾರಾಗುತ್ತದೆ. ಇದೆಲ್ಲಾ ಪರಮೇಶ್ವರನ ಶಕ್ತಿಯಿಂದ ಸಾಧ್ಯವಾಗುತ್ತದೆ. ಆ ಸತ್ಯಲೋಕವನನ್ನು ಪಡೆಯುವುದಕ್ಕಾಗಿ ನೀವೆಲ್ಲಾ ಶೂರವೀರರಂತೆ ತ್ಯಾಗ ಮಾಡಬೇಕು. ಅಂದರೆ ತಮ್ಮ ಉದ್ದೇಶ ಅಂದರೆ ಪೂರ್ಣಮೋಕ್ಷ ಪ್ರಾಪ್ತಿಯ ಗುರಿಯನ್ನು ಪ್ರಾಪ್ತಿಸುವುದಕ್ಕಾಗಿ ಪ್ರಪಂಚದ

**ಎಲ್ಲಾ ಲೋಭ, ಮೋಹ ತ್ಯಜಿಸಬೇಕಾದರೆ ಯೋಚಿಸುವ ಅವಶ್ಯಕತೆಯಿಲ್ಲ. ತಕ್ಷಣ ಬಿಟ್ಟು ತನ್ನ ಸ್ಮರಣೆಯಲ್ಲಿ ಧ್ಯಾನಮಗ್ನರಾಗಿ ಹಾಗಾಗಿ ಸದ್ಗುರುವಿನಿಂದ ದೀಕ್ಷೆ ಪಡೆದುಕೊಳ್ಳದಿದ್ದರೆ ನಿಮ್ಮ ಮೃತ್ಯುವಿನ ಸಮಯದಲ್ಲಿ ಯಮದೂತರು ಬಂದು ನಿಮ್ಮ ಕಂಠದಿಂದ ಪ್ರಾಣವನ್ನು ತೆಗೆದುಕೊಂಡು ಹೋಗುತ್ತಿರುವಾಗ ಯಾರೂ ನಿಮ್ಮನ್ನು ಕಾಪಾಡಲಾರರು. ದೀಕ್ಷೆ ಪಡೆದರೆ ಸದ್ಗುರುವು ನಿಮ್ಮ ಸಹಾಯಕ್ಕೆ ಬರುವರು. ಆದ್ದರಿಂದ ಪರಮೇಶ್ವರ ಕಬೀರರು ಹೇಳುತ್ತಾರೆ:–**

ಅಂತ್ ಸಮಯ್ ಜಮ್ ದೂತ್ ಗಲಾ ದಬಾವ್ಯೆಂ । ತಾ ಸಮಯ್ ಕಹೋ ಕೌನ್ ಛುಡಾವ್ಯೆ ॥
ಸತ್‌ಗುರು ಏಕ್ ಛುಡಾವನ್ ಹಾರಾ । ನಿಶ್ಚಯ್ ಕರ್ ಮಾನಹು ಕಹಾ ಹಮಾರಾ ॥

**ಶಬ್ದಾರ್ಥ:– ಯಾರಾದರೂ ಒಬ್ಬ ವ್ಯಕ್ತಿ ಸದ್ಗುರುವಿನಿಂದ ದೀಕ್ಷೆ ಪಡೆದು ಸತ್ಯಜ್ಞಾನವನ್ನು ಅರಿತ ನಂತರ ಒಬ್ಬ ವ್ಯಕ್ತಿಯನ್ನು ಸತ್ಯಜ್ಞಾನ ಪಡೆಯಲು ಸದ್ಗುರುವಿನ ಬಳಿ ಕರೆತಂದು ದೀಕ್ಷೆ ಕೊಡಿಸಿದರೆ ಕೋಟಿ ಹಸುಗಳನ್ನು ಕಟುಕನಿಂದ ಉಳಿಸುವುದರಿಂದ ಸಿಗುವಷ್ಟು ಪುಣ್ಯವು ಆ ಒಬ್ಬ ವ್ಯಕ್ತಿಗೆ ದೊರೆಯುತ್ತದೆ. ಸತ್ಯಜ್ಞಾನವನ್ನು ಪಡೆದ ವ್ಯಕ್ತಿಯು ದೊಡ್ಡಸ್ತಿಕೆ ತೋರುವಲ್ಲಿ ತಾನೇ ಗುರುವೆಂದು ತಿಳಿದು ಬೇರೆಯವರಿಗೆ ದೀಕ್ಷೆ ನೀಡಿದರೆ, ಸ್ವಯಂ ಗುರುವಾಗಿ ನಟಿಸಿದರೆ ಅವನು ಮಹಾ ಅಪರಾಧಿಯಾಗುತ್ತಾನೆ. ಪರಮೇಶ್ವರನು ಅವನ ಮೇಲೆ ಕೋಪಗೊಳ್ಳುತ್ತಾನೆ ಮತ್ತು ಹೇಗೆ ಕಟುಕ ಕುರಿ, ಮೇಕೆಯನ್ನು ಕಿವಿ ಹಿಡಿದು ಎಳೆದುಕೊಂಡು ಹೋಗುತ್ತಾನೋ ಹಾಗೆ ಕಾಲನು ಅವನನ್ನು ಎಳೆದುಕೊಂಡು ಹೋಗಿ ನರಕಕ್ಕೆ ತಳ್ಳುತ್ತಾನೆ. ಕಬೀರ್ ಸಾಗರ್‌ದ ಅಂಬುಸಾಗರ್ ಎಂಬ ಅಧ್ಯಾಯದ ಪುಟ ಸಂಖ್ಯೆ 48ರಲ್ಲಿ ಇದರ ಬಗ್ಗೆ ಹೇಳಲಾಗಿದೆ:–**

ತಬ್ ದೇಖಾ ದೂತನ್ ಕಹಂ ಜಾಈ । ಚೌರಾಸೀ ತಾಹಂ ಕುಂಡ್ ಬನಾಈ ॥
ಕುಂಡ್–ಕುಂಡ್ ಬೈಠೇ ಯಮದೂತಾ । ದೇತ್ ಜೀವನ್ ಕಹಂ ಕಷ್ಟ್ ಬಹುತಾ ॥
ತಹಾಂ ಜಾಯ್ ಹಮ್ ಠಾಡ್ (ಖಡೆ) ರಹಾವಾ । ದೇಖತ್ ಜೀವ್ ವಿನಯ್ ಬಹುತ್ ಲಾವಾ ॥

**"ಝೂಠೆ ಕಡಿಹಾರ್ (ನಕಲೀ ಸತ್‌ಗುರು) ಕೀ ದಶಾ"**

ಪಡ್ಯೆ ಮಾರ್ ಜೀವ್ ಕರೇಂ ಬಹು ಶೋರಾ । ಬಾಂಧ್–ಬಾಂಧ್ ಕುಂಡನ್ ಮೆಂ ಬೋರಾ ॥
ಲಾಖ್ ಅಠಾಇಸ್ ಪಡೇ ಕಡಿಹಾರಾ । ಬಹುತ್ ಕಷ್ಟ್ ತಹಾಂ ಕರತ್ ಪುಕಾರಾ ॥
ಹಮ್ ಭೂಲೇ ಸ್ವಾರ್ಥ್ ಸಂಗೀ । ಅಬ್ ಹಮರೇ ನಾಹೀಂ ಅರ್ಧಂಗೀ ॥
ಹಮ್ ತೋ ಜರತ್ ಹೈಂ ಅಗ್ನಿ ಮಂಝಾರಾ । ಅಂಗ್ ಅಂಗ್ ಸಬ್ ಜರತ್ ಹಮಾರಾ ॥
ಕೌನ್ ಪುರುಷ್ ಅಬ್ ರಾಖೇ ಭಾಈ । ಕರತ್ ಗುಹಾರ್ ಚಕ್ಷು ಢಲ್ ಜಾಈ ॥

**"ಜ್ಞಾನೀ (ಕಬೀರ್‌ರ) ವಚನ್"**

ಕರುಣಾ ದೇಖ್ ದಯಾ ದಿಲ್ ಆವಾ । ಅರೇ ದೂತ್ ತ್ರಾಸ್ ಭಾಸ್ ದಿಖಾವಾ ॥

**ಈ ವಾಣಿಯನ್ನು ಬಿಗಡಾಯಿಸಲಾಗಿದೆ ವಾಸ್ತವಿಕ ವಾಣಿ ಕೆಳಗಿದೆ.**

ದುರ್ದಶಾ ದೇಖ್ ದಯಾ ದಿಲ್ ಆವಾ । ಅರೇ ದೂತ್ ತುಮ್ ಜೀವನ್ ಭ್ರಮಾವಾ ॥
ಜೀವ್ ತೋ ಅಚೇತ್ ಅಜ್ಞಾನಾ । ವಾಕೋ ಕಾಲ್ ಜಾಲ್ ತುಮ್ ಬಂಧಾನಾ ॥
ಚೌರಾಸೀ ದೂತನ್ ಕಹಂ ಬಾಂಧಾ । ಶಬ್ದ್ ಡೋರ್ ಚೌದರ್ ಯಮ್ ಸಾಂಧಾ ॥
ತಬ್ ಹಮ್ ಸಬಹನ್ ಕಹಂ ಮಾರಾ । ತುಮ್ ಹೋ ಜಾಲಿಮ್ ಬಟಪಾರಾ ॥
ಹಮರೆ ಭಗತನ್ ಕೋ ತುಮ್ ಭ್ರಮಾವಾ । ಪಲ್ ಪಲ್ ಸುರತಿ ಜೀವನ್ ಡಿಗಾವಾ ॥
ಗಹಿ ಚೋಟಿ ದೂತ್ ಘಸಿಯಾಏ । ಯಮ್ ರೂ ದೂತ್ ವಿನಯ್ ತಬ್ ಲಾಏ ॥

**"ದೂತ್ (ಯಾರು ನಕಲಿ ಗುರುಗಳಾಗಿದ್ದರೊ) ವಚನ್"**

ಚುಕ್ ಹಮಾರೀ ಛಮಾ ಕರ್ ದೀಜ್ಯೆ । ಮನ್ ಮಾನೇ ತಸ್ ಆಜ್ಞಾ ಕೀಜ್ಯೆ ॥
ಹಮ್ ತೋ ಧನೀ (ಕಾಲ್) ಕಹಯೋ ಜಸ್ ಕೀನ್ಹಾ । ಸೋ ವಚನ್ ಮಾನ್ ಹಮ್ ಲೀನ್ಹಾ ॥
ಅಬ್ ನಹೀಂ ಜೀವ್ ತುಮ್ಹಾರಾ ಭ್ರಮಾವ್ಯೆಂ । ಹಮ್ ನಹೀಂ ಕಬಹೂ ಗುರೂ ಕಹಾವ್ಯೆಂ ॥

**"ಜ್ಞಾನೀ (ಕಬೀರ್‌ರ) ವಚನ್"**

ಸುನ್ ಜ್ಞಾನೀ ಬಹುತೆ ಹಂಸಾಈ । ದೂತನ್ ದುಷ್ಟ್ ಬಂಧ್ ನ ಛೋಡೋ ಜಾಈ ॥
ಪಲ್ ಇಕ್ ಜೀವನ್ ಸುಖ್ ದೀನಾ । ತಬ್ ಸಂಸಾರ್ ಗಮನ್ ಹಮ್ ಕೀನ್ಹಾ ॥

**ಭಾವಾರ್ಥ:–** ಕಬೀರ್ ಪರಮೇಶ್ವರರು ಹೇಳಿರುವಂತೆ ಯಾರಾದರೂ ನಕಲಿ ಸದ್ಗುರುವಾಗಿ ಅಹಂಕಾರದಿಂದ ಕಾಲ ಪ್ರೇರಣೆಯಿಂದ ಮುಗ್ಧ ಶಿಷ್ಯರನ್ನು ಭ್ರಮಿಸುತ್ತಿದ್ದರು. ಅವರಿಗೂ ದಂಡ ಕೊಡುತ್ತಾರೆ, ಅವರಿಗೂ ನರಕದಲ್ಲಿ ತಳ್ಳಿ ಕಷ್ಟಗಳನ್ನು ನೀಡಲಾಗುತ್ತದೆ. ಅವರ ಶಿಷ್ಯರನ್ನು ನರಕಕ್ಕೆ ತಳ್ಳುತ್ತಾರೆ. ಕಬೀರ ಪರಮೇಶ್ವರರು ನರಕದ ಬಳಿ ಹೋಗಿ ನೋಡಿದಾಗ ಹಸಿದ ನಕಲಿ ಸದ್ಗುರುಗಳು ಅಲ್ಲಿದ್ದರು. ಲಕ್ಷಾಂತರ ಜೀವಗಳನ್ನು ಶಿಷ್ಯರನ್ನಾಗಿ ಮಾಡಿದ್ದರು. ಅವರನ್ನೆಲ್ಲಾ ನರಕಕ್ಕೆ ಜೊತೆಯಲ್ಲಿ ಕರೆತಂದಿದ್ದರು. ಪರಮೇಶ್ವರನ ವಿಧಾನನುಸಾರ ಅವರನ್ನು ನರಕದಲ್ಲಿ ಹಾಕಲಾಯಿತು. ಆ ನರಕದಲ್ಲಿ ಹೋಮಕುಂಡಗಳಂಥ ಅನೇಕ ಕುಂಡಗಳಿದ್ದವು. ಪ್ರತೀ ಕುಂಡದಲ್ಲೂ ಜೀವಾತ್ಮಗಳಿದ್ದವು ಹಾಗೂ ಯಮದೂತರು ಅವರನ್ನು ಸತಾಯಿಸುತ್ತಿದ್ದರು. ಆ 28 ಲಕ್ಷ ನಕಲಿ ಸದ್ಗುರುಗಳು ನನ್ನನ್ನು ನೋಡಿ, 'ನಮ್ಮನ್ನು ರಕ್ಷಿಸಿ ಪ್ರಭು!' ಎಂದು ಪ್ರಾರ್ಥಿಸಿದರು. ಇದಕ್ಕೆ ಕಾರಣವೇನೆಂದರೆ ನರಕದಲ್ಲಿ ಅವರನ್ನು ಹಿಂಸೆ ಕೊಡುತ್ತಿದ್ದ ಯಮದೂತರು ಕಬೀರ ಪರಮೇಶ್ವರರನ್ನು ನೋಡಿ ಗಡಗಡ ನಡುಗಲು ಪ್ರಾರಂಭಿಸಿದರು. ಹಾಗಾಗಿ ನಕಲಿ ಸದ್ಗುರುಗಳಿಗೆ ಇವರಲ್ಲೇನೋ ಪರಮಶಕ್ತಿ ಇದೆ ಎಂದು ಅನ್ನಿಸಿತ್ತು. ಪರಮೇಶ್ವರ ಕಬೀರರು ಹೇಳಿದರು, ನೀವು ಮುಗ್ಧ ಜೀವಾತ್ಮಗಳನ್ನು ಭ್ರಮೆಗೊಳಗಾಗಿಸಿದ್ದೀರಿ. ನಿಮ್ಮನ್ನು ನೀವೇ ಸದ್ಗುರು ಎಂದು ಕರೆದುಕೊಂಡಿದ್ದೀರಿ. ನಿಮಗೆ ಗೋತ್ತಿತ್ತು ನಿಮ್ಮ ಬಳಿ ನಾಮದೀಕ್ಷೆಯ ಅಧಿಕಾರವಿಲ್ಲವೆಂದು, ನಿಮಗೆ ಪೂರ್ಣ ಮೋಕ್ಷದ ಜ್ಞಾನವಿಲ್ಲ. ಲಕ್ಷಾಂತರ ಮನುಷ್ಯರ ಅಮೂಲ್ಯ ಜೀವನವನ್ನು ನಿಮ್ಮ ಸ್ವಾರ್ಥಕ್ಕಾಗಿ ಹಾಳು ಮಾಡಿದ್ದೀರಿ. ಅವರು ಕಾಲನ ಬಲೆಯಲ್ಲಿ ಸಿಲುಕಿದ್ದಾರೆ." ಎಂದು ಹೇಳಿದರು. ನಂತರ ನಾನು ಆ ದೂತರನ್ನು ಮತ್ತು ಅನ್ಯ ಯಮದೂತರನ್ನು ಹೊಡೆದೆ, ಎಳೆದೆಳೆದು ಹೊಡೆದೆ. ಆಗ ನಕಲಿ ಸದ್ಗುರುಗಳು ಹೇಳಿದರೇನೆಂದರೆ, ನಾವಂತು ನಮ್ಮ ಮಾಲಿಕ ಕಾಲಬ್ರಹ್ಮನ ಆಜ್ಞೆಯನ್ನು ಪಾಲಿಸಿದೆವು. ಇನ್ನು ಮುಂದೆ ನೀವು ಹೇಳಿದಂತೆ ಕೇಳುತ್ತೇವೆ ಎಂದರು. ನಾನು ಹೇಳಿದೆ ಈಗ ನಿಮ್ಮನ್ನು ಬಿಡಲಾಗುವುದಿಲ್ಲ. ಯಾವ ಜೀವಾತ್ಮಗಳು ಆ ನಕಲಿ ಗುರುಗಳ ಶಿಷ್ಯರಾಗಿ ಜೀವನ ನಷ್ಟ ಮಾಡಿಕೊಂಡಿದ್ದರೊ, ಅವರು ಕೂಡ ಅವರೊಂದಿಗೆ ನರಕದಲ್ಲಿದ್ದರು. ಎಲ್ಲಿಯವರೆಗೆ ನಾನು (ಕಬೀರ ಪರಮೇಶ್ವರರು) ಅಲ್ಲಿ ಇದ್ದೆ, ಆ ಜೀವಾತ್ಮಗಳಿಗೆ ನರಕದ ಕಷ್ಟವಾಗುತ್ತೀರಲಿಲ್ಲ. ಈ ರೀತಿ ಅವರಿಗೆ ಸ್ವಲ್ಪ ಸಮಯ ಸುಖ ನೀಡಿ ಅಲ್ಲಿಂದ ಹೊರಟು ಪ್ರಪಂಚಕ್ಕೆ ಬಂದೆ. ನಾನು ಬಂದ ನಂತರ ಆ ನಕಲಿ ಗುರುಗಳು ಹಾಗು ಅವರ ಪೆದ್ದ ಶಿಷ್ಯರಿಗೆ ಮತ್ತೇ ನರಕದ ಯಾತನೆ ಪ್ರಾರಂಭವಾಯಿತು. ಹಾಗಾಗಿ ಮೆಲಿನ ವಾಣಿಯಲ್ಲಿ ಹೇಳಲಾಗಿದೇನೆಂದರೆ, ಯಾರೋ ಪ್ರಚಾರಕ ತನ್ನನ್ನು ಗುರು ಎಂದುಕೊಂಡರೆ ಪರಮೇಶ್ವರನು ಮುನಿದುಕೊಳ್ಳುವನು ಮತ್ತು ಕಾಲನು ಕಿವಿ ತಿರುಚುವನು ಅಂದರೆ ಕಷ್ಟ ಕೊಡುತ್ತಾನೆ. ಅದ್ದರಿಂದ ಹೇ ಸಜ್ಜನರೇ, ಎಂದಿಗೂ ಅಂಥಾ ತಪ್ಪು ಮಾಡಬೇಡಿ. ನನ್ನ ವಚನವನ್ನು ಸತ್ಯವೆಂದು ತಿಳಿ.

## ಭಕ್ತನ ಸ್ವಭಾವ ಹೇಗಿರಬೇಕು?

**(ಅನುರಾಗ್ ಸಾಗರ್‌ದ 6ನೇ ಪುಟದ ವಾಣಿ ಸಂಖ್ಯೆ 7ರಿಂದ 17)**

**ಧರ್ಮದಾಸ್ ವಚನ್**

ಮೃತಕ್ ಭಾವ್ ಪ್ರಭು ಕಹೋ ಬುಝಾಈ । ಜಾತೆ ಮನಕೀ ತಪನಿ ನಸಾಈ ॥
ಕೇಹಿ ವಿಧಿ ಮೃತಕ್ ಹೋ ಯಹ್ ಜೀವನ್ । ಕಹೋ ವಿಲೋಯ್ ನಾಥ್ ಅಮೃತ್‌ಧನ್ ॥

**ಕಬೀರ್ ವಚನ್–ಮೃತಕ್ ದೃಷ್ಟಾಂತ (ಉದಾಹರಣೆ)**

ಧರ್ಮದಾಸ್ ಯಹ್ ಕಠಿನ್ ಕಹಾನೀ । ಗುರುಗಮ್ ತೆ ಕೋಈ ವಿರಲೇ ಜಾನೀ ॥

**ಭೃಂಗಿಯ ದೃಷ್ಟಾಂತ (ಉದಾಹರಣೆ)**

ಮೃತಕ್ ಹೋಯ್ ಕೇ ಖೋಜಹಿಂ ಸಂತಾ । ಶಬ್ದ್ ವಿಚಾರಿ ಗಹೈಂ ಮಗು ಅನ್ತಾ ॥

ಜೈಸೆ ಭೃಂಗ್ ಕೀಟ್ ಕೇ ಪಾಸಾ । ಕೀಟ್ ಗಹೋ ಭೃಂಗ್ ಶಬ್ದ್ ಕೀ ಆಶಾ ॥
ಶಬ್ದ್ ಘಾತ್ ಕರ್ ತೇಹೀ ಮಹ್ಯೆಂ ಡಾರೇ । ಭೃಂಗೀ ಶಬ್ದ್ ಕೀಟ್ ಜೋ ಧಾರೇ ॥
ತಬ್ ಲೈಗೌ ಭೃಂಗೀ ನಿಜ್ ಗೇಹಾ । ಸ್ವಾತೀ ದೇಹ್ ಕೀನ್ಹೋ ಸಮದೇಹಾ ॥
ಭೃಂಗೀ ಶಬ್ದ್ ಕೀಟ್ ಜೋ ಮಾನಾ । ವರಣ್ ಫೇರ್ ಆಪನ್ ಕರಜಾನಾ ॥
ಬಿರಲಾ ಕೀಟ್ ಜೋ ಹೋಯ್ ಸುಖದಾಈ । ಪ್ರಥಮ್ ಅವಾಜ್ ಗಹೇ ಚಿತಲಾಈ ॥
ಕೋಇ ದೂಜೇ ಕೋಇ ತೀಜೇ ಮಾನ್ಯೆ । ತನ್ ಮನ್ ರಹಿತ್ ಶಬ್ದಿ ಹಿತ್ ಜಾನ್ಯೆ ॥
ಭೃಂಗೀ ಶಬ್ದ್ ಕೀಟ್ ನಾ ಗಹಈ । ತೌ ಪುನಿ ಕೀಟ್ ಆಸರೇ ರಹಈ ॥
ಏಕ್ ದಿನ್ ಕೀಟ್ ಗಹೇಸೀ ಭೃಂಗ್ ಭಾಷಾ । ವರಣ್ ಬದಲೈ ಪೂರವೈ ಆಶಾ ॥

**ಮೃತಕ್‌ನ ಮತ್ತಷ್ಟು ದೃಷ್ಟಾಂತಗಳು**

**(ಅನುರಾಗ್ ಸಾಗರ್‌ದ ಪುಟ 7ರಿಂದ ವಾಣಿ ಸಂ.7 ರಿಂದ 20)**

ಸುನಹು ಸಂತ್ ಯಹ್ ಮೃತಕ್ ಸುಭಾಊ । ಬಿರಲಾ ಜೀವ್ ಪೀವ್ ಮಗ್ ಧಾಊ ॥
ಔರೈ ಸುನಹು ಮೃತಕ್ ಕಾ ಭೇವಾ । ಮೃತಕ್ ಹೋಯ್ ಸತ್‌ಗುರು ಪದ್ ಸೇವಾ ॥
ಮೃತಕ್ ಛೋಹ್ ತಜೈ ಶಬ್ದ್ ಉರಧಾರೇ । ಛೋಹ್ ತಜೈ ತೋ ಜೀವ್ ಉಬಾರೇ ॥

**ಪೃಥ್ವೀಯ ದೃಷ್ಟಾಂತ**

ಜಸ್ ಪೃಥ್ವೀ ಕೇ ಗಂಜನ್ ಹೋಈ । ಚಿತ್ ಅನುಮಾನ್ ಗಹೇ ಗುಣ್ ಸೋಈ ॥
ಕೋಈ ಚಂದನ್ ಕೋಈ ವಿಷ್ಟಾ ಡಾರೇ । ಕೋಈ ಕೋಈ ಕೃಷಿ ಅನುಸಾರೇ ॥
ಗುಣ್ ಔಗುಣ್ ತಿನ್ ಸಮಕರ್ ಜಾನಾ । ತಜ್ ವಿರೋಧ್ ಅಧಿಕ್ ಸುಖ್‌ಮಾನಾ ॥

**ಕಬ್ಬಿನ ದೃಷ್ಟಾಂತ**

ಔರೋ ಮೃತಕ್ ಭಾವ್ ಸುನಿ ಲೇಹೂ । ನಿರಖಿ ಪರಖಿ ಗುರೂ ಮಗು ಪಗು ದೇಹೂ ॥
ಜೈಸೆ ಈಖ್ ಕಿಸಾನ್ ಉಗಾವೈ । ರತೀ ರತೀ ಕರ್ ದೇಹ್ ಕಟಾವೇ ॥
ಕೋಲ್ಹೂ ಮಹಂ ಪುನಿ ತಾಹೀ ಪಿರಾವೈ । ಪುನಿ ಕಡಾಹ್ ಮೆಂ ಖೂಬ್ ಉಂಟಾವೇ ॥
ನಿಜ್ ತನು ದಾಹೇ ಗುಡ್ ತಬ್ ಹೋಈ । ಬಹುರಿ ತಾವ್ ದೇ ಖಾಂಡ್ ವಿಲೋಈ ॥
ತಾಹೂ ಮಾಂಹಿ ತಾವ್ ಪುನಿ ದೀನ್ಹಾ । ಚೀನೀ ತಬ್ಹೈ ಕಹಾವನ್ ಲೀನ್ಹಾ ॥
ಚೀನೀ ಹೋಯ್ ಬಹುರಿತ್ ತನ್ ಜಾರಾ । ತಾತೇ ಮಿಸರೀ ಹ್ವೈ ಅನುಸಾರಾ ॥
ಮಿಸರೀತೇ ಜಬ್ ಕಂದ್ ಕಹಾವಾ । ಕಹೇ ಕಬೀರ್ ಸಬಕೇ ಮನ್ ಭಾವಾ ॥
ಯಹೀ ವಿಧಿತೇ ಜೋ ಶಿಷ್ ಕರಹೀ । ಗುರು ಕೃಪಾ ಸಹಜೇ ಭವ್ ತರಈ ॥

**ಭಾವಾರ್ಥ:– ಅನುರಾಗ್ ಸಾಗರ್‌ದ ಪುಟ 7 ರಲ್ಲಿ ಬರೆದ ವಾಣಿ ಸಂ. 7ರಿಂದ 17 ರವರೆಗಿನ ಭಾವಾರ್ಥವೇನೆಂದರೆ ಧರ್ಮದಾಸನು ಪರಮೇಶ್ವರ ಕಬೀರರನ್ನು ವಿನಮ್ರತೆಯಿಂದ ಪ್ರಶ್ನಿಸಿದರು. "ಹೇ ಪ್ರಭು! ಮೃತಕರ ಸ್ವಭಾವ ಹೇಗಿರುತ್ತದೆ ಎಂದು ನನಗೆ ತಿಳಿಸಿ? ಬದುಕಿದ್ದು ಸಾಯುವುದು ಹೇಗೆ? ಅಮರ ಪರಮಾತ್ಮ! ಹೇ ಸ್ವಾಮಿ! ಕೃಪೆ ಇಟ್ಟು ನಿಷ್ಕರ್ಷ ತೆಗೆದು ಆ ಅಮೃತ ಧನ ಅರ್ಥಾತ್ ಅಮರನಾಗುವ ಮಾರ್ಗ ಹೇಳಿ."**

**"ಪರಮೇಶ್ವರ ಕಬೀರ್ ವಚನ=ಮೃತಕ್ ನ ದೃಷ್ಟಾಂತ"**

**ಪರಮೇಶ್ವರ ಕಬೀರರೆಂದರು, ಹೇ ಧರ್ಮದಾಸ! ನಿಮ್ಮ ಪ್ರಶ್ನೆಗೆ ಉತ್ತರ ಹೇಳಲು ಒಂದು ಜಟಿಲ ಕಥಾ ಪ್ರಸಂಗವನ್ನು ಹೇಳುತ್ತೇನೆ. ಸದ್ಗುರುವಿನ ಆಶ್ರಯದಲ್ಲಿ ಇದ್ದು ಜ್ಞಾನ ಪಡೆಯಲು ಇಚ್ಛಿಸುವವನೇ ಇದನ್ನು ತಿಳಿದುಕೊಂಡು ಈ ಪರೀಕ್ಷೆಯಲ್ಲಿ ಉತ್ತೀರ್ಣನಾಗುವನು."**

**"ಭೃಂಗಿಯ ದೃಷ್ಟಾಂತ"**

**ಸಂತ–ಸಾಧಕರು ಬದುಕಿದ್ದು ಮೃತರಾಗಿ ಪರಮಾತ್ಮನನ್ನು ಹುಡುಕುತ್ತಾರೆ. ಯಥಾರ್ಥವಾದ ನಾಮ ಮಂತ್ರಗಳನ್ನು ತಿಳಿದುಕೊಂಡು, ಅದರ ಬಗ್ಗೆ ಚಿಂತಿಸಿ, ಆ ಮಾರ್ಗದ ಅಂತಿಮ**

ಗುರಿಯವರೆಗೆ ತಲುಪುತ್ತಾರೆ ಅರ್ಥಾತ್ ಪೂರ್ಣ ಮೋಕ್ಷವನ್ನು ಪಡೆಯುತ್ತಾರೆ.

ಭೃಂಗವೆಂದರೆ ರೆಕ್ಕೆಯುಳ್ಳ ಒಂದು ಕೀಟ. ಅದು ಕಡು ನೀಲಿ ಬಣ್ಣದ್ದಾಗಿರುತ್ತದೆ ಹಾಗೂ ಜೇ-ಜೇ ಎಂಬ ಶಬ್ದವನ್ನು ಮಾಡುತ್ತಿರುತ್ತದೆ. ಅದನ್ನು ದುಂಬಿ ಎಂದೂ ಕರೆಯುತ್ತಾರೆ. ಅದು ಬೇರೆ ಭೃಂಗಗಳ ಜೊತೆ ಸೇರಿ ತನ್ನ ಸಂತಾನವನ್ನು ಉತ್ಪತ್ತಿ ಮಾಡುವುದಿಲ್ಲ. ಅದು ಒಂದು ವಿಶೇಷವಾದ ಕೀಟದ ಬಳಿ ತೆರಳುತ್ತದೆ ಹಾಗೂ ಜೇ ಎಂದು ಶಬ್ದಮಾಡುತ್ತದೆ. ಆ ಶಬ್ದದಿಂದ ಯಾವ ಕೀಟ ಆಕರ್ಷಿತವಾಗುತ್ತದೊ, ಅದನ್ನು ತೆಗೆದುಕೊಂಡು ತಾನು ತಯಾರಿಸಿದ ಮಣ್ಣಿನ ಒಂದು ಪುಟ್ಟ ಗೂಡಿನಲ್ಲಿ ಇಡುತ್ತದೆ. ಅದು ಗೋಲಾಕಾರದ ಎರಡು ಇಂಚು ಸುತ್ತಳತೆಯುಳ್ಳ ಎರಡು ದ್ವಾರದ್ದಾಗಿರುತ್ತದೆ. ಹೀಗೆ ಹಲವಾರು ಕೀಟಗಳನ್ನು ಅಲ್ಲಿ ಇಡುತ್ತದೆ. ಮತ್ತೆ ಅವುಗಳಿಗೆ ತನ್ನ ಜೇ-ಜೇ ಎಂದು ಶಬ್ದಮಾಡುತ್ತೀರುತ್ತದೆ. ನಂತರ ತನ್ನ ಬಾಯಿಂದ ಇಬ್ಬನಿಯ ಹನಿಯನ್ನು ತೆಗೆದುಕೊಂಡು ಹೋಗಿ ಆ ಕೀಟಗಳ ಬಾಯಿಯಲ್ಲಿ ಹಾಕುತ್ತದೆ. ಕೀಟಗಳು ಆ ಭೃಂಗ ಅಂದರೆ ದುಂಬಿಯ ನಿರಂತರವಾಗಿ ಶಬ್ದವನ್ನು ಕೇಳಿ ಅದೆ ಬಣ್ಣದ್ದಾಗಿಬಿಡುತ್ತವೆ. ಹಾಗು ಅದರಂತೆಯೆ ರೆಕ್ಕೆಗಳು ಬರುತ್ತವೆ. ಅವು ಶಬ್ದ ಕೂಡ ಅದೇ ರೀತಿ ಜೇ-ಜೇ ಮಾಡತ್ತಾ ದುಂಬಿಯಾಗಿ ಮಾರ್ಪಡುತ್ತವೆ. ಇದೇ ರೀತಿ ಪೂರ್ಣ ಸಂತ ತನ್ನ ಜ್ಞಾನವನ್ನು ದುಂಬಿಯಂತೆ ಪದೆ-ಪದೆ ಹೇಳುತ್ತಾ ಸಾಮಾನ್ಯ ಜನರನ್ನೂ ತನ್ನ ಭಕ್ತರನ್ನಾಗಿಸಿಕೊಳ್ಳುತ್ತಾರೆ. ಮತ್ತು ಆ ಭಕ್ತ ಕೂಡ ಸದ್ಗುರುವಿನಿಂದ ಕೇಳಿದ ಜ್ಞಾನವನ್ನು ಬೇರೆ ಜನರಿಗೆ ಹೇಳತೊಡಗುತ್ತಾನೆ. ಸಮಾಜದ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ತ್ಯಜಿಸಿದ್ದಕ್ಕೆ ಅನ್ಯ ಜನರು ಹೇಳುತ್ತಾರೆ, ಇವನಂತು ಬದಲಾಗಿಬಿಟ್ಟಿದ್ದಾನೆ. ಭಕ್ತನಾಗಿಬಿಟ್ಟ. ಹೇಗೆ ಭೃಂಗ (ದುಂಬಿ) ಕೀಟಗಳನ್ನು ತನ್ನ ಶಬ್ದ ಕೇಳಿಸುವಾಗ ಯಾವುದೊ ಶೀಘ್ರವಾಗಿ ಸಕ್ರೀಯಗೊಳ್ಳುತ್ತವೆ, ಯಾವುದೊ ಎರಡು ಬಾರಿ, ಯಾವುದೊ ಮೂರು ಬಾರಿ ಪ್ರಯತ್ನಪಡುವುದರಿಂದ ಒಪ್ಪುತ್ತದೆ. ಇದೆ ರೀತಿ ಯಾವಾಗ ಸದ್ಗುರು ಕೆಲವು ಜನರನ್ನು ತನ್ನ ಪ್ರವಚನ ಪದೆ-ಪದೆ ಹೇಳುವಾಗ ಯಾರೊ ಒಳ್ಳೆಯ ಸಂಸ್ಕಾರವುಳ್ಳವನಂತು ಶೀಘ್ರವಾಗಿ ಒಪ್ಪಿಕೊಳ್ಳುತ್ತಾನೆ, ಯಾರೊ ಒಂದೆರಡು ಬಾರಿ ಪ್ರವಚನ ಕೇಳಿ ಮಾರ್ಗ ಗ್ರಹಿಸಿ, ದೀಕ್ಷೆ ಪಡೆದುಕೊಳ್ಳುತ್ತಾನೆ. ಕೆಲವು ಕೀಟಗಳು ಬಹಳ ದಿನಗಳ ನಂತರ ತನ್ನ ಸ್ವಭಾವ ಬದಲಿಸುತ್ತವೆ, ಒಂದು ವೇಳೆ ಆ ಕೀಟ ಭೃಂಗವಾಗಿ ಮಾರ್ಪಡದಿದ್ದರೂ, ದೀರ್ಘಕಾಲ ಭೃಂಗದ ಜೊತೆ ಇದ್ದರೆ ಖಂಡಿತವಾಗಿಯೂ ಒಂದಲ್ಲ ಒಂದು ದಿನ ಪರಿವರ್ತನೆಯಾಗುತ್ತದೆ. ಪರಮೇಶ್ವರ ಕಬೀರರು ಹೆಳಿದರು ಹೇ ಧರ್ಮದಾಸ! ಇದೇ ರೀತಿ ಶಿಷ್ಯನು ಗುರುವಿನ ವಿಚಾರಗಳನ್ನು ಕೇಳುತ್ತಿದ್ದರೆ ಆ ಕೀಟದಂತೆ ಪ್ರಭಾವಿತನಾಗಿ ಪ್ರಾಪಂಚಿಕ ಭಾವನೆಗಳನ್ನು ಬದಲಿಸಿಕೊಂಡು ಭಕ್ತನಾಗಿ ಹಂಸ ಸ್ಥಿತಿಯನ್ನು ಹೊಂದುವನು.

ಪುಟ ಸಂಖ್ಯೆ 7ರ ವಾಣಿ ಸಂಖ್ಯೆ 7 ರಿಂದ **20** ರವರೆಗಿನ ಭಾವಾರ್ಥ:-

ಕಬೀರರೆಂದರು ಹೇ ಸಂತರೇ, "ಮೃತಕನ ಸ್ವಭಾವವನ್ನು ಕೇಳಿ. ಈ ರೀತಿಯಲ್ಲಿ ಯಾರೋ ಒಬ್ಬರು ವಿರಳವಾಗಿ ಮಾತ್ರ ಅನುಸರಿಸಲು ಸಾಧ್ಯ. ಅಂಥವರು ಪೀವ್ ಅಂದರೆ ಪರಮಾತ್ಮನನ್ನು ಪಡೆಯುವ ಮಗ್ ಅಂದರೆ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಮೇಲೆ ತಿಳಿಸಿದ ಅಂದರೆ ಭೃಂಗಿಯ ಉದಾಹರಣೆಯ ಹೊರತಾಗಿ ಮತ್ತೆ ಕೇಳಿ ಮೃತಕನ ಭಾವಾರ್ಥ ಅದರಿಂದ ಮೃತಕ ಅಂದರೆ ಬದುಕಿದ್ದು ಮರಣಹೊಂದಿ ಸದ್ಗುರುವಿನ ಪದ್ (ಪದ್ಧತಿಯ) ಅನುಸಾರ ಸಾಧನೆ ಮಾಡುತ್ತಾನೆ".


"ಪೃಥ್ವೀಯ ಉದಾಹರಣೆ"

ಪೃಥ್ವಿಯಲ್ಲಿ ಸಹನಾಶೀಲತೆ ಇರುತ್ತದೆ. ಯಾರು ಪೃಥ್ವಿಯಂಥ ಗುಣವನ್ನು ಹೊಂದುತ್ತಾನೋ, ಅವನನ್ನು ಜೀವಂತ ಮೃತಕ ಎನ್ನುತ್ತಾರೆ ಮತ್ತು ಅವನೇ ಯಶಸ್ಸನ್ನು ಕಾಣುತ್ತಾನೆ. ಭೂಮಿಯ ಮೇಲೆ ಯಾರೋ ಮಲವಿಸರ್ಜನೆ ಮಾಡುತ್ತಾರೆ. ಎಸೆಯುತ್ತಾರೆ, ಇನ್ಯಾರೋ ವ್ಯವಸಾಯ ಮಾಡಲು ಉಳುತ್ತಾರೆ, ಅದನ್ನು ಸೀಳುತ್ತಾರೆ, ಮತ್ತೊಬ್ಬರು ಭೂಮಿಯನ್ನು ಪೂಜಿಸುತ್ತಾರೆ. ಭೂಮಿ ಗುಣಾವಗುಣಗಳನ್ನು ನೋಡುವುದಿಲ್ಲ. ಯಾರು ಯಾವ ಭಾವನೆಯಿಂದಿರುತ್ತಾರೋ

ಅವರು ಹಾಗೆಯೇ ಮಾಡುತ್ತಾರೆ. ಆದರೆ ಭೂಮಿಯು ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಸುಖವಾಗಿರುತ್ತದೆ. ಅಂದರೆ ಹೇಗೆ ಜಮೀನು ಸಹನೆಯಿಂದ ಇರುವುದೋ, ಭಕ್ತನ ಸ್ವಭಾವವು ಹಾಗೆಯೇ ಇರಬೇಕು. ಯಾರು ಏನೇ ಹೇಳಿದರೂ, ಎಷ್ಟೇ ಅವಮಾನಮಾಡಿದರೂ, ಎಷ್ಟೇ ಗೌರವಿಸಿದರೂ, ತನ್ನ ಉದ್ದೇಶಕ್ಕಾಗಿ ಧೃಡವಾಗಿದ್ದು ಮುನ್ನಡೆದರೆ ಭಕ್ತನು ಯಶಸ್ಸನ್ನು ಕಾಣುವನು.

"ಕಬ್ಬಿನ ದೃಷ್ಟಾಂತ"

ರೈತನು ಕಬ್ಬನ್ನು ಬೆಳೆಯುತ್ತಾನೆ. ಕಬ್ಬನ್ನು ಬೆಳೆಯಲು ಕಬ್ಬಿನ ತುಂಡುಗಳನ್ನು ಒಂದೊಂದು ಅಡಿ ಅಂತರದಲ್ಲಿ ಭೂಮಿಯಲ್ಲಿ ನೆಡುತ್ತಾನೆ. ಕಬ್ಬು ಬೆಳೆದು ಬಲಿತ ಮೇಲೆ ಅದನ್ನು ಗಾಣದಲ್ಲಿ ಅರೆಯಲಾಗುತ್ತದೆ. ನಂತರ ಕಬ್ಬಿನ ರಸವನ್ನು ಕಡಾಯಿಯಲ್ಲಿ ಹಾಕಿ ಬೆಂಕಿಯ ಮೇಲಿಟ್ಟು ಕುದಿಸಲಾಗುತ್ತದೆ. ಆಗ ಬೆಲ್ಲ ಸಿದ್ಧವಾಗುತ್ತದೆ. ಬೆಂಕಿಯ ತಾಪವನ್ನು ಹೆಚ್ಚಿಸಿದಷ್ಟೂ ಅದು ಪಾಕವಾಗುತ್ತದೆ ಮತ್ತು ಹೆಚ್ಚು ಸ್ವಾದಿಷ್ಟವಾಗಿರುತ್ತದೆ. ಇನ್ನೂ ಕಾಯಿಸಿದಾಗ ಸಕ್ಕರೆಯಾಗುತ್ತದೆ. ಇನ್ನೂ ಹೆಚ್ಚು ಕಾಯಿಸಿದಾಗ ಕಲ್ಲು ಸಕ್ಕರೆಯಾಗುತ್ತದೆ. ಪರಮೇಶ್ವರರಾದ ಕಬೀರರು ಹೇಳಿದ್ದಾರೆ. "ಹೇ ಧರ್ಮದಾಸ, ಈ ರೀತಿ ಶಿಷ್ಯನು ಭಕ್ತಿ ಮಾರ್ಗದಲ್ಲಿ ಎಷ್ಟು ಕಷ್ಟಗಳನ್ನು ಸಹಿಸುತ್ತಾನೋ, ಅವನು ಪರಮಾತ್ಮನಿಗೆ ಅಷ್ಟೇ ಆಪ್ತನಾಗುತ್ತಾನೆ.


(८) 132 अनुरागसागर

मृतकभाव कौन धारण कर सकता है! छन्द

मिरतक भाव है कठिन धर्मनि, लहे विरलशूरहो ॥
कादर सुनतेहि तनमन दहै,पाछे न चितवतकूरहो॥
ऐसे शिष्य आप सम्हारे, नाव सही गुरुज्ञानको ॥
लहै भेदी भेद निश्चय, जाय दीप अमानको ॥६॥

मृतक ही साधु होता है

सोरठा–मृतक हो सो साधु, सो सतगुरुको पावई॥
मेटे सकल उपाध, तासु देव आसा करें ॥ ६ ॥

साधु किसे कहते हैं

साधूमार्ग कठिन धर्मदासा । रहनी रहे सो साधु सुवासा ॥
पांचों इन्द्री सम करि राखे ।नाम अमीरसनिशिदिन चाखे॥

चक्षुर्वशीकरण

प्रथमहिं चक्षु इन्द्री कहँ साधे। गुरु गम पंथ नाम अवराधे ॥
सुन्दर रूप चक्षुकी पूजा । रूप कुरूप न भावे दूजा ॥
रूप कुरूपहिं सम करजाने । दरस विदेह सदा सुख माने ॥

श्रवणवशीकरण

इन्द्री श्रवण वचन शुभ चाहै । उत्कट वचनसुनत चित दाहै॥
बोल कुबोल दोउ सह लेखे । हृदय शुद्ध गुरुज्ञान विशेखे ॥

नासिकावशीकरण

नासिका इन्द्री बास अधीना । यहि सम राखे संत प्रवीना॥

जिह्वावशीकरण

जिभ्या इन्द्री चाहै स्वादा । खट्टा मीठा मधुर सवादा ॥
सहज भावमें जो कछु आवे । रूखा फीका नहिं विलगावे ॥
जो कोई पंचामृत ले आवे । ताहि देख नहिं हरष चढ़ावे॥
तजे न रूखा साग अलूना । अधिक प्रेमसों पावें दूना ॥

अनुरागसागर 133 (९)

शिश्नवशीकरण

इन्द्री दुष्ट महा अपराधी ।कुटिलकाम होई विरलेसाधी॥
कामिनि रूप कालकी खानी । तजहु तासु सँग हो गुरुज्ञानी॥

कामवशीकरण

जबही काम उमंग तन आवे । ताहि समय जो आप जुगावे॥
शब्द विदेह सुरत ले राखे । गहिमन मौन नामरसचाखे ॥
जब निहतत्त्वमें जाय समाई । तबहीं काम रहे मुरझाई ॥

कामदेव लुटेरा है। छन्द

काम परबल अति भयंकर, महा दारुण काल हो॥
सुरदेव मुनिगणयक्षगंधर्व,सबहि कीन्ह विलास हो॥
सबहि लूटे विरल छूटे, ज्ञान गुण निज दृढ गहे ॥
गुरुज्ञान दीप समीप सतगुरु,भेदमारग तिन लहे॥७॥

कामलुटेरेसे बचने का उपाय

सोरठा–दीपक ज्ञान प्रकाश,भवन उजेरा करि रहो॥
सतगुरुशब्द विलास,भाज चोर अँजोरा जब॥७॥

अनलपक्षिका दृष्टान्त

गुरू कृपासों साधु कहावे । अनलपच्छ ह्वै लोक सिधावे॥
धर्मदास यह परखो बानी ।अनलपच्छ गम कहों बखानी॥
अनलपच्छ जो रहै अकाशा ।निशि दिन रहै पवनकी आशा॥
दृष्टिभाव तिनरति विधिठानी ।यहविधिगरभ रहेतिहिजानी ॥
अंडप्रकाश कीन्ह पुनि तहवां । निराधार आलंबहिं जहवां ॥
मारग माहिं पुष्ट भो अंडा । मारग माहिं बिरह नौखण्डा॥
मारग माहिं चक्षु तिन पावा । मारग माहिं पंख पर भावा॥
महि ढिग आवा सुधि भइताहीं। इहां मोर आश्रम नहिं आहीं॥
सुरति सम्हार चले पुनि तहवां ।मात पिताको आश्रम जहवां॥

ಅನುರಾಗ್ ಸಾಗರ್‌ದ **8** ಹಾಗೂ **9**ನೇ ಪುಟದ ಸಾರಾಂಶದ ಪ್ರಕಾರ, ಯಾರು ತನ್ನ ಎಲ್ಲಾ ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಳ್ಳುತ್ತಾರೋ ಅವನೇ ನಿಜವಾದ ಸಾಧಕ. ಏನು ಸಿಕ್ಕಿದೆಯೋ, ಅದರಲ್ಲೇ ತೃಪ್ತಿಪಟ್ಟುಕೊಳ್ಳಬೇಕು. ರೂಪಕ್ಕೆ ಮರುಳಾಗಬಾರದು. ಕುರೂಪವನ್ನು ನೋಡಿ ಅಸಹ್ಯಿಸಿಕೊಳ್ಳಬಾರದು. ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡಬೇಕು. ಹೊರಗಿನ ಚರ್ಮ ಕಪ್ಪು-ಬಿಳಿ ಇರಬಹುದು, ಆದರೆ ಶರೀರದಲ್ಲಿರುವ ಮೂಳೆ-ಮಾಂಸಗಳು ಒಂದೇ ರೀತಿಯಲ್ಲಿರುತ್ತದೆ. ಸ್ವಲ್ಪ ರೋಗ ಬಂದರೆ ಸಾಕು, ಕೊಳೆತು ನಾರುತ್ತದೆ. ಈ ರೀತಿ ವಿವೇಕದಿಂದ ಭಕ್ತಿ ಮಾಡಬೇಕು. ಯಾರಾದರೂ ಕೆಟ್ಟ ಮಾತಾಡಿದರೆ ದುಃಖಪಡಬಾರದು, ಹೊಗಳಿದರೆ ಸಂತೋಷಪಡಬಾರದು. ಅವರ ಬುದ್ಧಿಯ ಮಟ್ಟ ತಿಳಿದು ಶಾಂತವಾಗಿರಬೇಕು. ಯಾರಾದರೂ ಹಲ್ವ, ಪಾಯಸ, ಪಂಚಭಕ್ಷ್ಯ ಪರಮಾನ್ನಗಳನ್ನು ತಿನ್ನಿಸಿದರೆ, ಅದರಿಂದ ಆಕರ್ಷಿತವಾಗಬಾರದು. ಹಾಗಿದ್ದಾಗ ಅವನಿಗೆ ಕರ್ಮಫಲ ಖಂಡಿತವಾಗಿಯೂ ಸಿಗುವುದು. ಯಾರಾದರೂ ಒಣಕಲು ರೊಟ್ಟಿ ಕೊಟ್ಟರೆ ಅದನ್ನು ಪ್ರೀತಿಯಿಂದ ಸ್ವೀಕರಿಸಬೇಕು. ಕಾಮಕ್ಕೆ(**sex**) ಮಹತ್ವ ಕೊಡಬಾರದು.

ಇಂತಹ ಭಕ್ತನು ಮೋಕ್ಷವನ್ನು ಪಡೆಯುತ್ತಾನೆ. ಒಂದು ವೇಳೆ ಕಾಮವು ಭಾಧಿಸಿದರೆ ಅದನ್ನು ಭಕ್ತಿ ನಾಮಸ್ಮರಣೆಯಲ್ಲಿ ತೊಡಗಿಸಿ ಆನಂದ ಪ್ರಾಪ್ತಿಸಬೇಕು. ಆಗ ಕಾಮವಾಸನೆಯು ತನಗೆ ತಾನೇ ದೂರವಾಗುತ್ತದೆ. ಕಾಮವನ್ನು ನಾಶಮಾಡುವ ವಿಧಾನವೆಂದರೆ:–

ಕಬೀರ್, ಪರನಾರೀ ಕೋ ದೇಖಿಯೇ, ಬಹನ್ ಬೇಟೀ ಕಾ ಬಾವ್ ।
ಕಹ್ ಕಬೀರ್ ಕಾಮ್ ನಾಶ್ ಕಾ, ಯಹೀ ಸಹಜ್ ಉಪಾಯ್ ॥

## ಮೋಕ್ಷ ಪ್ರಾಪ್ತಿಯ ಅನ್ಯ ಭಾವ "ಅನಲ್(ಅಲಲ್) ಪಕ್ಷಿಯಂತಹ ಭಾವ"

ಒಂದು ವಾಯುಪಕ್ಷಿಯು ಆಕಾಶದಲ್ಲಿತ್ತು. ಈಗ ಅಂಥಾ ಪಕ್ಷಿಯು ಅವಸಾನವಾಗಿ ಬಿಟ್ಟಿದೆ. ಅದಕ್ಕೆ ನಾಲ್ಕು ಕಾಲುಗಳಿರುತ್ತಿದ್ದವು. ಮುಂದಿನ ಕಾಲುಗಳು ಚಿಕ್ಕವು ಹಾಗೂ ಹಿಂದಿನವು ದೊಡ್ಡವಾಗಿರುತ್ತಿದ್ದವು. ಅದರ ಆಕಾರವು ಬಹಳ ದೊಡ್ಡದಿರುತ್ತಿತ್ತು. ಅದಕ್ಕೆ ದೊಡ್ಡ ದೊಡ್ಡ ರೆಕ್ಕೆಗಳಿರುತ್ತಿದ್ದವು. ಆ ಪಕ್ಷಿಗೆ ನಾಲ್ಕು ಆನೆಗಳನ್ನು ಒಟ್ಟಿಗೆ ಎತ್ತಿ ಆಕಾಶದಲ್ಲಿ ಹಾರಾಡುತ್ತಾ, ತನ್ನ ಕುಟುಂಬದ ಬಳಿಗೆ ತೆಗೆದುಕೊಂಡು ಹೋಗುವ ಸಾಮರ್ಥ್ಯವಿತ್ತು. ಅದನ್ನು ಅಲಲ್ ಪಕ್ಷಿ ಎಂದು ಕರೆಯುತ್ತಿದ್ದರು.

ಆ ಪಕ್ಷಿ ಯಾವಾಗಲೂ ಗಾಳಿಯಲ್ಲೇ ಇರುತ್ತಿತ್ತು. ಅಲ್ಲಿಂದಲೇ ಹೆಣ್ಣು ಪಕ್ಷಿಯು ಮೊಟ್ಟೆಯಿಡುತ್ತಿತ್ತು. ಅದು ಯಾವಾಗಲೂ ಬಾಳೆಯ ತೋಟದಲ್ಲೇ ಮೊಟ್ಟೆ ಬೀಳುವಂತೆ ಮಾಡುತ್ತಿತ್ತು. ಏಕೆಂದರೆ ಬಾಳೆಯ ಮರ ಒಂದಕ್ಕೊಂದು ಅಂಟಿಕೊಂಡು ದಟ್ಟ ಅರಣ್ಯ ಹಾಗಿರುತ್ತಿತ್ತು. ಆನೆಗಳ ಸಮೂಹ ಕೂಡ ಬಾಳೆಯ ವನದಲ್ಲಿರುತ್ತಿದ್ದವು ಏಕೆಂದರೆ ಆನೆ ಬಾಳೆಯ ಗೊನೆಗಳನ್ನು ತಿಂದು ಮರದ ಮೇಲೆಯೇ ಮಲಗಿ ಮೋಜು ಮಸ್ತಿ ಮಾಡುತ್ತಿರುತ್ತದೆ. ಅಲಲ್ (ವಾಯು) ಪಕ್ಷಿಯ ಮೊಟ್ಟೆ ವಾಯುಮಂಡಲದಿಂದ ಕೆಳಗೆ ಭೂಮಿಗೆ ಬರುವಷ್ಟರಲ್ಲಿ ವಾಯುವಿನ ಘರ್ಷಣೆಯಿಂದ ಪರಿಪಕ್ವಗೊಳ್ಳುತ್ತಿತ್ತು. ಆ ಮೊಟ್ಟೆ ಬಾಳೆಯ ಮರದ ಮೇಲೆ ಬಿಳುತ್ತಿತ್ತು. ಬಾಳೆಯ ಮರಗಳು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ಮೊಟ್ಟೆಗೆ ಯಾವುದೆ ಹಾನಿ ಆಗುತ್ತಿರಲಿಲ್ಲ. ಬಾಳೆಯ ಮರಗಳನ್ನು ಮುರಿಯುತ್ತಾ ನಿಧಾನವಾಗಿ ನೆಲಕ್ಕೆ ಬಿದ್ದು ಎರಡು ಭಾಗವಾಗುತ್ತಿತ್ತು. ಗಾತ್ರದಲ್ಲಿ ಬಹಳ ದೊಡ್ಡ ಹಾಗೂ ಅದರ ಕವರ್ ಕೂಡ ಬಹಳ ಗಟ್ಟಿ ಇರುತ್ತಿತ್ತು. ಮೊಟ್ಟೆಯ ಕವರ್ ಹಾಗು ಮರಿಯ ಮಧ್ಯದಲ್ಲಿ ಮರಿಗೆ ಹಾನಿಯನ್ನುಂಟಾಗದಂತೆ ಒಂದು ಮೃದುವಾದ ಪದಾರ್ಥ ಇರುತ್ತಿತ್ತು. ಮೊಟ್ಟೆ ಪೃಥ್ವೀ ಮೇಲೆ ಬಿಳುವಾಗ ಅದರಿಂದ ಮರಿಗೆ ಹಾನಿಯಾಗುತ್ತಿರಲಿಲ್ಲ. ಅನಲ್ ಪಕ್ಷಿಯ ಮರಿ ಬೇರೆ ಪಕ್ಷಿಯ ಮರಿಗಳ ಜೊತೆ ಇರುತ್ತಿತ್ತು. ಆದರೆ ಅದಕ್ಕೆ ದಿನವೂ ಇದು ನನ್ನ ಕುಟುಂಬವಲ್ಲ ಎಂದು ಅದರ ಮನಸ್ಸಿನಲ್ಲಿ ಕೊರೆಯುತ್ತಿತ್ತು. ನನ್ನ ಕುಟುಂಬವಂತು ಮೇಲಿದೆ. ನಾನು ಅಲ್ಲಿಗೆ ಹೋಗಬೇಕು. ಅದು ಯೌವನಾವಸ್ಥೆಗೆ ಬಂದಾಗ ಆನೆಗಳ ಸಮೂಹದ ಮೇಲೆ ಆಕ್ರಮಿಸುತ್ತಿತ್ತು. ನಾಲ್ಕು ಆನೆಗಳನ್ನು ತನ್ನ ನಾಲ್ಕು ಪಂಜದಿಂದ ಮತ್ತು ಒಂದನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ತನ್ನ ಕುಟುಂಬಕ್ಕಾಗಿ ಆಹಾರ ತೆಗೆದುಕೊಂಡು ಮೇಲೆ ಹಾರಿ ಹೋಗುತ್ತಿತ್ತು.

ಇದೇ ರೀತಿ ಕಬೀರ ಪರಮೇಶ್ವರರು ಉದಾಹರಣೆ ನೀಡಿ ಭಕ್ತರಿಗೆ ಮಾರ್ಗದರ್ಶನ ನೀಡಿದರು ಏನೆಂದರೆ ನೀವು ಈ ಪ್ರಪಂಚದ ಶಾಶ್ವತ ವಾಸಿಗಳಲ್ಲ. ಇದನ್ನೆಲ್ಲಾ ಬಿಟ್ಟು ನೀವು ಹೋಗಲೇ ಬೇಕು. ನಿಮ್ಮ ಪರಿವಾರ ಮೇಲೆ ಸತ್ಯಲೋಕದಲ್ಲಿ ಇದೆ. ನೀವು ಈ ಭೂಮಿಯ ಮೇಲೆ ಬಿದ್ದಿರುವಿರಿ. ತತ್ವಜ್ಞಾನವನ್ನು ಪಡೆದ ಭಕ್ತನ ಮನಸ್ಸು ಆ ಅಲಲ್ ಪಕ್ಷಿಯ ಮಗುವಿನ ಹಾಗೆ ಇರಬೇಕು. ಎಲ್ಲಿಯವರೆಗೆ ಸತ್ಯಲೋಕಕ್ಕೆ ಹೋಗುವ ಸಮಯ ಬರುವುದಿಲ್ಲವೋ ಅಲ್ಲಿಯವರೆಗೆ ಸಮಾಜದ ವ್ಯಕ್ತಿಗಳೊಡನೆ ಶಿಷ್ಟಾಚಾರದಿಂದಿರಿ. ಹೋಗುವಾಗ ಯಾವುದೇ ಮೋಹಗಳಿರಬಾರದು. ತಮ್ಮ ನಾಮಸ್ಮರಣೆಯ ಸಂಪತ್ತು, ಪುಣ್ಯ ಧರ್ಮದ ಸಂಪತ್ತಿನೊಂದಿಗೆ ಹಾರಿ ಹೋಗುವುದು. ತಮ್ಮ ಪರಿವಾರದ ಹತ್ತಿರ ತಮ್ಮ ನಿಜವಾದ ಮನೆ, ಸತ್ಯಲೋಕಕ್ಕೆ ಹೋಗುವುದು.

ಅನುರಾಗ್ ಸಾಗರ್‌ದ 152ನೇ ಪುಟದ ಸಾರಾಂಶ:–

ಈ ಪುಟದಲ್ಲಿ ಕಬೀರ ಪರಮೇಶ್ವರರು ಶರೀರದ ಒಳಗಿರುವ ಗೂಢ ರಹಸ್ಯಗಳ ಬಗ್ಗೆ

ತಿಳಿಸಿದ್ದಾರೆ. ಈ ಮಾನವ ಶರೀರದಲ್ಲಿ 72 ನಾಡಿಗಳಿವೆ. ಅದರಲ್ಲಿ (ಈಡಾ, ಪಿಂಗಳಾ, ಸುಷ್ಮಣಾ) ತುಂಬಾ ಮುಖ್ಯವಾಗಿವೆ. "ಬ್ರಹ್ಮರಂಧ್ರವೆಂಬ" ಮತ್ತೊಂದು ವಿಶೇಷ ನಾಡಿ ಇದೆ.

ಪರಮೇಶ್ವರರು ಹೇಳಿದರು ಹೇ ಧರ್ಮದಾಸ! ಮನಸ್ಸೇ ಜ್ಯೋತಿ ನಿರಂಜನ. ಕೋತಿಯಾಡಿಸುವನಂತೆ ಇವನು ಜೀವಾತ್ಮಗಳನ್ನು ಇಲ್ಲಿ ಸತಾಯಿಸುತ್ತಿದ್ದಾನೆ. ಈ ಶರೀರದಲ್ಲಿ 5 ತತ್ವಗಳು 25 ಪ್ರಕೃತಿ ಹಾಗೂ 3 ಗುಣಗಳು ಇವು ಮೂರು ಕಾಲನ ಏಜೆಂಟ್‌ರಿದ್ದಾರೆ. ಜೀವಾತ್ಮವನ್ನು ಇವು ಮೋಸದಲ್ಲಿಡುತ್ತವೆ. ಈ ಶರೀರದಲ್ಲಿ ಕಾಲ ನಿರಂಜನ ಮತ್ತು ಜೀವಾತ್ಮ ಇವೆರಡರ ಭೂಮಿಕೆಯು ಮುಖ್ಯವಾದುದು. ಮನಸ್ಸಿನ ರೂಪದಲ್ಲಿ ಕಾಲ ನಿರಂಜನ ಎಲ್ಲಾ ರೀತಿಯ ಪಾಪಗಳನ್ನು ಮಾಡಿಸುತ್ತಾನೆ. ಪಾಪಗಳನ್ನು ಜೀವಾತ್ಮಗಳ ಮೇಲೆ ಹೇರಿಬಿಡುತ್ತಾನೆ.

ಅನುರಾರ್ ಸಾಗರ್‌ದ 153ನೇ ಪುಟದ ಸಾರಾಂಶ:–

ಕಾಲನು ಎಂಥಾ ಮೋಸ ಮಾಡಿರುವನೆಂದರೆ ಜೀವಾತ್ಮವು ಪರಮೇಶ್ವರನನ್ನು ಮರೆತು ಬಿಟ್ಟಿದೆ.

## "ಮನಸ್ಸು ಹೇಗೆ ಪಾಪ–ಪುಣ್ಯಗಳನ್ನು ಮಾಡಿಸುತ್ತದೆ"

ಮನಸ್ಸು ಕಾಲ–ಕ್ರೂರಿ, ಅದು ಜೀವಾತ್ಮನ್ನು ಸತಾಯಿಸುತ್ತದೆ. ಸುಂದರ ಸ್ತ್ರೀಯನ್ನು ನೋಡಿದರೆ ಅವಳ ಜೊತೆ ಭೋಗ ವಿಲಾಸದಲ್ಲಿರಬೇಕೆಂದು ಮನಸ್ಸು ಹಾತೊರೆಯುತ್ತದೆ. ಸ್ತ್ರೀಯರನ್ನು ಭೋಗಿಸಿ ಮನಸ್ಸು (ಕಾಲ ನಿರಂಜನನು) ಆನಂದಪಡೆದರೆ, ಪಾಪವು ಜೀವಾತ್ಮದ ಮೇಲೆ ಹೇರುತ್ತದೆ.

ವರ್ತಮಾನದಲ್ಲಿ ಸರ್ಕಾರವು ಸಾಕಷ್ಟು ಕಠಿಣ ನಿಯಮಗಳನ್ನು ಮಾಡಿದೆ. ಒಬ್ಬ ವ್ಯಕ್ತಿ ಯಾರಾದರೂ ಸ್ತ್ರೀಯ ಮೇಲೆ ಅತ್ಯಾಚಾರವೆಸಗಿದರೆ ಅವನಿಗೆ 10 ವರ್ಷದ ಶಿಕ್ಷೆ ವಿಧಿಸಲಾಗುತ್ತದೆ. ಒಂದೊಮ್ಮೆ ಕಿಶೋರಿಯರ ಮೇಲೆ ಅತ್ಯಾಚಾರವೆಸಗಿದರೆ ಅವನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗುತ್ತದೆ. ಮನಸ್ಸಿನ ಪ್ರೇರಣೆಯಿಂದ ಆನಂದ ಎರಡು ನಿಮಿಷದ್ದಾದರೆ ದುಃಖ ಬೆಟ್ಟದಷ್ಟು. ಆದ್ದರಿಂದ ಮನಸ್ಸನ್ನು ಮೊದಲೆ ಜ್ಞಾನದ ಹಗ್ಗದಿಂದ ತಡೆಯುವುದು ಒಳ್ಳೆಯದು.

ಅನುರಾಗ್ ಸಾಗರ್‌ದ 154ರ ಪುಟದ ಸಾರಾಂಶ:– ಪರರ ಆಸ್ತಿಯನ್ನು ನೋಡಿ ಮನಸ್ಸು ಅದನ್ನು ಕಬಳಿಸಲು ಪ್ರೇರೇಪಿಸುತ್ತದೆ. ಕಳ್ಳತನ ಮಾಡಿಸಿ ಜೀವಾತ್ಮಕ್ಕೆ ಶಿಕ್ಷೆ ನೀಡಿಸುತ್ತದೆ. ಪರನಿಂದೆ, ಪರಸ್ತ್ರೀ ವ್ಯಾಮೋಹ, ಪರರ ಆಸ್ತಿ ಕಬಳಿಕೆ ಇದೆಲ್ಲಾ ಪಾಪ. ಕಾಲಬ್ರಹ್ಮನು ಜೀವಾತ್ಮವನ್ನು ಇದೇ ರೀತಿ ಕರ್ಮದ ಬಂಧನದಲ್ಲಿ ಬಂಧಿಸಿಡುತ್ತಾನೆ. ಕಾಲನೇ ಸಂತನನ್ನು ವಿರೋಧಿಸುವಂತೆ, ಗುರುದ್ರೋಹಿಯಾಗುವಂತೆ ಮಾಡುತ್ತಾನೆ ಮನಸ್ಸಿನ ಮೂಲಕ. ಇದು ಘೋರ ಅಪರಾಧ.

### "ನಿರಂಜನ್ ಚರಿತ್ರ್=ಕಾಲನ ಬಲೆ"

ಪರಮೇಶ್ವರರು ಹೇಳಿದ್ದಾರೆ, ಹೇ ಧರ್ಮದಾಸ, ನಾನು ನಿನಗೆ ಧರ್ಮದ (ಧರ್ಮ್‌ರಾಯ–ಕಾಲನ) ಜಾಲವನ್ನು ತಿಳಿಸುತ್ತೇನೆ. ಕಾಲ ನಿರಂಜನನು ಶ್ರೀ ಕೃಷ್ಣನಲ್ಲಿ ಪ್ರವೇಶಿಸಿ ಗೀತೆಯ ಜ್ಞಾನವನ್ನು ನೀಡಿದ. ಅವನಿಗೆ ಕರ್ಮಯೋಗವೇ ಉತ್ತಮವೆಂದು ಹೇಳಿ ಯುದ್ಧ ಮಾಡಿಸಿದ. ಜ್ಞಾನಯೋಗದಿಂದ ಭ್ರಮಿತಗೊಳಿಸಿದ. ಅರ್ಜುನನಂತು ಮೊದಲೆ ಒಳ್ಳೆಯ ಮಾತು ಹೇಳುತ್ತಿದ್ದನು ಅದು ಜ್ಞಾನವಾಗಿತ್ತು. ಹೇಳುತ್ತಿದ್ದ ಏನೆಂದರೆ ಯುದ್ಧ ಮಾಡಿ ತಮ್ಮ ಕುಲದ ಅಣ್ಣ, ತಮ್ಮ, ಭಾವ, ಮೈದುನ, ಚಿಕ್ಕಪ್ಪ, ಮಾವ, ಸೋದರಮಾವ–ಇವರನ್ನೆಲ್ಲಾ ಸಾಯಿಸುವುದಕ್ಕಿಂತ ಭಿಕ್ಷೆ ಬೇಡಿ ಬದುಕುವುದೇ ಒಳ್ಳೆಯದು ಎನ್ನುತ್ತಿದ್ದನು. ಪಾಪದಿಂದ ಪ್ರಾಪ್ತಿಯಾಗುವ ರಾಜ್ಯದ ಆವಶ್ಯಕತೆ ನನಗೆ ಇಲ್ಲ ಎಂದು ಹೇಳುತ್ತಿದ್ದನು. ಆದರೆ ಅವನನ್ನು ಹೆದರಿಸಿ, ಬೆದರಿಸಿ, ಯುದ್ಧ ಮಾಡಿಸಿ, ನರಕಕ್ಕೆ ಹೋಗುವಂತೆ ಮಾಡಲಾಯಿತು. ಜ್ಞಾನಯೋಗದ ನೆಪ ಹೇಳಿ ಕರ್ಮಯೋಗಕ್ಕೆ ಒತ್ತು ಕೊಟ್ಟು, ಅವನಿಂದ ಮಹಾಪಾಪ ಮಾಡಿಸಲಾಯಿತು.

ಅನುರಾಗ್ ಸಾಗರ್‌ದ 155ರ ಪುಟದ ಸಾರಾಂಶ:–

ಧರ್ಮದಾಸನು ಪ್ರಭುವನ್ನು ಕೇಳಿದನು, ಹೇ ಪ್ರಭು, ನೀವು ಕಾಲನ–ಬಲೆ ತಿಳಿಸಿದಿರಿ, ಈಗ

ನಿಮ್ಮಪ್ರಾಪ್ತಿಗಾಗಿ ಜೀವಾತ್ಮವು ಏನು ಮಾಡಬೇಕೆಂದು? ದಯವಿಟ್ಟು ಹೇಳಿ.

"ಸದ್ಗುರು (ಕಬೀರರ) ವಚನ"

## "ಭಕ್ತನ 16 ಗುಣಗಳು (ಆಭೂಷಣ)"

ಪರಮೇಶ್ವರ ಕಬೀರರು ಹೇಳಿದರು, ಹೇ ಧರ್ಮದಾಸ! ಭವ್‌ಸಾಗರ ಅಂದರೆ ಕಾಲನ ಲೋಕದಿಂದ ಹೊರಬರಲು ಭಕ್ತಿಯ ಶಕ್ತಿಯ ಅವಶ್ಯಕತೆ ಇರುತ್ತದೆ. ಪರಮಾತ್ಮನನ್ನು ಪಡೆಯಲು ಜೀವಾತ್ಮದಲ್ಲಿ 16 ಗುಣಗಳಿರಬೇಕಾದದ್ದು ಅನಿವಾರ್ಯ. ಇದನ್ನು ಆತ್ಮದ 16 ಸಿಂಗಾರಗಳು ಎಂದು ಹೇಳಲಾಗುತ್ತದೆ.

**1) ಜ್ಞಾನ 2) ವಿವೇಕ್ 3) ಸತ್ಯ 4) ಸಂತೋಷ 5) ಪ್ರೇಮ ಭಾವ್ 6) ಧೀರಜ್ 7) ನಿರ್‌ಧೋಷಾ ( ಮೋಸ ಮಾಡದ) 8) ದಯಾ 9) ಕ್ಷಮಾ 10) ಶೀಲ್ 11) ನಿಷ್ಕರ್ಮಾ 12) ತ್ಯಾಗ 13) ಬೈರಾಗ್ 14) ಶಾಂತಿ ನಿಜ ಧರ್ಮಾ 15) ಭಕ್ತಿ ಕರ್ ನಿಜ್ ಜೀವ್ ಉಬಾರೈ 16) ಮಿತ್ರ ಸಮ್ ಸಬಕೊ ಚಿತ್ ಧಾರೈ।**

ಭಾವಾರ್ಥ:- ಪರಮಾತ್ಮನ ಪ್ರಾಪ್ತಿಗಾಗಿ ಭಕ್ತರಲ್ಲಿ ಕೆಲವು ವಿಶೇಷ ಗುಣಗಳಿರಬೇಕು. ಈ 16 ಆಭೂಷಣಗಳು ಅನಿವಾರ್ಯವಾಗಿವೆ.

1) ತತ್ವಜ್ಞಾನ ಪಡೆಯುವುದು 2) ವಿವೇಕದಿಂದ ವರ್ತಿಸುವುದು 3) ಸತ್ಯವನ್ನು ಹೇಳುವುದು. 4) ಪರಮಾತ್ಮನು ಕೊಟ್ಟಿದ್ರಲ್ಲಿ ಸಂತೋಷ ಪಡೆಯಿರಿ ಮತ್ತು ಅದು ಪರಮಾತ್ಮನ ಇಚ್ಛೆಯೆಂದು ತಿಳಿಯಿರಿ 5) ಪ್ರೇಮ ಭಾವದಿಂದ ಭಕ್ತಿಮಾಡಿ ಹಾಗು ಬೇರೆಯವರೊಂದಿಗೆ ಮೃದು ಭಾಷೆಯಲ್ಲಿ ಮಾತನಾಡಿ. 6) ಸದ್ಗುರು ಕೊಟ್ಟಿರುವ ಜ್ಞಾನದಿಂದ ಯಶಸ್ಸಿಗಾಗಿ ಧೈರ್ಯದಿಂದ ಇರುವುದು ಮತ್ತು ಫಲಪ್ರಾಪ್ತಿಗಾಗಿ ಅವಸರ ಪಡಬೇಡಿ. 7) ಯಾರಿಗೂ ಮೋಸಮಾಡದಿರುವುದು, 8) ದಯೆಯಿಂದ ಇರುವುದು. 9) ಭಕ್ತ ಹಾಗು ಸಂತರ ಆಭೂಷಣ ಕ್ಷಮೆ ಕೂಡಾ ಇದೆ, ಶತ್ರುವನ್ನು ಸಹ ಕ್ಷಮಿಸಬೇಕು. 10) ಸದಾಚಾರ ಸ್ವಭಾವ ಹೊಂದಿರಬೇಕು. 11) ಭಕ್ತನು ಪ್ರಪಂಚದ ಲಾಭದ ಉದ್ದೇಶವನ್ನು ಬಿಟ್ಟು ನಿಸ್ವಾರ್ಥ ಭಾವದಿಂದ ಭಕ್ತಿ ಮಾಡಬೇಕು. 12) ತ್ಯಾಗವು ಹೆಚ್ಚು ಮುಖ್ಯವಾದುದು. 13) ವೈರಾಗ್ಯದಿಂದಿರುವುದು. ಪ್ರಪಂಚವನ್ನು ಸಾರಹೀನ ಹಾಗು ತಮ್ಮ ಜಿವನವನ್ನು ತಾತ್ಕಾಲಿಕವೆಂದು ತಿಳಿದು, ಪರಮಾತ್ಮನ ಪ್ರತಿ ವಿಶೇಷ ಒಲವು ಮೋಕ್ಷಕ್ಕಾಗಿ ಅತಿ ಅವಶ್ಯಕ. 14) ಶಾಂತಿಯು ಭಕ್ತನ ವಿಶೇಷ ಗುಣ, ಇದು ಕೂಡಾ ಅನಿವಾರ್ಯವಾಗಿದೆ. 15) ಭಕ್ತಿ ಮಾಡುವುದು ಅಂದರೆ ಭಕ್ತಿಮಾಡಿ ತಮ್ಮ ಉದ್ಧಾರ ಮಾಡಿಕೊಳ್ಳುವುದು, 16) ಪ್ರತಿಯೊಬ್ಬ ವ್ಯಕ್ತಿಯೊಡನೆ ಮಿತ್ರನ ಸಮಾನ ವ್ಯವಹಾರ ಮಾಡಬೇಕು.

ಈ ಮೇಲಿನ ಗುಣಗಳೆಲ್ಲಾ ಇದ್ದರೆ ಮಾತ್ರ ಸತ್ಯಲೋಕಕ್ಕೆ ಹೋಗಬಹುದು. ಇವಿಷ್ಟೇ ಅಲ್ಲದೆ ಗುರುವಿನ ಸೇವೆ, ಗುರು ಹೇಳಿಕೊಟ್ಟ ವಿಧಿ ಮೇಲೆ ನಂಬಿಕೆ ಇಡುವುದು. ಪರಮಾತ್ಮನ ಭಕ್ತಿ ಹಾಗು ಸಂತ ಸಮಾಗಮಕ್ಕೆ ಹೋಗುವುದು ಅನಿವಾರ್ಯವಾಗಿದೆ.

ಅನುರಾಗ್‌ಸಾಗರ್‌ದ 156 ಮತ್ತು 157ನೇ ಪುಟದ ಸಾರಾಂಶ:- ಈ ಪುಟಗಳಲ್ಲಿಯೂ ಇದೇ ಜ್ಞಾನವಿದೆ ಮತ್ತು ವಿಷಯ-ವಿಕಾರಗಳನ್ನು ತ್ಯಜಿಸಬೇಕು. ಆಗ ಭಕ್ತಿ ಸಫಲತೆಯನ್ನು ಕಾಣುವುದು.

ಅನುರಾಗ್ ಸಾಗರ್‌ದ 158 ಮತ್ತು 159ನೇ ಪುಟಗಳ ಸಾರಾಂಶ:-

ಪರಮೇಶ್ವರರು ಹೇಳಿದ್ದಾರೆನೆಂದರೆ ನಾಮದೀಕ್ಷೆ ಪಡೆದವರು 15 ದಿನಗಳಿಗೊಮ್ಮೆ ಧಾರ್ಮಿಕ ಅನುಷ್ಠಾನ (ಪಾಠ) ಮಾಡಿಸಬೇಕು. ಒಂದೊಮ್ಮೆ 15 ದಿನಗಳಿಗೆ ಸಾಧ್ಯವಾಗದಿದ್ದರೆ ತಿಂಗಳಿಗೆ ಒಮ್ಮೆಯಾದರೂ ಮಾಡಿಸಬೇಕು. ಯಾರಾದರೂ ಬಡವರಿದ್ದರೆ ಅವರು ವರ್ಷದಲ್ಲಿ ಎರಡು ಬಾರಿಯಾದರೂ ಧಾರ್ಮಿಕ ಅನುಷ್ಠಾನ (ಪಾಠ) ಮಾಡಿಸಬೇಕು. ಸಾಧ್ಯವಾಗದಿದ್ದರೆ ವರ್ಷದಲ್ಲಿ ಒಂದು ಬಾರಿಯಾದರೂ ಮಾಡಿಸಬೇಕು. ಯಾರು ವರ್ಷದಲ್ಲಿ ಒಂದು ಬಾರಿಯೂ

ಅನುಷ್ಠಾನ ಮಾಡಿಸುವುದಿಲ್ಲವೋ, ಆ ಭಕ್ತನು ಕಪಟಿ( ಭಕ್ತಿಭಾವ ಹೀನ) ಆಗಿರುತ್ತಾನೆ. ಒಂದು ವರ್ಷದಲ್ಲಿ ಒಂದು ಬಾರಿ ಅನುಷ್ಠಾನ ಮಾಡಿಸುವುದರಿಂದ ಅವರಿಗೆ ಖಂಡಿತವಾಗಿಯೂ ಮೋಕ್ಷ ಸಿಗುವುದರಲ್ಲಿ ಸಂದೇಹವಿಲ್ಲ.

ಕಬೀರ ನಾಮವನ್ನು ಶ್ರದ್ಧೆಯಿಂದ ಜಪಿಸಿ ಅಂದರೆ ಕಬೀರರ ಹೆಸರನ್ನು ಗರ್ವದಿಂದ ಹೇಳಿ. ಇದಾವುದು ಭಗವಂತನ ಹೆಸರೇ,ಎಂದು ಸಂಕೋಚಪಡಬೇಡಿ. ಹೀಗೆ ಹೇಳುವವರಿಂದ ಹೆದರಬೇಡಿ, ಸಂಕೋಚಪಡಬೇಡಿ ಮತ್ತು ಜೊತೆಗೆ ನಿನ್ನ (ಧರ್ಮದಾಸ) ಹೆಸರು ಗೌರವದಿಂದ ಹೇಳುವರು.

ಭಾವಾರ್ಥ:– ಆದರಣೀಯ ಧರ್ಮದಾಸರೊಂದಿಗೆ ಪರಮಾತ್ಮ ಇದ್ದರು, ಅವರನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋದರು, ತನ್ನ ಯಥಾರ್ಥ ಪರಿಚಯ ನೀಡಿದರು. ಧರ್ಮದಾಸರು ತಮ್ಮ ಕಣ್ಣುಗಳಿಂದ ನೋಡಿದ, ತಮ್ಮ ಕಿವಿಗಳಿಂದ ಪರಮೇಶ್ವರನಿಂದ ಕೇಳಿದ ಆಧ್ಯಾತ್ಮಿಕ ಜ್ಞಾನ ಕಬೀರ್ ಸಾಗರ್, ಕಬೀರ ಬಾಣಿ, ಕಬೀರ್ ಬೀಜಕ್ ಮತ್ತು ಕಬೀರ್ ಶಬ್ದಾವಳಿಯನ್ನು ಸ್ವತಃ ಬರೆದು ಮಾನವ ಸಮಾಜದ ಮೇಲೆ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಆದ್ದರಿಂದ ಧರ್ಮದಾಸರ ಮಹಿಮೆಯನ್ನೂ ಹೊಗಳಬೇಕು.

ಭಕ್ತನು ತನ್ನ ಕೊನೆಯ ಉಸಿರಿರುವವರೆಗೆ ನಿಯಮದಲ್ಲಿದ್ದುಕೊಂಡು ಭಕ್ತಿ ಸಾಧನೆ ಮಾಡಬೇಕು. ಹೇಗೆ ಶೂರ ವೀರರು ಯುದ್ಧದಲ್ಲಿ ಧೈರ್ಯದಿಂದ ಯುದ್ಧಮಾಡುವಾಗ 'ಮಾಡು ಅಥವಾ ಮಡಿ' ಎಂಬ ಧೈರ್ಯದಿಂದ ಮುನ್ನುಗ್ಗುತ್ತಾರೋ, ಹಿಂದೆ ಸರಿಯುವುದಿಲ್ಲವೋ, ಹಾಗೆ ಸಂತ ಹಾಗೂ ಭಕ್ತನ ಯುದ್ಧಕ್ಷೇತ್ರ ಭಕ್ತಿ ಮಂತ್ರ ಜಪ ಮತ್ತು ನಿಯಮವಾಗಿದೆ. ಶಿಷ್ಯನು ಗುರುವಿನಿಂದ ವಿಮುಖನಾದರೆ ನಾಮ ಖಂಡನೆ ಆಗುವುದು, ಆಗ ಸ್ವಾಭಾವಿಕ ಅವನು ಗುರುವಿನಲ್ಲಿ ದೋಷ ಕಂಡು ಹಿಡಿಯುತ್ತಾನೆ. ಆ ಕಾರಣ ಅವನು ನರಕಕ್ಕೆ ಹೋಗುತ್ತಾನೆ, ಅಲ್ಲಿ ಅಗ್ನಿಕುಂಡದಲ್ಲಿ ಬೇಯುತ್ತಾನೆ. ಒಂದು ವೇಳೆ ಗುರುವಿನಿಂದ ವಿಮುಖನಾಗಿ ಭಕ್ತಿಯನ್ನು ಬಿಟ್ಟು ಬಿಟ್ಟರೆ ಅವನಿಗೂ ನಷ್ಟ ತಪ್ಪಿದ್ದಲ್ಲ.

ಉದಾಹರಣೆಗೆ:– ಇನ್ವರ್ಟರ್‌ನನ್ನು ಚಾರ್ಜಿಗೆ ಹಾಕಿದರೆ ಅದು ಚಾರ್ಜು ಆಗುತ್ತಿರುತ್ತದೆ. ಮಧ್ಯದಲ್ಲಿ ಚಾರ್ಜಿನಿಂದ ತೆಗೆದು ಬಿಟ್ಟರೆ, ಇನ್ವರ್ಟರ್ ಎಷ್ಟು ಚಾರ್ಜ್ ಆಗಿರುತ್ತದೋ ಅಷ್ಟು ಕೆಲಸ ಮಾಡುತ್ತದೆ. ಚಾರ್ಜು ಮುಗಿದ ತಕ್ಷಣ ಎಲ್ಲವೂ ಸ್ವಿಚ್ ಆಫ್ ಆಗುತ್ತದೆ. ಅದೇ ರೀತಿ ಆ ಶಿಷ್ಯನ ಸ್ಥಿತಿ ತಿಳಿಯಿರಿ. ಹಾಗೆ ಎಲ್ಲಿಯವರೆಗೆ ಶಿಷ್ಯನು ಗುರುವಿನ ಶರಣದಲ್ಲಿದ್ದು, ಮರ್ಯಾದೆಯಲ್ಲಿದ್ದು ಎಷ್ಟು ದಿನ ಸಾಧನೆ ಮಾಡಿದನೋ ಅಷ್ಟು ಆತ್ಮದಲ್ಲಿ ಸಂಗ್ರಹವಾಯ್ತು, ಅಷ್ಟು ಆತ್ಮ ಚಾರ್ಜ್ ಆಯ್ತು. ಯಾವ ದಿನ ಗುರುವಿನಿಂದ ವಿಮುಖನಾಗುವನು ಆ ದಿನದಿಂದ ಭಕ್ತಿಯ ಶಕ್ತಿ ಬರುವುದು ನಿಂತು ಬಿಡುತ್ತದೆ. ಸಾಧಕನು ಗುರುವಿಲ್ಲದೇ (ಗುರುವಿನೊಂದಿಗೆ ವಿರೋಧ ಮಾಡಿ, ಗುರುವನ್ನು ತ್ಯಜಿಸಿ) ಗುರು ಮಂತ್ರವನ್ನು ಜಪಿಸಿದರೆ ಅದು ಕೇವಲ ವ್ಯರ್ಥ. ಹೇಗೆ ವಿದ್ಯುಚ್ಛಕ್ತಿಯ ಕನೆಕ್ಷನ್ ತೆಗೆದುಹಾಕಿದ ನಂತರ ಫ್ಯಾನು, ಮೋಟರ್, ಲೈಟು ಇವೆಲ್ಲದರ ಸ್ವಿಚ್ಚನ್ನು ಎಷ್ಟು ಬಾರಿ ಹಾಕಿದರೂ ಫ್ಯಾನು ತಿರುಗುವುದಿಲ್ಲ ಮೋಟರ್ ಓಡುವುದಿಲ್ಲ, ಲೈಟು ಹತ್ತುವುದಿಲ್ಲ. ಗುರುವಿನಿಂದ ವಿಮುಖನಾದ ಸಾಧಕನ ಪರಿಸ್ಥಿತಿಯೂ ಇದೇ ಆಗಿರುತ್ತದೆ. ನಂತರ ಅವನು ನರಕಕ್ಕೆ ಹೋಗುತ್ತಾನೆ. ಕಬೀರರು ಹೇಳುತ್ತಾರೆ:–

ಕಬೀರ್, ಮಾನುಷ್ ಜನ್ಮ ಪಾಕರ್ ಖೋವೈ, ಸತ್‌ಗುರು ವಿಮುಖಾ ಯುಗ್–ಯುಗ್ ರೋವೈ।
ಕಬೀರ್, ಗುರು ವಿಮುಖ್ ಜೀವ್ ಕತಹು ನ ಬಚೈ । ಅಗ್ನಿ ಕುಂಡ್ ಮೆ ಜರ್–ಬರ್ ನಾಚೈ ॥
ಕೋಟಿ ಜನ್ಮ ವಿಷ್‌ಧರ್ ಕೋ ಪಾವೈ । ವಿಷ್ ಜ್ವಾಲಾ ಸಹೀ ಜನ್ಮ ಗಮಾವೈ ॥
ಬಿಷ್ಟಾ (ಟಟ್ಟೀ) ಮಾಂಹೀ ಕ್ರಮಿ ಜನ್ಮ ಧರಈ । ಕೋಟಿ ಜನ್ಮ ನರಕ್ ಹೀ ಪರಹೀ ॥

ಭಾವಾರ್ಥ:– ಗುರುವನ್ನು ತ್ಯಜಿಸಿದ ಜೀವಾತ್ಮವು ಎಂದಿಗೂ ಉಳಿಯುವುದಿಲ್ಲ. ನರಕದಲ್ಲಿ ಅಗ್ನಿಕುಂಡದಲ್ಲಿ ಸುಟ್ಟು–ಬೆಂದು ಕಷ್ಟಪಡುವುದು. ಅಲ್ಲಿ ಬೆಂಕಿಯ ಕಷ್ಟದಲ್ಲಿ ನರಳುವನು ಅಂದರೆ ಜಿಗಿದು ಜಿಗಿದು ಬೆಂಕಿಯಲ್ಲಿ ಬೀಳುವನು.

ನಂತರ ಸಾವಿರಾರು ಜನ್ಮ ವಿಷಧಾರಿಯ (ಹಾವಿನ) ಜನ್ಮ ತಾಳುವನು. ಸರ್ಪದ ಒಳಗಿರುವ ವಿಷದ ತಾಪವು ಬಹಳ ಕಷ್ಟ ಕೊಡುತ್ತದೆ. ಬೇಸಿಗೆ ಕಾಲದಲ್ಲಿ ಹಾವುಗಳು ಈ ತಾಪದಿಂದ ದೂರವಾಗಲು ಶ್ರೀಗಂಧದ ಮರಗಳಿಗೆ ಸುತ್ತಿಕೊಳ್ಳುತ್ತವೆ. ನಂತರ ಅದೇ ಗುರು ವಿಮುಖ ಅಂದರೆ ಗುರುದ್ರೋಹಿ ಮಲ(ಹೇಸಿಗೆ)ಯಲ್ಲಿ ಕೀಟವಾಗಿ ಜನ್ಮಿಸುವ. ಈ ರೀತಿ ಗುರುವಿನಿಂದ ದೂರವಾದ ಜೀವಾತ್ಮ ಮಹಾಕಷ್ಟ ಪಡುತ್ತದೆ. ಒಂದು ವೇಳೆ ಗುರು ನಕಲಿ ಇದ್ದರೆ ಅವನನ್ನು ತ್ಯಜಿಸಿ ಪೂರ್ಣ ಗುರುವಿನ ಶರಣ ಪಡೆಯುವುದರಿಂದ ಯಾವುದೇ ಪಾಪ ತಗಲುವುದಿಲ್ಲ.

ಕಬಿರ್, ಗುರು ದಯಾಲ್ ತೊ ಪುರುಷ ದಯಾಲ್ । ಜೆಹಿ ಗುರು ವ್ರತ್ ಛುಎ ನಹೀಂ ಕಾಲ್ ॥

ಭಾವಾರ್ಥ:– ಹೇ ಧರ್ಮದಾಸ! ಗುರು ಶಿಷ್ಯನ ಮೇಲೆ ದಯಾಳು ಆಗಿದ್ದರೆ, ಅಂದರೆ ಗುರುವಿನ ಹೃದಯದಲ್ಲಿ ಶಿಷ್ಯನ ಬಗ್ಗೆ ಉತ್ತಮ ವ್ಯಕ್ತಿತ್ವಯಿದ್ದರೆ, ನಿಯಮದಲ್ಲಿರುತ್ತಿದ್ದರೆ ಪರಮಾತ್ಮನು ಸಹ ಆ ಭಕ್ತನ ಮೇಲೆ ಪ್ರಸನ್ನನಾಗಿರುತ್ತಾನೆ. ಇಲ್ಲದಿದ್ದರೆ ಮೇಲೆ ತಿಳಿಸಿರುವಂತೆ ಶಿಷ್ಯನು ಆ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ.

**160ನೇ ಪುಟದ ಸಾರಾಂಶ:–**

ಈ ಪುಟದಲ್ಲಿ ಸ್ವಲ್ಪ ಗುರು ಮಹಿಮೆ ಇದೆ ಹಾಗೂ ಕೋಗಿಲೆಯ ಚಾಣಕ್ಯ ನೀತಿಯ ಜ್ಞಾನವಿದೆ.

## "ಕಾಲನ ಕಡೆಯ ಜೀವಾತ್ಮವು ಸದ್ಗುರುವಿನ ಜ್ಞಾನವನ್ನು ಒಪ್ಪುವುದಿಲ್ಲ"

ಕಾಗೆ–ಕೋಗಿಲೆಯ ಉದಾಹರಣೆ:– ಕೋಗಿಲೆ ಎಂದಿಗೂ ಗೂಡು ಕಟ್ಟಿ ಮೊಟ್ಟೆ ಇಡುವುದಿಲ್ಲ. ಕಾರಣ ಕಾಗೆ ಅದರ ಮೊಟ್ಟೆಯನ್ನು ತಿಂದು ಬಿಡುತ್ತದೆ. ಅದಕ್ಕಾಗಿ ಕೋಗಿಲೆ ತನ್ನ ಮೊಟ್ಟೆಗಳನ್ನು ರಕ್ಷಿಸಲು ಒಂದು ಉಪಾಯವನ್ನು ಮಾಡುತ್ತದೆ. ಕೋಗಿಲೆ ಮೊಟ್ಟೆ ಹಾಕುವಾಗ ಅದು ಕಾಗೆಯು ಎಲ್ಲಿ ಗೂಡುಕಟ್ಟಿ ಅದರಲ್ಲಿ ತನ್ನ ಮೊಟ್ಟೆಗಳನ್ನು ಇಡುತ್ತದೆ ಎಂದು ನೋಡುತ್ತಿರುತ್ತದೆ. ಕಾಗೆಯು ಮೊಟ್ಟೆಗಳನ್ನು ಇಟ್ಟ ನಂತರ ಅದು ಊಟಕ್ಕಾಗಿ ಹೊರ ಹೋದಾಗ ಕೋಗಿಲೆ ಆ ಗೂಡಿನೊಳಗಡೆ ಹೋಗಿ ತನ್ನ ಮೊಟ್ಟೆಗಳನ್ನು ಇಡುತ್ತದೆ ಮತ್ತು ದೂರ ಮರದ ಮೇಲೆ ಕುಳಿತು ಬಿಡುವುದು ಅಥವಾ ಅಕ್ಕ ಪಕ್ಕದಲ್ಲಿರುತ್ತದೆ. ಕಾಗೆ ಮರಳಿ ಬಂದಾಗ ಅದಕ್ಕೆ ತನ್ನ ಮೊಟ್ಟೆಗಳ್ಯಾವುವು? ಬೇರೆ ಪಕ್ಷಿಯ ಮೊಟ್ಟೆಗಳ್ಯಾವುವು ಎಂದು ತಿಳಿಯುವುದಿಲ್ಲ. ಹಾಗಾಗಿ ಅದು ಎಲ್ಲಾ ಮೊಟ್ಟೆಗಳ ಪೋಷಣೆ ಮಾಡುತ್ತದೆ. ಮರಿಗಳಾದಾಗಲೂ ಎಲ್ಲಾ ಮರಿಗಳೂ ಕಪ್ಪಗಿದ್ದು, ಒಂದೇ ತರಹ ಇರುವುದರಿಂದ ಕಾಗೆಗೆ ಅವು ಕೋಗಿಲೆಯ ಮರಿಗಳೆಂದು ತಿಳಿಯುವುದೇ ಇಲ್ಲ. ಕೋಗಿಲೆಯು ಆ ಗೂಡಿನ ಅಕ್ಕ ಪಕ್ಕವೇ ವಾಸವಿದ್ದು, ಕೋಗಿಲೆಗೂ ಯಾವ ಮರಿಗಳೆಂದು ಗೊತ್ತಾಗಲ್ಲ. ಮರಿಗಳು ಹಾರಲು ಪ್ರಾರಂಭಿಸಿದಾಗ ಕೋಗಿಲೆ ಸಮೀಪದ ಮರದ ಬಳಿ ಕುಳಿತು ತನ್ನ ಮರಿಗಳನ್ನು 'ಕುಹೂ–ಕುಹೂ' ಎಂದು ಕೂಗುತ್ತಾ ಆಕರ್ಷಿಸುತ್ತದೆ. ಕೋಗಿಲೆಯ ಮರಿಗಳು ಆ ಧ್ವನಿಗೆ ಆಕರ್ಷಿತಗೊಂಡು ಕೋಗಿಲೆ ಇರುವ ಕಡೆಗೆ ಹಾರಿ ಬರುತ್ತವೆ. ಕಾಗೆಯ ಮರಿಗಳು ಆಕರ್ಷಿತಗೊಳ್ಳುವುದಿಲ್ಲ. ಕೋಗಿಲೆ ಕುಹೂ, ಕುಹೂ ಮಾಡುತ್ತಾ ದೂರ ಹೋಗುತ್ತದೆ. ಕೋಗಿಲೆಯ ಧ್ವನಿಗೆ ಆಕರ್ಷಿತಗೊಂಡ ಅದರ ಮಕ್ಕಳೂ ಹಿಂದೆ ಬಂದು ಬಿಡುತ್ತವೆ .ಕಾಗೆಯು ಇವಂತು ಹೋದವು ಹಿಂದೆ ಉಳಿದಿರುವನ್ನು ರಕ್ಷಿಸುವೆ ಎಂದು ಯೋಚಿಸಿ ಕಾಗೆ ಮರಳಿ ಬರುತ್ತದೆ. ಹೀಗೆ ಕೋಗಿಲೆಯ ಮರಿಗಳು ತನ್ನ ಕುಟುಂಬವನ್ನು ಸೇರಿಕೊಳ್ಳುತ್ತವೆ.

ಕಬೀರರು ಧರ್ಮದಾಸನಿಗೆ ಹೇಳಿದರು, "ಹೇ ಧರ್ಮದಾಸ, ನಿನ್ನ ಮಗ ನಾರಾಯಣದಾಸನು ಕಾಗೆ ಇದ್ದ ಹಾಗೆ ಅಂದರೆ ಅವನು ಕಾಲನ ಮಗನು. ಅವನ ಮೇಲೆ ನನ್ನ ಪ್ರವಚನ ಯಾವ ಪ್ರಭಾವವನ್ನೂ ಬೀರಿಲ್ಲ. ನೀವು ದಯಾಳನ (ಕರುಣಾಮಯ ಸತ್ಯಪುರುಷನ) ಅಂಶ. ನಿನ್ನ ಮೇಲೆ ನನ್ನ ಪ್ರತಿಯೊಂದು ವಾಣಿಯ ಪ್ರಭಾವ ಬೀರಿದೆ ಮತ್ತು ನೀನು ನನ್ನ ಬಳಿ ಬಂದೆ. ಆದರೆ ಅದೇ ಪ್ರವಚನ ಕಾಲನ ಅಂಶ ನಾರಾಯಣದಾಸನ ಮೇಲೆ ಪ್ರಭಾವವೂ ಬೀರಲಿಲ್ಲ. ಇದೇ ರೀತಿ ಪ್ರತೀ ಕುಟುಂಬದಲ್ಲೂ ನಡೆಯುತ್ತಿದೆ. ಚಿಗುರಿದ ಹಂಸ ಅಂದರೆ ಪೂರ್ವಜನ್ಮದ ಭಕ್ತಿ ಸಂಸ್ಕಾರವಿರುವ

ಜೀವಾತ್ಮವು ಯಾವುದೋ ಜನ್ಮದಲ್ಲಿ ಸದ್ಗುರು ಕಬೀರರ ಸತ್ಯ ಕಬೀರ್ ಪಂಥದಲ್ಲಿ ದೀಕ್ಷೆ ಪಡೆದಿದ್ದರು ಆದರೆ ಮುಕ್ತರಾಗಲಿಲ್ಲ. ಅವರು ಯಾರದೋ ಕುಟುಂಬದಲ್ಲಿ ಹುಟ್ಟುತ್ತಾರೆ. ಕಬೀರರ ವಾಣಿ ಕೇಳಿದಾಕ್ಷಣ ಅವರು ಎಚ್ಚೆತ್ತುಕೊಳ್ಳುತ್ತಾರೆ. ಆಕರ್ಷಿತರಾಗಿ ದೀಕ್ಷೆ ಪಡೆದು, ಶಿಷ್ಯರಾಗಿ ತಮ್ಮ ಉದ್ಧಾರ ಮಾಡಿಕೊಳ್ಳುತ್ತಾರೆ. ಅದೇ ಕುಟುಂಬದ ಕೆಲವರು ಸ್ವಲ್ಪವೂ ಒಪ್ಪುವುದಿಲ್ಲ. ದೀಕ್ಷೆ ಪಡೆದವರನ್ನು ವಿರೋಧಿಸುತ್ತಾರೆ, ಪರಿಹಾಸ್ಯ ಮಾಡುತ್ತಾರೆ. ಅವರೆಲ್ಲಾ ಕಾಲನ ಅಂಶ. ಅವರೂ ನಾರಾಯಣದಾಸನ ರೀತಿ ಕಾಲನ ದೂತರ ಮೂಲಕ ಪ್ರಚಲಿತವಿರುವ ಸಾಧನೆ ಮಾಡುತ್ತಾರೆ.

ಅನುರಾಗ್ ಸಾಗರ್‌ದ ಪುಟ ಸಂಖ್ಯೆ 161ರ ಸಾರಾಂಶ:–

ಕಬೀರ ಪರಮಾತ್ಮರೆಂದರು, 'ಹೇ ಧರ್ಮದಾಸ! ಹೇಗೆ ಶೂರ ವೀರರು ಹಾಗೂ ಕೋಗಿಲೆಯ ಮರಿಗಳು (ಮಕ್ಕಳು), ಮುಂದೆ ನಡೆದ ಮೇಲೆ ಹಿಂದೆ ತಿರುಗಿ ನೋಡುವುದಿಲ್ಲವೋ, ಹಾಗೆ ಯಾರು ಎಲ್ಲಾ ಬಂಧನಗಳನ್ನು ತೊಡೆದು, ಕುಟುಂಬದ ಮೋಹವನ್ನು ತೊರೆದು, ನನ್ನ ಆಶ್ರಯಕ್ಕೆ ಬರುತ್ತಾರೋ, ಅವರ ನೂರಾ ಒಂದು ಪೀಳಿಗೆಯನ್ನು ನಾನು ಪಾರುಮಾಡುವೆನು.

ಕಬೀರ್, ಭಕ್ತ್ ಬೀಜ್ ಹೋಯ್ ಜೋ ಹಂಸಾ । ತಾರೂಂ ತಾಸ್ ಕೆ ಏಕೋತರ್ ಬಂಶಾ ॥
ಕಬೀರ್ ಕೋಯಲ್ ಸುತ್ ಜೈಸೇ ಶೂರಾ ಹೋಈ। ಯಹೀ ವಿಧಿ ಧಾಯ್ ಮಿಲ್ಯೆ ಮೋಹೆ ಕೋಈ॥
ನಿಜ್ ಘರ್ ಕೀ ಸುರತಿ ಕರ್ಯೆ ಜೋ ಹಂಸಾ । ತಾರೋ ತಾಸ್ ಕೇ ಏಕೋತ್ತರ್ ಬಂಶಾ ॥

## "ಹಂಸ (ಭಕ್ತ)ರ ಲಕ್ಷಣಗಳು"

ಕಾಗೆ ಯಂತಹ ಕೆಟ್ಟ ವೃತ್ತಿಯನ್ನು ತ್ಯಜಿಸಿದಾಗ ಅವನು ಹಂಸ ಅಂದರೆ ಭಕ್ತನಾಗುತ್ತಾನೆ. ಕಾಗೆಯು ತನ್ನ ಸ್ವಾರ್ಥ ಪೂರ್ತಿಗಾಗಿ ಬೇರೆಯವರಿಗೆ ನೋವು ಕೊಡುತ್ತದೆ. ಯಾವುದೇ ಪ್ರಾಣಿಗೆ ಗಾಯವಾದರೆ ಕಾಗೆಯು ಆ ಗಾಯವನ್ನು ಮತ್ತೆ ಮತ್ತೆ ಕುಟುಕುತ್ತಾ. ಮಾಂಸವನ್ನು ಕಿತ್ತು ಕಿತ್ತು ತಿನ್ನುತ್ತದೆ. ಪ್ರಾಣಿಗಳ ಕಣ್ಣುಗಳಿಂದ ಕಣ್ಣೀರು ಬರುತ್ತಿರುತ್ತದೆ. ಕಾಗೆಯ ಧ್ವನಿ ಕೂಡಾ ವರಟಾಗಿರುತ್ತದೆ. ಭಕ್ತನು (ಹಂಸ) ತನ್ನ ಕಾಗೆಯಂತಹ ಗುಣವನ್ನು ತ್ಯಜಿಸಬೇಕು. ತನ್ನ ಸ್ವಾರ್ಥಕ್ಕಾಗಿ ಯಾರಿಗೂ ಕಷ್ಟಕೊಡಬಾರದು. ಕೋಗಿಲೆಯಂತೆ ಮಧುರವಾಗಿ ಮಾತನಾಡಬೇಕು. ಇವು ಭಕ್ತರ ಲಕ್ಷಣಗಳಾಗಿರುತ್ತವೆ.

## "ಜ್ಞಾನಿ ಅಂದರೆ ಸತ್ಸಂಗೀಯ ಲಕ್ಷಣಗಳು"

ಸದ್ಗುರುವಿನಿಂದ ಜ್ಞಾನ ಹಾಗು ದೀಕ್ಷೆ ಪಡೆದನಂತರವೂ ಶಿಷ್ಯನು ಈ ಪ್ರಪಂಚದ ಮೋಹದಿಂದ ಹೊರಬರದಿದ್ದರೆ, ಅವನು ಮೂರ್ಖನೇ ಸರಿ. ಭಕ್ತಿಯಿಂದ ಸಿಗುವ ಲಾಭದಿಂದ ಅವರು ವಂಚಿತರಾಗುತ್ತಾರೆ. ಅವರು ಭಕ್ತಿ ಮಾರ್ಗದಲ್ಲಿ ಮುಂದುವರಿಯಲ್ಲ. ಅವರು ಸಾರಶಬ್ದ್ ಪಡೆಯಲು ಯೋಗ್ಯರಾಗಿರುವುದಿಲ್ಲ. ಕುರುಡನು ತನ್ನ ಕಾಲನ್ನು ಸೆಗಣಿಯ ಮೇಲೆ ಇಟ್ಟರೆ ಅದನ್ನು ನೋಡಿ ಯಾರೂ ಹಾಸ್ಯಮಾಡುವುದಿಲ್ಲ. ಯಾರೂ ಅವನನ್ನು ಆಡಿಕೊಳ್ಳುವುದಿಲ್ಲ. ಅದೇ ಕಣ್ಣುಳ್ಳವನು ಅಂದರೆ ಭಕ್ತನು ಕೆಟ್ಟ ಸ್ಥಾನಗಳಲ್ಲಿ ಹೋದರೆ (ಪರಸ್ತ್ರೀ ಸಂಗ, ಕಳ್ಳತನ, ಮೋಸ, ಮಾದಕವಸ್ತುಗಳ ಸೇವನೆ, ಸಾಧನೆಯಿಂದ ವಿಮುಖ ಮುಂತಾದವುಗಳನ್ನು ಮಾಡಿದರೆ) ಅವನು ಖಂಡಿತವಾಗಿಯೂ ನಿಂದೆಗೊಳಗಾಗುತ್ತಾನೆ.

ಅನುರಾಗ್ ಸಾಗರ್‌ದ ಪುಟ ಸಂಖ್ಯೆ 162ರಿಂದ 163ರ ಸಾರಾಂಶ:–

## "ಭಕ್ತನು ಪರಮಾರ್ಥಿಯಾಗಿರಬೇಕು"

ಹೇಗೆ ಹಸುವು ಸ್ವತಃ ಕಾಡಲ್ಲೆಲ್ಲಾ ಅಲೆದು, ಹುಲ್ಲು, ಕಡ್ಡಿ ತಿಂದು ಬರುತ್ತದೆ. ಸ್ವತಃ ನೀರು ಕುಡಿಯುತ್ತದೆ. ಮಾನವನಿಗೆ ಅಮೃತದಂಥಾ ಹಾಲನ್ನು ಕೊಡುತ್ತದೆ. ಅದರ ಹಾಲಿನಿಂದ ತುಪ್ಪ ತಯಾರಾಗುತ್ತದೆ. ಹಸುವಿನ ಕರುವನ್ನು ಉಳುಮೆ ಮಾಡಲು ಬಳಸುತ್ತಾರೆ. ಮನುಷ್ಯನ ಪೋಷಣೆ ಮಾಡುತ್ತದೆ. ಹಸುವಿನ ಸೆಗಣಿ ಕೂಡಾ ಮನುಷ್ಯನ ಕೆಲಸಕ್ಕೆ ಬರುತ್ತದೆ. ಅದು ಸತ್ತ ನಂತರ ಅದರ ಚರ್ಮವು ಮನುಷ್ಯನ ಕಾಲುಗಳಿಗೆ ಪಾದರಕ್ಷೆಯಾಗಿ ಅವನಿಗೆ ಕಲ್ಲು ಮುಳ್ಳುಗಳು ಚುಚ್ಚುವುದರಿಂದ

ರಕ್ಷಿಸುತ್ತದೆ. ಆದರೆ ಮನುಷ್ಯ ಜನ್ಮ ಪಡೆದ ಜೀವಾತ್ಮ ಪರಮಾರ್ಥ ಮಾಡದೆ ಭಕ್ತಿಯಿಂದ ವಂಚಿತರಾಗಿ ಪಾಪ ಮಾಡುವುದರಲ್ಲಿ ತನ್ನ ಅಮೂಲ್ಯ ಮಾನವ ಜೀವನ ನಷ್ಟ ಮಾಡಿಕೊಳ್ಳುತ್ತಾನೆ. ಮಾಂಸಾಹಾರಿ ಮನುಷ್ಯ ರಾಕ್ಷಸರಂತೆ ಆ ಹಸುವನ್ನು ಕೊಂದು, ಅದರ ಮಾಂಸವನ್ನು ತಿನ್ನುತ್ತಾನೆ. ಮಹಾಪಾಪವನ್ನು ಮಾಡುತ್ತಿದ್ದಾನೆ. ಇದಕ್ಕೆ ಸಂಬಂಧಪಟ್ಟ ಕಬೀರ ಪರಮೇಶ್ವರರ ಈ ಕೆಳಗಿನ ವಾಣೀ ಓದಿ:–

**"ಪರಮಾರ್ಥಿ ಹಸುವಿನ ದೃಷ್ಟಾಂತ"**

ಗಊಕೋ ಜಾನು ಪರಮಾರ್ಥ್ ಖಾನೀ । ಗಊ ಚಾಲ್ ಗುಣ್ ಪರಖಹು ಜ್ಞಾನೀ ॥
ಆಪನ್ ಚರೇ ತೃಣ್ ಉದ್ಯಾನಾ । ಅಂಚವೇ ಜಲ್ ದೇ ಕ್ಷೀರ್ ನಿದಾನಾ ॥
ತಾಸು ಕ್ಷೀರ್ ಘೃತ್ ದೇವ್ ಅಘಾಹೀಂ । ಗೌ ಸುತ್ ನರ್ ಕೇ ಪೋಷಕ್ ಆಹೀಂ ॥
ವಿಷ್ಠಾ ತಾಸು ಕಾಜ್ ನರ್ ಆವೇ । ನರ್ ಅಘ್ ಕರ್ಮೀ ಜನ್ಮ್ ಗಮಾವೇ ॥
ಟೀಕಾ ಪುರೇ ತಬ್ ಗೌ ತನ್ ನಾಸಾ । ನರ್ ರಾಕ್ಷಸ್ ಗೋತನ್ ಲೇತ್ ಗ್ರಾಸಾ ॥
ಚಾಮ್ ತಾಸು ತನ್ ಅತಿ ಸುಖದಾಈ । ಏತಿಕ್ ಗುಣ್ ಇಕ್ ಗೋತನ್ ಭಾಈ ॥

**"ಪರಮಾರ್ಥಿ ಸಂತರ ಲಕ್ಷಣ"**

ಗೌ ಸಮ್ ಸಂತ್ ಗಹೈ ಯಹ್ ಬಾನೀ । ತೋ ನಹಿಂ ಕಾಲ್ ಕರೈ ಜಿವಹಾನೀ ॥
ನರತನ್ ಲಹಿ ಅಸ್ ಬುದ್ಧೀ ಹೋಈ । ಸತ್‌ಗುರು ಮಿಲೇ ಅಮರ್ ಹ್ವೈ ಸೋಈ ॥
ಸುನಿ ಧರ್ಮನಿ ಪರಮಾರಥ್ ಬಾನೀ । ಪರಮಾರಥತೇ ಹೋಯ್ ನ ಹಾನೀ ॥
ಪದ್ ಪರಮಾರಥ್ ಸಂತ್ ಅಧಾರಾ । ಗುರು ಸಮ್ ಲೇಈ ಸೋ ಉತರೇ ಪಾರಾ ॥
ಸತ್ಯ್ ಶಬ್ದ್ ಕೋ ಪರಿಚಯ್ ಪಾವೈ । ಪರಮಾರಥ್ ಪದ್ ಲೋಕ್ ಸಿಧಾವೈ ॥
ಸೇವಾ ಕರೇ ವಿಸಾರೇ ಆಪಾ । ಆಪಾ ಥಾಪ್ ಅಧಿಕ್ ಸಂತಾಪಾ ॥
ಯಹ್ ನರ್ ಅಸ್ ಚಾತುರ್ ಬುದ್ಧಿಮಾನಾ । ಗುನ್ ಸುಭ್ ಕರ್ಮ್ ಕಹೈ ಹಮ್ ಠಾನಾ ॥
ಊಂಚಾ ಕರ್ಮ್ ಅಪನೇ ಸಿರ್ ಲೀನ್ಹಾ । ಅವಗುಣ್ ಕರ್ಮ್ ಪರ್ ಸಿರ್ ದೀನ್ಹಾ ॥
ತಾತ್ ಹೋಯ್ ಶುಭ್ ಕರ್ಮ್ ವಿನಾಶಾ । ಧರ್ಮದಾಸ್ ಪದ್ ಗಹೋ ವಿಶ್ವಾಸಾ ॥
ಆಶಾ ಏಕ್ ನಾಮಕೀ ರಾಖೇ । ನಿಜ್ ಶುಭ್ ಕರ್ಮ್ ಪ್ರಗಟ್ ನಹಿಂ ಭಾಖೇ ॥
ಗುರುಪದ್ ರಹೇ ಸದಾ ಲೌ ಲೀನಾ । ಜೈಸೇ ಜಲಹಿ ನ ವಿಸರತ್ ಮೀನಾ ॥
ಗುರು ಕೆ ಶಬ್ದ್ ಸದಾ ಲೌ ಲಾವೇ । ಸತ್ಯನಾಮ್ ನಿಶದಿನ್ ಗುಣಗಾವೇ ॥
ಜೈಸೇ ಜಲಹಿ ನ ವಿಸರೇ ಮೀನಾ । ಐಸೆ ಶಬ್ದ್ ಗಹೇ ಪರವೀನಾ ॥
ಪುರುಷ್ ನಾಮಕೋ ಅಸ್ ಪರಭಾಊ । ಹಂಸಾ ಬಹುರಿ ನ ಜಗಮಹಂ ಆಊ ॥
ನಿಶ್ಚಯ್ ಜಾಯ್ ಪುರುಷ್ ಕೇ ಪಾಸಾ । ಕೂರ್ಮಕಲಾ ಪರಖಹು ಧರ್ಮದಾಸಾ ॥

ಭಾವಾರ್ಥ:– ಪರಮೇಶ್ವರ ಕಬೀರರು ಧರ್ಮದಾಸನ ಮೂಲಕ ಮಾನವನಿಗೆ ಸಂದೇಶ ಹಾಗು ನಿರ್ದೇಶನ ನೀಡಿರುವರು. ಹೇಳಿದ್ದಾರೆನೆಂದರೆ ಮಾನವನು ಹಸುವಿನಂತೆ ಪರಮಾರ್ಥಿಯಾಗಬೇಕು  ಯಾರಿಗೆ ಸದ್ಗುರು ಸಿಕ್ಕಿರುವರೋ ಅವರಂತು ಅಮರರಾಗುವರು. ಘೋರ ಪಾಪಗಳಿಂದ ಉಳಿಯುವರು. ಪಾಪಗಳನ್ನು ಮಾಡಬಾರದು. ಸೇವೆ ಮಾಡಿದರೆ ತಮ್ಮ ಮಹಿಮೆಯ ಆಸೆ ಮಾಡಬಾರದು. ಒಂದೊಮ್ಮೆ ಸ್ವತಃ ಶ್ರೇಷ್ಠವಂತನೆಂದು ಪರಿಗಣಿಸಿಕೊಂಡರೆ ಮುಂದೆ ಅವನಿಗೆ ಕಷ್ಟಗಳು ಕಟ್ಟಿಟ್ಟ ಬುತ್ತಿ. ಶುಭ ಕರ್ಮಗಳು ನಷ್ಟವಾಗುವವು

ಸಾಧಕನು ಕೇವಲ ನಾಮ(ಮಂತ್ರ)ದ ಮೇಲೆ ಆಸೆ ಇಡಿ. ತನ್ನ ಸ್ವಾರ್ಥವನ್ನು ಬಿಡಬೇಕು. ತಮ್ಮ ಶುಭ ಕರ್ಮದ (ದಾನ ಅಥವಾ ಅನ್ಯ ಸೇವೆ) ಬಗ್ಗೆ ಯಾರ ಮುಂದೆಯೂ ಹೇಳಬಾರದು. ನೀರಿನಲ್ಲಿ ಮೀನು ಇರುವಂತೆ ಶಿಷ್ಯನು ಗುರುವಿನ ಚರಣದಲ್ಲಿ ಅಂದರೆ ಶರಣದಲ್ಲಿ ಇರಬೇಕು. ಹೇಗೆ ನೀರಿಲ್ಲದಿದ್ದರೆ, ಒಂದು ಕ್ಷಣವೂ ಮೀನು ಬದುಕಿರುವುದಿಲ್ಲವೋ, ಹಾಗೆ ಭಕ್ತನು ಗುರುವನ್ನು ಬಿಟ್ಟು ಇರಬಾರದು. ಗುರುವಿನಿಂದ ಪಡೆದ ದೀಕ್ಷಾಮಂತ್ರವನ್ನು (ಸದ್ಗುರು ಶಬ್ದ) ಸತ್ಯನಾಮ

ಅಂದರೆ ವಾಸ್ತವಿಕ ಭಕ್ತಿ ಮಂತ್ರವನ್ನು ಭಕ್ತನು ಯಾವಾಗಲೂ ಜಪಿಸುತ್ತಿರಬೇಕು. ಆ ಪರಮಾತ್ಮನ ಮಂತ್ರದಲ್ಲಿ ಎಷ್ಟು ಶಕ್ತಿ ಇದೆ ಎಂದರೆ ಸಾಧಕನು ಪುನಃ ಪ್ರಪಂಚದಲ್ಲಿ ಜನ್ಮ ತಾಳುವುದಿಲ್ಲ. ಜನನ–ಮರಣದ ಚಕ್ರದಿಂದ ಹೊರಬಂದು ಸನಾತನ ಪರಮ ಧಾಮವನ್ನು ಸೇರುತ್ತಾನೆ. ಅಲ್ಲಿ ಶಾಶ್ವತವಾದ ಶಾಂತಿ ದೊರಕುತ್ತದೆ. ಅಲ್ಲಿಗೆ ತಲುಪಿದ ಸಾಧಕನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ.

ಇದನ್ನೇ ಭಗವದ್ಗೀತೆಯ 18 ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಲಾಗಿದೆ. ಗೀತೆ ಜ್ಞಾನದಾತನು ಹೇಳಿದ್ದಾನೆನೆಂದರೆ "ಹೇ ಅರ್ಜುನ! ನೀನು ಸರ್ವಭಾವದಿಂದ ಆ ಪರಮೇಶ್ವರನ ಶರಣದಲ್ಲಿ ಹೋಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿ ಹಾಗೂ (ಸನಾತನ ಪರಮಧಾಮ) ಶಾಶ್ವತವಾದ ಸ್ಥಾನವನ್ನು ಪ್ರಾಪ್ತಿಸುವೆ. (18ನೇ ಅಧ್ಯಾಯದ 62ನೇ ಶ್ಲೋಕ)

ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, ಏನೆಂದರೆ ತತ್ವಜ್ಞಾನದ ಪ್ರಾಪ್ತಿಯ ಬಳಿಕ ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ಬಳಿಕ ಸಾಧಕನು ಮರಳಿ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಯಾವ ಪರಮೇಶ್ವರನು ಪ್ರಪಂಚವೆಂಬ ವೃಕ್ಷವನ್ನು ರಚಿಸಿದ್ದಾನೋ, ಅವನದೇ ಭಕ್ತಿ ಮಾಡಿ (15ನೇ ಅಧ್ಯಾಯದ 4ನೇ ಶ್ಲೋಕ)

ಗೀತೆಯ ಜ್ಞಾನದಾತನು ತನ್ನ ನಶ್ವರದ ಅಂದರೆ ಜನನ–ಮರಣದ ಸ್ಥಿತಿಯನ್ನು ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5 ಮತ್ತು 9ನೇ ಶ್ಲೋಕ ಹಾಗೂ 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಹೇ ಅರ್ಜುನ! ನನ್ನ ಹಾಗೂ ನಿನ್ನ ಅನೇಕ ಜನ್ಮಗಳಾಗಿವೆ, ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ, ಎಂದಿದ್ದಾನೆ.

ಓದುಗರೇ, ಗೀತೆಯಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯ ಜ್ಞಾನದಾತನು (ಕಾಲಬ್ರಹ್ಮನು ಶ್ರೀ ಕೃಷ್ಣನ ಶರೀರದಲ್ಲಿ ಪ್ರವೇಶಿಸಿ ಮಾತನಾಡುತ್ತಿದ್ದನು) ಅವನು ಅವಿನಾಶಿಯಲ್ಲ, ಅವನೂ ಜನನ ಮರಣದ ಚಕ್ರದಲ್ಲಿ ಸಿಲುಕಿರುವವನು ಹಾಗೂ ಅವನ ಉಪಾಸಕರದೂ ಇದೇ ಸ್ಥಿತಿಯಾಗಿರುತ್ತದೆ. ಅದಕ್ಕಾಗಿ ಗೀತೆಯ ಅಧ್ಯಾಯ 18 ಶ್ಲೋಕ 62 ಹಾಗು ಅಧ್ಯಾಯ 15 ಶ್ಲೋಕ 4ರಲ್ಲಿ ವರ್ಣಿಸಲಾದ ಲಾಭ ಪ್ರಾಪ್ತಿಯಾಗಲ್ಲ. ಎರಡನೇಯದಾಗಿ ಇದು ಕೂಡಾ ಸ್ಪಷ್ಟವಾಗುವುದೆನೆಂದರೆ ಗೀತೆಯ ಜ್ಞಾನದಾತನಿಗಿಂತ ಯಾರೋ ಬೇರೆ ಸಮರ್ಥ ಹಾಗು ಎಲ್ಲಾ ಲಾಭ ನೀಡುವಂತಹ ಪರಮೇಶ್ವರನಿರುವನು. ಅವನ ಶರಣದಲ್ಲಿ ಹೋಗಲು ಗೀತೆ ಜ್ಞಾನದಾತನು ಅಂದರೆ ಕಾಲಬ್ರಹ್ಮನು ಹೇಳಿರುವನು. ಆ ಪರಮೇಶ್ವರ ಕಬೀರ ಮುಕ್ತಿದಾತರು. ಅವರು ತಮ್ಮ ಮಹಿಮೆಯನ್ನು ಸ್ವತಃ ಹೇಳಿರುವರು ಅದನ್ನು ನೀವು ಕಬೀರ್ ಸಾಗರ್‌ದಲ್ಲಿ ಓದುತ್ತಿರುವಿರಿ. ಪರಮೇಶ್ವರರು ಅನುರಾಗ್ ಸಾಗರ್‌ದ ಪುಟ 13ರಲ್ಲಿ, ಸತ್ಯ ಪುರುಷನ ಮೂಲಕ ರಚಿಸಿರುವ ಸೃಷ್ಟಿಯ ವಿಷಯದಲ್ಲಿ ಹೇಳಿರುವ ಕತೆಯ ಸಾಕ್ಷಿಯನ್ನು ಯಾರಿಗೆ ಹೇಳಲಿ ಏಕೆಂದರೆ ಎಲ್ಲರೂ ನಂತರ ಉತ್ಪನ್ನರಾಗಿದ್ದಾರೆ ಎಂದು ಹೇಳಲಾಗಿದೆ. ಮೊದಲು ಕೇವಲ ಸತ್ಯಪುರುಷರಿದ್ದರು. ಸೃಷ್ಟಿರಚನೆಯ ಸಮಯದಲ್ಲಿ ಯಾರೂ ಇಲ್ಲದಿದ್ದಾಗ ಕಬೀರರಿಗೆ ಜ್ಞಾನ ಎಲ್ಲಿಂದ ಬಂದಿತು ಎಂದು ಯೋಚಿಸಬೇಕಾದ ವಿಷಯ. ಇದರಿಂದ ಸ್ಪಷ್ಟವಾಗುವುದೆನೆಂದರೆ, ಇವರೇ ಸ್ವಯಂ ಪೂರ್ಣ ಪರಮಾತ್ಮ ಸೃಷ್ಟಿಯ ಸೃಷ್ಟಿಕರ್ತರು. ಯಾವ ಮಹಾನ್ ಆತ್ಮಗಳಿಗೆ ಪರಮೇಶ್ವರ ಕಬೀರರು ಸಿಕ್ಕಿದ್ದರೋ ಅವರೆಲ್ಲರೂ ಇದೇ ನೀಡಿದ್ದಾರೆ ಏನೆಂದರೆ:–

ಗರೀಬ್, ಅನಂತ್ ಕೋಟಿ ಬ್ರಹ್ಮಾಂಡ್ ಕಾ, ಏಕ್ ರತಿ ನಹೀಂ ಭಾರ್ ।
ಸತ್‌ಗುರು ಪುರುಷ್ ಕಬೀರ್ ಹೈಂ, ಕುಲ್ ಕೇ ಸಿರಜನ್‌ಹಾರ್ ॥

ಭಾವಾರ್ಥ ಈ ವಾಣೀಯಿಂದಲೇ ಸ್ಪಷ್ಟವಾಗಿದೆ

"ಕೂರ್ಮ್ ಕಲಾ ಪರಖೋ ಧರ್ಮದಾಸಾ" ಭಾವಾರ್ಥ ಹೇಗೆ ಕೂರ್ಮ್ ಅಂದರೆ ಆಮೆಯು ಅಪಾಯವುಂಟಾದಾಗ ತನ್ನ ತಲೆ ಹಾಗು ಕಾಲುಗಳನ್ನು ತನ್ನೊಳಗೆ ಬಚ್ಚಿಕೊಂಡು ನಿಷ್ಕ್ರಿಯವಾಗುತ್ತದೆ. ಅಪಾಯ ಮುಗಿದನಂತರ ತನ್ನ ಮಾರ್ಗದ ಮೇಲೆ ಪುನಃ ನಡೆಯುತ್ತದೆ. ಹಾಗೆ ಭಕ್ತರು ಸಹ ಪ್ರಪಂಚದ ವ್ಯಕ್ತಿಗಳು ನಿಮ್ಮ ಭಕ್ತಿ ಮಾರ್ಗದಲ್ಲಿ ಬಾಧೆ ಉಂಟುಮಾಡುತ್ತಿದ್ದರೆ ಅವರಿಗೆ ಪ್ರತಿಉತ್ತರ

ನೀಡದೆ ಸುಮ್ಮನಿದ್ದು ನಿಮ್ಮ ಭಕ್ತಿ ಸುರಕ್ಷಿತವಾಗಿಡಬೇಕು. ಸಾಮಾನ್ಯ ಸ್ಥಿತಿಯಾದಾಗ ಪುನಃ ತಮ್ಮ ಸಾಧನೆಯನ್ನು ಅದೇ ಗತಿಯಿಂದ ಮುಂದುವರೆಸಬೇಕು. ಈ ರೀತಿ ಮಾಡುವುದರಿಂದ "ನಿಶ್ಚಯ್ ಜಾಯ್ ಪುರುಷ ಕೆ ಪಾಸಾ" ಆ ಸಾಧಕನು ಖಂಡಿತ ಪರಮಾತ್ಮನ ಬಳಿ ಹೋಗುವನು.

**ಅನುರಾಗ್ ಸಾಗರ್ ಪುಟ 163(281)ರಲ್ಲಿ:–**

ಸೋರಠಾ:– ಹಂಸ್ ತಹಾಂ ಸುಖ್ ಬಿಲಸಹೀಂ, 'ಆನಂದ್ ಧಾಮ್ ಅಮೋಲ್ ।
ಪುರುಷ್ ತನು ಛವಿ ನಿರಖಹಿಂ, ಹಂಸ್ ಕರೆಂ ಕಿಲೋಲ್ ॥

**ಭಾವಾರ್ಥ:– ಮೇಲೆ ತಿಳಿಸಿದ ಜ್ಞಾನದ ಆಧಾರದಿಂದ ಸಾಧನೆ ಮಾಡಿ ಸಾಧಕರು ಅಮರಧಾಮವನ್ನು ತಲುಪಿ ಸುಖ ಅನುಭವಿಸುತ್ತಾರೆ. ಆ ಸತ್ಯಲೋಕ ಅಮೂಲ್ಯವಾದದ್ದು ಅಲ್ಲಿ ಸತ್ಯಪುರುಷನ ಶರೀರದ ಶೋಭೆ ನೋಡಿ ಆನಂದ ಪಡುತ್ತಾರೆ.**

## ❖ ದೀಕ್ಷೆ ಪಡೆದು ನಾಮ ಸ್ಮರಣೆ ಮಾಡುವುದು ಅನಿವಾರ್ಯ

**ಅಧ್ಯಾಯ "ಬೀರ್ ಸಿಂಗ್ ಬೋಧ್" ಪುಟ 123 ರಲ್ಲಿ:–**

**ರಾಜ ಬೀರಸಿಂಗ್‌ನ ಒಬ್ಬಳು ರಾಣಿ ಇದ್ದಳು. ಅವಳ ಹೆಸರು ಸುಂದರದೇಈ. ಅವಳೂ ಪರಮೇಶ್ವರ ಕಬೀರರಿಂದ ದೀಕ್ಷೆ ಪಡೆದಿದ್ದಳು. ಅವಳು ಬಹಳ ಸತ್ಸಂಗ ಕೇಳಿದ್ದಳು. ಆದರೆ ಕಡಿಮೆ ವಿಶ್ವಾಸವಿತ್ತು. ನಾಮಸ್ಮರಣೆ ಅಂದರೆ ಸಾಧನೆ ಮಾಡುತ್ತಿರಲಿಲ್ಲ. ರಾಣಿಯ ಅಂತಿಮ ಸಮಯ ಬಂದಾಗ ಯಮದೂತರು ಅರಮನೆಯಲ್ಲಿ ಪ್ರವೇಶಿಸಿದರು. ನಂತರ ಯಮದೂತರು ರಾಣಿಯ ಶರೀರದಲ್ಲಿ ಪ್ರವೇಶಿಸಿದರು ಮತ್ತು ಅವಳ ಕೊನೆಯ ಉಸಿರಿಗೆ ಕಾಯತೊಡಗಿದರು. ಆಗ ರಾಣಿ ಸುಂದರದೇಈಯ ಶರೀರದಲ್ಲಿ ಕಂಪನ ಉಂಟಾಯ್ತು. ಯಮದೂತರು ಕಾಣತೊಡಗಿದರು. ರಾಜನು ರಾಣಿಗೆ ಕೇಳಿದ ಏನು ವಿಷಯ? ಆಗ ರಾಣಿ ಹೇಳಿದಳು ನನಗೆ ರಾಜ್ಯಭಾರ, ಅರಮನೆ, ಏನೂ ಒಳ್ಳೆಯದೆನಿಸುತ್ತಿಲ್ಲ. ಸಾಧು, ಸಂತರನ್ನು ಕರೆಸಿ ಪರಮಾತ್ಮನ ಚರ್ಚೆ ಮಾಡಿಸಿ. ಸಂತರು ಹಾಗು ಭಕ್ತರು ಬಂದು ಪರಮಾತ್ಮನ ಚರ್ಚೆ ಹಾಗು ಭಕ್ತಿ ಮಾಡತೊಡಗಿದರು. ಆದರೂ ಯಾವುದೇ ಪ್ರಯೋಜನವಾಗಲಿಲ್ಲ. ಅವಳ ಶರೀರದಲ್ಲಿ ಇನ್ನೂ ಕಷ್ಟ ಹೆಚ್ಚಿತು. ಅರ್ಧ–ಅರ್ಧ ಅಂದರೆ ಶ್ವಾಸ ಕಡಿಮೆಯಾಗತೊಡಗಿತು. ಅವಳಿಗೆ ಉಸಿರಾಡುವುದೇ ಕಷ್ಟವಾಯಿತು. ಜೀವಾತ್ಮಕ್ಕೆ ಭಯವಾಗಿ ಹೃದಯ ಕಮಲ (ಹೃದಯ ಚಕ್ರ)ವನ್ನು ತ್ಯಜಿಸಿ ತ್ರಿಕುಟಿ ಕಡೆ ನಡೆಯಿತು. ಆಗ ಯಮದೂತರು ನಾಲ್ಕು ಕಡೆಯಿಂದ ಸುತ್ತುವರಿದರು. ನಾಲ್ಕು ಕಡೆಯಿಂದ ಸುತ್ತುವರೆದು ಯಮದೂತರು ಜೀವಾತ್ಮಗೆ ಹೇಳಿದರು, "ನಡಿ! ಪ್ರಭು ನಿನ್ನನ್ನು ಕರೆಯುತ್ತಿದ್ದಾರೆ", ಆಗ ರಾಣಿಯ ಜೀವಾತ್ಮಕ್ಕೆ ಸತ್ಸಂಗದ ವಚನಗಳು ನೆನಪು ಬಂದವು, ಅವಳು ಯಮದೂತರಿಗೆ ಕೇಳಿದಳು ನೀವು ಹೇ ಬಟ್‌ಪಾರ್! ಹೇ ದುಷ್ಟರೇ! ನೀವು ಇಲ್ಲಿಗೆ ಹೇಗೆ ಬಂದಿರಿ? ನಮ್ಮ ಸದ್ಗುರುವೇ ನಮ್ಮ ಪ್ರಭು. ನೀವು ನನ್ನನ್ನು ಕರೆದೊಯ್ಯಲಾರಿರಿ. ನನ್ನ ಸದ್ಗುರು ಮಾಲೀಕ ನನಗೆ ನಾಮದೀಕ್ಷೆ ನೀಡಿದ್ದಾರೆ. ನನ್ನ ಗುರುಗಳು ಬಂದರೇ ನಾನು ಹೋಗುವೆ" ಎಂದಳು. "ಯಾರಾದರೂ ಗುರುಗಳಿದ್ದರೆ ತಿಳಿಸು ಇಲ್ಲದಿದ್ದರೆ ನಮ್ಮ ಜೊತೆ ನಡಿ" ಎಂದು ಯಮದೂತರು ಗದರಿದರು. ಆಗ ಜೀವಾತ್ಮವು ಹೀಗೆಂದಿತು:–**

ಧರನೀ (ಪೃಥ್ವೀ) ಆಕಾಶ್ ಸೆ ನಗರ್ ನಿಯಾರಾ । ತಹಾಂ ನಿವಾಜ್ಯೆ ಧನೀ ಹಮಾರಾ ॥
ಅಗಮ್ ಶಬ್ದ್ ಜಬ್ ಭಾಖ್ಯೆ ನಾಊಂ । ತಬ್ ಯಮ್ ಜೀವ್ ಕೆ ನಿಕಟ್ ನಹೀಂ ಆಊಂ ॥

**ಭಾವಾರ್ಥ:– ಮೊದಲಂತು ರಾಣಿಗೆ ಗುರುಗಳು ಸತ್ಸಂಗದಲ್ಲಿ ಹೇಳುವ ಜ್ಞಾನ ಸತ್ಯವೆಂದು ವಿಶ್ವಾಸವಾಗುತ್ತಿರಲಿಲ್ಲ. ಮತ್ತು ಪ್ರವಚನದ ಬಗ್ಗೆ ನಂಬಿಕೆ ಇರಲಿಲ್ಲ. ಅವಳು ಇದೆಲ್ಲಾ ಕಟ್ಟು ಕತೆಗಳು ಎಂದು ಯೋಚಿಸುತ್ತಿದ್ದಳು. ಏಕೆಂದರೆ ನನಗೆ ಎಷ್ಟೊಂದು ಸುಖವಿದೆ, ಸೇವಕರು–ಸೇವಕಿಯರು ಹೇಳಿದ ತಕ್ಷಣ ಓಡಿ ಬರುತ್ತಿದ್ದರು, ಸುಂದರ ಒಡವೆಗಳು, ಹೊತ್ತು ಹೊತ್ತಿಗೂ ಪಂಚ ಭಕ್ಷ್ಯ ಪರಮಾನ್ನಗಳು ಅವಳ ಪಾಲಾಗುತ್ತಿದ್ದವು. ಇದನ್ನೇ ಸುಖವೆಂದು ಪರಿಗಣಿಸಿದ್ದಳು, ಈ ಸೌಲಭ್ಯಗಳೆಲ್ಲಾ ಹಿಂದಿನ ಜನ್ಮದ ಪುಣ್ಯದ ಫಲ. ಅಂದರೆ ಹಿಂದಿನ ಜನ್ಮದಲ್ಲಿ ಬ್ಯಾಟರಿ**

ಚಾರ್ಜ್ ಆಗಿತ್ತು. ಈ ಜನ್ಮದಲ್ಲಿ ಚಾರ್ಜರ್ ಸಿಕ್ಕಿದೆ(ಮಂತ್ರ ಸಿಕ್ಕಿದೆ) ಚಾರ್ಜ್ ಮಾಡದಿದ್ದರೆ ಅಂದರೆ ಸಾಧನೆ ಮಾಡದಿದ್ದರೆ, ಬ್ಯಾಟರಿಯ ಚಾರ್ಜಿಂಗ್ ಖಾಲಿಯಾಗಿ, ಚಾರ್ಜಿಂಗ್ ಡೌನ್ ಆಗಿ ಎಲ್ಲಾ ಸೌಲಭ್ಯಗಳು ನಿಂತು ಹೋಗುವವು. ನಂತರ ಎಷ್ಟೇ ಬಾರಿ ಸ್ವಿಚ್ ಹಾಕಿದರೂ ಫ್ಯಾನೂ ತಿರುಗಲ್ಲ, ಲೈಟೂ ಹತ್ತಲ್ಲ. ಇದೇ ರೀತಿ ಜೀವಾತ್ಮದ ಪೂರ್ವಜನ್ಮದ ಭಕ್ತಿ ಧನ ಅಂದರೆ ಚಾರ್ಜಿಂಗ್ ಖಾಲಿಯಾಗುತ್ತದೆ. ಆಗ ಎಲ್ಲಾ ಸವಲತ್ತುಗಳನ್ನು ಕಸಿದುಕೊಳ್ಳಲಾಗುತ್ತದೆ. ಜೀವಾತ್ಮವನ್ನು ನರಕದಲ್ಲಿ ಹಾಕಲಾಗುತ್ತದೆ. ಆಗ ಅದಕ್ಕೆ ಬುದ್ಧಿ ಬರುತ್ತದೆ. ಅಷ್ಟು ಹೊತ್ತಿಗೆ ಕಾಲ ಮಿಂಚಿರುತ್ತದೆ. ಕೇವಲ ಪಶ್ಚಾತ್ತಾಪ ಪಟ್ಟುಕೊಂಡು ಅಳುವುದೊಂದೇ ಉಳಿದಿರುತ್ತದೆ. ರಾಣಿ ಸುಂದರದೇಈ ಸತ್ಸಂಗ ಕೇಳಿದ್ದಳು. ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದಿದ್ದಳು. ನಾಮ ಸ್ಮರಣೆ ಮಾಡಿರಲಿಲ್ಲ. ಅವಳು ಗುರುದ್ರೋಹಿಯಾಗಿರಲಿಲ್ಲ. ಗುರುವಿನ ನಿಂದನೆ ಮಾಡಿರಲಿಲ್ಲ. ರಾಣಿಯು ಸದ್ಗುರುವನ್ನು ನೆನೆಸಿಕೊಂಡಳು, 'ಹೇ ಗುರುಗಳೇ! ಹೇ ನನ್ನ ಮಾಲೀಕರೇ! ನನ್ನನ್ನು ಯಮದೂತರು ಬಂದು ಸುತ್ತುವರೆದಿದ್ದಾರೆ. ಈ ದಾಸಿಯನ್ನು ಬಿಡಿಸು! ನಾನು ನಿಮ್ಮಿಂದ ದೀಕ್ಷೆ ಪಡೆದಿದ್ದೇನೆ.

ನನ್ನ ಸಹಾಯಕ್ಕೆ ನನ್ನ ಪತಿ, ಪುತ್ರ, ತಂದೆ, ತಾಯಿ, ಅಕ್ಕ ತಮ್ಮ, ಅಣ್ಣ, ತಂಗಿ ಯಾರೂ ಬರುವುದಿಲ್ಲವೆಂದು ಈ ದಿನ ತಿಳಿಯಿತು." ರಾಣಿಯ ಜೀವಾತ್ಮವು ತನ್ನ ಹೃದಯಾಂತರಾಳದಿಂದ ಸದ್ಗುರುವನ್ನು ಕರೆಯಿತು. ತಕ್ಷಣವೇ ಸದ್ಗುರು ಕಬೀರರು ಪ್ರತ್ಯಕ್ಷರಾದರು. ರಾಣಿಯು ಓಡಿ ಹೋಗಿ ಸದ್ಗುರುದೇವರ ಕಾಲಿಗೆರಗಿದಳು. ಅದೇ ಕ್ಷಣ ಯಮದೂತರು ಓಡಿಹೋಗಿ ಯಮರಾಜನ ಬಳಿ ಬಂದು ಹೇಳಿದರು, "ಅವಳ ಸದ್ಗುರು ಬಂದಾಗ ಅಲ್ಲಿ ಒಂದು ರೀತಿಯ ಪ್ರಕಾಶವಾಯಿತು." ಜೀವಾತ್ಮವು ಸತ್ ಸುಕೃತ್ ನಾಮ ಜಪಿಸಿತ್ತು. ಅವಳಿಗೆ ಇಷ್ಟೆ ನೆನಪಿತ್ತು. ಈ ಕಾರಣದಿಂದ ಅವಳನ್ನು ಯಮದೂತರಿಂದ ಬಿಡಿಸಿದರು ಪುನಃ ಆಯಸ್ಸು ಹೆಚ್ಚಿಸಿದರು. ಆಗ ರಾಣಿಯು ಹೃದಯದಿಂದ ಸಾಧನೆ ಮಾಡಿದಳು. ನಂತರ ಸದ್ಗುರು ಕಬೀರರು ಪುನಃ ಸತ್ಯನಾಮ, ಸಾರನಾಮ ಕೊಟ್ಟರು, ಅದನ್ನು ಜಪಿಸಿದಳು. ಆಗ ಈ ಪ್ರಪಂಚ ನಶ್ವರ ಎನ್ನಿಸತೊಡಗಿತು. ರಾಜ, ಆಸ್ತಿ, ಕುಟುಂಬ– ಇವೆಲ್ಲವೂ ಪರಕೀಯವೆನ್ನಿಸಿತು. ನಂತರ ಅವಳ ಅಂತಿಮ ಸಮಯ ಸಮೀಪಿಸಿತು. ಆಗ ರಾಣಿ ತನ್ನ ತನು–ಮನ–ಧನವನ್ನು ಸದ್ಗುರುವಿನ ಚರಣಗಳಿಗೆ ಅರ್ಪಿಸಿ ಭಕ್ತಿಮಾಡಿ ಅವಳು ಸತ್ಯಲೋಕಕ್ಕೆ ಹೋದಳು. ಅಲ್ಲಿ ಪರಮೇಶ್ವರ (ಸತ್ಯಪುರುಷ)ನು ರಾಣಿಯ ಜೀವಾತ್ಮದ ಮುಂದೆ ತನ್ನದೇ ಬೇರೆ ರೂಪ ಸದ್ಗುರುವಿಗೆ ಪ್ರಶ್ನಿಸಿದರು. "ಹೇ ಮುಕ್ತಿದಾತ! ನನ್ನ ಜೀವಾತ್ಮನನ್ನು ಯಮದೂತರು ಹೇಗೆ ತಡೆದರು?" ಸದ್ಗುರುವಿನ ರೂಪದಲ್ಲಿದ್ದ ಕಬೀರರು ಹೇಳಿದರು, ಹೇ ಪರಮಾತ್ಮ, ಇವಳು ದೀಕ್ಷೆ ಪಡೆದ ನಂತರ ಭಕ್ತಿ (ನಾಮಸ್ಮರಣೆ) ಮಾಡಲಿಲ್ಲ. ಆದ್ದರಿಂದ ಯಮದೂತರು ಇವಳನ್ನು ಸುತ್ತುವರೆದಿದ್ದರು. ನಾನು ಅವರಿಂದ ಬಿಡಿಸಿದೆ". ಪರಮೇಶ್ವರರು ಕೇಳಿದರು ಹೇ ಜೀವಾತ್ಮ ನೀನು ಭಕ್ತಿ ಏಕೆ ಮಾಡಲಿಲ್ಲ. ಸತ್ಯಲೋಕಕ್ಕೆ ಹೇಗೆ ಬಂದೆ.

ಆಗ ಜೀವಾತ್ಮವು ತಲೆತಗ್ಗಿಸಿ ಹೀಗೆ ಹೇಳಿತು, ಈ ಮೊದಲು ನನಗೆ ನಂಬಿಕೆ ಇರಲಿಲ್ಲ. ನಂತರ ಯಮದೂತರ ಯಾತನೆ ನೋಡಿ ನನಗೆ ನಿಮ್ಮ ನೆನಪು ಬಂತು. ನಿಮ್ಮ ಜ್ಞಾನ ಸತ್ಯವೆಂದು ಅನ್ನಿಸಿತು. ನಿಮ್ಮನ್ನು ಕರೆದೆ. ನೀವು ನನ್ನನ್ನು ರಕ್ಷಿಸಿದಿರಿ. ನನಗೆ ಮತ್ತೆ ಜೀವನವನ್ನು ಮರಳಿ ಪ್ರದಾನಿಸಿದಿರಿ. ಆಗ ನಾನು ಶ್ರದ್ಧೆಯಿಂದ ಭಕ್ತಿ ಮಾಡಿದೆ. ಪೂರ್ಣ ದೀಕ್ಷೆಯನ್ನು ಪಡೆದ ನಾನು ನಿಮ್ಮ ಕೃಪೆಯಿಂದ ಹಾಗೂ ಗುರುಗಳ ಸಹಯೋಗದಿಂದ ನಿಮ್ಮ ಚರಣಗಳಲ್ಲಿ ಬಂದು ತಲುಪಿದೆ. ಸತ್ಯಲೋಕಕ್ಕೆ ಹೋದ ಭಕ್ತನನ್ನು ಬೇರೆ ಭಕ್ತರ ಬಳಿ ಕಳುಹಿಸಲಾಗುತ್ತದೆ. ಅಲ್ಲಿ ಅವರಿಗೆ ಸುಂದರವಾದ ಅಮರ ಶರೀರ ಪ್ರಾಪ್ತವಾಗುವುದು. ಬಹಳ ದೊಡ್ಡದಾದ ಅರಮನೆ ಸಿಗುತ್ತದೆ. ಅಂಗಳದಲ್ಲಿ ವಿಮಾನವು ನಿಂತಿರುತ್ತದೆ. ಸಿದ್ಧಿಗಳು ಆಜ್ಞೆಗಾಗಿ ಕಾಯುತ್ತಿರುತ್ತವೆ. ವಿದ್ಯುತ್ತಿನ ಬಟನ್(ಸ್ವಿಚ್)ನ್ನು ಒತ್ತಿದ ತಕ್ಷಣ ಹೇಗೆ ವಿದ್ಯುತ್ತಿನಿಂದ ಚಲಿಸುವ ಯಂತ್ರವು ಕೆಲಸ ಮಾಡಲು ಪ್ರಾರಂಭಿಸುತ್ತದೆಯೋ ಹಾಗೆ ಅಲ್ಲಿ ವಚನವೆಂಬ ಬಟನ್(ಸ್ವಿಚ್) ಇದೆ. ನಿಮಗೆ ಯಾವ ವಸ್ತು ಬೇಕು ಹೇಳಿ. ಅದೇ ವಸ್ತು–

ಪದಾರ್ಥಗಳು ನಿಮ್ಮ ಬಳಿ ಹಾಜರಾಗುತ್ತವೆ. ಊಟ ಮಾಡುವ ಇಚ್ಛೆಯಾಗುತ್ತಿದ್ದಂತೆಯೇ, ನೀವು ಊಟ ಮಾಡುವ ಜಾಗದಲ್ಲಿ ತಟ್ಟೆ ಲೋಟಗಳನ್ನಿಡಲಾಗುತ್ತದೆ. ಸ್ವಲ್ಪ ಸಮಯದ ಬಳಿಕ ಊಟ ಮಾಡಬೇಕೆಂದು ಅನ್ನಿಸಿದರೆ, ಅದನ್ನೆಲ್ಲಾ ಅಡುಗೆ ಮನೆಯಲ್ಲಿ ಮುಚ್ಚಿಡಲಾಗುತ್ತದೆ ಮರು ಘಳಿಗೆಯೇ ತಿನ್ನಬೇಕೆನ್ನಿಸಿದರೆ ಅದಕ್ಕೂ ವ್ಯವಸ್ಥೆ ಮಾಡಲಾಗುತ್ತದೆ. ತಿರುಗಾಡುವ ಮನಸ್ಸಾದರೆ ವಿಮಾನವು ಚಲಿಸಲು ಸಿದ್ಧವಾಗುತ್ತದೆ. ವಿಮಾನದ ಬಳಿ ಹೋದ ತಕ್ಷಣವೇ ಅದರ ಬಾಗಿಲು ತೆರೆದುಕೊಳ್ಳುತ್ತದೆ. ವಿಮಾನವು ಸ್ಟಾರ್ಟ್ ಆಗುತ್ತದೆ. ಯಾವ ದ್ವೀಪಕ್ಕೆ ಹೋಗಲು ಇಚ್ಛೆಯಾಗುವುದೋ, ಅದೇ ಕಡೆಗೆ ವಿಮಾನವು ಹಾರುವುದು. ಇಷ್ಟಪಟ್ಟ ತಕ್ಷಣ ತಾಜಾ–ತಾಜಾ ಹಣ್ಣುಗಳನ್ನು ಮರಗಳಿಂದ ಕಿತ್ತು ತಂದು ನಿಮ್ಮ ಮುಂದೆ ಇಡಲಾಗುವುದು. ಕಾಲನಲೋಕವು ಸತ್ಯಲೋಕದ ನಕಲಾಗಿದೆ.

ಇದೇ ರೀತಿ ಸ್ತ್ರೀ–ಪುರುಷರ ಕುಟುಂಬಗಳಿವೆ ಸತ್ಯಲೋಕದಲ್ಲಿ ಎರಡು ರೀತಿಯಿಂದ ಸಂತಾನ ಉತ್ಪತ್ತಿಯಾಗುತ್ತದೆ. ಶಬ್ದರಿಂದ ಹಾಗೂ ಮೈಥುನದಿಂದ ಅದು ಹಂಸದ(ಭಕ್ತರ) ಮೇಲೆ ನಿರ್ಧಾರವಾಗುತ್ತದೆ. ಶಬ್ದರಿಂದ ಸಂತಾನೋತ್ಪತ್ತಿಯ ಕ್ಷೇತ್ರವು ಸತ್ಯಪುರುಷನ ಸಿಂಹಾಸನದ ನಾಲ್ಕೂ ಕಡೆ ಇದೆ. ನರ–ನಾರಿಯಿಂದ ಉತ್ಪತ್ತಿಯ ಕ್ಷೇತ್ರವು ಅದರ ನಂತರದ್ದಾಗಿದೆ. ಶಬ್ದದಿಂದ ಸಂತಾನವನ್ನು ಹುಟ್ಟಿಸುವವನು ಕೇವಲ ಮನುಷ್ಯರನ್ನು ಮಾತ್ರ ಹುಟ್ಟಿಸುತ್ತಾನೆ. ಸತ್ಯಲೋಕದಲ್ಲಿ ವೃದ್ಧಾಪ್ಯ ಇರುವುದಿಲ್ಲ. ನರ–ನಾರಿಯ ಕ್ಷೇತ್ರದಲ್ಲಿ ಹುಡುಗರು ಹಾಗೂ ಹುಡುಗಿಯರ ಇಬ್ಬರದು ಉತ್ಪತ್ತಿಯಾಗುತ್ತದೆ. ಕೇವಲ ವಚನದಿಂದ ಮದುವೆಯಾಗುತ್ತಾರೆ. ಅವರಿಗೆ ಹುಟ್ಟುವ ಮಕ್ಕಳು, ಅವು ಕಾಲನ ಲೋಕದಿಂದ ಮುಕ್ತರಾಗಿ ಬಂದ ಜೀವಾತ್ಮಗಳು. ನಂತರ ಎಂದಿಗೂ ಸಾಯುವುದೂ ಇಲ್ಲ, ಮುದುಕರಾಗುವುದೂ ಇಲ್ಲ. ಯಾರು ಮುಕ್ತರಾಗಿ ಸತ್ಯಲೋಕಕ್ಕೆ ತೆರಳುವರೋ, ಅವರಿಗೆ ಮೊದಲು ಸತ್ಯಪುರುಷರ ದರ್ಶನ ಮಾಡಿಸಲಾಗುತ್ತದೆ. ಆ ಸಮಯದಲ್ಲಿ ಅವರು ಭೂಮಿಯಿಂದ ಬಂದ ಸ್ವರೂಪದಲ್ಲೇ ಇರುತ್ತಾರೆ. ಆದರೆ ವೃದ್ಧರು ಕೆಳಗಿನಿಂದ ಹೊರಟರೆ ಅಲ್ಲಿ ಸತ್ಯಪುರುಷರ ಮುಂದೆ ಅದೇ ಸ್ವರೂಪದಲ್ಲಿ ಮತ್ತು ಅದೇ ಅವಸ್ಥೆಯಲ್ಲಿ ಹೋಗುತ್ತಾರೆ. ಅವನ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಾಗುತ್ತದೆ. ಅದರ ನಂತರ ಅವನನ್ನು ಎಲ್ಲಕ್ಕಿಂತ ಭಿನ್ನವಾದ ಜಾಗಕ್ಕೆ ಕಳುಹಿಸಲಾಗುತ್ತದೆ. ಆದರೆ ಮುದುಕರು ಅಲ್ಲಿಗೆ ಹೋದರೆ ಸ್ವರೂಪ ಹಾಗೆಯೇ ಇರುತ್ತದೆ. ಆದರೆ ಅವನ ಶರೀರದ ಪ್ರಕಾಶ 16 ಸೂರ್ಯದಷ್ಟಾಗುತ್ತದೆ. ಆದರೆ ವೃದ್ಧ ಕೆಳಗಿಂದ ಹೋದರೆ ಯುವ ಅವಸ್ಥೆ ಆಗುತ್ತದೆ. ಯುವಕರಾಗಿದ್ದರೆ ಯುವಕರಾಗೇ ಇರುತ್ತಾರೆ. ಬಾಲಕರಾಗಿದ್ದರೆ ಬಾಲಕರಾಗೇ ಇರುತ್ತಾರೆ. ಅಲ್ಲಿ ಕೆಲವರಿಗೆ ಸತ್ಯಪುರುಷನ ವಚನದಿಂದ ಸ್ತ್ರೀ–ಪುರುಷರ ಶರೀರವು ಲಭಿಸುವುದು. ಇನ್ನು ಕೆಲವರು ಬೀಜ ರೂಪದಲ್ಲಿ ಸತ್ಪುರುಷರ ಮೂಲಕ ಇನ್ಯಾವಾಗಲಾದರೂ ಯಾರಾದರೂ ಒಬ್ಬರ ಮನೆಯಲ್ಲಿ ಸತ್ಯಲೋಕದಲ್ಲಿ ಜನ್ಮವಾಗುವುದು. ಪರಿವಾರವಾಗುವುದು. ಆ ಸ್ಥಾನದಲ್ಲಿ ಕಾಲನಲೋಕ ಮತ್ತು ಅಕ್ಷರ ಪುರುಷನ ಲೋಕದಿಂದ ಮುಕ್ತರಾಗಿ ಬಂದ ಹಂಸರ (ಭಕ್ತರ) ಜನ್ಮವಾಗುವುದು. ಅವರನ್ನ ಏಕಾಂತ ಸ್ಥಳದಲ್ಲಿ ಇಡಲಾಗುತ್ತದೆ. ಅವರು ಎರಡೂ ಕ್ಷೇತ್ರದಲ್ಲಿ ಜನ್ಮ ತಾಳುತ್ತಾರೆ. (ವಚನದಿಂದ ಹುಟ್ಟುವವರು ಹಾಗೂ ಸ್ತ್ರೀ–ಪುರುಷರಿಂದ ಹುಟ್ಟಿದವರಲ್ಲಿ) ಸ್ತ್ರೀ–ಪುರುಷರಿಂದ ಹುಟ್ಟುವುದು ಸರಾಸರಿ ಅಧಿಕವಾಗಿರುತ್ತದೆ. ಇದು ಸರಾಸರಿ 10/90 ಆಗಿರುತ್ತದೆ. ಈ 10% ವಚನದಿಂದ ಉತ್ಪತ್ತಿ, 90% ವಿವಾಹದ ರೀತಿಯಿಂದ ಉತ್ಪತ್ತಿ ಆಗುತ್ತದೆ.

ಸತ್ಯಲೋಕದಲ್ಲಿ ಸ್ತ್ರೀ–ಪುರುಷರ ಶರೀರವು ಹದಿನಾರು ಸೂರ್ಯರ ಪ್ರಕಾಶದಷ್ಟಿರುತ್ತದೆ. ಮೊದಲು ಮಿನಿ ಸತ್ಯಲೋಕ, ಮಾನಸರೋವರ ಬರುವುದು. ಅಲ್ಲಿ ಇಬ್ಬರದೂ ಶರೀರವು 4 ಸೂರ್ಯರ ಪ್ರಕಾಶದಷ್ಟಿರುತ್ತದೆ. ನಂತರ ಅವರು ಮುಂದೆ ಹೋಗುತ್ತಾರೆ. ಪರಬ್ರಹ್ಮನ ಲೋಕದಲ್ಲಿ ರಚಿಸಲ್ಪಟ್ಟ ಅಷ್ಟ ಕಮಲದ ಬಳಿ ತಲುಪಿದಾಗ ಹಂಸಾತ್ಮಗಳ ಅಂದ್ರೆ ನರ–ನಾರಿಯರ ಶರೀರದ ಪ್ರಕಾಶವು. 12 ಸೂರ್ಯರ ಪ್ರಕಾಶದಷ್ಟಾಗುತ್ತದೆ. ನಂತರ ಸತ್ಯಲೋಕದಲ್ಲಿಯ ಭಂವರ್ ಗುಹೆಯಲ್ಲಿ ಪ್ರವೇಶಿಸಿದಾಗ ಪ್ರತಿಯೊಬ್ಬರ ಶರೀರದ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಾಗುತ್ತದೆ.

**ಪ್ರಮಾಣ ಕಬೀರ್ ಸಾಗರ್‌ದ 'ಮೊಹಮ್ಮದ್ ಭೋಧ' ಎಂಬ ಅಧ್ಯಾಯದಲ್ಲಿ ಪುಟ ಸಂಖ್ಯೆ 20, 21 ಮತ್ತು 22ರಲ್ಲಿ ದಶ್ ಮುಕಾಮಿ ರೇಖತಾ:–**

## "ದಶ್ ಮುಕಾಮಿ ರೇಖತಾ"

**21ನೇ ಪುಟದಿಂದ ಕೆಲವು ಅಂಶಗಳನ್ನು ಬರೆದಿರುವೆ:–**

ಭಯಾ ಆನಂದ್ ಫಂದ್ ಸಬ್ ಛೋಡಿಯಾ ಪಹುಂಚಾ ಜಹಾಂ ಸತ್ಯಲೋಕ್ ಮೇರಾ ॥
{ಹಂಸನೀ (ನಾರಿ ರೂಪದಲ್ಲಿ ಪುಣ್ಯಾತ್ಮಾಗಳು) ಹಂಸ್ (ನರ ರೂಪದಲ್ಲಿ ಪುಣ್ಯಾತ್ಮಾಗಳು)}
ಹಂಸನೀ ಹಂಸ್ ಸಬ್ ಗಾಯ್ ಬಜಾಯ್ ಕೇ ಸಾಜಿ
ಕೇ ಕಲಶ್ ಮೋಹೇ ಲೇನ್ ಆಏ ॥
ಯುಗನ್ ಯುಗನ್ ಕೇ ಬಿಛುಡೇ ಮಿಲೇ ತುಮ್ ಆಯ್
ಕೇ ಪ್ರೇಮ್ ಕರಿ ಅಂಗ್ ಸೇ ಅಂಗ್ ಲಾಏ ॥
ಪುರುಷ ದರ್ಶ್ ಜಬ್ ದೀನ್ಹಾ ಹಂಸ್ ಕೋ ತಪತ್ ಬಹು ಜನ್ಮ್ ಕೀ ತಬ್ ನಶಾಯೆಂ ॥
ಪಲಿಟ ಕರ್ ರೂಪ್ ಜಬ್ ಏಕ ಸಾ ಕೀನ್ಹಾ ಮಾನೋ
ತಬ್ ಭಾನು ಷೋಡಶ್ (16) ಉಗಾಯೇ ॥
ಪಹುಪ ಕೇ ದೀಪ್ ಪಯೂಷ್ (ಅಮೃತ್) ಭೋಜನ್ ಕರೆಂ
ಶಬ್ದ್ ಕೀ ದೇಹ್ ಸಬ್ ಹಂಸ್ ಪಾಈ ॥
ಪುಷ್ಪ್ ಕಾ ಸೆಹರಾ ಹಂಸ್ ಔರ್ ಹಂಸನೀ ಸಚ್ಚಿದಾನಂದ್ ಸಿರ್ ಛತ್ರ ಛಾಏ ॥
ದೀಪೈ ಬಹು ದಾಮಿನೀ ದಮಕ್ ಬಹು ಭಾಂತಿ ಕೀ
ಜಹಾಂ ಘನ್ ಶಬ್ದ್ ಕೋ ಘಮೋಡ್ ಲಾಈ ॥
ಲಗೇ ಜಹಾಂ ಬರಸನೇ ಘನ್ ಘೋರ್ ಕೈ ಉಠತ್ ತಹಾಂ ಶಬ್ದ್ ಧುನಿ ಅತಿ ಸೋಹಾಈ ॥
ಸುನ್ನ ಸೋಹೈಂ ಹಂಸ್–ಹಂಸನೀ ಯುತ್ಥ್ (ಜೋಡೀ–ಝುಂಡ್)
ಹೈ ಏಕಹೀ ನೂರ್ ಏಕ ರಂಗ್ ರಾಗೈ ॥
ಕರತ್ ಬಿಹಾರ್ (ಸೈರ್) ಮನ್ ಭಾವನೀ ಮುಕ್ತಿ ಮೆಂ
ಕರ್ಮ್ ಔರ್ ಭ್ರಮ್ ಸಬ್ ದೂರ್ ಭಾಗೇ ॥
ರಂಕ್ ಔರ್ ಭೂಪ್ (ರಾಜಾ) ಕೋಈ ಪರಖ್
ಆವೈ ನಹೀಂ ಕರತ್ ಕೋಲಾಹಲ್ ಬಹುತ್ ಪಾಗೇ ॥
ಕಾಮ್ ಔರ್ ಕ್ರೋಧ್ ಮದಲೋಭ್ ಅಭಿಮಾನ್ ಸಬ್ ಛಾಡಿ ಪಾಖಂಡ್ ಸತ್ ಶಬ್ದ್ ಲಾಗೇ ॥
ಪುರುಷ ಕೇ ಬದನ್ (ಶರೀರ್) ಕೌನ್ ಮಹಿಮಾ
ಕಹೂಂ ಜಗತ್ ಮೆಂ ಉಪಮಾ ಕಛು ನಾಹೀಂ ಪಾಯೀ ॥
ಚಂದ್ ಔರ್ ಸೂರ್ (ಸೂರ್ಯ) ಗಣ್ ಜ್ಯೋತಿ
ಲಾಗೈ ನಹೀಂ ಏಕ್ ಹೀ ನಖ್ (ನಾಖುನ್) ಪ್ರಕಾಶ್ ಭಾಈ ॥
ಪರವಾನಾ ಜಿನ್ ನಾದ್ ವಂಶ್ ಕಾ ಪಾಇಯಾ ಪಹುಂಚಿಯಾ ಪುರುಷ ಕೇ ಲೋಕ್ ಜಾಯೀ ॥
ಕಹ್ ಕಬೀರ್ ಯಹೀ ಭಾಂತಿ ಸೋ ಪಾಇಹೋ ಸತ್ಯ ಪುರುಷ್ ಕೀ ರಾಹ್ ಸೋ ಪ್ರಕಟ್ ಗಾಯೀ ॥

**ಭಾವಾರ್ಥ:– ಈ ವಾಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ ಏನಂದ್ರೆ ಕಬೀರ ಪರಮೇಶ್ವರರು ಸದ್ಗುರು ರೂಪದಲ್ಲಿ ಪೃಥ್ವಿಯಿಂದ ಧರ್ಮದಾಸನನ್ನು ಕರೆದುಕೊಂಡು ಸತ್ಯಲೋಕಕ್ಕೆ ಹೊರಟಾಗ ದಾರಿಯಲ್ಲಿ 9 ಸ್ಥಾನಗಳು ಬಂದವು. ಫಾರಸಿಯಲ್ಲಿ ಹೇಳುವಂತೆ ನಾಸೂತ್, ಮಲಕೂತ್ ಎಂಬ ಸ್ಥಾನಗಳಿಗೆ ಬಂದರು. ಈ ಏಳು ಆಕಾಶಗಳನ್ನು ದಾಟಿ ಅಚಿಂತ್, ವಿಷ್ಣುಲೋಕ ಮುಂತಾದವುಗಳನ್ನು ದಾಟಿ ಸತ್ಯಲೋಕಕ್ಕೆ ಬಂದು ತಲುಪಿದಾಗ ಧರ್ಮದಾಸರು ಹೇಳುತ್ತಿದ್ದಾರೆ. ನನ್ನನ್ನು ಆದರಪೂರ್ವಕವಾಗಿ ಕರೆದೊಯ್ಯಲು ಸತ್ಯಲೋಕದ ಹಂಸ(ನರ) ಹಂಸನೀ(ನಾರಿ) ಹಾಡುತ್ತಾ, ಕುಣಿಯುತ್ತಾ, ವಾದ್ಯಗಳನ್ನು ನುಡಿಸುತ್ತಾ, ಸ್ತ್ರೀಯರು ತಮ್ಮ ತಲೆಯಮೇಲೆ ಕಳಸಗಳನ್ನು ಹೊತ್ತುಕೊಂಡು ಕರೆದೊಯ್ಯಲು**

ಬಂದರು. ಅವರ ಶರೀರದ ಪ್ರಕಾಶವು 16 ಸೂರ್ಯರ ಪ್ರಕಾಶದಷ್ಟಿತ್ತು. ನನ್ನ ಶರೀರದ ಪ್ರಕಾಶವೂ ಸಹ ಅವರ ಶರೀರದ ಪ್ರಕಾಶದಷ್ಟು 16 ಸೂರ್ಯರ ಪ್ರಕಾಶದಷ್ಟಾಯ್ತು.

ಪೃಥ್ವಿಲೋಕದಿಂದ ಮೋಕ್ಷ ಪಡೆದು ಹೋಗುವ ಹಂಸವನ್ನು ಪುಹಪ್ ದ್ವೀಪಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಅಲ್ಲಿ ಸರ್ವ ಸುಖವಿದೆ, ಅದು ಸತ್ಯಲೋಕದ ಒಂದು ಭಾಗ. ಮೊಟ್ಟಮೊದಲಿಗೆ ಮೋಕ್ಷ ಪಡೆದು ಬಂದ ಜೀವಾತ್ಮನನ್ನು ಪುಹುಪ್ ದ್ವೀಪದಲ್ಲಿಡಲಾಗುತ್ತದೆ. ಅಲ್ಲಿಯ ದೃಶ್ಯದ ವರ್ಣನೆ ಹೇಳಲಾಗುತ್ತಿದೆ. ಇಲ್ಲಿಂದ ಅವರ ಜನ್ಮವು ಬೇರೆ ಸ್ಥಾನದಲ್ಲಿ, ಕುಟುಂಬದಲ್ಲಿ ಆಗುವುದು. ಇದರ ನಂತರ ಎಲ್ಲಿ ನರ–ನಾರಿಯರಿಂದ ಉತ್ಪತ್ತಿಯಾಗಿ ಪರಿವಾರವಾಗುವುದೋ ಆ ಸ್ಥಾನದ ವರ್ಣನೆ ಇದೆ. ಅಲ್ಲಿ ನರ–ನಾರಿಯರ ಸಮೂಹವು ಸುಖದಿಂದ ಕುಳಿತು ಮಾತನಾಡುತ್ತಿರುತ್ತದೆ. ಮುಂದೆ ಮೋಡ ಗರ್ಜಿಸುತ್ತವೆ, ಮಳೆ ಬೀಳುತ್ತದೆ. ಆ ಸ್ಥಾನ ಭಿನ್ನವಾಗಿದೆ ಅಲ್ಲಿ ಸತ್ಯಲೋಕದ ನಿವಾಸಿಗಳು ಪಿಕ್‌ನಿಕ್‌ಗೆ ಹೋಗುತ್ತಾರೆ. ಕೆಲವು ಇಂಥಹ ಸ್ಥಳಗಳಿವೆ ಅಲ್ಲಿ ಮೋಡ ಕಾಣುವುದಿಲ್ಲ, ಆದರೆ ಮಳೆಯಾಗುತ್ತಿರುತ್ತದೆ.

❖ ದೀಕ್ಷೆ ಪಡೆದ ನಂತರ ಸಾಧಕನು ಏನು ಮಾಡಬೇಕು? ಅದರ ಮಾಹಿತಿ ಪವಿತ್ರ ಕಬೀರ್ ಸಾಗರ್‌ದ ಅಧ್ಯಾಯ "ಧರ್ಮ್‌ಬೋಧ್" ದಲ್ಲೂ ಇದೆ. ದಯವಿಟ್ಟು ಅಧ್ಯಾಯ "ಧರ್ಮ್‌ಬೋಧ್" ದ ಸಾರಾಂಶ ಓದಿ:–

ಕಬೀರ್ ಸಾಗರ್‌ದ 'ಧರ್ಮ್‌ಬೋಧ್' ಎಂಬ 33ನೇ ಅಧ್ಯಾಯದಲ್ಲಿ {(ಪುಟ ಸಂಖ್ಯೆ 177 (1521)} ಇದೆ. ಈ ಅಧ್ಯಾಯದಲ್ಲಿ ಪರಮೇಶ್ವರ ಕಬೀರರು ಧರ್ಮ ಮಾಡುವುದರ ಬಗ್ಗೆ ವಿಶೇಷ ಜ್ಞಾನ ನೀಡಿದ್ದಾರೆ. ಕಬೀರ್ ಪರಮೇಶ್ವರರ ನಿಜವಾದ ಪಂಥದಲ್ಲಿ ದಿನದಲ್ಲಿ ಮೂರು ಬಾರಿ ಸಂಧ್ಯಾ ಮಾಡಲಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಸಂಧ್ಯಾ ಅರ್ಥ ಎರಡು ಹೊತ್ತಿನ ಮಿಲನ. ಹಗಲು ಮತ್ತು ರಾತ್ರಿಯ ಮಿಲನವು ಒಂದನೇ ಸಂಧ್ಯಾ ಬೆಳಿಗ್ಗೆಯದು, ರಾತ್ರಿಯ ಮುಕ್ತಾಯವಾಗುತ್ತದೆ. ಹಗಲಿನ ಶುಭಾರಂಭವಾಗುತ್ತದೆ. ಎರಡನೇ ಸಂಧ್ಯಾ ದಿನದ 12 ಗಂಟೆಗಾಗುತ್ತದೆ. ಆ ಸಮಯ ಏರುತ್ತಾ ಹೋಗುವ ದಿನದ ಮಧ್ಯಾಹ್ನ ಪೂರ್ಣಗಳ್ಳುತ್ತದೆ, ಇಳಿಯುತ್ತಾ ಹೋಗುವ ದಿನದ ಆರಂಭವಾಗುತ್ತದೆ. ಇದು ಮಧ್ಯಾಹ್ನದ ಸಂಧ್ಯಾ. ಮೂರನೇ ಸಂಧ್ಯಾ ಸಂಜೆಯ ಸಮಯದಲ್ಲಾಗುತ್ತದೆ. ಆ ಸಮಯದಲ್ಲಿ ಹಗಲು ಮತ್ತು ರಾತ್ರಿಯ ಮಿಲನವಾಗುತ್ತದೆ. ಆದರೆ ಸಾಮಾನ್ಯ ಜನರು ಸಂಜೆಯನ್ನು ಸಂಧ್ಯಾ ಎನ್ನುತ್ತಾರೆ. ಸಂಧ್ಯಾ ಇದರ ಅರ್ಥ ಪರಮಾತ್ಮನ ಸ್ತುತಿ (ಪ್ರಾರ್ಥನೆ) ಮಾಡುವುದು.

ವೇದಗಳಲ್ಲಿ ಪ್ರಮಾಣವಿದೆ, ಜಗತ್ತಿನ ಮುಕ್ತಿದಾತ ಅವನು ಮೂರು ಬಾರಿ ಸಂಧ್ಯಾ ಮಾಡುವನು ಹಾಗು ಮಾಡಿಸುವನು. ಬೆಳಿಗ್ಗೆ ಮತ್ತು ಸಂಜೆ ಪೂರ್ಣ ಪರಮಾತ್ಮನ ಸ್ತುತಿ ಮತ್ತು ಅರತಿ, ಮಧ್ಯಾಹ್ನದ ಸಮಯದಲ್ಲಿ ವಿಶ್ವದ ಎಲ್ಲಾ ದೇವತೆಗಳ ಸ್ತುತಿಯನ್ನು ಮಾಡಲು ಹೇಳುತ್ತಾನೆ. ಇದಕ್ಕೆ ಪ್ರಮಾಣವು ಋಗ್ವೇದದ 8ನೇ ಮಂಡಲದ 1ನೇ ಸೂಕ್ತಿಯ 29ನೇ ಮಂತ್ರ ಹಾಗೂ ಯಜುರ್ವೇದದ 19ನೇ ಅಧ್ಯಾಯದ 26ನೇ ಮಂತ್ರದಲ್ಲಿದೆ.

ಕಬೀರ್ ಸಾಗರ್‌ದ 'ಧರ್ಮ್‌ಬೋಧ್' ಎಂಬ ಅಧ್ಯಾಯದಲ್ಲಿ ಪುಟ ಸಂಖ್ಯೆ 177ರಲ್ಲಿಯೂ ಇದೇ ಪ್ರಮಾಣವಿದೆ.

ಸಾಂಝ್ ಸಕಾರ್ ಮಧ್ಯಾಹ್ನ್ ಸಂಧ್ಯಾ ತೀನೋಂ ಕಾಲ್ ।  
ಧರ್ಮ್ ಕರ್ಮ್ ತತ್ಪರ್ ಸದಾ ಕೀಜೈ ಸುರತಿ ಸಂಭಾಲ್ ॥

ಭಾವಾರ್ಥ:– ಭಕ್ತರು ಮೂರು ಕಾಲ(ಸಮಯ)ದ ಸಂಧ್ಯಾ ಮಾಡಬೇಕು. ಸಾಂಝ್ ಅಂದ್ರೆ ಸಂಜೆಯ ಹೊತ್ತು, ಸಕಾರ್ ಅಂದ್ರೆ ಬೆಳಿಗ್ಗೆ ಹಾಗು ಮಧ್ಯಾಹ್ನ ಅಂದ್ರೆ ಮಧ್ಯಾಹ್ನ (ದಿನದ ಮಧ್ಯ) ದಲ್ಲಿ ಸಂಧ್ಯಾ ಮಾಡುವಾಗ ಸುರತಿ ಅಂದ್ರೆ ಗಮನ ಆರತಿಯಲ್ಲಿ ಹೇಳಲಾದ ವಾಣಿಯ ಮೇಲೆ ಇಡಬೇಕು ಮತ್ತು ಧರ್ಮದ ಕಾರ್ಯದಲ್ಲಿ ಸದಾ ಸಿದ್ಧವಾಗಿರಬೇಕು, ಸೋಮಾರಿತನ (ಆಲಸ್ಯ) ಮಾಡಬಾರದು.

'ಧರ್ಮ್‌ಬೋಧ್' ಅಧ್ಯಾಯದ ಪುಟ ಸಂಖ್ಯೆ 178(1522) ರಲ್ಲಿ

ಕಬೀರ್, ಕೋಟಿನ್ ಕಂಟಕ್ ಘೇರಿ ಜ್ಯೋಂ ನಿತ್ಯ್ ಕ್ರಿಯಾ ನಿಜ್ ಕೀನ್ಹ್ ।
ಸುಮಿರನ್ ಭಜನ್ ಏಕಾಂತ್ ಮೇಂ ಮನ್ ಚಂಚಲ್ ಗಹ್ ಲೀನ್ ॥

**ಭಾವಾರ್ಥ:– ಭಕ್ತನಿಗೆ ಕೋಟಿಗಟ್ಟಲೆ ಕಷ್ಟಬಂದರೂ, ತನ್ನ ನಿತ್ಯದ ಕ್ರಿಯೆ (ಮೂರು ಸಮಯದ ಸಂಧ್ಯಾ) ಅವಶ್ಯ ಮಾಡಬೇಕು. ಹಾಗು ಚಂಚಲ ಮನಸ್ಸನ್ನು ಬದಿಗಿಟ್ಟು ಏಕಾಂತದಲ್ಲಿ ಪರಮಾತ್ಮನಿಂದ ಪಡೆದ ದೀಕ್ಷಾ ಮಂತ್ರವನ್ನು ಜಪಿಸಬೇಕು.**

ಕಬೀರ್, ಭಕ್ತೋಂ ಅರೂ ಗುರೂ ಕೀ ಸೇವಾ ಕರ್ ಶ್ರದ್ಧಾ ಪ್ರೇಮ್ ಸಹಿತ್ ।
ಪರಮ್ ಪ್ರಭು (ಸತ್ಯಪುರುಷ್) ಧ್ಯಾವಹೀ ಕರಿ ಅತಿಶ್ಯ ಮನ್ ಪ್ರೀತ್ ॥

**ಭಾವಾರ್ಥ:– ತಮ್ಮ ಗುರುದೇವರನ್ನು ಅಥವಾ ಸತ್ಸಂಗಕ್ಕೆ ಅಥವಾ ಮನೆಗೆ ಬರುವ ಭಕ್ತರನ್ನು ಯಾವಾಗಲೂ ಆದರದಿಂದ ಸೇವೆ ಮಾಡಿ. ಶ್ರದ್ಧೆ ಹಾಗು ಪ್ರೀತಿಯಿಂದ ಸೇವೆ ಮಾಡಬೇಕು. ಪರಮ ಪ್ರಭು ಅಂದರೆ ಪರಮ ಅಕ್ಷರ ಪುರುಷನ ಭಕ್ತಿಯನ್ನು ಅತ್ಯಂತ ಪ್ರೀತಿಯಿಂದ ಮಾಡಿ.**

## "ಭಕ್ತನು ಯತಿ ಮತ್ತು ಸತಿ ಯಾಗಿರಬೇಕು"

### "ಯತಿಯ ಲಕ್ಷಣ"

ಪುರುಷ್ ಯತಿ (ಜತಿ) ಸೋ ಜಾನಿಯೇ, ನಿಜ್ ತ್ರಿಯಾ ತಕ್ ವಿಚಾರ್ ।
ಮಾತಾ ಬಹನ್ ಪುತ್ರೀ ಸಕಲ್ ಔರ್ ಜಗ್ ಕೀ ನಾರ್ ॥

**ಭಾವಾರ್ಥ:– ಯಾರು ತನ್ನ ಹೆಂಡತಿಯನ್ನು ಬಿಟ್ಟು ಅನ್ಯ ಸ್ತ್ರೀಯಲ್ಲಿ ಪತ್ನಿಭಾವವನ್ನು ಹೊಂದುವುದಿಲ್ಲವೋ, ಅವನನ್ನು ಯತಿ ಪುರುಷನೆನ್ನುವರು. ಅವರ ವಯಸ್ಸಿಗೆ ಅನುಗುಣವಾಗಿ ಅವರನ್ನು ತಾಯಿ, ತಂಗಿ, ಪುತ್ರಿ ಎಂಬ ಭಾವನೆಯಿಂದ ಕಾಣಬೇಕು.**

### "ಸತಿ ಸ್ತ್ರೀಯ ಲಕ್ಷಣ"

ಸ್ತ್ರಿ ಸೋ ಜೋ ಪತಿವ್ರತ್ ಧರ್ಮ್ ಧರೈ, ನಿಜ್ ಪತಿ ಸೇವತ್ ಜೋಯ್ ॥
ಅನ್ಯ ಪುರುಷ್ ಸಬ್ ಜಗತ್ ಮೆಂ ಪಿತಾ ಭ್ರಾತ್ ಸುತ್ ಹೋಯ್ ॥
ಅಪನೆ ಪತಿ ಕೀ ಆಜ್ಞಾ ಮೆಂ ರಹೈ, ನಿಜ್ ತನ್ ಮನ್ ಸೇ ಲಾಗ್ ॥
ಪಿಯಾ ವಿಪರೀತ್ ನ ಕಛು ಕರೈ, ತಾ ತ್ರಿಯಾ ಕೋ ಬಡ್ ಭಾಗ್ ॥

**ಭಾವಾರ್ಥ:– ಯಾರು ತನ್ನ ಪತಿಯನ್ನು ಅತ್ಯಂತ ಪ್ರೀತಿಸುವಳೋ ಅವಳನ್ನು ಸತಿ ಸ್ತ್ರೀ ಎಂದು ಕರೆಯಲಾಗುತ್ತದೆ. ತನ್ನ ಪತಿಯ ವಿನಃ ಪ್ರಪಂಚದ ಅನ್ಯ ಪುರುಷರನ್ನು ಅವರ ವಯಸ್ಸಿಗನುಗುಣವಾಗಿ ತಂದೆ, ಅಣ್ಣ ಹಾಗೂ ಮಗನಂತೆ ಕಾಣುವಳೋ ಅವಳೇ ಸತೀ ಸ್ತ್ರೀ. ಅವಳು ಯಾವಾಗಲೂ ತನ್ನ ಪತಿಯ ಆದೇಶವನ್ನು ಪಾಲಿಸಬೇಕು. ತನು, ಮನದಿಂದ ಸೇವೆ ಮಾಡಬೇಕು. ಯಾವ ಕೆಲಸವನ್ನೂ ಪತಿಗೆ ವಿರುದ್ಧವಾಗಿ ಮಾಡಬಾರದು.**

## "ದಾನ ಮಾಡುವುದು ಎಷ್ಟು ಅನಿವಾರ್ಯವಾಗಿದೆ"

ಕಬೀರ್, ಮನೋಕಾಮನಾ ಬಿಹಾಯ್ ಕೇ ಹರ್ಷ್ ಸಹಿತ್ ಕರೆ ದಾನ್ ।
ತಾಕಾ ತನ್ ಮನ್ ನಿರ್ಮಲ್ ಹೋಯ್, ಹೋಯ್ ಪಾಪ್ ಕೀ ಹಾನ್ ॥
ಕಬೀರ್, ಯಜ್ಞ ದಾನ್ ಬಿನ್ ಗುರೂ ಕೆ, ನಿಶ್ ದಿನ್ ಮಾಲಾ ಫೇರ್ ।
ನಿಷ್ಫಲ್ ವಹ್ ಕರನೀ ಸಕಲ್, ಸತ್‌ಗುರು ಭಾಖೈ ಟೇರ್ ॥
ಪ್ರಥಮ್ ಗುರು ಸೆ ಪೂಛಿಎ, ಕೀಜೈ ಕಾಜ್ ಬಹೋರ್ ।
ಸೋ ಸುಖದಾಯಕ್ ಹೋತ್ ಹೈ, ಮಿಟೈ ಜೀವ್ ಕಾ ಖೋರ್ ॥

**ಭಾವಾರ್ಥ:– ಯಾರು ಯಾವುದೇ ಮನೋಕಾಮನೆ ಇಲ್ಲದೆ ದಾನ ಮಾಡುವರೋ. ಅಂಥಾ ದಾನವು ಎರಡೂ ಫಲಗಳನ್ನು ನೀಡುವುದು. ಬದುಕಿದ್ದಾಗ ಕಾರ್ಯಸಿದ್ಧಿಯಾಗುವುದು. ಹಾಗೂ ಭವಿಷ್ಯಕ್ಕಾಗಿ ಪುಣ್ಯ ಸಂಗ್ರಹವಾಗುವುದು. ಯಾರು ತನ್ನ ಇಚ್ಛೆಯ ಪೂರ್ತಿಗಾಗಿ ದಾನ**

ಮಾಡುತ್ತಾರೆ, ಅದು ಕಾರ್ಯ ಸಿದ್ಧಿಯಾದ ನಂತರ ಸಮಾಪ್ತವಾಗುತ್ತದೆ. ಇಚ್ಛೆಯಿಲ್ಲದೆ ಮಾಡುವ ದಾನವು ಆತ್ಮವನ್ನು ಶುದ್ಧಿಗೊಳಿಸುತ್ತದೆ. ಪಾಪವನ್ನು ನಾಶಮಾಡುತ್ತದೆ.

❖ ಮೊದಲು ಗುರು ಧಾರಣೆ ಮಾಡಿಕೊಳ್ಳಬೇಕು. ನಂತರ ಗುರುಗಳ ನಿರ್ದೇಶನದಂತೆ ದಾನವನ್ನು ಮಾಡಬೇಕು. ಗುರುವಿಲ್ಲದೆ ನೀವು ಎಷ್ಟೇ ದಾನ ಮಾಡಿದರೂ, ಎಷ್ಟೇ ಜಪ ಮಾಡಿದರೂ, ಎಲ್ಲವೂ ವ್ಯರ್ಥ ಪ್ರಯತ್ನ. ಇದನ್ನು ಸದ್ಗುರು ಕೂಗಿ ಕೂಗಿ ಹೇಳುತ್ತಾರೆ.

❖ ನೀವು ಯಾವುದಾದರೂ ಹೊಸ ಕೆಲಸವನ್ನು ಪ್ರಾರಂಭಿಸಬೇಕಾದರೆ ಮೊದಲು ಗುರುವಿನ ಅನುಮತಿಯನ್ನು ಪಡೆದುಕೊಳ್ಳಿ. ಆಗ ಆ ಕೆಲಸವು ಸುಖದಾಯಕವಾಗುವುದು ಹಾಗೂ ಮನಸ್ಸಿನ ಚಿಂತೆ ದೂರಮಾಡುವುದು.

ಕಬೀರ್, ಅಭ್ಯಾಗತ್ ಆಗಮ್ ನಿರಖಿ, ಆದರ್ ಮಾನ್ ಸಮೇತ್ ।
ಭೋಜನ್ ಭಾಜನ್, ಬಿತ್ ಯಥಾ, ಸದಾ ಕಾಲ್ ಜೋ ದೇತ್ ॥

ನಿಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ನಿಮ್ಮ ಆರ್ಥಿಕ ಸ್ಥಿತಿ ಅನುಸಾರ ಅವರಿಗೆ ಆದರದಿಂದ, ಭೋಜನ ಹಾಗು ಕುಳಿತುಕೊಳ್ಳಲು ಚಾಪೆ ಯಾವಾಗಲೂ ಕೊಡಬೇಕು.

ಸೋಈ ಮ್ಲೇಚ್ಛ್ ಸಮ್ ಜಾನಿಯೇ, ಗೃಹೀ ಜೋ ದಾನ್ ವಿಹೀನ್ ।
ಯಹೀ ಕಾರಣ ನಿತ್ ದಾನ್ ಕರೇ, ಜೋ ನರ್ ಚತುರ್ ಪ್ರವಿನ್ ॥

ಯಾವ ಗೃಹಸ್ಥನು ದಾನ ಮಾಡುವುದಿಲ್ಲವೋ, ಅವನು ಮ್ಲೇಚ್ಛ್ ಅಂದ್ರೆ ದುಷ್ಟ ವ್ಯಕ್ತಿಗೆ ಸಮಾನ, ಆದ್ದರಿಂದ ಹೇ ಬುದ್ಧಿವಂತನೇ ಸದಾ ದಾನ ಮಾಡು.

ಪಾತ್ರ್ ಕುಪಾತ್ರ್ ವಿಚಾರ್ ಕೇ ತಬ್ ದೀಜೈ ತಾಹಿ ದಾನ್ ।
ದೇತಾ ಲೇತಾ ಸುಖ್ ಲಹ್ ಅಂತ್ ಹೋಯ್ ನಹೀಂ ಹಾನ್ ॥

ಕುಪಾತ್ರನಿಗೆ ದಾನ ಮಾಡಬಾರದು. ಸುಪಾತ್ರನಿಗೆ ಸಂತೋಷದಿಂದ ದಾನ ಮಾಡಬೇಕು. ಗುರುಗಳನ್ನು ಸುಪಾತ್ರರೆಂದು ಹೇಳಿದ್ದಾರೆ. ಯಾರಾದರೂ ಹಸಿವಿನಿಂದ ಇದ್ದರೆ ಅವರಿಗೆ ಊಟ ಕೊಡಬೇಕು. ರೋಗಿಗಳ ಉಪಚಾರ ಸಮಕ್ಷಮ ನಿಂತು ದುಡ್ಡು ಕೊಟ್ಟು ಮಾಡಬೇಕು, ಬರಪೀಡಿತರಿಗೆ, ಪ್ರವಾಹದಲ್ಲಿ ಮನೆ ಕಳೆದುಕೊಂಡವರಿಗೆ, ಸಮೂಹ ಮಾಡಿ ಭೋಜನ–ವಸ್ತ್ರ ತಮ್ಮ ಕೈ ಯಿಂದ ಕೊಡುವುದು. ಸುಪಾತ್ರನಿಗೆ ಕೊಟ್ಟ ದಾನ ಎಂದು ಕರೆಯಲ್ಪಡುತ್ತದೆ. ಇದರಿಂದ ಯಾವುದೇ ಹಾನಿಯಾಗಲ್ಲ.

**"ಧರ್ಮ್ ಬೋಧ್ ಪುಟ 179ರ ಸಾರಾಂಶ"**

ಕಬೀರ್, ಫಲ್ ಕಾರಣ್ ಸೇವಾ ಕರ್ರೈ, ನಿಶದಿನ್ ಯಾಚೈ ರಾಮ್ ।
ಕಹ್ ಕಬೀರ್ ಸೇವಾ ನಹೀಂ, ಜೋ ಚಾಹೈ ಚೌಗುನೆ ದಾಮ್ ॥

ಭಾವಾರ್ಥ:– ಯಾವುದಾದರೂ ಕಾರ್ಯಸಿದ್ಧಿಗಾಗಿ ಸೇವೆ (ಪೂಜೆ) ಮಾಡುತ್ತಾನೆ, ಹಗಲಿರುಳು ಪರಮಾತ್ಮನಿಂದ ಬೇಡುತ್ತಿರುತ್ತಾನೆ. ಪರಮಾತ್ಮ ಕಬೀರರು ಹೇಳುತ್ತಾರೆ ಯಾರು ನಾಲ್ಕುಪಟ್ಟು ಹೆಚ್ಚು ದುಡ್ಡು ಸೇವೆಯ ಬದಲಾಗಿ ಇಚ್ಛಿಸುವನೋ ಅವನ ಸೇವೆ ಸೇವೆಯಲ್ಲ.

ಕಬೀರ್, ಸಜ್ಜನ್ ಸಗೆ ಕುಟಂಬ್ ಹಿತು, ಜೋ ಕೋಈ ದ್ವಾರೈ ಆವ್ ।
ಕಬಹು ನಿರಾದರ್ ನ ಕೀಜಿಏ, ರಾಖೈ ಸಬ್ ಕಾ ಭಾವ್ ॥

ಭಾವಾರ್ಥ:– ಸಜ್ಜನರೇ ಸಗೆ ಅಂದ್ರೆ ಸಂಬಂಧಿಕರು, ಕುಟುಂಬ್ ಅಂದ್ರೆ ಪರಿವಾರದವರು ಹಾಗು ಹಿತು ಅಂದ್ರೆ ನಿಮ್ಮ ಹಿತೈಷಿಗಳು ನಿಮ್ಮ ಮನೆ ಬಾಗಿಲಿಗೆ ಬಂದಾಗ ಅವರಿಗೆ ಎಂದಿಗೂ ಅವಮಾನ ಮಾಡಬಾರದು. ಎಲ್ಲರಿಗೂ ಗೌರವ ಕೊಡಬೇಕು.

ಕಬೀರ್, ಕೋಡೀ–ಕೋಡೀ ಜೋಡೀ ಕರ್ ಕೀನೇ ಲಾಖ್ ಕರೋರ್ ।
ಪೈಸಾ ಏಕ ನಾ ಸಂಗ್ ಚಲೈ, ಕೇತೇ ದಾಮ್ ಬಟೋರ್ ॥

ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿಟ್ಟುಕೊಂಡು ದಾನ ಧರ್ಮ ಮಾಡದಿದ್ದರೆ. ಈ ಪ್ರಪಂಚ ಬಿಟ್ಟು ಹೋಗುವಾಗ ಒಂದು ರೂಪಾಯಿಯನ್ನೂ ತೆಗೆದುಕೊಂಡು ಹೋಗುವುದಿಲ್ಲ. ಎಷ್ಟೇ ಸಂಪಾದಿಸಿದ್ದರೂ, ಅದನ್ನು ಬಿಟ್ಟು ಹೋಗಬೇಕು.

ಜೋ ಧನ್ ಹರಿಕೇ ಹೇತ್, ಧರ್ಮ್ ರಾಹ್ ನಹೀಂ ಲಗಾತ್ ।
ಸೋ ಧನ್ ಚೋರ್ ಲಬಾರ್ ಗಹ್, ಧರ್ ಛಾತೀ ಪರ್ ಲಾತ್ ॥

ಭಾವಾರ್ಥ:– ಯಾರ ಹಣವು ಪರಮಾತ್ಮನಿಗಾಗಿ ಖರ್ಚು ಮಾಡಲ್ಪಡುವುದಿಲ್ಲವೋ, ದಾನ ಧರ್ಮಕ್ಕಾಗಿ ವ್ಯಯವಾಗುವುದಿಲ್ಲವೋ, ಆ ಹಣವು ಕಳ್ಳರ, ಲೂಟಿಕೋರರ ಪಾಲಾಗುವುದು. ಅವರು ಒದ್ದು ಅಂದ್ರೆ ಹೆದರಿಸಿ ಕಿತ್ತುಕೊಂಡು ಹೋಗುತ್ತಾರೆ.

ಸತ್ ಕಾ ಸೌದಾ ಜೋ ಕರ್ರೈ, ದಮ್ಭ್ ಛಲ್ ಛಿದ್ರ ತ್ಯಾಗ್ರೈ ।
ಅಪನೇ ಭಾಗ್ ಕಾ ಧನ್ ಲಹ್ರೈ, ಪರಧನ್ ವಿಷ್ ಸಮ್ ಲಾಗ್ರೈ ॥

ಭಾವಾರ್ಥ:– ನಿಮ್ಮ ಜೀವನದಲ್ಲಿ ಪರಮಾತ್ಮನಿಗೆ ಹೆದರಿ ಸತ್ಯದ ಆಧಾರದಿಂದ ಎಲ್ಲಾ ಕರ್ಮವನ್ನು ಮಾಡಬೇಕು. ನಿಮ್ಮ ಹಣೆಬರಹದಲ್ಲಿ ಎಷ್ಟು ಸಂಪತ್ತು ಬರೆದಿದೆಯೋ, ಅದರಲ್ಲೇ ಸಂತೋಷ ಪಡಬೇಕು. ಪರಧನವು ವಿಷಕ್ಕೆ ಸಮಾನವೆಂದು ತಿಳಿಯಬೇಕು.

ಭೂಖಾ ಜಹಿ ಘರ್ ತೇ ಫಿರ್ರೈ, ತಾಕೋ ಲಾಗ್ರೈ ಪಾಪ್ ।
ಭೂಖೋಂ ಭೋಜನ್ ಜೋ ದೇತ್ ಹೈ, ಕಟ್ರೈಂ ಕೋಟಿ ಸಂತಾಪ್ ॥

ಭಾವಾರ್ಥ:– ಯಾರ ಮನೆಯಿಂದ ಒಬ್ಬನು ಹಸಿವಿನಿಂದಲೇ ಹಿಂತಿರುಗುತ್ತಾನೋ, ಅವರಿಗೆ ಪಾಪ ತಗುಲುವುದು. ಹಸಿದವನಿಗೆ ಊಟ ಕೊಡುವುದರಿಂದ ಕೋಟಿಗಟ್ಟಲೆ ವಿಘ್ನಗಳು ದೂರವಾಗುವವು.

ಪ್ರಥಮ್ ಸಂತ್ ಕೋ ಜೀಮಾಇಏ । ಪೀಛೆ ಭೋಜನ್ ಭೋಗ್ ।
ಐಸೆ ಪಾಪ್ ಕೋ ಟಾಲಿಯೆ, ಕಟೇ ನಿತ್ಯ ಕಾ ರೋಗ್ ॥

ಭಾವಾರ್ಥ:– ನಿಮ್ಮ ಮನೆಗೆ ಯಾರಾದರೂ ಸಂತರು (ಭಕ್ತರು ಆಗಮಿಸಿದರೆ, ಅವರಿಗೆ ಮೊದಲು ಊಟ ಬಡಿಸಬೇಕು. ನಂತರ ನೀವು ಊಟ ಮಾಡಬೇಕು. ಈ ರೀತಿ ನಿಮ್ಮ ತಲೆಯ ಮೇಲೆ ದಿನವೂ ಬಂದೊದಗುವ ಪಾಪಗಳನ್ನು ದೂರ ಮಾಡಿಕೊಳ್ಳಬೇಕು.

**ಧರ್ಮ್‌ಬೋಧ್ ಪುಟ 180ರ ಸಾರಾಂಶ:–**

ಕಬೀರ್, ಯದ್ಯಪಿ ಉತ್ತಮ್ ಕರ್ಮ್ ಕರಿ, ರಹೈ ರಹಿತ್ ಅಭಿಮಾನ್ ।
ಸಾಧು ದೇಖೀ ಸಿರ್ ನಾವತೇ, ಕರತೇ ಆದರ್ ಮಾನ್ ॥

ಭಾವಾರ್ಥ:– ಅಹಂಕಾರವನ್ನು ಬಿಟ್ಟು ಒಳ್ಳೆಯ ಕೆಲಸ ಮಾಡಬೇಕು. ಸಂತರು, ಭಕ್ತರು ಬರುವುದನ್ನು ಕಂಡಾಗ ಅವರಿಗೆ ತಲೆ ಬಗ್ಗಿಸಿ ನಮಸ್ಕರಿಸಬೇಕು ಹಾಗು ಅವರನ್ನು ಗೌರವದಿಂದ ಕಾಣಬೇಕು.

ಕಬೀರ್, ಬಾರ್–ಬಾರ್ ನಿಜ್ ಶ್ರವಣತೆಂ, ಸುನೇ ಜೋ ಧರ್ಮ್ ಪುರಾಣ್ ।
ಕೋಮಲ್ ಚಿತ್ ಉದಾರ್ ನಿತ್, ಹಿಂಸಾ ರಹಿತ್ ಬಖಾನ್ ॥

ಭಾವಾರ್ಥ:– ಭಕ್ತನು ಬಾರಿ–ಬಾರಿ ಧರ್ಮ–ಕರ್ಮದ ವಿಷಯದಲ್ಲಿ ಸತ್ಸಂಗ ಜ್ಞಾನವನ್ನು ಪಡೆದು ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಅಹಿಂಸೆ ಪರಮ ಧರ್ಮ ಎನ್ನುವುದನ್ನು ಅರಿಯಬೇಕು. ಹೀಗೆ ಅಹಿಂಸೆಗೆ ಸಂಬಂಧ ಪಟ್ಟ ಪ್ರವಚನ ಕೇಳಬೇಕು.

ಕಬೀರ್, ನ್ಯಾಯ್ ಧರ್ಮಯುಕ್ತ್ ಕರ್ಮ್ ಸಬ್ ಕರ್ರೈಂ,ನ ಕರ್ ನಾ ಕಬಹೂ ಅನ್ಯಾಯ್ ।
ಜೋ ಅನ್ಯಾಯೀ ಪುರುಷ್ ಹೈಂ, ಬಂಧೆ ಯಮಪುರ್ ಜಾಏಂ ॥

ಭಾವಾರ್ಥ:– ಯಾವಾಗಲೂ ನ್ಯಾಯಬದ್ಧವಾದ ಕರ್ಮ ಮಾಡಬೇಕು. ಎಂದಿಗೂ ಅನ್ಯಾಯ ಮಾಡಬಾರದು. ಯಾರು ಅನ್ಯಾಯ ಮಾಡುವರೋ, ಅವರು ಯಮಧರ್ಮರಾಜನ ಲೋಕದಲ್ಲಿ ನರಕಕ್ಕೆ ತಳ್ಳಲ್ಪಡುವರು.

**ಧರ್ಮ್ ಬೋಧ್ ಪುಟ 181ರ ಸಾರಾಂಶ:–**

ಕಬೀರ್, ಗೃಹ್ ಕಾರಣ್ ಮೆಂ ಪಾಪ್ ಬಹು, ನಿತ್ ಲಾಗ್ಯೆ ಸುನ್ ಲೋಯ್ ।
ತಾಹಿತೇ ದಾನ್ ಅವಶ್ಯ್ ಹೈ, ದೂರ್ ತಾಹಿತೇ ಹೋಯ್ ॥
ಕಬೀರ್, ಚಕ್ಕೀ ಚೌಂಕೈ ಚೂಲ್ಹ್ ಮೆಂ, ಝಾಡೂ ಅರೂ ಜಲ್‌ಪಾನ್ ।
ಗೃಹ್ ಆಶ್ರಮೀ ಕೋ ನಿತ್ಯ ಯಹ್, ಪಾಪ್ ಪಾಂಚೈ ವಿಧಿ ಜಾನ್ ॥

**ಭಾವಾರ್ಥ:–** ಗ್ರಹಸ್ಥಿಗೆ ಬೀಸುವ ಕಲ್ಲಿನಿಂದ ಧಾನ್ಯ ಬೀಸುವುದರಿಂದ, ಅಡಿಗೆ ಮಾಡಲು ಒಲೆ ಉರಿಸಲು ಬೆಂಕಿ ಬಳಸಬೇಕಾಗುವುದರಿಂದ, ಚೌಂಕಾ ಅಂದ್ರೆ ನೆಲ ಸಾರಿಸುವಾಗ, ಗುಡಿಸುವಾಗ ಹಾಗು ತಿನ್ನುವಾಗ, ಕುಡಿಯುವಾಗ ಈ ರೀತಿ 5 ಪ್ರಕಾರಗಳಿಂದ ಪಾಪ ತಗಲುತ್ತದೆ. ಹೇ ಪ್ರಪಂಚದ ವ್ಯಕ್ತಿಗಳೆ ಕೇಳಿ, ಈ ಕಾರಣಗಳಿಂದ ನಿಮಗೆ ದಿನವೂ ಒಂದಿಲ್ಲೊಂದು ಪಾಪ ತಗುಲುತ್ತಿರುವುದು. ಆದ್ದರಿಂದ ದಾನ ಮಾಡುವುದು ಅತ್ಯಂತ ಅವಶ್ಯಕ. ಈ ಪಾಪಗಳು ದಾನ ಮಾಡುವುದರಿಂದಲೇ ನಾಶವಾಗುವುದು.

ಕಬೀರ್, ಕಭು ಕಟೆಂ ಸತ್ಸಂಗ್ ತೆ, ಕಭು ನಾಮ್ ಕೇ ಜಾಪ್ ।
ಕಭು ಸಂತ್ ಕೇ ದರ್ಶತೆ, ಕಭು ದಾನ್ ಪ್ರತಾಪ್ ॥

**ಭಾವಾರ್ಥ:–** ಅನೇಕ ಧಾರ್ಮಿಕ ಕ್ರಿಯೆಗಳಿಂದ ಭಕ್ತರ ಪಾಪಗಳು ನಾಶವಾಗುತ್ತವೆ. ಕೆಲವು ಪಾಪವು ಸತ್ಸಂಗದ ಪ್ರವಚನಗಳನ್ನು ಕೇಳುವುದರಿಂದ, ಕೆಲವು ಪಾಪವು ನಾಮ ಸ್ಮರಣೆ ಮಾಡುವುದರಿಂದ ಮತ್ತು ಕೆಲವು ಸಂತರ ದರ್ಶನ ಪಡೆಯುವುದರಿಂದ ನಾಶವಾಗುತ್ತವೆ, ಮತ್ತು ಕೆಲವು ದಾನದ ಪ್ರಭಾವದಿಂದ ನಾಶವಾಗುತ್ತವೆ.

ಬಟ್ಟೆ ತೊಟ್ಟಾಗ ಧೂಳು, ಮಣ್ಣು ಮೆತ್ತಿಕೊಳ್ಳುವುದರಿಂದ ಬಟ್ಟೆಯು ಕೊಳೆಯಾಗುತ್ತದೆ. ಅದನ್ನು ಸಾಬೂನಿನಿಂದ ತೊಳೆಯಲಾಗುತ್ತದೆ. ಹಾಗೆಯೇ ದಿನನಿತ್ಯದ ಕಾರ್ಯದಲ್ಲಿ ಪಾಪ ತಗಲುವುದು ಸ್ವಾಭಾವಿಕ. ಅದೇ ರೀತಿ ಬಟ್ಟೆಯ ಹಾಗೆ ಸತ್ಸಂಗ ವಚನ, ನಾಮಸ್ಮರಣೆ, ದಾನ ಹಾಗು ಸಂತರ ದರ್ಶನದಂಥ ಸಾಬೂನು, ನೀರಿನಿಂದ ದಿನ ತೊಳೆದರೆ ಆತ್ಮವು ನಿರ್ಮಲಗೊಳ್ಳುವುದು. ಮನಸ್ಸಿನಿಂದ ಭಕ್ತಿ ಮಾಡಬಹುದು.

ಕಬೀರ್, ಜೋ ಧನ್ ಪಾಯ್ ನ ಧರ್ಮ್ ಕರತ್, ನಾಹೀಂ ಸದ್ ವ್ಯೌಹಾರ್ ।
ಸೋ ಪ್ರಭು ಕೇ ಚೋರ್ ಹ್ಯೆಂ, ಫಿರತೇ ಮಾರೋ ಮಾರ್ ॥

**ಪರಮಾತ್ಮನು ಕೊಟ್ಟ ಹಣದಲ್ಲಿ ಯಾರು ಸ್ವಲ್ಪವೂ ದಾನ ಮಾಡುವುದಿಲ್ಲವೋ, ಒಳ್ಳೆಯ ಕೆಲಸ ಮಾಡುವುದಿಲ್ಲವೋ, ಅವರು ಪರಮಾತ್ಮನ ಆಸ್ಥಾನದಲ್ಲಿ ಕಳ್ಳರು. ಅವರಿಗೆ ಮಾಯೆ ಆವರಿಸಿಕೊಂಡಿರುತ್ತದೆ. ಇದರ ಬಗ್ಗೆ ಸಂತ ಗರೀಬ್‌ದಾಸರು ಸಹ ಹೇಳಿದ್ದಾರೆ.**

ಜಿನ್ ಹರ್ ಕೀ ಚೋರೀ ಕರೀ ಔರ್ ಗಏ ರಾಮ್ ಗುಣ್ ಭೂಲ್ ।
ತೇ ವಿಧನಾ ಬಾಗುಲ್ ಕಿಏ, ರಹೇ ಊರ್ಧ್ ಮುಖ್ ಝೂಲ್ ॥

**ಭಾವಾರ್ಥ:–** ಇದನ್ನೇ ಗೀತೆಯ 3ನೇ ಅಧ್ಯಾಯದ 10 ರಿಂದ 13ನೇ ಶ್ಲೋಕದಲ್ಲಿ ಹೇಳಿದೆ. ಯಾರು ಪರಮಾತ್ಮನ ಮೂಲಕ ನೀಡಿದ ಹಣದಿಂದ ದಾನ ಧರ್ಮವನ್ನು ಮಾಡುವುದಿಲ್ಲವೋ, ಅವರು ಕಳ್ಳರಿಗೆ ಸಮಾನ. ಅಂಥವರು ಕೇವಲ ಅವರ ಉದರ ಪೋಷಣೆಗಾಗಿ ಊಟ ಮಾಡುತ್ತಾರೆ. ಧರ್ಮ ಕರ್ಮಗಳ ಮಾಡುವುದಿಲ್ಲ. ಅವರಂತು ಪಾಪವೇ ತಿನ್ನುತ್ತಿದ್ದಾರೆ.

**"ಮಕ್ಕಳಿಗೆ ಶಿಕ್ಷಣವನ್ನು ಅವಶ್ಯ ಕೊಡಿಸಬೇಕು"**

ಕಬೀರ್, ಮಾತ್ ಪಿತಾ ಸೋ ಶತ್ರು ಹೈಂ, ಬಾಲ್ ಪಢಾವೈಂ ನಾಹಿಂ ।
ಹಂಸನ್ ಮೆಂ ಬಗುಲಾ ಯಥಾ, ತಥಾ ಅನ್‌ಪಢ್ ಸೋ ಪಂಡಿತ್ ಮಾಹೀಂ ॥

**ಭಾವಾರ್ಥ:–** ಯಾರು ತಮ್ಮ ಮಕ್ಕಳನ್ನು ಓದಿಸುವುದಿಲ್ಲವೋ ಅವರು ತಮ್ಮ ಮಕ್ಕಳ ಶತ್ರುಗಳಿದ್ದಂತೆ, ಅಶಿಕ್ಷಿತ ವ್ಯಕ್ತಿಯು ಶಿಕ್ಷಿತ ವ್ಯಕ್ತಿಗಳ ಮಧ್ಯದಲ್ಲಿ ಹಂಸಗಳ ಮಧ್ಯೆ ಬಕಪಕ್ಷಿಯಿದ್ದಂತೆ

ಇರುವನು, ಇಲ್ಲಿ ಶಿಕ್ಷಿತರನ್ನಾಗಿ ಮಾಡುವುದರ ಅರ್ಥ ಅವರಿಗೆ ಧಾರ್ಮಿಕ ಜ್ಞಾನವನ್ನು ನೀಡುವುದು, ಸತ್ಸಂಗಕ್ಕೆ ಕರೆದೊಯ್ಯುವುದು ಎಂದರ್ಥ.

ಯಾರಿಗಾದರೂ ಆಧ್ಯಾತ್ಮಿಕ ಜ್ಞಾನವಿಲ್ಲದಿದ್ದರೆ ಅವರಿಗೆ ಶುಭ–ಅಶುಭ ಕಾರ್ಯಗಳ ಬಗ್ಗೆ ಅರಿವಿರುವುದಿಲ್ಲ. ಆದ್ದರಿಂದ ಅವನು ಪಾಪ ಮಾಡುತ್ತಿರುತ್ತಾನೆ. ಸತ್ಸಂಗ ಕೇಳುವವನಿಗೆ ಆಧ್ಯಾತ್ಮ ಜ್ಞಾನ ಹಾಗು ಸಂಪೂರ್ಣ ಕರ್ಮಗಳ ಜ್ಞಾನವಿರುತ್ತದೆ. ಅವನು ಎಂದಿಗೂ ಪಾಪ ಮಾಡುವುದಿಲ್ಲ. ಅವನು ಹಂಸಪಕ್ಷಿಯಂತೆ, ಅದು ಸರೋವರದಲ್ಲಿ ಯಾವಾಗಲೂ ಮುತ್ತನ್ನು ತಿನ್ನುವ, ಮೀನು ಕ್ರಿಮಿ–ಕೀಟ ತಿನ್ನದ ಆಧ್ಯಾತ್ಮಿಕ ಜ್ಞಾನವಿಲ್ಲದ ವ್ಯಕ್ತಿಯು ಬಕಪಕ್ಷಿಗೆ ಸಮಾನ. ಬಕಪಕ್ಷಿಯು ಮೀನು, ಕೀಟ ಮುಂತಾದ ನೀರಿನ ಜಂತುಗಳನ್ನು ತಿನ್ನುತ್ತದೆ. ಹಂಸ ಮತ್ತು ಬಕಪಕ್ಷಿಯು ನೋಡಲು ಒಂದೇ ರೀತಿ ಇರುತ್ತದೆ. ಶರೀರದಲ್ಲಿ ಒಂದೇ ರೀತಿಯ ಆಕಾರ, ಬಿಳಿ ಬಣ್ಣದಿರುವ ಕಾರಣ ಅವುಗಳನ್ನು (ಹಂಸ ಮತ್ತು ಬಕಪಕ್ಷಿ) ನೋಡಿ ಗುರುತಿಸುವುದು ಕಷ್ಟ. ಕೇವಲ ಅವುಗಳ ಕರ್ಮದಿಂದ ಗುರುತಿಸಲ್ಪಡುತ್ತವೆ. ಇದೇ ರೀತಿ ತತ್ವಜ್ಞಾನವುಳ್ಳ ವ್ಯಕ್ತಿಯು ಒಳ್ಳೆಯ ಕೆಲಸಗಳಿಂದ ಮತ್ತು ತತ್ವಜ್ಞಾನವಿಲ್ಲದ ವ್ಯಕ್ತಿ ಕೆಟ್ಟ ಕೆಲಸಗಳಿಂದ ಗುರುತಿಸಲ್ಪಡುತ್ತಾನೆ.

ಕಬೀರ್, ಪಹಲೇ ಅಪನೇ ಧರ್ಮ್ ಕೋ, ಭಲೀ ಭಾಂತಿ ಸಿಖಲಾಯ್ ।
ಅನ್ಯ್ ಧರ್ಮ್ ಕೀ ಸೀಖ್ ಸುನಿ, ಭಟಕಿ ಬಾಲ್ ಬುದ್ಧಿ ಜಾಯ್ ॥

**ಭಾವಾರ್ಥ:–** ಕುಟುಂಬದ ಸದಸ್ಯರಿಗೆ ಮತ್ತು ಮಕ್ಕಳಿಗೆ ತಮ್ಮ ಧರ್ಮದ ಬಗ್ಗೆ ಮೊದಲು ಸಂಪೂರ್ಣ ಜ್ಞಾನ ನೀಡಬೇಕು. ಯಾರಿಗೆ ತಮ್ಮ ಧರ್ಮ ಅಂದ್ರೆ ಧಾರ್ಮಿಕ ಕ್ರಿಯೆಗಳ ಜ್ಞಾನವಿಲ್ಲ. ಅವರ ಬುದ್ಧಿ ಮಕ್ಕಳಂತಿದೆ. ಅವರು ಅನ್ಯ ಧರ್ಮದ ಶಿಕ್ಷಣ ಪಡೆದು ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಯಾರಿಗೆ ತಮ್ಮ ಧರ್ಮದ ಸಂಪೂರ್ಣ ಜ್ಞಾನವಿರುತ್ತದೋ, ಅವರು ದಾರಿ ತಪ್ಪುವುದಿಲ್ಲ.

**ಧರ್ಮ್ ಬೋಧ್ ಪುಟ 182ರ ಸಾರಾಂಶ:–**

ಕಬೀರ್, ಜೋ ಕಛು ಧನ್ ಕಾ ಲಾಭ್ ಹೋ, ಶುದ್ಧ್ ಕಮಾಈ ಕೀನ್ ।
ತಾ ಧನ್ ಕೇ ದಶವೆಂ ಅಂಶ್ ಕೋ, ಅಪನೆ ಗುರೂ ಕೋ ದೀನ್ ॥
ದಸವಾಂ ಅಂಶ್ ಗುರೂ ಕೋ ದೀಜ್ಜೈ । ಅಪನಾ ಜನ್ಮ್ ಸಫಲ್ ಕರ್ ಲೀಜ್ಜೈ ॥

**ಭಾವಾರ್ಥ:–** ಪ್ರಾಮಾಣಿಕತೆಯಿಂದ ಕೆಲಸ ಮಾಡುವುದರಿಂದಾಗುವ ಲಾಭದಲ್ಲಿ (ಸಂಪಾದನೆಯಲ್ಲಿ) ಹತ್ತನೇ ಭಾಗವನ್ನು ತಮ್ಮ ಗುರುಗಳಿಗೆ ದಾನ ಮಾಡಬೇಕು.

ಕಬೀರ್, ಜೆ ಗುರೂ ನಿಕಟ್ ನಿವಾಸ್ ಕರ್ರೈ, ತೋ ಸೇವಾ ಕರ್ ನಿತ್ಯ್ ।
ಜೋ ಕಛು ದೂರ್ ಬಸ್ಯೈ, ಪಲ್–ಪಲ್ ಧ್ಯಾನ್ ಸೇ ಹಿತ್ ॥

**ಭಾವಾರ್ಥ:– ಗುರುಗಳ ಆಶ್ರಮವು ನಿಮ್ಮ ಮನೆಯ ಬಳಿ ಇದ್ದರೆ, ದಿನವೂ ಅವರ ಸೇವೆಗಾಗಿ ತೆರಳಬೇಕು. ದೂರವಿದ್ದರೆ, ಕ್ಷಣ ಕ್ಷಣವೂ ನೆನಪಿಸಿಕೊಳ್ಳಬೇಕು. ಇದರಿಂದ ಸಾಧಕನಿಗೆ ಲಾಭವಾಗುತ್ತದೆ.**

ಕಬೀರ್, ಛಠೇ ಮಾಸ್ ಗುರೂ ದರ್ಶ್ ಕರನ್ ತೆ, ಕಬಹು ನಾ ಚುಕೋ ಹಂಸ್ ।
ಗುರೂ ದರ್ಶ್ ಅರೂ ಸತ್ಸಂಗ್, ವಿಚಾರ್ ಸೋ ಉಧರೈ ಜಾತ್ ಹೈ ವಂಶ್ ॥
ಕಬೀರ್, ಛಠೇ ಮಾಸ್ ನಾ ಕರಿ ಸಕೇ, ವರ್ಷ್ ಮೆಂ ಕರೋ ಧಾಯ್ ।
ವರ್ಷ್ ಮೆಂ ದರ್ಶ್ ನಹಿಂ ಕರೇ, ಸೋ ಭಕ್ತ್ ಸಾಕಿಟ್ ಠಹರಾಯ್ ॥
ಕಬೀರ್, ಜೈ ಗುರೂ ಪರಲೋಕ್ ಗಮನ್ ಕರೇ, ಸೀಖ್ ಮಾನಿಯೋ ಶೀಶ್ ।
ಹರದಮ್ ಗುರೂ ಕೋ ಸಾಥ್ ಜಾನಿ, ಸುಮರೋ ನಿತ್ ಜಗದೀಶ್ ॥
ಕಬೀರ್, ಗುರೂ ಮರಾ ಮತ್ ಜಾನಿಯೋ, ವಸ್ತ್ರ ತ್ಯಾಗಾ ಸ್ಥೂಲ್ ।
ಸೂಕ್ಷ್ಮ ದೇಹೀ ಗಮನ್ ಕರಿ, ಖಿಲಾ ಅಮರ್ ವಹ್ ಫೂಲ್ ॥
ಕಬೀರ್, ಸತ್‌ಲೋಕ್ ಮೆಂ ಬೈಠೀ ಕರ್, ಗುರೂ ನಿರಖೈ ತೋಹೆ ।
ಗುರೂ ತಜ್ ನಾ ಔರ್ ಮಾನಿಯೋ, ಅಧ್ಯಾತ್ಮ್ ಹಾನಿ ಹೋಯ್ ॥

ಕಬೀರ್, ಗುರೂ ಕೇ ಶಿಷ್ಯ್ ಕೀ ಜಗದೀಶ್ ಕರ್ೈ ಸಹಾಯ್ ।
ನಾಮ್ ಜಪ್ೈ ಅರೂ ದಾನ್ ಧರ್ಮ್ ಮೇಂ ಕಬಹೂ ನ ಅಲಸಾಯ್ ॥
ಕಬೀರ್, ಜೈಸೆ ರವಿ ಆಕಾಶ್ ಸೆ, ಸಬ್ ಕೇ ಸಾಥ್ ರಹಾಯ್ ।
ಉಷ್ಣತಾ ಅರೂ ಪ್ರಕಾಶ್ ಕೋ ದೂರಹೀ ತೇ ಪಹುಂಚಾಯ್ ॥
ಕಬೀರ್, ಐಸೆ ಗುರೂ ಜಹಾಂ ಬಸೆ ಸಬ್ ಪರ್ ಕರೇ ರಜಾ ।
ಗುರೂ ಸಮೀಪ್ ಜಾನ್‌ಕರ್ ಸಕಲ್ ವಿಕಾರ್ ಕರತ್ ಲಜಾ ॥

ಭಾವಾರ್ಥ:– ಆರು ತಿಂಗಳಿಗೊಮ್ಮೆ ಗುರುಗಳ ದರ್ಶನವನ್ನು ಖಂಡಿತವಾಗಿಯೂ ಮಾಡಬೇಕು. ಗುರುಗಳ ದರ್ಶನದಿಂದ ಹಾಗು ಸತ್ಸಂಗದಿಂದ ಇಡೀ ವಂಶವೇ ಉದ್ಧಾರವಾಗುವುದು. ಒಂದೊಮ್ಮೆ 6 ತಿಂಗಳಿಗೆ ಸಾಧ್ಯವಾಗದಿದ್ದರೆ, ಅತಿ ಉತ್ಸಾಹದಿಂದ ವರ್ಷಕ್ಕೊಮ್ಮೆಯಾದರೂ ದರ್ಶನಕ್ಕೆ ಹೋಗಬೇಕು. ವರ್ಷಕ್ಕೊಮ್ಮೆಯಾದರೂ ಭಕ್ತನು ಗುರುಗಳ ದರ್ಶನ ಮಾಡದಿದ್ದರೆ. ಅಂಥ ಶಿಷ್ಯ ಭಕ್ತಿಹೀನ ಎನ್ನಬಹುದು.

ಗುರುಗಳು ಸತ್ಯಲೋಕಕ್ಕೆ ಹೊರಟು ಹೋಗಿದ್ದರೆ, ಅವರು ಕೊಟ್ಟ ಶಿಕ್ಷಣದಿಂದ ಧರ್ಮ–ಕರ್ಮ ಮಾಡುತ್ತಿರಬೇಕು. ತಮ್ಮ ಗುರುಗಳು ಜೊತೆಯಲ್ಲೇ ಇದ್ದಾರೆಂದು ತಿಳಿದು ಪರಮೇಶ್ವರನ ಭಜನೆ ಮಾಡಬೇಕು. ಗುರುಗಳು ನೀಡಿದ ಮಂತ್ರ ದೀಕ್ಷೆಯ ಜಪವನ್ನು ಮಾಡುತ್ತಿರಬೇಕು.

ಗುರುಗಳನ್ನು ಮೃತಕರೆಂದು ಭಾವಿಸಬಾರದು. ಇದಂತು ಸ್ಥೂಲ್ ಶರೀರದ ತ್ಯಾಗ, ಬಟ್ಟೆ ತೆಗೆದು ಇಟ್ಟಂತೆ. ಶರೀರವಂತು ಸುರಕ್ಷಿತವಾಗಿರುತ್ತದೆ. ಇದೇ ರೀತಿ ಸ್ಥೂಲ್ ಶರೀರ ರೂಪಿ ಬಟ್ಟೆ ತ್ಯಜಿಸಿದ್ದಾರೆ. ನೂರೀ ಶರೀರದಿಂದ ಸತ್ಯಲೋಕಕ್ಕೆ ಹೋಗಿದ್ದಾರೆ. ಅಲ್ಲಿ ಅಮರತ್ವ ಪಡೆದಿದ್ದಾರೆ. ನಿಮಗಾಗಿ ಕಾಯುತ್ತಿದ್ದಾರೆ. ನೀವು ಸಹ ಹೋಗುವುದಿದೆ. ಮೃತ್ಯು ಹೊಂದದೆ (ಸ್ಥೂಲ ಶರೀರವನ್ನು ತ್ಯಜಿಸದೇ) ಸತ್ಯಲೋಕಕ್ಕೆ ಹೋಗಲು ಸಾಧ್ಯವಿಲ್ಲ. ಶರೀರವಂತು ಶಿಷ್ಯರು ಸಹ ತ್ಯಜಿಸಬೇಕು. ನಂತರ ಗುರುಗಳು ಶರೀರ ತ್ಯಜಿಸಿದ ಶೋಕ ಮಾಡದೇ ಅವರ ಮೂಲಕ ಹೇಳಲಾದ ಸಾಧನೆ ಮಾಡಿ ಹಾಗು ಮರ್ಯಾದೆಯಲ್ಲಿದ್ದು ತಮ್ಮ ಜೀವನ ಸಫಲಗೊಳಿಸಿ.

ಗುರುಗಳು ಸತ್ಯಲೋಕದಲ್ಲಿ ಕುಳಿತು ನಿಮ್ಮನ್ನು ನೋಡುತ್ತಿದ್ದಾರೆ. ಗುರುಗಳು ಈ ಪ್ರಪಂಚವನ್ನು ಬಿಟ್ಟು ಹೋದ ಮೇಲೆ ಅನ್ಯರನ್ನು ಗುರುವೆಂದು ಸ್ವೀಕರಿಸಬಾರದು. ಇಲ್ಲದಿದ್ದರೆ ಭಕ್ತಿ ಹಾನಿಯಾಗುವುದು. ಗುರುವಿನಿಂದ ಉಪದೇಶ ಪಡೆದ ಶಿಷ್ಯರಿಗೆ ಪರಮೇಶ್ವರನು ಸಹಾಯ ಮಾಡುತ್ತಾನೆ. ಗುರುಗಳು ಹೇಳಿದ ನಾಮಸ್ಮರಣೆ, ಜಪ, ತಪ, ದಾನ ಧರ್ಮ ಮುಂತಾದ ಕೆಲಸಗಳನ್ನು ಮಾಡಲು ಸೋಮಾರಿತನ (ಆಲಸ್ಯ) ಮಾಡಬಾರದು.

ಹೇಗೆ ಸೂರ್ಯನು ದೂರದ ಆಕಾಶದಿಂದ ಎಲ್ಲರಿಗೂ ಸಮಾನವಾದ ಬೆಳಕು ಹಾಗೂ ಶಾಖವನ್ನು ಕೊಡುತ್ತಾನೆಯೋ, ಹಾಗೆ ಗುರುಗಳು ಎಲ್ಲೇ ಕುಳಿತಿದ್ದರೂ, ಅಲ್ಲಿಂದಲೇ ತನ್ನ ಭಕ್ತರ ಮೇಲೆ ಕೃಪೆ ತೋರುತ್ತಾರೆ. ಗುರುಗಳು ಸಮೀಪದಲ್ಲೇ ಇದ್ದು ಎಲ್ಲವನ್ನೂ ನೋಡುತ್ತಿದ್ದಾರೆ ಎನ್ನುವ ಭಾವನೆ ಇಟ್ಟುಕೊಂಡು ಕೆಟ್ಟ ಕೆಲಸ ಮಾಡುವುದನ್ನು ಬಿಟ್ಟುಬಿಡಬೇಕು.

ಧರ್ಮ್ ಬೋಧ್ ಪುಟ 183ರ ಸಾರಾಂಶ:–

ಕಬೀರ್, ಕೇತೇ ಜನಕಾದಿಕ್ ಗೃಹೀ ಜೋ ನಿಜ್ ಧರ್ಮ್ ಪ್ರವೀನ್ ।
ಪಾಯೋ ಶುಭಗತಿ ಆಪ್ ಹೀ ಔರನಹೂ ಮತಿ ದೀನ್ ॥

ಭಾವಾರ್ಥ:– ಜನಕ ರಾಜನಂಥಾ ಗೃಹಸ್ಥನು ತನ್ನ ಧರ್ಮದ ವಿದ್ವಾಂಸರಾಗಿದ್ದರು ಅಂದ್ರೆ ಮಾನವ ಕರ್ಮದ ಜ್ಞಾನಿಯಾಗಿದ್ದರು. ಈ ಕಾರಣದಿಂದಲೇ ಸ್ವತಃವೂ ಶುಭಗತಿ ಪಡೆದರು ಅಂದ್ರೆ ಸ್ವರ್ಗ ಪ್ರಾಪ್ತಿಯಾಯ್ತು ಅಲ್ಲದೆ ಬೇರೆಯವರಿಗೂ ಸ್ವರ್ಗ ಪ್ರಾಪ್ತಿಯ ಮಾರ್ಗವನ್ನು ತೋರಿಸಿದನು.

ಕಬೀರ್, ಹರಿ ಕೇ ಹೇತ್ ನ ದೇತ್, ಧನ್ ದೇತ್ ಕುಮಾರ್ಗ್ ಮಾಹೀಂ ।
ಐಸೆ ಅನ್ಯಾಯೀ ಅಧಮ್, ಬಾಂಧೇ ಯಮ್ ಪುರ್ ಜಾಹೀಂ ॥

**ಭಾವಾರ್ಥ:–** ಯಾರು ದಾನ–ಧರ್ಮ ಮಾಡುವುದಿಲ್ಲವೋ ಹಾಗು ಹಣವನ್ನು ತಪ್ಪಾಗಿ ಪ್ರಯೋಗಿಸುತ್ತಾರೋ, ಮದ್ಯ ಕುಡಿಯುವರೋ, ಮಾಂಸವನ್ನು ತಿನ್ನುವರೋ, ತಂಬಾಕು ಸೇವಿಸುತ್ತಾರೋ, ದುಂದು ವೆಚ್ಚ ಮಾಡುವರೋ, ಅಂಥ ಅನ್ಯಾಯಿ ನೀಚರನ್ನು ಯಮಲೋಕ ಅಂದರೆ ನರಕಕ್ಕೆ ಎಳೆದೊಯ್ಯಲಾಗುವುದು.

**"ಭಕ್ತನ ನಡವಳಿಕೆ ಹೇಗಿರಬೇಕು?"**

ನಿಜಧನ್ ಕೇ ಭಾಗೀ ಜೇತೇ ಸಗೇ ಬಂಧು ಪರಿವಾರ್ ।
ಜೈಸಾ ಜಾಕೋ ಭಾಗ್ ಹೈ ದೀಜೈ ಧರ್ಮ್ ಸಮ್ಭಾರ್ ॥

**ಭಾವಾರ್ಥ:–** ಪರಮೇಶ್ವರ ಕಬೀರರು ಹೇಳುವಂತೆ ಆಸ್ತಿಗೆ ಹಕ್ಕುದಾರರಾಗಿದ್ದರೆ, ಅವರಿಗೆ ಸೇರಬೇಕಾದ ಪಾಲನ್ನು ಅವರಿಗೆ ಕೊಡಬೇಕು. ಧರ್ಮ–ಕರ್ಮವನ್ನು ಗಮನದಲ್ಲಿಟ್ಟುಕೊಂಡು, ಪರಮಾತ್ಮನ ಹೆದರಿ ಅವರಿಗೆ ಸೇರಬೇಕಾದ ಸಂಪೂರ್ಣ ಪಾಲನ್ನು ಅವರಿಗೆ ನೀಡಬೇಕು.

**ಧರ್ಮ್ ಬೋಧ್ ಪುಟ 184ರ ಸಾರಾಂಶ:–**

ಕಬೀರ್, ಖಾಟ್ ಪಡ್ಯೆ ತಬ್ ಝುಖಈ ನಯನನ್ ಆವೈ ನೀರ್ ।
ಯತನ್ ತಬ್ ಕಛು ಬನ್ಯೆ ನಹೀಂ, ತನು ವ್ಯಾಪ್ ಮೃತ್ಯು ಪೀರ ॥

**ಭಾವಾರ್ಥ:–** ವೃದ್ಧಾವಸ್ಥೆಯಲ್ಲಿ ಅಥವಾ ರೋಗಿಯಾಗಿ ಮಾನವನು ಹಾಸಿಗೆ ಹಿಡಿದಾಗ, ಕಣ್ಣಿನಲ್ಲಿ ಕಣ್ಣೀರು ತುಂಬಿರುವಾಗ ಯಾರೂ ಬಂದು ನಿಮ್ಮನ್ನು ಕಾಪಾಡುವುದಿಲ್ಲ. ಮೃತ್ಯುವಿನ ಸಮಯ ಆಗುವ ಯಾತನೆ ಪ್ರಾರಂಭವಾಗಿರುತ್ತದೆ. ಯಾರು ಭಕ್ತಿ ಮಾಡುವುದಿಲ್ಲವೋ, ಅವರ ಅಂತಿಮ ಸಮಯವು ಬಹಳ ಕಷ್ಟದಾಯಕವಾಗಿರುತ್ತದೆ. ಅವರ ಪ್ರಾಣವು ಸುಲಭವಾಗಿ ಹೋಗುವುದಿಲ್ಲ. ಒಂದು ಲಕ್ಷ ಚೇಳು ಕುಟುಕಿದಾಗ ಆಗುವಷ್ಟು ಯಾತನೆ ಅವನಿಗಾಗುತ್ತದೆ. ಆ ಸಮಯದಲ್ಲಿ ಯಮದೂತರು ಅವನ ಕತ್ತು ಹಿಸುಕುತ್ತಾರೆ. ಅವನು ಮಾತನಾಡಲಾರ, ಉಸಿರಾಡಲೂ ಕಷ್ಟಪಡುತ್ತಾನೆ. ಕೇವಲ ಕಣ್ಣುಗಳಿಂದ ನೀರು ಸುರಿಯುತ್ತಿರುತ್ತದೆ. ಅದಕ್ಕಾಗಿ ಭಕ್ತಿ ಹಾಗು ಶುಭ ಕರ್ಮ ಮೇಲೆ ತಿಳಿಸಿದಂತೆ ಮನುಷ್ಯ ಖಂಡಿತಮಾಡಬೇಕು.

ಕಬೀರ್, ದೇಖೇ ಜಬ್ ಯಮ್ ದೂತನ್ ಕೋ, ಇತ್ ಉತ್ ಜೀವ್ ಲುಕಾಯ್ ।
ಮಹಾ ಭಯಂಕರ್ ಭೇಷ್ ಲಖೀ, ಭಯಭೀತ್ ಹೋ ಜಾಯ್ ॥

**ಭಾವಾರ್ಥ:–** ಯಮದೂತರ ರೂಪ ಭಯಂಕರವಾಗಿರುತ್ತದೆ. ಸಾವು ಸಮೀಪಿಸಿದಾಗ ಈ ಯಮದೂತರು ಕೇವಲ ಭಕ್ತಿ ಇಲ್ಲದ ವ್ಯಕ್ತಿಗಳಿಗೆ ಮಾತ್ರ ಕಾಣಿಸುತ್ತಾರೆ. ಅವರನ್ನು ನೋಡಿದಾಕ್ಷಣ ಭಯಭೀತಗೊಂಡು ಆ ಜೀವಾತ್ಮವು ಶರೀರದಲ್ಲೇ ಅಲ್ಲಿ–ಇಲ್ಲಿ ಅಡಗಿಕೊಳ್ಳಲು ಪ್ರಯತ್ನಿಸುತ್ತದೆ.

ಕಬೀರ್, ಭಕ್ತಿ ದಾನ್ ಕಿಯಾ ನಹೀಂ, ಅಬ್ ರಹ್ ಕಾಸ್ ಕೀ ಓಟ್ ।
ಮಾರ್ ಪೀಟ್ ಪ್ರಾಣ್ ನಿಕಾಲಹೀಂ, ಜಮ್ ತೋಡೇಂಗೆ ಹೋಠ್ ॥

**ಭಾವಾರ್ಥ:–** ಗುರು ಮಾಡಿಕೊಳ್ಳಲಿಲ್ಲ, ಭಕ್ತಿ ಮಾಡಲಿಲ್ಲ, ದಾನ ಧರ್ಮ ಮಾಡಲಿಲ್ಲ, ಈಗ ಯಾರ ಆಶ್ರಯದಲ್ಲಿ ಉಳಿಯುವೆ? ಯಮದೂತರು ಹೊಡೆದು, ಹೊಡೆದು ಪ್ರಾಣ ತೆಗೆಯುತ್ತಾರೆ. ನೀವು ಮಾತನಾಡುವ ಮುಂಚೆಯೇ ನಿಮ್ಮನ್ನು ಹೊಡೆಯುತ್ತಿರುತ್ತಾರೆ. ದಯಾ ದಾಕ್ಷಿಣ್ಯವಿಲ್ಲದೆ ಹೊಡೆದು, ಬಡಿದು ನಿಮ್ಮ ತುಟಿ ಸೀಳುತ್ತಾರೆ. ನಿರ್ದಯವಾಗಿ ನಿಮ್ಮನ್ನು ಹೊಡೆಯುತ್ತಾರೆ.

**ಧರ್ಮ್ ಬೋಧ್ ಪುಟ 187ರ ಸಾರಾಂಶ:–**

ಕಬೀರ್, ಮಾನ್ ಅಪಮಾನ್ ಸಮ್ ಕರ್ ಜಾನ್ಯೆ, ತಜೈ ಜಗತ್ ಕೀ ಆಶ್ ।
ಚಾಹ್ ರಹಿತ್ ಸಂಸ್ಯೆ ರಹಿತ್, ಹರ್ಷ್ ಶೋಕ್ ನಹೀಂ ತಾಸ್ ॥

**ಭಾವಾರ್ಥ:–** ಯಾರಾದರೂ ಭಕ್ತನನ್ನು ಅವಮಾನಿಸಿದರೆ, ಅದರ ಕಡೆ ಗಮನ ಕೊಡಬಾರದು. ಯಾರು ನಿಮ್ಮನ್ನು ಗೌರವಿಸುತ್ತಾರೋ, ಅವರ ಕಡೆನೂ ಗಮನ ಕೊಡಬೇಡಿ. ಬೇರೆಯವರಿಗಾಗಿ ನಿಮ್ಮ ಧರ್ಮವನ್ನು ಹಾಳುಮಾಡಬೇಡಿ. ಲಾಭ–ನಷ್ಟವನ್ನು ಪರಮಾತ್ಮ

ಕೊಟ್ಟಿದ್ದು ಎಂದು ತಿಳಿದು ಸಂತೋಷದಿಂದ ಇರಬೇಕು.

ಕಬೀರ್, ಮಾರ್ಗ್ ಚಲ್ಯೆ ಅಧೋ ಗತಿ, ಚಾರ್ ಹಾಥ್ ಮಾಂಹೀ ದೇಖ್ ।
ಪರ್ ತರಿಯಾ ಪರ್ ಧನ್ ನಾ ಚಾಹೈ ಸಮಝ್ ಧರ್ಮ್ ಕೇ ಲೇಖ್ ॥

**ಭಾವಾರ್ಥ:–** ಭಕ್ತನು ಮಾರ್ಗದಲ್ಲಿ ನಡೆಯುವಾಗ ತಲೆ ತಗ್ಗಿಸಿ ನಡೆಯಬೇಕು. ಅವನ ದೃಷ್ಟಿ ಆರು ಅಡಿಯಷ್ಟು ಮುಂದೆ ನೋಡುವಂತಿರಬೇಕು. ಧರ್ಮ–ಕರ್ಮವನ್ನು ಗಮನದಲ್ಲಿಟ್ಟುಕೊಂಡು ಪರಸ್ತ್ರೀ ಮತ್ತು ಪರರ ಧನವನ್ನು ಕೆಟ್ಟದೃಷ್ಟಿಯಿಂದ ನೋಡಬಾರದು.

ಕಬೀರ್, ಪಾತ್ರ್ ಕುಪಾತ್ರ ವಿಚಾರ್ ಕರ್, ಭಿಕ್ಷಾ ದಾನ್ ಜೋ ಲೇತ್ ।
ನೀಚ್ ಅಕರ್ಮಿ ಸೂಮ್ ಕಾ, ದಾನ್ ಮಹಾ ದುಃಖ್ ದೇತ್ ॥

**ಭಾವಾರ್ಥ:–** ಸಂತ ಅಂದರೆ ಗುರುವೂ ತನ್ನ ಭಕ್ತರನ್ನು ಬಿಟ್ಟು ಬೇರೆಯವರಿಂದ ದಾನ ಭಿಕ್ಷೆಯನ್ನು ಪಡೆಯಬಾರದು. ಕೆಟ್ಟ ಕೆಲಸ ಮಾಡುವವರ ಅಥವಾ ಅಧರ್ಮಿಗಳ ಧನವನ್ನು ಪಡೆಯುವುದರಿಂದ ಬಹಳ ದುಃಖ ಬಂದೊದಗುವುದು.

**ಧರ್ಮ್ ಬೋಧ್ ಪುಟ 189ರ ಸಾರಾಂಶ:–**

ಕಬೀರ್, ಇಂದ್ರೀ ತತ್ತ್ವ ಪ್ರಕೃತಿ ಸೆ, ಆತ್ಮ ಜಾನ್ ಪಾರ್ ।
ಜಾಪ್ ಏಕ್ ಪಲ್ ನಹೀಂ ಛೂಟೈ, ಟೂಟ್ ನ ಪಾವೈ ತಾರ್ ॥

**ಭಾವಾರ್ಥ:–** ಪಂಚತತ್ವಗಳಿಂದ ಭಿನ್ನವಾದುದು ಆತ್ಮ. ಶರೀರವೂ ಸಹ ಆತ್ಮವಲ್ಲ. ನಿರಂತರವಾಗಿ ಸತ್ಯನಾಮವನ್ನು ಜಪಿಸಬೇಕು.

ಕಬೀರ್, ಜಬ್ ಜಪ್ ಕರಿ ಕೇ ಥಕ್ ಗಏ, ಹರಿ ಯಶ್ ಗಾವೇ ಸಂತ್ ।
ಕೈ ಜಿನ್ ಧರ್ಮ್ ಪುರಾಣ್ ಪಢೇ, ಐಸೋ ಧರ್ಮ್ ಸಿದ್ಧಾಂತ್ ॥

**ಭಾವಾರ್ಥ:–** ಭಕ್ತನು ಜಪ ಮಾಡಿ, ಮಾಡಿ ದಣಿದರೆ, ಪರಮಾತ್ಮನ ಮಹಿಮೆಯ ವಚನಗಳನ್ನು ಓದಬೇಕು. ನೆನಪಿದ್ದರೆ ಅವುಗಳನ್ನು ಹಾಡಬೇಕು ಅಥವಾ ತಮ್ಮ ಧರ್ಮದ ಪುಸ್ತಕಗಳನ್ನು ಓದಬೇಕು. ಇದೇ ಧಾರ್ಮಿಕ ಸಿದ್ಧಾಂತ.

**ಧರ್ಮಬೋಧದ 190ನೇ ಪುಟದ ಸಾರಾಂಶ :–**

ಕಬೀರ್, ಜ್ಞಾನೀ ರೋಗೀ ಅರ್ಥಾರ್ಥೀ ಜಿಜ್ಞಾಸು ಯೇ ಚಾರ್ ।
ಸೋ ಸಬ್ ಹೀ ಹರಿ ಧ್ಯಾವತೇ ಜ್ಞಾನೀ ಉತರೇ ಪಾರ್ ॥

**ಭಾವಾರ್ಥ:–** ನಾಲ್ಕು ವಿಧದ ವ್ಯಕ್ತಿಗಳು ಪರಮಾತ್ಮನ ಭಕ್ತಿ ಮಾಡುವರು:–

1) ಜ್ಞಾನಿ:– ಮಾನವ ಜೀವನವು ಕೇವಲ ಪರಮಾತ್ಮನ ಭಕ್ತಿಮಾಡಿ ಜೀವಾತ್ಮದ ಉದ್ಧಾರ ಮಾಡಿಕೊಳ್ಳಲೆಂದೇ ಪ್ರಾಪ್ತವಾಗುವುದು ಎಂದು ಜ್ಞಾನಿಗೆ ನಂಬಿಕೆ ಇರುತ್ತದೆ. ಪೂರ್ಣ ಪರಮಾತ್ಮನನ್ನು ಜಪಿಸುವುದರಿಂದ ಮಾತ್ರ ಮೋಕ್ಷ ಪ್ರಾಪ್ತಿಯಾಗುವುದು ಬೇರೆ ದೇವಿ–ದೇವತೆಗಳನ್ನು ಜಪಿಸುವುದರಿಂದ ಜನನ–ಮರಣದ ದುಃಖವು ದೂರವಾಗುವುದಿಲ್ಲವೆಂದು ಅವನಿಗೆ ಅರಿವಿರುತ್ತದೆ. ಪೂರ್ಣ ಸದ್ಗುರುವಿನಿಂದ ದೀಕ್ಷೆ ಪಡೆದಾಗ ಮಾತ್ರ ಉದ್ಧಾರವಾಗುವುದು. ಹಾಗಾಗಿ ಜ್ಞಾನಿ ಭಕ್ತನೇ ಮೋಕ್ಷ ಹೊಂದುವನು.

2) ಅರ್ಥಾರ್ಥಿ:– ಧನ ಲಾಭಕ್ಕಾಗಿಯೇ ಭಗವಂತನನ್ನು ಪ್ರಾರ್ಥಿಸುವವರು.

3) ಆರ್ತ್ ಅಂದರೆ ಸಂಕಟಗ್ರಸ್ತರು:– ತಮ್ಮ ಸಂಕಟವನ್ನು ಮತ್ತು ಕಷ್ಟವನ್ನು ದೂರ ಮಾಡಿಕೊಳ್ಳಲು ಭಕ್ತಿ ಮಾಡುವವರು.

4) ಜಿಜ್ಞಾಸು:– ಪರಮಾತ್ಮನ ಜ್ಞಾನವನ್ನು ಪೂರ್ತಿ ತಿಳಿಯುವುದಿಲ್ಲ, ಬರಿ ವಾದ ಮಾಡುತ್ತಾ, ಜೀವನವನ್ನು ಹಾಳುಮಾಡಿಕೊಳ್ಳುವವರು. ಇದನ್ನು ಗೀತೆಯ 7ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿಯೂ ಹೇಳಲಾಗಿದೆ.

**ಧರ್ಮಬೋಧದ ಪುಟ ಸಂಖ್ಯೆ 191ರ ಸಾರಾಂಶ:–**

ಕಬೀರ್, ಕ್ಷಮಾ ಸಮಾನ್ ನ ತಪ್, ಸುಖ್ ನಹೀಂ ಸಂತೋಷ್ ಸಮಾನ್ ।
ತೃಷ್ಣಾ ಸಮಾನ್ ನಹೀಂ ಬ್ಯಾಧೀ ಕೋಈ, ಧರ್ಮ್ ನ ದಯಾ ಸಮಾನ್ ॥

ಭಾವಾರ್ಥ:– ಕಬೀರ ಪರಮೇಶ್ವರರು ಹೇಳಿದ್ದಾರೆ ಕ್ಷಮಿಸುವುದು ಬಹಳ ದೊಡ್ಡ ತಪಸ್ಸು. ಇದಕ್ಕಿಂತ ದೊಡ್ಡ ತಪಸ್ಸಿಲ್ಲ. ಸಂತೋಷಕ್ಕೆ ಸಮಾನವಾದ ಸುಖವಿಲ್ಲ. ದಯೆಗೆ ಸಮಾನವಾದ ಧರ್ಮವಿಲ್ಲ, ಯಾವುದಾದರು ವಸ್ತು ಪ್ರಾಪ್ತಿಸುವ ಇಚ್ಛೆಯ ಸಮಾನವಾದ ಯಾವುದೇ ಆಪತ್ತಿಲ್ಲ.

ಕಬೀರ್, ಯೋಗ್ (ಭಕ್ತಿ) ಕೇ ಅಂಗ್ ಪಾಂಚ್ ಹೈಂ, ಸಂಯಮ್ ಮನನ್ ಏಕಾಂತ್ ।
ವಿಷಯ್ ತ್ಯಾಗ್ ನಾಮ್ ರಟನ್, ಹೋಯೇ ಮೋಕ್ಷ್ ನಿಶ್ಚಿಂತ್ ॥

ಭಾವಾರ್ಥ:– ಭಕ್ತಿಯ ನಾಲ್ಕು ಅವಶ್ಯಕ ಅಂಶಗಳಿವೆ. ಸಂಯಮ ಅಂದರೆ ಪ್ರತ್ಯೇಕ ಕಾರ್ಯದಲ್ಲಿ ಸಂಯಮವನ್ನು ಪಾಲಿಸಬೇಕು. ಧನ ಸಂಗ್ರಹಣೆಯಲ್ಲಿ, ಮಾತನಾಡುವುದರಲ್ಲಿ, ತಿನ್ನುವುದು–ಕುಡಿಯುವುದರಲ್ಲಿ, ವಿಕಾರದಲ್ಲಿ ಸಂಯಮವನ್ನು ಕಾಪಾಡಿಕೊಳ್ಳಬೇಕು ಅಂದ್ರೆ ಭಕ್ತನು ಕಡಿಮೆ ಮಾತನಾಡಬೇಕು, ವಿಕಾರಗಳನ್ನು ತ್ಯಜಿಸಬೇಕು. ಪರಮಾತ್ಮನ ಭಜನೆ ಹಾಗೂ ಪರಮಾತ್ಮನ ಪ್ರವಚನಗಳ ಚಿಂತನೆ–ಮನನ ಮಾಡುವುದು ಅನಿವಾರ್ಯ. ಈ ರೀತಿ ಸಾಧನೆ ಮಾಡುವುದರಿಂದ, ನಿಯಮ ಪಾಲನೆ ಮಾಡುವುದರಿಂದ ಮೋಕ್ಷ ಖಂಡಿತ ಪ್ರಾಪ್ತಿಯಾಗುವುದು.

❖ **ಪೂರ್ಣ ಪರಮಾತ್ಮನು ಭಕ್ತನ ಆಯುಷ್ಯವನ್ನೂ ಹೆಚ್ಚಿಸುತ್ತಾನೆ:–**

ಋಗ್ವೇದದ 10ನೇ ಮಂಡಲದ 161ನೇ ಸೂಕ್ತಿಯ 2ನೇ ಮಂತ್ರದಲ್ಲಿ ಹೇಳಲಾಗಿದೆ. ಪೂರ್ಣ ಪ್ರಭು ತನ್ನ ಭಕ್ತನ ರೋಗವನ್ನು ವಾಸಿಮಾಡುತ್ತಾನೆ. ಒಂದು ವೇಳೆ ರೋಗಿಯ ಆಯುಷ್ಯ ಬಾಕಿ ಉಳಿಯದಿದ್ದರೆ, ಅವನು ಮೃತ್ಯು ದೇವತೆಯ ಬಳಿ ಹೋಗುವುದಿದ್ದರೆ ಪರಮಾತ್ಮನು ಅವನನ್ನು ಆರೋಗ್ಯವಂತನನ್ನಾಗಿ ಮಾಡಿ ನೂರು ವರ್ಷಗಳವರೆಗೆ ಜೀವನದಾನ ನೀಡುತ್ತಾನೆ. ಅವನ ಆಯಸ್ಸು ಹೆಚ್ಚಿಸುತ್ತಾನೆ ಪ್ರಮಾಣಕ್ಕಾಗಿ "ಕಬೀರ್ ಸಾಗರ್‌ದ" "ಗರುಡ್ ಬೋಧ್" ಎಂಬ ಅಧ್ಯಾಯ ಓದಿ.

## "ಗರುಡ್ ಬೋಧ್ ಅಧ್ಯಾಯದ ಸಾರಾಂಶ"

ಕಬೀರ್ ಸಾಗರ್‌ದಲ್ಲಿ 'ಗರುಡ್ ಬೋಧ್' ಎಂಬ 11ನೇ ಅಧ್ಯಾಯದ ಪುಟ ಸಂಖ್ಯೆ 65(625)ರಲ್ಲಿ ಈ ರೀತಿ ಇದೆ.

ಕಬೀರ್ ಪರಮೇಶ್ವರರು ಧರ್ಮದಾಸರಿಗೆ ಈ ರೀತಿ ಹೇಳಿದರು, "ನಾನು ವಿಷ್ಣುವಿನ ವಾಹನವಾದ ಪಕ್ಷಿರಾಜ ಗರುಡನಿಗೆ ಉಪದೇಶ ನೀಡಿದೆ. ಅವನಿಗೆ ಸೃಷ್ಟಿಯ ರಚನೆಯನ್ನು ಹೇಳಿದೆ. ಅಮರಲೋಕದ ಕಥೆ, ಸತ್ಯಪುರುಷನ ಮಹಿಮೆ ಕೇಳಿ ಗರುಡ್ ದೇವ ಆಶ್ಚರ್ಯಪಟ್ಟನು. ಅವನಿಗೆ ವಿಶ್ವಾಸವಾಗುತ್ತಿರಲಿಲ್ಲ. ಅವನು ನಾನು ಇದೇನು ಕೇಳುತ್ತಿರುವೆ ಎಂದು ಮನಸ್ಸಿನಲ್ಲೇ ಚಿಂತಿಸಲಾರಂಭಿಸಿದನು. ನಾನು ಕನಸು ಕಾಣುತ್ತಿಲ್ಲ ತಾನೇ? ನಾನು ಬೇರೆ ದೇಶಕ್ಕೆ ಹೊರಟು ಹೋಗಿಲ್ಲ ತಾನೇ? ಯಾವ ದೇಶ ಮತ್ತು ಪರಮಾತ್ಮನ ಬಗ್ಗೆ ನಾನು ಕೇಳಿರುವೆನೋ, ಅದೆಲ್ಲಾ ಒಂದು ಚಲನಚಿತ್ರದಂತೆ ನನ್ನ ಮುಂದೆ ಸಾಗುತ್ತಿವೆ.' ಎಂದು ಗರುಡನು ಚಿಂತಿಸಿದನು. ಈ ಚಿಂತನೆಯಲ್ಲಿ ಗರುಡನು ತೊಡಗಿರುವಾಗ ನಾನು ಹೇಳಿದೆ, "ಹೇ ಪಕ್ಷಿರಾಜ! ನನ್ನ ಮಾತು ನಿಮಗೆ ಸುಳ್ಳು ಎನ್ನಿಸುತ್ತಿದೆಯಾ? ನೀನೇಕೆ ಸುಮ್ಮನಿರುವೆ? ಏನಾದರೂ ಸಂದೇಹವಿದ್ದರೆ ಪ್ರಶ್ನೆ ಮಾಡು. ನಿನ್ನ ಸಂದೇಹ ನಿವಾರಿಸಿಕೋ. ನನ್ನ ಮಾತಿನಿಂದ ನಿನಗೆ ದುಃಖವಾಗಿದ್ದರೆ ನನ್ನನ್ನು ಕ್ಷಮಿಸು", ನನ್ನ ಈ ಮಾತುಗಳನ್ನು ಕೇಳಿದ ಪಕ್ಷಿರಾಜನ ಕಣ್ಣು ತುಂಬಿಬಂದಿತು. ಅವನೆಂದನು, ಹೇ ದೇವಾ! ನೀವು ಯಾರು? ನಿಮ್ಮ ಉದ್ದೇಶವೇನು? ನೀವು ಹೇಳಿದ ಕಟು ಸತ್ಯವನ್ನು ನನಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಮರಲೋಕದಲ್ಲಿ ಅಮರ ಪರಮೇಶ್ವರನ ಬಗ್ಗೆ ನೀವು ತಿಳಿಸಿದ್ದೀರಿ. ಒಂದು ವೇಳೆ ಅದು ಸತ್ಯವಾದರೆ ನಮ್ಮನ್ನು ಮೋಸದಲ್ಲಿ ಇಡಲಾಗಿದೆ. ಒಂದು ವೇಳೆ ಇದು ಸುಳ್ಳಾದರೆ ನಿಮ್ಮನ್ನು ನಿಂದಿಸಬೇಕಾಗುತ್ತದೆ. ನೀವು ಅಪರಾಧಿಯಾಗುತ್ತೀರಿ.

ಒಂದುವೇಳೆ ಇದು ನಿಜವಾದರೆ ಈ ಗರುಡದೇವನು ನಿಮ್ಮ ದಾಸನಾಗುವನು" ಎಂದನು. ಪರಮೇಶ್ವರ ಕಬೀರರು ಧರ್ಮದಾಸನಿಗೆ ಹೇಳಿದರು, "ನಾನು ಗರುಡನಿಗೆ ಹೇಳಿದೆ, ಹೇ ಗರುಡದೇವ! ನಿನ್ನ ಮನಸ್ಸಿನಲ್ಲಿ ಉಂಟಾಗಿರುವ ಸಂದೇಹವು ಸ್ವಾಭಾವಿಕ, ಆದರೆ ನೀನು ಸಂಯಮದಿಂದ ಇದ್ದೀಯಾ. ಇದು ನಿನ್ನ ದೊಡ್ಡಗುಣ. ಆದರೆ ನಾನು ನಿನಗೇನು ಅಮರಲೋಕ ಹಾಗು ಸತ್ಯಪರುಷನ ಬಗ್ಗೆ ಹೇಳುತ್ತಿದ್ದೇನೆ, ಅದು ಪರಮ ಸತ್ಯ. ನನ್ನ ಹೆಸರು ಕಬೀರ್. ನಾನು ಅದೇ ಅಮರ ಲೋಕದ ನಿವಾಸಿ. ಕಾಲಬ್ರಹ್ಮನು ನಿನ್ನನ್ನು ಭ್ರಮೆಗೆ ಒಳಪಡಿಸಿದ್ದಾನೆ. ಇದರ ಬಗ್ಗೆ ಬ್ರಹ್ಮಾ, ವಿಷ್ಣು, ಮಹೇಶರಿಗೂ ಜ್ಞಾನವಿಲ್ಲ, ನೀನು ಸ್ವಲ್ಪ ಯೋಚಿಸು ಗರುಡ, ಜೀವಾತ್ಮವು ಜನ್ಮ ಪಡೆಯುತ್ತದೆ. ಆನಂದದಿಂದ ಇರಲಾರಂಭಿಸುತ್ತದೆ. ಕುಟುಂಬ ದೊಡ್ಡದಾಗುತ್ತದೆ.

ಆ ಕುಟುಂಬವನ್ನು ಪೋಷಿಸುತ್ತಾ ಜಗತ್ತಿನ ಪರಂಪರೆಗಳನ್ನು ನಿರ್ವಹಿಸುತ್ತಾ, ವೃದ್ಧಾಪ್ಯ ಆವರಿಸುತ್ತದೆ. ಯಾವ ಕುಟುಂಬವನ್ನು ನೋಡುತ್ತಾ ಧನ್ಯತೆಯ ಭಾವವನ್ನು ಹೊಂದುತ್ತೇವೆಯೋ, ಆ ಕುಟುಂಬವನ್ನು ತ್ಯಜಿಸಿ, ಈ ಪ್ರಪಂಚವನ್ನು ವಿವಶತೆಯಿಂದ ಬಿಟ್ಟು ಹೋಗಬೇಕಾಗುತ್ತದೆ. ಸ್ವತಃ ಅಳುತ್ತಾ, ಅಂತಿಮ ಉಸಿರನ್ನು ಎಣಿಸುತ್ತೇವೆ. ಕುಟುಂಬವೂ ದುಃಖದಲ್ಲಿ ಮುಳುಗುತ್ತದೆ. ಇದೆಂಥ ಪರಂಪರೆ? ಇದು ಸರಿಯೇ?" ಆಗ ಗರುಡದೇವ ಹೇಳಿದನು, "ಹೇ ಕಬೀರ ದೇವ! ಇದಂತು ಜಗತ್ತಿನ ವಿಧಾನ. ಹುಟ್ಟಿದವನು ಸಾಯಲೇಬೇಕು." ಪರಮೇಶ್ವರರು ಕೇಳಿದರು, "ಯಾರಾದರೂ ಸಾಯಲು ಇಚ್ಛಿಸುವರೇ? ಯಾರಾದರೂ ವೃದ್ಧಾಪ್ಯವನ್ನು ಇಷ್ಟಪಡುವರೇ? ಆಗ ಗರುಡ ದೇವನ ಉತ್ತರ=ಇಲ್ಲ. ಆಗ ಪರಮೇಶ್ವರರು ಹೇಳಿದರು, "ಒಂದು ವೇಳೆ ವೃದ್ಧಾಪ್ಯ ಇಲ್ಲದಿದ್ದರೆ, ಮರಣವೆಂಬುದು ಇಲ್ಲದಿದ್ದರೆ ಹೇಗಿರುತ್ತದೆ?" ಆಗ ಗರುಡದೇವನೆಂದನು, "ಹೇಳುವುದೇನು? ಹಾಗೇನಾದರೂ ಆದರೆ ಆನಂದವೋ ಆನಂದ. ಆದರೆ ಅದು ಬರೀ ಕನಸಿನ ಮಾತಷ್ಟೇ. ಹೇ ಧರ್ಮದಾಸ! ನಾನು ಕೇಳಿದೆ, ವೇದ ಪುರಾಣಗಳನ್ನು ನೀವು ಸತ್ಯವೆಂದು ಭಾವಿಸುತ್ತೀರೋ ಅಥವಾ ಅಸತ್ಯವೆಂದು ಭಾವಿಸುತ್ತೀರೋ? ಆಗ ಗರುಡದೇವನೆಂದನು, "ಪರಮ ಸತ್ಯ."

ದೇವಿ ಪುರಾಣದ ಮೂರನೇ ಸ್ಕಂದದಲ್ಲಿ ವಿಷ್ಣುವು ಹೇಳಿದ್ದಾನೆ, "ಹೇ ಮಾತೆ, ನೀನು ಶುದ್ಧ ಸ್ವರೂಪಳು. ಇಡೀ ಪ್ರಪಂಚ ನಿನ್ನಿಂದಲೇ ಸುಶೋಭಿತವಾಗುತ್ತಿದೆ. ನಿನ್ನ ಕೃಪೆಯಿಂದಲೇ ನಾನು, ಬ್ರಹ್ಮಾ ಮತ್ತು ಶಿವ ವಿದ್ಯಮಾನರಾಗಿದ್ದೇವೆ. ನಮ್ಮದಂತು ಅವಿರ್ಭಾವ (ಜನ್ಮ) ಮತ್ತು ತಿರೋಭಾವ (ಮೃತ್ಯು) ಆಗುತ್ತಿರುತ್ತದೆ".

ಈ ರೀತಿ ಕಬೀರರ ಮುಖ ಕಮಲದಿಂದ ಇಂಥ ನಿಖರವಾದ ಪ್ರಮಾಣವನ್ನು ಕೇಳಿ ಗರುಡ ದೇವನು ಅವರ ಕಾಲಿಗೆರಗಿದನು. ತನ್ನ ಅದೃಷ್ಟವನ್ನು ಕೊಂಡಾಡುತ್ತಾ ಹೇಳಿದನು, "ಯಾವ ದೇವನು ಸೃಷ್ಟಿ ರಚನೆ, ಬ್ರಹ್ಮಾ, ವಿಷ್ಣು, ಮಹೇಶ್ವರ ಹಾಗೂ ದುರ್ಗಾದೇವಿ ಮತ್ತು ನಿರಂಜನ್ ನ ಉತ್ಪತ್ತಿಯನ್ನು ಅರಿತಿದ್ದಾನೋ, ಅವನೇ ಸೃಷ್ಟಿಕರ್ತ ಪರಮೇಶ್ವರ. ಇಲ್ಲಿಯವರೆಗೆ ಯಾರೂ ಈ ಇಂಥ ಜ್ಞಾನವನ್ನು ತಿಳಿಸಿರಲಿಲ್ಲ. ಒಂದು ವೇಳೆ ಯಾವುದಾದರೂ ಜೀವಾತ್ಮಗೆ ಇದು ಗೊತ್ತಿದ್ದಿದ್ದರೆ. ಅವರು ಋಷಿ–ಮಹರ್ಷಿಯಾಗಿದ್ದರೆ ಖಂಡಿತ ಕಥೆ ಹೇಳುತ್ತಿದ್ದರು. ನಾನು ದೊಡ್ಡ ದೊಡ್ಡ ಮಂಡಲೇಶ್ವರರ ಪ್ರವಚನವನ್ನು ಕೇಳಿದ್ದೇನೆ. ಯಾರ ಬಳಿಯೂ ಈ ಜ್ಞಾನವಿಲ್ಲ. ಅವರಿಗೆ ವೇದಗಳ ಮತ್ತು ಗೀತೆಯ ಜ್ಞಾನವೂ ಇಲ್ಲ. ನಾನು ನಿಮ್ಮನ್ನು ಗುರುತಿಸಿದೆ. ದಯವಿಟ್ಟು ನನ್ನನ್ನು ನಿಮ್ಮ ಆಶ್ರಯದಲ್ಲಿ ಪಡೆಯಿರಿ ಪರಮೇಶ್ವರ.

ಆಗ ಕಬೀರರು ಗರುಡನಿಗೆ ಹೇಳಿದರು, "ನೀನು ಮೊದಲು ನಿನ್ನ ಸ್ವಾಮಿಯಾದ ವಿಷ್ಣುವಿನಿಂದ 'ನಾನು ನನ್ನ ಉದ್ಧಾರ ಮಾಡಿಕೊಳ್ಳಲು ಇಚ್ಛಿಸುತ್ತೇನೆ' ಎಂದು ಅನುಮತಿ ಪಡೆದುಕೋ".

ಒಬ್ಬ ಮಹಾನ್ ಸಂತರು ನನಗೆ ಸಿಕ್ಕಿದ್ದಾರೆ. ಅವರಿಂದ ನಾನು ಜ್ಞಾನವನ್ನು ಪಡೆದಿದ್ದೇನೆ. ನೀವು ಅನುಮತಿ ನೀಡಿದರೆ ನನ್ನ ಉದ್ಧಾರ ಮಾಡಿಕೊಳ್ಳುವೆ. ನೀವು ನನ್ನ ಸ್ವಾಮಿ, ನಾನು ನಿಮ್ಮ ದಾಸ. ನಾವು ಯಾವಾಗಲೂ ನಿಮ್ಮ ಜೊತೆಗಿರಬೇಕು. ನಿಮಗೆ ಹೇಳದೇ ಗುಟ್ಟಾಗಿ ನಾನು ದೀಕ್ಷೆ

ಪಡೆದರೆ ನಿಮಗೆ ದುಃಖವಾಗುವುದು ಎಂದು ಹೇಳಲು, ಕಬೀರರು ಹೇಳಿದರು. ಗರುಡನು ಹಾಗೇ ಮಾಡಿದನು. ವಿಷ್ಣುವಿಗೆ ಎಲ್ಲವನ್ನು ಹೇಳಿದನು. ಆಗ ವಿಷ್ಣುವು, ನಾನು ನಿಮ್ಮನ್ನು ತಡೆಯುವುದಿಲ್ಲ, ನೀವು ಸ್ವತಂತ್ರರು, ನಿಮಗೆ ಇಷ್ಟ ಬಂದ ಹಾಗೆ ಮಾಡಿ, ನೀವು ಸತ್ಯವನ್ನು ಹೇಳಿ ಒಳ್ಳೆಯದನ್ನೇ ಮಾಡಿದಿರಿ. ನನಗೆ ಯಾವ ಅಭ್ಯಂತರವಿಲ್ಲ ಎಂದನು.

ಹೇ ಧರ್ಮದಾಸ! ನಾನು ಗರುಡನಿಗೆ ಪ್ರಥಮ ಮಂತ್ರದೀಕ್ಷೆ ನೀಡಿದೆ. ಐದು ನಾಮಗಳನ್ನು (ಕಮಲಗಳನ್ನು ಅರಳಿಸುವ ಪ್ರತ್ಯೇಕ ದೇವರ ಸಾಧನೆಯ ನಾಮಗಳು) ನೀಡಿದೆ. ಗರುಡದೇವನು, "ಹೇ ಗುರುದೇವಾ! ಈ ಮಂತ್ರಗಳು ಈ ದೇವತೆಗಳದ್ದೇ ಆಗಿದೆ. ಅಮರ ಪುರುಷನ ಮಂತ್ರವಲ್ಲ." ಎಂದನು. ಆಗ ಪರಮೇಶ್ವರ ಕಬೀರರೆಂದರು, ಇವೆಲ್ಲಾ ಇವರ ಪೂಜೆಯ ಮಂತ್ರಗಳಲ್ಲ. ಇವೆಲ್ಲಾ ಈ ದೇವತೆಗಳನ್ನು ತಮ್ಮ ಕಡೆಗೆ ತಿರುಗಿಸಿಕೊಂಡು ಅವರ ಬಲೆಯಿಂದ ಬಿಡಿಸುವ ಚಾವಿ (**Key**). ಇವರ ವಶೀಕರಣದ ಮಂತ್ರಗಳು. ಹೇಗೆ ಕೋಣವನ್ನು ಆಕರ್ಷಿಸಲು ಕೋಣ, ಕೋಣ ಎಂದರೆ ಅದು ಧ್ವನೀ ಮಾಡುವವರ ಕಡೆ ನೋಡುವುದೂ ಇಲ್ಲ. ಆದರೆ ಅದನ್ನು ವಶೀಕರಣಗೊಳಿಸುವ ಹೆಸರನ್ನು 'ಹರ್, ಹರ್' ಎಂದು ಕೂಗಿದ ತಕ್ಷಣ ಪ್ರಭಾವಕ್ಕೆ ಒಳಗಾಗಿ ಸಕ್ರಿಯವಾಗಿ ಬಿಡುತ್ತದೆ. ಧ್ವನೀ ಮಾಡುವವರ ಕಡೆ ಓಡಿ ಬರುತ್ತದೆ. ಆಗ ಧ್ವನೀ ಮಾಡುವವನು ಅದರಿಂದ ತನ್ನ ಎಮ್ಮೆಯ ಗರ್ಭಧಾರಣೆ ಮಾಡಿಸುತ್ತಾನೆ. ಇದೇ ರೀತಿ ನೀವು ವಿಷ್ಣುವಿನ ಬೇರೆ ಹೆಸರಿನ ಜಪ ಮಾಡುತ್ತಿದ್ದರೆ, ನಿಮ್ಮ ಕಡೆ ಗಮನ ಹರಿಸುವುದಿಲ್ಲ. ನೀವು ಈ ಮಂತ್ರದ ಜಪ ಮಾಡಿದರೆ ವಿಷ್ಣುವು ತಕ್ಷಣವೇ ಪ್ರಭಾವಿತನಾಗಿ ಸಾಧಕನಿಗೆ ಸಹಾಯ ಮಾಡುವನು. ಈ ದೇವತೆಗಳು ಮೂರೂ ಲೋಕಗಳ (ಭೂಲೋಕ, ಸ್ವರ್ಗಲೋಕ ಮತ್ತು ಪಾತಾಳಲೋಕ) ಪ್ರಧಾನ ದೇವತೆಗಳು. ಅವರು ಕೇವಲ ಭಾಗ್ಯದಲ್ಲಿ ಬರೆದದ್ದನ್ನು ಮಾತ್ರ ಕೊಡಬಹುದು. ಈ ಮಂತ್ರದ ಜಪದಿಂದ ನಮ್ಮ ಪುಣ್ಯವು ಅಧಿಕವಾಗುವುದು. ಹಾಗೂ ಭಕ್ತಿ ಎಂಬ ಹಣ ಸಂಗ್ರಹಣೆ ಹೆಚ್ಚಾಗುವುದು. ಅದರ ಪ್ರತಿಫಲವಾಗಿ ಈ ದೇವತೆಗಳು ಸಾಧಕರಿಗೆ ಸಹಾಯ ಮಾಡುವರು. ಈ ರೀತಿ ಇವರ ಸಾಧನೆ ಹಾಗೂ ಪೂಜೆಯ ವ್ಯತ್ಯಾಸವನ್ನು ಅರಿಯಬೇಕು. ನಿಮಗೆ ಮಾವಿನಹಣ್ಣು ತಿನ್ನಬೇಕೆನ್ನಿಸಿದ್ದರೆ, ಮೊದಲು ಪರಿಶ್ರಮ ಪಡಬೇಕು, ಕೆಲಸ ಮಾಡಬೇಕು. ಹಣ ಸಂಪಾದಿಸಬೇಕು, ಆಗ ಮಾವಿನ ಹಣ್ಣು ತಿನ್ನಲು ಸಿಗುವುದು. ಕೆಲಸವು ಪೂಜೆಯಂತೂ ಅಲ್ಲ. ನಮ್ಮ ಪೂಜ್ಯ ಆಗ ಮಾವಿನಹಣ್ಣು. ಪೂಜ್ಯನನ್ನು ಪಡೆಯಲು ಮಾಡುವ ಪ್ರಯತ್ನವೇ ಕೆಲಸ. ಇದೇ ರೀತಿ ನಮ್ಮ ಪೂಜ್ಯ ಪರಮೇಶ್ವರ ಕಬೀರರು ಹಾಗು ಅಮರಲೋಕ. ಅದಕ್ಕಾಗಿ ನಾವು ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ, ಶ್ರೀ ಗಣೇಶ ಮತ್ತು ಶ್ರೀ ದುರ್ಗೆಯ ಕೂಲಿ ಮಾಡುತ್ತೇವೆ ಅಂದರೆ ಸಾಧನೆ ಮಾಡುತ್ತೇವೆ. ಪರಮೇಶ್ವರನ ಪೂಜೆ ಮಾಡುತ್ತೇವೆ." ಎಂದರು.

ಆಗ ಗರುಡನು ಬಹಳ ಪ್ರಸನ್ನನಾಗಿ ಈ ಅಮೃತ ಜ್ಞಾನದ ಚರ್ಚೆಯ ಕಾರಣದಿಂದ ಬ್ರಹ್ಮಾನನ್ನು ಭೇಟಿಯಾದನು ಹಾಗೂ ಹೀಗೆಂದನು. "ನಾನು ಒಬ್ಬ ಮಹರ್ಷಿಯಿಂದ ಅದ್ಭುತ ಜ್ಞಾನವನ್ನು ಪಡೆದೆ. ನನಗೆ ಆ ಜ್ಞಾನವು ನಿಜವೆನ್ನಿಸಿತು. ನೀವು ಅಂದರೆ ಬ್ರಹ್ಮಾ, ವಿಷ್ಣು ಮತ್ತು ಶಿವ ನಾಶಹೊಂದುವವರು, ಪೂರ್ಣ ಪರಮಾತ್ಮ ಅಲ್ಲ. ನೀವು ಕೇವಲ ಭಾಗ್ಯದಲ್ಲಿ ಬರೆದದ್ದನ್ನು ಮಾತ್ರ ಕೊಡಬಹುದು, ಬೇರೆಯವರ ಆಯುಷ್ಯವನ್ನು ವೃದ್ಧಿಸಲು ಸಾಧ್ಯವಿಲ್ಲ. ಬೇರೆಯವರ ಕರ್ಮವನ್ನು ಕಡಿಮೆಗೊಳಿಸಲಾಗಲೀ, ಹೆಚ್ಚು ಮಾಡುವುದಾಗಲೀ ಸಾಧ್ಯವಿಲ್ಲ. ಪೂರ್ಣ ಪರಮಾತ್ಮನು ಬೇರೆಯವನೇ ಇದ್ದಾನೆ. ಅವನು ಅಮರ ಲೋಕದಲ್ಲಿರುತ್ತಾನೆ. ಅವನು ಪಾಪಕರ್ಮಗಳನ್ನು ನಾಶಮಾಡುವನು. ಅವನು ಮೃತ್ಯುವನ್ನು ತಪ್ಪಿಸುವನು. ಆಯಸ್ಸು ಹೆಚ್ಚಿಸುವನು, ಋಗ್ವೇದದ **10**ನೇ ಮಂಡಲದ **161**ನೇ ಸೂಕ್ತಿಯ **2**ನೇ ಶ್ಲೋಕದಲ್ಲಿ ಹೇಳಿದ ಹಾಗೆ ರೋಗಿಯ ರೋಗ ಹೆಚ್ಚಾಗಿ ಮೃತ್ಯು ಹೊಂದಿದ್ದರೂ, ನಾನು ಭಕ್ತನನ್ನು ಮೃತ್ಯುದೇವತೆಯಿಂದ ಬಿಡಿಸಿಕೊಂಡು ಬರುವೆ, ಅವನಿಗೆ ಹೊಸಜೀವನ ಪ್ರದಾನಿಸುತ್ತೇನೆ, ಅವನಿಗೆ ದೀರ್ಘಾಯಸ್ಸು ಕೊಡುತ್ತೇನೆ. ಋಗ್ವೇದದ **10**ನೇ ಮಂಡಲದ **161**ನೇ ಸೂಕ್ತಿಯ **5**ನೇ ಮಂತ್ರದಲ್ಲಿ ಹೇಳಿರುವುದೇನೆಂದರೆ, 'ಹೇ ಪುನರ್ಜನ್ಮ ಪಡೆದ ಜೀವಾತ್ಮ! ನೀನು ನನ್ನ ಭಕ್ತಿ ಮಾಡುತ್ತಿರು. ಒಂದು

ವೇಳೆ ನಿನ್ನ ಕಣ್ಣು ಹಾಳಾದರೆ ನಾನು ನಿನ್ನ ಕಣ್ಣನ್ನು ಆರೋಗ್ಯ ಪೂರ್ಣವಾಗಿರುವಂತೆ ಮಾಡುವೆ. ನಿನಗೆ ನಾನು ಭೇಟಿ ಕೂಡ ಆಗುವೆ ಅಂದರೆ ನಿನಗೆ ನಾನು ಪ್ರಾಪ್ತ ಕೂಡ ಆಗುತ್ತೇನೆ.

ಬ್ರಹ್ಮಾನಿಗೆ ವೇದಮಂತ್ರವು ಕಂಠಪಾಠವಾಗಿತ್ತು. ತಕ್ಷಣವೇ ಅವನಿಗೆ ಅರ್ಥವಾಯಿತು. ಆದರೆ ಪ್ರಪಂಚದಲ್ಲಿ ಲೋಕವೇದದ ಆಧಾರದ ಮೇಲೆ ಬ್ರಹ್ಮಾ ತನ್ನನ್ನು ಪ್ರಜಾಪಿತಾ ಅಂದ್ರೆ ಎಲ್ಲರ ಉತ್ಪತ್ತಿಕರ್ತ ಎಂದು ಭಾವಿಸಿದ್ದನು. ವೇದಗಳನ್ನು ಕಂಠಪಾಠ ಮಾಡುವುದು ಬೇರೆ ಮಾತು. ವೇದಮಂತ್ರಗಳನ್ನು ತಿಳಿದುಕೊಳ್ಳುವುದು ವಿಶೇಷ ಜ್ಞಾನ. ಅಹಂಕಾರದಲ್ಲಿ ವೇದಗಳ ಜ್ಞಾನವು ನನ್ನ ವಿನಃ ವಿಶ್ವದಲ್ಲಿ ಯಾರಿಗೂ ಇಲ್ಲ ಎಂದು ಬ್ರಹ್ಮಾ ಹೇಳಿದನು. ಈ ಮಂತ್ರಗಳ ಅರ್ಥವನ್ನು ತಪ್ಪಾಗಿ ಅರ್ಥೈಸಲಾಗಿದೆ. ಕಬೀರ ಪರಮೇಶ್ವರರು ಇಂತಹ ವ್ಯಕ್ತಿಗಳ ಬಗ್ಗೆ ಹೇಳಿದ್ದಾರೆ.

ಕಬೀರ್, ಜಾನ್ ಬೂಝ್ ಸಾಚ್ಚಿ ತಜ್ಯೆ, ಕರ್ಯೆ ಝೂಠ್ ಸೆ ನೇಹ್ ।
ತಾಕಿ ಸಂಗತ್ ಹೆ ಪ್ರಭು, ಸ್ವಪನ್ ಮೇ ಭೀ ನಾ ದೇಯ್ ॥

ಶಬ್ದಾರ್ಥ:- ಯಾವ ವ್ಯಕ್ತಿ ಸಾಕ್ಷಿ ಪುರಾವೆಗಳನ್ನು ನೋಡಿದ ಮೇಲೂ ಸುಳ್ಳನ್ನೇ ಆಧಾರವೆಂದು ನಂಬುತ್ತಾನೋ, ಅಂಥ ವ್ಯಕ್ತಿಯನ್ನು ಕನಸಿನಲ್ಲು ಭೇಟಿಮಾಡಿಸಬೇಡಾ. ಪರಮಾತ್ಮ! ಅವನು ಬಹಳ ದುಷ್ಟ. ಅವನ ಬಳಿ ಜ್ಞಾನ ಚರ್ಚೆ ಮಾಡುವುದು ವ್ಯರ್ಥ ಎಂದು ಕಬೀರ ಪರಮೇಶ್ವರರು ಹೇಳಿದ್ದಾರೆ.

ಬ್ರಹ್ಮಾ ಗರುಡನ ಮಾತನ್ನು ಕೇಳಿ ಅತ್ಯಂತ ಕೋಪಗೊಂಡನು. ಹಾಗೂ ಬಯ್ಯತೊಡಗಿದನು. "ನಿನ್ನದು ಪಕ್ಷಿಯ ಬುದ್ಧಿ. ನಿನಗೆ ಯಾರಾದರೂ ಏನಾದರೂ ಹೇಳಲಿ. ಆ ಮಾತುಗಳನ್ನೇ ನೀನು ನಂಬಿಬಿಡುತ್ತೀಯಾ. ನಿನಗೆ ಸ್ವಂತ ಬುದ್ಧಿ ಇಲ್ಲ" ಎಂದನು. ನಂತರ ತಕ್ಷಣದಲ್ಲೇ ವಿಷ್ಣು, ಶಿವ, ಇಂದ್ರ ಮತ್ತು ಎಲ್ಲಾ ದೇವತೆಗಳನ್ನು, ಋಷಿಗಳನ್ನು ಕರೆದನು. ಸಭೆ ಏರ್ಪಟ್ಟಿತು. ಬ್ರಹ್ಮಾ ಅವರನ್ನು ಕುರಿತು ಹೀಗೆಂದನು. "ಗರುಡನು ಇಂದು ಹೊಸ ಮಾತನ್ನು ಹೇಳುತ್ತಿದ್ದಾನೆ. ಬ್ರಹ್ಮಾ, ವಿಷ್ಣು, ಮಹೇಶ್ವರರು ನಾಶಹೊಂದುವವರು. ಪೂರ್ಣ ಪರಮಾತ್ಮನು ಬೇರೆಯೇ ಯಾರೋ ಇದ್ದಾನೆ. ಅವನು ಅಮರ ಲೋಕದಲ್ಲಿ ಇದ್ದಾನೆ. ನಾವು ಸೃಷ್ಟಿಕರ್ತರಲ್ಲ" ಎಂದನು. ಈ ಮಾತನ್ನು ಕೇಳಿ ವಿಷ್ಣು ಮತ್ತು ಶಿವನಿಗೆ ಬಹಳ ಕೋಪಬಂದಿತು. ಗರುಡನನ್ನು ಒಂದೇ ಸಮನೆ ಬಯ್ಯಲಾರಂಭಿಸಿದರು. ನಂತರ ಎಲ್ಲರೂ ದುರ್ಗೆಯಿಂದ ಸತ್ಯವನ್ನು ಅರಿಯಲು ನಿಶ್ಚಯಿಸಿದರು. ಎಲ್ಲರೂ ಸೇರಿ ದುರ್ಗಾಮಾತೆಯ ಬಳಿ ಬಂದರು. ಅದೇ ಪ್ರಶ್ನೆ ಕೇಳಿದರು ನಮ್ಮನ್ನು (ಬ್ರಹ್ಮಾ, ವಿಷ್ಣು, ಮಹೇಶ) ಬಿಟ್ಟು ಬೇರೆ ಪೂರ್ಣ ಪರಮಾತ್ಮ ಇದ್ದಾರೆಯೇ, ನಾವು ನಾಶಹೊಂದುವವರೆ? ಎಂದು ಪ್ರಶ್ನಿಸಿದರು. ದುರ್ಗೆಯು ಸ್ಪಷ್ಟವಾಗಿ ಹೇಳಿದಳು, "ನಿನಗೆ ಈ ಭ್ರಮೆ ಯಾವಾಗ ಆಯಿತು? ನೀನು ಅವಿನಾಶಿ ಹಾಗು ಸೃಷ್ಟಿಕರ್ತನೆಂದು ಹಾಗೇನಾದರೂ ಇದ್ದರೆ ನೀನು ನನ್ನ ಕರ್ತ (ತಂದೆ) ಕೂಡ ಆದೆ, ಆದರೆ ನಿನ್ನ ಜನ್ಮವು ನನ್ನ ಗರ್ಭದಿಂದ ಆಗಿದೆ. ವಾಸ್ತವದಲ್ಲಿ ಪರಮೇಶ್ವರನಂತು ಬೇರೆ ಇದ್ದಾನೆ. ಅವನೇ ಅವಿನಾಶಿ, ಅವನೇ ಎಲ್ಲರ ಕರ್ತನು." ಎಂದಳು. ಈ ಮಾತನ್ನು ಕೇಳಿದ ನಂತರ ಸಭೆ ಮುಕ್ತಾಯವಾಯಿತು. ಎಲ್ಲರೂ ಹೋದರು. ಆದರೆ ಬ್ರಹ್ಮಾ, ವಿಷ್ಣು, ಮಹೇಶ್ವರರು ಈ ಸತ್ಯವನ್ನು ಅರಗಿಸಿಕೊಳ್ಳಲು ಸಿದ್ಧರಿರಲಿಲ್ಲ. ಅವರು ಗರುಡನನ್ನು ಕರೆದರು. ಗರುಡನು ಬಂದು ನಮಸ್ಕಾರ ಮಾಡಿ, ಆದೇಶ ಪಡೆದು ಅಲ್ಲಿ ಕುಳಿತನು. ಈ ಮೂವರೂ ದೇವತೆಗಳು ಹೇಳಿದರು, "ಹೇ ಪಕ್ಷಿರಾಜ, ನಾವು ಈ ಪ್ರಪಂಚದ ಸೃಷ್ಟಿಕರ್ತರೆಂದು ನಿಮಗೆ ಹೇಗೆ ನಂಬಿಕೆ ಬರುವುದು? ಯಾವುದೇ ಬೇಕಾದು ಪರಿಕ್ಷೆ ಮಾಡಿಕೊಳ್ಳಿ" ಆಗ ಗರುಡನು ಎದ್ದು ಹಾರಿ ನನ್ನ (ಕಬೀರರ) ಬಳಿ ಬಂದನು. ಹಾಗೂ ಇಡೀ ವೃತ್ತಾಂತವನ್ನು ತಿಳಿಸಿದನು. ಆಗ ಕಬೀರರು ಹೇಳಿದರು." ಬಂಗ ದೇಶ (ಈಗಿನ ಬಾಂಗ್ಲಾದೇಶ) ದಲ್ಲಿ ಒಬ್ಬ ಬ್ರಾಹ್ಮಣನ 12ವರ್ಷದ ಬಾಲಕನಿದ್ದಾನೆ. ಅವನ ಆಯುಷ್ಯ ಸಮಾಪ್ತವಾಗಲು ಬಂದಿದೆ. ಅವನು ಕೆಲವೇ ಕೆಲವು ದಿನಗಳ ಅತಿಥಿ. ನಾನು ಆ ಬ್ರಾಹ್ಮಣನ ಬಾಲಕನಿಗೆ ನನ್ನ ಆಶ್ರಯ ಪಡೆಯಲು ಬ್ರಹ್ಮಾ, ವಿಷ್ಣು, ಶಿವನ ಸ್ಥಿತಿ ಹೇಳಿದೆ, ನಿನಗೆ ಹೇಳಿದಂತೆ. ಆ ಬಾಲಕನು ಬಹಳ ವಾದ ಮಾಡಿದನು. ನನ್ನ

ಜ್ಞಾನವನ್ನು ಒಪ್ಪಿಕೊಳ್ಳಲಿಲ್ಲ. ಆಗ ನಾನು ಆ ಬಾಲಕನಿಗೆ ಹೇಳಿದೆ, "ನಿನ್ನ ಆಯುಷ್ಯ ಇನ್ನು ಮೂರು ದಿನ ಮಾತ್ರವಿದೆ. ಒಂದೊಮ್ಮೆ ನಿನ್ನ ಬ್ರಹ್ಮಾ, ವಿಷ್ಣು, ಮಹೇಶ್ವರರು ಸಮರ್ಥರಾಗಿದ್ದರೆ ನಿನ್ನ ರಕ್ಷಣೆ ಮಾಡಿಕೊ," ಇಷ್ಟು ಹೇಳಿ ನಾನು ಅಂತರ್ಧ್ಯಾನನಾದೆ. ಬಾಲಕನು ವ್ಯಾಕುಲನಾಗಿದ್ದಾನೆ. "ನೀನು ಆ ಬಾಲಕನನ್ನು ಕರೆದುಕೊಂಡು ದೇವತೆಗಳ ಬಳಿ ಹೋಗು. ಅವರಿಂದ ಏನೂ ಆಗುವುದಿಲ್ಲ. ನಂತರ ನೀನು ನನ್ನ ಧ್ಯಾನಾವಸ್ಥೆಯಿಂದ ಮಾತನಾಡು. ನಾನು ಮುಂದೆ ಏನು ಮಾಡಬೇಕೆಂದು ನಿನಗೆ ಹೇಳುತ್ತೇನೆ". ಎಂದು ಕಬೀರರು ಗರುಡನಿಗೆ ಹೇಳಿದರು. ಗರುಡನು ಆ ಬಾಲಕನನ್ನು ಕರೆದುಕೊಂಡು ಬ್ರಹ್ಮಾ, ವಿಷ್ಣು, ಶಿವನ ಬಳಿ ಬಂದನು. ಗರುಡನು ಆ ಬಾಲಕನಿಗೆ ಆ ದೇವತೆಗಳ ಬಳಿ ಹೀಗೆ ಹೇಳಬೇಕೆಂದು ಹೇಳಿದನು, "ನನ್ನ ತಾತಾ–ಮುತ್ತಾತಂದಿರು, ತಂದೆ ಹಾಗೂ ನಾನು ಸದಾ ನಿಮ್ಮ ಪೂಜೆ ಮಾಡಿದ್ದೇವೆ. ನನ್ನ ಜೀವನದಲ್ಲಿ **2** ದಿನಗಳು ಮಾತ್ರ ಶೇಷ ಉಳಿದಿವೆ. ನನ್ನ ಆಯಸ್ಸಾದ್ರೂ ಎಷ್ಟಿದೆ?" ಬಾಲಕನು ಅವರ ಬಳಿ ಹೋಗಿ ಹಾಗೆಯೇ ವಿನಂತಿಸಿದನು.

ಆಗ ಮೂವರು ದೇವರು ಪ್ರಯತ್ನ ಮಾಡಿದರು. ಆದರೆ ಅದು ವ್ಯರ್ಥವಾಯಿತು. ನಂತರ ನ್ಯಾಯಾಧೀಶನಾದ ಧರ್ಮರಾಜನ ಬಳಿ ಹೋಗಲು ನಿರ್ಧರಿಸಿದರು. ಎಲ್ಲರ ಲೆಕ್ಕಾಚಾರ **(account)** ಅವನ ಬಳಿಯೇ ಇರುವುದರಿಂದ ಅವನಿಗೆ ಹೇಳಿ ಹೆಚ್ಚಿಸೋಣ, ಅದೇ ಸರಿಯಾದ ಮಾರ್ಗವೆಂದು ತಿಳಿದು ಧರ್ಮರಾಯನ ಬಳಿ ತೆರಳಿದರು. ತ್ರಿಮೂರ್ತಿಗಳು ಧರ್ಮರಾಯನನ್ನು ಕುರಿತು ಆ ಬಾಲಕನ ಆಯುಷ್ಯ ಎಷ್ಟಿದೆ ಎಂದು ವಿಚಾರಿಸಿದಾಗ, ಧರ್ಮರಾಜನು ಡಾಯರಿ (ರಜಿಸ್ಟರ್) ನೋಡಿ ನಾಳೆ ಇವನ ಮೃತ್ಯು ಆಗುವುದೆಂದು ಹೇಳಿದ. ತ್ರಿಮೂರ್ತಿಗಳು ಧರ್ಮರಾಜನಿಗೆ ಆ ಬಾಲಕನ ಆಯುಷ್ಯ ವೃದ್ಧಿಸಲು ಕೇಳಿದಾಗ ಅವನು ಅದು ಅಸಾಧ್ಯವೆಂದನು. ನಾವು ನಿನ್ನ ಬಳಿ ಪದೇ ಪದೇ ಬರುವುದಿಲ್ಲ. ಇದು ಮಾನ–ಮರ್ಯಾದೆಯ ಪ್ರಶ್ನೆ. ಇವನ ಆಯುಷ್ಯವನ್ನು ವೃದ್ಧಿಸು ಎಂದು ತ್ರಿಮೂರ್ತಿಗಳು ವಿನಂತಿಸಿದಾಗ ಧರ್ಮರಾಯನು "ಸಾಧ್ಯವಿಲ್ಲ, ಒಂದು ಕ್ಷಣವೂ ಹೆಚ್ಚು, ಮಾಡುವುದಾಗಲಿ, ಕಡಿಮೆ ಮಾಡುವುದಾಗಲೀ ಸಾಧ್ಯವಿಲ್ಲ. ಒಂದೊಮ್ಮೆ ನೀವು ನಿಮ್ಮ ಆಯುಷ್ಯವನ್ನು ಕೊಟ್ಟರೆ ಮಾತ್ರ ಇವನ ಆಯುಷ್ಯವನ್ನು ಹೆಚ್ಚಿಸಬಲ್ಲೆ" ಎಂದನು. ಇದನ್ನು ಕೇಳಿದ ತಕ್ಷಣ ಎಲ್ಲರೂ ಗಾಭರಿಯಾದರು. ಆಗ ಇದನ್ನು ಕೇವಲ ಪರಮೇಶ್ವರನು ಮಾತ್ರ ಮಾಡಲು ಸಾಧ್ಯ ಎಂದು ನಿರ್ಧರಿಸಿ ಅಲ್ಲಿಂದ ತಕ್ಷಣವೇ ಹೊರಟು ಗರುಡನಿಗೆ ಹೇಳಿದರು, "ಯಾರಾದರೂ ಸಮರ್ಥ ಶಕ್ತಿವಂತರಿದ್ದರೆ ಅವರಿಂದ ಈ ಬಾಲಕನ ಆಯುಷ್ಯವನ್ನು ವೃದ್ಧಿಸಿ ತೋರಿಸು". ಆಗ ಗರುಡನು ಕಬೀರರನ್ನು ಧ್ಯಾನಾವಸ್ಥೆ (ಟೆಲಿಫೋನ್) ಮೂಲಕ ಸಂಪರ್ಕಿಸಿದನು. ಕಬೀರರು ಧ್ಯಾನಾವಸ್ಥೆ ಮೂಲಕವೇ ಹೇಳಿದರು, "ಇವನಿಗಾಗಿ ನೀನು ಮಾನಸ ಸರೋವರದಿಂದ ನೀರನ್ನು ತಗೊಂಡು ಬಾ, ಅಲ್ಲಿ ನಿಮಗೆ ಶ್ರವಣ ಎಂಬ ಭಕ್ತ ಸಿಗುವನು. ಅವನಿಗೆ ನಾನೆಲ್ಲವನ್ನೂ ಹೇಳಿದ್ದೇನೆ. ಅಲ್ಲಿಂದ ಅಮೃತವನ್ನು ತನ್ನಿ" ಎಂದರು. ಗರುಡನು ಕಬೀರರು ಹೇಳಿದ ಹಾಗೆ ಮಾಡಿದನು. ಅಮೃತವನ್ನು ತಂದು ಆ ಬಾಲಕನಿಗೆ ಕುಡಿಸಿದನು.

ಆ ಬಾಲಕನ ಬಳಿ ತೆರಳಿ ಅಮೃತವನ್ನು ಕುಡಿಸಿದ ನಂತರ ಇವರೇ ಸ್ವತಃ ಪರಮೇಶ್ವರ" ಎಂದು ಗರುಡನು ಆ ಬಾಲಕನಿಗೆ ತಿಳಿಸಿದನು. ಅವರು ಜಲವನ್ನು ಮಂತ್ರಿಸಿ ಕೊಟ್ಟಿದ್ದರು. ಮಗು ನೀನು ದೀಕ್ಷೆ ಪಡೆದುಕೊ, ಈ ಅಮೃತದಿಂದ **10** ದಿನಗಳವರೆಗೆ ಜೀವಿತವಿರುವೆ. ಬಾಲಕನು ನನ್ನಿಂದ ದೀಕ್ಷೆ ಪಡೆದನು. ಬಾಲಕನು **15** ದಿನಗಳವರೆಗೆ ಸಾಯಲಿಲ್ಲ. ಆಗ ಗರುಡನು ಆ ತ್ರಿಮೂರ್ತಿಗಳಿಗೆ ಅವನು ಜೀವಂತವಾಗಿದ್ದಾನೆ, ನನ್ನ ಗುರುಗಳಿಂದ ದೀಕ್ಷೆ ಪಡೆದಿದ್ದಾನೆ , ಅವರು ಆ ಬಾಲಕನಿಗೆ ದೀರ್ಘಾಯಸ್ಸಿನ ಆಶೀರ್ವಾದ ನೀಡಿದ್ದಾರೆ ಎಂದು ತಿಳಿಸಿದನು. ಆಗ ತ್ರಿಮೂರ್ತಿಗಳು ಧರ್ಮರಾಜನ ಬಳಿ ತೆರಳಿದರು. ಜೊತೆಯಲ್ಲಿ ಗರುಡನೂ ಹೋದನು. ಬಾಲಕನು ಹೇಗೆ ಬದುಕಿದ್ದಾನೆ, ಅವನಂತು ಸಾಯಬೇಕಿತ್ತು ಎಂದು ತ್ರಿಮೂತಿಗಳು ಧರ್ಮರಾಜನನ್ನು ಕೇಳಿದಾಗ, ಧರ್ಮರಾಜನು ಡಾಯರಿ ನೋಡಿದಾಗ ಅವನ ಆಯುಷ್ಯ ವೃದ್ಧಿಯಾಗಿರುವುದು ಅದರಲ್ಲಿ ಬರೆದಿತ್ತು. ಆಗ ಧರ್ಮರಾಜನು

"ಇದಂತು ಮೇಲಿನಿಂದ ಆಗುತ್ತದೆ ಇದು ಯಾವಾಗಲಾದರೊಮ್ಮೆ ನಡೆಯುತ್ತದೆ. ಆ ಪರಮೇಶ್ವರನ ಲೀಲೆಯನ್ನು ಬಲ್ಲವರು ಯಾರು?" ಎಂದನು. ತ್ರಿಮೂರ್ತಿಗಳಿಗೆ ಆಶ್ಚರ್ಯವಾಯಿತು. ಆದರೆ ಇದನ್ನು ಪ್ರತ್ಯಕ್ಷವಾಗಿ ನೋಡಿದರೂ ಸತ್ಯವನ್ನು ಒಪ್ಪಿಕೊಳ್ಳಲಿಲ್ಲ. ಅವರು ಅಹಂಕಾರವನ್ನು ಬಿಡಲಿಲ್ಲ. ಗರುಡನಿಗೆ ಮಾತ್ರ ನಂಬಿಕೆ ಇನ್ನೂ ಬಲವಾಯಿತು.

ಕಬೀರ್, ರಾಜ್ ತಜನಾ ಸಹಜ್ ಹೈ ಸಹಜ್ ತ್ರಿಯಾ ಕಾ ನೇಹ್ ।
ಮಾನ್ ಬಡಾಯಿ ಈರ್ಷ್ಯಾ ದುರ್ಲಭ ತಜ್‌ನಾ ಯೇಹ್ ॥

**ಶಬ್ದಾರ್ಥ:–** ಆಧ್ಯಾತ್ಮ ಜ್ಞಾನದ ಕೊರತೆಯಿಂದ ಮನುಷ್ಯನಲ್ಲಿ ಕೆಲವು ಅಸಾಧ್ಯವಾದ ಕೆಟ್ಟತನ ಮನೆ ಮಾಡುತ್ತದೆ. ಅಂದ್ರೆ ದೊಡ್ಡಸ್ತಿಕೆ, ಈರ್ಷ್ಯೆ ದೊಡ್ಡಸ್ತಿಕೆ ಅಂದ್ರೆ ಪದವಿ ಅಥವಾ ಹಣದ ಅಹಂಕಾರದಿಂದ ಬೀಗುವ ವ್ಯಕ್ತಿ ಎಂದರ್ಥ. ಇವೆರಡೂ (ಪದವಿಯಿಂದ ಸಿಗುವ ದೊಡ್ಡತನ ಮತ್ತು ಹೊಟ್ಟೆಕಿಚ್ಚು) ಎಂತಹ ಕೆಟ್ಟಗುಣಗಳೆಂದರೆ, ಅವುಗಳ ಅಭಿಮಾನದಲ್ಲಿ ಕುರುಡನಾಗಿ ಅವುಗಳನ್ನ ತ್ಯಜಿಸುವುದಿಲ್ಲ. ರಾಜ್ಯ ಬಿಡಬಹುದು, ಸ್ತ್ರೀಯನ್ನು ಬಿಡಬಹುದು ಆದರೆ ಇವೆರಡನ್ನು ಬಿಡುವುದು ಬಹಳ ಕಠಿಣ.

ಈ ಗರುಡ ಬೋಧದ ಅಂತ್ಯದಲ್ಲಿ ವಾಸುಕಿ ಎಂಬ ನಾಗಕನ್ಯೆಯ ಪ್ರಕರಣವನ್ನು ತಪ್ಪಾಗಿ ಅರ್ಥೈಸಲಾಗಿದೆ. ಇದರಲ್ಲಿ ಗರುಡನನ್ನು ಗುರು ಎಂದು ಬಿಂಬಿಸಲಾಗಿದೆ. ಇದು ತಪ್ಪು, ಏನೆಲ್ಲಾ ಆಗಿದೆಯೋ, ಅದು ಪರಮೇಶ್ವರ ಕಬೀರರಿಂದ ಆಗಿದೆ.

## ಗರುಡ್ ಬೋಧ್‌ದ ಕೆಲವು ಅಮೃತವಾಣಿಯನ್ನು ಈಗ ಓದೋಣ

### ಧರ್ಮದಾಸ ವಚನ

ಧರ್ಮದಾಸ್ ಬೀನತೀ ಕರ್ೈ, ಸುನಹು ಜಗತ್ ಆಧಾರ್ ।
ಗರುಡ್ ಬೋಧ್ ಭೇದ್ ಸಬ್, ಅಬ್ ಕಹೋ ತತ್ತ್ವ ವಿಚಾರ್ ॥

**ಶಬ್ದಾರ್ಥ:–** ಧರ್ಮದಾಸರು ಪರಮೇಶ್ವರ ಕಬೀರರಿಂದ ಗರುಡದೇವನ ಬಗ್ಗೆ ತಿಳಿದುಕೊಳ್ಳುವ ಇಚ್ಛೆಯಿಂದ, ಪ್ರಪಂಚದ ಪಾಲನೆ ಮಾಡುವ ಪರಮಾತ್ಮ, ನನಗೆ ಗರುಡ ಪಕ್ಷಿಯ ವಿಷಯದಲ್ಲಿ ನಿಜವಾದ ಜ್ಞಾನವನ್ನು ತಿಳಿಸುವ ಕೃಪೆ ಮಾಡಿ ಎಂದು ವಿನಂತಿಸಿಕೊಂಡರು.

### ಸತ್‌ಗುರು ವಚನ (ಕಬೀರ್ ವಚನ)

ಪ್ರಥಮ್ ಗರುಡ್ ಸೋಂ ಭೈಂಟ್–ಜಬ್ ಭಯಊ । ಸತ್ ಸಾಹಬ್ ಮೈಂ ಬೋಲ್ ಸುನಾಊ ।
ಧರ್ಮ್‌ದಾಸ್ ಸುನೋ ಕಹು ಬುಝಾಈ । ಜೇಹೀ ವಿಧಿ ಗರುಡ್ ಕೋ ಸಮಝಾಈ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರು ಧರ್ಮದಾಸನಿಗೆ ಹೀಗೆಂದರು, "ಯಾವಾಗ ನಾನು ಮೊದಲ ಬಾರಿಗೆ ಗರುಡನನ್ನು ಭೇಟಿಯಾದೆನೋ, ಆಗ ನಾನು ಸತ್ಯ ಸಾಹೇಬ ಎಂದು ಹೇಳಿದೆ. ಹೇ ಧರ್ಮದಾಸ, ಕೇಳು, ಹೇಗೆ ನಾನು ಗರುಡನಿಗೆ ಹೇಳಿದೆನೋ, ಅದನ್ನೇ ನಿನಗೆ ಹೇಳುತ್ತೇನೆ."

### ಗರುಡ ವಚನ

ಸುನಾ ಬಚನ ಸತ್ ಸಾಹಬ್ ಜಬಹೀ । ಗರುಡ್ ಪ್ರಣಾಮ್ ಕಿಯಾ ತಬಹೀ ॥
ಶೀಶ್ ನೀವಾಯ್ ತಿನ್ ಪೂಛಾ ಚಾಹಯೇ । ಹೋ ತುಮ್ ಕೌನ್ ಕಹಾಂ ಸೇ ಆಯೆ ॥

**ಶಬ್ದಾರ್ಥ:–** ಗರುಡನು ಸತ್ಯ ಸಾಹೇಬ ವಚನ ಕೇಳಿದ ತಕ್ಷಣ, ಪ್ರಣಾಮ ಮಾಡಿದ, ತಲೆ ಬಾಗಿಸಿ ನನಗೆ ಕೇಳಿದನು, "ನೀವು ಯಾರು? ಎಲ್ಲಿಂದ ಬಂದಿರುವಿರಿ?"

### ಜ್ಞಾನಿ (ಕಬೀರ್) ವಚನ

ಕಹಾ ಕಬೀರ್ ಹೈ ನಾಮ್ ಹಮಾರಾ । ತತ್ವಜ್ಞಾನ್ ದೇನೇ ಆಏ ಸಂಸಾರಾ ॥
ಸತ್ಯಪುರುಷ್ ಹೈ ಕುಲ್ ಕಾ ದಾತಾ । ಹಮ್ ವಾಕಾ ಸಬ್ ಭೇದ್ ಬತಾತಾ ॥
ಸತ್ಯಲೋಕ್ ಸೆ ಹಮ್ ಚಲಿ ಆಏ । ಜೀವ್ ಛುಡಾವನ್ ಜಗ್ ಮೆಂ ಪ್ರಕಟಾಏ ॥

**ಶಬ್ದಾರ್ಥ:– ಕಬೀರರು ಗರುಡನಿಗೆ ಹೀಗೆ ಹೇಳಿದರು, "ನನ್ನ ಹೆಸರು ಕಬೀರ. ಸಂಪೂರ್ಣ ವಿಶ್ವಕ್ಕೆ ತತ್ವಜ್ಞಾನ ಅಂದರೆ ನಿಜವಾದ ಆಧ್ಯಾತ್ಮ ಜ್ಞಾನವನ್ನು ನೀಡಲು ಬಂದಿರುವೆ. ನಾನು ಸತ್ಯಲೋಕ ಅಂದರೆ ಸನಾತನ ಪರಮಧಾಮದಿಂದ ನಡೆದು ಬಂದಿರುವೆ. ಕಾಲಜಾಲದಿಂದ ಜೀವಾತ್ಮಗಳನ್ನು ಬಿಡಿಸಲು ಈ ಪ್ರಪಂಚದಲ್ಲಿ ಪ್ರಕಟನಾಗಿರುವೆ. ಸತ್ಯಪುರುಷನು ಈ ಕುಲದ ಒಡೆಯನು. ಅವನು ಎಲ್ಲರನ್ನೂ ಸಲಹುತ್ತಾನೆ. ಎಲ್ಲರಿಗೂ ಕೊಡುವವನು ಅವನೇ. ನಾನು ಅವನ ಸಂಪೂರ್ಣ ರಹಸ್ಯವನ್ನು ಹೇಳಲೇ.**

**ಗರುಡ ವಚನ**

ಸುನತ್ ಬಚನ್ ಅಚಮ್ಬೋ ಮಾನಾ । ಸತ್ಯ್ ಪುರುಷ್ ಹೈ ಕೌನ್ ಭಗವಾನಾ ॥
ಪ್ರತ್ಯಕ್ಷದೇವ್ ಶ್ರೀ ವಿಷ್ಣು ಕಹಾವೈ । ದಶ್ ಔತಾರ್ ಧರಿ ಧರಿ ಜಾವೈ ॥

**ಶಬ್ದಾರ್ಥ:– ಕಬೀರರು ಹೇಳಿದರು, "ಗರುಡನು ಸತ್ಯ ಸಾಹೇಬ ಎನ್ನುವ ಶಬ್ದ ಕೇಳಿದಾಗ ಆಶ್ಚರ್ಯಗೊಂಡನು ಹಾಗೂ ಇವರು ಯಾವ ಪರಮಾತ್ಮ? ಆಧ್ಯಾತ್ಮ ಜ್ಞಾನದಿಂದ ಸ್ಪಷ್ಟವಾಗಿದೆ ಏನೆಂದ್ರೆ ವಿಷ್ಣುವೇ ಪರಮಾತ್ಮ. ಅವರೇ ಹತ್ತು ಅವತಾರಗಳನ್ನು ಎತ್ತಿ ಈ ಭೂಮಿಗೆ ಬಂದಿದ್ದಾರೆ " ಎಂದು ಗರುಡನು ಕೇಳಿದನು.**

**ಜ್ಞಾನಿ (ಕಬೀರ್) ವಚನ**

ತಬ್ ಹಮ್ ಕಹಯಾ ಸುನೋ ಗರುಡ್ ಸುಜಾನಾ।ಪರಮ್ ಪುರುಷ್ ಹೈ ಪುರುಷ್ ಪುರಾನಾ ॥
ವಹ್ ಕಬಹು ನಾ ಮರ್ತಾ ಭಾಈ । ವಹ್ ಗರ್ಭ್ ಸೆ ದೇಹ್ ಧರತಾ ನಾಹೀಂ ॥
ಕೋಟಿ ಮರೇ ವಿಷ್ಣು ಭಗವಾನಾ । ಕ್ಯಾ ಗರುಡ್ ತುಮ್ ನಹೀಂ ಜಾನಾ ॥
ಜಾಕಾ ಜ್ಞಾನ್ ಬೇದ್ ಬತಲಾವೈಂ । ವೇದ್ ಜ್ಞಾನ್ ಕೋಈ ಸಮಝ್ ನ ಪಾವೈಂ ॥
ಜಿಸ್ ನೆ ಕೀನ್ಹಾ ಸಕಲ್ ಬಿಸ್ತಾರಾ । ಬ್ರಹ್ಮಾ, ವಿಷ್ಣು, ಮಹಾದೇವ್ ಕಾ ಸಿರ್‌ಜನ್‌ಹಾರಾ ॥
ಜುನೀ ಸಂಕಟ್ ವಹ ನಹೀಂ ಆವೇ । ವಹ್ ತೋ ಸಾಹೇಬ್ ಅಕ್ಷಯ್ ಕಹಾವೈ ॥

**ಶಬ್ದಾರ್ಥ:– ಕಬೀರರು ಹೀಗೆಂದರು, "ಹೇ ಸಜ್ಜನನಾದ ಗರುಡನೇ? ಕೇಳು, ಈ ಸತ್ಯಪುರುಷ ಎಂದರೆ ಪರಮ ಪುರುಷ ಆದಿ ಪರಮಾತ್ಮ ಅಂದರೆ ಸದಾಕಾಲ ಇರುವ ಭಗವಂತ. ಅವನು ಎಂದಿಗೂ ಸಾಯುವುದಿಲ್ಲ ಹಾಗು ಗರ್ಭದಿಂದ ಜನಿಸುವುದಿಲ್ಲ. ಹೇ ಗರುಡನೇ? ಕೋಟ್ಯಾಂತರ ವಿಷ್ಣು ಸತ್ತಿದ್ದಾರೆ ಎಂದು ನಿನಗೆ ತಿಳಿದಿಲ್ಲವೇ? ಯಾವ ಪರಮ ಅಕ್ಷರ ಪುರುಷನ ಜ್ಞಾನವನ್ನು ವೇದಗಳಲ್ಲಿ ತಿಳಿಸಿದ್ದಾರೋ, ಆ ವೇದದ ಜ್ಞಾನವನ್ನು ಯಾರೂ ಸರಿಯಾಗಿ ತಿಳಿದುಕೊಂಡಿಲ್ಲ. ಯಾರು ಎಲ್ಲಾ ಬ್ರಹ್ಮಾಂಡಗಳನ್ನು ವಿಸ್ತರಿಸಿದ್ದಾರೋ, ಯಾರು ಬ್ರಹ್ಮಾ, ವಿಷ್ಣು, ಮಹೇಶ್ವರರನ್ನು ಉತ್ಪತ್ತಿಸಿದ್ದಾರೋ, ಆ ಪರಮಾತ್ಮನು ಎಂಭತ್ತನಾಲ್ಕು ಲಕ್ಷ ಯೋನಿಗಳ ಸಂಕಷ್ಟದಲ್ಲಿ ಸಿಲುಕುವುದಿಲ್ಲ. ಅವನನ್ನು ಅವಿನಾಶಿ ಎಂದು ಕರೆಯಲಾಗುತ್ತದೆ.**

**ಗರುಡ ವಚನ**

ರಾಮ ರೂಪ ಧರಿ ವಿಷ್ಣು ಆಯಾ । ಜಿನ್ ಲಂಕಾ ಕಾ ಮಾರಾ ರಾಯಾ ॥
ಪೂರ್ಣ್ ಬ್ರಹ್ಮ ಹೈ ವಿಷ್ಣು ಅವಿನಾಶಿ । ಹೈ ಬಂದೀ ಛೋಡ್ ಸಬ್ ಸುಖ್ ರಾಶೀ ॥
ತೇತೀಸ್ ಕೋಟಿ ದೇವತನ್ ಕೀ ಬಂದ್ ಛುಡಾಈ।ಪೂರ್ಣ ಪ್ರಭು ಹೈಂ ರಾಮ್ ರಾಈ ॥

**ಶಬ್ದಾರ್ಥ:– ಗರುಡನೆಂದನು, "ವಿಷ್ಣುವು ರಾಮನ ಅವತಾರವನ್ನು ಎತ್ತಿ ಶ್ರೀಲಂಕೆಯ ರಾಜನಾದ ರಾವಣನನ್ನು ಕೊಂದನು. ವಿಷ್ಣುವೇ ಅವಿನಾಶಿ ಪೂರ್ಣ ಬ್ರಹ್ಮನು. ಮೂವತ್ತಮೂರು ಕೋಟಿ ದೇವತೆಗಳನ್ನು ರಾಜ ರಾವಣನ ಬಂಧನದಿಂದ ಬಿಡಿಸಿದನು. ಅವನೇ ಸುಖ ಸಾಗರನು, ಮುಕ್ತಿದಾತನು ಶ್ರೀ ರಾಮನೇ ಪೂರ್ಣ ಪರಮಾತ್ಮನು.**

**ಜ್ಞಾನಿ (ಕಬೀರ್) ವಚನ**

ತುಮ್ ಗರುಡ್ ಕೈಸೆ ಕಹೋ ಅವಿನಾಶಿ ।

ಸತ್ಯ ಪುರುಷ್ ಬಿನ್ ಕಟ್ಟೈ ನಾ ಕಾಲ್ ಕೀ ಫಾಂಸೀ ॥
ಜಾ ದಿನ್ ಲಂಕ ಮೆಂ ಕರೀ ಚಢಾಈ । ನಾಗ್ ಫಾಂಸ್ ಮೆಂ ಬಂಧೆ ರಘುರಾಈ ॥
ಸೇನಾ ಸಹಿತ್ ರಾಮ್ ಬಂಧಾಈ । ತಬ್ ತುಮ್ ನಾಗ್ ಜಾ ಮಾರೇ ಭಾಈ ॥
ತಬ್ ತೇರೇ ವಿಷ್ಣು ಬಂದನ್ ಸೇ ಛೂಟೆ । ಯಾಕು ಪೂಜ್ಯೆ ಭಾಗ್ ಜಾಕೇ ಫೂಟೆ ॥
ಕಬೀರ್ ಐಸೀ ಮಾಯಾ ಅಟಪಟೀ, ಸಬ್ ಘಟ್ ಆನ್ ಅಡೀ ।
ಕಿಸ್–ಕಿಸ್ ಕೂಂ ಸಮಝಾಊಂ, ಕೂಐ ಭಾಂಗ್ ಪಡೀ ॥

**ಶಬ್ದಾರ್ಥ:–** ಆಗ ಕಬೀರರೆಂದರು, ಹೇ ಗರುಡದೇವಾ! ನೀನು ವಿಷ್ಣುವನ್ನು ಹೇಗೆ ಅವಿನಾಶಿ ಎಂದು ಕರೆಯುವೆ? ಸತ್ಯಪುರುಷನಿಲ್ಲದೆ ಕಾಲನ ಬಲೆ ಅಂದರೆ ಕರ್ಮದ ಬಂಧನವು ಎಂದಿಗೂ ಕೊನೆಗೊಳ್ಳುವುದಿಲ್ಲ. ಹೇ ಗರುಡನೇ ! ಜ್ಞಾಪಿಸಿಕೋ, ಯಾವ ಸಮಯದಲ್ಲಿ ಶ್ರೀ ರಾಮಚಂದ್ರನು ಶ್ರೀಲಂಕೆಯ ಮೇಲೆ ಆಕ್ರಮಣ ಮಾಡಿದನೋ, ಯುದ್ಧವಾದಾಗ ಶ್ರೀರಾಮ ಹಾಗೂ ಅವನ ಇಡೀ ಸೈನ್ಯವು ನಾಗಪಾಶದಲ್ಲಿ ಬಂಧಿಯಾಗಿತ್ತು. ನೀನು ರಾಮನ ಹಾಗೂ ಇಡೀ ಸೈನ್ಯವನ್ನು ನಾಗಪಾಶವನ್ನು ಕತ್ತರಿಸಿ ಮುಕ್ತಗೊಳಿಸಿದೆ. ಆಗ ನಿನ್ನ ವಿಷ್ಣುವು ಬಂಧನದಿಂದ ಮುಕ್ತಿಯನ್ನು ಪಡೆದನು. ಶ್ರೀರಾಮ ಹಾಗೂ ಅವನ ಸೈನ್ಯಕ್ಕೆ ನೀನೇ ಮುಕ್ತಿ ದಾತನು. ಯಾರು ವಿಷ್ಣುವನ್ನು ಇಷ್ಟ ರೂಪದಲ್ಲಿ ಪೂಜಿಸುತ್ತಾರೋ, ಅವರ ಅದೃಷ್ಟ ಕೆಟ್ಟಿದೆ. ಅಂದರೆ ಅವರ ಭಾಗ್ಯವೇ ಸರಿಯಿಲ್ಲ". ಕಬೀರರು ದುಃಖಿ ಮನಸ್ಸಿನಿಂದ ಹೀಗೆಂದರು "ಕಾಲ ಬ್ರಹ್ಮನು ತನ್ನ ಮಾಯಾಜಾಲದಿಂದ ಎಲ್ಲಾ ಜೀವಾತ್ಮಗಳ ಹೃದಯವನ್ನು ಅಜ್ಞಾನದಿಂದ ತುಂಬಿದ್ದಾನೆ. ಯಾರ್ಯಾರಿಗೇ ಎಂದು ತಿಳಿಸಿ ಹೇಳುವುದು? ಇದಂತು ಇಂಥ ಸಮಸ್ಯೆಯಾಗಿದೆ ಅಂದರೆ ಯಾರೋ ಒಂದು ಕ್ವಿಂಟಲ್ ಭಂಗಿಯನ್ನು ಅರೆದು ಬಾವಿಗೆ ಸುರಿದಂತೆ, ಯಾರು ಆ ನೀರನ್ನು ಕುಡಿಯುವರೋ ಅವರೆಲ್ಲರಿಗೂ ನಶೆ ಏರುವುದು, ಎಷ್ಟು ಜನ ಅ ನೀರನ್ನು ಕುಡಿಯುವರೋ ಅವರೆಲ್ಲರೂ ತೂರಾಡುತ್ತಾ, ತೊದಲು ಮಾತನಾಡುತ್ತಾ ಇರುತ್ತಾರೆ. ಇಂತಹದ್ದೇ ಸ್ಥಿತಿ ಕಾಲಬ್ರಹ್ಮನ ಮೂಲಕ ಭ್ರಮೆಗೆ ಒಳಗಾಗಿರುವ ಜೀವಾತ್ಮಗಳದ್ದಾಗಿದೆ. ಇವರೆಲ್ಲಾ ವಿಷ್ಣು ಹಾಗೂ ಶಿವ ಮತ್ತು ಬ್ರಹ್ಮಾ ಅವಿನಾಶಿ ಪ್ರಭು ಎಂದು ಹೇಳುತ್ತಾರೆ. ಇವರೇ ಸೃಷ್ಟಿ, ಸ್ಥಿತಿ ಹಾಗೂ ಸಂಹಾರ ಕರ್ತರು. ಇವರನ್ನು ಬಿಟ್ಟರೆ ಬೇರೆ ಯಾರೂ ಪರಮಾತ್ಮನಿಲ್ಲ ಎನ್ನುತ್ತಾರೆ.

### ಗರುಡ ವಚನ

ಜ್ಞಾನೀ ಗರುಡ್ ಹೈ ದಾಸ್ ತುಮ್ಹಾರಾ । ತುಮ್ ಬಿನ್ ನಹೀಂ ಜೀವ್ ನಿಸ್ತಾರಾ ॥
ಇತನಾ ಕಹ್ ಗರುಡ್ ಚರಣ್ ಲಿಪಟಾಯಾ । ಶರಣ್ ಲೇವೋಂ ಅವಿಗತ್ ರಾಯಾ ॥
ಕಬಹು ನಾ ಛೋಡೂಂ ತುಮ್ಹಾರಾ ಶರಣಾ। ತುಮ್ ಸಾಹಬ್ ಹೋ ತಾರಣ್ ತರಣಾ ॥
ಪತ್ಥರ್ ಬುಧ್ಧಿ ಪರ್ ಪಡೇ ಹೈ ಜ್ಞಾನೀ।ಹೋ ತುಮ್ ಪೂರ್ಣ್ ಬ್ರಹ್ಮ ಲಿಯಾ ಹಮ್ ಜಾನೀ ॥

**ಶಬ್ದಾರ್ಥ:–** ಗರುಡನು ಕಬೀರರಿಗೆ ಹೇಳಿದನು, "ಹೇ ವಿದ್ವಾಂಸ ಕಬೀರರೇ, ನಾನು ಗರುಡ, ನಿಮ್ಮ ಗುಲಾಮನು, ನೀವಿಲ್ಲದೆ ಈ ಜೀವಾತ್ಮದ ಉದ್ಧಾರ ಸಾಧ್ಯವಿಲ್ಲ". ಕಬೀರರು ಧರ್ಮದಾಸರಿಗೆ ಹೇಳಿದರು. ಗರುಡದೇವನು ಇಷ್ಟು ಹೇಳಿ ನನ್ನ ಕಾಲಿಗೆ ಬಿದ್ದು ಹೇಳಿದನು. ಹೇ ಪರಮೇಶ್ವರ! ನನಗೆ ಆಶ್ರಯ ನೀಡು. ನಾನು ಎಂದಿಗೂ ನಿಮ್ಮ ಆಶ್ರಯ ತೊರೆಯುವುದಿಲ್ಲ. ನೀವು ವಾಸ್ತವದಲ್ಲಿ ತಾರಣ್–ತರಣಾ ಅಂದರೆ ಪೂರ್ಣ ಮೋಕ್ಷವನ್ನು ಕೊಡುವವರೇ ನೀವು. ಹೇ ಜ್ಞಾನಿ ಕಬೀರರೇ, ಜೀವಾತ್ಮಗಳಾದ ನಮ್ಮ ಬುದ್ಧಿಗೆ ಅಜ್ಞಾನ ಆವರಿಸಿದೆ. ಈಗ ನನಗೆ ನೀವೇ ಪೂರ್ಣ ಬ್ರಹ್ಮ ಎಂದು ಜ್ಞಾನವಾಗಿದೆ.

### ಜ್ಞಾನಿ (ಕಬೀರ್) ವಚನ

ತಬ್ ಹಮ್ ಗರುಡ್ ಕುಂ ಪಾಂಚ್ ನಾಮ್ ಸುನಾಯಾ ।
ತಬ್ ವಾಕುಂ ಸಂಶಯ್ ಆಯಾ ॥
ಯಹ್ ತೋ ಪೂಜಾ ದೇವತನ್ ಕೀ ದಾತಾ । ಯಾ ಸೇ ಕೈಸೇ ಮೋಕ್ಷ್ ವಿಧಾತಾ ॥

ತುಮ್ ತೋ ಕಹೋ ದೂಸರಾ ಅವಿನಾಶೀ । ವಾ ಸೇ ಕಟೇ ಕಾಲ್ ಕೀ ಫಾಂಸೀ ॥
ನಾಯಬ್ ಸೇ ಕೈಸೇ ಸಾಹೇಬ್ ಡರಹೀ । ಕೈಸೇ ಮೈಂ ಭವಸಾಗರ್ ತಿರಹೀ ॥

ಶಬ್ದಾರ್ಥ:– ಕಬೀರ ಪರಮೇಶ್ವರರು ಧರ್ಮದಾಸನಿಗೆ ಹೇಳಿದರು, "ಗರುಡನು ಪ್ರಾರ್ಥಿಸಿಕೊಂಡಾಗ ನಾನು ಐದು ನಾಮಗಳ ಮಂತ್ರದೀಕ್ಷೆಯನ್ನು ನೀಡಿದೆ. ಅದು ಶರೀರದಲ್ಲಿರುವ ಕಮಲಗಳಲ್ಲಿ ಪ್ರತ್ಯಕ್ಷವಾಗುವ, ದೇವತೆಗಳ ಹಾಗು ದೇವಿ ದುರ್ಗೆಯ ಸಾಧನೆಯದ್ದಾಗಿದೆ. ಆಗ ಗರುಡನಿಗೆ ಸಂದೇಹವಾಯಿತು. "ಹೇ ಪ್ರಭು, ನೀವು ಈ ಮಂತ್ರಗಳನ್ನು ದೇವತೆಗಳ ಪೂಜೆಗಾಗಿ ನೀಡಿರುವಿರಿ. ಆದರೆ ಇವರಿಗಿಂತ ಬೇರೆ ವಾಸ್ತವದಲ್ಲಿ ಅವಿನಾಶಿ ಸತ್ಯಪುರುಷನಾಗಿದ್ದಾನೆ, ಅವನು ಈ ಕಾಲನ ಬಂಧನದಿಂದ ಬಿಡಿಸುತ್ತಾನೆ ಎಂದು ಹೇಳುತ್ತಿರುವಿರಿ. ಈ ದೇವತೆಗಳ ಪೂಜೆಯಿಂದ ಪೂರ್ಣ ಮೋಕ್ಷವು ಹೇಗೆ ಸಿಗುತ್ತದೆ? ಇವರೆಲ್ಲಾ ನಾಯಬ್ ಅಂದ್ರೆ ಚಿಕ್ಕ ದೇವರುಗಳು. ಇವರೆಲ್ಲರಿಗೂ ಕಾಲ ಬ್ರಮ್ಹನೇ ಒಡೆಯ. ನಾಯಬ್ ಅಂದ್ರೆ ಚಿಕ್ಕ ದೇವತೆಗಳು ಸಾಹೇಬ ಅಂದ್ರೆ ಒಡೆಯ ಭಯ ಬೀಳುವುದಾದರೂ ಹೇಗೆ? ಅಂದರೆ ಈ ದೇವತೆಗಳ ಭಕ್ತಿಯಿಂದ ಕಾಲನ ಬಲೆಯಿಂದ ಹೇಗೆ ಬಿಡಿಸಿಕೊಳ್ಳುವುದು?"

### ಜ್ಞಾನಿ (ಕಬೀರ್) ವಚನ

ಸಾಧನಾ ಕೋ ಪೂಜಾ ಮತ್ ಜಾನೋ । ಸಾಧನಾ ಕೂಂ ಮಜದೂರೀ ಮಾನೋ ॥
ಜೋ ಕೋಊ ಆಮ್ರ್ ಫಲ್ ಖಾನೋ ಚಾಹೈ । ಪಹಲೇ ಬಹುತೇ ಮೆಹನತ್ ಕರಾವೈ ॥
ಧನ್ ಹೋವೈ ಫಲ್ ಆಮ್ರ್ ಖಾವೈ । ಆಮ್ರ್ ಫಲ್ ಇಷ್ಟ್ ಕಹಾವೈ ॥
ಪೂಜಾ ಇಷ್ಟ್ ಪೂಜ್ಯ್ ಕೀ ಕಹಿಏ । ಐಸೆ ಮೆಹನತ್ ಸಾಧನಾ ಲಹಿಏ ॥
ಯಹ್ ಸುನ್ ಗರುಡ್ ಭಯೋ ಆನಂದಾ । ಸಂಶಯ್ ಸೂಲ್ ಕಿಯೋ ನಿಕಂದಾ ॥

ಭಾವಾರ್ಥ:– ಗರುಡದೇವನು ಪರಮೇಶ್ವರರಾದ ಕಬೀರರಿಗೆ ಹೇಳಿದನು. "ಹೇ ಪರಮೇಶ್ವರ, ನೀವಂತೂ ಈ ದೇವತೆಗಳ ನಾಮಮಂತ್ರವನ್ನು ನೀಡಿದ್ದೀರಿ. ಇದು ಇವರ ಪೂಜೆಯಾಯ್ತು. ಇವರು ಕೇವಲ **16** ಕಲೆಗಳನ್ನೊಳಗೊಂಡ ಪ್ರಭುಗಳು ಎಂದು ನೀವು ಹೇಳಿದಿರಿ. ಕಾಲನು ಒಂದು ಸಾವಿರ ಕಲೆಗಳನ್ನೊಳಗೊಂಡ ಪ್ರಭು. ಪೂರ್ಣಬ್ರಹ್ಮನು ಅಶಂಖ್ಯ ಕಲೆಗಳ ಪರಮೇಶ್ವರನು. ಸೃಷ್ಟಿ ರಚನೆಯಲ್ಲಿ ಕಾಲನು ನಿಮ್ಮನ್ನು ತಡೆದಿಟ್ಟಿದ್ದಾನೆ ಎಂದೂ ಹೇಳಿದಿರಿ. ಕಾಲಬ್ರಹ್ಮನ ಅಧೀನದಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರಿದ್ದಾರೆ. ಹೇ ಪರಮೇಶ್ವರ! ನಾಯಬ್ (ಉಪ್ ಅಂದ್ರೆ ಚಿಕ್ಕ) ನಿಂದ ಸಾಹೇಬ್ (ಸ್ವಾಮಿ–ಮಾಲೀಕ) ಹೇಗೆ ಹೆದರಲು ಸಾಧ್ಯ? ಅಂದರೆ ಬ್ರಹ್ಮಾ, ವಿಷ್ಣು, ಶಿವ ಈ ಮೂವರೂ ಕಾಲಬ್ರಹ್ಮನಿಗಿಂತ ಚಿಕ್ಕವರು. ನಾಯಬ್ ತಹಸೀಲ್ದಾರ್ ಅಂದ್ರೆ ಚಿಕ್ಕ ತಹಸೀಲ್ದಾರ್ ಇದ್ದ ಹಾಗೆ. ಚಿಕ್ಕವನಿಂದ ದೊಡ್ಡವನು ಹೇಗೆ ಹೆದರುವನು? ಅಂದರೆ ಅವರು ಕಾಲಬ್ರಹ್ಮನಿಗಿಂತ ಚಿಕ್ಕವರು. ನೀವು ಇವರ ಭಕ್ತಿಯ ಬಗ್ಗೆ ತಿಳಿಸಿದ್ದೀರಿ. ಇವರ ಮಂತ್ರವನ್ನು ಜಪಿಸಲು ನೀಡಿದ್ದಿರಿ. ಇವರೆಲ್ಲಾ ತಮ್ಮ ಮಾಲೀಕನಾದ ಕಾಲಬ್ರಹ್ಮನಿಂದ ನಮ್ಮನ್ನು ಹೇಗೆ ಬಿಡಿಸಬಲ್ಲರು?" ಆಗ ಪರಮೇಶ್ವರ ಕಬೀರರು ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸವನ್ನು ಹೇಳಿದರು. ಯಾರಿಗಾದರೂ ಮಾವಿನಹಣ್ಣು ತಿನ್ನಲು ಆಸೆಯಾಗುತ್ತದೆ ಎಂದರೆ ಮಾವಿನಹಣ್ಣು ಅವನಿಗೆ ಪೂಜ್ಯ. ಆ ಪೂಜ್ಯವಸ್ತುವನ್ನು ಪಡೆಯಲು ಮಾಡುವ ಪ್ರಯತ್ನವು ಸಾಧನೆ ಎಂದು ಕರೆಯಲ್ಪಡುತ್ತದೆ. ಹೇಗೆ ಹಣ ಸಂಪಾದನೆಗೆ ಪರಿಶ್ರಮ ಪಡಬೇಕಾಗುತ್ತದೆ. ಆ ಹಣದಿಂದ ಮಾವಿನಹಣ್ಣನ್ನು ಖರೀದಿಸಿ ತಿನ್ನಬಹುದು. ಇದೇ ರೀತಿ ಪೂರ್ಣ ಪರಮಾತ್ಮನು ನಮ್ಮ ಇಷ್ಟ ದೇವ ಅಂದರೆ ಪೂಜ್ಯದೇವನಾಗುತ್ತಾನೆ. ದೇವತೆಗಳ ಮಂತ್ರದ ಜಪ ಪರಿಶ್ರಮ. ಯಾರಿಗೆ ನಾಮಜಪದ ಸಂಪಾದನೆ ಎನ್ನುವ ಭಕ್ತಿ ಧನ ಸಿಗುವುದೋ, ಅದನ್ನ ಕಾಲಬ್ರಹ್ಮನಿಗೆ ಬಿಟ್ಟು ಋಣಮುಕ್ತರಾಗಿ ತನ್ನ ಇಷ್ಟದೈವ ಅಂದರೆ ಪೂಜ್ಯದೈವ ಅಂದರೆ ಕಬೀರರನ್ನು ಪಡೆಯುವೆವು." ಈ ಮಾತನ್ನು ಕೇಳಿ ಗರುಡನು ಅತ್ಯಂತ ಪ್ರಸನ್ನನಾದನು. ಗುರುಗಳೇ ಪೂರ್ಣಗುರುಗಳಿರುವ ಪ್ರಮಾಣ ಸಿಕ್ತು ಅಂದ್ರೆ ಪೂರ್ಣಗುರು ಮಾತ್ರ ಸಂದೇಹ ನಿವಾರಣೆ ಮಾಡುತ್ತಾನೆ ಮತ್ತು

ದೀಕ್ಷೆ ನೀಡುವನು. ಗರುಡ ತ್ರೇತಾಯುಗದಲ್ಲಿ ಕಬೀರ ಪರಮೇಶ್ವರರಿಂದ ದೀಕ್ಷೆ ಪಡೆದಿದ್ದರು. ಗರುಡನು ವಿಷ್ಣುವಿನ ವಾಹನವಾದ ಕಾರಣ ವಿಷ್ಣುವಿನ ಮಹಿಮೆ ಹಾಗೂ ಚಮತ್ಕಾರವನ್ನು ಪದೇ–ಪದೇ ನೋಡಿದ್ದ ಕಾರಣ ತನ್ನ ಗುರುವಿನಲ್ಲಿ ಭಾವ ಭಕ್ತಿ ಕಡಿಮೆ ಆಯಿತು. ಆದರೆ ಗುರುದ್ರೋಹಿಯಾಗಲಿಲ್ಲ. ಮತ್ತೆ ಯಾವುದಾದರೂ ಜನ್ಮದಲ್ಲಿ ಮಾನವ ಶರೀರ ಪಡೆಯುವವನು ಆಗ ಕಬೀರ ಪರಮೇಶ್ವರರು ಗರುಡನ ಜೀವಾತ್ಮವನ್ನು ಶರಣದಲ್ಲಿ ಪಡೆದು ಮುಕ್ತಿ ನೀಡುವರು. ದೀಕ್ಷೆ ಪಡೆದ ನಂತರ ಗರುಡನು ತ್ರಿಮೂರ್ತಿಗಳ ಬಳಿ ಹೋಗಿ ಜ್ಞಾನದ ಚರ್ಚೆ ಮಾಡಲು ಚಿಂತಿಸಿದನು. ಗರುಡನು ಬ್ರಹ್ಮಾನ ಬಳಿ ಹೋಗಿ ಅವನ ಬಳಿ ಜ್ಞಾನದ ಚರ್ಚೆ ಮಾಡಿದನು.

**"ಗರುಡ ವಚನ ಬ್ರಹ್ಮಾನಿಗೆ ಪ್ರತಿಯಾಗಿ"**

ಬ್ರಹ್ಮಾ ಕಹಾ ತುಮ್ ಕೈಸೆ ಆಯೆ । ಕಹೋ ಗರುಡ ಮೋಹೆ ಅರ್ಥಾಯ್ ॥
ತಬ್ ಹಮ್ ಕಹಾ ಸುನೋಂ ನಿರಂಜನ್ ಪೂತಾ । ಆಯಾ ತುಮ್ಹೆಂ ಜಗಾವನ್ ಸೂತಾ ॥
ಜನ್ಮ್–ಮರಣ್ ಏಕ ಝಂಝಟ್ ಭಾರೀ । ಪೂರ್ಣ ಮೋಕ್ಷ್ ಕರಾಓ ತ್ರಿಪುರಾರೀ ॥

**ಶಬ್ದಾರ್ಥ:–** ಕಬೀರ ಪರಮೇಶ್ವರರಿಂದ ದೀಕ್ಷೆ ಪಡೆದ ಬಳಿಕ ಹಾಗೂ ಪ್ರಪಂಚದ ಸೃಷ್ಟಿಯ ಕತೆಯನ್ನು ಕೇಳಿ, ಯಾವ ಜ್ಞಾನವು ಪುರಾಣ ಹಾಗೂ ವೇದಗಳಲ್ಲಿದೆಯೋ, ಆ ಜ್ಞಾನವು ಕಬೀರರ ಜ್ಞಾನದೊಂದಿಗೆ ಹೊಲುತ್ತದೆ ಎಂದಾದರೆ ಅದು ಸುಳ್ಳಾಗಿರಲು ಸಾಧ್ಯವಿಲ್ಲ ಎಂದು ಗರುಡನಿಗೆ ಪೂರ್ಣವಾಗಿ ನಂಬಿಕೆ ಬಂದಿತು. ಸೃಷ್ಟಿಯ ಉತ್ಪತ್ತಿಯ ಜ್ಞಾನವನ್ನು ಸೃಷ್ಟಿಕರ್ತ ಅಂದರೆ ಪರಮೇಶ್ವರನ ವಿನಃ ಬೇರೆ ಯಾರೂ ತಿಳಿಸಲು ಸಾಧ್ಯವಿಲ್ಲ. ಅವರು ಋಷಿಯಲ್ಲ, ಪರಮೇಶ್ವರರು. ಹೀಗೆ ಯೋಚಿಸುತ್ತಾ ಗರುಡನು ಬ್ರಹ್ಮಾನ ಲೋಕಕ್ಕೆ ಹೋದರು. ಏಕೆಂದರೆ ಬ್ರಹ್ಮಾನನ್ನು ವೇದಗಳ ಜ್ಞಾನಿ ಎಂದು ಕರೆಯುತ್ತಾರೆ. ಬ್ರಹ್ಮಾನು ಗರುಡನು ಬಂದ ಕಾರಣವನ್ನು ತಿಳಿಯಲು ಇಚ್ಛಿಸಿದನು. ಹೇಳು ಗರುಡ ಹೇಗೆ ಬರುವುದಾಯ್ತು. ಆಗ ಗರುಡನು "ಹೇ ಜ್ಯೋತಿ ನಿರಂಜನ್‌ನ ಪುತ್ರ ಅಂದರೆ ಬ್ರಹ್ಮಾ, ನಾನು ಬಂದ ಕಾರಣನ್ನು ಕೇಳು. ನಾನು ಅಜ್ಞಾನ, ಅಂಧಕಾರದಲ್ಲಿ ಮುಳುಗಿರುವವರನ್ನು ತತ್ವಜ್ಞಾನದ ಮೂಲಕ ಎಬ್ಬಿಸಲು ಅಂದರೆ ಎಚ್ಚರಿಸಲು ಬಂದಿರುವೆ. ಜನನ ಮರಣದ ದೊಡ್ಡ ಜಂಜಾಟವಿದೆ. ನೀವು ನಿಮ್ಮ ನಿಮ್ಮ ಪೂರ್ಣ ಮೋಕ್ಷ ಮಾಡಿಕೊಳ್ಳಿ" ಎಂದು ಹೇಳಿದನು.

**"ಬ್ರಹ್ಮಾ ವಚನ"**

ಹಮರಾ ಕೋಈ ನಹೀಂ ಜನ್ಮ್ ದಾತಾ । ಕೇವಲ್ ಏಕ ಹಮಾರೀ ಮಾತಾ ॥
ಪಿತಾ ಹಮಾರಾ ನಿರಾಕಾರ್ ಜಾನೀ । ಹಮ್ ಹೈಂ ಪೂರ್ಣ ಸಾರಂಗಪಾಣೀ ॥
ಹಮರಾ ಮರಣ್ ಕಬಹುಂ ನಹೀಂ ಹೋವೈ । ಕೌನ್ ಅಜ್ಞಾನ್ ಮೆಂ ಪಕ್ಷಿ ಸೋವೈ ॥
ತಬಹೀ ಬ್ರಹ್ಮಾ ವಿಮಾನ್ ಮಂಗಾವಾ । ವಿಷ್ಣು, ಶಿವ ಕೋ ತುರಂತ್ ಬುಲಾವಾ ॥
ಗಏ ವಿಮಾನ್ ದೋನೋಂ ಪಾಸಾ । ಪಲ್ ಮೆಂ ಆನ್ ವಿರಾಜೆ ಪಾಸಾ ॥
ಇಂದ್ರ್ ಕುಬೇರ್ ವರುಣ್ ಬುಲಾಏ । ತೇತಿಸ ಕರೋಡ್ ದೇವತಾ ಆಏ ॥
ಆಏ ಋಷಿ ಮುನೀ ಔರ್ ನಾಥಾ । ಸಿದ್ಧ್ ಸಾಧಕ್ ಸಬ್ ಆ ಜಾತಾ ॥
ಬ್ರಹ್ಮಾ ಕಹಾ ಗರುಡ್ ನೀಂದ್ ಮೈಂ ಬೋಲೈ । ಕೋರೀ ಝೂಠ್ ಕುಫರ್ ಬಹು ತೋಲೈ ॥
ಕಹ್ ಕೋಈ ಔರ್ ಹೈ ಸಿರ್‌ಜನ್ ಹಾರಾ । ಜನ್ಮ್–ಮರಣ್ ಬತಾವೈ ಹಮಾರಾ ॥
ತಾತೇ ಮೈಂ ಯಹ್ ಮಜಲಿಸ್ ಜೋಡೀ । ಗರುಡ್ ಕೇ ಮನ್ ಕ್ಯಾ ಬಾತಾಂ ದೌಡೀ ॥
ಋಷಿ ಮುನಿ ಅನುಭವ್ ಬತಾತಾ । ಬ್ರಹ್ಮಾ, ವಿಷ್ಣು, ಶಿವ್ ವಿಧಾತಾ ॥
ನಿರ್ಗುಣ್ ಸರಗುಣ್ ಯೇಹೀ ಬನ್ ಜಾವೈ । ಕಬಹು ನಹೀಂ ಮರಣ್ ಮೈಂ ಆವೈ ॥

**ಶಬ್ದಾರ್ಥ:–** ಬ್ರಹ್ಮಾ ಹೇಳಿದನು, "ಹೇ ಗರುಡನೇ! ನಮ್ಮ ಜನ್ಮ–ಮರಣವಾಗುವುದಿಲ್ಲ. ನಮಗೆ ತಂದೆ ತಾಯಿಗಳಿಲ್ಲ, ನಮಗೆ ಕೇವಲ ಒಬ್ಬಳೇ ತಾಯಿ. ನಮ್ಮ ತಂದೆ ನಿರಾಕಾರನು. ನಾವೇ ಪೂರ್ಣ ಪರಮಾತ್ಮರು (ಸಾರಂಗ ಎಂದರೆ ಬಿಲ್ಲು, ಪಾಣಿ ಎಂದರೆ ಕೈ=ಕೈಯಲ್ಲಿ ಬಿಲ್ಲನ್ನು ಹಿಡಿದವನನ್ನು

ಕಾಲ ಲೋಕದ ಜೀವಾತ್ಮಗಳು ಪರಮಾತ್ಮ ಎಂದು ಕರೆಯುತ್ತಾರೆ) ಹೇ ಗರುಡ ಪಕ್ಷಿಯೇ, ನೀನು ಅಜ್ಞಾನದ ನಿದ್ರೆ ಮಲಗಿರುವೆ. ಈಗ ಕೇಳು, ನಮ್ಮ ಜನ್ಮ-ಮರಣ ಎಂದಿಗೂ ಆಗುವುದಿಲ್ಲ." ಅದೇ ಕ್ಷಣ ಬ್ರಹ್ಮಾ ವಿಮಾನವನ್ನು ತರಿಸಿಕೊಂಡು ವಿಷ್ಣು ಹಾಗೂ ಶಿವನನ್ನು ಕರೆತರಲು ಚಾಲಕನಿಗೆ ಹೇಳಿದನು. ಅವರಿಬ್ಬರನ್ನೂ ಒಂದು ಕ್ಷಣದಲ್ಲಿ ವಿಮಾನವು ತಂದು ಬಿಟ್ಟಿತು. ಜೊತೆಯಲ್ಲಿ 33 ಕೋಟಿ ದೇವತೆಗಳು ಹಾಗು ದೇವತೆಗಳ ರಾಜನಾದ ಇಂದ್ರ, ಕುಬೇರ ಸಂಪತ್ತಿನ ದೇವತೆ, ಜಲದೇವತೆ ವರುಣ ಮುಂತಾದವರನ್ನು ಕರೆಸಲಾಯಿತು. ಎಂಭತ್ತೆಂಟು ಸಾವಿರ ಋಷಿಗಳು, ಒಂಭತ್ತು ನಾಥರು, ಎಂಭತ್ತನಾಲ್ಕು ಸಿದ್ಧರು? ಎಲ್ಲರನ್ನೂ ಕರೆಸಲಾಯಿತು. ಇಡೀ ಸಭೆ ಸಿದ್ಧವಾಯಿತು. ಬ್ರಹ್ಮಾನು ಗರುಡನು ನಿದ್ದೆಯಲ್ಲಿ ಬಡಬಡಿಸಿದಂತೆ ಏನೇನೋ ಹೇಳುತ್ತಿದ್ದಾನೆ, ಇದೆಲ್ಲವೂ ಸುಳ್ಳು, ಬ್ರಹ್ಮಾ, ವಿಷ್ಣು, ಶಿವ ಇವರಿಗೆ ಜನನ-ಮರಣವುಂಟು ಎಂದು ಗರುಡನು ಹೇಳುತ್ತಿದ್ದಾನೆ. ನಿಮ್ಮನ್ನು ಬಿಟ್ಟು ಸೃಷ್ಟಿಯನ್ನು ರಚಿಸಿದ ಮತ್ತೊಬ್ಬ ಪರಮಾತ್ಮನಿದ್ದಾನೆ ಆದರೆ ಗರುಡನ ಮನಸ್ಸಿನಲ್ಲಿ ಬೇರೆ ರೀತಿಯಾದ ಆಲೋಚನೆಗಳು ಏಕೆ ಬಂತು ಎಂದು ಚಿಂತಿಸಿ ಈ ಸಭೆಯನ್ನು ಕರೆಯಲಾಗಿದೆ ಎಂದು ಹೇಳಿದನು.

ಬ್ರಹ್ಮಾ ಹೇಳುತ್ತಿದ್ದನು ಎಲ್ಲಾ ಋಷಿ ಮತ್ತು ಮುನಿ (ಸಾಧಕ)ಗಳು ಬ್ರಹ್ಮಾ, ವಿಷ್ಣು, ಮಹೇಶ್ವರರು ಜಗತ್ತಿನ ಉತ್ಪತ್ತಿಕರ್ತ ಪರಮಾತ್ಮ ಎಂದು ತಮ್ಮ ಅನುಭವದಿಂದ ಹೇಳುತ್ತಾರೆ, ಇವರೇ ಸಾಕಾರ ಮತ್ತು ನಿರಾಕಾರನಾಗಿ ಲೀಲೆಗಳನ್ನು ಮಾಡುತ್ತಾರೆ. ಇವರ ಸಾವು ಎಂದಿಗೂ ಆಗುವುದಿಲ್ಲ.

### "ವಿಷ್ಣು ವಚನ"

ಪಕ್ಷೀರಾಜ್ ಯಹ್ ಕ್ಯಾ ಮನ್ ಮೆಂ ಆಈ । ಪಾಪ್ ಲಗ್ಯೆ ಬನಾ ಆಲೋಚಕ್ ಭಾಈ ॥
ಹಮ್ ಸೆ ಔರ್ ಕೌನ್ ಬಡೇರಾ ದಾತಾ । ಹಮ್ ಹೈ ಕರ್ತಾ ಔರ ಚೌಥೀ ಮಾತಾ ॥
ತುಮರೀ ಮತಿ ಅಜ್ಞಾನ್ ಹರಲೀನಿ । ಹಮ್ ಹೈಂ ಪೂರ್ಣ ಕರತಾರ್ ತೀನೀ ॥

ಶಬ್ದಾರ್ಥ :- ವಿಷ್ಣು ಹೇಳಿದನು, "ಹೇ ಪಕ್ಷಿಗಳ ರಾಜನಾದ ಗರುಡನೇ, ನಮ್ಮ ಜನನ ಮರಣವಾಗುವುದೆಂಬ ತಪ್ಪು ಕಲ್ಪನೆ ನಿನ್ನ ಮನಸ್ಸಿನಲ್ಲಿ ಹೇಗೆ ಬಂದಿತು? ನೀನು ನಿಂದನೆಗೆ ಅರ್ಹನು. ನಮಗಿಂತ ದೊಡ್ಡ ಪರಮಾತ್ಮ ಯಾರಿದ್ದಾರೆ? ನಾವು ಮೂವರು ಹಾಗೂ ನಾಲ್ಕನೆಯವಳಾದ ದುರ್ಗಾ ಮಾತೆಯೇ ಈ ಪ್ರಪಂಚದ ಸೃಷ್ಟಿಕರ್ತರು. ನಿನ್ನ ಬುದ್ಧಿಗೆ ಅಜ್ಞಾನ ಆವರಿಸಿದೆ. ನಮ್ಮನ್ನು ಬಿಟ್ಟು ಇನ್ಯಾರೋ ಸೃಷ್ಟಿಯ ಉತ್ಪತ್ತಿಕರ್ತ ಎಂದು ಹೇಳುತ್ತಿರುವೆ. ನಾವು ಮೂವರು ಪೂರ್ಣ ಪರಮಾತ್ಮರು ಸೃಷ್ಟಿಯ ಉತ್ಪತ್ತಿ ಕರ್ತರು.

### "ಮಹಾದೇವ ವಚನ"

ಕಹ್ ಮಹಾದೇವ್ ಪಕ್ಷೀ ಹೈ ಭೋಲಾ । ಹೃದಯ್ ಜ್ಞಾನ್ ಇನ್ ನಹೀಂ ತೋಲಾ ॥
ಬ್ರಹ್ಮಾ ಬನಾವೈ ವಿಷ್ಣು ಪಾಲೈ । ಹಮ್ ಸಬ್ ಕಾ ಕರತೇ ಕಾಲೈ ॥
ಔರ್ ಬತಾ ಗರುಡ್ ಅಜ್ಞಾನೀ । ಋಷಿ ಬತಾವೈ ತುಮ್ ನಹೀಂ ಮಾನೀ ॥
ಚಲೋ ಮಾತಾ ಸೆ ಪೂಛೈ ಬಾತಾ । ನಿರ್ಣಯ್ ಕರೋ ಕೌನ್ ಹೈ ವಿಧಾತಾ ॥
ಸಬನೇ ಕಹಾ ಸಹೀ ಹೈ ಬಾನೀ । ನಿರ್ಣಯ್ ಕರೇಗೀ ಮಾತಾ ರಾನೀ ॥
ಸಬ್ ಉಠ್ ಗಏ ಮಾತಾ ಪಾಸಾ । ಆಪನ್ ಸಮಸ್ಯಾ ಕರೀ ಪ್ರಕಾಶಾ ॥

ಶಬ್ದಾರ್ಥ:- ಮಹಾದೇವ ಅಂದರೆ ಶಿವನು ಹೀಗೆಂದನು, "ಈ ಪಕ್ಷಿಯು ಬಹಳ ಮುಗ್ಧವಾಗಿದೆ. ಇವನು ತನ್ನ ಜ್ಞಾನವನ್ನು ಪರಿಶೀಲಿಸದೇ ಹೇಳುತ್ತಿದ್ದಾನೆ. ಬ್ರಹ್ಮಾ ಜೀವಾತ್ಮವನ್ನು ಉತ್ಪತ್ತಿಸುತ್ತಾನೆ. ವಿಷ್ಣು ಪಾಲನೆ ಮಾಡುತ್ತಾನೆ. ನಾನು ಸಂಹಾರ ಮಾಡುತ್ತೇನೆ. ಹೇ ಅಜ್ಞಾನಿ ಗರುಡನೇ! ನೀನೇ ಹೇಳು, ಬೇರೆ ಯಾವ ಸಮರ್ಥ ಪ್ರಭು ಇದ್ದಾರೆ?" ನಂತರ ಶಿವನು ಅಲ್ಲಿ ಸಭೆಯಲ್ಲಿ ಉಪಸ್ಥಿತರಿದ್ದವರಿಗೆ ಹೀಗೆಂದನು, "ನೀವೆಲ್ಲಾ ನಡೆಯಿರಿ, ದುರ್ಗಾಮಾತೆಯ ಬಳಿ ಹೋಗಿ ಪೂರ್ಣ ಪರಮಾತ್ಮನು ಯಾರು? ಎಂದು ತೀರ್ಮಾನ ಮಾಡಿಕೊಂಡು ಬರೋಣ". ಶಿವನ ಮಾತಿಗೆ ಎಲ್ಲರೂ ಅನುಮೋದನೆ ನೀಡಿದರು. ಅವರೆಲ್ಲರೆಂದರು, "ನಿಮ್ಮ ಮಾತು ಸತ್ಯ.

ಮಾತೆಯು ತೀರ್ಮಾನ ಮಾಡುವಳು". ಸಭೆಯಲ್ಲಿ ಹಾಜರಿದ್ದ ಎಲ್ಲರೂ ಎದ್ದು ಮಾತೆಯ ಬಳಿ ಹೊರಟರು ಹಾಗೂ ತಮ್ಮ ಸಮಸ್ಯೆಯನ್ನು ಹೇಳಿದರು.

"ಮಾತಾ ವಚನ"

ಕಹಾ ಮಾತಾ ಗರುಡ್ ಬತಾಓ । ಔರ್ ಕರ್ತಾ ಹೈ ಕೌನ್ ಸಮಝಾಓ ।

ಶಬ್ದಾರ್ಥ:- ದುರ್ಗಾಮಾತೆಯು ಗರುಡನನ್ನು ಕುರಿತು, "ನೀನೇ ಹೇಳು, ಈ ಪ್ರಪಂಚದ ವಿಧಾತನು ಅಂದರೆ ಉತ್ಪತ್ತಿಕರ್ತ ಇವರನ್ನು ಬಿಟ್ಟು ಇನ್ಯಾರಿದ್ದಾರೆ?" ಎಂದು ಪ್ರಶ್ನಿಸಿದಳು.

"ಗರುಡ ವಚನ"

ಮಾತ್ ತುಮ್ ಜಾನತ್ ಹೋ ಸಾರೀ । ಸಚ್ಚ್ ಬತಾ ಕಹೇ ನ್ಯಾಕಾರೀ ॥
ಸಭಾ ಮೆಂ ಝೂಠೀ ಬಾತ್ ಬನಾವ್ಯೆ । ವಾಕಾ ವಂಶ್ ಸಮೂಲಾ ಜಾವ್ಯೆ ॥
ಮ್ಯೆಂ ಸುನಾ ಔರ್ ಆಂಖೋಂ ದೇಖಾ । ಕರ್ತಾ ಅವಿಗತ್ ಅಲಗ್ ವಿಶೇಷಾ ॥
ಜಹಾಂ ಸೆ ಜನ್ಮ್ ಹುಆ ತುಮ್ಹಾರಾ । ವಹ್ ಹೈ ಸಬ್‌ಕಾ ಸರ್‌ಜನ್‌ಹಾರಾ ॥
ವೇದ್ ಜಾಕಾ ನಿತ್ ಗುಣ್ ಗಾವ್ಯೆಂ । ಕೇವಲ್ ವಹೀ ಏಕ ಅಮರ್ ಬತಾವ್ಯೆ ॥
ಮರಹೆಂ ಬ್ರಹ್ಮಾ ವಿಷ್ಣು ನರೇಶಾ । ಮರ್ ಹ್ಯೆಂ ಸಬ್ ಶಂಕರ್ ಶೇಷಾ ॥
ಅಮರ್ ಪುರುಷ್ ಸತ್ ಪುರ್ ರಹತಾ । ಅಪನೇ ಮುಖ್ ಸತ್ಯ್ ಜ್ಞಾನ್ ವಹ್ ಕಹತಾ ॥
ವೇದ್ ಕಹೇ ವಹ್ ಪೃಥ್ವೀ ಪರ್ ಆವ್ಯೆ । ಭೂಲೆ ಜೀವನ್ ಕೋ ಜ್ಞಾನ್ ಬತಲಾವ್ಯೆ ॥
ಕ್ಯಾ ಯೆ ಝೂಠೆ ಶಾಸ್ತ್ರ ಸಾರೇ । ತುಮ್ ವ್ಯರ್ಥ್ ಬನ್ ಬ್ಯೆಠೆ ಸಿರ್‌ಜನ್‌ಹಾರೆ ॥
ಮಾನ್ ಬಢಾಈ ಛೋಡೋ ಭಾಈ । ತಾಕಿ ಭಕ್ತಿ ಕರೇ ಅಮರಾಪುರ್ ಜಾಈ ॥
ಮಾತಾ ಕಹನಾ ಸಾಚೀ ಬಾತಾ । ಬತಾಓ ದೇವೀ ಹೈ ಕೌನ್ ವಿಧಾತಾ ॥

ಶಬ್ದಾರ್ಥ:- ಗರುಡನೆಂದನು, "ಹೇ ಮಾತಾ! ನಿನಗೆ ಎಲ್ಲವೂ ತಿಳಿದಿದೆ. ನ್ಯಾಯಾಧೀಶನಾದವನು ಸತ್ಯವನ್ನೇ ನುಡಿಯಬೇಕು. ಯಾವ ನ್ಯಾಯಾಧೀಶನು ಸಭೆಯಲ್ಲಿ ಸುಳ್ಳು ಹೇಳುವನೋ ಅವನ ವಂಶವು ನಾಶವಾಗುವುದೆನ್ನುವುದು ಪರಮಾತ್ಮನ ನಿಯಮ. ಹಾಗಾಗಿ ಹೇ ಮಾತಾ, ಯಾವ ಪರಮೇಶ್ವರನು ನಿನ್ನನ್ನೂ ಸೃಷ್ಟಿ ಮಾಡಿದ್ದಾನೋ, ಅವನೇ ಎಲ್ಲರ ಉತ್ಪತ್ತಿಕರ್ತ. ನಾನು ಕಣ್ಣಿಂದ ನೋಡಿದ್ದೇನೆ ಹಾಗೂ ತತ್ವದರ್ಶಿಯಿಂದ ಕೇಳಿದ್ದೇನೆ. ಆ ಕರ್ತ ದಿವ್ಯ ಅವಿಗತ ವಿಶೇಷನು. ಅವನು ಇವರಿಗಿಂತ ಭಿನ್ನವಾಗಿದ್ದಾನೆ (ಯಾರ ರಹಸ್ಯವು ಗುಪ್ತವಾಗೇ ಉಳಿಯುವುದೋ ಅವನು ಅವಿಗತನು). ವೇದಗಳಲ್ಲಿ ಅವನ ಮಹಿಮೆಯನ್ನೇ ಹೆಚ್ಚಾಗಿ ವರ್ಣಿಸಲಾಗಿದೆ ಹಾಗೂ ಕೇವಲ ಅವನು ಮಾತ್ರ ಅವಿನಾಶಿ ಎಂದು ಹೇಳಲಾಗಿದೆ. ಬ್ರಹ್ಮಾ, ವಿಷ್ಣು, ಮಹೇಶ್ವರರಿಗೆ ಸಾವುಂಟು. ಅವಿನಾಶಿ ಪರಮಾತ್ಮ ಸತ್ಯಲೋಕ (ಋತಧಾಮ) ದಲ್ಲಿ ಇರುತ್ತಾನೆ. ಅವನು ಸ್ವತಃ ಭೂಮಿಯ ಮೇಲೆ ಪ್ರಕಟನಾಗಿ ಯಥಾರ್ಥ ಆಧ್ಯಾತ್ಮ ಜ್ಞಾನವನ್ನು ತನ್ನ ಮುಖ ಕಮಲದಿಂದ ಹೇಳಿದ ವಾಣಿಯಲ್ಲಿ ಹೇಳುತ್ತಾನೆ. ಅಜ್ಞಾನದಿಂದ ಸತ್ಯ ಭಕ್ತಿಯ ಮಾರ್ಗ ತಪ್ಪಿ ಅಲೆದಾಡುತ್ತಿರುವ ಒಳ್ಳೆಯ ಸಾಧಕರಿಗೆ ಸತ್ಯ ಮಾರ್ಗದ ಜ್ಞಾನವನ್ನು ನೀಡುತ್ತಾನೆ. ಇದು ಎಲ್ಲಾ ವೇದಗಳಲ್ಲಿ ಪ್ರಮಾಣವಿದೆ. ಈ ಶಾಸ್ತ್ರಗಳೆಲ್ಲಾ ಸುಳ್ಳಾ? ಹೇ ತ್ರಿಮೂರ್ತಿಗಳೇ, ನೀವು ವ್ಯರ್ಥ ಸೃಷ್ಟಿಕರ್ತರಾಗಿ ಕುಳಿತು ಬಿಟ್ಟಿದ್ದೀರಿ. ಹೇ ಬ್ರಹ್ಮಾ, ವಿಷ್ಣು, ಮಹೇಶ್ವರರೇ, ನಿಮ್ಮ ದೊಡ್ಡಸ್ತಿಕೆ ಬಿಟ್ಟು ನಿಮ್ಮ ಉದ್ಧಾರ ಮಾಡಿಕೊಳ್ಳಿ. ಆ ಪೂರ್ಣ ಪರಮಾತ್ಮನನ್ನು ಆರಾಧಿಸಿ". ಆಗ ಗರುಡನು ಮಾತೆಯ ಕಡೆಗೆ ತಿರುಗಿ "ಹೇ ಮಾತಾ, ಸತ್ಯವನ್ನು ಹೇಳು, ಈ ಪ್ರಪಂಚದ ಸೃಷ್ಟಿಕರ್ತನು ಯಾರು?" ಹೇಳು ಎಂದು ಪ್ರಾರ್ಥಿಸಿದನು.

"ಮಾತಾ (ದುರ್ಗಾ) ವಚನ"

ಮಾತಾ ಕಹ್ ಸುನೋ ರೇ ಪೂತಾ । ತುಮ್ ಜೋಗೀ ತೀನೋಂ ಅವಧೂತಾ ॥
ಭಕ್ತಿ ಕರೀ ನಾ ಮಾಲಿಕ್ ಪಾಏ । ಅಪನೆ ಕೋ ತುಮ್ ಅಮರ್ ಬತಾಏ ॥
ವಹ್ ಕರ್ತಾ ಹೈ ಸಬ್ ಸೆ ನ್ಯಾರಾ । ಹಮ್ ತುಮ್ ಸಬ್‌ಕಾ ಸಿರ್‌ಜನ್‌ಹಾರಾ ॥

ಗರುಡ್ ಕಹತ್ ಹೈ ಸಚ್ಚೀ ಬಾನೀ । ಐಸೆ ಬಚನ್ ಕಹಾ ಮಾತಾ ರಾನೀ ॥
ಸಬ್ ಉಠ ಗಏ ಅಪನೇ ಅಸ್ಥಾನಾ । ಸಾಚ್ ಬಚನ್ ಕಾಹು ನಹೀಂ ಮಾನಾ ॥

**ಶಬ್ದಾರ್ಥ:– ದುರ್ಗಾ ಮಾತೆಯು ಬ್ರಹ್ಮಾ, ವಿಷ್ಣು, ಶಿವರನ್ನು ಕುರಿತು ಹೀಗೆಂದಳು, "ಹೇ ಮಕ್ಕಳೇ, ಕೇಳಿ, ನೀವು ಮೂವರೂ ಸ್ವಯಂ ಸಾಧಕರು. ಸತ್ಯ ಭಕ್ತಿಯನ್ನು ಮಾಡಲಿಲ್ಲ. ತಮ್ಮನ್ನು ತಾವು ಅಮರರೆಂದು ಹೇಳುತ್ತಿದ್ದೀರಾ. ಏಕೆಂದರೆ ನಿಮಗೆ ಪರಮಾತ್ಮನು ಸಿಕ್ಕಿಲ್ಲ. ಸೃಷ್ಟಿಯ ಉತ್ಪತ್ತಿ ಮಾಡುವವನು ಬೇರೆಯವನೇ ಇದ್ದಾನೆ. ಅವನೇ ನಿಮ್ಮ ಹಾಗೂ ನಮ್ಮೆಲ್ಲಾ ಜೀವಾತ್ಮಗಳ ಸೃಷ್ಟಿ ಮಾಡಿದ್ದಾನೆ." ಮಾತೆಯು ಈ ಮಾತನ್ನು ಹೇಳಿದಾಕ್ಷಣ ಸಭೆಯಲ್ಲಿದ್ದ ಎಲ್ಲರೂ ಹಾಗೂ ಬ್ರಹ್ಮಾ, ವಿಷ್ಣು, ಮಹೇಶ್ವರರು ಎದ್ದು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಆದರೆ ಮಾತೆಯ ಈ ಮಾತನ್ನು ಸತ್ಯವೆಂದು ನಂಬಲಿಲ್ಲ.**

**"ಗರುಡ ವಚನ"**

ಬ್ರಹ್ಮಾ ವಿಷ್ಣು ಮೋಹೆ ಬುಲಾಯಾ। ಮಹಾದೇವ್ ಭೀ ವಹಾಂ ಬೈಠ್ ಪಾಯಾ॥
ತೀನೋಂ ಕಹೇ ಕೋಈ ದೋ ಪ್ರಮಾಣಾ । ತಬ್ ಹಮ್ ತೋಹೆ ಸಾಚಾ ಜಾನಾ॥
ಮೈಂ ಕಹಾ ಗುಂಗಾ ಗುಡ್ ಖಾವೈ। ದುಜೆ ಕೋ ಸ್ವಾದ್ ಕ್ಯಾ ಬತಲಾವೈ॥
ಮೈಂ ಜಾತ್ ಹೂಂ ಸತ್‌ಗುರು ಪಾಸಾ। ಲಾ ಪ್ರಮಾಣ್ ಕರೂ ಭ್ರಮ್ ವಿನಾಶಾ॥
ತ್ರಿದೇವ್ ಕಹೆಂ ಲೋ ಪರೀಕ್ಷಾ ಹಮಾರೀ। ಪೂರ್ಣ ಕರೆಂ ತೇರೀ ಆಶಾ ಸಾರೀ॥
ಹಮ್ ಹೀ ಮಾರೆಂ ಹಮ್ ಹೀ ಬಚಾವೈಂ। ಹಮ್ ರಹತ್ ಸದಾ ನರ್ದಾವೈಂ॥
ಗರುಡ್ ಕಹಾ ಹಮ್ ಕರೆಂ ಪರೀಕ್ಷಾ। ತುಮ್ ಪೂರ್ಣ ತೋ ಲೂಂ ತುಮ್ಹಾರೀ ದೀಕ್ಷಾ॥
ಉಡಾ ವಹಾಂ ಸೇ ಗುರು ಪಾಸೇ ಆಯಾ। ಸಬ್ ವೃತ್ತಾಂತ್ ಕಹ್ ಸುನಾಯಾ॥

**ಶಬ್ದಾರ್ಥ :– ಬ್ರಹ್ಮಾ, ವಿಷ್ಣು, ಮಹೇಶ್ವರರು ಗರುಡನನ್ನು ವಿಷ್ಣು ಲೋಕಕ್ಕೆ ಕರೆಸಿಕೊಂಡು ಹೀಗೆಂದರು, "ಹೇ ಗರುಡನೇ, ನೀನು ನಮಗಿಂತ ಮೇಲೆ ಯಾವುದೋ ಒಂದು ಸಮರ್ಥ ಶಕ್ತಿ ಇದೆ ಎನ್ನುವುದಕ್ಕೆ ಸಾಕ್ಷಿ ಕೊಡು. ನಿನ್ನ ಅನುಭವವನ್ನು ಹೇಳು. ಆಗ ನಾವು ನಿನ್ನ ಮಾತನ್ನು ನಂಬುತ್ತೇವೆ." ಆಗ ಗರುಡನು, ಹೇಗೆ ಮೂಕನು ಬೆಲ್ಲವನ್ನು ತಿಂದು ಬೇರೆಯವರಿಗೆ ಅದರ ರುಚಿಯನ್ನು ಹೇಳಲಾಗುವುದಿಲ್ಲವೋ ಅದರ ಆನಂದವನ್ನು ಸ್ವತಃ ತಾನೇ ಅನುಭವಿಸುತ್ತಾನೋ, ಸ್ವತಃ ಪ್ರಸನ್ನನಾಗಿರುತ್ತಾನೋ ಹಾಗೆ ನಾನು ನನ್ನ ಅನುಭವವನ್ನು ನಿಮಗೆ ತಿಳಿಸಲು ಸಾಧ್ಯವಿಲ್ಲ. ನಾನು ಸದ್ಗುರುವಿನಿಂದ ಸತ್ಯವಾದ ಆಧ್ಯಾತ್ಮಿಕ ಜ್ಞಾನವನ್ನು ಕೇಳಿದ್ದೇನೆ ಹಾಗೂ ಪೂರ್ಣ ಪರಮಾತ್ಮನನ್ನು ಕಣ್ಣುಗಳಿಂದ ನೋಡಿದ್ದೇನೆ. ನಿಮಗೆ ಪರಮಾತ್ಮನ ದರ್ಶನ ಕೇವಲ ಸದ್ಗುರು ಮಾತ್ರ ಮಾಡಿಸಬಲ್ಲರು. ನಾನು ನನ್ನ ಸದ್ಗುರುವಿನ ಬಳಿ ಹೋಗುತ್ತೇನೆ. ನಿಮಗೆ ನಂಬಿಕೆ ಬರಲು ಹಾಗೂ ನಿಮ್ಮ ಸಂದೇಹ ದೂರವಾಗಲು ನಾನು ಯಾವುದಾದರೂ ಸಾಕ್ಷಿ ತರುತ್ತೇನೆ" ಎಂದನು. ಆಗ ಆ ಮೂರು ದೇವತೆಗಳು, "ನೀನು ನಮ್ಮನ್ನು ಪರೀಕ್ಷಿಸಿ ನೋಡು. ನಿನ್ನ ಮನದಾಸೆಯನ್ನು ನಾವು ಈಡೇರಿಸುವೆವು. ನಾವೇ ಉತ್ಪತ್ತಿ ಕರ್ತರು. ನಾವೇ ಪಾಲಕರು ಹಾಗೂ ನಾವೇ ಸಂಹಾರಕರು. ನಾವೇ ಸಾವಿನಿಂದ ಪಾರು ಮಾಡುವವರು. ನಾವು ಮೂವರೂ ಸಂಪೂರ್ಣ ಸ್ವತಂತ್ರರು. ನಾವು ಏನು ಬಯಸುತ್ತೇವೋ ಅದನ್ನೇ ಮಾಡಬಲ್ಲೆವು." ಎಂದು ಹೇಳಿದರು. ಆಗ ಗರುಡನು ಹೀಗೆಂದನು, "ನಾನು ನಿಮ್ಮನ್ನು ಪರೀಕ್ಷಿಸುವೆ. ಒಂದು ವೇಳೆ ನೀವೇ ಪೂರ್ಣ ಪರಮಾತ್ಮ ಎಂದು ಸಾಬೀತಾದರೆ ನಾನು ನಿಮ್ಮ ಶಿಷ್ಯನಾಗುವೆ". ಗರುಡನು ಅಲ್ಲಿಂದ ಹಾರಿ ಸದ್ಗುರು ಕಬೀರರ ಬಳಿ ಬಂದನು. ಕಬೀರರು ಆ ಸಮಯದಲ್ಲಿ ಜೋಗ್‌ಜೀತ್ ಹೆಸರಿನಿಂದ ಪ್ರಕಟರಾಗಿದ್ದರು. ಗರುಡನು ಜೋಗ್‌ಜೀತ್ (ಕಬೀರ)ರಿಗೆ ಎಲ್ಲಾ ವೃತ್ತಾಂತವನ್ನೂ ತಿಳಿಸಿದನು.**

**"ಸತ್‌ಗುರು (ಕಬೀರ್) ವಚನ"**

ಗರುಡ್ ಸುನೋ ಬಂಗ್ ದೇಶ್ ಕೋ ಜಾಓ । ಬಾಲಕ್ ಮರೇಗಾ ಕಹೋ ಉಸೇ ಬಚಾಓ ॥

ದಿನ್ ತೀನ್ ಕೀ ಆಯು ಶೇಷಾ । ಕರೋ ಜೀವಿತ್ ಬ್ರಹ್ಮಾ ವಿಷ್ಣು ಮಹೇಶಾ ॥
ಫಿರ್ ಹಮ್ ಪಾಸ್ ಆನಾ ಭಾಈ । ಹಮ್ ಬಾಲಕ್ ಕೋ ದೇವೈಂ ಜಿವಾಈ ॥
ಬಂಗ್ ದೇಶ್ ಮೆಂ ಗರುಡ್ ಗಯೋ, ಬಾಲಕ್ ಲಿಯಾ ಸಾಥ್ ।
ತ್ರಿದೇವಾ ಸೇ ಅರ್ಜ್ ಕರೀ, ಜೀವನ್ ದೆ ಬಾಲಕ್ ಕರೋ ಸುನಾಥ್ ॥

**ಶಬ್ದಾರ್ಥ:– ಕಬೀರರು ಹೀಗೆಂದರು, "ಹೇ ಗರುಡನೇ, ನೀನು ಬಂಗ ದೇಶ (ಈಗಿನ ಬಾಂಗ್ಲಾ ದೇಶ)ಕ್ಕೆ ಹೋಗು. ಅಲ್ಲಿ ಒಬ್ಬ ಬಾಲಕನ ಆಯುಷ್ಯ ಕೇವಲ ಮೂರು ದಿನ ಬಾಕಿ ಉಳಿದಿದೆ. ಅವನ ಮೃತ್ಯುವಾಗುವುದು. ಆ ಬಾಲಕನನ್ನು ಬ್ರಹ್ಮಾ, ವಿಷ್ಣು, ಮಹೇಶ್ವರ ಬಳಿ ಕರೆದುಕೊಂಡು ಹೋಗು. ಆ ಬಾಲಕನನ್ನು ಬದುಕಿಸಲು ಆ ಮೂವರನ್ನು ಕೇಳು. ಅವರಿಂದ ಅದು ಸಾಧ್ಯವಿಲ್ಲ. ನಂತರ ಆ ಬಾಲಕನನ್ನು ನನ್ನ ಬಳಿ ಕರೆದುಕೊಂಡು ಬಾ, ನಾನು ಜೀವಿತಗೊಳಿಸುವೆ" ಎಂದು ಹೇಳಿದರು. ಗರುಡನು ತನ್ನ ಸದ್ಗುರುವಿನ ಆದೇಶದ ಪ್ರಕಾರ ಬಂಗ ದೇಶದಿಂದ ಬಾಲಕನನ್ನು ಕರೆದುಕೊಂಡು ಮೂವರು ದೇವತೆಗಳ ಬಳಿ ತೆರಳಿದನು ಹಾಗೂ ಆ ಬಾಲಕನ ಆಯುಷ್ಯವನ್ನು ವೃದ್ಧಿಸಿ ಜೀವದಾನ ಮಾಡಿರೆಂದೂ, ಹಾಗೆ ಮಾಡಿದರೆ ನೀವೇ ಸಮರ್ಥ ಪರಮಾತ್ಮನೆಂದು ನಾನು ಒಪ್ಪಿಕೊಳ್ಳುವೆ ಎಂದು ಹೇಳಿದನು.**

**"ತ್ರಿದೇವ ವಚನ"**

ಧರ್ಮ್‌ರಾಜ್ ಪರ ಹೈ ಲೇಖಾ ಸಾರಾ । ಬಾಸೇ ಜಾನೇ ಸಬ್ ವಿಚಾರಾ ॥
ಗರುಡ್ ಔರ ಬಾಲಕ್ ಸಾರೆ । ಗಏ ಧರ್ಮ್‌ರಾಜ್ ದರ್‌ಬಾರೆ ॥
ಧರ್ಮ್‌ರಾಜ್ ಸೆ ಆಯು ಜಾನೀ । ದಿನ್ ತೀನ್ ಶೇಷ್ ಬಖಾನೀ ॥
ಯಾಕೀ ಆಯು ಬಢೈ ನಾಹೀಂ । ಮೃತ್ಯು ಅತಿ ನಿಯಡೆ ಆಯೀ ॥
ತ್ರಿದೇವ್ ಕಹಂ ಆಪ ರಾಖೋ ಲಾಜಾ ।ಹಮ್ ಕ್ಯಾ ಮುಖ್ ದಿಖಾವೈಂ ಧರ್ಮ್‌ರಾಜಾ ॥
ಧರ್ಮ್ ಕಹ್ ಆಪನ್ ಆಯು ದೇ ಭಾಈ । ತೋ ಬಾಲಕ್ ಕೀ ಆಯು ಬಢ್ ಜಾಈ ॥
ಚಲೇ ತೀನೋಂ ನಹೀಂ ಪಾರ್ ಬಸಾಈ । ಬನೇ ಬೈಠೆ ಥೆ ಸಮರ್ಥ್ ರಾಈ ॥
ಸುನ್ ಗರುಡ್ ಯಹ್ ಸತ್ಯ್ ಹೈ ಭಾಈ । ಆಈ ಮೃತ್ಯು ನ ಟಾಲೀ ಜಾಈ ॥

**ಶಬ್ದಾರ್ಥ:– ಆ ಮೂವರು ದೇವತೆಗಳು ಹೇಳಿದರು, "ಧರ್ಮರಾಯನ ಬಳಿ ಎಲ್ಲಾ ಜೀವಾತ್ಮಗಳ ಜನನ–ಮರಣದ ಲೆಕ್ಕವಿದೆ. ಅವನ ಬಳಿ ಹೋಗಿ ಮಾತನಾಡುತ್ತೇವೆ." ಗರುಡ, ಆ ಬಾಲಕ ಹಾಗೂ ಆ ಮೂವರು ದೇವತೆಗಳು ಧರ್ಮರಾಯನ (ಕಾಲಬ್ರಹ್ಮನ ನ್ಯಾಯಾಧೀಶನ) ಕಾರ್ಯಲಯಕ್ಕೆ ತೆರಳಿದರು ಹಾಗೂ ಬಾಲಕನ ಆಯುಷ್ಯ ಎಷ್ಟು ಉಳಿದಿದೆ ಎಂದು ಪತ್ತೆ ಮಾಡಿದರು. ಆಗ ಮೂರು ದಿನ ಇದೆ ಎನ್ನುವುದು ತಿಳಿಯಿತು. ಅವನ ಸಾವು ಅತ್ಯಂತ ಸಮೀಪದಲ್ಲಿದೆ ಎಂದು ಧರ್ಮರಾಯನು ತಿಳಿಸಿದನು. ಆಯುಷ್ಯವನ್ನು ಹೆಚ್ಚಿಸಲಾಗುವುದಿಲ್ಲ. ನಂತರ ಆ ಮೂವರು ದೇವತೆಗಳು ಧರ್ಮರಾಯನ ಬಳಿ ಬಂದು ಹೀಗೆಂದರು, "ಹೇ ಧರ್ಮರಾಜ, ನಾವು ನಿಮ್ಮ ಆಸ್ಥಾನಕ್ಕೆ ಬಂದಿದ್ದೇವೆ. ನಮಗೆ ಗೌರವ ಕೊಟ್ಟು ಈ ಬಾಲಕನ ಆಯುಷ್ಯವನ್ನು ವೃದ್ಧಿಸು, ಈ ಪ್ರಪಂಚದಲ್ಲಿ ಹೇಗೆ ಗೌರವ ಪಡೆಯುವೆವು". ಆಗ ಧರ್ಮರಾಜನು, ನಿಮ್ಮಲ್ಲಿ ಯಾರಾದರೂ ಆಯುಷ್ಯವನ್ನು ನೀಡಿದರೆ ಅವರ ಮೃತ್ಯುವಾಗುವುದು, ಬಾಲಕನ ಆಯುಷ್ಯ ವೃದ್ಧಿಯಾಗುವುದು". ಎಂದು ಹೇಳಿದನು. ಈ ಮಾತನನ್ನು ಕೇಳಿದ ತಕ್ಷಣ ತಮ್ಮನ್ನು ತಾವು ಸ್ವಯಂಭು ಎಂದು ತಿಳಿದಿದ್ದ ಮೂವರೂ ದೇವತೆಗಳು ಅಲ್ಲಿಂದ ಎದ್ದು ಹೊರಟು ಹೋದರು. ಯಾರಿಗೆ ಸಾವು ಬರುವುದೋ ಅದನ್ನು ತಡೆಯಲು ಸಾಧ್ಯವಿಲ್ಲ ಎಂದು ಗರುಡನಿಗೆ ಹೇಳುತ್ತಾ ಅಲ್ಲಿಂದ ಹೊರಟು ಹೋದರು.**

**"ಗರುಡ ವಚನ"**

ಸಮರ್ಥ್ ಮೆಂ ಗುಣ್ ಐಸಾ ಬತಾಯಾ । ಆಯು ಬಢಾವೈ ಔರ ಅಮರ್ ಕರ್‌ವಾಯಾ ॥
ಅಬ್ ಮೈಂ ಜಾಊಂ ಸಮರ್ಥ್ ಪಾಸಾ । ಬಾಲಕ್ ಬಚ್ ನೇ ಕೀ ಪೂರೀ ಆಶಾ ॥

ಗಯಾ ಗರುಡ್ ಕಬೀರ್ ಕೀ ಶರಣಾ । ದಯಾ ಕರೋ ಹೋ ಸಾಹಬ್ ಜರಣಾ (ವಿಶ್ವಾಸ್) ॥

**ಶಬ್ದಾರ್ಥ:– ಗರುಡ ಹೇಳಿದನು ಸಾಧಕನ ಆಯಸ್ಸನ್ನು ವೃದ್ಧಿಸುತ್ತಾನೆ ಹಾಗೂ ಜನ್ಮ–ಮರಣವನ್ನು ಸದಾಕಾಲಕ್ಕೆ ಸಮಾಪ್ತಗೊಳಿಸಿ ಅಮರ ಮಾಡುವಷ್ಟು ಶಕ್ತಿ ಸಮರ್ಥನಲ್ಲಿದೆ. ಈಗ "ನಾನು ಸಮರ್ಥ ಪರಮೇಶ್ವರನ ಬಳಿ ಹೋಗುತ್ತೇನೆ. ಬಾಲಕನ ಸಾವು ಮುಂದೂಡಬಹುದು ಎನ್ನುವ ಸಂಪೂರ್ಣ ಆಸೆ ಇದೆ ಎಂದು ಹೇಳುತ್ತಾ ಗರುಡನು ಆ ಬಾಲಕನನ್ನು ಅವನ ಮನೆಯಲ್ಲಿ ಬಿಟ್ಟನು ಹಾಗೂ ಕಬೀರ ಪರಮೇಶ್ವರನ ಬಳಿ ಹೋಗಿ ಹೀಗೆಂದನು, 'ಹೇ ಪರಮೇಶ್ವರ! ಮಗುವನ್ನು ಬದುಕಿಸುವ ಕೃಪೆ ಮಾಡಿ. ಯಾಕಂದ್ರೆ ಜನರಿಗೆ ನಿಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಾಗಲಿ.**

**"ಕಬೀರ್ ಸಾಹೇಬರ ವಚನ"**

ಸುನೋ ಗರುಡ್ ಏಕ್ ಅಮರ್ ಬಾನೀ । ಯಹ್ ಅಮೃತ್ ಲೇ ಬಾಲಕ್ ಪಿಲಾನೀ ॥
ಜೀವೈ ಬಾಲಕ್ ಉಮರ್ ಬಢ್ ಜಾವೈ । ಜಗ್ ಬಿಚರೆ ಬಾಲಕ್ ನಿರ್ದಾವೈ ॥
ಬಾಲಕ್ ಲಾನಾ ಮೇರೆ ಪಾಸಾ । ನಾಮ್ ದಾನ್ ಕರ್ ಕಾಲ್ ವಿನಾಶಾ ॥
ಜೈಸಾ ಕಹಾ ಗರುಡ್ ನೆ ಕೀನ್ಹಾ । ಬಾಲಕ್ ಕೂಂ ಜಾ ಅಮೃತ್ ದೀನಾ ।
ಲೇ ಬಾಲಕ್ ತುರಂತ್ ಹೀ ಆಏ । ಸತ್‌ಗುರು ಸೇ ದೀಕ್ಷಾ ಪಾಏ ॥
ಆಶೀರ್ವಾದ್ ದಿಯಾ ಸತ್‌ಗುರು ಸ್ವಾಮೀ । ದಯಾ ಕರಿ ಪ್ರಭು ಅಂತರ್ಯಾಮೀ ॥
ಬದಲಾ ಧರ್ಮ್‌ರಾಜ್ ಕಾ ಲೇಖಾ । ಬ್ರಹ್ಮಾ ವಿಷ್ಣು ಶಿವ್ ಆಂಖೋಂ ದೇಖಾ ॥
ಗಏ ಫಿರ್ ಧರ್ಮ್‌ರಾಜ್ ದರ್‌ಬಾರಾ । ಲೇಖಾ ಫಿರ್ ದಿಖಾಊ ತುಮ್ಹಾರಾ ॥
ಧರ್ಮ್‌ರಾಜ್ ಜಬ್ ಖಾತಾ ಖೋಲಾ । ಅಚರ್ಜ್ ದೇಖ್ ಮುಖ್ ಸೆ ಬೋಲಾ ॥
ಪರಮೇಶ್ವರ್ ಕಾ ಯಹ್ ಖೇಲ್ ನಿರಾಲಾ । ಉಸ್‌ಕಾ ಕ್ಯಾ ಕರತ್ ಹೈ ಕಾಲಾ ॥
ವೋ ಸಮರ್ಥ್ ರಾಖನ್ ಹಾರಾ । ವಾನೇ ಲೇಖ್ ಬದಲ್ ದಿಯಾ ಸಾರಾ ॥
ಸೌ ವರ್ಷ್ ಯಹ್ ಬಾಲಕ್ ಜೀವೈ । ಭಕ್ತಿ ಜ್ಞಾನ್ ಸುಧಾ ರಸ್ ಪೀವೈ ॥
ಯಹ್ ಭೀ ಲೇಖ್ ಇಸೀ ಕೇ ಮಾಹೀಂ । ಆಂಖೋಂ ದೇಖೋ ಝೂಠೀ ನಾಹೀಂ ॥
ದೇಖಾ ಲೇಖಾ ತೀನೋಂ ದೇವಾ । ಅಚರ್ಜ ಹುಆ ಕಹೂಂ ಕ್ಯಾ ಭೇವಾ ॥
ಬೋಲೇ ಬ್ರಹ್ಮಾ ವಿಷ್ಣು ಮಹೇಶಾ । ಪರಮ್ ಪುರುಷ್ ಹೈ ಕೋಈ ವಿಶೇಷಾ ॥
ಜೋ ಚಾಹೆ ವಹ್ ಮಾಲಿಕ್ ಕರಸೀ । ವಾಕೀ ಶರಣ್ ಫಿರ್ ಕೈಸೆ ಮರಸೀ ।
ಪಕ್ಷೀರಾಜ್ ತುಮ್ ಸಾಚೇ ಪಾಯೇ । ನಾಹಕ್ ಹಮ್ ಮಗಜ್ ಪಚಾಏ ॥
ಕರೋ ತುಮ್ ಜೋ ಮಾನ್ ಮನ್ ತೇರಾ । ತುಮ್ಹಾರಾ ಗರುಡ್ ಭಾಗ್ ಬಡೇರಾ ॥
ಪೂರ್ಣ್ ಬ್ರಹ್ಮ ಅವಿನಾಶೀ ದಾತಾ । ಸಚ್ಚ್ ಮೆಂ ಹೈ ಕೋಈ ಔರ್ ವಿಧಾತಾ ॥
ಇತ್‌ನಾ ಕಹ್ ಗಏ ಅಪ್‌ನೆ ಧಾಮಾ । ಗರುಡ್ ಔರ್ ಬಾಲಕ್ ಕರಿ ಪ್ರಣಾಮಾ ॥
ಭಕ್ತಿ ಕರೀ ಬಾಲಕ್ ಚಿತ್ ಲಾಈ । ಗರುಡ್ ಅರೂ ಬಾಲಕ್ ಭಯೇ ಗುರು ಭಾಈ ॥
ಧರ್ಮ್‌ದಾಸ್ ಯಹ್ ಗರುಡ್‌ಕೋ ಬೋಧಾ।ಏಕ್–ಏಕ್ ವಚನ್ ಕಹಾ ಮೈಂ ಸೋಧಾ ॥

**ಶಬ್ದಾರ್ಥ:– ಕಬೀರ ಪರಮೇಶ್ವರರು ತಮ್ಮ ಕರಮಂಡಲ(ಲೋಟ)ದಿಂದ ಕೊಂಚ ನೀರನ್ನು ತೆಗೆದು ಗರುಡನಿಗೆ ಕೊಡುತ್ತಾ ಹೀಗೆಂದರು, "ಇದು ಅಮೃತದ ಜಲ. ಇದನ್ನು ಆ ಬಾಲಕನಿಗೆ ಕುಡಿಸು. ಇದನ್ನು ಕುಡಿದು ಅವನಿಗೆ ದೀಕ್ಷೆ ಪಡೆಯಲು ಇಚ್ಛೆಯಾಗುವುದು. ಕಾಲನ ಪ್ರಭಾವ ಮುಗಿಯುವುದು. ಬಾಲಕನಿಗೆ ದೀಕ್ಷೆ ಕೊಡಿಸಲು ನನ್ನ ಬಳಿ ಕರೆದುಕೊಂಡು ಬಾ, ಅವನಿಗೆ ಬರುವ ಮೃತ್ಯು ಸಮಾಪ್ತವಾಗುವುದು" ಗರುಡನು ಸದ್ಗುರುವಿನ ಆದೇಶವನ್ನು ಪಾಲಿಸಿದನು. ಬಾಲಕನಿಗೆ ಅಮೃತವನ್ನು ಕುಡಿಸಿದನು. ಇದರಿಂದ ಅವನಿಗೆ ದೀಕ್ಷೆ ಪಡೆಯಲು ಪ್ರಬಲವಾದ ಇಚ್ಛೆಯುಂಟಾಯಿತು. ಗರುಡನು ಬಾಲಕನನ್ನು ಸದ್ಗುರುವಿನ ಬಳಿ ಕರೆತಂದು ಅವನಿಗೆ ದೀಕ್ಷೆ ಕೊಡಿಸಿದನು. ಪರಮಾತ್ಮ ಬಾಲಕನಿಗೆ ಆಶೀರ್ವಾದ ನೀಡಿ ಅವನನ್ನು ಕೃತಾರ್ಥನನ್ನಾಗಿ ಮಾಡಿದರು. ಅದೇ ಕ್ಷಣ ಧರ್ಮರಾಜನ ಲೆಕ್ಕ ಬದಲಾಗಿ ಹೋಯಿತು. ಮೂವರು ದೇವತೆಗಳು ಧರ್ಮರಾಜನ**

ಆಸ್ಥಾನಕ್ಕೆ ಹೋಗಿ ಆ ಲೆಕ್ಕವನ್ನು ತಮ್ಮ ಕಣ್ಣಾರೆ ನೋಡಿದರು. ಧರ್ಮರಾಜನು ಸ್ವತಃ ತಾನೇ ಅದನ್ನು ಓದಿ ಹೇಳಿದನು. ಈ ಮಾನವ ಶರೀರ ಧಾರಿ ಜೀವಾತ್ಮ ನೂರು ವರ್ಷ ಬದುಕುವನು ಹಾಗೂ ಭಕ್ತಿನೂ ಮಾಡುವನು ಎಂದು ಅದರಲ್ಲಿ ಬರೆದಿತ್ತು. ಇದು ಪೂರ್ಣ ಪರಮಾತ್ಮನ ಮೂಲಕ ಅವನ ಆಯುಷ್ಯ ವೃದ್ಧಿಯಾಗಿದೆ. ಧರ್ಮರಾಜನು ಓದಿದನು, ಬ್ರಹ್ಮಾ, ವಿಷ್ಣು ಹಾಗೂ ಶಿವ ಅದನ್ನು ತಮ್ಮ ಕಣ್ಣುಗಳಿಂದ ನೋಡಿದರು. ಇದನ್ನು ಕಂಡು, ಇದೆಲ್ಲಾ ಹೇಗೆ ಸಾಧ್ಯ ಎಂದು ಆಶ್ಚರ್ಯವಾಯಿತು. ಧರ್ಮರಾಜನು ಆಶ್ಚರ್ಯದಿಂದ ಹೀಗೆಂದನು, "ಇದೆಲ್ಲಾ ಪರಮೇಶ್ವರನ ಅದ್ಭುತ ಲೀಲೆ. ಇವನನ್ನು ಕಾಲ ಅಂದ್ರೆ ಕಾಲಬ್ರಹ್ಮನು ಏನು ಮಾಡಲು ಸಾಧ್ಯ? ಕಾಲಬ್ರಹ್ಮನ ಮೂಲಕ ನಿರ್ಧಾರಿತಗೊಂಡ ಮೃತ್ಯುವಿನ ಸಮಯ ಪರಮೇಶ್ವರನ ಆದೇಶದಿಂದ ಬದಲಾಗುತ್ತದೆ. ಆ ಸಮರ್ಥನು ಜೀವಾತ್ಮಗಳ ರಕ್ಷಕನು. ಅವನು ನನ್ನ ಪುಸ್ತಕದಲ್ಲಿದ್ದ ಎಲ್ಲಾ ಹಳೇ ಲೆಕ್ಕಗಳನ್ನು ಬದಲಿಸಿಬಿಟ್ಟಿದ್ದಾನೆ. ಈ ಮಗು ನೂರು ವರ್ಷಗಳವರೆಗೆ ಬದುಕಿರುತ್ತಾನೆ ಹಾಗೂ ಭಕ್ತಿಯನ್ನೂ ಮಾಡುತ್ತಾನೆ. ಇದು ಸಹ ಇದರಲ್ಲಿ ಬರೆದಿದೆ. ನಾನು ಸುಳ್ಳು ಹೇಳುತ್ತಿಲ್ಲ. ನೀವೇ ಸ್ವತಃ ನೋಡಿ. ಆಗ ಬ್ರಹ್ಮಾ, ವಿಷ್ಣು ಹಾಗೂ ಶಿವ ಹೀಗೆಂದರು, "ಎಂತಹ ಆಶ್ಚರ್ಯ! ನಿಜವಾಗಿಯೂ ಪರಮಪುರುಷ ಎನ್ನುವವನು ಒಬ್ಬನಿದ್ದಾನೆ. ಅವನು ಏನು ಬೇಕಾದರೂ, ಮಾಡುತ್ತಾನೆ. ಅವನ ಆಶ್ರಯಕ್ಕೆ ಹೋಗುವವನು ಹೇಗೆ ಸಾಯಲು ಸಾಧ್ಯ? ಹೇ ಪಕ್ಷಿಗಳ ರಾಜನಾದ ಗರುಡನೇ! ನಿನ್ನ ಮಾತು ಸತ್ಯ. ನಾವು ನಿನ್ನ ಬಳಿ ವ್ಯರ್ಥವಾಗಿ ವಾದಿಸಿದೆವು. ನೀನು ಇಚ್ಛಿಸಿದಂತೆ ಮಾಡು. ಹೇ ಗರುಡನೇ! ನಿನ್ನ ಅದೃಷ್ಟ ಚೆನ್ನಾಗಿದೆ." ಹೀಗೆ ಹೇಳುತ್ತಾ ಆ ಮೂವರೂ ತಮ್ಮ ತಮ್ಮ ಧಾಮಕ್ಕೆ ತೆರಳಿದರು. ಗರುಡ ಹಾಗೂ ಆ ಬಾಲಕನು ಧರ್ಮರಾಜನಿಗೆ ನಮಿಸಿದರು.

ಕಬೀರರು ಧರ್ಮದಾಸನಿಗೆ ಹೀಗೆಂದರು, "ಈಗ ಈ ಬಾಲಕನು ಮತ್ತು ಗರುಡ– ಇವರಿಬ್ಬರೂ ಗುರು ಸಹೋದರರು, ಹೇ ಧರ್ಮದಾಸ, ಇದಾಗಿದೆ ಗರುಡನನ್ನು ಶರಣದಲ್ಲಿ ಪಡೆಯುವ ಕತೆ ಅಂದರೆ ಗರುಡ್ ಬೋಧ್."

❖ ಶ್ರೀ ಹನುಮಂತನ ಗುರು ಯಾರಾಗಿದ್ದರು? ಓದಿ "ಕಬೀರ್ ಸಾಗರ್"ದ ಅಧ್ಯಾಯ "ಹನುಮಾನ್ ಬೋಧ್"ದ ಸಾರಾಂಶ:–

## ಅಧ್ಯಾಯ "ಹನುಮಾನ್ ಬೋಧ್"ದ ಸಾರಾಂಶ

ಕಬೀರ್ ಸಾಗರ್‌ದ 113ನೇ ಪುಟದಲ್ಲಿ 12ನೇ ಅಧ್ಯಾಯ 'ಹನುಮಾನ್ ಬೋಧ್' ಇದೆ. ಕಬೀರ್ ಸಾಗರ್‌ದ ಈ ಅಧ್ಯಾಯದಲ್ಲಿ ಪವನ ಸುತ ಹನುಮಂತನನ್ನು ಶರಣದಲ್ಲಿ ಪಡೆಯುವ ಪ್ರಕರಣವಿದೆ. ನೀವು ಒಳ್ಳೆಯ ಆತ್ಮವಾದ ಪವನಪುತ್ರ ಹನುಮಂತನಿಗೂ ಸಿಕ್ಕಿದ್ದಿರಾ ಎಂದು ಧರ್ಮದಾಸನು ಕಬೀರ್ ಪರಮೇಶ್ವರರನ್ನು ಪ್ರಶ್ನಿಸಿದನು.

ಉತ್ತರ (ಪರಮೇಶ್ವರ ಕಬೀರರ)=ಹೌದು

(ಧರ್ಮದಾಸರ) ಪ್ರಶ್ನೆ:– "ಹೇ ಪ್ರಭು, ಅವರೂ ಸಹ ನಿಮ್ಮ ಜ್ಞಾನವನ್ನು ಸ್ವೀಕರಿಸಿದರೆ? ಏಕೆಂದರೆ ಹನುಮಂತನು ಸಹ ನನ್ನಂತೆ ರಾಮ ಅಂದರೆ ವಿಷ್ಣುವಿನಲ್ಲಿ ಅಚಲವಾದ ಭಕ್ತಿಯನ್ನಿಟ್ಟಿದ್ದರು. ಅವರಿಗೆ ಆಶ್ರಯ ನೀಡುವುದೆಂದರೆ ಸೂರ್ಯನು ಪಶ್ಚಿಮದಲ್ಲಿ ಉದಯಿಸಿದ ಹಾಗೆ".

(ಪಮೇಶ್ವರ ಕಬೀರರ) ಉತ್ತರ:– ಪರಮೇಶ್ವರರಾದ ಕಬೀರರು ಧರ್ಮದಾಸನಿಗೆ ವಾಯುಪುತ್ರನಾದ ಹನುಮಂತನನ್ನು ಆಶ್ರಯಕ್ಕೆ ಪಡೆದ ವೃತ್ತಾಂತವನ್ನು ಹೇಳಿದರು. ಸರಳಾರ್ಥ ಕರ್ತ(ರಾಮ್‌ಪಾಲ್ ದಾಸ್) ಮೂಲಕ ಹನುಮಂತನಿಗೆ ಹೇಗೆ ಪರಮೇಶ್ವರರು ಆಶ್ರಯ ನೀಡಿದರು ಹಾಗು ರಾಮಾಯಣದ ಸಂಕ್ಷಿಪ್ತ ವರ್ಣನೆ:–

ರಾಮಾಯಣದ ಗ್ರಂಥದಲ್ಲಿ ಒಂದು ಪ್ರಸಂಗ ಬರುತ್ತದೆ, ಅದರಲ್ಲಿ ಒಬ್ಬ ವಾಲಿ ಎಂಬ ರಾಜನಿದ್ದನು. ಅವನ ತಮ್ಮ ಸುಗ್ರೀವ. ವಾಲಿಯು ಯವುದೋ ಕಾರಣದಿಂದ ತನ್ನ ತಮ್ಮ ಸುಗ್ರೀವನನ್ನು

ತನ್ನ ರಾಜ್ಯದಿಂದ ಹೊರಹಾಕಿದನು. ಅವನ ಹೆಂಡತಿಯನ್ನ ತನ್ನ ಅಧಿನದಲ್ಲಿ ಹೆಂಡತಿಯನ್ನಗಿ ಇಟ್ಟುಕೊಂಡನು. ಸುಗ್ರೀವನು ಚಿಂತಾಗ್ರಸ್ತವಾಗಿ ದೂರ ದೇಶದಲ್ಲಿ ತಿರುಗಾಡುತ್ತಿದ್ದನು. ಹನುಮಂತನು ಒಂದು ಪರ್ವತದ ಮೇಲೆ ರಾಮ-ರಾಮ ಮಾಡುತ್ತಾ ಕುಳಿತಿದ್ದನು ಕಂಡನು. ಇಬ್ಬರು ಸ್ನೇಹಿತರಾದ್ರು ಹನುಮಂತನ ಮುಂದೆ ಸುಗ್ರೀವನು ತನ್ನ ದುಃಖದ ಕಾರಣ ತಿಳಿಸಿದ. ಹನುಮಂತನು ಶರಣದಲ್ಲಿ ಬಂದ ಸುಗ್ರೀವನಿಗೆ ಸಹಾಯ ಮಾಡುವ ವಚನ ಕೊಟ್ಟನು. ಸುಗ್ರೀವನು ವಾಲಿಯ ಜೊತೆ ಯುದ್ಧ ಮಾಡುವುದು ಅಷ್ಟು ಸುಲಭವಲ್ಲ, ಅವನಲ್ಲಿ ಒಂದು ಸಿದ್ದಿ ಶಕ್ತಿಯಿದೆ, ಯಾರು ಅವನ ಜೊತೆ ಯುದ್ಧ ಮಾಡುವರೋ ಅವರ ಅರ್ಧದಷ್ಟು ಶಕ್ತಿ ವಾಲಿಯ ಶರೀರದೊಳಗೆ ಪ್ರವೇಶಿಸುವುದು ಎಂದು ಹನುಮಂತನಿಗೆ ತಿಳಿಸಿದನು. ಆಗ ಹನುಮಂತನು ವಾಲಿಯೊಂದಿಗೆ ಯುದ್ಧ ಮಾಡುವ ಯೋಚನೆ ಬಿಟ್ಟು ಬಿಟ್ಟನು. ದಶರಥನ ಮಗ ರಾಮಚಂದ್ರನು ತನ್ನ ಹೆಂಡತಿ ಸೀತೆ ಮತ್ತು ಶೇಷನಾಗ ಅವತಾರವಾದ ತನ್ನ ತಮ್ಮ ಲಕ್ಷ್ಮಣನ ಜೊತೆ ವನವಾಸಕ್ಕೆ ಬಂದಿದ್ದನು. ಆಗ ಶ್ರೀ ಲಂಕೆಯ ರಾಜನಾದ ರಾವಣನ ತಂಗಿ ಶುರ್ಪಣಖಾ ಲಕ್ಷ್ಮಣನನ್ನು ನೋಡಿ ತನ್ನನ್ನು ವಿವಾಹವಾಗಬೇಕೆಂದು ಕೇಳಿದಳು. ಲಕ್ಷಣನು ತನಗೆ ಮದುವೆಯಾಗಿದೆ ಎಂದು ಹೇಳಿದನು. (ಲಕ್ಷ್ಮಣನ ಹೆಂಡತಿಯ ಹೆಸರು ಊರ್ಮಿಳಾ ಎಂದಿತ್ತು). ಆದರೆ ಶೂರ್ಪಣಖಾ ಮದುವೆಯಾಗಲೇಬೇಕೆಂದು ಹಠ ಹಿಡಿದಾಗ ಲಕ್ಷ್ಮಣನು ಕೋಪಗೊಂಡು ಅವಳ ಮೂಗನ್ನು ಕತ್ತರಿಸಿದನು. ಅಪಮಾನಗೊಂಡ ಶೂರ್ಪಣಖಿಯು ತನ್ನ ಅಣ್ಣನಾದ ರಾವಣನ ಬಳಿ ತೆರಳಿ ಹೇಳಿದಳು. ರಾವಣನು ಪ್ರತೀಕಾರ ತೀರಿಸಿಕೊಳ್ಳಲು ರಾಮನ ಹೆಂಡತಿಯಾದ ಸೀತೆಯನ್ನು ಅಪಹರಿಸಿದನು. ಸಾಧು ವೇಷ ಧರಿಸಿ, ತನ್ನ ಮಾವನಾದ ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸಿದನು.

ಸೀತೆಯನ್ನು ಹುಡುಕುತ್ತಾ ರಾಮ ಲಕ್ಷ್ಮಣರು ಕಾಡು ಮೇಡನ್ನು ಅಲೆಯುತ್ತಿರಬೇಕಾದರೆ ಅವರನ್ನು ಸುಗ್ರೀವ ಮತ್ತು ಹನುಮಂತ ಭೇಟಿಯಾದರು. ಪರಸ್ಪರ ಪರಿಚಯವಾಯಿತು. ಸುಗ್ರೀವನು ತನ್ನ ಕಷ್ಟವನ್ನು ರಾಮನ ಬಳಿ ಹೇಳಿಕೊಂಡನು. ರಾಮನು ಸುಗ್ರೀವನಿಗೆ ಸಹಾಯ ಮಾಡಲು ಒಂದು ಷರತ್ತಿನ ಮೇಲೆ ಒಪ್ಪಿಕೊಂಡನು. ಸೀತೆಯನ್ನು ಹುಡುಕಿ ಕೊಡಲು ಸಹಾಯ ಮಾಡಿದರೆ ಮಾತ್ರ ಸುಗ್ರೀವನಿಗೆ ತಾನು ಸಹಾಯ ಮಾಡುವ ಷರತ್ತನ್ನು ವಿಧಿಸಿದನು. ಆ ಷರತ್ತಿಗೆ ಸುಗ್ರೀವನು ಒಪ್ಪಿಕೊಂಡನು. ರಾಮನು ಮರದ ಮರೆಯಲ್ಲಿ ನಿಂತು ಸುಗ್ರೀವನಿಗೆ ಸಹಾಯ ಮಾಡುವ ಸಲುವಾಗಿ ವಾಲಿಯನ್ನು ಕೊಂದನು. ನಂತರ ಸುಗ್ರೀವನಿಗೆ ಅವನ ರಾಜ್ಯವನ್ನು ಒಪ್ಪಿಸಿ, ರಾಜ್ಯಭಿಷೇಕ ಮಾಡಿದನು. ಮಾತಿನಂತೆ ಸುಗ್ರೀವನು ತನ್ನ ವಚನ ಪಾಲನೆ ಮಾಡಿದ. ಸೀತೆಯನ್ನು ಹುಡುಕಲು ನಾಲ್ಕು ದಿಕ್ಕುಗಳಿಗೂ ಸೈನಿಕರನ್ನು ಕಳುಹಿಸಿದ. ಸೀತೆಯನ್ನು ರಾವಣನು ಅಪಹರಿಸಿ ಶ್ರೀಲಂಕೆಗೆ ಕರೆದುಕೊಂಡು ಹೋದುದ್ದನ್ನು ಹಾಗೂ ತಡೆಯಲು ಹೋದಾಗ ತನ್ನ ರೆಕ್ಕೆಗಳನ್ನು ಕತ್ತರಿಸಿದ್ದನ್ನು ಜಟಾಯು ಪಕ್ಷಿಯು ರಾಮನಿಗೆ ತಿಳಿಸಿತು. ರಾಮನು ಹನುಮಂತನನ್ನು ರಾಜದೂತನನ್ನಾಗಿ ಮಾಡಿ, ರಾವಣನ ಜೊತೆ ಮಾತನಾಡಿ ಸೀತೆಯನ್ನು ಬಿಡಿಸಿಕೊಂಡು ಬರಲು ಕಳುಹಿಸಿದನು. ಜೊತೆಯಲ್ಲಿ ಸೀತೆಗೆ ನಂಬಿಕೆ ಬರಲು ರಾಮನು ತನ್ನ ಉಂಗುರವನ್ನು ಅದರ ಮೇಲೆ ಶ್ರೀ ರಾಮ ಎಂದು ಬರೆದಿತ್ತು, ಹನುಮಂತನಿಗೆ ಕೊಟ್ಟು ಕಳುಹಿಸಿದನು. ಸೀತೆಯು ಆ ಉಂಗುರ ನೋಡಿ ಹನುಮಂತನ ಮೇಲೆ ವಿಶ್ವಾಸಮಾಡುವಳು ಅಂದ್ರೆ ಇವನನ್ನು ಶ್ರೀ ರಾಮ ಕಳುಹಿಸಿದ್ದಾರೆಂದು, ಹನುಮಂತನು ರಾಮನ ಉಂಗುರವನ್ನು ತೆಗೆದುಕೊಂಡು ಆಕಾಶಮಾರ್ಗದಿಂದ ಶ್ರೀಲಂಕೆಗೆ ಬಂದನು. ರಾವಣನ ರಾಜ್ಯದಲ್ಲಿ ನೌ ಲಖ್ಖಾ ಉದ್ಯಾನವನವಿತ್ತು. ಅದರಲ್ಲಿ ಸೀತೆಯನ್ನು ಬಂಧಿಯನ್ನಾಗಿ ಇಟ್ಟಿದ್ದನು. ಹನುಮಂತನು ಸೀತೆಯ ಬಳಿ ಹೋಗಿ ಉಂಗುರವನ್ನು ತೋರಿಸಿ, ಸೀತೆಯ ವಿಶ್ವಾಸವನ್ನು ಗಳಿಸಿದನು. ರಾವಣನು ಕೊಡುತ್ತಿದ್ದ ಕಷ್ಟವನ್ನು ಸೀತೆಯು ಹನುಮಂತನಿಗೆ ತಿಳಿಸಿದಳು. ಸೀತೆಯು ತನ್ನ ಕೈ ಬಳೆಯನ್ನು ತೆಗೆದು ಹನುಮಂತನಿಗೆ ನೀಡಿದಳು. ಹಾಗೂ ಹೀಗೆ ಹೇಳಿದಳು. "ಹೇ ಸಹೋದರ, ನೀನು ಈ ಕೈ ಬಳೆಯನ್ನು ರಾಮನಿಗೆ ತೋರಿಸು, ಆಗ ನೀನು ಸೀತೆಯನ್ನು ಕಂಡು ಹಿಡಿದ ಬಗ್ಗೆ ರಾಮನಿಗೆ ನಂಬಿಕೆ ಬರುವುದು. ಹನುಮಂತನೊಡನೆ ಸೀತೆಯು ಬರಲು ನಿರಾಕರಿಸಿದಳು, ನಾನು ನಿನ್ನೊಡನೆ

ಬರುವುದಿಲ್ಲವೆಂದು" ನಂತರ ಹನುಮಂತನು ತನಗೆ ಹಸಿವಾಗಿದೆ ಎಂದು ಹೇಳಿದನು. ಆಗ ಸೀತೆಯು "ನನಗೆ ಯಾವುದೇ ಹಣ್ಣನ್ನು ಕೀಳುವ ಆದೇಶವಿಲ್ಲ, ಮರದಿಂದ ಬಿದ್ದಿದ್ದರೆ ತಿನ್ನಬಹುದು" ಎಂದಳು. ಈ ಮಾತಿನಿಂದ ಕೋಪಗೊಂಡು ಹನುಮಂತನು ಅಲ್ಲಿದ್ದ ಹಣ್ಣಿನ ಮರವನ್ನು ಕಿತ್ತು ಬಿಸಾಕಿದನು. ನಂತರ ಆ ಮರದಿಂದ ಹಣ್ಣನ್ನು ತಿಂದುನು. ನಂತರ ಆ ಮರವನ್ನು ಸಮುದ್ರಕ್ಕೆ ಎಸೆದನು. ಹೀಗೆ ಹನುಮಂತನು ರಾವಣನ ನೌ ಲಖ್ಖಾ ಉದ್ಯಾನವನ ನಷ್ಟಗೊಳಿಸಿ ಮರವನ್ನು ಸಮುದ್ರಕ್ಕೆ ಎಸೆದನು. ರಾವಣನು ಹನುಮಂತನನ್ನು ಅವಮಾನಿಸಿ, ಅವನ ಬಾಲಕ್ಕೆ ಬೆಂಕಿ ಇಟ್ಟನು. ಹನುಮಂತನು ಕೋಪಗೊಂಡು ರಾವಣನ ಇಡೀ ಲಂಕೆಯನ್ನೇ ಸುಟ್ಟನು.

ಇದಾದ ನಂತರ ಹನುಮಂತನು ಆಕಾಶಮಾರ್ಗದಲ್ಲಿ ಹಾರುತ್ತಾ ಒಂದು ಬೆಟ್ಟದ ಮೇಲೆ ಬಂದು ಕುಳಿತನು. ಬೆಳಗ್ಗಿನ ಸಮಯ, ಬೆಟ್ಟದಲ್ಲಿ ಪವಿತ್ರ ನೀರಿನ ಜಲಾಶಯ ತುಂಬಿತ್ತು. ಸಮೀಪದಲ್ಲೇ ಉದ್ಯನವನವಿತ್ತು ಅಲ್ಲಿ ಹಣ್ಣುಗಳು ತುಂಬಿದ್ದ ಮರಗಳಿದ್ದವು. ಹನುಮಂತನಿಗೆ ಬಹಳ ಹಸಿವಾಗುತ್ತಿತ್ತು. ಮೊದಲು ಜಲಾಶಯದಲ್ಲಿ ಸ್ನಾನ ಮಾಡಿ ನಂತರ ಹಣ್ಣನ್ನು ತಿನ್ನಲು ನಿಶ್ಚಯಿಸಿದನು. ಸೀತೆಯ ಕೈ ಬಳೆಯನ್ನು ಒಂದು ಕಲ್ಲಿನ ಬಂಡೆಯ ಮೇಲಿಟ್ಟನು, ಸ್ನಾನ ಮಾಡುವಾಗಲು ಹನುಮಂತ ಬಳೆಯ ಮೇಲೆ ಕಣ್ಣಿಟ್ಟಿದ್ದನು. ಅಷ್ಟರಲ್ಲಿ ಒಂದು ಮಂಗ ಬಂದು ಆ ಬಳೆಯನ್ನು ಎತ್ತಿಕೊಂಡು ಓಡಿಹೋಯಿತು. ಹನುಮಂತನಿಗೆ ಬಹಳ ಚಿಂತೆಯಾಯಿತು. ಮಂಗ ಎಲ್ಲಾದರೂ ಆ ಬಳೆಯನ್ನು ಸಮುದ್ರಕ್ಕೆ ಎಸೆದು ಬಿಟ್ಟರೆ ಏನು ಮಾಡುವುದು, ನನ್ನ ಪರಿಶ್ರಮ ವ್ಯರ್ಥವಾಗಬಾರದು, ಈಗ ಲಂಕೆಗೆ ಹೋಗುವ ದಾರಿಯೂ ಬಂದಾಗಿದೆ. ಈ ಭಯದಲ್ಲಿ ಹನುಮಂತ ಆ ಮಂಗನನ್ನು ಹಿಂಬಾಲಿಸಿದನು. ನೋಡನೋಡುತ್ತಿದ್ದಂತೆ ಆ ಲಂಗೂರ್ ಆ ಬಳೆಯನ್ನು ಋಷಿಯ ಒಂದು ಕುಟೀರದ ಹೊರಗಡೆ ಇಟ್ಟಿದ್ದ ಮಡಿಕೆಯಲ್ಲಿ ಹಾಕಿತು. ಮತ್ತು ಅಲ್ಲಿಂದ ಓಡಿಹೋಯಿತು. ಹನುಮಂತನಿಗೆ ಸ್ವಲ್ಪಮಟ್ಟಿಗೆ ಚಿಂತೆ ದೂರವಾಯಿತು. ಮಡಿಕೆಯ ಬಳಿ ಹೋಗಿ ಮಡಿಕೆಯ ಒಳಗೆ ಇಣುಕಿ ನೋಡಿದಾಗ ಅಲ್ಲಿ ಒಂದೇ ರೀತಿಯ ಅನೇಕ ಬಳೆಗಳಿದ್ದವು. ಹನುಮಂತನಿಗೆ ಮತ್ತೆ ಸಮಸ್ಯೆ ಉದ್ಭವಿಸಿತು. ಇದರಲ್ಲಿ ಸೀತೆಯು ಕೊಟ್ಟ ಬಳೆ ಯಾವುದು ಎಂದು ತಿಳಿಯದೆ ಹನುಮಂತನು ಚಿಂತೆಗೀಡಾದನು. ಯಾವುದೋ ಬಳೆ ತೆಗೆದುಕೊಂಡು ಹೋಗಿ ಕೊಟ್ಟರೆ ರಾಮನು ಅದು ಸೀತೆಯದಲ್ಲವೆಂದು ಹೇಳಿದರೆ ನನ್ನ ಪ್ರಯತ್ನವೆಲ್ಲಾ ವ್ಯರ್ಥವಾಗುವುದೆಂದು ಚಿಂತೆ ಮಾಡತೊಡಗಿದನು. ಎದುರುಗಡೆ ಒಬ್ಬ ಋಷಿ ಹನುಮಂತನ ಕಷ್ಟವನ್ನು ನೋಡಿ ನಗುತ್ತಿದ್ದನು. ಅವನು ಕುಟೀರದ ಹೊರಗಡೆ ಕುಳಿತಿದ್ದನು. ಋಷಿ ಹೀಗೆಂದನು, "ಬಾ, ಪವನಪುತ್ರ! ಯಾವ ಸಮಸ್ಯೆಗೆ ಸಿಲುಕಿರುವೆ?" ಹನುಮಂತನೆಂದನು, "ಋಷಿಗಳೇ, ಶ್ರೀರಾಮಚಂದ್ರನ ಪತ್ನಿಯನ್ನು ಲಂಕೆಯ ರಾಜ ರಾವಣನು ಅಪಹರಿಸಿದ್ದಾನೆ. ನಾನು ಕಂಡು ಹಿಡಿದಿದ್ದೇನೆ". ಆಗ ಋಷಿಗಳು "ಎಷ್ಟನೇ ಸಂಖ್ಯೆಯ ರಾಮಚಂದ್ರನ ಬಗ್ಗೆ ಹೇಳುತ್ತಿರುವೆ" ಎಂದರು. ಆಗ ಹನುಮಂತನಿಗೆ ಆಶ್ಚರ್ಯವಾಯಿತು. ಋಷಿಗಳು ಎಚ್ಚರದಲ್ಲಿದ್ದಾರೆಯೇ? ಅಥವಾ ಏನಾದರೂ ಭಂಗಿ ಕುಡಿದಿದ್ದಾರೋ ಎಂದು ಯೋಚಿಸಿದನು. ಹನುಮಂತನೆಂದನು, 'ಹೇ ಋಷಿಗಳೇ, ಎಷ್ಟು ರಾಮರಿದ್ದಾರೆ? ಅನೇಕ ರಾಮರಿದ್ದಾರೆಯೇ?' ಆಗ ಋಷಿಗಳು ಹೌದು, ಅನೇಕರು ಬಂದು ಹೋಗಿದ್ದಾರೆ, ಮುಂದೆಯೂ ಅನೇಕರು ಹುಟ್ಟುತ್ತಾರೆ–ಸಾಯುತ್ತಾರೆ. ಆಗ ಹನುಮಂತನಿಗೆ ಋಷಿಯ ವ್ಯವಹಾರ ಸರಿ ಎನ್ನಿಸಲಿಲ್ಲ. ಆದರೆ ಋಷಿಯ ಜೊತೆ ವಾದ ಮಾಡುವುದೂ ಸರಿಯಲ್ಲ ಎಂದು ತಿಳಿದನು. ಋಷಿಗಳೆಂದರು, "ನೀನು ಹಣ್ಣನ್ನು ತಿನ್ನು ಅಡಿಗೆ ಮಾಡುತ್ತೇನೆ, ಊಟ ಮಾಡು. ಸುಸ್ತಾಗಿದ್ದೀಯಾ, ವಿಶ್ರಾಂತಿ ತೆಗೆದುಕೋ. ಆಗ ಹನುಮಂತನೆಂದನು," ಋಷಿಗಳೇ! ನನ್ನ ಸುಖ–ಶಾಂತಿ ಕಳೆದುಹೋಗಿದೆ. ಸೀತಾಮಾತೆ ನನಗೆ ಬಳೆಯನ್ನು ಕೊಟ್ಟಿದ್ದಳು.

ಆ ಬಳೆಯನ್ನು ಬಿಟ್ಟು ನಾನು ಹೋದರೆ ಸೀತೆಯನ್ನು ನಾನು ಹುಡುಕಿದ್ದೇನೆ ಎಂದು ಶ್ರೀರಾಮಚಂದ್ರನಿಗೆ ನಂಬಿಕೆ ಆಗುವುದಿಲ್ಲ. ಆ ಬಳೆಯನ್ನು ನಾನು ಬಂಡೆಯ ಮೇಲಿಟ್ಟು ಸ್ನಾನ

ಮಾಡುತ್ತಿರುವಾಗ ಕೋತಿಯು ಅದನ್ನೆತ್ತಿ ಒಂದು ಮಡಕೆಯಲ್ಲಿ ಹಾಕಿಬಿಟ್ಟಿತು. ನಿಜವಾದ ಬಳೆ ಯಾವುದೆಂದು ನನಗೆ ಕಂಡು ಹಿಡಿಯಲು ಆಗುತ್ತಿಲ್ಲ. ನನಗೆ ಎಲ್ಲಾ ಬಳೆಗಳೂ ಒಂದೇ ತರಹ ಕಾಣಿಸುತ್ತಿವೆ ಎಂದನು, ಆಗ ಋಷಿ ರೂಪದಲ್ಲಿ ಕುಳಿತಿದ್ದ ಪರಮೇಶ್ವರ ಕಬೀರರು ಹೀಗೆಂದರು, "ಹೇ ಪವನನ ಮುದ್ದು ಮಗನೇ! ನೀನು ಅದರಲ್ಲಿರುವ ಯಾವುದೇ ಬಳೆ ತೆಗೆದುಕೊಂಡು ಹೋದರೂ ಯಾವುದೇ ವ್ಯತ್ಯಾಸವಿಲ್ಲ. ಎಷ್ಟು ಬಳೆಗಳು ಇದರಲ್ಲಿವೆಯೋ ಅಷ್ಟು ಸಾರಿ ಶ್ರೀ ದಶರಥನ ಪುತ್ರ ರಾಮನ ವನವಾಸ ಹಾಗೂ ಸೀತೆಯ ಅಪಹರಣ ಹಾಗೂ ಹನುಮಂತನ ಮೂಲಕ ಹುಡುಕಾಟ ಆಗಿದೆ". ಆಗ ಹನುಮಂತನೆಂದನು, ಋಷಿಗಳೇ, ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ. ಹಾಗಾದರೆ ಹೇಳಿ, ಪ್ರತಿ ಬಾರಿ ಸೀತೆಯ ಅಪಹರಣ ಹನುಮಂತ ಹುಡುಕಿದ್ದು ನಂತರ ಬಳೆ ತಂದಿದ್ದು ಹಾಗೂ ಕೋತಿಯ ಮೂಲಕ ಮಡಿಕೆಯಲ್ಲಿ ಹಾಕಿದ್ದು ಇವೆಲ್ಲವೂ ಆಗುತ್ತಿದೆ ಎಂದರೆ ಬಳೆಗಳು ಇಲ್ಲೇ ಉಳಿದುಕೊಂಡಿದೆ, ನಂತರ ಹನುಮಂತ ಏನನ್ನು ತೆಗೆದುಕೊಂಡು ಹೋಗುತ್ತಾನೆ?", ಆಗ ಋಷಿ ಮುನೀಂದ್ರರು ಹೇಳಿದರು, "ನಾನು ಈ ಮಡಿಕೆಗೆ ಆಶೀರ್ವಾದ ಮಾಡಿದ್ದೇನೆ. ಯಾವ ವಸ್ತುವು ಇದರಲ್ಲಿ ಬೀಳುವುದೋ, ಆ ವಸ್ತುವು ಎರಡಾಗುತ್ತದೆ" ಹೀಗೆಂದು ಹೇಳಿ ಋಷಿಗಳು ಒಂದು ಮಣ್ಣಿನ ಲೋಟ ಮಡಿಕೆಯಲ್ಲಿ ಹಾಕಿದರು. ಆಗ ಅದೇ ಸಮನಾದ ಎರಡು ಲೋಟಗಳಾದವು. ಋಷಿ ಮುನೀಂದ್ರರು ಹೇಳಿದರು, ಹೇ ಹನುಮಂತ! ನೀನು ಒಂದು ಬಳೆಯನ್ನು ತೆಗೆದುಕೊಂಡು ಹೋಗು. ಯಾವುದೇ ಬೇಸರ, ದುಗುಡ ಬೇಡ. ಆಗ ಹನುಮಂತನ ಬಳಿ ಯಾವುದೇ ವಿಕಲ್ಪವಿರಲಿಲ್ಲ. ಆ ಮಡಿಕೆಯಿಂದ ಒಂದು ಬಳೆಯನ್ನು ತೆಗೆದುಕೊಂಡು ಅಲ್ಲಿಂದ ಹಾರಿ ಹೋದನು.

ಹನುಮಂತನು ರಾಮನ ಬಳಿ ತೆರಳಿ ಆ ಬಳೆಯನ್ನು ಕೊಟ್ಟನು ಮತ್ತು ಸೀತೆ ಹೇಳಿದ ಎಲ್ಲ ಮಾತನ್ನು ಹೇಳಿದ, ಅದನ್ನು ನೋಡಿದ ರಾಮನು ಭಾವುಕನಾಗಿ, ಹನುಮಂತನನ್ನು ಅಪ್ಪಿಕೊಂಡನು. "ಈ ಬಳೆಯು ಸೀತೆಯದ್ದೇ, ನಿನ್ನ ಪ್ರಾಣವನ್ನು ಪಣಕ್ಕಿಟ್ಟು ನೀನು ಸೀತೆಯನ್ನು ಹುಡುಕಿರುವೆ, ನಾನು ನಿನ್ನ ಈ ಉಪಕಾರ ಹೇಗೆ ತಿರಿಸಲಿ? ಈಗ ಇಂದೇ ಸಭೆಯನ್ನು ಕರೆದು ಸೀತೆಯನ್ನು ಕರೆತರುವ ಪ್ರಯತ್ನ ಮಾಡುವೆ" ಎಂದನು. ಸಮುದ್ರದ ಮೇಲೆ ಸೇತುವೆ ನಿರ್ಮಿಸಬೇಕೆಂದು ಯೋಚಿಸಿದರು. ನಲ ಮತ್ತು ನೀಲರು ಮಹರ್ಷಿ ಮುನೀಂದ್ರರ ಆಶೀರ್ವಾದದಿಂದ ಎಂಥ ಶಕ್ತಿ ಇತ್ತೆಂದರೆ ತಮ್ಮ ಕೈಯಿಂದ ನೀರಿನಲ್ಲಿ ಯಾವುದಾದರು ವಸ್ತು ಹಾಕಿಬಿಟ್ಟರೆ, ಅದು ಮುಳುಗುತ್ತಿರಲಿಲ್ಲ. ಕಲ್ಲು, ಕಂಚಿನ ಪಾತ್ರೆ ಇತ್ಯಾದಿ ನೀರಿನಲ್ಲಿ ಹಾಕಿದರೆ ಅದು ತೇಲುತ್ತಿತ್ತು. ಆದರೆ ಆ ಸಮಯ ನಲ್-ನೀಲ್ ಅಭಿಮಾನದಿಂದ ತಮ್ಮ ಮಹಿಮೆಯ ಇಚ್ಛೆಯಿಂದ ತಮ್ಮ ಗುರು ಋಷಿ ಮುನೀಂದ್ರನ ಹೆಸರು ಸ್ಮರಿಸಲಿಲ್ಲ. ಈ ಕಾರಣ ಅವರಲ್ಲಿದ್ದ ಶಕ್ತಿ ಮುಗಿದು ಹೋಯಿತು. ರಾಮಚಂದ್ರ, ಹನುಮಂತ ಮತ್ತು ಉಳಿದ ಸೈನಿಕರು ಬಹಳ ದುಃಖಿಯಾದರು. ಮೂರು ದಿನಗಳವರೆಗೆ ರಾಮನು ಮಂಡಿಯವರೆಗೆ ನೀರಿನಲ್ಲಿ ನಿಂತಿದ್ದನು. ದಾರಿ ತೋರುವಂತೆ ಪ್ರಾರ್ಥಿಸುತ್ತಿದ್ದನು. ಆದರೆ ಸಮುದ್ರ ಒಂದಿಂಚೂ ಅಲುಗಾಡಲಿಲ್ಲ. ಆಗ ರಾಮನು ಲಕ್ಷ್ಮಣನನ್ನು ಕುರಿತು "ಅಗ್ನಿ ಬಾಣವನ್ನು ತೆಗೆ, ಸಮುದ್ರವನ್ನು ಸುಟ್ಟು ಬಿಡುವೆ. ಕೇವಲ ಮಾತುಗಳಿಂದ ಕೆಲಸವಾಗುವುದಿಲ್ಲ" ಎಂದನು.

ಅದೇ ಸಮಯದಲ್ಲಿ ಸಮುದ್ರವು ಬ್ರಾಹ್ಮಣ ರೂಪ ಧರಿಸಿ ಕೈಮುಗಿಯುತ್ತಾ ರಾಮನ ಮುಂದೆ ಬಂದು ನಿಂತು ಹೇಳಿತು. "ಹೇ ಪರಮಾತ್ಮ, ನನ್ನೊಳಗೆ ಜಲಚರ ಜೀವಿಗಳು ನೆಲೆಸಿದೆ. ಹಾವೂ ಸಾಯಬೇಕು, ಕೋಲು ಮುರಿಯಬಾರದು ಎನ್ನುವ ಹಾಗೆ ನೀವು ಏನಾದರೂ ಮಾಡಿ" ಎಂದಿತು. ನಂತರ ಮುಂದುವರೆದು ಹೀಗೆಂದಿತು, "ನಿಮ್ಮ ಸೈನ್ಯದಲ್ಲಿ ನಲ ಮತ್ತು ನೀಲ ಎಂಬ ಸೈನಿಕರಿದ್ದಾರೆ. ಅವರಿಗೆ ಅವರ ಗುರುಗಳ ಆಶೀರ್ವಾದವಿದೆ. ಅವರ ಕೈಗಳಿಂದ ಕಲ್ಲು ಕೂಡ ನನ್ನ ಮೇಲೆ ತೇಲುವುದು. ಆಗ ನಲ್-ನೀಲ್‌ಗೆ ಕಲ್ಲು ಎಸೆದು ತೋರಿಸಲು ಹೇಳಿದರು, ದೊಡ್ಡಸ್ತಿಕೆ ಯಲ್ಲಿ ತಮ್ಮ ಗುರುಗಳನ್ನು ನೆನಪಿಸಲಿಲ್ಲ. ಈ ಕಾರಣದಿಂದ ಋಷಿ ಮುನೀಂದ್ರರು ಅವರ ಶಕ್ತಿ ಹಿಂಪಡೆದರು, ಕಲ್ಲುಗಳು ಮುಳುಗಿದವು, ಸಮುದ್ರ ಅವರ ತಪ್ಪು ಹೇಳಿತು ಆಗ ನಲ ನೀಲರು ತಮ್ಮ ಗುರುಗಳನ್ನು ನೆನೆಸಿಕೊಂಡರು. ಗುರುಗಳು ತಮ್ಮ ಶಿಷ್ಯರಿಗೆ ಶಕ್ತಿ ಕೊಡುವುದಾದರೆ ನನ್ನ

ಕಾರ್ಯವನ್ನು ಸಹ ಮಾಡಿಕೊಳ್ಳಬಲ್ಲರು ಎಂದು ರಾಮನಿಗೆ ಅನ್ನಿಸಿತು. ಶ್ರೀ ರಾಮ ವಿಷ್ಣುವಿನ ಅವತಾರರಾಗಿದ್ದರು. ಶ್ರೀ ವಿಷ್ಣು ಕಾಲ ನಿರಂಜನ್ ನ ಪುತ್ರನು. ಯಾವಾಗ ಪರಮೇಶ್ವರ ಕಬೀರರು ಮೊದಲ ಬಾರಿಗೆ ಕಾಲನ ಲೋಕಕ್ಕೆ ಬಂದಿದ್ದರೋ ಆಗ ಜ್ಯೋತಿ ನಿರಂಜನನು ಮೊದಲಿಗೆ ಪರಮೇಶ್ವರರ ಜೊತೆ ಜಗಳವಾಡಿದ್ದನು. ಅವನ ಕುತಂತ್ರ ವಿಫಲವಾದ ಕಾರಣ ಕಾಲಿಗೆ ಬಿದ್ದು ಕ್ಷಮೆ ಕೇಳಿದನು. ಹಾಗೂ ಕೆಲವು ಆಶೀರ್ವಾದಗಳನ್ನು ಪಡೆದನು.

ಅವುಗಳಲ್ಲಿ ಮೊದಲನೆ ಆಶೀರ್ವಾದ ಯಾವುದೆಂದರೆ, ನನ್ನ ಅಂಶ ವಿಷ್ಣು ತ್ರೇತಾಯುಗದಲ್ಲಿ ರಾಮಚಂದ್ರನೆಂಬ ಹೆಸರಿನಿಂದ ದಶರಥನ ಮನೆಯಲ್ಲಿ ಜನ್ಮ ತಾಳುವನು. ಅವನಿಗೆ ವನವಾಸವಾಗುವುದು”. ಅವನ ಜೊತೆಯಲ್ಲಿ ಅವನ ಹೆಂಡತಿ ಸೀತೆಯೂ ಇರುವಳು. ಅವಳನ್ನು ಒಬ್ಬ ರಾಕ್ಷಸನು ಲಂಕಾ ನಗರಿಗೆ ಎತ್ತಿಕೊಂಡು ಹೋಗುವನು. ಆಗ ರಾಮಚಂದ್ರನು ಸಮುದ್ರದ ಮೇಲೆ ಒಂದು ಸೇತುವೆಯನ್ನು ನಿರ್ಮಿಸಲು ಬಯಸುವನು. ಆದರೆ ಅದು ಸಾಧ್ಯವಾಗುವುದಿಲ್ಲ. ಆಗ ಆ ಸೇತುವೆಯನ್ನು ನೀವು ನಿರ್ಮಾಣ ಮಾಡಿಸಿ. 2ನೇ ಆಶೀರ್ವಾದವೇನೆಂದರೆ ದ್ವಾಪರಯುಗದಲ್ಲಿ ಅವನೇ ಕೃಷ್ಣನ ರೂಪದಲ್ಲಿ ಜನ್ಮ ತಾಳುವನು. ಮೃತ್ಯುವಿನ ನಂತರ ಅವನು ಜಗನ್ನಾಥ ಎಂಬ ಹೆಸರಿನಿಂದ, ಪುರಿ ನಗರದ ಸಮುದ್ರ ತೀರದಲ್ಲಿ ಮಂದಿರವನ್ನು ಕಟ್ಟಿಸುವನು. ಸಮುದ್ರ ಅದನ್ನು ಕಟ್ಟಲು ಬಿಡುವುದಿಲ್ಲ. ಆಗ ನೀವು ಆ ಮಂದಿರವನ್ನು ಸಮುದ್ರದಿಂದ ರಕ್ಷಿಸಿ. ಕಬೀರ ಪರಮೇಶ್ವರರು ಹೇಳಿದ್ದೇನೆಂದರೆ, ಆ ಕಾರ್ಯವನ್ನು ಮಾಡುವೆನು, ಆ ವಚನದ ಪಾಲನೆ ಮಾಡಲು ಪರಮೇಶ್ವರರಾದ ಕಬೀರರು ಮುನೀಂದ್ರ ಋಷಿಯ ರೂಪದಲ್ಲಿ ಸಮುದ್ರ ತೀರ ಪ್ರಕಟರಾದರು. ಹಾಗೆಯೇ ಬರುತ್ತಾ ಪರ್ವತದ ನಾಲ್ಕೂ ದಿಕ್ಕುಗಳಲ್ಲಿ ತನ್ನ ಕೋಲಿನಿಂದ ರೇಖೆಯನ್ನು ಎಳೆದು ಬಂದರು. ನಲ್ ಮತ್ತು ನೀಲ್ ದೂರದಿಂದ ತಮ್ಮ ಗುರುಗಳನ್ನು ಗುರುತಿಸಿದರು ಹಾಗೂ ಹೀಗೆಂದು ಹೇಳಿದರು “ನಮ್ಮ ಗುರುಗಳು ಬಂದರು”. ಆಗ ರಾಮಚಂದ್ರನು ತನ್ನ ಕಷ್ಟವನ್ನು ತೋಡಿಕೊಂಡನು. ಹಾಗೂ ಬಹಳ ವಿನಯವಾಗಿ ತನ್ನ ಕಾರ್ಯಸಿದ್ಧಿಗಾಗಿ ಆಶೀರ್ವಾದ ಬೇಡಿದನು. ಆಗ ಪರಮೇಶ್ವರನು ಹೀಗೆಂದನು– “ನಲ್ ಮತ್ತು ನೀಲ್ ನೀವು ತಪ್ಪು ಮಾಡಿದಿರಿ. ಆ ಕಾರಣದಿಂದ ನಿಮ್ಮ ಹತ್ತಿರ ಶಕ್ತಿ ಉಳಿದಿಲ್ಲ. ನಾನು ಎದುರಿಗಿರುವ ಪರ್ವತದ ನಾಲ್ಕು ಕಡೆ ರೇಖೆಯನ್ನು ಎಳೆದಿದ್ದೇನೆ. ಅದರ ಒಳಗಿರುವ ಕಲ್ಲುಗಳು ಮರದ ತುಂಡುಗಳಿಗಿಂತ ಹಗುರವಾಗಿರುವಂತೆ ಮಾಡಿದ್ದೇನೆ. ಅವುಗಳು ಮುಳುಗುವುದಿಲ್ಲ”. ಹನುಮಂತನು ರಾಮಭಕ್ತನಾಗಿದ್ದನು. ಅವನು ಆ ಕಲ್ಲುಗಳ ಮೇಲೆ ‘ರಾಮ–ರಾಮ’ ಎಂದು ಬರೆದನು. ನಂತರ ಅದನ್ನು ಎತ್ತಿಕೊಂಡು ಹೋಗಿ ಸಮುದ್ರದಲ್ಲಿ ಹಾಕಿದಾಗ ಆ ಕಲ್ಲುಗಳು ಮುಳುಗಲಿಲ್ಲ. ನಲ್ ಮತ್ತು ನೀಲರು ಒಳ್ಳೆಯ ಶಿಲ್ಪಕಾರರಾಗಿದ್ದರು. ಅಂದರೆ ನಿಪುಣ ರಾಜತಾಂತ್ರಿಕರಾಗಿದ್ದರು. ಆ ಕಾರಣದಿಂದ ಅವರಿಬ್ಬರು ಕಲ್ಲುಗಳನ್ನು ಕೆತ್ತಿ ಒಂದು ಕಲ್ಲನ್ನು ಇನ್ನೊಂದು ಕಲ್ಲಿನಲ್ಲಿ ಸಿಲುಕಿಸುತ್ತಾ ಹೋದರು. ಮೊದಲು ಕಲ್ಲುಗಳನ್ನು ರಾಮನಿಂದ ತೇಲಿಸಲು ಸಾಧ್ಯವಾಗಲಿಲ್ಲ. ನಲ್ ಮತ್ತು ನೀಲರು ಸಹ ಅದರಲ್ಲಿ ಯಶಸ್ವಿಯಾಗಲಿಲ್ಲ.

ಹನುಮಂತನು ನಿಂತುಕೊಂಡೇ ರಾಮ–ರಾಮ ಹೇಳುತ್ತಿದ್ದನು. ಕಲ್ಲುಗಳು ತೇಲಲಿ ಎಂದು ಇಚ್ಛಿಸಿದನು. ಆದರೆ ಎಲ್ಲವೂ ವ್ಯರ್ಥವಾಗಿ ಹೋಯಿತು. ಋಷಿ ಮುನೀಂದ್ರರು ಅಂದರೆ ಕಬೀರರು ಕಲ್ಲುಗಳನ್ನು ಹಗುರಗೊಳಿಸಿದ್ದರು. ಆ ಕಾರಣದಿಂದ ಕಲ್ಲುಗಳೆಲ್ಲ ಸಮುದ್ರದಲ್ಲಿ ಮುಳುಗಲಿಲ್ಲ. ಹನುಮಂತನಂತೂ ‘ರಾಮ–ರಾಮ’ ಎಂದು ಜಪಿಸಲು ಶ್ರದ್ಧೆಯಿಂದ ಕಲ್ಲುಗಳ ಮೇಲೆ ‘ರಾಮರಾಮ’ ಎಂದು ಬರೆಯುತ್ತಿದ್ದನು. ಅವನು ಎಲ್ಲೆಲ್ಲಿ ಕುಳಿತುಕೊಳ್ಳುತ್ತಿದ್ದನೋ ಅಲ್ಲಿ ಗಿಡಮರಗಳ ಮೇಲೆ ರಾಮ–ರಾಮ ಎಂದು ಬರೆಯುತ್ತಿದ್ದನು. ಹನುಮಂತನಿಗೆ ದಶರಥನ ಮಗನಾದ ರಾಮಚಂದ್ರನ ಪರಿಚಯವಿರಲಿಲ್ಲ. ಅದಕ್ಕಿಂತ ಮೊದಲಿನಿಂದಲೂ ರಾಮನಾಮದ ಜಪವನ್ನು ಮಾಡುತ್ತಿದ್ದನು. ಹೇಗೆಂದರೆ ಲೋಕವೇದ (ದಂತಕತೆ) ಕೇಳುತ್ತಾ ಬಂದಿದ್ದೇವೆ. ಅಂದರೆ ನಲ್ ಮತ್ತು ನೀಲರು ಕಲ್ಲುಗಳನ್ನು ತೇಲಿಸಿದರು. ಹಾಗಾಗಿ ಸೇತುವೆಯ ನಿರ್ಮಾಣವಾಯಿತು.

ಮತ್ತೊಬ್ಬರು ಹೇಳುತ್ತಿದ್ದರು. ಅದೇನೆಂದರೆ ಹನುಮಂತನು ಕಲ್ಲುಗಳ ಮೇಲೆ ರಾಮ ರಾಮ ಎಂದು ಬರೆದನು ಹಾಗಾಗಿ ಕಲ್ಲುಗಳು ತೇಲಲಾರಂಭಿಸಿದವು. ಹಾಗೂ ರಾಮನು ಕಲ್ಲುಗಳನ್ನು ತೇಲಿಸಿದನು. ಕಾರಣ ಇದಾಗಿತ್ತೇಂದರೆ ಕಲ್ಲುಗಳನ್ನು ತೇಲಿಸುವ ಬಗ್ಗೆ ಏನು ಮಾತಾಗಿತ್ತು ಹಾಗು ಕಲ್ಲುಗಳನ್ನು ತೇಲಿಸುವ ಬಗ್ಗೆ ಋಷಿಮುನೀಂದ್ರರು ಹೇಳಿದ್ದೇನೆಂದರೆ ನಾನು ಪರ್ವತದ ಕಲ್ಲುಗಳನ್ನು ಹಗುರಗೊಳಿಸಿದ್ದೇನೆ. ಈ ವಿಷಯವು 20–30 ವ್ಯಕ್ತಿಗಳ ಮುಂದೆ ನಡೆದಿತ್ತು. ಉಳಿದ ಕೊಟ್ಯಾಂತರ ವ್ಯಕ್ತಿಗಳು ಯುದ್ಧಕ್ಕಾಗಿ ಬಂದಿದ್ದರು. ಅಷ್ಟಣೆ ಸಿಕ್ಕ ತಕ್ಷಣ ಕಲ್ಲುಗಳನ್ನು ತರಲಾರಂಭಿಸಿದರು. ಅವರು ಅಲ್ಲಿಗೆ ಬಂದಾಗ ಹನುಮಂತನು ರಾಮ ರಾಮ ಎಂದು ಬರೆಯುತ್ತಿದ್ದನು ಹಾಗೂ ಉಳಿದವರು ಕಲ್ಲುಗಳನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿದರು. ಸಮುದ್ರದ ಮೇಲೆ ನಲ್ ಮತ್ತು ನೀಲ್ ಕಲ್ಲುಗಳಿಂದ ಸೇತುವೆಯನ್ನು ನಿರ್ಮಾಣ ಮಾಡುತ್ತಿದ್ದರು. ರಾಮಚಂದ್ರನು ನಲ್ ಮತ್ತು ನೀಲರ ಪ್ರಶಂಸೆ ಮಾಡುತ್ತಿದ್ದನು. ಅಲ್ಲಿ ಹಾಜರಿದ್ದ ವ್ಯಕ್ತಿಗಳು ಒಬ್ಬರಿಗೊಬ್ಬರು ಹೀಗೆಂದು ಮಾತನಾಡಿಕೊಳ್ಳುತ್ತಿದ್ದರು. ಹನುಮಂತನು ಕಲ್ಲುಗಳ ಮೇಲೆ ರಾಮ ರಾಮ ಎಂದು ಬರೆಯುತ್ತಿದ್ದಾನೆ. ಹಾಗಾಗಿ ಕಲ್ಲುಗಳೆಲ್ಲ ನೀರಿನಲ್ಲಿ ತೇಲಾಡುತ್ತಿವೆ. ಕೆಲವರಿಗೆ ಈ ಚಮತ್ಕಾರವು ನಲ್ ಮತ್ತು ನೀಲರ ಕೈಚಳಕದಿಂದ ಆಗಿದೆ ಎನಿಸಿತು. ಆ ಕಾರಣದಿಂದ ಕಲ್ಲುಗಳು ತೇಲುತ್ತಿವೆ ಎಂದುಕೊಂಡರು. ಹೀಗಾಗಿ ಈ ತಪ್ಪು ಕಲ್ಪನೆ ಅಂದರೆ ಒಂದು ರೀತಿಯ ಭ್ರಮೆ ಎಲ್ಲರಲ್ಲೂ ಉಂಟಾಯಿತು. ಹೀಗೆ ಸೇತುವೆ ನಿರ್ಮಾಣ ಮಾಡಿಕೊಂಡು ಯುದ್ಧದಲ್ಲಿ ನಿರತರಾಗಿದ್ದರು. ಸಾಕಷ್ಟು ಜನರು ಸಾವನ್ನಪ್ಪಿದರು. ಕೆಲವರು ಉಳಿದುಕೊಂಡರು. ಅವರು ತಮ್ಮ ಮನೆಗಳಿಗೆ ಹೊರಟು ಹೋದರು. ಅವರೆಲ್ಲ ತಮ್ಮ ತಮ್ಮ ಹಳ್ಳಿಗಳಲ್ಲಿ ಹಾಗೂ ನಗರಗಳಲ್ಲಿ ಇದೇ ರೀತಿ ತಪ್ಪು ಪ್ರಚಾರ ಮಾಡಿದರು. ಇಲ್ಲಿಯವರೆಗೂ ಅದೇ ತಪ್ಪುಕಲ್ಪನೆ ಎಲ್ಲರಲ್ಲಿಯೂ ನಿರ್ವಿವಾದವಾಗಿ ಪ್ರಚಲಿತವಾಗಿದೆ. ನಿಜಾಂಶವನ್ನು ಈ ದಾಸನು (ರಾಮ್‌ಪಾಲ್‌ದಾಸ್) ತಿಳಿಸಿದ್ದಾನೆ. ಯುದ್ಧವಾಯಿತು. ಶ್ರೀರಾಮನ ಸೈನ್ಯದ ಮೇಲೆ ನಾಗಪಾಶವೆಂಬ ಅಸ್ತ್ರವನ್ನು ಪ್ರಯೋಗಿಸಲಾಯಿತು. ಈ ಕಾರಣದಿಂದ ಶ್ರೀರಾಮ, ಹನುಮಂತ, ಜಾಂಬವಂತ, ಸುಗ್ರೀವ, ಅಂಗದ ಇವರೆಲ್ಲರ ಸಮೇತ ಇಡೀ ಸೈನ್ಯವು ನಾಗಗಳ (ಸರ್ಪಗಳ) ಮೂಲಕ ಬಂಧಿಸಲ್ಪಟ್ಟಿತು. ಸರ್ಪಗಳೆಲ್ಲ ಸುತ್ತಿಕೊಂಡವು. ಕೈಗಳನ್ನು ಸಹ ಶರೀರದೊಂದಿಗೆ ಸುತ್ತಿಕೊಂಡವು, ರೈತ ಕಬ್ಬುಗಳನ್ನು ಕಟ್ಟಿದಂತೆ, ಹೀಗೆ ನಿಷ್ಕ್ರಿಯಗೊಂಡರು.

ಆಗ ಗರುಡನಿಗೆ ಕರೆಯಲಾಯಿತು. ಗರುಡನು ನಾಗಪಾಶವನ್ನು ಕತ್ತರಿಸಿದನು. ಆಗ ಎಲ್ಲರು ಬಂಧನದಿಂದ ಮುಕ್ತರಾದರು. ಲಕ್ಷ್ಮಣನಿಗೆ ಬಾಣ ತಗುಲಿದ್ದರಿಂದ ಅವನು ಮೂರ್ಛಿತನಾಗಿದ್ದನು. ಆಗ ಹನುಮಂತನು ಲಂಕೆಯಿಂದ ವೈದ್ಯನನ್ನು ಕರೆತಂದಾಗ ಆ ವೈದ್ಯನು ದ್ರೋಣಗಿರಿ ಪರ್ವತದಿಂದ ಸಂಜೀವಿನಿ ಬೇರನ್ನು ತರಲು ಹೇಳಿದನು. ಅದರ ಗುರುತು ರಾತ್ರಿಯಲ್ಲಿ ಅದು ಮಿನುಗುತ್ತದೆ. ರಾಮನು ಹನುಮಂತನಿಗೆ 'ಸೂರ್ಯೋದಯಕ್ಕೆ ಮೊದಲೇ ಸಂಜೀವಿನಿ ಬೇರನ್ನು ತರಬೇಕು ಅದು ನಿನ್ನಿಂದ ಮಾತ್ರ ಸಾಧ್ಯ' ಎಂದು ಹೇಳಿದನು. ತಕ್ಷಣವೇ ಹನುಮಂತನು ಆಕಾಶಮಾರ್ಗವಾಗಿ ತೆರಳಿದನು. ದ್ರೋಣಗಿರಿಯ ಮೇಲೆ ರಾಕ್ಷಸರು ಎಲ್ಲಾ ಬೇರುಗಳನ್ನು ಸಂಜೀವಿನಿ ಬೇರಿನಂತೆ ಹೊಳೆಯುವಂತೆ ಮಾಡಿದರು. ವೈದ್ಯನು ಹೇಳಿದ್ದ ಅದು ಬಹಳ ಕಡಿಮೆ ಪ್ರಮಾಣದಲ್ಲಿರುತ್ತದೆ ಸಂಜೀವಿನಿಯನ್ನು ಬೆಳಕಿನಲ್ಲಿ ಅದನ್ನು ಗುರುತಿಸುವುದು ಕಷ್ಟ ಏಕೆಂದರೆ ಹತ್ತಿರದಲ್ಲಿ ಅಂಥಹದ್ದೇ ಔಷಧಿಯ ಗಿಡ ಬೆಳೆಯುತ್ತದೆ, ರಾತ್ರಿಯಲ್ಲಿ ಅದು ಮಿಂಚುತ್ತದೆ.

ಹನುಮಂತನು ಸಂಜೀವಿನಿ ಬೇರನ್ನು ಗುರುತಿಸಲು ಸಾಧ್ಯವಾಗದ ಕಾರಣ ದ್ರೋಣಗಿರಿ ಪರ್ವತವನ್ನೇ ಹೊತ್ತು ನಡೆದನು. ದಾರಿಯಲ್ಲಿ ಭರತನ ನೆನಪು ಬಂದಿತು. ಭರತನಿದ್ದಿದ್ದರೆ, ಅವನೊಬ್ಬನೇ ರಾವಣ ಮತ್ತು ಅವನ ಒಂದು ಲಕ್ಷ ಪುತ್ರರನ್ನು ಹಾಗೂ ಒಂದೂಕಾಲು ಲಕ್ಷ ಮೊಮ್ಮಕ್ಕಳನ್ನು ಹೊಡೆದು ಉರುಳಿಸುತ್ತಿದ್ದನು ಎಂದು ರಾಮ ಮತ್ತು ಲಕ್ಷ್ಮಣ ಹೇಳಿದ್ದು ನೆನಪಾಯಿತು. ಹಾಗಾಗಿ ಭರತನನ್ನು ಪರೀಕ್ಷಿಸಲು ನಿಶ್ಚಯಿಸಿದನು. ರಾಮ ರಾವಣರಲ್ಲಿ ಯುದ್ಧವಾಗುತ್ತಿದೆ ಎಂದು

ಭರತನಿಗೆ ಗೊತ್ತಿತ್ತು. ಆಕಾಶ ಮಾರ್ಗದಲ್ಲಿ ಹನುಮಂತನು ಪರ್ವತ ಸಮೇತ ಹಾರುತ್ತಿದ್ದುದ್ದನ್ನು ಕಂಡು, ಯಾರೋ ರಾಕ್ಷಸನಿರಬಹುದೆಂದು ತಿಳಿದು ಅವನ ಮೇಲೆ ಬಾಣ ಪ್ರಯೋಗಿಸಿದನು. ಹನುಮಂತನು ಬಾಣ ತಗುಲಿದೆಯೆಂದು ನೆಪಮಾಡಿ 'ಹೇ ರಾಮ್' ಎಂದು ಹೇಳುತ್ತಾ ಧರೆಗುರುಳಿದನು. ಪರ್ವತವನ್ನು ನೆಲದ ಮೇಲೆ ಇಟ್ಟು ಬಿಟ್ಟನು. ಭರತನು ಬಂದು ರಾಮನಾಮ ಶಬ್ದ ಕೇಳಿ, ಇವನ್ಯಾರೋ ನಮ್ಮ ಪಕ್ಷದವನೇ ಇರುವನೆಂದು ತಿಳಿಯಲು ತಡವಾಗಲಿಲ್ಲ. ಹತ್ತಿರ ಹೋಗಿ ಕೇಳಿದ ನೀವು ಯಾರು? ಎಲ್ಲಿ ಹೋಗುತ್ತಿರುವಿರಿ? ಪರ್ವತವನ್ನು ಏಕೆ ಏತ್ತಿರುವಿರಿ. ನನ್ನ ಹೆಸರು ಭರತ, ನಾನು ಶ್ರೀ ರಾಮ ಹಾಗು ಲಕ್ಷ್ಮಣನ ಸಹೋದರ.ಆಗ ಹನುಮಂತನೆಂದನು ನಾನು ಹನುಮಂತ, ರಾಮ–ರಾವಣನ ಯುದ್ಧ ನಡೆಯುತ್ತಿದೆ. ನಿಮ್ಮ ತಮ್ಮ ಲಕ್ಷ್ಮಣನ ನಿಗೆ ಬಾಣ ತಗುಲಿ ಮೂರ್ಛೆ ಹೊಂದಿರುವರು. ವೈದ್ಯರು ದ್ರೋಣಗಿರಿಯ ಮೇಲೆ ಔಷಧಿ ಇದೆ ಹೇಳಿದ್ದಾರೆ, ನನಗೆ ಗೋತ್ತಾಗಲಿಲ್ಲ, ಅದಕ್ಕೆ ಪರ್ವತವನ್ನೆ ಎತ್ತಿಕೊಂಡು ಹೋಗುತ್ತಿದ್ದೇನೆ. ಈ ರಾತ್ರಿ ಕಳೆಯುವ ಮೊದಲೇ ಸಂಜೀವಿನಿ ಬೇರನ್ನು ತೆಗೆದುಕೊಂಡು ಹೋಗದಿದ್ದರೆ ಲಕ್ಷ್ಮಣನ ಜೀವಕ್ಕೆ ಆಪತ್ತು ಎಂದು ಸಹ ತಿಳಿಸಿದನು. ನೀವು ಏನೂ ಯೋಚಿಸದೇ ಬಾಣ ಹೊಡೆದಿರಿ ಈಗ ನಾನು ಬೇಗ ಹೇಗೆ ತಲುಪಲಿ, ಸುರ್ಯೋದಯದ ನಂತರ ಲಕ್ಷ್ಮಣ ಈ ಪ್ರಪಂಚದಲ್ಲಿರುವುದಿಲ್ಲ. ಆಗ ಭರತನು ಬಾಣ ಹೊಡೆಯುವ ಕಾರಣ ತಿಳಿಸಿದ ಹಾಗು ಹೇಳಿದ "ಚಿಂತೆ ಮಾಡಬೇಡಿ ಪವನಪುತ್ರ! ನೀವು ನನ್ನ ಬಾಣದ ತುದಿಯಲ್ಲಿ ಪರ್ವತ ಸಹಿತವಾಗಿ ನಿಂತುಕೊಳ್ಳಿ. ಒಂದು ಕಾಲನ್ನು ಹಿಂದೆ ಮಾಡಿಕೊಂಡು, ಒಂದು ಕಾಲನ್ನು ಮುಂದೆ ಮಾಡಿ ಬಾಣದ ಮೇಲೆ ನಿಂತುಕೊಳ್ಳಿ, ನಾನು ಆ ಬಾಣದಿಂದ ನಿಮ್ಮನ್ನು ಪರ್ವತದ ಸಹಿತ ನಿಮಗಿಂತ ಮೊದಲು ಲಂಕೆಗೆ ತಲುಪಿಸುತ್ತೇನೆ ಎಂದನು. ಹನುಮಂತನಿಗೆ ತನ್ನ ಶಕ್ತಿಯ ಮೇಲೆ ಅತ್ಯಧಿಕ ಗರ್ವವಿತ್ತು. ಭೂಮಿ ಮೇಲೆ ಇಟ್ಟ ಬಾಣದ ಮೇಲೆ ಹನುಮಂತನು ಭರತನು ಹೇಳಿದ ಹಾಗೆ ಬಾಣದ ಮೇಲೆ ನಿಂತುಕೊಂಡನು. ಭರತನು ಆ ಬಾಣವನ್ನು ಹನುಮಂತ ಹಾಗು ಪರ್ವತದ ಸಹಿತ ಎಷ್ಟು ಸುಲಭವಾಗಿ ಎತ್ತಿದನೆಂದರೆ, ಹನುಮಂತನು ನೋಡಿ ಆಶ್ಚರ್ಯಪಟ್ಟನು. ಭರತನು ನನ್ನನ್ನು ಹಾಗು ಪರ್ವತದ ಭಾರವನ್ನು ಬಾಣ ಎತ್ತಿದಂತೆ ಎತ್ತಿಬಿಟ್ಟನು. ಆಗ ಹನುಮಂತ ಹೇಳಿದನು ಹೇ ದಶರಥನ ಪುತ್ರ ಭರತ ನಾನಂತು ನಿಮ್ಮ ಶಕ್ತಿ ಸಾಮರ್ಥ್ಯವನ್ನು ಪರೀಕ್ಷಿಸಲು ಹಾಗೆ ಮಾಡಿದ್ದೆ, ನಾನು ಸ್ವಸ್ಥನಿದ್ದೇನೆ ನಾನು ಸ್ವತಃ ಹಾರಿ ಸಮಯಕ್ಕಿಂತ ಮುಂಚೆ ತಲುಪುವೆ, ನಿಮ್ಮ ಇಬ್ಬರು ಸಹೋದರರು ನಿಮ್ಮ ಪ್ರಶಂಸನೆ ಮಾಡುತ್ತಿದ್ದರು. ಒಂದು ವೇಳೆ ಭರತ ಇದ್ದಿದ್ದರೆ ಅವನು ಒಬ್ಬನೇ ರಾವಣ ಹಾಗು ಅವನ ಸೈನ್ಯವನ್ನು ಸೋಲಿಸಬಹುದು. ನನಗೆ ಅವರ ಮಾತಿನ ಮೇಲೆ ನಂಬಿಕೆ ಯಾಗಲಿಲ್ಲ. ಇಂದು ಕಣ್ಣಾರೆ ನೋಡುತ್ತಿರುವೆ. ನೀವು ವಾಸ್ತವದಲ್ಲಿ ಶೂರವೀರ ಹಾಗು ಬಲಶಾಲಿ ಯಾಗಿರುವಿರಿ. ನೀವು ನನ್ನ ಅಭಿಮಾನ ನಾಶಮಾಡಿದಿರಿ. ಇಷ್ಟು ಹೇಳಿ ಹನುಮಂತ ಆ ಬಾಣದ ಮೇಲಿಂದ ಜಿಗಿದು ಹಾರಿದರು. ಆ ಸಮಯ ಬಾಣ ಸ್ವಲ್ಪವೂ ಅಲ್ಲಾಡಲಿಲ್ಲ.

ಯೋಚಿಸಬೇಕಾದ ವಿಷಯ, ಯಾರಾದರೂ ಭಾರ ಎತ್ತಿದರೆ ಎರಡೂ ಕೈಗಳಿಂದ ಅಥವಾ ಒಂದು ಕೈಯಿಂದ ಭಾರವನ್ನು ಎತ್ತಬಹುದು. ಅದೇ ಭಾರವನ್ನು ಕೋಲಿನಿಂದ ಎತ್ತಲು ಹೋದರೆ ನಿಜವಾಗಲೂ ಕಷ್ಟ. ಸ್ವಲ್ಪ ಭಾರವನ್ನು ಕೋಲಿನಿಂದ ಎತ್ತಬಹುದು. ಆದರೆ ಭರತನು ದ್ರೋಣಗಿರಿ ಪರ್ವತ ಮತ್ತು ಹನುಮಂತನನ್ನು ಅನಾಯಾಸವಾಗಿ 50 ಅಡಿ ಎತ್ತರ ಎತ್ತಿದನು, ತ್ರೇತಾಯುಗದಲ್ಲಿ ಮನುಷ್ಯರ ಎತ್ತರ 70 ರಿಂದ 80 ಅಡಿ ವರೆಗೆ ಇರುತ್ತದೆ. ಇದು ಯಾವ ಸಾಮಾನ್ಯ ಮಾತಲ್ಲ. ಯಾರಾದರೂ ಒಬ್ಬ ವ್ಯಕ್ತಿಯನ್ನು ಕೋಲಿನಿಂದ ಎತ್ತಿನೋಡಿ, ಹೇಗೆ ಅನುಭವ ಆಗುವುದೆಂದು?

ಹನುಮಂತನು ಸಂಜೀವಿನಿ ಬೇರನ್ನು ತಂದು ಕೊಟ್ಟಾಗ ವೈದ್ಯನು ಅದರ ರಸವನ್ನು ಕುಡಿಸಿ ಲಕ್ಷ್ಮಣನನ್ನು ಬದುಕಿಸಿದನು. ನಂತರ ಯುದ್ಧವಾಯಿತು. ರಾವಣನನ್ನು ಕೊಲ್ಲಲಾಯಿತು. ರಾವಣನೇನೋ ಶಿವ ಭಕ್ತನಾಗಿದ್ದನು. ಅವನು ತನ್ನ ಹತ್ತು ತಲೆಗಳನ್ನು ಕಡಿದು ಶಿವನಿಗೆ ಅರ್ಪಿಸಿದ್ದನು. ಹತ್ತು ಬಾರಿಯೂ ಶಿವನು ಅವನ ತಲೆಗಳನ್ನು ಹಿಂತಿರುಗಿಸಿದ್ದನು. ಹಾಗೂ 10

ಬಾರಿ ತಲೆ ಕಡಿದಾಗ ಮಾತ್ರ ನಿನಗೆ ಸಾವುಂಟಾಗುವುದು ಎಂಬ ವರ ಕೊಟ್ಟಿದ್ದನು. ರಾವಣನ ತಲೆ ಹತ್ತು ಬಾರಿ ಕತ್ತರಿಸಲಾಗಿತ್ತು. ನಂತರ ನಾಭಿಗೆ ಬಾಣ ಹೊಡೆಯುವುದರಿಂದ ನಾಭಿ ಅಮೃತ ನಷ್ಟವಾಗಿ ರಾವಣ ಮರಣ ಹೊಂದಿದನು. ಹತ್ತು ಬಾರಿ ತಲೆ ಕತ್ತರಿಸಲಾಯಿತು, ಹತ್ತು ಬಾರಿ ಪುನಃ ರುಂಡ ಮುಂಡಕ್ಕೆ ಸೇರಿತು. ನಂತರ ವಿಭಿಷಣ ಹೇಳಿದನು ರಾವಣನ ನಾಭಿಯಲ್ಲಿ ಅಮೃತವಿದೆ. ರಾಮನು ರಾವಣನ ನಾಭಿಗೆ ಬಾಣ ಹೊಡೆಯಲು ತುಂಬಾ ಪ್ರಯತ್ನಿಸಿದನು, ಆದರೆ ರಾವಣನು ಸಹ ನಾಭಿಗೆ ಬಾಣ ಮುಟ್ಟದಂತೆ ಪ್ರಯತ್ನಿಸುತ್ತಿದ್ದನು. ಅಗ ರಾಮನು ಪರಮೇಶ್ವರನನ್ನು ಸ್ಮರಿಸುತ್ತಾ ಹೇಳಿದನು. "ಹೇ ಮಹಾದೇವ, ಈ ರಾಕ್ಷಸನನ್ನು ಕೊಲ್ಲಲು ನನಗೆ ಸಹಾಯ ಮಾಡು. ಹೇ, ಪರಮೇಶ್ವರ, ದೇವರ ದೇವಾ! ನಿನ್ನ ಮಗಳಾದ ಸೀತೆಯು ಸಂಕಷ್ಟದಲ್ಲಿದ್ದಾಳೆ. ನಿನ್ನ ಮಕ್ಕಳಾದ **33** ಕೋಟಿ ದೇವತೆಗಳನ್ನು ಈ ರಾಕ್ಷಸನು ಜೈಲಿನಲ್ಲಿ ಬಂಧಿಸಿಟ್ಟಿದ್ದಾನೆ". ತಕ್ಷಣವೇ ಪರಮೇಶ್ವರ ಕಬೀರರು ಗುಪ್ತವಾಗಿ ತನ್ನ ಕೈಯ್ಯನ್ನು ಸೂಕ್ಷ್ಮ ರೂಪದಲ್ಲಿ ರಾಮನ ಕೈಯ್ಯಲ್ಲಿಟ್ಟು, ಆಗ ರಾಮನ ಬಾಣವು ನೇರವಾಗಿ ಹೋಗಿ ರಾವಣನ ನಾಭಿಯನ್ನು ಸೀಳಿತು. ಆಗ ರಾವಣನು ಸತ್ತು ಬಿದ್ದನು.

ಪರಮೇಶ್ವರ ಕಬೀರರ ಪ್ರಾಪ್ತಿಯಾದ ಬಳಿಕ ಸಂತ ಗರೀಬ್ ದಾಸರು (ಗಾಮ–ಛುಡಾನೀ, ಜಿಲ್ಲೆ–ಝಜ್ಜರ್, ಪ್ರಾಂತ– ಹರಿಯಾಣ) ಕಬೀರರ ಮಹಿಮೆ ಹೇಳಿದ್ದಾರೆ. ಕಬೀರರು ಹೇಳಿದ್ದಾರೆ:–

ಕಬೀರ್, ಕಹ್ ಮೇರೆ ಹಂಸ ಕೊ, ದುಃಖ್ ನಾ ದೀಜೆ ಕೋಯ್ ।
ಸಂತ ದುಃಖಾಏ ಮೈಂ ದುಃಖಿ, ಮೆರಾ ಆಪಾ ಭೀ ದುಖೀ ಹೊಯ್ ॥
ಪಹುಂಚುಂಗಾ ಛನ್ ಏಕ್ ಮೈಂ, ಜನ್ ಅಪನೆ ಕೆ ಹೇತ್ ।
ತೆತೀಸ್ ಕೋಟಿ ಕೀ ಬಂಧ್ ಛುಟಾಈ, ರಾವಣ್ ಮಾರಾ ಖೇತ್ ॥
ಜೋ ಮೇರೆ ಸಂತ್ ಕೋ ದುಃಖೀ ಕರ್ಯೆಂ, ವಾಕಾ ಖೋಊಂ ವಂಶ್ ।
ಹಿರಣಾಕುಶ್ ಉದರ್ ವಿದಾರಿಯಾ, ಮೈಂ ಹೀ ಮಾರಾ ಕಂಸ್ ॥
ರಾಮ್–ಕೃಷ್ಣ್ ಕಬೀರ್ ಕೆ ಶಹ್‌ಜಾದೆ, ಭಕ್ತಿ ಹೇತ್ ಭಯೆ ಪ್ಯಾದೆ ॥

ಶಬ್ದಾರ್ಥ:– ಸಂತ ಗರೀಬ್‌ದಾಸರು ಹೇಳಿದರು, "ಶ್ರೀ ರಾಮಚಂದ್ರ ಹಾಗೂ ಶ್ರೀಕೃಷ್ಣನಿಗೆ ಅವರ ಒಳ್ಳೆಯ ಕೆಲಸಗಳಿಗೆ ಅನುಗುಣವಾಗಿ ಕಬೀರರು ಸಹಾಯವನ್ನು ನೀಡಿದರು. ಏಕೆಂದರೆ ಶ್ರೀ ರಾಮ ಹಾಗು ಶ್ರೀ ಕೃಷ್ಣ ಕೂಡಾ ಕಬೀರ ಸಾಮ್ರಾಟರ ರಾಜಕುಮಾರರು. ಅಂದರೆ ಪರಮಾತ್ಮ ಕಬೀರರ ಜೀವಾತ್ಮಗಳು. ರಾಮ–ಕೃಷ್ಣರು ಅಂದರೆ ವಿಷ್ಣುವು ಒಳ್ಳೆಯ ಆತ್ಮದವನು. ಅವನ ರಕ್ಷಣೆಯನ್ನು ಸಹ ಕಬೀರ ಪರಮೇಶ್ವರರು ಮಾಡುತ್ತಾರೆ. ತನ್ನ ಸಾಧಕನಿಗೆ ಯಾವುದೇ ಕಷ್ಟ ಕೊಡದಿರುವಂತೆ ಪರಮಾತ್ಮ ಜನರಿಗೆ ಎಚ್ಚರಿಸುತ್ತಾರೆ. ಭಕ್ತನಿಗೆ ಕಷ್ಟವುಂಟಾದರೆ ನಾನು ದುಃಖಿಯಾಗುವೆ. ಭಕ್ತನನ್ನು ರಕ್ಷಿಸಲು ನಾನು ಒಂದು ಕ್ಷಣದಲ್ಲಿ ಬಂದು ಬಿಡುತ್ತೇನೆ. ಆ ಕಾರಣದಿಂದ ರಾಮನ ಕೈಯಿಂದ ರಾವಣನು ಸಾಯದಿದ್ದಾಗ ನಾನು ಗುಪ್ತವಾಗಿ ಬಂದು ರಾಮನ ಕೈಯ್ಯನ್ನು ಹಿಡಿದು ರಾವಣನ ಹೊಕ್ಕಳಿಗೆ ಬಾಣ ತಗಲುವಂತೆ ಬಿಟ್ಟೆ. ಆಗ ರಾವಣನು ಸತ್ತನು. ರಾಮನ ಸೈನ್ಯಕ್ಕೆ ಶಕ್ತಿ ಕೊಟ್ಟೆ, ಹುರಿದುಂಬಿಸಿದೆ. ಇದೇ ರೀತಿ ಕೃಷ್ಣನಿಗೆ ಸಹಾಯ ಮಾಡಿ ಕಂಸನನ್ನು ನಾನೇ ಕೊಂದೆ. ಯಾರು ನನ್ನ ಭಕ್ತರನ್ನು ಸತಾಯಿಸುತ್ತಾರೋ, ಅವರ ಕುಲವನ್ನೇ ನಾಶ ಮಾಡುವೆ ಅಂದರೆ ಅವರ ವಂಶವನ್ನೇ ಮುಗಿಸಿಬಿಡುವೆ.

ರಾವಣನ ಚಿಕ್ಕ ಸಹೋದರ ವಿಭೀಷಣನಿಗೆ ಲಂಕೆಯ ರಾಜ್ಯವನ್ನು ನೀಡಲಾಯಿತು. ಸೀತೆಗೆ ರಾಮನು ಅಗ್ನಿಪರೀಕ್ಷೆಯನ್ನು ಒಡ್ಡಿದನು. ಒಂದು ವೇಳೆ ಸೀತೆಯು ಪತಿವ್ರತೆಯಾಗಿ ಉಳಿಯದೇ ಇದ್ದರೆ ಅವಳು ಅಗ್ನಿಯಲ್ಲಿ ಸುಟ್ಟು ಹೋಗುವಳು ಅದೇ ಅವಳು ಪತಿವ್ರತೆಯಾಗಿಯೇ ಉಳಿದಿದ್ದರೆ ಅವಳು ಬೆಂಕಿಯಲ್ಲಿ ಸುಟ್ಟು ಹೋಗುವುದಿಲ್ಲ. ಈ ರೀತಿ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಸೀತೆಯು ಬೆಂಕಿಯಿಂದ ಹೊರಬಂದಳು. ಎಲ್ಲರೂ ಜಯಕಾರ ಹಾಕಿದರು. ಸೀತೆಯನ್ನು ಎಲ್ಲರೂ ಪತಿವ್ರತೆ ಎಂದು ಕೊಂಡಾಡಿದರು. ರಾವಣನನ್ನು ಆಶ್ವಯೂಜ ಮಾಸದ ಶುಕ್ಲಪಕ್ಷದ ದಶಮಿಯ ದಿನ ವಧೆ ಮಾಡಲಾಗಿತ್ತು.

ರಾವಣನ ಸಾವಿನ 20 ದಿನಗಳ ನಂತರ 14 ವರ್ಷದ ವನವಾಸವನ್ನು ಮುಗಿಸಿ ಶ್ರೀರಾಮ, ಸೀತೆ, ಲಕ್ಷ್ಮಣ ಪುಷ್ಪಕ ವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಬಂದರು. ಆ ದಿನ ಕಾರ್ತಿಕಮಾಸದ ಅಮಾವಾಸ್ಯೆಯಾಗಿತ್ತು. ಆ ರಾತ್ರಿಯಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳ ಒಳಗೆ ಹಾಗೂ ಮನೆಯ ತಾರಸಿಯ ಮೇಲೆ ಹಸುವಿನ ತುಪ್ಪದ ದೀಪಗಳನ್ನು ಹಚ್ಚಿ ರಾಮನ ಆಗಮನಕ್ಕಾಗಿ ಕಾಯುತ್ತಿದ್ದರು. ಭರತನು ರಾಮನಿಗೆ ರಾಜ್ಯವನ್ನು ಹಿಂತಿರುಗಿಸಿದನು.

ಒಂದು ದಿನ ಸೀತೆಯು ರಾಮನಿಗೆ ಹೀಗೆಂದಳು. "ಯುದ್ಧ ಮಾಡಿದ ಸೈನಿಕರಿಗೆ ನಾನು ಬಹುಮಾನ ಕೊಡಲು ಇಚ್ಛಿಸುತ್ತೇನೆ," ಅದೇ ರೀತಿ ತನ್ನ ಕೊರಳಲ್ಲಿ ಇದ್ದ ಬೆಲೆ ಬಾಳುವ ಮುತ್ತಿನ ಮಾಲೆಯನ್ನು ತೆಗೆದು ಹನುಮಂತನಿಗೆ ಕೊಟ್ಟಳು. ಹಾಗೇ ಜೋಪಾನವಾಗಿ ಕಾಪಾಡಿಕೊಂಡು ಇಟ್ಟಿರಬೇಕೆಂದು ಹೇಳಿದಳು. ಹನುಮಂತನು ಮಾಲೆಯಿಂದ ಒಂದೊಂದೇ ಮುತ್ತನ್ನು ಹೊರಗೆ ತೆಗೆದು ಒಡೆದು ಹಾಕಿದನು. ಸೀತೆಗೆ ಹನುಮಂತನ ಈ ವರ್ತನೆ ಇಷ್ಟವಾಗಲಿಲ್ಲ. ಆಗ ಬಹಳ ಕೋಪಗೊಂಡು ಹನುಮಂತನನ್ನು ಬಯ್ಯತೊಡಗಿದಳು. "ಹೇ ಮೂರ್ಖ, ಇದೇನು ಮಾಡಿದೆ?ಎಂಥ ಅಮೂಲ್ಯ ಮಾಲೆಯನ್ನು ನಾಶಮಾಡಿಬಿಟ್ಟೆ, ನೀನು ಹೆಸರಿಗೆ ತಕ್ಕಂತೆ ಕೋತಿ ಚೇಷ್ಟೆಯನ್ನೇ ಮಾಡಿರುವೆ, ನನ್ನ ಕಣ್ಣೆದುರಿಗೆ ನಿಲ್ಲಬೇಡ, ಎಲ್ಲಿಯಾದರೂ ಹೊರಟು ಹೋಗು ಎಂದಳು. ಸೀತೆ ಹೀಗೆ ಹೇಳುವಾಗ ಸಿಂಹಾಸನದ ಮೇಲೆ ರಾಮನು ಕುಳಿತಿದ್ದನು. ಅವನಿಗೂ ಹನುಮಂತನ ಈ ಕೆಲಸ ಇಷ್ಟವಾಗಲಿಲ್ಲ. ಅದಕ್ಕೆ ರಾಮನು ಸುಮ್ಮನೆ ಕುಳಿತನು. ಆಗ ಹನುಮಂತನು, ಯಾವುದರಲ್ಲಿ ರಾಮನಾಮವಿಲ್ಲವೋ ಅದು ನನಗೆ ಬೇಡ, ನಿಮ್ಮ ಮುತ್ತಿನ ಮಾಲೆಯ ಯಾವುದೇ ಮುತ್ತಿನಲ್ಲಿ ರಾಮನಾಮವಿರಲಿಲ್ಲ, ಆದ್ದರಿಂದ ಅದನ್ನು ಒಡೆದು ನೋಡಿ, ರಾಮನಾಮವಿಲ್ಲದ್ದನ್ನು ನೋಡಿ ನಾನು ಬಿಸಾಕಿದೆ" ಎಂದನು. ಆಗ ಸೀತೆಯು "ಹಾಗಾದರೆ ನಿನ್ನ ಶರೀರದಲ್ಲೂ ರಾಮನಾಮವಿಲ್ಲ, ಅದನ್ನೂ ಬಿಸಾಕಿಬಿಡು" ಎಂದಳು. ಆಗ ಹನುಮಂತನು ತನ್ನ ಎದೆಯನ್ನು ಸೀಳಿ ತೋರಿಸಿದನು. ಅದರಲ್ಲಿ ರಾಮ-ರಾಮ ಎಂದು ಬರೆದಿರುವುದು ಕಾಣಿಸಿತು, ಹನುಮಂತನು ಆ ಕ್ಷಣವೇ ಅಯೋಧ್ಯೆ ಬಿಟ್ಟು ದೂರ ಹಾರಿ ಹೋದನು.

ಶ್ರೀ ರಾಮಚಂದ್ರನು ಅಯೋಧ್ಯಾನಗರದ ಜನತೆಯ ದುಃಖ ತಿಳಿಯುವುದಕ್ಕೆ ಒಂದು ದಿನ ರಾತ್ರಿ ವೇಷ ಬದಲಿಸಿಕೊಂಡು ಗುಪ್ತವಾಗಿ ಸುತ್ತಾಡುತ್ತಿದ್ದನು. ಕೆಲವು ವರ್ಷಗಳ ನಂತರ ರಾಜ ರಾಮಚಂದ್ರ ರಾತ್ರಿ ಅಯೋಧ್ಯೆಯ ಬೀದಿಗಳಲ್ಲಿ ತಿರುಗಾಡುತ್ತಿದ್ದರು. ಒಂದು ಮನೆಯ ಒಳಗಡೆ ಯಿಂದ ಜೋರು ಜೋರಾಗಿ ಮಾತನಾಡುವುದು ಕೇಳಿಸುತ್ತಿತ್ತು. ರಾಮ ಹತ್ತಿರ ಹೋಗಿ ಆ ಮನೆಯ ಕಿಟಕಿಗೆ ತನ್ನ ಕಿವಿಯನ್ನು ಇಟ್ಟು ಕೇಳಿಸಿಕೊಂಡನು. ಆ ಮನೆಯ ಯಜಮಾನ ತನ್ನ ಪತ್ನಿಗೆ ಬಯ್ಯುತ್ತಿದ್ದನು. ಎರಡು ದಿನ ತನ್ನ ಅಕ್ಕನ ಮನೆಗೆ ಹೋಗಿದ್ದಕ್ಕಾಗಿ ಪತ್ನಿಯ ಪತಿವ್ರತ್ಯವನ್ನು ಶಂಕಿಸುತ್ತಿದ್ದನು. ಅವಳಿಗೆ ಹೊಡೆದು ಹೋಗು ಮನೆಯಿಂದ ಹೊರಹೋಗು ಎಂದು ಹೇಳುತ್ತಿದ್ದನು, ಅವಳು ಅಳುತ್ತಾ ಶ್ರೀ ರಾಮನ ಮೇಲೆ ಆಣೆ, ಭಗವಂತನ ಮೇಲೆ ಆಣೆ ಇಟ್ಟು ತಾನು ಪತಿವ್ರತೆ ಎಂದು ಅಂಗಲಾಚುತ್ತಿದ್ದಳು. ನೀನು ಹೊಡೆದ ಕಾರಣ ನಾನು ನನ್ನ ಅಕ್ಕನ ಮನೆಗೆ ಹೋಗಿದ್ದೆ, ನಾನು ನಿರಪರಾಧಿ, ಆದರೆ ಆ ಅಗಸನು ಅವನ ಪತ್ನಿಯನ್ನು ಕುರಿತು ಹೀಗೆಂದನು. "ನಾನೇನು ದಶರಥನ ಪುತ್ರ ಶ್ರೀರಾಮಚಂದ್ರನಲ್ಲ, ರಾವಣನ ಹತ್ತಿರ ಎಷ್ಟೋ ಸಮಯದವರೆಗೆ ಇದ್ದ ಸೀತೆಯನ್ನು ತಂದು ಇಟ್ಟುಕೊಳ್ಳುವುದಕ್ಕೆ, ರಾಮ ಸೀತೆಯ ಬಗ್ಗೆ ಸಂಶಯ ವ್ಯಕ್ತಪಡಿಸಿ ಅಯೋಧ್ಯೆಯ ಜನರೆಲ್ಲಾ ಮಾತನಾಡಿಕೊಳ್ಳುತ್ತಿದ್ದಾರೆ, ಇಂಥಾ ಅಪವಿತ್ರ ಹೆಂಡತಿ ಇದ್ದಾಳೆ ಎಂದು ತಿಳಿದು ಯಾವ ಗಂಡಸು ಬದುಕಿರಲು ಸಾಧ್ಯ?" ಈ ಮಾತುಗಳನ್ನು ಕೇಳಿದ ರಾಮನಿಗೆ ತನ್ನ ಕಿವಿಗೆ ಕಾದ ಎಣ್ಣೆ ಸುರಿದಂತಾಯಿತು.

ಮಾರನೇ ದಿನ ಅಯೋಧ್ಯೆಯಲ್ಲಿ ಸಭೆ ಕರೆಯಲಾಯಿತು. ರಾಮಚಂದ್ರನು ಅಯೋಧ್ಯೆಯ ಜನತೆ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದ ವಿಷಯ ಎಲ್ಲರಿಗೂ ತಿಳಿಸಿದನು. ಆ ವಿಷಯವಾಗಿ ಭಾರಿ ಚರ್ಚೆಯಾಯಿತು. ಸೀತೆಯನ್ನು ಮನೆಯಿಂದ ಹೊರಹಾಕಿದರೆ ಈ ವಿಷಯ ತಣ್ಣಗಾಗುವುದು.

ಸೀತೆಯನ್ನು ಸಭೆಗೆ ಕರೆಸಲಾಯಿತು. ಸೀತೆಗೆ ವಿಷಯವನ್ನೆಲ್ಲಾ ತಿಳಿಸುತ್ತಾ ತಕ್ಷಣವೇ ಅಯೋಧ್ಯೆ ಬಿಟ್ಟು ತೆರಳುವಂತೆ ತಿಳಿಸಲಾಯಿತು. ಸೀತೆಯು ರೋಧಿಸುತ್ತಾ, ತಾನು ಪತಿವ್ರತೆ ಎಂದೂ, ರಾವಣನು ತನ್ನನ್ನು ಮುಟ್ಟಿಲ್ಲವೆಂದೂ ತಿಳಿಸಿದಳು. ಏಕೆಂದರೆ ರಾವಣನಿಗೆ ಋಷಿಯ ಶಾಪವಿತ್ತು. ನೀನೇನಾದರೂ ಪರಸ್ತ್ರೀಯನ್ನು ಬಲವಂತವಾಗಿ ಬಲಾತ್ಕಾರ ಮಾಡಿದರೆ ತಕ್ಷಣವೇ ನಿನ್ನ ಮೃತ್ಯುವಾಗುವುದು. ಆ ಸ್ತ್ರೀಯು ತನ್ನ ಒಪ್ಪಿಗೆಯ ಮೇರೆಗೆ ಅವಳನ್ನು ಕೂಡಿದರೆ ಯಾವುದೇ ಅಪಾಯವಿಲ್ಲ ಎಂಬ ವಿಷಯ ರಾವಣನಿಗೆ ತಿಳಿದಿದ್ದರಿಂದ ಅವನು ಬಲವಂತವಾಗಿ ಸೀತೆಯನ್ನು ಮುಟ್ಟುವ ಹಾಗಿರಲಿಲ್ಲ, ಹಾಗಾಗಿ ಸೀತೆ ಪತಿವ್ರತೆಯಾಗೇ ಉಳಿದಿದ್ದಳು. ಈ ವಿಷಯವನ್ನು ರಾಮನಿಗೆ ತಿಳಿಸಿದರೂ ರಾಮನು ಒಪ್ಪಲು ಸಿದ್ಧವಾಗಿರಲಿಲ್ಲ. ಹೇ ಪ್ರಭು ನಾನು ಗರ್ಭವತಿ, ಈ ಸ್ಥಿತಿಯಲ್ಲಿ ಎಲ್ಲಿ ಹೋಗಲಿ? ರಾವಣನಂಥಹ ವ್ಯಕ್ತಿಗಳ ಕೊರತೆ ಇಲ್ಲ. ರಾಮನು ಆದೇಶ ನೀಡಿ ಸಭೆ ತ್ಯಜಿಸಿ, ನಾನು ನಿಂದನೆಗೆ ಪಾತ್ರ ಆಗಲಾರನು ಎಂದು ಹೇಳಿ ಹೋದನು. ಅಯೋಧ್ಯೆಗೆ ಕಳಂಕ ತಗಲುವುದೆಂಬ ಕಾರಣಕ್ಕೆ ಸೀತೆಯನ್ನು ಅಯೋಧ್ಯೆ ಬಿಟ್ಟು ತೆರಳುವಂತೆ ಸೂಚಿಸಿದನು. ಸೀತೆಗೆ ಭೂಮಿ ಬಾಯಿ ಬಿಟ್ಟು ನುಂಗುತ್ತಿರುವಂತೆ ಆಯಿತು. ಪ್ರಪಂಚದಲ್ಲಿ ಕೆಲವೇ ದಿನಗಳ ಜೀವನ ಉಳಿದಂತಾಯ್ತು.

ಸೀತೆ ಅಯೋಧ್ಯೆ ಬಿಟ್ಟು ಹೊರಟಳು. ಹೋಗುವಾಗ ತಿರುಗಿ ತಿರುಗಿ ತನ್ನ ಪತಿಯನ್ನು ಹಾಗೂ ಅರಮನೆಯನ್ನು ನೋಡುತ್ತಾ ಹೊರಟಳು. ಕಾಡು ಮೇಡನ್ನು ಅಲೆಯುತ್ತಾ ಋಷಿ ವಾಲ್ಮೀಕಿಯ ಆಶ್ರಮದ ಬಳಿ ಬಂದಳು. ಬೇಸಿಗೆಯ ಬಿಸಿಲು, ಗರ್ಭವತಿ ಬೇರೆ, ಬಳಲಿ ಬೆಂಡಾಗುತ್ತಾ, ಕೊನೆಗೆ ಪ್ರಜ್ಞೆ ತಪ್ಪಿ ಬಿದ್ದುಹೋದಳು. ಋಷಿ ವಾಲ್ಮೀಕಿ ಸ್ನಾನಕ್ಕಾಗಿ ಆಶ್ರಮದಿಂದ ಹೊರಟರು. ಮುಂದೆ ಯುವತಿ ಗರ್ಭಾವಸ್ಥೆಯಲ್ಲಿ ಮಗಳು ಬಿದ್ದು ಬಿಟ್ಟಿದ್ದಾಳೆಂದು ತಿಳಿದು, ತಮ್ಮ ಆಶ್ರಮದಿಂದ ಔಷಧಿ ತಂದು ಕುಡಸಿ, ನೀರನ್ನು ತಂದು ಮುಖಕ್ಕೆ ಸಿಂಪಡಿಸಿದರು. ಸೀತೆಗೆ ಎಚ್ಚರವಾಯಿತು. ನೀನ್ಯಾರು ಎಂದು ವಾಲ್ಮೀಕಿ ಕೇಳಿದಾಗ ನನ್ನ ಕೆಳಗೆ ಭೂಮಿ ಇದೆ, ಮೇಲೆ ಆಕಾಶವಿದೆ, ಇದಕ್ಕಿಂತ ಹೆಚ್ಚೇನು ಹೇಳಲಾರೆನೆಂದಳು. ವಾಲ್ಮೀಕಿಯು ದಯಾಳುವಾದ್ದರಿಂದ ಹೇಳಿದ, ಮಗಳೇ ಪ್ರಪಂಚವಂತು ಸ್ವಾರ್ಥದ್ದು ಧನ್ಯವಾದ ಮಾಡು ಆ ಪರಮೇಶ್ವರನ ನೀನು ನನ್ನ ಆಶ್ರಮಕ್ಕೆ ಬಂದಿದ್ದಕ್ಕೆ ಮಗಳೇ ನನ್ನನ್ನು ನಿನ್ನ ತಂದೆಯೆಂದು ತಿಳಿ ಮತ್ತು ಇಲ್ಲೇ ಇರು. ಸೀತೆಯು ಋಷಿ ವಾಲ್ಮೀಕಿಯ ಆಶ್ರಮದಲ್ಲಿ ಇರಲಾರಂಭಿಸಿದಳು. ಋಷಿ ಕೂಡಾ ಏನು ಮುಂದೆ ಕೇಳಲಿಲ್ಲ.

ಪರಮೇಶ್ವರ ಕಬೀರರು ತ್ರೇತಾಯುಗದಲ್ಲಿ ಋಷಿ ಮುನೀಂದ್ರರ ರೂಪದಲ್ಲಿ ಲೀಲೆಗಳನ್ನು ಮಾಡಲು ಬಂದಿದ್ದರು. ಒಂದು ಬಾರಿ ಅವರು ಹನುಮಂತನನ್ನು ಭೇಟಿಯಾದರು. 'ಸತ್ಯ ಸಾಹೇಬ್' ಹೇಳಿದರು, ಹನುಮಂತನು ರಾಮ-ರಾಮ ಹೇಳಿದ ಹಾಗು ಎದ್ದು ನಿಂತು ಸತ್ಕರಿಸಿದನು, ಹಾಗು ಒಂದು ಕಲ್ಲಿನ ಮೇಲೆ ಸ್ವತಃ ಕುಳಿತುಕೊಂಡನು. ಇನ್ನೊಂದು ಬಂಡೆಯ ಮೇಲೆ ಋಷಿಗೆ ಕುಳಿತುಕೊಳ್ಳಲು ಆಗ್ರಹಿಸಿದನು. ಹನುಮಂತನು ಋಷಿಯನ್ನು ಗುರುತಿಸಲು ಪ್ರಯತ್ನಿಸಿದನು. ಆಗ ಋಷಿ ಹೇಳಿದರು, ಏನು ಯೋಚಿಸುತ್ತಿರುವೆ ಹನುಮಂತ? ನಾನು ಅದೇ ಋಷಿ, ನನ್ನ ಆಶ್ರಮದಲ್ಲಿ ಕೋತಿ ಸೀತೆಯ ಬಳೆಯನ್ನು ಮಡಿಕೆಯಲ್ಲಿ ಹಾಕಿತ್ತು. ಅದರಲ್ಲಿ ಬೇರೆ ಬಳೆ ಕೂಡ ಅದರಂತೆ ಇದ್ದವು. "ಹೇ ಹನುಮಂತ, ಆ ಬಳೆ ಹೇಗಿತ್ತು? ಹನುಮಂತನಿಗೆ ಗುರುತಿಸಲು ತಡವಾಗಲಿಲ್ಲ, ಋಷಿಗಳಿಗೆ ಪುನಃ ಪ್ರಣಾಮ ಮಾಡಿದನು. ಹೇ ಋಷಿಗಳೇ ಇಲ್ಲಿ ಹೇಗೆ ಬರುವುದಾಯ್ತು? ಆಗ ಪರಮೇಶ್ವರ ಕಬೀರರು (ಮುನೀಂದ್ರ ಋಷಿ ರೂಪದಲ್ಲಿ) ಹನುಮಂತನಿಗೆ ಹೀಗೆಂದರು. "ಹೇ ಪವನಪುತ್ರ! ನಾನು ನಿನಗೆ ಭಕ್ತಿ ಜ್ಞಾನವನ್ನು ನೀಡಲು ಬಂದಿರುವೆ. ನೀನು ದಶರಥನ ಪುತ್ರ ರಾಮಚಂದ್ರನನ್ನು ಪೂರ್ಣ ಪರಮಾತ್ಮನೆಂದು ಪೂಜಿಸುತ್ತಿರುವೆ. ಯಾರ ಜನನ-ಮರಣವಾಗುವುದೋ, ಅವನು ಪೂರ್ಣ ಪರಮಾತ್ಮನಲ್ಲ. ಪೂರ್ಣ ಪರಮಾತ್ಮ ಅವಿನಾಶಿ ಆಗಿರುತ್ತಾನೆ." ಹನುಮಂತನು, "ಹೇ ಋಷಿವರ್ಯರೇ, ನಿಮ್ಮ ಮಾತುಗಳಿಂದ ನನಗೆ ನೋವಾಗುತ್ತಿದೆ. ನನ್ನ ಭಾವನೆಗಳಿಗೆ ಧಕ್ಕೆ ಉಂಟಾಗುತ್ತಿದೆ. ಬೇರೆ ಏನಾದರೂ ವಿಷಯವಿದ್ದರೆ ಹೇಳಿ" ಎಂದನು. ಯಾರಾದರೂ ತಪ್ಪು

ದಾರಿಯಲ್ಲಿ ಹೋಗುತ್ತಿದ್ದರೆ, ಅದೇ ರಸ್ತೆಯನ್ನು ಸರಿಯಾದ ದಾರಿಯೆಂದು ತಿಳಿದು ಮುಂದೆ ಸಾಗುತ್ತಿರುವನು, ಅದು ದರೋಡೆ ಕೋರರ ಕಡೆ ಹೋಗುವ ದಾರಿ. ಯಾರಾದರೂ ಸಜ್ಜನರು ಅವನಿಗೆ ನೀನು ತಪ್ಪುದಾರಿಯಲ್ಲಿ ನಡೆಯುತ್ತಿರುವೆ, ಮುಂದೆ ದರೋಡೆ ಕೋರರಿದ್ದಾರೆ ಎಂದು ತಿಳಿಸಿದರೂ, ಅವನು ಆ ಸಜ್ಜನ ವ್ಯಕ್ತಿಗೆ ನನ್ನ ಭಾವನೆಗಳಿಗೆ ಧಕ್ಕೆ ಬರುವುದೆಂದು ಹೇಳಿದರೆ ಏನು ಮಾಡುವುದು?" ಆಗ ಹನುಮಂತನು ಸುಮ್ಮನಾದನು. ಆದರೆ ಅವರು ಹೇಳಿದ್ದೆಲ್ಲಾ ಸತ್ಯವೆಂದು ಅವರ ಮುಗುಳ್ನಗೆ ಹೇಳುತ್ತಿತ್ತು. ಹನುಮಂತ ಶಾಂತವಾಗಿರುವುದನ್ನ ನೋಡಿ ಪರಮೇಶ್ವರರು ಹೇಳಿದರು "ಶ್ರೀ ರಾಮಚಂದ್ರ ಶ್ರೀ ವಿಷ್ಣುವಿನ ಅವತಾರ. ಶ್ರೀ ಬಹ್ಮಾ, ವಿಷ್ಣು, ಮಹೇಶ್ವರರ ತಂದೆ ಕಾಲಬ್ರಹ್ಮನು. ಅವನನ್ನೇ ಜ್ಯೋತಿ ನಿರಂಜನ್ ಎಂದೂ ಕರೆಯುತ್ತಾರೆ. ಕಾಲನಿಗೆ ಅವನ ತಪ್ಪಿಗೆ ಶಿಕ್ಷೆಯಾಗಿ ಶಾಪ ಕೊಡಲಾಗಿದೆ, ಅದೇನೆಂದರೆ ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳನ್ನ ಪ್ರತಿದಿನವು ತಿನ್ನುವನು. ಒಂದು ಕಾಲು ಲಕ್ಷ ಶರೀರಧಾರಿ ಜೀವಾತ್ಮಗಳನ್ನ ಉತ್ಪತ್ತಿ ಮಾಡುವನು. ಇದೇ ಕಾರಣಕ್ಕೆ ಈ ಮೂವರೂ ಪುತ್ರರನ್ನು ಮೂರು ವಿಭಾಗಗಳಿಗೆ ಮುಖಂಡನನ್ನಾಗಿ ಮಾಡಲಾಗಿದೆ. ಬ್ರಹ್ಮಾನು ರಜಗುಣದ. ಅವನ ಪ್ರಭಾವದಿಂದ ಎಲ್ಲಾ ಜೀವಾತ್ಮಗಳು ಪ್ರೇರಿತಗೊಂಡು ಸಂತಾನೋತ್ಪತ್ತಿ ಮಾಡುತ್ತವೆ ಆ ಕಾರಣಕ್ಕಾಗಿ ಬ್ರಹ್ಮಾನನ್ನು ತಪ್ಪಾಗಿ ಸೃಷ್ಟಿಕರ್ತ ಎನ್ನಲಾಗಿದೆ. ಆದರೆ ಸೃಷ್ಟಿಕರ್ತನಂತು ಪೂರ್ಣ ಪರಮಾತ್ಮನು.

ವಿಷ್ಣುವು ಸತಗುಣನು. ಕಾಲಬ್ರಹ್ಮನು ತನ್ನ ಎರಡನೇ ಪುತ್ರನನ್ನು ಕರ್ಮಾನುಸಾರ ಪಾಲನೆ ಮಾಡುವ ವಿಭಾಗಕ್ಕೆ ನೇಮಿಸಿದ್ದಾನೆ. ಕಾಲಬ್ರಹ್ಮನು ತನ್ನ ಮೂರನೇ ಮಗನಾದ ತಮಗುಣ ಶಿವನಿಗೆ ಒಂದು ಲಕ್ಷ ಮಾನವ ಶರೀರಧಾರಿ ಜೀವಾತ್ಮಗಳನ್ನು ಕೊಂದು ಅವನ ಬಳಿ ಕಳುಹಿಸುವ ವಿಭಾಗಕ್ಕೆ ನೇಮಿಸಿದ್ದಾನೆ. ಅವನು ಸ್ವಯಂ ಅವ್ಯಕ್ತ(ಗುಪ್ತ)ನಾಗಿ ಇರುತ್ತಾನೆ. ನೀನು ನೋಡುತ್ತಿರುವೆ ಹಾಗೆ ಇಲ್ಲಿ ಯಾರೂ ಅಮರರಲ್ಲ. ದೇವತೆಗಳೂ ಸಾವನ್ನಪ್ಪುವರು. ಬಹ್ಮಾ, ವಿಷ್ಣು, ಮಹೇಶ್ವರರೂ ಸಹ ಹುಟ್ಟುತ್ತಾರೆ, ಸಾಯುತ್ತಾರೆ. ಎಲ್ಲರೂ ಬದುಕುತ್ತಾರೆ, ಎಲ್ಲರಿಗೂ ವೃದ್ಧಾಪ್ಯವು ಬರುತ್ತದೆ. ಒಂದು ಲೋಕವಿದೆ. ಅಲ್ಲಿ ವೃದ್ಧಾಪ್ಯವೂ ಇಲ್ಲ. ಸಾವೂ ಇಲ್ಲ, ಅಲ್ಲಿ ಯಾವ ರಾವಣ ಯಾರ ಪತ್ನಿಯನ್ನೂ ಅಪಹರಿಸುವುದಿಲ್ಲ. ಸೀತೆಯೊಬ್ಬಳನ್ನು ಬಿಡಿಸಿ ತರಲು ನಡೆದ ರಾಮ–ರಾವಣ ಯುದ್ಧದಲ್ಲಿ ಎಷ್ಟೊಂದು ಸೈನಿಕರು ಹಾಗು ಪ್ರಾಣಿಗಳು ನಿಮ್ಮ ಕಣ್ಮುಂದೆಯೇ ಸಾವನ್ನಪ್ಪಿದರು! ನೀನಂತೂ ರಾಮಚಂದ್ರನಿಗಾಗಿ ನಿನ್ನ ಪ್ರಾಣವನ್ನು ಒತ್ತೆ ಇಟ್ಟು ಇಡೀ ಲಂಕೆಯನ್ನೇ ಸುಟ್ಟುಹಾಕಿದೆ. ರಾವಣನ ಸಹೋದರ ಅಹಿರಾವಣನು ಪಾತಾಳ ಲೋಕದ ರಾಜನಾಗಿದ್ದನು. ಅವನು ರಾಮಲಕ್ಷಣರನ್ನು ಅಪಹರಿಸಿ ಪಾತಾಳ ಲೋಕಕ್ಕೆ ಎತ್ತಿಕೊಂಡು ಹೋಗಿದ್ದನು. ಅವರ ಬಲಿ ಕೊಡುವನಿದ್ದನು. ನೀನು ಅಲ್ಲಿಗೂ ತೆರಳಿ ಅವರಿಬ್ಬರನ್ನು ಜೀವಂತ ಕರೆತಂದೆ. ಈಗ ನೀನೇ ಹೇಳು. ಅವರು ಪರಮಾತ್ಮರೇ? ಯುದ್ಧದಲ್ಲಿ ರಾಮ ಲಕ್ಷ್ಮಣರನ್ನು ನಾಗಪಾಶವು ಬಂಧಿಸಿತ್ತು. ಒಂದೇ ನಿಮಿಷದಲ್ಲಿ ರಾವಣ ಸೈನ್ಯವು ಅವರನ್ನು ಕೊಲ್ಲಬಹುದಿತ್ತು. ಆದರೆ ಅಷ್ಟರಲ್ಲಿ ಗರುಡನನ್ನು ಕರೆಯಲಾಯಿತು. ಗರುಡನು ನಾಗಪಾಶವನ್ನು ಕತ್ತರಿಸಿದನು. ಆಗ ಎಲ್ಲರೂ ಬಂಧನದಿಂದ ಮುಕ್ತರಾದರು. ಪರಮಾತ್ಮನು ಇಷ್ಟು ದುರ್ಬಲರಾದರೆ, ತನ್ನ ಬಂಧನವೇ ಕತ್ತರಿಸಲಾಗದಿದ್ದರೆ ಭಕ್ತನ ಗತಿಯೇನು? ಯೋಚಿಸಿ ನೋಡು.

ಕಾಟೇ ಬಂದತ್ ವಿಪತ್ ಮೇ, ಕಠಿಣ್ ಕಿಯೋ ಸಂಗ್ರಾಮ್ ।
ಚಿನ್ಹೋ ರೆ ನರ್ ಪ್ರಾಣಿಯೋ, ಗರುಡ್ ಬಡೋ ಕೇ ರಾಮ್ ॥

ಶಬ್ದಾರ್ಥ:– ಈ ವಾಣಿಯ ಶಬ್ದಾರ್ಥವನ್ನು ಮೇಲೆ ತಿಳಿಸಲಾಗಿದೆ.

"ಹೇ ಋಷಿಗಳೇ, ಸಮುದ್ರದ ಮೇಲೆ ಸೇತುವೆ ಕಟ್ಟುವುದು ಸಾಮಾನ್ಯವೇ? ಸಾಮಾನ್ಯ ಮನುಷ್ಯ ಮಾಡುವ ಕೆಲಸವೇ? ಪರಮಾತ್ಮನಲ್ಲದೆ ಮತ್ಯಾರು ಮಾಡಲು ಸಾಧ್ಯ?" ಎಂದು ಹನುಮಂತನು ಪ್ರಶ್ನಿಸಿದನು.

ಸಮಂದರ್ ಪಾಂಟಿ ಲಂಕಾ ಗಯೋ, ಸೀತಾ ಕೇ ಭರ್ತಾರ್ ।

ಅಗಸ್ತ್ ಋಷಿ ಸಾತೋಂ ಪಿಯೇ, ಇನ್‌ಮೇಂ ಕೌನ್ ಕರ್‌ತಾರ್ ॥

ಶಬ್ದಾರ್ಥ:– “ಸಮುದ್ರದ ಮೇಲೆ ಸೇತುವೆ ಕಟ್ಟಿದ ಮಾತ್ರಕ್ಕೆ ನೀನು ಶ್ರೀರಾಮಚಂದ್ರನನ್ನು ಪರಮಾತ್ಮ ಎಂದು ಕರೆಯುವುದಾದರೆ, ಅಗಸ್ತ್ಯ ಋಷಿಗಳು ಏಳು ಸಮುದ್ರಗಳನ್ನೇ ಕುಡಿದಿದ್ದರು. ಹಾಗಾದರೆ ಇವರಲ್ಲಿ ಪರಮಾತ್ಮನು ಯಾರು?”

ಋಷಿ ಮುನೀಂದ್ರರು ಹೇಳಿದರು “ನಿನಗೆ ನೆನಪಿದೆಯಾ? ಒಬ್ಬರು ಋಷಿ ಬಂದು, ಒಂದು ಪರ್ವತದ ಕಲ್ಲುಗಳನ್ನು ತನ್ನ ಕೋಲಿನಿಂದ ರೇಖೆ ಎಳೆದು ಹಗುರವಾಗಿಸಿದ್ದರು. ಆಗ ಕಲ್ಲುಗಳು ಮುಳುಗಲಿಲ್ಲ, ಆಗ ಸೇತುವೆ ನಿರ್ಮಾಣವಾಯ್ತು. ರಾಮಚಂದ್ರನಂತೂ ಮೂರು ದಿನಗಳಿಂದ ದಾರಿಗಾಗಿ ಕಾಯುತ್ತಿದ್ದನು” ಸಮುದ್ರವೇ ನಲ್–ನೀಲ್ ರ ಬಗ್ಗೆ ಹೇಳಿತ್ತು. ಆಗ ಹನುಮಂತನು ಹೇಳಿದ, “ಅವರಂತು ವಿಶ್ವಕರ್ಮ ರಾಮಚಂದ್ರನ ಕರೆಗೆ ವೇಷ ಬದಲಾಯಿಸಿಕೊಂಡು ಬಂದಿದ್ದರು”. ಆಗ ಪರಮೇಶ್ವರ ಕಬೀರರೆಂದರು “ವಿಶ್ವಕರ್ಮನು ಸೇತುವೆಯ ನಿರ್ಮಾಣ ಮಾಡಬಲ್ಲನು ಆದರೆ ನೀರಿನ ಮೇಲೆ ಕಲ್ಲುಗಳನ್ನು ತೇಲಿಸಲು ಸಾಧ್ಯವಿಲ್ಲ, ನಲ್–ನೀಲ್ ನ ಬಳಿ ಶಕ್ತಿ ಇತ್ತು. ಅವರ ಮೂಲಕ ನೀರಿನಲ್ಲಿ ಹಾಕಿದ ಪ್ರತಿಯೊಂದು ವಸ್ತು ತೇಲುತ್ತಿತ್ತು. ಆ ದಿನ ಅವರಲ್ಲಿ ಅಹಂಕಾರ ಬಂತು. ಅದಕ್ಕಾಗಿ ಅವರ ಶಕ್ತಿಯೆಲ್ಲಾ ಸಮಾಪ್ತವಾಗಿತ್ತು. ಆ ಆಶೀರ್ವಾದ ಅವರಿಗೆ ನಾನೇ ಕೊಟ್ಟಿದ್ದೆ” ಎಂದರು. ಆಗ ಹನುಮಂತನು, “ಹಾಗಾದರೆ ನೀವು ಋಷಿ ಮುನೀಂದ್ರರೇ?” ಎಂದು ಕೇಳಿದನು. ಆಗ ಪರಮೇಶ್ವರರೆಂದರು, “ಹೌದು, ನೋಡು ಹನುಮಂತ, ನೀನು ನಿನ್ನ ಸ್ವಾಮಿಗಾಗಿ ಏನೆಲ್ಲಾ ಮಾಡಿದೆ! ಆದರೆ ಅದಕ್ಕೆ ಬದಲಾಗಿ ಸೀತೆಯು ನಿನಗೆ ಅನ್ನಬಾರದ್ದನ್ನೆಲ್ಲಾ ಅಂದಳು, ನಿನ್ನನ್ನು ಊರು ಬಿಟ್ಟು ಹೋಗು ಎಂದಳು. ಆ ಸಮಯದಲ್ಲಿ ಶ್ರೀರಾಮನೂ ಅಲ್ಲಿ ಹಾಜರಿದ್ದರಲ್ಲವೇ? ಹಾಗೆಲ್ಲಾ ಹೇಳಬೇಡವೆಂದು ಸೀತೆಗೆ ಒಮ್ಮೆಯೂ ಹೇಳಲಿಲ್ಲ.” ಹನುಮಂತನಿಗೆ ಒಳಗೊಳಗೇ ಹೌದು ಎನ್ನಿಸತೊಡಗಿತು. ಆದರೆ ಮೇಲಿನಿಂದ ಹಾಗೆಲ್ಲಾ ಯಾರ ಬಗ್ಗೆಯೂ ಯೋಚಿಸಬಾರದು ಎಂದು ಋಷಿಗೆ ಹೇಳಿದನು. ಆಗ ಮುನೀಂದ್ರರೆಂದರು, “ಸತ್ಯ ಹೇಳಿದರೆ ಅದು ಆಲೋಚನೆ ಹೇಗಾಗುತ್ತದೆ? ರಾಮಚಂದ್ರ ಹಾಗೂ ಸೀತೆಯಲ್ಲಿ ಒಳ್ಳೆಯ ಮನುಷ್ಯರ ಗುಣಗಳು ಇದ್ದಿದ್ದರೂ ಜೀವನ ಪರ್ಯಂತ ನಿನ್ನ ಉಪಕಾರ ತಿಳಿದು ಹಾಗೂ ತಮ್ಮ ಸೇವಕನನ್ನಾಗಿ ಇಟ್ಟುಕೊಳ್ಳುತ್ತಿದ್ದರು. ನೀನು ಅವರಿಲ್ಲದೆ ಬದುಕೇ ಇಲ್ಲ ಎನ್ನುವೆ. ಕೇಳು ಹನುಮಂತ, ನಿನ್ನ ಜೊತೆ ಹಾಗೆ ನಡೆದುಕೊಂಡ ಕಾರಣ ಅದರ ಫಲ ರಾಮ ಮತ್ತು ಸೀತೆಗೆ ಸಿಕ್ಕಿದೆ. ಕೆಲವು ವರ್ಷಗಳ ನಂತರ ರಾಮನು ಸೀತೆಯನ್ನು ಮನೆಯಿಂದ ಹೊರಗೆ ಕಳುಹಿಸಿದನು. ಆ ಸಮಯದಲ್ಲಿ ಅವಳು ಗರ್ಭವತಿಯಾಗಿದ್ದಳು” ಎಂದರು. ಇದನ್ನು ಕೇಳಿ ಹನುಮಂತನ ಕಣ್ಣಿಂದ ನೀರು ಸುರಿಯಲಾರಂಭಿಸಿತು. ಅವನು ಋಷಿಯ ಕಾಲಿಗೆ ಬಿದ್ದನು. ಏನನ್ನೂ ಹೇಳಲಿಲ್ಲ. ಅಯೋಧ್ಯೆಯ ಜನರು ಎರಡು ವರ್ಷ ದಸರಾ ಹಾಗೂ ದೀಪಾವಳಿಯನ್ನು ಆಚರಿಸಿದ್ದರು. ಅದರ ನಂತರ ಆಚರಿಸಲಿಲ್ಲ. ಏಕೆಂದರೆ ಯಾವ ದೇವಿಗಾಗಿ ರಾವಣನನ್ನು ಕೊಲ್ಲಲಾಯಿತೋ, ಇಂದು ಸೀತೆಯು ಎಷ್ಟು ರಾವಣರಿಂದ ಕಷ್ಟವನ್ನು ಸಹಿಸಬೇಕಾಗುವುದೋ? ದೀಪಗಳ ಸಾಲನ್ನು ಸಂತೋಷಕ್ಕಾಗಿ ಇಡಲಾಗುತ್ತದೆ.

ರಾಜ ರಾಮಚಂದ್ರ ಹಾಗೂ ರಾಣಿ ಸೀತೆಯು ಬೇರೆ–ಬೇರೆ ಆಗಿದ್ದಾರೆ. ದೀಪದ ಸಾಲು ರಾಜನಿಗಾಗಲೀ, ಪ್ರಜೆಗಳಿಗಾಗಲೀ ಸಂತೋಷ ತರುವುದಿಲ್ಲ. ಆದ್ದರಿಂದ ಅದೇ ಸಮಯ ದೀಪಾವಳಿಯ ಉತ್ಸವ ಆಚರಿಸಬಾರದು ಎಂದು ಅದರ ಆಚರಣೆಯನ್ನು ನಿಲ್ಲಿಸಲಾಗಿತ್ತು. ಎರಡು ವರ್ಷ ಆಚರಿಸಿದ ಆಧಾರದ ಮೇಲೆ ಮುಗ್ಧ ಜನರು ಇದನ್ನು ಆಚರಿಸುತ್ತಿದ್ದಾರೆ. ಇದೇ ರೀತಿ ದಸರ ಹಾಗು ರಾವಣ ದಹನ ಪರಂಪರೆ ನಡೆಯುತ್ತಾ ಬಂತು. ಒಂದೊಮ್ಮೆ ಯಾರದೊ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೆಆ ಕುಟುಂಬದವರು ಹಾಗು ಸಂಬಂಧಿಕರು ಯಾವುದೇ ಹಬ್ಬ ಆಚರಿಸುವುದಿಲ್ಲ. ಆಗ ಹನುಮಂತನೆಂದನು, “ಪ್ರಭು, ಪರಮೇಶ್ವರನ ಬಗ್ಗೆ

ಮಾತನಾಡಿ", ಆಗ ಪರಮೇಶ್ವರ ಕಬೀರರು ಸೃಷ್ಟಿಯ ರಚನೆಯ ಬಗ್ಗೆ ಹೇಳಿದರು. ಈ ಸತ್ಯಕತೆಯನ್ನು ಕೇಳಿದ ಹನುಮಂತನು ಗದ್ಗದಿತನಾದನು. ಸತ್ಯಲೋಕವನ್ನು ನೋಡುವ ಇಚ್ಛೆ ವ್ಯಕ್ತಪಡಿಸಿದನು. ಪರಮೇಶ್ವರರು ಆಕಾಶಕ್ಕೆ ಹಾರಿದರು. ಹನುಮಂತನು ನೋಡ ನೋಡುತ್ತಿದ್ದಂತೆಯೇ ಅವರು ಅಂತರ್ಧ್ಯಾನರಾದರು. ಈ ಋಷಿ ಎಲ್ಲಿ ಸಿಗಬಹುದೆಂದು ಹನುಮಂತನಿಗೆ ಚಿಂತೆಯಾಯಿತು. ಇದ್ದಕ್ಕಿದ್ದಂತೆ ಆಕಾಶದಲ್ಲಿ ವಿಶೇಷವಾದ ಬೆಳಕು ಕಾಣಿಸಿತು. ಹನುಮಂತನಿಗೆ ದಿವ್ಯದೃಷ್ಟಿ ನೀಡಿ ಸತ್ಯಲೋಕವನ್ನು ತೋರಿಸಿದರು. ಋಷಿ ಮುನೀಂದ್ರರು ಸಿಂಹಾಸನದ ಮೇಲೆ ಕುಳಿತಿರುವುದು ಕಾಣಿಸಿತು. ಅವರ ಶರೀರದಿಂದ ವಿಶೇಷವಾದ ಪ್ರಕಾಶ ಹೊರಸೂಸುತ್ತಿತ್ತು. ಅವರ ತಲೆಯ ಮೇಲೆ ಕಿರೀಟವಿತ್ತು ಹಾಗು ರಾಜರಂತೆ ಛತ್ರವಿತ್ತು. ಕೊಂಚ ಹೊತ್ತು ಆ ದೃಶ್ಯವನ್ನು ತೋರಿಸಿ ದಿವ್ಯದೃಷ್ಟಿಯನ್ನು ಕೊನೆಗೊಳಿಸಿ, ಮುನೀಂದ್ರರು ಕೆಳಗೆ ಬಂದರು. ಹನುಮಂತನಿಗೆ ಇವರೇ ಪರಮೇಶ್ವರ ಎಂಬ ನಂಬಿಕೆ ಬಂದಿತು. ಸತ್ಯಲೋಕವು ಸುಖದ ಸ್ಥಾನ. ಆಗ ಪರಮೇಶ್ವರ ಕಬೀರರಿಂದ ದೀಕ್ಷೆ ಪಡೆದುಕೊಂಡು ತಮ್ಮ ಜೀವನವನ್ನು ಧನ್ಯಮಾಡಿಕೊಂಡನು. ಮುಕ್ತಿಗೆ ಅರ್ಹನಾದನು. ಈ ರೀತಿ ಪವಿತ್ರ ಆತ್ಮ, ಪರಮಾರ್ಥಿ ಸ್ವಭಾವದ ಹನುಮಂತನಿಗೆ ಪ್ರಪಂಚ ಹಾಗು ಕಾಲ ಪರೋಪಕಾರದ ಫಲ ನೀಡುವುದಿಲ್ಲ. ಆದರೆ ಪರಮೇಶ್ವರರು ಇಂಥಾ ಆತ್ಮಗಳಿಗೆ ಅವಶ್ಯವಾಗಿ ಆಶ್ರಯ ನೀಡುತ್ತಾರೆ. ಏಕೆಂದರೆ ಇಂಥ ಆತ್ಮಗಳೇ ಪರಮ ಭಕ್ತರಾಗಿ ಭಕ್ತಿ ಮಾಡುತ್ತಾರೆ ಮತ್ತು ಮೋಕ್ಷ ಪಡೆಯುತ್ತಾರೆ, ಪರಮಾರ್ಥಿಗೆ ದ್ರೋಹ ಮಾಡುವ ಪ್ರಪಂಚದ ವ್ಯಕ್ತಿಯ ಇಡೀ ಜೀವನ ಕಷ್ಟದಲ್ಲಿ ಕಳೆಯುತ್ತದೆ.

ಶ್ರೀ ರಾಮಚಂದ್ರನಿಗೆ ಅಂತ್ಯ ಸಮಯದಲ್ಲಿ ತನ್ನ ಮಕ್ಕಳೇ ಆದ ಲವ ಮತ್ತು ಕುಶರಿಂದ ಸೋಲು ಅನುಭವಿಸಬೇಕಾಯಿತು. ಸೀತೆಯು ರಾಮನ ದರ್ಶನ ಮಾಡಲು ಸಹ ಇಚ್ಛಿಸಲಿಲ್ಲ. ನೋಡ ನೋಡುತ್ತಿದ್ದಂತೆ ಅವಳು ಭೂಮಿಯಲ್ಲಿ ಸೇರಿದಳು. ಇದರಿಂದ ದುಃಖಿಗೊಂಡ ರಾಮನು ಅಯೋಧ್ಯೆಯ ಬಳಿ ಹರಿಯುತ್ತಿದ್ದ ಸರಯು ನದಿಗೆ ಹಾರಿ ತನ್ನ ಜೀವನ ಲೀಲೆಯನ್ನು ಜಲ ಸಮಾಧಿಯ ಮೂಲಕ ಅಂತ್ಯಗೊಳಿಸಿದನು. ಪರಮಾರ್ಥಿಯಾದ ಹನುಮಂತನಿಗೆ ದುಃಖಿತರ ಸಹಾಯ ಮಾಡಿದ ಫಲ ಪ್ರಾಪ್ತಿಯಾಯಿತು. ಪರಮಾತ್ಮ ಸ್ವಯಂ ಬಂದು ಮೋಕ್ಷದ ಮಾರ್ಗವನ್ನು ತೋರಿಸಿದರು. ಹನುಮಂತ ಮತ್ತೆ ಮಾನವ ಜೀವನವನ್ನು ಪಡೆಯುವನು. ಆಗ ಪರಮೇಶ್ವರ ಕಬೀರರು ಅವನಿಗೆ ಆಶ್ರಯ ನೀಡಿ ಮುಕ್ತಿ ನೀಡುವರು. ಆ ಆತ್ಮದಲ್ಲಿ ಸತ್ಯಭಕ್ತಿ ಎಂಬ ಬೀಜವನ್ನು ಬಿತ್ತಲಾಗಿದೆ.

## "ನಾವು ಕಾಲನ ಜಾಲದಲ್ಲಿ ಹೇಗೆ ಸಿಲುಕಿಕೊಂಡೆವು?"

ಇದರ ಉತ್ತರವನ್ನು 'ಸೃಷ್ಟಿಯ ರಚನೆ' ಎಂಬ ಅಧ್ಯಾಯದಲ್ಲಿ ನೀಡಲಾಗಿದೆ. ಇದೇ ಪುಸ್ತಕದಲ್ಲಿ ಈ ಅಧ್ಯಾಯವಿದೆ.

## "ಕಾಲನ ಜೊತೆ ಕಬೀರ್ ಪರಮೇಶ್ವರರ ಮಾತು"

ಈಗ ನಾವು ಕಾಲಬ್ರಹ್ಮನ ಲೋಕದಲ್ಲಿ ವಾಸಿಸುತ್ತಿದ್ದೇವೆ. ಆತ್ಮದ ಮೇಲೆ ಸ್ಥೂಲ ಇತ್ಯಾದಿ ಇತ್ಯಾದಿ ಶರೀರವನ್ನು ನಿರ್ಮಿಸಿ ಕಾಲನು ಜೀವಾತ್ಮವನ್ನು ನಿರ್ಮಿಸಿದ್ದಾನೆ. ಇವನು ಜೀವಾತ್ಮವನ್ನು ಭ್ರಮೆಗೊಳಪಡಿಸಿದ್ದಾನೆ. ಆತ್ಮದ ಜನಕನಾದ ಪೂರ್ಣಪರಮಾತ್ಮನನ್ನು ಮರೆಸಿದ್ದಾನೆ. ಸ್ವಯಂ ತನ್ನನ್ನು ಪರಮಾತ್ಮನೆಂದು ಸಿದ್ದಪಡಿಸಿದ್ದಾನೆ. ಪರಮಾತ್ಮನು ದುಃಖಿಯಾಗಬೇಕೆಂದು ಯೋಚಿಸಿ, ಪರಮಾತ್ಮನ ಅಂಶವಾದ ಜೀವಾತ್ಮಗಳನ್ನು ಸತಯಿಸುತ್ತಾನೆ. ಇವನೇ ಮನಸ್ಸಿನ ರೂಪದಲ್ಲಿ ಪ್ರತಿಯೊಂದು ಆತ್ಮದ ಜೊತೆಯಲ್ಲಿರುತ್ತಾನೆ. ತಪ್ಪನ್ನು ಮಾಡಿಸುತ್ತಾನೆ. ಆದರೆ ಶಿಕ್ಷೆಮಾತ್ರ ಜೀವಾತ್ಮ ಅನುಭವಿಸುತ್ತದೆ. ಅಂದರೆ ಮದ್ಯಕುಡಿಯುವುದು, ಇತ್ಯಾದಿ ನಶೆ ವಸ್ತುಗಳ ಚಟ ಬೀಳಿಸುವುದು, ಅತ್ಯಾಚಾರ ಮಾಡಿಸುವುದು ಮತ್ತು ಬೇರೆ ಪಾಪದ ಕೆಲಸಗಳನ್ನು ಮಾಡಿಸುವುದು ಇದನ್ನು ಮನಸ್ಸಿನ ಪ್ರೇರಣೆಯಿಂದ ಕಾಲ ಮಾಡಿಸುತ್ತಾನೆ. ನೀವು ಲೇಖಕ (ಸಂತ ರಾಮ್‌ಪಾಲ್) ನಿಂದ ದೀಕ್ಷೆ ಪಡೆದಾಗ, ಈ ಮನಸ್ಸು

ಸರಿಯಾಗಿ ನಡೆಯುವುದು. ಏಕೆಂದರೆ ಜೀವಾತ್ಮನ ಜೊತೆ ಪರಮಾತ್ಮನ ಶಕ್ತಿ ಇರುತ್ತದೆ. ಆತ್ಮಕ್ಕೆ ತತ್ವಜ್ಞಾನದಿಂದ ವಿವೇಕ ವಾಗುವುದು. ಪರಮಾತ್ಮನ ಶಕ್ತಿಯ ಕಾರಣದಿಂದ ಆತ್ಮ ದೃಢವಾಗುತ್ತದೆ. ಕಾಲಬ್ರಹ್ಮನು ಕಬೀರ ಪರಮಾತ್ಮನಿಗೆ ಮಾತ್ರ ಹೆದರುತ್ತಾನೆ. ಸಂತ ಗರೀಬ್‌ದಾಸರು ಹೇಳಿದ್ದಾರೆ.

ಕಾಲ್ ಡರ್ರೈ ಕರತಾರ್ ಸೆ, ಜಯ್-ಜಯ್-ಜಯ್ ಜಗದೀಶ್ ।
ಜೌರಾ ಜೋಡಿ ಝೂಡ್‌ತಾ, ಪಗ್ ರಜ್ ಡಾರೇ ಶೀಶ್ ॥
ಗರೀಬ್, ಕಾಲ್ ಜೋ ಪೀಸೆ ಪೀಸ್‌ನಾ, ಜೌರಾ ಹೈ ಪನಿಹಾರ್ ।
ಯೆ ದೋ ಅಸಲ್ ಮಜದೂರ್ ಹೈಂ, ಸತಗುರು ಕಬೀರ್ ಕೆ ದರಬಾರ್ ॥

ಭಾವಾರ್ಥ ಸ್ಪಷ್ಟವಾಗಿದೆ. ಪರಮಾತ್ಮ ಕಬೀರರು ಆತ್ಮಗಳನ್ನು ಕಾಲನ ಬಲೆಯಿಂದ ಬಿಡಿಸುವ ಪ್ರಯತ್ನಮಾಡುತ್ತಿದ್ದಾರೆ. ಕಾಲಬ್ರಹ್ಮನು ನಮ್ಮನ್ನು ಆ ಬಲೆಯಲ್ಲಿ ಸಿಕ್ಕಿಸುವ ಪ್ರಯತ್ನ ಮಾಡುತ್ತಾನೆ. ಮುಂದಿನ ದೃಷ್ಟಾಂತದಲ್ಲಿ ಪ್ರತ್ಯಕ್ಷ ಪ್ರಮಾಣ.

ಪರಮೇಶ್ವರನು ಸರ್ವ ಬ್ರಹ್ಮಾಂಡಗಳ ರಚನೆ ಮಾಡಿ, ಸತ್ಯಲೋಕದಲ್ಲಿ ವಿಶ್ರಾಂತಿ ಪಡೆಯತೊಡಗಿದನು. ನಂತರ ನಾವೆಲ್ಲಾ ಕಾಲನ ಬ್ರಹ್ಮಾಂಡದಲ್ಲಿ ಇದ್ದು, ನಾವು ಮಾಡಿದ ಕರ್ಮ ದಂಡ ಅನುಭವಿಸತೊಡಗಿದೆವು ಹಾಗೂ ಬಹಳ ದುಃಖಿಯಾದೆವು. ಸುಖ ಮತ್ತು ಶಾಂತಿಯನ್ನು ಹುಡುಕಲು ಅಲೆದಾಡತೊಡಗಿದೆವು ಹಾಗೂ ನಮ್ಮ ಅಸಲಿ ಮನೆಯಾದ ಸತ್ಯಲೋಕದ ನೆನಪು ಬರತೊಡಗಿತು. ಅಲ್ಲಿಗೆ ಹೋಗಲು ಭಕ್ತಿ ಮಾಡತೊಡಗಿದೆವು. ಕೆಲವರು ನಾಲ್ಕು ವೇದಗಳನ್ನು ಕಂಠಸ್ಥಗೊಳಿಸಿಕೊಂಡರು. ಕೆಲವರು ಉಗ್ರ ತಪಸ್ಸನ್ನಾಚರಿಸಿದರು ಹಾಗು ಹವನ, ಯಜ್ಞ, ಧ್ಯಾನ, ಸಮಾಧಿ ಮುಂತಾದ ಸಾಧನೆಗಳನ್ನು ಪ್ರಾರಂಭಿಸಿದರು. ಆದರೆ ತಮ್ಮ ನಿಜಲೋಕ ಸತ್ಯಲೋಕಕ್ಕೆ ಹೋಗಲಾಗಲಿಲ್ಲ. ಏಕೆಂದರೆ ಮೇಲೆ ತಿಳಿಸಿದ ಕ್ರಮಗಳನ್ನು ಮಾಡುವುದರಿಂದ ಮುಂದಿನ ಜನ್ಮಗಳಲ್ಲಿ ಒಳ್ಳೆಯ ಸಮೃದ್ಧ ಜೀವನವನ್ನು ಪಡೆದು(ಅಂದರೆ ರಾಜ, ಮಹಾರಾಜ, ದೊಡ್ಡ ವ್ಯಾಪಾರಿ, ಅಧಿಕಾರಿ, ದೇವ, ಮಹಾದೇವ, ಸ್ವರ್ಗ ಮಹಾಸ್ವರ್ಗ ಮುಂತಾದವು) ಮರಳಿ ಎಂಭತ್ತನಾಲ್ಕು ಲಕ್ಷ ಯೋನಿಯನ್ನು ಅನುಭವಿಸಲಾರಂಭಿಸಿದರು ಹಾಗೂ ಪರಮಪಿತಾ ಪರಮೇಶ್ವರನಲ್ಲಿ ಪ್ರಾರ್ಥಿಸತೊಡಗಿದರು, "ಹೇ ದಯಾಳು! ನಮಗೆ ಅಸಲಿ ಮನೆಯ ದಾರಿಯನ್ನು ತೋರಿಸು. ನಾವು ಹೃದಯಪೂರ್ವಕವಾಗಿ ನಿಮ್ಮ ಭಕ್ತಿ ಮಾಡುತ್ತೇವೆ. ನೀವೇಕೆ ನಮಗೆ ದರ್ಶನ ಕೊಡುತ್ತಿಲ್ಲ?

ಈ ವೃತ್ತಾಂತವನ್ನು ಪರಮೇಶ್ವರ ಕಬೀರರು ಧರ್ಮದಾಸರಿಗೆ ಹೇಳುತ್ತಾ, "ಧರ್ಮದಾಸರೇ, ಈ ಜೀವಾತ್ಮಗಳ ಕೂಗನ್ನು ಕೇಳಿ ನಾನು ನನ್ನ ಸತ್ಯಲೋಕದಿಂದ ಜೋಗಜಿತ್ ವೇಷಧರಿಸಿ ಕಾಲಲೋಕಕ್ಕೆ ಬಂದೆ. ಕಾಲನ ಅಸಲೀ ಮನೆ, **21**ನೇ ಬ್ರಹ್ಮಾಂಡದಲ್ಲಿ ಅಲ್ಲಿ ಉರಿಯುತ್ತಿರುವ ತಪ್ತಶಿಲೆಯ ಮೇಲೆ ಜೀವಾತ್ಮಗಳನ್ನು ಹುರಿದು ಸೂಕ್ಷ್ಮ ಶರೀರದಿಂದ ಪದಾರ್ಥವನ್ನು ತೆಗೆಯಲಾಗುತ್ತಿತ್ತು. ನಾನು ತಲುಪಿದ ಮೇಲೆ ಆ ಜೀವಾತ್ಮಗಳ ಉರಿ ಶಾಂತವಾಯ್ತು. ಅವರು ನನ್ನನ್ನು ನೋಡಿ ಹೇಳಿದರು, "ಹೇ ಪುರುಷ! ನೀವು ಯಾರು? ನಿಮ್ಮ ದರ್ಶನ ಮಾತ್ರದಿಂದಲೇ ನಮಗೆ ಸುಖ ಮತ್ತು ಶಾಂತಿಯ ಭಾಸವಾಗುತ್ತಿದೆ," ಆಗ ಹೇಳಿದ "ನಾನು ಪರಬ್ರಹ್ಮ ಪರಮೇಶ್ವರ ಕಬೀರನು. ನೀವೆಲ್ಲಾ ಜೀವಾತ್ಮಗಳು ನನ್ನ ಲೋಕದಿಂದ ಬಂದು ಕಾಲಬ್ರಹ್ಮನ ಲೋಕದಲ್ಲಿ ಸಿಲುಕಿ ಕೊಂಡಿರುವಿರಿ. ಈ ಕಾಲನು ಪ್ರತಿದಿನವೂ ಒಂದು ಲಕ್ಷ ಮನುಷ್ಯರ ಸೂಕ್ಷ್ಮ ಶರೀರಗಳಿಂದ ಪದಾರ್ಥವನ್ನು ತೆಗೆದು ತಿನ್ನುತ್ತಾನೆ. ನಂತರ ಶಿಕ್ಷೆ ಅನುಭವಿಸಲು ನಾನಾ ರೀತಿಯ ಯೋನಿಗಳಿಗೆ ಬಿಟ್ಟು ಬಿಡುತ್ತಿದ್ದಾನೆ" ಎಂದೆ. ಆಗ ಆ ಜೀವಾತ್ಮಗಳು ಹೇಳಲಾರಂಭಿಸಿದವು, "ಹೇ ದಯಾಳು ಪರಮೇಶ್ವರ! ನಮ್ಮನ್ನು ಈ ಕಾಲನ ಸೆರೆಮನೆಯಿಂದ ಬಿಡಿಸು." ಆಗ ನಾನೆಂದೆ, "ಈ **21** ಬಹ್ಮಾಂಡಗಳನ್ನ ಕಾಲನು ಮೂರು ಬಾರಿ ತಪಸ್ಸನ್ನಾಚರಿಸಿ ನನ್ನಿಂದ ಪಡೆದು ಕೊಂಡಿದ್ದಾನೆ. ನೀವು ಇಲ್ಲಿ ಉಪಯೋಗಿಸುತ್ತಿರುವಂಥಾ ಎಲ್ಲಾ ವಸ್ತುಗಳು ಕಾಲನದ್ದು. ನೀವೆಲ್ಲಾ ನಿಮ್ಮ ಇಷ್ಟದಂತೆಯೇ ಇಲ್ಲಿ ಸುತ್ತಾಡಲು ಬಂದಿರುವಿರಿ. ಆದ್ದರಿಂದ ಈಗ ನಿಮ್ಮ ಮೇಲೆ ಕಾಲಬ್ರಹ್ಮನ

ಬಹಳ ಋಣವಿದೆ. ನನ್ನ ನಿಜವಾದ ಮಂತ್ರದ ಜಪದಿಂದ ನೀವು ಋಣಮುಕ್ತರಾಗುವಿರಿ. ಎಲ್ಲಿಯವರೆಗೆ ನೀವು ಋಣಮುಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ನೀವು ಕಾಲಬ್ರಹ್ಮನ ಜೈಲಿನಿಂದ ಹೊರಬರಲಾರಿರಿ. ಅದಕ್ಕಾಗಿ ನೀವು ನನ್ನಿಂದ ಉಪದೇಶ ಪಡೆದು ಭಕ್ತಿಮಾಡಬೇಕು ಆಗ ನಾನು ನಿಮ್ಮನ್ನು ಬಿಡಿಸಿಕೊಂಡು ಕರೆದುಕೊಂಡು ಹೋಗುವೆನು". ಈ ಸಂವಾದ ನಡೆಯುತ್ತಿರುವಾಗಲೇ ಕಾಲಬ್ರಹ್ಮನು ಪ್ರತ್ಯಕ್ಷನಾದನು. ಅವನು ಬಹಳ ಕೋಪಗೊಂಡು ನನ್ನ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಿದನು. ನಾನು ನನ್ನ ಶಬ್ದಶಕ್ತಿಯಿಂದ ಅವನನ್ನು ಮೂರ್ಛಿತ ಗೊಳಿಸಿದೆ. ಸ್ವಲ್ಪ ಸಮಯದ ನಂತರ ಅವನಿಗೆ ಎಚ್ಚರವಾಯಿತು. ನನ್ನ ಕಾಲಿನ ಮೇಲೆ ಬಿದ್ದು ಕ್ಷಮೆಯಾಚಿಸಿದನು ಹಾಗೂ ಹೇಳಿದ "ನೀವು ನನಗಿಂತ ದೊಡ್ಡವರು. ನನ್ನ ಮೇಲೆ ದಯೆತೋರಿ ಹಾಗೂ ನನ್ನ ಲೋಕಕ್ಕೆ ಏಕೆ ಬಂದಿರುವಿರಿ ಎಂದು ಹೇಳಿ" ಎಂದನು. ಆಗ ನಾನು ಕಾಲ ಪುರುಷನಿಗೆ ಹೇಳಿದೆ, "ಕೆಲವು ಜೀವಾತ್ಮಗಳು ಭಕ್ತಿ ಮಾಡಿ ತಮ್ಮ ನಿಜವಾದ ಮನೆ ಸತ್ಯಲೋಕಕ್ಕೆ ಮರಳಿ ಹೋಗಲು ಇಚ್ಛಿಸುತ್ತಿವೆ. ಅವುಗಳಿಗೆ ಸತ್ಯ, ಭಕ್ತಿಮಾರ್ಗ ದೊರಕುತ್ತಿಲ್ಲ. ಆದ್ದರಿಂದ ಅವರು ಭಕ್ತಿ ಮಾಡಿದರೂ ಇದೇ ಲೋಕದಲ್ಲಿ ಇದ್ದಾರೆ. ನಾನು ಅವರಿಗೆ ಸತ್ಯ ಭಕ್ತಿಮಾರ್ಗವನ್ನು ತಿಳಿಸಲು ಹಾಗೂ ನಿನ್ನ ರಹಸ್ಯವನ್ನು ತಿಳಿಸಲು ಇಲ್ಲಿಗೆ ಬಂದಿದ್ದೇನೆ. ನೀನು ಕಾಲನು. ಒಂದು ಲಕ್ಷ ಜೀವಾತ್ಮಗಳನ್ನು ತಿನ್ನುತ್ತಿಯಾ ಹಾಗೂ ಒಂದು ಕಾಲು ಲಕ್ಷ ಜೀವಾತ್ಮಗಳನ್ನು ಉತ್ಪತ್ತಿಮಾಡುತ್ತಿಯಾ ಹಾಗೂ ಸ್ವತಃ ಭಗವಂತನಾಗಿ ಕುಳಿತಿದ್ದಿಯಾ. ನಾನು ಇವರಿಗೆ ತಿಳಿಸುವೆ. ನೀವು ಯಾರ ಭಕ್ತಿ ಮಾಡುತ್ತಿರೋ ಅವನು ಭಗವಂತನಲ್ಲ, ಅವನು ಕಾಲ. ಇದನ್ನು ಕೇಳಿದ ತಕ್ಷಣ ಕಾಲಬ್ರಹ್ಮನು ಹೇಳಿದನು. "ಜೀವಾತ್ಮಗಳು ಮರಳಿ ಹೊರಟು ಹೋದರೆ ನನ್ನ ಊಟದಗತಿಯೇನು? ನಾನು ಹಸಿವಿನಿಂದ ಸತ್ತು ಹೋಗುವೆ. ಮೂರೂ ಯುಗಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಜೀವಾತ್ಮಗಳನ್ನು ಕರೆದುಕೊಂಡು ಹೋಗಿ ಹಾಗೂ ನಾನು ಕಾಲನು ಎಲ್ಲರನ್ನು ತಿನ್ನುತ್ತೇನೆ ಎಂದು ಹೇಳಬೇಡಿ. ಕಲಿಯುಗದಲ್ಲಿ ಎಷ್ಟಾದ್ರು ಜೀವಾತ್ಮಗಳನ್ನು ಕರೆದುಕೊಂಡು ಹೋಗಿ, ಇದೇ ನನ್ನ ಪ್ರಾರ್ಥನೆ ಎಂದು ಕಾಲನು ನನ್ನಿಂದ ವಚನ ಪಡೆದುಕೊಂಡನು." ನಂತರ ಕಬೀರರು ಧರ್ಮದಾಸನಿಗೆ ತಿಳಿಸುತ್ತಾ ಹೀಗೆಂದರು. "ಸತ್ಯಯುಗ, ತ್ರೇತಾಯುಗ, ದ್ವಾಪರಯುಗದಲ್ಲೂ ನಾನು ಬಂದಿದ್ದೆ ಹಾಗೂ ಸಾಕಷ್ಟು ಜೀವಾತ್ಮಗಳನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋದೆ. ಆದರೆ ಅವನ ರಹಸ್ಯವನ್ನು ಮಾತ್ರ ಹೇಳಲಿಲ್ಲ. ಈಗ ನಾನು ಕಲಿಯುಗದಲ್ಲಿ ಬಂದಿರುವೆ ಹಾಗೂ ಕಾಲನ ಜೊತೆ ಸಂವಾದವಾಯಿತು. ಕಾಲನು ನನಗೆ ಹೇಳಿದನು. "ನೀವು ಈಗ ಎಷ್ಟೇ ಹೇಳಿದರೂ ಯಾರೂ ನಿಮ್ಮ ಮಾತನ್ನು ಕೇಳಲಾರರು, ಮೊದಲನೆಯದಾಗಿ ನಾನು ಯಾವುದೇ ಜೀವಾತ್ಮವನ್ನು ಭಕ್ತಿಗೆ ಅರ್ಹರನ್ನಾಗಿರಲು ಬಿಟ್ಟಿಲ್ಲ. ಅವರನ್ನು ಬೀಡಿ, ಸಿಗರೇಟು, ಮದ್ಯ, ಮಾಂಸ ಮುಂತಾದ ದುಶ್ಚಟಗಳಿಗೆ ಗುಲಾಮನಾಗಿ ಮಾಡಿ ಅವರ ವೃತ್ತಿಯನ್ನು ಹಾಳು ಮಾಡಿರುವೆ. ವಿವಿಧ ರೀತಿಯ ಪಾಕಂಡ ಪೂಜೆಗಳಲ್ಲಿ ಜೀವಾತ್ಮಗಳನ್ನು ತೊಡಗಿಸಿದ್ದೇನೆ. ಎರಡನೆಯದಾಗಿ ಅವರಿಗೆ ನೀವು ನಿಮ್ಮ ಜ್ಞಾನ ತಿಳಿಸಿ ನಿಮ್ಮ ಲೋಕಕ್ಕೆ ನೀವು ಹೊರಟು ಹೋದ ನಂತರ ನಾನು(ಕಾಲ) ನನ್ನ ದೂತರನ್ನು ಕಳುಹಿಸಿ ನಿಮ್ಮ ಹೆಸರಿನಲ್ಲಿ 12 ಪಂಥ ನಡೆಸಿ ಜೀವಾತ್ಮಗಳನ್ನು ಭ್ರಮೆಗೊಳಪಡಿಸುವೆ. ಅವರೆಲ್ಲಾ ಸತ್ಯಲೋಕದ ಮಹಿಮೆ ಹೇಳುವರು, ನಿಮ್ಮ ಜ್ಞಾನವನ್ನು ಅರಿಯುವರು ಆದರೆ ನಾಮ ಜಪ ಮಾತ್ರ ನನ್ನದು ಮಾಡುವರು. ಇದರ ಪರಿಣಾಮವಾಗಿ ಅವರೆಲ್ಲಾ ನನ್ನ ಆಹಾರವಾಗುವರು."

ಈ ಮಾತನ್ನು ಕೇಳಿ ಕಬೀರರು, "ನೀನು ಎಷ್ಟೇ ಪ್ರಯತ್ನಿಸಿದರೂ ನಾನು ಸತ್ಯಮಾರ್ಗವನ್ನು ತಿಳಿಸಿಯೇ ನಾನು ಮರಳಿ ಹೋಗುವೆ. ನನ್ನ ಜ್ಞಾನವನ್ನು ತಿಳಿದವನು ನಿನ್ನ ಆಕರ್ಷಣೆಗೆ ಒಳಗಾಗುವುದಿಲ್ಲ" ಎಂದರು. ಸತ್ಯಯುಗದಲ್ಲಿ ಕಬೀರ ಪರಮೇಶ್ವರರು ಹೇಳಿದರು. "ಹೇ ನಿರಂಜನ್! ನಾನು ಇಚ್ಛಿಸಿದರೆ ನಿನ್ನ ಇಡೀ ಆಟವನ್ನು ಕ್ಷಣಾರ್ಧದಲ್ಲಿ ಮುಗಿಸಿಬಿಡುವೆ. ಆದರೆ ಹೀಗೆ ಮಾಡಲು ನಾನು ಕೊಟ್ಟ ಮಾತು ಅಡ್ಡ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾನು ನನ್ನ ಪ್ರೀತಿಯ ಹಂಸಗಳಿಗೆ (ಭಕ್ತರಿಗೆ) ಯಥಾರ್ಥ ಜ್ಞಾನವನ್ನು ನೀಡಿ ಶಬ್ದದ ಬಲವನ್ನು ಪ್ರದಾನ ಮಾಡಿ ಸತ್ಯಲೋಕಕ್ಕೆ ಕರೆದುಕೊಂಡು ಹೋಗುವೆ ಮತ್ತು ಹೇಳಿದರು:-

ಕಹೊ ಕಬೀರ್ ಸುನೋ ಧರ್ಮರಾಯಾ, ಹಮ್ ಶಂಖೋಂ ಹಂಸಾ ಪದ್ ಪರ್‌ಸಾಯಾ।
ಜಿನ್ ಲೀನ್ಹಾ ಹಮರಾ ಪ್ರವಾನಾ, ಸೋ ಹಂಸಾ ಹಮ್ ಕಿಯೆ ಅಮಾನಾ ॥

**(ಪವಿತ್ರ ಕಬೀರ್ ಸಾಗರ್‌ದಲ್ಲಿ ಜೀವಾತ್ಮಗಳನ್ನು ಭ್ರಮೆಯ ಚಕ್ರವ್ಯೂಹಕ್ಕೆ ತಳ್ಳಲು ಹಾಗೂ ತನ್ನ ಹಸಿವನ್ನು ನೀಗಿಸಲು ಅನೇಕ ರೀತಿಯ ಕ್ರಮದ ವರ್ಣನೆ.)**

ದ್ವಾದಸ್ ಪಂಥ್ ಕರೂಂ ಮ್ಯೆಂ ಸಾಜಾ, ನಾಮ್ ತುಮ್ಹಾರಾ ಲೇ ಕರೂಂ ಅವಾಜಾ ।
ದ್ವಾದಸ್ ಯಮ್ ಸಂಸಾರ್ ಪಠಹೋ, ನಾಮ್ ತುಮ್ಹಾರೆ ಪಂಥ್ ಚಲೈಹೋ ॥
ಪ್ರಥಮ್ ದೂತ್ ಮಮ್ ಪ್ರಗಟೇ ಜಾಈ, ಪೀಛೆ ಅಂಶ್ ತುಮ್ಹಾರಾ ಆಈ ॥
ಯಹೀ ವಿಧಿ ಜೀವನ್ ಕೋ ಭ್ರಮಾಊಂ, ಪುರುಷ್ ನಾಮ್ ಜೀವನ್ ಸಮಝಾಊಂ ॥
ದ್ವಾದಸ್ ಪಂಥ್ ನಾಮ್ ಜೋ ಲೈಹೇ, ಸೋ ಹಮರೇ ಮುಖ್ ಆನ್ ಸಮೈ ಹೈ ॥
ಕಹಾ ತುಮ್ಹಾರಾ ಜೀವ್ ನಹೀಂ ಮಾನೇ, ಹಮಾರೀ ಓರ್ ಹೋಯ್ ಬಾದ್ ಬಖಾನೈ ॥
ಮ್ಯೆಂ ದೃಢ್ ಫಂದಾ ರಚೀ ಬನಾಈ, ಜಾಮೆಂ ಜೀವ್ ರಹೇ ಉರಝಾಈ ॥
ದೇವಲ್ ದೇವ್ ಪಾಷಾನ್ ಪೂಜಾಈ, ತೀರ್ಥ್ ವ್ರತ್ ಜಪ್–ತಪ್ ಮನ್ ಲಾಈ ॥
ಯಜ್ಞ್ ಹೋಮ್ ಅರೂ ನೇಮ್ ಅಚಾರಾ ಔರ್ ಅನೇಕ್ ಫಂದ್ ಮೆಂ ಡಾರಾ ॥
ಜೋ ಜ್ಞಾನೀ ಜಾಓ ಸಂಸಾರಾ, ಜೀವ್ ನ ಮಾನೈ ಕಹಾ ತುಮ್ಹಾರಾ ॥

**(ಸತಗುರು ವಚನ)**

ಜ್ಞಾನೀ ಕಹೇ ಸುನೋ ಅನ್ಯಾಯೀ, ಕಾಟೋ ಫಂದ್ ಜೀವ್ ಲೇ ಜಾಈ ॥
ಜೇತಿಕ್ ಫಂದ್ ತುಮ್ ರಚೇ ವಿಚಾರೀ ಸತ್ಯ್ ಶಬದ್ ತೈ ಸಬೈ ಬಿಂಡಾರೀ ॥
ಜೌನ್ ಜೀವ್ ಹಮ್ ಶಬ್ದ್ ದೃಢಾವೈ, ಫಂದ್ ತುಮ್ಹಾರಾ ಸಕಲ್ ಮುಕಾವೈ ॥
ಚೌಕಾ ಕರ್ ಪ್ರವಾನಾ ಪಾಈ, ಪುರುಷ್ ನಾಮ್ ತಿಹಿ ದೇಊಂ ಚಿನ್ಹಾಈ ॥
ತಾಕೇ ನಿಕಟ್ ಕಾಲ್ ನಹೀಂ ಆವೈ, ಸಂಧಿ ದೇಖೀ ತಾಕಹಂ ಸಿರ್ ನಾವೈ ॥

**ಮೇಲಿನ ವರ್ಣನೆಯಿಂದ ಸ್ಪಷ್ಟವಾಗುವುದೇನೆಂದರೆ, ಯಾರ ಬಳಿ ಕಬೀರ ಪರಮೇಶ್ವರರು ಹೇಳಿದ ಸತ್ಯಭಕ್ತಿಯ ಮಾರ್ಗವಿಲ್ಲವೋ ಅವರೆಲ್ಲಾ ಕಾಲ ಪ್ರೇರಿತರು. ಆದ್ದರಿಂದ ಬುದ್ಧಿವಂತರು ಚೆನ್ನಾಗಿ ಯೋಚಿಸಿ ಭಕ್ತಿಮಾರ್ಗವನ್ನು ಆರಿಸಿಕೊಳ್ಳಬೇಕು. ಏಕೆಂದರೆ ಮನುಷ್ಯ ಜನ್ಮ ಅಮೂಲ್ಯವಾದುದು. ಅದು ಮತ್ತೆ ಪುನಃ ಸಿಗುವುದಿಲ್ಲ. ಕಬೀರರು ಹೇಳಿದ್ದಾರೆ:–**

ಕಬೀರ್ ಮಾನುಷ್ ಜನ್ಮ್ ದುರ್ಲಭ್ ಹೈ, ಮಿಲೈ ನ ಬಾರಂಬಾರ್ ।
ತರುವರ್ ಸೇ ಪತ್ತಾ ಟೂಟ್ ಗಿರೆ, ಬಹುರ್ ನ ಲಗ್‌ತಾ ಡಾರಿ ॥

## "ಕಾಲ ನಿರಂಜನನ ಮೂಲಕ ಕಬೀರರಿಂದ ಮೂರೂ ಯುಗಗಳಲ್ಲಿ ಕಡಿಮೆ ಜೀವಾತ್ಮಗಳನ್ನು ಕರೆದುಕೊಂಡು ಹೋಗುವ ಬಗ್ಗೆ ವಚನ ಪಡೆಯುವುದು"

**(ವಿಸ್ತೃತ ಹಾಗೂ ಸಂಪೂರ್ಣ ವರ್ಣನೆ)**

**ಪ್ರಶ್ನೆ:– ಕಬೀರರ ಹೆಸರಿನಿಂದ ನಡೆದ 12 ಪಂಥಗಳ ನಿಜವಾದ ಮುಖಂಡರು ಯಾರು ಹಾಗೂ ಹದಿಮೂರನೇ ಪಂಥವನ್ನು ಯಾರು ನಡೆಸುವರು?**

**ಉತ್ತರ:– ಕಬೀರ್ ಸಾಗರದ ಸಂಶೋಧನಾ ಕರ್ತರಾದ ಸ್ವಾಮಿ ಯುಗಲಾನಂದರು (ಬಿಹಾರಿ) ಸಮಯ–ಸಮಯಕ್ಕೆ ಕಬೀರರ ಗ್ರಂಥಗಳಲ್ಲಿ ತಪ್ಪು ವರ್ಣನೆ ಮಾಡಿ ಅದನ್ನು ಕೆಡಿಸಿಟ್ಟಿದ್ದಾರೆ ಎಂದು ದುಃಖ ವ್ಯಕ್ತಪಡಿಸಿದ್ದಾರೆ.**

**ಉದಾಹರಣೆ :– ಪರಮೇಶ್ವರ ಕಬೀರರ ಜೋಗ್‌ಜೀತ್‌ನ ವೇಷದಲ್ಲಿ ಕಾಲಬ್ರಹ್ಮನ ಜೊತೆ ವಿವಾದವಾಗಿತ್ತು. ಅದರ ವಿವರ 'ಸ್ವಸಮವೇದ್ ಬೋಧ' ಪುಟ 117 ರಿಂದ 122 ರವರೆಗೆ ಹಾಗು 'ಅನುರಾಗ್ ಸಾಗರ್'ದ 60ನೇ ಪುಟದಿಂದ 67ರ ಪುಟದವರೆಗೆ ಇದೆ.**

ಕಬೀರರು ತಮ್ಮ ಪುತ್ರ ಜೋಗ್‌ಜೀತ್‌ನ ವೇಷದಲ್ಲಿ ಕಾಲನ ಪ್ರಥಮ ಬ್ರಹ್ಮಾಂಡದಲ್ಲಿ ಪ್ರಕಟರಾದರು, ಅದು 21ನೇ ಬ್ರಹ್ಮಾಂಡ ಅಲ್ಲಿ ತಪ್ತ ಶೀಲೆ ಇದೆ. ಕಾಲಬ್ರಹ್ಮನು ಜೋಗ್‌ಜೀತ್‌ನ ಜೊತೆ ಜಗಳವಾಡಿದನು. ನಂತರ ವಿವಶನಾಗಿ ಕಾಲು ಹಿಡಿದು ಕ್ಷಮೆ ಯಾಚಿಸಿದನು. ನಂತರ ಪ್ರತಿಜ್ಞೆ ಮಾಡಿಸಿಕೊಂಡು ಕೆಲವು ಸೌಲಭ್ಯಗಳನ್ನು ಕೇಳಿದನು.

1) ಮೂರೂ ಯುಗಗಳಲ್ಲಿ (ಸತ್ಯಯುಗ, ತ್ರೇತಾಯುಗ, ದ್ವಾಪರಯುಗ) ಕೆಲವೇ ಜೀವಾತ್ಮಗಳನ್ನು ಪಾರುಮಾಡಿ.

2) ಬಲವಂತವಾಗಿ ಯಾವ ಜೀವಾತ್ಮಗಳನ್ನೂ ನನ್ನ ಲೋಕದಿಂದ ಕರೆದುಕೊಂಡು ಹೋಗಬಾರದು.

3) ನೀವು ನಿಮ್ಮ ಜ್ಞಾನವನ್ನು ತಿಳಿಸಬೇಕು. ಯಾರು ನಿಮ್ಮ ಜ್ಞಾನವನ್ನು ಒಪ್ಪುತ್ತಾರೋ, ಅವರು ನಿಮ್ಮವರು, ಯಾರು ನನ್ನ ಜ್ಞಾನ ಒಪ್ಪುತ್ತಾರೋ ಅವರು ನನ್ನವರು.

4) ಕಲಿಯುಗದಲ್ಲಿ ಮೊದಲು ನನ್ನ ದೂತರು ಪ್ರಕಟರಾಗಬೇಕು, ನಂತರ ನಿಮ್ಮ ದೂತರು ಬರಬೇಕು.

5) ತ್ರೇತಾಯುಗದಲ್ಲಿ ಸಮುದ್ರದ ಮೇಲೆ ಸೇತುವೆ ಕಟ್ಟಬೇಕು. ಆ ಸಮಯದಲ್ಲಿ ನನ್ನ ಪುತ್ರ ವಿಷ್ಣು ರಾಮನ ರೂಪದಲ್ಲಿ ಲಂಕೆಯ ರಾಜನಾದ ರಾವಣನ ಜೊತೆ ಯುದ್ಧ ಮಾಡುವನು. ಸಮುದ್ರವು ದಾರಿ ಕೊಡುವುದಿಲ್ಲ.

6) ದ್ವಾಪರ ಯುಗದಲ್ಲಿ ಬೌದ್ಧ ಶರೀರ ತ್ಯಜಿಸಿ ಹೋಗುವೆ. ರಾಜ ಇಂದ್ರದಮನ್ ನನ್ನ ಹೆಸರಿನಿಂದ (ಜಗನ್ನಾಥನ ಹೆಸರಿನಿಂದ) ಸಮುದ್ರದ ದಡದಲ್ಲಿ ನನ್ನ ಆಜ್ಞೆಯಂತೆ ಮಂದಿರ ಕಟ್ಟಿಸಲು ಇಚ್ಛಿಸುವನು. ಅವನಿಗೆ ಸಮುದ್ರವು ಅಡ್ಡಿಪಡಿಸುವುದು. ನೀವು ಆ ಮಂದಿರದ ರಕ್ಷಣೆ ಮಾಡಿ.

ಪರಮೇಶ್ವರರು ಈ ಎಲ್ಲಾ ಷರತ್ತುಗಳನ್ನು ಸ್ವೀಕರಿಸಿ ವಚನ ನೀಡಿದರು. ಆಗ ಕಾಲಬ್ರಹ್ಮನು ನಗುತ್ತಾ ಹೇಳಿದನು. "ಹೇ ಜೋಗ್‌ಜೀತ್ ! ಈಗ ನೀವು ಪ್ರಪಂಚಕ್ಕೆ ಹೋಗಿ. ಯಾವಾಗ ಕಲಿಯುಗ ಬರುವುದೋ ಆಗ ನಾನು ನನ್ನ 12 ದೂತರನ್ನು ಪ್ರಪಂಚಕ್ಕೆ ಕಳುಹಿಸುವೆ. ಯಾವಾಗ ಕಲಿಯುಗ 5505 ವರ್ಷಗಳನ್ನು ಪೂರೈಸುವುದೋ, ಅಲ್ಲಿಯವರೆಗೆ ನನ್ನ ದೂತರು ನಿಮ್ಮ ಹೆಸರಿನಿಂದ (ಕಬೀರ್ ಹೆಸರಿನಿಂದ) 12 ಪಂಥಗಳನ್ನು ನಡೆಸುವರು. ಕಬೀರರು ಜೋಗ್‌ಜೀತನ ರೂಪದಲ್ಲಿ ಕಾಲಬ್ರಹ್ಮನಿಗೆ ಹೇಳಿದ್ದರು. "ಕಲಿಯುಗದಲ್ಲಿ ನನ್ನ ಹೆಸರು ಕಬೀರ ಎಂದಿರುವುದು. ನಾನು ಕಬೀರ ಹೆಸರಿನಲ್ಲೇ ಪಂಥ ನಡೆಸುವೆ" ಆಗ ಕಾಲ ಜ್ಯೋತಿ ನಿರಂಜನನೆಂದನು "ನೀವು ಕಬೀರ ಹೆಸರಿನಿಂದ ಒಂದು ಪಂಥವನ್ನು ನಡೆಸಿದರೆ ನಾನು ಕಬೀರ ಹೆಸರಿನಿಂದ 12 ಪಂಥಗಳನ್ನು ನಡೆಸುವೆ. ಎಲ್ಲಾ ಜನರನ್ನೂ ಭ್ರಮೆಗೊಳಪಡಿಸುವೆ. ಇದಲ್ಲದೆ ಇನ್ನೂ ಅನೇಕ ಪಂಥಗಳನ್ನು ನಡೆಸುವೆ. ಅವರು ಸತ್ಯಲೋಕ , ಸತ್ಯಖಂಡದ ಬಗ್ಗೆ ಹೇಳುವರು ಆದರೆ ಸತ್ಯ ಸಾಧನೆ ಅವರ ಬಳಿ ಇರುವುದಿಲ್ಲ. ಆದ ಕಾರಣದಿಂದ ಅವರು ಸತ್ಯಲೋಕದ ಆಸೆಯಿಂದ ತಪ್ಪಾದ ನಾಮ ಜಪ ಮಾಡಿ ನನ್ನ ಬಲೆಯಲ್ಲೇ ಇರುವರು."

ನೀವು ಕಲಿಯುಗದಲ್ಲಿ ಯಾವ ಸಮಯದಲ್ಲಿ ನಿಮ್ಮ ಸತ್ಯ ಕಬೀರ ಪಂಥವನ್ನು ನಡೆಸುವಿರಿ ಎಂದು ಕಾಲಬ್ರಹ್ಮನು ಕೇಳಿದನು. ಆಗ ಕಬೀರರು ಯಾವ ಸಮಯದಲ್ಲಿ ಕಲಿಯುಗ 5505 (ಐದು ಸಾವಿರದ ಐನೂರ ಐದು) ವರ್ಷಗಳು ಕಳೆಯುವುದೋ ಆಗ ನಾನು ನನ್ನ ನಿಜವಾದ 13ನೇ ಕಬೀರ ಪಂಥವನ್ನು ನಡೆಸುವೆ ಎಂದರು.

ಆ ಸಮಯದ ಮೊದಲೇ ನಾನು ಇಡೀ ಪ್ರಪಂಚದಲ್ಲಿ ಶಾಸ್ತ್ರಾನುಸಾರದ ಆಚರಣೆಯ ವಿರುದ್ಧ ಅಂದರೆ ಮನಸ್ಸಿಗೆ ಬಂದ ಆಚರಣೆ ಮಾಡಿಸಿ, ಶಾಸ್ತ್ರಕ್ಕೆ ವಿರುದ್ಧವಾದ ಜ್ಞಾನವನ್ನು ತಿಳಿಸಿ, ಸುಳ್ಳು ಹೆಸರಿನ ಹಾಗೂ ತಪ್ಪಾದ ಸಾಧನೆಯನ್ನು ಮಾಡುವಂತೆ ಪ್ರೇರೇಪಿಸುವೆ. ಯಾವಾಗ ನಿಮ್ಮ 13ನೇ ಅಂಶ ಬಂದು ಸತ್ಯ ಕಬೀರ ಪಂಥವನ್ನು ನಡೆಸುವುದೋ ಆಗ ಅವರ ಮಾತನ್ನು ಯಾರೂ

ನಂಬುವುದಿಲ್ಲ. ಬದಲಾಗಿ ಅವರ ಜೊತೆಯಲ್ಲೇ ಜಗಳವಾಡುತ್ತಾರೆ" ಎಂದು ಕಾಲಬ್ರಹ್ಮನು ಹೇಳಿದನು. ಯಾವಾಗ **5505** ವರ್ಷಗಳು ಕಲಿಯುಗದಲ್ಲಿ ಕಳೆಯುವುದೋ ಆಗ ಶಿಕ್ಷಣ ಕ್ರಾಂತಿ ಆಗುವುದೆಂದು ಕಬೀರರಿಗೆ ತಿಳಿದಿತ್ತು. ಎಲ್ಲಾ ಮಾನವರನ್ನು ಅಕ್ಷರ ಜ್ಞಾನಿಗಳನ್ನಾಗಿ ಮಾಡಲ್ಪಡುವುದು. ಆ ಸಮಯದಲ್ಲಿ ನನ್ನ ದಾಸನು ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಸರಿಯಾಗಿ ತಿಳಿದುಕೊಂಡು ಮಾನವ ಸಮಾಜಕ್ಕೆ ತೋರಿಸುವನು. ಎಲ್ಲಾ ಸಾಕ್ಷಿ ಪ್ರಮಾಣಗಳನ್ನು ತನ್ನ ಕಣ್ಣಿಂದಲೇ ನೋಡಿ ಶಿಕ್ಷಿತ ಮಾನವನು ಸತ್ಯದಿಂದ ಪರಿಚಿತನಾಗಿ ತಕ್ಷಣವೇ ನನ್ನ ಹದಿಮೂರನೇ ಪಂಥದದಲ್ಲಿ ದೀಕ್ಷೆ ಪಡೆಯುವನು ಹಾಗೂ ಇಡೀ ವಿಶ್ವವು ನನ್ನ ಮೂಲಕ ತಿಳಿಸಲ್ಪಟ್ಟ ಭಕ್ತಿಯ ವಿಧಿ ಹಾಗೂ ತತ್ವಜ್ಞಾನವನ್ನು ಹೃದಯ ಪೂರ್ವಕವಾಗಿ ಸ್ವೀಕರಿಸಿ ಭಕ್ತಿ ಮಾಡುವರು. ಆ ಸಮಯದಲ್ಲಿ ಪುನಃ ಸತ್ಯಯುಗದಂಥ ವಾತಾವರಣವಾಗುವುದು. ಪರಸ್ಪರ ರಾಗದ್ವೇಷ, ಕಳ್ಳತನ, ಲೂಟಿ, ದರೋಡೆ ಯಾವುದನ್ನೂ ಮಾಡುವುದಿಲ್ಲ. ಯಾರೂ ಹಣವನ್ನು ಸಂಗ್ರಹಿಸುವುದಿಲ್ಲ. ಭಕ್ತಿಗೆ ಹೆಚ್ಚು ಮಹತ್ವ ನೀಡಲಾಗುವುದು. ಅಂದ್ರೆ ಆ ಸಮಯದಲ್ಲಿ ಯಾರ ಬಳಿ ಅಧಿಕ ಹಣವಿರುವುದೋ, ದೊಡ್ಡ ವ್ಯಾಪಾರವಿರುವುದೋ, ದೊಡ್ಡ ದೊಡ್ಡ ಬಂಗಲೆಗಳಿರುವುದೋ ಅವರನ್ನು ಮಹಾನ್ ವ್ಯಕ್ತಿ ಎಂದು ಪರಿಗಣಿಸಲಾಗುತ್ತಿರಬಹುದು, ಆದರೆ ಹದಿಮೂರನೇ ಪಂಥವು ಪ್ರಾರಂಭವಾದ ನಂತರ ಆ ವ್ಯಕ್ತಿಗಳನ್ನು ಮೂರ್ಖರೆಂದು ಪರಿಗಣಿಸಲಾಗುವುದು ಮತ್ತು ಯಾರು ಭಕ್ತಿ ಮಾಡುವರೋ, ಸಾಮಾನ್ಯವಾದ ಮನೆಯಲ್ಲಿ ಇರುವರೋ, ಅವರನ್ನು ಮಹಾನ್ ವ್ಯಕ್ತಿಯೆಂದು, ದೊಡ್ಡ ವ್ಯಕ್ತಿಯೆಂದು ಹಾಗು ಗೌರವಾನ್ವಿತ ವ್ಯಕ್ತಿಯೆಂದೂ ಪರಿಗಣಿಸಲಾಗುವುದು.

## "ಪ್ರಮಾಣಕ್ಕಾಗಿ ಪವಿತ್ರ ಕಬೀರ್ ಸಾಗರದಿಂದ ಭಿನ್ನ-ಭಿನ್ನ ಅಧ್ಯಾಯಗಳಿಂದ ಅಮೃತ ವಾಣಿ"

### "ಪರಮೇಶ್ವರ ಕಬೀರರು ಹಾಗೂ ಜ್ಯೋತಿ ನಿರಂಜನನ ಸಂಭಾಷಣೆ"

**ಅನುರಾಗ್ ಸಾಗರದ ಪುಟ 62 ರಿಂದ :– "ಧರ್ಮರಾಯ (ಜ್ಯೋತಿ ನಿರಂಜನ) ವಚನ"**

ಧರ್ಮರಾಯ್ ಅಸ್ ವಿನತೀ ಠಾನೀ । ಮೈಂ ಸೇವಕ್ ದ್ವಿತೀಯಾ ನ ಜಾನೀ ॥1॥
ಜ್ಞಾನೀ ಬಿನತೀ ಏಕ್ ಹಮಾರಾ । ಸೋ ನ ಕರಹೂ ಜಿಹ್ ಸೆ ಹೋ ಮೋರ್ ಬಿಗಾರಾ ॥2॥
ಪುರುಷ್ ದೀನ್ಹ್ ಜಸ್ ಮೋಕಹಂ ರಾಜು।ತುಮ್ ಭೀ ದೇಹಹು ತೋ ಹೋವೆ ಮಮ್ ಕಾಜು॥3॥
ಅಬ್ ಮೈಂ ವಚನ್ ತುಮ್ಹರೋ ಮಾನೀ । ಲೀಜೋ ಹಂಸಾ ಹಮ್ ಸೋ ಜ್ಞಾನೀ ॥4॥

**ಪುಟ 63 ರಿಂದ ಅನುರಾಗ್ ಸಾಗರದ ವಾಣಿ:–**

ದಯಾವಂತ್ ತುಮ್ ಸಾಹೇಬ್ ದಾತಾ। ಎತಿಕ್ ಕೃಪಾ ಕರೋ ಹೋ ತಾತಾ ॥ 5 ॥
ಪುರುಷ್ ಶಾಪ್ ಮೋಕಹಂ ದೀನ್ಹಾ। ಲಖ್ ಜೀವ್ ನಿತ್ ಗ್ರಾಸನ್ ಕೀನ್ಹಾ ॥ 6 ॥

**ಪುಟ 64 ರಿಂದ ಅನುರಾಗ್ ಸಾಗರದ ವಾಣಿ:–**

ಜೋ ಜೀವ್ ಸಕಲ್ ಲೋಕ್ ತವ್ ಆವೈ । ಕೈಸೆ ಕ್ಷುಧಾ ಮೋರ್ ಮಿಟಾವೈ ॥7॥
ಜೈಸೆ ಪುರುಷ್ ಕೃಪಾ ಮೋಪೆ ಕೀನ್ಹಾ । ಭೌಸಾಗರ್ ಕಾ ರಾಜ್ ಮೋಹೆ ದೀನ್ಹಾ ॥8॥
ತುಮ್ ಭೀ ಕೃಪಾ ಮೋಪರ್ ಕರಹು । ಜೋ ಮಾಂಗೆ ಸೋ ಮೋಹೆ ದೇಹೋ ಬರಹು ॥9॥
ಸತಯುಗ್, ತ್ರೇತಾ, ದ್ವಾಪರ್ ಮಾಂಹೀಂ । ತೀನೋಂ ಯುಗ್ ಜೀವ್ ಥೋಡೆ ಜಾಹೀಂ ॥10॥
ಚೌಥಾ ಯುಗ್ ಜಬ್ ಕಲಯುಗ್ ಆವೈ ।ತಬ್ ತವ್ ಶಣ್ ಜೀವ್ ಬಹು ಜಾವೈ ॥11॥

**ಪುಟ 65 ರಿಂದ ಅನುರಾಗ್ ಸಾಗರದ ವಾಣಿ, ಮೇಲಿಂದ ವಾಣಿ ಸಾಲಿನ ಸಂ. 3ರಿಂದ:–**

ಪ್ರಥಮ್ ದೂತ್ ಮಮ್ ಪ್ರಕಟೈ ಜಾಈ । ಪೀಛೆ ಅಂಶ್ ತುಮ್ಹಾರಾ ಆಈ ॥ 12 ॥

**ಪುಟ 64 ರಿಂದ ಅನುರಾಗ್ ಸಾಗರದ ವಾಣಿ, ಮೆಲಿಂದ ವಾಣಿ ಸಾಲಿನ ಸಂ. 6 :–**

ಏಸಾ ವಚನ್ ಹರಿ ಮೋಹೆ ದೀಜೈ । ತಬ್ ಸಂಸಾರ್ ಗವನ್ ತವ್ ಕೀಜೈ ॥ 13 ॥

**"ಜೋಗ್ ಜೀತ್ ವಚನ್=ಜ್ಞಾನೀ ವಚನ"**

**ಪುಟ 64 ರಿಂದ ಅನುರಾಗ್ ಸಾಗರದ ವಾಣಿ, ಮೇಲಿಂದ ವಾಣಿ ಸಾಲಿನ ಸಂ. 7 :–**

ಅರೆ ಕಾಲ್ ತುಮ್ ಪರಪಂಚ್ ಪಸಾರಾ। ತೀನೋಂ ಯುಗ್ ಜೀವನ್ ದುಖ್ ಡಾರಾ ॥14॥
ಬೀನತೀ ತೋರೀ ಲೀನ್ಹ್ ಮ್ಯೆಂ ಜಾನಿ । ಮೋಕಹಂ ಠಗಾ ಕಾಲ್ ಅಭಿಮಾನೀ ॥15॥
ಜಸ್ ಬೀನತೀ ತೂ ಮೋಸನ್ ಕೀನ್ಹೀ । ಸೋ ಅಬ್ ಬಖ್ಸ್ ತೋಹೇ ದೀನ್ಹೀ ॥16॥
ಚೌಥಾ ಯುಗ್ ಜಬ್ ಕಲಯುಗ್ ಆವ್ಯೆ । ತಬ್ ಹಮ್ ಅಪನಾ ಅಂಶ್ ಪಠಾವ್ಯೆ ॥17॥

**"ಧರ್ಮರಾಯ (ಕಾಲ) ವಚನ"**

**ಪುಟ 64 ರಿಂದ ಅನುರಾಗ್ ಸಾಗರದ ವಾಣಿ, ಮೇಲಿಂದ ವಾಣಿ ಸಾಲಿನ ಸಂ. 17:–**

ಹೇ ಸಾಹಿಬ್ ತುಮ್ ಪಂಥ್ ಚಲಾಊ । ಜೀವ್ ಉಬಾರ್ ಲೋಕ್ ಲ್ಯೆ ಜಾಊ ॥18॥

**ಪುಟ 66 ರಿಂದ ಅನುರಾಗ್ ಸಾಗರದ ವಾಣಿ, ಮೇಲಿಂದ ವಾಣಿ ಸಾಲಿನ ಸಂ. 8, 9,16 ರಿಂದ 21:–**

ಸಂಧಿ ಛಾಪ್ (ಸಾರ ಶಬ್ದ) ಮೋಹೆ ದಿಜೆ ಜ್ಞಾನೀ। ಜೈಸೇ ದೋವ್ಹೋಂಗೇ ಹಂಸ್ ಸಹದಾನೀ ॥19॥
ಜೋ ಜನ್ ಮೋಕೂ ಸಂಧಿ (ಸಾರ ಶಬ್ದ) ಬತಾವ್ಯೆ। ತಾಕೆ ನಿಕಟ್ ಕಾಲ್ ನಹೀಂ ಆವ್ಯೆ ॥20॥
ಕಹ್ಯೆ ಧರ್ಮರಾಯ್ ಜಾಓ ಸಂಸಾರಾ । ಆನಹು ಜೀವ್ ನಾಮ್ ಆಧಾರಾ ॥21॥
ಜೋ ಹಂಸಾ ತುಮ್ಹರೆ ಗುಣ್ ಗಾವ್ಯೆ । ತಾಹಿ ನಿಕಟ್ ಹಮ್ ನಹೀಂ ಜಾವ್ಯೆ ॥22॥
ಜೋ ಕೋಈ ಲೇಹ್ಯೆ ಶರಣ್ ತುಮ್ಹಾರೀ । ಮಮ್ ಸಿರ್ ಪಗ್ ದ್ಯೆ ಹೋವ್ಯೆ ಪಾರೀ ॥23॥
ಹಮ್ ತೋ ತುಮ್ ಸಂಗ್ ಕೀನ್ಹ್ ಢಿಠಾಈ । ತಾತ್ ಜಾನ್ ಕಿನ್ಹೀಂ ಲಡಕಾಇ ॥24॥
ಕೋಟಿನ್ ಅವಗುನ್ ಬಾಲಕ್ ಕರಹೀ । ಪಿತಾ ಏಕ್ ಚಿತ್ ನಹೀಂ ಧರಹೀ ॥25॥
ಜೋ ಪಿತಾ ಬಾಲಕ್ ಕೂಂ ದೇಹ್ಯೆ ನಿಕಾರೀ । ತಬ್ ಕೋ ರಕ್ಷಾ ಕರ್ಯೆ ಹಮಾರೀ ॥26॥
ಸಾರನಾಮ್ ದೇಖೋ ಜೇಹಿ ಸಾಥಾ । ತಾಹಿ ಹಂಸ್ ಮ್ಯೆಂ ನೀವಾಊಂ ಮಾಥಾ ॥27॥

**ಜ್ಞಾನಿ (ಕಬೀರ್) ವಚನ**

**ಅನುರಾಗ್ ಸಾಗರ್ ಪುಟ 66 :–**

ಜೋ ತೋಹಿ ದೇಹುಂ ಸಂಧಿ ಬತಾಈ। ತೋ ತೂಂ ಜೀವನ್ ಕೋ ಹಇಹೋ ದುಖದಾಈ ॥28॥
ತುಮ್ ಪರಪಂಚ್ ಜಾನ್ ಹಮ್ ಪಾವಾ । ಕಾಲ್ ಚಲ್ಯೆ ನಹೀಂ ತುಮ್ಹಾರಾ ದಾವಾ ॥29॥
ಧರ್ಮರಾಯ್ ತೋಹಿ ಪ್ರಕಟ್ ಭಾಖಾ । ಗುಪ್ತ್ ಅಂಕ್ ಬೀರಾ ಹಮ್ ರಾಖಾ ॥30॥
ಜೋ ಕೋಈ ಲೇಈ ನಾಮ್ ಹಮಾರಾ। ತಾಹಿ ಛೋಡ್ ತುಮ್ ಹೋ ಜಾನಾ ನಿಯಾರಾ ॥31॥
ಜೋ ತುಮ್ ಮೋರ್ ಹಂಸ್ ಕೋ ರೋಕೋ ಭಾಈ। ತೋ ತುಮ್ ಕಾಲ್ ರಹನ್ ನಹೀಂ ಪಾಈ ॥32॥

**"ಧರ್ಮರಾಯ (ಕಾಲ ನಿರಂಜನ್) ವಚನ"**

**ಪುಟ 62 ಹಾಗೂ 63 ರಿಂದ ಅನುರಾಗ್ ಸಾಗರದ ವಾಣಿ :–**

ಬೇಸಕ್ ಜಾಓ ಜ್ಞಾನೀ ಸಂಸಾರಾ । ಜೀವ್ ನ ಮಾನ್ಯೆ ಕಹಾ ತುಮ್ಹಾರಾ ॥33॥
ಕಹಾ ತುಮ್ಹಾರಾ ಜೀವ್ ನಾ ಮಾನ್ಯೆ । ಹಮರೀ ಔರ್ ಹೋಯ್ ಬಾದ್ ಬಖಾನ್ಯೆ ॥34॥
ದೃಢ್ ಫಂದಾ ಮ್ಯೆಂ ರಚಾ ಬನಾಈ । ಜಾಮೆಂ ಸಕಲ್ ಜೀವ್ ಉರಜಾಈ ॥35॥
ವೇದ್–ಶಾಸ್ತ್ರ ಸಮರ್ತಿ ಗುಣಗಾನಾ । ಪುತ್ರ ಮೇರೇ ತೀನ್ ಪ್ರಧಾನಾ ॥36॥
ತೀನಹೂ ಬಹು ಬಾಜೀ ರಚಿ ರಾಖಾ । ಹಮರೀ ಮಹಿಮಾ ಜ್ಞಾನ್ ಮುಖ್ ಭಾಖಾ ॥37॥
ದೇವಲ್ ದೇವ್ ಪಾಷಾಣ್ ಪುಜಾಈ । ತೀರ್ಥ್ ವ್ರತ್ ಜಪ್ ತಪ್ ಮನ್ ಲಾಈ ॥38॥
ಪೂಜಾ ವಿಶ್ವ್ ದೇವ್ ಅರಾಧೀ । ಯಹ್ ಮತಿ ಜೀವೋಂ ಕೋ ರಾಖಾ ಬಾಂಧಿ ॥39॥
ಜಗ್ (ಯಜ್ಞ) ಹೋಮ್ ಔರ್ ನೇಮ್ ಆಚಾರಾ। ಔರ್ ಅನೇಕ್ ಫಂದ್ ಮ್ಯೆಂ ಡಾರಾ ॥40॥

**"ಜ್ಞಾನಿ (ಕಬೀರ್) ವಚನ್"**

ಹಮನೇ ಕಹಾ ಸುನೋ ಅನ್ಯಾಈ । ಕಾಟೋ ಫಂದ್ ಜೀವ್ ಲೇ ಜಾಂಈ ॥41॥

ಜೇತೇ ಫಂದ್ ತುಮ್ ರಚೇ ವಿಚಾರೀ । ಸತ್ಯ ಶಬ್ದ್ ತೇ ಸಬ್ಹೈ ವಿಡಾರೀ ॥42॥
ಜೌನ್ ಜೀವ್ ಹಮ್ ಶಬ್ದ್ ದೃಢಾವೈಂ । ಫಂದ್ ತುಮ್ಹಾರಾ ಸಕಲ್ ಮುಕ್ತಾವೈಂ ॥43॥
ಜಬಹೀ ಜೀವ್ ಚಿನ್ಹಿ ಜ್ಞಾನ್ ಹಮಾರಾ । ತಜಹೀ ಭ್ರಮ್ ಸಬ್ ತೋರ್ ಪಸಾರಾ ॥44॥
ಸತ್ಯನಾಮ್ ಜೀವನ್ ಸಮಝಾವೈಂ । ಹಂಸ್ ಉಭಾರ್ ಲೋಕ್ ಲೈ ಜಾವೈ ॥45॥
ಪುರುಷ್ ಸುಮಿರನ್ ಸಾರ್ ಬೀರಾ, ನಾಮ್ ಅವಿಚಲ್ ಜನಾವಹೂಂ ।
ಶೀಶ್ ತುಮ್ಹಾರೇ ಪಾಂವ್ ದೇಕೇ, ಹಂಸ್ ಲೋಕ್ ಪಠಾವಹೂಂ ॥46॥
ತಾಕೇ ನಿಕಟ್ ಕಾಲ್ ನಹೀಂ ಆವೈ । ಸಂಧಿ ದೇಖ್ ತಾಕೋ ಸಿರ್ ನಾವೈ ॥48॥
(ಸಂಧಿ=ಸತ್ಯನಾಮ್+ಸಾರ್ ನಾಮ್)

**"ಧರ್ಮರಾಯ (ಕಾಲ) ವಚನ"**

ಪಂಥ್ ಏಕ್ ತುಮ್ ಆಪ್ ಚಲಊ । ಜೀವನ್ ಕೋ ಸತಲೋಕ್ ಲೈ ಜಾಊ ॥49॥
ದ್ವಾದಶ್ ಪಂಥ್ ಕರೂಂ ಮೈಂ ಸಾಜಾ । ನಾಮ್ ತುಮ್ಹಾರಾ ಲೇ ಕರೋಂ ಆವಾಜಾ ॥50॥
ದ್ವಾದಶ್ ಯಮ್ ಸಂಸಾರ್ ಪಠಾಊಂ । ನಾಮ್ ಕಬೀರ್ ಲೇ ಪಂಥ್ ಚಲಾಊಂ ॥51॥
ಪ್ರಥಮ್ ದೂತ್ ಮೇರೆ ಪ್ರಗಟೈ ಜಾಈ । ಪೀಛೇ ಅಂಶ್ ತುಮ್ಹಾರಾ ಆಈ ॥52॥
ಯಹಿ ವಿಧಿ ಜೀವನ್ ಕೋ ಭ್ರಮಾಊಂ । ಆಪನ್ ನಾಮ್ ಪುರುಷ್ ಕಾ ಬತಾಊಂ ॥53॥
ದ್ವಾದಶ್ ಪಂಥ್ ನಾಮ್ ಜೋ ಲೈಹಿ । ಹಮರೇ ಮುಖ್ ಮೆಂ ಆನ್ ಸಮೈಹಿ ॥54॥

**ಶಬ್ದಾರ್ಥ:– 1 ರಿಂದ 54ನೇ ವಾಣಿಯ ಶಬ್ದಾರ್ಥವನ್ನು ಮೇಲೆ ತಿಳಿಸಲಾಗಿದೆ.**

**"ಜ್ಞಾನಿ (ಕಬೀರ್) ವಚನ" ಚೌಪದಿ**

**ಅಧ್ಯಾಯ "ಸ್ವಸಮ್‌ವೇದ್ ಬೋಧ್" ಪುಟ 121:–**

ಅರೇ ಕಾಲ್ ಪರಪಂಚ್ ಪಸಾರಾ । ತೀನೋಂ ಯುಗ್ ಜೀವನ್ ದುಖ್ ಆಧಾರಾ ॥55॥
ಬೀನತೀ ತೋರೀ ಲೀನ್ ಮೈಂ ಮಾನೀ । ಮೋಕಹಂ ಠಗೇ ಕಾಲ್ ಅಭಿಮಾನೀ ॥56॥
ಚೌಥಾ ಯುಗ್ ಜಬ್ ಕಲಯುಗ್ ಆಈ । ತಬ್ ಹಮ್ ಅಪನಾ ಅಂಶ್ ಪಠಾಈ ॥57॥
ಕಾಲ್ ಫಂದ್ ಛೂಟೈ ನರ್ ಲೋಈ । ಸಕಲ್ ಸೃಷ್ಟಿ ಪರವಾನಿಕ್ (ದೀಕ್ಷಿತ್) ಹೋಈ ॥58॥
ಘರ್–ಘರ್ ದೇಖೋ ಬೋಧ್ (ಜ್ಞಾನ್) ಬಿಚಾರಾ (ಚರ್ಚಾ)। ಸತ್ಯನಾಮ್ ಸಬ್ ಠೋರ್ ಉಚಾರಾ ॥59॥
ಪಾಂಚ್ ಹಜಾರ್ ಪಾಂಚ್ ಸೌ ಪಾಂಚಾ । ತಬ್ ಯಹ್ ವಚನ್ ಹೋಯಗಾ ಸಾಚಾ ॥60॥
ಕಲಯುಗ್ ಬೀತ್ ಜಾಏ ಜಬ್ ಐತಾ । ಸಬ್ ಜೀವ್ ಪರಮ್ ಪುರುಷ್ ಪದ್ ಚೇತಾ ॥61॥

**ಭಾವಾರ್ಥ:– ಪರಮೇಶ್ವರ ಕಬೀರರೆಂದರು, ಹೇ ಕಾಲ! ನೀನು ದೊಡ್ಡ ಮಾಯಾಜಾಲ ರಚಿಸಿದ್ದಿಯಾ. ನೀನು ಹೇಳುವ ಹಾಗೆ, ಮೂರೂ ಯುಗ (ಸತ್ಯಯುಗ, ತ್ರೇತಾ, ದ್ವಾಪರ)ಗಳಲ್ಲಿ ಜೀವಾತ್ಮಗಳಿಗೆ ಬಹಳ ಕಷ್ಟ ಕೊಡುವೆ. ನನ್ನ ಬಳಿ ಬಂದು ನೀನು ಪ್ರಾರ್ಥಿಸಿಕೊಂಡಿದ್ದೆ. ಅದನ್ನು ಒಪ್ಪಿಕೊಂಡೆ, ನೀನು ನನಗೆ ಮೋಸ ಮಾಡಿದೆ. ಆದರೆ ನಾಲ್ಕನೇ ಯುಗ ಕಲಿಯುಗ ಬಂದಾಗ ನಾನು ನನ್ನ ಅಂಶ ಅಂದ್ರೆ ಕೃಪೆ ಪಡೆದ ಆತ್ಮವನ್ನು ಕಳುಹಿಸುವೆ. ಹೇ ಕಾಲ, ನಿನ್ನ ಮೂಲಕ ಮಾಡಲ್ಪಟ್ಟ ಎಲ್ಲಾ ಜಾಲಗಳನ್ನು ಅಂದ್ರೆ ಅಜ್ಞಾನ ಆಧಾರದಿಂದ ತಪ್ಪು ಜ್ಞಾನ ಹಾಗು ಸಾಧನೆಯನ್ನ ಸತ್ಯಶಬ್ದ ಹಾಗು ಸತ್ಯಜ್ಞಾನದಿಂದ ಕೊನೆಗೊಳಿಸುತ್ತಾನೆ. ಆಗ ಇಡೀ ವಿಶ್ವವೇ ಪ್ರವಾನಿಕ್ ಅಂದ್ರೆ ನನ್ನ ಸಂತನಿಂದ ದೀಕ್ಷೆ ಪಡೆದುಕೊಳ್ಳುವುದು. ಅಲ್ಲಿಯವರೆಗೆ ಅಂದರೆ ಎಲ್ಲಿಯವರೆಗೆ ಕಲಿಯುಗ 5505 ಕಳೆಯುವುದಿಲ್ಲವೋ ಸತ್ಯನಾಮ, ಮೂಲನಾಮ (ಸಾರಶಬ್ದ) ಮತ್ತು ಮೂಲ ಜ್ಞಾನ(ತತ್ವಜ್ಞಾನ)ವನ್ನು ಪ್ರಕಟಗೊಳಿಸಬಾರದು. ಆದರೆ ಯಾವಾಗ ಕಲಿಯುಗದ 5505 ವರ್ಷಗಳು ಪೂರ್ಣವಾಗುವುದೋ, ಆಗ ಮನೆ ಮನೆಯಲ್ಲಿ ಆಧ್ಯಾತ್ಮಿಕ ಜ್ಞಾನ ಚರ್ಚೆ ನಡೆಯುವುದು ಮತ್ತು ಸತ್ಯನಾಮ, ಸಾರಶಬ್ದವನ್ನು ಎಲ್ಲರಿಗೂ ಪ್ರದಾನಿಸಲಾಗುವುದು. ನಾನು ಏನು ಹೇಳುತ್ತಿರುವೆನೋ ಅದು ಕಲಿಯುಗ 5505 ವರ್ಷಗಳು ಪೂರ್ಣವಾದಾಗ ನನ್ನ ಈ ವಚನವು ನಿಜವಾಗುವುದು. 5505 ವರ್ಷಗಳು ಕಲಿಯುಗ**

**ಕಳೆದ ನಂತರ ಆಗ ಎಲ್ಲಾ ಮಾನವರು ಪರಮ ಪುರುಷ ಅಂದರೆ ಸತ್ಯಪುರುಷನ ಪದವಿ ಅಂದರೆ ಆ ಪರಮ ಪದವಿಯ ಮಾಹಿತಿಯಾಗುವುದು ಅದರ ವಿಷಯದಲ್ಲಿ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ ತತ್ವದರ್ಶಿ ಸಂತನು ಪ್ರಾಪ್ತಿಯಾದ ಬಳಿಕ ಪರಮೇಶ್ವರನ ಆ ಪರಮ ಪದವಿಯನ್ನು ಹುಡುಕಬೇಕು ಅಲ್ಲಿ ಹೋದ ಬಳಿಕ ಸಾಧಕನು ಮರಳಿ ಪ್ರಪಂಚಕ್ಕೆ ಬರುವುದಿಲ್ಲ . ಯಾವ ಪರಮೇಶ್ವರನು ಪ್ರಪಂಚವೆಂಬ ವೃಕ್ಷವನ್ನು ವಿಸ್ತರಿಸಿದ್ದಾನೋ, ಅಂದರೆ ಯಾವ ಪರಮೇಶ್ವರನು ಸೃಷ್ಟಿಯ ರಚನೆಯನ್ನು ಮಾಡಿದ್ದಾನೋ ಆ ಪರಮೇಶ್ವರನನ್ನು ಆರಾಧಿಸು. ಮೇಲೆ ತಿಳಿಸಿರುವ ವಾಣಿಯ ಭಾವಾರ್ಥವೇನೆಂದರೆ, ಆ ಸಮಯದಲ್ಲಿ ಆ ಪರಮೇಶ್ವರನ ಪದವಿಯ(ಸತ್ಯಲೋಕದ) ವಿಷಯದಲ್ಲಿ ಎಲ್ಲರಿಗೂ ಪೂರ್ಣ ಜ್ಞಾನವಾಗುವುದು.**

**ಸ್ವಸಮ್‌ವೇದ ಬೋಧ ಪುಟ 170:–**

**ಅಥ ಸ್ವಸಮ್‌ವೇದದ ಸ್ಫುಟವಾರ್ತಾ–ಚೌಪದಿ**

ಏಕ್ ಲಾಖ್ ಔರ್ ಅಸಿ ಹಜಾರಾ । ಪೀರ್ ಪೈಗಂಬರ್ ಔರ್ ಅವತಾರಾ ॥62॥
ಸೋ ಸಬ್ ಆಹೀ ನಿರಂಜನ್ ವಂಶಾ । ತನ್ ಧರೀ–ಧರೀ ಕರ್ಯೆಂ ನಿಜ್ ಪಿತಾ ಪ್ರಶಂಸಾ ॥63॥
ದಶ್ ಅವತಾರ್ ನಿರಂಜನ್ ಕೇ ರೇ । ರಾಮ್ ಕೃಷ್ಣ ಸಬ್ ಆಹೀಂ ಬಡೇರೇ ॥64॥
ಇನಸೇ ಬಡಾ ಜ್ಯೋತಿ ನಿರಂಜನ್ ಸೋಈ । ಯಾಮೆಂ ಫೇರ್ ಬದಲ್ ನಹೀಂ ಕೋಈ ॥65॥

**ಭಾವಾರ್ಥ :– ಪರಮೇಶ್ವರ ಕಬೀರರು ಹೇಳಿದ್ದಾರೆ, ಬಾಬಾ ಆದಮ್‌ರಿಂದ ಹಿಡಿದು, ಹಜರತ್ ಮುಹಮ್ಮದ್‌ವರೆಗೆ ಒಟ್ಟು ಒಂದು ಲಕ್ಷ ಎಂಭತ್ತು ಸಾವಿರ (1,80,000) ಪೈಗಂಬರ್ ಮತ್ತು ಹಿಂದೂಗಳು ಭಾವಿಸುವ ಹತ್ತು ಅವತಾರಗಳನ್ನು ಕಾಲನೇ ಕಳುಹಿಸಿದ್ದಾನೆ. ಈ 10 ಅವತಾರಗಳಲ್ಲಿ ರಾಮ ಮತ್ತು ಕೃಷ್ಣರು ಪ್ರಮುಖರು. ಇವರು ಕಾಲನ ಮಹಿಮೆಯನ್ನು ಮಾಡಿ, ಎಲ್ಲಾ ಜೀವಾತ್ಮಗಳನ್ನು ಭ್ರಮೆಗೊಳಪಡಿಸಿ, ಕಾಲನ ಸಾಧನೆಯನ್ನು ದೃಢಪಡಿಸಿದ್ದಾರೆ. ಇವರೆಲ್ಲರ ಮುಖಂಡನು ಜ್ಯೋತಿ ನಿರಂಜನನಾದ ಕಾಲ(ಬ್ರಹ್ಮ)ನಾಗಿದ್ದಾನೆ.**

**ಸ್ವಸಮ್‌ವೇದ ಬೋಧ ಪುಟ 171(1515):–**

**ಸತ್ಯಕಬೀರ್ ವಚನ**

**ದೋಹೆ :–** ಪಾಂಚ್ ಹಜಾರ್ ಅರೂ ಪಾಂಚ್ ಸೌ ಪಾಂಚ್ ಜಬ್ ಕಲಯುಗ್ ಬೀತ್ ಜಾಯ್ ।
ಮಹಾಪುರುಷ್ ಫರಮಾನ್ ತಬ್, ಜಗ್ ತಾರನ್ ಕೂಂ ಆಯ್ ॥66॥
ಹಿಂದು ತುರ್ಕ್ ಆದಿ ಸಬೈ, ಜೆತ್ತೆ ಜೀವ್ ಜಹಾನ್ ।
ಸತ್ಯ ನಾಮ್ ಕೀ ಸಾಖ್ ಗಹೀ, ಪಾವೈಂ ಪದ್ ನಿರ್ವಾನ್ ॥67॥
ಯಥಾ ಸರಿತಗಣ್ ಆಪ್ ಹೀ, ಮಿಲೈಂ ಸಿಂಧು ಮೈಂ ಧಾಯ್ ।
ಸತ್ಯ ಸುಕೃತ್ ಕೆ ಮಧ್ಯ್ ತಿಮಿ, ಸಬ್ ಹೀ ಪಂಥ್ ಸಮಾಯ್ ॥68॥
ಜಬ್ ಲಗ್ ಪೂರ್ಣ್ ಹೋಯ್ ನಹೀಂ, ಠೀಕ್ ಕಾ ತಿಥಿ ಬಾರ್ ।
ಕಪಟ್–ಚಾತುರೀ ತಬಹಿ ಲೌಂ, ಸ್ವಸಮ್ ವೇದ್ ನಿರಧಾರ್ ॥69॥
ಸಬಹೀ ನಾರೀ–ನರ್ ಶುದ್ಧ್ ತಬ್, ಜಬ್ ಠೀಕ್ ಕಾ ದಿನ್ ಆವಂತ್ ।
ಕಪಟ್ ಚಾತುರೀ ಛೋಡಿ ಕೆ, ಶರಣ್ ಕಬೀರ್ ಗಹಂತ್ ॥70॥
ಏಕ್ ಅನೇಕ್ ಹ್ವೈ ಗಏ, ಪುನಃ ಅನೇಕ್ ಹೋಂ ಏಕ್ ।
ಹಂಸ್ ಚಲೈ ಸತಲೋಕ್ ಸಬ್, ಸತ್ಯನಾಮ್ ಕೀ ಟೇಕ್ ॥71॥
ಘರ್ ಘರ್ ಬೋಧ್ ವಿಚಾರ್ ಹೋ, ದುರ್ಮತಿ ದೂರ್ ಬಹಾಯ್ ।
ಕಲಯುಗ್ ಮೆಂ ಸಬ್ ಏಕ್ ಹೋಈ, ಬರತೆಂ ಸಹಜ್ ಸುಭಾಯ್ ॥72॥
ಕಹಾಂ ಉಗ್ರ್ ಕಹಾಂ ಶುದ್ರ್ ಹೋ, ಹರೈ ಸಬಕೀ ಭವ್ ಪೀರ್ (ಪೀಡ್) ॥73॥
ಸೋ ಸಮಾನ್ ಸಮದೃಷ್ಟಿ ಹೈ, ಸಮರ್ಥ್ ಸತ್ಯ್ ಕಬೀರ್ ॥74॥

ಭಾವಾರ್ಥ :– ಪರಮೇಶ್ವರ ಕಬೀರರು ಹೇಳಿರುವುದೇನೆಂದರೆ, ಹೇ ಧರ್ಮದಾಸ! ನಾನು ಜ್ಯೋತಿ ನಿರಂಜನ ಅಂದರೆ ಕಾಲಬ್ರಹ್ಮನಿಗೆ ಹೇಳಿದ್ದೆ, ಈಗ ನಿಮಗೂ ಹೇಳುತ್ತಿದ್ದೇನೆ.

ಸ್ವಸಮವೇದ ಬೋಧದ 66ನೇ ವಾಣಿಯಿಂದ 74ನೇ ವಾಣಿಯವರೆಗಿನ ಸರಳಾರ್ಥ:– ಯಾವಾಗ ಕಲಿಯುಗದ 5505 ವರ್ಷಗಳು ಕಳೆದು ಹೋಗುವುದೋ ಆಗ ಒಬ್ಬ ಮಹಾಪುರುಷ ವಿಶ್ವವನ್ನು ಪಾರುಮಾಡಲು ಬರುವನು. ಹಿಂದೂ, ಮುಸಲ್ಮಾನ ಮುಂತಾದ ಎಷ್ಟೋ ಪಂಥಗಳು ಇರುವವೋ ಅವೆಲ್ಲಾ ಒಂದಾಗುವವು. ಹಾಗೂ ಪ್ರಪಂಚದಲ್ಲಿ ಎಷ್ಟು ಜೀವಾತ್ಮಗಳಿರುವವೋ, ಅವು ಮಾನವ ಶರೀರ ಪಡೆದು ಆ ಮಹಾಪುರುಷನಿಂದ ಸತ್ಯನಾಮವನ್ನು ಪಡೆದು ಸತ್ಯನಾಮದ ಶಕ್ತಿಯಿಂದ ಮೋಕ್ಷವನ್ನು ಪಡೆದುಕೊಳ್ಳುವವು. ಆ ಮಹಾಪುರುಷ ನಡೆಸುವ ಸತ್ಯ ಕಬೀರ ಪಂಥ, ಆ (13ನೇ) ಪಂಥದಲ್ಲಿ ಎಲ್ಲಾ ಪಂಥಗಳು ಸ್ವತಃ ಎಷ್ಟು ತೀವ್ರ ವೇಗದಿಂದ ಸೇರುವವು ಅಂದ್ರೆ ಹೇಗೆ ಬೇರೇ ಬೇರೆ ನದಿಗಳು ಸ್ವತಃವೇ ಯಾವುದೇ ಅಡೆ ತಡೆ ಇಲ್ಲದೆ ಹರಿಯುತ್ತಾ ಸಮುದ್ರವನ್ನು ಸೇರುವುದೋ ಹಾಗೆ ಅವುಗಳನ್ನು ಯಾರು ತಡೆಯೋಕ್ಕಾಗಲ್ಲ. ಹೀಗೆ ಆ 13ನೇ ಪಂಥದಲ್ಲಿ ಎಲ್ಲಾ ಪಂಥದವರು ಬಹಳ ವೇಗದಲ್ಲಿ ಸೇರಿ ಒಂದೇ ಪಂಥವಾಗುವುದು. ಆದರೆ ಎಲ್ಲಿಯವರೆಗೆ ಸರಿಯಾದ ಸಮಯ ಬರುವುದಿಲ್ಲವೋ, ಅಂದರೆ ಕಲಿಯುಗ 5505 ವರ್ಷಗಳನ್ನು ಪೂರೈಸುವುದಿಲ್ಲವೋ, ಅಲ್ಲಿಯವರೆಗೆ ನಾನು ಈ ಸ್ವಸಮವೇದದಲ್ಲಿ ಹೇಳುತ್ತಿರುವ ಜ್ಞಾನ, ನೀವು ಬರೆಯುತ್ತಿರುವಿ ನಿರಾಧಾರವೆನಿಸುವುದು.

ಯಾವಾಗ ಆ ನಿರ್ಧಾರಿತ ಸಮಯ ಬರುವುದೋ, ಆಗ ಸ್ತ್ರೀ ಪುರುಷರು ಉಚ್ಚ ವಿಚಾರಗಳಿಂದ ಕೂಡಿ, ಶುದ್ಧ ಆಚರಣೆಗಳನ್ನು ಮಾಡುತ್ತಾ, ಕಪಟ, ಸ್ವಾರ್ಥ, ಚತುರತೆಯನ್ನು ಬಿಟ್ಟು ನನ್ನ (ಕಬೀರರ) ಆಶ್ರಯದಲ್ಲಿ ಬರುವರು. ಪರಮಾತ್ಮನಿಂದ ಲಾಭ ಪಡೆಯಲು ಒಂದು ಮಾನವ ಧರ್ಮದಿಂದ ಅನೇಕ ಪಂಥ (ಧಾರ್ಮಿಕ ಸಮುದಾಯ) ಗಳಾಗಿವೆ. ಅವೆಲ್ಲವು ಪುನಃ ಒಂದಾಗುವವು. ಎಲ್ಲ ಹಂಸ (ನಿರ್ವಿಕಾರ ಭಕ್ತರು) ಆತ್ಮಗಳು ಸತ್ಯನಾಮದ ಶಕ್ತಿಯಿಂದ ಸತ್ಯಲೋಕಕ್ಕೆ ತೆರಳುವರು. ನನ್ನ ಆಧ್ಯಾತ್ಮ ಜ್ಞಾನದ ಚರ್ಚೆಯು ಮನೆಮನೆಯಲ್ಲೂ ಆಗುವುದು. ಆ ಕಾರಣದಿಂದ ಎಲ್ಲರ ದುರ್ಬುದ್ಧಿ ಕೊನೆಗೊಳ್ಳುವುದು. ಕಲಿಯುಗದಲ್ಲಿ ಮತ್ತೆ ಎಲ್ಲರೂ ಒಂದಾಗಿ ಸಹಜವಾಗಿ ವರ್ತಿಸುವರು ಅಂದರೆ ಶಾಂತಿಯಿಂದ ಜೀವನ ನಡೆಸುವರು. ಆಗ ಉಗ್ರರಾಗಲಿ, ದರೋಡೆಕೋರರಾಗಿರಲಿ, ಲೂಟಿಕೋರರಾಗಿರಲಿ, ಕಟುಕರಾಗಿರಲಿ, ಅನ್ಯ ದುಷ್ಟತನ ಮಾಡುವವರಾಗಿರಲಿ, ಪರಮಾತ್ಮನು ಸತ್ಯಭಕ್ತಿಯನ್ನು ಮಾಡುವವರ ಎಲ್ಲಾ ಕಷ್ಟಗಳನ್ನು ನಿವಾರಿಸುತ್ತಾನೆ. ಅಂದರೆ ದೂರ ಮಾಡುವನು. ಸತ್ಯ ಸಾಧನೆಯಿಂದ ಎಲ್ಲರ ಸಾಂಸಾರಿಕ ಕಷ್ಟಗಳು ಕೊನೆಗೊಳ್ಳುವವು ಮತ್ತು 13ನೇ ಪಂಥದ ಪ್ರವರ್ತಕನು ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುವನು. ಅಂದ್ರೆ ಮೇಲು ಕೀಳು ಎಂಬ ಬೇಧಭಾವ ಮಾಡುವುದಿಲ್ಲ. ಅವನು ಸಮರ್ಥ ಸತ್ಯ ಕಬೀರನೇ ಆಗಿರುವನು. (ಮಮ್ ಸಂತ್ ಮುಝೆ ಜಾನ್ ಮೇರಾ ಹೀ ಸ್ವರೂಪಮ್)

ಪ್ರಶ್ನೆ:– ಈ ಹದಿಮೂರನೇ ಪಂಥ ಯಾವುದು? ಇದರ ಪ್ರವರ್ತಕರು ಯಾರು?

ಉತ್ತರ:– ಈ ಹದಿಮೂರನೇ ಪಂಥ 'ಯಥಾರ್ಥ ಸತ್ಯ ಕಬೀರ' ಪಂಥ. ಇದರ ಪ್ರವರ್ತಕರು ಸ್ವತಃ ಕಬೀರ್ ಪರಮೇಶ್ವರರೇ ಆಗಿದ್ದಾರೆ. ವರ್ತಮಾನದಲ್ಲಿ ಅದರ ಸಂಚಾಲಕರಾದ, ಅವರ ಗುಲಾಮರಾದ ರಾಮ್‌ಪಾಲ್‌ದಾಸ ಸ್ವಾಮಿ ರಾಮದೇವಾನಂದರ ಪುತ್ರ. (ಆಧ್ಯಾತ್ಮಿಕ ದೃಷ್ಟಿಯಿಂದ ಗುರುಗಳನ್ನು ತಂದೆಯೆಂದು ಭಾವಿಸಲಾಗುತ್ತದೆ. ಏಕೆಂದರೆ ಅವರು ಆತ್ಮವನ್ನು ಪೋಷಿಸುತ್ತಾರೆ.)

ಪ್ರಮಾಣ:– ಹಾಗಂತು ಸಂತ ಧರ್ಮದಾಸನ ವಂಶದವರಾದ ಮಹಂತರಿಂದ ದೀಕ್ಷೆ ಪಡೆದಿರುವ ಶ್ರದ್ಧಾಳುಗಳು ಅಜ್ಞಾನದಿಂದ 13ನೇ ಪಂಥ ಹಾಗೂ ಸಂಚಾಲಕರಾದ ಧರ್ಮದಾಸನ ಕುಟುಂಬದವರೆಂದು ಸಾಬೀತುಪಡಿಸುವ ದುಸ್ಸಾಹಸ ಮಾಡಿದ್ದಾರೆ. ಆದರೆ ಆನೆಯ ವಸ್ತ್ರವನ್ನು ಎಮ್ಮೆಯ ಮೇಲೆ ಹೊದಿಸಿ, ನೋಡಿ ಇದು ಎಮ್ಮೆಯ ವಸ್ತ್ರ ಎಂದು ಯಾರಾದರೂ ಹೇಳಿದರೆ, ಬುದ್ಧಿವಂತರು ತಕ್ಷಣವೇ ಇದು ಎಮ್ಮೆಯ ವಸ್ತ್ರವಲ್ಲವೆಂದು ಹೇಳಿಬಿಡುತ್ತಾರೆ. ಅದು ಆನೆಯದ್ದೇ

ಎಂದು ಹೇಳದಿದ್ದರೂ ಇದು ಎಮ್ಮೆಗಿಂತ ನಾಲ್ಕು ಪಟ್ಟು ಉದ್ದದ, ದಪ್ಪ ಪ್ರಾಣಿಯ ವಸ್ತ್ರವೆಂದು ಸುಲಭವಾಗಿ ಹೇಳಿಬಿಡುತ್ತಾರೆ.

ಉದಾಹರಣೆ:– ಪವಿತ್ರ ಕಬೀರ್ ಸಾಗರ್‌ದ 'ಕಬೀರ ಚರಿತ್ರ ಬೋಧ್' ಎಂಬ ಅಧ್ಯಾಯದ 1834–1835ನೇ ಪುಟದಲ್ಲಿ ಬರೆದಿದೆ.

## "ಹದಿಮೂರು ಗಾಡಿ ಕಾಗದಗಳನ್ನು ಬರೆಯುವುದು"

ಒಮ್ಮೆ ದಿಲ್ಲಿಯ ರಾಜನು ಕಬೀರರಿಗೆ 13 ಗಾಡಿಯಷ್ಟು ಪತ್ರಗಳನ್ನು ಎರಡೂವರೆ ದಿನದಲ್ಲಿ ಅಂದರೆ 60 ಗಂಟೆಗಳಲ್ಲಿ ಬರೆದುಕೊಟ್ಟರೆ, ಅವರನ್ನು ಪರಮಾತ್ಮನೆಂದು ನಂಬುವುದಾಗಿ ಹೇಳಿದನು. ಆಗ ಕಬೀರರು ತಮ್ಮ ಕೋಲಿನಿಂದ ಆ 13 ಗಾಡಿಗಳ ಮೇಲೆ ಒಮ್ಮೆ ಸವರಿದರು. ತಕ್ಷಣವೇ ಎಲ್ಲಾ ಕಾಗದಗಳ ಮೇಲೆ ಆಧ್ಯಾತ್ಮಿಕ ಜ್ಞಾನ ಸಂಪೂರ್ಣ ಅಮೃತವಾಣಿ ಬರೆದುಬಿಟ್ಟರು. ರಾಜನಿಗೆ ಆಗ ನಂಬಿಕೆ ಬಂದರೂ ಸಹ ಅವನು ತಮ್ಮ ಧರ್ಮದ ವ್ಯಕ್ತಿಗಳ (ಮುಸಲ್ಮಾನರ) ಒತ್ತಡಕ್ಕೆ ಸಿಲುಕಿ ಆ ಎಲ್ಲ ಗ್ರಂಥಗಳನ್ನು ದಿಲ್ಲಿಯ ಒಂದು ಜಮೀನಿನಲ್ಲಿ ಹೂತುಬಿಟ್ಟ. ಕಬೀರ್‌ಸಾಗರದ ಅಧ್ಯಾಯ ಕಬೀರ್ ಚರಿತ್ರ್ ಬೋಧ್‌ನ 1834–1835ನೇ ಪುಟದಲ್ಲಿ ಮುಕ್ತಾಮಣಿ ಸಾಹೇಬರ ಕಾಲ ಬರುವುದು ಹಾಗೂ ಅವರ ಧ್ವಜವು ದಿಲ್ಲಿಯಲ್ಲಿ ಹಾರಾಡುವುದು, ಆಗ ಸಮಸ್ತ ಪುಸ್ತಕಗಳನ್ನು ಹೊರ ತೆಗೆಯಲಾಗುತ್ತದೆ ಹಾಗಾಗಿ ಮುಕ್ತಾಮಣಿ ಅವತಾರ (ಧರ್ಮದಾಸನ) ವಂಶದ ಹದಿಮೂರನೇ ಪೀಳಿಗೆಯವನಾಗಿರುವನು ಎಂದು ತಪ್ಪಾಗಿ ಬರೆದಿದೆ.

ವಿವೇಚನೆ:– ಈ ಮೇಲಿನ ಲೇಖನದಲ್ಲಿ ತಪ್ಪಾಗಿ ಬರೆದಿರುವ ಬಗ್ಗೆ ಸಾಕ್ಷಿ ಏನೆಂದರೆ ವರ್ತಮಾನದಲ್ಲಿ ಧರ್ಮದಾಸನ ವಂಶದ ಗದ್ದುಗೆ ದಾಮಾಖೇಡಾ, ರಾಯ್‌ಗಢ್ ಜಿಲ್ಲೆಯ ಛತ್ತೀಸ್‌ಗಢ್ ರಾಜ್ಯದಲ್ಲಿದೆ. ಆ ಗದ್ದುಗೆಯ ಮೇಲೆ 14ನೇ ವಂಶಗುರು ಶ್ರೀ ಪ್ರಕಾಶಮುನಿ ಎಂಬ ಸಾಹೇಬರು ವಿರಾಜಮಾನರಾಗಿದ್ದಾರೆ. 13ನೇ ವಂಶಗುರು ಶ್ರೀ ಗೃಂಥಮುನಿ ಎಂಬ ಸಾಹೇಬರು 1998ರಲ್ಲಿ ಶರೀರವನ್ನು ತ್ಯಜಿಸಿದ್ದರು. ಒಂದುವೇಳೆ 13ನೇ ವಂಶಗುರುವಿನ ವಿಷಯದಲ್ಲಿ ಇದನ್ನು ಬರೆದಿದ್ದರೆ ಅವರು ಹೊರಗೆ ತೆಗೆಸಿ ಬಿಡುತ್ತಿದ್ದರು ಹಾಗೂ ದಿಲ್ಲಿಯಲ್ಲಿ ಧ್ವಜ ಹಾರಿಸುತ್ತಿದ್ದರು. ಹೀಗೆ ಆಗಲಿಲ್ಲ ಹಾಗಾದರೆ ಆ 13ನೇ ಪಂಥದವ ಧರ್ಮದಾಸರ ವಂಶದವರಂತೂ ಅಲ್ಲ.

ನಂತರ 'ಕಬೀರ್ ಚರಿತ್ರ್ ಬೋಧ್'ನ 1870ನೇ ಪುಟದಲ್ಲಿ 12ಪಂಥಗಳ ಹೆಸರನ್ನು ಬರೆಯಲಾಗಿದೆ. ಜ್ಯೋತಿ ನಿರಂಜನನು ಕಬೀರರ ಹೆಸರಿನಲ್ಲಿ ನಕಲಿ ಪಂಥವನ್ನು ನಡೆಸಲು ಹೇಳಿದ್ದನು. ಅದರಲ್ಲಿ ಮೊದಲನೆಯದಾಗಿ 'ನಾರಾಯಣದಾಸ' ಎಂದು ಬರೆದಿದೆ. 12ನೇ ಪಂಥ ಗರೀಬ್‌ದಾಸನದ್ದೆಂದು ಬರೆದಿದೆ. ವಾಸ್ತವದಲ್ಲಿ ಪ್ರಥಮ ಚೂಡಾಮಣಿ. ಬೇಕಂತೆ ಇದರಲ್ಲಿ ಬದಲಾವಣೆ ಮಾಡಲಾಗಿದೆ. ಪರಮೇಶ್ವರ ಕಬೀರರು ನಾರಾಯಣದಾಸನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಲಿಲ್ಲ ಎನ್ನುವುದು ಅವರಿಗೆ ತಿಳಿದಿರಬಹುದು. ನಾರಾಯಣದಾಸ ಶ್ರೀ ಕೃಷ್ಣನ ಉಪಾಸಕನಾಗಿದ್ದನು. ಅವನು ತನ್ನ ತಮ್ಮನಾದ ಚೂಡಾಮಣಿಯನ್ನು ಬಹಳ ವಿರೋಧಿಸಿದ್ದನು. ಆ ಕಾರಣದಿಂದ ಚೂಡಾಮಣಿಯು 'ಕುದುರ್ಮಾಲ' ಎಂಬ ಊರಿಗೆ ಹೊರಟು ಹೋಗಿದ್ದರು. ನಂತರ ಬಾಂಧವಗಢ್ ನಾಶವಾಗಿಹೋಗಿತ್ತು. 'ಕಬೀರ್ ಚರಿತ್ರ ಬೋಧ್' ನಲ್ಲಿ 1870 ರಲ್ಲಿ 12 ಪಂಥಗಳ ಪ್ರವರ್ತಕರ ಹೆಸರು ಬರೆದಿದ್ದಾರೆ, ಅದರಲ್ಲಿ ಮೊದಲ ಹೆಸರು ತಪ್ಪು ಬರೆದಿದ್ದಾರೆ, ಉಳಿದದ್ದು ಸರಿಯಾಗಿದೆ.

1. ನಾರಾಯಣ್‌ದಾಸರ ಪಂಥ 2) ಯಾಗೌ ದಾಸ (ಜಾಗು ದಾಸ)ರ ಪಂಥ 3) ಸೂರತ್ ಗೋಪಾಲ್ ಪಂಥ 4) ಮೂಲ್ ನಿರಂಜನ್ ಪಂಥ 5) ಟಕ್‌ಸಾರಿ ಪಂಥ 6) ಭಗವಾನ್ ದಾಸರ ಪಂಥ 7) ಸತ್‌ನಾಮಿ ಪಂಥ 8) ಕಮಾಲೀಯೆ (ಕಮಾಲ್‌ನ) ಪಂಥ 9) ರಾಮ್ ಕಬೀರ್ ಪಂಥ 10) ಪ್ರೇಮ ಧಾಮದ ವಾಣಿ ಪಂಥ 11) ಜೀವಾ ದಾಸ ಪಂಥ 12) ಗರೀಬ್‌ದಾಸರ ಪಂಥ

**ನಂತರ 'ಕಬೀರ್ ವಾಣಿ' ಎಂಬ ಅಧ್ಯಾಯದ 134ನೇ ಪುಟದಲ್ಲಿ ಕಬೀರ್ ಸಾಗರದಲ್ಲಿ ಬರೆದಿದೆ:–**

**"ವಂಶ ಪ್ರಕಾರ"**

ಪ್ರಥಮ್ ವಂಶ್ ಉತ್ತಮ್ **(ಇದನ್ನು ಚೂಡಾಮಣಿಯ ವಿಷಯದಲ್ಲಿ ಹೇಳಲಾಗಿದೆ)**

ದೂಸರೆ ವಂಶ್ ಅಹಂಕಾರೀ **(ಇದು ಯಾಗೌ ಅಂದರೆ ಜಾಗೂ ದಾಸರದ್ದಾಗಿದೆ)**

ತೀಸರೆ ವಂಶ್ ಪ್ರಚಂಡ್ **(ಇದು ಸೂರತ್ ಗೋಪಾಲರದ್ದಾಗಿದೆ)**

ಚೌಥೆ ವಂಶ್ ಬೀರಹೆ **(ಇದು ಮೂಲ ನಿರಂಜನ ಪಂಥ)**

ಪಾಂಚವೆಂ ವಂಶ್ ನಿಂದ್ರಾ **(ಇದು ಟಕ್‌ಸಾರಿ ಪಂಥ)**

ಛಟೆ ವಂಶ್ ಉದಾಸ್ **(ಇದು ಭಗವಾನ್ ದಾಸರ ಪಂಥ)**

ಸಾತವೆಂ ವಂಶ್ ಜ್ಞಾನ್ ಚತುರಾಈ **(ಇದು ಸತ್‌ನಾಮೀ ಪಂಥ)**

ಆಠವೆಂ ವಂಶ್ ದ್ವಾದಶ್ ಪಂಥ್ ವಿರೋಧ್ **(ಇದು ಕಮಾಲ್‌ನ ಕಮಾಲೀಯ ಪಂಥ)**

ನೌವೆಂ ವಂಶ್ ಪಂಥ್ ಪೂಜಾ **(ಇದು ರಾಮ್ ಕಬೀರ್ ಪಂಥ)**

ದಸವೆಂ ವಂಶ್ ಪ್ರಕಾಶ್ **(ಇದು ಪರಮಧಾಮದ ವಾಣಿ ಪಂಥ)**

ಗ್ಯಾರಹವೆಂ ವಂಶ್ ಪ್ರಕಟ್ ಪಸಾರಾ **(ಇದು ಜೀವಾ ಪಂಥ)**

ಬಾರಹವೆಂ ವಂಶ್ ಪ್ರಕಟ್ ಹೋಯ್ ಉಜಿಯಾರಾ **(ಇದು ಹರಿಯಾಣದ ಝಜ್ಜರ ಜಿಲ್ಲೆಯ ಛುಡಾನಿಯ ಸಂತ ಗರೀಬ್‌ದಾಸರ ಪಂಥ. ಇವರು ಪರಮೇಶ್ವರ ಕಬೀರರು ಭೇಟಿಯಾದ ನಂತರ ಅವರ ಮಹಿಮೆ ಹಾಗೂ ಯಥಾರ್ಥ ಜ್ಞಾನವನ್ನು ತಿಳಿಸಿದವರು. ಇದರಿಂದ ಪರಮಾತ್ಮ ಕಬೀರರ ಮಹಿಮೆಯು ಸ್ವಲ್ಪ ಬೆಳಕಿಗೆ ಬಂದಿತು.)**

ತೇರಹವೇ ವಂಶ್ ಮಿಟ್ಟೈ ಸಕಲ್ ಅಂಧಿಯಾರಾ **(ಇದು ಯಥಾರ್ಥ ಕಬೀರ ಪಂಥ. ಇದು 1994ರಿಂದ ಪ್ರಾರಂಭವಾಗಿದೆ. ಇದು ನನ್ನ ಮೂಲಕ ಅಂದರೆ ರಾಮ್‌ಪಾಲ್ ದಾಸನ ಮೂಲಕ ಮುಂದುವರೆದಿದೆ.)**

**ದಾಮಾಖೇಡಾದವರು, ಧರ್ಮದಾಸನ ವಂಶದ ಗದ್ದುಗೆಯವರು ವಾಸ್ತವಿಕ ರಹಸ್ಯವನ್ನು ಮುಚ್ಚಿಡಲು ಪ್ರಯತ್ನಿಸಿದರು. ಆದರೆ ಸತ್ಯವನ್ನು ಮರೆಮಾಚಲು ಸಾಧ್ಯವಾಗಲಿಲ್ಲ.**

**ಕಬೀರ್ ಸಾಗರ್‌ದ "ಕಬೀರವಾಣಿ" ಎಂಬ ಅಧ್ಯಾಯದ 136ನೇ ಪುಟದಲ್ಲಿದೆ:–**

**ದ್ವಾದಸ್ ಪಂಥ ಚಲೊ ಸೋ ಭೇದ**

ದ್ವಾದಶ್ ಪಂಥ್ ಕಾಲ್ ಫುರಮಾನಾ । ಭೂಲೆ ಜೀವ್ ನ ಜಾಯ್ ಠಿಕಾನಾ ॥
ತಾತೆಂ ಆಗಮ್ ಕಹ್ ಹಮ್ ರಾಖಾ । ವಂಶ್ ಹಮಾರಾ ಚುಡಾಮಣಿ ಶಾಖಾ ॥
ಪ್ರಥಮ್ ಜಗ್ ಮೆಂ ಜಾಗು ಭ್ರಮಾವೈ । ಬಿನಾ ಭೇದ್ ವಹ್ ಗ್ರಂಥ್ ಚುರಾವೈ ॥
ದೂಸರ್ ಸುರತಿ ಗೋಪಾಲ್ ಹೋಈ । ಅಕ್ಷರ್ ಜೋ ಜೋಗ್ ದೃಢಾವೈ ಸೋಈ ॥

**(ವಿವೇಚನೆ:– ಇಲ್ಲಿ ಪ್ರಥಮ ಜಾಗುದಾಸ ಎಂದು ತಪ್ಪಾಗಿ ಬರೆದಿದ್ದಾರೆ ಆದರೆ ವಾಣಿಯಲ್ಲಿ ಸ್ಪಷ್ಟವಾಗಿದೆ ಪ್ರಥಮ ವಂಶ ಚೂಡಾಮಣಿ ಹಾಗೂ ಎರಡನೆಯದು ಜಾಗು ದಾಸ. "ಕಬೀರ್‌ಚರಿತ್ರ ಬೋಧ್"ನ 1870ನೇ ಪುಟದಲ್ಲಿ ಇದರ ಪ್ರಮಾಣ ಸಿಗುತ್ತದೆ. ಅಧ್ಯಾಯ "ಸ್ವಸಮ್‌ವೇದ ಬೋಧ"ದ 155(1499)ನೇ ಪುಟದಲ್ಲೂ ಎರಡನೆಯದು ಜಾಗು ಎಂದು ಬರೆದಿದ್ದಾರೆ. ಆದರೆ ಇಲ್ಲಿ ಪ್ರಥಮ ಎಂದು ಬರೆಯಲಾಗಿದೆ. ಇಲ್ಲಿ ಚೂಡಾಮಣಿಯೇ ಪ್ರಥಮ ಎಂದು ಬರೆಯುವುದು ಸೂಕ್ತ.)**

ತೀಸರಾ ಮೂಲ್ ನಿರಂಜನ್ ಬಾನೀ । ಲೋಕ್ ವೇದ್ ಕೀ ನಿರ್ಣಯ್ ಠಾನೀ ॥

**(ಇದನ್ನು ನಾಲ್ಕನೆಯದೆಂದು ಬರೆಯಬೇಕು.)**

ಚೌಥೆ ಪಂಥ್ ಟಕಸಾರ್ (ಟಕಸಾರೀ) ಭೇದ್ ಲೌ ಆವೈ ।ನೀರ್ ಪವನ್ ಕೋ ಸಂಧಿ ಬತಾವೈ ॥

**(ಇದನ್ನು ಐದನೆಯದೆಂದು ಬರೆಯಬೇಕು.)**

ಪಾಂಚವಾ ಪಂಥ್ ಬೀಜ್ ಕೋ ಲೇಖಾ । ಲೋಕ್ ಪ್ರಲೋಕ್ ಕಹೈ ಹಮ್ ಮೆಂ ದೇಖಾ ॥

**(ಇದು ಭಗವಾನ್ ದಾಸನ ಪಂಥ. ಇದನ್ನು ಆರನೆಯದೆಂದು ಬರೆಯಬೇಕು.)**

ಛಟಾ ಪಂಥ್ ಸತ್ಯನಾಮೀ ಪ್ರಕಾಶಾ । ಘಟ್ ಕೆ ಮಾಹೀಂ ಮಾರ್ಗ್ ನಿವಾಸಾ ॥

**(ಇದನ್ನು ಏಳನೆಯ ಪಂಥವೆಂದು ಬರೆಯಬೇಕು.)**

ಸಾತವಾಂ ಜೀವ್ ಪಂಥ್ ಲೇ ಬೋಲೈ ಬಾನೀ । ಭಯೋ ಪ್ರತೀತ್ ಮರ್ಮ್ ನಹೀಂ ಜಾನೀ ॥

**(ಇದು ಎಂಟನೆಯ ಕಮಾಲ್‌ನ ಪಂಥವಾಗಿದೆ)**

ಆಠವಾಂ ರಾಮ್ ಕಬೀರ್ ಕಹಾವೈ । ಸತಗುರು ಭ್ರಮ್ ಲೈ ಜೀವ್ ದೃಢಾವೈ ॥

**(ವಾಸ್ತವದಲ್ಲಿ ಇದು ಒಂಭತ್ತನೆಯ ಪಂಥವಾಗಿದೆ)**

ನೌಮೆಂ ಜ್ಞಾನ್ ಕೀ ಕಲಾ ದಿಖಾವೈ । ಭಈ ಪ್ರತೀತ್ ಜೀವ್ ಸುಖ್ ಪಾವೈ ॥

**(ವಾಸ್ತವದಲ್ಲಿ ಇದು ಹನ್ನೊಂದನೆಯ ಜೀವಾ ಪಂಥವಾಗಿದೆ. ಇಲ್ಲಿ ಒಂಭತ್ತನೆಯದನ್ನು ತಪ್ಪಾಗಿ ಬರೆಯಲಾಗಿದೆ.)**

ದಸವೆಂ ಭೇದ್ ಪರಮ್ ಧಾಮ್ ಕೀ ಬಾನೀ । ಸಾಖ್ ಹಮಾರೀ ನಿರ್ಣಯ್ ಠಾನೀ ॥

**(ಇದನ್ನು ಸರಿಯಾಗಿ ಬರೆಯಲಾಗಿದೆ. ಆದರೆ 11ನೇಯದನ್ನು ಬರೆದಿಲ್ಲ. ಚೂಡಾಮಣಿಯನ್ನು ಪ್ರಥಮವೆಂದು ಪರಿಗಣಿಸಿದರೆ ಕ್ರಮವು ಸರಿಯಾಗುತ್ತದೆ. ವಾಸ್ತವವಾಗಿ ಚೂಡಾಮಣಿಯೇ ಪ್ರಥಮ. ನಂತರ 12ನೇ ಪಂಥದ ಗರೀಬ್‌ದಾಸರ ಪಂಥದ ವರ್ಣನೆ ಪ್ರಾರಂಭವಾಗುತ್ತದೆ. ಇದು ಸಾಂಕೇತಿಕವಾಗಿದೆ ಸಂತ ಗರೀಬ್‌ದಾಸರ ಜನ್ಮ ವಿಕ್ರಮ ಸಂವತ್ಸರ 1774 ರಲ್ಲಿ ಆಗಿತ್ತು. ಇಲ್ಲಿ ಇದು ತಪ್ಪಾಗಿ 1775 ಎಂದಾಗಿ ಬರೆಯಲಾಗಿದೆ. ಇದು ಪ್ರಿಂಟ್ ಮಾಡುವಾಗ ತಪ್ಪಾಗಿದೆ.**

ಸಂವತ್ ಸತರಹ್ ಸೌ ಪಚಹತ್ತರ್ (1775) ಹೋಈ।ತಾ ದಿನ್ ಪ್ರೇಮ್ ಪ್ರಕಟೆಂ ಜಗ್ ಸೋಈ ॥
ಆಜ್ಞಾ ರಹೈ ಬ್ರಹ್ಮ ಬೋಧ್ ಲಾವೈ । ಕೋಲೀ ಚಮಾರ್ ಸಬಕೇ ಘರ್ ಖಾವೈ ॥
ಸಾಖಿ ಹಮಾರೀ ಲೇ ಜೀವ್ ಸಮಝಾವೈ । ಅಶಂಖ್ಯ ಜನ್ಮ್ ಠೌರ್ ನಹೀಂ ಪಾವೈ ॥
ಬಾರಹವೆಂ (ಬಾರವೈ) ಪಂಥ್ ಪ್ರಗಟ್ ಹೋವೈ ಬಾನೀ । ಶಬ್ದ್ ಹಮಾರೈ ಕೀ ನಿರ್ಣಯ್ ಠಾನೀ ॥
ಅಸ್ಥಿರ್ ಘರ್ ಕಾ ಮರ್ಮ್ ನಹೀಂ ಪಾವೈ ।
ಯೇ ಬಾರ್ (ಬಾರಹ್) ಪಂಥ್ ಹಮೀ (ಕಬೀರ್ ಜೀ) ಕೋ ಧ್ಯಾವೈಂ ॥
ಬಾರಹೇಂ ಪಂಥ್ ಹಮಹಿ (ಕಬೀರ್ ಜೀ ಹೀ) ಚಲಿ ಆವೈಂ ।
ಸಬ್ ಪಂಥ್ ಮಿಟಾ ಏಕ್ ಹೀ ಪಂಥ್ ಚಲಾವೈಂ ॥
ಪ್ರಥಮ್ ಚರಣ್ ಕಲಜುಗ್ ನಿರಯಾನಾ (ನಿರ್ವಾಣ್) । ತಬ್ ಮಗಹರ್ ಮಾಂಡೋ ಮೈದಾನಾ ॥

**ಭಾವಾರ್ಥ:– ಗರೀಬ್‌ದಾಸರೇ 12ನೇ ಪಂಥದವರೆಂದು ಇಲ್ಲಿ ಸ್ಪಷ್ಟವಾಗಿದೆ. ಏಕೆಂದರೆ ಸಂತ ಗರೀಬ್ ದಾಸರಿಗೆ ಪರಮೇಶ್ವರ ಕಬೀರರು ಭೇಟಿಯಾಗಿದ್ದರು ಮತ್ತು ಅವರ ಜ್ಞಾನ ಯೋಗವನ್ನು ತೆರೆದರು. ಆಗ ಸಂತ ಗರೀಬ್‌ದಾಸರು ಪರಮೇಶ್ವರ ಕಬೀರರ ಮಹಿಮೆಯ ವಾಣಿ ಹೇಳಿದರು. ಅದನ್ನು ಗ್ರಂಥ ರೂಪದಲ್ಲಿ ವರ್ತಮಾನದಲ್ಲಿ ಪ್ರಿಂಟ್ ಮಾಡಿಸಲಾಗಿದೆ. ವಿಚಾರ ಮಾಡಿ ಸಂತ ಗರೀಬ್‌ದಾಸರ ಪಂಥದ ತನಕ ಮೊದಲು 12 ಪಂಥಗಳು ನಡೆದಿವೆ. ಇದು ಸಹ ಬರೆಯಲಾಗಿದೆ ಏನೆಂದ್ರೆ ಸಂತ ಗರೀಬ್‌ದಾಸರು ನನ್ನ ಮಹಿಮೆಯ ಸಾಖಿ–ಶಬ್ದ–ಚೌಪದಿ ಬರೆದಿದ್ದಾರೆ ಆದರೆ 12ನೇ ಪಂಥದ ಅನುಯಾಯಿಗಳು ತಮ್ಮ ತಮ್ಮ ಬುದ್ಧಿಗೆ ಅನುಸಾರವಾಗಿ ವಾಣಿಯ ಅರ್ಥವನ್ನು ಮಾಡುವರು. ಆದರೆ ಸರಿಯಾಗಿ ಅರ್ಥ ಮಾಡಿಕೊಳ್ಳದೆ ಸಂತ ಗರೀಬ್‌ದಾಸರವರೆಗಿನ ಪಂಥದ ಅನುಯಾಯಿಗಳು ಅಂದರೆ 12 ಪಂಥದವರು ನನ್ನ ವಾಣಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಈ ಕಾರಣದಿಂದ ಅಶಂಖ್ಯ ಜನ್ಮಗಳವರೆಗೆ ಸತ್ಯಲೋಕವೆಂಬ ಅಮರ ಲೋಕವನ್ನು ಪಡೆಯಲಾರರು. ಈ 12 ಪಂಥದವರು ಕಬೀರರ ಹೆಸರಿನಲ್ಲಿ ಪಂಥವನ್ನು ನಡೆಸುವರು. ಹಾಗೂ ನನ್ನ ಹೆಸರಿನಲ್ಲಿ ಮಹಿಮೆಯನ್ನು ಪಡೆಯುವರು. ಆದರೆ ಈ 12 ಪಂಥದ**

ಅನುಯಾಯಿಗಳು ಯಾವುದೇ ಕಾರಣಕ್ಕೂ ಆ ಸ್ಥಿರವಾದ ಅಂದ್ರೆ ಸತ್ಯಲೋಕವೆಂಬ ಶಾಶ್ವತವಾದ ಮನೆಯನ್ನು ಪ್ರಾಪ್ತಿಸಲಾರರು" ಎಂದರು. ನಂತರ ಹೇಳಿದರು, "ಮುಂದೆ ಹನ್ನೆರಡನೇ ಪಂಥದಲ್ಲಿ (ಸಂತ ಗರೀಬ್‌ದಾಸರ ಪಂಥದಲ್ಲಿ) ನಾನು ಅಂದರೆ ಸ್ವತಃ ಕಬೀರರೇ ನಡೆದು ಬರುವರು. ಆಗ ಎಲ್ಲಾ ಪಂಥಗಳನ್ನು ನಾಶಪಡಿಸಿ ಒಂದು ಪಂಥವನ್ನು ನಡೆಸುವೆನು. ಇದು ಕಲಿಯುಗದ ಮೊದಲ ಭಾಗವಾಗಿದೆ. ನಾನು(ಕಬೀರ್) ವಿಕ್ರಮ ಸಂವತ್ಸರ 1575 ಅಂದರೆ 1518ನೇ ಇಸವಿಯಲ್ಲಿ ಮಗಹರ್ ಎಂಬ ನಗರದಿಂದ (ಉತ್ತರ ಪ್ರದೇಶ) ನಿರ್ವಾಣವನ್ನು ಹೊಂದುವೆ ಅರ್ಥಾತ್ ಯಾವುದಾದರೂ ಲೀಲೆಯನ್ನು ಮಾಡಿ ಸತ್ಯಲೋಕಕ್ಕೆ ಹೋಗುವೆನು".

ಪರಮೇಶ್ವರ ಕಬೀರರು ಕಲಿಯುಗವನ್ನು 3 ಭಾಗಗಳನ್ನಾಗಿ ವಿಭಾಜಿಸಿದ್ದಾರೆ. ಮೊದಲ ಭಾಗದಲ್ಲಿ ಪರಮೇಶ್ವರರು ಲೀಲೆಗಳನ್ನು ಮಾಡಿ ಹೊರಟುಹೋಗಿದ್ದಾರೆ. ಮಧ್ಯದ ಪೀಳಿಗೆ ಯಾವುದೆಂದರೆ ಐದು ಸಾವಿರ ಐದು ನೂರ ಐದು ವರ್ಷಗಳು ಕಳೆದು ಹೋಗುವುದು. ಅಂತಿಮ ಭಾಗದಲ್ಲಿ ಎಲ್ಲರೂ ಕೃತಘ್ನರಾಗುವರು, ಯಾರೂ ಭಕ್ತಿ ಮಾಡುವುದಿಲ್ಲ.

ನಾನು (ರಾಮ್‌ಪಾಲ್ ದಾಸ) ಸಂತ ಗರೀಬ್‌ದಾಸರ 12ನೇ ಪಂಥದಿಂದ ಬಂದಿರುವೆನು. 13ನೇ ಪಂಥ ಈಗ ನಡೆಯುತ್ತಿದೆ. ಪರಮೇಶ್ವರ ಕಬೀರರು ನಡೆಸಿದ್ದಾರೆ. ಗುರು ಮಹಾರಾಜರಾದ ಸ್ವಾಮಿ ರಾಮದೇವಾನಂದರ ಆಶೀರ್ವಾದವಿದೆ. ಇದು ಸಫಲಗೊಳ್ಳುವುದು ಮತ್ತು ಇಡೀ ವಿಶ್ವವೇ ಕಬೀರ ಪರಮೇಶ್ವರ ಭಕ್ತಿ ಮಾಡುವುದು.

ಸಂತ ಗರೀಬ್‌ದಾಸರಿಗೆ ಕಬೀರ್ ಪರಮೇಶ್ವರರು ಸದ್ಗುರು ರೂಪದಲ್ಲಿ ಭೇಟಿಯಾಗಿದ್ದರು. ಪರಮಾತ್ಮನಂತು ಕಬಿರರೇ. ಅವರು ತಮ್ಮ ಜ್ಞಾನವನ್ನು ಹೇಳಲು ಸ್ವತಃ ಭೂಮಿಯ ಮೇಲೆ ಹಾಗೂ ಬೇರೆ ಲೋಕಗಳಲ್ಲಿ ಪ್ರಕಟರಾಗುತ್ತಾರೆ. ಸಂತ ಗರೀಬ್ ದಾಸರು "ಅಸುರ್ ನಿಕಂದನ್ ರಮೈಣಿ"ಯಲ್ಲಿ ಹೇಳಿದ್ದಾರೆ:– ಸತ್‌ಗುರು ದಿಲ್ಲಿ ಮಂಡಲ್ ಆಯಸಿ । ಸೂತಿ ಧರತಿ ಸೂಮ್ ಜಗಾಯಸೀ॥ ದಿಲ್ಲಿ ಕೆ ತಖ್‌ತ್ ಛತ್ರ್ ಫೇರ್ ಭೀ ಫಿರಾಯಸಿ । ಚೌಂಸಠ್ ಯೋಗನಿ ಮಂಗಲ್ ಗಾಯಸೀ ॥ ಸಂತ ಗರೀಬ್‌ದಾಸರ ಸದ್ಗುರು "ಪರಮೇಶ್ವರ ಕಬೀರ ಮುಕ್ತಿದಾತರಾಗಿದ್ದರು"

ಪರಮೇಶ್ವರ ಕಬೀರರು 'ಕಬೀರ್ ಸಾಗರ್' ಎಂಬ ಅಧ್ಯಾಯದ 'ಕಬೀರ್ ಬಾನೀ'ಯ 136 ಹಾಗೂ 137ನೇ ಪುಟದಲ್ಲಿ ಹೇಳಿದ್ದಾರೆ, 12ನೇ ಪಂಥವನ್ನು ಸಂತ ಗರೀಬ್ ದಾಸರ ಮೂಲಕ ನಡೆಸಲಾಗುವುದು.

ಸಂವತ್ ಸತರಹ್ ಸೌ ಪಚಹತ್ತರ್ (1775) ಹೋಈ । ಜಾ ದಿನ್ ಪ್ರೇಮ್ ಪ್ರಕಟೈ ಜಗ್ ಸೋಈ ॥
ಸಾಖಿ ಹಮಾರೀ ಲೇ ಜೀವ್ ಸಮಝಾವೈ । ಅಸಂಖ್ಯೋಂ ಜನ್ಮ್ ಠೌರ್ ನಹೀಂ ಪಾವೈ ॥
ಬಾರಹವೆಂ ಪಂಥ್ ಪ್ರಗಟ್ ಹೋ ಬಾನೀ । ಶಬ್ದ್ ಹಮಾರೇ ಕೀ ನಿರ್ಣಯ್ ಠಾನೀ ॥
ಅಸ್ಥಿರ್ ಘರ್ ಕಾ ಮರ್ಮ್ ನಾ ಪಾವೈಂ । ಯೇ ಬಾರಾ (ಬಾರಹ್) ಪಂಥ್ ಹಮಹೀ ಕೋ ಧ್ಯಾವೈಂ ॥
ಬಾರಹವೆಂ ಪಂಥ್ ಹಮ್ ಹೀ ಚಲಿ ಆವೈ । ಸಬ್ ಪಂಥ್ ಮಿಟಾ ಏಕ್ ಪಂಥ್ ಚಲಾವೈಂ ॥

ಭಾವಾರ್ಥ:– ಪರಮೇಶ್ವರ ಕಬೀರರು ಸ್ಪಷ್ಟ ಪಡಿಸುವುದೇನೆಂದರೆ, 12ನೇ ಪಂಥದವರೆಗಿನ ಅನುಯಾಯಿಗಳು ನನ್ನ ಮಹಿಮೆಯ ಸಾಖೀ ಯಾವುದನ್ನು ನಾನು (ಪರಮೇಶ್ವರ ಕಬೀರರು) ಸ್ವತಃ ಹೇಳಿದ್ದೇನೆ. ಅದನ್ನು ಕಬೀರ್ ಸಾಗರ್, ಕಬೀರ್ ಸಾಖಿ, ಕಬೀರ್ ಬೀಜಕ್, ಕಬೀರ್ ಶಬ್ದಾವಲಿ ಮುಂತಾದ ಗ್ರಂಥಗಳಲ್ಲಿ ಬರೆಯಲಾಗಿದೆ. ಅವುಗಳನ್ನು ಹಾಗು ನನ್ನ ಕೃಪೆಯಿಂದ ಗರೀಬ್‌ದಾಸರ ಮೂಲಕ ಹೇಳಲ್ಪಟ್ಟಿರುವ ವಾಣಿಯ ಗೂಢಾರ್ಥವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ಸ್ವತಃವೇ ತಪ್ಪು ನಿರ್ಣಯ ಮಾಡಿ ತಮ್ಮ ಅನುಯಾಯಿಗಳಿಗೆ ತಿಳಿಸುವರು, ಆದರೆ ಅವರು ಸತ್ಯವನ್ನು ತಿಳಿಯದೆ ಅಶಂಖ್ಯ ಜನ್ಮ, ಶಾಶ್ವತ ಮನೆ ಅಂದರೆ ಸನಾತನ ಪರಮಧಾಮ ಸತ್ಯಲೋಕವನ್ನು ಪ್ರಾಪ್ತಿಮಾಡುವುದಿಲ್ಲ. ಮತ್ತೆ ನಾನು (ಪರಮೇಶ್ವರ ಕಬೀರ) ಆ ಗರೀಬ್‌ದಾಸರ ಪಂಥದಲ್ಲಿ ಬರುವೆನು. ಕಲಿಯುಗದಲ್ಲಿ 5505 ವರ್ಷಗಳು ಮುಗಿದ

ನಂತರ ನಿಜವಾದ ಸಂತ ಕಬೀರರ ಪಂಥವನ್ನು ನಡೆಸಲಾಗುತ್ತದೆ. ಆಗ ಮನೆ ಮನೆಯಲ್ಲೂ ತತ್ವಜ್ಞಾನದ ಬಗ್ಗೆ ಚರ್ಚೆಗಳಾಗುತ್ತವೆ. ತತ್ವಜ್ಞಾನವನ್ನು ಅರಿತು ಪ್ರಪಂಚದ ಮನುಷ್ಯರೆಲ್ಲರೂ ನನ್ನ ಭಕ್ತಿ ಮಾಡುವರು. ಎಲ್ಲರೂ ಸದ್ಗುಣಗಳನ್ನು ಪಡೆದು ನೆಮ್ಮದಿಯಿಂದ ಬಾಳುವರು. ಇದರಿಂದ ಸ್ಪಷ್ಟವಾಗುವುದೇನೆಂದರೆ, 13ನೇ ಪಂಥ ಯಥಾರ್ಥ ಕಬೀರ ಪಂಥ. ಅದು ನನ್ನ (ರಾಮ್‌ಪಾಲ್ ದಾಸನ) ಮೂಲಕ ನಡೆಸಲಾಗುತ್ತಿದೆ. ಇದು ಪರಮೇಶ್ವರ ಕಬೀರರ ಕೃಪೆ. ಕಬೀರ ಪರಮೇಶ್ವರರು 'ತೋತಾದ್ರಿ' ಎನ್ನುವ ಸ್ಥಾನದಲ್ಲಿ ಬ್ರಾಹ್ಮಣರ ಮೂಲಕ ಮಾಡುತ್ತಿರುವ (ದಾಸೋಹ) ಭಂಡಾರದಲ್ಲಿ ಒಂದು ಕೋಣದಿಂದ ವೇದಮಂತ್ರವನ್ನು ಹೇಳಿಸಿದರೆ. ಅವರು ಸ್ವತಃ ಅದನ್ನು ಹೇಳಬಹುದಿತ್ತು. ಸಮರ್ಥರ ಸಮರ್ಥನೆ ಏನೆಂದರೆ, ಅವರು ಯಾರಿಂದ ಬೇಕಾದರೂ ತಮ್ಮ ಮಹಿಮೆಯ ಪರಿಚಯವನ್ನು ಮಾಡಿಸಬಲ್ಲರು. ಆದ್ದರಿಂದ ಕಬೀರ ಪರಮೇಶ್ವರರು ತಮ್ಮ ಕೃಪೆಯಿಂದ ಈ ದಾಸ (ರಾಮ್‌ಪಾಲ್ ದಾಸ) ನಿಂದ 13ನೇ ಪಂಥವನ್ನು ನಡೆಸಿದ್ದಾರೆ.

## "ಕಲಿಯುಗ ವರ್ತಮಾನದಲ್ಲಿ ಎಷ್ಟು ಕಳೆದಿದೆ?"

ಹಿಂದೂ ಧರ್ಮದಲ್ಲಿ ಆದಿ ಶಂಕರಾಚಾರ್ಯರಿಗೆ ವಿಶೇಷ ಸ್ಥಾನಮಾನವಿದೆ. ಹಿಂದೂ ಧರ್ಮದ ಸಂರಕ್ಷಕರು ಹಾಗು ಸಂಜೀವಿನಿ ನೀಡಿದವರು ಸಹ ಆದಿ ಶಂಕರಾಚಾರ್ಯರು. ಇವರ ನಂತರ ಇವರ ಶಿಷ್ಯರು ಪ್ರಚಾರ ಮಾಡಿದರು. ಅದರ ಪರಿಣಾಮವಾಗಿ ಹಿಂದೂ ದೇವತೆಗಳ ಪೂಜೆಯ ಕ್ರಾಂತಿಯುಂಟಾಯಿತು. ಅವರ ಇಷ್ಟದೈವ ಶಂಕರ ಭಗವಂತ ಹಾಗೂ ಅವರ ಪೂಜ್ಯ ದೇವಿ ಪಾರ್ವತಿದೇವಿ ಅದರ ಜೊತೆಗೆ ವಿಷ್ಣು ಹಾಗೂ ಅನ್ಯ ದೇವತೆಗಳ ಉಪಾಸಕರಿವರು. ವಿಶೇಷವಾಗಿ ಇವರಲ್ಲಿ ಪಂಚದೇವ ಪೂಜೆಯ ವಿಧಾನವಿದೆ 1)ಶ್ರೀ ಬ್ರಹ್ಮಾ 2)ಶ್ರೀ ವಿಷ್ಣು 3)ಶ್ರೀ ಶಿವ 4)ಶ್ರೀ ಪರಾಸರ ಋಷಿ 5)ಶ್ರೀಕೃಷ್ಣ ದೈಪಾಯನ ಉರ್ಫ ವೇದವ್ಯಾಸ ಪೂಜ್ಯರು.

'ಆದಿ ಶಂಕರಾಚಾರ್ಯರ ಜೀವನ ಚರಿತ್ರೆ' ಎಂಬ ಪುಸ್ತಕದಲ್ಲಿ ಶಂಕರಾಚಾರ್ಯರ ಜನ್ಮವು 508 ವರ್ಷ ಯೆಸು ಕ್ರಿಸ್ತ್‌ನಿಗಿಂತ ಮೊದಲೇ ಆಗಿತ್ತು ಎಂದು ಬರೆದಿದೆ.

'ಹಿಮಾಲಯ ತೀರ್ಥ' ಎಂಬ ಪುಸ್ತಕದಲ್ಲಿ ಆದಿ ಶಂಕರಾಚಾರ್ಯರ ಜನ್ಮದ ಮೊದಲೇ ಇದರ ಬಗ್ಗೆ ಭವಿಷ್ಯವಾಣಿ ಬರೆದಿತ್ತು. ಆದಿ ಶಂಕರಾಚಾರ್ಯರ ಜನ್ಮವು ಕಲಿಯುಗದಲ್ಲಿ ಮೂರು ಸಾವಿರ ವರ್ಷಗಳು ಕಳೆದ ನಂತರ ಆಗುವುದು ಎಂದು ಅದರಲ್ಲಿ ಬರೆದಿದೆ. ಈಗ ಲೆಕ್ಕ ಹಾಕಿ ನೋಡಿದರೆ 2012 ರಲ್ಲಿ ಕಲಿಯುಗ ಎಷ್ಟು ಕಳೆದಿದೆ ಎಂದು ತಿಳಿಯುತ್ತದೆ. ಆದಿ ಶಂಕರಾಚಾರ್ಯರ ಜನ್ಮವು ಯೇಸು ಕ್ರೀಸ್ತನ ಜನ್ಮಕ್ಕಿಂತ 508 ವರ್ಷಗಳ ಮೊದಲಾಯ್ತು.

ಯೇಸುವಿನ ಜನ್ಮವಾಗಿ 2012 ವರ್ಷಗಳಾಯ್ತು.

ಶಂಕರಾಚಾರ್ಯರಿಗೆ ಎಷ್ಟು ವರ್ಷಗಳಾಯಿತೆಂದರೆ 2012+508=2520 ವರ್ಷ

ಮೇಲಿಂದ ಲೆಕ್ಕಾಚಾರ ಮಾಡಿದರೆ ಶಂಕರಾಚಾರ್ಯರ ಜನ್ಮವಾಯಿತು=ಕಲಿಯುಗ 3000 ವರ್ಷ ಕಳೆದಾಗ

2012ರಲ್ಲಿ ಕಲಿಯುಗ ಎಷ್ಟು ಕಳೆದಿದೆ ಎಂದರೆ 3000+2520=5520 ವರ್ಷ.

ಈಗ 5520 ವರ್ಷ ಕಲಿಯುಗದ ಯಾವ ಇಸವಿಯಲ್ಲಿ ಪೂರ್ತಿಯಾಗುವುದೆಂದು ನೋಡೋಣ. 5520–5505=15 ವರ್ಷ 2012 ಕ್ಕಿಂತ ಮೊದಲು 2012–15=1997 ಇಸವಿಗೆ ಕಲಿಯುಗದ 5505 ವರ್ಷಗಳು ಪೂರ್ಣಗೊಂಡಿದೆ. ಸಂವತ್ಸರದ ಲೆಕ್ಕಾಚಾರದಲ್ಲಿ ಪಾಲ್ಗುಣ ತಿಂಗಳು ಅಂದರೆ ಫೆಬ್ರವರಿ–ಮಾರ್ಚ್‌ನಲ್ಲಿ ಪೂರ್ಣವಾಗುವುದು.

ಯಾವ ಸಂತರು ಭಗವದ್ಗೀತೆಯನ್ನು 5151 ವರ್ಷಕ್ಕೆ ಮೊದಲು ಹೇಳಲಾಗಿತ್ತು ಎಂದು ನಂಬಿದ್ದಾರೆ. ಅದು ತಪ್ಪು.

# "ಗುರುವಿಲ್ಲದೆ ಮೋಕ್ಷವಿಲ್ಲ"

**ಪ್ರಶ್ನೆ:– ಗುರುವಿಲ್ಲದೆ ಭಕ್ತಿ ಮಾಡಲು ಸಾಧ್ಯವಿಲ್ಲವೇ?**

**ಉತ್ತರ:– ಭಕ್ತಿ ಮಾಡಬಹುದು, ಆದರೆ ಅದು ವ್ಯರ್ಥ ಪ್ರಯತ್ನ.**

**ಪ್ರಶ್ನೆ:– ಕಾರಣ ಹೇಳಿ?**

**ಉತ್ತರ:– ಸೂಕ್ಷ್ಮ ವೇದದಲ್ಲಿ ಹೇಳಿರುವ ಪರಮಾತ್ಮನ ವಿಧಾನ ಈ ರೀತಿ ಇದೆ.**

ಕಬೀರ್, ಗುರು ಬಿನ್ ಮಾಲಾ ಫೇರತೆ, ಗುರೂ ಬಿನ್ ದೇತೇ ದಾನ್ ।
ಗುರೂ ಬಿನ್ ದೋನೋಂ ನಿಷ್ಫಲ್ ಹೈ, ಪೂಛೋ ವೇದ್ ಪುರಾಣ್ ॥
ಕಬೀರ್, ರಾಮ್ ಕೃಷ್ಣ ಸೇ ಕೌನ್ ಬಡಾ, ಉನ್ಹೋಂ ಭೀ ಗುರು ಕೀನ್ಹ ।
ತೀನ್ ಲೋಕ್ ಕಾ ವೇ ಧನೀ, ಗುರು ಆಗೆ ಆಧೀನ್ ॥
ಕಬೀರ್, ರಾಮ್ ಕೃಷ್ಣ ಬಡೇ ತಿನ್ಹೂಂ ಪುರ್ ರಾಜಾ ।
ತಿನ್ ಗುರು ಬಂದ್ ಕೀನ್ಹ ನಿಜ್ ಕಾಜಾ ॥

**ಭಾವಾರ್ಥ:– ಗುರುವಿನಿಂದ ದೀಕ್ಷೆ ಪಡೆಯದೆ ಜಪಮಾಲೆ ಹಿಡಿದರೆ ಹಾಗೂ ದಾನ ಮಾಡಿದರೆ ಅದು ಬರೀ ವ್ಯರ್ಥ. ನಿಮಗೆ ಸಂದೇಹವಿದ್ದರೆ ನಿಮ್ಮ ವೇದಗಳಲ್ಲಿ ಮತ್ತು ಪುರಾಣಗಳಲ್ಲಿ ಪ್ರಮಾಣ ನೋಡಿ,**

**ಭಗವದ್ಗೀತೆ, 4 ವೇದಗಳ ಸಾರಾಂಶವಾಗಿದೆ. ಗೀತೆಯ 2ನೇ ಅಧ್ಯಾಯದ 7ನೇ ಶ್ಲೋಕದಲ್ಲಿ ಅರ್ಜುನನು, ಕೃಷ್ಣನಿಗೆ ಹೇಳುತ್ತಾನೆ. "ಹೇ ಕೃಷ್ಣ, ನಾನು ನಿಮ್ಮ ಶಿಷ್ಯ. ನಿಮ್ಮ ಆಶ್ರಯದಲ್ಲಿದ್ದೇನೆ. ಗೀತೆಯ 4ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಶ್ರೀ ಕೃಷ್ಣನಲ್ಲಿ ಕಾಲಬ್ರಹ್ಮನು ಪ್ರವೇಶಿಸಿ ಅರ್ಜುನನಿಗೆ ಹೇಳಿದನು. "ನೀನು ನನ್ನ ಭಕ್ತ. ಪುರಾಣಗಳಲ್ಲಿ ಶ್ರೀ ರಾಮಚಂದ್ರನು ಋಷಿ ವಸಿಷ್ಠರಿಂದ ದೀಕ್ಷೆ ಪಡೆದ ಪ್ರಮಾಣವಿದೆ ಹಾಗೂ ತನ್ನ ಮನೆಯಲ್ಲಿ ಹಾಗೂ ರಾಜ್ಯಭಾರದಲ್ಲಿ ಗುರು ವಸಿಷ್ಠರ ಆಜ್ಞೆ ಪಾಲಿಸುತ್ತಿದ್ದನೆಂಬ ಪ್ರತೀತಿ ಇದೆ. ಶ್ರೀ ಕೃಷ್ಣನು ಸಂದೀಪನಿ ಋಷಿಯಿಂದ ಅಕ್ಷರ ಜ್ಞಾನವನ್ನು ಪಡೆದನು ಹಾಗೂ ಶ್ರೀಕೃಷ್ಣನ ಆಧ್ಯಾತ್ಮಿಕ ಗುರುವು ದುರ್ವಾಸರಾಗಿದ್ದರು.**

**ಕಬೀರ ಪರಮೇಶ್ವರರು ನಮಗೆ ತಿಳಿಸಲು ಇಚ್ಛಿಸುವುದೇನೆಂದರೆ ರಾಮ ಮತ್ತು ಕೃಷ್ಣನಿಗಿಂತ ಯಾರೂ ದೊಡ್ಡವರಿಲ್ಲ ಎಂದು ನೀವು ಭಾವಿಸಿದ್ದೀರಿ. ಅವರು ಮೂರು ಲೋಕದ ಮಾಲೀಕರಿದ್ದರು ಅವರೂ ಸಹ ಗುರು ಮಾಡಿಕೊಂಡು ಭಕ್ತಿ ಮಾಡಿದರು ಹಾಗೂ ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಂಡರು. ಇದರಿಂದ ಸಹಜವಾಗಿ ತಿಳಿದು ಬರುವುದೇನೆಂದರೆ ಅನ್ಯ ವ್ಯಕ್ತಿಗಳು ಒಂದೊಮ್ಮೆ ಗುರುವಿಲ್ಲದೆ ಸಾಧನೆ ಮಾಡಿದರೆ ಅದೇಷ್ಟು ಸರಿ? ಅಂದರೆ ವ್ಯರ್ಥ.**

**❖ ಗುರುವಿಲ್ಲದೆ ಎಲ್ಲೋ ನೋಡಿದ, ಎಲ್ಲೋ ಕೇಳಿದ ಭಕ್ತಿಯನ್ನು ಲೋಕವೇದಕ್ಕೆ ಅನುಸಾರವಾದ ಭಕ್ತಿ ಎಂದು ಕರೆಯುವರು. ಲೋಕವೇದದ ಅರ್ಥವೆಂದರೆ, ಯಾವುದೇ ಕ್ಷೇತ್ರದಲ್ಲಿ ಪ್ರಚಲಿತ ಭಕ್ತಿಯ ಜ್ಞಾನವು ತತ್ವಜ್ಞಾನದ ವಿರುದ್ಧವಾದ ಜ್ಞಾನವಾಗಿರುತ್ತದೆ. ಲೋಕವೇದದ ಆಧಾರದಿಂದ ಈ ದಾಸನು(ರಾಮ್‌ಪಾಲ್ ದಾಸ್) ಶ್ರೀ ಹನುಮಂತ, ಬಾಬಾ ಶ್ಯಾಮ್‌ಜೀ, ಶ್ರೀರಾಮ್, ಶ್ರೀಕೃಷ್ಣ, ಶ್ರೀಶಿವ ಹಾಗೂ ದೇವಿ–ದೇವತೆಗಳ ಭಕ್ತಿಯನ್ನು ಮಾಡುತ್ತಿದ್ದ. ಹನುಮಂತನ ಭಕ್ತಿಯಲ್ಲಿ ಮಂಗಳವಾರದ ವ್ರತ, ಬೂಂದಿ, ಲಾಡು ಹಂಚುತ್ತಿದ್ದೆ. ಸ್ವತಃ ಚೂರಮಾ ದಲ್ಲಿ ಶುದ್ಧ ದೇಶಿ ತುಪ್ಪ ಚೆನ್ನಾಗಿ ಹಾಕಿಬಿಟ್ಟು ತಿನ್ನುತ್ತಿದ್ದೆ. ಬಾಬಾ ಹನುಮಾನಗೆ ಡಾಲ್ಡಾ ವನಸ್ಪತಿ ತುಪ್ಪದಿಂದ ಮಾಡಿದ ಬೂಂದಿ ಲಾಡು ನೈವೇದ್ಯ ಅರ್ಪಿಸುತ್ತಿದ್ದೆ. ಹರೆ ರಾಮ, ಹರೇ ಕೃಷ್ಣ, ಕೃಷ್ಣ–ಕೃಷ್ಣ ಹರೆ ಹರೇ ಎಂಬ ಮಂತ್ರವನ್ನು ಜಪಿಸುತ್ತಿದ್ದೆ. ಯಾರೋ ಹೀಗೆಂದಿದ್ದರು:–**

ಓಂ ನಾಮ್ ಸಬ್‌ಸೆ ಬಡಾ, ಇಸ್‌ಸೆ ಬಡಾ ನ ಕೋಯ್ ।
ಓಂ ನಾಮ್ ಕಾ ಜಪ್ ಕರೆ, ತೋ ಶುದ್ಧ್ ಆತ್ಮಾ ಹೋಯ್ ॥

ಈ ಕಾರಣದಿಂದ ಓಂ ನಾಮದ ಜಪವನ್ನು ಪ್ರಾರಂಭಿಸಿದ್ದೆ. ಓಂ ನಮಃ ಶಿವಾಯ ಈ ರೀತಿ ಶಿವನನ್ನು ಜಪಿಸುತ್ತಿದ್ದೆ. ಓಂ ಭಗವತೆ ವಾಸುದೇವಾಯಃ ನಮಃ ಎಂದು ವಿಷ್ಣುವಿನ ಜಪ ಮಾಡುತ್ತಿದ್ದೆ. ತೀರ್ಥಸ್ಥಾನಗಳಿಗೆ ಹೋಗುವುದು, ದಾನ ಮಾಡುವುದು ಅಲ್ಲಿ ಸ್ನಾನ ಮಾಡುವುದು. ಇದೆಲ್ಲವೂ ಲೋಕವೇದದ ಆಧಾರದ ಮೇಲೆ ಮಾಡುತ್ತಿದ್ದೆನು.

ಮನೆಯಲ್ಲಿ ಸುಖ ಶಾಂತಿ ನೆಲೆಸಿದ್ದರೆ ನಾನು ಇದೆಲ್ಲವನ್ನೂ ಮೇಲಿನ ಭಕ್ತಿ ಮಾಡುತ್ತಿರುವುದರಿಂದ ಶಾಂತಿ ನೆಲೆಸಿದೆ ಎಂದು ನಾನು ನಂಬುತ್ತಿದ್ದೆ. ಪರೀಕ್ಷೆಯಲ್ಲಿ ಪಾಸಾಗುವುದು, ಮದುವೆಯಾಗುವುದು, ಮಕ್ಕಳಾಗುವುದು, ಕೆಲಸ ಸಿಗುವುದು ಈ ಎಲ್ಲಾ ಸುಖಗಳು ಮೇಲಿನ ಸಾಧನೆಯಿಂದ ಸಿಕ್ಕಿದೆ ಎನ್ನುತ್ತಿದ್ದೆ. ಕಬೀರ ಪರಮೇಶ್ವರರು ಸೂಕ್ಷ್ಮ ವೇದದಲ್ಲಿ ಹೇಳಿದ್ದಾರೆ:–

ಕಬೀರ್, ಪೀಛೆ ಲಾಗ್ಯಾ ಜಾಊಂ ಥಾ, ಮೈ ಲೋಕ್ ವೇದ್ ಕೆ ಸಾಥ್ ।
ರಾಸ್ತೆ ಮೇ ಸತ್‌ಗುರು ಮಿಲೆ, ದೀಪಕ್ ದೀನ್ಹಾ ಹಾಥ್ ॥

ಭಾವಾರ್ಥ:– ಸಾಧಕನು ಲೋಕವೇದ ಅರ್ಥಾತ್ ದಂತಕತೆಯ ಆಧಾರದ ಮೇಲೆ ಭಕ್ತಿ ಮಾಡುತ್ತಿದ್ದನು. ಅವನು ಶಾಸ್ತ್ರ ವಿರುದ್ಧವಾದ ಸಾಧನೆಯ ಮಾರ್ಗದಲ್ಲಿ ನಡೆಯುತ್ತಿದ್ದನು. ದಾರಿಯಲ್ಲಿ ಅಂದರೆ ಭಕ್ತಿಮಾರ್ಗದಲ್ಲಿ ಒಂದು ದಿನ ತತ್ವದರ್ಶಿ ಸಂತ ಭೇಟಿಯಾದರು. ಅವರು ಶಾಸ್ತ್ರ ವಿಧಿಯ ಅನುಸಾರವಾಗಿ ಶಾಸ್ತ್ರ ಪ್ರಮಾಣಿತ ಸಾಧನೆ ಎಂಬ ದೀಪವನ್ನು ಕೊಟ್ಟರು. ಅಂದರೆ ಸತ್ಯ ಶಾಸ್ತ್ರಾನುಕೂಲ ಸಾಧನೆಯ ಜ್ಞಾನವನ್ನು ನೀಡಿದರು. ಆಗ ಜೀವನ ನಷ್ಟವಾಗುವುದರಿಂದ ಉಳಿಯಿತು. ಸದ್ಗುರುವಿನ ಮೂಲಕ ಹೇಳಿದ ತತ್ವಜ್ಞಾನದ ಬೆಳಕಿನಲ್ಲಿ ತಾನು ತಪ್ಪು ಮಾಡುತ್ತಿರುವೆ ಎಂದು, ತಪ್ಪುದಾರಿ ಹಿಡಿದಿರುವೆ ಎಂಬುದೂ ಅವನಿಗೆ ತಿಳಿಯಿತು. ಶ್ರೀಮದ್ ಭಗವದ್ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಹೇಳಿರುವಂತೆ, ಶಾಸ್ತ್ರ ವಿಧಿಯನ್ನು ಬಿಟ್ಟು ಯಾವ ಸಾಧಕನು ತನಗೆ ಇಷ್ಟ ಬಂದ ಹಾಗೆ ಸಾಧನೆ ಮಾಡುತ್ತಾನೋ, ಅವನಿಗೆ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ, ಮೋಕ್ಷವೂ ಲಭಿಸುವುದಿಲ್ಲ. ಇದೆಲ್ಲವೂ ವ್ಯರ್ಥ ಸಾಧನೆಯಾಗುವುದು. ನಂತರ ಗೀತೆಯ 16ನೇ ಅಧ್ಯಾಯದ 24ನೇ ಶ್ಲೋಕದಲ್ಲಿ ಹೇಳಿರುವಂತೆ, "ಹೇ ಅರ್ಜುನ, ನಿನಗೆ ಕರ್ತವ್ಯ ಮತ್ತು ಅಕರ್ತವ್ಯದ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣ."

ಮೇಲೆ ತಿಳಿಸಿದ ಸಾಧನೆಯನ್ನು ಈ ದಾಸ (ಸಂತ ರಾಮ್‌ಪಾಲ್ ದಾಸ್) ಮಾಡುತ್ತಿದ್ದನು ಮತ್ತು ಇಡೀ ಹಿಂದೂ ಸಮಾಜ ಮಾಡುತ್ತಿದೆ. ಇದೆಲ್ಲವನ್ನು ಗೀತೆಯಲ್ಲಿ, ವೇದಗಳಲ್ಲಿ ವರ್ಣಿಸದೇ ಇರುವುದರಿಂದ ಶಾಸ್ತ್ರಕ್ಕೆ ವಿರುದ್ಧವಾದ ಸಾಧನೆಯಾಯಿತು. ಹಾಗಾಗಿ ಇದು ವ್ಯರ್ಥ.

ಕಬೀರ್, ಗುರು ಬಿನ್ ಕಾಹು ನ ಪಾಯಾ ಜ್ಞಾನಾ,
ಜ್ಯೋ ಥೋಥಾ ಭುಸ್ ಛಡೆ ಮೂಢ ಕಿಸಾನಾ ॥
ಕಬೀರ್, ಗುರು ಬಿನ್ ವೇದ್ ಪಢೈ ಜೋ ಪ್ರಾಣಿ, ಸಮುಝೈ ನ ಸಾರ್ ರಹೆ ಅಜ್ಞಾನಿ ॥

ಆದ್ದರಿಂದ ಗುರುಗಳಿಂದ ವೇದ ಶಾಸ್ತ್ರಗಳ ಜ್ಞಾನ ಕಲಿಯಬೇಕು. ಅದರಿಂದ ಸತ್ಯ ಭಕ್ತಿಯ ಶಾಸ್ತ್ರಾನುಕೂಲ ಸಾಧನೆ ಮಾಡಿ ಮಾನವ ಜೀವನ ಸಾರ್ಥಕಪಡಿಸಿಕೊಳ್ಳಿ

## "ಪೂರ್ಣ ಗುರುವಿನ ವಚನಗಳ ಶಕ್ತಿಯಿಂದ ಭಕ್ತಿಯಾಗುತ್ತದೆ"

ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡುವುದು ಲಾಭದಾಯಕವಾಗಿದೆ. ಗುರುವಿಲ್ಲದೆ ಭಕ್ತಿ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ.

ಉದಾಹರಣೆ:– ಒಬ್ಬ ರಾಜನ ರಾಣಿ ಬಹಳ ಧಾರ್ಮಿಕಳಾಗಿದ್ದಳು. ಅವಳು ಪರಮೇಶ್ವರ ಕಬೀರರಿಂದ ದೀಕ್ಷೆ ಪಡೆದಿದ್ದಳು. ಆ ರಾಣಿಯು ದಿನವೂ ಗುರುದರ್ಶನಕ್ಕೆ ಹೋಗುತ್ತಿದ್ದಳು. ಇದು ರಾಜನಿಗೆ ಇಷ್ಟವಾಗುತ್ತಿರಲಿಲ್ಲ. ಆದರೆ ಅವನಿಗೆ ಪತ್ನಿಯನ್ನು ತಡೆಯಲು ಆಗುತ್ತಿರಲಿಲ್ಲ. ಏಕೆಂದರೆ ಅವಳು ಶಕ್ತಿಶಾಲಿ ರಾಜನ ಮಗಳಾಗಿದ್ದಳು ಹಾಗೂ ರಾಜನಿಗೆ ರಾಣಿಯನ್ನು ಬೇಸರ ಪಡಿಸಲು ಇಷ್ಟವಿರಲಿಲ್ಲ.

ಒಂದು ದಿನ ರಾಜನು ತನ್ನ ಪತ್ನಿಗೆ ಹೀಗೆಂದನು. "ನೀನು ಸಿಟ್ಟಾಗದಿದ್ದರೆ. ಒಂದು ಮಾತು ಹೇಳುವೆ" ಆಗ ರಾಣಿಯು 'ಹೇಳು' ಎಂದಳು. ಆಗ ರಾಜನು, "ನೀನು ದಿನವೂ ನಿನ್ನ ಗುರುವಿನ ಬಳಿ ತೆರಳುವೆ. ಭಕ್ತಿಯಂತು ಗುರುವಿಲ್ಲದಿದ್ದರೂ ಮಾಡಬಹುದು. ರಾಣಿ ಹೇಳಿದಳು ಗುರುಗಳು ಹೇಳಿದ್ದಾರೆ ಗುರುವಿಲ್ಲದೇ ಭಕ್ತಿ ಮಾಡುವುದು ವ್ಯರ್ಥ. ರಾಜ, ನಾಳೆ ನಿನ್ನ ಜೊತೆ ಬಂದು ನಿನ್ನ ಗುರುವಿನೊಂದಿಗೆ ಭೇಟಿಯಾಗುವೆ ಅವರಿಂದ ಇದನ್ನು ಸ್ಪಷ್ಟಪಡಿಸಿಕೊಳ್ಳುವೆ ಎಂದನು.

ರಾಜನು ಗುರುವಿನ ಬಳಿ ತೆರಳಿ, "ನೀವು ಜನರನ್ನು ಮೂರ್ಖರನ್ನಾಗಿ ಮಾಡುತ್ತಿರುವಿರಿ. ಗುರುವಿಲ್ಲದೆ ಭಕ್ತಿ ಆಗುವುದಿಲ್ಲವೇ, ಭಕ್ತಿ ಏಕೆ ಸಫಲಗೊಳ್ಳುವುದಿಲ್ಲ? ನಾಮ ಮಂತ್ರ ಜಪ ಮಾಡಬೇಕು. ಯಾರಿಂದಲಾದರೂ ಕೇಳಿ ಜಪ ಮಾಡಬಹುದು, ಅಷ್ಟೇ ಸಾಕು ಎಂದನು. ಆಗ ಗುರುಗಳು, "ರಾಜ, ನಿಮ್ಮ ಮಾತಿನಲ್ಲಿ ಬಲವಿದೆ. ನಾನು ನಿಮ್ಮ ಆಸ್ಥಾನಕ್ಕೆ ಬರುವೆ. ಅಲ್ಲಿ ಈ ಮಾತಿಗೆ ಉತ್ತರ ನೀಡುವೆ" ಎಂದರು. ನಿಶ್ಚಿತ ದಿನದಂದು ಗುರುಗಳು ರಾಜನ ದರ್ಬಾರಿನಲ್ಲಿ ಬಂದರು.  ರಾಜನು ಸಿಂಹಾಸನದ ಮೇಲೆ ವಿರಾಜಮಾನನಾಗಿದ್ದನು. ಅಕ್ಕ ಪಕ್ಕದಲ್ಲಿ ಸೈನಿಕರು ನಿಂತಿದ್ದರು. ಗುರುಗಳಿಗೆ ಒಂದು ಪ್ರತ್ಯೇಕವಾದ ಕುರ್ಚಿ ಇರಿಸಿದ್ದರು. ಗುರುಗಳು ಆಸ್ಥಾನಕ್ಕೆ ಹೋದಕೂಡಲೇ ಸೈನಿಕರನ್ನು ಉದ್ದೇಶಿಸಿ ರಾಜನನ್ನು ತೋರಿಸುತ್ತಾ 'ಅವನನ್ನು ಬಂಧಿಸಿ' ಎಂದು ಆದೇಶಿಸಿದರು. ಸೈನಿಕರು ನಿಂತ ಜಾಗದಿಂದ ಅಲುಗಾಡಲಿಲ್ಲ. ಗುರುಗಳು ಅದೇ ಮಾತನ್ನು ಸತತ ಮೂರು ಬಾರಿ ಹೇಳಿದರು. ಆದರೆ ಸೈನಿಕರು ರಾಜನನ್ನು ಬಂಧಿಸಲಿಲ್ಲ. ಸಂತನ ಮೇಲೆ ರಾಜನಿಗೆ ಕೋಪಬಂದಿತು. ಈ ಕಪಟಿ ನನ್ನ ಪತ್ನಿಯನ್ನು ಬಲೆಗೆ ಹಾಕಿಕೊಂಡು ರಾಜ್ಯವನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾನೆ ಎಂದು ತಿಳಿದನು. ಆ ಗುರುವನ್ನು ಬಂಧಿಸಬೇಕೆಂದು ಅದೇ ಸೈನಿಕರಿಗೆ ಆದೇಶಿಸಿದನು. ಅದೇ ಕ್ಷಣದಲ್ಲಿ ಸಿಪಾಯಿಗಳು ಆ  ಗುರುವನ್ನು ಬಂಧಿಸಿದರು.

ಆಗ ಗುರುವು "ನೀವು ಒಬ್ಬ ಸಂತನನ್ನು ಮನೆಗೆ ಕರೆದು ಅವಮಾನ ಮಾಡುತ್ತಿರುವಿರಿ. ಇದು ಒಳ್ಳೆಯದಲ್ಲ" ಎಂದನು. ಆಗ ರಾಜನು "ನೀವೇನು ಬಡಬಡಿಸುತ್ತಿದ್ದೀರಿ? ನನ್ನನ್ನು ಬಂಧಿಸುವಂತೆ ಆದೇಶಿಸುತ್ತಿದ್ದಿರಿ" ಎಂದನು. ಆಗ ಗುರುಗಳು ಹೇಳುತ್ತಾರೆ "ನಾನು ನಿಮ್ಮ ಪ್ರಶ್ನೆಗೆ ಉತ್ತರಿಸುತ್ತಿದ್ದೆ. ಗುರುವಿನಿಂದ ದೀಕ್ಷೆ ಪಡೆದು ಭಕ್ತಿ ಮಾಡುವುದರಿಂದ ಹೇಗೆ ಲಾಭವಾಗುವುದು ಎಂದು ಹೇಳುತ್ತಿದ್ದೆ. ನನಗೆ ಬಿಡಿಸು ಆಗ ಉತ್ತರ ನೀಡುವೆ. ರಾಜನು ಸೈನಿಕರಿಗೆ ಹೇಳಿದ ಬಿಟ್ಟುಬಿಡಿ, ಸೈನಿಕರು ಬಿಟ್ಟುಬಿಟ್ಟರು. ಆಗ ಗುರುಗಳು ಹೇಳಿದರು ಹೇ ರಾಜ, 'ಇವನನ್ನು ಬಂಧಿಸಿ' ಎಂದು ನಾನು ಹೇಳುತ್ತಿದ್ದೆ. ಆದರೆ ಸಿಪಾಯಿಗಳು ಅಲ್ಲಾಡಲಿಲ್ಲ. ಅದೇ ವಾಕ್ಯವನ್ನು ನೀವು ಹೇಳಿದ ತಕ್ಷಣ ಸಿಪಾಯಿಗಳು ನನ್ನನ್ನು ಬಂಧಿಸಿದರು. ನಿಮ್ಮ ಮಾತಿನಲ್ಲಿ ರಾಜನ ಶಕ್ತಿಇದೆ. ನನ್ನ ಮಾತಿನಲ್ಲಿ ಆಧ್ಯಾತ್ಮಿಕ ಶಕ್ತಿ ಇದೆ. ನೀವು ಅದೇ ನಾಮಸ್ಮರಣೆಯನ್ನು ಬೇರೆಯವರಿಗೆ ಹೇಳಿಕೊಟ್ಟರೆ ಅವರಲ್ಲಿ ಮಂತ್ರ ಲಾಭ ಕೊಡಲ್ಲ. ನಾನು ಆ ನಾಮಜಪವನ್ನು ಹೇಳಿ ಕೊಟ್ಟರೆ ಅವನು ತಕ್ಷಣವೇ ಕ್ರಿಯಾಶೀಲನಾಗುವನು. ಆದ್ದರಿಂದ ಪೂರ್ಣ ಗುರುವಿನಿಂದ ದೀಕ್ಷೆ ಪಡೆದರೆ ತಕ್ಷಣವೇ ಆಧ್ಯಾತ್ಮಿಕ ಪ್ರಕ್ರಿಯೆಯು ಪ್ರಾರಂಭವಾಗುವುದು. ಅವನ ಆತ್ಮದಲ್ಲಿ ಭಕ್ತಿಯ ಅಂಕುರವಾಗುತ್ತದೆ. ಸೂಕ್ಷ್ಮ ವೇದದಲ್ಲಿ ಹೇಳಿದೆ:–

ಸತ್ಗುರು ಪಶು ಮಾನುಷ್ ಕರಿ ಡಾರ್ೈ । ಸಿದ್ಧಿ ದೇಯ್ ಕರ್ ಬಹ್ಮ ಬಿಚಾರ್ೈ ॥

ಭಾವಾರ್ಥ:– ಸದ್ಗುರು ಮೊದಲು ಮನುಷ್ಯನಿಗೆ ಸತ್ಸಂಗ ವಚನ ಹೇಳಿ ಹೇಳಿ, ಅವರನ್ನು ಒಳ್ಳೆಯ ಮನುಷ್ಯರನ್ನಾಗಿ ಮಾಡುತ್ತಾರೆ, ಎಲ್ಲಾ ಕೆಟ್ಟಚಟಗಳನ್ನು ಬಿಡಿಸುತ್ತಾರೆ. ನಂತರ ತಮ್ಮ ಭಕ್ತಿಯ ಸಿದ್ಧಿ ಅಂದರೆ ಶಕ್ತಿಯನ್ನು ಶಿಷ್ಯನ ಅಂತಃಕರಣದಲ್ಲಿ ಶಬ್ದದ ಮೂಲಕ ಪ್ರವೇಶಿಸಿ ಪರಮಾತ್ಮನ ಸಾಧನೆ ಮಾಡುವ ವಿಚಾರವನ್ನು ಬಲಗೊಳಿಸುತ್ತಾರೆ. ಇದರಿಂದ ಭಕ್ತಿಮಾಡುವ ಇಚ್ಛೆ ಸಾಧಕನ ಮನಸ್ಸಿನಲ್ಲಿ ಪ್ರಬಲವಾಗುತ್ತಾ ಹೋಗುತ್ತದೆ. ನಂತರ ಅವನು ದೇವನಾಗುತ್ತಾನೆ. ಕಬೀರರು ಹೀಗೆ ಹೇಳಿದ್ದಾರೆ.

ಕಬೀರ್, ಬಲಿಹಾರಿ ಗುರು ಆಪನಾ, ಘಡಿಘಡಿ ಸೌ ಸೌ ಬಾರ್
ಮಾನುಷ್ ಸೆ ದೇವತಾ ಕಿಯಾ, ಕರತ್ ನಾ ಲಾಈ ಬಾರ್ ॥

ಆದ್ದರಿಂದ ಹೀಗೆಂದಿದ್ದಾರೆ:–

ಕಬೀರ್, ಗುರು ಬಿನಾ ಮಾಲಾ ಫೇರತೆ, ಗುರು ಬಿನ್ ದೇತೆ ದಾನ್ ॥
ಗುರು ಬಿನ್ ದೋನೋ ನಿಷ್ಫಲ್ ಹೈ, ಚಾಹೆ ಪೂಛೋ ವೇದ್ ಪುರಾಣ್ ॥
ಯೋಗ್, ಯಜ್ಞ್, ತಪ್ ದಾನ್ ಕರಾವೈ, ಗುರು ವಿಮುಖ್ ಫಲ್ ಕಭೀ ನಹೀ ಪಾವೈ ॥

**ಭಾವಾರ್ಥ:– ಗುರುವಿಲ್ಲದೆ ನಾಮಸ್ಮರಣೆ, ಜಪ, ದಾನ ಮಾಡುವುದು ವ್ಯರ್ಥ. ಇದನ್ನು ವೇದ ಪುರಾಣಗಳಲ್ಲೂ ಹೇಳಿದೆ. ದೀಕ್ಷೆ ಪಡೆದ ನಂತರ ಗುರುವನ್ನು ತ್ಯಜಿಸಿ ಅದೇ ಮಂತ್ರಗಳ ಜಪ ಹಾಗು ಯಜ್ಞ, ಹೋಮ, ಹವನ, ದಾನ ಮಾಡುತ್ತಿದ್ದರೆ ಅದೂ ಸಹ ವ್ಯರ್ಥ. ಇದರಿಂದ ಏನೂ ಪ್ರಯೋಜನವಿಲ್ಲ.**

ಕಬೀರ್, ತಾತೆ ಸತ್ಗುರು ಶರಣಾ ಲೀಜೈ, ಕಪಟ್ ಭಾವ್ ಸಬ್ ದೂರ್ ಕರಿಜೈ ॥

**ಅನ್ಯ ಪ್ರಮಣ:–**

ಕಬೀರ್, ಗರ್ಭಯೋಗೇಶ್ವರ್ ಗುರು ಬಿನಾ, ಕರ್ ತೆ ಹರಿ ಕೀ ಸೇವ್ ।
ಕಹೈಂ ಕಬೀರ್ ಬೈಕುಂಠ್ ಸೆ, ಫೇರ್ ದಿಯಾ ಸುಖದೇವ್ ॥
ರಾಜಾ ಜನಕ್ ಗುರು ಕಿಯಾ, ಫಿರ್ ಕಿನ್ಹೀ ಹರ್ ಕೀ ಸೇವ್ ।
ಕಹೈ ಕಬೀರ್ ಬೈಕುಂಠ್ ಮೆಂ, ಚಲೆ ಗಏ ಸುಖದೇವ್ ॥

**ಭಾವಾರ್ಥ:– ವೇದವ್ಯಾಸರ ಮಗನಾದ ಸುಖದೇವನು ತನ್ನ ಪೂರ್ವಜನ್ಮದ ಭಕ್ತಿಯ ಫಲದಿಂದ ಹಾರಿ ಸ್ವರ್ಗಕ್ಕೆ ಹೋಗುತ್ತಿದ್ದನು. ಒಂದು ದಿನ ಅವನು ವಿಷ್ಣುವಿನ ಲೋಕದಲ್ಲಿನ ಸ್ವರ್ಗದಲ್ಲಿ ಪ್ರವೇಶಿಸಲಾರಂಭಿಸಿದನು. ಆಗ ಅಲ್ಲಿ ಬಾಗಿಲಲ್ಲೇ ಅಲ್ಲಿಯ ಕಾವಲುಗಾರರು ತಡೆದು ಪ್ರಶ್ನಿಸಿದರು ತಮ್ಮ ಪೂಜ್ಯ ಗುರುಗಳ ಹೆಸರು ಹೇಳಿ. ಆಗ ಸುಖದೇವನು "ಗುರುವಿನ ಅವಶ್ಯಕತೆ ಏನಿದೆ? ಅನ್ಯರು ಗುರು ಧಾರಣೆ ಮಾಡಿ ಇಲ್ಲಿ ಬಂದಿರುವರು. ನನ್ನಲ್ಲೇ ಅಷ್ಟು ಶಕ್ತಿ ಇದೆ. ನಾನು ಯಾವ ಗುರುವಿನ ಸಹಾಯವಿಲ್ಲದೆ ನಾನು ಇಲ್ಲಿಗೆ ಬಂದಿರುವೆ" ಎಂದನು. ಆಗ ದ್ವಾರಪಾಲಕರು, "ಇದು ನೀವು ಮಾಡಿರುವ ಪೂರ್ವಜನ್ಮದ ಪುಣ್ಯದ ಫಲ. ನೀವು ಗುರು ಧಾರಣೆ ಮಾಡಿ ಭಕ್ತಿ ಮಾಡದಿದ್ದರೆ, ಸ್ವಲ್ಪ ದಿನದಲ್ಲೇ ನಿಮ್ಮ ಪುಣ್ಯ ಮುಗಿಯುವುದು. ನಿಮ್ಮ ಮಾನವ ಜೀವನ ಅಂತ್ಯಗೊಳ್ಳುವುದು" ಎಂದರು.**

**ಉದಾಹರಣೆಗಾಗಿ:– ವರ್ತಮಾನ ದಲ್ಲಿ ಇನ್ವರ್ಟರ್‌ನ ಬ್ಯಾಟರಿಯನ್ನು ಚಾರ್ಜರ್ ಹಾಕಿ ಚಾರ್ಜ್ ಮಾಡಲಾಗಿದೆ. ಚಾರ್ಜರ್ ತೆಗೆದ ನಂತರವೂ ಇನ್ವರ್ಟರ್ ತನ್ನ ಕೆಲಸ ಮಾಡುತ್ತಿರುತ್ತದೆ. ಏಕೆಂದರೆ ಅದರಲ್ಲಿ ಚಾರ್ಜ್ ಸಂಗ್ರಹಗೊಂಡಿದೆ. ಸ್ವಲ್ಪ ಸಮಯದ ನಂತರ ಚಾರ್ಜ್ ಮುಗಿದ ಮೇಲೆ ಇನ್ವರ್ಟರ್ ಕಾರ್ಯ ನಿಲ್ಲಿಸುತ್ತದೆ. ಟ್ಯೂಬ್ ನಡೆಯಲ್ಲಾ, ಫ್ಯಾನ್ ನಡೆಯಲ್ಲಾ. ಅದನ್ನು ಮತ್ತೆ ಚಾರ್ಜ್ ಮಾಡಬೇಕಾಗುತ್ತದೆ. ಅದಕ್ಕಾಗಿ ಚಾರ್ಜರ್‌ನ ಅವಶ್ಯಕತೆ ಇದೆ. ಹಾಗಾಗಿ ಚಾರ್ಜರ್‌ನನ್ನು ಗುರು ಎಂದು ಭಾವಿಸಿ, ವಿದ್ಯುತ್ತನ್ನು ಪರಮೇಶ್ವರ ಎಂದು ಭಾವಿಸಿ.**

**ಸುಖದೇವನಿಗೆ ತನ್ನ ಸಿದ್ಧಿಯ ಅಭಿಮಾನವಿತ್ತು, ಅವನು ಒಪ್ಪಲಿಲ್ಲ. ಭಗವಂತ ವಿಷ್ಣುವಿನ ತನಕ ವಿಷಯ ಮುಟ್ಟಿತು. ಆಗ ವಿಷ್ಣು ಕೂಡ ಅದೇ ಮಾತು ಹೇಳಿದರು, ಋಷಿಗಳೇ ಮೊದಲು ನೀವು ಗುರು ಧಾರಣೆ ಮಾಡಿ, ನಂತರ ಇಲ್ಲಿ ಬನ್ನಿ. ಸುಖದೇವ ಹೇಳಿದ ಭಗವಂತ ಪೃಥ್ವಿ ಮೇಲೆ ನನ್ನ ಸಮಾನ ಯಾರೂ ಇಲ್ಲ, ನನಗಿಂತ ಶ್ರೇಷ್ಠ ಗುರುಗಳಿಲ್ಲ. ದಯವಿಟ್ಟು ನೀವೇ ಹೇಳಿ ನಾನು ಯಾರನ್ನು ಗುರು ಮಾಡಿಕೊಳ್ಳಲಿ? ಶ್ರೀ ವಿಷ್ಣು ಹೇಳಿದರು ನೀನು ರಾಜ ಜನಕನನ್ನು ಗುರು ಮಾಡಿಕೊ, ಇಷ್ಟು ಹೇಳಿ ಶ್ರೀ ವಿಷ್ಣು ತಮ್ಮ ಅರಮನೆಯಲ್ಲಿ ಹೋದರು. ಸುಖದೇವ ಋಷಿ ಮರಳಿ ಭೂಮಿಗೆ ಬಂದನು. ರಾಜ ಜನಕನಿಂದ ದಿಕ್ಷೆ ಪಡೆದು ಅವರು ಹೇಳಿದ ಭಕ್ತಿ ಮಂತ್ರವನ್ನು ಜಪಿಸಿದನು. ಆಗ ಸುಖದೇವ ಋಷಿಗೆ ಸ್ವರ್ಗದಲ್ಲಿ ಇರಲು ಬಿಟ್ಟರು. ಇದರಿಂದ ತಿಳಿಯುವುದೇನೆಂದರೆ ಗುರುವಿನಿಂದಲೇ ಯಶಸ್ಸು ಸಿಗುವುದು. ಗುರುವಿಲ್ಲದೇ ಭಕ್ತಿ, ದಾನ, ಇತ್ಯಾದಿ ಮಾಡುವುದು ವ್ಯರ್ಥ.**

❖ ಗುರು ಪೂರ್ಣವಾಗಿರಬೇಕು. ನಕಲಿ ಗುರುವಿನಿಂದ ಯಾವುದೇ ಪ್ರಯೋಜನವಿಲ್ಲ

ಪ್ರಶ್ನೆ:–ಪೂರ್ಣ ಗುರುವನ್ನು ಹೇಗೆ ಗುರುತಿಸುವುದು? ನಮಗಂತು ಯಾವ ಸಂತನಿಂದ ನಾವು ಜ್ಞಾನ ಕೇಳುತ್ತೇವೆಯೋ ಅವನೇ ಪೂರ್ಣಗುರುವೆಂದು ಭಾಸವಾಗುತ್ತದೆ.

ಉತ್ತರ:– ಸೂಕ್ಷ್ಮವೇದದಲ್ಲಿ ಗುರುವಿನ ಲಕ್ಷಣಗಳನ್ನು ತಿಳಿಸಲಾಗಿದೆ.

ಗರೀಬ್, ಸತ್‌ಗುರು ಕೇ ಲಕ್ಷಣ್ ಕಹೂಂ, ಮಧುರೆ ಬೈನ್ ವಿನೋದ್ ।
ಚಾರ್ ವೇದ್ ಛಃ ಶಾಸ್ತ್ರ, ಕಹ್ ಅಠಾರಹ್ ಬೋಧ್ ॥

ಸಂತ ಗರೀಬ್‌ದಾಸ(ಹರಿಯಾಣಾದ ಝಜ್ಜರ್ ಜಿಲ್ಲೆಯ ಛುಡಾನಿ ಹಳ್ಳಿ) ಅವರಿಗೆ ಕಬೀರ ಪರಮೇಶ್ವರರು ಸಿಕ್ಕಿದ್ದರು. ಅವರ ಆತ್ಮವನ್ನು ಸತ್ಯಲೋಕ (ಸನಾತನ ಪರಮ ಧಾಮ)ಕ್ಕೆ ಕರೆದುಕೊಂಡು ಹೋಗಿದ್ದರು. ಮೇಲಿನ ಎಲ್ಲಾ ಲೋಕಗಳನ್ನು ತೋರಿಸಿ ಮರಳಿ ಭೂಮಿಗೆ ತಂದು ಬಿಟ್ಟರು. ಅವರಿಗೆ ಸಂಪೂರ್ಣ ಆಧ್ಯಾತ್ಮದ ಜ್ಞಾನವನ್ನು ತಿಳಿಸಿದ್ದರು. ಅವರ ಜ್ಞಾನಯೋಗವನ್ನು ಕಬೀರ ಪರಮೇಶ್ವರರು ತೆರೆದಿದ್ದರು. ಅದರ ಆಧಾರದಿಂದ ಸಂತ ಗರೀಬ್‌ದಾಸರು ಗುರುವನ್ನು ಗುರುತಿಸುವ ಬಗ್ಗೆ ತಿಳಿಸಿದ್ದಾರೆ. ಯಾರು ನಿಜವಾದ ಗುರು ಅಂದ್ರೆ ಸದ್ಗುರು ಆಗಿರುವರೋ ಅವರು ಎಂಥ ಜ್ಞಾನ ಹೇಳುವನೆಂದರೆ ಅವರ ವಚನದಿಂದ ಆತ್ಮಕ್ಕೆ ಆನಂದವಾಗುವುದು. ಆ ವಚನವು ಅತ್ಯಂತ ಮಧುರವಾಗಿರುತ್ತದೆ. ಏಕೆಂದರೆ ಅವು ಸತ್ಯದ ಮೇಲೆ ಆಧಾರಿತವಾಗಿರುತ್ತವೆ. ಇದಕ್ಕೆ ಕಾರಣವೇನೆಂದರೆ ಪೂರ್ಣ ಗುರು ನಾಲ್ಕು ವೇದಗಳು ಮತ್ತು ಎಲ್ಲಾ ಶಾಸ್ತ್ರಗಳ ಜ್ಞಾನವನ್ನು ವಿಸ್ತಾರವಾಗಿ ಹೇಳುತ್ತಾರೆ.

ಇದೇ ಪ್ರಮಾಣ ಕಬೀರ ಪರಮೇಶ್ವರರು ಸೂಕ್ಷ್ಮವೇದದಲ್ಲಿ ಕಬೀರ್ ಸಾಗರ್‌ದಲ್ಲಿ ಅಧ್ಯಾಯ "ಜೀವ್ ಧರ್ಮ ಬೋಧ್" ಪುಟ 1960ರಲ್ಲಿ ತಿಳಿಸಿದ್ದಾರೆ.

ಗುರು ಕೆ ಲಕ್ಷಣ್ ಚಾರ್ ಬಖಾನಾ, ಪ್ರಥಮ್ ವೇದ್ ಶಾಸ್ತ್ರ ಕೊ ಜ್ಞಾನಾ ॥
ದುಜೆ ಹರಿ ಭಕ್ತಿ ಮನ್ ಕರ್ಮ್ ಬಾನಿ, ತೀಜೆ ಸಮದೃಷ್ಟಿ ಕರಿ ಜಾನೀ ॥
ಚೌಥೆ ವೇದ್ ವಿಧಿ ಸಬ್ ಕರ್ಮಾ, ಯೆ ಚಾರ್ ಗುರೂ ಗುಣ್ ಜಾನೊಂ ಮರ್ಮಾ ॥

ಸರಳಾರ್ಥ:– ಯಾರು ನಿಜವಾದ ಗುರುವಾಗಿರುವನೋ ಅವನ ನಾಲ್ಕು ಮುಖ್ಯವಾದ ಲಕ್ಷಣಗಳಿರುತ್ತವೆ ಎಂದು ಕಬೀರ ಪರಮೇಶ್ವರರು ಹೇಳಿದ್ದಾರೆ.

1)ಎಲ್ಲಾ ವೇದ ಮತ್ತು ಶಾಸ್ತ್ರಗಳನ್ನು ಅವನು ಸರಿಯಾಗಿ ತಿಳಿದಿರುತ್ತಾನೆ.

2)ಅವನು ಸಹ ಭಕ್ತಿ ಮನಸ್ಸು, ಕರ್ಮ, ವಚನದಿಂದ ಮಾಡುತ್ತಾನೆ ಅಂದರೆ ಅವನು ಏನು ಹೇಳುವನೋ ಮತ್ತು ಏನು ಮಾಡುವನೋ ಅದರಲ್ಲಿ ಯಾವ ವ್ಯತ್ಯಾಸವಿಲ್ಲ.

3)ಅವನು ಎಲ್ಲಾ ಅನುಯಾಯಿಗಳನ್ನು ಸಮಾನದೃಷ್ಟಿಯಲ್ಲಿ ನೋಡುತ್ತಾನೆ. ಭೇದಭಾವ ಮಾಡುವುದಿಲ್ಲ.

4)ಅವನು ಎಲ್ಲಾ ಭಕ್ತಿ ಕರ್ಮಗಳನ್ನು ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಹಾಗೂ ಸೂಕ್ಷ್ಮವೇದಗಳ) ಅನುಸಾರ ಮಾಡುವನು ಹಾಗು ಮಾಡಿಸುವನು.

❖ ವೇದಗಳಲ್ಲಿ(ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಕೇವಲ 'ಓಂ' ಇದೊಂದು ನಾಮ ಮಾತ್ರ ಜಪ ಮಾಡುವುದಿದೆ.

ಪ್ರಮಾಣ:– ಯಜುರ್ವೇದದ 40ನೇ ಅಧ್ಯಾಯದ 15 ಹಾಗೂ 17ನೇ ಮಂತ್ರದಲ್ಲಿ

ಮಂತ್ರ 15ರಲ್ಲಿ ಹೇಳಲಾಗಿದೆ ಏನೆಂದರೆ 'ಓಂ' ನಾಮದ ಸ್ಮರಣೆಯನ್ನು ಕೆಲಸ ಮಾಡುತ್ತಾ ಮಾಡು. ವಿಶೇಷ ಭಾವದಿಂದ ನಾಮಸ್ಮರಣೆ ಮಾಡು. ಮನುಷ್ಯ ಜೀವನದ ಪರಮ ಕರ್ತವ್ಯವೆಂದು ತಿಳಿದು ಸ್ಮರಣೆ ಮಾಡು. ಓಂ ಜಪವನ್ನು ಸಾಯುವವರೆಗೂ ಮಾಡಿದರೆ ಅಮರತ್ವ ಪ್ರಾಪ್ತಿಯಾಗುತ್ತದೆ ಎಷ್ಟು ಓಂ ಜಪದಿಂದ ಸಿಗುವುದಿದೆ ಅಷ್ಟು ಪ್ರಾಪ್ತಿಯಾಗುತ್ತದೆ. (ಯಜುರ್ವೇದ. 40/15)

❖ ಯಜುರ್ವೇದದ 40ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ವೇದ ಜ್ಞಾನದಾತಾ ಬ್ರಹ್ಮನೆಂದು ಎಂದು ಹೇಳಲಾಗಿದೆ. ಪೂರ್ಣ ಪರಮಾತ್ಮ ಅವ್ಯಕ್ತನಾಗಿರುವನು. ಅವನು ಎಲ್ಲರಿಗೆ

ಕಾಣುವುದಿಲ್ಲ. ಅವನ ಬಗ್ಗೆ ಯಜುರ್ವೇದದ 40ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಅವನ ಯಥಾರ್ಥ ಜ್ಞಾನ ತತ್ವದರ್ಶಿ ಸಂತರೇ ಬಲ್ಲರು ಅವರಿಂದ ಕೇಳು ಎಂದು ಹೇಳಲಾಗಿದೆ. ನಂತರ ಯಜುರ್ವೇದದ 40ನೇ ಅಧ್ಯಾಯದ 17ನೇ ಶ್ಲೋಕದಲ್ಲಿ (ಅಹಂ ಖಮ್ ಬ್ರಹ್ಮ)"ನಾನು ಬ್ರಹ್ಮ. ನನ್ನ ಓಂ ನಾಮವಿದೆ. ನಾನು ಮೇಲೆ ದಿವ್ಯ ಆಕಾಶ ಎಂಬ ಬ್ರಹ್ಮಲೋಕದಲ್ಲಿ ಇರುತ್ತೇನೆ" ಎಂದು ಹೇಳಲಾಗಿದೆ. (ಯಜುರ್ವೇದ. 40/17)

ಇದನ್ನೇ ದೇವಿ ಮಹಾಪುರಾಣದ 7ನೇ ಸ್ಕಂದದ 463ನೇ ಪುಟದಲ್ಲಿ ದೇವಿಯು ಹಿಮಾಲಯ ರಾಜನಿಗೆ ಹೇಳಿದ್ದಾಳೆ. "ಹೇ ರಾಜ, ನೀನು ಆತ್ಮ ಕಲ್ಯಾಣವನ್ನು ಇಚ್ಛಿಸಿದ್ದರೆ ನನ್ನ ಜಪ ಸಹಿತ ಎಲ್ಲಾ ವಿಷಯಗಳನ್ನು ಬಿಟ್ಟು ಬಿಡು, ಕೇವಲ 'ಓಂ' ನಾಮವನ್ನು ಜಪ ಮಾಡು, ಬ್ರಹ್ಮ ಪ್ರಾಪ್ತಿಯ ಉದ್ದೇಶವನ್ನು ಇಟ್ಟುಕೋ, ಇದರಿಂದ ನೀನು ಬ್ರಹ್ಮನನ್ನು ಪಡೆಯಬಹುದು. ಆ ಬ್ರಹ್ಮನು ಬ್ರಹ್ಮಲೋಕವೆಂಬ ದಿವ್ಯ ಆಕಾಶದಲ್ಲಿ ಇರುತ್ತಾನೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ವೇದಗಳಲ್ಲಿ ಕೇವಲ 'ಓಂ' ನಾಮವನ್ನು ಮಾತ್ರ ಜಪಮಾಡುವುದಿದೆ. ಶ್ರೀಮದ್ ಭಗವದ್ಗೀತೆಯ ಅದು ವೇದಗಳ ಸಾರಾಂಶವಾಗಿದೆ. ಅದರಲ್ಲಿ 8ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಹೇಳಲಾಗಿದೆ:–

ಓಮ್ ಇತಿ ಏಕಾಕ್ಷರಮ್ ಬ್ರಹ್ಮ ವ್ಯಾಹರನ್ ಮಾಮ್ ಅನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಮ್ ಸಃ ಯಾತಿ ಪರಮಾಮ್ ಗತಿಮ್ ॥

ಅನುವಾದ:– ಗೀತೆಯ ಜ್ಞಾನದಾತ ಬ್ರಹ್ಮನು ಹೇಳಿದ್ದಾನೆ. ಬ್ರಹ್ಮನಾದ ನನ್ನ ಕೇವಲ 'ಓಂ' ಒಂದು ಅಕ್ಷರ ವಿದೆ. ಅದನ್ನು ಉಚ್ಚರಿಸುತ್ತಾ–ಸ್ಮರಿಸುತ್ತ ಯಾವ ಸಾಧಕನು ಸಾವನ್ನಪ್ಪುತ್ತಾನೋ, ಅವನು 'ಓಂ' ನಾಮ ಸ್ಮರಣೆಯಿಂದ ಪ್ರಾಪ್ತವಾಗುವ ಪರಮ ಗತಿ ಅಂದರೆ ಬ್ರಹ್ಮಲೋಕವನ್ನು ಪಡೆಯುತ್ತಾನೆ.

ಶ್ರೀಮದ್ ಭಗವದ್ಗೀತೆ ಮತ್ತು ವೇದಗಳಲ್ಲಿ ಇದನ್ನು ಬಿಟ್ಟು ಅಂದರೆ 'ಓಂ' ಅನ್ನು ಬಿಟ್ಟು ಬೇರೆ ಯಾವ ನಾಮವೂ ಬ್ರಹ್ಮ ಸಾಧನೆಗಾಗಿ ಇಲ್ಲ.

'ಓಂ' ನಾಮ ಸ್ಮರಣೆ ಶಾಸ್ತ್ರ ಬದ್ಧವಾಗಿದೆ ಎಂದು ಪ್ರಾಮಾಣಿಕರಿಸಲಾಗಿದೆ.

❖ ಗೀತೆ ಜ್ಞಾನದಾತನು ಸ್ಪಷ್ಟಪಡಿಸುವುದೇನೆಂದರೆ, "ಹೇ ಅರ್ಜುನ! ನಿನ್ನ ಹಾಗೂ ನನ್ನ ಅನೇಕ ಜನ್ಮಗಳಾಗಿವೆ. ಮುಂದೆನೂ ಆಗುವವು. ನನ್ನ ಉತ್ಪತ್ತಿಯನ್ನು ಋಷಿ ಹಾಗೂ ದೇವತೆಗಳಿಗೂ ಗೊತ್ತಿಲ್ಲ (ಗೀತಾ ಅಧ್ಯಾಯ/ ಶ್ಲೋಕ–2/ 12, 4/ 5, 10/ 2)

❖ ಇದರಿಂದ ಸ್ಪಷ್ಟವಾಯ್ತೆನೆಂದರೆ ಗೀತೆಯ ಜ್ಞಾನದಾತ ಬ್ರಹ್ಮನು ನಾಶಹೊಂದುವವನು. ಹಾಗು ಹುಟ್ಟುತ್ತಾನೆ–ಸಾಯುತ್ತಾನೆ. ಅವನ ಉಪಾಸಕರೂ ಸಹ ಈ ಜನನ–ಮರಣ ಚಕ್ರದಲ್ಲೆ ಇರುವರು. ಆದ್ದರಿಂದ ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ಬ್ರಹ್ಮಲೋಕಕ್ಕೆ ಹೋದ ಸಾಧಕನೂ ಸಹ ಪುನರ್ಜನ್ಮದಲ್ಲಿರುತ್ತಾರೆ. ಆದ್ದರಿಂದ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹೇಳಿರುವಂತೆ, 'ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರರ ಆಶ್ರಯ ಪಡೆ. ಆ ಪರಮೇಶ್ವರರ ಕೃಪೆಯಿಂದ ನೀನು ಪರಮಪದವನ್ನು ಹಾಗೂ ಸನಾತನ ಪರಮಧಾಮ ಅಂದರೆ ಸತ್ಯಲೋಕವನ್ನು ಪಡೆಯುವೆ".

ನಂತರ, ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತಾ ಜ್ಞಾನದಾತನು ಹೇಳಿರುವನು,"ಯಾವಾಗ ತತ್ವದರ್ಶಿ ಸಂತರಿಂದ ತತ್ವಜ್ಞಾನ ಪ್ರಾಪ್ತವಾಗುವುದೋ, ಆಗ ಅವರು ಹೇಳಿದ ರೀತಿ ಸಾಧನೆ ಮಾಡಿ, ಅದರ ನಂತರ ಪರಮೇಶ್ವರನ ಆ ಪರಮ ಪದದ ಹುಡುಕಾಟ ಮಾಡಬೇಕು. ಅಲ್ಲಿಗೆ ತೆರಳಿದ ನಂತರ ಸಾಧಕ ಮತ್ತೆ ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಆದ್ದರಿಂದ ಕೇವಲ ಆ ಪರಮೇಶ್ವರನ ಪೂಜೆ ಮಾಡಿ.

ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ:–

ಜರಾ ಮರಣ್ ಮೋಕ್ಷಾಯ್ ಮಾಮ್ ಆಶ್ರಿತ್ಯ ಯತಂತಿಯೇ,

ತೆ ತತ್ ಬ್ರಹ್ಮ ವಿದುಃ ಕೃತಸ್ನಮ್ ಆಧ್ಯಾತ್ಮಮ್ ಕರ್ಮ ಚ ಅಖಿಲಮ್ ॥

ಗೀತೆಯ ಜ್ಞಾನದಾತನು ಹೇಳಿದ್ದಾನೆ. ಯಾರು ನಾನು ಹೇಳಿದ ಜ್ಞಾನದ ಮೇಲೆ ಆಶ್ರಿತರಾಗಿ ಅಂದರೆ "ನಾನು ಹೇಳಿದ ಪ್ರಕಾರ ತತ್ವದರ್ಶಿ ಸಂತರಿಂದ ತತ್ವಜ್ಞಾನ ಪಡೆಯುತ್ತಾರೊ ಅವರು ಜರಾ ಅಂದರೆ ವೃದ್ಧಾಪ್ಯ ಹಾಗೂ ಮೃತ್ಯುವಿನ ಕಷ್ಟದಿಂದ ಪಾರಾಗಿ ಮೋಕ್ಷವನ್ನು ಪಡೆಯಲು ಪ್ರಯತ್ನ ಮಾಡುತ್ತಾರೆ. ಹಾಗೂ ಪ್ರಪಂಚದ ಯಾವುದೇ ಬೆಲೆಬಾಳುವ ವಸ್ತುಗಳನ್ನು ಭಕ್ತಿಯ ಪ್ರತಿಫಲವಾಗಿ ಇಚ್ಛಿಸುವುದಿಲ್ಲ. ಅವರು (ತತ್ ಬ್ರಹ್ಮ ವಿದುಃ) ಆ ಬ್ರಹ್ಮನನ್ನು, ಸಂಪೂರ್ಣ ಆಧ್ಯಾತ್ಮವನ್ನು ಹಾಗೂ ಎಲ್ಲಾ ಕರ್ಮಗಳನ್ನು ಬಲ್ಲವರಾಗಿರುತ್ತಾರೆ.

❖ ಅರ್ಜುನನು ಗೀತೆಯ **8**ನೇ ಅಧ್ಯಾಯದ **1**ನೇ ಶ್ಲೋಕದಲ್ಲಿ ಕೇಳುತ್ತಾನೆ. "ತತ್ ಬ್ರಹ್ಮ" ಎಂದರೆ ಯಾರು? ಆಗ ಉತ್ತರವಾಗಿ ಗೀತಾ ಜ್ಞಾನದಾತನು ಗೀತೆಯ **8**ನೇ ಅಧ್ಯಾಯದ **3**ನೇ ಶ್ಲೋಕದಲ್ಲಿ ಹೇಳಿದ್ದಾನೆ. ಅವನು 'ಪರಮ ಅಕ್ಷರ ಬ್ರಹ್ಮನು'

❖ ಗೀತೆಯ **8**ನೇ ಅಧ್ಯಾಯದ **5**ನೇ ಮತ್ತು **7**ನೇ ಶ್ಲೋಕದಲ್ಲಿ ಗೀತಾಜ್ಞಾನದಾತನು ತನ್ನನ್ನು ಆರಾಧಿಸುವಂತೆ ತಿಳಿಸಿದ್ದಾನೆ ಮತ್ತು ವಿಶ್ವಾಸ ನೀಡಿದ್ದಾನೆ. ನನ್ನ ಭಕ್ತಿ ಮಾಡುವುದರಿಂದ ನನ್ನನ್ನು ಪಡೆಯುವೆ. ನನ್ನ ಭಕ್ತಿಯಿಂದ ಜನನ–ಮರಣ, ಕರ್ಮಚಕ್ರ ಇರುವುದು, ಯುದ್ಧವೂ ಮಾಡಬೇಕು, ಪರಮಶಾಂತಿ ಸಿಗುವುದಿಲ್ಲವೆಂದು ತಿಳಿಸಿದ್ದಾನೆ.

❖ ನಂತರ ಗೀತೆಯ ಜ್ಞಾನದಾತನು ತಕ್ಷಣವೇ ಗೀತೆಯ **8**ನೇ ಅಧ್ಯಾಯದ **8, 9, 10**ನೇ ಶ್ಲೋಕದಲ್ಲಿ ಹೇಳಿದ್ದಾನೆ, "ತತ್ ಬ್ರಹ್ಮ" ಅಂದರೆ ಪರಮ ಅಕ್ಷರ ಬ್ರಹ್ಮನ ಭಕ್ತಿ ಮಾಡುವವನು ಆ ಸಚ್ಚಿದಾನಂದ ಘನ ಬ್ರಹ್ಮ ಅಂದರೆ ನನ್ನ ಹೊರತಾಗಿ ಬೇರೆ ದಿವ್ಯ ಪರಮೇಶ್ವರನನ್ನು ಪಡೆಯುವುದಾಗಿ ಹೇಳಿದ್ದಾನೆ.

❖ ಇದೇ ರೀತಿ ಗೀತೆಯಲ್ಲಿ ಪರಮ ಅಕ್ಷರ ಬ್ರಹ್ಮನ ಮಹಿಮೆಯನ್ನು ಗೀತೆ ಅಧ್ಯಾಯ **15** ಶ್ಲೋಕ **17**ರಲ್ಲಿ ಹೇಳಲಾಗಿದೆ. ಗೀತೆಯ **15**ನೇ ಅಧ್ಯಾಯದ **16**ನೇ ಶ್ಲೋಕದಲ್ಲಿ ಇಬ್ಬರು ಪುರುಷರ ಬಗ್ಗೆ ಹೇಳಲಾಗಿದೆ. ಒಬ್ಬ ಕ್ಷರಪುರುಷ ಇವನು ಗೀತೆಯ ಜ್ಞಾನ ಕೊಟ್ಟವನು, ಇವನ **21** ಬ್ರಹ್ಮಾಂಡಗಳ ಕ್ಷೇತ್ರವಿದೆ. ಇವನು ಗೀತೆಯ ಜ್ಞಾನದಾತ ಬ್ರಹ್ಮನು.

❖ ಇನ್ನೊಬ್ಬ ಅಕ್ಷರ ಪುರುಷ ಅವನ ಕ್ಷೇತ್ರ **7** ಶಂಖ ಬ್ರಹ್ಮಾಂಡಗಳದ್ದು. ಇವರಿಬ್ಬರನ್ನು ನಾಶಹೊಂದುವರೆಂದು ಹೇಳಲಾಗಿದೆ. ಇವರ ಲೋಕಗಳಲ್ಲಿರುವ ಎಲ್ಲಾ ಜೀವಾತ್ಮಗಳು ನಾಶಹೊಂದುವರೆಂದು ಹೇಳಲಾಗಿದೆ.

ಗೀತೆಯ **15**ನೇ ಅಧ್ಯಾಯದ **17**ನೇ ಶ್ಲೋಕದಲ್ಲಿ ಹೇಳಲಾಗಿದೆ:–

ಉತ್ತಮ ಪುರುಷಃ ತೂ ಅನ್ಯಃ ಪರಮಾತ್ಮಾ ಇತಿ ಉದಾಹೃತಃ
ಯಃ ಲೋಕ ತ್ರಯಮ್ ಅವಿಶ್ಯ ವಿಭರ್ತ್ರಿ ಅವ್ಯಯಃ ಈಶ್ವರಃ ॥

ಅನುವಾದ:– ಉತ್ತಮ ಪುರುಷ=ಪುರುಷೋತ್ತಮ ಅಂದರೆ ಪರಮ ಅಕ್ಷರಬ್ರಹ್ಮನಂತು ಮೇಲೆ ತಿಳಿಸಿದಂತೆ ಕ್ಷರ ಪುರುಷ ಮತ್ತು ಅಕ್ಷರ ಪುರುಷನಿಗಿಂತ ಬೇರೆಯಾದವನು. ಅವನೇ ಪರಮಾತ್ಮ **3** ಲೋಕಗಳಲ್ಲಿ {**1**ನೇಯದು ಕ್ಷರ ಪುರುಷನ **21** ಬ್ರಹ್ಮಾಂಡಗಳ ಕ್ಷೇತ್ರದ ಲೋಕ, **2**ನೇಯದು ಅಕ್ಷರ ಪುರುಷನ **7** ಶಂಖ ಬ್ರಹ್ಮಾಂಡಗಳ ಲೋಕ, **3**ನೇಯದು ಮೇಲಿನ ನಾಲ್ಕು ಲೋಕಗಳು(ಸತ್ಯಲೋಕ, ಅಲಖ್‌ಲೋಕ, ಅಗಮಲೋಕ ಹಾಗು ಅನಾಮಿಲೋಕ) ಈ ರೀತಿ ಮೂರು ಲೋಕಗಳಲ್ಲಿ} ಪ್ರವೇಶಿಸಿ ಎಲ್ಲರ ಧಾರಣೆ–ಪೋಷಣೆ ಮಾಡುತ್ತಾನೆ. ಅವನು ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನು.

❖ ಗೀತೆಯ **17**ನೇ ಅಧ್ಯಾಯದ **23**ನೇ ಶ್ಲೋಕದಲ್ಲಿ ಪರಮ ಅಕ್ಷರಬ್ರಹ್ಮನ ಪ್ರಾಪ್ತಿಯ ಮಂತ್ರ ಹೇಳಲಾಗಿದೆ:–

ಓಂ ತತ್ ಸತ್ ಇತಿ ನಿರ್ದೇಶಃ ಬ್ರಾಹ್ಮಣಃ ತ್ರಿವಿಧಃ ಸ್ಮೃತಃ ।
ಬ್ರಾಹ್ಮಣಾಃ ತೇನ್ ವೇದಾಃ ಯಜ್ಞಾಃ ಚ ವಿಹಿತಾ ಪುರಾ ॥

**ಬ್ರಹ್ಮಣಃ=ಸಚ್ಚಿದಾನಂದ ಘನ ಬ್ರಹ್ಮ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಭಕ್ತಿಯ ಸಾಧನೆ ಅರ್ಥಾತ್ ಪರಮೇಶ್ವರನ ಆ ಪರಮ ಪದವನ್ನು ಪಡೆಯುವ ಮಂತ್ರವನ್ನು ಹೇಳಲಾಗಿದೆ. ಅಲ್ಲಿಗೆ ಹೋದ ಬಳಿಕ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಅಲ್ಲಿ ಪರಮ ಶಾಂತಿ ಪಡೆಯುತ್ತಾರೆ. ಅದು ಸನಾತನ ಪರಮಧಾಮವಾಗಿದೆ.**

**ಓಂ=ಇದು ಬ್ರಹ್ಮ ಅರ್ಥಾತ್ ಕ್ಷರ ಪುರುಷನ ಮಂತ್ರ.**

**ತತ್=ಇದು ಅಕ್ಷರ ಪುರುಷನ ಜಪ ಮಂತ್ರ. ಈ ಮಂತ್ರವು ಸಾಂಕೇತಿಕವಾಗಿದೆ. ವಾಸ್ತವಿಕ ಮಂತ್ರವನ್ನು ಸೂಕ್ಷ್ಮವೇದದಲ್ಲಿ ಹೇಳಲಾಗಿದೆ. ಈ ಮಂತ್ರವು ದೀಕ್ಷೆಯ ಸಮಯದಲ್ಲಿ ದೀಕ್ಷಾರ್ಥಿಗೆ ಹೇಳಲಾಗುತ್ತದೆ. ಬೇರೆಯವರಿಗೆ ತಿಳಿಸಲಾಗುವುದಿಲ್ಲ.**

**ಸತ್=ಇದು 'ಪರಮ ಅಕ್ಷರ ಪುರುಷನ' ಸಾಧನೆಯ ಮಂತ್ರ. ಇದೂ ಸಾಂಕೇತಿಕವಾಗಿದೆ. ದೀಕ್ಷೆಯ ಸಮಯದಲ್ಲಿ ದೀಕ್ಷಾರ್ಥಿಗೆ ಹೇಳಲಾಗುವುದು. ಸೂಕ್ಷ್ಮವೇದದಲ್ಲಿ ಯಥಾರ್ಥ ಮಂತ್ರವನ್ನು ಬರೆಯಲಾಗಿದೆ. ಸಾಮವೇದದ ಮಂತ್ರ ಸಂಖ್ಯೆ 822ರಲ್ಲೂ ಇದರ ಬಗ್ಗೆ ಸಾಕ್ಷಿ ಇದೆ. 3 ನಾಮ ಜಪದಿಂದ ಪೂರ್ಣ ಮೋಕ್ಷವು ಪ್ರಾಪ್ತಿಯಾಗುವುದು.**

**822ನೇ ಸಂಖ್ಯೆಯ ಸಾಮವೇದದ ಉತಾರ್ಚಿಕ 3ನೇ ಅಧ್ಯಾಯದ 5ನೇ ಖಂಡದ 8ನೇ ಶ್ಲೋಕ (ಸಂತ ರಾಮ್‌ಪಾಲ್ ದಾಸರ ಮೂಲಕ ಭಾಷಾ-ಭಾಷ್ಯ):-**

ಮನೀಷಿಭಿಃ ಪವತೆ ಪೂರ್ವ್ಯಃ ಕವಿರ್ನೃಭಿರ್ಯತಃ ಪರಿ ಕೋಶಾಃ ಅಸಿಷ್ಯದತ್ ।
ತ್ರಿತಸ್ಯ ನಾಮ್ ಜನಯನ್ಮಧು ಕ್ಷರನ್ನಿಂದ್ರಸ್ಯ ವಾಯುಂ ಸಖ್ಯಾಯ್ ವರ್ಧಯನ್ ॥ 8 ॥
ಮನೀಷಿಭಿಃ-ಪವತೆ-ಪೂರ್ವ್ಯಃ-ಕವಿರ್-ನೃಭಿಃ-ಯತಃ-ಪರಿ-ಕೋಶಾನ್-ಆಸಿಷ್ಯದತ್-ತ್ರಿ-ತಸ್ಯ-ನಾಮ್-ಜನಯನ್-ಮಧು-ಕ್ಷರನಃ-ನ-ಇಂದ್ರಸ್ಯ-ವಾಯುಮ್-ಸಖ್ಯಾಯ್‌ವರ್ಧಯನ್।

ಶಬ್ದಾರ್ಥ:-(ಪೂರ್ವ್ಯಃ) ಸನಾತನ ಅರ್ಥಾತ್ ಎಲ್ಲರಿಗಿಂತ ಮೊದಲು ಪ್ರಕಟವಾದ (ಕವಿರ್ ನೃಭಿಃ) ಕಬೀರ ಪರಮೇಶ್ವರರು ಮಾನವ ರೂಪ ಧರಿಸಿ ಅರ್ಥಾತ್ ಗುರು ರೂಪದಲ್ಲಿ ಪ್ರಕಟರಾಗಿ (ಮನೀಷಿಭಿಃ) ಬುದ್ಧಿವಂತ ಭಕ್ತರಿಗೆ (ತ್ರಿ) ಮೂರು (ನಾಮ) ಮಂತ್ರಗಳನ್ನು ಅರ್ಥಾತ್ ನಾಮ ಉಪದೇಶವನ್ನು ನೀಡಿ (ಪವತೆ) ಪಾಪರಹಿತ ಅಂದರೆ ಪವಿತ್ರರನ್ನಾಗಿ ಮಾಡಿ (ಜನಯನ್) ಜನನ ಮತ್ತು (ಕ್ಷರನಃ) ಮರಣ ರಹಿತರನ್ನಾಗಿ (ನ) ಮಾಡುತ್ತಾರೆ ಮತ್ತು (ತಸ್ಯ) ಅವರ (ವಾಯುಮ್) ಪ್ರಾಣ ಅರ್ಥಾತ್ ಜೀವನ-ಶ್ವಾಸಗಳನ್ನು ಅವುಗಳನ್ನು ಸಂಸ್ಕಾರದ ಅನುಸಾರ ಎಣಿಸಿ ನೀಡಿದ್ದಾಗಿರುತ್ತದೆ ಅವುಗಳನ್ನು (ಕೋಶಾನ್) ತಮ್ಮ ಭಂಡಾರದಿಂದ (ಸಖ್ಯಾಯ್) ಸ್ನೇಹದ ಆಧಾರದಿಂದ (ಪರಿ) ಪೂರ್ಣ ರೂಪದಿಂದ (ವರ್ಧಯನ್) ಹೆಚ್ಚಿಸುತ್ತಾರೆ. (ಯತಃ) ಈ ಕಾರಣದಿಂದ (ಇಂದ್ರಸ್ಯ) ಪರಮೇಶ್ವರನ (ಮಧು) ವಾಸ್ತವಿಕ ಆನಂದವನ್ನು (ಅಸಿಶ್ಯದತ್) ತಮ್ಮ ಆಶೀರ್ವಾದ ಪ್ರಸಾದದಿಂದ ಪ್ರಾಪ್ತಿಮಾಡಿಸುತ್ತಾರೆ.

**ಭಾವಾರ್ಥ:- ಈ ಮಂತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿರುವುದೇನೆಂದರೆ ಪರಮಾತ್ಮ ಕಬೀರರು ಮಾನವ ಶರೀರದಲ್ಲಿ ಗುರು ರೂಪದಲ್ಲಿ ಪ್ರಕಟಗೊಂಡು ಪ್ರಭು ಪ್ರೇಮಿಗಳಿಗೆ ಮೂರು ನಾಮಜಪವನ್ನು ಕೊಟ್ಟು ಸತ್ಯ ಭಕ್ತಿಯನ್ನು ನೀಡುತ್ತಾರೆ ಹಾಗೂ ಆ ಮಿತ್ರಭಕ್ತರನ್ನು ಪವಿತ್ರರನ್ನಾಗಿ ಮಾಡಿ ತಮ್ಮ ಆಶೀರ್ವಾದದಿಂದ ಪೂರ್ಣ ಪರಮಾತ್ಮ ಅರ್ಥಾತ್ ತನ್ನ ಪ್ರಾಪ್ತಿಗಾಗಿ ದಾರಿ ತೋರಿಸುತ್ತಾ ಪೂರ್ಣ ಸುಖವನ್ನು ನೀಡುತ್ತಾರೆ. ಸಾಧಕನ ಆಯಸ್ಸನ್ನು ಹೆಚ್ಚಿಸುತ್ತಾರೆ. ಇದೇ ಪ್ರಮಾಣ ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿದೆ. ಓಂ-ತತ್-ಸತ್ ಇತಿ ನಿರ್ದೇಶಃ ಬ್ರಹ್ಮಣಃ ತ್ರಿವಿಧ ಸ್ಮೃತಃ ಅಂದರೆ ಪೂರ್ಣ ಪರಮಾತ್ಮನು ಪಡೆಯುವ ಓಂ(1) ತತ್(2) ಸತ್(3) ಈ ಮಂತ್ರ ಜಪದ ಸ್ಮರಣೆ ಮಾಡುವ ನಿರ್ದೇಶನವಿದೆ. ಈ ಮಂತ್ರವನ್ನು ತತ್ವದರ್ಶಿ ಸಂತನಿಂದ**

ಪಡೆದುಕೋ. ತತ್ವದರ್ಶಿ ಸಂತನ ವಿಷಯದಲ್ಲಿ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಹೇಳಲಾಗಿದೆ. ಹಾಗು ಗೀತೆಯ 15ನೇ ಅಧ್ಯಾಯದ 1 ಮತ್ತು 4 ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನ ಗುರುತು ತಿಳಿಸಲಾಗಿದೆ ಹಾಗೂ ತತ್ವದರ್ಶಿ ಸಂತನಿಂದ ತತ್ವಜ್ಞಾನವನ್ನು ಪಡೆದು ಅದರ ನಂತರ ಆ ಪರಮ ಪದ ಪರಮೇಶ್ವರರನ್ನು ಹುಡುಕಬೇಕು ಎಂದು ಹೇಳಲಾಗಿದೆ. ಅದೇ ಪೂರ್ಣ ಪರಮಾತ್ಮನಿಂದ ಈ ಪ್ರಪಂಚದ ಸೃಷ್ಟಿಯಾಗಿದೆ.

ವಿಶೇಷ:–ಮೇಲೆ ತಿಳಿಸಿರುವ ವಿವರಣೆಯಿಂದ ಸ್ಪಷ್ಟವಾಯ್ತೆನೆಂದರೆ ಪವಿತ್ರ ನಾಲ್ಕು ವೇದಗಳಲ್ಲೂ ಪ್ರಮಾಣವಿದೆ, ಏನೆಂದರೆ ಪೂರ್ಣ ಪರಮಾತ್ಮನೇ ಪೂಜೆಗೆ ಯೋಗ್ಯನು. ಅವನ ವಾಸ್ತವಿಕ ಹೆಸರು ಕವಿರ್ದೇವ (ಕಬೀರ ಪರಮೇಶ್ವರ) ಮತ್ತು ಮೂರು ಮಂತ್ರವನ್ನು ಜಪಿಸುವುದರಿಂದಲೇ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ.

ಈ ಮೂರು ಮಂತ್ರಗಳ ಜಪವು ನಾಲ್ಕು ವೇದಗಳ ಸಾರಾಂಶ ಶ್ರೀ ಭಗವದ್ಗೀತೆಯಲ್ಲಿ ಪ್ರಾಮಾಣಿಕರಿಸಲಾಗಿದೆ. ಇದರಿಂದ ಆ ಸ್ಥಾನ ಸಿಗುವುದು, ಅಲ್ಲಿಗೆ ತೆರಳಿದ ಬಳಿಕ ಸಾಧಕನು ಮತ್ತೆ ಮರಳಿ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಅದು ಸನಾತನ ಪರಮಧಾಮವಾಗಿದೆ, ಅಲ್ಲಿಗೆ ಹೋದ ಬಳಿಕ ಪರಮ ಶಾಂತಿ ಸಿಗುತ್ತದೆ.

ವೇದ ಹಾಗೂ ಗೀತೆಯಲ್ಲಿ ಈ ಅಮೂಲ್ಯ ಮೂರು ನಾಮದ ಮಂತ್ರ ಅಸ್ಪಷ್ಟ ಅಂದ್ರೆ ಸಾಂಕೇತಿಕವಾಗಿದೆ. ಆದ್ದರಿಂದ ನಾಲ್ಕು ವೇದ ಹಾಗು ಗೀತೆಯ ಪ್ರಕಾರ ಸಾಧನೆ ಮಾಡುವುದರಿಂದ ಆ ಸ್ಥಾನ ಹಾಗು ಪರಮಾತ್ಮ ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕ ಹಾಗೂ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಸ್ಪಷ್ಟಗೊಳಿಸಿದ್ದಾನೆ ಏನಂದ್ರೆ ಯಜ್ಞಗಳ ಅಂದರೆ ಧಾರ್ಮಿಕ ಅನುಷ್ಠಾನಗಳ ಯಥಾರ್ಥ ಜ್ಞಾನ (ಬ್ರಹ್ಮಣಃ ಮುಖೆ) ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನು ತನ್ನ ಮುಖ–ಕಮಲದಿಂದ ವಾಣಿಯನ್ನು ಹೇಳುತ್ತಾರೆ, ಅದನ್ನು ಸಚ್ಚಿದಾನಂದ ಘನ ಬ್ರಹ್ಮನವಾಣಿ ಎಂದು ಹೇಳಲಾಗುತ್ತದೆ. ಅದನ್ನು ತತ್ವಜ್ಞಾನ ಹಾಗೂ ಸೂಕ್ಷ್ಮವೇದ ಎಂದೂ ಕರೆಯಲಾಗುತ್ತದೆ. ಅದನ್ನು ತಿಳಿದ ನಂತರ ಸರ್ವ ಪಾಪಗಳಿಂದ ಮುಕ್ತನಾಗುತ್ತಾನೆ. ಅದರಲ್ಲಿ ಸಂಪೂರ್ಣ ಭಕ್ತಿ ಮಂತ್ರ ಮತ್ತು ವಿಧಿ–ವಿಧಾನಗಳನ್ನು ತಿಳಿಸಲಾಗಿದೆ. (ಗೀತೆಯ 4ನೇ ಅಧ್ಯಾಯ 32ನೇ ಶ್ಲೋಕ).

❖ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ=ಆ ತತ್ವಜ್ಞಾನವನ್ನು ನೀನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ಕಪಟತೆಯನ್ನು ಬಿಟ್ಟು, ವಿನಯವಾಗಿ ಪ್ರಶ್ನೆ ಮಾಡುವುದರಿಂದ, ಅವರು ಪರಮಾತ್ಮನತತ್ವವನ್ನು ಚೆನ್ನಾಗಿಅರಿತ ಜ್ಞಾನಿ ಮಹಾತ್ಮ ನಿನಗೆ ತತ್ವಜ್ಞಾನದ ಉಪದೇಶ ನೀಡುವರು.(ಗೀತೆಯ 4ನೇ ಅಧ್ಯಾಯದ 34 ಶ್ಲೋಕ)

ಸಜ್ಜನರೇ, ಆ ತತ್ವದರ್ಶಿ ಸಂತನೇ ಈ ದಾಸ (ಸಂತ ರಾಮ್‌ಪಾಲ್ ದಾಸ) ನಾಗಿದ್ದಾನೆ. ಆ ತತ್ವಜ್ಞಾನವು ನನ್ನ ಬಳಿ ಇದೆ. ನನ್ನನ್ನು ಬಿಟ್ಟರೆ ವರ್ತಮಾನದಲ್ಲಿ ಬೇರೆ ಯಾರ ಬಳಿಯೂ ಇಲ್ಲ. ವಿಶ್ವದಲ್ಲಿ ಸುಮಾರು 7 ಶತಕೋಟಿ ಜನಸಂಖ್ಯೆ ಇದೆ. ಇದರಲ್ಲಿ ಯಾರ ಬಳಿಯೂ ಈ ಜ್ಞಾನವಿಲ್ಲ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಿಂದ 15ನೇ ಶ್ಲೋಕದವರೆಗೆ ಗೀತೆಯ ಜ್ಞಾನ ನೀಡಿದವನು, ಮೂರೂ ಗುಣಗಳ (ರಜೋಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ಹಾಗೂ ತಮೋಗುಣ ಶಿವನ) ಭಕ್ತಿ ಮಾಡುವವರಿಗೆ 1)ರಾಕ್ಷಸ ಸ್ವಭಾವವನ್ನು ಹೊಂದಿರುವವರು 2)ಮನುಷ್ಯರಲ್ಲಿ ನೀಚರು 3)ಕೆಟ್ಟ ಕೆಲಸ ಮಾಡುವವರು 4)ಈ ಮೂರ್ಖರು ನನ್ನ ಭಕ್ತಿಯನ್ನೂ ಮಾಡುವುದಿಲ್ಲ.

ನಂತರ ಗೀತೆಯ ಜ್ಞಾನ ನೀಡುವವನು ಗೀತೆಯ 7ನೇ ಅಧ್ಯಾಯದ 16ರಿಂದ 18ನೇ ಶ್ಲೋಕದವರೆಗೆ ತಮ್ಮ ಸಾಧನೆಯನ್ನು ಮಾಡುವವರ ಸ್ಥಿತಿಯನ್ನು ವರ್ಣಿಸಿದ್ದಾನೆ. ಅದೇನೆಂದರೆ ನನ್ನ ಭಕ್ತಿ 4 ರೀತಿಯವರು(1.ಆರ್ತ 2.ಅರ್ಥಾರ್ಥಿ 3.ಜಿಜ್ಞಾಸು 4.ಜ್ಞಾನಿ) ಮಾಡುತ್ತಾರೆ. ಇವರಲ್ಲಿ ಕೇವಲ ಜ್ಞಾನಿ ಸಾಧಕರನ್ನು ಶ್ರೇಷ್ಠರೆಂದು ಹೇಳಿದೆ. ಆದರೆ ಅವರೂ ಸಹ ತತ್ವಜ್ಞಾನ ಅರಿಯದ

ಕಾರಣ ನನ್ನ ಅಂದರೆ ಬ್ರಹ್ಮನ ಅನುತ್ತಮ ಅಂದರೆ ಕೀಳಮಟ್ಟದ ಗತಿಯಲ್ಲೇ ಸ್ಥಿತರಾಗಿರುತ್ತಾರೆ.

❖ ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ನನ್ನ ಪೂಜೆಯನ್ನೂ ಸಹ ಜನ್ಮ ಜನ್ಮಾಂತರದ ಕೊನೆಯ ಜನ್ಮದಲ್ಲಿ ಯಾರಾದರೂ ಜ್ಞಾನಿ ಆತ್ಮ ಸರಿಯಾದ ರೀತಿಯಲ್ಲಿ ಮಾಡುತ್ತಾರೆ. ಇಲ್ಲದಿದ್ದರೆ ಅನ್ಯ ಉಪಾಸನೆಯಲ್ಲೇ ತೊಡಗಿರುತ್ತಾರೆ. ಇದನ್ನು ತಿಳಿಸುವ ಮಹಾತ್ಮ ಸಿಗುವುದು ಬಹಳ ದುರ್ಲಭ ಅಂದ್ರೆ ಕೇವಲ ವಾಸುದೇವ ಅಂದರೆ ಸರ್ವಗತಮ್ ಬ್ರಹ್ಮನೇ ಎಲ್ಲವೂ ಎಂದು ಹೇಳುವವರು ಸಿಗುವುದು ವಿರಳ. ಅವನ ಭಕ್ತಿಯಿಂದ ಮಾತ್ರ ಪರಮ ಶಾಂತಿ ಲಭಿಸುವುದು. ಇವನ ಭಕ್ತಿಯಿಂದ ಮಾತ್ರ ಸನಾತನ ಪರಮ ಪದ ಪ್ರಾಪ್ತವಾಗುವುದು. ಅವನ ಭಕ್ತಿಯಿಂದಲೇ ಸನಾತನ ಪರಮಧಾಮ ದೊರೆಯುವುದು ಅಲ್ಲಿಗೆ ಹೋದ ನಂತರ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ. ಅವನು ಪರಮ ಅಕ್ಷರಬ್ರಹ್ಮನು. ಎಲ್ಲರ ಉತ್ಪತ್ತಿಕರ್ತ, ಅವನೇ ಪ್ರಪಂಚವೆಂಬ ವೃಕ್ಷದ ಮೂಲ. ಅವನು ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೆ. ಅವನೇ ಪಾಪನಾಶಕನು. ಅವನೇ ಪೂರ್ಣ ಮೋಕ್ಷದಾಯಕನು. ಅವನದೇ ಭಕ್ತಿ ಮಾಡಬೇಕು.

ಪ್ರಿಯ ಓದುಗರೇ! ವರ್ತಮಾನದಲ್ಲಿ ಆ ತತ್ವದರ್ಶಿ ಸಂತ ಈ ದಾಸ (ರಾಮ್‌ಪಾಲ್ ದಾಸ) ನಾಗಿದ್ದಾನೆ. ನನ್ನ ಬಳಿ ಸಂಪೂರ್ಣ ವೇದ ಶಾಸ್ತ್ರಗಳ ಜ್ಞಾನವಿದೆ. ವಾಸುದೇವ ಭಗವಂತನ ಭಕ್ತಿಯ ಸಂಪೂರ್ಣ ಮಂತ್ರವಿದೆ.

ಈಗ "ವಾಸುದೇವ"ನ ಪರಿಭಾಷೆಯನ್ನು ಹೇಳುತ್ತೇನೆ:–

## "ವಾಸುದೇವನ ಪರಿಭಾಷೆ"

ಗೀತೆಯ 3ನೇ ಅಧ್ಯಾಯದ 14–15ನೇ ಶ್ಲೋಕದಲ್ಲಿ ಹೇಳಲಾಗಿದೆ ಸಂಪೂರ್ಣ ಪ್ರಾಣಿಗಳು ಅನ್ನದಿಂದ ಉತ್ಪನ್ನವಾಗುತ್ತವೆ. ನಂತರ ಹೇಳಲಾಗಿದೆ ಬ್ರಹ್ಮ ಅರ್ಥಾತ್ ಕ್ಷರಪುರುಷನ ಉತ್ಪತ್ತಿ ಅವಿನಾಶಿ ಪರಮಾತ್ಮನಿಂದ ಆಗಿದೆ ಎಂದು ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಲಾಗಿದೆ. 'ಸರ್ವಗತಮ್ ಬ್ರಹ್ಮ'= ಸರ್ವವ್ಯಾಪಿ ಪರಮ ಅಕ್ಷರಬ್ರಹ್ಮ ಅರ್ಥಾತ್ ವಾಸುದೇವ ಸದಾ ಯಜ್ಞಗಳಲ್ಲಿ ಪ್ರತಿಷ್ಠಿತನಾಗಿರುತ್ತಾನೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ವಿಚಾರ ಮಾಡಿ:– ಸರ್ವಗತಮ್ ಬ್ರಹ್ಮನು ಎಂದರೆ ಸರ್ವವ್ಯಾಪಿ ಪರಮ ಅಕ್ಷರ ಪರಮಾತ್ಮನು ಎಂದರ್ಥ. (ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕ)

1)ಬ್ರಹ್ಮಾ, ವಿಷ್ಣು, ಮಹೇಶ್ವರರು ಒಂದು ಬ್ರಹ್ಮಾಂಡದಲ್ಲಿ 3 ಲೋಕಗಳಲ್ಲಿ (ಸ್ವರ್ಗಲೋಕ, ಭೂಲೋಕ, ಪಾತಾಳಲೋಕ) ಕೇವಲ ಒಂದೊಂದು ವಿಭಾಗ ಅಂದರೆ ಗುಣಗಳ ಪ್ರಧಾನರು. ಇವರು ಸರ್ವಗತಮ್ ಬ್ರಹ್ಮ ಅರ್ಥಾತ್ ಸರ್ವವ್ಯಾಪಿ ಪರಮಾತ್ಮ=ವಾಸುದೇವ ಅಲ್ಲ.

2)ಬ್ರಹ್ಮ ಅಂದರೆ ಕ್ಷರ ಪುರುಷ:– ಇವನು 21 ಬ್ರಹ್ಮಾಂಡಗಳ ಪ್ರಭು. ಇವನೂ ಸರ್ವವ್ಯಾಪಿ ಪರಮಾತ್ಮ=ವಾಸುದೇವನಲ್ಲ.

3)ಅಕ್ಷರ ಪುರುಷ:– ಇವನು 7 ಶಂಖ ಬ್ರಹ್ಮಾಂಡಗಳ ಪ್ರಭು. ಇವನೂ ಸರ್ವವ್ಯಾಪಿ ಅರ್ಥಾತ್ ವಾಸುದೇವ ಅಲ್ಲ.

4)ಪರಮ ಅಕ್ಷರ ಬ್ರಹ್ಮ:– ಇವನು ಎಲ್ಲಾ ಬ್ರಹ್ಮಾಂಡಗಳ ಸ್ವಾಮೀ. ಇವನು ಎಲ್ಲರ ಧಾರಣೆ–ಪೋಷಣೆ ಮಾಡುವವನು. ಇವನೇ ವಾಸುದೇವನು.

ವಿಶೇಷ:– ಹೆಚ್ಚಿನ ವಿವರಗಳಿಗಾಗಿ ಈ ಪುಸ್ತಕದ 'ಸೃಷ್ಟಿರಚನೆ' ಎಂಬ ಅಧ್ಯಾಯವನ್ನು ಓದಿರಿ.

❖ ನಿಮಗೆ ಮೊದಲೇ ತಿಳಿಸಿದಂತೆ ಪರಮ ಅಕ್ಷರ ಬ್ರಹ್ಮನು ಸ್ವತಃ ಭೂಮಿಯ ಮೇಲೆ ಪ್ರಕಟರಾಗಿ ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತಾರೆ. ಅವರಿಗೆ ತತ್ವಜ್ಞಾನವನ್ನು ತಿಳಿಸುತ್ತಾರೆ.

ಇದೇ ವಿಧಾನದಿಂದ ಅದೇ ಪರಮಾತ್ಮ ಸಂತ ಗರೀಬ್ ದಾಸರಿಗೆ (ಗ್ರಾಮ–ಛುಡಾನೀ, ಜಿಲ್ಲೆ–ಝುಜ್ಜರ್, ಪ್ರಾಂತ್ಯ–ಹರಿಯಾಣಾ) **1727**ನೇ ಇಸವಿಯಲ್ಲಿ ಸಿಕ್ಕಿದ್ದರು. ಅವರು ಒಬ್ಬ ಜೀಂದಾ ಮಹಾತ್ಮರ ವೇಷದಲ್ಲಿದ್ದರು. ಪರಮಾತ್ಮ ಗರೀಬ್‌ದಾಸರ ಆತ್ಮವನ್ನು ಆ ಸನಾತನ ಪರಮಧಾಮಕ್ಕೆ ಕರೆದೊಯ್ದಿದ್ದರು. ನಂತರ ಮೇಲಿನಿಂದ ಎಲ್ಲಾ ಬ್ರಹ್ಮಾಂಡಗಳ ಮತ್ತು ಪ್ರಭುಗಳ ಸ್ಥಿತಿಯನ್ನು ತಿಳಿಸಿ ತತ್ವಜ್ಞಾನವನ್ನು ತಿಳಿಸಿ, ಮರಳಿ ಶರೀರದೊಳಗೆ ತಂದು ಬಿಟ್ಟರು. ಆಗ ಸಂತ ಗರೀಬ್‌ದಾಸರು **10** ವರ್ಷದವರಾಗಿದ್ದರು. ಆ ದಿನ ಸಂತ ಗರೀಬ್‌ದಾಸರನ್ನು ಮೃತರೆಂದು ತಿಳಿದು ಅವರ ಮನೆಯವರು ಅವರನ್ನು ಚಿತೆಯ ಮೇಲಿಟ್ಟು ಅಂತ್ಯ ಸಂಸ್ಕಾರ ಮಾಡುವ ಸಿದ್ಧತೆಯಲ್ಲಿದ್ದರು. ಅದೇ ಸಮಯದಲ್ಲಿ ಅವರ ಆತ್ಮವನ್ನು ಅವರ ಶರೀರಕ್ಕೆ ಪ್ರವೇಶಿಸಿದರು. ಅವರು ಬದುಕಿದಾಕ್ಷಣ ಎಲ್ಲರ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ನಂತರ ಸಂತ ಗರೀಬ್‌ದಾಸರು ಒಂದು ಅಮೂಲ್ಯವಾದ ಗ್ರಂಥವನ್ನು ರಚಿಸಿದರು. ಅವರು ತಮ್ಮ ಕಣ್ಣುಗಳಿಂದ ನೋಡಿದ ಹಾಗೂ ಸ್ವತಃ ಪರಮಾತ್ಮನ ಮೂಲಕ ಹೇಳಲ್ಪಟ್ಟ ಜ್ಞಾನವನ್ನು ತಿಳಿಸಿದರು. ಗೋಪಾಲದಾಸ ಎಂಬ ದಾದೂ ಪಂಥದ ಸಾಧು ಇದನ್ನು ಬರೆದರು. ಅದನ್ನು ವರ್ತಮಾನದಲ್ಲಿ ಪ್ರಿಂಟ್ ಮಾಡಿಸಲಾಗಿದೆ.

❖ ಪಂಜಾಬ್ ಪ್ರಾಂತ್ಯದ ಲುಧಿಯಾನಾ ಎಂಬ ನಗರದ ಬಳಿ ವಾಸಿಯರ್ ಎಂಬ ಹಳ್ಳಿ ಇದೆ. ಅಲ್ಲಿ ಒಬ್ಬ ಪ್ರಭು ಪ್ರೇಮಿ ವ್ಯಕ್ತಿ ರಾಮ್‌ರಾಯ್ ಉರ್ಫ ಝೂಮಕರಾ ಇರುತ್ತಿದ್ದನು. ಅವನು ಸಂತ ಗರೀಬ್‌ದಾಸರ ಮಹಿಮೆಯನ್ನು ಕೇಳಿ, ಅವರ ದರ್ಶನ ಪಡೆಯಲು ಛುಡಾನಿಗೆ ಬಂದನು. ಸಂತ ಗರೀಬ್‌ದಾಸರು ಅವನಿಗೆ ಜ್ಞಾನ ತಿಳಿಸಿದರು. ಯಾವುದು ಈ ದಾಸ (ರಾಮ್‌ಪಾಲ್ ದಾಸ)ನಿಗೆ ಸಂತ ಗರೀಬ್ ದಾಸರ ಮೂಲಕ ಪ್ರಾಪ್ತವಾಗಿದೆ. ಅದನ್ನೇ ನಿಮಗೆ ಈ ಪುಸ್ತಕ ಮತ್ತು ಅನ್ಯ ಪುಸ್ತಕಗಳ ಮೂಲಕ ತಿಳಿಸಲಾಗುತ್ತಿದೆ.

ಆ ರಾಮರಾಯ್ ಪ್ರಶ್ನಿಸಿದನು, "ಹೇ ಮಾಹಾತ್ಮ! ಈ ಜ್ಞಾನವನ್ನು ಇಲ್ಲಿಯವರೆಗೆ ಯಾರೂ ತಿಳಿಸಿಲ್ಲ". ಸಂತ ಗರೀಬ್‌ದಾಸರು ವಾಣಿಯ ಮೂಲಕ ತಿಳಿಸಿದರು.

ಕೋಟ್ಯೋ ಮಧ್ಯ್ ಕೋಯೀ ನಹೀ ರಾಈ ಝೂಮ್‌ಕರಾ,
ಅರಬೋಂ ಮೇ ಕೋಯೀ ಗರಕ್ ಸುನೋ ರಾಈ ಝೂಮ್‌ಕರಾ ॥

ಅನುವಾದ ಮತ್ತು ಭಾವಾರ್ಥ:– ಸಂತ ಗರೀಬ್ ದಾಸರು ಹೇಳಿದ್ದಾರೆ, ಈ ಜ್ಞಾನವು ಕೋಟ್ಯಾಂತರ ಜನರಲ್ಲಿ ಯಾರ ಬಳಿಯೂ ಇಲ್ಲ. ಶತಕೋಟಿಗಳಲ್ಲಿ ಯಾರೋ ಒಬ್ಬರ ಬಳಿ ಇರುವುದು. ಆ ಸಂತನು ಸರ್ವಜ್ಞಾನ ಸಂಪನ್ನ, ಸಂಪೂರ್ಣ ಸಾಧನೆಯ ಮಂತ್ರಗಳಿಂದ ಗರಕ್ ಅರ್ಥಾತ್ ಪರಿಪೂರ್ಣನಾಗಿರುತ್ತಾನೆ.

ಪ್ರಿಯ ಓದುಗರೇ, ಆ ಸಂತನು ವರ್ತಮಾನದಲ್ಲಿ ಹಿಸಾರ್ ಜಿಲ್ಲೆಯ ಬರವಾಲಾದವನು. ಜ್ಞಾನ ತಿಳಿದು ಲಾಭ ಪಡೆಯಿರಿ.

ಪ್ರಶ್ನೆ:– ಪ್ರಾಚೀನ ಕಾಲದಿಂದ ನಡೆದು ಬಂದಿರುವ ಭಕ್ತಿಯ ಸಾಧನೆಯನ್ನು ನೀವು ತಪ್ಪೆಂದು ಹೇಗೆ ಹೇಳುವಿರಿ? ಹೇಗೆ ಎಲ್ಲಾ ಋಷಿಗಳು ತಪಸ್ಸನ್ನು ಮಾಡುತ್ತಿದ್ದರೋ, ನಾವು ಎಲ್ಲರೂ ಹಿಂದೂ ಸಮಾಜದಲ್ಲಿ ನೋಡುತ್ತಿದ್ದೇವೆ. ಎಲ್ಲರೂ ಹರೇ ಕೃಷ್ಣ, ಹರೇ ರಾಮ್, ರಾಧೆ–ರಾಧೆ ಶ್ಯಾಮ್ ಇವೆಲ್ಲವನ್ನೂ ಸೇರಿಸಿದರೆ ಓಂ ನಮಃ ಶಿವಾಯ, ಓಂ ನಮೋ ಭಗವತೇ ವಾಸುದೇವಾಯ, ಜಯ್ ಸೀತಾರಾಮ್, ರಾಧೇ ಶ್ಯಾಮ್, ಓಂ ತತ್ ಸತ್, ನಲ್ಲಿ ಒಂದು ಮಂತ್ರವನ್ನು ಜಪಿಸುತ್ತಾ ಬರುತ್ತಿದ್ದೇವೆ ಇಂದಿಗೂ ಅದನ್ನೇ ಮಾಡುತ್ತಿದ್ದಾರೆ. ಶ್ರೀ ರಾಮನನ್ನು, ಶ್ರೀ ಕೃಷ್ಣನನ್ನು ಪೂರ್ಣ ಪರಮಾತ್ಮರೆಂದು ನಾವು ಭಾವಿಸಿರುವುದರಿಂದ ಅವರ ನಾಮಜಪ ಮಾಡುತ್ತಿದ್ದೇವೆ. ನೀವು ಈ ನಾಮ ಜಪಮಂತ್ರವು ವ್ಯರ್ಥ ಜಪ ಎಂದು ಹೇಳುತ್ತಿರುವಿರಿ. ಅದು ಹೇಗೆ ಸ್ಪಷ್ಟಿಕರಣ ಕೊಡಿ.

ಉತ್ತರ:– ಪ್ರಾಚೀನ ಕಾಲದಲ್ಲಿ ಒಂದೊಮ್ಮೆ ಈ ಸಾಧನೆ ಹಾಗೂ ಈ ಮಂತ್ರಗಳಿದ್ದಿದ್ದರೆ ಶ್ರೀ ಮದ್ ಭಗವದ್ಗೀತೆಯ **4**ನೇ ಅಧ್ಯಾಯದ **1–2** ಶ್ಲೋಕದಲ್ಲಿ ಗೀತೆಯ ಜ್ಞಾನದಾತ ಹೀಗೆ

ಹೇಳುತ್ತಿರಲಿಲ್ಲ. ಅಂದ್ರೆ ಈ ಯೋಗ ಅಂದರೆ ಯಾವ ಭಕ್ತಿ ವಿಧಾನವನ್ನು ನಾನು ಗೀತೆಯ ಜ್ಞಾನದಲ್ಲಿ ಹೇಳುತ್ತಿರುವೆನೋ ಅದು ಈಗ ಲುಪ್ತವಾಗಿ ಹೋಗಿದೆ, ನಾಶವಾಗಿ ಹೋಗಿದೆ. ಈ ಭಕ್ತಿ ಮತ್ತು ಜ್ಞಾನವನ್ನು ನಾನು ಸೂರ್ಯದೇವನಿಗೆ ಹೇಳಿದ್ದೆ, ಸೂರ್ಯನು ಮನುವಿಗೆ ಹಾಗೂ ಮನುವು ತನ್ನ ಮಗನಾದ ಇಕ್ಷ್ವಾಕುವಿಗೆ ಹೇಳಿದನು. ನಂತರ ಕೆಲವು ರಾಜ ಋಷಿಗಳು ತಿಳಿದುಕೊಂಡರು. ಈಗ ಬಹಳ ಸಮಯದಿಂದ ಅಂದರೆ ದ್ವಾಪರಯುಗದ ಬಹಳ ಮೊದಲೇ ಇದು ನಾಶವಾಗಿತ್ತು. ಮನು ಮತ್ತು ಇಕ್ಷ್ವಾಕು ಮುಂತಾದವರು ಸತ್ಯಯುಗದ ಪ್ರಥಮ ಭಾಗದಲ್ಲಿ ಬಂದಿದ್ದರು. ನೀವು ದಶರಥನ ಪುತ್ರ ರಾಮಚಂದ್ರನನ್ನು ಹಾಗೂ ವಾಸುದೇವನ ಪುತ್ರ ಶ್ರೀ ಕೃಷ್ಣನನ್ನು ಪರಮಾತ್ಮನೆಂದು ತಿಳಿದಿರುವಿರಿ. ಆದ್ದರಿಂದ ಅವರ ಹೆಸರುಗಳಾದ ಹರೇರಾಮ, ಹರೇಕೃಷ್ಣ ಮುಂತಾದವುಗಳನ್ನು ಜಪ ಮಾಡುವಿರಿ ಹಾಗೂ ಅದನ್ನೇ ಮೋಕ್ಷವೆಂದು ತಿಳಿಯುವುದಾದರೆ, ಶ್ರೀ ಮದ್ಭಗವದ್ಗೀತೆಯಲ್ಲಿ ವರ್ಣಿಸಿರುವ ಯಥಾರ್ಥ ಪ್ರಾಚೀನ ಯೋಗ ಅಂದರೆ ಭಕ್ತಿಯ ವಿಧಾನಕ್ಕೆ ವಿರುದ್ಧವಾದದ್ದು. ಆದ್ದರಿಂದ ಇದು ವ್ಯರ್ಥ. ಇಲ್ಲಿ ಶಾಸ್ತ್ರ ವಿಧಾನವಿಲ್ಲದೆ ಮನಸ್ಸಿಗೆ ಬಂದ ಹಾಗೆ ಆಚರಣೆಯಾಗುತ್ತಿದೆ. ಈ ಕಾರಣದಿಂದ ಮೇಲೆ ಕೇಳಿರುವ ಪ್ರಶ್ನೆಯಲ್ಲಿ ಬರೆದಿರುವ ಬೇರೆ ಮಂತ್ರಗಳೂ ಸಹ ಶಾಸ್ತ್ರದಿಂದ ಪ್ರಾಮಾಣಿಸಲ್ಪಟ್ಟಿಲ್ಲ. ಆದ್ದರಿಂದ ಇವೆಲ್ಲಾ ವ್ಯರ್ಥ. ಗೀತೆಯ **16**ನೇ ಅಧ್ಯಾಯದ **23–24**ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಯಾವ ಪುರುಷನು ಶಾಸ್ತ್ರವಿಧಾನವನ್ನು ತ್ಯಜಿಸಿ ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುತ್ತಾನೋ, ಅವನಿಗೆ ಯಾವುದೇ ಸುಖ ಪ್ರಾಪ್ತಿಯಾಗುವುದಿಲ್ಲ. ಅವನಿಗೆ ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ, ಮೋಕ್ಷವೂ ದೊರಕುವುದಿಲ್ಲ. ಅವನ ಸಾಧನೆಯು ವ್ಯರ್ಥವಾದುದು. (ಗೀತೆಯ **16**ನೇ ಅಧ್ಯಾಯದ **23**ನೇ ಶ್ಲೋಕ).

❖ ಗೀತೆಯ **16**ನೇ ಅಧ್ಯಾಯದ **24**ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, "ಇದರಿಂದ ಅರ್ಜುನ ನಿನಗೆ ಕರ್ತವ್ಯ ಮತ್ತು ಅಕರ್ತವ್ಯದ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣವಾಗಿವೆ". ಇದರ ಅರ್ಥವೇನೆಂದರೆ ಯಾವ ಭಕ್ತಿಯ ವಿಧಾನವು ಪ್ರಮಾಣಿತ ಶಾಸ್ತ್ರಗಳಲ್ಲಿ (**4** ವೇದಗಳು =ಋಗ್ವೇದ, ಯಜುರ್ವೇದ, ಸಾಮವೇದ ಹಾಗು ಅಥರ್ವಣವೇದ ಹಾಗು ಇದೇ ನಾಲ್ಕು ವೇದಗಳ ಸಾರಾಂಶ ಶ್ರೀ ಮದ್ಭಗವದ್ಗೀತೆ ಹಾಗು ಸೂಕ್ಷ್ಮವೇದ=ಇದನ್ನು ಪರಮಾತ್ಮ ಸ್ವತಃವೇ ತಮ್ಮ ಮುಖ ಕಮಲದಿಂದ ಹೇಳಿದ್ದರು. ಇವು ಭಕ್ತಿಯ ಜ್ಞಾನ ಹಾಗು ಸಮಾಧಾನದ ಪ್ರಮಾಣಿತ ಶಾಸ್ತ್ರವಾಗಿವೆ.) ವರ್ಣಿಸಲ್ಪಟ್ಟಿಲ್ಲವೋ ಅದು ಶಾಸ್ತ್ರವಿರುದ್ಧವಾದ ಸಾಧನೆಯಾಗಿದೆ. ಆದ್ದರಿಂದ ಭಕ್ತಿಯ ಯಾವ–ಯಾವ ಕರ್ಮಗಳನ್ನ ಮಾಡಬೇಕು, ಯಾವ ಕರ್ಮಗಳನ್ನ ಮಾಡಬಾರದು ಎನ್ನುವುದಕ್ಕೆ ಶಾಸ್ತ್ರಗಳನ್ನೇ ಆಧಾರವಾಗಿಟ್ಟುಕೊಳ್ಳಬೇಕು. ಆದ್ದರಿಂದ ಶಾಸ್ತ್ರಗಳಲ್ಲಿ ವರ್ಣಿಸಲಾದ ಭಕ್ತಿಯ ವಿಧಾನವನ್ನು ಅನುಸರಿಸಿ ಮತ್ತು ಉಳಿದೆಲ್ಲವನ್ನೂ ತ್ಯಜಿಸಿ.

❖ ಶ್ರೀ ರಾಮನ ಜನ್ಮವು ತ್ರೇತಾಯುಗದ ಅಂತಿಮ ಭಾಗದಲ್ಲಿ ಆಗಿತ್ತು. ಶ್ರೀ ಕೃಷ್ಣನ ಜನ್ಮವು ದ್ವಾಪರಯುಗದ ಅಂತಿಮ ಭಾಗದಲ್ಲಾಗಿತ್ತು. ಸತ್ಯಯುಗದಿಂದಲೇ ಮಾನವನು ಭಕ್ತಿ ಮಾಡುತ್ತಾ ಬರುತ್ತಿದ್ದಾನೆ. ಆ ಸಮಯದಲ್ಲಿ ಯಾವ ರಾಮನಿದ್ದನು? ನೀವು ಹೇಳುವಿರಿ ಶ್ರೀವಿಷ್ಣುವಂತು ಸತ್ಯಯುಗಕ್ಕಿಂತ ಮೊದಲಿನವರು ಮತ್ತು ಶ್ರೀರಾಮ, ಶ್ರೀಕೃಷ್ಣನು ಸಹ ಸ್ವತಃ ವಿಷ್ಣುವಾಗಿದ್ದರು. ಸತ್ಯಯುಗದಲ್ಲೂ ಪ್ರಮಾಣವಿದೆ. ಮಹರ್ಷಿ ವಾಲ್ಮೀಕಿ ರಾಮ–ರಾಮ ನಾಮವನ್ನು ಜಪಿಸುತ್ತಿದ್ದರು. ಅವರು ವಿಷ್ಣು–ವಿಷ್ಣು ವೆಂದು ಜಪಿಸುತ್ತಿರಲಿಲ್ಲ. ಇದರಿಂದ ಸ್ಪಷ್ಟವಾಯ್ತೇನೆಂದರೆ ಶ್ರೀ ವಿಷ್ಣು, ಶ್ರೀ ರಾಮ, ಶ್ರೀ ಕೃಷ್ಣರಿಗಿಂತ ಬೇರೆ ಯಾರೋ ರಾಮ ಅಂದರೆ ಮಾಲೀಕ ಇದ್ದಾರೆ. ಗೀತೆಯ **7**ನೇ ಅಧ್ಯಾಯದ **29**ನೇ ಶ್ಲೋಕದಲ್ಲಿ ಹೇಳಿರುವ ರಾಮನ ಜಪ ಮಾಡಬೇಕು. ಅದರ ಬಗ್ಗೆ "ತತ್‌ಬ್ರಹ್ಮ"ವನ್ನು ತಿಳಿದವರು ಕೇವಲ ಜರಾ ಅಂದರೆ ವೃದ್ಧಾಪ್ಯ ಮತ್ತು ಮೃತ್ಯುವಿನಿಂದ ಬಿಡುಗಡೆ ಹೊಂದಲು ಭಕ್ತಿ ಮಾಡುತ್ತಾರೆ. ಅರ್ಜುನನು ಗೀತೆಯ **8**ನೇ ಅಧ್ಯಾಯದ **1**ನೇ ಶ್ಲೋಕದಲ್ಲಿ ಆ 'ತತ್‌ಬ್ರಹ್ಮ' ಎಂದರೆ ಏನು? ಎಂದು ಪ್ರಶ್ನಿಸಿದ್ದಾನೆ. ಗೀತೆಯ ಜ್ಞಾನದಾತನು

ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಉತ್ತರ ಕೊಟ್ಟಿದ್ದಾನೆ. "ಅವನು ಪರಮ ಅಕ್ಷರ ಬ್ರಹ್ಮನು". ಗೀತೆಯ ಅಧ್ಯಾಯ 8ರ ಶ್ಲೋಕ 5,7ರಲ್ಲಿ ಗೀತೆಯ ಜ್ಞಾನದಾತನು ತನ್ನ ಭಕ್ತಿ ಮಾಡಲು ಹೇಳಿದ್ದಾನೆ, ಅದರ ಮಂತ್ರ ಗೀತೆಯ ಅಧ್ಯಾಯ 8ರ ಶ್ಲೋಕ 13ರಲ್ಲಿ ಹೇಳಿದ್ದಾರೆ. (ಓಂ ಇತಿ ಏಕಾಕ್ಷರಮ್ ಬ್ರಹ್ಮ ವ್ಯವಹಾರನ್ ಮಾಮ್ ಅನುಸ್ಮರನ್.......)

❖ ಗೀತೆಯ 8ನೇ ಅಧ್ಯಾಯದ 8, 9, 10ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ತನಗಿಂತ ಭಿನ್ನವಾದ ಅನ್ಯ 'ತತ್ ಬ್ರಹ್ಮ' ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಭಕ್ತಿ ಮಾಡಲು ಹೇಳಿದ್ದಾನೆ. ಅವನ ಭಕ್ತಿಯ ನಾಮ ಜಪ ಮಂತ್ರವು ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಹೇಳಲಾಗಿದೆ.

ಓಂ ತತ್ ಸತ್ ಇತಿ ನಿರ್ದೇಶಃ ಬ್ರಹ್ಮಣಃ ತ್ರಿವಿಧ್ಃ ಸ್ಮರತಃ ।
ಬ್ರಾಹ್ಮಣಾಃ ತೇನ ವೇದಾಃ ಚ ಯಜ್ಞಾಃ ಚ ವಿಹಿತಾಃ ಪುರಾ ॥

ಸರಳಾರ್ಥ:- ಬ್ರಹ್ಮಣಃ=ಸಚ್ಚಿದಾನಂದ ಘನಬ್ರಹ್ಮ ಅಂದರೆ ಪರಮ ಅಕ್ಷರ ಬ್ರಹ್ಮನ ಭಕ್ತಿಯ ಓಂ, ತತ್, ಸತ್ ಮಂತ್ರದ ಸ್ಮರಣೆಯ (ನಿರ್ದೇಶಃ) ಆದೇಶವಿದೆ. ಅದನ್ನ (ತ್ರಿವಿಧಃ) ಮೂರು ಪ್ರಕಾರಗಳಿಂದ (ಸ್ಮೃತಃ) ಸ್ಮರಣೆ ಮಾಡಲು ಹೇಳಿದೆ (ಬ್ರಾಹ್ಮಣಾಃ) ವಿದ್ವಾಂಸರು ಅಂದರೆ ತತ್ವದರ್ಶಿ ಸಂತರು (ತೇನ) ಆ (ವೇದಾಃ) ಜ್ಞಾನದ ಆಧಾರದ ಮೇಲೆ ಭಕ್ತಿ ಮಾಡುತ್ತಿದ್ದರು (ಚ) ಮತ್ತು (ಯಜ್ಞಾಃ) ಧಾರ್ಮಿಕ ಯಜ್ಞಗಳ ಅನುಷ್ಠಾನ (ಚ) ಮತ್ತು ಅನ್ಯ ಭಕ್ತಿ ಕರ್ಮ (ಪುರಾ) ಸೃಷ್ಟಿಯ ಮುಂತಾದ ಅಂದರೆ ಸೃಷ್ಟಿಯ ಪ್ರಾರಂಭದಲ್ಲಿ (ವಿಹಿತಾ) ಮಾಡಲಾಗುತ್ತಿತ್ತು.

ಶ್ರೀಮದ್ ಭಗವದ್ಗೀತೆಯಿಂದ ಪ್ರಮಾಣಿತಗೊಳ್ಳುವುದೇನೆಂದರೆ ಗೀತೆಯ ಜ್ಞಾನದಾತ ನಿಗಿಂತ ಬೇರೆ ಯಾರೋ ಪೂರ್ಣ ಪರಮಾತ್ಮನಿದ್ದಾನೆ. ಅವನು ಶ್ರೀವಿಷ್ಣು, ಶ್ರೀಬ್ರಹ್ಮಾ ಮತ್ತು ಶ್ರೀಶಿವನಿಗಿಂತ ಭಿನ್ನವಾಗಿದ್ದಾನೆ. ಅವನ ವಿಷಯದಲ್ಲಿ ಗೀತೆಯ 15ನೇ ಅಧ್ಯಾಯದ 1, 4, 17ನೇ ಶ್ಲೋಕದಲ್ಲಿ ಮತ್ತು ಗೀತೆಯ 18ನೇ ಅಧ್ಯಾಯದ 62ರಲ್ಲಿ ಹಾಗೂ ಅನೇಕ ಸ್ಥಾನದಲ್ಲಿ ಗೀತೆಯಲ್ಲಿ ಹೇಳಲಾಗಿದೆ. ಅವನು ಪೂರ್ಣ ಪರಮಾತ್ಮನು. ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇಬ್ಬರು ಪುರುಷರ ಬಗ್ಗೆ ಹೇಳಲಾಗಿದೆ. ಇಬ್ಬರೂ ನಾಶವಾಗುವವರು ಎಂದು ಹೇಳಲಾಗಿದೆ. ಅವರ ಅಧೀನದಲ್ಲಿ ಎಷ್ಟು ಜೀವಾತ್ಮಗಳಿವೆ ಅವೆಲ್ಲವೂ ನಾಶಹೊಂದುವವು. 1)ಕ್ಷರ ಪುರುಷ, ಇವನು ಕೇವಲ ಇಪ್ಪತ್ತೊಂದು ಬ್ರಹ್ಮಾಂಡಗಳ ಮಾಲೀಕ 2)ಅಕ್ಷರ ಪುರುಷ ಇವನು 7 ಶಂಖ ಬ್ರಹ್ಮಾಂಡಗಳ ಮಾಲೀಕ. ಇವರಿಬ್ಬರೂ ಪೂರ್ಣ ಪರಮಾತ್ಮರಲ್ಲ(ಗೀತೆಯ 15ನೇ ಅಧ್ಯಾಯದ 16ನೆಯ ಶ್ಲೋಕ).

❖ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಉತ್ತಮಃ ಪುರುಷಃ ತೂಃ ಅನ್ಯಃ ಅರ್ಥಾತ್ ಪುರುಷೋತ್ತಮನು ಮೇಲೆ ವರ್ಣಿಸಲಾದ ಇಬ್ಬರು ಪುರುಷ (ಕ್ಷರ ಪುರುಷ ಹಾಗು ಅಕ್ಷರ ಪುರುಷ) ರಿಗಿಂತ ಭಿನ್ನನಾದವನು, ಅವನನ್ನು (ಪರಮಾತ್ಮ ಇತಿ ಉದಾಹೃತಃ) ಪರಮಾತ್ಮ ಎಂದು ಕರೆಯಲಾಗಿದೆ. (ಯಃ ಲೋಕತ್ರಯಮ್) ಯಾರು 3 ಲೋಕಗಳಲ್ಲಿ (ಅವಿಶ್ಯ ವಿಭರ್ತಿ) ಪ್ರವೇಶಿಸಿ, ಪಾಲನೆ, ಪೋಷಣೆ ಮಾಡುವನೋ (ಅವ್ಯಯಃ ಈಶ್ವರಃ) ಅವನೇ ಅವಿನಾಶಿ ಪರಮೇಶ್ವರನು (ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ) ಎಂದು ಹೇಳಲಾಗಿದೆ.

❖ ಪೂರ್ಣ ಪರಮಾತ್ಮನು ಪರಮ ಅಕ್ಷರಬ್ರಹ್ಮ ಎಂಬುದು ಸಾಬೀತಾಯಿತು. ಅವನ ಭಕ್ತಿಯ ಮಂತ್ರ ಓಂ, ತತ್, ಸತ್ ಎಂಬುದೂ ಸಾಬೀತಾಯಿತು. ಓಂ, ತತ್, ಸತ್ ಈ 3 ಮಂತ್ರಗಳು ಮೇಲೆ ತಿಳಿಸಿದ 3 ಮಾಲೀಕರ(ಓಂ=ಕ್ಷರ ಪುರುಷ, ಅರ್ಥಾತ್ ಕ್ಷರ ಬ್ರಹ್ಮ-ಗೀತೆಯ ಜ್ಞಾನದಾತನ, ತತ್=ಇದು ಸಾಂಕೇತಿಕವಾಗಿದೆ, ಈ ಪುಸ್ತಕದಲ್ಲಿ ಈ ಹಿಂದೆಯೇ ಇದರ ಬಗ್ಗೆ ವಿವರಿಸಲಾಗಿದೆ. ಅಲ್ಲಿ ಓದಿ ಇದು ತತ್ ನಾಮ ಜಪ=ಅಕ್ಷರ ಪುರುಷನದ್ದು, ಸತ್=ಇದೂ ಸಹ ಸಾಂಕೇತಿಕವಾಗಿದೆ. ವಿಸ್ತಾರವಾಗಿ ಇದರ ಬಗ್ಗೆ ಓದಿರಿ. ಇದೇ ಪುಸ್ತಕದಲ್ಲಿ ಓದಿ. ಇದು ಸತ್ ಮಂತ್ರ-ಪರಮ ಅಕ್ಷರ ಬ್ರಹ್ಮನ)ದ್ದು. ಭಗವದ್ಗೀತೆಯಲ್ಲಿ ಇದು ಪೂರ್ಣ ಮೋಕ್ಷ ಪ್ರಾಪ್ತಿಯ ಸಾಂಕೇತಿಕ ಮಂತ್ರವಾಗಿವೆ. ಇಲ್ಲಿಯವರೆಗೆ (2012ನೇ ಇಸವಿ) ಯಾರೂ

ಇದನ್ನು ಸ್ಪಷ್ಟ ಪಡಿಸಿಲ್ಲ. ನೀವು 'ಹರಿ ಓಂ, ತತ್, ಸತ್' ಜಪ ಮಾಡುವಿರೋ, ಅದೂ ಸಹ ವ್ಯರ್ಥ. ಏಕೆಂದರೆ ನಿಮಗೆ ತತ್ ಮತ್ತು ಸತ್ ಎಂಬುದರ ವಾಸ್ತವಿಕ ಮಂತ್ರಗಳ ಜ್ಞಾನವಿಲ್ಲ.

ಉದಾಹರಣೆ:– ಒಬ್ಬ ಧನಿಕ ವ್ಯಕ್ತಿಯು ತನ್ನ ಧನವನ್ನೆಲ್ಲಾ ತನ್ನ ಮನೆಯಲ್ಲಿ ಗುಂಡಿ ತೋಡಿ ಮುಚ್ಚಿಟ್ಟಿದ್ದನು. ಆ ಜಾಗವು ಕೇವಲ ಅವನಿಗೆ ಮಾತ್ರ ತಿಳಿದಿತ್ತು. ಆ ಧನಿಕನು ಹಣವಿದ್ದ ಜಾಗವನ್ನು ಸಾಂಕೇತಿಕವಾಗಿ ಒಂದು ಕಾಗದದಲ್ಲಿ ಬರೆದಿಟ್ಟಿದ್ದನು. ಒಂದು ದಿನ ಆ ಧನಿಕನು ಅಕಾಲ ಮರಣವನ್ನಪ್ಪಿದನು. ತಂದೆಯ ಅಂತ್ಯಸಂಸ್ಕಾರ ಮಾಡಿದ ಪುತ್ರರು ಆ ಕಾಗದ ನೋಡಿದರು. ಹಣವೆಲ್ಲಿದೆ ಎಂದು ಈ ಕಾಗದದಲ್ಲಿ ಬರೆದಿದೆ ಎಂದು ತಂದೆ ಹೇಳುತ್ತಿದ್ದರು. ಅದನ್ನು ತಂದೆ ಯಾರಿಗೂ ತೋರಿಸುತ್ತಿರಲಿಲ್ಲ.

ಧನಿಕನ ಮನೆಯ ಮುಂದೆ ಒಂದು ಅಂಗಳವಿತ್ತು. ಆ ಅಂಗಳದ ಒಂದು ಮೂಲೆಯಲ್ಲಿ ಒಂದು ಮಂದಿರವಿತ್ತು. ಹುಣ್ಣಿಮೆ ಚತುರ್ದಶಿ ರಾತ್ರಿಯ 2 ಗಂಟೆಗೆ ಇಡೀ ಹಣವನ್ನು ಮಂದಿರದ ಗೋಪುರದಲ್ಲಿ ಅಡಗಿಸಿಡಲಾಗಿದೆ ಎಂದು ಕಾಗದದಲ್ಲಿ ಬರೆದಿತ್ತು. ಆ ಧನಿಕನ ಪುತ್ರರು ಹುಣ್ಣಿಮೆಯ ಮಧ್ಯರಾತ್ರಿ 2 ಗಂಟೆಯಲ್ಲಿ ಮಂದಿರದ ಗೋಪುರವನ್ನು ಒಡೆದು ಹಾಕಿದರು. ಆದರೆ ಅಲ್ಲಿ ಯಾವ ಹಣವೂ ದೊರಕಲಿಲ್ಲ. ಮಕ್ಕಳಿಗೆ ಬಹಳ ದುಃಖವಾಯಿತು. ಒಂದು ದಿನ ಅವರ ತಂದೆಯ ಮಿತ್ರನೊಬ್ಬನು ಶೋಕ ವ್ಯಕ್ತಪಡಿಸಲು ಅವರ ಮನೆಗೆ ಬಂದನು. ಅವರ ಬಳಿ ಧನಿಕನ ಪುತ್ರರು ಶೋಕವನ್ನು ವ್ಯಕ್ತಪಡಿಸಿ, ಹಣದ ಬಗ್ಗೆ ತಿಳಿಸಿದರು. ಆ ಮಿತ್ರನು ಆ ಕಾಗದವನ್ನು ತರಿಸಿಕೊಂಡು ಓದಿದನು. ನಂತರ ಹೇಳಿದ ಆ ದೇವಾಲಯದ ಗೋಪುರವನ್ನು ಹೇಗಿತ್ತೋ ಹಾಗೇ ಮತ್ತೆ ನಿರ್ಮಾಣ ಮಾಡಿ, ನಾನು ಮತ್ತೆ ಯಾವಾಗಾದರೂ ಬರುವೆನು, ಆಗ ಆ ಸ್ಥಾನ ತೋರಿಸುವೆನು. ಆ ಪುತ್ರರು ಮಂದಿರದ ಗೋಪುರವನ್ನು ಮತ್ತೆ ನಿರ್ಮಿಸಿದರು. ಆ ವ್ಯಕ್ತಿ ಚತುರ್ದಶಿಯ ಹುಣ್ಣಿಮೆಯಂದು ಬಂದನು. ರಾತ್ರಿಯ 2 ಗಂಟೆ ಆ ಮಂದಿರದ ಗೋಪುರದ ನೆರಳು ಯಾವ ಕಡೆಗಿತ್ತೋ ಆ ಜಾಗವನ್ನು ಅಗೆಯಲಾಯಿತು. ಇಡೀ ಹಣದ ಗಂಟು ಅಲ್ಲಿ ಅವರಿಗೆ ಸಿಕ್ಕಿತು. ಮಕ್ಕಳೆಲ್ಲಾ ಸಂತೋಷಪಟ್ಟು ಎಲ್ಲರೂ ಧನಿಕರಾದರು.

ನೀವು ಹರಿ ಓಂ ತತ್ ಸತ್ ನಾಮ ಜಪ ಮಾಡುತ್ತಿರುವಿರಿ. ನೀವು ಮಂದಿರದ ಗೋಪುರವನ್ನು ಅಗೆಯುತ್ತಿರುವಿರಿ, ನಿಮಗೆ ಏನೂ ಸಿಗುವುದಿಲ್ಲ. ವಾಸ್ತವಿಕ ಮಂತ್ರವು ನನ್ನ (ಸಂತ ರಾಮ್‌ಪಾಲ್ ದಾಸನ) ಬಳಿ ಇದೆ. ಅದನ್ನು ಪಡೆದು ಭಕ್ತಿಯ ಧನಿಕರಾಗಿ ಹಾಗು ಸುಖಿಯಾಗಿ.

ಪ್ರಶ್ನೆ:– ರಾಧಾ ಉತ್ತರ ಪ್ರದೇಶದ ಬರಸಾನಾ ಎಂಬ ಹಳ್ಳಿಯ ಹತ್ತಿರ ಬೃಂದಾವನ ದವಳಾಗಿದ್ದಳು. ಅಲ್ಲಿಯವರೆಲ್ಲಾ 'ರಾಧೆ–ರಾಧೆ' ನಾಮ ಜಪಿಸುತ್ತಾರೆ. ಬೆಳಿಗ್ಗೆಯಾದರೆ ಅವರು ಒಬ್ಬರನ್ನೊಬ್ಬರು ರಾಮ್–ರಾಮ್ ಎನ್ನುವ ಬದಲು ರಾಧೆ–ರಾಧೆ ಎನ್ನುತ್ತಿದ್ದರು. ಚಿಕ್ಕಪ್ಪನನ್ನು ಅವರ ಅಣ್ಣನ ಮಕ್ಕಳು 'ಚಿಕ್ಕಪ್ಪ ರಾಧೆ–ರಾಧೆ' ಎಂದರೆ ಚಿಕ್ಕಪ್ಪನು ಅವರನ್ನು 'ಮಗ, ರಾಧೆ–ರಾಧೆ' ಎನ್ನುತ್ತಿದ್ದರು. ಅವರೇನು ಮೂರ್ಖರೇ?

ಉತ್ತರ:– ತತ್ವಜ್ಞಾನದ ಅಭಾವದಿಂದ ಲೋಕವೇದವನ್ನೇ ತತ್ವಜ್ಞಾನವೆಂದು ತಿಳಿದು ಶಾಸ್ತ್ರವಿರುದ್ಧವಾದ ಮಂತ್ರಗಳ ಜಪ ಪ್ರಚಲಿತವಾಗಿದೆ. ಹಾಗಂತು ನಿಮಗೆ ಮೊದಲೇ ಸ್ಪಷ್ಟಪಡಿಸಲಾಗಿದೆ. ಗೀತೆಯ ಅಧ್ಯಾಯ 16ಶ್ಲೋಕ 23–24ರಲ್ಲಿ ಯಾರು ಶಾಸ್ತ್ರವಿಧಿ ತ್ಯಜಿಸಿ ಮನಸ್ಸೆಚ್ಛೆ ಆಚರಣೆ ಮಾಡುವನು ಅಂದರೆ ಶಾಸ್ತ್ರಗಳಲ್ಲಿ ಇಲ್ಲದಿರುವುದನ್ನು ಜಪಿಸಿದರೆ ಅವರಿಗೆ ಸುಖ ಪ್ರಾಪ್ತಿಯಾಗುವುದಿಲ್ಲ ಸಿದ್ಧಿಯೂ ಪ್ರಾಪ್ತವಾಗಲ್ಲ, ಮೋಕ್ಷವೂ ದೊರಕುವುದಿಲ್ಲ ಅಂದರೆ ವ್ಯರ್ಥ ಸಾಧನೆಯಾಗಿದೆ. ಇದರಿಂದ ಅರ್ಜುನ ನಿನಗೆ ಕರ್ತವ್ಯ ಮತ್ತು ಅಕರ್ತವ್ಯದಲ್ಲಿ ಶಾಸ್ತ್ರವೇ ಪ್ರಮಾಣವಾಗಿದೆ. ಇದನ್ನು ಮೊದಲೇ ತಿಳಿಸಿರುವೆ. ಈಗ ತಿಳಿಸುವುದೇನೆಂದರೆ, ಚಿಕ್ಕಪ್ಪ–ಅವನ ಅಣ್ಣನ ಮಗ ರಾಧೆ–ರಾಧೆ ಎಂದು ಏಕೆ ಹೇಳುತ್ತಿದ್ದಾರೆ? ರಾಧೆ ಯಾರು ಎಂದು ಎಲ್ಲರಿಗೂ ಗೊತ್ತು. ಅವಳು ಶ್ರೀ ಕೃಷ್ಣನ ಪ್ರೇಯಸಿ. ಬರಸಾನಾ ಹಳ್ಳಿಯ ಜನರು ರಾಧೆಯನ್ನು ಕುಲಟೆ, ಚಾರಿತ್ರ್ಯಹೀನಳು, ನಾಚಿಕೆ ಇಲ್ಲದವಳು ಹಾಗೆ ಹೀಗೆ ಎಂದು

ಬಯ್ಯುತ್ತಿದ್ದರು. 'ಬೇರೆ ಊರಿನ ನಂದ್ ಬಾಬಾನ ಮಗನನ್ನು ಅವಳು ಕದ್ದು ಮುಚ್ಚಿ ಭೇಟಿಯಾಗಲು ಹೋಗುತ್ತಾಳೆ, ಅವಳನ್ನು ಮನೆಗೂ ಕರೆಯಬಾರದು ಎನ್ನುತ್ತಿದ್ದರು. ಹೆಣ್ಣುಮಕ್ಕಳ ಮೇಲೆ ಕೆಟ್ಟ ಪ್ರಭಾವ ಬೀರಬಹುದು ಎನ್ನುತ್ತಿದ್ದರು. ಆದರೆ ಅದೇ ಬರಸಾನ ಹಳ್ಳಿಯ ಜನರು ರಾಧೆಗಾಗಿ ಸ್ವತಃ (ಸ್ತ್ರೀ–ಪುರುಷರು, ಯುವತಿಯರು) ರಾಧೆ–ರಾಧೆ ಎನ್ನುತ್ತಾರೆ. ನೀವು ಮೊದಲಿನ ಪ್ರಶ್ನೆಯಲ್ಲಿ ಹೇಳಿದ್ರಿ ನಾವು ಈ ನಾಮವನ್ನೂ ಜಪಿಸುತ್ತೇವೆ ಎಂದು. ಈಗ ರಾಧೆಯೂ ಇಲ್ಲ, ಕೃಷ್ಣನೂ ಇಲ್ಲ. ಆದರೆ ಅವರು ರಾಧೆ–ರಾಧೆ ಶ್ಯಾಮ್ ಮಿಲಾ ದೇ ಎಂದು ಟೈಫಾಯಿಡ್‌ನ ಜ್ವರದ ರೋಗಿಯಂತೆ ಬಡಬಡಿಸುತ್ತಿದ್ದಾರೆ. ಇದೇ ಸ್ಥಿತಿ ನೀವು ಮೊದಲಿನ ಪ್ರಶ್ನೆಯಲ್ಲಿ ಹೇಳಿದ್ದ ಅನ್ಯ ಮಂತ್ರಗಳದ್ದು ಎಂದು ತಿಳಿಯಿರಿ. ಅವು ಕೂಡ ಶಾಸ್ತ್ರ ಪ್ರಮಾಣಿತವಾಗದ ಕಾರಣ ವ್ಯರ್ಥ.

❖ ಈಗ ಚಿಕ್ಕಪ್ಪನೂ ರಾಧೆ–ರಾಧೆ ಎನ್ನುತ್ತಾನೆ, ಅಣ್ಣನ ಮಗನೂ ರಾಧೆ–ರಾಧೆ ಎನ್ನುತ್ತಾನೆ, ಇದಕ್ಕೆ ನಾನು ಉತ್ತರಿಸುವೆ. ರಾಧೆಯು ಶ್ರೀಕೃಷ್ಣನ ಪ್ರೇಯಸಿ. ಶ್ರೀಕೃಷ್ಣ ರುಕ್ಮಿಣಿಯನ್ನು ವಿವಾಹವಾಗಲು ಅವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟಾಗ ಅವಳ ಅಣ್ಣನು ಹಿಂಬಾಲಿಸಿಕೊಂಡು ಬಂದಿದ್ದನೆಂದು ನಿಮಗೆ ಗೊತ್ತಿದೆ. ಶ್ರೀಕೃಷ್ಣನು ಮೊದಲು ಅವನಿಗೆ ಹೊಡೆದಿದ್ದನು. ನಂತರ ರಥಕ್ಕೆ ಕಟ್ಟಿ ಎಳೆದಾಡಿದ್ದನು. ರುಕ್ಮಿಣಿಯೂ ಶ್ರೀಕೃಷ್ಣನ ಪ್ರೇಯಸಿ. ಅವರಿಬ್ಬರ ಮಧ್ಯೆ ರುಕ್ಮಿಣಿಯ ಅಣ್ಣನು ಬಂದಿದ್ದನು. ಅವನ ಏನು ಸ್ಥಿತಿ ಮಾಡಿದ್ದ. ರುಕ್ಮಿಣಿಯು ಶ್ರೀಕೃಷ್ಣನಲ್ಲಿ ವಿನಂತಿಸಿಕೊಂಡಿದ್ದರಿಂದ ಅವಳ ಅಣ್ಣನನ್ನು ಬಿಟ್ಟನು. ಇಂದು ಭಗವಂತ ಶ್ರೀಕೃಷ್ಣನು ವರ್ತಮಾನದಲ್ಲಿ ಇದ್ದಿದ್ದರೆ, ರಾಧೆ ಇದ್ದಿದ್ದರೆ ಬರಸಾನಾದ ಚಿಕ್ಕಪ್ಪ ಹಾಗು ಅಣ್ಣನ ಮಗನು ರಾಧೆ–ರಾಧೆ ಎಂದಿದ್ದರೆ ಶ್ರೀಕೃಷ್ಣನು ಸುಮ್ಮನಿರುತ್ತಿದ್ದನೇ? ಎಂದಿಗೂ ಇಲ್ಲ. ಇಬ್ಬರನ್ನು ರಥಕ್ಕೆ ಕಟ್ಟಿ ಎಳೆದಾಡುತ್ತಿದ್ದನು. ಒಂದು ವೇಳೆ ನೀವು ಯಾರಾದರೂ ಒಬ್ಬ ಪ್ರೇಯಸಿಯ ಹೆಸರನ್ನು ಬಡಬಡಿಸಿದರೆ ಆ ಪ್ರೇಮಿಗೆ ಹೇಗಾಗಬೇಕು? ಯಾರಾದರೂ ಬಲಶಾಲಿಗಳಾದರೆ ಕೈ ಕಾಲು ಮುರಿಯುತ್ತಾರೆ. ದುರ್ಬಲರಾದರೆ ಸುಮ್ಮನೆ ಅಳುತ್ತಾರೆ. ಅವನಿಗೆ ಶಾಪ ನೀಡುವ, ಅವನೇನು ಪ್ರಸನ್ನನಾಗುವನೇ? ಇಲ್ಲ. ಆದ್ದರಿಂದ ಈ ನಾಮಜಪವು ಶಾಸ್ತ್ರಬದ್ಧವಾಗಿಲ್ಲ. ಅವುಗಳ ಜಪವು ವ್ಯರ್ಥ. ಶಾಸ್ತ್ರಬದ್ಧವಾದ ಮಂತ್ರವು ನನ್ನ ಬಳಿ ಇದೆ. ಬನ್ನಿ ನಿಮ್ಮ ಉದ್ಧಾರ ಮಾಡಿಕೊಳ್ಳಿ.

ಪ್ರಶ್ನೆ:– ನೀವು ಪ್ರಶ್ನೆಯ (ಪೂರ್ಣ ಗುರುವಿನ ಗುರುತೇನು?) ಉತ್ತರದಲ್ಲಿ ಒಂದು ಸ್ಥಾನದಲ್ಲಿ ಬರೆದಿದೆ ಅದೇನೆಂದರೆ ಓಂ ನಾಮಜಪವು ಶಾಸ್ತ್ರ ಪ್ರಮಾಣಿತವಾಗಿದೆ ಎನ್ನಲಾಗಿದೆ. (ಕಾಲಬ್ರಹ್ಮನ ಪೂಜೆ ಮಾಡಬೇಕೋ ಬೇಡವೋ?) ಇದರ ಉತ್ತರದಲ್ಲಿ ಬಹಳಷ್ಟು ಋಷಿಗಳ ಪೂಜೆಯ ಶಾಸ್ತ್ರವಿಧಿಯನ್ನು ಬಿಟ್ಟು ಮನಸೆಚ್ಛೆ ಆಚರಣೆ ಎಂದು ಹೇಳಲಾಗಿದೆ. ಅವರು ಓಂ ನಾಮದ ಜಪ ಮಾಡುತ್ತಿದ್ದರು.

ಉತ್ತರ:– ಆ ಋಷಿಗಳು ಓಂ ನಾಮದ ಜಪದ ಜೊತೆ ಘೋರ ತಪಸ್ಸನ್ನು ಮಾಡುತ್ತಿದ್ದರು. ಈ ಕಾರಣದಿಂದ ಅವರ ಸಾಧನೆಯನ್ನು ಶಾಸ್ತ್ರ ವಿರುದ್ಧ ಎಂದು ಹೇಳಲಾಗಿದೆ. ಓಂ ನಾಮ ಜಪವು ಶಾಸ್ತ್ರದಿಂದ ಪ್ರಮಾಣಿತವಾಗಿದೆ. ಆದರೆ ಮೋಕ್ಷದಾಯಕವಲ್ಲ. ಇದರಿಂದ ಅನುತ್ತಮ ಗತಿ (ಮೋಕ್ಷ) ಲಭಿಸುವುದು. ಆದ್ದರಿಂದ ಆ ಋಷಿಗಳ ಪೂಜೆಯು ಶಾಸ್ತ್ರಕ್ಕೆ ವಿರುದ್ಧವಾದದ್ದು, ವೇದ ಮತ್ತು ಗೀತೆಯಲ್ಲಿ ಆ ಪೂರ್ಣ ಪರಮಾತ್ಮನನ್ನು ಪೂಜಿಸಲು ಹೇಳಲಾಗಿದೆ. ಅವನ ಭಕ್ತಿ ಮಾಡದೆ ಬಿಟ್ಟು ಇಷ್ಟ ಬಂದ ಹಾಗೆ ಪೂಜೆ ಮಾಡಿದರೆ ಅದು ಶಾಸ್ತ್ರಕ್ಕೆ ವಿರುದ್ಧವಾಗಿರುತ್ತದೆ.

ಪ್ರಶ್ನೆ:– ಮಹರ್ಷಿ ವಾಲ್ಮೀಕಿ ಸತ್ಯಯುಗದಲ್ಲಿದ್ದರು. ಅವರೂ ರಾಮ–ರಾಮ ಜಪಿಸುತ್ತಿದ್ದರು. ಏನು ಈ ಮಂತ್ರ ಕೂಡ ಶಾಸ್ತ್ರ ಪ್ರಮಾಣಿತವೇ?

ಉತ್ತರ:– ಗೀತೆಯ 4ನೇ ಅಧ್ಯಾಯದ 1–2 ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ನಾನು ಈ ಜ್ಞಾನವನ್ನು ಸೂರ್ಯನಿಗೆ ತಿಳಿಸಿದ್ದೇ. ಅವನು ತನ್ನ ಮಗನಾದ ಮನುವಿಗೆ ಹೇಳಿದ್ದನು. ನಂತರ ಕೆಲವು ರಾಜಋಷಿಗಳಿಗೆ ಪ್ರಾಪ್ತವಾಯಿತು. ಸತ್ಯಯುಗದ

ಪ್ರಾರಂಭದಲ್ಲೇ ಈ ಸೂರ್ಯ, ಮನು, ರಾಜರ್ಷಿಗಳು ಇದ್ದರು. ನಂತರ ಈ ಜ್ಞಾನವು ನಾಶವಾಗಿತ್ತು. ಮಹರ್ಷಿ ವಾಲ್ಮೀಕಿಗೆ ಸಪ್ತಋಷಿಗಳು ಸಿಕ್ಕರು. ಅವರು ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದಿದ್ದರು. ಅದೇ ಹಠಯೋಗದ ತಪಸ್ಸನ್ನು ಮಹರ್ಷಿ ವಾಲ್ಮೀಕಿಗೆ ಅವರು ತಿಳಿಸಿದರು. ಆ ಹಠಯೋಗ ತಪಸ್ಸನ್ನು ಮಹರ್ಷಿ ವಾಲ್ಮೀಕಿ ತನು ಮನದಿಂದ, ಶ್ರದ್ಧೆಯಿಂದ ಮಾಡಿದರು. ಸ್ವಲ್ಪ ಸಮಯದ ನಂತರ ಅವರ ಶರೀರದ ಮೇಲಿನ ಭಾಗ ಅಂದರೆ ತಲೆಯಿಂದ ಧ್ವನಿ ಕೇಳಿ ಬಂದಿತು. ಅದಾಗಿತ್ತು ರಾಮ್–ರಾಮ್. ಆ ಶಬ್ದದ ಉಚ್ಚಾರಣೆಯನ್ನೇ ವಾಲ್ಮೀಕಿಗಳು ತಪಸ್ಸಿಗಾಗಿ ಬಳಸಿದರು. ಕೇಳುವವರಿಗೆ ಇವರು ಮರಾ ಮರಾ ಎಂದು ಹೇಳುತ್ತಿದ್ದಾರೆ ಅನ್ನಿಸುತ್ತಿತ್ತು. ವಾಸ್ತವಿಕದಲ್ಲಿ ಅವರು ರಾಮ–ರಾಮ ಎಂದು ಉಚ್ಛರಿಸುತ್ತಿದ್ದರು. ಅವರ ತಪಸ್ಸಿಗೆ ಫಲ ಸಿಕ್ಕಿತು. ಸಿದ್ಧಿಯು ಪ್ರಾಪ್ತವಾಯಿತು. ಅವರಿಗೆ ದಿವ್ಯದೃಷ್ಟಿ ಪ್ರಾಪ್ತವಾಯಿತು. ಆ ಕಾರಣದಿಂದಲೇ ಅವರು ರಾಮಚಂದ್ರನ ಜನ್ಮವಾಗುವ ಸಾವಿರಾರು ವರ್ಷಗಳ ಮೊದಲೇ ರಾಮಾಯಣ ಅಂದರೆ ರಾಮನ ಜೀವನದ ಎಲ್ಲಾ ಘಟನೆಗಳನ್ನು ಬರೆದಿದ್ದರು. ಗ್ರಂಥದ ಹೆಸರು "ವಾಲ್ಮೀಕಿ ರಾಮಾಯಣ". ಇದನ್ನು ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿತ್ತು. ರಾಮ–ರಾಮ ಜಪದಿಂದ ಯಾವುದೇ ಆಧ್ಯಾತ್ಮಿಕ ಲಾಭವಾಗುವುದಿಲ್ಲ. ಆದರೆ 'ಪರಮಾತ್ಮನ' ಈ ಶಬ್ದವನ್ನು ಉಚ್ಚರಿಸುವುದರಿಂದ ಪರಮಾತ್ಮನನ್ನು ಮರೆಯಲಾಗುವುದಿಲ್ಲ. ಆದ್ದರಿಂದ ರಾಮನಾಮದ ಉಚ್ಚಾರಣೆ ಹಿಂದೂ ಧರ್ಮದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಸ್ವಾಮಿ ರಾಮಾನಂದರು ರಾಮ–ರಾಮ ಶಬ್ದದಿಂದ ಸಂಭೋದಿಸುತ್ತಿದ್ದರು. ಅವರ ಶಿಷ್ಯರೂ ಇದನ್ನೇ ಮಾಡುತ್ತಿದ್ದರು. ಆದರೆ ಮಂತ್ರ ಜಪವು ಓಂ ಆಗಿತ್ತು. ಅದೇ ರೀತಿ ಕಬೀರ ಪಂಥಿಗಳಾದ ನಾವು ಸತ್ಯ ಸಾಹೇಬ್ ಹೇಳುತ್ತೇವೆ. ನಾವು ಜಪಿಸುವ ಮಂತ್ರ ಬೇರೆಯದು. ಅದೇ ಭಕ್ತಿಯಿಂದ ಭಗವಂತನ ಬಳಿಗೆ ಹೋಗಬಹುದಾಗಿದೆ. ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಸತಗುರು ಮಿಲೆ ತೊ ಇಚ್ಛಾ ಮೇಟ್ಯೆ, ಪದ್ ಮಿಲ್ ಪದ್ಯೆ ಸಮಾನಾ ।
ಚಲ್ ಹಂಸಾ ಉಸ್ ಲೋಕ್ ಪಠಾಊಂ, ಜೋ ಅಜರ್ ಅಮರ್ ಅಸ್ಥಾನಾ ।
ಚಾರ್ ಮುಕ್ತಿ ಜಹಾಂ ಚಂಪೀ ಕರತೀ, ಮಾಯಾ ಹೋ ರಹೀ ದಾಸೀ ।
ದಾಸ್ ಗರೀಬ್ ಅಭಯ್ ಪದ್ ಪರಸ್ಯೆ, ಮಿಲ್ಯೆ ರಾಮ್ ಅವಿನಾಶಿ ॥

## "ಯಾವ ಪ್ರಭುವನ್ನು ಆರಾಧಿಸಬೇಕು" – ಗೀತೆಯ ಪ್ರಕಾರ

ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹೈ ಕುಲ್ ಸಬ್ ಕಾ ॥

ಭಗವದ್ಗೀತೆಯ 15ನೇ ಅಧ್ಯಾಯದ 1 ರಿಂದ 4ನೇ ಶ್ಲೋಕ ಹಾಗೂ 16–17ನೇ ಶ್ಲೋಕದಲ್ಲಿ ಹೇಳಿರುವಂತೆ, ಈ ಪ್ರಪಂಚವು ಒಂದು ಅರಳೀ ಮರದಂತೆ. ಯಾವ ಸಂತನು ಈ ಪ್ರಪಂಚವೆಂಬ ಅರಳೀಮರದ ಬೇರಿನಿಂದ ಹಿಡಿದು 3 ಗುಣಗಳೆಂಬ ಕೊಂಬೆಗಳವರೆಗೆ ಸರ್ವಾಂಗವನ್ನು ಭಿನ್ನ–ಭಿನ್ನವಾಗಿ ಹೇಳುವನೋ (ಸಃ ವೇದವಿತ್) ಅವನು ವೇದದ ತಾತ್ಪರ್ಯವನ್ನು ಅರಿತವನಾಗಿರುತ್ತಾನೆ. ಅಂದರೆ ಅವನೇ ತತ್ವದರ್ಶಿ ಸಂತನು. ತನ್ನ ಮೂಲಕವೇ ರಚಿಸಲ್ಪಟ್ಟ ಸೃಷ್ಟಿಯ ಜ್ಞಾನ ಮತ್ತು ವಾಸ್ತವಿಕ ಆಧ್ಯಾತ್ಮ ಜ್ಞಾನವನ್ನು ಪರಮಾತ್ಮನು ಸ್ವತಃ ಭೂಮಿಯ ಮೇಲೆ ಪ್ರಕಟನಾಗಿ ತನ್ನ ಮುಖ ಕಮಲದಿಂದ ಹೇಳುತ್ತಾನೆ. ಸಾಕ್ಷಿಗಾಗಿ ಈ ಕೆಳಕಂಡ ವೇದ ಮಂತ್ರವನ್ನು ಓದಿ. ಈ ಮಂತ್ರಗಳ ಫೋಟೋಕಾಪಿ ದಯವಿಟ್ಟು 'ಗೀತೆ ನಿನ್ನ ಜ್ಞಾನ್ ಅಮೃತ್' ಎನ್ನುವ ಪುಸ್ತಕದಲ್ಲಿದೆ. ಅದರ ಅನುವಾದವನ್ನು ಆರ್ಯ ಸಮಾಜದ ಪ್ರವರ್ತಕರಾದ ಶ್ರೀ ದಯಾನಂದ ಸರಸ್ವತಿಯವರು ಹಾಗೂ ಅವರ ಅನುಯಾಯಿಗಳು ಮಾಡಿದ್ದಾರೆ. ಅದರಲ್ಲಿದ್ದ ಕೆಲವು ತಪ್ಪುಗಳನ್ನು ಲೇಖಕ(ಸಂತ ರಾಮ್‌ಪಾಲ್‌ದಾಸ್)ನು ಸರಿಪಡಿಸಿದ್ದಾನೆ.

ಋಗ್ವೇದ ಮಂಡಲ 9 ಸೂಕ್ತಿ 86 ಮಂತ್ರ 26–27, ಋಗ್ವೇದ ಮಂಡಲ 9 ಸೂಕ್ತಿ 82, ಮಂತ್ರ 1–2, ಋಗ್ವೇದ ಮಂಡಲ 9 ಸೂಕ್ತಿ 96 ಮಂತ್ರ 16 ರಿಂದ 20, ಋಗ್ವೇದ ಮಂಡಲ

9 ಸೂಕ್ತಿ 94 ಮಂತ್ರ 1, ಋಗ್ವೇದ ಮಂಡಲ 9 ಸೂಕ್ತಿ 95 ಮಂತ್ರ 2, ಋಗ್ವೇದ ಮಂಡಲ 9 ಸೂಕ್ತಿ 54 ಮಂತ್ರ 3, ಋಗ್ವೇದ ಮಂಡಲ 9 ಸೂಕ್ತಿ 20 ಮಂತ್ರ 1ರಲ್ಲಿ ಪ್ರಮಾಣವಿದೆ, ಏನೆಂದರೆ ಯಾರು ಸರ್ವ ಬ್ರಹ್ಮಾಂಡಗಳ ರಚನಾಕಾರರನು, ಸರ್ವರನ್ನೂ ಪಾಲಿಸುವ ಪರಮೇಶ್ವರನು. ಅವನು ಸರ್ವ ಲೋಕಗಳ ಮೇಲಿನ ಲೋಕದಲ್ಲಿ ಕುಳಿತಿದ್ದಾನೆ. (ಋಗ್ವೇದ ಮಂಡಲ 9 ಸೂಕ್ತಿ 54 ಮಂತ್ರ 3) ಆ ಪರಮಾತ್ಮನು ಅಲ್ಲಿಂದ ವೇಗವಾಗಿ ಅಂದರೆ ಸಶರೀರ ಭೂಮಿಗೆ ಬರುತ್ತಾನೆ. ಭಕ್ತರ ಸಂಕಟಗಳನ್ನು ದೂರ ಮಾಡುತ್ತಾನೆ. ಅವನ ಹೆಸರೇ ಕವಿರ್ದೇವ ಅಂದರೆ ಕಬೀರ ಪರಮೇಶ್ವರ ಆಗಿದೆ. ಇಲ್ಲಿ ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತಾನೆ. ಅವರಿಗೆ ಸ್ವತಃ ತನ್ನ ಮುಖ ಕಮಲದಿಂದ ತತ್ವಜ್ಞಾನವನ್ನು ತಿಳಿಸುತ್ತಾನೆ. ಆ ಪರಮಾತ್ಮ ಮೇಲಿನ ಲೋಕದಲ್ಲಿ ಕುಳಿತಿರುವನು. (ಋಗ್ವೇದ ಮಂಡಲ 9 ಸೂಕ್ತಿ 86 ಮಂತ್ರ 26–27, ಮಂಡಲ 82 ಮಂತ್ರ 1–2 ಹಾಗೂ ಮಂಡಲ 9 ಸೂಕ್ತಿ 20 ಮಂತ್ರ 1). ಪರಮಾತ್ಮನು ಭೂಮಿಯ ಮೇಲೆ ಕವಿಯ ಹಾಗೆ ವ್ಯವಹರಿಸುತ್ತಾ ವಿಹರಿಸುತ್ತಾನೆ. (ಋಗ್ವೇದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರ). ಪರಮಾತ್ಮನು ತನ್ನ ಮುಖ ಕಮಲದಿಂದ ವಚನಗಳನ್ನು ಹೇಳಿ ಸಾಧಕರಿಗೆ ಭಕ್ತಿ ಮಾಡಲು ಪ್ರೇರೇಪಿಸುತ್ತಾನೆ. ಪರಮಾತ್ಮನು ಭಕ್ತಿಯ ಗುಪ್ತಮಂತ್ರಗಳನ್ನು ಆವಿಷ್ಕರಿಸುತ್ತಾನೆ. (ಋಗ್ವೇದದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ).

ಪರಮಾತ್ಮನು ತತ್ವಜ್ಞಾನವನ್ನು ಕವಿರ್ವಾಣಿ (ಕಬೀರ್‌ವಾಣಿ) ಮೂಲಕ ಲೋಕೋಕ್ತಿ, ದೋಹೆ, ಚೌಪದಿಗಳ ಮೂಲಕ ಹೇಳುತ್ತಾನೆ. ಅವನು ಕವಿರ್ದೇವ (ಕಬೀರ ಪರಮೇಶ್ವರನು) ಸಂತನ ರೂಪದಲ್ಲಿ ಪ್ರಕಟನಾಗುತ್ತಾನೆ. ಆ ಪರಮೇಶ್ವರನ ಮೂಲಕ ಋಷಿ ಅಥವಾ ಸಂತರ ಮೂಲಕ ರಚಿಸಲ್ಪಟ್ಟ ಅಶಂಖ್ಯ ವಾಣಿಗಳ ತತ್ವಜ್ಞಾನವು ಅವರ ಅನುಯಾಯಿಗಳಿಗೆ ಅಮೃತದಂತೆ ಆನಂದದಾಯಕವಾಗಿರುತ್ತದೆ.

ಆ ಪರಮೇಶ್ವರರು ಪ್ರಸಿದ್ಧ ಕವಿಗಳಲ್ಲಿ ಒಬ್ಬ ಪ್ರಸಿದ್ಧ ಕವಿಯ ಪದವಿಯನ್ನೂ ಪಡೆಯುತ್ತಾರೆ. ಅವರನ್ನು ಕವಿ ಎಂದು ಕರೆಯುತ್ತಾರೆ. ಆದರೆ ಅವರು ಪರಮೇಶ್ವರರಾಗಿರುತ್ತಾರೆ. ಆ ಪರಮಾತ್ಮನು ಮೂರನೇ ಮುಕ್ತಿಧಾಮದಲ್ಲಿ (ಸತ್ಯಲೋಕದಲ್ಲಿ) ವಿರಾಜಮಾನನಾಗಿರುತ್ತಾನೆ. ಹೇಗೆ ಮನುಷ್ಯನು ಬೇರೆ ಬಟ್ಟೆ ಧರಿಸುತ್ತಾನೋ, ಹಾಗೆ ಪರಮಾತ್ಮ ಬೇರೆ ಬೇರೆ ರೂಪಗಳಲ್ಲಿ ಪೃಥ್ವಿ ಮೇಲೆ ಪ್ರಕಟರಾಗುತ್ತಾರೆ. ಅವರು ಒಳ್ಳೆಯ ಆತ್ಮಗಳಿಗೆ ಭೇಟಿಯಾಗುತ್ತಾರೆ. ಅವರು ತತ್ವದರ್ಶಿ ಸಂತನ ಭೂಮಿಕೆ ಮಾಡಿ ತತ್ವಜ್ಞಾನ ದೋಹೆ, ಚೌಪದಿ, ಶಬ್ದಗಳ ಮೂಲಕ ಹೇಳುತ್ತಾರೆ. ಆ ಪರಮೇಶ್ವರ ಇಸವಿ 1398 ರಿಂದ 1518 ರವರೆಗೆ 120 ವರ್ಷಗಳ ಕಾಲ ಈ ಭೂಮಿಯ ಮೇಲೆ ಭಾರತವರ್ಷದ ಪವಿತ್ರ ಭೂಮಿ ಮೇಲೆ ಕಾಶಿ ನಗರದಲ್ಲಿ ನೇಕಾರ ರೂಪದಲ್ಲಿ ಇದ್ದು ತತ್ವಜ್ಞಾನವನ್ನು ಹೇಳಿದ್ದರು.

ಕಬೀರ್, ಅಕ್ಷರ್ ಪುರುಷ್ ಏಕ್ ಪೇಡ್ ಹೈ, ಕ್ಷರ್ ಪುರುಷ್ ವಾಕೀ ಡಾರ್ ।
ತೀನೋ ದೇವಾ ಶಾಖಾ ಹೈ, ಪಾತ್ ರೂಪ್ ಸಂಸಾರ್ ॥

ವಿಶೇಷ:– ಕಬೀರ್ ವಾಣಿ ಎಂಬ ಪುಸ್ತಕದಲ್ಲಿ ಒಂದು ವಾಣಿ ಈ ರೀತಿಯಾಗಿಯೂ ಬರೆದಿದೆ.

ಕಬೀರ್, ಅಕ್ಷರ್ ಪುರುಷ್ ವೃಕ್ಷ್ ಕಾ ತನಾ ಹೈ, ಕ್ಷರ್ ಪುರುಷ್ ಹೈ ಡಾರ್ ।
ತ್ರಯದೇವ್ ಶಾಖಾ ಭಏ, ಪಾತ್ ಜಾನೋ ಸಂಸಾರ್ ॥

ಸರಳಾರ್ಥ:– ವೃಕ್ಷದ ಯಾವ ಭಾಗ ಭೂಮಿಯ ಮೇಲೆ ಕಾಣಿಸುತ್ತದೆ. ಅದರ ಬಗ್ಗೆ ಹೇಳಲಾಗಿದೆ. ಮರದ ಕಾಂಡವನ್ನು ಅಕ್ಷರ ಪುರುಷವೆಂದು ತಿಳಿಯಿರಿ, ಅದರಲ್ಲಿರುವ ಕೊಂಬೆಗಳಲ್ಲಿ ಒಂದನ್ನು ಕ್ಷರ ಪುರುಷನೆಂದು, ಆ ಕೊಂಬೆಗೆ 3 ರೆಂಬೆಗಳಿವೆ ಎಂದು ತಿಳಿಯಿರಿ, ಅವರು ಮೂವರು ದೇವತೆಗಳು (ರಜೋಗುಣ ಬಹ್ಮಾ, ಸತೋಗುಣ ವಿಷ್ಣು ಹಾಗೂ ತಮೋಗುಣ ಶಿವ) ಎಂದು ತಿಳಿಯಿರಿ. ಆ ರೆಂಬೆ ಕೊಂಬೆಗಳಲ್ಲಿರುವ ಎಲೆಗಳನ್ನು ಜೀವ ಜಂತುಗಳೆಂದು ತಿಳಿಯಿರಿ.

ಪರಮೇಶ್ವರ ಕಬೀರರು ತತ್ವಜ್ಞಾನದಲ್ಲಿ ಎಲ್ಲಾ ಜ್ಞಾನವನ್ನು ತಿಳಿಸಿದ್ದಾರೆ. ಗೀತೆಯ 4ನೇ

ಅಧ್ಯಾಯದ 32ನೇ ಶ್ಲೋಕದಲ್ಲಿ ಯಜ್ಞಗಳ ಅಂದರೆ ಧಾರ್ಮಿಕ ಅನುಷ್ಠಾನಗಳ ಮಾಹಿತಿ (ಬ್ರಹ್ಮಣಃ ಮುಖೆ) ಸಚ್ಚಿದಾನಂದ ಘನ ಬ್ರಹ್ಮ ಅಂದರೆ ಪರಮ ಅಕ್ಷರಬ್ರಹ್ಮನು ತನ್ನ ಮುಖ ಕಮಲದಿಂದ ಹೇಳಿದ ವಾಣಿಯಲ್ಲಿ ವಿಸ್ತಾರದಿಂದ ಹೇಳಲಾಗಿದೆ. ಅದು ತತ್ವಜ್ಞಾನವಾಗಿದೆ.

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ, ಯಾವ ತತ್ವಜ್ಞಾನವನ್ನು ಪರಮಾತ್ಮ ಸ್ವತಃ ಹೇಳುವರೋ, ಅದನ್ನು ಅವರ ಕೃಪಾಪಾತ್ರ ಸಂತನೇ ತಿಳಿಯುವನು. ಆ ತತ್ವಜ್ಞಾನವನ್ನು ನೀನು ತತ್ವದರ್ಶಿ ಸಂತನ ಬಳಿ ಹೋಗಿ ತಿಳಿದುಕೊ. ಅವರಿಗೆ ದೀರ್ಘದಂಡ ನಮಸ್ಕಾರ (ಭೂಮಿಯ ಮೇಲೆ ಹೊಟ್ಟೆ ಬಲದಿಂದ ಉದ್ದನೆ ಮಲಗಿ ಮಾಡುವ ಪ್ರಣಾಮ) ಮಾಡಿ, ವಿನಯವಾಗಿ ಪ್ರಶ್ನಿಸುವುದರಿಂದ ಅವರು ತತ್ವಜ್ಞಾನದ ಉಪದೇಶವನ್ನು ನಿಮಗೆ ನೀಡುವರು.

ಪರಮೇಶ್ವರನು ಈ ತತ್ವಜ್ಞಾನವನ್ನು ಸ್ವತಃ ಭೂಮಿಗೆ ಬಂದು ತಿಳಿಸಿದ್ದನು. ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ತತ್ವದರ್ಶಿ ಸಂತನ ಗುರುತು ಹೇಳಲಾಗಿದೆ. ಯಾವ ಸಂತನು ಪ್ರಪಂಚವೆಂಬ ವೃಕ್ಷವನ್ನು ಬೇರಿನಿಂದ ಹಿಡಿದು ಎಲ್ಲಾ ಭಾಗಗಳನ್ನು ತಿಳಿದಿರುವನೋ ಅವನೇ ತತ್ವದರ್ಶಿ ಸಂತನು.

❖ ಈಗ ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳನ್ನು ತಿಳಿಯೋಣ:–

1)ಮೂಲ(ಬೇರು):– ಇದು ಪರಮ ಅಕ್ಷರ ಬ್ರಹ್ಮ. ಅವನು ಎಲ್ಲರ ಮಾಲೀಕ. ಎಲ್ಲರ ಉತ್ಪತ್ತಿಕರ್ತನು. ಎಲ್ಲರ ಧಾರಣೆ ಪೋಷಣೆ ಮಾಡುವವನು. ಅವನ ಮಾಹಿತಿ ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದ ಪ್ರಶ್ನೆಯ ಉತ್ತರ ಗೀತೆಯ 8ನೇ ಅಧ್ಯಾಯದ 3, 8, 9, 10 ಮತ್ತು 20, 21, 22ನೇ ಶ್ಲೋಕದಲ್ಲಿ ನೀಡಲಾಗಿದೆ. ಇದರ ವರ್ಣನೆ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿದೆ. ಹೇಗೆ ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಇಬ್ಬರು ಪುರುಷರ ಬಗ್ಗೆ ಹೇಳಲಾಗಿದೆ:– ಒಬ್ಬ "ಕ್ಷರ ಪುರುಷ" ಇನ್ನೊಬ್ಬ "ಅಕ್ಷರ ಪುರುಷ" ಇವರಿಬ್ಬರೂ ಹಾಗೂ ಇವರ ಅಧೀನ ಎಷ್ಟೆಲ್ಲಾ ಶರೀರಧಾರೀ ಜೀವಿಗಳಿದ್ದಾರೋ, ಅವರೆಲ್ಲಾ ನಾಶವಾಗುವವರು, ಜೀವಾತ್ಮವಂತು ಯಾರದೂ ಸಾಯುವುದಿಲ್ಲ.

ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಹೇಳಿದೆ (ಉತ್ತಮ ಪುರುಷಃ) ಅಂದರೆ ಪುರುಷೋತ್ತಮನಂತು (ಅನ್ಯಃ) ಬೇರೆ ಇದ್ದಾನೆ. ಅವನನ್ನು (ಪರಮಾತ್ಮಾ ಇತಿ ಉದಾಹೃತಃ) ಪರಮಾತ್ಮ ಎಂದು ಹೇಳಲಾಗುತ್ತದೆ (ಯಃ ಲೋಕ ತ್ರಯಮ್) ಯಾರು ಮೂರೂ ಲೋಕಗಳಲ್ಲಿ (ಅವಿಶ್ಯ ವಿಭರ್ತಿ) ಪ್ರವೇಶ ಮಾಡಿ ಎಲ್ಲರ ಪಾಲನೆ–ಪೋಷಣೆ ಮಾಡುತ್ತಾನೋ (ಅವ್ಯಯಃ ಈಶ್ವರಃ) ಅವನು ಅವಿನಾಶಿ ಪರಮೇಶ್ವರನು, ಈ ಪರಮ ಅಕ್ಷರ ಬ್ರಹ್ಮನು ಪ್ರಪಂಚವೆಂಬ ವೃಕ್ಷದ ಮೂಲ (ಬೇರು) ರೂಪ ಪರಮೇಶ್ವರನು. ಯಾರ ಬಗ್ಗೆ ಸಂತ ಗರೀಬ್ ದಾಸರು ಹೇಳಿದ್ದಾರೋ, ಅವನು ಇದೇ ಪರಮಾತ್ಮನು:–

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹೈ ಕುಲ್ ಸಬ್ ಕಾ ॥

ಇವನೇ ಅಶಂಖ್ಯ ಬ್ರಹ್ಮಾಂಡಗಳ ಮಾಲೀಕ. ಇವನೇ ಕ್ಷರ ಪುರುಷ ಮತ್ತು ಅಕ್ಷರ ಪುರುಷ ಇಬ್ಬರ ಮಾಲೀಕ ಹಾಗು ಉತ್ಪತ್ತಿಕರ್ತ.

2)ಅಕ್ಷರ ಪುರುಷ:– ಪ್ರಪಂಚವೆಂಬ ವೃಕ್ಷದ ಕಾಂಡ ತಿಳಿಯಿರಿ. ಇವನು 7 ಶಂಖ ಬ್ರಹ್ಮಾಂಡಗಳ ಮಾಲೀಕ, ನಾಶವಾಗುವವನು,

3)ಕ್ಷರ ಪುರುಷ:– ಪ್ರಪಂಚವೆಂಬ ವೃಕ್ಷದ ಕೊಂಬೆ ತಿಳಿಯಿರಿ. ಇವನು ಗೀತೆಯ ಜ್ಞಾನದಾತನು, ಇವನನ್ನು ಕ್ಷರಬ್ರಹ್ಮನೆಂದು ಕರೆಯುವರು. ಇವನು 21 ಬ್ರಹ್ಮಾಂಡಗಳ ಮಾಲೀಕ. ನಾಶವಾಗುವವನು.

4)ಬ್ರಹ್ಮಾ, ವಿಷ್ಣು, ಶಿವ (ರಜೋಗುಣ, ಸತ್ವಗುಣ, ತಮೋಗುಣ) ಪ್ರಪಂಚ ರೂಪಿ ವೃಕ್ಷದ 3

ಶಾಖೆಗಳು, ಇವರು ಒಂದು ಬ್ರಹ್ಮಾಂಡದಲ್ಲಿನ ಮೂರು ಲೋಕ (ಪೃಥ್ವಿ ಲೋಕ, ಪಾತಾಳ ಲೋಕ ಹಾಗು ಸ್ವರ್ಗ ಲೋಕ)ಗಳಲ್ಲಿ ಒಂದೊಂದು ವಿಭಾಗದ ಮಂತ್ರಿಗಳು, ಮಾಲೀಕರು.

ಹೇಗೆ ರಜೋಗುಣದ ವಿಭಾಗಕ್ಕೆ ಬ್ರಹ್ಮಾನು ಮಾಲೀಕನು, ಇವನ ಪ್ರಭಾವದಿಂದ ಎಲ್ಲಾ ಜೀವಿಗಳು ಸಂತಾನೋತ್ಪತ್ತಿ ಮಾಡುತ್ತವೆ. ಸತಗುಣ ವಿಭಾಗದ ಮಾಲೀಕನು ಶ್ರೀ ವಿಷ್ಣು, ಇವನ ಪ್ರಭಾವದಿಂದ ಒಬ್ಬರ ಇನ್ನೊಬ್ಬರಲ್ಲಿ ಮೋಹ, ಮಮತೆ ಇರುತ್ತದೆ. ಕರ್ಮಾನುಸಾರ ಎಲ್ಲರಿಗೂ ಮಾಡಿದ ಫಲ ಕೊಡುತ್ತಾನೆ. ತಮೋಗುಣ ವಿಭಾಗದ ಮಾಲೀಕ ಶ್ರೀ ಶಂಕರನು. ಇವನ ಕಾರಣದಿಂದ ಎಲ್ಲರ ಅಂತ್ಯವಾಗುತ್ತದೆ. ಮತ್ತು ಎಲೆ ರೂಪದಲ್ಲಿ ಪ್ರಪಂಚದ ಜೀವಿಗಳು ಎಂದು ತಿಳಿಯಿರಿ. ಇದಾಗಿದೆ ಪ್ರಪಂಚವೆಂಬ ವೃಕ್ಷದ ಸರ್ವಾಂಗಗಳ ಭಿನ್ನ ಭಿನ್ನವಾದ ಮಾಹಿತಿ. ಈ ಜ್ಞಾನವನ್ನು ಸ್ವತಃ ಕಬೀರ್ ಪರಮೇಶ್ವರರು ತಮ್ಮ ಮುಖ ಕಮಲದಿಂದ ಹೇಳಿದ್ದರು. ಅದು ಕಬೀರ್ ವಾಣಿ, ಕಬೀರ್ ಬೀಜಕ್, ಕಬೀರ್ ಶಬ್ದಾವಳಿ ಹಾಗು ಕಬೀರ್ ಸಾಗರದಲ್ಲಿ ಶ್ರೀಧನಿಕ ಧರ್ಮದಾಸ್ (ಬಾಂಧವ್‌ಗಢ್ ನಗರದ) ಮೂಲಕ ಬರೆಯಲ್ಪಟ್ಟಿತ್ತು. ಆ ಪರಮೇಶ್ವರರಂತು ಹೇಳಿಟ್ಟಿದ್ದರು ಅಥವಾ ವರ್ತಮಾನದಲ್ಲಿ ಈ ದಾಸನು (ಸಂತ ರಾಮ್‌ಪಾಲ್ ದಾಸನು) ತಿಳಿದಿರುವನು. ನನಗೆ ಸಂಪೂರ್ಣ ಆಧ್ಯಾತ್ಮ ಜ್ಞಾನ ಪ್ರಾಪ್ತವಾಗುವುದು, ಪರಮೇಶ್ವರ ಕಬೀರರದೇ ಕೃಪೆಯಿಂದ ಆಗಿದೆ.

ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕದ ಪ್ರಕಾರ ತತ್ವದರ್ಶಿ ಸಂತನ ಗುರುತಿನಿಂದಲೂ ಸ್ಪಷ್ಟವಾಯ್ತೇನೆಂದರೆ ಈ ದಾಸನು (ಸಂತ ರಾಮ್‌ಪಾಲ್ ದಾಸ್) ತತ್ವದರ್ಶಿ ಸಂತನೆಂದು.

ಗೀತೆಯ 15ನೇ ಅಧ್ಯಾಯದ 1 ರಿಂದ 4ನೇ ಶ್ಲೋಕ ಮತ್ತು 16, 17ನೇ ಶ್ಲೋಕದ ಸಾರಾಂಶ ರೂಪದ ಚಿತ್ರ. ಪುನಃ ನಾವು ಆ ಪ್ರಸಂಗದ ಬಗ್ಗೆ ನೋಡೋಣ

ಭಜನ್ ಕರೋ ಉಸ್ ರಬ್ ಕಾ, ಜೋ ದಾತಾ ಹ್ಯೇ ಕುಲ್ ಸಬ್ ಕಾ ।

ಇಲ್ಲಿಯವರೆಗೂ ಭಕ್ತಿ ಮಾಡಬೇಕೆಂದು ಹೇಳಲಾಯಿತು. ಆದರೆ ಈಗ ಯಾರನ್ನು ಆರಾಧಿಸಬೇಕು ಎಂಬುದನ್ನು ಸ್ಪಷ್ಟಪಡಿಸೋಣ? 1)ಶ್ರೀಬ್ರಹ್ಮಾ ರಜೋಗುಣದ ಅಥವಾ 2)ಶ್ರೀ ವಿಷ್ಣು ಸತೊಗುಣದ ಅಥವಾ 3)ಶ್ರೀ ಶಿವ ತಮೋಗುಣ ರೂಪಿ ಮೂರು ಶಾಖೆಗಳು ಅಥವಾ 4) ಗೀತೆಯ ಜ್ಞಾನದಾತ ಕ್ಷರ ಪುರುಷ=ಕೊಂಬೆಯದು ಅಥವಾ 5)ಅಕ್ಷರ ಪುರುಷ=ಕಾಂಡದ ಅಥವಾ 6)ಪರಮ ಅಕ್ಷರ ಪುರುಷ=ಮೂಲದ್ದು?

ಉದಾಹರಣೆ:– ನಾವು ನರ್ಸರಿಯಿಂದ ಯಾವುದಾದರೂ ಮಾವಿನ ಸಸಿಯನ್ನು ತಂದರೆ ಅದನ್ನು ಮನೆಯ ಅಂಗಳದಲ್ಲಿ ಹೇಗೆ ನೆಡುತ್ತೇವೆ?


ನೆಲದಲ್ಲಿ ಗುಂಡಿ ತೋಡುತ್ತೇವೆ. ಸಸಿಯ ಬೇರನ್ನು ಗುಂಡಿಯಲ್ಲಿಟ್ಟು ಮಣ್ಣಿನಿಂದ ಮುಚ್ಚುತ್ತೇವೆ. ನಂತರ ಆ ಬೇರಿಗೆ (ಮೂಲಕ್ಕೆ) ನೀರನ್ನು ಹಾಕುತ್ತೇವೆ. ಗೊಬ್ಬರವನ್ನು ಹಾಕುತ್ತೇವೆ ಅಂದರೆ ಸಸ್ಯದ ಬೇರಿನ ಪೂಜೆ ಮಾಡುತ್ತೇವೆ. ಬೇರುಗಳಿಂದ ಆಹಾರ ಕಾಂಡಕ್ಕೆ ತಲುಪುತ್ತದೆ, ಕಾಂಡ ತನಗೆ ಬೇಕಾದಷ್ಟು ಆಹಾರವನ್ನು ಇಟ್ಟುಕೊಂಡು ಉಳಿದಿದ್ದನ್ನು ಕೊಂಬೆಗೆ ರವಾನಿಸುತ್ತದೆ. ಕೊಂಬೆ ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಶಾಖೆಗಳಿಗೆ ಕಳುಹಿಸುತ್ತದೆ. ಹೀಗೆ ಶಾಖೆಗಳು ಉಳಿದ ಆಹಾರ ಎಲೆಗಳಿಗೆ ಕಳಿಸುತ್ತವೆ. ಈ ರೀತಿ ಆ ಸಸಿಯು ಬೆಳೆದು ದೊಡ್ಡ ಮರವಾದ ನಂತರ ಹಣ್ಣುಗಳನ್ನು ನೀಡುತ್ತದೆ.

ಓದುಗರು ಬಹಳ ಬುದ್ಧಿವಂತರು. ಯಾವ ಪರಮಾತ್ಮನ ಪೂಜೆ ಮಾಡಬೇಕೆಂದು ಈಗ ತಿಳಿದಿರಬಹುದು.

ಸೂಕ್ಷ್ಮವೇದದಲ್ಲಿ ಕಬೀರ ಪರಮೇಶ್ವರರು ಹೇಳಿದ್ದಾರೆ:–

ಕಬೀರ್, ಏಕೈ ಸಾಧೈ ಸಬ್ ಸಧೈ, ಸಬ್ ಸಾಧೈ ಸಬ್ ಜಯ್ ।<br>
ಮಾಲೀ ಸೀಂಚೆ ಮೂಲ್ ಕೂಂ, ಫೂಲೈ ಫಲೈ ಅಘಾಯ್ ॥

## ಮೇಲೆ ಬೇರು ಕೆಳಗೆ ಶಾಖೆಯುಳ್ಳ ಹಿಮ್ಮುಖವಾಗಿ ತೂಗಾಡುತ್ತಿರುವ ಸಂಸಾರ (ಜಗತ್ತು) ರೂಪಿ ಮರದ ಚಿತ್ರ



ಒಬ್ಬ ಮೂಲ ದೇವರ ಪೂಜೆ ಮಾಡುವುದರಿಂದ ಎಲ್ಲಾ ದೇವರ ಪೂಜೆಯೂ ನೆರವೇರುತ್ತದೆ. ಇದು ಶಾಸ್ತ್ರಬದ್ಧವಾಗಿದೆ. ಯಾರು ಮೂವರು ದೇವತೆಗಳಲ್ಲಿ ಒಬ್ಬರ ಅಥವಾ ಇಬ್ಬರ (ಶ್ರೀವಿಷ್ಣು ಸತಗುಣ ಹಾಗು ಶ್ರೀಶಂಕರ ತಮಗುಣ) ಪೂಜೆ ಮಾಡುವರೋ ಅಥವಾ ಮೂವರ ಪೂಜೆ ಇಷ್ಟದೈವ ರೂಪದಲ್ಲಿ ಮಾಡುತ್ತಿದ್ದರೆ, ಅವರು ಗೀತೆಯ 13ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಹೇಳಿದ ಹಾಗೆ ಆ ಪೂಜೆಯು ಅವ್ಯಭಿಚಾರಿಣಿ ಭಕ್ತಿ ಅಲ್ಲದ ಕಾರಣ ಅದು ವ್ಯರ್ಥವಾಗುತ್ತದೆ. ಹೇಗೆ ಒಬ್ಬಳು ಸ್ತ್ರೀಯು ತನ್ನ ಪತಿಯನ್ನು ಬಿಟ್ಟು ಅನ್ಯ ಪುರುಷನ ಜೊತೆ ಶಾರೀರಿಕ ಸಂಪರ್ಕ ಇಟ್ಟುಕೊಳ್ಳುವುದಿಲ್ಲವೋ ಅವಳು ಅವ್ಯಭಿಚಾರಿಣಿ ಸ್ತ್ರೀ. ಯಾರು ಅನೇಕ ಪುರುಷರ ಜೊತೆ ಸಂಪರ್ಕ ಇಟ್ಟುಕೊಳ್ಳುವಳೋ ಅವಳು ವ್ಯಭಿಚಾರಿಣಿಯಾದ್ದರಿಂದ ಸಮಾಜವು ಅವಳನ್ನು ನಿಂದಿಸುತ್ತದೆ. ಅವಳು ಪತಿಯ ಹೃದಯದಿಂದ ಇಳಿಯುತ್ತಾಳೆ.

ಶಾಸ್ತ್ರಾನುಕೂಲ ಸಾಧನೆ ಅಂದರೆ ನೇರ ಬಿತ್ತಿದ ಭಕ್ತಿ ರೂಪಿ ಗಿಡದ ಚಿತ್ರವನ್ನು ಇದೇ ಪುಸ್ತಕದಲ್ಲಿ ತೋರಿಸಲಾಗಿದೆ ಹಾಗೂ ಶಾಸ್ತ್ರದ ವಿರುದ್ಧವಾದ ಸಾಧನೆ ಅಂದರೆ ತಲೆಕೆಳಗಾಗಿ ಬಿತ್ತಿದ ಭಕ್ತಿ ರೂಪಿ ಗಿಡದ ಬಗ್ಗೆಯೂ ಚಿತ್ರದ ಮೂಲಕ ತೋರಿಸಲಾಗಿದೆ.


ಮೇಲೆ ತಿಳಿಸಿದ ಪ್ರಮಾಣಗಳಿಂದ ಮೂಲ ಪರಮಾತ್ಮನ ಭಕ್ತಿಯನ್ನು ಮಾಡುವುದರಿಂದ ಆತ್ಮದ ಕಲ್ಯಾಣವಾಗುವುದೆಂದು ಸ್ಪಷ್ಟವಾಯ್ತು.

ಅನ್ಯ ಪ್ರಮಾಣಗಳು:– ಗೀತೆಯ 3ನೇ ಅಧ್ಯಾಯದ 10 ರಿಂದ 15ನೇ ಶ್ಲೋಕದಲ್ಲಿ ಮೇಲೆ ತಿಳಿಸಿದ ಭಕ್ತಿಯ ಸಮರ್ಥನೆ ಮಾಡಲಾಗಿದೆ.

❖ ಗೀತೆಯ 3ನೇ ಅಧ್ಯಾಯದ 10ನೇ ಶ್ಲೋಕ=ಪ್ರಜಾಪತಿಯು ಅಂದರೆ ಕುಲದ ಮಾಲೀಕನು ಸೃಷ್ಟಿಯ ಆದಿಯಲ್ಲಿ ಯಜ್ಞಸಹಿತವಾದ ಅಂದರೆ ಧಾರ್ಮಿಕ ಅನುಷ್ಠಾನಗಳ ಜ್ಞಾನ ಸಹಿತ ಪ್ರಜೆಗಳನ್ನು ಉತ್ಪತ್ತಿಸಿ ಆದೇಶವನ್ನು ನೀಡಿದ್ದನು. "ನೀವೆಲ್ಲಾ ಧಾರ್ಮಿಕ ಅನುಷ್ಠಾನಗಳ ಮೂಲಕ ವೃದ್ಧಿಯನ್ನು ಪಡೆಯಿರಿ" ಈ ಯಜ್ಞ ಅಂದರೆ ಧಾರ್ಮಿಕ ಅನುಷ್ಠಾನವು ನಿಮಗೆ ಇಚ್ಛಿತ ಭೋಗವನ್ನು ಪ್ರದಾನ ಮಾಡುವಂಥವು. (ಗೀತೆಯ 3ನೇ ಅಧ್ಯಾಯದ 10ನೇ ಶ್ಲೋಕ)

❖ ಈ ಶಾಸ್ತ್ರಬದ್ಧವಾದ ಧಾರ್ಮಿಕ ಅನುಷ್ಠಾನದ ಮೂಲಕ ದೇವತೆಗಳನ್ನು (ಪ್ರಪಂಚವೆಂಬ ಗಿಡದ ಶಾಖೆಗಳನ್ನು) ತೃಪ್ತ ಪಡಿಸಿ ಅಂದರೆ ಪೂರ್ಣ ಪರಮಾತ್ಮ (ಮೂಲ ಮಾಲೀಕ) ನನ್ನು ಇಷ್ಟದೈವನೆಂದು ತಿಳಿದು ಸಾಧನೆ ಮಾಡಿದರೆ ಶಾಖೆಗಳು ತಾವಾಗಿಯೇ ತೃಪ್ತಗೊಳ್ಳುವವು. ಅಂದರೆ ಪೂರ್ವದಲ್ಲಿ ಸ್ಪಷ್ಟವಾಗಿದೆ. ನಂತರ ಆ ದೇವತೆಗಳು (ಶಾಖೆಗಳು ದೊಡ್ಡದಾದ ನಂತರ ಫಲ ನೀಡುವವು) ನಿಮ್ಮನ್ನು ತೃಪ್ತಿಪಡಿಸುವರು. ಅಂದರೆ ನಾವು ಶಾಸ್ತ್ರಬದ್ಧವಾಗಿ ಭಕ್ತಿ ಮಾಡುತ್ತಿದ್ದರೆ ನಮ್ಮ ಭಕ್ತಿ ಕರ್ಮವಾಗುವುದು. ಕರ್ಮಫಲವನ್ನು ಈ ಮೂವರು ದೇವತೆಗಳು (ಶ್ರೀಬಹ್ಮಾ, ಶ್ರೀವಿಷ್ಣು ಮತ್ತು ಶ್ರೀಶಿವ ರೂಪಿ ಶಾಖೆಗಳೇ) ನೀಡುವವು. ಹೀಗೆ ಒಬ್ಬರು ಇನ್ನೊಬ್ಬರನ್ನು ತೃಪ್ತಿಪಡಿಸುತ್ತಾ ನಿಮ್ಮ ಕಲ್ಯಾಣವಾಗುವುದು ಹಾಗು ಇದರಿಂದ ಆ ಪರಮಾತ್ಮನನ್ನು ಪಡೆಯುವೆ. (ಇದು ಜ್ಞಾನ ಗೀತೆಯ ಜ್ಞಾನದಾತ ಹೇಳುತ್ತಿದ್ದಾನೆ.) (ಗೀತೆಯ 3ನೇ ಅಧ್ಯಾಯ ಶ್ಲೋಕ 11)

❖ ಶಾಸ್ತ್ರಬದ್ಧವಾಗಿ ಮಾಡಿದ ಯಜ್ಞ ಅಂದರೆ ಅನುಷ್ಠಾನಗಳ ಮೂಲಕ ವೃದ್ಧಿಸಿದ ದೇವತೆ ಅಂದರೆ ಪ್ರಪಂಚವೆಂಬ ಗಿಡದ ಶಾಖೆಗಳು. ನೀವು ಕೇಳದೇ ಇದ್ದರೂ, ಇಚ್ಛಿಸಿದ ಭೋಗವನ್ನು ಖಂಡಿತ ಕೊಡುತ್ತಿರುತ್ತವೆ. ಹೇಗೆ ಬೇರಿಗೆ ನೀರನ್ನು ಎರೆದರೆ ಆ ಗಿಡವು ಮರವಾಗಿ ಬೆಳೆಯುತ್ತದೆ ಮತ್ತು ಶಾಖೆಗಳು ಹಣ್ಣುಗಳಿಂದ ತುಂಬಿ ತುಳುಕುತ್ತವೆ. ನಂತರ ಪ್ರತೀವರ್ಷವೂ ಆ ಗಿಡದ ಶಾಖೆಗಳು ಸ್ವತಃವೇ ಹಣ್ಣು ನೀಡುತ್ತವೆ. ಅಂದರೆ ನೀವು ಶಾಸ್ತ್ರಬದ್ಧವಾಗಿ ಮಾಡಿದ ಭಕ್ತಿ ಕರ್ಮಫಲವು ಸಂಗ್ರಹಗೊಳ್ಳುತ್ತದೆ. ಅದನ್ನು ಈ ದೇವತೆಗಳೇ ನಿಮಗೆ ಕೊಡುವರು. ನೀವು ಬೇಡಿ ಅಥವಾ ಬೇಡದಿರಿ. ಒಂದೊಮ್ಮೆ ಆ ದೇವತೆಗಳು ನೀಡಿದ ಕರ್ಮ ಸಂಸ್ಕಾರದ ಧನವನ್ನು ಮತ್ತೆ ಧರ್ಮದಲ್ಲಿ ತೊಡಗಿಸದಿದ್ದರೆ ಸಾಧಕನು ಕಳ್ಳನೆನ್ನಿಸಿಕೊಳ್ಳುವನು. ಅವನು ಭವಿಷ್ಯದಲ್ಲಿ ಪುಣ್ಯ ರಹಿತನಾಗಿ ಉಳಿದು


ಗೀತೆ ಅಧ್ಯಾಯ ಸ.15
ಶ್ಲೋಕ ಸ.1 ರಿಂದ 2 ಹಾಗೂ
16-17 ರ ತಾತ್ಪರ್ಯ
ಬ್ರಹ್ಮಾ (ರಜಗುಣ)
ಶಿವ (ತಮಗುಣ)
ವಿಷ್ಣು (ಸತಗುಣ)
ಕಬೀರ್,
ಅಕ್ಷರ್ ಪುರುಷ್ ಏಕ್ ಪೇಡ್ ಹೈ,
ನಿರಂಜನ್ ಡಾರ್ ।
ತೀನೋಂ ದೇವಾ ಶಾಖಾ ಹೈ,
ಪಾತ್ ರೂಪ್ ಸಂಸಾರ್ ॥
ಕೊಂಬೆ
ಕೊಂಬೆ = [ ಕ್ಷರ ಬ್ರಹ್ಮ ಅಂದರೆ ಕ್ಷರ ಪುರುಷ (ಕಾಲ ಬ್ರಹ್ಮ) ]
ಕಾಂಡ
ಕಾಂಡ = [ ಅಕ್ಷರ ಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ) ]
ಕಬೀರ್ ಸಾಹೇಬ್
ಮೂಲ ಅಂದರೆ ಬೇರು
[ ಪರಮ ಅಕ್ಷರ ಬ್ರಹ್ಮ = ಪೂರ್ಣ ಬ್ರಹ್ಮ ]
ಶಾಸ್ತ್ರಾನುಕೂಲ
ಸಾಧನೆ
ಅಂದರೆ ನೇರವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)


ಗೀತೆ ಅಧ್ಯಾಯ ಸ.15
ಶ್ಲೋಕ ಸ.1 ರಿಂದ 2 ಹಾಗೂ 16-17 ರ ತಾತ್ಪರ್ಯ
ಕಬೀರ್,
ಅಕ್ಷರ್ ಪುರುಷ್ ಏಕ್ ಪೇಡ್ ಹೈ,
ನಿರಂಜನ್ ವಾಕಿ ಡಾರ್ ।
ತೀನೋಂ ದೇವಾ ಶಾಖಾ ಹೈ,
ಪಾತ್ ರೂಪ್ ಸಂಸಾರ್ ॥
ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ
ಮೂಲ ಅಂದರೆ ಬೇರು
ಪರಮ ಅಕ್ಷರ ಬ್ರಹ್ಮ = ಕಬೀರ್ ಸಾಹೇಬ್
ಕಾಂಡ
ಕಾಂಡ = ಅಕ್ಷರ ಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ)
ಕೊಂಬೆ = ಕ್ಷರ ಬ್ರಹ್ಮ ಅಂದರೆ ಕ್ಷರ ಪುರುಷ (ಕಾಲ ಬ್ರಹ್ಮ)
ಕೊಂಬೆ
ಶಿವ (ತಮಗುಣ)
ಬ್ರಹ್ಮಾ (ರಜಗುಣ)
ವಿಷ್ಣು (ಸತಗುಣ)
ಶಾಸ್ತ್ರ ವಿರುದ್ಧ
ಸಾಧನೆ
ಅಂದರೆ ಹಿಮ್ಮುಖವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)

ಬಹಳ ಕಷ್ಟವನ್ನು ಅನುಭವಿಸುತ್ತಾನೆ. (ಗೀತೆಯ 3ನೇ ಅಧ್ಯಾಯದ 12ನೇ ಶ್ಲೋಕ)

❖ ಯಜ್ಞದಿಂದ ಉಳಿದ ಅನ್ನವನ್ನು ತಿನ್ನುವ ಸಂತರು ಎಲ್ಲಾ ಪಾಪಗಳಿಂದ ಮುಕ್ತರಾಗುವರು. ಅಂದರೆ ತತ್ವದರ್ಶಿ ಸಂತ ಮೊಟ್ಟಮೊದಲು ಪರಮ ಅಕ್ಷರ ಬ್ರಹ್ಮನಿಗೆ ನೈವೇದ್ಯವನ್ನು ನೀಡಿ ನಂತರ ಉಳಿದ ಭೋಜನವನ್ನು ಎಲ್ಲಾ ಭಕ್ತರಿಗೆ ನೀಡುತ್ತಾನೆ. ಇದು ಸತ್ಯಸಾಧನೆಯ ಗುರುತಾದರೆ ಆ ಸಂತನು ಭಕ್ತಿಮಂತ್ರವನ್ನು ಶಾಸ್ತ್ರಾನುಸಾರವಾಗಿ ನೀಡುತ್ತಾನೆ. ಈ ಕಾರಣದಿಂದ ಸಾಧಕನು ಎಲ್ಲ ಪಾಪಗಳಿಂದ ಮುಕ್ತನಾಗಿ ಸತ್ಯಲೋಕಕ್ಕೆ ತೆರಳುತ್ತಾನೆ ಮತ್ತು ಯಾವ ಪಾಪಿ ಜನರು ಶಾಸ್ತ್ರಾನುಸಾರವಾಗಿ ಧಾರ್ಮಿಕ ಕ್ರಿಯೆಗಳನ್ನು ಮಾಡುವುದಿಲ್ಲವೋ, ಧರ್ಮಮಾಡುವುದಿಲ್ಲವೋ, ಕೇವಲ ತನ್ನ ಶರೀರ ಪೋಷಣೆಗಾಗಿ ಅನ್ನವನ್ನು ಬೇಯಿಸುತ್ತಾರೆಯೋ, ಅವರು ಪಾಪವನ್ನೇ ತಿನ್ನುತ್ತಾರೆ. (ಗೀತೆಯ 3ನೇ ಅಧ್ಯಾಯದ 13ನೇ ಶ್ಲೋಕ)

❖ ಎಲ್ಲಾ ಜೀವಿಗಳು ಅನ್ನದಿಂದಲೇ ಹುಟ್ಟುವರು ಅಂದರೆ ಅನ್ನವನ್ನು ತಿನ್ನುವುದರಿಂದ ಶರೀರದಲ್ಲಿ ಸಂತಾನೋತ್ಪತ್ತಿಯ ಪದಾರ್ಥಗಳು ಉಂಟಾಗುತ್ತವೆ. ಇದರಿಂದ ಎಲ್ಲಾ ಜೀವಿಗಳ ಉತ್ಪತ್ತಿಯಾಗುವುದು. ವೃಷ್ಟಿಯಿಂದ ಅನ್ನದ ಉತ್ಪತ್ತಿಯಾಗುವುದು. ಶಾಸ್ತ್ರವಿಧಿಯ ಅನುಸಾರವಾಗಿ ಮಾಡಿದ ಯಜ್ಞದಿಂದ ಅಂದರೆ ಧಾರ್ಮಿಕ ಅನುಷ್ಠಾನದಿಂದ ಮಳೆ (ವೃಷ್ಟಿ) ಯಾಗುತ್ತದೆ. ಯಜ್ಞ ಅಂದರೆ ಶಾಸ್ತ್ರಗಳಲ್ಲಿ ವರ್ಣಿಸಿದ ವಿಧಾನದಿಂದ ಧಾರ್ಮಿಕ ಅನುಷ್ಠಾನವು ಮಾಡಲಾಗುತ್ತದೆ. ಕರ್ಮವು ಬ್ರಹ್ಮ ಅಂದರೆ ಕ್ಷರ ಪುರುಷನಿಂದ ಉತ್ಪನ್ನವಾಗಿವೆ ಎಂದು ತಿಳಿ. ಏಕೆಂದರೆ ನಾವು ಬ್ರಹ್ಮನ ಲೋಕಕ್ಕೆ ಬಂದಿದ್ದೇವೆ ಎಂದಾದರೆ ಕರ್ಮ ಮಾಡಿಯೇ ನಮಗೆ ಎಲ್ಲವೂ ಪ್ರಾಪ್ತವಾಗುವುದು ಎಂದರ್ಥ. ನಾವು ಸತ್ಯಲೋಕದಲ್ಲಿದ್ದಾಗ ಕರ್ಮ ಮಾಡದೆಯೇ ಎಲ್ಲವೂ ಪ್ರಾಪ್ತವಾಗುತ್ತಿತ್ತು. ಆದ್ದರಿಂದ ಕರ್ಮವು ಕಾಲ(ಬ್ರಹ್ಮ)ನಿಂದ ಉತ್ಪತ್ತಿಯಾದದ್ದು ಎಂದು ತಿಳಿ. ಮತ್ತು ಬ್ರಹ್ಮ(ಕಾಲ)ನ ಉತ್ಪತ್ತಿ ಅವಿನಾಶಿ ಪರಮಾತ್ಮನಿಂದ ಆಗಿದೆ. (ಇದರ ವರ್ಣನೆ ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಇದೆ. ಮತ್ತು ಸೃಷ್ಟಿ ರಚನೆ ಎನ್ನುವ ಅಧ್ಯಾಯದಲ್ಲಿ ಓದಿ) ಇದರಿಂದ ತಿಳಿಯುವುದೇನೆಂದರೆ (ಸರ್ವಗತಮ್ ಬ್ರಹ್ಮ) ಸರ್ವವ್ಯಾಪಿ ಪರಮ ಅಕ್ಷರ ಪರಮಾತ್ಮ ಅರ್ಥಾತ್ ಪರಮ ಅಕ್ಷರಬ್ರಹ್ಮನು ಯಾವಾಗಲೂ ಯಜ್ಞಗಳಲ್ಲಿ ಅರ್ಥಾತ್ ಧಾರ್ಮಿಕ ಅನುಷ್ಠಾನಗಳಲ್ಲಿ ಪ್ರತಿಷ್ಠಿತವಾಗಿರುತ್ತಾನೆ. ಅರ್ಥಾತ್ ಎಲ್ಲಾ ಧಾರ್ಮಿಕ ಕ್ರಿಯೆಗಳಲ್ಲಿ ಪರಮ ಅಕ್ಷರಬ್ರಹ್ಮನು ಇಷ್ಟರೂಪದಲ್ಲಿ ಪೂಜನೀಯನು. (ಗೀತೆಯ 3ನೇ ಅಧ್ಯಾಯದ 14–15 ಶ್ಲೋಕ) ಪರಮ ಅಕ್ಷರ ಬ್ರಹ್ಮನು ಗೀತೆಯ ಜ್ಞಾನದಾತನಿಗಿಂತ ಬೇರೆ ಇದ್ದಾನೆ.

ಗೀತೆಯ ಜ್ಞಾನವನ್ನು ಕೊಟ್ಟವನು ಸ್ವತಃ ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ, “ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರನ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಆಶ್ರಯಕ್ಕೆ ಹೋಗು, ಆ ಪರಮೇಶ್ವರನ ಕೃಪೆಯಿಂದಲೇ ನಿನಗೆ ಪರಮ ಶಾಂತಿ ಮತ್ತು ಶಾಶ್ವತ ಸ್ಥಾನ ಅರ್ಥಾತ್ ಸನಾತನ ಪರಮ ಧಾಮವು ಪ್ರಾಪ್ತವಾಗುವುದು” ಎಂದು ಹೇಳಿದ್ದಾನೆ.

❖ ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಗೀತೆಯ ಜ್ಞಾನ ನೀಡಿದವನು, ತತ್ವದರ್ಶಿ ಸಂತನು ಸಿಕ್ಕ ಬಳಿಕ ತತ್ವಜ್ಞಾನವೆಂಬ ಶಸ್ತ್ರದ ಮೂಲಕ ಅಜ್ಞಾನವನ್ನು ತೊಡೆದು ಪರಮೇಶ್ವರನ ಆ ಪರಮ ಪದವನ್ನು ಹುಡುಕಬೇಕು. ಅಲ್ಲಿಗೆ ಹೋದ ಬಳಿಕ ಸಾಧಕನು ಮತ್ತೆ ಮರಳಿ ಎಂದಿಗೂ ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಅರ್ಥಾತ್ ಅವನಿಗೆ ಸನಾತನ ಪರಮ ಪದವು ಪ್ರಾಪ್ತವಾಗುವುದು. ಅಲ್ಲಿ ಪರಮಶಾಂತಿ ಇರುವುದು. ಯಾವುದೇ ಕಷ್ಟವಿರುವುದಿಲ್ಲ, ಅಲ್ಲಿ ಮೃತ್ಯು ಇರುವುದಿಲ್ಲ. ಅಲ್ಲಿ ವೃದ್ಧಾಪ್ಯವಿರುವುದಿಲ್ಲ. ಯಾವುದೇ ಪದಾರ್ಥದ ಕೊರತೆ ಇರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ವೃಕ್ಷದ ಪ್ರವೃತ್ತಿ ವಿಸ್ತಾರಕ್ಕೆ ಪ್ರಾಪ್ತವಾಗಿದೆ, ಆ ಪರಮೇಶ್ವರನದೇ ಭಕ್ತಿ ಮಾಡಬೇಕು ಎಂದು ಹೇಳಿದ್ದಾನೆ.

❖ ಗೀತೆಯ 17ನೇ ಅಧ್ಯಾಯದ 13ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದವನು

ಹೇಳಿರುವುದೇನೆಂದರೆ ಅವನು ಪರಬ್ರಹ್ಮ ಅರ್ಥಾತ್ ಮತ್ತೊಬ್ಬ ಪ್ರಭು. ಬೇರೆ ವಾಕ್ಯಗಳಲ್ಲಿ ಪರಮ ಅಕ್ಷರಬ್ರಹ್ಮ(ಅವನ ವಿಷಯದಲ್ಲಿ ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಹೇಳಿದೆ) ಜ್ಯೋತಿಗಳಿಗೂ ಜ್ಯೋತಿ, ಮಾಯೆಗಿಂತ ಮಿಗಿಲಾದ ಎಂದು ಹೇಳಬಹುದು. ಬೋಧ ಸ್ವರೂಪ (ತಿಳಿಯುವ ಯೋಗ್ಯ) ಈ ಪರಮಾತ್ಮನು ತತ್ವಜ್ಞಾನದಿಂದ ಪ್ರಾಪ್ತಿಯಾಗುತ್ತಾನೆ ಮತ್ತು ಎಲ್ಲರ ಹೃದಯದಲ್ಲೂ ವಿಶೇಷ ರೂಪದಲ್ಲಿ ನೆಲೆಸಿರುತ್ತಾನೆ. (ಗೀತೆಯ 13ನೇ ಅಧ್ಯಾಯದ 17ನೇಶ್ಲೋಕ)

ವಿಚಾರ ಮಾಡೋಣ :– ಯಾವ ತತ್ವಜ್ಞಾನದಿಂದ ಪರಮ ಅಕ್ಷರಬ್ರಹ್ಮನು ಪ್ರಾಪ್ತಿಯಾಗುವನೋ, ಅದನ್ನು ಸೂಕ್ಷ್ಮವೇದ ಎಂದು ಕರೆಯುತ್ತಾರೆ. ಆ ಜ್ಞಾನವು ಗೀತೆಯ ಜ್ಞಾನದಾತನಿಗೂ ಇಲ್ಲ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32 ಮತ್ತು 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ ಯಜ್ಞಗಳ ಅರ್ಥಾತ್ ಧಾರ್ಮಿಕ ಅನುಷ್ಠಾನಗಳ ಸವಿಸ್ತಾರ ಜ್ಞಾನವನ್ನು ಸ್ವತಃ(ಬ್ರಹ್ಮಣಃ ಮುಖೆ) ಸಚ್ಚಿದಾನಂದ ಘನಬ್ರಹ್ಮ ಪರಮಾತ್ಮ ಅಂದರೆ ಪರಮ ಅಕ್ಷರಬ್ರಹ್ಮನು ತನ್ನ ಮುಖ ಕಮಲದಿಂದ ತಿಳಿಸಿದ್ದಾನೆ. ಅದನ್ನ ಸಚ್ಚಿದಾನಂದ ಘನಬ್ರಹ್ಮನ ವಾಣಿ ಎಂದು ಹೇಳಲಾಗುತ್ತದೆ. ಅದನ್ನು ತತ್ವಜ್ಞಾನ ಎನ್ನುವರು. ಅದನ್ನು ತಿಳಿದ ಸಾಧಕನು ಎಲ್ಲಾ ಪಾಪಗಳಿಂದ ಮುಕ್ತನಾಗುತ್ತಾನೆ. (ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕ)

❖ ಓದುಗರಲ್ಲಿ ವಿನಂತಿ, ಗೀತೆಯ 4ನೇ ಅಧ್ಯಾಯದ 32ರ ಮೂಲ ಪಾಠದಲ್ಲಿ 'ಬ್ರಹ್ಮಣಃ' ಎಂಬ ಶಬ್ದವಿದೆ. ಗೋರಖಪುರದ ಗೀತಾ ಪ್ರೆಸ್‌ನಿಂದ ಪ್ರಕಾಶನಗೊಂಡ ಗೀತೆಯ ಅಥವಾ ಅನ್ಯ ಪ್ರಕಾಶನಗಳಿಂದ ಮುದ್ರಿತಗೊಂಡ ಗೀತೆಯಲ್ಲಿ ಅನುವಾದಕರು 'ಬ್ರಹ್ಮಣಃ' ಎಂಬ ಶಬ್ದಕ್ಕೆ ವೇದ ಎಂದು ಅರ್ಥಮಾಡಿದ್ದಾರೆ. ಇದು ತಪ್ಪು.

ಗೀತೆಯ 17ನೇ ಅಧ್ಯಾಯದ 23ನೇ ಶ್ಲೋಕದಲ್ಲೂ ಸಹ 'ಬ್ರಹ್ಮಣಃ' ಎಂಬ ಶಬ್ದವಿದೆ. ಅದರಲ್ಲಿ ಅನುವಾದಕರು ಬ್ರಹ್ಮಣಃ ಎಂದರೆ ಸಚ್ಚಿದಾನಂದ ಘನಬ್ರಹ್ಮ ಎಂದು ಸರಿಯಾಗಿ ಅರ್ಥ ಮಾಡಿದ್ದಾರೆ. ಆದ್ದರಿಂದ ಗೀತೆಯ 4ನೇ ಅಧ್ಯಾಯದ 32ನೇ ಶ್ಲೋಕದಲ್ಲಿ 'ಬ್ರಹ್ಮಣಃ ಮುಖೆ' ಎಂದರೆ ಸಚ್ಚಿದಾನಂದ ಘನ ಬ್ರಹ್ಮನ ಮುಖ ಕಮಲದಿಂದ ಹೇಳಲ್ಪಟ್ಟ ವಾಣಿ ಎಂದು ಕರೆಯುವುದೇ ಉತ್ತಮ.

ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ ಪರಮೇಶ್ವರನು ತನ್ನ ಮುಖ ಕಮಲದಿಂದ ಹೇಳಿರುವ ಆ ತತ್ವಜ್ಞಾನವನ್ನು ತತ್ವದರ್ಶಿ ಸಂತರ ಬಳಿ ಹೋಗಿ ತಿಳಿದುಕೋ. ಅವರಿಗೆ ದೀರ್ಘದಂಡ ನಮಸ್ಕಾರ ಮಾಡುವುದರಿಂದ, ವಿನಯದಿಂದ ಪ್ರಶ್ನೆ ಕೇಳುವುದರಿಂದ ಪರಮಾತ್ಮನ ತತ್ವವನ್ನು ಚೆನ್ನಾಗಿ ತಿಳಿದಿರುವ ತತ್ವದರ್ಶಿ ಮಹಾತ್ಮ ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವರು.

ಪ್ರಭುಪ್ರೇಮಿ ಓದುಗರೇ, ಯಾವುದರಿಂದ ಪರಮ ಅಕ್ಷರ ಪರಮಾತ್ಮನು ಪ್ರಾಪ್ತನಾಗುವನೋ ಆ ತತ್ವಜ್ಞಾನ ಗೀತೆಯ ಗ್ರಂಥದಲ್ಲಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಯ್ತು. ಗೀತೆಯು ನಾಲ್ಕೂ ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಸಂಕ್ಷಿಪ್ತ ರೂಪ, ಅವುಗಳ ಸಾರಾಂಶವಾಗಿದೆ. ಇದರಿಂದ ಸ್ಪಷ್ಟವಾಯ್ತೆನೆಂದರೆ ಸೂಕ್ಷ್ಮವೇದದ ತತ್ವಜ್ಞಾನವು ಯಾವುದೇ ಪ್ರಚಲಿತ ಸದ್ಗ್ರಂಥದಲ್ಲಿ ಇಲ್ಲ. ಆ ಜ್ಞಾನವು ನನ್ನ(ಸಂತ ರಾಮ್‌ಪಾಲ್‌ದಾಸ್) ಬಳಿ ಇದೆ. ವಿಶ್ವದಲ್ಲಿ ಯಾರ ಬಳಿಯೂ ಇಲ್ಲ.

ಪ್ರಶ್ನೆ:– ರಜೋಗುಣ ಶ್ರೀಬ್ರಹ್ಮಾ, ಸತಗುಣ ಶ್ರೀವಿಷ್ಣು ಹಾಗೂ ತಮೋಗುಣ ಶ್ರೀಶಿವನು ಸಹ ಇಷ್ಟರೂಪದಲ್ಲಿಯೂ ಪೂಜನೀಯರಲ್ಲವೇ? ಹಿಂದೂ ಧರ್ಮದಲ್ಲಿ ಈ ದೇವರುಗಳನ್ನು ಪೂಜಿಸಲಾಗುತ್ತದೆ. ಹಿಂದೂ ಧರ್ಮದ ಗುರುಗಳು, ಶಂಕರಾಚಾರ್ಯರು ಮತ್ತು ಅನ್ಯರು ಇವರನ್ನ ಇಷ್ಟರೂಪದಲ್ಲಿ ಪೂಜಿಸಲು ಹೇಳಿದ್ದಾರೆ ಹಾಗೂ ಸ್ವತಃ ಅವರೂ ಮಾಡುತ್ತಾರೆ. ನಿಮ್ಮ ಮಾತು ನಂಬಲು ಸಾಧ್ಯವೇ ಇಲ್ಲ. ನೀವು ಗೀತೆಯ ಮೂಲಕ ಸಾಬೀತುಪಡಿಸಬಲ್ಲಿರಾ?

ಉತ್ತರ:– ಹಿಂದೂ ಧರ್ಮದ ಧರ್ಮಗುರುಗಳಿಗೆ ತಮ್ಮ ಸದ್ಗ್ರಂಥಗಳ ಜ್ಞಾನವಿಲ್ಲ.

ಅಕ್ಷರಜ್ಞಾನವನ್ನು ನೀಡುವ ಅಧ್ಯಾಪಕರಿಗೆ ತಮ್ಮ ಪಾಠ್ಯಕ್ರಮದ ಪುಸ್ತಕಗಳ ಉಲ್ಲೇಖದ ಬಗ್ಗೆಯೇ ಜ್ಞಾನವಿಲ್ಲ ಎಂದಾದರೆ ಆ ಅಧ್ಯಾಪಕನು ವಿದ್ಯಾರ್ಥಿಗಳಿಗೆ ಹಾನಿಕಾರಕನು. ಅವನು ನಿಜವಾಗಲೂ ಶಿಕ್ಷಕನಲ್ಲ. ಇದೇ ಸ್ಥಿತಿ ಹಿಂದೂ ಧರ್ಮದ ಧರ್ಮಗುರುಗಳದ್ದಾಗಿದೆ.

ಪ್ರಮಾಣ:– ಭಗವದ್ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಗೀತೆಯ ಜ್ಞಾನ ನೀಡುವವನು ಹೇಳಿರುವುದೇನೆಂದರೆ 3 ಗುಣಗಳಿಂದ (ರಜೋಗುಣ ಶ್ರೀಬ್ರಹ್ಮಾನಿಂದ ಸೃಷ್ಟಿ, ಸತಗುಣ ಶ್ರೀವಿಷ್ಣುವಿನಿಂದ ಸ್ಥಿತಿ ಹಾಗೂ ತಮೋಗುಣದ ಶ್ರೀಶಿವನಿಂದ ಸಂಹಾರ) ಏನಾಗುತ್ತಿದೆಯೋ, ಅದೆಲ್ಲ ನನ್ನಿಂದಾಗುತ್ತಿದೆ. ಆದರೆ ನಾನು ಅವರಲ್ಲಿ ಇಲ್ಲ ಮತ್ತು ಅವರು ನನ್ನಲ್ಲಿ ಇಲ್ಲ. (ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ).

ಮೊದಲನೆಯದಾಗಿ ಪ್ರಮಾಣಿಕರಿಸುವುದೇನೆಂದರೆ ಬ್ರಹ್ಮಾ ರಜೋಗುಣ, ವಿಷ್ಣು ಸತಗುಣ ಹಾಗೂ ಶಿವ ತಮೋಗುಣ ಎಂದು.

1)ಮಾರ್ಕಂಡೇಯ ಪುರಾಣದ (ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶನಗೊಂಡ ಪುಸ್ತಕದ) 123ನೇ ಪುಟದಲ್ಲಿ ಬರೆದಿರುವುದೇನೆಂದರೆ ಬ್ರಹ್ಮಾ, ವಿಷ್ಣು ಮತ್ತು ಶಿವ ಕಾಲ ಬ್ರಹ್ಮನ ಪ್ರಧಾನ ಶಕ್ತಿಗಳು. ಇವೇ ಮೂರು ಗುಣಗಳು, ಇವೇ ಮೂರು ದೇವತೆಗಳು.

2)ಶ್ರೀ ದೇವಿ ಪುರಾಣ (ಶ್ರೀಖೇಮ್‌ಚಂದ್, ಶ್ರೀಕೃಷ್ಣಚಂದ್, ವೆಂಕಟೇಶ್ವರ ಪ್ರೆಸ್, ಮುಂಬೈನಿಂದ ಪ್ರಕಾಶನಗೊಂಡ ಪುಸ್ತಕ)ದ 3ನೇ ಸ್ಕಂದದ 5ನೇ ಅಧ್ಯಾಯದ 8ನೇ ಶ್ಲೋಕದಲ್ಲಿ ಹೇಳಿದೆ.

ಯದಿ ದಯಾದರ್ಮನಾ ಸದಾ ಅಂಬಿಕೆ ಕಥಮ್ ಅಹಮ್ ವಿಹಿತಃ ತಮೋಗುಣಃ ಕಮಲಜಃ ರಜಗುಣಃ ಕಥಮ್ ವಿಹಿತಃ ಚ ಶ್ರೀ ಹರಿಃ ಸತ್‌ಗುಣಃ (ದೇವಿ ಪುರಾಣ 3/5/8)

ಅನುವಾದ:– ಭಗವಂತ ಶಿವನು ದುರ್ಗಾಮಾತೆಯನ್ನು ಹೀಗೆ ಪ್ರಶ್ನಿಸಿದ್ದಾನೆ. "ಹೇ ಮಾತೆ, ನೀವು ನಮ್ಮ ಮೇಲೆ ದಯೆಯುಕ್ತರಾಗಿದ್ದರೆ, ನನ್ನನ್ನು ತಮೋಗುಣವನ್ನಾಗಿ ಏಕೆ ಉತ್ಪತ್ತಿಸಿದೆ? ಕಮಲದಿಂದ ಉತ್ಪತ್ತಿಯಾದ ಬ್ರಹ್ಮಾನನ್ನು ರಜೋಗುಣವಾಗಿ ಹಾಗು ಶ್ರೀವಿಷ್ಣುವನ್ನು ಸತಗುಣವನ್ನಾಗಿ ಏಕೆ ಮಾಡಿದ್ದೀರಿ?"

❖ ಇದರಿಂದ ಸ್ಪಷ್ಟವಾಯ್ತೆನೆಂದರೆ, ರಜೋಗುಣ ಹೇಳಿ ಅಥವಾ ಬ್ರಹ್ಮಾ ಹೇಳಿ 2)ಸತಗುಣ ಹೇಳಿ ಅಥವಾ ವಿಷ್ಣು ಹೇಳಿ 3)ತಮೋಗುಣ ಹೇಳಿ ಅಥವಾ ಶಿವ ಹೇಳಿ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದ ಭಾವಾರ್ಥ:– ಗೀತೆಯ ಜ್ಞಾನದಾತನು ಕಾಲಬ್ರಹ್ಮನು.

ಪ್ರಮಾಣ:– ಗೀತೆಯ 11ನೇ ಅಧ್ಯಾಯದ 31–32ನೇ ಶ್ಲೋಕ. 11ನೇ ಅಧ್ಯಾಯದ 31ನೇ ಶ್ಲೋಕದಲ್ಲಿ ಅರ್ಜುನನು ಕೇಳಿದನು. "ಹೇ ಮಹಾನುಭಾವ! ನೀವು ಯಾರು? ಕೃಷ್ಣನಂತೂ ಅರ್ಜುನನ ಭಾಮೈದ. ಶ್ರೀ ಕೃಷ್ಣನ ತಂಗಿಯಾದ ಸುಭದ್ರೆಯನ್ನು ಅರ್ಜುನನು ಮದುವೆಯಾಗಿದ್ದನು. ಹಾಗಿದ್ದಲ್ಲಿ ಕೃಷ್ಣನೇ ಗೀತೆಯ ಜ್ಞಾನವನ್ನು ನೀಡಿದ್ದರೆ, ಅರ್ಜುನನಿಗೆ ನೀವು ಯಾರು ಎಂದು ಕೇಳುವ ಅವಶ್ಯಕತೆಯೇ ಇರುತ್ತಿರಲಿಲ್ಲ. ವಿಚಾರಮಾಡಿ, ಭಾವನಿಗೆ ಭಾವಮೈದುನನ ಪರಿಚಯವಿರುವುದಿಲ್ಲವೇ? ವಾಸ್ತವವಾಗಿ ಶ್ರೀಕೃಷ್ಣನ ಶರೀರದಲ್ಲಿ ಪ್ರೇತನಂತೆ ಪ್ರವೇಶಿಸಿ ಕಾಲಬ್ರಹ್ಮ ಗೀತೆಯ ಜ್ಞಾನವನ್ನು ಹೇಳುತ್ತಿದ್ದನು. (ಹೆಚ್ಚಿನ ಪ್ರಮಾಣಕ್ಕಾಗಿ 'ಗೀತೆ ನಿನ್ನ ಜ್ಞಾನ್ ಅಮೃತ್', 'ಗಹರೀ ನಜರ್ ಗೀತಾ ಮೆ', 'ಜ್ಞಾನಗಂಗಾ', 'ಆಧ್ಯಾತ್ಮಿಕ ಜ್ಞಾನಗಂಗಾ' ಎಂಬ ಪುಸ್ತಕಗಳನ್ನು ಓದಿ. ಹಾಗೂ ಶ್ರೀಮದ್ ಭಗವದ್ಗೀತೆಯ ಜ್ಞಾನವನ್ನು ಹೇಳಿದವರು ಯಾರು ಎಂಬ ಪ್ರವಚನಗಳ ಡಿ.ವಿ.ಡಿ ನೋಡಿ.

ಇವೆಲ್ಲಾ ನಮ್ಮ ವೆಬ್‌ಸೈಟ್ www.jagatgururampalji.org ನಲ್ಲಿ ಸಿಗುವುದು.

ಉಚಿತವಾಗಿ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. **YouTube** ನಲ್ಲಿ **search** ಮಾಡಬಹುದು. (**Sant Rampal Ji Kannada Satasang**) ಗೀತೆ ಜ್ಞಾನವನ್ನು ನೀಡಿದವನು ಕಾಲಬ್ರಹ್ಮನು. ಸ್ವತಃ ಗೀತೆಯ **11**ನೇ ಅಧ್ಯಾಯದ **32**ನೇ ಶ್ಲೋಕದಲ್ಲಿ ಹೇಳುತ್ತಿದ್ದಾನೆ ನಾನು ಕಾಲನು ಈಗ ಪ್ರಕಟಗೊಂಡಿದ್ದೇನೆ. ಒಂದು ವೇಳೆ ಕೃಷ್ಣನು ಗೀತೆಯ ಜ್ಞಾನವನ್ನು ತಿಳಿಸಿದ್ದಿದ್ದರೆ ನಾನು ಈಗ ಬಂದಿದ್ದೇನೆ ಎಂದು ಹೇಳುತ್ತಿರಲಿಲ್ಲ. ಏಕೆಂದರೆ ಶ್ರೀಕೃಷ್ಣನು ಮೊದಲೇ ಇದ್ದನು. ಶ್ರೀಕೃಷ್ಣನು ಈ ಹಿಂದೆ ಎಂದೂ 'ನಾನು ಕಾಲನು' ಎಂದು ಹೇಳಿರಲಿಲ್ಲ. ನಂತರವೂ 'ಎಲ್ಲರನ್ನು ನಾಶ ಮಾಡುವ ಕಾಲನು' ಎಂದೂ ಹೇಳಲಿಲ್ಲ. ಕೌರವರ ಸಭೆಯಲ್ಲಿ ತನ್ನ ವಿರಾಟ ರೂಪವನ್ನು ತೋರಿಸಿದ್ದನು. ವಿರಾಟ ರೂಪವು ಭಕ್ತಿಯುಕ್ತವಾದ ಪ್ರತ್ಯೇಕ ಆತ್ಮದ್ದಾಗಿರುತ್ತದೆ. ಯಾರಾದರು ಒಬ್ಬರು ಅದನ್ನು ಪ್ರಕಟ ಮಾಡಲು ಸಾಧ್ಯ. ಇದು ಭಕ್ತಿಯ ಶಕ್ತಿ ಅನುಸಾರವಾಗಿರುತ್ತದೆ.

ಗೀತೆ ಜ್ಞಾನವನ್ನು ನೀಡಿದವನು ಗೀತೆಯ **11**ನೇ ಅಧ್ಯಾಯದ **47**ನೇ ಶ್ಲೋಕದಲ್ಲಿ ಹೇಳಿದ್ದಾನೆ. "ಹೇ ಅರ್ಜುನ! ನನ್ನ ವಿರಾಟ ರೂಪವನ್ನು ನಿನ್ನ ವಿನಃ ಯಾರೂ ಮೊದಲು ನೋಡಿಲ್ಲ." ಓದುಗರಲ್ಲಿ ವಿನಂತಿಸುವುದೇನೆಂದರೆ, ಶ್ರೀಕೃಷ್ಣನು ಈ ಮೊದಲು ತನ್ನ ವಿರಾಟ ರೂಪವನ್ನು ಕೌರವರ ಸಭೆಯಲ್ಲಿ ತೋರಿಸಿದ್ದನು. ಇದನ್ನು ಕೌರವರ ಸಹಿತ ಸಾವಿರಾರು ಜನರು ನೋಡಿದ್ದರು. ಕೃಷ್ಣನು ಗೀತೆಯ ಜ್ಞಾನವನ್ನು ತಿಳಿಸಿದ್ದಿದ್ದರೆ, ನನ್ನ ವಿರಾಟ ರೂಪವನ್ನು ನಿನ್ನ ವಿನಃ ಯಾರೂ ನೋಡಿಲ್ಲ ಎಂದು ಹೇಳುತ್ತಿರಲಿಲ್ಲ. ಇದರಿಂದ ಗೀತೆಯ ಜ್ಞಾನವನ್ನು ಬೋಧಿಸಿದವನು ಕಾಲಬ್ರಹ್ಮನು ಎಂದು ಸ್ಪಷ್ಟವಾಗುತ್ತದೆ. ಇವನನ್ನು ಗೀತೆಯ **15**ನೇ ಅಧ್ಯಾಯದ **16**ನೇ ಶ್ಲೋಕದಲ್ಲಿ ಕ್ಷರಪುರುಷ ಎಂದು ಹೇಳಲಾಗಿದೆ. ಇವನು ಗೀತೆಯ **8**ನೇ ಅಧ್ಯಾಯದ **13**ನೇ ಶ್ಲೋಕ ಹೇಳಿದ್ದಾನೆ.

"ಓಂ ಇತಿ ಏಕಾಕ್ಷರಮ್ ಬ್ರಹ್ಮ ವ್ಯಾವಹರನ್ ಮಾಮ್ ಅನುಸ್ಮರನ್
ಯಃ ಪ್ರಯಾತಿ ತ್ಯಜನ್ ದೇಹಮ್ ಸಃ ಯಾತಿ ಪರಮಾಮ್ ಗತಿಮ್"

ಸರಳಾರ್ಥ:- ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, (ಮಾಮ್ ಬ್ರಹ್ಮ) ಬ್ರಹ್ಮನಾದ ನನ್ನ (ಓಂ ಇತಿ ಏಕಾಕ್ಷರಮ್) ಇದು ಓಂ ಅಕ್ಷರ (ವ್ಯವಹಾರನ್) ಉಚ್ಚರಿಸಿ (ಅನುಸ್ಮರನ್) ಸ್ಮರಣೆ ಮಾಡುತ್ತಾ (ಯಃ ಪ್ರಯಾತಿ ತ್ಯಜನ್ ದೇಹಮ್) ಯಾವ ಸಾಧಕನು ಶರೀರವನ್ನು ತ್ಯಜಿಸಿ ಹೋಗುವವನೋ, (ಸಃ ಯಾತಿ ಪರಮಾಮ್ ಗತಿಮ್) ಅವನು ಓಂ ನಾಮದಿಂದ ಸಿಗುವ ಪರಮ ಗತಿಯನ್ನು ಪಡೆಯುವನು. ಇದನ್ನು ಇನ್ನೂ ಸ್ಪಷ್ಟಪಡಿಸುವೆ.

ಶ್ರೀ ದೇವಿ ಪುರಾಣ(ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತಗೊಂಡ ಪುಸ್ತಕ)ದ **7**ನೇ ಸ್ಕಂದದ **463**ರ ಪುಟದಲ್ಲಿ ಈ ರೀತಿ ಇದೆ.

ಶ್ರೀ ದೇವಿಯು ಹಿಮಾಲಯ ರಾಜನಿಗೆ ಜ್ಞಾನೋಪದೇಶ ನೀಡುತ್ತಾಳೆ. ಅವಳು ಹೇಳಿದ್ದೇನೆಂದರೆ, 'ಹೇ ರಾಜ, ನೀನು ಓಂ ನಾಮದ ಜಪ ಮಾಡು. ಇದರಿಂದ ಬ್ರಹ್ಮನ ಪ್ರಾಪ್ತಿಯಾಗುತ್ತದೆ. ಈ ಓಂ ನಾಮ ಬ್ರಹ್ಮನ ಜಪ' ಎಲ್ಲವನ್ನೂ ತ್ಯಜಿಸಿ, ಎಲ್ಲಾ ಪೂಜೆಗಳನ್ನು ತ್ಯಜಿಸಿ ಕೇವಲ ಓಂ ನಾಮದ ಜಪವನ್ನು ಮಾಡು. ಬ್ರಹ್ಮ ಪ್ರಾಪ್ತಿಯ ಉದ್ದೇಶವಿಟ್ಟುಕೋ. ನಿನಗೆ ಒಳ್ಳೆಯದಾಗಲಿ. ಇದರಿಂದ ಬ್ರಹ್ಮನನ್ನು ಪಡೆಯುವೆ. ಆ ಬ್ರಹ್ಮನು ದಿವ್ಯ ಆಕಾಶವೆಂಬ ಬ್ರಹ್ಮಲೋಕದಲ್ಲಿರುತ್ತಾನೆ. ಈ ದೇವಿ ಮಹಾಪುರಾಣದಿಂದ ಸ್ಪಷ್ಟವಾಗಿರುವುದೇನೆಂದರೆ ಓಂ ನಾಮ ಜಪವು ಬ್ರಹ್ಮನದ್ದು ಎಂದು.

ಅನ್ಯ ಪ್ರಮಾಣಗಳು:- ಶ್ರೀಶಿವ ಮಹಾಪುರಾಣ (ಗೀತಾ ಪ್ರೆಸ್, ಗೋರಖ್‌ಪುರದ ಮೂಲಕ ಪ್ರಕಾಶಿತ ಪುಸ್ತಕ)ದ ವಿದ್ವೇಶ್ವರ ಸಂಹಿತೆಯ **21-22**ನೇ ಪುಟದಲ್ಲಿ ಈ ರೀತಿ ಬರೆದಿದೆ

ಒಮ್ಮೆ ರಜೋಗುಣ ಬ್ರಹ್ಮಾ ಹಾಗೂ ಸತೋಗುಣ ವಿಷ್ಣುವಿನ ಮಧ್ಯೆ ಯುದ್ಧವಾಯಿತು. ಇದಕ್ಕೆ ಕಾರಣವೇನೆಂದರೆ ಬ್ರಹ್ಮಾನು ವಿಷ್ಣುವಿನ ಮನೆಗೆ ಹೋಗಿ, "ಹೇ ಅಭಿಮಾನಿ, ನಾನು ಬಂದಾಗ ನೀನು ಎದ್ದು ನಿಂತು ಸತ್ಕಾರ ಮಾಡಲಿಲ್ಲ. ನೀನು ಮಗನಾಗಿದ್ದರೂ ತಂದೆಯ ಸತ್ಕಾರ ಮಾಡುವುದಿಲ್ಲ.

ನಾನು ಎಲ್ಲರನ್ನು ಸೃಷ್ಟಿಸಿದ ತಂದೆ ಎಂದನು. ಆ ಮಾತನ್ನು ಕೇಳಿದ ವಿಷ್ಣುವಿಗೆ ಅತ್ಯಂತ ಕೋಪ ಬಂದಿತು. ಆದರೆ ಸುಮ್ಮನೆ ಮೇಲ್ನೋಟಕ್ಕೆ ನಗುತ್ತಾ ಹೀಗೆಂದನು, "ಬಾ ಪುತ್ರ, ನಾನು ನಿನ್ನ ತಂದೆ. ನಿನ್ನ ಜನ್ಮವು ನನ್ನ ನಾಭಿ ಕಮಲದಿಂದ ಆಗಿದೆ." ಹೀಗೆ ಈ ಮಾತಿನಿಂದ ಇಬ್ಬರೂ ತಮ್ಮ ಶಸ್ತ್ರಗಳನ್ನು ಎತ್ತಿದರು. ಪರಸ್ಪರ ಕಾದಾಡತೊಡಗಿದರು. ಆ ಸಮಯದಲ್ಲಿ ಕಾಲಬ್ರಹ್ಮನು ಈ ಇಬ್ಬರ ಮಧ್ಯದಲ್ಲಿ ಒಂದು ತೇಜೋಮಯವಾದ ಸ್ತಂಭವನ್ನು ನಿಲ್ಲಿಸಿದನು. ಆ ಕಾರಣದಿಂದ ಇಬ್ಬರೂ ಕಾದಾಡುವುದನ್ನು ನಿಲ್ಲಿಸಿದರು. ಅದೇ ಸಮಯದಲ್ಲಿ ಕಾಲಬ್ರಹ್ಮನು ತನ್ನ ಪುತ್ರನಾದ ಶಿವನ ರೂಪ ಧರಿಸಿದನು ಮತ್ತು ತನ್ನ ಪತ್ನಿಯಾದ ದುರ್ಗೆಯನ್ನು ಪಾರ್ವತಿಯನ್ನಾಗಿ ಮಾಡಿ ಅವರ ಬಳಿ ಪ್ರತ್ಯಕ್ಷನಾದನು. ಮತ್ತು ಇಬ್ಬರಿಗೂ ಹೇಳಿದ ಇಲ್ಲಿಯ ಈಶನು ಯಾರು ಎಂದು ನಿಮಗೆ ಗೊತ್ತಿಲ್ಲವೇ? ನಾನು ಬ್ರಹ್ಮ, ಈ ಪ್ರಪಂಚವು ನನ್ನದು. ಹೇ ಬ್ರಹ್ಮಾ ಮತ್ತು ವಿಷ್ಣು, ನೀವಿಬ್ಬರೂ ತಪಸ್ಸನ್ನು ಮಾಡಿ ನನ್ನಿಂದ ಒಂದೊಂದು ಕಾರ್ಯವನ್ನು ಪಡೆದುಕೊಂಡಿರುವಿರಿ. ಬ್ರಹ್ಮಾನಿಗೆ ಉತ್ಪತ್ತಿಮಾಡುವುದು ಹಾಗೂ ವಿಷ್ಣುವಿಗೆ ಪಾಲಿಸುವ ಸ್ಥಿತಿ. ಮಕ್ಕಳೇ ಕೇಳಿ, ನಾನು ಇದೇ ರೀತಿ ಮಹೇಶ ಹಾಗೂ ರುದ್ರನಿಗೆ ಒಂದೊಂದು ಕೆಲಸವನ್ನು ಅಂದರೆ ಸಂಹಾರ ಮತ್ತು ತಿರೋಭಾವವನ್ನು ನೀಡಿರುವೆ" ಎಂದನು. ನಂತರ ಹೀಗೆಂದನು, ನನ್ನದು ಒಂದೇ ಅಕ್ಷರ ಓಂ ಮಂತ್ರ ಜಪ ಮಾಡುವುದಿದೆ. ಇದು ಐದು ಅವಯವಗಳ (ಅ, ಉ, ಮ, ನಾದ ಮತ್ತು ಬಿಂದು) ಸಂಗ್ರಹ ಒಂದು ಓಂ ಅಕ್ಷರ ಮಂತ್ರವಾಗಿದೆ. 'ಓಂ' ಎನ್ನುವ ಒಂದು ಅಕ್ಷರಬ್ರಹ್ಮನ ಜಪಮಂತ್ರ ಎನ್ನುವುದು ಓದುಗರಿಗೆ ಸ್ಪಷ್ಟವಾಗಿದೆ. ಹಾಗು ಬ್ರಹ್ಮಾ, ವಿಷ್ಣು, ಮಹೇಶ್ವರರನ್ನು ಬಿಟ್ಟು ಇನ್ನೊಬ್ಬ ಕಾಲಬ್ರಹ್ಮನಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ಹಾಗೂ ಈ ಮೂವರೂ ಕಾಲಬ್ರಹ್ಮನ ಪುತ್ರರು ಎನ್ನುವುದು ಸ್ಪಷ್ಟವಾಗುತ್ತದೆ.

ಅನ್ಯ ಪ್ರಮಾಣಗಳು:– ಶ್ರೀಶಿವಪುರಾಣ (ಗೀತಾಪ್ರೆಸ್, ಗೋರಖ್ ಪುರದಿಂದ ಪ್ರಕಾಶನಗೊಂಡ)ದಲ್ಲಿ ರುದ್ರ ಸಂಹಿತೆ 9ನೇ ಅಧ್ಯಾಯದ 90ನೇ ಪುಟದಲ್ಲಿ ಬರೆದಿರುವುದೇನೆಂದರೆ "ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು ಮತ್ತು ತಮೋಗುಣ ಶಿವ ಈ ಮೂವರು ದೇವರುಗಳಲ್ಲಿ ಗುಣಗಳಿವೆ. ನಾನು ಇವರೆಲ್ಲರಿಗಿಂತ ಭಿನ್ನನಾಗಿದ್ದೇನೆ" ಎಂದು ಬರೆದಿದೆ.

ಈ ಎಲ್ಲಾ ಪ್ರಮಾಣಗಳಿಂದ ಸ್ಪಷ್ಟವಾಯ್ತೆನೆಂದರೆ, ಗೀತೆಯ ಜ್ಞಾನದಾತನು ಕಾಲಬ್ರಹ್ಮನು. ಇವನಿಗೆ ಪ್ರತಿದಿನವೂ ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳನ್ನು ತಿನ್ನುವ ಹಾಗೂ ಒಂದುಕಾಲು ಲಕ್ಷ ಜೀವಿಗಳನ್ನು ಉತ್ಪತ್ತಿಸುವ ಶಾಪ ತಗುಲಿದೆ. ಈ ಕಾರಣದಿಂದಲೇ ಅವನು ತನ್ನ ಮೂವರು ಜನ ಪುತ್ರರನ್ನು ಒಂದೊಂದು ಗುಣಯುಕ್ತರನ್ನಾಗಿ ಮಾಡಿದ್ದಾನೆ. ಇವರ ಶರೀರದಿಂದ ಹೊರಡುವ ಗುಣಗಳ ಸೂಕ್ಷ್ಮ ಪ್ರಭಾವವು ಪ್ರತಿಯೊಂದು ಜೀವಿಯನ್ನು ಅಸಹಾಯಕನನ್ನಾಗಿ ಮಾಡಿ ಕೆಲಸ ಮಾಡಿಸುತ್ತದೆ. ಹೇಗೆ ಅಡುಗೆ ಮನೆಯಲ್ಲಿ ಮೆಣಸಿನ ಒಗ್ಗರಣೆ ಹಾಕಿದಾಗ ಘಾಟಿಗೆ ಸೀನು ಬರುತ್ತದೆ. ಆ ಸೀನನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಮೆಣಸು ಅಡಿಗೆ ಮನೆಯಲ್ಲಿದ್ದರೂ ಅದರಿಂದ ಹೊರಡುವ ಗುಣವು ದೂರದಲ್ಲೆಲ್ಲೋ ರೂಮಿನಲ್ಲಿ ಕುಳಿತ ವ್ಯಕ್ತಿಗಳ ಮೇಲೆ ಪ್ರಭಾವ ಬೀರುತ್ತದೆ.

ಇದೇ ಪ್ರಕಾರ ಮೂರು ದೇವರುಗಳ (ಶ್ರೀಬ್ರಹ್ಮಾ, ಶ್ರೀವಿಷ್ಣು ಹಾಗು ಶ್ರೀಶಿವ) ಅವರವರ ಲೋಕಗಳಲ್ಲಿ ಇರುತ್ತಾರೆ, ಆದರೆ ಅವರ ಶರೀರದಿಂದ ಹೊರಡುವ ಗುಣಗಳ ಸೂಕ್ಷ್ಮ ಪ್ರಭಾವವು ಮೂರೂ ಲೋಕ(ಸ್ವರ್ಗ ಲೋಕ, ಪಾತಾಳ ಲೋಕ, ಪೃಥ್ವಿ ಲೋಕ)ದ ಜೀವಿಗಳ ಮೇಲೆ ಪ್ರಭಾವ ಉಂಟುಮಾಡುತ್ತಿರುತ್ತದೆ. ಇದರಿಂದ ಕಾಲ ಬ್ರಹ್ಮನಿಗೆ ಒಂದು ಲಕ್ಷ ಮಾನವರ ಆಹಾರ ತಯಾರಾಗುತ್ತದೆ, ಆದ್ದರಿಂದ ಗೀತೆಯ ಅಧ್ಯಾಯ 7ನೇ ಶ್ಲೋಕ 12ರಲ್ಲಿ ಗೀತೆಯ ಜ್ಞಾನದಾತ ಹೇಳಿರುವುದೇನೆಂದರೆ:–

❖ "ಮೂರೂ ಗುಣಗಳಿಂದ ಏನೆಲ್ಲಾ ನಡೆಯುವುದೋ ಅದಕ್ಕೆ ನಾನೇ ಕಾರಣನು. ಹೇಗೆ ರಜೋಗುಣ ಬ್ರಹ್ಮಾನಿಂದ ಸೃಷ್ಟಿ, ಸತಗುಣ ವಿಷ್ಣುವಿನಿಂದ ಸ್ಥಿತಿ ಹಾಗೂ ತಮಗುಣ ಶಿವನಿಂದ ಸಂಹಾರ–ಇವೆಲ್ಲವೂ ನನಗಾಗಿ ಅವರಿಂದ ಆಗುತ್ತಿದೆ ಎಂದು ತಿಳಿ. ಆದರೆ ಅವರು ನನ್ನೊಳಗೆ.

ನಾನು ಅವರಲ್ಲಿ ಇಲ್ಲ. ಏಕೆಂದರೆ ಕಾಲಬ್ರಹ್ಮನು ಈ ಮೂರೂ ದೇವರುಗಳಿಂದ ಭಿನ್ನವಾಗಿರುತ್ತಾನೆ (ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ)

❖ ಇಡೀ ಪ್ರಪಂಚವು ಈ 3 ಗುಣಗಳ (ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು ಹಾಗೂ ತಮೋಗುಣ ಶಿವ) ಮೇಲೆ ಮೋಹಿತವಾಗಿದೆ. ಇವರತನಕ ಮಾತ್ರ ಜ್ಞಾನವಾಗಿದೆ. ಈ ಮೂರೂ ದೇವತೆಗಳಿಗಿಂತ ಭಿನ್ನವಾದ ನನ್ನನ್ನು ಹಾಗೂ (ಅವ್ಯಯಮ್) ಆ ಅವಿನಾಶಿ ಪರಮಾತ್ಮನನ್ನು ತಿಳಿದುಕೊಂಡಿಲ್ಲ. (ಗೀತೆಯ 7ನೇ ಅಧ್ಯಾಯದ 13ನೇ ಶ್ಲೋಕ)

❖ ಏಕೆಂದರೆ ಈ ಅಲೌಕಿಕ ತ್ರಿಗುಣಮಯೀ ನನ್ನ ಮಾಯೆಯು (ಅರ್ಥಾತ್ ನನ್ನ ಪುತ್ರರ ಮೂಲಕ ಹರಡಿರುವ ಮಾಯಾಜಾಲ) ಬಹಳ ದುಸ್ತರವಾಗಿದೆ, ಪ್ರಬಲವಾಗಿದೆ. ಯಾವ ಸಾಧಕರು ಕೇವಲ ನನ್ನನ್ನು (ಕಾಲಬ್ರಹ್ಮನನ್ನು) ಭಜಿಸುವರೋ ಅವರು ಈ ಮಾಯೆ (ಬ್ರಹ್ಮಾ, ವಿಷ್ಣು, ಮಹೇಶ್ವರನ ಭಕ್ತಿಯಿಂದ ಉಂಟಾಗುವ ಲಾಭಕ್ಕಿಂತ ಅಧಿಕ ಲಾಭ ಬ್ರಹ್ಮನ ಭಕ್ತಿಯಲ್ಲಿದೆ. ಆದ್ದರಿಂದ ಯಾರು ಈ ಮೂವರಿಂದ ಸಿಗುವ ಲಾಭವನ್ನು ತ್ಯಜಿಸಿ ಕಾಲಬ್ರಹ್ಮನ ಸಾಧನೆಯನ್ನು ಮಾಡುವರೋ ಅವರು ಇವರನ್ನು ಉಲ್ಲಂಘಿಸಿ ಅಂದರೆ ಇವರ ಸಾಧನೆಯನ್ನು ತ್ಯಜಿಸುತ್ತಾರೆ) ಯನ್ನು ಉಲ್ಲಂಘಿಸುತ್ತಾರೆ (ಗೀತೆಯ 7ನೇ ಅಧ್ಯಾಯದ 14ನೇ ಶ್ಲೋಕ).

❖ ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಹೇಳಿದೆ, "ಮೂರೂ ಗುಣಗಳ (ರಜಗುಣ ಬ್ರಹ್ಮಾ, ಸತಗುಣ ವಿಷ್ಣು, ತಮಗುಣ ಶಿವ) ರೂಪಿ ಮಾಯಾಜಾಲದ ಮೂಲಕ ಯಾರ ಜ್ಞಾನ ಹರಣವಾಗಿದೆಯೋ ಅಂದರೆ ಯಾವ ಸಾಧಕರು ಈ ಮೂರೂ ದೇವರಿಗಿಂತ ಭಿನ್ನನಾದ ಪ್ರಭುವನ್ನು ಅರಿತಿರುವುದಿಲ್ಲವೋ, ಅವರು ಈ ಮೂವರಿಂದ ಸಿಗುವ ನೆಪಮಾತ್ರದ ಲಾಭವನ್ನೇ ಮೋಕ್ಷವೆಂದು ತಿಳಿದು ಅವರದೇ ಭಕ್ತಿ ಮಾಡುತ್ತಿರುತ್ತಾರೆ. ಅಂಥ ವ್ಯಕ್ತಿಗಳು ಅಸುರ ಸ್ವಭಾವ ಧರಿಸಿರುವ ಮನುಷ್ಯರಲ್ಲಿ ನೀಚ ಹಾಗೂ ದೂಷಿತ ಕರ್ಮವನ್ನು ಮಾಡುವ ಮೂರ್ಖರು ಕಾಲಬ್ರಹ್ಮನಾದ ನನ್ನನ್ನು ಭಜಿಸುವುದಿಲ್ಲ. (ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ).

❖ ಗೀತೆಯ 14ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿರುವುದೇನೆಂದರೆ, ಯಾವಾಗ ತತ್ವಜ್ಞಾನವನ್ನು ಕೇಳುವವನು ಹಾಗೂ ಮೂರು ಗುಣಗಳ (ರಜಗುಣ ಬ್ರಹ್ಮಾ, ಸತಗುಣ ವಿಷ್ಣು, ತಮಗುಣ ಶಿವ)ನ್ನು ಇಷ್ಟ ರೂಪದಲ್ಲಿ ಪೂಜಿಸುವವನು ತನ್ನ ಹಳೆಯ ಧೋರಣೆಯನ್ನು ಬದಲಿಸುವುದಿಲ್ಲವೋ ಅಂದರೆ ಈ ಮೂವರ ವಿನಃ ಬೇರೆ ಯಾರನ್ನೂ ಕರ್ತ ಎಂದು ಭಾವಿಸುವುದಿಲ್ಲವೋ, ಹಾಗೂ ಈ ಮೂವರ ಹೊರತು ಪೂರ್ಣ ಪರಮಾತ್ಮನ ಜ್ಞಾನ ಪಡೆಯುತ್ತಾನೆ, ಅವನು ನನ್ನ ಜಾಲದಲ್ಲೇ ಉಳಿಯುತ್ತಾನೆ. (ಗೀತೆ 14ನೇ ಅಧ್ಯಾಯದ 19ನೇ ಶ್ಲೋಕ).

ಗೀತೆಯ 14ನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ದೇಹ ಪಡೆದಿರುವ ಮನುಷ್ಯನು ಈ ಮೂವರನ್ನು ಉಲ್ಲಂಘಿಸಿ, ಅಂದರೆ ಈ ಮೂವರ ಪೂಜೆಯನ್ನು ತ್ಯಜಿಸಿ ಜನನ–ಮರಣ ಮತ್ತು ವೃದ್ಧಾಪ್ಯ ಹಾಗೂ ಎಲ್ಲಾ ರೀತಿಯ ದುಃಖಗಳಿಂದ ಮುಕ್ತಿ ಹೊಂದಿ ಪರಮಾನಂದ ಅಂದರೆ ಗೀತೆಯ 18ನೇ ಅಧ್ಯಾಯದ 62ನೇ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ವರ್ಣಿಸಿರುವಂತೆ ಪರಮ ಶಾಂತಿ ಮತ್ತು ಸನಾತನ ಪರಮಪದವನ್ನು ಪಡೆಯುತ್ತಾನೆ.

ಸಾರಾಂಶ:– ಮೂವರು ದೇವರ (ಬ್ರಹ್ಮಾ ರಜೋಗುಣ, ವಿಷ್ಣು ಸತಗುಣ ಹಾಗೂ ಶಿವ ತಮೋಗುಣ) ಪೂಜೆ ಮಾಡುವವರು ರಾಕ್ಷಸ ಸ್ವಭಾವವನ್ನು ಧರಿಸಿರುವವರು, ಮನುಷ್ಯರಲ್ಲಿ ನೀಚ ಹಾಗೂ ಕೆಟ್ಟ ಕರ್ಮವನ್ನು ಮಾಡುವ ಮೂರ್ಖರು ಎಂದು ಹೇಳಲಾಗಿದೆ. ಅಂದರೆ ಇವರ ಪೂಜೆ ಮಾಡಬಾರದು.

ಕಾರಣ:– 1.ರಜೋಗುಣ ಬ್ರಹ್ಮಾನ ಪೂಜೆಯನ್ನು ಹಿರಣ್ಯ ಕಶಿಪು ಮಾಡಿದ್ದನು. ತನ್ನ ಪುತ್ರನಾದ ಪ್ರಹ್ಲಾದನ ಶತ್ರುವಾದನು, ರಾಕ್ಷಸನೆನಿಸಿಕೊಂಡನು. ನಾಯಿಯಂತೆ ಸತ್ತು ಹೋದನು.

2.ತಮೋಗುಣ ಶಿವನ ಪೂಜೆಯನ್ನು ರಾವಣ ಮಾಡುತ್ತಿದ್ದನು. ಅವನು ಜಗನ್ಮಾತೆ ಸೀತೆಯನ್ನು ಅಪಹರಿಸಿ ತನ್ನ ಪತ್ನಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದನು. ರಾಕ್ಷಸನೆನಿಸಿಕೊಂಡು ನಾಯಿಯ ಸಾವು ಸತ್ತನು.

3.ವಿಷ್ಣುವಿನ ಪೂಜೆ ಮಾಡುವವರನ್ನು ವೈಷ್ಣವರೆನ್ನುವರು. ಒಮ್ಮೆ ಹರಿದ್ವಾರದಲ್ಲಿ ಕುಂಭಮೇಳ ನಡೆಯಿತು. ಆ ಸಮಾಗಮದಲ್ಲಿ ಸ್ನಾನ ಮಾಡಲು ಎಲ್ಲಾ ಸಂತರು (ಗಿರಿ, ಪುರೀ,ನಾಥ್,ನಾಗಾ) ಅಲ್ಲಿಗೆ ಬಂದರು. ನಾಗಾ ಸಾಧುಗಳು ತಮೋಗುಣ ಶಿವನ ಆರಾಧಕರು ಹಾಗು ವೈಷ್ಣವರು ಸತಗುಣ ವಿಷ್ಣುವಿನ ಆರಾಧಕರು. ಎಲ್ಲರೂ ಹರಿದ್ವಾರದ ಹರ್ ಕೀ ಪೇಡಿ ಮೇಲೆ ಸ್ನಾನ ಮಾಡಲು ಸಿದ್ಧತೆ ನಡೆಸಿದ್ದರು. ಅವರು ಸುಮಾರು 20 ಸಾವಿರದಷ್ಟಿದ್ದರು. ವೈಷ್ಣವರೂ ಸುಮಾರು ಅಷ್ಟೇ ಸಂಖ್ಯೆಯಲ್ಲಿದ್ದರು. ಅವರೂ ಅಲ್ಲಿ ತಲುಪಿದರು. ವೈಷ್ಣವ ಸಾಧುಗಳು, 'ನಾವೇ ಶ್ರೇಷ್ಠರು, ನಾವು ಮೊದಲು ಸ್ನಾನ ಮಾಡುತ್ತೇವೆ' ಎಂದು ನಾಗಾ ಸಾಧುಗಳಿಗೆ ಹೇಳಿದರು. ಈ ಮಾತಿನ ಮೇಲೆ ಅವರಲ್ಲೇ ಜಗಳ ಪ್ರಾರಂಭವಾಯಿತು. ಕತ್ತಿ, ಚೂರಿ, ಲಾಠಿಗಳಿಂದ ಹೊಡೆದಾಡಲಾರಂಭಿಸಿದರು. ಎರಡೂ ಪಕ್ಷಗಳಿಂದ ಸುಮಾರು 25 ಸಾವಿರದಷ್ಟು ಸಾಧುಗಳು ಮೂರು ಗುಣಗಳ ಉಪಾಸಕರು ಹೊಡೆದಾಡಿ ಸತ್ತರು.

ಆದ್ದರಿಂದ ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕದಿಂದ 15ನೇ ಶ್ಲೋಕದವರೆಗೆ ಮೂರೂ ಗುಣಗಳ (ರಜಗುಣ ಬ್ರಹ್ಮಾ, ಸತಗುಣ ವಿಷ್ಣು ಹಾಗು ತಮಗುಣ ಶಿವ) ಉಪಾಸಕರನ್ನು ರಾಕ್ಷಸ ಸ್ವಭಾವವನ್ನು ಹೊಂದಿರುವವರು ಹಾಗೂ ಕೆಟ್ಟ ಕೆಲಸ ಮಾಡುವ ಮೂರ್ಖರು ಎಂದು ಹೇಳಿದ್ದಾರೆ.

ಇದರಿಂದ ಸ್ಪಷ್ಟವಾಯ್ತೆನೆಂದರೆ, ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು ಹಾಗೂ ತಮೋಗುಣ ಶಿವನನ್ನು ಆರಾಧಿಸುವವರು ಮೂರ್ಖರು, ರಾಕ್ಷಸರು, ಹಾಗೂ ರಾಕ್ಷಸರಲ್ಲಿ ನೀಚ ಹಾಗೂ ಕೆಟ್ಟ ಕೆಲಸ ಮಾಡುವ ನೀಚ ವ್ಯಕ್ತಿಗಳು ಅಂದರೆ ಇವರ ಪೂಜೆ ಮಾಡುವುದನ್ನು ಗೀತೆಯಲ್ಲೂ ನಿಷೇಧಿಸಲಾಗಿದೆ. ಆದ್ದರಿಂದ ಇವರನ್ನು ಇಷ್ಟ ರೂಪದಲ್ಲಿ ಪೂಜಿಸುವುದು ವ್ಯರ್ಥ.

## "ಪೂಜೆ ಮತ್ತು ಸಾಧನೆಯಲ್ಲಿರುವ ವ್ಯತ್ಯಾಸ"

ಪ್ರಶ್ನೆ:– ಕಾಲಬ್ರಹ್ಮನ ಪೂಜೆ ಮಾಡಬೇಕೋ ಬೇಡವೋ? ಗೀತೆಯಲ್ಲಿ ಪ್ರಮಾಣ ತೋರಿಸಿ.

ಉತ್ತರ:– ಮಾಡಬಾರದು. ಮೊದಲು ನಿಮಗೆ ಪೂಜೆ ಮತ್ತು ಸಾಧನೆಯಲ್ಲಿ ಇರುವ ವ್ಯತ್ಯಾಸವನ್ನು ತಿಳಿಸುತ್ತೇವೆ.

ಭಕ್ತಿ ಅರ್ಥಾತ್ ಪೂಜೆ:– ಭೂಮಿಯ ಒಳಗಡೆ ಶೀತಲವಾದ ಜಲವಿದೆ ಎನ್ನುವುದು ನಮಗೆ ತಿಳಿದಿದೆ. ಅದನ್ನು ಪಡೆಯುವುದು ಹೇಗೆ? ಅದನ್ನು ಪಡೆಯಲು ಬೋರ್‌ವೆಲ್ ಮೂಲಕ ನೆಲವನ್ನು ಕೊರೆಯಲಾಗುತ್ತದೆ. ಅದಕ್ಕೆ ಒಂದು ಕಬ್ಬಿಣದ ಕೊಳವೆ ಜೋಡಿಸಲಾಗುತ್ತದೆ. ನಂತರ ಹ್ಯಾಂಡ್ ಪಂಪ್‌ನ ಮಷೀನನ್ನು ಜೋಡಿಸಲಾಗುತ್ತದೆ. ಆಗ ಆ ಶೀತಲ ಜೀವನ ಕೊಡುವ ನೀರು ಪ್ರಾಪ್ತಿಯಾಗುತ್ತದೆ. ಪೂಜನೀಯವಾದ ಜಲವನ್ನು ಪಡೆಯಲು ಕೆಲವು ಉಪಕರಣಗಳನ್ನು ಜೋಡಿಸಬೇಕು ಹಾಗೂ ಸಾಧನೆ ಎನ್ನುವ ಪ್ರಯತ್ನ ಮಾಡಬೇಕು. ಕೇವಲ ಉಪಕರಣಗಳ ಪೂಜೆ ಮಾಡುವುದರಲ್ಲೇ ನಿರತರಾದರೆ ನಮಗೆ ಜಲ ಲಭ್ಯವಾಗುವುದಿಲ್ಲ. ಉಪಕರಣಗಳ ಮೂಲಕ ಪೂಜ್ಯ ವಸ್ತು ಪ್ರಾಪ್ತವಾಗುತ್ತದೆ.

ಅನ್ಯ ಉದಾಹರಣೆಗಳು:– ಪತಿವ್ರತೆಯು ತನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಬಹಳ ಗೌರವಿಸುತ್ತಾಳೆ. ಅತ್ತೆ–ಮಾವ ನನ್ನು ತಂದೆ ತಾಯಿಯಂತೆ ಕಾಣುವುದು, ನಾದಿನಿಯರನ್ನು ಅಕ್ಕ ತಂಗಿಯರಂತೆ, ಮೈದುನನನ್ನು ಅಣ್ಣ ತಮ್ಮಂದಿರಂತೆ ಕಾಣುತ್ತಾಳೆ. ಆದರೆ ತನ್ನ ಪತಿಯನ್ನು ಪೂಜಿಸುತ್ತಾಳೆ, ಅವರಿಂದ ಬೇರೆಯಾದಾಗ ತನಗೆ ಸಂಬಂಧಿಸಿದ ವಸ್ತುಗಳೆಲ್ಲವನ್ನೂ ಗಂಡನಿಗೆ ಸೇರಿದ ಮನೆಗೆ ತೆಗೆದುಕೊಂಡು ಹೋಗುತ್ತಾಳೆ.

ಅನ್ಯ ಉದಾಹರಣೆ:– ನಮಗೆ ಮಾವಿನ ಹಣ್ಣು ತಿನ್ನಬೇಕೆಂಬ ಇಚ್ಛೆ ಇರುತ್ತದೆ ಎಂದಿಟ್ಟುಕೊಳ್ಳೋಣ. ನಮಗೆ ಆಗ ಮಾವಿನಹಣ್ಣು ಪೂಜನೀಯವಾಗಿದೆ. ಅದನ್ನು ಪಡೆಯಲು ನಮಗೆ ಹಣದ ಅವಶ್ಯಕತೆ ಇರುತ್ತದೆ. ಹಣ ಪಡೆಯಲು ಕೂಲಿ/ನೌಕರಿ/ವ್ಯವಸಾಯ ಮಾಡಬೇಕಾಗುತ್ತದೆ. ಆಗ ನಮಗೆ ಮಾವಿನ ಹಣ್ಣು ಪ್ರಾಪ್ತವಾಗುತ್ತದೆ. ಆದ್ದರಿಂದ ಮಾವಿನಹಣ್ಣು ಪೂಜನೀಯವಾದುದು ಹಾಗೂ ಉಳಿದ ಕ್ರಿಯೆಗಳು ಸಾಧನೆಯ ಮೆಟ್ಟಿಲುಗಳು. ಸಾಧ್ಯ ವಸ್ತುವನ್ನು ಪಡೆಯಲು ಸಾಧನೆ ಮಾಡಬೇಕಾಗುತ್ತದೆ. ಸಾಧನೆ ಬೇರೆ, ಪೂಜೆ ಅಂದರೆ ಭಕ್ತಿ ಬೇರೆ. ಎಂದು ಸ್ಪಷ್ಟವಾಯ್ತು.

ಬ್ರಹ್ಮನ ಪೂಜೆ ಮಾಡಬೇಕಾ? ಎನ್ನುವುದರ ಬಗ್ಗೆ ಪ್ರಶ್ನೆ ನಡೆಯುತ್ತಿದೆ. ಇದರ ಉತ್ತರವಾಗಿ ಹೇಳುವುದೇನೆಂದರೆ, ಪೂಜೆ ಮಾಡಬಾರದು. ಭಗವದ್ಗೀತೆಯಲ್ಲಿ ಪ್ರಮಾಣ ತೋರಿಸ್ತೇನೆ.

ಗೀತೆಯ 7ನೇ ಅಧ್ಯಾಯದ 12ರಿಂದ 15ನೇ ಶ್ಲೋಕದವರೆಗೆ ಗೀತೆಯ ಜ್ಞಾನದಾತನು ಹೇಳಿದ್ದಾನೆ. ಮೂರೂ ಗುಣಗಳ (ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು ಹಾಗೂ ತಮೋಗುಣ ಶಿವನ) ಭಕ್ತಿಯು ವ್ಯರ್ಥ ಎಂದು ಹೇಳಲಾಗಿದೆ. ಹಾಗೂ ಗೀತೆಯ 7ನೇ ಅಧ್ಯಾಯದ 16, 17, 18 ನೇ ಶ್ಲೋಕಗಳಲ್ಲಿ ಗೀತೆ ಜ್ಞಾನದಾತನು, ತನ್ನ ಭಕ್ತಿಯಿಂದ ಸಿಗುವ ಗತಿ ಅಂದರೆ ಮೋಕ್ಷವನ್ನು ಅನುತ್ತಮ ಅಂದರೆ ಕೀಳಮಟ್ಟದೆಂದು ಹೇಳಿದ್ದಾನೆ. ನಾಲ್ಕು ಬಗೆಯ ವ್ಯಕ್ತಿಗಳು ನನ್ನ ಭಕ್ತಿ ಮಾಡುತ್ತಾರೆ ಎಂದು ಹೇಳಿದ್ದಾನೆ.

1)ಅರ್ಥಾರ್ಥಿ :– ಧನ ಲಾಭಕ್ಕಾಗಿ ವೇದಗಳ ಅನುಸಾರವಾಗಿ ಅನುಷ್ಠಾನ ಮಾಡುವವರು.

2)ಆರ್ತ :– ಕಷ್ಟಗಳ ಪರಿಹಾರಕ್ಕಾಗಿ ವೇದಗಳ ಪ್ರಕಾರವಾಗಿ ಅನುಷ್ಠಾನ ಮಾಡುವವರು.

3)ಜಿಜ್ಞಾಸು :– ಪರಮಾತ್ಮನ ವಿಷಯದಲ್ಲಿ ತಿಳಿಯಲು ಇಚ್ಛಿಸುವವರು.

(ಜ್ಞಾನವನ್ನು ಪಡೆದು ಸ್ವತಃ ವಾಕ್ತಾರರಾಗುತ್ತಾರೆ)

ಈ 3 ಬಗೆಯ ಬ್ರಹ್ಮನ ಉಪಾಸಕರನ್ನು ವ್ಯರ್ಥವೆಂದು ಪರಿಗಣಿಸಲಾಗಿದೆ.

4)ಜ್ಞಾನಿ :– ಮಾನವ ಜನ್ಮ ದುರ್ಲಭವಾದುದು ಎಂದು ಜ್ಞಾನಿಗೆ ತಿಳಿಯುತ್ತದೆ. ಮನುಷ್ಯ ಜೀವನವನ್ನು ಪಡೆದು ಆತ್ಮಕಲ್ಯಾಣ ಮಾಡಿಕೊಳ್ಳಬೇಕು. ಅನ್ಯ ದೇವರನ್ನು ಪೂಜಿಸುವುದರಿಂದ ಮೋಕ್ಷವು ಸಿಗುವುದಿಲ್ಲವೆನ್ನುವುದು ಅವರಿಗೆ ತಿಳಿಯುತ್ತದೆ. ಆದ್ದರಿಂದ ಒಬ್ಬನೇ ಪರಮಾತ್ಮನನ್ನು ಅನನ್ಯ ಮನಸ್ಸಿನಿಂದ ಆರಾಧಿಸುವುದರಿಂದ ಪೂರ್ಣ ಮೋಕ್ಷವು ಸಂಭವವಾಗುತ್ತದೆ. ಅವರಿಗೆ ತತ್ವದರ್ಶಿ ಸಂತನು ಸಿಗದೆ ಇರುವ ಕಾರಣ ಅವರು ವೇದಗಳನ್ನು ಅರಿತು. ಅದರ ಪ್ರಕಾರವಾಗಿ ಬ್ರಹ್ಮನನ್ನು ಒಬ್ಬ ಸಮರ್ಥ ಪ್ರಭು ಎಂದು ತಿಳಿದು ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಿಂದ 'ಓಂ' ನಾಮವನ್ನು ಪಡೆದು ಭಕ್ತಿ ಮಾಡಿದರು. ಆದರೆ ಪೂರ್ಣ ಮೋಕ್ಷ ಪಡೆಯಲಾಗಲಿಲ್ಲ. 'ಓಂ' ನಾಮ ಬ್ರಹ್ಮ ಸಾಧನೆಯದ್ದಾಗಿದೆ. ಇದರಿಂದ ಬ್ರಹ್ಮಲೋಕವು ಪ್ರಾಪ್ತಿಯಾಗುತ್ತದೆ. ಇದನ್ನು ಈ ಮೊದಲೂ ಸಹ ಪುಷ್ಟೀಕರಿಸಲಾಗಿದೆ. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿದ ಹಾಗೆ ಬ್ರಹ್ಮಲೋಕದ ಪರ್ಯಂತ ಎಲ್ಲಾಲೋಕಗಳು ಪುನರಾವರ್ತಿಯಲ್ಲಿದೆ. ಅಂದರೆ ಬ್ರಹ್ಮಲೋಕಕ್ಕೆ ತೆರಳಿದ ಸಾಧಕರೂ ಸಹ ಪುನಃ ಈ ಪ್ರಪಂಚಕ್ಕೆ ಬಂದು ಜನನ–ಮರಣದ ಚಕ್ರದಲ್ಲಿ ಸಿಲುಕುತ್ತಾರೆ.

ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವ ಕಾಲಬ್ರಹ್ಮನ ಸಾಧನೆಯಿಂದ ಆ ಮೋಕ್ಷವು ಪ್ರಾಪ್ತವಾಗುವುದಿಲ್ಲ. ತತ್ವಜ್ಞಾನದಿಂದ ಅಜ್ಞಾನವನ್ನು ತೊರೆದು ಪರಮೇಶ್ವರನ ಆ ಪರಮ ಪದದ ಹುಡುಕಾಟ ನಡೆಸಬೇಕು. ಅಲ್ಲಿಗೆ ಹೋದ ಬಳಿಕ ಸಾಧಕನು ಮರಳಿ ಈ ಪ್ರಪಂಚಕ್ಕೆ ಎಂದಿಗೂ ಬರುವುದಿಲ್ಲ ಎಂದು ಗೀತೆಯಲ್ಲಿ ಹೇಳಿದೆ.

❖ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತನು ಹೇಳಿದ್ದಾನೆ, "ಈ ಜ್ಞಾನಿ ಆತ್ಮವು (ನಾಲ್ಕನೇ ಸಂಖ್ಯೆದವರು ಬ್ರಹ್ಮನ ಸಾಧಕರೆಂದು ಕರೆಯಲಾಗಿದೆ) ಉದಾರವಾಗಿದೆ ಅಂದರೆ ಒಳ್ಳೆಯದಾಗಿದೆ ಆದರೆ ತತ್ವಜ್ಞಾನದ ಕೊರತೆಯಿಂದ ನನ್ನ ಅನುತ್ತಮ ಮೋಕ್ಷದಲ್ಲೇ

ಉಳಿದಿದೆ." ಗೀತೆಯ ಜ್ಞಾನದಾತನು ತನ್ನ ಸಾಧನೆಯಿಂದ ಪ್ರಾಪ್ತವಾಗುವ ಮೋಕ್ಷವನ್ನು ಅನುತ್ತಮ ಅಂದರೆ ಕೆಟ್ಟದ್ದೆಂದೇ ಹೇಳಿದ್ದಾನೆ. ಆದ್ದರಿಂದ ಆ ಬ್ರಹ್ಮನ ಪೂಜೆಯನ್ನು ಮಾಡುವುದು ಸರಿಯಲ್ಲ.

ಕಾರಣ:– ಒಬ್ಬ ಚುಣಕ ಎಂಬ ಹೆಸರಿನ ಋಷಿ ಜ್ಞಾನಿ ಆತ್ಮದವನು, ಅವನು ಸಾವಿರ ವರ್ಷಗಳ ಕಾಲ ಓಂ ನಾಮ ಜಪವನ್ನು ಮತ್ತು ಹಠಯೋಗವನ್ನು ಮಾಡಿದ್ದನು. ಅದರಿಂದ ಅವನಿಗೆ ಸಿದ್ಧಿಗಳು ಒಲಿದವು. ಬ್ರಹ್ಮನ ಸಾಧನೆ ಮಾಡುವುದರಿಂದ ಜನನ–ಮರಣ, ಸ್ವರ್ಗ–ನರಕದ ಚಕ್ರವು ಸದಾಕಾಲವೂ ಇರುವುದು, ಏಕೆಂದರೆ ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ ಹಾಗೂ 4ನೇ ಅಧ್ಯಾಯದ 5ನೇ ಶ್ಲೋಕ ಮತ್ತು 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನದಾತ ಬ್ರಹ್ಮನು ಹೇಳಿದ್ದಾನೆ. "ಹೇ ಅರ್ಜುನ! ನಿನ್ನ ಮತ್ತು ನನ್ನ ಅನೇಕ ಜನ್ಮಗಳು ಆಗಿ ಹೋಗಿವೆ. ನಿನಗೆ ಗೊತ್ತಿಲ್ಲ, ಆದರೆ ನನಗೆ ಗೊತ್ತಿದೆ. ನೀನು, ನಾನು ಹಾಗೂ ಈ ಎಲ್ಲಾ ರಾಜರು ಈ ಮೊದಲೇ ಹುಟ್ಟಿದ್ದರು. ಮುಂದೆಯೂ ಹುಟ್ಟುತ್ತಾರೆ. ನಾವೆಲ್ಲಾ ಈಗಲೇ ಹುಟ್ಟಿದ್ದೇವೆ ಎಂದು ಯೋಚಿಸಬೇಡ. ನನ್ನ ಹುಟ್ಟು ಮಹರ್ಷಿಗಳು ಮತ್ತು ಈ ದೇವಿ–ದೇವತೆಯರಿಗೆ ತಿಳಿದಿಲ್ಲ ಏಕೆಂದರೆ ಅವರೆಲ್ಲಾ ನನ್ನಿಂದ ಹುಟ್ಟಿದವರು.

ಇದರಿಂದ ಸ್ಪಷ್ಟವಾಗುವುದೇನೆಂದರೆ, ಗೀತೆಯನ್ನು ಹೇಳಿದ ಬ್ರಹ್ಮನೂ ಹುಟ್ಟುತ್ತಾನೆ, ಸಾಯುತ್ತಾನೆ ಎಂದಾದರೆ ಅವನನ್ನು ಆರಾಧಿಸುವ ಉಪಾಸಕರು ಅಮರ ಹೇಗಾಗುತ್ತಾರೆ? ಇದರಿಂದ ಸ್ಪಷ್ಟವಾಯ್ತೆನೆಂದರೆ ಬ್ರಹ್ಮನ ಸಾಧನೆಯಿಂದ ಆ ಮೋಕ್ಷ ಸಿಗುವುದಿಲ್ಲ ಯಾವುದನ್ನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕಗಳಲ್ಲಿ ಗೀತೆಯ ಜ್ಞಾನದಾತನು ಸ್ಪಷ್ಟಪಡಿಸಿದ್ದಾನೆ. "ಹೇ ಭಾರತ! ನೀನು ಸರ್ವಭಾವದಿಂದ ಆ ಪರಮೇಶ್ವರ ಪರಮ ಅಕ್ಷರಬ್ರಹ್ಮನ ಆಶ್ರಯಕ್ಕೆ ಹೋಗು. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮಶಾಂತಿಯನ್ನು ಮತ್ತು ಸನಾತನ ಪರಮಪದ ಅಂದರೆ ಸತ್ಯ ಲೋಕವನ್ನು ಪಡೆದುಕೊಳ್ಳುವೆ. ತತ್ವಜ್ಞಾನವನ್ನು ತಿಳಿದ ಬಳಿಕ ಸಾಧಕನು ಮರಳಿ ಈ ಪ್ರಪಂಚಕ್ಕೆ ಬಾರದಿರುವಂತಹ ಪರಮಪದದ ಹುಡುಕಾಟವನ್ನು ನಡೆಸಬೇಕು." ನೀವು ಮತ್ತೆ ಯೋಚಿಸಿ. ಗೀತೆಯ ಜ್ಞಾನದಾತನು ಸ್ವತಃ ಜನ್ಮಿಸುತ್ತಾನೆ, ಮರಣ ಹೊಂದುತ್ತಾನೆ. ಆದ್ದರಿಂದ ಬ್ರಹ್ಮನ ಪೂಜೆಯಿಂದ ಸಿಗುವ ಗತಿ ಅನುತ್ತಮವೆಂದು ಹೇಳಲಾಗಿದೆ.

ಈಗ ಚುಣಕ ಮಹರ್ಷಿಗಳ ಪ್ರಸಂಗವನ್ನು ಹೇಳುತ್ತೇನೆ:– ಚುಣಕ ಋಷಿಗಳು ಓಂ ನಾಮದ ಜಪವನ್ನು ಮತ್ತು ಹಠಯೋಗವನ್ನು ಮಾಡಿದರು. ವೇದಗಳ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ)ಲ್ಲಿ ಹೇಳಲಾದ ಭಕ್ತಿಯಿಂದ ಪರಮಾತ್ಮನು ಪ್ರಾಪ್ತಿಯಾಗುವುದಿಲ್ಲ. ಇದಕ್ಕೆ ಸ್ಪಷ್ಟೀಕರಣ ಗೀತೆಯ 11ನೇ ಅಧ್ಯಾಯದ 47–48ನೇ ಶ್ಲೋಕದಲ್ಲಿದೆ. ಗೀತೆಯ ಜ್ಞಾನದಾತನು ಹೇಳಿದ್ದಾನೆ. "ಹೇ ಅರ್ಜುನ! ನನ್ನ ಅಂದರೆ ಕಾಲಬ್ರಹ್ಮನ ವಿರಾಟರೂಪ. ನನ್ನ ಈ ರೂಪದ ದರ್ಶನ ನಿನ್ನನ್ನು ಬಿಟ್ಟು ಇನ್ಯಾರಿಗೂ ಮೊದಲು ಆಗಿಲ್ಲ. ನಾನು ನಿನಗೇ ಅನುಗ್ರಹಿಸಿ ಈ ರೂಪವನ್ನು ತೋರಿಸಿರುವೆ. ನನ್ನ ಈ ರೂಪದ ದರ್ಶನ ಅರ್ಥಾತ್ ಬ್ರಹ್ಮ ಪ್ರಾಪ್ತಿಯು ವೇದಗಳಲ್ಲಿ ತಿಳಿಸಿರುವ ಪ್ರಕಾರದಿಂದ ಅಂದರೆ ಓಂ ನಾಮ ಜಪದಿಂದ, ತಪದಿಂದ, ಹವನದಿಂದ, ವಿಧವಿಧವಾದ ಹೋಮ ಹವನಗಳಿಂದ ದೊರೆಯುವುದಿಲ್ಲ. ಅಂದರೆ ವೇದಗಳಲ್ಲಿ ವರ್ಣಿಸಿದ ವಿಧಾನಗಳಿಂದ ಬ್ರಹ್ಮಪ್ರಾಪ್ತಿಯಾಗುವುದಿಲ್ಲ. ಇದೇ ಕಾರಣದಿಂದ ಚುಣಕ ಮಹರ್ಷಿಗಳೂ ಸಹ ಬ್ರಹ್ಮನನ್ನು ನಿರಾಕಾರ ಎಂದು ಹೇಳುತ್ತಿದ್ದರು. ಚುಣಕ ಋಷಿಗಳಿಗೆ ಸಿದ್ಧಿಗಳು ಒಲಿದವು. ಇದರಿಂದ ಅವರು ಪ್ರಪಂಚದಲ್ಲಿ ಪ್ರಸಿದ್ಧರಾದರು. ಸಿದ್ಧಿಯನ್ನು ಪಡೆದ ಸಾಧಕರು ತಮ್ಮ ಅನೇಕ ವರ್ಷಗಳ ಸಾಧನೆಯಿಂದ ಚಾರ್ಜ್ ಮಾಡಿದ ಬ್ಯಾಟರಿಯಿಂದ ಯಾರಿಗಾದರೂ ಶಾಪವನ್ನು ಕೊಟ್ಟು ತಮ್ಮ ಭಕ್ತಿಯನ್ನು ನಾಶಮಾಡಿಕೊಳ್ಳುತ್ತಾರೆ ಹಾಗೂ ಯಾರನ್ನಾದರೂ ಆಶೀರ್ವದಿಸಿ ತಮ್ಮ ಭಕ್ತಿಯನ್ನು ನಾಶಪಡಿಸಿಕೊಳ್ಳುತ್ತಾರೆ. ತಮ್ಮ ಸಿದ್ಧಿಯಿಂದ ಯಾರ ಮೇಲಾದರೂ ತಂತ್ರ–ಮಂತ್ರ ಮಾಡಿ ತಮ್ಮ ಭಕ್ತಿಯನ್ನು ನಾಶಪಡಿಸಿಕೊಳ್ಳುತ್ತಾರೆ ಹಾಗೂ ಪ್ರಪಂಚದಲ್ಲಿ ಪ್ರಶಂಸೆಗೆ ಪಾತ್ರರಾಗುತ್ತಾ ಸ್ವತಃ ಪ್ರಭುಗಳಾಗುತ್ತಾರೆ.

ಒಬ್ಬ ಮಾನಧಾತಾ ಎಂಬ ಚಕ್ರವರ್ತಿ ರಾಜನಿದ್ದನು. ಅವನು ಇಡೀ ಭೂಮಿಯನ್ನು ಆಳುತ್ತಿದ್ದನು. ಇಡೀ ಭೂಮಿಯಲ್ಲಿ ಬೇರೆ ರಾಜರು ನನ್ನ ಅಧೀನದಲ್ಲಿರುವವರಲ್ಲಿ ಯಾರಾದರೂ ಸ್ವತಂತ್ರರಾಗಲು ಇಚ್ಛಿಸುವರೇ ಎಂದು ಒಮ್ಮೆ ಪರೀಕ್ಷಿಸಲು ಇಚ್ಛಿಸಿದನು. ಆಗ ಅವನು ಒಂದು ಪತ್ರವನ್ನು ಬರೆದು ತನ್ನ ಕುದುರೆಗೆ ಕಟ್ಟಿದನು. ಯಾರು ಚಕ್ರವರ್ತಿಯ ಅಧೀನದಲ್ಲಿ ಇರಲು ಇಷ್ಟಪಡುವುದಿಲ್ಲವೋ, ಅವರು ಈ ಕುದುರೆಯನ್ನು ಕಟ್ಟಿಹಾಕಿ, ಯುದ್ಧವನ್ನು ಮಾಡಲು ಸಿದ್ಧರಾಗಬೇಕೆಂದೂ, ಆ ಚಕ್ರವರ್ತಿಯ ಬಳಿ 72 ಅಕ್ಷೋಹಿಣಿ ಸೈನ್ಯವಿರುವುದಾಗಿಯೂ ಆ ಪತ್ರದಲ್ಲಿ ಬರೆದಿತ್ತು. ಆ ಕುದುರೆಯ ಜೊತೆ ಸಾವಿರಾರು ಸೈನಿಕರೂ ಹೊರಟರು. ಕುದುರೆ ಇಡೀ ಭೂಮಿಯನ್ನು ಸುತ್ತಾಡಿತು. ಯಾವ ರಾಜನೂ ಆ ಕುದುರೆಯನ್ನು ಕಟ್ಟಿ ಹಾಕಲಿಲ್ಲ. ಇದರಿಂದ ಭೂಮಿಯ ಮೇಲಿರುವ ಎಲ್ಲಾ ಚಿಕ್ಕ ಚಿಕ್ಕ ರಾಜರು ಚಕ್ರವರ್ತಿಯ ಅಧೀನದಲ್ಲಿದ್ದಾರೆಂದು ಸ್ಪಷ್ಟವಾಯಿತು. ಕುದುರೆಯ ಜೊತೆಗಿದ್ದ ಸೈನಿಕರೆಲ್ಲಾ ಸಂತೋಷದಿಂದ ಬರುತ್ತಿದ್ದರು. ದಾರಿಯಲ್ಲಿ ಚುಣಕ ಮಹರ್ಷಿಗಳ ಕುಟೀರವಿತ್ತು. ಕುದುರೆಗಳ ಮೇಲೆ ಕುಳಿತಿದ್ದ ಕುದುರೆ ಸವಾರರನ್ನು ನೋಡಿ ಚುಣಕ ಮಹರ್ಷಿಗಳು ಹೀಗೆಂದರು, "ಸೈನಿಕರೇ', ಎಲ್ಲಿಗೆ ಹೋಗಿದ್ದಿರಿ? ಈ ಕುದುರೆಯ ಸವಾರನು ಎಲ್ಲಿಗೆ ಹೋದ?" ಆಗ ಸೈನಿಕರು ಅವರಿಗೆ ಎಲ್ಲಾ ವಿಷಯವನ್ನು ತಿಳಿಸಿದರು. ಆಗ ಋಷಿ ಯಾರೂ ಚಕ್ರವರ್ತಿಯ ಜೊತೆ ಯುದ್ಧ ಮಾಡುವ ಸಾಹಸ ಮಾಡಲಿಲ್ಲವೇ?" ಎಂದು ಕೇಳಿದರು. ಆಗ ಸೈನಿಕರು, "ನಮ್ಮ ಚಕ್ರವರ್ತಿ ರಾಜರ ಜೊತೆ ಯುದ್ಧ ಮಾಡುವ ಧೈರ್ಯ ಯಾರಿಗಿದೆ? ನಮ್ಮ ರಾಜರ ಜೊತೆ ಯುದ್ಧ ಮಾಡುವಷ್ಟು ಧೈರ್ಯವಿರುವ ಯಾವ ಮಗನೂ ಇದುವರೆಗೆ ಈ ಭೂಮಿಯ ಮೇಲೆ ಹುಟ್ಟಿಲ್ಲ. ರಾಜನ ಬಳಿ 72 ಅಕ್ಷೋಹಿಣಿ ಅಂದರೆ 72 ಕೋಟಿ ಸೈನ್ಯವಿದೆ. ಯಾರಾದರೂ ಯುದ್ಧ ಮಾಡುವ ಸಾಹಸ ಮಾಡಿದರೆ, ಅವರ ಹೆಡೆ ಮುರಿಯುವೆವು." ಎಂದರು. ಚುಣಕ ಋಷಿಗಳು ಕಾಲಬ್ರಹ್ಮನ ಉಪಾಸಕರಾಗಿದ್ದರು. ಅವರು ಹೀಗೆಂದರು, "ಸೈನಿಕರೇ, ನಿಮ್ಮ ರಾಜನ ಜೊತೆ ಯುದ್ಧ ಮಾಡಲು ನಾನು ಸಿದ್ಧ. ನನ್ನ ಆಶ್ರಮದ ಒಂದು ಮರಕ್ಕೆ ಆ ಕುದುರೆಯನ್ನು ಕಟ್ಟಿ ಹಾಕಿ." ಆಗ ಆ ಸೈನಿಕರು "ಹೇ ಮೂರ್ಖ, ನಿನ್ನ ಬಳಿ ತಿನ್ನಲು ಗತಿಯಿಲ್ಲ. ಚಕ್ರವರ್ತಿಯ ಜೊತೆ ನೀನೇನು ಯುದ್ಧ ಮಾಡುವೇ? ನೀನು ಸುಮ್ಮನೆ ಜಪ-ತಪ ಮಾಡಿಕೊಂಡಿರು, ನಿನ್ನ ತಲೆ ಕೆಟ್ಟಿದೆಯೇ?" ಎಂದರು. ಆಗ ಋಷಿಯು, "ಏನಾಗುವುದೋ, ನೋಡಿಯೇ ಬಿಡೋಣ. ಹೋಗಿ ನಿಮ್ಮ ರಾಜನ ಬಳಿ ಹೋಗಿ ಚುಣಕ ಮಹರ್ಷಿ ನಿಮ್ಮ ಜೊತೆ ಯುದ್ಧ ಮಾಡಲು ಸಿದ್ಧರೆಂದು ಹೇಳಿ" ಎಂದರು. ಈ ವಿಷಯ ರಾಜನಿಗೆ ತಿಳಿಯಿತು. ಈ ದಿನ ಒಬ್ಬ ದರಿದ್ರ ಋಷಿ ಇಷ್ಟು ಧೈರ್ಯಮಾಡಿದರೆ ನಾಳೆ ಬೇರೆ ರಾಜರು ಈ ರೀತಿ ಧೈರ್ಯ ಮಾಡಬಹುದು, ಇದನ್ನು ಪ್ರಾರಂಭದಲ್ಲೇ ಮುಗಿಸಬೇಕು ಎಂದು ಯೋಚಿಸಿದನು, ಜನರಲ್ಲಿ ಭೀತಿ ಹುಟ್ಟಿಸಲು ಆ ಚಕ್ರವರ್ತಿಯು ಒಬ್ಬ ವ್ಯಕ್ತಿಯನ್ನು ಸಾಯಿಸಲು 72 ಕೋಟಿಯ ಸೈನ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದನು. 18 ಕೋಟಿ ಸೈನ್ಯದ ಒಂದು ಗುಂಪನ್ನು ಋಷಿಯ ಜೊತೆ ಯುದ್ಧ ಮಾಡಲು ಕಳುಹಿಸಿದನು. ಇತ್ತ ಚುಣಕ ಮಹರ್ಷಿ ತಮ್ಮ ಸಿದ್ಧಿಯ ಶಕ್ತಿಯಿಂದ ನಾಲ್ಕು ಗೊಂಬೆಗಳನ್ನು ತಯಾರಿಸಿದರು. ಅರ್ಥಾತ್ ನಾಲ್ಕು ಪರಮಾಣು ಬಾಂಬ್‌ಗಳನ್ನು ತಯಾರಿಸಿದರು. ಒಂದು ಗೊಂಬೆಯನ್ನು ಬಿಟ್ಟಾಗ ಅದು 18 ಕೋಟಿ ಸೈನ್ಯವನ್ನು ನಾಶಮಾಡಿತು. ರಾಜನು ಎರಡನೇ ಗುಂಪನ್ನು ಕಳುಹಿಸಿದನು. ಋಷಿಯು ಎರಡನೇ ಗೊಂಬೆಯನ್ನು ಬಿಟ್ಟನು. ಹೀಗೆ ಚಕ್ರವರ್ತಿಯ 72 ಅಕ್ಷೋಹಿಣಿ ಸೈನ್ಯವನ್ನು ಕಾಲಬ್ರಹ್ಮನ ಉಪಾಸಕನಾದ ಚುಣಕ ಮಹರ್ಷಿ ನಾಶ ಮಾಡಿಬಿಟ್ಟನು.

ಯೋಚಿಸಿ:- ರಾಜರ ಮಧ್ಯೆ ಋಷಿಗಳು ಯಾವಾಗಲೂ ಕಾಲು ತೂರಿಸಬಾರದು. ಏಕೆಂದರೆ ಋಷಿಗಳು ಸಾವಿರವರ್ಷ ಓಂ ನಾಮ ಜಪ ಮಾಡಿ ಪರಮಾತ್ಮನನ್ನು ಪಡೆಯಲು ಯತ್ನಿಸುತ್ತಾರೆ. ಆದರೆ ಪರಮಾತ್ಮನು ಸಿಗಲಿಲ್ಲ. ಏಕೆಂದರೆ ಗೀತೆಯ 11ನೇ ಅಧ್ಯಾಯದ 47-48ನೇ ಶ್ಲೋಕದಲ್ಲಿ ಹೇಳಿದೆ, ವೇದಗಳಲ್ಲಿ (4 ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ವರ್ಣಿಸಿದ ಭಕ್ತಿಯ ವಿಧಾನದಿಂದ ಬ್ರಹ್ಮ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ಋಷಿಗಳಲ್ಲಿ ಸಿದ್ಧಿಗಳು ಪ್ರಕಟಗೊಳ್ಳುತ್ತವೆ. ಅಜ್ಞಾನದ ಕಾರಣದಿಂದ ಈ ಮಾಯೆಯನ್ನೇ ಅವರು

ಭಕ್ತಿಯ ಪ್ರಾಪ್ತಿ ಎಂದು ತಿಳಿದುಬಿಟ್ಟಿದ್ದಾರೆ. ಆದ್ದರಿಂದ ಇಷ್ಟೆಲ್ಲಾ ಭಕ್ತಿ ಮಾಡಿದ್ದರೂ ಪ್ರಪಂಚಕ್ಕೆ ಮರಳಿ ಬಾರದಿರುವಂತಹ ಪರಮ ಪದವನ್ನು ಅವರು ಪಡೆಯಲು ಸಾಧ್ಯವಾಗಲಿಲ್ಲ. ಏಕೆಂದರೆ ಅವರಿಗೆ ತತ್ವದರ್ಶಿ ಸಂತನು ದೊರಕಿಲ್ಲ. ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಕಬೀರ್, ಗುರು ಬಿನ್ ಕಾಹೂ ನ ಪಾಯಾ ಜ್ಞಾನಾ, ಜ್ಯೋ ಥೋಥಾ ಭುಸ್ ಛಡೆ ಮೂಢ್ ಕಿಸಾನಾ ।
ಗುರು ಬಿನ್ ವೇದ್ ಪಢೆ ಜೋ ಪ್ರಾಣಿ, ಸಮ್‌ಜೇ ನ ಸಾರ್ ರಹೇ ಅಜ್ಞಾನಿ ॥
ಗರೀಬ್, ಬಹತರ್ ಕ್ಷೌಣಿ ಖಾ ಗಯಾ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇ ಜೌರಾ ಫಿರೆ, ಸಬ್‌ಹೀ ಕಾಲ್ ಕೇ ಭೇಷ್ ॥

ಭಾವಾರ್ಥ:– ತತ್ವದರ್ಶಿ ಸಂತನು ಸಿಗದ ಕಾರಣ ಸಾಧಕನು ಯಾವ ಸಾಧನೆಯನ್ನು ಮಾಡುತ್ತಾನೋ, ಅದು ಶಾಸ್ತ್ರವಿಧಿ ತ್ಯಜಿಸಿ ತನ್ನ ಮನಸ್ಸಿಗೆ ಬಂದ ಹಾಗೆ ಮಾಡುವುದಾಗಿದೆ ಇದರಿಂದ ಸಾಧಕನಿಗೆ ಯಾವುದೇ ಲಾಭವಾಗಲ್ಲ. ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಇದಕ್ಕೆ ಪ್ರಮಾಣವಿದೆ. "ಹೇ ಭಾರತ! ಯಾವ ಸಾಧಕನು ಶಾಸ್ತ್ರ ವಿಧಾನವನ್ನು ಬಿಟ್ಟು ತನಗೆ ಇಷ್ಟ ಬಂದ ಹಾಗೆ ಸಾಧನೆಯನ್ನು ಮಾಡುತ್ತಾನೋ, ಅವನಿಗೆ ಸುಖವೂ ಸಿಗುವುದಿಲ್ಲ, ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ. ಅವನಿಗೆ ಮೋಕ್ಷವೂ ದೊರಕುವುದಿಲ್ಲ. ಇದರಿಂದ ಯಾವ ಸಾಧನೆ ಮಾಡಬೇಕೋ, ಯಾವ ಸಾಧನೆ ಮಾಡಬಾರದು ಎನ್ನುವುದಕ್ಕೆ ಶಾಸ್ತ್ರಗಳೇ ಪ್ರಮಾಣಗಳು" ಎಂದು ಹೇಳಿದೆ.

ಗುರುವಿಲ್ಲದೆ ಅಂದರೆ ತತ್ವದರ್ಶಿ ಸಂತನಿಲ್ಲದೆ ವೇದಗಳನ್ನು ಓದುವುದರಿಂದ ಏನೂ ಪ್ರಯೋಜನವಿಲ್ಲ. ಆ ವೇದಗಳನ್ನು ಕಂಠಪಾಠ ಮಾಡುವುದರಿಂದ ಏನೂ ಲಾಭವಿಲ್ಲ. ಹಿಂದಿನ ಕಾಲದಲ್ಲಿ ಬ್ರಾಹ್ಮಣರು ವೇದಗಳ ಮಂತ್ರಗಳನ್ನು ನೆನಪಿಟ್ಟುಕೊಳ್ಳುತ್ತಿದ್ದರು. ನಾಲ್ಕೂ ವೇದಗಳನ್ನು ಕಂಠಪಾಠ ಮಾಡುತ್ತಿದ್ದರು. ಮೂರು ವೇದಗಳನ್ನು ಕಂಠಪಾಠ ಮಾಡಿದವರನ್ನು ತ್ರಿವೇದಿ ಎಂತಲೂ, ನಾಲ್ಕು ವೇದಗಳನ್ನು ಕಂಠಪಾಠ ಮಾಡಿದವರನ್ನು ಚತುರ್ವೇದಿ ಎಂತಲೂ ಕರೆಯುತ್ತಿದ್ದರು. ಆದರೆ ಈ ವೇದಗಳ ಗೂಢಾರ್ಥದ ಜ್ಞಾನವಿಲ್ಲದ ಕಾರಣ ಆ ಋಷಿಗಳು ವೇದಗಳನ್ನು ಓದಿ, ಅರೆದು ಕುಡಿದಿದ್ದರೂ ಸಹ ಅವರು ಅಜ್ಞಾನಿಗಳಾಗಿಯೇ ಉಳಿದರು. ಸೂಕ್ಷ್ಮವೇದದಲ್ಲಿ ಹೇಳಿದೆ:–

ಪೀಠ್ ಮನುಖಾ ದಾಖ್ ಲದೀ ಹೈ, ಊಂಟ್ ಖಾತ್ ಬಬೂಲ್ ॥

ಇದರ ಭಾವಾರ್ಥವೇನೆಂದರೆ, ಹಿಂದಿನ ಕಾಲದಲ್ಲಿ ಮರುಭೂಮಿಗಳಲ್ಲಿ ಒಂಟೆಯ ಮೇಲೆ ಒಣ ದ್ರಾಕ್ಷಿ ಹೊರೆಸಿ ಸಾಗಿಸಲಾಗುತ್ತಿತ್ತು. ಒಂಟೆಯ ಬೆನ್ನ ಮೇಲೆ ಅಂಥಾ ಸ್ವಾದಿಷ್ಟ ಒಣ ದ್ರಾಕ್ಷಿ ಇದ್ದರೂ ಅದು ಮಾತ್ರ ಜಾಲಿಯ ಮರದ ಮುಳ್ಳುಗಳಿಂದ ತನ್ನ ಮುಖವನ್ನು ಚುಚ್ಚಿಸಿಕೊಳ್ಳುತ್ತಾ, ಆ ಮರದ ಎಲೆಗಳನ್ನು ತಿನ್ನುತ್ತಾ ಮುಂದೆ ಸಾಗುತ್ತಿತ್ತು. ಜ್ಞಾನದ ಅಭಾವದಿಂದ ಎಲ್ಲಾ ಋಷಿಗಳು ವೇದಗಳೆಂಬ ಸ್ವಾದಿಷ್ಟ ಒಣದ್ರಾಕ್ಷಿಯನ್ನು ಹೊತ್ತು ತಿರುಗುತ್ತಿದ್ದರು ಮತ್ತು ಪೂಜಿಸುತ್ತಿದ್ದರು ಕಾಲಬ್ರಹ್ಮನೆಂಬ ಜಾಲಿಯ ಮರವನ್ನು. ಆದ್ದರಿಂದ ಸನಾತನ ಪರಮಪದವೂ ಸಿಗುತ್ತಿರಲಿಲ್ಲ, ಪರಮ ಶಾಂತಿಯೂ ಲಭ್ಯವಾಗುತ್ತಿರಲಿಲ್ಲ. ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಬನ್‌ಜಾರೇ ಕೇ ಬೈಲ್ ಜ್ಯೋ, ಫಿರಾ ದೇಶ್–ವಿದೇಶ್ ।
ಖಾಂಡ್ ಛೋಡ್ ಭುಶ್ ಖಾತ್ ಹೈ, ಬಿನ್ ಸತ್‌ಗುರು ಉಪದೇಶ್ ॥

ಭಾವಾರ್ಥ:– ಇದರ ಭಾವಾರ್ಥವೇನೆಂದರೆ, ಮೊದಲಿನ ಕಾಲದಲ್ಲಿ ಎತ್ತುಗಳ ಮೇಲೆ ಕತ್ತೆಗಳ ರೀತಿಯಲ್ಲಿ ಮೂಟೆಗಳನ್ನು ಹೊರೆಸಿ, ಅದರಲ್ಲಿ ಸಕ್ಕರೆ ಇತ್ಯಾದಿ ತುಂಬಿಕೊಂಡು ಅಲೆಮಾರಿಗಳು ಅಂದರೆ ವ್ಯಾಪಾರಿಗಳು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಎತ್ತಿನ ಬೆನ್ನಿನ ಮೇಲೆ ದವಸಗಳ, ಸಕ್ಕರೆಯ ಮೂಟೆಗಳಿದ್ದರೂ, ಅದು ಮಾತ್ರ ಬೂಸಾ ತಿನ್ನುತ್ತಿತ್ತು. ಇದೇ ರೀತಿ ಗುರುವಿನ ಮೂಲಕ ತತ್ವಜ್ಞಾನವು ಸಿಗದ ಕಾರಣ ಋಷಿಗಳು ವೇದಗಳೆಂಬ ಸಕ್ಕರೆಯನ್ನು ಬರೀ ಕಂಠಪಾಠ ಮಾಡಿಟ್ಟುಕೊಂಡಿರುತ್ತಿದ್ದರು. ಅದನ್ನು ಸರಿಯಾಗಿ

ಅರ್ಥ ಮಾಡಿಕೊಳ್ಳದೆ ವೇದ ವಿರುದ್ಧ ಸಾಧನೆ ಮಾಡುತ್ತಿದ್ದರು.

ಉದಾಹರಣೆಗೆ:– ಶ್ರೀ ದೇವಿ ಪುರಾಣದ (ಗೀತಾಪ್ರೇಸ್ ಗೋರಖ್‌ಪುರದಿಂದ ಪ್ರಕಾಶಿತಗೊಂಡ) 6ನೇ ಸ್ಕಂದದ 341ನೇ ಪುಟದಲ್ಲಿ ಬರೆಯಲಾಗಿದೆ :– ವೇದವ್ಯಾಸರು ಹೇಳಿದ್ದಾರೆ ಸತ್ಯಯುಗದ ಬ್ರಾಹ್ಮಣರು ವೇದಗಳ ಪೂರ್ಣ ವಿದ್ವಾಂಸರಾಗಿದ್ದರು. ಅವರು ದೇವಿ ಅಂದರೆ ಶ್ರೀ ದುರ್ಗೆಯ ಪೂಜೆ ಮಾಡುತ್ತಿದ್ದರು. ಪ್ರತೀ ಗ್ರಾಮದಲ್ಲೂ ದೇವಿಯ ಮಂದಿರಗಳು ಕಟ್ಟಿಸುವುದರಲ್ಲಿ ಅವರಿಗೆ ಪ್ರಬಲ ಇಚ್ಛೇ ಇತ್ತು.

ಓದುಗರೇ ಸ್ವಲ್ಪ ಯೋಚಿಸಿ:–

ನಾಲ್ಕೂ ವೇದಗಳಲ್ಲಿ ಹಾಗೂ ಆ ವೇದಗಳ ಸಾರಾಂಶವಾದ ಶ್ರೀಮದ್ ಭಗವದ್ಗೀತೆಯಲ್ಲಿ ಎಲ್ಲಿಯೂ ದೇವಿಯ ಪೂಜೆ ಮಾಡಲು ನಿರ್ದೇಶನವಿಲ್ಲ. ಹಾಗಾದರೆ ಸತ್ಯಯುಗದ ಬ್ರಾಹ್ಮಣರೆಲ್ಲಾ ಎಂಥ ವಿದ್ವಾಂಸರು ವೇದಗಳ? ಇದೇ ದೇವಿ ಪುರಾಣದ 7ನೇ ಸ್ಕಂದದ 462, 463ನೇ ಪುಟದಲ್ಲಿ ದೇವಿಯು ಹಿಮಾಲಯ ರಾಜನಿಗೆ ಹೇಳಿದ್ದಾಳೆ.“ ನೀನು ನನ್ನ ಪೂಜೆಯನ್ನು ಸಹ ತ್ಯಜಿಸಿಬಿಡು. ಒಂದು ವೇಳೆ ಬ್ರಹ್ಮ ಪ್ರಾಪ್ತಿ ಮಾಡುವುದಾದರೆ ಉಳಿದೆಲ್ಲಾ ಮಾತುಗಳನ್ನು ಪಕ್ಕಕ್ಕಿಟ್ಟು ಕೇವಲ ‘ಓಂ’ ನ ಜಪ ಮಾಡು. ಇದು ಬ್ರಹ್ಮನ ಮಂತ್ರ. ಇದರಿಂದ ಬ್ರಹ್ಮನನ್ನು ಪಡೆಯಬಹುದು. ಆ ಬ್ರಹ್ಮನು ಬ್ರಹ್ಮಲೋಕವೆಂಬ ದಿವ್ಯ ಆಕಾಶದಲ್ಲಿರುತ್ತಾನೆ. ಸತ್ಯಯುಗದ ಬ್ರಾಹ್ಮಣರ ಈ ರೀತಿಯ ಜ್ಞಾನ ಮತ್ತು ಸಾಧನೆ ಇತ್ತೆಂದರೆ ವರ್ತಮಾನದ ಬ್ರಾಹ್ಮಣರಿಗೆ ಇನ್ಯಾವ ರೀತಿಯ ಜ್ಞಾನವಿರಬಹುದು ಎಂದು ಓದುಗರು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ದೇವಿ ಪುರಾಣದ 6ನೇ ಸ್ಕಂದದ 342ನೇ ಪುಟದಲ್ಲಿ ಬರೆದಿರುವಂತೆ, ಸತ್ಯಯುಗದಲ್ಲಿ ಯಾರನ್ನು ರಾಕ್ಷಸರೆಂದು ತಿಳಿಯುತ್ತಿದ್ದರೋ ಅವರನ್ನೇ ಕಲಿಯುಗದಲ್ಲಿ ಬ್ರಾಹ್ಮಣರೆಂದು ಭಾವಿಸಲಾಗಿದೆ. ಬ್ರಾಹ್ಮಣ ಎನ್ನುವುದು ಯಾವುದೇ ಜಾತಿ ವಿಶೇಷವಲ್ಲ. ಯಾರು ಪರಮಾತ್ಮನನ್ನು ಅರ್ಥಾತ್ ಬ್ರಹ್ಮನಿಗಾಗಿ ಪ್ರಯತ್ನಶೀಲನಾಗಿರುವರೋ ಅವರು ಯಾವುದೇ ಜಾತಿಯವರಾಗಿದ್ದರೂ ಸಹ ಅವರೇ ಬ್ರಾಹ್ಮಣರೆಂದು ಕರೆಯಲ್ಪಡುವರು. ವರ್ತಮಾನದಲ್ಲಿ ಪರಂಪರಾಗತ ಬ್ರಾಹ್ಮಣರು ಕಡಿಮೆ. ಸಂತರ ರೂಪದಲ್ಲಿ ತತ್ವಜ್ಞಾನವನ್ನು ನೀಡುವವರು ಅಧಿಕವಾಗಿದ್ದಾರೆ. ಬ್ರಾಹ್ಮಣರು ಅರ್ಥಾತ್ ಮಾರ್ಗದರ್ಶಕ ಗುರುಗಳೆಂದು ಕರೆಸಿಕೊಳ್ಳುವವರು ಮತ್ತು ತತ್ವಜ್ಞಾನಹೀನರು. ಆದ್ದರಿಂದ ತತ್ವದರ್ಶಿ ಗುರುವನ್ನು ಬಿಟ್ಟು ಬೇರೆ ಯಾರಿಗೂ ಗೂಢ ರಹಸ್ಯಗಳ ಜ್ಞಾನವಿರುವುದಿಲ್ಲ ಎಂದು ಹೇಳಬಹುದು. ಆ ಕಾರಣದಿಂದ ವೇದಗಳನ್ನು ಓದುತ್ತಿದ್ದರು ಅದರೆ ಆ ರೀತಿಯ ಸಾಧನೆ ಮಾಡದೆ, ವೇದಗಳ ವಿರುದ್ಧವಾಗಿ ಸಾಧನೆ ಮಾಡುತ್ತಿದ್ದರು. ವೇದ ಹಾಗೂ ಗೀತೆಯಲ್ಲಿ ಮೂರು ದೇವರ (ಬ್ರಹ್ಮಾ, ವಿಷ್ಣು, ಮಹೇಶ್ವರ) ರನ್ನು ಪೂಜಿಸುವುದು ನಿಷೇಧಿಸಲಾಗಿದೆ. ಸರ್ವ ಹಿಂದೂ ಸಮಾಜವನ್ನು ಜ್ಞಾನಹೀನ ಸಂತರು ಈ ಮೂವರು ದೇವರ ಮೇಲೆ ಕೇಂದ್ರೀಕರಿಸಿದ್ದಾರೆ. ಶ್ರೀದೇವಿ ದುರ್ಗೆ ಮತ್ತು ವಿಷ್ಣು, ಶಿವನ ಭಕ್ತಿಯನ್ನು ಮಾಡುವರು ಹಾಗೂ ಮಾಡಿಸುತ್ತಿದ್ದಾರೆ. ಮೊದಲಿನಿಂದಲೂ ಈ ಲೋಕವೇದದ (ಕಟ್ಟುಕತೆಯ) ಜ್ಞಾನವೇ ಪ್ರಚಲಿತದಲ್ಲಿದೆ. ಇದು ನನ್ನ ಮುಂದೆ ಗೋಡೆಯಾಗಿ ಅಡ್ಡ ನಿಂತಿದೆ. ನಾನು ಶಾಸ್ತ್ರೋಕ್ತವಾದ ಜ್ಞಾನವನ್ನು ತಿಳಿಸುತ್ತೇನೆ. ಪ್ರೊಜೆಕ್ಟರ್ ಮೇಲೆ ತೋರಿಸುತ್ತೇನೆ. ಆದರೆ ಮೊದಲಿನ ಅಜ್ಞಾನವನ್ನು ಸತ್ಯವೆಂದು ತಿಳಿದು, ಸತ್ಯವನ್ನು ಕಣ್ಣುಗಳಿಂದ ನೋಡಿದರೂ ಸಹ ನಂಬದೆ, ವಿರೋಧಿಸುವವರೇ ಇಲ್ಲಿ ತುಂಬಿದ್ದಾರೆ. ಜೈಲಿಗೆ ಕಳುಹಿಸುತ್ತಾರೆ.

ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಗರೀಬ್, ವೇದ್ ಪಢೈ ಪರ್ ಭೇದ್ ನ ಜಾನೆಂ, ಬಾಂಚೈ ಪುರಾಣ್ ಅಠಾರಹ್ ।
ಪತ್ಥರ್ ಕೀ ಪೂಜಾ ಕರೆ, ಬಿಸರೆ ಸಿರ್‌ಜನ್‌ಹಾರಾ ॥

ಭಾವಾರ್ಥ:– ವೇದ ಮತ್ತು 18 ಪುರಾಣಗಳನ್ನು ಓದುತ್ತಾರೆ ಮತ್ತು ಮೂರ್ತಿ ಪೂಜೆಯನ್ನು ಮಾಡುತ್ತಾರೆ. ಆದರೆ ವೇದೋಕ್ತವಾದ ಎಲ್ಲರ ಸೃಷ್ಟಿ ಮಾಡಿದ ಪರಮ ಅಕ್ಷರ

ಬ್ರಹ್ಮನನ್ನು ಮರೆತುಬಿಟ್ಟಿದ್ದಾರೆ. ಅನ್ಯ ದೈವಗಳ ಪೂಜೆಯನ್ನು ಮಾಡಿ ಆ ಪರಮ ಶಕ್ತಿ ಮತ್ತು ಸನಾತನ ಪರಮಧಾಮ ಅರ್ಥಾತ್ ಪರಮೇಶ್ವರನ ಆ ಪರಮ ಪದದಿಂದ ವಂಚಿತರಾಗುತ್ತಾರೆ ಎನ್ನುವುದು ಇದರ ಬಾವಾರ್ಥ. ಇದನ್ನು ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ ಹಾಗೂ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಲಾಗಿದೆ.

ಸೂಕ್ಷ್ಮವೇದದಲ್ಲಿ ಬರೆಯಲಾಗಿದೆ:–

ಗುರುವಾಂ ಗಾಮ್ ಬಿಬಾಡೆ ಸಂತೋ, ಗುರುವಾಂ ಗಾಮ್ ಬಿಗಾಡೆ ।
ಐಸೆ ಕರ್ಮ್ ಜೀವ್ ಕೆ ಲಾ ದಿಯೇ, ಫಿರ್ ಝುಡ್ಯೆ ನಹೀ ಝಾಡೆ ॥

ಭಾವಾರ್ಥ:– ವೇದಗಳ ಜ್ಞಾನವನ್ನರಿಯದ ಹಾಗೂ ತತ್ವಜ್ಞಾನವನ್ನರಿಯದ ಗುರುಗಳು ಹಳ್ಳಿ ಹಳ್ಳಿಯಲ್ಲೂ ಶಾಸ್ತ್ರವಿರುದ್ಧವಾದ ಜ್ಞಾನ ಮತ್ತು ಭಕ್ತಿಯ ಅಜ್ಞಾನವನ್ನು ಎಲ್ಲರಿಗೂ ತಿಳಿಸುತ್ತಾ ಜನರನ್ನು ಭ್ರಮೆಗೆ ಒಳಪಡಿಸುತ್ತಾರೆ. ಅವರಿಗೆ ಎಷ್ಟೇ ಹೇಳಿದರೂ ಶಾಸ್ತ್ರವಿರುದ್ಧವಾದ ಸಾಧನೆಯನ್ನು ಬಿಡಲು ಅವರು ಸಿದ್ಧರಿರುವುದಿಲ್ಲ.

ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ಶಾಸ್ತ್ರವಿಧಾನಗಳನ್ನು ತ್ಯಜಿಸಿ ಮನಸ್ಸಿಗೆ ಬಂದ ಹಾಗೆ ಆಚರಣೆಗಳನ್ನು ಮಾಡುವುದರಿಂದ ಸಿದ್ಧಿಯೂ ಪ್ರಾಪ್ತಿಯಾಗುವುದಿಲ್ಲ. ಸುಖವೂ ದೊರೆಯುವುದಿಲ್ಲ, ಮೋಕ್ಷ ಪ್ರಾಪ್ತಿಯೂ ಸಾಧ್ಯವಿಲ್ಲ. ಅಂದರೆ ಎಲ್ಲಾ ಸಾಧನೆಯೂ ವ್ಯರ್ಥವಾಗಿದೆ.

ಇನ್ನೊಂದೆಡೆ, ಚುಣಕ ಮಹರ್ಷಿಗಳಿಗೆ ಸಿದ್ಧಿಗಳು ಒಲಿದಿದ್ದವು ಎಂದು ಚುಣಕ ಋಷಿಗಳ ಕತೆಯಲ್ಲಿ ನೀವು ಓದಿದ್ದೀರಾ, ಈಗ ನೀವು ಸಿದ್ಧಿಯು ಭಕ್ತಿಯ ಬೈಪ್ರಾಡಕ್ಟ್ ಎಂದು ತಿಳಿಯಬೇಕು. ಹೇಗೆಂದರೆ ನವಣೆಯ ಮೇಲೆ ಕವಚ ಹೆಚ್ಚು ಇರುತ್ತದೆ. ಪಶುಗಳು ಅದನ್ನು ತಿನ್ನುವಾಗ ಬಾಯಿಯಲ್ಲಿ ಗಾಯ ಮಾಡುತ್ತದೆ. ಇದೇ ರೀತಿ ಚುಣಕ ಋಷಿಗಳಿಗೆ ಪ್ರಾಪ್ತವಾಗಿದ್ದ ಸಿದ್ಧಿಯು ಕಾಲಬ್ರಹ್ಮನ ಭಕ್ತಿಯಿಂದ ಪ್ರಾಪ್ತವಾಗಿದೆ.

ಶಾಸ್ತ್ರವಿಧಿ ಅನುಸಾರ ಭಕ್ತಿ ಮಾಡುವುದರಿಂದ ಸಿದ್ಧಿಯು ಪ್ರಾಪ್ತವಾಗುತ್ತದೆ. ಅದು ಗೋಧಿಯ ಹೊಟ್ಟು ಇದ್ದಂತೆ ಎಂದು ತಿಳಿಯಿರಿ. ಅದು ಪಶುಗಳಿಗೆ ಒಳ್ಳೆಯದು ಹಾಗು ತಿನ್ನಲೂ ಸುಲಭವಾಗಿರುತ್ತದೆ. ಶಾಸ್ತ್ರಬದ್ಧವಾಗಿ ಸಾಧನೆ ಮಾಡದಿದ್ದಾಗ, ಸಿಗುವ ಸಿದ್ಧಿಗಳು ಸಾಧಕನನ್ನೇ ನಾಶಮಾಡುವುದು. ಏಕೆಂದರೆ ಅಜ್ಞಾನದಿಂದ ಋಷಿಗಳು ಅದರ ಪ್ರಯೋಗವನ್ನು ಮಾಡಿ ಯಾರಿಗಾದರೂ ಹಾನಿ ಉಂಟು ಮಾಡಬಹುದು, ಯಾರಿಗಾದರೂ ಆಶೀರ್ವಾದ ನೀಡಿ ತಮ್ಮ ಓಂ ನಾಮದ ಜಪದಿಂದ ಪ್ರಾಪ್ತವಾದ ಭಕ್ತಿಯ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಆಗ ಅವರ ಕೈಯ್ಯಲ್ಲಿದ್ದ ಸಿದ್ಧಿಶಕ್ತಿಯೆಲ್ಲಾ ಮುಗಿದು ಬಿಡುತ್ತದೆ.

ಮಾನ್‌ಧಾತಾ ಚಕ್ರವರ್ತಿಯ 72 ಕೋಟಿ ಸೈನ್ಯವನ್ನು ಚುಣಕ ಮಹರ್ಷಿಗಳು ನಾಶಪಡಿಸಿದ ಕಾರಣ ಅವರು ತಮ್ಮ ಭಕ್ತಿಯಿಂದ ಗಳಿಸಿದ್ದ ಸಿದ್ಧಿಗಳನ್ನೂ ಕಳೆದುಕೊಂಡರು.

ಸೂಕ್ಷ್ಮವೇದದಲ್ಲಿ ಹೇಳಲಾಗಿದೆ:–

ಗರೀಬ್, ಬಹತರ್ ಕ್ಷೌಣೀ ಕ್ಷಯ್ ಕರೀ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇ ಔರಾ (ಮೃತ್ಯು) ಫಿರೈ, ಸಬ್ ಹೀ ಕಾಲ್ ಕೇ ಭೇಷ್ ॥

ಭಾವಾರ್ಥ:– ಋಷಿಗಳಲ್ಲಿ ಸರ್ವಶ್ರೇಷ್ಠ ಋಷಿಗಳಾದ ಚುಣಕ ಮಹರ್ಷಿಗಳು 72 ಕೋಟಿ ಸೈನ್ಯವನ್ನು ನಾಶಪಡಿಸಿದರು. ಇವರಂತೂ ಮಹಾತ್ಮರಂತೆ ಕಾಣುತ್ತಾರೆ, ಆದರೆ ಇವರ ಬಳಿ ದ್ವೇಷ ಕಟ್ಟಿಕೊಂಡರೆ, ಇವರು ಹಾವಿನಂತೆ, ಸಣ್ಣ ಪುಟ್ಟ ಮಾತಿಗೂ ಶಾಪಕೊಡುವುದು, ಕಾರಣವಿಲ್ಲದೇ ಜಗಳವಾಡುವುದು, ದ್ವೇಷ ಕಟ್ಟಿಕೊಳ್ಳುವುದು ಇವರಿಗೆ ತೀರಾ ಸಾಮಾನ್ಯವಾದ ಮಾತು ಎನ್ನುವುದು ಇದರ ಭಾವಾರ್ಥ.

## "ಋಷಿ ದೂರ್ವಾಸರ ಕಾರ್ಯಕುಶಲತೆ"

ದೂರ್ವಾಸರೆಂಬ ಒಬ್ಬ ಕಾಲಬ್ರಹ್ಮನ ಉಪಾಸಕರಿದ್ದರು. ಒಮ್ಮೆ ಅವರು ನಡೆದುಕೊಂಡು ಹೋಗುತ್ತಿರ್ದಾಗ ದಾರಿಯಲ್ಲಿ ಅವರಿಗೆ ಸುಂದರವಾದ ಮುತ್ತಿನ ಹಾರವನ್ನು ಧರಿಸಿದ ಒಬ್ಬಳು ಅಪ್ಸರೆ (ಸ್ವರ್ಗದ ಸ್ತ್ರೀ) ಕಾಣಿಸಿದಳು. ಋಷಿ ದೂರ್ವಾಸ, 'ಮುತ್ತಿನ ಹಾರವನ್ನು ತನಗೆ ಕೊಡು' ಎಂದು ಅಪ್ಸರೆಯನ್ನು ಕೇಳಿದರು. ಅಪ್ಸರೆಗೆ ಇವರ ಕೋಪ ಹಾವಿನ ದ್ವೇಷದಂತೆ ಎಂಬ ಅರಿವಿದ್ದು, ಒಂದು ವೇಳೆ ಕೊಡಲು ನಿರಾಕರಿಸಿದರೆ ಶಾಪ ನೀಡುವರೆಂದು ಗೊತ್ತಿತ್ತು. ಆದ್ದರಿಂದ ತಕ್ಷಣ ತನ್ನ ಕೊರಳಿನಿಂದ ಹಾರವನ್ನು ತೆಗೆದು, ಆದರಪೂರ್ವಕವಾಗಿ ಅವರ ಕೈಯ್ಯಲ್ಲಿಟ್ಟಳು. ದೂರ್ವಾಸ ಋಷಿ ಆ ಮುತ್ತಿನ ಹಾರವನ್ನು ತಮ್ಮ ತಲೆಯ ಮೇಲಿನ ಜಟೆಯಲ್ಲಿರಿಸಿಕೊಂಡರು. ನಂತರ ತಮ್ಮ ಪ್ರಯಾಣವನ್ನು ಮುಂದುವರಿಸಿದರು. ಎದುರಿನಿಂದ ಸ್ವರ್ಗಾಧಿಪತಿಯಾದ ಇಂದ್ರನು ತನ್ನ ಐರಾವತ ಆನೆಯ ಮೇಲೆ ಕುಳಿತು ಬರುತ್ತಿದ್ದನು. ಅವನ ಮುಂದೆ ಅಪ್ಸರೆಯರೂ, ಗಂಧರ್ವರೂ ಹಾಡುತ್ತಾ, ವಾದ್ಯಗಳನ್ನು ನುಡಿಸುತ್ತಾ ನಡೆಯುತ್ತಿದ್ದರು, ಇನ್ನೂ ಕೋಟಿ-ಕೋಟಿ ಸಂಖ್ಯೆಯಲ್ಲಿ ದೇವತೆಗಳು ಅವನ ಗೌರವಕ್ಕಾಗಿ ಜೊತೆಯಲ್ಲಿ ಸಾಗುತ್ತಿದ್ದರು. ದೂರ್ವಾಸ ಋಷಿಗಳು ತಮ್ಮ ಜಟೆಯಲ್ಲಿದ್ದ ಮಾಲೆಯನ್ನು ತೆಗೆದು ಇಂದ್ರನ ಕಡೆಗೆ ಎಸೆದರು. ಇಂದ್ರನು ಆ ಮಾಲೆಯನ್ನು ಐರಾವತದ ಮೇಲೆ ಇಟ್ಟನು. ಆ ಐರಾವತವು ಆ ಮಾಲೆಯನ್ನು ನೆಲದ ಮೇಲೆ ಎಸೆದು ಬಿಟ್ಟಿತು. ಯಾವ ರೀತಿಯಲ್ಲಿ ಅಂದರೆ ಇಂದ್ರನಿಗೆ ಯಾರಾದರೂ ಭಕ್ತ ಅಥವಾ ದೇವತೆ ಹೂಮಾಲೆಯನ್ನು ಅರ್ಪಿಸಿದರೆ ಇಂದ್ರನು ಆ ಮಾಲೆಯನ್ನು ಐರಾವತದ ಕೊರಳಿಗೆ ಹಾಕುತ್ತಿದ್ದನು ಆನೆ ಮೇಲೆ ಕುಳಿತಾಗ. ಆಗ ಐರಾವತವು ಆ ಮಾಲೆಯನ್ನು ತೆಗೆದು ನೆಲದ ಮೇಲೆ ಎಸೆಯುತ್ತಿತ್ತು. ಅದೇ ರೀತಿ ಈ ಬಾರಿಯೂ ಐರಾವತವು ಮುತ್ತಿನ ಮಾಲೆಯನ್ನು ನೆಲದ ಮೇಲೆ ಎಸೆಯಿತು. ಈ ಘಟನೆಯಿಂದ ಸಿಟ್ಟುಗೊಂಡ ದೂರ್ವಾಸರು ಇಂದ್ರನನ್ನು ಕುರಿತು ಈ ರೀತಿಯಾಗಿ ಹೇಳಿದರು. "ಹೇ ಇಂದ್ರನೇ, ನಿನಗೆ ರಾಜ್ಯಾಧಿಕಾರದ ಅಹಂಕಾರವಿದೆ. ನನ್ನಿಂದ ಕೊಡಲ್ಪಟ್ಟ ಮಾಲೆಗೆ ನೀನು ಅನಾದರ ತೋರಿಸಿರುವೆ. ಆದ್ದರಿಂದ ನಾನು ನಿನಗೆ ಶಾಪ ನೀಡುತ್ತಿರುವೆನು. ಇಗೋ, ನಿನ್ನ ಸಂಪೂರ್ಣ ರಾಜ್ಯ ನಾಶವಾಗಿ ಹೋಗಲಿ." ಮರುಕ್ಷಣವೇ ದೇವರಾಜ ಇಂದ್ರನು ನಡುಗಲಾರಂಭಿಸಿದನು. ನಂತರ ಈ ರೀತಿ ಹೇಳಿದನು. "ಹೇ ವಿಪ್ರವರ್ಯಾ, ನಾನು ನಿಮ್ಮಿಂದ ಪಡೆದ ಮುತ್ತಿನ ಹಾರವನ್ನು ಗೌರವದಿಂದ ಪಡೆದು ನನ್ನ ಆನೆಯ ಮೇಲಿರಿಸಿದೆನು. ಆನೆಯು ತನ್ನ ನಿತ್ಯಕ್ರಮದ ಕಾರಣ ಕೆಳಗೆ ಇಟ್ಟಿತು. ನನ್ನನ್ನು ಕ್ಷಮಿಸಿರಿ". ಈ ರೀತಿಯಾಗಿ ಪದೇ-ಪದೇ ಕೈಜೋಡಿಸುತ್ತಾ, ಆನೆಯಿಂದ ಕೆಳಗಿಳಿದು ಸಾಷ್ಟಾಂಗ ನಮಸ್ಕಾರವನ್ನೂ ಮಾಡಿ ಕ್ಷಮೆ ಯಾಚಿಸಿದನು. ಆದರೆ ದೂರ್ವಾಸ ಋಷಿಗಳು ಕ್ಷಮೆಯನ್ನು ಸ್ವೀಕರಿಸದೆ ಹೀಗೆಂದರು, "ನನ್ನ ಬಾಯಿಂದ ನುಡಿದ ಮಾತು ಮತ್ತೆ ಮರಳಿ ಪಡೆಯುವುದು ಸಾಧ್ಯವಿಲ್ಲ." ಹಾಗೆ ನುಡಿದ ಸ್ವಲ್ಪ ಸಮಯದಲ್ಲೇ ಇಂದ್ರನ ಸರ್ವನಾಶವಾಯಿತು. ಸ್ವರ್ಗ ಹಾಳಾಗಿಹೋಯಿತು.

❖ ಒಂದು ಬಾರಿ ದೂರ್ವಾಸ ಋಷಿಗಳು ದ್ವಾರಕಾ ನಗರದ ಬಳಿಯ ಕಾಡಿನಲ್ಲಿ ಕೆಲ ಸಮಯ ಉಳಿದುಕೊಂಡಿದ್ದರು. ದ್ವಾರಕಾವಾಸಿಗಳಿಗೆ ಈ ವಿಷಯ ತಿಳಿಯಿತು. ಅವರು ತ್ರಿಕಾಲಜ್ಞಾನಿಗಳೂ, ಮಹಾತ್ಮರೂ, ಸಿದ್ಧಿ ಪಡೆದ ಋಷಿಗಳೆಂದೂ ಜನರು ಅರಿತಿದ್ದರು. ಆದರೆ ಆ ಜನರು ತಮ್ಮ ಕೃಷ್ಣನಿಗಿಂತ ಅಧಿಕ ಶಕ್ತಿಶಾಲಿಗಳಾರೂ ಇಲ್ಲವೆಂದು ನಂಬಿದ್ದರು. ಶ್ರೀಕೃಷ್ಣನ ಮಗ ಶ್ರೀ ಪ್ರದ್ಯುಮ್ನನ ಜೊತೆಗೂಡಿ ಕೆಲವು ಯಾದವರು ಒಂದು ಉಪಾಯವನ್ನು ಮಾಡಿದರು. ದೂರ್ವಾಸ ಮುನಿಗಳು ತ್ರಿಕಾಲದರ್ಶಿಗಳು, ಇನ್ನೊಬ್ಬರ ಮನದ ವಿಚಾರವನ್ನು ತಿಳಿಸಬಲ್ಲರು. ಅಂತರ್ಯಾಮಿ ಕೂಡಾ, ಅವರ ಪರೀಕ್ಷೆಯನ್ನು ಮಾಡಲು ಯೋಚಿಸಿದರು. ಈ ವಿಚಾರಮಾಡಿ ಪ್ರದ್ಯುಮ್ನನಿಗೆ ಗರ್ಭವತಿ ಸ್ತ್ರೀಯಂತೆ ವೇಷ ಹಾಕಿ ಅವನ ಜೊತೆಯಲ್ಲಿ ಹತ್ತು-ಹನ್ನೆರಡು ಜನ ದೂರ್ವಾಸರ ಬಳಿ ಹೋದರು. ಅವರಲ್ಲೇ ಒಬ್ಬನನ್ನು ಗರ್ಭವತಿ ಸ್ತ್ರೀಯ ಪತಿಯನ್ನಾಗಿಯೂ ಮಾಡಿದರು. ದೂರ್ವಾಸರನ್ನು ಕುರಿತು ಈ ರೀತಿಯಾಗಿ ಹೇಳಿದರು. "ಹೇ ಋಷಿವರ್ಯಾ, ಈ ಸ್ತ್ರೀಗೆ ಬಹಳ ವರ್ಷಗಳ ನಂತರ ಭಗವಂತನ ಕೃಪೆಯಾಗಿದೆ,

ಈಕೆಗೆ ಗರ್ಭ ನಿಂತಿದೆ. ಈತ ಈಕೆಯ ಪತಿ. ಇವರಿಬ್ಬರೂ ಗರ್ಭದಲ್ಲಿ ಹೆಣ್ಣು ಮಗುವಿದೆಯೋ? ಅಥವಾ ಗಂಡು ಮಗುವಿದೆಯೋ? ಎಂದು ತಿಳಿದುಕೊಳ್ಳಲು ಬಹಳ ಉತ್ಸುಕರಾಗಿದ್ದಾರೆ. ನೀವು ಅಂತರ್ಯಾಮಿಗಳು. ಕೃಪೆ ತೋರಿ ತಿಳಿಸುವಿರಾ?" ಅವರು ಪ್ರದ್ಯುಮ್ನನ ಹೊಟ್ಟೆಗೆ ಒಂದು ಸಣ್ಣ ಕಡಾಯಿ ಕಟ್ಟಿಟ್ಟಿದ್ದರು ಅದರ ಮೇಲೆ ಹತ್ತಿಯ ಉಣ್ಣೆ ಮತ್ತು ಹಳೆಯ ಬಟ್ಟೆಯನ್ನು ಕಟ್ಟಿ ಗರ್ಭದಂತೆ ಮಾಡಿದ್ದರು. ನಂತರ ಮೇಲೆ ಸ್ತ್ರೀಯಂತೆ ಬಟ್ಟೆಯನ್ನು ತೊಡಿಸಿದ್ದರು. ಋಷಿ ದೂರ್ವಾಸರು ದಿವ್ಯ ದೃಷ್ಟಿಯಿಂದ ನೋಡಿ ತನ್ನೊಡನೆ ಕುಚೇಷ್ಟೆ ಮಾಡಲೆಂದೇ ಈ ರೀತಿಯಾಗಿ ಬಂದಿದ್ದಾರೆಂದು ಅರಿತು ಬಿಟ್ಟರು. ಆಗ ಕೋಪದಿಂದ ಈ ಮಾತುಗಳನ್ನು ನುಡಿದರು. "ಈ ಗರ್ಭದಿಂದ ಯಾದವ ಕುಲದ ನಾಶವಾಗುವುದು' ಈ ಮಾತು ಕೇಳಿದ ತಕ್ಷಣವೇ ಎಲ್ಲಾ ವ್ಯಕ್ತಿಗಳು ಅಲ್ಲಿಂದ ಓಡಿದರು.

ಋಷಿ ದೂರ್ವಾಸರು ಶಾಪ ಕೊಟ್ಟವರೆಂದೂ, ಆ ಶಾಪದಿಂದ ಯಾದವ ಕುಲವು ನಾಶವಾಗುವುದೆಂಬ ವಿಷಯವು ಕಾಡ್ಗಿಚ್ಚಿನಂತೆ ನಗರದಲ್ಲೆಲ್ಲಾ ಹರಡಿತು. ಅಖಿಲ ಬ್ರಹ್ಮಾಂಡದ ನಾಯಕ, ಶಕ್ತಿವಂತ ಶ್ರೀಕೃಷ್ಣ ತಮ್ಮ ಜೊತೆಯಲ್ಲಿದ್ದಾನೆ. ದೂರ್ವಾಸ ಮುನಿಗಳ ಶಾಪದ ಪ್ರಭಾವ ನಮ್ಮ ಮೇಲೆ ಪ್ರಭಾವ ಬೀರುವುದಿಲ್ಲ ಎಂಬ ನಂಬಿಕೆ ಯಾದವರಿಗೆ ಬಲವಾಗಿತ್ತು. ಆದರೂ ಕೂಡಾ ಕೆಲವು ಬುದ್ಧಿವಂತ ಯಾದವರು ಒಂದುಗೂಡಿ ಶ್ರೀಕೃಷ್ಣನ ಬಳಿಗೆ ಹೋಗಿ, ದೂರ್ವಾಸರ ಜೊತೆ ಮಕ್ಕಳು ಮಾಡಿದ ತಮಾಷೆಯನ್ನೂ, ಅದರಿಂದ ಕೋಪಗೊಂಡ ಋಷಿಗಳು ಕೊಟ್ಟ ಶಾಪದ ವೃತ್ತಾಂತವನ್ನೂ ವಿವರಿಸಿದರು. ಎಲ್ಲವನ್ನೂ ಕೇಳಿದ ಶ್ರೀಕೃಷ್ಣನು ಸ್ವಲ್ಪ ಹೊತ್ತಿನವರೆಗೆ ಯೋಚಿಸಿದ ನಂತರ ಹೇಳಿದನು. ಯಾವ ಮಕ್ಕಳು ದೂರ್ವಾಸರೊಡನೆ ತಮಾಷೆ ಮಾಡಿದ್ದರೋ ಆ ಮಕ್ಕಳನ್ನು ಜೊತೆಯಲ್ಲಿ ಕರೆದುಕೊಂಡು ಋಷಿಗಳ ಬಳಿ ಹೋಗಿ ಅವರಲ್ಲಿ ಕ್ಷಮಿಸುವಂತೆ ಪ್ರಾರ್ಥಿಸಿರಿ". ಅದರಂತೆ ಜನರೆಲ್ಲಾ ಋಷಿಯ ಬಳಿ ಸಾರಿ ಕ್ಷಮೆ ಕೋರಿದರು. ಆದರೆ ದೂರ್ವಾಸರು ಒಂದು ಬಾರಿ ಕೊಟ್ಟ ಶಾಪ ಮರಳಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬಿಟ್ಟರು.

ಎಲ್ಲಾ ಜನರು ಪುನಃ ಶ್ರೀಕೃಷ್ಣನ ಬಳಿಗೆ ಬಂದರು ಮತ್ತು ಎಲ್ಲಾ ಮಾತನ್ನು ವಿವರಿಸಿದರು. ಚಿಂತೆಯಿಂದಿದ್ದ ಜನರು ಅಡುಗೆಯನ್ನು ಸಹಾ ಮಾಡಲಿಲ್ಲ. ಎಲ್ಲಾ ನಗರವಾಸಿಗಳು ಬಹಳ ಚಿಂತಿತರಾಗಿದ್ದರು. ಶ್ರೀಕೃಷ್ಣನು ಚಿಂತೆ ಏಕೆಂದು ಕೇಳಿದನು. "ಯಾವ ವಸ್ತುವನ್ನು ಗರ್ಭದಂತೆ ಬಳಸಿದ್ದರೋ, ಅದರಿಂದ ನಮ್ಮ ವಿನಾಶವೆಂದು ಹೇಳಿದ್ದಾರಲ್ಲಾ. ಹೀಗೆ ಮಾಡಿ, ಬಟ್ಟೆ ಹಾಗೂ ಹತ್ತಿ ಸುಟ್ಟುಬಿಡಿ. ಲೋಹದ ಕಡಾಯಿಯನ್ನು ಕಲ್ಲಮೇಲೆ ಚೆನ್ನಾಗಿ ತೇದು ಪ್ರಭಾಸ ಕ್ಷೇತ್ರದಲ್ಲಿ (ಯಮುನಾ ನದಿ ದಂಡೆಯ ಮೇಲಿನ ಒಂದು ಕ್ಷೇತ್ರದ ಹೆಸರು ಅಲ್ಲಿ) ಯಮುನಾ ನದಿಯಲ್ಲಿ ಹಾಕಿಬಿಡಿ. ಅಲ್ಲೇ ಕುಳಿತು ತೇಯಬೇಕು. ಅಲ್ಲೇ ನದಿಯಲ್ಲಿ ಹಾಕಿಬಿಡಿ. ಅಲ್ಲೇ ಸುಟ್ಟು ಬೂದಿ ನೀರಿನಲ್ಲಿ ಹಾಕಿಬಿಡಿ. ಕೊಳಲೇ ಇಲ್ಲದ ಮೇಲೆ ಕೊಳಲನಾದವೆಲ್ಲಿಂದ ಬರಬೇಕು. ಯಾವಾಗ ಗರ್ಭದ ವಸ್ತುಗಳು ಇಲ್ಲವಾಗುತ್ತವೋ ಆವಾಗ ನಮ್ಮ ನಾಶ ಹೇಗೆ ಆಗುವುದು?" ಎಂದು ಹೇಳಿದನು, ಈ ಮಾತು ದ್ವಾರಿಕಾವಾಸಿಗಳಿಗೆ ಹಿಡಿಸಿತು. ಎಲ್ಲರೂ ಸಂಕಟದಿಂದ ಪಾರಾದೆವೆಂದು ಭಾವಿಸಿದರು. ಶ್ರೀಕೃಷ್ಣನ ಆದೇಶದಂತೆ ಎಲ್ಲವನ್ನೂ ಮಾಡಲಾಯಿತು. ಗಟ್ಟಿಯಾಗಿದ್ದ ಕಡಾಯಿಯ ಒಂದು ಹಿಡಿಯನ್ನು ಪೂರ್ಣವಾಗಿ ತೇಯಲಾಗಲಿಲ್ಲ. ಆ ತುಂಡು ಭಾಗವನ್ನು ಹಾಗೆಯೇ ಯಮುನಾನದಿಯಲ್ಲಿ ಎಸೆಯಲಾಯಿತು. ಆ ತುಂಡನ್ನು ಒಂದು ಮೀನು ಹೊಳೆಯುತ್ತಿರುವ ಹಾಗೂ ತಿನ್ನುವ ಒಂದು ಪದಾರ್ಥವೆಂದು ತಿಳಿದು ತಿಂದು ಬಿಟ್ಟಿತು. ಬಾಲಿಯಾನೆಂಬ ಭಿಲ್ಲನು (ಒಂದು ಜಾತಿಯ ಹೆಸರು) ಆ ಮೀನನ್ನು ಹಿಡಿದನು. ಮೀನನ್ನು ಕತ್ತರಿಸುವಾಗ ಆತನಿಗೆ ಈ ಲೋಹದ ತುಂಡು ದೊರೆಯಿತು. ಉತ್ತಮವಾದ ಲೋಹದ ತುಂಡೆಂದು ಪರೀಕ್ಷೆ ಮಾಡಿದ ನಂತರ ಅರಿವಾಯಿತು. ಆಗ ಅವನು ಅದನ್ನು ತನ್ನ ಬಾಣದ ತುದಿಯ ಭಾಗವನ್ನಾಗಿ ಮಾಡಿಕೊಂಡು, ವಿಷವನ್ನು ಸವರಿ, ಸುರಕ್ಷಿತವಾಗಿ ಇರಿಸಿದನು. ಲೋಹದ ಕಡಾಯಿಯ ತೇಯ್ದ ಭಾಗವು ನೀರಿನಲ್ಲಿ ಸೇರಿ, ಅದು ಮುಂಜ ಹುಲ್ಲಿನ ರೂಪ ತಾಳಿ, ನದಿ ತೀರದಲ್ಲೆಲ್ಲಾ ಬೆಳೆದು ನಿಂತವು.

ಸ್ವಲ್ಪ ಸಮಯದ ನಂತರ ದ್ವಾರಕಾ ನಗರದಲ್ಲಿ ಉಪದ್ರವ ಪ್ರಾರಂಭವಾಯಿತು. ಸಣ್ಣ ಸಣ್ಣ ಮಾತಿಗೆಲ್ಲಾ ಒಬ್ಬರನ್ನೊಬ್ಬರು ಕೊಲ್ಲಲು ಪ್ರಾರಂಭಿಸಿದರು. ಪರಸ್ಪರ ದ್ವೇಷ ಹೆಚ್ಚಲಾರಂಭಿಸಿತು. ನಗರದ ಜನರ ಈ ಸ್ಥಿತಿಯನ್ನು ಕಂಡು ಗಣ್ಯ ವ್ಯಕ್ತಿಗಳು ಭಗವಂತ ಶ್ರೀಕೃಷ್ಣನ ಬಳಿ ಹೋಗಿ, ನಗರದಲ್ಲಿ ನಡೆಯುತ್ತಿದ್ದ ವಿಷಯವನ್ನೆಲ್ಲಾ ಹೇಳಿದರು ಮತ್ತು ಈ ಘಟನೆಗೆ ಕಾರಣವೂ ಹಾಗೂ ಪರಿಹಾರವನ್ನು ಶ್ರೀಕೃಷ್ಣನಿಂದ ತಿಳಿಯುವ ಇಚ್ಛೆ ವ್ಯಕ್ತಪಡಿಸಿದರು. ಏಕೆಂದರೆ ಶ್ರೀಕೃಷ್ಣನು ಯಾದವ ಹಾಗೂ ಪಾಂಡವರ ಆಧ್ಯಾತ್ಮಿಕ ಗುರುವಾಗಿದ್ದನು. ಸಂಕಟದ ನಿವಾರಣೆ ಗುರುದೇವನಿಂದಲೇ ಮಾಡಲ್ಪಡುತ್ತದೆ. ಶ್ರೀಕೃಷ್ಣನು ದೂರ್ವಾಸ ಮುನಿಗಳ ಶಾಪದ ಫಲವೇ ಕಾರಣವೆಂದು ಹೇಳಿದನು, ಪರಿಹಾರವನ್ನೂ ತಿಳಿಸಿದನು. ಅದೇನೆಂದರೆ ಇವತ್ತೆ ಜನಿಸಿದ ಗಂಡುಮಗುವಿನಿಂದ ಹಿಡಿದು ಎಲ್ಲಾ ಪುರುಷರು ಪ್ರಭಾಸ ಕ್ಷೇತ್ರದಲ್ಲಿ, ಅಂದರೆ ಎಲ್ಲಿ ತಾವೆಲ್ಲಾ ಕಡಾಯಿಯ ಚೂರ್ಣವನ್ನು ನದಿಯಲ್ಲಿ ಹಾಕಿದ್ದಿರೋ ಅಲ್ಲಿ ಹೋಗಿ ಯಮುನೆಯಲ್ಲಿ ಸ್ನಾನ ಮಾಡಿದರೆ ನೀವು ಶಾಪ ಮುಕ್ತರಾಗುವಿರಿ"ಎಂದನು. ಎಲ್ಲಾ ದ್ವಾರಕವಾಸಿಗಳು ಶ್ರೀಕೃಷ್ಣನ ಆದೇಶವನ್ನು ಅನುಸರಿಸಿದರು. ಎಲ್ಲಾ ನರ ಯಾದವರು ಸ್ನಾನಮಾಡಿ ಶಾಪ ಮುಕ್ತರಾಗಿ ಪ್ರಭಾಸ ಕ್ಷೇತ್ರಕ್ಕೆ ನಡೆದರು. ಋಷಿ ದೂರ್ವಾಸರ ಶಾಪದ ಕಾರಣದಿಂದ ಎಲ್ಲಾ ಯಾದವರು ಒಟ್ಟಾಗಿ ಸೇರಿ ಅತ್ತ ನಡೆದರು. ಮೊದಲು ಸ್ನಾನ ಮಾಡುವುದರಿಂದ ಶಾಪ ವಿಮೋಚನೆಯಾಗಿ ನಂತರ ಪರಸ್ಪರ ಇರುವ ದ್ವೇಷ–ಅಸೂಯೆಗಳು ದೂರವಾಗಲಿ ಎಂಬ ಉದ್ದೇಶ ಅದಾಗಿತ್ತು. ಆದರೆ ಆ ರೀತಿ ಏನೂ ಆಗಲಿಲ್ಲ. ಎಲ್ಲರೂ ಮೊದಲು ಸ್ನಾನವನ್ನು ಮಾಡಿದರು. ನಂತರ ಪರಸ್ಪರ ಬೈಗುಳ–ನಿಂದನೆಗಳು ಶುರುವಾದವು. ನಂತರ ಆ ಮುಂಜ ಹುಲ್ಲನ್ನು ಕಿತ್ತುಕೊಂಡು ಅದರಿಂದಲೇ ಹೊಡೆದಾಡಲು ಪ್ರಾರಂಭಿಸಿದರು. ಆ ಮುಂಜ ಹುಲ್ಲು ಲೋಹದ ಬಾಣಲೆಯ ಚೂರ್ಣದಿಂದ ಬೆಳೆದಂತಹದಾಗಿತ್ತು. ಅದು ಕತ್ತಿಯಂತೆ ಕೆಲಸ ಮಾಡಲು ಪ್ರಾರಂಭಿಸಿತು. ಮುಂಜ ಹುಲ್ಲಿನಿಂದ ಹೊಡೆಯುತ್ತಿದ್ದ ಹಾಗೆ ತಲೆಯು ಕ್ಷಣಮಾತ್ರದಲ್ಲಿ ಬೇರೆಯಾಗಿ ಕೆಳಗೆ ಬಿಳುತ್ತಿತ್ತು. ಈ ರೀತಿಯಾಗಿ ಎಲ್ಲಾ ಯಾದವರು ಪರಸ್ಪರ ಹೊಡೆದಾಡಿ ಸಾವನ್ನಪ್ಪಿದರು. ಕೇವಲ 200 ಅಥವಾ 400 ಜನ ಬಾಕಿ ಉಳಿದಿದ್ದರು. ಅದೇ ಸಮಯದಲ್ಲಿ ಕೃಷ್ಣನು ಕೂಡಾ ಅಲ್ಲಿಗೆ ಬಂದು ತಲುಪಿದನು. ಅವನು ಕೂಡಾ ಆ ಮುಂಜ ಹುಲ್ಲನ್ನು ಕಿತ್ತು, ಅದನ್ನೇ ಲೋಹದಷ್ಟು ಗಟ್ಟಿಯಾದ ಅಸ್ತ್ರದಂತೆ ಬಳಸಿ, ಸ್ವಯಂ ಕೃಷ್ಣನೇ ಉಳಿದ ಯಾದವರನ್ನು ಸಾವಿನ ದವಡೆಗೆ ತಳ್ಳಿದನು.

ಇದರ ನಂತರ ಶ್ರೀಕೃಷ್ಣನು ಒಂದು ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದನು. ಇಷ್ಟರಲ್ಲಿ ದೇವಯೋಗದಿಂದ ಆ ಲೋಹದ ಕಡಾಯಿಯ ತುಂಡಿನಿಂದ ಬಿಲ್ಲಿನ ತುದಿಯ ಮೊನಚಾದ ಭಾಗವನ್ನು ವಿಷಯುಕ್ತಗೊಳಿಸಿ ತನ್ನ ಬಿಲ್ಲಿಗೆ ಅಳವಡಿಸಿದ ಬಾಲಿಯಾ ಹೆಸರಿನ ಭಿಲ್ಲನು ಆ ಸ್ಥಳದಲ್ಲಿ ಬೇಟೆಯನ್ನು ಹುಡುಕುತ್ತಾ ತಲುಪಿದನು, ಅಲ್ಲಿ ಕೃಷ್ಣನು ವಿಶ್ರಾಂತಿ ಪಡೆಯುತ್ತಿದ್ದನು. ಆ ದಿನ ಆತನ ಬಳಿ ಆ ವಿಷ ತುಂಬಿದ ಬಾಣವಿತ್ತು. ಶ್ರೀಕೃಷ್ಣನ ಬಲಗಾಲಿನ ಪಾದದ ಕೆಳಭಾಗದಲ್ಲಿ ಪದ್ಮದ (ತಾವರೆ) ಚಿತ್ರವಿತ್ತು. ಅದು 100 ವಾಟ್ಸ್‌ನ ಬಲ್ಬ್ ಎಷ್ಟು ಹೊಳೆಯುತ್ತದೆಯೋ, ಅಷ್ಟರಮಟ್ಟಿಗೆ ಹೊಳೆಯುತ್ತಿತ್ತು. ಮರದ ಶಾಖೆಗಳು ನೆಲದವರೆಗೆ ಇಳಿಬಿದ್ದಿತ್ತು. ಅವುಗಳ ಮಧ್ಯದಲ್ಲಿ ಕಾಲಿನಲ್ಲಿದ್ದ ಪದ್ಮದ ಹೊಳಪು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಈ ಕಾರಣದಿಂದ ಬಾಲಿಯಾ ಭಿಲ್ಲನು ಅದು ಜಿಂಕೆಯ ಕಣ್ಣೆಂದು ಭಾವಿಸಿ, ಅದನ್ನು ಕೊಲ್ಲುವ ಉದ್ದೇಶದಿಂದ ಬಾಣ ಹೂಡಿ ಆ ದಿಕ್ಕಿಗೆ ಹೊಡೆದುಬಿಟ್ಟನು. ಬಾಣವು ಯಾವಾಗ ಶ್ರೀಕೃಷ್ಣನ ಕಾಲಿಗೆ ತಗುಲಿತೋ, ಆಗ ಶ್ರೀಕೃಷ್ಣನು ಸತ್ತೆನಪ್ಪೊ ಸತ್ತೆ ಎಂದು ಹೇಳಿದನು. ಅಯ್ಯಯ್ಯೋ ನನ್ನ ಬಿಲ್ಲು ಯಾವುದೋ ವ್ಯಕ್ತಿಗೆ ತಗುಲಿದೆ ಎಂಬುದು ಬಾಲಿಯಾ ಭಿಲ್ಲನಿಗೆ ಆಗ ಅರಿವಾಯಿತು. ಓಡಿ ಹೋಗಿ ನೋಡಿದಾಗ ದ್ವಾರಿಕಾಧೀಶನು ನೋವಿನಿಂದ ನರಳುತ್ತಿದ್ದನು. ಇದರಿಂದ ನೊಂದ ಬಾಲಿಯಾ ಹೀಗೆ ಹೇಳಿದನು. "ಹೇ ಮಹಾರಾಜ, ನಾನು ಭ್ರಮೆಗೊಳಗಾಗಿ ಬಾಣವನ್ನು ಹೂಡಿದೆನು. ನಿಮ್ಮ ಪಾದದ ಹೊಳಪು ನನಗೆ ಜಿಂಕೆಯ ಕಣ್ಣಿನಂತೆ ಕಾಣಿಸಿತು. ನನ್ನ ತಪ್ಪನ್ನು ಮನ್ನಿಸಿರಿ. ನನ್ನಿಂದ ಅಪರಾಧವಾಗಿದೆ, ಕ್ಷಮಿಸಿರಿ" ಎಂದು ವಿನಂತಿಸಿದನು. ಆಗ ಶ್ರೀಕೃಷ್ಣನು "ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಕಳೆದ ಜನ್ಮದ ನನ್ನ ನಿನ್ನ ಲೆಕ್ಕಾಚಾರವಿದು, ನಾನು ಈಗ ಅದನ್ನು

ಭರಿಸಿದ್ದೇನೆ ಅಷ್ಟೆ" ಎಂದನು. ನೀನು ತ್ರೇತಾಯುಗದಲ್ಲಿ ಸುಗ್ರೀವನ ಅಣ್ಣ ವಾಲಿಯಾಗಿದ್ದೆ, ನಾನು ದಶರಥನ ಮಗ ರಾಮಚಂದ್ರನಾಗಿದ್ದೆ. ನಾನು ಕೂಡಾ ನಿನಗೆ ಬಾಣ ಹೊಡೆಯಬೇಕಾದರೆ ಮರದ ಮರೆಯಲ್ಲಿ ನಿಂತು ಮೋಸದಿಂದ ಕೊಂದಿದ್ದೆ. ಅದರ ಪರಿಣಾಮವಿದು. ಆ ಅದಲು-ಬದಲು (**Tit for tat**) ಇದೀಗ ಪೂರ್ಣವಾಯಿತು". ಈ ರೀತಿಯಾಗಿ ದೂರ್ವಾಸ ಮುನಿಗಳ ಶಾಪದಿಂದ ಯಾದವ ಕುಲವೆಲ್ಲಾ ನಾಶವಾಯಿತು, ಅದೇ ವರ್ತಮಾನದಲ್ಲಿ ಇವರು ಯಾದವರು. ಈ ಯಾದವರು ಆ ಸಮಯದಲ್ಲಿ ತಾಯಿಯ ಗರ್ಭದಲ್ಲಿದ್ದು, ನಂತರ ಜನ್ಮ ತಳೆದವರಾಗಿದ್ದಾರೆ.

ಸೂಕ್ಷ್ಮವೇದದಲ್ಲಿ ಈ ರೀತಿಯಾಗಿ ಬರೆಯಲಾಗಿದೆ:-

ಗರೀಬ್, ದೂರ್ವಾಸ ಕೋಪೆ ತಹಾಂ, ಸಮಝ್ ನ ಆಯೀ ನೀಚ್ ।
ಛಪ್ಪನ್ ಕರೋಡ್ ಯಾದವ್ ಕಟೇ, ಮಚೀ ರುಧಿರ ಕೀ ಕೀಚ್ ॥

ಭಾವಾರ್ಥ:-ದೂರ್ವಾಸ ಮಕ್ಕಳ ತಮಾಷೆಯನ್ನು ಇಷ್ಟು ಗಂಭೀರವಾಗಿ ತೆಗೆದುಕೊಂಡು, ಅವರ ಕುಲವನ್ನು ನಾಶವಾಗುವಂತೆ ಶಾಪವನ್ನು ನೀಡಿದ. ಆ ನೀಚ ದೂರ್ವಾಸ ಎಂತಹ ಅನರ್ಥವಾಗಬಹುದೆಂದು ಕೂಡಾ ಯೋಚಿಸಲಿಲ್ಲ. ವಿಷಯವೇನೂ ಇರಲಿಲ್ಲವಾದರೂ ನೀಚ ಋಷಿ ದೂರ್ವಾಸ ಇಂತಹ ಘೋರ ಪಾಪವನ್ನು ಮಾಡಿಬಿಟ್ಟ. **56** (ಐವತ್ತಾರು) ಕೋಟಿ ಯಾದವರು ಪರಸ್ಪರ ಕತ್ತರಿಸಿಕೊಂಡು ಮರಣವನ್ನು ಹೊಂದಿದರು ಮತ್ತು ಆ ರಕ್ತ ಹರಿದು ಕೊಚ್ಚೆಯಾಯಿತು.

ಇದೇ ಪ್ರಕಾರವಾಗಿ ಚುಣುಕ ಋಷಿ ಯಾವುದೇ ಕಾರಣವಿಲ್ಲದೆ ದ್ವೇಷ ಕಟ್ಟಿಕೊಂಡು ಮಾನ್‌ಧಾತಾ ರಾಜನ **72** ಕೋಟಿ ಸೈನ್ಯವನ್ನು ನಷ್ಟ ಮಾಡಿದನು.

❖ ಭಗವಂತ ವಿಷ್ಣುವಿನ **24** ಅವತಾರಗಳಲ್ಲಿ ಒಂದು ಅವತಾರ ಕಪಿಲ ಋಷಿಯದ್ದು ಎಂದು ನಂಬಲಾಗಿದೆ. ಅವರು ತಪಸ್ಸು ಮಾಡುತ್ತಿದ್ದರು.

ಒಬ್ಬ ಸಗಡನೆಂಬ ರಾಜನಿದ್ದನು. ಅವನಿಗೆ ಅರವತ್ತು ಸಾವಿರ ಗಂಡು ಮಕ್ಕಳಿದ್ದರು. ಯಾರೋ ಒಬ್ಬ ಋಷಿಗಳು ಒಂದು ಕೆರೆ, ಒಂದು ಬಾವಿ ಕಟ್ಟಿಸಿದರೆ ಹಾಗೂ ಒಂದು ಉದ್ಯಾನವನವನ್ನು ನಿರ್ಮಿಸಿದರೆ ಒಂದು ಅಶ್ವಮೇಧ ಯಜ್ಞ ಮಾಡಿದಷ್ಟು ಪುಣ್ಯ ಸಿಗುವುದೆಂದು ಹೇಳಿದ್ದರು. ರಾಜ ಸಗಡನ ಮಕ್ಕಳು ಆ ಕಾರ್ಯವನ್ನು ಪ್ರಾರಂಭಗೊಳಿಸಿದ್ದರು. ಕೆಲವು ಬುದ್ಧಿವಂತ ವ್ಯಕ್ತಿಗಳು ರಾಜಕುಮಾರರಿಗೆ ಈ ರೀತಿಯ ಬುದ್ಧಿಮಾತುಗಳನ್ನು ಹೇಳಿದ್ದರು. "ನೀವು ಹೀಗೆ ಅಲ್ಲಲ್ಲಿ ಕೆರೆ ಬಾವಿಗಳನ್ನು ನಿರ್ಮಿಸುತ್ತಾ ಹೋದಲ್ಲಿ ಬೆಳೆ ಬೆಳೆಯಲು ಸ್ಥಳವೇ ದೊರೆಯುವುದಿಲ್ಲ ಎಂದು ಕೆಲವರೆಂದರು. ಒಬ್ಬ ರಾಜ ಇವರ ಈ ಕೆಲಸಕ್ಕೆ ವಿರೋಧ ವ್ಯಕ್ತಪಡಿಸಿದಾಗ ಅವನೊಡನೆ ಯುದ್ಧವನ್ನೇ ಮಾಡಿಬಿಟ್ಟರು. ನಂತರ ಸಗಡನ ಮಕ್ಕಳು ಒಂದು ಕುದುರೆಯನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು, ಅದರ ಕೊರಳಲ್ಲಿ ಒಂದು ಪತ್ರವನ್ನು ಕಟ್ಟಿದರು. ಆ ಪತ್ರದಲ್ಲಿ ಈ ರೀತಿ ಬರೆದಿತ್ತು. 'ಯಾರು ನಮ್ಮ ಕಾರ್ಯಕ್ಕೆ ಅಡ್ಡಿ ಉಂಟು ಮಾಡುವರೋ, ಅವರು ಈ ಕುದುರೆಯನ್ನು ಕಟ್ಟಿ ಹಾಕಿ, ನಮ್ಮೊಡನೆ ಯುದ್ಧ ಮಾಡಬೇಕು'. ಹೀಗೆ ತಲೆತಿರುಗಿದವರ (ತಲೆ ಕೆಟ್ಟವರ) ಬಳಿ ಯಾರು ವಿರೋಧ ವ್ಯಕ್ತಪಡಿಸುತ್ತಾರೆ?

ಪೃಥ್ವಿದೇವಿ ಭಗವಂತ ವಿಷ್ಣುವಿನ ಬಳಿ ಬಂದಳು. ಹಾಗೂ ಒಂದು ಹಸುವಿನ ರೂಪವನ್ನು ಧಾರಣೆ ಮಾಡಿ ಹೀಗೆಂದಳು,"ಹೇ ರಾಜ, ಭೂಮಿಯ ಮೇಲೆ ಸಗಡನೆಂಬ ರಾಜನಿದ್ದಾನೆ. ಅವನಿಗೆ **60** ಸಾವಿರ ಗಂಡುಮಕ್ಕಳಿದ್ದಾರೆ. ಅವರಿಗೆ ಎಂಥಾ ಕೋಪವಿದೆಯೋ, ಏನೋ, ನನ್ನನ್ನು ಎಲ್ಲೆಂದರಲ್ಲಿ ಅಗೆದು ಬಿಟ್ಟಿದ್ದಾರೆ. ಅಂತಹಾ ಜಾಗಗಳಲ್ಲಿ ಮನುಷ್ಯರಿಗೆ ಆಹಾರಕ್ಕೋಸ್ಕರ ಅನ್ನ ಬೆಳೆಯಲು ಸಾಧ್ಯವಾಗುತ್ತಿಲ್ಲ". ಭಗವಂತ ವಿಷ್ಣುವು ಪೃಥ್ವಿದೇವಿಗೆ ಸಮಾಧಾನಗೊಳಿಸಿ,"ಅವರೀಗ ಏನೂ ಮಾಡುವುದಿಲ್ಲ. ನೀನು ಸಮಾಧಾನವಾಗಿರು" ಎಂದು ಹೇಳಿ ಕಳುಹಿಸಿಕೊಟ್ಟನು. ವಿಷ್ಣುವು ದೇವರಾಜ ಇಂದ್ರನನ್ನು ಕರೆದು ಹೇಳಿದನು,"ರಾಜ ಸಗಡನ **60** ಸಾವಿರ ಮಕ್ಕಳು ಯಜ್ಞವನ್ನು ಮಾಡುತ್ತಿರುವರು. ಅವರು **100** ಯಜ್ಞಗ್ಳನ್ನು ಸಂಪೂರ್ಣಗೊಳಿಸಿದರೆಂದರೆ ನೀನು ಇಂದ್ರ ಪದವಿಯನ್ನು ಅವರಿಗೆ ನೀಡಬೇಕಾಗುತ್ತದೆ. ಸ್ವಲ್ಪವೇ ಸಮಯವಿದೆ ಅಷ್ಟರಲ್ಲಿ ನೀನು ಏನನ್ನಾದರೂ ಮಾಡಲು ಸಾಧ್ಯವಾದರೆ

ಮಾಡಬಹುದು". ಆಗ ಇಂದ್ರನು ಸಂದೇಶವಾಹಕ ಅರ್ಥಾತ್ ತನ್ನ ಒಬ್ಬ ಸೇವಕನಿಗೆ ಎಲ್ಲವನ್ನು ಹೇಳಿ ಕಳುಹಿಸಿಕೊಟ್ಟನು. ರಾತ್ರಿಯ ಸಮಯ. ಸಗಡನ ಪುತ್ರರೆಲ್ಲರೂ ಮಲಗಿದ್ದರು. ಕುದುರೆಯನ್ನು ಮರಕ್ಕೆ ಕಟ್ಟಿ ಹಾಕಲಾಗಿತ್ತು. ದೇವರಾಜನ ಸೇವಕನು ಕುದುರೆಯನ್ನು ಬಿಚ್ಚಿ ತಪಸ್ವಿ ಕಪಿಲರ ತೊಡೆಗೆ ಕಟ್ಟಿಬಿಟ್ಟನು. ಕಪಿಲ ಋಷಿ ಬಹಳ ವರ್ಷಗಳಿಂದ ತಪಸ್ಸನ್ನಾಚರಿಸುತ್ತಿದ್ದನು. ಈ ಕಾರಣದಿಂದ ಅವನ ಶರೀರವು ಅಸ್ಥಿಪಂಜರದಂತಾಗಿತ್ತು. ಪದ್ಮಾಸನವನ್ನು ಹಾಕಿದ್ದನು. ಕಾಲುಗಳು ಬಹಳ ತೆಳ್ಳಗಾಗಿದ್ದವು. ಮರದ ಬೇರುಗಳ ಮಧ್ಯದಿಂದ ಮಳೆಯ ಕಾರಣ ಮಣ್ಣು ಹರಿದು ಹೋದಾಗ ಹೇಗೆ ಬೇರುಗಳ ಮಧ್ಯದಲ್ಲಿ ಆರೇಳು ಇಂಚುಗಳ ಅಂತರ(Gap) ಉಂಟಾಗುವುದೋ ಹಾಗೆ ಋಷಿಗಳ ಕಾಲುಗಳು ಕೂಡಾ ಆಗಿಬಿಟ್ಟಿದ್ದವು. ಇಂದ್ರನ ಸೇವಕನು ಕಾಲುಗಳ ಮಧ್ಯದಿಂದ ಹಗ್ಗವನ್ನು ಸೇರಿಸಿ ತೊಡೆಯ ಬಳಿ ಹಗ್ಗವನ್ನು ಕಟ್ಟಿಬಿಟ್ಟನು.

ಬೆಳಿಗ್ಗೆಯಾಗುತ್ತಲೇ ರಾಜಕುಮಾರರು ಕುದುರೆಯನ್ನು ನೋಡಿದರು. ಅದನ್ನು ಹುಡುಕಲು ಹೊರಟರು. ಅದಕ್ಕೋಸ್ಕರ ಯುದ್ಧ ಮಾಡಲು ಸಿದ್ಧತೆ ನಡೆಸಿ **60** ಸಾವಿರ ಸೈನಿಕರು ಹೊರಟು ಬಿಟ್ಟರು. ಕುದುರೆಯ ಕಾಲಿನ ಹೆಜ್ಜೆಯ ಗುರುತನ್ನು ಅನುಸರಿಸಿ ಅವರು ಕಪಿಲ ಮುನಿಗಳ ಆಶ್ರಮವನ್ನು ತಲುಪಿದರು. ಕುದುರೆಯನ್ನು ಕಟ್ಟಿಹಾಕಿರುವುದನ್ನು ಕಂಡ ರಾಜಕುಮಾರರು ಋಷಿಯ ಹೊಟ್ಟೆಗೆ ಭರ್ಜಿಯಿಂದ ಇರಿದರು. ಕಪಿಲ ಮುನಿಗಳ ಕಣ್ಣಿ ರೆಪ್ಪೆ ಆ ಮಟ್ಟಕ್ಕೆ ಕೆಳ ಇಳಿದಿತ್ತು ಅಂದರೆ ನೆಲವನ್ನು ಮುಟ್ಟುತ್ತಿತ್ತು. ಋಷಿಗಳಿಗೆ ಯಾವಾಗ ಹಿಂಸೆಯಾಯಿತೋ ಆಗ ಕೋಪದಿಂದ ರೆಪ್ಪೆಯನ್ನು ಕೈಯಿಂದ ಎತ್ತಿದರು. ತಕ್ಷಣ ಕಣ್ಣಿನಿಂದ ಅಗ್ನಿಯ ಬಾಣಗಳು ಹೊರಬಂದವು. **60** ಸಾವಿರ ಸಗಡ ರಾಜನ ಮಕ್ಕಳ ಸೈನ್ಯವು ಅಂದರೆ ರಾಜಕುಮಾರರೆಲ್ಲರೂ ಸತ್ತು ಹೋದರು.

ಸೂಕ್ಷ್ಮವೇದದಲ್ಲಿ ಈ ರೀತಿಯಾಗಿ ಹೇಳಲಾಗಿದೆ:–

60 ಹಜಾರ್ ಸಗಡ್ ಕೆ ಹೋತೆ, ಕಪಿಲ ಮುನೀಶ್ವರ್ ಖಾಯೆ ।
ಜೈ ಪರಮೇಶ್ವರ್ ಕೀ ಕರೇಂ ಭಕ್ತಿ ತೋ ಅಜರ್–ಅಮರ್ ಹೋ ಜಾಯೆ ॥
72 ಕ್ಷೌಣೀ ಖಾ ಗಯಾ, ಚುಣಕ್ ಋಷೀಶ್ವರ್ ಏಕ್ ।
ದೇಹ್ ಧಾರೇಂ ಜೌರಾ ಫಿರೈಂ, ಸಭೀ ಕಾಲ್ ಕೆ ಭೇಷ್ ॥
ದೂರ್ವಾಸ ಕೋಪೆ ತಹಾಂ, ಸಮರ್ಝ್ ನ ಆಯೀ ನೀಚ್ ।
56 ಕರೋಡ್ ಯಾದವ್ ಕಟೇ, ಮಚೀ ರುಧಿರ್ ಕೀ ಕೀಚ್ ॥

ಭಾವಾರ್ಥ:– ಕಪಿಲ ಮುನಿಗಳು, ಚುಣಕ ಮುನಿ ಮತ್ತು ದೂರ್ವಾಸ ಮುನಿಗಳು ಪ್ರಪಂಚದಲ್ಲಿ ತುಂಬಾ ಪ್ರಸಿದ್ಧರಾಗಿದ್ದಾರೆ. ಇವರೆಲ್ಲರೂ ಕಾಲಬ್ರಹ್ಮನ ಭಕ್ತಿ ವೇಷಧಾರಿ ಋಷಿಗಳಾಗಿದ್ದಾರೆ. ಇವರು ಓಡಾಡುವ ಮೃತ್ಯುವಿನ ರೂಪವಾಗಿದ್ದರು.

ಓಡಾಡುವ ಮನುಷ್ಯ ರೂಪದಲ್ಲಿ ಘಾಲ (ಅಸ್ತ್ರ) {ಘಾಲ=ಒಂದು ಮಣ್ಣಿನ ಸಣ್ಣ ಮಡಕೆ. ಈ ಮಡಕೆಯನ್ನು ಮಾಟ ಮಂತ್ರದಿಂದ ಆಕಾಶದಲ್ಲಿ ಹಾರಿಸಿ ಶತ್ರುಗಳ ಮೇಲೆ ಪ್ರಯೋಗಮಾಡುವರು. ಇದರಿಂದ ಬಹಳ ಹಾನಿಯುಂಟಾಗುವುದು} ಏನೂ ತಿಳಿಯದ ಮುಗ್ಧರು ಅವರನ್ನು ತಪ್ಪಾಗಿ ಮಹಾತ್ಮರೆಂದು ಭಾವಿಸುತ್ತಾರೆ. ಇವರೆಲ್ಲರೂ ಜ್ಞಾನಿ ಆತ್ಮಗಳು. ಉದಾರ ಹೃದಯಿಗಳಾಗಿದ್ದರು. ಇವರು ಪರಮಾತ್ಮನನ್ನು ಪಡೆಯಲು ತಮ್ಮ ಕಲ್ಯಾಣ ಮಾಡಿಕೊಳ್ಳಲು ತನು–ಮನ–ಧನವನ್ನು ಅರ್ಪಿಸಿದ್ದರು. ಆದರೆ ತತ್ವದರ್ಶಿ ಸಂತ ಸಿಗದೇ ಇದ್ದ ಕಾರಣ ಇವರು ಕಾಲಬ್ರಹ್ಮನನ್ನು ಒಬ್ಬ ಸಮರ್ಥ ಪ್ರಭುವೆಂದು ತಿಳಿದು ತಪ್ಪು ಮಾಡಿದರು ಮತ್ತು ಅವನದೇ ಸಾಧನೆ 'ಓಂ' ನಾಮದ ಜಪದ ಜೊತೆಗೆ ಮತ್ತು ಸಮಾಧಿಯ ಮೂಲಕ ಅಧಿಕ ಹಠಯೋಗವನ್ನು ಮಾಡಿದರು. ಅದರಿಂದ ಪರಮಾತ್ಮನ ಪ್ರಾಪ್ತಿಯಂತೂ ಸಿಗಲಿಲ್ಲ. ಬದಲಾಗಿ ನಷ್ಟವೇ ಆಯಿತು. ಏಕೆಂದರೆ ಈ ಸಾಧನೆಯು ಶಾಸ್ತ್ರ ವಿರುದ್ಧವಾಗಿದೆ.

ಗೀತೆಯ ಅಧ್ಯಾಯ **16** ಶ್ಲೋಕ **23–24**ರಲ್ಲಿ ಹೀಗೆ ಹೇಳಲಾಗಿದೆ. ಶಾಸ್ತ್ರ ವಿಧಿಯನ್ನು

ತೊರೆದು ಯಾರು ಮನಸೆಚ್ಛೆ ಆಚರಣೆಯನ್ನು ಮಾಡುತ್ತಾರೋ, ಅವರ ಸಾಧನೆ ವ್ಯರ್ಥವಾಗುವುದು. ಈ ಉದಾರ ಆತ್ಮಗಳು ಇದೇ ಕಾರಣದಿಂದ ಕಾಲಬ್ರಹ್ಮನ ಅನುತ್ತಮ ಗತಿಯಲ್ಲೇ ಸ್ಥಿತರಾಗಿರುತ್ತಾರೆ.

ಗೀತೆಯ ಅಧ್ಯಾಯ 17 ಶ್ಲೋಕ 5, 6 ರಲ್ಲಿ ಈ ರೀತಿಯಾಗಿ ಹೇಳಲಾಗಿದೆ:–

❖ ಯಾವ ಮನುಷ್ಯ ಶಾಸ್ತ್ರ ವಿರುದ್ಧ, ಕೇವಲ ಮನಸೆಚ್ಛೆ ಘೋರ ತಪಸ್ಸನ್ನು ಮಾಡುತ್ತಾನೋ ಮತ್ತು ಗರ್ವ, ಅಹಂಕಾರದಿಂದಯುಕ್ತ, ಕಾಮನೆ, ಆಸಕ್ತಿ, ಅಭಿಮಾನದಿಂದ ಕೂಡಿರುತ್ತಾರೆ (ಗೀತೆ ಅಧ್ಯಾಯ 17 ಶ್ಲೋಕ 5)

❖ ಶರೀರದಲ್ಲಿ ಸ್ಥಿತವಾಗಿರುವ ಎಲ್ಲಾ ಕಮಲಗಳಲ್ಲಿರುವ ದೇವಶಕ್ತಿಗಳನ್ನು ಮತ್ತು ಪೂರ್ಣ ಪರಮಾತ್ಮನನ್ನು ಹಾಗೂ ನನ್ನನ್ನು ಕೂಡಾ ಕೃಶನನ್ನಾಗಿಸುವವರು ಅರ್ಥಾತ್ ಕಷ್ಟವನ್ನು ನೀಡುವಂತಹ ಅಜ್ಞಾನಿಗಳನ್ನು ನೀನು ಅಸುರ ಸ್ವಭಾವದವರೆಂದು ತಿಳಿದುಕೋ (ಗೀತೆ ಅಧ್ಯಾಯ 17, ಶ್ಲೋಕ 6).

❖ ಇದೇ ಪ್ರಮಾಣ ಗೀತೆಯ 16ನೇ ಅಧ್ಯಾಯದ 17ನೇ ಶ್ಲೋಕದಿಂದ 20ರವರೆಗಿದೆ.

❖ ಅವರು ತಮ್ಮನ್ನು ತಾವು ಶ್ರೇಷ್ಠರೆಂದು ತಿಳಿದುಕೊಳ್ಳುವ ಅಹಂಕಾರಿ ಪುರುಷರು. ಧನ ಮತ್ತು ಮಾನದ ಮದದಿಂದ ಕೂಡಿದವರಾಗಿ ಕೇವಲ ನಾಮಮಾತ್ರದ ಯಜ್ಞದ ಮುಖಾಂತರ ಪಾಖಂಡ ದಿಂದ ಶಾಸ್ತ್ರವಿಧಿರಹಿತ ಪೂಜೆಯನ್ನು ಮಾಡುವರು. (ಗೀತೆಯ ಅಧ್ಯಾಯ 16, ಶ್ಲೋಕ 17)

❖ ಬಲ, ಅಹಂಕಾರ, ಕಾಮನೆ, ಕ್ರೋಧಗಳ ವಶದಲ್ಲಿದ್ದು, ಇನ್ನೊಬ್ಬರ ನಿಂದನೆಯನ್ನು ಮಾಡುವಂತಹ ಪುರುಷರು. ತಮ್ಮ ಮತ್ತು ಅನ್ಯರ ಶರೀರದಲ್ಲಿರುವ ನನ್ನನ್ನು ದ್ವೇಷ ಮಾಡುವಂತಹವರಾಗಿರುತ್ತಾರೆ. (ಗೀತೆಯ ಅಧ್ಯಾಯ 16, ಶ್ಲೋಕ 18)

❖ ದ್ವೇಷ ಮಾಡುವವರು ಪಾಪದಿಂದ ಕೂಡಿದವರೂ, ಕ್ರೂರ ಕರ್ಮಿಗಳೂ, ಮಾತಿನಿಂದಲೇ ಕೋಟಿಗಟ್ಟಲೆ ವ್ಯಕ್ತಿಗಳ ಹತ್ಯೆಯನ್ನು ಮಾಡುವಂತಹ ನರಾಧಮರು ಅರ್ಥಾತ್ ಇಂತಹ ನೀಚ ಮನುಷ್ಯರನ್ನು ಪ್ರಪಂಚದಲ್ಲಿ ಬಾರಿಬಾರಿಗೂ ಅಸುರೀ ಅಂದರೆ ರಾಕ್ಷಸೀ ಯೋನಿಗಳಲ್ಲಿಯೇ ಹಾಕಿಬಿಡುತ್ತೇನೆ. (ಗೀತೆಯ ಅಧ್ಯಾಯ 16, ಶ್ಲೋಕ 19)

ಸೂಕ್ಷ್ಮವೇದದಲ್ಲಿ ಕೂಡ ಇಂಥವರನ್ನು ನೀಚರೆಂದೇ ಹೇಳಲಾಗಿದೆ:–

ದೂರ್ವಾಸ ಕೋಪೆ ತಹಾಂ, ಸಮರ್ಝ್ ನ ಆಯೀ ನೀಚ್ ।
56 ಕರೋಡ್ ಯಾದವ್ ಕಟೇ, ಮಚೀ ರುಧೀರ್ ಕೀ ಕೀಚ್ ॥

❖ ಹೇ ಅರ್ಜುನ! ಈ ಮೂರ್ಖರು ನನ್ನನ್ನು ಪಡೆಯದೆ ಜನ್ಮ–ಜನ್ಮಗಳಲ್ಲಿ ಅಸುರೀ ಯೋನಿಗಳನ್ನೇ ಪಡೆಯುವರು. ಅದಕ್ಕಿಂತಲೂ ಅತಿ ನೀಚಗತಿಯನ್ನು ಪಡೆಯುತ್ತಾರೆ. ಅಂದರೆ ಘೋರ ನರಕದಲ್ಲಿ ಬೀಳುತ್ತಾರೆ (ಗೀತೆಯ ಅಧ್ಯಾಯ 17, ಶ್ಲೋಕ 20)

ಈ ಮೇಲಿನ ಪ್ರಮಾಣಗಳಿಂದ ಸ್ಪಷ್ಟವಾಯ್ತೇನೆಂದರೆ ಗೀತೆಯ ಅಧ್ಯಾಯ 7, ಶ್ಲೋಕ 18ರಲ್ಲಿ ಗೀತಾಜ್ಞಾನದಾತ, ತನ್ನ ಸಾಧನೆಯಿಂದ ಸಿಗುವಂತಹ ಗತಿಯನ್ನು ಕೂಡಾ ಈ ಕಾರಣಗಳಿಂದ ಅನುತ್ತಮ ಅಂದರೆ ಕೀಳಮಟ್ಟದ್ದೆಂದು ಹೇಳಿದ್ದಾನೆ.

❖ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕ:– ಗೀತಾಜ್ಞಾನದಾತ ಹೀಗೆ ಹೇಳಿದ್ದಾನೆ, “ಯಾರು 4ನೇ ಪ್ರಕಾರದ ಜ್ಞಾನಿ ಸಾಧಕನೋ, ಅವರೆಲ್ಲರೂ ಉದಾರರಾಗಿದ್ದಾರೆ. ಏಕೆಂದರೆ ಪರಮಾತ್ಮನ ಪ್ರಾಪ್ತಿಗೋಸ್ಕರ ತಮ್ಮ ಶರೀರವು ನಷ್ಟವಾಗುವುದನ್ನು ಕೂಡಾ ಅವರು ಲೆಕ್ಕಿಸಲಿಲ್ಲ ಮತ್ತು ಸಾವಿರಾರು ವರ್ಷಗಳ ಕಾಲ ಹಸಿವು–ಬಾಯಾರಿಕೆಯಿಂದ ಸಾಧನೆಯಲ್ಲಿ ತೊಡಗಿದ್ದರು. ಆದರೆ ತತ್ವದರ್ಶಿ ಸಂತ ಸಿಗದೇ ಇರುವ ಕಾರಣ ಅವರೆಲ್ಲರೂ ಅನುತ್ತಮ ಅರ್ಥಾತ್ ಕೀಳಮಟ್ಟದ ಗತಿ ಅಂದರೆ ಕಾಲಬ್ರಹ್ಮನ ಸಾಧನೆಯಿಂದ ಸಿಗುವಂತಹ ಮೋಕ್ಷವು ಮೇಲೆ ತಿಳಿಸಿರುವ ಎಲ್ಲಾ ಋಷಿಗಳಿಗೆ ದೊರಕಿದೆ. ಅಂದರೆ ಜನನ–ಮರಣ, 84 ಲಕ್ಷ ಯೋನಿಗಳ ಚಕ್ರದ ಗತಿಯಲ್ಲೇ ಉಳಿದರು.

❖ ನಿಷ್ಕರ್ಷ:– ಚುಣಕ ಋಷಿ, ದೂರ್ವಾಸ ಋಷಿ ಮತ್ತು ಕಪಿಲ ಋಷಿಗಳೆಲ್ಲರೂ 'ಓಂ' ನಾಮದ ಜಪವನ್ನು ಮಾಡಿದರೋ, ಆ ಭಕ್ತಿಯ ಫಲಸ್ವರೂಪವಾಗಿ ಸ್ವಲ್ಪ ಸಮಯ ಬ್ರಹ್ಮಲೋಕಕ್ಕೆ ಹೋಗುವರು. ಅಲ್ಲಿ ಭಕ್ತಿ ಮುಗಿದ ನಂತರ ಪುನಃ ಭೂಮಿಗೆ ಬಂದು ರಾಜರಾಗುವರು. ಯಾಕೆಂದರೆ ಸೂಕ್ಷ್ಮವೇದದಲ್ಲಿ ಹೀಗೆ ಬರೆದಿದ್ದಾರೆ:–

ತಪ್ ಸೆ ರಾಜ್, ರಾಜ್ ಮಧ್ ಮಾನಮ್, ಜನ್ಮ್ ತೀಸರೆ ಶುಕರ್ ಸ್ವಾನಮ್ ।

ನಂತರ ನಾಯಿ, ಕತ್ತೆಯಾಗುವರು, ನಂತರ ನರಕಕ್ಕೆ ಹೋಗುವರು. ಯಾವಾಗ ನಾಯಿಯಾಗುತ್ತಾರೋ, ಆಗ ಅವರ ತಲೆಯ ಮೇಲೆ ಹುಳುಗಳು ಬೀಳುವುವು. ಯಾವ ವ್ಯಕ್ತಿಗಳು ಇವರ ಶಾಪದಿಂದ ಮರಣ ಹೊಂದಿರುತ್ತಾರೋ, ಅವರ ಪಾಪವನ್ನು ಇವರು ಅನುಭವಿಸಬೇಕಾಗುವುದು. ಹುಳುಗಳು ಇವರ ಮಾಂಸವನ್ನು ಕಿತ್ತು–ಕಿತ್ತು ತಿನ್ನುವುವು. ಈ ಕಾರಣದಿಂದ ಗೀತೆಯಲ್ಲಿ ಕೂಡಾ ಈ ರೀತಿಯ ಸಾಧಕರ ಬಗ್ಗೆ ಹೇಳಲಾಗಿರುವ ವಿಷಯವನ್ನು ನೀವು ಮೇಲೆ ಓದಿರುವಿರಿ.

## ❖ ಮೇಲೆ ಬರೆದಿರುವ ಕಥೆಗಳ ಸಾರಾಂಶ:–

1.ಬ್ರಹ್ಮ ಸಾಧನೆ ಉತ್ತಮವಲ್ಲ. ಕೀಳುಮಟ್ಟದ್ದಾಗಿದೆ.

2.ಮೂರು ರೀತಿಯ ತಾಪತ್ರಯವನ್ನು ಶ್ರೀಕೃಷ್ಣನು ಸಹ ಅಂತ್ಯಗೊಳಿಸಲಾಗಲಿಲ್ಲ. ಶಾಪ ನೀಡುವುದು ಮೂರು ತಾಪತ್ರಯಗಳಲ್ಲಿ (ದೈವಿಕ ತಾಪ) ಬರುತ್ತದೆ. ದೂರ್ವಾಸ ಮುನಿಗಳ ಶಾಪಕ್ಕೆ ಸ್ವಯಂ ಶ್ರೀಕೃಷ್ಣ ಹಾಗು ಎಲ್ಲಾ ಯಾದವರು ಕೂಡಾ ನಾಶವಾದರು.

3.ಶ್ರೀಕೃಷ್ಣನು ಯಾದವರಿಗೆ ಶಾಪಮುಕ್ತರಾಗಲು ಯಮುನೆಯಲ್ಲಿ ಸ್ನಾನ ಮಾಡಲು ಹೇಳಿದನು. ಈ ಪರಿಹಾರದಿಂದ ಶಾಪ ನಾಶವಾಗಲಿಲ್ಲ, ಬದಲಾಗಿ ಯಾದವರ ನಾಶವಂತೂ ಆಯಿತು.

ವಿಚಾರ ಮಾಡಿ:– ಯಾರು ಬೇರೆ ಸಂತ ಅಥವಾ ಬ್ರಾಹ್ಮಣ ಈ ರೀತಿಯ ಸ್ನಾನ ಅಥವಾ ತೀರ್ಥಸ್ನಾನವನ್ನು ಮಾಡಲು ಹೇಳಿ, ಇದರಿಂದ ಸಂಕಟದಿಂದ ಮುಕ್ತರಾಗಬಹುದೆಂಬ ಅನಿಸಿಕೆಯನ್ನು ವ್ಯಕ್ತಪಡಿಸುವರೋ, ಆ ಕಾರ್ಯವೆಷ್ಟು ಪರಿಣಾಮಕಾರಿ? ಅರ್ಥಾತ್ ವ್ಯರ್ಥ. ಯಾಕೆಂದರೆ ತ್ರಿಲೋಕನಾಥನಾದ ಭಗವಂತನಿಂದಲೇ ಹೇಳಲ್ಪಟ್ಟ ಪರಿಹಾರ ಯಮುನಾ ಸ್ನಾನದಿಂದ ಯಾವುದೇ ಲಾಭ ಆಗದ ಮೇಲೆ ಬೇರೆ ಅಲ್ಪ ಬುದ್ಧಿಯರು, ಬ್ರಾಹ್ಮಣರು ಹಾಗು ಗುರುಗಳು ಹೇಳಿದ ಸ್ನಾನ ಮೊದಲಾದ ಪರಿಹಾರದಿಂದ ಯಾವುದೇ ಫಲ ದೊರಕಲು ಹೇಗೆ ಸಾಧ್ಯ?

4.ಕಡಾಯಿಯನ್ನು ಚೆನ್ನಾಗಿ ತೇದು ಆ ಚೂರ್ಣವನ್ನು ಪ್ರಭಾಸ ಕ್ಷೇತ್ರದ ಯಮುನಾ ನದಿಯಲ್ಲಿ ಹಾಕಿಬಿಡಿ ಎಂದು ಮೊದಲೇ ಶ್ರೀಕೃಷ್ಣನು ದೂರ್ವಾಸ ಮುನಿಗಳ ಶಾಪದಿಂದ ಹೊರ ಬರುವ ಉಪಾಯವನ್ನು ಹೇಳಿದ್ದನು. ಬಿದಿರು ಇಲ್ಲದಿದ್ದರೆ, ಕೊಳಲು ಹೇಗೆ ಊದುವುದು ಎಂದಿದ್ದನು. ಆದರೆ ಬಿದಿರೂ ಉಳಿಯಿತು, 56 ಕೋಟಿ ಯಾದವರ ಅಂತ್ಯವೂ ಹಾಡಲಾಯಿತು. ಸಜ್ಜನರೇ, ವರ್ತಮಾನದಲ್ಲಿ ಬುದ್ಧಿವಂತ ಮನುಷ್ಯರಿದ್ದಾರೆ, ಶಿಕ್ಷಿತರು, ನನ್ನ ಮೂಲಕ (ಸಂತ ರಾಮ್‌ಪಾಲ್ ದಾಸರ ಮೂಲಕ) ಹೇಳಿದ ಈ ಜ್ಞಾನವನ್ನು ಶಾಸ್ತ್ರಗಳೊಂದಿಗೆ ಹೋಲಿಸಿ, ನಂತರ ಭಕ್ತಿಮಾಡಿ ನೋಡಿ. ಯಾವ ರೀತಿಯ ಚಮತ್ಕಾರ ನಡೆಯುವುದೆಂದು.

❖ ಪ್ರಸಂಗವನ್ನು ಮುಂದುವರೆಸೋಣ:–

1.ಮೂರೂ ಗುಣ(ರಜೋಗುಣ ಬ್ರಹ್ಮಾ, ಸತಗುಣ ವಿಷ್ಣು, ತಮೋಗುಣ ಶಿವ)ಗಳ ಭಕ್ತಿಕೂಡಾ ವ್ಯರ್ಥವೆಂದು ಸ್ಪಷ್ಟವಾಯ್ತು.

2.ಗೀತೆಯ ಜ್ಞಾನದಾತ ಬ್ರಹ್ಮನ ಭಕ್ತಿಯ ಬಗ್ಗೆ ಸ್ವತಃ ಗೀತೆಯ ಜ್ಞಾನದಾತನು ಗೀತೆಯ ಅಧ್ಯಾಯ 7, ಶ್ಲೋಕ 18ರಲ್ಲಿ ಅನುತ್ತಮವೆಂದು ಹೇಳಿದ್ದಾನೆ. ಅವನು ಗೀತೆಯ ಅಧ್ಯಾಯ 18, ಶ್ಲೋಕ 62ರಲ್ಲಿ ಆ ಪರಮೇಶ್ವರ ಅರ್ಥಾತ್ ಪರಮ ಅಕ್ಷರ ಬ್ರಹ್ಮನ ಶರಣದಲ್ಲಿ ಹೋಗಲು

ಹೇಳಿದ್ದಾನೆ. ಆ ಪರಮೇಶ್ವರನ ಕೃಪೆಯಿಂದಲೇ ನೀನು ಪರಮ ಶಾಂತಿ ಮತ್ತು ಸನಾತನ ಪರಮಧಾಮವನ್ನು ಪಡೆಯುವೆ ಎಂದು ಕೂಡಾ ಹೇಳಿದ್ದಾನೆ.

3.ಗೀತೆಯ ಅಧ್ಯಾಯ 15, ಶ್ಲೋಕ 1ರಿಂದ 4ರಲ್ಲಿ ಪ್ರಪಂಚ ರೂಪದಲ್ಲಿರುವ ವೃಕ್ಷದ ವರ್ಣನೆ ಇದೆ ಮತ್ತು ತತ್ವದರ್ಶಿ ಸಂತನನ್ನು ಗುರುತಿಸುವ ಬಗ್ಗೆ ಕೂಡಾ ಹೇಳಲಾಗಿದೆ. ಪ್ರಪಂಚವೆಂಬ ವೃಕ್ಷದ ಎಲ್ಲಾ ಭಾಗಗಳು, ಬೇರು (ಮೂಲ) ಯಾವ ಪರಮೇಶ್ವರ, ಕಾಂಡವು ಯಾವ ದೇವರು, ಕೊಂಬೆ ಯಾವ ದೇವರು, ಶಾಖೆಗಳು ಯಾವ-ಯಾವ ದೇವತೆಗಳು? ಎಲೆಗಳನ್ನು ಪ್ರಪಂಚವೆಂದು ಹೇಳಲಾಗಿದೆ.

ಇದೆ ಅಧ್ಯಾಯ 15, ಶ್ಲೋಕ 16ರಲ್ಲಿ ಸ್ಪಷ್ಟಪಡಿಸಲಾಗಿದೆ. ಅದೇನೆಂದರೆ:-

1.ಕ್ಷರಪುರುಷ:-(ಇವನು 21 ಬ್ರಹ್ಮಾಂಡಗಳ ಪ್ರಭು) ಇವನನ್ನು ಬ್ರಹ್ಮ, ಕಾಲಬ್ರಹ್ಮ, ಜ್ಯೋತಿ ನಿರಂಜನನೆಂದೂ ಕರೆಯಲಾಗುತ್ತದೆ. ಇವನು ನಾಶಹೊಂದುವವನು. ನಾವೆಲ್ಲರೂ ಇವನ ಲೋಕದಲ್ಲಿ ವಾಸಿಸುತ್ತಿದ್ದೇವೆ. ನಮಗೆ ಇವನ ಲೋಕದಿಂದ ಮುಕ್ತರಾಗಬೇಕಾಗಿದೆ ಮತ್ತು ನಮ್ಮ ಪರಮಾತ್ಮ ಕಬೀರರ ಬಳಿ, ಸತ್ಯಲೋಕಕ್ಕೆ ಹೋಗಬೇಕಾಗಿದೆ.

2.ಅಕ್ಷರಪುರುಷ:- ಇವನು 7 ಶಂಖ ಬ್ರಹ್ಮಾಂಡಗಳ ಪ್ರಭುವಾಗಿದ್ದಾನೆ. ಇವನು ಸಹ ನಾಶಹೊಂದುವವನು. ನಾವುಗಳು ಈ ಭಗವಂತನ 7 ಶಂಖ ಬ್ರಹ್ಮಾಂಡಗಳ ಕ್ಷೇತ್ರವನ್ನು ದಾಟಿ ಸತ್ಯಲೋಕಕ್ಕೆ ಹೋಗಬೇಕಾಗಿದೆ. ಈ ಕಾರಣದಿಂದ ಈ ಭಗವಂತನಿಗೆ ಟೋಲ್ ಟ್ಯಾಕ್ಸ್ ಕೊಡಬೇಕಾಗುವುದು. ಈ ಭಗವಂತನೊಡನೆ ನಮ್ಮ ಕೆಲಸ ಇಷ್ಟೇ.

ಗೀತೆಯ ಅಧ್ಯಾಯ 15, ಶ್ಲೋಕ 17ರಲ್ಲಿ ಹೀಗೆ ಹೇಳಲಾಗಿದೆ:-

ಉತ್ತಮಃ ಪುರುಷಃ ತೂ ಅನ್ಯಃ ಪರಮಾತ್ಮಾ ಇತಿ ಉದಾಹೃತಃ ।
ಯಃ ಲೋಕ ತ್ರಯಮ್ ಆವಿಷ್ಯ ವಿಭರ್ತಿ ಅವ್ಯಯಃ ಈಶ್ವರಃ ॥

ಭಾವಾರ್ಥ:- ಗೀತೆಯ 15ನೇ ಅಧ್ಯಾಯ, 16ನೇ ಶ್ಲೋಕದಲ್ಲಿ ಈ ರೀತಿ ಹೇಳಲಾಗಿದೆ. ಇಬ್ಬರು ಪುರುಷರು, ಒಬ್ಬ ಕ್ಷರಪುರುಷ ಎರಡನೆಯವನು ಅಕ್ಷರ ಪುರುಷನಾಗಿದ್ದಾನೆ. ಈ ಇಬ್ಬರನ್ನು ಬಿಟ್ಟು ಇನ್ನೊಬ್ಬ ಪುರುಷನಿದ್ದಾನೆ. ಅವನು ಉತ್ತಮ ಪುರುಷ ಅರ್ಥಾತ್ ಪುರುಷೋತ್ತಮ. ಅವನನ್ನೆ ಪರಮಾತ್ಮ ಎನ್ನುತ್ತಾರೆ. ಯಾರು ಮೂರೂ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಪಾಲನೆ, ಪೋಷಣೆಯನ್ನು ಮಾಡುವನೋ. ಅವನೇ ವಾಸ್ತವದಲ್ಲಿ ಅವಿನಾಶಿ ಪರಮೇಶ್ವರನು. (ಗೀತೆಯ ಅಧ್ಯಾಯ 15, ಶ್ಲೋಕ 17) ಗೀತೆಯ ಅಧ್ಯಾಯ 3 ಶ್ಲೋಕ 14-15ರಲ್ಲಿ ಕೂಡಾ ಸ್ಪಷ್ಟಪಡಿಸಲಾಗಿದೆ. ಅದೇನೆಂದರೆ ಸರ್ವಗತಮ್ ಬ್ರಹ್ಮ ಅರ್ಥಾತ್ ಸರ್ವವ್ಯಾಪಿ ಪರಮಾತ್ಮ, ಯಾರು ಸಚ್ಚಿದಾನಂದ ಘನ ಬ್ರಹ್ಮನಾಗಿದ್ದಾನೋ, ಅವನನ್ನು ವಾಸುದೇವನೆಂದೂ ಕರೆಯುತ್ತಾರೆ. ಅವನ ವಿಷಯದಲ್ಲಿ ಗೀತೆಯ 7ನೇ ಅಧ್ಯಾಯದ 19ನೇ ಶ್ಲೋಕದಲ್ಲಿ ಹೇಳಲಾಗಿದೆ. ಅವನೇ ಸದಾ ಯಜ್ಞಗಳಲ್ಲಿ ಅಂದರೆ ಧಾರ್ಮಿಕ ಅನುಷ್ಠಾನಗಳಲ್ಲಿ ಪ್ರತಿಷ್ಠಿತನಾಗಿದ್ದಾನೆ. ಅರ್ಥಾತ್ ಇಷ್ಟ ರೂಪದಲ್ಲಿ ಪೂಜ್ಯನು.

ಪೂರ್ಣ ಗುರುವಿನಿಂದ ದೀಕ್ಷೆ ಪಡೆದುಕೊಂಡು, ನಿಯಮದಲ್ಲಿದ್ದು ಭಕ್ತಿಯನ್ನು ಮಾಡಿ. ಈ ರೀತಿಯಾಗಿ ಜೀವನದ ಮಾರ್ಗದಲ್ಲಿ ನಡೆದು ಲೋಕದಲ್ಲಿ ಸುಖೀ ಜೀವನ ನಡೆಸಿ ಮತ್ತು ಮೋಕ್ಷ ರೂಪದ ಗುರಿಯನ್ನು ಪಡೆದುಕೊಳ್ಳಿ.

# ಸೃಷ್ಟಿ ರಚನೆ

## (ಸೂಕ್ಷ್ಮ ವೇದದಿಂದ ನಿಷ್ಕರ್ಷ ರೂಪ ಸೃಷ್ಟಿ ರಚನೆಯ ವರ್ಣನೆ)

ಪ್ರಭುವಿನಲ್ಲಿ ಪ್ರೇಮವಿರುವ ಆತ್ಮಗಳೇ! ಮೊದಲ ಬಾರಿ ಕೆಳಗಿನ ಸೃಷ್ಟಿಯ ರಚನೆಯ ಬಗ್ಗೆ ಓದಿದರೆ, ಇದೊಂದು ದಂತಕಥೆಯೆನಿಸದೆ ಇರದು. ಆದರೆ ಎಲ್ಲ ಪವಿತ್ರಗ್ರಂಥಗಳಲ್ಲಿ ಪ್ರಮಾಣವನ್ನು ಓದಿದರೆ ಆಶ್ಚರ್ಯವಾಗುವುದು. ಈ ವಾಸ್ತವಿಕ ಜ್ಞಾನದ ಅರಿವು ಎಲ್ಲಿ ಅಡಗಿತ್ತು? ದಯಮಾಡಿ ಧೈರ್ಯದೊಂದಿಗೆ ಓದಿರಿ. ಹಾಗೂ ಈ ಅಮೃತಜ್ಞಾನವನ್ನು ಸುರಕ್ಷಿತವಾಗಿ ಕಾಪಾಡಿರಿ. ಇದು ನಿಮ್ಮ ಮುಂದಿನ ನೂರಾ ಒಂದನೆಯ ಪೀಳಿಗೆಯವರೆಗೂ ಉಪಯೋಗಕ್ಕೆ ಬರುವುದು. ಪವಿತ್ರ ಆತ್ಮಗಳೇ! ದಯಮಾಡಿ ಸತ್ಯ ನಾರಾಯಣನ (ಅವಿನಾಶಿ ಪ್ರಭು/ ಸತ್ಯಪುರುಷ) ಮೂಲಕ ರಚಿಸಿದ ಸೃಷ್ಟಿ ರಚನೆಯ ವಾಸ್ತವಿಕ ಜ್ಞಾನವನ್ನು ಓದಿ ತಿಳಿಯಿರಿ.

**1.ಪೂರ್ಣ ಬ್ರಹ್ಮ:–** ಈ ಸೃಷ್ಟಿ ರಚನೆಯಲ್ಲಿ ಸತ್ಯಪುರುಷ–ಸತ್ಯಲೋಕದ ಸ್ವಾಮೀ (ಪ್ರಭು), ಅಲಖ್ ಪುರುಷ–ಅಲಖ್ ಲೋಕದ ಸ್ವಾಮೀ (ಪ್ರಭು), ಅಗಮ್ ಪುರುಷ–ಅಗಮ್ ಲೋಕದ ಸ್ವಾಮೀ (ಪ್ರಭು) ಹಾಗೂ ಅನಾಮಿ ಪುರುಷ–ಅನಾಮಿ/ ಅಕಹ್ ಲೋಕದ ಸ್ವಾಮಿಯಂತು (ಪ್ರಭುವಂತು) ಒಬ್ಬನೇ ಪೂರ್ಣ ಬ್ರಹ್ಮನು, ಅವನೇ ವಾಸ್ತವದಲ್ಲಿ ಅವಿನಾಶಿ (ನಾಶವಿಲ್ಲದ–ಶಾಶ್ವತ) ಪ್ರಭು. ಆ ಪ್ರಭುವೇ ಭಿನ್ನ–ಭಿನ್ನ ರೂಪ ಧಾರಣೆ ಮಾಡಿ, ತನ್ನ ನಾಲ್ಕೂ ಲೋಕಗಳಲ್ಲಿ ಇರುವನು. ಅವನ ಅಧೀನದಲ್ಲಿ ಅಸಂಖ್ಯ (ಎಣಿಸಲಾರದ) ಬ್ರಹ್ಮಾಂಡಗಳು ಇವೆ.

**2.ಪರಬ್ರಹ್ಮ:–** ಇವನು ಕೇವಲ 7 ಶಂಖ ಬ್ರಹ್ಮಾಂಡದ ಪ್ರಭು ಇವನನ್ನು ಅಕ್ಷರ ಪುರುಷನೆಂದೂ ಹೇಳುತ್ತಾರೆ. ಆದರೆ ಇವನು ಹಾಗೂ ಇವನ ಬ್ರಹ್ಮಾಂಡವು ಸಹ, ವಾಸ್ತವದಲ್ಲಿ ಅವಿನಾಶಿಯಲ್ಲ. (ಶಾಶ್ವತವಲ್ಲದ್ದು)

**3.ಬ್ರಹ್ಮ:–** ಇವನು ಕೇವಲ 21 ಬ್ರಹ್ಮಾಂಡಗಳ ಪ್ರಭು ಇವನನ್ನು ಕ್ಷರ ಪುರುಷ (ಕ್ಷರ–ನಾಶ) ಜ್ಯೋತಿನಿರಂಜನ, ಕಾಲ, ಮುಂತಾದ ಉಪಮೆಗಳೊಂದಿಗೆ ತಿಳಿಯಲಾಗುತ್ತದೆ. ಇವನು ಹಾಗೂ ಇವನ ಸರ್ವ ಬ್ರಹ್ಮಾಂಡವು ನಾಶವಾಗುವಂತಹದು.

(ಮೇಲೆ ಹೇಳಿರುವ 3 ಪುರುಷರ (ಪೂರ್ಣಬ್ರಹ್ಮ, ಪರಬ್ರಹ್ಮ, ಬ್ರಹ್ಮ) (ಪ್ರಭುಗಳ) ಪ್ರಮಾಣವು ಪವಿತ್ರ ಶ್ರೀಮದ್ಭಗವದ್ಗೀತೆಯ 15ನೇ ಅಧ್ಯಾಯದ 16–17ನೆಯ ಶ್ಲೋಕಗಳಲ್ಲೂ ಇದೆ.)

**4.ಬ್ರಹ್ಮಾ:–** "ಬ್ರಹ್ಮಾ" ಇದೇ (ಮೇಲೆ ಹೇಳಿರುವ) ಬ್ರಹ್ಮನ (ಕಾಲನ) ಜೇಷ್ಠಪುತ್ರ. ವಿಷ್ಣುವು ಎರಡನೆಯ ಪುತ್ರ ಹಾಗೂ ಶಿವನು ಮೂರನೆಯ ಪುತ್ರ. ಈ ಮೂವರೂ ಕೇವಲ ಒಂದು ಬ್ರಹ್ಮಾಂಡದಲ್ಲಿನ ಒಂದು ವಿಭಾಗದ (ಗುಣದ) ಪ್ರಭುಗಳಾಗಿದ್ದಾರೆ. ಹಾಗೂ ನಾಶಹೊಂದುವವರು. ವಿಸ್ತೃತ ವಿವರಣೆಗಾಗಿ ದಯಮಾಡಿ ಕೆಳಗೆ ಬರೆದಿರುವ ಸೃಷ್ಟಿ ರಚನೆಯ ವಿವರಗಳನ್ನು ಓದಿರಿ.

[ಕವಿರ್ದೇವ(ಕಬೀರ್ ಪರಮೇಶ್ವರ)ರು ಸೂಕ್ಷ್ಮವೇದ ಅರ್ಥಾತ್ ಕವಿರ್ವಾಣಿಯಲ್ಲಿ ಅವರೇ ರಚಿಸಿರುವ ಸೃಷ್ಟಿಯ ಜ್ಞಾನವನ್ನು ಸ್ವತಃ ಈ ಕೆಳಗೆ ಬರೆದಿರುವಂತೆ ತಿಳಿಸಿದ್ದಾರೆ]


ಮೊಟ್ಟ ಮೊದಲು ಅನಾಮಿ/ಅಕಹ್ ಎಂಬ ಲೋಕವಿತ್ತು. ಪೂರ್ಣ ಪರಮಾತ್ಮನು ಆ ಅನಾಮಿ ಲೋಕದಲ್ಲಿ ಒಬ್ಬನೇ ಇದ್ದನು. ಆ ಪರಮಾತ್ಮನ ವಾಸ್ತವಿಕ ಹೆಸರು ಕವಿರ್ದೇವ, ಅರ್ಥಾತ್ ಕಬೀರ್ ಪರಮೇಶ್ವರ ಎಂಬುದಾಗಿದೆ. ಆ ಎಲ್ಲಾ ಆತ್ಮಗಳು ಆ ಪೂರ್ಣ ಪರಮಾತ್ಮನ ಶರೀರದಲ್ಲಿ ಸೇರಿಕೊಂಡಿದ್ದವು. ಈ ಕವಿರ್ದೇವರ ಉಪನಾಮ, ಪದವಿಯ ನಾಮ ಅನಾಮೀ ಪುರುಷವಾಗಿದೆ. (ಪುರುಷ ಶಬ್ದದ ಅರ್ಥ ಪ್ರಭು/ಒಡೆಯ/ಸ್ವಾಮಿ ಎಂದಾಗುತ್ತದೆ. ಪ್ರಭು ಮನುಷ್ಯನನ್ನು ತನ್ನದೇ ಸ್ವರೂಪದಲ್ಲಿ ನಿರ್ಮಾಣ ಮಾಡಿದ್ದಾನೆ. ಆದ್ದರಿಂದ ಮಾನವನ ಹೆಸರೂ ಸಹ ಪುರುಷ ಎಂದಾಗಿದೆ) ಅನಾಮೀ ಪುರುಷನ ಒಂದು ರೋಮದ(ಶರೀರದ ಕೂದಲಿನ) ಪ್ರಕಾಶವು ಶಂಖ–ಸೂರ್ಯನ ಪ್ರಕಾಶಕ್ಕಿಂತಲೂ ಅಧಿಕವಾಗಿದೆ.

# ಕಬೀರ್ ಪರಮೇಶ್ವರರ ಅಸಂಖ್ಯ ಬ್ರಹ್ಮಾಂಡಗಳ ಲಘು ಚಿತ್ರ

ಅನಾಮಿ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅನಾಮಿ ಪುರುಷನ ರೂಪದಲ್ಲಿರುತ್ತಾರೆ

ಅಗಮ್ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಗಮ್ ಪುರುಷನ ರೂಪದಲ್ಲಿರುತ್ತಾರೆ

ಅಲಖ್ ಲೋಕ : ಈ ಲೋಕದಲ್ಲೂ ಸಹ ಕಬೀರ್ ಪರಮೇಶ್ವರರು ಅಲಖ್ ಪುರುಷನ ರೂಪದಲ್ಲಿರುತ್ತಾರೆ



ವಿಶೇಷ:– ಹೇಗೆಂದರೆ ಯಾವುದೇ ದೇಶದ ಸನ್ಮಾನ್ಯ ಪ್ರಧಾನ ಮಂತ್ರಿಯ ಶರೀರದ ಹೆಸರು ಬೇರೆ ಇದ್ದು ಪದವಿಯ ಹೆಸರು ಪ್ರಧಾನ ಮಂತ್ರಿ ಎಂದಿರುತ್ತದೆ. ಅನೇಕ ಸಂದರ್ಭಗಳಲ್ಲಿ ಪ್ರಧಾನ ಮಂತ್ರಿಗಳೇ ಹಲವಾರು ವಿಭಾಗಗಳನ್ನು ತಾವೇ ಇರಿಸಿಕೊಂಡಿರುತ್ತಾರೆ. ಆಗ ಯಾವ ವಿಭಾಗದ ಕಾಗದ ಪತ್ರಗಳ ಮೇಲೆ ಸಹಿ ಹಾಕಿ ಮುದ್ರೆ ಹಾಕುತ್ತಾರೋ, ಆಗ ಅದೇ ವಿಭಾಗದ ಪದವಿಯ ಹೆಸರನ್ನು ನಮೂದಿಸುತ್ತಾರೆ. ಉದಾಹರಣೆಗೆ ಗೃಹ ಮಂತ್ರಾಲಯದ ಪದವಿಯನ್ನು ನಿರ್ವಹಿಸುವ ಪ್ರಧಾನಮಂತ್ರಿ ಅಲ್ಲಿನ ಕಾಗದ ಪತ್ರಗಳಿಗೆ ಗೃಹ ಮಂತ್ರಿ ಎಂದೇ ಬರೆಯುತ್ತಾರೆ. ಅಲ್ಲಿ ಅದೇ ವ್ಯಕ್ತಿಯ (ಪ್ರಧಾನ ಮಂತ್ರಿಯ) ಹಸ್ತಾಕ್ಷರದ ಶಕ್ತಿ ಕಡಿಮೆಯಾಗುತ್ತದೆ. ಇದೇ ರೀತಿಯಲ್ಲಿ ಕಬೀರ್ ಪರಮೇಶ್ವರರ (ಕವಿರ್ದೇವರ) ಶರೀರದ ಕಾಂತಿಯು (ಪ್ರಕಾಶವು) ಬೇರೆ–ಬೇರೆ ಲೋಕಗಳಲ್ಲಿ ಬೇರೆ–ಬೇರೆ ಆಗಿರುತ್ತದೆ.

ಇದೇ ರೀತಿ ಪೂರ್ಣ ಪರಮಾತ್ಮರಾದ ಕವಿರ್ದೇವ (ಕಬೀರ್ ಪರಮೇಶ್ವರ)ರು ಕೆಳಗಿನ ಮೂರು ಬೇರೆಯ ಲೋಕಗಳನ್ನು (ಅಗಮ್‌ಲೋಕ, ಅಲಖ್‌ಲೋಕ, ಸತ್ಯಲೋಕ) ಶಬ್ದ (ವಚನ) ದಿಂದ ರಚಿಸಿದ್ದಾರೆ. ಇದೇ ಪೂರ್ಣಬ್ರಹ್ಮ ಪರಮಾತ್ಮ ಕವಿರ್ದೇವ (ಕಬೀರ್ ಪರಮೇಶ್ವರ)ರೇ ಅಗಮ್ ಲೋಕದಲ್ಲಿ ಪ್ರಕಟರಾದರು ಹಾಗು ಕವಿರ್ದೇವ ಅಗಮ್‌ಲೋಕದೂ ಸ್ವಾಮಿಯಾಗಿರುವರು ಹಾಗು ಅಲ್ಲಿ ಇವರ ಉಪನಾಮ ಅಗಮ್ ಪುರುಷ ಅರ್ಥಾತ್ ಅಗಮ್ ಪ್ರಭು ಆಗಿದೆ. ಇದೇ "ಅಗಮ್ ಪುರುಷನ" ಮಾನವ ಸದೃಶ್ಯ ಶರೀರವು ಬಹಳ ತೇಜೋಮಯವಾಗಿದೆ. ಇವರ ಒಂದು ರೋಮ ಕೂಪದಲ್ಲಿನ ಕಾಂತಿಯು (ಪ್ರಕಾಶವು) ನೂರು ಶತಕೋಟಿ ಸೂರ್ಯಗಳ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಪೂರ್ಣ ಪರಮಾತ್ಮ ಕವಿರ್ದೇವ (ಕವಿರ್‌ದೇವ=ಕಬೀರ ಪರಮೇಶ್ವರ) ಅಲಖ್ ಲೋಕದಲ್ಲಿ ಪ್ರಕಟನಾದನು ಹಾಗು ಸ್ವತಃವೇ ಅಲಖ್ ಲೋಕದ ಸ್ವಾಮೀಯಾಗಿರುವನು ಹಾಗು ಉಪನಾಮ ಅಲಖ್ ಪುರುಷವಾಗಿದೆ ಹಾಗು ಈ ಪೂರ್ಣ ಪ್ರಭುವಿನ ಮಾನವ ಸದೃಶ್ಯ ಶರೀರ ತೆಜೋಮಯವಾಗಿದೆ ಹಾಗು ಸ್ವಯಂ ಪ್ರಕಾಶಿತವಾಗಿದೆ. (ಸ್ವಜ್ಯೋತಿ ಪ್ರಕಾಶ) ಇವರ ಒಂದು ರೋಮ (ಶರೀರದ ಕೂದಲಿನ) ಕಾಂತಿಯು(ಪ್ರಕಾಶವು) ಶತಕೋಟಿ ಸೂರ್ಯಗಳ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಕವಿರ್ದೇವರು ಸತ್ಯಲೋಕದಲ್ಲಿ ಪ್ರಕಟರಾದರು ಹಾಗು ಸತ್ಯಲೋಕದ ಅಧಿಪತಿಕೂಡಾ ಇವರೇ ಆಗಿರುವರು. ಆದ್ದರಿಂದ ಇವರದೇ ಉಪನಾಮ 'ಸತ್ಯಪುರುಷವಾಗಿದೆ'. ಸತ್ಯಪುರುಷ ಅಂದರೆ ಅವಿನಾಶಿ ಪ್ರಭು ಎಂದಾಗುತ್ತದೆ. ಇವರದೆ ಹೆಸರು 'ಅಕಾಲಮೂರ್ತಿ, ಪೂರ್ಣಬ್ರಹ್ಮ, ಪರಮ ಅಕ್ಷರ ಬ್ರಹ್ಮ' ಶಬ್ದ ಸ್ವರೂಪಿ ರಾಮ ಇನ್ನೂ ಮುಂತಾದವುಗಳಿವೆ. ಈ ಸತ್ಯಪುರುಷ ಕವಿರ್ದೇವರ ಮಾನವ ಸದೃಶ್ಯ ಶರೀರವು ತೆಜೋಮಯವಾಗಿದೆ. ಇವರ ಒಂದು ರೋಮ (ಶರೀರದ ಕೂದಲಿನ) ಕಾಂತಿಯು(ಪ್ರಕಾಶವು) ಕೋಟಿ ಸೂರ್ಯ–ಚಂದ್ರರ ಪ್ರಕಾಶಕ್ಕಿಂತ ಅಧಿಕವಾಗಿದೆ.

ಈ ಕವಿರ್ದೇವರು(ಕಬೀರ್ ಪ್ರಭು) "ಸತ್ಯಪುರುಷ" ರೂಪದಲ್ಲಿ ಪ್ರಕಟವಾಗಿ, ಸತ್ಯಲೋಕದಲ್ಲಿ ವಿರಾಜಮಾನರಾಗಿ, ಪ್ರಥಮ ಸತ್ಯಲೋಕದಲ್ಲಿ ಬೇರೆ ರಚನೆಗಳನ್ನು ಮಾಡಿದರು.

ಒಂದು ಶಬ್ದ (ವಚನ) ದಿಂದ ಹದಿನಾರು ದ್ವೀಪಗಳ ರಚನೆ ಮಾಡಿದರು. ನಂತರ ಹದಿನಾರು ಶಬ್ದಗಳಿಂದ ಹದಿನಾರು ಪುತ್ರರ ಉತ್ಪತ್ತಿ ಮಾಡಿದರು. ಒಂದು ಮಾನಸ ಸರೋವರದ ರಚನೆಮಾಡಿ. ಅದರಲ್ಲಿ ಅಮೃತವನ್ನು ತುಂಬಿದರು. ಹದಿನಾರು ಪುತ್ರರ ಹೆಸರು ಈ ಕೆಳಗಿನಂತಿವೆ:–

1)ಕೂರ್ಮ, 2)ಜ್ಞಾನಿ, 3)ವಿವೇಕ, 4)ತೇಜ, 5)ಸಹಜ, 6)ಸಂತೋಷ, 7)ಸುರತಿ, 8) ಆನಂದ, 9)ಕ್ಷಮಾ, 10)ನಿಷ್ಕಾಮ, 11)ಜಲರಂಗೀ, 12)ಅಚಿಂತ, 13)ಪ್ರೇಮ, 14)ದಯಾಲ್, 15)ಧೈರ್ಯ, 16) ಯೋಗ ಸಂತಾಯನ ಅರ್ಥಾತ್ "ಯೋಗಜಿತ್" ಎಂಬುದಾಗಿದೆ.

ಸತ್ಯಪುರುಷ ಕವಿರ್ದೇವರು ತಮ್ಮ ಪುತ್ರ ಅಚಿಂತನಿಗೆ, ಸತ್ಯಲೋಕದ ಬೇರೆ ರಚನೆಯ ಭಾರವನ್ನು ಒಪ್ಪಿಸಿದರು. ಹಾಗೂ ಶಕ್ತಿ ಪ್ರದಾನ ಮಾಡಿದರು. ಅಚಿಂತನು ತನ್ನ ಶಬ್ದಶಕ್ತಿಯಿಂದ

ಅಕ್ಷರ ಪುರುಷ(ಪರಬ್ರಹ್ಮ)ನನ್ನು ಉತ್ಪತ್ತಿ ಮಾಡಿದನು. ಹಾಗೂ ಅಕ್ಷರ ಪುರುಷನ ಸಹಾಯ ಕೇಳಿದನು. ಅಕ್ಷರ ಪುರುಷನು(ಪರಬ್ರಹ್ಮ) ಸ್ನಾನ ಮಾಡಲು ಮಾನಸ ಸರೋವರಕ್ಕೆ ಹೋದವನು ಆನಂದದಲ್ಲಿ ತಲ್ಲೀನನಾಗಿ ಮಲಗಿ ಬಿಟ್ಟನು (ಏಕೆಂದರೆ ಸತ್ಯಲೋಕದಲ್ಲಿ ಉಸಿರಾಡುವ ಶರೀರ ಇರುವುದಿಲ್ಲ). ಬಹಳ ಸಮಯದವರೆಗೆ ಹೊರಬರಲಿಲ್ಲ. ಆಗ ಅಚಿಂತನು ಅಕ್ಷರ ಪುರುಷನನ್ನು ನಿದ್ರೆಯಿಂದ ಎಚ್ಚರಿಸಲು ಕವಿರ್ದೇವ(ಕಬೀರ್ ಪರಮೇಶ್ವರ)ರನ್ನು ಪ್ರಾರ್ಥಿಸಿದ, ಆಗ ಕವಿರ್ದೇವ ಮಾನಸ ಸರೋವರದಿಂದ ಸ್ವಲ್ಪ ಅಮೃತ ಜಲವನ್ನು ತೆಗೆದುಕೊಂಡು, ಅದರಿಂದ ಒಂದು ಮೊಟ್ಟೆಯನ್ನು ಮಾಡಿದರು ಹಾಗೂ ಆ ಮೊಟ್ಟೆಯಲ್ಲಿ ಒಂದು ಆತ್ಮವನ್ನು ಪ್ರವೇಶ ಮಾಡಿಸಿದರು. ಆ ಮೊಟ್ಟೆಯನ್ನು ಮಾನಸ ಸರೋವರದಲ್ಲಿ ಬಿಟ್ಟರು. ಮೊಟ್ಟೆಯ ಗಡ-ಗಡ ಶಬ್ದದಿಂದ ಅಕ್ಷರ ಪುರುಷನ ನಿದ್ರಾಭಂಗವಾಯಿತು. ಅವನು ಮೊಟ್ಟೆಯನ್ನು ಕೋಪದಿಂದ ನೋಡಿದನು. ಆಗ ಆ ಮೊಟ್ಟೆಯ ಎರಡು ಭಾಗವಾಯಿತು. ಅದರಿಂದ ಜ್ಯೋತಿನಿರಂಜನ(ಕ್ಷರ ಪುರುಷ) ಹೊರಬಂದ, ಅವನನ್ನೇ ಮುಂದೆ 'ಕಾಲ' ಎಂದು ಕರೆದರು. ಇವನ ವಾಸ್ತವಿಕ ಹೆಸರು "ಕೈಲ" ಎಂದು. ಆಗ ಸತ್ಯಪುರುಷನು (ಕವಿರ್ದೇವ) ಆಕಾಶವಾಣಿ ಮೂಲಕ ಅವರಿಬ್ಬರಿಗೆ (ಅಕ್ಷರ ಪುರುಷ ಹಾಗೂ ಕಾಲನಿಗೆ) ಹೊರಗೆ ಬರುವಂತೆ ಹೇಳಿದರು ಹಾಗು ಇಬ್ಬರನ್ನು ಅಚಿಂತನ ದ್ವೀಪದಲ್ಲಿರಲು ತಿಳಿಸಿದರು. ಸತ್ಯಪುರುಷನ ಆಜ್ಞೆಯಂತೆ ಅವರಿಬ್ಬರೂ ಅಲ್ಲಿಯೇ ಇರತೊಡಗಿದರು. (ಮಕ್ಕಳ ಅಸಮರ್ಥತೆಯನ್ನು ಅವರಿಗೇ ತೋರಿಸಿದರು, ಎಲ್ಲಾದರು ಮತ್ತೆ ಪ್ರಭುತ್ವದ ಆಸೆ ಆಗದಿರಲೆಂದು ಏಕೆಂದರೆ ಸಮರ್ಥರಿಂದಲೇ ಕಾರ್ಯ ಸಿದ್ಧವಾಗುತ್ತವೆ) ನಂತರ ಪೂರ್ಣಧನಿ ಕವಿರ್ದೇವರೇ ಎಲ್ಲ ರಚನಾ ಕಾರ್ಯಗಳನ್ನು ಸ್ವತಃ ಮಾಡಿದರು. ತಮ್ಮ ಶಬ್ಧ ಶಕ್ತಿಯಿಂದ ಒಂದು ರಾಜೇಶ್ವರಿ (ರಾಷ್ಟ್ರೀ) ಶಕ್ತಿಯನ್ನು ಉತ್ಪತ್ತಿ ಮಾಡಿದರು, ಅದರಿಂದ ಸಕಲ ಬ್ರಹ್ಮಾಂಡವಗಳನ್ನು ಸ್ಥಾಪಿಸಿದರು. ಇದನ್ನೇ ಪರಾಶಕ್ತಿ ಪರಾನಂದನೀ ಎನ್ನುತ್ತಾರೆ.

ಪೂರ್ಣ ಬ್ರಹ್ಮನು ತನ್ನ ಒಳಗಿನಿಂದ ತನ್ನ ವಚನ ಶಕ್ತಿಯ ಮೂಲಕ ಎಲ್ಲಾ ಆತ್ಮಗಳನ್ನು ತನ್ನ ಮಾನವ ಸದೃಶ್ಯ ಶರೀರವನ್ನಾಗಿ ಉತ್ಪನ್ನ ಮಾಡಿದನು. ಪ್ರತಿಯೊಂದು ಹಂಸ ಆತ್ಮಗಳ ಪರಮಾತ್ಮನಂತೆ ಶರೀರ ರಚಿಸಲಾಗಿದೆ, ಅದರ ಪ್ರಕಾಶವು (ತೇಜ) 16 ಸೂರ್ಯಗಳಷ್ಟು ಮಾನವ ಸದೃಶ್ಯವಾಗಿದೆ. ಆದರೆ ಪರಮೇಶ್ವರನ ಒಂದು ರೋಮ (ಶರೀರದ ಕೂದಲಿನ) ಪ್ರಕಾಶವು ಕೋಟಿ ಸೂರ್ಯರ ಪ್ರಕಾಶಕ್ಕಿಂತಲೂ ಅಧಿಕವಾಗಿದೆ. ಬಹಳ ಸಮಯದ ನಂತರ ಕ್ಷರ ಪುರುಷ (ಜ್ಯೋತಿನಿರಂಜನ)ನು ಯೋಚಿಸಿದ, "ನಾವು ಮೂವರೂ (ಅಚಿಂತ-ಅಕ್ಷರ ಪುರುಷ-ಕ್ಷರ ಪುರುಷ) ಒಂದೇ ದ್ವೀಪದಲ್ಲಿ ಇದ್ದೇವೆ. ಬೇರೆ ಸಹೋದರರು ಒಂದೊಂದು ದ್ವೀಪದಲ್ಲಿದ್ದಾರೆ. ನಾನೂ ಸಾಧನೆ ಮಾಡಿ. ಪ್ರತ್ಯೇಕ ದ್ವೀಪವನ್ನು ಪಡೆಯುವೆ". ಈ ವಿಚಾರ ಮಾಡಿ ಅವನು ಒಂಟಿ ಕಾಲಿನಲ್ಲಿ ನಿಂತು 70 ಯುಗಗಳವರೆಗೆ ತಪಸ್ಸು ಮಾಡಿದ.

## "ಆತ್ಮಗಳು ಕಾಲನ ಬಲೆಯಲ್ಲಿ ಹೇಗೆ ಸಿಲುಕಿಕೊಂಡವು?"

ವಿಶೇಷ:- ಬ್ರಹ್ಮ (ಜ್ಯೋತಿ ನಿರಂಜನ) ತಪಸ್ಸು ಮಾಡುತ್ತಿದ್ದ, ಇಂದು ಜ್ಯೋತಿನಿರಂಜನನ ಇಪ್ಪತ್ತೊಂದು ಬ್ರಹ್ಮಾಂಡಗಳಲ್ಲಿರುವ ಆತ್ಮಗಳು, ಜ್ಯೋತಿನಿರಂಜನನ (ಬ್ರಹ್ಮ) ತಪಸ್ಸಿನ ಮೇಲೆ ಆಸಕ್ತಗೊಂಡು ತಮ್ಮ ಹೃದಯದಿಂದ ಅವನನ್ನು ಇಷ್ಟಪಡತೊಡಗಿದೆವು. ನಮಗೆ ಸುಖ ನೀಡುತ್ತಿದ್ದ ಪ್ರಭು ಸತ್ಯಪುರುಷನಿಗೆ ವಿಮುಖರಾದೆವು. ಈ ಕಾರಣದಿಂದಾಗಿ ಪತಿವ್ರತೆ ಪದವಿಯಿಂದ ಕೆಳಗೆ ಬಿದ್ದೆವು. ಪೂರ್ಣ ಪುರುಷನ ಮೂಲಕ ಪದೇ ಪದೇ ಎಚ್ಚರಿಕೆ ದೊರೆತರೂ, ನಮ್ಮ ಆಸಕ್ತಿ ಕ್ಷರ ಪುರುಷನಿಂದ ಬೇರಾಗಲಿಲ್ಲ. [ಇದೇ ಪ್ರಭಾವವು ಇಂದಿಗೂ ಕಾಲನ ಸೃಷ್ಟಿಯ ಮೇಲಿದೆ. ಯಾವ ರೀತಿ ನಮ್ಮ ಯುವ ಪೀಳಿಗೆ ಚಲನಚಿತ್ರ ನಟ-ನಟಿಯರ ಕೃತಕ ಅಭಿನಯ ಹಾಗೂ ತಮ್ಮ ದೈನಂದಿನ ಬದುಕಿಗಾಗಿ ಮಾಡುತ್ತಿರುವ ಪಾತ್ರಗಳ ಮೇಲೆ ಎಷ್ಟು ಆಸಕ್ತಿ ತಾಳುತ್ತಾರೆ. ಹೇಳಿದರೂ ಕೇಳಲ್ಲ. ಯಾರಾದರೂ ಸಿನಿಮಾ ನಟ-ನಟಿಯರು ಪಟ್ಟಣಕ್ಕೆ / ಯಾವುದೇ ಊರಿಗೆ ಬರುತ್ತಾರೆಂದಾದರೆ, ಅವರನ್ನು ನೋಡಲು ಮುಗ್ಧ ಮಕ್ಕಳ ಸಮೂಹ ಬಹು ಸಂಖ್ಯೆಯಲ್ಲಿ

ಒಟ್ಟುಗೂಡುತ್ತಾರೆ. ಏನು ಕೊಳ್ಳುವುದಿಲ್ಲ ಏನು ತಗೊಳುವುದಿಲ್ಲ, ಅವರ ದೈನಂದಿನ ಬದುಕಿಗಾಗಿ ನಟ–ನಟಿಯರು ಹಣ ಸಂಪಾದಿಸುತ್ತಿದ್ದಾರೆ. ಅಪ್ಪ–ಅಮ್ಮ ಎಷ್ಟು ಬುದ್ಧಿ ಹೇಳಿದರೂ ಮಕ್ಕಳು ಕೇಳಲ್ಲ, ಎಲ್ಲಾದರೂ, ಎಂದಾದರೂ ಕದ್ದು–ಮುಚ್ಚಿ ಹೋಗುತ್ತಿರುತ್ತಾರೆ.]

**ಪೂರ್ಣ ಬ್ರಹ್ಮ ಕವಿರ್ದೇವರು(ಸತ್ಯಕಬೀರರು) ಕ್ಷರ ಪುರುಷನನ್ನು ನಿನಗೇನು ಬೇಕು? ಎಂದು ಕೇಳಿದರು, ಆಗ ಅವನು ನನಗೆ ಈ ಜಾಗ ಸಾಲದು, ಪ್ರತ್ಯೇಕವಾದ ದ್ವೀಪವನ್ನು ದಯಮಾಡಿ ಕೊಡಬೇಕು ಎಂದು ಕೇಳಿದನು. ಹಕ್ಕಾ ಕಬೀರ (ಸತ್ಯ ಕಬೀರ)ರು ಅವನಿಗೆ 21 ಬ್ರಹ್ಮಾಂಡಗಳನ್ನು ಅನುಗ್ರಹಿಸಿದರು. ಕೆಲ ಸಮಯದ ನಂತರ ಜ್ಯೋತಿನಿರಂಜನ ಈ ದ್ವೀಪಗಳಲ್ಲಿ ಏನಾದರೂ ರಚನೆ ಮಾಡಬೇಕು, ಖಾಲಿ ಬ್ರಹ್ಮಾಂಡ (ಫ್ಲಾಟ್) ಏತಕ್ಕೆ? ಪ್ರಯೋಜನವಿಲ್ಲ ಎಂದು ಯೋಚಿಸಿದನು. ಈ ವಿಚಾರ ಮಾಡಿ 70 ಯುಗಗಳವರೆಗೆ ತಪಸ್ಸನ್ನು ಮಾಡಿ. ಪೂರ್ಣ ಬ್ರಹ್ಮ ಕವಿರ್ದೇವರನ್ನು ರಚನೆಯ ಸಾಮಾಗ್ರಿಗಳಿಗಾಗಿ ಪ್ರಾರ್ಥಿಸಿದನು. ಆಗ ಅವರು (ಕವಿರ್ದೇವರು) ಮೂರು ಗುಣಗಳು ಮತ್ತು ಐದು ತತ್ವಗಳನ್ನು ಅನುಗ್ರಹಿಸಿದರು. ಇದರಿಂದ ಜ್ಯೋತಿ ನಿರಂಜನ ತನ್ನ ಬ್ರಹ್ಮಾಂಡದಲ್ಲಿ ಸೃಷ್ಟಿ ರಚಿಸಿ, ನಂತರ ಯೋಚಿಸಿದನು. ಇವುಗಳಲ್ಲಿ ಜೀವಗಳಿರಬೇಕು. ಒಬ್ಬನೇ ಇರಲು ಮನಸ್ಸು ಬರುತ್ತಿಲ್ಲ. ನಂತರ 64 ಯುಗಗಳವರೆಗೆ ತಪಸ್ಸು ಮಾಡಿದನು. ಪರಮಾತ್ಮ ಕವಿರ್ದೇವರು ಕೇಳಿದಾಗ ಹೇಳಿದನು–"ನನಗೆ ಕೆಲವು ಆತ್ಮಗಳನ್ನು ಕೊಡಿ ಒಬ್ಬನೇ ಇರಲು ಮನಸ್ಸಾಗುತ್ತಿಲ್ಲ" ಆಗ ಸತ್ಯಪುರುಷ ಕವಿರಗ್ನಿ (ಕಬೀರ್ ಪರಮೇಶ್ವರ) ಹೇಳಿದರು ಬ್ರಹ್ಮ ನಿನ್ನ ತಪದ ಫಲವಾಗಿ ನಿನಗೆ ಬೇರೆ ಇನ್ನಷ್ಟು ಬ್ರಹ್ಮಾಂಡಗಳನ್ನು ಕೊಡುವೆ ಆದರೆ, ನನ್ನ ಆತ್ಮಗಳನ್ನು ನಿನ್ನ ಜಪ–ತಪ ಸಾಧನೆಯ ಫಲವಾಗಿ ಕೊಡಲು ಸಾಧ್ಯವಿಲ್ಲ". ಒಂದುವೇಳೆ ಸ್ವಇಚ್ಛೆಯಿಂದ ಯಾರಾದರೂ ಹೋಗಬಯಸಿದರೆ ಹೋಗಬಹುದು ಎಂದರು. ಸಮರ್ಥ ಕಬೀರರ ವಚನ ಕೇಳಿ ಜ್ಯೋತಿನಿರಂಜನ ನಮ್ಮ ಬಳಿ ಬಂದನು. ನಾವೆಲ್ಲರು ಅವನನ್ನು ಸುತ್ತಿಕೊಂಡು ನಿಂತೆವು ಏಕೆಂದರೆ ಮೊದಲಿನಿಂದಲೂ ನಮಗೆ ಅವನಲ್ಲಿ ಆಸಕ್ತಿ ಇತ್ತು. ಆಗ ಜ್ಯೋತಿನಿರಂಜನ ನಮ್ಮೊಂದಿಗೆ ಹೇಳಿದನು.**

**"ನನಗೆ ತಂದೆಯವರು ಬೇರೆ 21 ಬ್ರಹ್ಮಾಂಡಗಳನ್ನು ಕೊಟ್ಟಿದ್ದಾರೆ. ನಾನು ಅಲ್ಲಿ ನಾನಾ ಪ್ರಕಾರದ ರಮಣೀಯ ಸ್ಥಾನಗಳನ್ನು ರಚಿಸಿದ್ದೇನೆ. ಏನು ನೀವು ನನ್ನ ಜೊತೆ ಬರುವಿರಾ? ಎಂದಾಗ". ನಾವೇಲ್ಲರು ಯಾರು ಇವತ್ತು ಈ 21 ಬ್ರಹ್ಮಾಂಡದಲ್ಲಿ ಕಷ್ಟಪಡುತ್ತಿರುವರೋ, ನಮಗೆ ತಂದೆಯ ಅನುಮತಿ ಸಿಕ್ಕಿದರೆ ನಾವು ಬರುವೆವು ಎಂದೆವು. ಆಗ ಕ್ಷರ ಪುರುಷನು ಪೂರ್ಣ ಬ್ರಹ್ಮ ಕವಿರ್ದೇವರಲ್ಲಿಗೆ ಹೋಗಿ ಎಲ್ಲಾ ಮಾತು ಹೇಳಿದನು. ಆಗ ಕವಿರಗ್ನಿ (ಕಬೀರ್ ಪರಮೇಶ್ವರ) ರು ನನ್ನ ಮುಂದೆ ನಿನ್ನ ಜೊತೆ ಬರಲು ಇಚ್ಛಿಸುವವರಿಗೆ ಆಜ್ಞೆ ಕೊಡುವೆ ಎಂದರು. ಕ್ಷರ ಪುರುಷ ಹಾಗೂ ಪರಮ ಅಕ್ಷರ ಪುರುಷ (ಕವಿರಮಿತೌಜಾ=ಕವಿರ್ ಅಮಿತ ಔಜಾ ಅಂದರೆ ಯಾರ ಶಕ್ತಿಯ ಪಾರವೇ ಇಲ್ಲ, ಅವನೇ ಕಬೀರ) ಇಬ್ಬರೂ ನಮ್ಮ (ಹಂಸಾತ್ಮಗಳ) ಬಳಿಗೆ ಬಂದರು. ಸತ್ಯ ಕವಿರ್ದೇವ ಯಾವ ಆತ್ಮಗಳು ಬ್ರಹ್ಮನೊಂದಿಗೆ ಹೋಗಲು ಬಯಸುತ್ತಿದ್ದಿರಿ ತಮ್ಮ ಕೈ ಮೇಲೆತ್ತಿ ಎಂದರು. ತಂದೆಯ ಎದುರು ಕೈ ಎತ್ತಲು ಯಾರಿಗೂ ಧೈರ್ಯ ಬರಲಿಲ್ಲ. ಯಾರೂ ಒಪ್ಪಿಗೆ ಕೊಡಲಿಲ್ಲ. ಬಹಳ ಸಮಯದವರೆಗೆ ಶಾಂತಿ ಆವರಿಸಿತ್ತು. ನಂತರ ಒಂದು ಹಂಸಾತ್ಮವು ಧೈರ್ಯ ಮಾಡಿ ತಾನು ಹೋಗುವುದಾಗಿ ಸಮ್ಮತಿ ಸೂಚಿಸಿತು. ತದನಂತರ ಒಬ್ಬರೊಬ್ಬರನ್ನು ನೋಡಿ (ಯಾರು ಇಂದು ಕಾಲನ(ಬ್ರಹ್ಮನ) 21 ಬ್ರಹ್ಮಾಂಡದಲ್ಲಿ ಸಿಲುಕಿಕೊಂಡಿರುವರು) ಆತ್ಮಗಳಾದ ನಾವೆಲ್ಲರೂ ಸಮ್ಮತಿ ಸೂಚಿಸಿದೆವು. ಜ್ಯೋತಿ ನಿರಂಜನನಿಗೆ ಪರಮೇಶ್ವರ ಕಬೀರರು ಹೇಳಿದರು "ನೀನೀಗ ನಿನ್ನ ಸ್ಥಾನಕ್ಕೆ ಹೋಗು" ಯಾರೆಲ್ಲಾ ಹಂಸಾತ್ಮಗಳು ನಿನ್ನೊಂದಿಗೆ ಬರಲು ಒಪ್ಪಿಗೆ ಕೊಟ್ಟಿರುವರೊ, ಅವರನ್ನೆಲ್ಲಾ ನಾನು ನಿನ್ನ ಹತ್ತಿರ ಕಳುಹಿಸಿ ಕೊಡುತ್ತೇನೆ. ಜ್ಯೋತಿ ನಿರಂಜನ ತನ್ನ 21 ಬ್ರಹ್ಮಾಂಡದಲ್ಲಿ ಹೋದನು. ಆ ಸಮಯದವರೆಗೆ ಈ 21 ಬ್ರಹ್ಮಾಂಡಗಳೂ ಸತ್ಯಲೋಕದಲ್ಲೇ ಇದ್ದವು.**

**ಇದಾದ ಮೇಲೆ ಪೂರ್ಣ ಬ್ರಹ್ಮನು ಮೊದಲು ಒಪ್ಪಿಗೆ ಸೂಚಿಸಿದ ಆತ್ಮಕ್ಕೆ ಹುಡುಗಿಯ**

ರೂಪವನ್ನು ಕೊಟ್ಟನು, ಆದರೆ ಸ್ತ್ರೀ ಇಂದ್ರಿಯವನ್ನು ರಚಿಸಲಿಲ್ಲ. ಎಲ್ಲ ಆತ್ಮಗಳನ್ನೂ (ಯಾವ ಆತ್ಮಗಳು ಜ್ಯೋತಿನಿರಂಜನನ್ನೊಂದಿಗೆ ಬರಲು ಸಮ್ಮತಿ ಕೊಟ್ಟಿದ್ದವು) ಹುಡುಗಿಯ ಶರೀರದ ಒಳಗೆ ಪ್ರವೇಶ ಮಾಡಿದನು ಹಾಗು ಅವಳಿಗೆ ಅಷ್ಟಾ (ಆದಿಮಾಯಾ/ಪ್ರಕೃತಿದೇವಿ/ದುರ್ಗಾ) ಎಂದು ಹೆಸರು ಬಂತು, ಸತ್ಯಪುರುಷನು ಹೇಳಿದನು. "ಪುತ್ರಿ ನಾನು ನಿನಗೆ ಶಬ್ದ (ವಚನ) ಶಕ್ತಿ ಪ್ರದಾನ ಮಾಡಿರುತ್ತೇನೆ. ಬ್ರಹ್ಮನು ಎಷ್ಟು ಜೀವಗಳನ್ನು ಉತ್ಪತ್ತಿ ಮಾಡಲು ಹೇಳುವನೋ, ಅಷ್ಟು ಜೀವಗಳನ್ನು ಉತ್ಪತ್ತಿ ಮಾಡು." ನಂತರ ಪೂರ್ಣ ಬ್ರಹ್ಮನು ತನ್ನ ಪುತ್ರ ಸಹಜದಾಸನ ಮೂಲಕ ಪ್ರಕೃತಿಯನ್ನು ಕ್ಷರ ಪುರುಷನ ಹತ್ತಿರ ಕಳುಹಿಸಿದ. ಸಹಜದಾಸನು ಜ್ಯೋತಿ ನಿರಂಜನ (ಕ್ಷರ ಪುರುಷ) ನಿಗೆ ಹೇಳಿದನು. "ತಂದೆಯವರು ಈ ಸಹೋದರಿಯ ಶರೀರದಲ್ಲಿ (ತಮ್ಮೊಂದಿಗೆ ಬರಲು ಒಪ್ಪಿದ ಹಂಸಾತ್ಮಗಳನ್ನು) ಆ ಎಲ್ಲಾ ಆತ್ಮಗಳನ್ನು ಪ್ರವೇಶ ಮಾಡಿದ್ದಾರೆ ಹಾಗೂ ಇವಳಿಗೆ ಶಬ್ದ (ವಚನ) ಶಕ್ತಿಯನ್ನು ನೀಡಿದ್ದಾರೆ. ನೀವು ಎಷ್ಟು ಜೀವಗಳನ್ನು ಇಚ್ಛಿಸುವಿರೋ, ಅಷ್ಟು ಜೀವಗಳನ್ನು ಪ್ರಕೃತಿ ಉತ್ಪನ್ನ ಮಾಡುತ್ತಾಳೆ. ಹೀಗೆ ಹೇಳಿ ಸಹಜದಾಸನು ತನ್ನ ದ್ವೀಪಕ್ಕೆ ಹಿಂತಿರುಗಿದನು.


ಯುವತಿಯಾಗಿದ್ದ ಕಾರಣ ಹುಡುಗಿಯ ರೂಪ-ಬಣ್ಣ ಆಕರ್ಷಣೀಯವಾಗಿತ್ತು. ಬ್ರಹ್ಮನ ಒಳಗೆ ವಿಷಯವಾಸನೆ (ಕಾಮಬಯಕೆ) ಹುಟ್ಟಿಕೊಂಡಿತು. ಹಾಗು ಪ್ರಕೃತಿ ದೇವಿಯೊಂದಿಗೆ ಅಸಭ್ಯವರ್ತನೆಯನ್ನು ಮಾಡತೊಡಗಿದ. ತನಗೆ ತಂದೆಯವರು ಪ್ರದಾನ ಮಾಡಿರುವ ಶಬ್ದ(ವಚನ) ಶಕ್ತಿ ಇದೆ, ನೀವು ಬಯಸಿದಷ್ಟು ಜೀವಗಳನ್ನು ವಚನದಿಂದ ಉತ್ಪತ್ತಿ ಮಾಡುವೆನು. ನೀವು ಮೈಥುನ ಪರಂಪರೆ ಪ್ರಾರಂಭಿಸಬೇಡಿ. ನೀವು ಸಹ ಅದೇ ತಂದೆಯ ಶಬ್ದ ಶಕ್ತಿಯಿಂದ ಮೊಟ್ಟೆಯಿಂದ ಉತ್ಪನ್ನವಾಗಿದ್ದಿರಿ. ನಾನೂ ಸಹ ಅದೇ ತಂದೆಯವರಿಂದ ಉತ್ಪತ್ತಿಯಾಗಿರುವೆ. ಹೀಗಿರುವಾಗ ನಾವಿಬ್ಬರೂ ಅಣ್ಣ-ತಂಗಿಯರಾಗಿದ್ದೇವೆ. ಅಣ್ಣ-ತಂಗಿಯ ಈ ಸಂಯೋಗ ಮಹಾಪಾಪದ ಕಾರಣವಾಗುವುದು. ಆದರೆ ಜ್ಯೋತಿ ನಿರಂಜನನು, ಪ್ರಕೃತಿಯ ಒಂದು ಮಾತನ್ನು ಕೇಳಲಿಲ್ಲ. ಮತ್ತು ತನ್ನ ಶಬ್ದ (ವಚನ) ಶಕ್ತಿ ಮೂಲಕ ಉಗುರುಗಳಿಂದ ಸ್ತ್ರೀ ಇಂದ್ರಿ ಪ್ರಕೃತಿಗೆ ಹಚ್ಚಿದನು ಹಾಗು ಬಲಾತ್ಕರಿಸಲು ಇಚ್ಛಿಸಿದನು. ಆಗ ದುರ್ಗಾ ತನ್ನ ಮಾನರಕ್ಷಣೆಗೆ ಅನ್ಯ ಮಾರ್ಗ ಕಾಣದೆ. ಸೂಕ್ಷ್ಮರೂಪ ಧರಿಸಿ ಜ್ಯೋತಿ ನಿರಂಜನನ ತೆರೆದ ಬಾಯಿಯ ಮೂಲಕ ಹೊಟ್ಟೆಯಲ್ಲಿ ಪ್ರವೇಶಿದಳು ಮತ್ತು ಪೂರ್ಣ ಬ್ರಹ್ಮ (ಕವಿರ್ದೇವ) ರಲ್ಲಿ ತನ್ನ ರಕ್ಷಣೆಗಾಗಿ ಯಾಚಿಸಿದಳು. ಅಲ್ಲಿ ಪರಮೇಶ್ವರ ಕವಿರ್ದೇವರು ತನ್ನ ಪುತ್ರ, ಯೋಗ ಸಂತಾಯನ ಅರ್ಥಾತ್ ಯೋಗಜೀತನ ರೂಪದಲ್ಲಿ ಅಲ್ಲಿ ಪ್ರಕಟರಾದರು. ಹಾಗೂ ಆ ಕನ್ಯೆಯನ್ನು ಬ್ರಹ್ಮನ(ಜ್ಯೋತಿ ನಿರಂಜನ) ಉದರದಿಂದ ಹೊರಗೆ ತೆಗೆದರು. ಮತ್ತು ಬ್ರಹ್ಮನಿಗೆ ಹೇಳಿದರು. ಜ್ಯೋತಿ ನಿರಂಜನ ಇಂದಿನಿಂದ ನಿನ್ನ ಹೆಸರು "ಕಾಲ" ಎಂದಾಗುವುದು. ನಿನಗೆ ಹುಟ್ಟು-ಸಾವು ಆಗುತ್ತಿರುವುದು. ಆದ್ದರಿಂದ ನಿನ್ನ ಹೆಸರು 'ಕ್ಷರ' ಪುರುಷ ಎಂದಾಗುವುದು ಹಾಗು ಒಂದು ಲಕ್ಷ ಮಾನವ ಶರೀರಧಾರಿ ಜೀವಾತ್ಮಗಳನ್ನು ಪ್ರತಿದಿನ ತಿನ್ನುವೆ ಹಾಗೂ ಒಂದೂ ಕಾಲು ಲಕ್ಷ ಉತ್ಪನ್ನ ಮಾಡುವೆ. ನಿಮ್ಮಿಬ್ಬರನ್ನೂ 21 ಬ್ರಹ್ಮಾಂಡಗಳ ಸಹಿತ ಹೊರಹಾಕಲಾಗುತ್ತದೆ. (ಸತ್ಯಲೋಕದಿಂದ ಬೇರೆ) ಇಷ್ಟು ಹೇಳಿದ ಕೂಡಲೆ 21 ಬ್ರಹ್ಮಾಂಡಗಳು ವಿಮಾನದ ಹಾಗೆ ಹೊರಟವು. ಸಹಜದಾಸನ ದ್ವೀಪದ ಹತ್ತಿರದಿಂದ ಹಾದು ಹೋಗುತ್ತ ಸತ್ಯಲೋಕದಿಂದ 16 ಶಂಖ ಕೋಸ {1 ಕೋಸ ಸುಮಾರು 3 ಕಿ.ಮೀ ಇರುತ್ತದೆ} ದೂರದಲ್ಲಿ ಬಂದು ನಿಂತವು.

ವಿಶೇಷ ವಿವರಣೆ:- ಈವರೆಗೆ 3 ಶಕ್ತಿಗಳ ವಿವರಣೆ ಬಂದಿದೆ.

**1.ಪೂರ್ಣ ಬ್ರಹ್ಮ:-** ಇವರನ್ನು ಬೇರೆ ಉಪಮಾತ್ಮಕ ನಾಮಗಳಿಂದಲೂ ಕರೆಯಲಾಗುತ್ತದೆ. ಉದಾ:- ಸತ್ಯಪುರುಷ, ಅಕಾಲ ಪುರುಷ, ಶಬ್ಧ ಸ್ವರೂಪಿ ರಾಮ, ಪರಮ ಅಕ್ಷರ ಬ್ರಹ್ಮ/ಪುರುಷ ಇತ್ಯಾದಿ. ಈ ಪೂರ್ಣ ಬ್ರಹ್ಮ ಅಶಂಖ್ಯ ಬ್ರಹ್ಮಾಂಡಗಳ ಸ್ವಾಮಿ ಹಾಗೂ ವಾಸ್ತವವಾಗಿ ಅವಿನಾಶಿ ಆಗಿದ್ದಾರೆ.

**2.ಪರಬ್ರಹ್ಮ:-** ಇವನನ್ನು ಅಕ್ಷರ ಪುರುಷ ಎಂದೂ ಕರೆಯಲಾಗುತ್ತದೆ. ಇವನು ವಾಸ್ತವವಾಗಿ ಅವಿನಾಶಿ ಅಲ್ಲ. 7 ಶಂಖ ಬ್ರಹ್ಮಾಂಡಗಳ ಸ್ವಾಮಿ.

# ಒಂದು ಬ್ರಹ್ಮಾಂಡದ ಲಘು ಚಿತ್ರ



3.ಬ್ರಹ್ಮ:– ಇವನನ್ನು ಜ್ಯೋತಿ ನಿರಂಜನ, ಕಾಲ, ಕಾಲ ರೂಪಿ ಬ್ರಹ್ಮ, ಕೈಲ, ಕ್ಷರಪುರುಷ ಹಾಗೂ ಧರ್ಮರಾಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇವನು 21 ಬ್ರಹ್ಮಾಂಡಗಳಿಗೆ ಮಾತ್ರ ಸ್ವಾಮಿ, ಈಗ ಮುಂದೆ ಇದೇ ಬ್ರಹ್ಮ(ಕಾಲ)ನ ಸೃಷ್ಟಿಯ ಒಂದು ಬ್ರಹ್ಮಾಂಡದ ಪರಿಚಯವನ್ನು ಕೊಡುವೆವು. ಇದರಲ್ಲಿ ಇನ್ನು ಮೂರು ಬೇರೆ ಹೆಸರುಗಳು ನಿಮಗೆ ಓದಲು ಸಿಗುವವು. ಬ್ರಹ್ಮಾ, ವಿಷ್ಣು ಹಾಗೂ ಶಿವ.

ಬ್ರಹ್ಮ ಹಾಗೂ ಬ್ರಹ್ಮಾನಲ್ಲಿ ಭೇದ:– ಒಂದು ಬ್ರಹ್ಮಾಂಡದ ಅತ್ಯುನ್ನತ ಸ್ಥಾನದಲ್ಲಿ ಸ್ವತಃ ಬ್ರಹ್ಮನು 3 ಗುಪ್ತ ಸ್ಥಾನಗಳನ್ನು ರಚನೆ ಮಾಡಿ, ಬ್ರಹ್ಮಾ–ವಿಷ್ಣು ಹಾಗೂ ಶಿವನ ರೂಪದಲ್ಲಿರುತ್ತಾನೆ. ಅವನ ಹೆಂಡತಿ ಪ್ರಕೃತಿಯ(ದುರ್ಗಾ) ಸಹಯೋಗದಿಂದ ಮೂರು ಪುತ್ರರನ್ನು ಉತ್ಪತ್ತಿ ಮಾಡುತ್ತಾನೆ. ಅವರ ಹೆಸರು ಸಹ ಬ್ರಹ್ಮಾ–ವಿಷ್ಣು ಹಾಗೂ ಶಿವ ಇಡುತ್ತಾನೆ. ಆ ಬ್ರಹ್ಮನ ಹಿರಿಯ ಪುತ್ರನೇ ಬ್ರಹ್ಮಾ. ಈ ಬ್ರಹ್ಮಾನು 1 ಬ್ರಹ್ಮಾಂಡದಲ್ಲಿ ಕೇವಲ 3 ಲೋಕಗಳಲ್ಲಿ (ಪೃಥ್ವಿಲೋಕ, ಸ್ವರ್ಗಲೋಕ ಹಾಗೂ ಪಾತಾಳಲೋಕದಲ್ಲಿ) ಒಂದು ರಜೋಗುಣ ವಿಭಾಗದ ಮಂತ್ರಿಯಾಗಿದ್ದಾನೆ. ಇವನನ್ನು ತ್ರಿಲೋಕೀಯ 'ಬ್ರಹ್ಮಾ' ಎನ್ನುತ್ತಾರೆ ಹಾಗೂ ಬ್ರಹ್ಮನು ಬ್ರಹ್ಮಲೋಕದಲ್ಲಿ ಬ್ರಹ್ಮಾ ರೂಪದಲ್ಲಿರುತ್ತಾನೆ, ಅವನನ್ನು ಮಹಾಬ್ರಹ್ಮಾ ಹಾಗೂ ಬ್ರಹ್ಮಲೋಕೀಯ ಬ್ರಹ್ಮಾ ಎಂದು ಹೇಳಲಾಗುತ್ತದೆ. ಇದೇ ಬ್ರಹ್ಮ (ಕಾಲ) ನನ್ನು ಮಹಾಬ್ರಹ್ಮಾ, ಮಹಾವಿಷ್ಣು, ಮಹಾಶಿವ (ಸದಾಶಿವ) ಎಂದೂ ಸಹ ಹೇಳುತ್ತಾರೆ.

ಶ್ರೀವಿಷ್ಣುಪುರಾಣದಲ್ಲಿ ಪ್ರಮಾಣ:– ಚತುರ್ಥ ಅಂಶದ ಒಂದನೇ ಅಧ್ಯಾಯದ ಪುಟ 230–231ರಲ್ಲಿ, ಶ್ರೀಬ್ರಹ್ಮಾ ಹೇಳಿದ್ದಾನೆ:– ಆ ಅಜನ್ಮ, ಸರ್ವಮಯ ವಿಧಾತಾ, ಪರಮೇಶ್ವರನ ಆದಿ–ಮಧ್ಯ, ಅಂತ್ಯ ಸ್ವರೂಪ, ಸ್ವಭಾವ ಮತ್ತು ಸಾರ(ತತ್ವ) ವನ್ನು ನಾವು ತಿಳಿಯಲಾಗುದಿಲ್ಲ. (ಶ್ಲೋಕ 83)

ಯಾರು ನನ್ನ ರೂಪಧಾರಣೆ ಮಾಡಿ, ಪ್ರಪಂಚದ ರಚನೆ ಮಾಡುತ್ತಾನೆ, ಸ್ಥಿತಿಯ ಸಮಯದಲ್ಲಿ ಪುರುಷ ರೂಪವೆನಿದೆ ಹಾಗು ರುದ್ರ ರೂಪದಿಂದ ಪ್ರಪಂಚದ ನಾಶ ಮಾಡುತ್ತಾನೋ, ಅನಂತ ರೂಪದಿಂದ ಸಮಸ್ತ ವಿಶ್ವವನ್ನು ಧಾರಣೆ ಮಾಡುತ್ತಾನೆ. (ಶ್ಲೋಕ 86)

## "ಶ್ರೀಬ್ರಹ್ಮಾ, ಶ್ರೀವಿಷ್ಣು ಹಾಗೂ ಶ್ರೀಶಿವ ಇವರ ಉತ್ಪತ್ತಿ"

ಕಾಲನು ಪ್ರಕೃತಿಗೆ ಹೇಳಿದ ಈಗ ನನಗೆ ಯಾರು ಏನು ಮಾಡಬಲ್ಲರು? ಮನಸೆಚ್ಛೆ ಮಾಡುವೆನು. ಆಗ ಪ್ರಕೃತಿಯು ನಿಮಗೆ ನಾಚಿಕೆಯಾಗಬೇಕು ಎಂದು ಹೇಳಿದಳು. ಪುನಃ ಬ್ರಹ್ಮನಿಗೆ ತಮ್ಮಿಬ್ಬರ ಸಂಬಂಧದ ಬಗ್ಗೆ ಹೇಳುತ್ತಾಳೆ. ನಾವಿಬ್ಬರೂ ಒಂದೇ ತಂದೆಯ ಶಬ್ದಶಕ್ತಿಯಿಂದ ಉತ್ಪನ್ನವಾದವರು ನಿಮ್ಮ ಉತ್ಪನ್ನ ಮೊಟ್ಟೆಯಿಂದ ಹಾಗೂ ನಂತರ ನನ್ನ ಉತ್ಪತ್ತಿ ವಚನದಿಂದ ಆಗಿದೆ, ಇನ್ನೊಂದು ನಾನು ನಿಮ್ಮ ಉದರದಿಂದ (ಹೊಟ್ಟೆಯಿಂದ) ಹೊರ ಬಂದವಳು. ಒಂದು ರೀತಿಯಲ್ಲಿ ತಂಗಿ, ಇನ್ನೊಂದು ರೀತಿಯಲ್ಲಿ ಮಗಳು ನೀವು ನನ್ನ ತಂದೆ. ಇಂತಹ ಪವಿತ್ರ ಸಂಬಂಧವನ್ನು ಕೆಡಸುವುದು ಮಹಾಪಾಪ. ನನ್ನ ಹತ್ತಿರ ತಂದೆಯವರು ಪ್ರದಾನ ಮಾಡಿರುವ ಶಬ್ದ ಶಕ್ತಿ ಇದೆ. ನೀವು ಬಯಸಿದಷ್ಟು ಜೀವಗಳನ್ನು ಉತ್ಪತ್ತಿ ಮಾಡಿಕೊಡುವೆ. ಆದರೆ ಜ್ಯೋತಿ ನಿರಂಜನ ಇವಳ ಮಾತನ್ನು ತಿರಸ್ಕರಿಸಿದ, "ಅಲ್ಲದೆ ನಗೀಗಾಗಲೆ ಸತ್ಯಲೋಕದಿಂದ ಹೊರಹಾಕಿರುವ ಶಿಕ್ಷೆ ದೊರೆತಾಗಿದೆ, ಈಗ ನಾನು ಮನಸ್ಸಿಗೆ ಬಂದ ಹಾಗೆ ಮಾಡುವೆ" ಎಂದು ಹೇಳಿ ಕಾಲನು ಬಲವಂತದಿಂದ ಪ್ರಕೃತಿಯೊಡನೆ ಮದುವೆಯಾದ ಹಾಗು 3 ಜನ ಪುತ್ರ (ರಜೋಗುಣಯುಕ್ತ ಬ್ರಹ್ಮಾ, ಸತೋಗುಣಯುಕ್ತ ವಿಷ್ಣು ಹಾಗೂ ತಮೋಗುಣಯುಕ್ತ ಶಿವಶಂಕರ) ರನ್ನು ಉತ್ಪತ್ತಿ ಮಾಡಿದನು. ಯುವಕರಾಗುವವರೆಗೆ ಮೂರೂ ಪುತ್ರರನ್ನು ದುರ್ಗೆಯ ಮೂಲಕ ಅಚೇತಗೊಳಿಸುತ್ತಾನೆ. (ಚೈತನ್ಯರಹಿತ) ನಂತರ ಯುವಕರಾದಮೇಲೆ ಬ್ರಹ್ಮಾನನ್ನು ಕಮಲಪುಷ್ಪದ ಮೇಲೆ, ಶ್ರೀವಿಷ್ಣುವನ್ನು ಶೇಷನಾಗನ ಶಯನದ ಮೇಲೆ, ಶ್ರೀಶಿವನನ್ನು ಕೈಲಾಸ ಪರ್ವತದ ಮೇಲೆ ಸಚೇತಗೊಳಿಸುತ್ತಾನೆ. ನಂತರ ಪ್ರಕೃತಿಯ ಮೂಲಕ ಈ ಮೂವರಿಗೂ ಮದುವೆ ಮಾಡಿಸುತ್ತಾನೆ. ನಂತರ ಕಾಲನ ಆದೇಶದಿಂದ ಪ್ರಕೃತಿಯು

ಮೂವರಿಗೂ ಒಂದು ಬ್ರಹ್ಮಾಂಡದಲ್ಲಿ 3 ಲೋಕ (ಭೂಲೋಕ–ಸ್ವರ್ಗಲೋಕ–ಪಾತಳಲೋಕ) ಗಳಲ್ಲಿ ಒಂದೊಂದು ವಿಭಾಗದ ಮಂತ್ರಿ (ಪ್ರಭು) ಎಂದು ನೇಮಿಸುತ್ತಾಳೆ. ರಜೋಗುಣ ವಿಭಾಗಕ್ಕೆ– ಬ್ರಹ್ಮಾ, ಸತೋಗುಣ ವಿಭಾಗಕ್ಕೆ ವಿಷ್ಣು, ತಮೋಗುಣ ವಿಭಾಗಕ್ಕೆ ಶಿವನನ್ನು ನೇಮಿಸಿದಳು ಹಾಗು ಕಾಲಬ್ರಹ್ಮ ಸ್ವತಃ ಗುಪ್ತರೂಪದಲ್ಲಿ (ಮಹಾಬ್ರಹ್ಮಾ–ಮಹಾವಿಷ್ಣು–ಮಹಾಶಿವನಾಗಿ) ಮುಖ್ಯಮಂತ್ರಿಯ ಪದವಿಯನ್ನು ನಿಭಾಯಿಸುತ್ತಾನೆ. ಒಂದು ಬ್ರಹ್ಮಾಂಡದಲ್ಲಿ ಒಂದು "ಬ್ರಹ್ಮ" ಲೋಕದ ರಚನೆ ಮಾಡಿದ್ದಾನೆ. ಅದರಲ್ಲಿ ಮೂರು ಗುಪ್ತ ಸ್ಥಾನಗಳನ್ನು ಮಾಡಿದ್ದಾನೆ. ಒಂದು ರಜೋಗುಣ ಪ್ರಧಾನ ಸ್ಥಾನ ಅಲ್ಲಿ ಈ ಬ್ರಹ್ಮ (ಕಾಲ) ಸ್ವಯಂ ಮಹಾಬ್ರಹ್ಮಾ (ಮುಖ್ಯಮಂತ್ರಿ) ರೂಪದಲ್ಲಿರುತ್ತಾನೆ ಹಾಗು ತನ್ನ ಪತ್ನಿ ದುರ್ಗಾಳನ್ನು ಮಹಾಸಾವಿತ್ರಿ ರೂಪದಲ್ಲಿಡುತ್ತಾನೆ. ಈ ಇಬ್ಬರ ಸಂಯೋಗದಿಂದ ಹುಟ್ಟಿದ ಪುತ್ರನು ರಜೋಗುಣಯುಕ್ತನಾಗುತ್ತಾನೆ ಇವನನ್ನು 'ಬ್ರಹ್ಮಾ' ಎನ್ನಲಾಗುತ್ತದೆ. ಎರಡನೆಯ ಸ್ಥಾನವನ್ನು ಸತೋಗುಣ ಪ್ರಧಾನ ಮಾಡಿ, ಅಲ್ಲಿ ಈ ಕ್ಷರಪುರುಷನು ಸ್ವಯಂ ಮಹಾವಿಷ್ಣು ರೂಪದಿಂದ ನೆಲಸಿ ಹಾಗು ತನ್ನ ಪತ್ನಿ ದುರ್ಗೆಯನ್ನು ಮಹಾಲಕ್ಷ್ಮಿರೂಪದಲ್ಲಿ ಇರಿಸುತ್ತಾನೆ. ಇವರಿಬ್ಬರ ಸಂಯೋಗದಿಂದ ಜನಿಸಿದ ಪುತ್ರನು ಸತ್ವಗುಣಯುಕ್ತನಾಗುತ್ತಾನೆ. ಅವನು'ವಿಷ್ಣು' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಮೂರನೆಯ ಸ್ಥಾನವನ್ನು ಕ್ಷರ ಪುರುಷನು ತಮೋಗುಣ ಪ್ರಧಾನ ಮಾಡಿ, ಸ್ವಯಂ ಸದಾ ಶಿವರೂಪದಲ್ಲಿ ನೆಲಸಿ ತನ್ನ ಪತ್ನಿ ದುರ್ಗೆಯನ್ನು ಮಹಾಪಾರ್ವತಿ ರೂಪದಲ್ಲಿರಿಸುತ್ತಾನೆ. ಇವರಿಬ್ಬರಿಂದ ಜನಿಸುವ ಪುತ್ರ ತಮೋಗುಣಯುಕ್ತನಾಗಿದ್ದು 'ಶಿವ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

(ಪ್ರಮಾಣಕ್ಕಾಗಿ ನೋಡಿರಿ ಪವಿತ್ರ ಶ್ರೀ ಶಿವ ಮಹಾಪುರಾಣ, ವಿದ್ವೇಶ್ವರ ಸಂಹಿತೆಯ ಅಧ್ಯಾಯ **10–11** ಪುಟ **21–26**ರಲ್ಲಿ ಬ್ರಹ್ಮಾ–ವಿಷ್ಣು–ರುದ್ರ, ಮಹೇಶ್ವರರಲ್ಲದೆ ಬೇರೆ ಸದಾಶಿವ ನಾಮ ಸಹ ಉಲ್ಲೇಖವಿದೆ. ರುದ್ರ ಸಂಹಿತೆಯ ಅಧ್ಯಾಯ **6** ಹಾಗೂ **7, 9** ಪುಟ ಸಂಖ್ಯೆ **81–90**ರಲ್ಲಿ ಉಲ್ಲೇಖವಿದೆ. ಇದರ ಸಂಪಾದಕರು ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್–ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ ಹಾಗೂ ಪವಿತ್ರ ಗ್ರಂಥ. ಶ್ರೀಮದ್ದೇವಿಮಹಾಪುರಾಣದ ಮೂರನೇ ಸ್ಕಂದ ಅಧ್ಯಾಯ **1–3** ಪುಟ ಸಂಖ್ಯೆ **97–103**ರ ವರೆಗೆ ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ, ಇದರ ಅನುವಾದಕರು ಶ್ರೀಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) ನಂತರ ಇವರನ್ನೇ ಮೋಸದಲ್ಲಿಟ್ಟು ತನಗೆ ತಿನ್ನುವುದಕ್ಕಾಗಿ ಶ್ರೀಬ್ರಹ್ಮಾನಿಂದ ಜೀವಿಗಳನ್ನು ಸೃಷ್ಟಿ ಮಾಡಿಸುತ್ತಾನೆ. ಶ್ರೀವಿಷ್ಣುವಿನಿಂದ (ಸ್ಥಿತಿ) ಮೋಹ ಮಮತೆಯಲ್ಲಿ ಬಂಧಿಸುತ್ತಾನೆ. ಹಾಗೂ ಶ್ರೀಶಿವನಿಂದ ಸಂಹಾರ ಮಾಡಿಸುತ್ತಾನೆ. (ಏಕೆಂದರೆ ಕಾಲ ಪುರುಷನು ಶಾಪ ಗ್ರಸ್ತನಾಗಿರುವುದರಿಂದ ಒಂದು ಲಕ್ಷ ಮಾನವ ಶರೀರ ಧಾರಣೆ ಮಾಡಿರುವ ಜೀವಾತ್ಮಗಳ ಸೂಕ್ಷ್ಮ ಶರೀರದಿಂದ ಕೊಳೆ ತೆಗೆದು ತಿನ್ನುವನು ಅದಕ್ಕಾಗಿ **21**ನೇ ಬ್ರಹ್ಮಾಂಡದಲ್ಲಿ ಒಂದು "ತಪ್ತಶಿಲೆ" ಇದೆ. ಅದು ಸ್ವತಃ ಬಹಳ ಬಿಸಿಯಾಗಿರುತ್ತದೆ. ಅದರ ಮೇಲೆ **1** ಲಕ್ಷ ಮಾನವ ಶರೀರ ಧಾರಣೆ ಮಾಡಿರುವ ಜೀವಾತ್ಮಗಳ ಸೂಕ್ಷ್ಮ ಶರೀರವನ್ನು ಬೇಯಿಸಿ ಕೊಳೆ ತೆಗೆದು ತಿನ್ನುತ್ತಾನೆ. ಜೀವಗಳು(ಆತ್ಮ) ಸಾಯುವುದಿಲ್ಲ ಆದರೆ ಅಸಹನೀಯವಾದ ಕಷ್ಟಕ್ಕೆ ಒಳಗಾಗುತ್ತವೆ. ನಂತರ ಅವುಗಳ ಕರ್ಮಫಲಕ್ಕೆ ಅನುಗುಣವಾಗಿ ಬೇರೆ ಶರೀರವನ್ನು ನೀಡುತ್ತಾನೆ.) ಈ ಕ್ರಿಯೆ ಹೇಗೆ ನಡೆಯುತ್ತದೆ ಉದಾಹರಣೆಗೆ:– ಒಂದು ಮನೆಯಲ್ಲಿ ಮೂರು ಕೊಠಡಿಗಳಿವೆ. ಒಂದರಲ್ಲಿ ಅಶ್ಲೀಲವಾದ ಚಿತ್ರಗಳಿವೆ, ಈ ಕೊಠಡಿಯಲ್ಲಿ ಹೋಗುತ್ತಲೇ ಮಲಿನ ವಿಚಾರಗಳು ಉತ್ಪನ್ನವಾಗುತ್ತವೆ. ಎರಡನೆಯ ಕೊಠಡಿಯಲ್ಲಿ ಸಾಧುಸಂತರ ಭಕ್ತರ ಚಿತ್ರಗಳಿವೆ, ಈ ಕೊಠಡಿಯಲ್ಲಿ ಹೋಗುತ್ತಲೇ ಒಳ್ಳೆ ವಿಚಾರ, ಭಕ್ತಿಭಾವ ಬರುತ್ತದೆ. ಮೂರನೆಯ ಕೊಠಡಿಯಲ್ಲಿ ದೇಶಭಕ್ತರ, ದೇಶಕ್ಕಾಗಿ ಬಲಿದಾನವಾದವರ ಚಿತ್ರಗಳಿವೆ. ಈ ಕೊಠಡಿಯಲ್ಲಿ ಹೋಗುತ್ತಲೇ ಮನಸ್ಸಿನಲ್ಲಿ ದೇಶಭಕ್ತಿ, ರೋಷ ಉತ್ಪನ್ನವಾಗುತ್ತದೆ. ಇದೇ ರೀತಿ ಬ್ರಹ್ಮ(ಕಾಲ)ನು ತನ್ನ ತಿಳುವಳಿಕೆಯಿಂದ ಮೇಲಿನ ಮೂರು ಗುಣಗಳ ಪ್ರಧಾನ ಸ್ಥಾನಗಳನ್ನು ರಚಿಸಿದ್ದಾನೆ.

## "ಮೂರು ಗುಣಗಳು ಯಾವುವು? ಆಧಾರ ಸಹಿತವಾಗಿ"

**3 ಗುಣಗಳು, ರಜೋಗುಣ–ಬ್ರಹ್ಮಾ, ಸತೋಗುಣ–ವಿಷ್ಣು, ತಮೋಗುಣ–ಶಿವನಾಗಿದ್ದಾನೆ. ಬ್ರಹ್ಮ(ಕಾಲ) ಹಾಗೂ ಪ್ರಕೃತಿ(ದುರ್ಗಾ)ಯಿಂದ ಉತ್ಪನ್ನರಾಗಿದ್ದಾರೆ. ಮೂವರೂ ನಾಶಹೊಂದುವವರು.**

**ಪ್ರಮಾಣ:– ಗೀತಾಪ್ರೇಸ್ ಗೊರಖ್‌ಪುರ್‌ದಿಂದ ಪ್ರಕಾಶಿತ "ಶ್ರೀಶಿವಮಹಾಪುರಾಣ" ಇದರ ಸಂಪಾದಕರು ಶ್ರೀ ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಣಕರ್. ಅಧ್ಯಾಯ 10–11 ಪುಟ 21–26 ವಿದ್ವೇಶ್ವರ ಸಂಹಿತೆಯಲ್ಲಿ ಉಲ್ಲೇಖವಿದೆ ಹಾಗೂ ರುದ್ರ ಸಂಹಿತೆಯ 9ನೇ ಅಧ್ಯಾಯದ 90ನೇ ಪುಟದಲ್ಲಿ ಉಲ್ಲೇಖವಿದೆ. ಈ ಪ್ರಕಾರ ಬ್ರಹ್ಮಾ–ವಿಷ್ಣು ಹಾಗೂ ಶಿವ ಮೂರು ದೇವತೆಗಳಲ್ಲಿ ಗುಣಗಳಿವೆ. ಆದರೆ ಶಿವ(ಬ್ರಹ್ಮ–ಕಾಲ) ಗುಣಾತೀತ ಎಂದು ಹೇಳಲಾಗಿದೆ.**

**2ನೆಯ ಪ್ರಮಾಣ:– ಗೀತಾಪ್ರೆಸ್ ಗೋರಖ್‌ಪುರದಿಂದ ಪ್ರಕಾಶಿತಗೊಂಡ "ಶ್ರೀಮದ್ ದೇವಿಭಾಗವತ ಪುರಾಣ" ಇದರ ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್. ಅಧ್ಯಾಯ 4–5ರ ಮೂರನೆಯ ಸ್ಕಂದ ಪುಟ 105ರಲ್ಲಿ ಭಗವಂತ ವಿಷ್ಣು ದುರ್ಗೆಯ ಸ್ತುತಿ ಮಾಡಿದನು ಮತ್ತು ಹೇಳಿದನು "ನಾನು (ವಿಷ್ಣು), ಬ್ರಹ್ಮಾ ಹಾಗೂ ಶಂಕರ ನಿಮ್ಮ ಕೃಪೆಯಿಂದ ವಿದ್ಯಮಾನರಾಗಿದ್ದೇವೆ ನಮ್ಮ ಅವಿರ್ಭಾವ (ಹುಟ್ಟು) ತಿರೋಭಾವ(ಮರಣ) ವಾಗುತ್ತಿರುತ್ತದೆ, ನಾವು ನಿತ್ಯರಲ್ಲ (ಅವಿನಾಶಿ ಅಲ್ಲ) ನೀನೇ ನಿತ್ಯಳು ಜಗನ್ಮಾತೆ, ಜಗತ್ ಜನನಿ, ನೀನೇ ಪ್ರಕೃತಿ ಮತ್ತು ಸನಾತನೀ ದೇವಿಯಾಗಿರುವೆ. ಭಗವಂತ ಶಂಕರನು ಹೇಳಿದನು. ಬ್ರಹ್ಮಾ–ವಿಷ್ಣು ನಿನ್ನಿಂದ ಉತ್ಪನ್ನರಾದ ಮೇಲೆ ನಂತರ ಉತ್ಪನ್ನನಾದ ನಾನು ತಮೋಗುಣ ಲೀಲೆಯವ ಶಂಕರ ನಿನ್ನ ಸಂತಾನವಲ್ಲವೆ? ಅಂದರೆ ನನ್ನನ್ನು ಉತ್ಪನ್ನ ಮಾಡಿದವಳು ನೀನೆ. ಈ ಪ್ರಪಂಚದ ಸೃಷ್ಟಿ–ಸ್ಥಿತಿ–ಸಂಹಾರಗಳಲ್ಲಿ ನಿನ್ನ ಗುಣಗಳು ಎಂದಿಗೂ ಇರುತ್ತವೆ. ಈ ಮೂರು ಗುಣಗಳಿಂದ ಉತ್ಪನ್ನರಾದ ನಾವು ಬ್ರಹ್ಮಾ–ವಿಷ್ಣು–ಶಂಕರ ನಿಯಮಾನುಸಾರವಾಗಿ (ಯಾರ ಹಣೆಬರಹದಲ್ಲಿ ಎಷ್ಟು ಬರೆದಿರುತ್ತದೆಯೋ ಅಷ್ಟೇ ಕೊಡುತ್ತೇವೆ ಹೆಚ್ಚು–ಕಡಿಮೆ ಮಾಡಲಾರೆವು) ಕಾರ್ಯದಲ್ಲಿ ತತ್ಪರರಾಗಿದ್ದೇವೆ.**

**ಮೇಲಿನ ಈ ವಿವರಣೆ ಕನ್ನಡ ಮತ್ತು ಹಿಂದಿಯಲ್ಲಿ ಅನುವಾದಿತವಾಗಿರುವ "ಶ್ರೀದೇವಿ ಮಹಾಪುರಾಣ" ದಿಂದ ತೆಗೆದು ಕೊಂಡಿದೆ. ಇದರಲ್ಲಿ ಕೆಲವು ತತ್ವಗಳನ್ನು ಅಡಗಿಸಿಡಲಾಗಿದೆ. ಆದ್ದರಿಂದ ಇದೇ ಪ್ರಮಾಣವನ್ನು ನೋಡಿ. "ಶ್ರೀಮದ್‌ದೇವಿಭಾಗವತ ಮಹಾಪುರಾಣ" ಸಭಾಷಟಿಕಮ್ ಸಮಹಾತ್ಯಮ್, ಖೇಮರಾಜ ಶ್ರೀಕೃಷ್ಣದಾಸ್, ಪ್ರಕಾಶನ ಮುಂಬಯಿ, ಇದರಲ್ಲಿ ಸಂಸ್ಕೃತ ಸಹಿತ ಹಿಂದಿ ಅನುವಾದ ಮಾಡಿದೆ. 3ನೇ ಸ್ಕಂದದ 4ನೇ ಅಧ್ಯಾಯ ಪುಟ10, ಶ್ಲೋಕ 42.**

ಬ್ರಹ್ಮಾ–ಅಹಂ ಮಹೇಶ್ವರಃ ಫಿಲ ತೇ ಪ್ರಭಾವಾತ್ಸರ್ವೇ ವಯಂ ಜನಿ ಯುತಾ ನ ಯದಾ
ತೂ ನಿತ್ಯಾಃ ಕೆ ಅನ್ಯೆ ಸುರಾಃ ಶತಮುಖ ಪ್ರಮುಖಾಃ ಚ ನಿತ್ಯಾ ನಿತ್ಯಾ ತ್ವಮೇವ ಜನನಿ
ಪ್ರಕೃತಿಃ ಪುರಾಣಾ (42)

**ಅನುವಾದ:–(ವಿಷ್ಣು ಹೇಳಿದನು) ಹೇ ಮಾತೆ! ಬ್ರಹ್ಮಾ, ನಾನು ಹಾಗು ಶಿವ ನಿನ್ನದೇ ಪ್ರಭಾವದಿಂದ ಜನಿಸಿದ್ದೇವೆ. ನಿತ್ಯರಲ್ಲ ಅಂದರೆ ಅವಿನಾಶಿಯಲ್ಲ. ನಂತರ ಅನ್ಯ ಇಂದ್ರಾದಿ ಬೇರೆ ದೇವತೆಗಳು ಹೇಗೆ ನಿತ್ಯರಾಗಲು ಸಾಧ್ಯ? ನೀನೇ ಅವಿನಾಶಿಯಾಗಿರುವೆ ಪ್ರಕೃತಿ ಹಾಗೂ ಸನಾತನಿ ದೇವಿಯಾಗಿರುವೆ. (42)**

**ಅಧ್ಯಾಯ 5, ಪುಟ 11–12 ಶ್ಲೋಕ 8:–**

ಯದಿ ದಯಾರ್ಧ್ರಮನಾ ನ ಸದಾಂಬಿಕೆ ಕಥಮಹಂ ವಿಹಿತಃ ಚ ತಮೋಗುಣಃ
ಕಮಲಜಶ್ಚ ರಜೋಗುಣ ಸಂಭವಃ ಸುವಿಹಿತಃ ಕಿಮು ಸತ್ವಗುಣೋ ಹರಿಃ (8)

ಅನುವಾದ:– ಭಗವಂತ ಶಂಕರ ಹೇಳಿದ, ಹೇ ಮಾತೆ ! ನಿನಗೆ ನಮ್ಮ ಮೇಲೆ ದಯೆ ಇದ್ದರೆ, ನನ್ನನ್ನು ತಮೋಗುಣ ಏಕೆ ಮಾಡಿದೆ? ಕಮಲದಿಂದ ಉತ್ಪನ್ನನಾದ ಬ್ರಹ್ಮಾನನ್ನು ರಜೋಗುಣ ಏತಕ್ಕಾಗಿ ಮಾಡಿದೆ? ಹಾಗೂ ವಿಷ್ಣುವನ್ನು ಸತೋಗುಣ ಏಕೆ ಮಾಡಿದೆ? ಅರ್ಥಾತ್ ಜೀವಿಗಳ ಜನ್ಮ–ಮೃತ್ಯು ರೂಪದ ದುಷ್ಕರ್ಮದಲ್ಲಿ ನಮ್ಮನ್ನು ಏಕೆ ತೊಡಗಿಸಿರುವೆ?

**ಶ್ಲೋಕ 12:–** "ರಮಯಸೆ ಸ್ವಪತಿಂ ಪುರುಷಂ ಸದಾ ತವ ಗತಿಂ ನ ಹಿ ವಿಹ ವಿದಮ್ ಶಿವೇ"

ಅನುವಾದ:– ನಿನ್ನ ಪತಿ ಪುರುಷ ಅರ್ಥಾತ್ ಕಾಲ ಭಗವಂತನೊಂದಿಗೆ ಯಾವಾಗಲೂ ಭೋಗ ವಿಲಾಸ ಮಾಡುತ್ತಿರುತ್ತಿಯಾ. ನಿನ್ನ ಗತಿಯನ್ನು ಯಾರೂ ತಿಳಿದಿಲ್ಲ.(12)

ನಿಷ್ಕರ್ಷ:– ಮೇಲಿನ ಪ್ರಮಾಣಗಳಿಂದ ಸ್ಪಷ್ಟವಾಯ್ತೇನೆಂದರೆ–ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ಹಾಗೂ ತಮೋಗುಣ ಶಿವನೆಂದು. ಮೂವರೂ ನಾಶ ಹೊಂದುವವರು. ದುರ್ಗಾಳೊಂದಿಗೆ ಅವಳ ಪತಿ ಕಾಲ ಬ್ರಹ್ಮ ಸದಾ ಭೋಗ–ವಿಲಾಸ ಮಾಡುತ್ತಿರುತ್ತಾನೆ.

## "ಕಾಲಬ್ರಹ್ಮನ ಅವ್ಯಕ್ತನಾಗುವ ಪ್ರತಿಜ್ಞೆ"

### ಸೂಕ್ಷ್ಮವೇದದಿಂದ ಉಳಿದ ಸೃಷ್ಟಿ ರಚನೆ...

ಮೂವರು ಪುತ್ರರ ಉತ್ಪತ್ತಿಯ ನಂತರ ಬ್ರಹ್ಮನು ತನ್ನ ಪತ್ನಿ ದುರ್ಗಾ (ಪ್ರಕೃತಿ) ಗೆ ಹೇಳಿದ "ನಾನು ಪ್ರತಿಜ್ಞೆ ಮಾಡುತ್ತೇನೆ, ಭವಿಷ್ಯದಲ್ಲಿ ನನ್ನ ವಾಸ್ತವಿಕ ರೂಪದಲ್ಲಿ ಯಾರಿಗೂ ದರ್ಶನ ನೀಡುವುದಿಲ್ಲ. ಈ ಕಾರಣದಿಂದ ನನ್ನನ್ನು ಅವ್ಯಕ್ತ (ಅಗೋಚರ) ಎಂದುಕೊಳ್ಳುವರು. ದುರ್ಗೆಗೆ ಈ ನನ್ನ ರಹಸ್ಯವನ್ನು ನೀನು ಯಾರಿಗೂ ಹೇಳಬೇಡ. ನಾನು ಗುಪ್ತನಾಗಿರುವೆನು ಎಂದು ಹೇಳಿದನು." ಆಗ ದುರ್ಗಾ ಕೇಳಿದಳು:– "ನೀವು ನಿಮ್ಮ ಪುತ್ರರಿಗೂ ದರ್ಶನ ನೀಡುವುದಿಲ್ಲವೆ?" ಬ್ರಹ್ಮ ಹೇಳಿದನು, "ನನ್ನ ಪುತ್ರರಿಗಾಗಲಿ, ಬೇರೆ ಯಾರಿಗೇ ಆಗಲಿ, ಬೇರೆ ಯಾವುದೇ ಸಾಧನೆಯಿಂದ ನಾನು ದರ್ಶನ ನೀಡುವುದಿಲ್ಲ." ಇದು ನನ್ನ ಅಟಲ ನಿಯಮವಿರುವುದು.

ದುರ್ಗೆ ಹೇಳಿದಳು "ಇದಂತು ನಿಮ್ಮ ಉತ್ತಮ ನಿಯಮವಲ್ಲ. ನಿಮ್ಮ ಪುತ್ರರಿಗೂ ದರ್ಶನ ನೀಡದೆ ಅಡಗಿರುವುದು" ಬ್ರಹ್ಮ ಹೇಳಿದ, ದುರ್ಗಾ! ಇದು ನನ್ನ ವಿವಶತೆ ಇದೆ ನನಗೆ ಒಂದು ಲಕ್ಷ ಮಾನವ ಶರೀರ ಧಾರಣೆ ಮಾಡಿದ ಜೀವಾತ್ಮಗಳನ್ನು ತಿನ್ನುವ ಶಾಪವಿದೆ. ಈ ವಿಚಾರ ನನ್ನ ಪುತ್ರ (ಬ್ರಹ್ಮಾ–ವಿಷ್ಣು–ಮಹೇಶ)ರಿಗೆ ತಿಳಿದರೆ ಅವರು ಸೃಷ್ಟಿ–ಸ್ಥಿತಿ–ಸಂಹಾರಗಳ ಕೆಲಸವನ್ನೇ ಮಾಡುವುದಿಲ್ಲ. ಆದ್ದರಿಂದ ಈ ನನ್ನ ಅನುತ್ತಮ ನಿಯಮ, ಸದಾ ಇರುವುದು. ಈ ಮೂವರನ್ನು ಸ್ವಲ್ಪ ದೊಡ್ಡವರಾದ ಮೇಲೆ ಮೂರ್ಛಿತಗೊಳಿಸು. ನನ್ನ ಬಗ್ಗೆ ಹೇಳಬೇಡಾ. ಇಲ್ಲವಾದರೆ ನನ್ನ ವಿಷಯ ಹೇಳಿದರೆ ನಿನಗೂ ಶಿಕ್ಷೆ ವಿಧಿಸುವೆ." ಈ ಭಯದಿಂದ ವಾಸ್ತವಿಕ ಅಂಶವನ್ನು ಪ್ರಕೃತಿ(ದುರ್ಗೆ) ಹೇಳುವುದಿಲ್ಲ.

{ಪ್ರಮಾಣ:– ಆದ್ದರಿಂದ ಗೀತೆಯಲ್ಲಿನ 7ನೇ ಅಧ್ಯಾಯದ 24ನೇ ಶ್ಲೋಕದಲ್ಲಿ ಹೇಳಲಾಗಿದೆ. ಈ ಬುದ್ಧಿಹೀನ ಜನ ಸಮುದಾಯಕ್ಕೆ, ನನ್ನ ಅನುತ್ತಮ ನಿಯಮ (ಅವ್ಯಕ್ತ ಸ್ವರೂಪ) ದ ಬಗ್ಗೆ ಗೊತ್ತಿಲ್ಲ. ನಾನು ಏಂದೂ ಯಾರ ಮುಂದೆಯೂ ಪ್ರಕಟನಾಗುವುದಿಲ್ಲ, ನನ್ನ ಯೋಗಮಾಯೆಯಿಂದ ಅಡಗಿರುತ್ತೇನೆ. ಆದ್ದರಿಂದ ಅವ್ಯಕ್ತನಾದ ನನ್ನನ್ನು ಮನುಷ್ಯನ ರೂಪದಲ್ಲಿ ಬಂದ ಕೃಷ್ಣನೇ ಎಂದು ತಿಳಿಯುತ್ತಾರೆ.

(ಅಬುದ್ಧಯಃ) ಬುದ್ಧಿಹೀನರು (ಮಮ್) ನನ್ನ (ಅನುತ್ತಮಮ್) ಅನುತ್ತಮ್ ಅಂದರೆ ಕೀಳಮಟ್ಟದ (ಅವ್ಯಯಮ್) ಅವಿನಾಶಿ (ಪರಮ ಭಾವಮ್) ವಿಶೇಷ ಭಾವವನ್ನು (ಅಜಾನಂತಃ) ತಿಳಿಯದೆ (ಮಾಮ್ ಅವ್ಯಕ್ತಮ್) ಅವ್ಯಕ್ತನಾದ ನನ್ನನ್ನು (ವ್ಯಕ್ತಿಮ್) ಮನುಷ್ಯರೂಪದಲ್ಲಿ (ಆಪನ್ನಮ್) ಬಂದಿದ್ದಾನೆ (ಮನ್ಯಂತೆ) ಎಂದು ತಿಳಿಯುತ್ತಾರೆ. ಅರ್ಥಾತ್ ನಾನು ಕೃಷ್ಣನಲ್ಲ (ಗೀತೆಯ 7ನೇ ಅಧ್ಯಾಯದ 24ನೇ ಶ್ಲೋಕ)

ಗೀತೆಯ 11ನೇ ಅಧ್ಯಾಯದ 47 ಮತ್ತು 48ನೇ ಶ್ಲೋಕಗಳಲ್ಲಿ ಹೀಗೆ ಹೇಳಿದ್ದಾನೆ– ಇದು ನನ್ನ ವಾಸ್ತವಿಕ ಕಾಲ ರೂಪವಾಗಿದೆ. ಇದರ ದರ್ಶನ ಅಂದರೆ ಬ್ರಹ್ಮನ ಪ್ರಾಪ್ತಿ ವೇದದಲ್ಲಿ ವರ್ಣಿತ ವಿಧಿಯಿಂದಾಗಲಿ, ಯಜ್ಞಗ್ಳಿಂದಾಗಲಿ, ಯಾವುದೆ ಕ್ರಿಯೆಗಳಿಂದಾಗಲಿ ಮತ್ತು ತಪಸ್ಸಿನಿಂದಾಗಲಿ ಸಾಧ್ಯವಿಲ್ಲ.

ಮೂವರು ಮಕ್ಕಳು(ಬ್ರಹ್ಮಾ–ವಿಷ್ಣು–ಮಹೇಶ್ವರ) ದೊಡ್ಡವರಾದ ಮೇಲೆ ಪ್ರಕೃತಿ/ ದುರ್ಗೆಯು ನೀವು ಮೂವರೂ ಸಾಗರ ಮಂಥನ ಮಾಡಿ ಎಂದು ಹೇಳಿದಳು. [ಜ್ಯೋತಿ ನಿರಂಜನ ತನ್ನ ಉಸಿರಿನ ಮೂಲಕ 4 ವೇದಗಳನ್ನು ಉತ್ಪನ್ನ ಮಾಡಿದನು. ಅವುಗಳಿಗೆ ಸಾಗರದಲ್ಲಿ ವಾಸ ಮಾಡಿರೆಂದು ಗುಪ್ತ ವಾಣಿ ಮೂಲಕ ತಿಳಿಸಿದನು] ಮೊದಲ ಬಾರಿಗೆ ನಾಲ್ಕು ವೇದಗಳು ಈ ಮೂವರು ಸಾಗರ ಮಂಥನ ಮಾಡಿದಾಗ ಹೊರಬಂದವು. ನಾಲ್ಕು ವೇದಗಳೊಂದಿಗೆ ಮೂವರೂ ತಾಯಿಯ ಬಳಿಗೆ ಬಂದರು. ಆಗ ತಾಯಿ ಹೇಳಿದಳು ಈ ನಾಲ್ಕು ವೇದಗಳನ್ನು ಬ್ರಹ್ಮಾನೇ ಇಟ್ಟಿಕೊಂಡು ಓದಲಿ.

ಸೂಚನೆ:– ವಾಸ್ತವದಲ್ಲಿ ಪೂರ್ಣ ಬ್ರಹ್ಮನು, ಕಾಲ ಬ್ರಹ್ಮನಿಗೆ 5 ವೇದಗಳನ್ನು ನಿಡಿದ್ದನು. ಆದರೆ ಬ್ರಹ್ಮನು ಕೇವಲ 4 ವೇದಗಳನ್ನು ಪ್ರಕಟಗೊಳಿಸಿದ. ಐದನೆಯ ವೇದವನ್ನು ಅಡಗಿಸಿದನು. ಆ ಅಡಗಿಸಿಟ್ಟ ವೇದವನ್ನು ಪೂರ್ಣ ಪರಮಾತ್ಮ ಸ್ವತಃ ಪ್ರಕಟಗೊಂಡು "ಕವಿರ್ಗಿರ್ಭಿಃ" ಅಂದರೆ ಕವಿರ್‌ವಾಣಿಯ ಮೂಲಕ ಲೋಕೋಕ್ತಿ ಹಾಗೂ ದೋಹೆಗಳ ಮೂಲಕ ಪ್ರಕಟಗೊಳಿಸಿದನು.

ಪ್ರಕೃತಿಯು ತನ್ನದೇ ಬೇರೆ ಮೂರು ರೂಪಗಳನ್ನು(ಸಾವಿತ್ರಿ, ಲಕ್ಷ್ಮೀ, ಪಾರ್ವತಿ) ಧಾರಣೆ ಮಾಡಿ ಸಮುದ್ರದಲ್ಲಿ ಅಡಗಿಸಿದ್ದಳು. ಎರಡನೆಯ ಬಾರಿ ಸಾಗರ ಮಂಥನ ಮಾಡಿದಾಗ ಮೂವರು ಕನ್ಯೆಯರು ಹೊರಬಂದರು. ತಾಯಿಯು ಮೂವರಿಗೂ ವಿವಾಹ ಮಾಡಿದಳು. ಮೂರು ರೂಪವಾಗಿದ್ದ ಪ್ರಕೃತಿ/ದುರ್ಗೆ, ಬ್ರಹ್ಮಾನಿಗೆ ಸಾವಿತ್ರಿ, ವಿಷ್ಣುವಿಗೆ ಲಕ್ಷ್ಮೀ ಹಾಗೂ ಶಂಕರನಿಗೆ ಪಾರ್ವತಿಯನ್ನು ಪತ್ನಿ ರೂಪದಲ್ಲಿ ನೀಡಿದಳು. ಮೂವರು ಭೋಗ–ವಿಲಾಸ ಮಾಡಿದರು ಇದರಿಂದ ಸುರ(ದೇವ–ದೇವತೆ) ಅಸುರ(ರಾಕ್ಷಸರು) ಹುಟ್ಟಿದರು.

[3ನೆಯ ಬಾರಿ ಸಾಗರ ಮಂಥನ ಮಾಡಿದಾಗ, 14 ರತ್ನಗಳು ಬಂದವು ಅದು ಬ್ರಹ್ಮಾನಿಗೆ, ಅಮೃತವು ವಿಷ್ಣು ಮತ್ತು ದೇವತೆಗಳಿಗೆ, ಮದ್ಯ (ಸಾರಾಯಿ) ಅಸುರರಿಗೆ ಹಾಗೂ ಶಿವನು ವಿಷವನ್ನು ಕುಡಿದು ತನ್ನ ಕಂಠದಲ್ಲೆ ತಡೆದನು. ಇದಂತೂ ಬಹಳ ನಂತರದ ದಿನಗಳ ಮಾತು] ಬ್ರಹ್ಮಾನು ವೇದವನ್ನು ಓದಿದಾಗ ಈ ಸಮಸ್ತ ಬ್ರಹ್ಮಾಂಡವನ್ನು ರಚಿಸಿರುವ ಸ್ವಾಮಿ ಬೇರೆಯೇ ಇರುವನೆಂದು ತಿಳಿಯಿತು. ಆಗ ಈ ವಿಚಾರವನ್ನು ವಿಷ್ಣುವಿಗೆ–ಶಂಕರನಿಗೆ ತಿಳಿಸಿದನು. "ವೇದಗಳಲ್ಲಿ ಹೇಳಿರುವ ಸೃಜನಹಾರ" ಬೇರೆ ಯಾರೋ ಇದ್ದಾನೆ, ಆದರೆ ವೇದಗಳು ನಮಗೂ ತಿಳಿಯದೆಂದು ಹೇಳುತ್ತವೆ. ಅದಕ್ಕಾಗಿ ಯಾರಾದರು ತತ್ವದರ್ಶಿ ಸಂತರನ್ನು ಕೇಳಿ ಎಂದು ಸಂಕೇತ ಮಾಡಿವೆ. ಆಗ ಬ್ರಹ್ಮಾನು ತಾಯಿಯ ಬಳಿ ಬಂದು ಎಲ್ಲಾ ವೃತ್ತಾಂತವನ್ನು ತಿಳಿಸಿದ. ತಾಯಿ ಹೇಳುತ್ತಿದ್ದಳು ನನ್ನ ಹೊರತು ಯಾರು ಇಲ್ಲ. ನಾನೇ ಕರ್ತಾ ನಾನೇ ಸರ್ವಶಕ್ತಿವಂತಳು. ಆದರೆ ಬ್ರಹ್ಮಾ ಹೇಳಿದನು ವೇದಗಳನ್ನು ಈಶ್ವರ ಕೊಟ್ಟಿದ್ದಾನೆ, ಇವು ಸುಳ್ಳಾಗಲು ಸಾಧ್ಯವಿಲ್ಲ. ದುರ್ಗಾ ಹೇಳಿದಳು ನಿನ್ನ ತಂದೆ ಯಾರಿಗೂ ದರ್ಶನ ನೀಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾನೆ. ಇಲ್ಲ ತಾಯಿ ಈಗ ನಿನ್ನ ಮಾತುಗಳಲ್ಲಿ ನನಗೆ ವಿಶ್ವಾಸವಿಲ್ಲ. ನಾನು ಆ ಪುರುಷನನ್ನು ಕಂಡೇ ಕಾಣುತ್ತೇನೆ. ಒಂದು ವೇಳೆ ಅವರು ನಿನಗೆ ದರ್ಶನ ಕೊಡದಿದ್ದರೆ ನೀನು ಏನು ಮಾಡುವೆ? ಎಂದು ದುರ್ಗೆ ಕೇಳಿದಾಗ, "ನಾನು ನಿನಗೆ ಮುಖ ತೋರಿಸುವುದಿಲ್ಲ ಎಂದು ಬ್ರಹ್ಮಾ ಹೇಳಿದ. ಇನ್ನೊಂದೆಡೆ ಜ್ಯೋತಿ ನಿರಂಜನನು ಯಾರಿಗೂ ದರ್ಶನ ಕೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾನೆ. ಅಂದರೆ 21 ಬ್ರಹ್ಮಾಂಡಗಳಲ್ಲಿ ಏಂದೂ ತನ್ನ ವಾಸ್ತವಿಕ ಕಾಲ ರೂಪದಲ್ಲಿ ಆಕಾರದಲ್ಲಿ ನಾನು ಬರುವುದಿಲ್ಲ.

ಗೀತೆಯ 7ನೇ ಅಧ್ಯಾಯದ 24ನೇ ಶ್ಲೋಕ :–

**ಅವ್ಯಕ್ತಂ, ವ್ಯಕ್ತಿಂ, ಆಪನ್ನಮ್, ಮನ್ಯಂತೇ, ಮಾಮ್, ಅಬುದ್ಧಯಃ ।**
**ಪರಂ, ಭಾವಮ್, ಅಜಾನಂತಃ, ಮಮ್, ಅವ್ಯಯಮ್, ಅನುತ್ತಮಮ್ ॥ 24 ॥**

ಅನುವಾದ:– (ಅಬುದ್ಧಯಃ) ಬುದ್ಧಿಹೀನರು( ಮಮ್) ನನ್ನ (ಅನುತ್ತಮಮ್) ಅನುತ್ತಮ ಅರ್ಥಾತ್ ಕೀಳಮಟ್ಟದ (ಅವ್ಯಯಮ್) ಎಂದೂ ಬದಲಾಗದ (ಪರಮ ಭಾವಮ್) ಪರಮ ಭಾವವನ್ನು (ಅಜಾನಂತಃ) ತಿಳಿಯದೆ (ಮಾಮ್ ಅವ್ಯಕ್ತಮ್) ಅವ್ಯಕ್ತನಾದ ನನ್ನನ್ನು (ವ್ಯಕ್ತಿಮ್) ಮನುಷ್ಯರೂಪದಲ್ಲಿ ಕೃಷ್ಣನ ಅವತಾರ(ಆಪನ್ನಮ್) ಪಡೆದವನು (ಮನ್ಯಂತೆ) ಎಂದು ತಿಳಿದಿದ್ದಾರೆ.

**ಗೀತೆಯ 7ನೇ ಅಧ್ಯಾಯ 25ನೇ ಶ್ಲೋಕ :–**

**ನ, ಅಹಂ, ಪ್ರಕಾಶಃ, ಸರ್ವಸ್ಯ, ಯೋಗಮಾಯಾಸಮಾವೃತಃ ।**
**ಮೂಢಃ,ಅಯಂ,ನ,ಅಭಿಜಾನಾತಿ,ಲೋಕಃ,ಮಾಮ್,ಅಜಮ್,ಅವ್ಯಯಮ್ ॥25॥**

ಅನುವಾದ:– (ಅಹಂ) ನಾನು (ಯೋಗಮಾಯಾ ಸಮಾವೃತಃ) ಯೋಗಮಾಯೆಯಿಂದ ಅಡಗಿರುವವನು (ಸರ್ವಸ್ಯ) ಎಲ್ಲರ ಎದುರಗಡೆ (ಪ್ರತ್ಯಕ್ಷ) ಪ್ರತ್ಯಕ್ಷ (ನ) ವಾಗುವುದಿಲ್ಲ ಅಂದರೆ ಅದೃಶ್ಯ ಅಂದರೆ ಅವ್ಯಕ್ತವಾಗಿರುವೆನು ಆದ್ದರಿಂದ (ಅಜಮ್) ಜನ್ಮತಾಳದ (ಅವ್ಯಯಮ್) ಎಂದೂ ಬದಲಾಗದ ಭಾವವನ್ನು (ಅವ್ಯಯಮ್) ಈ (ಮುಢಃ) ಅಜ್ಞಾನಿ (ಲೋಕಃ) ಜನ ಸಮುದಾಯ (ಮಾಮ್) ನನ್ನನ್ನು (ನ) (ಅಭಿಜಾನಾತಿ) ತಿಳಿದಿಲ್ಲ ಅರ್ಥಾತ್ ನನ್ನನ್ನು ಕೃಷ್ಣನೆಂದು ತಿಳಿಯುತ್ತಾರೆ. ಏಕೆಂದರೆ ಬ್ರಹ್ಮ ತನ್ನ ಶಬ್ದ ಶಕ್ತಿಯಿಂದ ತನ್ನ ನಾನಾ ರೂಪವನ್ನು ಮಾಡಿಕೊಳ್ಳುತ್ತಾನೆ, ಇವನು ದುರ್ಗೆಯ ಗಂಡ ಇದಕ್ಕಾಗಿ ಈ ಮಂತ್ರದಲ್ಲಿ ಹೇಳಿದ್ದಾನೆ. ನಾನು ಶ್ರೀಕೃಷ್ಣ ಮುಂತಾದವರ ಹಾಗೆ ದುರ್ಗಾಳಿಂದ ಜನ್ಮ ತಾಳುವುದಿಲ್ಲ.

## "ಬ್ರಹ್ಮಾನು ತನ್ನ ತಂದೆ ಕಾಲಬ್ರಹ್ಮನನ್ನು ಪಡೆಯುವ ಪ್ರಯತ್ನದಲ್ಲಿ"

**ದುರ್ಗಾ ಬ್ರಹ್ಮಾನಿಗೆ ಹೇಳಿದಳು. ಅಲಖ್ ನಿರಂಜನ ನಿನ್ನ ತಂದೆ. ಆದರೆ ನಿನಗೆ ದರ್ಶನ ಕೊಡುವುದಿಲ್ಲ. ಆದರೆ ನಾನು ದರ್ಶನ ಮಾಡಿಕೊಂಡೇ ಹಿಂದಕ್ಕೆ ಬರುವೆ ಎಂದನು ಬ್ರಹ್ಮಾ. ಒಂದು ವೇಳೆ ನಿನಗೆ ನಿನ್ನ ತಂದೆಯ ದರ್ಶನವಾಗದಿದ್ದರೆ ಏನು ಮಾಡುವೆ? ಬ್ರಹ್ಮಾ ಪ್ರತಿಜ್ಞೆಮಾಡಿದ ತಂದೆಯ ದರ್ಶನವಾಗದಿದ್ದರೆ ನಾನು ನಿಮ್ಮ ಮುಂದೆ ಬರುವುದೇ ಇಲ್ಲ. ಹೀಗೆ ಹೇಳಿ ಬ್ರಹ್ಮಾನು ಉತ್ತರ ದಿಕ್ಕಿಗೆ ಹೊರಟನು ಅಲ್ಲಿ ಕತ್ತಲೆಯೋ ಕತ್ತಲೆ. ಅಲ್ಲಿ ಬ್ರಹ್ಮಾನು 4 ಯುಗಗಳವರೆಗೆ ತಪಸ್ಸು ಮಾಡಿದ ಏನೂ ಪ್ರಾಪ್ತಿಯಾಗಲಿಲ್ಲ. ಕಾಲ(ಬ್ರಹ್ಮ)ನು ಆಕಾಶವಾಣಿ ಮೂಲಕ ಕೇಳಿದ ದುರ್ಗಾ ಜೀವಿಗಳ ಉತ್ಪತ್ತಿ ಏಕೆ ಮಾಡಿಲ್ಲ? ದುರ್ಗಾ ಹೇಳಿದಳು "ನಿಮ್ಮ ಜೇಷ್ಠ ಪುತ್ರ ಹಠ ಮಾಡಿ ನಿಮ್ಮನ್ನು ಹುಡುಕಲು ಹೊರಟಿದ್ದಾನೆ. ಬ್ರಹ್ಮಾ ಜೀವಗಳ ಉತ್ಪತ್ತಿ ಮಾಡದಿದ್ದರೆ ಎಲ್ಲಾ ಕಾರ್ಯಗಳು ಅಸಂಭವವಾಗುತ್ತವೆ. ಅವನನ್ನು ಮರಳಿ ಕರೆಸಿಕೊ" ನಾನು ಅವನಿಗೆ ದರ್ಶನ ಕೊಡುವುದಿಲ್ಲ ಎಂದನು ಕಾಲ ಬ್ರಹ್ಮ. ಆಗ ದುರ್ಗಾ 'ಗಾಯತ್ರಿ' ಎಂಬ ಹುಡುಗಿಯನ್ನು ತನ್ನ ಶಬ್ದಶಕ್ತಿಯಿಂದ ಉತ್ಪನ್ನ ಮಾಡಿದಳು. ಬ್ರಹ್ಮಾನನ್ನು ಮರಳಿ ಕರೆತರಲು ಹೇಳಿದಳು. ಗಾಯತ್ರಿ ಬ್ರಹ್ಮಾನ ಕಡೆ ಹೋದಳು. ಆದರೆ ಬ್ರಹ್ಮಾನು ಯಾರು ಬಂದಿರುವರೆಂದು ಭಾಸವೇ ಆಗದಂತೆ, ಸಮಾಧಿ ಸ್ಥಿತಿಯಲ್ಲಿದ್ದನು. ಆಗ ದುರ್ಗೆಯು ಗಾಯತ್ರಿಗೆ ಧ್ಯಾನದ ಮೂಲಕ ಬ್ರಹ್ಮಾನ ಚರಣಗಳನ್ನು ಸ್ಪರ್ಶಿಸಲು ಹೇಳಿದಳು. ಆಗ ಬ್ರಹ್ಮಾನ ಸಮಾಧಿ ಭಂಗವಾಯಿತು. "ಬ್ರಹ್ಮಾ ಕೋಪಗೊಂಡು ಯಾರು ಆ ಪಾಪಿನಿ ನನ್ನ ಧ್ಯಾನ ಭಂಗ ಮಾಡಿದವಳು? ನಿನಗೆ ಶಾಪವನ್ನು ಕೊಡುವೆ ಎಂದ ಬ್ರಹ್ಮಾ. ಆಗ ಗಾಯತ್ರಿ ನನ್ನದೇನೂ ದೋಷವಿಲ್ಲ ಎಂದಳು. ಮೊದಲು ನನ್ನ ಮಾತುಗಳನ್ನು ಕೇಳು. ನಂತರ ಶಾಪ ಕೊಡುವೆಯಂತೆ ಎಂದಳು. ನಿನ್ನನ್ನು ಮರಳಿ ಕರೆತರಲು ನನಗೆ ತಾಯಿ ಕಳುಹಿಸಿದ್ದಾರೆ. ನೀನು ಇಲ್ಲದಿದ್ದರೆ(ಬರದಿದ್ದರೆ) ಜೀವಿಗಳ ಉತ್ಪತ್ತಿಯ ಕಾರ್ಯ ನಡೆಯಲ್ಲ ಎಂದು ಹೇಳಿದಳು. ನಾನು ಹೇಗೆ ಬರಲು ಸಾಧ್ಯ!. ತಂದೆಯ ದರ್ಶನ ಮಾಡದೆ ಬಂದರೆ ಅಪಹಾಸ್ಯಕ್ಕೆ ಗುರಿಯಾಗುವೆ. ಒಂದುವೇಳೆ ನೀನು ತಾಯಿಗೆ ಇವನಿಗೆ ತಂದೆಯ(ಜ್ಯೋತಿ ನಿರಂಜನನ) ದರ್ಶನವಾಗಿದೆ. ನಾನು ನನ್ನ ಕಣ್ಣಾರೆ ನೋಡಿದ್ದೇನೆ ಎಂದು**

ಹೇಳಿದರೆ ನಾನು ಮರಳಿ ಬರುವೆ ಎಂದು ಬ್ರಹ್ಮಾ ಹೇಳಿದಾಗ ಗಾಯತ್ರಿ ಹೇಳಿದಳು. "ನೀನು ನನ್ನೊಂದಿಗೆ ಸಂಭೋಗಿಸಿದರೆ, ನಾನು ಈ ಸುಳ್ಳು ಸಾಕ್ಷಿ ಹೇಳುವೆ." ಆಗ ಬ್ರಹ್ಮಾನು ಯೋಚಿಸಿದ ಇತ್ತ ತಂದೆಯ ದರ್ಶನವಾಗಲಿಲ್ಲ. ಅತ್ತ ತಾಯಿಗೆ ಮುಖ ತೋರಿಸಲಿ ನಾಚಿಕೆಯಾಗುವುದು. ಏನೂ ತೋಚದೆ ನಂತರ ಗಾಯತ್ರಿಯೊಡನೆ ರತಿಕ್ರಿಯೆ(ಸಂಭೋಗ) ಮಾಡಿದನು. ಗಾಯತ್ರಿ ಮತ್ತೊಂದು ಸಾಕ್ಷಿಯನ್ನು ಏಕೆ ಸಿದ್ಧಮಾಡಿಕೊಳ್ಳಬಾರದು ಎಂದು ಹೇಳಿದಳು. ಬ್ರಹ್ಮಾ ಹೇಳಿದನು ಬಹಳ ಒಳ್ಳೆಯದು. ಆಗ ಗಾಯತ್ರಿ ತನ್ನ ಶಬ್ದಶಕ್ತಿಯಿಂದ ಒಂದು ಹುಡುಗಿ ಪುಹಪವತಿಯನ್ನು ಉತ್ಪನ್ನ ಮಾಡಿದಳು. ಅವಳಿಗೆ ಹೇಳಿದಳು "ನೀನು ಬ್ರಹ್ಮಾನಿಗೆ ತಂದೆಯ ದರ್ಶನವಾಗಿದೆ" ಎಂದು ಹೇಳಬೇಕು. ಆಗ ಪುಹಪವತಿ ಹೇಳಿದಳು. "ನಾನೇಕೆ ಸುಳ್ಳು ಸಾಕ್ಷಿ ನೀಡಲಿ. ಒಂದುವೇಳೆ ಬ್ರಹ್ಮಾನು ನನ್ನನ್ನು ಸಂಭೋಗಿಸಿದರೆ ನಾನು ಸುಳ್ಳು ಸಾಕ್ಷಿ ನೀಡುವೆ." ಗಾಯತ್ರಿಯು ಬ್ರಹ್ಮಾನಿಗೆ ಬೇರೆ ದಾರಿ ಇಲ್ಲವೆಂದು ತಿಳಿಸಿದಳು. ಆಗ ಬ್ರಹ್ಮಾನು ಪುಹಪವತಿಯನ್ನು ಸಂಭೋಗಿಸಿದ. ನಂತರ ಮೂವರು(ಬ್ರಹ್ಮಾ, ಗಾಯತ್ರಿ–ಪುಹಪವತಿ) ಸೇರಿ ಆದಿ ಮಾಯೆಯ ಹತ್ತಿರ ಬಂದರು. ಇಬ್ಬರೂ ದೇವಿಯರು(ಗಾಯತ್ರಿ, ಪುಹಪವತಿ) ಮೇಲಿನ ಶರತನ್ನು ಏಕೆ ಮಾಡಿದರು ಎಂದರೆ ಒಂದು ವೇಳೆ ಬ್ರಹ್ಮಾನು ತಾಯಿ ಮುಂದೆ ನಮ್ಮ ಸುಳ್ಳು ಸಾಕ್ಷಿ ಬಾಯಿಬಿಟ್ಟರೆ ತಾಯಿ ಶಾಪ ನೀಡುವಳು, ಆದ್ದರಿಂದ ಅವನನ್ನು ದೋಷಿ ಮಾಡಿಕೊಂಡರು.

(ಇಲ್ಲಿ ಮಹಾರಾಜ್ ಗರೀಬ್‌ದಾಸರು ಹೇಳುತ್ತಾರೆ:–"ದಾಸ್ ಗರೀಬ್ ಯಹ್ ಚೂಕ್ ಧುರೋ ಧುರ್")

## "ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ"

ನಿನಗೆ ತಂದೆಯವರ ದರ್ಶನವಾಯಿತೆ? ಎಂದು ಬ್ರಹ್ಮಾನನ್ನು ತಾಯಿ ಕೇಳಿದಾಗ "ಹಾ! ಆಯಿತು" ಬ್ರಹ್ಮಾ! ಸಾಕ್ಷಿ ತೋರಿಸು ಎಂದಳು ದುರ್ಗಾ. ಆಗ ಈ ಇಬ್ಬರ ಮುಂದೆ ಸಾಕ್ಷತ್ಕಾರವಾಗಿದೆ ಎಂದು ಬ್ರಹ್ಮಾ ಹೇಳಿದನು. ಆಗ ದೇವಿಯು ಆ ಇಬ್ಬರನ್ನೂ ಕೇಳಿದಳು. "ನಿಮ್ಮ ಮುಂದೆ ಬ್ರಹ್ಮಾನಿಗೆ ಆತನ ತಂದೆಯ ದರ್ಶನವಾಯಿತೆ? ಆಗ "ಹೌದು" ಎಂದರು ಇಬ್ಬರೂ. "ನಾವು ನಮ್ಮ ಕಣ್ಣುಗಳಿಂದ ಕಂಡೆವು" ನಂತರ ದುರ್ಗಾ(ಭವಾನಿ)ಗೆ ಸಂಶಯವಾಯಿತು. "ನನಗಂತು ಬ್ರಹ್ಮನು ಹೇಳಿದ್ದ ನಾನು ಯಾರಿಗೂ ದರ್ಶನ ನೀಡುವುದಿಲ್ಲ ಆದರೆ ಇವರು ಹೇಳ್ತಾರೆ ದರ್ಶನವಾಯಿತು. ಆಗ ದುರ್ಗಾ(ಅಷ್ಟಂಗಿ) ಧ್ಯಾನ ಹಚ್ಚಿದಳು ಮತ್ತು ಕಾಲ/ಜ್ಯೋತಿ ನಿರಂಜನ್‌ನಿಗೆ ಇದೇನು ಕಥೆ ಎಂದು ಕೇಳಿದಳು. ಜ್ಯೋತಿ ನಿರಂಜನ್ ಹೇಳಿದ, ಈ ಮೂವರು ಸುಳ್ಳು ಹೇಳುತ್ತಿದ್ದಾರೆ. ಆಗ ತಾಯಿ ಹೇಳಿದಳು ನೀವು ಸುಳ್ಳು ಹೇಳುತ್ತಿರುವಿರಿ. ಇವರಿಗೆ ಏನು ದರ್ಶನ ಆಗಿಲ್ಲ ಎಂದು ಆಕಾಶವಾಣಿ ಆಯಿತು. ಈ ಮಾತನ್ನು ಕೇಳಿ ಬ್ರಹ್ಮಾ ಹೇಳಿದ ತಾಯಿ ನಾನು ಶಪಥ ಮಾಡಿ "ತಂದೆಯವರ ದರ್ಶನಕ್ಕೆ ಹೊಗಿದ್ದೆ ಆದರೆ ದರ್ಶನವಾಗಲಿಲ್ಲ. ನಿನಗೆ ಮುಖ ತೋರಿಸಲು ನಾಚಿಕೆಯಾಗುತ್ತಿತು. ಆದ್ದರಿಂದ ಸುಳ್ಳು ಹೇಳಿದೆ." ಆಗ ತಾಯಿ (ದುರ್ಗೆ) ಹೇಳಿದಳು ಈಗ ನಾನು ನಿನಗೆ ಶಾಪ ಕೊಡುವೆ.

ಬ್ರಹ್ಮಾನಿಗೆ ತಾಯಿ ದುರ್ಗೆಯಿಂದ ಶಾಪ:– ಜಗತ್ತಿನಲ್ಲಿ ಯಾರೂ ನಿನ್ನ ಪೂಜೆ ಮಾಡುವುದಿಲ್ಲ. ಮುಂದೆ ನಿನ್ನ ವಂಶದವರು ಬಹಳ ಪಾಖಂಡ ಮಾಡುವರು. ಸುಳ್ಳು ಮಾತುಗಳಿಂದ ಪ್ರಪಂಚದ ಜನರಿಗೆ ಮೋಸ ಮಾಡುವರು. ಮೇಲ್ನೋಟಕ್ಕೆ ಕರ್ಮಕಾಂಡ ಮಾಡುವರಂತೆ ಕಂಡರೂ ಒಳಗೊಳಗೆ ವಿಕಾರಿಗಳಾಗಿರುವರು. ಕಥೆ–ಪುರಾಣಗಳನ್ನ ಓದಿ ಹೇಳುವರು. ಅವರಿಗೆ ಸ್ವತಃ ಜ್ಞಾನ ಇರುವುದಿಲ್ಲ ಸದ್ಗ್ರಂಥಗಳಲ್ಲಿ ಏನು ಬರೆದಿದೆಯೆಂದು, ಆದರೂ ಕೀರ್ತಿ ಹಾಗೂ ಧನಕ್ಕಾಗಿ, ಗುರುವಾಗಿ, ಶಿಷ್ಯರಿಗೆ ಲೋಕವೇದ (ಶಾಸ್ತ್ರ ವಿರುದ್ಧ ದಂತ ಕಥೆ) ಹೇಳುವರು. ದೇವಿ–ದೇವತೆಗಳ ಪೂಜೆ ಮಾಡಿಸುವರು. ಬೇರೆಯವರನ್ನು ನಿಂದಿಸಿ ಕಷ್ಟದ ಮೇಲೆ ಕಷ್ಟ ಅನುಭವಿಸುವರು. ಅವರ ಅನುಯಾಯಿಗಳಿಗೆ ಪರಮಾರ್ಥವನ್ನು ತಿಳಿಸುವುದಿಲ್ಲ. ದಕ್ಷಿಣೆಯ ಹಣಕ್ಕಾಗಿ ಜನರ ದಾರಿ ತಪ್ಪಿಸುವರು. ತನ್ನನ್ನು ತಾವು ಶ್ರೇಷ್ಠರೆಂದು, ಬೇರೆಯವರು ನೀಚರೆಂದು ತಿಳಿಯುವರು" ತಾಯಿಯ ಬಾಯಿಂದ ಈ ಶಾಪ ವಚನ ಕೇಳಿ ಬ್ರಹ್ಮಾನು ಮೂರ್ಛೆ ಹೋದನು. ಬಹಳ ಸಮಯಗಳ ನಂತರ ಪ್ರಜ್ಞೆ ಬಂದಿತು.

ಗಾಯತ್ರಿಗೆ ಶಾಪ:– ನಿನಗೆ ಅನೇಕ ಗೂಳಿಗಳು ಗಂಡಂದಿರಾಗಿ ಸಿಗುವರು ನೀನು ಮೃತ್ಯು ಲೋಕದ ಹಸುವಾಗಿರುವೆ.

ಪುಹಪವತಿಗೆ ಶಾಪ:– ನೀನಿರುವ ಜಾಗದಲ್ಲಿ ಕೊಳಕು ಕೆಟ್ಟ ವಾಸನೆ ಇರುತ್ತದೆ. ನಿನ್ನ ಹೂವನ್ನು ಯಾರೂ ಪೂಜೆಗೆ ಬಳಸುವುದಿಲ್ಲ. ಈ ಸುಳ್ಳು ಸಾಕ್ಷಿಗಾಗಿ ನೀನು ಈ ನರಕವನ್ನು ಅನುಭವಿಸಬೇಕು. ನಿನ್ನ ಹೆಸರು ಕೇತಕಿ ಇರುವುದು. (ಈ ಹೂವನ್ನು ಹರಿಯಾಣದಲ್ಲಿ ಕುಸೋಂದಿ ಎನ್ನುತ್ತಾರೆ. ಹೊಲಸು ಸ್ಥಾನದಲ್ಲಿ ಈ ಹೂ ಬೇಳೆಯುತ್ತದೆ.)

ಈ ರೀತಿ ಮೂವರಿಗೂ ಶಾಪ ಕೊಟ್ಟ ನಂತರ ತಾಯಿ ಭವಾನಿಯು ಬಹಳ ಪಶ್ಚಾತ್ತಾಪ ಪಟ್ಟಳು. {ಈ ರೀತಿ ಜೀವಿಗಳು ಏನೂ ಯೋಚಿಸದೆ ಮನಸ್ಸಿನ (ಕಾಲ ನಿರಂಜನನ) ಪ್ರಭಾವದಿಂದ ತಪ್ಪು ಮಾಡುತ್ತದೆ, ಆದರೆ ಆತ್ಮ (ಸತ್ಯಪುರುಷನ ಅಂಶ) ದ ಪ್ರಭಾವದಿಂದ ಜ್ಞಾನೋದಯವಾದಾಗ ಪಶ್ಚಾತಾಪ ಪಡಬೇಕಾಗುತ್ತದೆ. ತಾಯಿ ತನ್ನ ಮಕ್ಕಳಿಗೆ ಚಿಕ್ಕ ತಪ್ಪಿಗಾಗಿ ಹೊಡೆದಿರುತ್ತಾಳೆ (ಕೋಪಗೊಡು) ನಂತರ ಪಶ್ಚಾತ್ತಾಪ ಪಡುತ್ತಾಳೆ (ಇದೆಲ್ಲಾ ಕಾಲನ ಪ್ರಭಾವ). ಇದು ಮನಸ್ಸಿನ ಪ್ರಭಾವದಿಂದ ಎಲ್ಲಾ ಜೀವಿಗಳಲ್ಲಿ ಕ್ರಿಯಾಶಿಲವಾಗಿದೆ.} ಇಲ್ಲಿ ವಿಶೇಷ ಏನೆಂದರೆ ನಿರಂಜನನೂ ಸಹ ತನ್ನ ಕಾನೂನು ಮಾಡಿದ್ದಾನೆ. ಯಾರಾದರೂ ದುರ್ಬಲರನ್ನು ಪೀಡಿಸಿದರೆ ಅವರಿಗೆ ಅದರ ಸೇಡು ತೀರಿಸಬೇಕಾಗುತ್ತದೆ. ಬ್ರಹ್ಮಾ–ಗಾಯತ್ರಿ–ಪುಹಪವತಿಗೆ ಶಾಪ ಕೊಟ್ಟಿದ್ದನ್ನು ನೋಡಿ ಕಾಲನಿರಂಜನನು "ನೀನು ತಪ್ಪು ಮಾಡಿದೆ" ಎಂದು ಪ್ರಕೃತಿಗೆ ತಿಳಿಸಿದ. ನಾನು ನಿನಗೆ ಶಾಪ ಕೊಡುವೆ ಅದೇನೆಂದರೆ "ದ್ವಾಪರ ಯುಗದಲ್ಲಿ ನಿನಗೆ ಐದು ಜನ ಗಂಡಂದಿರು ಇರುವರು" (ದ್ರೌಪದಿಯು ಆದಿ ಮಾಯೆಯ ಅವತಾರವೇ ಆಗಿದ್ದಳು) ಈ ಆಕಾಶವಾಣಿಯನ್ನು ಕೇಳಿದ ಆದಿ ಮಾಯೆಯು ಹೇಳಿದಳು "ನಾನೀಗ ನಿನ್ನ ವಶದಲ್ಲಿರುವೆ ನಿನಗೆ ಹೇಗೆ ಇಷ್ಟವೋ ಹಾಗೆಯೇ ಮಾಡು".

{ಸೃಷ್ಟಿ ರಚನೆಯಲ್ಲಿ ದುರ್ಗೆಯ ಇತರೆ ಹೆಸರುಗಳನ್ನು ಮತ್ತೆ–ಮತ್ತೆ ಬರೆಯಲು ಕಾರಣವೇನೆಂದರೆ ಪುರಾಣ, ಭಗವದ್ಗೀತೆ ಹಾಗೂ ವೇದಗಳಲ್ಲಿ ನೋಡುವಾಗ ಭ್ರಮೆಗೊಳಗಾಗಬಾರದು. ಯಾವ ರೀತಿ ಭಗವದ್ಗೀತೆಯ **14**ನೇ ಅಧ್ಯಾಯದ **3–4**ನೇ ಶ್ಲೋಕದಲ್ಲಿ ಕಾಲಬ್ರಹ್ಮ ಹೇಳುತ್ತಿದ್ದಾನೆ "ಪ್ರಕೃತಿಯು ಗರ್ಭಧಾರಣೆ ಮಾಡುವ ಎಲ್ಲಾ ಜೀವಿಗಳ ತಾಯಿ ಆಗಿದ್ದಾಳೆ. ನಾನು ಅವಳ ಗರ್ಭದಲ್ಲಿ ಬೀಜವನ್ನು ಸ್ಥಾಪಿಸುವ ತಂದೆ ಆಗಿದ್ದೇನೆ" **4**ನೇ ಶ್ಲೋಕದಲ್ಲಿ ಬರೆದಿದೆ: ಪ್ರಕೃತಿಯಿಂದ ಉತ್ಪತ್ತಿಯಾದ ಮೂರು ಗುಣಗಳು ಜೀವಾತ್ಮಗಳನ್ನು ಕರ್ಮದ ಬಂಧನದಲ್ಲಿ ಬಂಧಿಸುತ್ತಾರೆ. ಈ ಪ್ರಕರಣದಲ್ಲಿ ಪ್ರಕೃತಿ ದುರ್ಗೆಯಾಗಿದ್ದಾಳೆ ಮತ್ತು ಮೂರು ಗುಣಗಳುಳ್ಳ ದೇವರು ಅಂದರೆ ರಜೋಗುಣ ಬ್ರಹ್ಮಾ, ಸತೋಗುಣ–ವಿಷ್ಣು ಮತ್ತು ತಮೋಗುಣ–ಶಿವ ಇವರ ಸಾಂಕೇತಿಕ ಹೆಸರಾಗಿದೆ.

## "ವಿಷ್ಣು ತನ್ನ ತಂದೆ ಕಾಲಬ್ರಹ್ಮನನ್ನು ಕಾಣಲು ಹೊರಡುವನು ಹಾಗೂ ತಾಯಿಯಿಂದ ಆಶೀರ್ವಾದ ಪಡೆಯುವನು"

ಇದಾದ ನಂತರ ವಿಷ್ಣುವಿಗೆ ಪ್ರಕೃತಿ ಹೇಳಿದಳು "ಮಗನೇ ನೀನೂ ಸಹ ನಿನ್ನ ತಂದೆಯನ್ನು ಹುಡುಕಿಕೊ." ಆಗ ವಿಷ್ಣುವು ತನ್ನ ತಂದೆಯನ್ನು ಹುಡುಕುತ್ತಾ ಪಾತಾಳ ಲೋಕವನ್ನು ಸೇರಿದನು. ಅಲ್ಲಿ ಶೇಷನಾಗ ವಿಷ್ಣುವು ತನ್ನ ಸೀಮೆಗೆ ಬರುವುದನ್ನು ಕಂಡು ಕೋಪದಿಂದ ವಿಷಪೂರಿತವಾದ ಊಸಿರು ಬಿಟ್ಟಿತ್ತು. ಈ ವಿಷದ ಕಾರಣದಿಂದಾಗಿ ವಿಷ್ಣುವಿನ ಶರೀರವು ನೀಲಿಬಣ್ಣವಾಯಿತು. ಹೇಗೆ ಸ್ಪ್ರೇ ಪೆಂಟ್ ಆದಂತೆ. ಈ ನಾಗನಿಗೆ ಇದರ ತಪ್ಪಿನ ಶಿಕ್ಷೆ ನೀಡಬೇಕು ಎಂದು ವಿಷ್ಣು ಯೋಚಿಸಿದ. ಆಗ ಜ್ಯೋತಿ ನಿರಂಜನನು ವಿಷ್ಣುವಿಗೆ ಶಾಂತಗೊಳಿಸಲು ಆಕಾಶವಾಣಿ ಮಾಡಿ ಹೇಳಿದ "ಮಗನೆ ನೀನಿಗ ತಾಯಿಯ ಹತ್ತಿರ ಹೋಗು ಸತ್ಯವಾಗಿ ನಡೆದ ಘಟನೆಯನ್ನು ವಿವರಿಸಿ ಹೇಳು. ನಿನಗಾಗಿರುವ ಕಷ್ಟಕ್ಕೆ ದ್ವಾಪರ ಯುಗದಲ್ಲಿ ಯಾವಾಗ ನೀನು ಕೃಷ್ಣನ ಅವತಾರ ತಾಳುವೆ. ಆಗ ಶೇಷನಾಗನ ಅವತಾರ ಕಾಲಿಂದ್ರೀ ಎಂಬ ನಾಗನಾಗಿ ಕಾಲೀದಹ (ಯಮುನೆ–ಕರಿನೀರಿನ, ನದಿ) ದಲ್ಲಿರುವನು ಆಗ ನೀನು ಸೇಡು ತೀರಿಸಿಕೊ.

ಊಂಚ್ ಹೋಯಿ ಕೆ ನೀಚ್ ಸತಾವ್ಯೆ, ತಾಕರ್ ಓಯಲ್ (ಬದಲಾ) ಮೋಹಿ ಸೋ ಪಾವ್ಯೆ ।
ಜೋ ಜೀವ್ ದೇಯಿ ಪೀರ್ ಪುನೀ ಕಾಹೂ, ಹಮ್ ಪುನಿ ಓಯಲ್ ದಿವಾವೇ ತಾಹೂಂ॥

ಆಗ ವಿಷ್ಣುವು ತಾಯಿಯ ಹತ್ತಿರ ಬಂದು ಸತ್ಯವನ್ನು ಹೇಳಿದ. "ನನಗೆ ತಂದೆಯ ದರ್ಶನವಾಗಲಿಲ್ಲ" ಈ ಮಾತಿನಿಂದ ತಾಯಿಗೆ ಸಂತೋಷವಾಯಿತು. "ಮಗನೆ ನೀನು ಸತ್ಯವಾದಿ" ಯಾಗಿರುವೆ. ಈಗ ನಾನು ನನ್ನ ಶಕ್ತಿಯಿಂದ ನಿನಗೆ ನಿನ್ನ ತಂದೆಯನ್ನು ಭೇಟಿ ಮಾಡಿಸುವೆ ಹಾಗೂ ನಿನ್ನ ಮನದ ಸಂಶಯವನ್ನು ನಿವಾರಿಸುತ್ತೇನೆ.

ಕಬೀರ್, ದೇಖ್ ಪುತ್ರ್ ತೋಹಿ ಪಿತಾ ಭಿಟಾಊ ತೋರೆ ಮನ್ ಕಾ ಧೋಖಾ ಮಿಟಾಊ ।
ಮನ್ ಸ್ವರೂಪ್ ಕರ್ತಾ ಕಹ್ ಜಾನೋ, ಮನ್‌ತೇ ದೂಜಾ ಔರ್ ನ ಮಾನೋ ।
ಸ್ವರ್ಗ್ ಪಾತಾಲ್ ದೌರ್ ಮನ್ ಕೇರಾ, ಮನ್ ಅಸ್ತೀರ್ ಮನ್ ಅಹೈ ಅನೇರಾ ।
ನಿರಂಕಾರ್ ಮನ್ ಹೀ ಕೋ ಕಹೀಯೆ, ಮನ್ ಕೀ ಆಶ್ ನಿಶ್ ದಿನ್ ರಹಿಯೆ ।
ದೇಖ್ ಹೂಂ ಪಲಟಿ ಸುನ್ಯ ಮಹ್ ಜ್ಯೋತಿ, ಜಹಾ ಪರ್ ಝಿಲ್-ಮಿಲ್ ಝಾಲರ್ ಹೋತಿ ॥

ಮನಸ್ಸೇ ಜಗತ್ತಿನ ಕರ್ತ, ಮನಸ್ಸೇ ಜ್ಯೋತಿ ನಿರಂಜನ ಎಂದು ತಾಯಿ (ಪ್ರಕೃತಿ/ಅಷ್ಟಂಗಿ) ವಿಷ್ಣುವಿಗೆ ಹೇಳಿದಳು. "ಧ್ಯಾನದಲ್ಲಿ ಒಂದು ಸಾವಿರ ಜ್ಯೋತಿಗಳು (ದೀಪಗಳು) ಏನು ಕಾಣುತ್ತವೋ, ಅದೇ ಅವನ ರೂಪ. ಏನು ಶಂಖ, ಘಂಟೆಯ ಜೋರಾದ ಧ್ವನಿ, ವಾದ್ಯಗಳ ಧ್ವನಿ ಕೇಳುತ್ತಿರುವುದೇ ಮಹಾಸ್ವರ್ಗ ಅದು ನಿರಂಜನನದೇ ಆಗಿದೆ. ಆಗ ತಾಯಿ (ಅಷ್ಟಂಗಿ, ಪ್ರಕೃತಿ) ಹೇಳಿದಳು ಪುತ್ರ ನೀನು ಎಲ್ಲ ದೇವತೆಗಳಲ್ಲಿ ಶ್ರೇಷ್ಠನಾಗಿರುವೆ, ನಿನ್ನೆಲ್ಲಾ ಕಾರ್ಯ ಹಾಗೂ ಕಾಮನೆ (ಬಯಕೆ) ಗಳನ್ನು ನಾನು ಪೂರ್ಣಗೊಳಿಸುವೆ. ನಿನ್ನ ಪೂಜೆಯು ಸಮಸ್ತ ವಿಶ್ವದಲ್ಲಿ ಆಗುವುದು. ನೀನು ಸತ್ಯ ಹೇಳಿರುವೆ. ಕಾಲನ 21ನೇ ಬ್ರಹ್ಮಾಂಡದ ಜೀವಿಗಳು ತಮ್ಮ ವ್ಯರ್ಥ ಮಹಿಮೆಯನ್ನು ಹೇಳುವುದು ಅಭ್ಯಾಸವಾಗಿಬಿಟ್ಟಿದೆ. ಹೇಗೆ ದುರ್ಗಾ ವಿಷ್ಣುವಿಗೆ ಹೇಳುತ್ತಿರುವಳು ಜಗತ್ತಿನಲ್ಲಿ ನಿನ್ನ ಪೂಜೆ ಆಗುವುದು, ನಾನು ನಿನಗೆ ನಿನ್ನ ತಂದೆಯ ದರ್ಶನ ಮಾಡಿಸಿದೆ. ದುರ್ಗೆಯು ಕೇವಲ ಪ್ರಕಾಶವನ್ನು ತೋರಿಸಿ ವಿಷ್ಣುವಿಗೆ ಭ್ರಮೆಗೊಳಿಸಿದಳು. ವಿಷ್ಣು ಕೂಡಾ ಪ್ರಭುವಿನದು ಇದೆ ಸ್ಥಿತಿಯೆಂದು ತನ್ನ ಅನುಯಾಯಿಗಳಿಗೆ ತಿಳಿಸಿದನು. ಪರಮಾತ್ಮನ ಪ್ರಕಾಶ ಮಾತ್ರ ನೋಡಬಹುದು, ಪರಮಾತ್ಮ ನಿರಾಕಾರನು. ನಂತರ ಆದಿ ಭವಾನಿಯು, ರುದ್ರನ (ಮಹೇಶನ) ಬಳಿಗೆ ಹೋಗಿ, ನೀನೂ ಸಹ ನಿನ್ನ ತಂದೆಯನ್ನು ಹುಡುಕು. ನಿನ್ನ ಇಬ್ಬರು ಸೋದರರಿಗೆ ಅವರ ದರ್ಶನವಾಗಲಿಲ್ಲ. ಅವರಿಗೆ ಏನನ್ನು ಕೊಡಬೇಕಿತ್ತೋ ಅದನ್ನು ಕೊಟ್ಟಿದ್ದಾಗಿದೆ. ಈಗ ನಿನಗೆ ಏನು ಬೇಕೆಂದು ಕೇಳು ಎಂದಾಗ ಮಹೇಶನು ಹೇಳಿದನು. "ಹೇ ಜನನೀ ನನ್ನ ಇಬ್ಬರು ಸೋದರರಿಗೂ ತಂದೆಯ ದರ್ಶನವಾಗಿಲ್ಲ, ಎಂದ ಮೇಲೆ, ನಾನೇಕೆ ವ್ಯರ್ಥ ಪ್ರಯತ್ನ ಮಾಡಲಿ? ನನಗೆ ನೀನು ವರವನ್ನು ಕೊಡುವುದಾದರೆ "ಮೃತ್ಯುಂಜಯನಾಗು" (ಅಮರನಾಗುವ) ವರವನ್ನು ಕೊಡು" ಎಂದಾಗ ಪ್ರಕೃತಿ ಹೇಳಿದಳು ನನ್ನಿಂದ ಇದು ಸಾಧ್ಯವಿಲ್ಲ. ಆದರೆ ನಿನಗೆ ನಿನ್ನ ಆಯುಷ್ಯವನ್ನು ಹೆಚ್ಚಿಸಿಕೊಳ್ಳಲು ಒಂದು ಯುಕ್ತಿಯನ್ನು ತಿಳಿಸುವೆ. ಅದರಿಂದ ನಿನ್ನ ಆಯಸ್ಸು ಹೆಚ್ಚಾಗುವುದು, ಅದು ವಿಧಿಯೋಗ ಸಮಾಧಿಸ್ತನಾಗಿರುವುದು (ಅದಕ್ಕಾಗಿಯೇ ಶಿವನು ಹೆಚ್ಚಾಗಿ ಸಮಾಧಿ ಸ್ಥಿತಿಯಲ್ಲೇ ಇರುವನು). ಈ ರೀತಿ ದುರ್ಗೆಯು ಮೂವರಿಗೂ ಪ್ರತ್ಯೇಕ ವಿಭಾಗಗಳನ್ನು ಹಂಚಿಕೊಟ್ಟಳು.

ಬ್ರಹ್ಮಾನಿಗೆ, ಕಾಲ ಲೋಕದಲ್ಲಿ 84 ಲಕ್ಷ ಜೀವಿಗಳ ಶರೀರವನ್ನು ಸೃಷ್ಟಿಸುವ ಅಂದರೆ ರಜೋಗುಣ ಪ್ರಭಾವದಿಂದ ಸಂತಾನೋತ್ಪತ್ತಿ ಮಾಡುವುದಕ್ಕಾಗಿ ವಿವಶ ಮಾಡಿ ಜೀವಿಗಳನ್ನು ಉತ್ಪತ್ತಿ ಮಾಡುವ ಕೆಲಸದ ವಿಭಾಗವನ್ನು ವಹಿಸಲಾಯಿತು.

ವಿಷ್ಣುವಿಗೆ ಈ ಜೀವಿಗಳ ಪಾಲನೆ-ಪೋಷಣೆ (ಕರ್ಮಾನುಸಾರ) ಮಾಡುವ ಹಾಗೂ ಮೋಹ-ಮಮತೆ ಮಾಯೆ, ಪ್ರಿತಿ ಹುಟ್ಟಿಸಿ ಪಾಲನೆ ಮಾಡುವ ವಿಭಾಗ ನೀಡಲಾಯಿತು.

ಶಿವ ಶಂಕರನಿಗೆ ಸಂಹಾರಮಾಡುವ ಕೆಲಸವನ್ನು ನೀಡಲಾಯಿತು. ಏಕೆಂದರೆ ಇವರ ತಂದೆ

ನಿರಂಜನ (ಕಾಲ) ನಿಗೆ ಪ್ರತಿ ದಿನ ಒಂದು ಲಕ್ಷ ಮಾನವ ಶರೀರಧಾರಿ ಜೀವಿಗಳನ್ನು ಪ್ರತಿದಿನ ತಿನ್ನಬೇಕಾಗುತ್ತದೆ.

ನಮ್ಮ ಮನಸ್ಸಿನಲ್ಲಿ ಇಲ್ಲೊಂದು ಪ್ರಶ್ನೆ ಹುಟ್ಟುವುದು ಸಹಜ. ಬ್ರಹ್ಮಾ, ವಿಷ್ಣು, ಮಹೇಶ್ವರರು, ತಮ್ಮ-ತಮ್ಮ ಲೋಕದಲ್ಲಿ ಪ್ರತ್ಯೇಕವಾಗಿ ಇರುತ್ತಾರೆ. ಇವರು ಉತ್ಪತ್ತಿ ಸ್ಥಿತಿ, ಸಂಹಾರ ಹೇಗೆ ಮಾಡುತ್ತಾರೆ? ಹೇಗೆಂದರೆ ಈಗ ಉಪಗ್ರಹಗಳನ್ನು ಅಂತರಿಕ್ಷಕ್ಕೆ ಕಳುಹಿಸಿ, ಅವುಗಳಿಂದ ಬರುವಂತಹ ಕಿರಣಗಳಿಂದ ಕೆಳಗಿನ ಸಂಚಾರ ಇತ್ಯಾದಿ ಕೆಲಸಗಳನ್ನು ಸಮರ್ಥವಾಗಿ ಮಾಡಿರುತ್ತಿರುವಂತೆ. ಮೂರು ದೇವರು ಎಲ್ಲಿಯೇ ಇರಲಿ, ಅವರ ಶರೀರದಿಂದ ಹೊರಹೊಮ್ಮುವ ಗುಣ (ರಜೋಗುಣ-ಸತೋಗುಣ-ತಮೋಗುಣ) ದ ಅಲೆಗಳ ಪ್ರಭಾವದಿಂದ ಮೂರು ಲೋಕಗಳ ಪ್ರತಿ ಜೀವಿಯೂ ಸ್ವತಃವೇ ಪ್ರಭಾವಿತವಾಗುತ್ತವೆ.

ಮೇಲಿನ ವಿವರಣೆ ಬ್ರಹ್ಮ (ಕಾಲ) ನ ಒಂದು ಬ್ರಹ್ಮಾಂಡದಲ್ಲಿನ ರಚನೆಯಾಗಿದೆ. ಇಂತಹ ಕ್ಷರ ಪುರುಷನ **21** ಬ್ರಹ್ಮಾಂಡಗಳಿವೆ. ಆದರೆ ಕ್ಷರಪುರುಷನು (ಕಾಲ) ಸ್ವತಃ ಅವ್ಯಕ್ತ ಅಂದರೆ ವಾಸ್ತವಿಕ ಶರೀರರೂಪದಲ್ಲಿ ಎಲ್ಲರ ಮುಂದೆ ಬರುವುದಿಲ್ಲ. ಅವನನ್ನು ಕಾಣಲು ಮೂರು ದೇವರುಗಳು (ಬ್ರಹ್ಮಾ-ವಿಷ್ಣು-ಮಹೇಶ್ವರ) ವೇದದಲ್ಲಿ ವರ್ಣಿತ ವಿಧಿ ಅನುಸಾರ ಹೆಚ್ಚು ಸಾಧನೆ ಮಾಡಿದರೂ ಬ್ರಹ್ಮನ ದರ್ಶನವಾಗಲೇ ಇಲ್ಲ. ನಂತರ ಋಷಿಗಳು ವೇದಗಳನ್ನು ಓದಿದರು. ಅದರಲ್ಲಿ ಹೀಗೆ ಬರೆದಿದೆ. "ಅಗ್ನೇಃ ತನೂರ್ ಅಸಿ". (ಪವಿತ್ರ ಯಜುರ್ವೇದ ಒಂದನೇ ಅಧ್ಯಾಯದ **15**ನೇ ಮಂತ್ರ) ಪರಮೇಶ್ವರನು ಸಶರೀರನಾಗಿದ್ದಾನೆ. ಹಾಗೂ ಪವಿತ್ರ ಯಜುರ್ವೇದ **5**ನೇ ಅಧ್ಯಾಯದ **1**ನೇ ಮಂತ್ರದಲ್ಲಿ ಹೀಗೆ ಹೇಳಿದೆ. "ಅಗ್ನೇಃ ತನೂರ ಅಸಿ ವಿಷ್ಣವೆ ತ್ವಾ ಸೋಮಸ್ಯ ತನೂರ ಅಸಿ" ಅಂದರೆ ಈ ಮಂತ್ರದಲ್ಲಿ ವೇದ ಎರಡು ಬಾರಿ ಸಾಕ್ಷಿ ನೀಡುತ್ತಿದೆ. ಸರ್ವವ್ಯಾಪಕ, ಸರ್ವರಪಾಲಕ ಸತ್ಯಪುರುಷನು ಸಶರೀರನು. ಪವಿತ್ರ ಯಜುರ್ವೇದದ **40**ನೇ ಅಧ್ಯಾಯದ **8**ನೇ ಮಂತ್ರದಲ್ಲಿ ಹೀಗೆ ಹೇಳಿದೆ-ಯಾವ ಪರಮೇಶ್ವರನನ್ನು ಸರ್ವ ಜೀವಾತ್ಮಗಳು ಇಷ್ಟಪಡುವವೋ, ಅವನು ಕವಿರ್ ಅರ್ಥಾತ್ ಕಬೀರನು. ಅವನ ಶರೀರವು (ಅಸ್ನಾವೀರಂ) ನಾಡಿ ರಹಿತವಾಗಿದೆ. (ಶುಕ್ರಂ) ವೀರ್ಯದಿಂದಾದ ಪಂಚತತ್ವಗಳನ್ನು ಹೊಂದಿದ (ಅಕಾಯಂ) ಶರೀರವಲ್ಲ. ಅವನು ಎಲ್ಲರ ಸ್ವಾಮಿ, ಎಲ್ಲಕ್ಕಿಂತಲೂ ಮೇಲೆ ಇರುವ ಸತ್ಯಲೋಕದಲ್ಲಿ ವಿರಾಜಮಾನನಾಗಿದ್ದಾನೆ. (ಉಪಸ್ಥಿತನಿದ್ದಾನೆ). ಆ ಪರಮೇಶ್ವರನ ಶರೀರವು ತೇಜಪುಂಜದ ಸ್ವಪ್ರಕಾಶಿತ ಶರೀರ ಇದೆ, ಅವನು ಶಬ್ದ ರೂಪ ಅಂದರೆ ಅವಿನಾಶಿ. ಅವನೇ ಕವಿರ್ದೇವ (ಕಬೀರ್) ಸಕಲ ಬ್ರಹ್ಮಾಂಡಗಳ ರಚನೆ ಮಾಡುವವನು (ವ್ಯದಧಾತಾ) ಎಲ್ಲಾ ಬ್ರಹ್ಮಾಂಡಗಳ ರಚನಾಕಾರ (ಸ್ವಯಂಭೂಃ) ಸ್ವಯಂ ಪ್ರಕಟನಾಗುವನು (ಯಥಾ ತಥ್ಯ ಅರ್ಥಾತ) ವಾಸ್ತವದಲ್ಲಿ (ಶಾಶ್ವತ) ಅವಿನಾಶಿ. (ಗೀತೆಯ **15**ನೇ ಅಧಾಯದ **17** ಶ್ಲೋಕದಲ್ಲೂ ಸಹ ಪ್ರಮಾಣವಿದೆ).

ಇದರ ಸಾರವೇನೆಂದರೆ ಪೂರ್ಣಬ್ರಹ್ಮನ ಶರೀರದ ಹೆಸರೇ ಕಬೀರ್ (ಕವಿರ್ದೇವ) ಎಂದಾಗಿದೆ. ಆ ಪರಮೇಶ್ವರನ ಶರೀರವು ಪ್ರಕಾಶ ತತ್ವದಿಂದಾಗಿದೆ. (ನೂರ=ಪ್ರಕಾಶ) ಪರಮಾತ್ಮನ ಶರೀರವು ಅತಿ ಸೂಕ್ಷ್ಮವಾಗಿದೆ ಅದು ದಿವ್ಯದೃಷ್ಟಿಯುಳ್ಳ ಸಾಧಕನಿಗೆ ಕಾಣಿಸುತ್ತದೆ. ಈ ರೀತಿ ಜೀವಾತ್ಮದ್ದು ಸೂಕ್ಷ್ಮ ಶರೀರವಿದೆ. ಅದರ ಮೇಲೆ ತಂದೆ ತಾಯಿಯರ ಸಂಯೋಗದಿಂದ ವೀರ್ಯದಿಂದ ತಯಾರಾದ ಪಂಚತತ್ವ ಶರೀರವನ್ನು ಹಾಕಲಾಗಿದೆ. ಆ ಸೂಕ್ಷ್ಮ ಶರೀರವು ಈ ಪಂಚತತ್ವದ ಶರೀರ ತ್ಯಜಿಸಿದ ನಂತರವೂ (ಮರಣದ ನಂತರವೂ) ಜೀವಾತ್ಮದ ಜೊತೆಗೆ ಇರುತ್ತದೆ. ಆ ಸೂಕ್ಷ್ಮ ಶರೀರವು ದಿವ್ಯದೃಷ್ಟಿಯುಳ್ಳ ಸಾಧಕನಿಗೆ ಕಾಣಿಸುತ್ತದೆ. ಈ ರೀತಿ ಪರಮಾತ್ಮನ ಹಾಗೂ ಜೀವಾತ್ಮದ ಸ್ಥಿತಿಯನ್ನು ಅರಿಯಿರಿ.

ವೇದಗಳಲ್ಲಿ "ಓಂ" ನಾಮ ಸ್ಮರಣೆಯ ಬಗ್ಗೆ ಹೇಳಿದೆ. ಅದು ಬ್ರಹ್ಮ ಸಾಧನೆಯಾಗಿದೆ. ಈ ಉದ್ದೇಶದಿಂದ ಋಷಿಗಳು 'ಓಂ' ನಾಮ ಜಪವನ್ನು ಪೂರ್ಣ ಬ್ರಹ್ಮನದೆಂದು ತಿಳಿದು ಸಾವಿರಾರು

ವರ್ಷಗಳ ವರೆಗೆ ಹಠಯೋಗ ಮಾಡಿದರು. ಆದರೆ ಪ್ರಭುವಿನ ದರ್ಶನಾಗಲಿಲ್ಲ. ಕೆಲವು ಸಿದ್ಧಿಗಳು ಲಭಿಸಿದವು. ಆ ಸಿದ್ಧಿ ರೂಪದ ಆಟಿಕೆಗಳನ್ನು ಬಳಸುತ್ತಾ ಋಷಿಗಳೂ ಸಹ ಜನನ–ಮರಣ ಚಕ್ರದೊಳಗೆ ಉಳಿದರು. ಹಾಗು ತಮ್ಮ ಅನುಭವದ ಶಾಸ್ತ್ರಗಳಲ್ಲಿ ಪರಮಾತ್ಮನನ್ನು ನಿರಾಕಾರ ಎಂದು ಬರೆದರು. ಬ್ರಹ್ಮನು (ಕಾಲನು) ತಾನು ಯಾರಿಗೂ ತನ್ನ ವಾಸ್ತವಿಕ ರೂಪದಲ್ಲಿ ದರ್ಶನ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವನು. ನನ್ನನ್ನು 'ಅವ್ಯಕ್ತ' ನೆಂದು ಅರಿಯುವರು. (ಅವ್ಯಕ್ತದ ಅರ್ಥ ಆಕಾರವೇನೋ ಇದೆ ಆದರೆ ಅದನ್ನು ಗೋಚರಿಸುವುದಿಲ್ಲ ಎಂಬುದಾಗಿದೆ. ಹೇಗೆ ಮೋಡ ಮುಸುಕಿದಾಗ ಹಗಲಿನಲ್ಲೇ ಸೂರ್ಯ ಕಾಣುವುದಿಲ್ಲವೋ ಹಾಗೆ. ಆದರೆ ಮೋಡದ ಆಚೆ ಸೂರ್ಯ ಇದ್ದಂತೆಯೇ ಇದ್ದಾನೆ, ಈ ಅವಸ್ಥೆಯನ್ನು ಅವ್ಯಕ್ತ ಎನ್ನಲಾಗುತ್ತದೆ. (ಪ್ರಮಾಣಕ್ಕಾಗಿ ಗೀತೆಯ 7ನೇ ಅಧ್ಯಾಯದ 24–25, 11ನೇ ಅಧ್ಯಾಯ 32 ಮತ್ತು 48ನೇ ಶ್ಲೋಕಗಳನ್ನು ಓದಿರಿ).

ಪವಿತ್ರ ಗೀತೆಯನ್ನು ಹೇಳುವ ಕಾಲಬ್ರಹ್ಮ ಶ್ರೀ ಕೃಷ್ಣನ ಶರೀರದಲ್ಲಿ ಪ್ರೇತರೂಪದಲ್ಲಿ ಪ್ರವೇಶ ಮಾಡಿ ಹೇಳಿದ್ದಾನೆ. ಹೇ ಅರ್ಜುನಾ! "ನಾನು ಕಾಲನು ಎಲ್ಲರನ್ನೂ ತಿನ್ನಲು ಬಂದಿರುವೆನು" (ಗೀತೇಯ ಅಧ್ಯಾಯ 11ರ ಶ್ಲೋಕ 32). ಇದು ನನ್ನ ವಾಸ್ತವಿಕ ರೂಪ. ಈ ರೂಪವನ್ನು ನಿನ್ನನ್ನು ಬಿಟ್ಟು ಬೇರೆ ಯಾರೂ ಹಿಂದೆ ನೋಡಿಲ್ಲ ಹಾಗೂ ಮುಂದೆ ನೋಡುವುದು ಇಲ್ಲ ಅಂದರೆ ವೇದಗಳಲ್ಲಿ ವರ್ಣಿತವಾಗಿರುವ ಯಜ್ಞ–ಜಪ–ತಪ 'ಓಂ' ನಾಮದ ಜಾಪ ಮುಂತಾದವು ವಿಧಿಗಳಿಂದ ನನ್ನ ಈ ವಾಸ್ತವಿಕ ಸ್ವರೂಪವನ್ನು ನೋಡಲು ಸಾಧ್ಯವಿಲ್ಲ (ಗೀತೆಯ 11ನೇ ಅಧ್ಯಾಯದ 48ನೇ ಶ್ಲೋಕದಲ್ಲಿದೆ). ನಾನು ಕೃಷ್ಣನಲ್ಲ, ಈ ಮೂರ್ಖರು ಕೃಷ್ಣನ ರೂಪದಲ್ಲಿ ಅವ್ಯಕ್ತನಾದ ನನ್ನನ್ನು ವ್ಯಕ್ತರೂಪ (ಮನುಷ್ಯ ರೂಪ) ತಿಳಿದಿದ್ದಾರೆ. ಏಕೆಂದರೆ ಇವರು ನನ್ನ ಕೆಟ್ಟ ನಿಯಮದ ಬಗ್ಗೆ ತಿಳಿದಿಲ್ಲ. ಅಂದರೆ ನಾನು ಯಾರ ಮುಂದೆಯೂ ವಾಸ್ತವಿಕ ಕಾಲ ರೂಪದಲ್ಲಿ ಬರುವುದಿಲ್ಲ. ಯೋಗಮಾಯೆಯಿಂದ ಅಡಗಿರುತ್ತೇನೆ. (ಗೀತೆಯ 7ನೇ ಅಧ್ಯಾಯ 24–25 ನೇ ಶ್ಲೋಕ). ವಿಚಾರ ಮಾಡಿ:– ತನ್ನ ರಹಸ್ಯಮಯವಾಗಿರುವ ವಿಧಾನವನ್ನು ಸ್ವತಃ ಶ್ರೇಷ್ಠವಲ್ಲದ್ದು, (ಅನುತ್ತಮ್) ಎಂದು ಏಕೆ ಹೇಳುತ್ತಿದ್ದಾನೆ?

ಒಂದುವೇಳೆ ತಂದೆಯು ತನ್ನ ಮಕ್ಕಳಿಗೆ ದರ್ಶನ ಕೊಡುತ್ತಿಲ್ಲ ಎಂದರೆ ಅವನಲ್ಲಿ ಯಾವುದೊ ದೋಷ ಇದೆ ಈ ಕಾರಣದಿಂದಾಗಿ ರಹಸ್ಯಮಯವಾಗಿ ಎಲ್ಲ ಸೌಲಭ್ಯ ಒದಗಿಸುತ್ತಿದ್ದಾನೆ. ಶಾಪದಿಂದಾಗಿ ಕಾಲನು ಒಂದು ಲಕ್ಷ ಮಾನವ ಶರೀರ ಧರಿಸಿದ ಜೀವಾಗಳನ್ನು ತಿನ್ನಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ಒಂದು ಲಕ್ಷ ಕಾಲು ಅಂದರೆ 25% (ಪ್ರತಿಶತ) ಹೆಚ್ಚು ಉತ್ಪತ್ತಿಯಾದ ಜೀವಿಗಳನ್ನು ಕರ್ಮ ಭೋಗದ ಶಿಕ್ಷೆ ವಿಧಿಸಲು 84 ಲಕ್ಷ ಯೋನಿಗಳ ರಚನೆ ಮಾಡಲಾಗಿದೆ. ಒಂದು ವೇಳೆ ಎಲ್ಲರ ಎದುರಿಗೆ ಬಂದು ಕಾಲನು ಯಾರ ಮಗನನ್ನೂ, ಮಗಳನ್ನೂ, ತಂದೆ ತಾಯಿರನ್ನೂ, ಹೆಂಡತಿಯನ್ನೂ ತಿಂದರೆ ಎಲ್ಲರಿಗೂ ಕಾಲ ಬ್ರಹ್ಮನ ಮೇಲೆ ದ್ವೇಷವಾಗುತ್ತಿತ್ತು ಹಾಗು ಯಾವಾಗ ಪೂರ್ಣ ಪರಮಾತ್ಮ ಕವಿರ್ಗ್ನಿ (ಕಬೀರ ಪರಮೇಶ್ವರ) ಸ್ವತಃ ಬಂದಾಗ ಅಥವಾ ತನ್ನ ಸಂದೇಶವಾಹಕನನ್ನು ಕಳುಹಿಸಿದಾಗ ಎಲ್ಲಾ ಜೀವಾತ್ಮಗಳು ಸತ್ಯಭಕ್ತಿಯನ್ನು ಮಾಡಿ ನನ್ನ ಸೆರೆಯಿಂದ ಬಿಡಿಸಿಕೊಂಡರೆ ಎಂಬ ಭಯದಿಂದ ನಮ್ಮನ್ನು ಮೋಸದಿಂದ ಇಟ್ಟಿದ್ದಾನೆ. ಮತ್ತು ಪವಿತ್ರ ಗೀತೆಯ 7ನೇ ಅಧ್ಯಾಯದ 18, 24, 25ರಲ್ಲಿ ತನ್ನ ಸಾಧನೆಯಿಂದ ದೊರೆಯುವ ಮುಕ್ತಿ (ಗತಿ) ಯನ್ನು (ಅನುತ್ತಮಾಮ್) ಅತಿ ಅಶ್ರೇಷ್ಠ ಹೇಳಲಾಗಿದೆ ಹಾಗು ತನ್ನ ವಿಧಾನ(ನಿಯಮ)ವನ್ನೂ (ಅನುತ್ತಮಾಮ್) ಅಶ್ರೇಷ್ಠ ಎಂದು ಹೇಳಲಾಗಿದೆ.

ಪ್ರತ್ಯೇಕ ಬ್ರಹ್ಮಾಂಡದ ಬ್ರಹ್ಮಲೋಕದಲ್ಲಿ ಒಂದು ಮಹಾಸ್ವರ್ಗವನ್ನು ರಚಿಸಿದ್ದಾನೆ. ಮಹಾಸ್ವರ್ಗದಲ್ಲಿ ಒಂದು ಸ್ಥಾನದಲ್ಲಿ ನಕಲಿ 'ಸತ್ಯಲೋಕ', ನಕಲಿ 'ಅಲಖ್‌ಲೋಕ', ನಕಲಿ 'ಅಗಮ್‌ಲೋಕ', ಹಾಗೂ ನಕಲಿ 'ಅನಾಮಿಲೋಕ' ಗಳ ರಚನೆ ಜೀವಾತ್ಮಗಳಿಗೆ ಮೋಸದಲ್ಲಿಡಲೆಂದೇ ಪ್ರಕೃತಿ (ದುರ್ಗಾ/ ಆದಿಮಾಯೆ) ಮೂಲಕ ಇವುಗಳನ್ನು ರಚಿಸಿದ್ದಾನೆ. ಇದರ ಬಗ್ಗೆ ಕಬೀರ್ ಪರಮೇಶ್ವರರ ಒಂದು ಶಬ್ದ ಹೀಗಿದೆ."ಕರ್ ನೈನೊ ದೀದಾರ್ ಮಹಲ್ ಮೆ ಪ್ಯಾರಾ ಹೈ"


ಕಾಯಾಭೇದ್ ಕಿಯಾ ನಿರವಾರಾ, ಯಹ್ ಸಬ್ ರಚನಾ ಪಿಂಡ್–ಮಂಝಾರಾ ಹೈ ।

ಮಾಯಾ ಅವಿಗತ್ ಜಾಲ್ ಪಸಾರಾ, ಸೋ ಕಾರೀಗರ್ ಭಾರಾ ಹೈ ।
ಆದಿ ಮಾಯಾ ಕೀನ್ಹೀ ಚತುರಾಯಿ, ಝೂಠೀ ಬಾಜೀ ಪಿಂಡ್ ದಿಖಾಯಿ ।
ಅವಿಗತ್ ರಚನಾ ರಚಿ ಅಂಡ್ ಮಾಹಿ ವಾಕಾ–ಪ್ರತಿಬಿಂಬ್ ಡಾರಾ ಹೈ ।


ಒಂದು ಬ್ರಹ್ಮಾಂಡದಲ್ಲಿ ಬೇರೆ ಮೂರು ಬ್ರಹ್ಮಾ, ವಿಷ್ಣು, ಹಾಗೂ ಶಿವ ಲೋಕಗಳ ರಚನೆಯೂ ಇದೆ. ಅಲ್ಲಿಯೇ ಕುಳಿತು ಈ ಮೂರೂ ಪ್ರಭುಗಳು ಸ್ವರ್ಗ (ಇಂದ್ರನಲೋಕ), ಪೃಥ್ವಿ, ಪಾತಾಳ ಲೋಕಗಳ ಒಂದೊಂದು ವಿಭಾಗದ ಮಾಲೀಕರಾಗಿ ನಿಭಾಯಿಸುತ್ತಾರೆ ಮತ್ತು ತಮ್ಮ ತಂದೆಗೆ (ಕಾಲನಿಗೆ) ತಿನ್ನಲೆಂದು ಸೃಷ್ಟಿ, ಸ್ಥಿತಿ, ಸಂಹಾರಗಳ ಕಾರ್ಯವನ್ನು ನಿಭಾಯಿಸುತ್ತಾರೆ. ಈ ಮೂರು ಪ್ರಭುಗಳ (ಬ್ರಹ್ಮಾ–ವಿಷ್ಣು–ಮಹೇಶ್ವರರ) ಹುಟ್ಟು–ಸಾವು ಆಗುತ್ತದೆ. ಆಗ ಕಾಲನು ಇವರನ್ನೂ ಸಹ ತಿನ್ನುತ್ತಾನೆ. ಇದೇ ಬ್ರಹ್ಮಾಂಡದಲ್ಲಿ {ಇದನ್ನು ಅಂಡ ಎಂದೂ ಕರೆಯಲಾಗುತ್ತದೆ. ಏಕೆಂದರೆ ಬ್ರಹ್ಮಾಂಡ ಮೊಟ್ಟೆಯ ಆಕಾರದಲ್ಲಿದೆ. ಇದನ್ನು ಪಿಂಡ ಎಂದೂ ಸಹ ಕರೆಯುತ್ತಾರೆ. ಏಕೆಂದರೆ ನಮ್ಮ ಶರೀರ ಅಂದರೆ 'ಪಿಂಡ'ದಲ್ಲಿ ಒಂದು ಬ್ರಹ್ಮಾಂಡದ ರಚನೆಯನ್ನು ಕಮಲಗಳಲ್ಲಿ ಟಿ.ವಿ. ಹಾಗೆ ನೋಡಬಹುದಾಗಿದೆ.} ಒಂದು ಮಾನಸ ಸರೋವರ ಹಾಗೂ ಧರ್ಮರಾಯನ (ನ್ಯಾಯಾಧೀಶನ) ಲೋಕವಿದೆ. ಹಾಗು ಒಂದು ರಹಸ್ಯವಾದ ಸ್ಥಾನದಲ್ಲಿ ಪೂರ್ಣ ಪರಮಾತ್ಮನು ಬೇರೆ ರೂಪವನ್ನು ಧಾರಣೆ ಮಾಡಿಕೊಂಡು ಇರುತ್ತಾನೆ. ಹೇಗೆಂದರೆ ಪ್ರತಿಯೊಂದು ದೇಶಕ್ಕೂ "ರಾಯಭಾರಿ ಭವನ" ವಿರುವಂತೆ. ಅಲ್ಲಿಗೆ ಯಾರೂ ಹೋಗಲು ಸಾಧ್ಯವಿಲ್ಲ. ಅಲ್ಲಿ ಸತ್ಯಲೋಕದ ಭಕ್ತಿ ಕಡಿಮೆಯಾದ (ಅರ್ಧಭಕ್ತಿಯ) ಆತ್ಮಗಳು ಅಲ್ಲಿ ಇರುತ್ತವೆ. ಯಾವಾಗ ಭಕ್ತಿಯುಗ ಬರುವುದೋ, ಆಗ ಪರಮೇಶ್ವರ ಕಬೀರರು ತಮ್ಮ ಪ್ರತಿನಿಧಿ ಸಂತ, ಸದ್ಗುರುವಿಗೆ ಕಳುಹಿಸುತ್ತಾರೆ. ಆಗ ಈ ಪುಣ್ಯಾತ್ಮಗಳಿಗೆ ಭೂಮಿಯ ಮೇಲೆ ಮಾನವ ಶರೀರ ಪ್ರಾಪ್ತವಾಗುತ್ತದೆ. ಅವುಗಳು ಶೀಘ್ರವೇ (ಬೇಗನೆ) ಭಕ್ತಿಪಥದಲ್ಲಿ ಸಾಗುತ್ತವೆ. ಸದ್ಗುರುವಿನಿಂದ ದೀಕ್ಷೆ ಪಡೆದು ಮೋಕ್ಷವನ್ನು ಪಡೆಯುತ್ತವೆ. ಆ ಸ್ಥಾನಗಳಲ್ಲಿರುವ ಆತ್ಮಗಳ ಭಕ್ತಿ ಸಾಧನೆಯ ಪುಣ್ಯ ಖರ್ಚಾಗುವುದಿಲ್ಲ. ಪರಮಾತ್ಮನಿಂದಲೇ ಎಲ್ಲಾ ಸೌಲಭ್ಯಗಳೂ ಪ್ರಾಪ್ತವಾಗುತ್ತವೆ. ಬ್ರಹ್ಮನ ಉಪಾಸಕರು ಗಳಿಸಿದ ಭಕ್ತಿ, ಸ್ವರ್ಗ–ಮಹಾಸ್ವರ್ಗಗಳಲ್ಲಿ ಮುಗಿದುಹೋಗುತ್ತದೆ. ಏಕೆಂದರೆ ಈ ಕಾಲಲೋಕ (ಬ್ರಹ್ಮಲೋಕ) ಹಾಗೂ ಪರಬ್ರಹ್ಮ ಲೋಕದಲ್ಲಿ ಜೀವಾತ್ಮಗಳು ತಾವು ಮಾಡಿದ ಕರ್ಮಫಲ ಮಾತ್ರ ಪಡೆಯುತ್ತವೆ.

ಕ್ಷರ ಪುರುಷ(ಬ್ರಹ್ಮ)ನು ತನ್ನ 20 ಬ್ರಹ್ಮಾಂಡಗಳನ್ನು 4 ಮಹಾ ಬ್ರಹ್ಮಾಂಡಗಳಾಗಿ ವಿಭಾಗಿಸಿದ್ದಾನೆ. ಒಂದು ಬ್ರಹ್ಮಾಂಡದಲ್ಲಿ 5 ಬ್ರಹ್ಮಾಂಡಗಳ ಸಮೂಹವನ್ನು ಮಾಡಿದ್ದಾನೆ. ಅದರ ನಾಲ್ಕೂ ಕಡೆಯೂ (ಸುತ್ತಲೂ) ಗೋಲಾಕಾರದ ಪರಿಧಿಯನ್ನು ಮಾಡಿದ್ದಾನೆ. ಅಲ್ಲದೆ ನಾಲ್ಕು ಮಹಾಬ್ರಹ್ಮಾಂಡಗಳಿಗೂ ಗೋಲಾಕಾರದ ಪರಿಧಿಯನ್ನು ರಚಿಸಲಾಗಿದೆ. 21ನೇ ಬ್ರಹ್ಮಾಂಡವು ಒಂದು ಮಹಾಬ್ರಹ್ಮಾಂಡದಷ್ಟು ಸ್ಥಳವನ್ನು ಹೊಂದಿದೆ. 21ನೇ ಬ್ರಹ್ಮಾಂಡಕ್ಕೆ ಪ್ರವೇಶ ಮಾಡಿದೊಡನೆ, ಮೂರು ರಸ್ತೆಗಳು ಗೋಚರಿಸುತ್ತವೆ. ಇಲ್ಲೂ ಸಹ ಜೀವಿಗಳನ್ನು ವಂಚಿಸಿಡಲು, ಎಡಭಾಗದಲ್ಲಿ ನಕಲಿ ಸತ್ಯಲೋಕ, ನಕಲಿ ಅಲಖ್‌ಲೋಕ, ನಕಲಿ ಅಗಮ್‌ಲೋಕ ಹಾಗೂ ನಕಲಿ ಅನಾಮಿಲೋಕಗಳನ್ನು ಆದಿಮಾಯೆಯಿಂದ (ದುರ್ಗಾಳಿಂದ) ರಚಿಸಿದ್ದಾನೆ. ಬಲಭಾಗದಲ್ಲಿ 12 ಸರ್ವಶ್ರೇಷ್ಠ ಸಾಧಕ ಬ್ರಹ್ಮ ಭಕ್ತರನ್ನು ಇಡುತ್ತಾನೆ. ನಂತರ ಪ್ರತಿಯೊಂದು ಯುಗಗಳಲ್ಲೂ ಅವರನ್ನು ತನ್ನ ಸಂದೇಶವಾಹಕರನ್ನಾಗಿ ಪೃಥ್ವಿಗೆ ಕಳುಹಿಸುತ್ತಾನೆ. ಅವರು ಶಾಸ್ತ್ರವಿರುದ್ಧ ಸಾಧನೆ ಹಾಗು ಜ್ಞಾನವನ್ನು ತಿಳಿಸುತ್ತಾರೆ. ಈ ಕಾರಣ ಸ್ವತಃ ಭಕ್ತಿಹೀನರಾಗಿ ತನ್ನ ಅನುಯಾಯಿಗಳನ್ನು ಸಹ ಕಾಲನ ಜಾಲದಲ್ಲಿ ಸಿಲುಕಿಸುತ್ತಾರೆ. ಇಂತಹ ಗುರು ಹಾಗೂ ಶಿಷ್ಯರು ಇಬ್ಬರೂ ನರಕಕ್ಕೆ ಹೋಗುತ್ತಾರೆ. ನಂತರ ಮುಂಭಾಗದಲ್ಲಿ ಬೀಗ ಹಾಕಲಾಗಿದೆ. ಆ ರಸ್ತೆಯು ಕಾಲನ(ಬ್ರಹ್ಮನ) ನಿಜ ಲೋಕದ ದಾರಿ. ಅಲ್ಲಿ ಈ ಕಾಲನು ತನ್ನ ವಾಸ್ತವಿಕ (ಸಹಜ) ಮಾನವ ಸದೃಶ್ಯ (ಮಾನವನಂತೆ ಕಾಣುವ) ಕಾಲ ರೂಪದಲ್ಲಿರುತ್ತಾನೆ. ಈ ಸ್ಥಳದಲ್ಲಿ ಕಾವಲಿ (ತವಾ) ರೂಪದ ಒಂದು ಕಲ್ಲಿನ ಭಾಗ (ಶಿಲೆ) ಇದೆ, ಅದು ಸ್ವತಃ ಬಹಳ ಬಿಸಿಯಾಗಿರುತ್ತದೆ.

# ಬ್ರಹ್ಮ ಲೋಕದ ಲಘು ಚಿತ್ರ



# ಜ್ಯೋತಿ ನಿರಂಜನ (ಕಾಲ) ಬ್ರಹ್ಮನ ಲೋಕ (ಇಪ್ಪತ್ತೊಂದು ಬ್ರಹ್ಮಾಂಡ)ದ ಲಘು ಚಿತ್ರ



ಆ ಬಿಸಿಯಾದ ಶಿಲೆ ಮೇಲೆ ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳ ಸೂಕ್ಷ್ಮ ಶರೀರವನ್ನು ಸುಟ್ಟು, ಆ ಶರೀರದಿಂದ ಹೊಲಸು ಬೇರ್ಪಡಿಸಿ ಅದನ್ನು ಕಾಲಬ್ರಹ್ಮನು ತಿನ್ನುತ್ತಾನೆ. ಆ ಸಮಯದಲ್ಲಿ (ಬೇಯಿಸುವಾಗ) ಎಲ್ಲಾ ಜೀವಾತ್ಮಗಳು ಬಹಳ ಕಷ್ಟವನ್ನು ಅನುಭವಿಸುತ್ತವೆ, ಹಾಹಾಕಾರ ವಾಗುತ್ತದೆ, ನಂತರ ಸ್ವಲ್ಪ ಸಮಯದ ನಂತರ ಮೂರ್ಛೆ ಹೋಗುತ್ತವೆ. ಜೀವಾತ್ಮಗಳು ಸಾಯುವುದಿಲ್ಲ. ಅಲ್ಲಿಂದ ಧರ್ಮರಾಯನ (ನ್ಯಾಯಾಧೀಶ) ಲೋಕಕ್ಕೆ ಹೋಗುತ್ತವೆ. ಅಲ್ಲಿ ಅವುಗಳ ಕರ್ಮಗಳ ಆಧಾರದ ಮೇಲೆ, ಬೇರೆ ಜನ್ಮವನ್ನು ಪಡೆದು ಹುಟ್ಟು-ಸಾವಿನ ಚಕ್ರದಲ್ಲಿ ಸಿಲುಕುತ್ತವೆ.

ಮೇಲೆ ಹೇಳಿರುವ ಬೀಗವು, ಕಾಲನು ತಿನ್ನುವ ಜೀವಾತ್ಮಗಳನ್ನು ಒಳಗೆ ಬರಲು ಕೆಲವೇ ಕ್ಷಣ ತೆರೆಯುತ್ತಾನೆ. ಪೂರ್ಣ ಪರಮಾತ್ಮನ ಸತ್ಯನಾಮ ಹಾಗೂ ಸಾರ ನಾಮದಿಂದ ಈ ಬೀಗವು ಸ್ವಯಂ ತೆರೆಯುತ್ತದೆ ಈ ರೀತಿ ಪೂರ್ಣ ಪರಮಾತ್ಮ (ಕಬೀರ್ ಪರಮೇಶ್ವರರು) ಕವಿರ್ದೇವರು ಈ ಕಾಲನ ಜಾಲ (ವ್ಯವಸ್ಥೆ) ತಮ್ಮ ನಿಜಭಕ್ತರಾದ ಧರ್ಮ್‌ದಾಸರಿಗೆ ತಿಳಿಸಿದ್ದಾರೆ.

## "ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳ ಸ್ಥಾಪನೆ"

ಕಬೀರ್ ಪರಮೇಶ್ವರರು ಮುಂದೆ ಹೇಳಿದ್ದಾರೆ ಪರಬ್ರಹ್ಮನು (ಅಕ್ಷರ ಪುರುಷ) ತನ್ನ ಕಾರ್ಯದ ಜವಾಬ್ದಾರಿ ಮರೆತು ಮಾನಸ ಸರೋವರದಲ್ಲಿ ಮಲಗಿಬಿಟ್ಟನು ಮತ್ತು ಪರಮೇಶ್ವರನು (ನಾನು ಅಂದರೆ ಕಬೀರ ಸಾಹೇಬ) ಆ ಸರೋವರದೊಳಗೆ ಮೊಟ್ಟೆಬಿಟ್ಟಾಗ ಪರಬ್ರಹ್ಮನು ಕ್ರೋಧದಿಂದ ನೋಡಿದನು. ಈ ಎರಡು ಕಾರಣಗಳಿಗಾಗಿ ಪರಬ್ರಹ್ಮನನ್ನು 7 ಶಂಖ ಬ್ರಹ್ಮಾಂಡ ಸಹಿತವಾಗಿ, ಸತ್ಯಲೋಕದಿಂದ ಹೊರಗೆ ಹಾಕಲಾಯಿತು. ಮತ್ತೊಂದು ಅಪರಾಧವೆಂದರೆ, ಪರಬ್ರಹ್ಮನು ತನ್ನ ಜೊತೆಗಾರ ಕಾಲ ಬ್ರಹ್ಮನನ್ನು ಬಿಟ್ಟಿರುವ ವಿಯೋಗದಲ್ಲಿ ಕವಿರ್ದೇವ (ಕಬೀರ್ ಪರಮೇಶ್ವರ) ನ ಸ್ಮರಣೆಯನ್ನೇ ಮಾಡಲಿಲ್ಲ. "ಕಾಲ ಬ್ರಹ್ಮನು ನನಗಿಂತ ಹೆಚ್ಚಿನ ಆನಂದದಲ್ಲಿರಬಹುದು ನಾನು ಹಿಂದೆ ಬಿದ್ದೆನಲ್ಲ" ಎಂದು ಚಿಂತಿಸ ತೊಡಗಿದ. ಬೇರೆ ಉಳಿದ ಕೆಲವು ಆತ್ಮಗಳು ಪರಬ್ರಹ್ಮನ್ನೊಂದಿಗೆ 7 ಶಂಖ ಬ್ರಹ್ಮಾಂಡಗಳಲ್ಲಿ ಹುಟ್ಟು-ಸಾವಿನ ಕರ್ಮದಂಡವನ್ನು ಅನುಭವಿಸುತ್ತಾ ಇವೆ. ಅವುಗಳು ತಮ್ಮಿಂದ ದೂರವಾದ ಕಾಲ ಬ್ರಹ್ಮನೊಂದಿಗೆ 21 ಬ್ರಹ್ಮಾಂಡಗಳಲ್ಲಿ ಸಿಲುಕಿಕೊಂಡಿರುವ ಆ ಹಂಸಾತ್ಮಗಳ ನೆನಪಿನಲ್ಲಿ ಲೀನವಾದವು ಹಾಗು ಸುಖ ನೀಡುವ ಕವಿರ್ದೇವರನ್ನು ಮರೆತವು.

ಪರಮೇಶ್ವರ ಕಬೀರರ ಮೂಲಕ ಪದೇ-ಪದೇ ತಿಳಿಸಿ ಹೇಳಿದರೂ, ಆಸಕ್ತಿಯು ಕಡಿಮೆಯಾಗಲಿಲ್ಲ. ಪರಬ್ರಹ್ಮನು ತಾನು ಬೇರೆ ಸ್ಥಳವನ್ನು ಪಡೆಯಬೇಕು ಎಂದು ಯೋಚಿಸಿ, ರಾಜ್ಯ ಪ್ರಾಪ್ತಿಯ ಇಚ್ಛೆಯಿಂದ ಸಾರನಾಮವನ್ನು ಜಪಿಸತೊಡಗಿದ. ಅದೇ ರೀತಿ ಪರಬ್ರಹ್ಮನೊಂದಿಗಿದ್ದ 7 ಶಂಖ ಬ್ರಹ್ಮಾಂಡಗಳಲ್ಲಿ ಸಿಲುಕಿಕೊಂಡಿರುವ ಆತ್ಮಗಳು ಯೋಚಿಸಿದವು, ಯಾವ ಹಂಸಾತ್ಮಗಳು ಕಾಲ ಬ್ರಹ್ಮ ನೊಂದಿಗೆ 21 ಬ್ರಹ್ಮಾಂಡಗಳಲ್ಲಿ ಹೋಗಿವೆ ಅವು ಅಲ್ಲಿ ಆನಂದದಿಂದ ಇರಬಹುದು, ನಾವು ಹಿಂದೆ ಉಳಿದೆವು. ಪರಬ್ರಹ್ಮನು, ಕಾಲ ಬ್ರಹ್ಮ ಬೇರೆ ಯಾಗಿ ಸುಖ-ಸುವಿಧತೆ, ವಿನೋದ, ಆನಂದದಿಂದ ಇರಬಹುದು ಈ ರೀತಿ ಇವುಗಳ ಬಗ್ಗೆಯೇ ಚಿಂತಿಸುತ್ತಾ ಇದ್ದ. ತಾನು ಬೇರೆಯಾದರೆ ಮಾತ್ರ ಸುಖವಾಗಿರಬಹುದೆಂದು ಯೋಚಿಸಿದ. ಈ ಯೋಚನೆ ಬಲವಾಗಿ ಅಂತರಾತ್ಮದಲ್ಲಿ ಬೇರೆಯಾಗಲೇಬೇಕೆಂದು ನಿರ್ಣಯಿಸಿದ. ಪರಬ್ರಹ್ಮನು ತನ್ನ ಯೋಚನೆಯ ಸಿದ್ಧಿಗಾಗಿ ಹಠ ಯೋಗ ಮಾಡಲಿಲ್ಲ. ಸಹಜ ಧ್ಯಾನದಿಂದ ಪ್ರತ್ಯೇಕ ರಾಜ್ಯಕ್ಕಾಗಿ ವಿಶೇಷವಾಗಿ ಆಸಕ್ತಿಯಿಂದ ಪ್ರಾರ್ಥಿಸಿದ. ಪ್ರತ್ಯೇಕ ರಾಜ್ಯಕ್ಕಾಗಿ ಹುಚ್ಚನಂತೆ ಅಲೆಯತೊಡಗಿದ. ಅನ್ನ-ಪಾನೀಯಗಳನ್ನು ತ್ಯಜಿಸಿದ. ಬೇರೆ ಕೆಲವು ಆತ್ಮಗಳು ಮೊದಲು ಬ್ರಹ್ಮನೊಂದಿಗೆ ಹೋದ ಆತ್ಮಗಳ ವಿಯೋಗದಲ್ಲಿದ್ದವು ನಂತರ ಪರಬ್ರಹ್ಮನ ವೈರಾಗ್ಯವನ್ನು ಮೆಚ್ಚಿಕೊಂಡು ಇವನಲ್ಲಿ ಆಸಕ್ತಿ ತೋರಿದವು. ಪೂರ್ಣ ಪ್ರಭುವು ಕೇಳಿದಾಗ, ತನಗಾಗಿ ಪ್ರತ್ಯೇಕ ಸ್ಥಾನವನ್ನು ಕೇಳಿದ. ಜೊತೆಗೆ ಕೆಲವು ಹಂಸಾತ್ಮಗಳನ್ನು ಕಳುಹಿಸಬೇಕೆಂದು ಕೇಳಿದ. ಆಗ ಪ್ರಭುವು ಸ್ವಇಚ್ಛೆಯಿಂದ ಪರಬ್ರಹ್ಮನೊಂದಿಗೆ ಹೋಗಬಯಸುವ ಹಂಸಾತ್ಮಗಳು ತಮ್ಮ ಸಮ್ಮತಿ

ಸೂಚಿಸಲು ಕೈ ಎತ್ತಿ ಎಂದು ಹೇಳಿದರು. ಬಹಳ ಸಮಯದ ನಂತರ ಒಂದು ಹಂಸಾತ್ಮ ತನ ಸಮ್ಮತಿ ಸೂಚಿಸಿತು. ನಂತರ ಒಬ್ಬರಿಗೊಬ್ಬರು ನೋಡಿ ಆ ಎಲ್ಲಾ ಆತ್ಮಗಳು ಸಮ್ಮತಿ ಸೂಚಿಸಿದವು. ಮೊದಲು ಸಮ್ಮತಿ ಸೂಚಿಸಿದ ಹಂಸಾತ್ಮಕ್ಕೆ ಸ್ತ್ರೀ ರೂಪವನ್ನು ನೀಡಲಾಯ್ತು. ಅವಳ ಹೆಸರನ್ನು "ಈಶ್ವರೀ ಮಾಯಾ" ಎಂದು ಇಡಲಾಯ್ತು. ನಂತರ ಉಳಿದ ಸಮ್ಮತಿ ಸೂಚಿಸಿದ ಹಂಸಾತ್ಮಗಳನ್ನು ಅವಳ ಒಳಗೆ ಪ್ರವೇಶ ಮಾಡಿಸಿ ಹಾಗೂ ಅಚಿಂತನ ಮೂಲಕ ಪರಬ್ರಹ್ಮನ ಬಳಿ ಕಳುಹಿಸಲಾಯ್ತು. ಆ ಮೊದಲ ಸ್ತ್ರೀ ಆತ್ಮಕ್ಕೆ ಪತಿವ್ರತಾ ಪದವಿಯಿಂದ ಇಳಿದ ಶಿಕ್ಷೆ ಸಿಕ್ಕಿತು. ಅನೇಕ ಯುಗಗಳ ವರೆಗೆ ಇಬ್ಬರೂ (ಈಶ್ವರೀ ಮಾಯಾ–ಪರಬ್ರಹ್ಮ) 7 ಶಂಖ ಬ್ರಹ್ಮಾಂಡದಲ್ಲಿದ್ದರು. ಆದರೂ ಪರಬ್ರಹ್ಮ ದುರ್ವ್ಯವಹಾರ ಮಾಡಲಿಲ್ಲ. ಈಶ್ವರೀ ಮಾಯೆಯ ಸ್ವಇಚ್ಛೆಯಿಂದ ಅವಳಿಗೆ ತನ್ನ ಸಿದ್ಧಿ ಶಕ್ತಿಯಿಂದ ಸ್ತ್ರೀ ಯೋನಿಯನ್ನು ಉಗುರಿನಿಂದ ಮಾಡಿದ. ಅವಳ ಸ್ವಇಚ್ಛೆಯಿಂದ ಸಂತಾನ ಉತ್ಪತ್ತಿ ಮಾಡಿದ. ಈ ಕಾರಣದಿಂದ ಪರಬ್ರಹ್ಮನ ಲೋಕದಲ್ಲಿ ಜೀವಿಗಳಿಗೆ ತಪ್ತ ಶಿಲೆಯ ಮೇಲೆ ಬೇಯುವ ಕಷ್ಟವಿಲ್ಲ. ಅಲ್ಲಿನ ಪಶು–ಪಕ್ಷಿಗಳು ಸಹ ಬ್ರಹ್ಮಲೋಕದ ದೇವತೆಗಳಿಗಿಂತ ಉತ್ತಮ ಚಾರಿತ್ರ್ಯದವು. ದೀರ್ಘ ಆಯಸ್ಸು ಇದೆ. ಆದರೆ ಹುಟ್ಟು–ಸಾವು ಕರ್ಮದಂಡ ಇಲ್ಲಿದ್ದ ಹಾಗೆ ಇವೆ. ಪರಿಶ್ರಮದಿಂದಲೇ ಹೊಟ್ಟೆ ತುಂಬಿಸಿಕೊಳ್ಳಬೇಕು. ಸ್ವರ್ಗ ಮತ್ತು ನರಕಗಳು ಸಹ ಹೀಗೆಯೇ ರಚನೆಯಾಗಿವೆ. ಪರಬ್ರಹ್ಮನಿಗೆ 7 ಶಂಖಗಳ ಬ್ರಹ್ಮಾಂಡಗಳು ಅವನ ಇಚ್ಛೆ ರೂಪಿ ಭಕ್ತಿ–ಧ್ಯಾನ ಅಂದರೆ ಸಹಜ ಸಮಾಧಿ ಯೋಗದ ವಿಧಿಯಿಂದ ಗಳಿಸಿದ ಪ್ರತಿಫಲವಾಗಿ ನೀಡಲಾಯಿತು. ಸತ್ಯಲೋಕದಿಂದ ಬೇರೆಯಾದ ಸ್ಥಾನದಲ್ಲಿ 7 ಶಂಖ ಬ್ರಹ್ಮಾಂಡಗಳನ್ನು ಸುತ್ತ ಗೋಲಾಕಾರದ ಪರದೆಯಿಂದ ಬಂದಿಸಿ ಪರಬ್ರಹ್ಮ, ಈಶ್ವರೀ ಹಾಗು 7 ಶಂಖ ಬ್ರಹ್ಮಾಂಡಗಳನ್ನು ಸತ್ಯಲೋಕದಿಂದ ಹೊರಹಾಕಲಾಯಿತು.

ಪೂರ್ಣ ಬ್ರಹ್ಮ (ಸತ್ಯಪುರುಷ) ನು ಅಶಂಖ್ಯ ಬ್ರಹ್ಮಾಂಡಗಳು ಯಾವವು ಸತ್ಯಲೋಕ ಇತ್ಯಾದಿಗಳಲ್ಲಿವೆ ಹಾಗು ಬ್ರಹ್ಮನ 21 ಬ್ರಹ್ಮಾಂಡಗಳು ಹಾಗು ಪರಬ್ರಹ್ಮನ 7ಶಂಖ ಬ್ರಹ್ಮಾಂಡಗಳದ್ದೂ ಸ್ವಾಮಿಯಾಗಿರುವನು ಅರ್ಥಾತ್ ಕವಿರ್ದೇವ ಕುಲದ ಮಾಲೀಕನು.

ಶ್ರೀ ಬ್ರಹ್ಮಾ, ಶ್ರೀ ವಿಷ್ಣು, ಶ್ರೀ ಶಿವ ಮುಂತಾದವು 4–4 ಭುಜಗಳು ಮತ್ತು 16 ಕಲೆಗಳಿವೆ. ದುರ್ಗಾ ದೇವಿಗೆ 8 ಭುಜಗಳು ಮತ್ತು 64 ಕಲೆಗಳಿವೆ. ಕಾಲ ಬ್ರಹ್ಮನಿಗೆ 1000 ಭುಜಗಳು ಮತ್ತು 1000 ಕಲೆಗಳು. ಪರ ಬ್ರಹ್ಮನಿಗೆ 10,000 ಭುಜಗಳು ಮತ್ತು 10,000 ಕಲೆಗಳಿವೆ ಹಾಗು 21 ಬ್ರಹ್ಮಾಂಡದ ಸ್ವಾಮೀ. ಪರಬ್ರಹ್ಮನಿಗೆ 10,000 ಭುಜಗಳಿವೆ ಹಾಗು 10,000 ಕಲೆಗಳಿವೆ ಹಾಗು 7 ಶಂಖ ಬ್ರಹ್ಮಾಂಡಗಳ ಸ್ವಾಮೀ.

ಪೂರ್ಣ ಬ್ರಹ್ಮ ಅರ್ಥಾತ್ ಸತ್ಯಪುರುಷನಿಗೆ ಅಶಂಖ್ಯ ಭುಜಗಳು ಮತ್ತು ಅಶಂಖ್ಯ ಕಲೆಗಳಿವೆ ಹಾಗೂ ಬ್ರಹ್ಮನ 21 ಬ್ರಹ್ಮಾಂಡಗಳು ಮತ್ತು ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಜೊತೆಗೆ ಅಶಂಖ್ಯ ಬ್ರಹ್ಮಾಂಡಗಳ ಸ್ವಾಮಿಯಾಗಿದ್ದಾನೆ. ಪ್ರತಿಯೊಬ್ಬ ಪ್ರಭು ತಮ್ಮ ಭುಜಗಳನ್ನು ಕೇವಲ ಎರಡನ್ನಾಗಲಿ, ಅಥವಾ ತಮ್ಮ ಇಚ್ಛೆಯಿಂದ ಎಲ್ಲ ಭುಜಗಳನ್ನಾಗಲಿ ಹೊಂದಬಹುದಾಗಿದೆ. ಪೂರ್ಣ ಪರಮಾತ್ಮನು ಪರಬ್ರಹ್ಮನ ಪ್ರತ್ಯೇಕ ಬ್ರಹ್ಮಾಂಡದಲ್ಲಿ ತನ್ನದೇ ಆದ ಬೇರೆ ಸ್ಥಾನ ಮಾಡಿಕೊಂಡು, ಅಲ್ಲಿಯೇ ಗುಪ್ತವಾಗಿ ಇರುತ್ತಾನೆ. ಹೀಗೆ ತಿಳಿಯಿರಿ "ಒಂದು ಸಿ.ಸಿ ಕ್ಯಾಮರಾವನ್ನು ಹೊರಗೆ ಇರಿಸಿ, ಒಳಗೆ ಟಿ.ವಿ ಇಡಲಾಗಿದೆ. ಟಿ.ವಿ ಯಲ್ಲಿ ಹೊರಗಿನ ಎಲ್ಲ ದೃಶ್ಯಗಳು ನೋಡಲು ಲಭ್ಯವಾಗುತ್ತದೆ. ಇದೇ ರೀತಿ ಮತ್ತೊಂದು ಟಿ.ವಿ ಯನ್ನು ಹೊರಗೆ ಇರಿಸಿ, ಒಳಗೆ ಸಿ.ಸಿ ಕ್ಯಾಮರಾ ಹಚ್ಚಿ. ಅದರಲ್ಲಿ ಒಳಗೆ ಕುಳಿತಿರುವ ವ್ಯಕ್ತಿಯನ್ನು ಮಾತ್ರ ನೋಡಲು ಸಾಧ್ಯ. ಹೀಗೆ ಮಾಡುವುದರಿಂದ ನೌಕರರು ಎಚ್ಚರದಿಂದ ಇದ್ದು ಕಾರ್ಯ ನಿರ್ವಹಿಸುತ್ತಾರೆ. ಇದೇ ಪ್ರಕಾರ ಪೂರ್ಣ ಪರಮಾತ್ಮನು ತಾನು ಸತ್ಯ ಲೋಕದಲ್ಲಿದ್ದುಕೊಂಡೇ, ಎಲ್ಲರನ್ನೂ ನಿಯಂತ್ರಿಸುತ್ತಾನೆ. ಪ್ರತ್ಯೇಕ ಬ್ರಹ್ಮಾಂಡದಲ್ಲೂ ಸದ್ಗುರು ಕವಿರ್ದೇವರು ಇರುತ್ತಾರೆ. ಉದಾಹರಣೆಗೆ ಸೂರ್ಯ ದೂರದಲ್ಲಿದ್ದರೂ ತನ್ನ ಪ್ರಭಾವ ಬೇರೆ ಎಲ್ಲ ಲೋಕಗಳಲ್ಲೂ ಕ್ರಿಯಾಶೀಲನಾಗಿರುವಂತೆ.

## “ಪವಿತ್ರ ಅಥರ್ವಣ ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ(ಆಧಾರ)”

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 1ನೇ ಮಂತ್ರ:–**

ಬ್ರಹ್ಮ ಜಜ್ಞಾನಂ ಪ್ರಥಮಂ ಪುರಸ್ತಾದ್ ವಿ ಸೀಮತಃ ಸುರುಚೋ ವೇನ ಆವಃ ।
ಸ ಬುಧ್ನ್ಯಾ ಉಪಮಾ ಅಸ್ಯ ವಿಷ್ಠಾಃ ಸತಶ್ಚ ಯೋನಿಮಸತಶ್ಚ ವಿ ವಃ ॥ 1 ॥
ಬ್ರಹ್ಮ–ಜ–ಜ್ಞಾನಂ–ಪ್ರಥಮಮ್–ಪುರಸ್ತಾತ–ವಿಸಿಮತಃ– ಸುರುಚಃ–ವೇನಃ–ಆವಃ
ಸಃ–ಬುಧ್ನ್ಯಾಃ–ಉಪಮಾ–ಅಸ್ಯ–ವಿಷ್ಠಾ–ಸತಃ–ಚ–ಯೋನಿಮ್–ಅಸತಃ–ಚ–ವಿ–ವಃ

ಅನುವಾದ:– (ಪ್ರಥಮಮ್) ಪ್ರಾಚೀನ ಅಂದೆರೆ ಸನಾತನ, (ಬ್ರಹ್ಮ) ಪರಮಾತ್ಮನು (ಜ) ಪ್ರಕಟನಾಗಿ, (ಜ್ಞಾನಮ್) ತಮ್ಮ ತಿಳುವಳಿಕೆಯಿಂದ (ಪುರುಸ್ತಾತ್) ಶಿಖರದಲ್ಲಿ, ಅರ್ಥಾತ್ ಸತ್ಯಲೋಕ ಮುಂತಾದವುಗಳನ್ನು (ಸುರುಚಃ) ಸ್ವಇಚ್ಛೆಯಿಂದ, ಬಹಳ ಪ್ರೀತಿಯಿಂದ , ಸ್ವಪ್ರಕಾಶಿತ, (ವಿಸಿ ಮತಃ) ಸೀಮಾ ರಹಿತ, ಅರ್ಥಾತ್ ವಿಶಾಲ ಸೀಮೆಯುಳ್ಳ ಬೇರೆ ಲೋಕಗಳನ್ನು ಆ (ವೇವಃ) ನೇಕಾರನು ಅರ್ಥಾತ್ ಬಟ್ಟೆಯ ತರಹ ನೇಯ್ದು (ಆವಃ) ಸುರಕ್ಷಣೆ ಮಾಡಿದ (ಚ) ಹಾಗೂ (ಸಃ) ಆ ಪೂರ್ಣ ಬ್ರಹ್ಮನೇ ಎಲ್ಲರ ರಚನೆಯನ್ನು ಮಾಡುತ್ತಾನೆ. (ಅಸ್ಯ) ಇದಕ್ಕಾಗಿ ಆ (ಬುಧ್ನ್ಯಾಃ) ಮೂಲ ಮಾಲೀಕನು, (ಯೋನಿಮ್) ಮೂಲಸ್ಥಾನ ಸತ್ಯಲೋಕದ ರಚನೆ ಮಾಡಿರುವನು. (ಅಸ್ಯ) ಇದಕ್ಕೆ (ಉಪಮಾ) ಸದೃಶ್ಯ ಅರ್ಥಾತ್ ಹೋಲುವಂತೆ (ಸತಃ) ಅಕ್ಷರ ಪುರುಷ ಅರ್ಥಾತ್ ಪರಬ್ರಹ್ಮನ ಲೋಕ ಸ್ವಲ್ಪಮಟ್ಟಿಗೆ ಶಾಶ್ವತ (ಚ) ಹಾಗೂ (ಅಸತಃ) ಕ್ಷರ ಪುರುಷನ ನಾಶವಾಗುವ ಲೋಕ ಮೊದಲಾದ (ವಿ.ವಃ) ವಾಸಿಸುವ ಸ್ಥಾನ ಬೇರೆಯಾಗಿ (ವಿಷ್ಠಾಃ) ಸ್ಥಾಪನೆಮಾಡಿದ್ದಾನೆ.

**ಭಾವಾರ್ಥ:– ಪವಿತ್ರ ವೇದಗಳನ್ನು ಹೇಳಿರುವ ಕಾಲ (ಬ್ರಹ್ಮ)ನು ಹೇಳುತ್ತಿದ್ದಾನೆ, ಅಂದರೆ ಸನಾತನ ಪರಮೇಶ್ವರನು ಸ್ವತಃ ಅನಾಮಯ್ (ಅನಾಮಿ) ಲೋಕದಿಂದ ಸತ್ಯಲೋಕದಲ್ಲಿ ಪ್ರಕಟಗೊಂಡು ತನ್ನ ತಿಳುವಳಿಕೆಯಿಂದ ಬಟ್ಟೆಯಂತೆ ರಚನೆ ಮಾಡಿ ಮೇಲಿನ ಸತ್ಯಲೋಕ ಮುಂತಾದವುಗಳನ್ನು ಸೀಮಾರಹಿತವಾಗಿ ಸ್ವಪ್ರಕಾಶಿತಗೊಳಿಸಿ ಅವುಗಳನ್ನು ಅಜರ–ಅಮರ–ಅವಿನಾಶಿ ಯನ್ನಾಗಿ ಮಾಡಿದರು ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು ಹಾಗೂ ಇವುಗಳಲ್ಲಿಯ ಎಲ್ಲಾ ರಚನೆಗಳನ್ನು ಸಹ ಆ ಪರಮಾತ್ಮನೇ ಅಶಾಶ್ವತ ಗೊಳಿಸಿದ.”**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 2ನೇಯ ಮಂತ್ರ:–**

ಇಯಂ ಪಿತ್ರ್ಯಾ ರಾಷ್ಟ್ರ್ಯೇತ್ವಗ್ರೇ ಪ್ರಥಮಾಯ ಜನುಷೆ ಭುವನೇಷ್ಠಾಃ ।
ತಸ್ಮಾ ಏತಂ ಸುರುಚಂ ಹಾರಮಹ್ಯಮ್ ಧರ್ಮಮ್ ಶ್ರೀಣಂತು ಪ್ರಥಮಾಯ ಧಾಸ್ಯವೇ ॥2॥
ಇಯಂ–ಪಿತ್ರ್ಯಾ–ರಾಷ್ಟ್ರೀ–ಏತು–ಅಗ್ರೇ–ಪ್ರಥಮಾಯ–ಜನುಷೆ–ಭುವನೇಷ್ಠಾ।
ತಸ್ಮಾ–ಏತಂ–ಸುರುಚಮ್–ಹವಾರಮಹ್ಯಮ್–ಧರ್ಮಮ್–ಶ್ರೀಣಾಂತು–ಪ್ರಥಮಾಯ ಧಾಸ್ಯವೇ॥

ಅನುವಾದ:– (ಇಯಮ್) ಇದೇ (ಪಿತ್ರ್ಯಾ) ಜಗತ್ತಿನ ತಂದೆ ಪರಮೇಶ್ವರನು (ಏತು) ಈ (ಅಗ್ರೇ) ಸರ್ವೋತ್ತಮ (ಪ್ರಥಮಾಯ) ಎಲ್ಲದಕ್ಕೂ ಮೊದಲು (ರಾಷ್ಟ್ರೀ) ರಾಜೇಶ್ವರೀ ಶಕ್ತಿ ಅಂದರೆ ಪರಾಶಕ್ತಿ ಅದರ ಗುಣವನ್ನು ಆಕರ್ಷಣ ಶಕ್ತಿ ಎಂದೂ ಹೇಳುತ್ತಾರೆ ಅದನ್ನು (ಜನುಷೆ) ಉತ್ಪನ್ನ ಮಾಡಿ (ಭುವನೇಷ್ಠಾಃ) ಲೋಕ ಸ್ಥಾಪನೆಯನ್ನು ಮಾಡಿದನು (ತಸ್ಮಾ) ಅದೇ ಪರಮೇಶ್ವರನು (ಸುರುಚಮ್) ಬಹಳ ಪ್ರೀತಿಯಿಂದ, ಸ್ವ ಇಚ್ಛೆಯಿಂದ (ಏತಮ್) ಈ (ಪ್ರಥಮಾಯ) ಪ್ರಥಮ ಶಕ್ತಿಯ ಉತ್ಪತ್ತಿಯ ಶಕ್ತಿ ಅರ್ಥಾತ್ ಪರಾಶಕ್ತಿಯ ಮೂಲಕ (ಹಾರ ಮಹ್ಯಮ್) ಒಬ್ಬರ ಇನ್ನೊಬ್ಬರ ವಿಯೋಗ ವನ್ನು ತಡೆಯಲು, ಅರ್ಥಾತ್ ಆಕರ್ಷಣ ಶಕ್ತಿಯ (ಶ್ರೀಣಾಂತು) ಗುರುತ್ವಾಕರ್ಷಣಕ್ಕೆ ಪರಮಾತ್ಮನು ಆದೇಶಿಸಿ ಎಂದಿಗೂ ಸಮಾಪ್ತವಾಗದಂತೆ–ಎಂದೆಂದಿಗೂ ಇರುವಂತಹ (ಧರ್ಮಮ್) ಸ್ವಭಾವದಿಂದ (ಧಾಸ್ಯವೆ)

ಧಾರಣೆ ಮಾಡಿದ. ಅರ್ಥಾತ್ ಬಟ್ಟೆಯ ಹಾಗೆ ಹೆಣೆದು ನಿಲ್ಲಿಸಿದ್ದಾನೆ.

**ಭಾವಾರ್ಥ:– ಜಗತ್ತಿನ ತಂದೆಯಾದ ಪರಮೇಶ್ವರನು ಎಲ್ಲಕ್ಕೂ ಮೊದಲು ತನ್ನ ಶಬ್ದ ಶಕ್ತಿಯಿಂದ ರಾಷ್ಟ್ರೀ ಎಂದರೆ ಮೊಟ್ಟ ಮೊದಲ ಮಾಯೆ ರಾಜೇಶ್ವರೀ ಉತ್ಪನ್ನ ಮಾಡಿದ ಹಾಗು ಅದೇ ಪರಾಶಕ್ತಿಯ ಮೂಲಕ ಒಬ್ಬರು ಇನ್ನೊಬ್ಬರಿಗೆ ಆಕರ್ಷಣ ಶಕ್ತಿಯಿಂದ ತಡೆಯುವ, ಎಂದೆಂದಿಗೂ ಸಮಾಪ್ತವಾಗದ ಗುಣದಿಂದ ಮೇಲಿನ ಎಲ್ಲ ಬ್ರಹ್ಮಾಂಡಗಳನ್ನೂ ಸ್ಥಾಪನೆ ಮಾಡಿದನು.**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 3ನೇ ಮಂತ್ರ:–**

ಪ್ರ ಯೋ ಯಜ್ಞೆ ವಿದ್ವಾನಸ್ಯ ಬಂಧುರ್ವಿಶ್ವಾ ದೇವಾನಾಂ ಜನಿಮಾ ವಿವಕ್ತಿ ।
ಬ್ರಹ್ಮ ಬ್ರಹ್ಮಣ ಉಜ್ಜಭಾರ ಮಧ್ಯಾನ್ನೀಚೈರುಚ್ಚೈಃ ಸ್ವಧಾ ಅಭಿ ಪ್ರ ತಸ್ಥೌ" ॥ 3 ॥
ಪ್ರ–ಯಃ–ಯಜ್ಞೆ– ವಿದ್ವಾನಸ್ಯ– ಬಂಧುಃ–ವಿಶ್ವಾ–ದೇವಾನಾಮ್–ಜನಿಮಾ–ವಿವಕ್ತಿ
ಬ್ರಹ್ಮಃ– ಬ್ರಹ್ಮಣಃ–ಉಜ್ಜಭಾರ–ಮಧ್ಯಾತ್–ನಿಚೈಃ–ಉಚೈಃ– ಸ್ವಧಾ–ಅಭಿಃ–ಪತಸ್ಥೌ

ಅನುವಾದ:– (ಪ್ರ) ಸರ್ವ ಪ್ರಥಮ (ದೇವಾನಾಮ್) ದೇವತೆಗಳ ಹಾಗೂ ಬ್ರಹ್ಮಾಂಡಗಳ (ಜಜ್ಞೆ) ಉತ್ಪತ್ತಿಯ ಜ್ಞಾನವನ್ನು (ವಿದ್ವಾನಸ್ಯ) ಜಿಜ್ಞಾಸು ಭಕ್ತನ (ಯಃ) ಅವನು (ಬಂಧುಃ) ವಾಸ್ತವಿಕ ಜೊತೆಗಾರ ಅಂದರೆ ಪೂರ್ಣ ಪರಮಾತ್ಮನೇ ತನ್ನ ನಿಜ ಸೇವಕನಿಗೆ (ಜನಿಮಾ) ತನ್ನಿಂದ ಸೃಷ್ಟಿಯಾದದ್ದನ್ನು (ವಿವಕ್ತಿ) ಸ್ವತಃ ಅವನೇ ಸರಿಯಾಗಿ ವಿಸ್ತಾರಪೂರ್ವಕವಾಗಿ ಹೇಳುತ್ತಾನೆ ಏನೆಂದರೆ (ಬ್ರಹ್ಮಣ) ಪೂರ್ಣ ಪರಮಾತ್ಮನು (ಮಧ್ಯಾತ್) ತನ್ನ ಶಬ್ದ ಶಕ್ತಿಯಿಂದ (ಬ್ರಹ್ಮಃ) ಕಾಲ ಬ್ರಹ್ಮನನ್ನು (ಉಜ್ಜಭಾರ) ಉತ್ಪನ್ನ ಮಾಡಿ (ವಿಶ್ವ) ಸಮಸ್ತ ಜಗತ್ತಿಗೆ ಅಂದರೆ ಎಲ್ಲಾ ಲೋಕಗಳನ್ನು(ಉಚ್ಚೈಃ) ಮೇಲಿನ ಸತ್ಯಲೋಕ ಮೊದಲಾದ (ನಿಚೈಃ) ಕೆಳಗಿನ ಪರಬ್ರಹ್ಮನ ಹಾಗೂ ಕಾಲ ಬ್ರಹ್ಮನ ಸಕಲ ಬ್ರಹ್ಮಾಂಡವನ್ನು (ಸ್ವಧಾ) ತಾನು ಧಾರಣೆ ಮಾಡುವ (ಅಭಿಃ) ಆಕರ್ಷಣ ಶಕ್ತಿಯಿಂದ (ಪ್ರ ತಸ್ಥೌ) ಎರಡನ್ನೂ ಉತ್ತಮ ರೀತಿಯಲ್ಲಿ ರಚಿಸಿದರು.

**ಭಾವಾರ್ಥ:– ಪೂರ್ಣ ಪರಮಾತ್ಮನು ತನ್ನಿಂದ ರಚಿತ ಸೃಷ್ಟಿಯ ಜ್ಞಾನವನ್ನು ಹಾಗೂ ಸಕಲ ಆತ್ಮಗಳ ಉತ್ಪತ್ತಿಯ ಜ್ಞಾನವನ್ನು, ತನ್ನ ವೈಯಕ್ತಿಕ ದಾಸನಿಗೆ ಸ್ವತಃ ಸರಿಯಾಗಿ ತಿಳಿಸುತ್ತಾನೆ. ಏನೆಂದರೆ ಪೂರ್ಣ ಪರಮಾತ್ಮನು ತನ್ನ ಮಧ್ಯ ಅಂದರೆ ತನ್ನ ಶರೀರದಿಂದ ಶಬ್ದ ಶಕ್ತಿಯ ಮೂಲಕ ಕಾಲ ಬ್ರಹ್ಮನನ್ನು ಉತ್ಪತ್ತಿ ಮಾಡಿದನು. ಹಾಗೂ ಎಲ್ಲ ಬ್ರಹ್ಮಾಂಡಗಳನ್ನು, ಮೇಲಿನ ಸತ್ಯಲೋಕ, ಅಲಖಲೋಕ, ಅಗಮ್‌ಲೋಕ, ಅನಾಮಿಲೋಕ ಮುಂತಾದವುಗಳನ್ನು ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳ ಲೋಕ ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳನ್ನು ತಾನು ಧಾರಣೆ ಮಾಡುವ ಆಕರ್ಷಣೆ ಶಕ್ತಿಯಿಂದ ನಿಲ್ಲಿಸಿದ್ದಾನೆ.**

**ಹೇಗೆ ಪೂರ್ಣ ಪರಮಾತ್ಮ ಕಬೀರ್ ಪರಮೇಶ್ವರರು (ಕವಿರ್ದೇವ) ತಮ್ಮ ವೈಯಕ್ತಿಕ ಸೇವಕ ಅಂದರೆ ಸಖನಾದ ಗೌರವಾನ್ವಿತ ಧರ್ಮದಾಸರಿಗೆ, ಗರೀಬ್‌ದಾಸರಿಗೆ ಮುಂತಾದವರಿಗೆ ತನ್ನಿಂದ ರಚಿತ ಸೃಷ್ಟಿಯ ಜ್ಞಾನವನ್ನು ಸ್ವತಃ ಅವರೇ ತಿಳಿಸಿದ್ದಾರೆ. ಮೇಲಿನ ವೇದ ಮಂತ್ರವು ಸಹ ಇದನ್ನೇ ಸಮರ್ಥಿಸುತ್ತಿದೆ.**

**ಅಥರ್ವಣ ವೇದದ 4ನೇ ಕಾಂಡದ ಅನುವಾಕ 1 ರ 4ನೇ ಮಂತ್ರ :–**

ಸಃ ಹಿ ದಿವಃ ಸಃ ಪೃಥಿವ್ಯಾ ಋತಸ್ಥಾ ಮಹೀ ಕ್ಷೇಮಮ್ ರೋದಸೀ ಅಸ್ಕಭಾಯತ್
ಮಹಾನ್ ಮಹೀ ಅಸ್ಕಭಾಯದ್ ವಿ ಜಾತೋ ಧ್ಯಾಂ ಸದ್ಮ ಪಾರ್ಥಿವಂ ಚ ರಜಃ ॥ 4 ॥
ಸಃ–ಹಿ–ದಿವಃ–ಸ–ಪೃಥಿವ್ಯಾ–ಋತುಸ್ಥಾ–ಮಹೀ–ಕ್ಷೇಮಮ್–ರೋದಸಿ ಅಸ್ಕಭಾಯತ್–
ಮಹಾನ್–ಮಹೀ–ಅಸ್ಕಭಾಯದ್– ವಿಜಾತಃ–ಧಾಮ್–ಸದಮ ಪಾರ್ಥಿವಮ್–ಚ–ರಜಃ

ಅನುವಾದ:– (ಸಃ) ಆ ಸರ್ವಶಕ್ತಿವಂತ ಪರಮಾತ್ಮನು (ಹಿ) ನಿಸ್ಸಂದೇಹ (ದಿವಃ) ಮೇಲಿನ ನಾಲ್ಕು ದಿವ್ಯ ಲೋಕಗಳು ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ ಹಾಗೂ ಅನಾಮಿಲೋಕವನ್ನು ಅಂದರೆ ದಿವ್ಯ ಗುಣಗಳುಯುಕ್ತ ಲೋಕಗಳನ್ನು (ಋತಸ್ಥಾ) ಸತ್ಯ ಸ್ಥಿರ

ಅಂದರೆ ಅಜರ–ಅಮರ ರೂಪದಿಂದ ಸ್ಥಿರಗೊಳಿಸಿದನು. (ಸ) ಅವುಗಳಿಗೆ ಸಮನಾಗಿ (ಪೃಥಿವ್ಯಾ) ಕೆಳಗಿನ ಪೃಥ್ವಿಯ ಸಕಲ ಲೋಕಗಳನ್ನು ಅಂದರೆ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು (ಮಹೀ) ಪೃಥ್ವಿ ತತ್ವದಿಂದ (ಕ್ಷೇಮ) ಸುರಕ್ಷೆಯ ಜೊತೆ (ಆಸ್ಕಭಾಯತ್) ನಿಲ್ಲಿಸಿದರು (ರೋದಸೀ) ಆಕಾಶ ತತ್ವ ಹಾಗೂ ಪೃಥ್ವಿ ತತ್ವ ಈ ಎರಡಕ್ಕೂ ಮೇಲೆ, ಕೆಳಗಿನ ಬ್ರಹ್ಮಾಂಡಗಳನ್ನು {ಹೇಗೆಂದರೆ ಆಕಾಶ ಒಂದು ಸೂಕ್ಷ್ಮತತ್ವವಾಗಿದೆ, ಆಕಾಶದ ಗುಣಶಬ್ದವಾಗಿದೆ. ಪೂರ್ಣ ಪರಮಾತ್ಮನು ಮೇಲಿನ ಲೋಕಗಳನ್ನು ಶಬ್ದ ರೂಪದಲ್ಲಿ ರಚಿಸಿದ್ದಾನೆ ಅವು ತೇಜಪುಂಜ ದಿಂದ ಮಾಡಲಾಗಿದೆ ಹಾಗೂ ಕೆಳಗಿನ ಪರಬ್ರಹ್ಮನ 7 ಶಂಖ ಬ್ರಹ್ಮಾಂಡಗಳು ಹಾಗೂ ಕಾಲ ಬ್ರಹ್ಮನ 21 ಬ್ರಹ್ಮಾಂಡಗಳನ್ನು ಪೃಥ್ವೀ ತತ್ವದಿಂದ ಅಸ್ಥಾಯಿ ಇರುವಂತೆ ರಚಿಸಿದನು} (ಮಹಾನ್) ಪೂರ್ಣ ಪರಮಾತ್ಮನು (ಪಾರ್ಥಿವಮ್) ಪೃಥ್ವಿಯ (ವಿ) ಬೇರೆ–ಬೇರೆ (ಧಾಮ) ಲೋಕ (ಚ) ಮತ್ತು (ಸದಮ್) ಆವಾಸಸ್ಥಾನ (ಮಹೀ) ಪೃಥ್ವೀ ತತ್ವದಿಂದ (ರಜಃ) ಪ್ರತ್ಯೇಕ ಬ್ರಹ್ಮಾಂಡದಲ್ಲಿ ಚಿಕ್ಕ–ಚಿಕ್ಕ ಲೋಕಗಳ (ಜಾತಃ) ರಚನೆ ಮಾಡಿ (ಅಸ್ಕಭಾಯಾತ್) ಸ್ಥಿರಗೊಳಿಸಿದನು.

**ಭಾವಾರ್ಥ:– ಮೇಲಿನ ನಾಲ್ಕು ಲೋಕಗಳನ್ನು (ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ, ಅನಾಮಿಲೋಕ) ಅಜರ–ಅಮರ ಶಾಶ್ವತ ಅಂದರೆ ಅವಿನಾಶಿ ರಚಿಸಲಾಗಿದೆ ಹಾಗೂ ಕೆಳಗಿನ ಕಾಲ ಬ್ರಹ್ಮ ಹಾಗೂ ಪರಬ್ರಹ್ಮನ ಲೋಕಗಳನ್ನು ಅಸ್ಥಾಯಿ (ಅವಿನಾಶಿಯಲ್ಲದ) ಯಾಗಿ ರಚಿಸಿ. ಬೇರೆ ಚಿಕ್ಕ–ಚಿಕ್ಕ ಲೋಕಗಳನ್ನು ಸಹ ಅದೇ ಪರಮೇಶ್ವರನೇ ರಚಿಸಿ ಸ್ಥಿರಗೊಳಿಸಿದನು.**

**ಅಥರ್ವಣ ವೇದದ 4ನೇ ಕಾಂಡದ ಅನುವಾಕ 1ರ 5ನೇ ಮಂತ್ರ:–**

ಸಃ ಬುಧ್ಯಾನ್ರಾಷ್ಟ್ರ ಜನುಷೋಭ್ಯಗ್ರಂ ಬೃಹಸ್ಪತಿರ್ದೇವತಾ ತಸ್ಯ ಸಮ್ರಾಟ್ ।

ಅಹರ್ಯಚ್ಛುಕ್ರಂ ಜ್ಯೋತಿಷೋ ಜನಿಷ್ಠಾಥ ಧ್ಯುಮಂತೋ ವಿ ವಸಂತು ವಿಪ್ರಾಃ ॥5॥

ಸಃ–ಬುಧ್ಯಾನ್ತ್–ಅಷ್ಟ್ರ– ಜನುಷಃ– ಅಭಿ–ಅಗ್ರಮ್–ಬೃಹಸ್ಪತಿ–ದೇವತಾ–ತಸ್ಯ–ಸಮ್ರಾಟ– ಅಹಃ–ಯತ್–ಶುಕ್ರಮ್–ಜ್ಯೋತಿಷಃ–ಜನಿಷ್ಠ–ಅಥ–ಧ್ಯುಮಂತಃ–ವಿ–ವಸಂತು–ವಿಪ್ರಾಃ

ಅನುವಾದ:– (ಸಃ) ಅದೇ (ಬುಧ್ಯಾನ್ತ್) ಮೂಲ ಮಾಲೀಕನಿಂದ (ಅಭಿಅಗ್ರಮ್) ಸರ್ವ ಪ್ರಥಮ ಸ್ಥಾನದಲ್ಲಿ (ಆಷ್ಟ್ರ) ಅಷ್ಟಂಗಿ ಮಾಯಾ/ದುರ್ಗಾದೇವಿ ಅಂದರೆ ಪ್ರಕೃತಿ (ಜನುಷಃ) ಉತ್ಪನ್ನಳಾದಳು. ಏಕೆಂದರೆ ಕೆಳಗಿನ ಪರಬ್ರಹ್ಮ ಹಾಗೂ ಕಾಲ ಬ್ರಹ್ಮನ ಲೋಕಗಳ ಪ್ರಥಮ ಸ್ಥಾನ ಸತ್ಯಲೋಕವಾಗಿದೆ. ಇದನ್ನು ಮೂರನೆಯ ಧಾಮ ಎಂದು ಸಹ ಕರೆಯುತ್ತಾರೆ. (ತಸ್ಯ) ಈ ದುರ್ಗಾಳ ಮಾಲೀಕನು ಸಹ ಈ (ಸಾಮ್ರಾಟ) ರಾಜಾಧಿರಾಜ (ಬೃಹಸ್ಪತಿಃ) ಎಲ್ಲರಿಗಿಂತ ದೊಡ್ಡ ಪ್ರಭು ಹಾಗೂ ಜಗದ್ಗುರು (ದೇವತಾ) ಪರಮೇಶ್ವರನಾಗಿದ್ದಾನೆ. (ಯತ್) ಅದರಿಂದ (ಅಹಃ) ಎಲ್ಲರ ವಿಯೋಗವಾಯಿತು, (ಅಥ) ಇದರ ನಂತರ (ಜ್ಯೋತಿಷಃ) ಜ್ಯೋತಿ ರೂಪ ನಿರಂಜನ ಅರ್ಥಾತ್ ಕಾಲನ (ಶುಕ್ರಮ್) ವೀರ್ಯ ಅರ್ಥಾತ್ ಬೀಜಶಕ್ತಿಯಿಂದ (ಜನಿಷ್ಠ) ದುರ್ಗಾಳ ಉದರದಿಂದ ಉತ್ಪನ್ನರಾಗಿ (ವಿಪ್ರಾಃ) ಭಕ್ತ ಆತ್ಮಗಳು (ವಿ) ಪ್ರತ್ಯೇಕವಾದ (ಧ್ಯುಮಂತಃ) ಮನುಷ್ಯಲೋಕ ಹಾಗೂ ಸ್ವರ್ಗ ಲೋಕದಲ್ಲಿ ಜ್ಯೋತಿ ನಿರಂಜನನ ಆದೇಶದಂತೆ ನಿವಾಸ ಮಾಡಿ ಎಂದು ದುರ್ಗಾ ಹೇಳಿದಳು.

**ಭಾವಾರ್ಥ:– ಪೂರ್ಣ ಪರಮಾತ್ಮನು ಮೇಲಿನ ನಾಲ್ಕು ಲೋಕಗಳಲ್ಲಿನ ಕೆಳಗಿನಿಂದ ಎಲ್ಲಕ್ಕಿಂತ ಪ್ರಥಮ ಸತ್ಯಲೋಕದಲ್ಲಿ ಆಷ್ಟ್ರಾ ಅರ್ಥಾತ್ ಅಷ್ಟಂಗಿ (ಪ್ರಕೃತಿ/ದುರ್ಗೆ) ಯನ್ನು ಉತ್ಪನ್ನ ಮಾಡಿದನು. ಇವನೇ ರಾಜಾಧಿರಾಜ, ಜಗದ್ಗುರು ಪೂರ್ಣ ಪರಮೇಶ್ವರ (ಸತ್ಯಪುರುಷ) ರಾಗಿದ್ದಾರೆ. ಇವರಿಂದ ಎಲ್ಲರ ವಿಯೋಗವಾಗಿದೆ. ನಂತರ ಸಕಲ ಜೀವಾತ್ಮಗಳು ಜ್ಯೋತಿನಿರಂಜನ (ಕಾಲ) ನ (ವೀರ್ಯ) ಬೀಜದಿಂದ ದುರ್ಗಾ (ಆಷ್ಟ್ರಾ)ಳ ಗರ್ಭದ ಮೂಲಕ ಉತ್ಪನ್ನರಾಗಿ, ಅವು ಸ್ವರ್ಗ ಹಾಗೂ ಭೂಲೋಕದಲ್ಲಿ ವಾಸ ಮಾಡತೊಡಗಿದವು.**

**ಅಥರ್ವಣ ವೇದದ 4ನೇ ಕಾಂಡದ 1ನೇ ಅನುವಾಕದ 6ನೇ ಮಂತ್ರ:–**

ನೂನಂ ತದಸ್ಯ ಕಾವ್ಯೋ ಹಿನೋತಿ ಮಹೋ ದೇವಸ್ಯ ಪೂರ್ವಶ್ಯ ಧಾಮ ।
ಏಷ ಜಜ್ಞೆ ಬಹುಭಿಃ ಸಾಕಮಿತ್ಥಾ ಪೂರ್ವೆ ಅರ್ಧೆ ವಿಶಿತೆ ಸಸನ್ ನು ॥ 6 ॥
ನೂನಂ–ತತ್–ಅಸ್ಯ–ಕಾವ್ಯಃ–ಮಹಃ–ದೇವಸ್ಯ–ಪೂರ್ವಸ್ಯ–ಧಾಮ್–ಹಿನೋತಿ
ಪೂರ್ವೇ–ವಿಶಿತೆ–ಏಷ–ಜಜ್ಞೆ–ಬಹುಭಿಃ–ಸಾಕಮ್–ಇಥ್ಯಾ–ಅರ್ಧೆ–ಸಸನ್–ನು.

ಅನುವಾದ:– (ನೂನಂ) ಸಂದೇಹ ರಹಿತ (ತತ್) ಆ ಪೂರ್ಣ ಪರಮೇಶ್ವರ ಅರ್ಥಾತ್ ತತ್ ಬ್ರಹ್ಮನೇ (ಅಸ್ಯ) ಈ (ಕಾವ್ಯಃ) ಭಕ್ತ ಆತ್ಮವನ್ನು ಯಾರು ಪೂರ್ಣ ಪರಮೇಶ್ವರನ ವಿಧಿವತ್ತಾಗಿ ಭಕ್ತಿಯನ್ನು ಮಾಡುತ್ತಾರೊ, ಅವರನ್ನು ಮರಳಿ (ಮಹಃ) ಸರ್ವ ಶಕ್ತಿಮಾನ್ (ದೇವಸ್ಯ) ಪರಮೇಶ್ವರನ (ಪೂರ್ವಸ್ಯ) ಮೊದಲಿನ (ಧಾಮ) ಲೋಕಕ್ಕೆ ಅರ್ಥಾತ್ ಸತ್ಯ ಲೋಕಕ್ಕೆ (ಹಿನೋತಿ) ಕಳುಹಿಸಲಾಗುತ್ತದೆ. (ಪೂರ್ವ) ಮೊದಲಿನ (ವಿಷಿತೆ) ವಿಶೇಷ ಆತುರತೆ ಪಡೆಯುವ (ಏಷ) ಈ ಪರಮೇಶ್ವರನಿಗೆ ಹಾಗೂ (ಜಗ್ಣೆ) ಸೃಷ್ಟಿ ಉತ್ಪತ್ತಿಯ ಜ್ಞಾನ ಅರಿತು (ಬಹುಭಿ) ಬಹಳ ಆನಂದ (ಸಾಕಮ್) ದಿಂದ (ಅರ್ಧೆ) ಕಡಿಮೆ (ಸಸನ್) ಮಲಗುತ್ತಾ (ಇತ್ಥಾ) ವಿಧಿವತ್ತ ಅನುಸಾರ (ನು) ಅಂತರಾತ್ಮದಿಂದ ಸ್ತುತಿಸುತ್ತಾನೆ.

**ಭಾವಾರ್ಥ:– ಅದೇ ಪೂರ್ಣ ಪರಮೇಶ್ವರನು, ಸತ್ಯ ಸಾಧನೆ ಮಾಡುವ ಸಾಧಕನನ್ನು ಮೊದಲಿನ ಸ್ಥಾನವಾದ ಸತ್ಯಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ. ಎಲ್ಲಿಂದ ಅಗಲಿ ಬಂದಿದ್ವಿ. ಅಲ್ಲಿ ಆ ವಾಸ್ತವಿಕ ಸುಖ ನೀಡುವ ಪ್ರಭುವನ್ನು ಪಡೆದು ಆತ್ಮಾನಂದದಿಂದ ಸ್ತುತಿ ಮಾಡುತ್ತದೆ. ಏನೆಂದರೆ ಹೇ ಪರಮಾತ್ಮ ಅಶಂಖ್ಯ ಜನ್ಮಗಳಿಂದ ಸುತ್ತಾಡಿ (ಹುಟ್ಟು–ಸಾವಿನ ಜಾಲದಲ್ಲಿ) ದವರಿಗೆ, ಅಲೆದಾಡಿದವರಿಗೆ ವಾಸ್ತವಿಕವಾದ ನೆಲೆ ಸಿಕ್ಕಿತ್ತು ಎಂದು. ಇದಕ್ಕೆ ಪ್ರಮಾಣ ಪವಿತ್ರ ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 16ನೇ ಮಂತ್ರದಲ್ಲಿದೆ.**

**ಗೌರವಾನ್ವಿತ ಗರೀಬ್‌ದಾಸ್ ರವರನ್ನು ಇದೇ ರೀತಿ, ಪರಮಾತ್ಮ ಕವಿರ್ದೇವರು (ಕಬೀರ್ ಪರಮೇಶ್ವರ) ಸ್ವತಃ ಸತ್ಯ ಭಕ್ತಿಯನ್ನು ಪ್ರಧಾನ ಮಾಡಿ ಸತ್ಯಲೋಕಕ್ಕೆ ಕರೆದುಕೊಂಡು ಹೋದರು. ಆಗ ತಮ್ಮ ಅಮೃತವಾಣಿಯಲ್ಲಿ ಗೌರವಾನ್ವಿತ ಗರೀಬ್‌ದಾಸ್ ಮಹಾರಾಜ ರವರು, ತಮ್ಮ ಕಣ್ಣುಗಳಿಂದ ನೋಡಿದ್ದನ್ನು ಹೇಳಿದ್ದಾರೆ :–**

ಗರೀಬ್, ಅಜಬ್ ನಗರ ಮೆ ಲೇ ಗಯೆ, ಹಮಕು ಸದ್ಗುರು ಆನ್ ।
ಝಿಲಕೇ ಬಿಂಬ ಅಗಾಧ ಗತಿ, ಸುತೆ ಚಾದರ್ ತಾನ್ ॥

**ಅಥರ್ವ ವೇದದ 4ನೇ ಕಾಂಡದ 1ನೇ ಅನುವಾಕದ 7ನೇ ಮಂತ್ರ :–**

ಯೋಥರ್ವಾಣಂ ಪಿತರಂ ದೇವಬಂಧುಂ ಬೃಹಸ್ಪತಿಂ ನಮಸಾವ ಚ ಗಚ್ಛಾತ್ ।
ತ್ವಂ ವಿಶ್ವೇಷಾಂ ಜನಿತಾ ಯಥಾಸಃ ಕವಿರ್ದೇವೋ ನ ದಭಾಯತ್ ಸ್ವಧಾವಾನ್ ॥7॥
ಯಃ–ಅಥರ್ವಾಣಂ–ಪಿತರಮಂ–ದೇವಬಂಧುಂ–ಬೃಹಸ್ಪತಿಂ–ನಮಸಾ–ಅವ–ಚ–ಗಚ್ಛಾತ್
–ತ್ವಮ್–ವಿಶ್ವೇಷಾಮ್–ಜನಿತಾ–ಯಥಾ–ಸಃ–ಕವಿರ್ದೇವಃ–ನ–ಭಾಯತ್–ಸ್ವಧಾವಾನ್

ಅನುವಾದ:– (ಯಃ) ಯಾರು (ಅಥರ್ವಾಣಂ) ಅಚಲ ಅರ್ಥಾತ್ ಅವಿನಾಶಿ (ಪಿತ್ತರಮ್) ಜಗತ್ ಪಿತಾ (ದೇವಬಂಧುಂ) ಭಕ್ತರ ವಾಸ್ತವಿಕ ಜೊತೆಗಾರ ಅರ್ಥಾತ್ ಆತ್ಮದ ಆಧಾರ (ಬೃಹಸ್ಪತಿಮ್) ಜಗದ್ಗುರು (ಚ) ಹಾಗೂ (ನಮಸಾ) ವಿನಮ್ರ ಪೂಜಾರಿ ಅರ್ಥಾತ್ ವಿಧಿವತ್ತಾಗಿ ಸಾಧನೆ ಮಾಡುವವನನ್ನು, (ಅವ) ಸುರಕ್ಷೆಯೊಂದಿಗೆ (ಗಚ್ಛಾತ್) ಸತ್ಯಲೋಕಕ್ಕೆ ಹೋದವರಿಗೆ ಅಂದರೆ ಯಾರದು ಪೂರ್ಣ ಮೋಕ್ಷವಾಯಿತೋ ಅವರು ಸತ್ಯಲೋಕಕ್ಕೆ ಹೋಗಿದ್ದಾರೆ. ಅವರನ್ನು ಸತ್ಯಲೋಕಕ್ಕೆ ಕರೆದುಕೊಂಡು ಹೋದವನು (ವಿಶ್ವೇಷಾಮ್) ಸರ್ವ ಬ್ರಹ್ಮಾಂಡಗಳ (ಜನಿತಾ) ರಚನೆ ಮಾಡಿದವ ಜಗದಂಬಾ ಅಂದರೆ ತಾಯಿಯಂತಹ ಗುಣವುಳ್ಳವ (ನದಭಾಯತ) ಕಾಲಬ್ರಹ್ಮನ ಹಾಗೆ ದ್ರೋಹ ಮಾಡದ (ಸ್ವಧಾವಾನ್) ಸ್ವಭಾವದ ಅರ್ಥಾತ್ ಗುಣಗಳಿಂದಯುಕ್ತ (ಯಥಾ) ಹೇಗಿದಿರೋ, ಹಾಗೆ ಅರ್ಥಾತ್ ಹಾಗೇಯೇ (ಸಃ) ಇದ್ದವರು

(ತ್ವಮ್) ತಾವು (ಕವಿರ್ದೇವಃ) ಕವಿರ್ದೇವ ಆಗಿರುವಿರಿ. ಅಥಾರ್ತ ಭಾಷಾ ಭಿನ್ನತೆಯಿಂದ ಇವರನ್ನು ಕಬೀರ್ ಪರಮೇಶ್ವರ ಎಂದೂ ಕರೆಯುತ್ತಾರೆ.

**ಭಾವಾರ್ಥ:– ಯಾರು ಸರ್ವ ರಚನೆ ಮಾಡಿರುವರೋ, ಅವರು ಪರಮೇಶ್ವರ ಕವಿರ್ದೇವ ಅರ್ಥಾತ್ ಕಬೀರ್ ಪರಮೇಶ್ವರರು ಎಂಬುದನ್ನು ಈ ಮಂತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಆ ಪರಮೇಶ್ವರ ಅಚಲ ಅರ್ಥಾತ್ ವಾಸ್ತವದಲ್ಲಿ ಅವಿನಾಶಿ (ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಇದಕ್ಕೆ ಪ್ರಮಾಣವಿದೆ) ಜಗದ್ಗುರು–ಆತ್ಮೋದ್ಧಾರ, ಯಾರು ಪೂರ್ಣ ಮುಕ್ತರಾಗಿ ಸತ್ಯಲೋಕಕ್ಕೆ ಹೋಗಿದ್ದಾರೆ ಅವರನ್ನು ಕರೆದುಕೊಂಡು ಹೋಗುವವ, ಸರ್ವ ಬ್ರಹ್ಮಾಂಡಗಳ ರಚನೆಕಾರ ಕಾಲಬ್ರಹ್ಮ ನಂತೆ ಮೋಸಮಾಡುವವನಲ್ಲ. ಅವರು ಕಬೀರ್ ಪ್ರಭುವಾಗಿದ್ದಾರೆ ಈ ಪರಮೇಶ್ವರನನ್ನೇ ತಾಯಿ, ತಂದೆ, ಹಾಗು ಸಹೋದರ ಎಂದೂ ಸಹ ಕರೆಯುತ್ತಾರೆ. ಏಕೆಂದರೆ ತಮ್ಮ ಶಬ್ದಶಕ್ತಿಯಿಂದ ಸಕಲ ಬ್ರಹ್ಮಾಂಡಗಳನ್ನು, ಸಕಲ ಆತ್ಮಗಳನ್ನು ಸೃಷ್ಟಿ ಮಾಡಿದ್ದಾರೆ. ವಾಸ್ತವಿಕವಾಗಿ ಇವರೇ ಪರಮೇಶ್ವರ. ಆದ್ದರಿಂದ ಈ ಕಬೀರ ಪರಮೇಶ್ವರರ ಸ್ತುತಿ ಮಾಡುತ್ತಾರೆ. "ತ್ವಮೇವ ಮಾತಾ ಚ ಪಿತಾ ತ್ವಮೇವ, ತ್ವಮೇವ ಬಂಧು ಚ ಸಖಾ ತ್ವಮೇವ, ತ್ವಮೇವ ವಿದ್ಯಾ ಚ ದ್ರವಿಣಮ್ ತ್ವಮೇವ, ತ್ವಮೇವ ಸರ್ವ ಮಮ್ ದೇವ ದೇವ". ಇದೇ ಪರಮೇಶ್ವರನ ಮಹಿಮೆಯು ಪವಿತ್ರ ಋಗ್ವೇದದ 1ನೇ ಮಂಡಲದ 24ನೇ ಸೂಕ್ತದಲ್ಲಿ ವಿಸ್ತಾರವಾದ ವಿವರಣೆ ಇದೆ.**

## "ಪವಿತ್ರ ಋಗ್ವೇದದಲ್ಲಿ ಸೃಷ್ಟಿ ರಚನೆಯ ಪ್ರಮಾಣ (ಆಧಾರ)"

**ಋಗ್ವೇದದ 10ನೇ ಮಂಡಲದ ಸೂಕ್ತ 90ರಲ್ಲಿ 1ನೇ ಮಂತ್ರ:–**

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋಂ ವೃತ್ವಾತ್ಯಾತಿಷ್ಠದ್ದಶಾಂಗುಲಮ್ ॥ 1 ॥
ಸಹಸ್ರಶೀರ್ಷಾ–ಪುರುಷಃ–ಸಹಸ್ರಾಕ್ಷಃ–ಸಹಸ್ರಪಾತ್–
ಸ–ಭೂಮಿಮ್–ವಿಶ್ವತಃ–ವೃತ್ವಾ–ಅತ್ಯಾತಿಷ್ಠತ್–ದಶಂಗುಲಮ್।

ಅನುವಾದ:– (ಪುರುಷಃ) ವಿರಾಟ್ ರೂಪದ ಕಾಲಭಗವಂತ ಅಂದರೆ ಕ್ಷರ ಪುರುಷ (ಸಹಸ್ರಶೀರ್ಷಾ) ಸಾವಿರ ತಲೆಗಳುಳ್ಳವ ( ಸಹಸ್ರಾಕ್ಷಃ) ಸಾವಿರ ಕಣ್ಣುಗಳುಳ್ಳವ (ಸಹಸ್ರಪಾತ್) ಸಾವಿರ ಕಾಲುಗಳುಳ್ಳವ (ಸ) ಆ ಕಾಲನು (ಭೂಮಿಮ್) ಪೃಥ್ವಿಯ 21 ಬ್ರಹ್ಮಾಂಡವನ್ನು (ವಿಶ್ವತಃ) ಎಲ್ಲ ಕಡೆಯಿಂದ (ದಶಾಂಗುಲಮ್) ಹತ್ತು ಬೆರಳುಗಳಿಂದ ಅರ್ಥಾತ್ ಪೂರ್ಣ ರೂಪದಿಂದ ವಶಕ್ಕೆ ತೆಗೆದು ಕೊಂಡಿರುವನು (ವೃತ್ವಾ) ಗೋಲಾಕಾರದ ಪರಿಧಿಯಿಂದ ಸುತ್ತಿ (ಅತ್ಯಾತಿಷ್ಠತ್) ಇದರಿಂದ ಹೆಚ್ಚು ಅಂದರೆ ತನ್ನ ಕಾಲಲೋಕದಲ್ಲಿ ಎಲ್ಲರಿಂದ ಬೇರೆಯಾಗಿ 21ನೇ ಬ್ರಹ್ಮಾಂಡದಲ್ಲಿ ಮೇಲೆ ಕುಳಿತ್ತಿದ್ದಾನೆ ಅಂದರೆ ವಾಸಿಸುತ್ತಾನೆ.

**ಭಾವಾರ್ಥ:– ಸಾವಿರ ತಲೆ, ಕೈ–ಕಾಲು ಕಣ್ಣುಗಳನ್ನು ಹೊಂದಿರುವ ವಿರಾಟ್ ರೂಪದ ಕಾಲ ಬ್ರಹ್ಮನ ವರ್ಣನೆಯನ್ನು ಈ ಮಂತ್ರದಲ್ಲಿ ಹೇಳಿದ್ದಾರೆ. (ಗೀತೆಯ 10–11ನೇ ಅಧ್ಯಾಯದಲ್ಲೂ ಸಹ ಕಾಲ ಬ್ರಹ್ಮನ ಇಂತಹದೇ ವರ್ಣನೆ ಇದೆ. ಅಧ್ಯಾಯ 11ರ 46ನೇ ಶ್ಲೋಕದಲ್ಲಿ ಅರ್ಜುನನು ಹೇಳುತ್ತಾನೆ– "ಸಹಸ್ರ ಭುಜಗಳುಳ್ಳ ನೀವು ನಿಮ್ಮ ಚತುರ್ಭುಜ ರೂಪದಲ್ಲಿ ದರ್ಶನ ನೀಡಿ") ಅವನಿಗೆ ಸಾವಿರ ತಲೆ–ಕಾಲು–ಕೈ–ಕಣ್ಣು–ಕಿವಿ ಇತ್ಯಾದಿಗಳಿವೆ, ಆ ವಿರಾಟ್ ರೂಪಿ ಕಾಲ ಬ್ರಹ್ಮನು ತನ್ನ ಅಧೀನದಲ್ಲಿ ಎಲ್ಲ ಜೀವಾತ್ಮಗಳನ್ನು ಇರಿಸಿಕೊಂಡು, 20 ಬ್ರಹ್ಮಾಂಡಗಳನ್ನು ಗೋಲಾಕಾರದ ಪರಿಧಿಯಲ್ಲಿರಿಸಿ. ಸ್ವತಃ ತಾನು ಪ್ರತ್ಯೇಕವಾಗಿ 21ನೇ ಬ್ರಹ್ಮಾಂಡದಲ್ಲಿ ಕಳಿತುಕೊಂಡಿದ್ದಾನೆ.**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತದಲ್ಲಿನ 2ನೇ ಮಂತ್ರ :–**

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ 2 ॥
ಪುರುಷ–ಏವ–ಇದಮ್–ಸರ್ವಮ್–ಯತ್–ಭೂತಮ್–ಯತ್–ಚ–ಭಾವ್ಯಮ್–

ಉತ್‌ಅಮೃತತ್ವಸ್ಯ–ಇಶಾನಃ–ಯತ್–ಅನ್ನೇನ–ಅತಿರೋಹತಿ।

ಅನುವಾದ:– (ಏವ) ಈ ಪ್ರಕಾರ ಸ್ವಲ್ಪಮಟ್ಟಿಗೆ (ಪುರುಷ) ಭಗವಂತನಂತೆ ಇರುವವನು ಅಕ್ಷರಪುರಷ ಅಂದರೆ ಪರಬ್ರಹ್ಮನು. (ಚ) ಮತ್ತು (ಇದಮ್) ಇಲ್ಲಿ (ಯತ್) ಏನೆಲ್ಲಾ (ಭೂತಮ್) ಉತ್ಪನ್ನವಾಗಿದೆ (ಯತ್) ಏನೆಲ್ಲಾ (ಭಾವ್ಯಮ್) ಭವಿಷ್ಯದಲ್ಲೂ ಉತ್ಪನ್ನವಾಗುತ್ತದೆ (ಸರ್ವಂ) ಎಲ್ಲಾ (ಯತ್) ಪ್ರಯತ್ನದಿಂದ ಅಂದರೆ ಶ್ರಮದ ಮೂಲಕ (ಅನ್ನೇನ) ಅನ್ನದಿಂದ (ಅತಿರೋಹತಿ) ವಿಕಾಸಗೊಳ್ಳುವುದು. ಈ ಅಕ್ಷರ ಪುರಷನು ಸಹ (ಉತ್) ಸಂದೇಹಯುಕ್ತಿ (ಅಮೃತತ್ವಸ್ಯ) ಮೋಕ್ಷದ (ಈಶಾನಃ) ಸ್ವಾಮಿಯಾಗಿರುವನು ಆದರೆ ಪೂರ್ಣ ಮೋಕ್ಷದಾಯಕನಲ್ಲ.

**ಭಾವಾರ್ಥ:– ಈ ಮಂತ್ರದಲ್ಲಿ ಪರಬ್ರಹ್ಮ (ಅಕ್ಷರ ಪುರುಷ) ನ ವರ್ಣನೆ ಇದೆ. ಇವನು ಭಗವಂತನ ಕೆಲವು ಲಕ್ಷಣಗಳಿವೆ. ಆದರೆ ಇವನ ಭಕ್ತಿಯಿಂದ ಪೂರ್ಣ ಮೋಕ್ಷ ಸಿಗದು. ಆದ್ದರಿಂದ ಇವನನ್ನು ಸಂದೇಹಯುಕ್ತ ಮುಕ್ತಿದಾತನೆನ್ನುವರು. ಇವನನ್ನು ಭಗವಂತನಂತೇ ಎಂದು ಹೇಳಲು ಕಾರಣ– ಇವನು ಕಾಲನ ರೀತಿ ತಪ್ತಶಿಲೆಯ ಮೇಲೆ ಜೀವಿಗಳನ್ನು ಸುಟ್ಟು ತಿನ್ನುವುದಿಲ್ಲ. ಆದರೆ ಈ ಪರಬ್ರಹ್ಮನ ಲೋಕದಲ್ಲೂ ಸಹ ಪರಿಶ್ರಮದ, ಕರ್ಮಾಧಾರದಂತೆ ಫಲ ಸಿಗುವುದು ಹಾಗೂ ಅನ್ನದಿಂದಲೇ ಸಕಲ ಪ್ರಾಣಿಗಳ ಶರೀರ ಬೆಳೆಯುವುದು. ಜನ್ಮ–ಮೃತ್ಯುವಿನ ಸಮಯ ಕಾಲನಿಗಿಂತ ಹೆಚ್ಚಾಗಿದೆ. ಆದರೂ ಸಹ ಉತ್ಪತ್ತಿ, ಮರಣ ಹಾಗೂ 84 ಲಕ್ಷ ಯೋನಿಗಳ ಯಾತನೆ ಹಾಗೆಯೇ ಇದೆ.**

**ಋಗ್ವೇದದ 10ನೇ ಮಂಡಲದ ಸೂಕ್ತಿ 90ರ 3ನೇ ಮಂತ್ರ:–**

ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪುರಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥3॥

ಏತಾವಾನ್‌ಅಸ್ಯ–ಮಹಿಮಾ–ಅತಃ–ಜ್ಯಾಯಾನ್‌ಚ–ಪುರುಷಃ–ಪಾದಃ–ಅಸ್ಯ–ವಿಶ್ವಾಃ–ಭೂತಾನಿ–ತ್ರಿ–ಪಾದ–ಅಸ್ಯ–ಅಮೃತಮ್–ದಿವಿ.

ಅನುವಾದ:– (ಅಸ್ಯ) ಈ ಪರಬ್ರಹ್ಮನಿಗೆ (ಏತಾವಾನ) ಇಷ್ಟೇ ಮಹಿಮೆ ಇದೆ (ಮಹಿಮಾ) ಪ್ರಭುತ್ವವಿದೆ (ಚ) ಹಾಗೂ (ಪುರುಷ) ಆ ಪೂರ್ಣ ಬ್ರಹ್ಮ ಪರಮೇಶ್ವರನು (ಅತಃ) ಇವನಿಗಿಂತ (ಜ್ಯಾಯಾನ) ದೊಡ್ಡವನು. (ವಿಶ್ವಾ) ಸಮಸ್ತ (ಭೂತಾನಿ) ಕ್ಷರಪುರುಷ ಹಾಗು ಅಕ್ಷರ ಪುರುಷ ಹಾಗು ಇವರ ಲೋಕಗಳಲ್ಲಿ ಹಾಗು ಸತ್ಯಲೋಕದಲ್ಲಿ ಎಷ್ಟು ಜೀವಾತ್ಮಗಳಿವೆಯೋ, (ಅಸ್ಯ) ಅವುಗಳ ಮೇಲೆ ಈ ಪೂರ್ಣ ಪರಮಾತ್ಮ ಪರಮ ಅಕ್ಷರ ಪುರುಷನ (ಪಾದಃ) ಒಂದು ಅಂಶ ಇದೆ. (ಅಸ್ಯ) ಈ ಪರಮೇಶ್ವರನ (ತ್ರಿ) ಮೂರು (ದಿವಿ) ದಿವ್ಯಲೋಕ ಅವು ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ (ಅಮೃತಂ) ಅವಿನಾಶಿಯ (ಪಾದ) ಎರಡನೆಯ ಪಾದ ಅಂದರೆ ಏನೆಲ್ಲಾ ಸಕಲ ಬ್ರಹ್ಮಾಂಡಗಳಲ್ಲಿ ಉತ್ಪನ್ನವಾಗಿದೆ ಇದು ಆ ಸತ್ಯಪುರುಷನ ಪೂರ್ಣ ಪರಮಾತ್ಮನದೇ ಅಂಶ ಅಥವಾ ಅಂಗವಾಗಿದೆ.

**ಭಾವಾರ್ಥ:– ಈ ಮೇಲಿನ 2ನೇ ಮಂತ್ರದಲ್ಲಿ ವರ್ಣಿತವಾಗಿರುವ ಅಕ್ಷರ ಪುರುಷ (ಪರಬ್ರಹ್ಮ) ನಿಗೆ ಎಷ್ಟು ಮಹಿಮೆ ಇದೆಯೋ, ಅದಕ್ಕಿಂತಲೂ ಅಧಿಕವಾಗಿ ಪೂರ್ಣ ಪುರುಷ ಕವಿರ್ದೇವರ ಮಹಿಮೆ ಇದೆ. ಇವರು ಸರ್ವಶಕ್ತಿಮಾನ್ ಹಾಗೂ ಸಕಲ ಬ್ರಹ್ಮಾಂಡವೂ, ಇವರ ಅಂಶದಿಂದಲೇ ಆಗಿವೆ. ಈ ಮಂತ್ರದಲ್ಲಿ ಮೂರು ಲೋಕಗಳ ವರ್ಣನೆ ಇದೆ ಏಕೆಂದರೆ ನಾಲ್ಕನೆಯ ಅನಾಮಿಲೋಕ ಬೇರೆ ಲೋಕಗಳ ರಚನೆಗೂ ಮೊದಲೇ ಆಗಿದೆ. ಇದೇ ಮೂವರು ಪ್ರಭುಗಳ (ಕ್ಷರ ಪುರುಷ, ಅಕ್ಷರ ಪುರುಷ ಹಾಗು ಇವರಿಗಿಂತ ಬೇರೆ ಪರಮ ಅಕ್ಷರ ಪುರುಷನ) ವಿವರಣೆಯು ಭಗವದ್ಗೀತೆಯ 15ನೇ ಅಧ್ಯಾಯದ 16–17 ನೇ ಶ್ಲೋಕಗಳಲ್ಲಿದೆ. {ಇದಕ್ಕೆ ಪ್ರಮಾಣವನ್ನು ಗೌರವಾನ್ವಿತ ಗರೀಬ್‌ದಾಸರು ನೀಡಿದ್ದಾರೆ:–**

ಗರೀಬ್, ಜಾಕೆ ಅರ್ಧ ರೂಮ್ ಪರ್ ಸಕಲ್ ಪಸಾರಾ, ಐಸಾ ಪೂರ್ಣಬ್ರಹ್ಮ ಹಮಾರಾ ।
ಗರೀಬ್, ಅನಂತ ಕೋಟಿ ಬ್ರಹ್ಮಾಂಡ ಕಾ, ಏಕ್ ರತಿ ನಹೀ ಭಾರ್ ।

ಸತ್‌ಗುರು ಪುರುಷ ಕಬೀರ್ ಹೈ, ಕುಲ್ ಕೆ ಸೃಜನ್ ಹಾರ್ ॥

**ಇದರ ಪ್ರಮಾಣವನ್ನು ಗೌರವಾನ್ವಿತ ದಾದೂ ರವರು ಹೇಳುತ್ತಿದ್ದಾರೆ:–**

ಜಿನ್ ಮೋಕು ನಿಜನಾಮ್ ದಿಯಾ, ಸೋಈ ಸತ್‌ಗುರು ಹಮಾರ್ ।
ದಾದೂ ದೂಸರಾ ಕೋಎ ನಹೀ, ಕಬೀರ್ ಸೃಜನಹಾರ್ ॥

**ಇದರ ಪ್ರಮಾಣವನ್ನು ಗೌರವಾನ್ವಿತ ಗುರು ನಾನಕ್ ರವರು ಕೊಡುತ್ತಾರೆ:–**

ಯಕ ಅರ್ಜ್ ಗುಫತಮ್ ಪೇಶ್ ತೋ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ, ಬೇಎಬ್ ಪರವರದಿಗಾರ್ ॥

**(ಶ್ರೀ ಗುರುಗ್ರಂಥ ಸಾಹೇಬದ ಪುಟ ಸಂಖ್ಯೆ 721, ಮಹಲಾ 1 ರಾಗ್ ತಿಲಂಗ್)**

**'ಕೂನ್ ಕರತಾರ'ದ ಅರ್ಥ ಎಲ್ಲವನ್ನೂ ರಚಿಸುವವನು ಎಂದಾಗಿದೆ. ಅರ್ಥಾತ್ ಶಬ್ದ ಶಕ್ತಿಯಿಂದ ರಚನೆಮಾಡುವ ಶಬ್ದ ಸ್ವರೂಪ ಪ್ರಭು. 'ಹಕ್ಕಾ ಕಬೀರ್' ನ ಅರ್ಥ ಸತ್ಯ ಕಬೀರ್ ಎಂದಾಗಿದೆ. 'ಕರೀಮ್'ನ ಅರ್ಥ ದಯಾಳು ಎಂದಾಗಿದೆ. 'ಪರವರದಿಗಾರ್'ನ ಅರ್ಥ ಪರಮಾತ್ಮ ಎಂದಾಗಿದೆ.}**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 4ನೆ ಮಂತ್ರ:–**

ತ್ರಿ ಪಾದೂರ್ಧ್ವ ಉದೈತ್ಪುರುಷಃ ಪಾದೋಸೇಹಾಭವತ್ಪುನಃ ।
ತತೋ ವಿಶ್ವ ಡವ್ಯಕ್ರಾಮತ್ಸಾಶನಾನಶನೆ ಅಭಿ ॥4॥
ತ್ರಿ–ಪಾದ–ಊರ್ಧ್ವಃ–ಉದ್ವೈತ್–ಪುರುಷಃ–ಪಾದಃ–ಅಸ್ಯ–ಇಹ–ಅಭವತ್
ಪೂನಃ–ತತಃ–ವಿಶ್ವಡ–ವ್ಯಕ್ರಾಮತ–ಸಃ–ಅಶನಾನಶನೆ–ಅಭಿ.

ಅನುವಾದ:– (ಪುರುಷಃ) ಈ ಪರಮ ಅಕ್ಷರ ಬ್ರಹ್ಮ ಅಂದರೆ ಅವಿನಾಶಿ ಪರಮಾತ್ಮಾ (ಊದ್ವಃ) ಮೇಲಿನ (ತ್ರಿ) ಮೂರು ಲೋಕಗಳಾದ ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ ರೂಪಿ (ಪಾದ) ಪಾದ ಅಂದರೆ ಮೇಲಿನ ಭಾಗದಲ್ಲಿ (ಉದೈತ್) ಪ್ರಕಟನಾಗುತ್ತಾನೆ ಅರ್ಥಾತ್ ವಿರಾಜಮಾನನಾಗುತ್ತಾನೆ (ಅಸ್ಯ) ಇದೇ ಪರಮೇಶ್ವರ ಪೂರ್ಣಬ್ರಹ್ಮನ (ಪಾದಃ) ಒಂದು ಪಾದ ಅಂದರೆ ಒಂದು ಭಾಗ ಜಗತ್ತು ರೂಪಿ (ಪುನರ್) ನಂತರ ( ಇಹ) ಇಲ್ಲಿ (ಅಭವತ್) ಪ್ರಕಟವಾಗುತ್ತಾನೆ. (ತತಃ) ಆದ್ದರಿಂದ (ಸಃ) ಆ ಅವಿನಾಶಿ ಪೂರ್ಣ ಬ್ರಹ್ಮನು (ಅಶನಾನಸನೆ) ತಿನ್ನುವ ಕಾಲ ಬ್ರಹ್ಮ ಮತ್ತು ತಿನ್ನದೆ ಇರುವ ಪರಬ್ರಹ್ಮನ (ಅಭಿ) ಮೇಲೂ (ವಿಶ್ವಡ) ಸರ್ವತ್ರ (ವ್ಯಕ್ರಾಮಾತ್) ಅವನ ಪ್ರಭುತ್ವ ಎಲ್ಲಾ ಬ್ರಹ್ಮಾಂಡ ಹಾಗೂ ಎಲ್ಲಾ ಪ್ರಭುಗಳ ಮೇಲೂ ಇದೆ. ಅವನೇ ಕುಲದ ಮಾಲೀಕ. ಅವನು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಪ್ರಯೋಗಿಸಿದ್ದಾನೆ.

**ಭಾವಾರ್ಥ:– ಇವನೇ ಸಕಲ ಸೃಷ್ಟಿಯ ರಚನಾಕಾರನು ತಾನು ರಚಿಸಿದ ಮೂರು ಲೋಕಗಳಲ್ಲಿ (ಸತ್ಯಲೋಕ, ಅತಖ್‌ಲೋಕ, ಅಗಮ್‌ಲೋಕ) ಮೂರು ರೂಪಗಳಲ್ಲಿ ಪ್ರಕಟವಾಗಿದ್ದಾನೆ. ಇಲ್ಲಿ ಅನಾಮಿಲೋಕದ ರಚನೆ ಬಗ್ಗೆ ಹೇಳಲಾಗಿಲ್ಲ. ಏಕೆಂದರೆ ಈ ಲೋಕದಲ್ಲಿ ಯಾವುದೇ ರಚನೆ ಇಲ್ಲ. ಇದು ಪೂರ್ವದಿಂದಲ್ಲೇ ಇರುವಂತಹದ್ದು. ನಂತರ ಹೇಳಲಾಗಿದೆ ಅದೇ ಪರಮಾತ್ಮನು ಸತ್ಯಲೋಕದಿಂದ ಬೇರೆಯಾಗಿ ಕೆಳಗಿನ ಕಾಲ ಬ್ರಹ್ಮ ಮತ್ತು ಪರಬ್ರಹ್ಮನ ಲೋಕ ಉತ್ಪನ್ನವಾಗುತ್ತವೆ. ಪೂರ್ಣ ಪರಮಾತ್ಮ ತಿನ್ನುವ ಕಾಲ (ಏಕೆಂದರೆ ಕಾಲ ಶಾಪದಿಂದಾಗಿ ಒಂದು ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳನ್ನು ತಿನ್ನುತ್ತಾನೆ) ಹಾಗು ತಿನ್ನದಿರುವ ಪರಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ ಜೀವಾತ್ಮಗಳನ್ನು ತಿನ್ನುವುದಿಲ್ಲ, ಆದರೆ ಜನ್ಮ–ಮೃತ್ಯು, ಕರ್ಮದಂಡ ಇದ್ದಹಾಗೆ ಇರುತ್ತದೆ) ಇಗಿಂತ ಮೇಲೆ ಎಲ್ಲಾಕಡೆ ವ್ಯಾಪ್ತವಾಗಿದೆ. ಅಂದರೆ ಈ ಪೂರ್ಣ ಪರಮಾತ್ಮನ ಪ್ರಭುತ್ವ ಎಲ್ಲೆಡೆ ಇರುತ್ತದೆ. ಕಬೀರ ಪರಮೇಶ್ವರನೇ ಕುಲದ ಮಾಲೀಕನು. ಅವನು ತನ್ನ ಶಕ್ತಿಯನ್ನು ಎಲ್ಲರ ಮೇಲೆ ಪಸರಿಸಿದ್ದಾನೆ ಹೇಗೆ ಸೂರ್ಯನು ಮೇಲೆ ಇದ್ದು ತನ್ನ ಪ್ರಕಾಶ–ಪ್ರಭಾವವನ್ನು ಎಲ್ಲರ ಮೇಲೂ ಬೀರುತ್ತಾನೋ, ಹಾಗೆ ಪೂರ್ಣ ಪರಮಾತ್ಮನು ತನ್ನ**

**ಶಕ್ತಿ ರೂಪಿ ರೆಂಜ್ ಕ್ಷಮತೆ ಎಲ್ಲಾ ಬ್ರಹ್ಮಂಡಗಳನ್ನು ನಿಯಂತ್ರಿಸುವಲ್ಲಿ ಬಿಟ್ಟಿರುವನು. ಹೇಗೆ ಮೊಬೈಲ್ ಟವರ್ ಒಂದೆಡೆ ಇದ್ದು ಎಲ್ಲ ಕಡೆಗೂ ವಾಣಿಯ ಸಂದೇಶ ಕಳುಹಿಸುತ್ತದೋ, ಹಾಗೆ ಪೂರ್ಣಬ್ರಹ್ಮನು ತನ್ನ ನಿರಾಕಾರ ಶಕ್ತಿಯನ್ನು ಸರ್ವ ವ್ಯಾಪಕ ಮಾಡಿರುವನು ಅದರಿಂದ ಪೂರ್ಣ ಪರಮಾತ್ಮ ಎಲ್ಲ ಬ್ರಹ್ಮಾಂಡಗಳನ್ನೊಂದೇ ಸ್ಥಾನದಲ್ಲಿ ಕುಳಿತು ನಿಯಂತ್ರಿಸುತ್ತಾನೆ. ಇದರ ಪ್ರಮಾಣವನ್ನು ಗೌರವಾನ್ವಿತ ಗರೀಬ್‌ದಾಸರು ಕೊಟ್ಟಿದ್ದಾರೆ. (ಅಮೃತವಾಣಿ, ರಾಗ ಕಲ್ಯಾಣ)**

ತೀನ್ ಚರಣ್ ಚಿಂತಾಮಣೀ ಸಾಹೇಬ್, ಶೇಷ್ ಬದನ್ ಪರ್ ಛಾಯೆ ।
ಮಾತಾ, ಪಿತಾ ಕುಲ್ ನ ಬಂಧು, ನಾ ಕಿನ್ಹೆ ಜನನೀ ಜಾಯೇ ॥

**ಋಗ್ವೇದದ ಮಂಡಲ 10ರ ಸೂಕ್ತಿ 90ರ 5ನೇ ಮಂತ್ರ:–**

ತಸ್ಮಾದ್ವಿರಾಳಜಾಯತ್ ವಿರಾಜೋ ಅಧಿ ಪುರುಷಃ ।
ಸ ಜಾತೋ ಅತ್ಯರಿಚ್ಯತ್ ಪಶ್ಚಾದ್‌ಭೂಮಿಮಥೋ ಪುರಃ ॥5॥

ತಸ್ಮಾತ್–ವಿರಾಟ್–ಅಜಾಯತ–ವಿರಾಜಃ–ಅಧಿ–ಪುರುಷಃ–ಸ–ಜಾತಃ–ಅತ್ಯರಿಚ್ಚ್ಯತ್–ಪಶ್ಚಾತ್–ಭೂಮಿಮ್–ಅಥಃ–ಪುರಃ

ಅನುವಾದ:– (ತಸ್ಮಾತ್) ಅದಾದ ನಂತರ ಆ ಪರಮೇಶ್ವರನು ಶಬ್ದ ಶಕ್ತಿಯಿಂದ (ವಿರಾಟ್) ಕಾಲಬ್ರಹ್ಮ, ಇವನನ್ನು ಕ್ಷರ ಪುರುಷ ಎಂದೂ ಸಹ ಕರೆಯುತ್ತಾರೆ. (ಅಜಾಯತ) ಇವನ ಉತ್ಪನ್ನವಾಯಿತು. (ಪಶ್ವಾತ್) ಅದಾದ ನಂತರ (ವಿರಾಜಃ) ಕಾಲ ಬ್ರಹ್ಮನಿಗಿಂತ (ಅಧಿ) ದೊಡ್ಡ (ಪುರಷಃ) ಪರಮೇಶ್ವರನು (ಭೂಮಿಮ್) ಪೃಥ್ವಿಯ ಲೋಕ, ಕಾಲ ಬ್ರಹ್ಮ ಹಾಗೂ ಪರಬ್ರಹ್ಮನ ಲೋಕಗಳನ್ನು ಉತ್ತಮವಾಗಿ (ಅತ್ಯರಿಚ್ಯತ್) ನಿರ್ಮಿಸಿದ. (ಅರ್ಥ) ನಂತರ (ಪುರ) ಬೇರೆ ಚಿಕ್ಕ–ಚಿಕ್ಕ ಲೋಕಗಳನ್ನು (ಸ) ಆ ಪೂರ್ಣ ಪರಮಾತ್ಮನೇ ಉತ್ಪನ್ನ ಮಾಡಿದ ಅಂದರೆ ಸ್ಥಾಪಿಸಿದನು

**ಭಾವಾರ್ಥ:– 4ನೇ ಮಂತ್ರದಲ್ಲಿ ಹೇಳಿರುವಂತೆ ಪೂರ್ಣ ಪರಮಾತ್ಮನು ಮೂರು (ಅಗಮಲೋಕ, ಅಲಖ್ ಲೋಕ, ಸತ್ಯಲೋಕ) ಲೋಕಗಳ ಉತ್ಪತ್ತಿಯ ನಂತರ ಪೂರ್ಣ ಪರಮಾತ್ಮ ಜ್ಯೋತಿ ನಿರಂಜನ (ಕಾಲ ಬ್ರಹ್ಮ) ನನ್ನು ಉತ್ಪತ್ತಿ ಮಾಡಿದರು. ಅಂದರೆ ಅದೇ ಸರ್ವ ಶಕ್ತಿವಂತ ಪರಮಾತ್ಮ ಪೂರ್ಣ ಬ್ರಹ್ಮ ಕವಿರ್ದೇವನಿಂದಲೇ ಬ್ರಹ್ಮನ ಉತ್ಪತ್ತಿಯಾಯ್ತು. ಇದಕ್ಕೆ ಪ್ರಮಾಣ ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕದಲ್ಲಿ ಪರಮ ಅಕ್ಷರ ಪರುಷ ಅಂದರೆ ಅವಿನಾಶಿ ಪ್ರಭುವಿನಿಂದ ಬ್ರಹ್ಮನ ಉತ್ಪತ್ತಿಯಾಯ್ತು. ಪ್ರಮಾಣ ಅಥರ್ವವೇದದ 4ನೇ ಕಾಂಡದ, 1ನೇ ಅನುವಾಕ, ಸೂಕ್ತಿ 3ರಲ್ಲಿನ ಮಂತ್ರದಲ್ಲಿದೆ. ಅದೇ ಪೂರ್ಣ ಬ್ರಹ್ಮನಿಂದಲೇ ಭೂಮಿ ಮೊದಲಾದ ಚಿಕ್ಕ–ದೊಡ್ಡ ಲೋಕಗಳ ಸೃಷ್ಟಿಯಾಯಿತು. ಪೂರ್ಣಬ್ರಹ್ಮನು ಈ ವಿರಾಟ ಭಗವಂತ ಅಂದರೆ ಕಾಲನಿಗಿಂತ ದೊಡ್ಡ ಅಂದರೆ ಇವನ ಮಾಲೀಕನು**

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 15ನೇ ಮಂತ್ರ:–**

ಸಪ್ತಾಸ್ಯಾಸಪ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನಂಪರುಷಂ ಪಶುಮ್ ॥ 15 ॥

ಸಪ್ತ–ಅಸ್ಯ–ಆಸನ–ಪರಿಧಯಃ–ತ್ರಿಸಪ್ತ–ಸಮಿಧಃ–ಕೃತಾಃ–ದೇವಾ–ಯತ್–ಯಜ್ಞಮ್–ತನ್ವಾನಾಃ–ಅಬಘ್ನನ್–ಪುರುಷಮ್ –ಪಶುಮ್ ।

ಅನುವಾದ:– (ಸಪ್ತ) 7 ಶಂಖ ಬ್ರಹಾಂಡವು ಪರಬ್ರಹ್ಮನ ಹಾಗೂ (ತ್ರಿಸಪ್ತ್) ಕಾಲಬ್ರಹ್ಮನ 21 ಬ್ರಹ್ಮಾಂಡಗಳ (ಸಮಿಧಃ) ಕರ್ಮದಂಡದ ದುಃಖ ರೂಪದ ಬೆಂಕಿಯಿಂದ (ಕೃತಾಃ) ದುಃಖಿ ಮಾಡುವ (ಪರಿಧಃ) ಗೋಲಾಕಾರದ ಸೀಮೆಯಲ್ಲಿ (ಆಸನ್) ವಿದ್ಯಮಾನವಾಗಿದೆ (ಯತ್ ಪುರುಷಮ್) ಯಾರು ಪೂರ್ಣಪರಮಾತ್ಮನ (ಯಜ್ಞಮ್) ಶಾಸ್ತ್ರಬದ್ಧವಾಗಿ ಧಾರ್ಮಿಕ ಕರ್ಮ ಅಂದರೆ ಪೂಜೆ ಮಾಡುತ್ತಾರೋ (ಪಶುಮ್) ಬಲಿಯ ಪಶುರೂಪದ ಕಾಲನಜಾಲ (ಸೆರೆ) ದಲ್ಲಿ ಕರ್ಮ ಬಂಧನದಲ್ಲಿ ಬಂಧಿಸಿದ (ದೇವಾ) ಭಕ್ತಾತ್ಮಗಳನ್ನು

(ತನ್ವಾನಾಃ) ಕಾಲನ ಮೂಲಕ ಹರಡಿಸಿದ ಪಾಪ ರೂಪದ ಕರ್ಮ ಬಂಧನದ ಜಾಲದಿಂದ (ಅಬಧ್ನನ್) ಮುಕ್ತಗೊಳಿಸುತ್ತಾನೆ. ಅಂದರೆ ಬಂಧನದಿಂದ ಮುಕ್ತ ಮಾಡುವ ಮುಕ್ತಿದಾತರು ಈ ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ.

**ಭಾವಾರ್ಥ:– 7 ಶಂಖ ಬ್ರಹ್ಮಾಂಡ ಹಾಗೂ 21 ಬ್ರಹ್ಮಾಂಡಗಳು ಕ್ರಮವಾಗಿ ಪರಬ್ರಹ್ಮ ಹಾಗೂ ಕಾಲ ಬ್ರಹ್ಮನ ಬ್ರಹ್ಮಾಂಡಗಳಾಗಿವೆ. ಆ ಗೋಲಾಕಾರ ಪರಧಿಯಲ್ಲಿ ಬಂಧಿತರಾದ ಪಾಪ ಕರ್ಮಗಳ ಬೆಂಕಿಯಲ್ಲಿ ಉರಿಯುತ್ತಿರುವ ಜೀವಿಗಳಿಗೆ, ಶಾಸ್ತ್ರ ವಿಧಿವಾದ ಧರ್ಮ ಪೂಜಾ ವಿಧಾನಗಳನ್ನು ತಿಳಿಸಿ ಉಪಾಸನೆ ಮಾಡಿಸುತ್ತಾನೆ. ಆ ಕಾರಣದಿಂದ ಬಲಿಕೊಡುವ ಪಶುವಿನಂತೆ ಜನ್ಮ–ಮೃತ್ಯುವಿನ ಕಾಲನಿಗೆ ತಿನ್ನಲು ತಪ್ತಶಿಲೆಯ ಕಷ್ಟದಿಂದ ಪೀಡಿತ ಭಕ್ತಾತ್ಮಾಗಳನ್ನು ಕಾಲನ ಕರ್ಮ ಬಂಧನದಿಂದ ಬಿಡಿಸುವ ಕೆಲಸವನ್ನು ಪೂರ್ಣ ಬ್ರಹ್ಮ ಕಬೀರರು ಮಾಡುತ್ತಾರೆ ಆದ್ದರಿಂದ ಅವರೇ (ಬಂದೀಛೋಡ್) ಬಂಧನದಿಂದ ಮುಕ್ತಗೊಳಿಸುವ ಮುಕ್ತಿದಾತರು.** ಇದಕ್ಕೆ ಪ್ರಮಾಣ ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರದಲ್ಲಿದೆ:– ಕವಿರಂಘಾರಿಸಿ (ಕವಿರ್) ಕಬೀರ್ ಪರಮೇಶ್ವರ (ಅಂಘ) ಪಾಪಗಳ (ಅರಿ) ಶತ್ರು (ಅಸಿ) ಇದ್ದಾರೆ ಅಂದರೆ ಪಾಪ ವಿನಾಶಕ ಕಬೀರರಾಗಿದ್ದಾರೆ. ಬಂಭಾರಿಸಿ (ಬಂಭಾರಿ) ಬಂಧನಗಳ ಶತ್ರು ಅಂದರೆ ಬಂದಿಛೋಡ್ ಅಂದರೆ ಮುಕ್ತಿದಾತ ಕಬೀರ್ ಪರಮೇಶ್ವರರಾಗಿದ್ದಾರೆ.

**ಋಗ್ವೇದದ 10ನೇ ಮಂಡಲದ 90ನೇ ಸೂಕ್ತಿಯ 16ನೇ ಮಂತ್ರ:–**

ಯಜ್ಞೇನ ಯಜ್ಞಮಯಜನ್ತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚನ್ತ ಯತ್ರ ಪೂರ್ವೇ ಸಾಧ್ಯಾಃ–ಸಂತಿ ದೇವಾಃ ॥16॥

ಯಜ್ಞೇನ–ಯಜ್ಞಮ–ಅ–ಯಜನ್ತ–ದೇವಾಃ–ತಾನಿ–ಧರ್ಮಾಣಿ–ಪ್ರಥಮಾನಿ–ಆಸನ್– ತೇ ಹ–ನಾಕಂ–ಮಹಿಮಾನಃ–ಸಚನ್ತ–ಯತ್ರ–ಪೂರ್ವೇ–ಸಾಧ್ಯಾಃ– ಸಂತಿ–ದೇವಾಃ.

ಅನುವಾದ:– ಯಾವ (ದೇವಾಃ) ನಿರ್ವಿಕಾರ ದೇವ ಸ್ವರೂಪದ ಭಕ್ತಾತ್ಮಗಳು (ಆಯಜ್ಞಮ್) ಅಪೂರ್ಣ ತಪ್ಪು ಧಾರ್ಮಿಕ ವಿಧಿತ ಪೂಜೆಯ ಬದಲಾಗಿ (ಯಜ್ಞೇನ) ಸತ್ಯ ಭಕ್ತಿಯನ್ನು ಧಾರ್ಮಿಕ ಕರ್ಮದ ಆಧಾರದಿಂದ (ಅಯಜಂತ) ಪೂಜೆ ಮಾಡುತ್ತಾರೆ (ತಾನಿ) ಅವರು (ಧರ್ಮಾಣಿ) ಧಾರ್ಮಿಕ ಶಕ್ತಿ ಸಂಪನ್ನ (ಪ್ರಥಮಾನಿ) ಮುಖ್ಯ ಅರ್ಥಾತ್ ಉತ್ತಮ (ಆಸನ್) ವಾಗಿದ್ದಾರೆ. (ತೇ ಹ) ಅವರೇ ವಾಸ್ತವದಲ್ಲಿ (ಮಹಿಮಾನಶಿ) ಮಹಾನ್ ಭಕ್ತಿ–ಶಕ್ತಿ–ಯುಕ್ತರಾಗಿ (ಸಾಧ್ಯಾಃ) ಸಫಲ ಭಕ್ತಜನರು (ನಾಕಮ್) ಪೂರ್ಣ ಸುಖದಾಯಕ ಪರಮೇಶ್ವರನನ್ನು (ಸಚಂತ್) ಸದ್ಭಕ್ತಿಯ ಸಂಪಾದನೆಯಿಂದ ಪಡೆಯುತ್ತಾರೆ ಹಾಗೂ ಅವರು ಅಲ್ಲಿ ಹೋಗುತ್ತಾರೆ. (ಯತ್ರ) ಎಲ್ಲಿ (ಪೂರ್ವೇ) ಮೊದಲನೇ ಸೃಷ್ಟಿಯ (ದೇವಾಃ) ಪಾಪ ರಹಿತ ದೇವ ಸ್ವರೂಪ ಭಕ್ತ ಆತ್ಮಗಳಿವೆಯೋ ಅಲ್ಲಿ (ಸಂತಿ) ಇರುತ್ತಾರೆ.

**ಭಾವಾರ್ಥ:– ಯಾರು ನಿರ್ವಿಕಾರ ದೇವಸ್ವರೂಪ ಭಕ್ತಾತ್ಮರೋ, (ಅವರು ಮದ್ಯ–ತಂಬಾಕು, ಮಾಂಸ ಇತ್ಯಾದಿ ದುಶ್ಚಟಗಳಿಲ್ಲದ) ಅವರು ಶಾಸ್ತ್ರ ವಿರುದ್ಧ ಪೂಜೆಯನ್ನು ಬಿಟ್ಟು ಶಾಸ್ತ್ರಾನುಕೂಲ ಸಾಧನೆ ಮಾಡುತ್ತಾರೆ. ಅವರು ಭಕ್ತಿಯ ದುಡಿಮೆಯಿಂದ ಧನಿಕರಾಗುತ್ತಾರೆ. ಕಾಲನ ಋಣದಿಂದ ಮುಕ್ತರಾಗಿ ತಮ್ಮ ಭಕ್ತಿಧನ ಸಂಪಾದನೆಯಿಂದ ಸರ್ವ ಸುಖದಾಯಿ ಪರಮಾತ್ಮನನ್ನು ಪಡೆಯುತ್ತಾರೆ ಅಂದರೆ ಸತ್ಯಲೋಕಕ್ಕೆ ಹೋಗುತ್ತಾರೆ. ಅಲ್ಲಿ ಸರ್ವ ಪ್ರಥಮ ರಚಿಸಿದ ಸೃಷ್ಟಿಯ ದೇವಸ್ವರೂಪ ಅಂದರೆ ಅಲ್ಲಿ ಪಾಪರಹಿತ ಹಂಸಾತ್ಮಗಳು ಇರುತ್ತವೆ.**

**ಹೇಗೆ ಕೆಲವು ಆತ್ಮಗಳು ಕಾಲನ ಜಾಲದಲ್ಲಿ ಸಿಕ್ಕಿಕೊಂಡು ಇಲ್ಲಿ ಬಂದವು ಹಾಗೂ ಕೆಲವು ಪರಬ್ರಮ್ಹನ ಜೊತೆ 7 ಶಂಖ ಬ್ರಹ್ಮಾಂಡಗಳಲ್ಲಿ ಬಂದವು. ಇನ್ನು ಹಲವು ಆತ್ಮಗಳು ಯಾರಿಗೆ ಪೂರ್ಣ ಪರಮಾತ್ಮನಲ್ಲಿ ಪೂರ್ಣ ವಿಶ್ವಾಸ ಸ್ಥಿರವಾಗಿತ್ತೋ ಅವು ಸತ್ಯಲೋಕದಲ್ಲೆ ಉಳಿದವು. ಇದಕ್ಕಾಗಿ ಇದೇ ವರ್ಣನೆಯನ್ನು ಪವಿತ್ರವೇದಗಳಲ್ಲೂ ಮಾಡಲಾಗಿದೆ. ಇದಕ್ಕೆ ಪ್ರಮಾಣ**

ಗೀತೆಯ 8ನೇ ಅಧ್ಯಾಯದ 8 ರಿಂದ 10ನೇ ಶ್ಲೋಕಗಳಲ್ಲಿದೆ "ಯಾವ ಭಕ್ತನು ಪೂರ್ಣ ಪರಮಾತ್ಮನ ಸಾಧನೆಯನ್ನು ಶಾಸ್ತ್ರವಿಧಿಯಂತೆ ಮಾಡುತ್ತಾನೋ, ಅವನು ತನ್ನ ಭಕ್ತಿ ಬಲದಿಂದ ಪೂರ್ಣ ಪರಮಾತ್ಮನನ್ನು ಪಡೆಯುತ್ತಾನೆ ಅಂದರೆ ಅವನ ಬಳಿ ಹೋಗುತ್ತಾನೆ. ಇದರಿಂದ ಸ್ಪಷ್ಟವಾಯ್ತೆನೆಂದರೆ ಮೂವರು ಪ್ರಭುಗಳಿದ್ದಾರೆ. ಬ್ರಹ್ಮ-ಪರಬ್ರಹ್ಮ-ಪೂರ್ಣಬ್ರಹ್ಮ ಇವರನ್ನೇ

1. ಬಹ್ಮ/ಈಶ್/ಕ್ಷರಪುರುಷ/ಕ್ಷರಬ್ರಹ್ಮ/ಕಾಲ

2. ಪರಬ್ರಹ್ಮ/ಅಕ್ಷರಪುರುಷ/ಅಕ್ಷರಬ್ರಹ್ಮ/ಈಶ್ವರ ಹಾಗೂ.

3. ಪೂರ್ಣಬ್ರಹ್ಮ/ಕವಿರ್ದೇವ/ಕಬೀರ್/ಪರಮ ಅಕ್ಷರ ಬ್ರಹ್ಮ/ ಪರಮೇಶ್ವರ-ಸತ್ಯಪುರುಷ ಮುಂತಾದ ಪರ್ಯಾಯವಾಚಿ ಶಬ್ದಗಳಿಂದ ಕರೆಯಲಾಗುತ್ತದೆ.

ಇದೇ ಪ್ರಮಾಣ ಋಗ್ವೇದ 9ನೇ ಮಂಡಲದ, 96ನೇ ಸೂಕ್ತಿಯ 17ರಿಂದ 20ನೇಯ ಮಂತ್ರಗಳಲ್ಲಿ ಸ್ಪಷ್ಟವಾಗಿದೆ. ಏನೆಂದರೆ, ಪೂರ್ಣ ಪರಮಾತ್ಮಾ ಕವಿರ್ದೇವ ಶಿಶು ರೂಪ ಧಾರಣೆ ಮಾಡಿ ಪ್ರಕಟವಾಗುತ್ತಾರೆ. ಹಾಗೂ ತಮ್ಮ ನಿರ್ಮಲ ತತ್ವಜ್ಞಾನದ (ಕವಿರ್ಗೀರ್ಭಿಃ) ಕಬೀರ್ ವಾಣಿಯ ಮೂಲಕ ತಮ್ಮ ಅನುಯಾಯಿಗಳಿಗೆ ತಿಳಿಸುತ್ತಾ ವರ್ಣನೆ ಮಾಡುತ್ತಾರೆ. ಆ ಕವಿರ್ದೇವರು ಕಾಲ ಬ್ರಹ್ಮನ ಧಾಮ ಹಾಗೂ ಪರಬ್ರಹ್ಮರ ಧಾಮಕ್ಕಿಂತ ಭಿನ್ನವಾದ ಧಾಮ ಹಾಗೂ ಪೂರ್ಣಬ್ರಹ್ಮರ ಮೂರನೆಯ ಋತಧಾಮ ಅಂದರೆ ಸತ್ಯಲೋಕದಲ್ಲಿ ಮನುಷ್ಯನ ಆಕಾರ ದಲ್ಲಿ ಇದ್ದಾರೆ ಹಾಗೂ ಸತ್ಯಲೋಕದಿಂದ ನಾಲ್ಕನೆಯದು ಅನಾಮಿ ಲೋಕವಿದೆ. ಅದರಲ್ಲೂ ಇದೇ ಕವಿರ್ದೇವರು ಅನಾಮಿ ಪುರುಷ ರೂಪದಲ್ಲಿ, ಮನುಷ್ಯ ಸದೃಶ್ಯ ಆಕಾರದಲ್ಲಿ ವಿರಾಜಮಾನರಾಗಿದ್ದಾರೆ.

## "ಪವಿತ್ರ ಶ್ರೀಮದ್ ದೇವಿಮಹಾಪುರಾಣದಲ್ಲಿ ಸೃಷ್ಟಿ ರಚನೆಯ "ಪ್ರಮಾಣ"

ಬ್ರಹ್ಮಾ, ವಿಷ್ಣು ಹಾಗು ಶಿವನ ತಂದೆ-ತಾಯಿ

(ದುರ್ಗಾ ಮತ್ತು ಬ್ರಹ್ಮನ ಸಂಯೋಗದಿಂದ ಬ್ರಹ್ಮಾ-ವಿಷ್ಣು-ಶಿವನ ಜನ್ಮ)

ಪವಿತ್ರ "ಶ್ರೀಮದ್ದೇವಿಮಹಾಪುರಾಣದ ಮೂರನೇ ಸ್ಕಂದ ಅಧ್ಯಾಯ 1-3 ಪುಟ ಸಂಖ್ಯೆ 97-102ರವರೆಗೆ ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ, ಇದರ ಸಂಪಾದಕರು ಹನುಮಾನ್ ಪ್ರಸಾದ್ ಪೋದ್ದಾರ್, ಅನುವಾದಕರು ಶ್ರೀ ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) ರ ವರೆಗಿನ ವಿವರಣೆ:- ಬಹಳಷ್ಟು ಆಚಾರ್ಯರು ಭವಾನಿಯನ್ನು ಮನೋರಥವನ್ನು ಪರಿಪೂರ್ಣವಾಗಿ ನೆರವೇರಿಸುವಳೆಂದು ತಿಳಿಸಿದ್ದಾರೆ. ಅವಳನ್ನು ಪ್ರಕೃತಿ ಎಂದು ಕರೆಯಲಾಗಿದೆ. ಬ್ರಹ್ಮನೊಂದಿಗೆ ಅಭೇದ ಸಂಬಂಧ ಇದೆ {ಪತ್ನಿಯನ್ನು ಅರ್ಧಾಂಗಿ ಎಂದೂ ಕರೆಯುತ್ತಾರೆ ಅಂದರೆ ದುರ್ಗಾ ಬ್ರಹ್ಮನ ಪತ್ನಿ} ಒಂದು ಬ್ರಹ್ಮಾಂಡದ ಸೃಷ್ಟಿಯ ರಚನೆ ಬಗ್ಗೆ ರಾಜ ಪರೀಕ್ಷಿತನು ಮಹರ್ಷಿ ವ್ಯಾಸರನ್ನು ಪ್ರಶ್ನಿಸಿದಾಗ ಮಹರ್ಷಿ ವ್ಯಾಸರು ತಿಳಿಸಿದರು, ನಾನು ನಾರದರನ್ನು ಕೇಳಿದೆ "ಹೇ ದೇವರ್ಷಿ! ಈ ಬ್ರಹ್ಮಾಂಡದ ರಚನೆ ಹೇಗೆ ಆಗಿದೆ? ನನ್ನ ಈ ಪ್ರಶ್ನೆಯ ಉತ್ತರವಾಗಿ ನಾರದರು ಹೇಳಿದ್ದೆನೆಂದರೆ, ನಾನು ನನ್ನ ತಂದೆ ಶ್ರೀ ಬ್ರಹ್ಮಾ ರವರಿಗೆ ಕೇಳಿದೆ "ಹೇ ತಂದೆ ಈ ಬ್ರಹ್ಮಾಂಡದ ರಚನೆ ನೀವು ಮಾಡಿದ್ದಿರೊ? ವಿಷ್ಣುವೋ? ಅಥವಾ ಶಿವನೋ? ದಯೆಮಾಡಿ ಸತ್ಯವನ್ನು ತಿಳಿಸಿ?". ಆಗ ಬ್ರಹ್ಮಾ ನಾರದರಿಗೆ ಹೇಳಿದರು ಮಗನೇ, ನನ್ನನ್ನು ನಾನು ಒಂದು ಕಮಲದ ಹೂವಿನ ಮೇಲೆ ಕುಳಿತಿದ್ದನ್ನು ಕಂಡೆ. ನಾನು ಹೇಗೆ ಆ ಜಲರಾಶಿಯ ಮೇಲೆ ಬಂದೆ? ಎಂಬ ಜ್ಞಾನವಿಲ್ಲ. ಒಂದು ಸಾವಿರ ವರ್ಷಗಳ ವರೆಗೆ ಭೂಮಿಯ ಅನ್ವೇಷಣೆ ಮಾಡಿದೆ. ಎಲ್ಲಿ ನೋಡಿದರೂ ನೀರೇ, ನೀರು. ಎಲ್ಲಿಯೂ ನೆಲ ಕಾಣಲಿಲ್ಲ. ಆಗೊಂದು ಆಕಾಶವಾಣಿಯಾಯಿತು. "ತಪಸ್ಸು ಮಾಡು" ಎಂದು ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದೆ. ನಂತರ "ಸೃಷ್ಟಿ ಮಾಡು" ಎಂದು ಆಕಾಶವಾಣಿಯಾಯಿತು. ಅಷ್ಟರಲ್ಲಿ 'ಮಧು ಮತ್ತು ಕೈಟಭ' ಎಂಬ ಇಬ್ಬರು ರಾಕ್ಷಸರು ಬಂದರು. ಅವರ ಭಯದಿಂದ ಕಮಲದ ದಂಟನ್ನು ಹಿಡಿದು ಕೆಳಕ್ಕೆ ಇಳಿದೆ. ಅಲ್ಲಿ ಭಗವಂತ ವಿಷ್ಣು ಶೇಷ ಶಯ್ಯೆಯಲ್ಲಿ ಅಚೇತನಾಗಿದ್ದರು, ಅವರ ಒಳಗಿಂದ ಒಂದು ಸ್ತ್ರೀ, (ಪ್ರೇತದ ಹಾಗೆ ಪ್ರವಿಷ್ಟ ದುರ್ಗೆ) ಹೊರಬಂದಳು. ಅವಳು

ಆಕಾಶದಲ್ಲಿ ಅಭೂಷಣಗಳನ್ನು ಧರಿಸಿಕೊಂಡು ಇರುವಂತೆ ಕಾಣಿಸಿದಳು. ಆಗ ವಿಷ್ಣುವಿಗೆ ಪ್ರಜ್ಞೆ ಬಂತು. ಆಗ ಅಲ್ಲಿ ಇಬ್ಬರೇ ಇದ್ದೆವು. (ನಾನು ಮತ್ತು ವಿಷ್ಣು) ಅಷ್ಟರಲ್ಲಿ ಅಲ್ಲಿಗೆ ಶಂಕರನೂ ಬಂದನು. ದೇವಿಯು(ದುರ್ಗಾ) ನಮ್ಮನ್ನು ವಿಮಾನದಲ್ಲಿ ಕೂರಿಸಿಕೊಂಡು ಬ್ರಹ್ಮ ಲೋಕಕ್ಕೆ ಕರದುಕೊಂಡು ಹೋದಳು. ಅಲ್ಲಿ ಮತ್ತೊಬ್ಬ ಬ್ರಹ್ಮಾ, ವಿಷ್ಣು, ಶಿವ ಹಾಗೂ ಇನ್ನೊಬ್ಬಳು ದೇವಿಯನ್ನೂ ಕಂಡೆವು. ಅವರನ್ನು ಕಂಡ ವಿಷ್ಣುವು ವಿವೇಕಪೂರ್ಣವಾಗಿ ಈ ಕೆಳಗಿನ ವರ್ಣನೆಯನ್ನು ಮಾಡಿದ. (ಕಾಲ ಬ್ರಹ್ಮನು ಭಗವಾನ್ ವಿಷ್ಣುವಿಗೆ ಚೇತನ ಪ್ರದಾನ ಮಾಡಿದ ಆಗ ಬಾಲ್ಯಕಾಲದ ನೆನಪು ಬಂದಿತು. ಆಗ ಆ ಬಾಲ್ಯದ ಕಥೆಯನ್ನು ಹೇಳಿದ).

ಪುಟ ಸಂಖ್ಯೆ 103ರಲ್ಲಿ ಶ್ರೀವಿಷ್ಣುವು, ಶ್ರೀಬ್ರಹ್ಮಾ ಹಾಗೂ ಶ್ರೀಶಿವನಿಗೆ ಹೇಳಿದ "ಇವಳು ಜಗನ್ಮಾತೆ ಪ್ರಕೃತಿದೇವಿಯಾಗಿರುವಳು, ನಮ್ಮ ಮೂವರ ತಾಯಿ. ನಾನು ಚಿಕ್ಕ ಬಾಲಕನಿದ್ದಾಗ ಈ ದೇವಿಯನ್ನು ನೋಡಿದ್ದೆ. ಇವಳು ನನ್ನನ್ನು ತೋಟ್ಟಿಲಲ್ಲಿ ಹಾಕಿ ಆಡಿಸುತ್ತಿದ್ದಳು.

ಮೂರನೇ ಸ್ಕಂದ ದೇವಿಪುರಾಣ ಪುಟ ಸಂಖ್ಯೆ 105ರಲ್ಲಿ ಶ್ರೀವಿಷ್ಣವು ದೇವಿಯನ್ನು ಸ್ತುತಿ ಮಾಡುತ್ತಾ ಹೇಳಿದ, ದೇವಿ ನೀನು ಶುದ್ಧ ಸ್ವರೂಪಳು, ಈ ಈ ಪ್ರಪಂಚ ನಿನ್ನಿಂದಲೇ ಎದ್ದು ಕಾಣುತ್ತಿದೆ. ನಾನು (ವಿಷ್ಣು), ಬ್ರಹ್ಮಾ ಹಾಗು ಶಿವ ನಿನ್ನ ಕೃಪೆಯಿಂದಲೇ ವಿದ್ಯಮಾನರಾಗಿದ್ದೇವೆ. ನಮ್ಮ ಅವಿರ್ಭಾವ ಅಂದರೆ ಹುಟ್ಟು, ತಿರೋಭಾವ ಅಂದರೆ ಸಾವು ಆಗುತ್ತಿರುತ್ತದೆ. ಅಂದರೆ ನಾವು ನಾಶಹೊಂದುವವರು. ಕೇವಲ ನೀನೇ ನಿತ್ಯಳು, ನೀನೆ ಜಗತ್ ಜನನಿ ಪ್ರಕೃತಿದೇವಿಯಾಗಿರುವೆ.

ಭಗವಂತ ಶಂಕರ ಹೇಳಿದನು. "ದೇವಿ ಭಗವಂತ ವಿಷ್ಣು ನಿನ್ನಿಂದಲೇ ಉತ್ಪನ್ನರಾಗಿದ್ದಾರೆ. ಅವರನಂತರ ಉತ್ಪನ್ನ ಬ್ರಹ್ಮಾ ಕೂಡ ನಿಮ್ಮ ಬಾಲಕ, ಎಂದ ಮೇಲೆ ನಾನು ತಮೋಗುಣ ಲೀಲೆ ಮಾಡುವ ಶಂಕರ ನಿನ್ನ ಸಂತಾನವಲ್ಲವೇ? ಅಂದರೆ ನನ್ನನ್ನು ಉತ್ಪತ್ತಿ ಮಾಡಿದವಳು ನೀನೆ ಆಗಿರುವೆ."

ವಿಚಾರ ಮಾಡಬೇಕಾದ ಅಂಶ–ಮೇಲಿನ ವಿವರಣೆಗಳಿಂದ ಅರ್ಥವಾದ ಅಂಶವೇನೆಂದರೆ ಬ್ರಹ್ಮಾ, ವಿಷ್ಣು, ಶಿವ ನಾಶವಾಗುವವರು. ಮೃತ್ಯುಂಜಯರಲ್ಲ, ಸರ್ವೇಶ್ವರರೂ ಅಲ್ಲ. ದುರ್ಗೆಯ ಮಕ್ಕಳು. ಕಾಲ ಬ್ರಹ್ಮ–ಸದಾಶಿವ ಇವರ ತಂದೆ.

ಶ್ರೀಮದ್ ದೇವಿಪುರಾಣದ 3ನೇ ಸ್ಕಂದದ ಪುಟ ಸಂಖ್ಯೆ 107ರಲ್ಲಿ ಬ್ರಹ್ಮಾ ಕೇಳಿದ:– ವೇದಗಳಲ್ಲಿ ಹೇಳಿರುವ 'ಬ್ರಹ್ಮ' ತಾವೇಯೋ? ಅಥವಾ ಬೇರೆ ಯಾರಾದರೂ ಪ್ರಭು, ಆಗಿರುವರೂ.? ದುರ್ಗಾ ಹೇಳಿದಳು:– ನಾನು ಮತ್ತು ಬ್ರಹ್ಮ ಇಬ್ಬರೂ ಒಬ್ಬರೇ ಅನ್ಯರಲ್ಲ. ಮತ್ತೆ ಇದೇ ಸ್ಕಂದದ 6ನೇಯ ಅಧ್ಯಾಯ ಪುಟ ಸಂಖ್ಯೆ 111ರಲ್ಲಿ. ದೇವಿ ಹೇಳಿದಳು:– ಈಗ ನನ್ನ ಕಾರ್ಯ ಸಿದ್ಧಿಗಾಗಿ, ವಿಮಾನದಲ್ಲಿ ಕುಳಿತು ಶೀಘ್ರವಾಗಿ ಹೊರಡಿರಿ ಏನಾದರೂ ಕಠಿಣತೆ ಎದುರಾದರೆ ನನ್ನನ್ನು ಸ್ಮರಿಸಿರಿ, ಆಗ ನಾನು ನಿಮ್ಮ ಮುಂದೆ ಬರುವೆ. ದೇವತೆಗಳೇ, ನೀವು ನನ್ನ ಮತ್ತು ಬ್ರಹ್ಮನ ಸ್ಮರಣೆ ಸದಾ ಮಾಡುತ್ತಿರಬೇಕು. ನಮ್ಮಿಬ್ಬರ ಸ್ಮರಣೆ ಮಾಡಿದರೆ, ನಿಮ್ಮ ಕಾರ್ಯಗಳು ಸಿದ್ಧವಾಗಲು ಸ್ವಲ್ಪವೂ ಸಂದೇಹ ಇರಲ್ಲಾ.

ಮೇಲಿನ ಹೇಳಿಕೆಗಳಿಂದ(ವ್ಯಾಖ್ಯೆ) ದುರ್ಗಾ ಮತ್ತು ಕಾಲ ಬ್ರಹ್ಮನೇ ಮೂರೂ ದೇವರುಗಳ (ಬ್ರಹ್ಮಾ,ವಿಷ್ಣು,ಶಿವ) ತಾಯಿ–ತಂದೆಯರೆಂದು ಸ್ಪಷ್ಟವಾಯ್ತು. ಬ್ರಹ್ಮಾ, ವಿಷ್ಣು, ಶಿವ ನಾಶಹೊಂದುವವರಾಗಿದ್ದಾರೆ. ಪೂರ್ಣ ಶಕ್ತಿಯುತರಲ್ಲ.

ಮೂರೂ ದೇವರುಗಳ (ಶ್ರೀಬ್ರಹ್ಮಾ, ಶ್ರೀವಿಷ್ಣು, ಶ್ರೀಶಿವ) ಮದುವೆಯನ್ನು ದುರ್ಗಾ (ಪ್ರಕೃತಿ ದೇವಿ) ಮಾಡಿಸಿದಳು. ಪ್ರಮಾಣಕ್ಕಾಗಿ 3ನೇ ಸ್ಕಂದದ ಪುಟ ಸಂಖ್ಯೆ 109–110ರಲ್ಲಿ ನೋಡಿರಿ.

ಗೀತೆಯ 7ನೇ ಅಧ್ಯಾಯದ 12ನೇ ಶ್ಲೋಕ:–

ಯೆ, ಚ, ಏವ, ಸಾತ್ವಿಕಾಃ, ಭಾವಾಃ, ರಾಜಸಾಃ, ತಾಮಸಾಃ, ಚ, ಯೆ, ।
ಮತಃ, ಏವ, ಇತಿ, ತಾನ, ವಿದ್ಧಿ, ನ, ತು, ಅಹಮ್, ತೇಷು, ತೆ, ಮು ॥

ಅನುವಾದ:– (ಚ) ಮತ್ತು (ಏವ) ಸಹ (ಯೆ) ಯಾವ (ಸಾತ್ವಿಕಾಃ) ಸತೋಗುಣ ವಿಷ್ಣುವಿನಿಂದ ಸ್ಥಿತಿ (ಭಾವಾಃ) ಭಾವವಾಗಿದೆ ಮತ್ತು (ಯೆ) ಯಾವ (ರಾಜಸಾಃ) ರಜೋಗುಣ ಬ್ರಹ್ಮನಿಂದ ಉತ್ಪತ್ತಿ (ಚ) ಹಾಗೂ (ತಾಮಸಾಃ) ತಮೋಗುಣ ಶಿವನಿಂದ ಸಂಹಾರವಾಗುತ್ತದೆ (ತಾನ್) ಅದನ್ನೆಲ್ಲಾ ನೀನು (ಮತಃ ಏವ), ನನ್ನ ಮೂಲಕ ಸುನಿಯೋಜಿತವಾಗಿ ನಿಯಮಾನುಸಾರವಾಗಿಯೇ ಆಗಲಿದೆ ಎಂದು (ಇತಿ) ಹೀಗೆ (ವಿಧಿ) ತಿಳಿ (ತು) ಆದರೆ ವಾಸ್ತವದಲ್ಲಿ (ತೇಷು) ಅವರಲ್ಲಿ (ಅಹಮ್) ನಾನು ಮತ್ತು (ತೆ) ಅವರು (ಮಯಿ) ನನಲ್ಲಿ (ನ) ಇಲ್ಲ.

## "ಪವಿತ್ರ ಶಿವ ಮಹಾಪುರಾಣದಲ್ಲಿ ಸೃಷ್ಟಿ ರಚನೆಯ ಪ್ರಮಾಣ"

### (ಕಾಲಬ್ರಹ್ಮ ಹಾಗೂ ದುರ್ಗೆಯಿಂದ ಬ್ರಹ್ಮಾ, ವಿಷ್ಣು ಹಾಗೂ ಶಿವನ ಉತ್ಪತ್ತಿ)

**ಇದರ ಪ್ರಮಾಣವು ಪವಿತ್ರ "ಶ್ರೀಶಿವಪುರಾಣ" ಗೀತಾಪ್ರೆಸ್ ಗೋರಖಪುರದಿಂದ ಪ್ರಕಾಶಿತ, ಹಿಂದಿ ಸಂಪಾದಕರು ಶ್ರೀಹನುಮಾನ್ ಪ್ರಸಾದ್ ಪೋದ್ದಾರ್, ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್, ಇದರ 6ನೇ ಅಧ್ಯಾಯದ ಪ್ರಥಮ ಸೃಷ್ಟಿ ಖಂಡ 'ರುದ್ರ ಸಂಹಿತೆ'ಯ ಪುಟ 81ರಲ್ಲಿ ಹೇಳಿದೆ, ಯಾರು ಮೂರ್ತಿ ರಹಿತವಾದ ಪರಬ್ರಹ್ಮ, ಅವರ ಮೂರ್ತಿಯೇ ಭಗವಂತ ಸದಾಶಿವ. ಇವರ ಶರೀರದಿಂದ ಒಂದು ಶಕ್ತಿ ಹೊರಹೊಮ್ಮಿತು. ಆ ಶಕ್ತಿ ಅಂಬಿಕಾ, ಪ್ರಕೃತಿ(ದುರ್ಗಾ) ತ್ರಿದೇವ ಜನನಿ (ಶ್ರೀಬ್ರಹ್ಮಾ, ಶ್ರೀವಿಷ್ಣು, ಶ್ರೀಶಿವನನ್ನು ಉತ್ಪನ್ನಿಸಿದ ತಾಯಿ) ಎಂದು ಕರೆಯಲ್ಪಡುತ್ತಾಳೆ. ಅವಳಿಗೆ ಎಂಟು ಭಜಗಳಿವೆ. ಯಾರು ಸದಾಶಿವನೊ, ಅವನನ್ನು ಶಂಭು, ಮಹೇಶ್ವರ ಎಂದೂ ಸಹ ಕರೆಯುತ್ತಾರೆ.**

**ರುದ್ರ ಸಂಹಿತೆಯ ಪುಟ ಸಂಖ್ಯೆ 82ರಲ್ಲಿ: ಅವನು ತನ್ನ ಎಲ್ಲಾ ಶರೀರಕ್ಕೆ ಭಸ್ಮಲೇಪನ ಮಾಡಿಕೊಂಡಿರುತ್ತಾನೆ. ಆ ಕಾಲ ರೂಪಿ ಬ್ರಹ್ಮನು 'ಶಿವಲೋಕ' ಎಂಬ ಒಂದು ಕ್ಷೇತ್ರದ ನಿರ್ಮಾಣ ಮಾಡಿದನು. ನಂತರ ಇಬ್ಬರೂ ಪತಿ–ಪತ್ನಿಯ ವ್ಯವಹಾರ ಮಾಡಿದರು ಇದರಿಂದ ಒಬ್ಬ ಪುತ್ರ ಹುಟ್ಟಿದ, ಅವನ ಹೆಸರು ವಿಷ್ಣು ಇಡಲಾಯಿತು. ಪುಟ ಸಂಖ್ಯೆ 83ರಲ್ಲಿ. ನಂತರ ರುದ್ರ ಸಂಹಿತೆಯ ಅಧ್ಯಾಯ 7ರ 84ನೇ ಪುಟದಲ್ಲಿ ಬ್ರಹ್ಮಾ ಹೇಳಿದ, "ನನ್ನ ಉತ್ಪತ್ತಿಯು (ಕಾಲ–ಬ್ರಹ್ಮ) ಸದಾಶಿವ ಮತ್ತು ದುರ್ಗೆ (ಪ್ರಕೃತಿ) ಯ ಸಂಯೋಗದಿಂದಲೇ ಅಂದರೆ ಪತಿ–ಪತ್ನಿ ವ್ಯವಹಾರದಿಂದ ಆಯ್ತು. ನನ್ನನ್ನು ನಂತರ ಮೂರ್ಛಿತಗೊಸಿದರು."**

**ನಂತರ ರುದ್ರಸಂಹಿತೆಯ ಅಧ್ಯಾಯ ಸಂಖ್ಯೆ 9 ಪುಟ ಸಂಖ್ಯೆ 90ರಲ್ಲಿ ಬ್ರಹ್ಮಾ, ವಿಷ್ಣು, ಹಾಗೂ ರುದ್ರ ಈ 3 ದೇವರುಗಳಲ್ಲಿ ಗುಣ ಇದೆ. ಆದರೆ ಶಿವ(ಕಾಲ–ಬ್ರಹ್ಮ)ನಿಗೆ ಗುಣಾತೀತ ಎಂದು ಹೇಳಲಾಗಿದೆ.**

**ಇಲ್ಲಿ 4 ವಿಷಯಗಳು ಸ್ಪಷ್ಟವಾದವು ಅಂದರೆ ಸದಾಶಿವ (ಕಾಲಬ್ರಹ್ಮ) ಮತ್ತು ಪ್ರಕೃತಿ (ದುರ್ಗೆ) ಯಿಂದ ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿಯಾಯಿತು. ಈ ಮೂರು ಭಗವಂತರ ( ಶ್ರೀ ಬ್ರಹ್ಮಾ, ಶ್ರೀ ವಿಷ್ಣು ಹಾಗೂ ಶ್ರೀ ಶಿವ) ತಾಯಿ ಶ್ರೀ ದುರ್ಗೆ ಹಾಗೂ ತಂದೆ ಶ್ರೀ ಜ್ಯೋತಿ ನಿರಂಜನ್ ಬ್ರಹ್ಮನಾಗಿದ್ದಾನೆ. ಈ ಮೂವರು ಪ್ರಭು ರಜಗುಣ ಬ್ರಹ್ಮಾ, ಸತಗುಣ ವಿಷ್ಣು, ತಮಗುಣ ಶಿವರಾಗಿದ್ದಾರೆ.**

## "ಪವಿತ್ರ ಭಗವದ್ಗೀತೆಯಲ್ಲಿ ಸೃಷ್ಟಿ ರಚನೆಯ ಪ್ರಮಾಣ"

**ಇದರ ಪ್ರಮಾಣವನ್ನು ಗೀತೆಯ 14ನೇ ಅಧ್ಯಾಯದ 3 ರಿಂದ 5ನೇ ಶ್ಲೋಕಗಳಲ್ಲಿ ನೋಡಬಹುದು. ಕಾಲಬ್ರಹ್ಮ ಹೇಳುತ್ತಾನೆ, ಪ್ರಕೃತಿ ನನ್ನ ಹೆಂಡತಿ. ಬ್ರಹ್ಮನಾದ ನಾನು ಇವಳ ಗಂಡ. ನಮ್ಮಿಬ್ಬರ ಸಂಯೋಗದಿಂದ, ಸಕಲ ಜೀವಾತ್ಮಗಳು ಹಾಗೂ ಮೂರು ಗುಣಯುಕ್ತ (ರಜೋಗುಣ–ಬ್ರಹ್ಮಾ, ಸತೋಗುಣ–ವಿಷ್ಣು, ತಮೋಗುಣ–ಶಿವ ಇವರ) ಉತ್ಪತ್ತಿಯಾಯಿತು. ನಾನು(ಬ್ರಹ್ಮ) ಎಲ್ಲ ಜೀವಾತ್ಮಗಳ ತಂದೆ. ಪ್ರಕೃತಿ(ದುರ್ಗಾ) ಇವರ ತಾಯಿ, ನಾನು ಅವಳ ಗರ್ಭದಲ್ಲಿ ಬೀಜ ಸ್ಥಾಪನೆ**

**ಮಾಡುತ್ತೇನೆ. ಅದರಿಂದ ಎಲ್ಲ ಜೀವಾತ್ಮಗಳ ಉತ್ಪತ್ತಿಯಾಗುತ್ತದೆ. ಪ್ರಕೃತಿಯಿಂದ ಉತ್ಪನ್ನವಾದ ಮೂರೂ ಗುಣಗಳು ಜೀವಿಗಳನ್ನು ಶರೀರದಲ್ಲಿ ಕರ್ಮದ ಆಧಾರದಿಂದ ಕಟ್ಟಿಡುತ್ತಾರೆ. ಇದೇ ಪ್ರಮಾಣವು 15ನೇ ಅಧ್ಯಾಯದ 1 ರಿಂದ 4 ಹಾಗೂ 16–17ನೆಯ ಶ್ಲೋಕಗಳಲ್ಲಿದೆ:–**

**ಭಗವದ್ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕ:–**

ಊರ್ಧ್ವ ಮೂಲಮ್, ಅಧಃ, ಶಾಖಮ್, ಅಶ್ವತ್ಥಮ್, ಪ್ರಾಹುಃ, ಅವ್ಯಯಂ,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ, ತಮ್, ವೇದ, ಸಃ, ವೇದವಿತ್ ॥

ಅನುವಾದ:– (ಊರ್ಧ್ವ ಮೂಲಮ್) ಮೇಲೆ ಪೂರ್ಣ ಪರಮಾತ್ಮ ಆದಿ ಪುರುಷ ಪರಮೇಶ್ವರ ರೂಪಿ ಬೇರು (ಅಧಃ ಶಾಖಮ್) ಕೆಳಗೆ ಮೂರೂ ಗುಣ (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು ಹಾಗೂ ತಮೋಗುಣ ಶಿವ) ರೂಪಿನ ಶಾಖೆಗಳು (ಅವ್ಯಯಂ) ಅವಿನಾಶೀ (ಅಶ್ವತ್ಥಮ್) ವಿಸ್ತಾರವಾದ ಅರಳಿಮರವಿದೆ. (ಯಸ್ಯ) ಅದಕ್ಕೆ (ಛಂದಾಂಸಿ) ವೇದಗಳಲ್ಲಿನ ಛಂಧ (ಭಾಗ) ಗಳಂತೆ, ಪ್ರಪಂಚ ರೂಪಿ ವೃಕ್ಷದ ಭಾಗಗಳಾದ ಚಿಕ್ಕ ಚಿಕ್ಕ ಶಾಖೆಗಳು (ಪರ್ಣಾನಿ) ಎಲೆಗಳು ಇವೆ (ಪ್ರಾಹುಃ) ಎಂದು ಹೇಳಲಾಗಿದೆ. (ತಮ) ಆ ಪ್ರಪಂಚ ರೂಪದ ವೃಕ್ಷವನ್ನು (ಯಃ) ಯಾರು (ವೇದ) ವಿಸ್ತಾರವಾಗಿ ತಿಳಿದಿರುವರೋ, (ಸಃ) ಅವರೇ (ವೇದವಿತ್) ಪೂರ್ಣ ಜ್ಞಾನಿ ಅರ್ಥಾತ್ ತತ್ವದರ್ಶಿಯಾಗಿದ್ದಾರೆ".

**ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕ:–**


ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ, ಗುಣಪ್ರವೃದ್ಧಾಃ, ವಿಷಯ ಪ್ರವಾಲಾಃ
ಅಧಃ, ಚ, ಮೂಲಾನಿ, ಅನುಸಂತತಾನಿ, ಕರ್ಮಾನು ಬಂಧೀನಿ, ಮನುಷ್ಯಲೋಕೆ ॥

ಅನುವಾದ:– (ತಸ್ಯ) ಆ ವೃಕ್ಷದ (ಅಧಃ) ಕೆಳಗೆ (ಚ) ಮತ್ತು (ಊರ್ಧ್ವಮ್) ಮೇಲೆ (ಗುಣಪ್ರವೃದ್ಧಾಃ) ಮೂರು ಗುಣಗಳ ಬ್ರಹ್ಮಾ–ರಜೋಗುಣ, ವಿಷ್ಣು–ಸತೋಗುಣ, ಶಿವ–ತಮೋಗುಣ ರೂಪದಲ್ಲಿ (ಪ್ರಸೃತಾ) ಹರಡಿದ (ವಿಷಯ ಪ್ರವಾಲಾಃ) ವಿಕಾರ–ಕಾಮ–ಕ್ರೋಧ, ಮೋಹ, ಲೋಭ, ಅಹಂಕಾರ ರೂಪಿನ ಚಿಗುರು (ಶಾಖಾಃ) ಶಾಖೆ (ಬ್ರಹ್ಮಾ–ವಿಷ್ಣು–ಶಿವ) ಗಳು (ಕರ್ಮಾನುಬಂಧೀನಿ) ಜೀವಿಗಳನ್ನು ಕರ್ಮಗಳಲ್ಲಿ ಕಟ್ಟಿಹಾಕವ (ಮೂಲಾನಿ) ಬೇರು ಅಂದರೆ ಮುಖ್ಯ ಕಾರಣವಾಗಿವೆ (ಚ) ಹಾಗೂ (ಮನುಷ್ಯಲೋಕೆ) ಭೂಲೋಕದಲ್ಲಿ ಅಂದರೆ ಪೃಥ್ವಿಲೋಕದಲ್ಲಿ (ಅಧಃ) ಕೆಳಗೆ ನರಕ, 84 ಲಕ್ಷ ಯೋನಿಗಳಲ್ಲಿ (ಊರ್ಧ್ವಮ್) ಮೇಲೆ ಸ್ವರ್ಗ ಲೋಕ ಮೊದಲಾದವುಗಳಲ್ಲಿ (ಅನುಸಂತತಾನಿ) ವ್ಯವಸ್ಥೆ ಮಾಡಲಾಗಿದೆ.

**ಗೀತೆಯ 15ನೇ ಅಧ್ಯಾಯದ 3ನೇ ಶ್ಲೋಕ:–**

ನ, ರೂಪಮ್, ಅಸ್ಯ, ಇಹ, ತಥಾ, ಉಪಲಭ್ಯತೆ, ನ,ಅಂತಃ, ನ, ಚ, ಆದಿಃ ನ, ಚ,
ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್, ಸುವಿರೂಢಮೂಲಮ್, ಅಸಂಗಶಸ್ತ್ರೇಣ, ದೃಢೇನ ಛಿತ್ವಾ॥

ಅನುವಾದ:– (ಅಸ್ಯ) ಈ ರಚನೆಯ (ನ, ಆದಿಃ) ಪ್ರಾರಂಭವಾಗಲಿ (ಚ) ಮತ್ತು (ನ, ಅಂತಃ) ಅಂತ್ಯವಾಗಲಿ ಇಲ್ಲ (ತಥಾ) ಹಾಗೆಯೇ (ರುಪಮ್) ಸ್ವರೂಪವಾಗಲಿ (ಉಪಲಭ್ಯತೆ) ಸಿಗುವುದಿಲ್ಲ, (ಚ) ಹಾಗೂ (ಇಹ) ಇಲ್ಲಿ ವಿಚಾರ ಕಾಲದಲ್ಲಿ ಅಂದರೆ ನನ್ನ ಮೂಲಕ ಕೊಡುತ್ತಿರುವ ಈ ಗೀತೆಯ ಜ್ಞಾನದಲ್ಲಿ ಪೂರ್ಣಮಾಹಿತಿ ನನಗೂ ಇಲ್ಲ (ಸಂಪ್ರತಿಷ್ಠಾ) ಏಕೆಂದರೆ ಎಲ್ಲ ಬ್ರಹ್ಮಾಂಡಗಳ ರಚನೆಯು ಪೂರ್ಣವಾಗಿ ಹೇಗಿದೆ ಎಂದು ನನಗೆ ಗೊತ್ತಿಲ್ಲ (ಏನಮ್) ಈ (ಸುವಿರೂಢಮೂಲ) ಉತ್ತಮರೀತಿಯಲ್ಲಿ ಸ್ಥಿರವಾಗಿರುವ (ಅಶ್ವತ್ಥಮ್) ಅಶ್ವತ್ಥವೃಕ್ಷರೂಪದ ಪ್ರಪಂಚ ರೂಪಿ ವೃಕ್ಷದ ಜ್ಞಾನವನ್ನು (ಅಸಂಗಶಸ್ತ್ರೇಣ)ಪೂರ್ಣ ಜ್ಞಾನರೂಪಿ (ದೃಢೇನ್) ದೃಢ ಸೂಕ್ಷ್ಮ ವೇದ ಅಂದರೆ ತತ್ವಜ್ಞಾನದ ಮೂಲಕ ತಿಳಿದು (ಛಿತ್ವಾ) ಕತ್ತರಿಸಿಹಾಕಬೇಕು ಅಂದರೆ ನಿರಂಜನನ ಭಕ್ತಿಯನ್ನು ಕ್ಷಣಿಕ ಸುಖ ಎಂದು ತಿಳಿದು ಬ್ರಹ್ಮಾ, ವಿಷ್ಣು, ಶಿವ, ದುರ್ಗಾ, ಬ್ರಹ್ಮ


ಮೇಲೆ ಬೇರು ಕೆಳಗೆ ಶಾಖೆಯುಳ್ಳ ಹಿಮ್ಮುಖವಾಗಿ ತೂಗಾಡುತ್ತಿರುವ
ಸಂಸಾರ (ಜಗತ್ತು) ರೂಪಿ ಮರದ ಚಿತ್ರ
'ಪೂರ್ಣ ಬ್ರಹ್ಮ ಕಬೀರ್ ಪರಮೇಶ್ವರ'
ಪರಮ
ಅಕ್ಷರ ಬ್ರಹ್ಮ
ಮೂಲ ಬೇರು
ಗೀತೆ ಅಧ್ಯಾಯ ಸ. 15
ಶ್ಲೋಕ ಸ. 1 ರಿಂದ 4 ಹಾಗೂ
16-17 ರ ತಾತ್ಪರ್ಯ
ಕಾಂಡ
ಅಕ್ಷರ
ಪುರುಷ
(ಪರಬ್ರಹ್ಮ)
ಕಾಂಡ = [ಅಕ್ಷರ ಬ್ರಹ್ಮ ಅಂದರೆ ಅಕ್ಷರ ಪುರುಷ (ಪರಬ್ರಹ್ಮ)]
ಕೊಂಬೆ = [ಕ್ಷರ ಬ್ರಹ್ಮ ಅಂದರೆ ಕ್ಷರ ಪುರುಷ (ಕಾಲಬ್ರಹ್ಮ)]
ಕೊಂಬೆ
(ಡಾರ್)
ಬ್ರಹ್ಮ (ಕ್ಷರ ಪುರುಷ)
ಕಬೀರ್, ಅಕ್ಷರ್ ಪುರುಷ್ ಏಕ್ ಪೇಡ್ ಹೈ, ನಿರಂಜನ್ ವಾಕೀ ಡಾರ್ |
ತೀನೋಂ ದೇವಾ ಶಾಖಾ ಹೈಂ, ಪಾತ್ ರೂಪ್ ಸಂಸಾರ್ ||
ಶಿವ (ತಮಗುಣ)
ಬ್ರಹ್ಮಾ (ರಜಗುಣ)
ವಿಷ್ಣು (ಸತಗುಣ)
ಶಾಖೆಗಳು
ಎಲೆಗಳ ರೂಪದ
ವಿಶ್ವ (ಸಂಸಾರ)

ಮತ್ತು ಪರಬ್ರಹ್ಮನಿಗಿಂತ ಮೇಲೆ ಪೂರ್ಣಬ್ರಹ್ಮನನ್ನು ಹುಡುಕಬೇಕು.

**ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕ:–**

ತತಃ, ಪದಂ, ತತ್, ಪರಿಮಾರ್ಗಿತವ್ಯಮ್, ಯಸ್ಮಿನ್, ಗತಾಃ, ನ, ನಿವರ್ತಂತಿ, ಭೂಯಃ, ತಮ, ಏವ, ಚ, ಆದ್ಯಮ್, ಪುರುಷಮ್, ಪ್ರಪಧ್ಯೇ, ಯತಃ, ಪ್ರವೃತ್ತಿಃ, ಪ್ರಸೃತಾ, ಪುರಾಣಿ।

ಅನುವಾದ:– ಯಾವಾಗ ತತ್ವದರ್ಶಿ ಸಂತನು ಸಿಗುವನೋ, (ತತಃ) ತದನಂತರ (ತತ್) ಆ ಪರಮಾತ್ಮನ (ಪದಮ್) ಪದ ಸ್ಥಾನ ಅಂದರೆ ಸತ್ಯಲೋಕವನ್ನು (ಪರಿಮಾರ್ಗಿತವ್ಯಮ್) ಸರಿಯಾದ ರೀತಿಯಲ್ಲಿ ಹುಡುಕಬೇಕು. (ಯಸ್ಮಿನ್) ಅಲ್ಲಿ (ಗತಾಃ) ಹೋಗುವುದರಿಂದ ಸಾಧಕನು (ಭೂಯಃ) ಪುನಃ (ನ, ನಿವರ್ತಂತಿ) ಮರಳಿ ಈ ಪ್ರಪಂಚಕ್ಕೆ ಬರುವುದಿಲ್ಲ, (ಚ) ಮತ್ತು (ಯತಃ) ಯಾವ ಪರಮಾತ್ಮ ಪರಮ ಅಕ್ಷರ ಬ್ರಹ್ಮನಿಂದ (ಪುರಾಣೀ) ಮೊದಲಿನ (ಪ್ರವೃತಿಃ) ರಚನೆ–ಸೃಷ್ಟಿ (ಪ್ರಸ್ತುತಾ) ಉತ್ಪನ್ನವಾಗಿದೆ (ತಮ್) ಅಜ್ಞಾತ (ಆಧ್ಯಮ್) ಆದಿ ಯಮ ಅಂದರೆ ನಾನು ಕಾಲ ನಿರಂಜನ (ಪುರುಷಮ್) ಪೂರ್ಣ ಪರಮಾತ್ಮ (ಏವ) ನದೇ (ಪ್ರಪದ್ಯೈ) ಶರಣು ಹೊಂದಿದ್ದೇನೆ ಹಾಗೂ ಅವನನ್ನೇ ಪೂಜಿಸುತ್ತೇನೆ.

**ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕ:–**

ದ್ವೌ, ಇಮೌ, ಪುರಷೌ, ಲೋಕೇ, ಕ್ಷರಃ, ಚ, ಅಕ್ಷರಃ, ಏವ, ಚ,
ಕ್ಷರಃ, ಸರ್ವಾಣಿ, ಭೂತಾನಿ, ಕೂಟಸ್ಥಃ, ಅಕ್ಷರಃ, ಉಚ್ಯತೇ ॥ 16 ॥

ಅನುವಾದ:– (ಲೋಕೇ) ಈ ಪ್ರಪಂಚದಲ್ಲಿ (ದ್ವೌ) ಎರಡು ಪ್ರಕಾರದ (ಕ್ಷರಃ) ನಾಶವಾಗುವ, (ಚ) ಮತ್ತು (ಅಕ್ಷರಃ) ಅವಿನಾಶಿ (ಪುರುಷೌ) ಭಗವಂತ ಇದ್ದಾರೆ (ಏವ) ಈ ಪ್ರಕಾರ (ಇಮೌ) ಈ ಇಬ್ಬರೂ ಪ್ರಭುಗಳ ಲೋಕಗಳಲ್ಲಿ (ಸರ್ವಾಣಿ) ಸಂಪೂರ್ಣ (ಭೂತಾನಿ) ಜೀವಿಗಳ ಶರೀರವು (ಕ್ಷರಃ) ನಾಶವಾಗುತ್ತದೆ. (ಚ) ಮತ್ತು (ಕೂಟಸ್ಥಃ) ಜೀವಾತ್ಮಗಳು (ಅಕ್ಷರ) ಅವಿನಾಶೀ (ಉಚ್ಯತೆ) ಯಾಗಿರುತ್ತವೆ ಎಂದು ಹೇಳುತ್ತಾರೆ.

**ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕ:–**

ಉತ್ತಮಃ ಪುರಷಃ ತು ಅನ್ಯಃ, ಪರಮಾತ್ಮಾ, ಇತಿ, ಉದಾಹೃತಃ
ಯಃ, ಲೋಕತ್ರಯಮ್, ಆವಿಶ್ಯ, ಬಿಭರ್ತಿ, ಅವ್ಯಯಃ, ಈಶ್ವರಃ ॥ 17 ॥

ಅನುವಾದಃ– (ಉತ್ತಮಃ) ಉತ್ತಮ (ಪುರಷಃ) ಪ್ರಭು (ತು,) ವಂತು (ಅನ್ಯಃ) ಮೇಲಿನ ಕ್ಷರ ಪುರುಷ–ಅಕ್ಷರ ಪುರುಷ ಈ ಇಬ್ಬರಿಗಿಂತ ಬೇರೆಯೇ ಇದ್ದಾನೆ (ಇತಿ) ಅವನನ್ನು ವಾಸ್ತವದಲ್ಲಿ (ಪರಮಾತ್ಮಾ) ಪರಮಾತ್ಮಾ (ಉದಾಹೃತಃ) ಎನ್ನಲಾಗಿದೆ (ಯಃ) ಅವನು (ಲೋಕತ್ರಮಂ) ಮೂರೂ ಲೋಕಗಳಲ್ಲಿ (ಆವಿಷ್ಯ) ಪ್ರವೇಶಮಾಡಿ (ಭಿಬರ್ತಿ) ಎಲ್ಲರ ಧಾರಣೆ ಪೋಷಣೆ ಮಾಡುತ್ತಾನೆ ಹಾಗು (ಅವ್ಯಯಃ) ಅವಿನಾಶೀ (ಈಶ್ವರಃ) ಈಶ್ವರ (ಎಲ್ಲ ಪ್ರಭುಗಳಲ್ಲಿ ಶ್ರೇಷ್ಠ ಅಂದರೆ ಸಮರ್ಥ ಪ್ರಭು) ಎಂದು ಹೇಳಲಾಗಿದೆ.

**ಭಾವಾರ್ಥ:– ಗೀತೆ ಜ್ಞಾನದಾತ ಪ್ರಭು ಕೇವಲ ಇಷ್ಟೆ ಹೇಳಿದ್ದಾನೆ. ಅಂದ್ರೆ "ಈ ಪ್ರಪಂಚವು ತಲೆಕೆಳಗಾಗಿ ನೇತಾಡುವ ವೃಕ್ಷವಿದ್ದಂತೆ ಎಂದು ತಿಳಿ" ಮೇಲೆ ಬೇರು ಪೂರ್ಣ ಪರಮಾತ್ಮ, ಕೆಳಗೆ ರೆಂಬೆ–ಕೊಂಬೆಗಳು ಇತ್ಯಾದಿ ಬೇರೆ ಭಾಗಗಳೆಂದು ತಿಳಿಯಿರಿ, ಈ ಪ್ರಪಂಚ ರೂಪಿ ವೃಕ್ಷದ ಪ್ರತಿಯೊಂದು ಬೇರೆ ಬೇರೆ ಭಾಗಗಳ ಬಗ್ಗೆ ಯಾವ ಸಂತ ತಿಳಿದಿರುವರೋ, ಅವರೇ ತತ್ವದರ್ಶಿ ಸಂತರು. ಅವರ ವಿಷಯದಲ್ಲಿ ಗೀತೆಯ ಅಧ್ಯಾಯ 4ರ 34ನೇ ಶ್ಲೋಕದಲ್ಲಿ ಹೇಳಿದ್ದಾನೆ. ಗೀತೆಯ 15ನೇ ಅಧ್ಯಾಯದ 2–3ನೇ ಶ್ಲೋಕಗಳಲ್ಲಿ ಮೂರು ಗುಣ ರೂಪಿ ಶಾಖೆಗಳಿವೆ ಎಂದು ಮಾತ್ರ ಹೇಳಲಾಗಿದೆ. ಇಲ್ಲಿ ವಿಚರಕಾಲದಲ್ಲಿ ಅಂದರೆ ಗೀತೆಯಲ್ಲಿ ನಿಮಗೆ ನಾನು (ಗೀತೆಯ ಜ್ಞಾನದಾತ) ಪೂರ್ಣ ಮಾಹಿತಿ ಕೊಡಲು ಸಾಧ್ಯವಿಲ್ಲ. ಏಕೆಂದರೆ ನನಗೆ ಈ ಪ್ರಪಂಚದ ರಚನೆಯ ಆದಿ ಮತ್ತು ಅಂತ್ಯದ ಜ್ಞಾನವಿಲ್ಲ. ಅದಕ್ಕಾಗಿ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕದಲ್ಲಿ ಯಾರೋ**

ತತ್ವದರ್ಶಿ ಸಂತನಿಂದ ಆ ಪೂರ್ಣ ಪರಮಾತ್ಮನ ಜ್ಞಾನ ತಿಳಿಯಿರಿ ಎಂದು ಹೇಳಲಾಗಿದೆ. ಈ ಗೀತೆಯ ಅಧ್ಯಾಯ 15ರ 1ನೇ ಶ್ಲೋಕದಲ್ಲಿ ಆ ತತ್ವದರ್ಶಿ ಸಂತನ ಪರಿಚಯ ಹೇಳಲಾಗಿದೆ ಅಂದರೆ ಈ ಪ್ರಪಂಚ ರೂಪೀ ವೃಕ್ಷದ ಪ್ರತ್ಯೇಕ ಭಾಗದ ಜ್ಞಾನ ನೀಡುವನು. ಅವನಿಗೇ ಕೇಳಿ. ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿದ್ದಾನೆ. ಆ ಸಂತ ದೊರೆತ ನಂತರ ಆ ಪರಮಪದ ಪರಮೇಶ್ವರನ ಹುಡುಕಾಟ ಮಾಡಬೇಕು ಅಂದರೆ ಆ ತತ್ವದರ್ಶಿ ಸಂತ ಹೇಳಿದ ಅನುಸಾರ ಸಾಧನೆಮಾಡಿ, ಅದರಿಂದ ಪೂರ್ಣ ಮೋಕ್ಷ ಪ್ರಾಪ್ತವಾಗುವುದು.

ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕಗಳಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ 3 ಪ್ರಭುಗಳಿದ್ದಾರೆ. ಒಬ್ಬ ಕ್ಷರಪುರುಷ(ಬ್ರಹ್ಮ) 2ನೆಯವನು ಅಕ್ಷರ ಪುರುಷ (ಪರಬ್ರಹ್ಮ) 3ನೆಯವನು ಪರಮ ಅಕ್ಷರ ಪುರುಷ(ಪೂರ್ಣ ಬ್ರಹ್ಮ). ಕ್ಷರಪುರುಷ ಮತ್ತು ಅಕ್ಷರ ಪುರುಷ ವಾಸ್ತವದಲ್ಲಿ ಅವಿನಾಶಿ ಅಲ್ಲ. ಆ ಅವಿನಾಶಿ ಪರಮಾತ್ಮಾನು ಇವರಿಬ್ಬರಿಗಿಂತ ಬೇರೆ ಇದ್ದಾನೆ. ಅವನೇ ಎಲ್ಲಾ ಲೋಕಗಳಲ್ಲಿ ಪ್ರವೇಶಿಸಿ ಎಲ್ಲರ ಧಾರಣೆ–ಪೋಷಣೆ ಮಾಡುತ್ತಾನೆ.

ಮೇಲೆ ಹೇಳಿರುವ ಗೀತೆಯ 15ನೇ ಅಧ್ಯಾಯದ 1ರಿಂದ 4ನೇ ಹಾಗೂ 16–17ನೇ ಶ್ಲೋಕಗಳಲ್ಲಿ ಪ್ರಮಾಣಿತವಾಯಿತು ತಲೆಕೆಳಗಾಗಿರುವ ಪ್ರಪಂಚ ರೂಪೀ ವೃಕ್ಷದ ಬೇರು "ಪರಮ ಅಕ್ಷರ ಬ್ರಹ್ಮ" ಅಂದರೆ ಪೂರ್ಣ ಬ್ರಹ್ಮನು, ಅವನಿಂದಲೇ ಪೂರ್ತಿ ವೃಕ್ಷದ ಪಾಲನೆ ಆಗುತ್ತದೆ. ಯಾವ ಭಾಗ ಭೂಮಿಯಿಂದ ತಕ್ಷಣ ಕಾಣುವದು ಅದು ಕಾಂಡ ಇರುತ್ತದೆ ಅದನ್ನು ಅಕ್ಷರ ಪುರಷ ಅರ್ಥಾತ್ ಪರಬ್ರಹ್ಮ ಎಂದು ತಿಳಿಯಿರಿ. ಆ ಕಾಂಡದಿಂದ ಹೊರಬರುವ ಬೇರೆ ದಪ್ಪ ಕೊಂಬೆ ಇದೆ. ಅದರಲ್ಲಿನ ಒಂದು ಕೊಂಬೆಯನ್ನು ಬ್ರಹ್ಮ ಅರ್ಥಾತ್ ಕ್ಷರ ಪುರಷ ಎಂದು ತಿಳಿಯಿರಿ, ಅದೇ ಕೊಂಬೆಯಿಂದ 3 ಶಾಖೆಗಳು ಬರುತ್ತವೆ. ಅವುಗಳನ್ನು ಬ್ರಹ್ಮಾ, ವಿಷ್ಣು, ಮಹೇಶ್ವರ ಎಂದು ತಿಳಿಯಿರಿ. ಶಾಖೆಯಲ್ಲಿನ ಎಲೆಗಳನ್ನು ಪ್ರಪಂಚದ ಪ್ರಾಣಿಗಳೆಂದು ತಿಳಿಯಿರಿ. ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕಗಳಲ್ಲಿ ಸ್ಪಷ್ಟವಾಗಿದೆ–ಕ್ಷರಪುರುಷ (ಬ್ರಹ್ಮ), ಅಕ್ಷರ ಪುರುಷ (ಪರಬ್ರಹ್ಮ) ಇವರ ಎರಡೂ ಲೋಕಗಳಲ್ಲಿ ಎಷ್ಟು ಜೀವಿಳಿವೆಯೋ, ಅವುಗಳ ಸ್ಥೂಲಶರೀರ ನಾಶವುಳ್ಳದ್ದಾಗಿದೆ. ಅದರಲ್ಲಿನ ಜೀವಾತ್ಮ (ಸೂಕ್ಷ್ಮ ಶರೀರ) ಅವಿನಾಶಿಯಾಗಿದೆ. ಕ್ಷರ–ಅಕ್ಷರ ಇಬ್ಬರು ಪ್ರಭುಗಳ ಲೋಕದಲ್ಲಿನ ಸಕಲ ಜೀವಿಗಳು, ನಾಶವಾಗುವಂತಹವು. ಅಕ್ಷರ ಪುರುಷನನ್ನು ಅವಿನಾಶೀ ಎಂದು ಹೇಳಿದ್ದಾರೆ. ಆದರೆ ಅವಿನಾಶಿಯಲ್ಲ, ಅವಿನಾಶಿ ಪರಮಾತ್ಮಾ ಬೇರೆಯೇ ಇದ್ದಾನೆ. ಅವನು 3 ಲೋಕಗಳಲ್ಲಿ ಪ್ರವೇಶ ಮಾಡುತ್ತಾನೆ. ಸಕಲ ಜೀವಿಗಳ ಪಾಲನೆ ಪೋಷಣೆ ಮಾಡುತ್ತಾನೆ. ಮೇಲಿನ ವಿವರಣೆಯಲ್ಲಿ ಮೂವರು ಪ್ರಭುಗಳ ಬೇರೆ–ಬೇರೆ ವಿವರಣೆ ಕೊಟ್ಟಿದೆ.

## "ಪವಿತ್ರ ಬೈಬಲ್ ಹಾಗೂ ಪವಿತ್ರ ಕುರಾನ್ ಶರೀಫ್‌ನಲ್ಲಿ ಸೃಷ್ಟಿ ರಚನೆಯ ಪ್ರಮಾಣ"

ಇದರ ಪ್ರಮಾಣವು ಪವಿತ್ರ ಬೈಬ್‌ಲ್ ಹಾಗೂ ಪವಿತ್ರ ಕುರಾನ್ ಶರೀಫ್‌ನಲ್ಲೂ ಇದೆ.

ಕುರಾನ್ ಶರೀಫ್‌ನಲ್ಲಿ ಪವಿತ್ರ ಬೈಬಲ್‌ನ ಜ್ಞಾನವೂ ಇದೆ. ಆದ್ದರಿಂದ ಈ ಎರಡೂ ಪವಿತ್ರ ಸದ್ ಗ್ರಂಥಗಳು ಸೇರಿ ಪ್ರಮಾಣಿತಗೊಳಿಸಿವೆ. ಯಾರು ಮತ್ತು ಹೇಗೆ ಸೃಷ್ಟಿಯ ರಚನೆ ಮಾಡಿದರು ಹಾಗು ಅವರ ವಾಸ್ತವಿಕ ಹೆಸರೇನು?

**ಪವಿತ್ರ ಬೈಬಲ್ (ಉತ್ಪತ್ತಿಗ್ರಂಥ ಪುಟ ಸಂಖ್ಯೆ 2 ರಲ್ಲಿ ಅ. 1:20– 2:5 ರಲ್ಲಿ)**

**6ನೇಯ ದಿನ:– ಪ್ರಾಣಿ ಮತ್ತು ಮನುಷ್ಯ:–**

ಬೇರೆ ಪ್ರಾಣಿಗಳ ರಚನೆ ಮಾಡಿ (26). ನಂತರ ಪರಮೇಶ್ವರನು ಹೇಳಿದನು, ಮನುಷ್ಯರನ್ನು ನಮ್ಮ ಸ್ವರೂಪದಂತೆಯೇ ನಮ್ಮ ಸಮಾನತೆಯಲ್ಲಿ ಮಾಡೋಣ. ಅವರು ಬೇರೆ ಎಲ್ಲ ಪ್ರಾಣಿಗಳನ್ನು ವಶದಲ್ಲಿ ಇರಿಸುವರು (27). ಅಗ ಪರಮೇಶ್ವರ ತನ್ನ ಸ್ವರೂಪದಂತೆಯೇ ಮನುಷ್ಯರನ್ನು ಉತ್ಪನ್ನ ಮಾಡಿದನು. ನರ ಮತ್ತು ನಾರಿ ಉತ್ಪತ್ತಿ ಮಾಡಿ ಮನುಷ್ಯರ ಸೃಷ್ಟಿ ಮಾಡಿದನು.

(29). ಪ್ರಭುವು ಮನುಷ್ಯನಿಗೆ ಆಹಾರಕ್ಕಾಗಿ ಬಹಳ ಬೀಜಗಳುಳ್ಳ ಚಿಕ್ಕ ಮರಗಳು ಹಾಗೂ ಬೀಜಗಳಿಂದ ಕೂಡಿದ ಫಲಗಳನ್ನು ಉತ್ಪತ್ತಿ ಮಾಡಿದ. (ಮಾಂಸ ತಿನ್ನಲು ಹೇಳಲಿಲ್ಲ)

**7ನೇಯ ದಿನ:– ವಿಶ್ರಾಮದ ದಿನ:–**

ಪರಮೇಶ್ವರನು ಆರು ದಿನಗಳಲ್ಲಿ ಸರ್ವ ಸೃಷ್ಟಿಯ ರಚನೆ ಮಾಡಿ, ಏಳನೇ ದಿನ ವಿಶ್ರಾಂತಿ ಪಡೆದನು.

ಪವಿತ್ರ ಬೈಬಲ್ ಸ್ಪಷ್ಟಪಡಿಸಿತು ಪರಮಾತ್ಮನು ಮಾನವ ಸದೃಶ್ಯ ಸಶರೀರವುಳ್ಳವನಾಗಿದ್ದಾನೆ. ಅವನು ಆರು ದಿನಗಳಲ್ಲಿ ಸಂಪೂರ್ಣ ಸೃಷ್ಟಿಯ ರಚನೆ ಮಾಡಿದನು. ನಂತರ ಏಳನೇ ದಿನ ವಿಶ್ರಾಂತಿ ಪಡೆದನು.

**"ಪವಿತ್ರ ಕುರಾನ್ ಶರೀಫ್ (ಸುರತ್ ಫುರ್ಕಾನಿ 25, ಆಯತ್ ಸಂಖ್ಯೆ 52, 58, 59)**

ಆಯತ 52:– ಫಲಾ ತುತಿಅಲ್–ಕಾಫಿರನ್ ವ ಜಹಿದಹುಮ್ ಬಿಹೀ ಜಿಹಾದನ್ ಕಬೀರಾ (ಕಬೀರನ್) ॥52॥

**ಇದರ ಭಾವಾರ್ಥ ಹೀಗಿದೆ:– ಹಜರತ್ ಮಹಮ್ಮದ್‌ರವರ ಖುದಾ(ಕಾಲ ಪ್ರಭು) ಹೇಳುತ್ತಿದ್ದಾನೆ. ಹೇ ಪೈಗಂಬರ್ ನೀವು ಕಾಫಿರರ (ಯಾರು ಒಬ್ಬ ಪ್ರಭುವಿನ ಭಕ್ತಿಯನ್ನು ತ್ಯಜಿಸಿ, ಅನ್ಯ ದೇವಿ–ದೇವತೆಗಳ ಹಾಗೂ ಮೂರ್ತಿ, ಮಕಬರಾ ಮುಂತಾದವುಗಳ ಪೂಜೆ ಮಾಡುತ್ತಾರೆ) ಮಾತನ್ನು ನಂಬಬೇಡಿ. ಏಕೆಂದರೆ ಅವರು ಕಬೀರರನ್ನು ಪೂರ್ಣ ಪರಮಾತ್ಮ ಎಂದು ಒಪ್ಪುವುದಿಲ್ಲ. ನೀವು ನನ್ನಿಂದ ಕೊಡಲಾಗಿರುವ ಕುರಾನಿನ ಜ್ಞಾನದ ಆಧಾರದಲ್ಲಿ ದೃಢವಾಗಿರಿ. ಕಬೀರರೇ ಪೂರ್ಣ ಪ್ರಭುವಾಗಿದ್ದಾರೆ. ಹಾಗೂ ಕಬೀರ್ ಅಲ್ಲಾಹನಿಗಾಗಿ ಸಂಘರ್ಷ ಮಾಡಿ (ಜಗಳವಾಡಬೇಡಿ) ಅಂದರೆ ದೃಡವಾಗಿರು.**

ಆಯತ 58:– ವ ತವಕ್ಕಲ್ ಅಲಲ್–ಹರಿಲ್ಲಜೀ ಲಾ ಯಮೂತು ವ ಸಬ್ಬಿಹ್ ಬಿಹಮ್‌ದಿಹೀ ವ ಕಫಾ ಬಿಹಿ ಬಿಜುನುಬಿ ಅಬಾದಿಹೀ ಖಬೀರಾ (ಕಬೀರಾ) ॥58॥

**ಭಾವಾರ್ಥ:– ಹಜರತ್ ಮಹಮ್ಮದ್‌ರವರು ಯಾರನ್ನು ತಮ್ಮ ಪ್ರಭು ಎಂದು ಒಪ್ಪಿರುತ್ತಾರೋ ಆ ಅಲ್ಲಾಹ (ಪ್ರಭು) ಬೇರೆ ಒಬ್ಬ ಪೂರ್ಣ ಪ್ರಭುವಿನತ್ತ ಸಂಕೇತ ಮಾಡುತ್ತಿದ್ದಾನೆ ಮತ್ತು ಹೇಳುತ್ತಿದ್ದಾನೆ. "ಹೇ ಪೈಗಂಬರ್ ಯಾರು ಜಿಂದಾ ಮಹಾತ್ಮನ ರೂಪದಲ್ಲಿ ಬಂದು ನಿನ್ನನ್ನು ಭೇಟಿ ಮಾಡಿದ್ದರೋ, ಆ ಕಬೀರ್ ಪರಮಾತ್ಮನಲ್ಲಿ ವಿಶ್ವಾಸವಿಡು. ಅವರು ಎಂದೂ ಮರಣ ಹೊಂದುವುದಿಲ್ಲ ಅಂದರೆ ಅವಿನಾಶೀಯಾಗಿದ್ದಾರೆ. ಹೊಗಳಿಕೆಯೊಂದಿಗೆ ಅವರ ನಿರ್ಮಲತೆ (ಪವಿತ್ರ)ಯ ಗುಣಗಾನ ಮಾಡುತ್ತಲಿರು. ಆ ಕಬೀರ್ ಅಲ್ಲಾಹ್ ಈ ಪೂಜಿಸಲು ಯೋಗ್ಯರು ಹಾಗೂ ತಮ್ಮ ಉಪಾಸಕರ ಸಕಲ ಪಾಪಗಳನ್ನೂ ನಾಶಮಾಡುವವರಾಗಿದ್ದಾರೆ.**

ಆಯತ 59:– "ಅಲ್ಲಜೀ ಖಲಕಸ್ಮಮಾವಾತಿ ವಲಅರ್ಜ್ ವ ಮಾ ಬೈನಹುಮಾ ಫೀ ಸಿತ್ತತಿ ಅಯ್ಯಾಮಿನ್ ಸುಮ್ಮಸ್ತವಾ ಅಲಲ್ ಅರ್ಶಿ ಅರ್ ಹಮಾನು ಫಸಅಲ್ ಬಿಹೀ ಖಬೀರನ್" (ಕಬೀರನ್ ) ॥ 59 ॥

**ಭಾವಾರ್ಥ:– ಹಜರತ್ ಮಹಮ್ಮದರಿಗೆ ಕುರಾನ್ ಶರೀಫ್‌ನ್ನು ಬೋಧಿಸಿದ ಪ್ರಭು (ಅಲ್ಲಾಹ) ಹೇಳುತ್ತಿದ್ದಾನೆ. ಭೂಮಿ ಮತ್ತು ಆಕಾಶಗಳ ನಡುವಿನಲ್ಲಿ ಏನೆಲ್ಲಾ ಇದೆಯೋ, ಅದನ್ನೆಲ್ಲಾ ಸೃಷ್ಟಿಮಾಡಿದವರು ಕಬೀರ್ ಅಲ್ಲಾಹ. ಅವರು ಈ ಸೃಷ್ಟಿಕಾರ್ಯವನ್ನು ಆರು ದಿನಗಳಲ್ಲಿ ಮುಗಿಸಿ, ಏಳನೆಯ ದಿನ ತಮ್ಮ ಸತ್ಯಲೋಕದ ಸಿಂಹಾಸನದಲ್ಲಿ ವಿರಾಜಮಾನ (ಕುಳಿತರು) ರಾದರು. ಆ ಪೂರ್ಣ ಪರಮಾತ್ಮನ ಪ್ರಾಪ್ತಿ ಹೇಗೆ ಆಗುವುದು ಹಾಗೂ ಅವರ ಬಗ್ಗೆ ವಾಸ್ತವಿಕ ಜ್ಞಾನ ಪಡೆಯಲು ಪೂರ್ಣ ಜ್ಞಾನಿಯಾದ (ಬಾಖಬರ) ತತ್ಮದರ್ಶಿ ಸಂತರನ್ನು ಕೇಳಿ ತಿಳಿದುಕೊ ನನಗೆ ಅವರ ಬಗ್ಗೆ ಏನೂ ಗೋತ್ತಿಲ್ಲ.**

ಮೇಲೆ ಹೇಳಿರುವ 2 ಪವಿತ್ರ ಧರ್ಮಗಳ ಪವಿತ್ರ ಗ್ರಂಥಗಳು ಕೂಡಿ ಪ್ರಮಾಣಿತಗೊಳಿಸಿದವು ಅಂದರೆ ಸಕಲ ಸೃಷ್ಟಿಯನ್ನು ರಚಿಸಿದವ, ಸರ್ವಪಾಪ ವಿನಾಶಕ, ಸರ್ವಶಕ್ತಿಮಾನ, ಅವಿನಾಶಿ, ಪರಮಾತ್ಮ ಮಾನವ ಸದೃಶ್ಯ ಶರೀರದಲ್ಲಿ ಸತ್ಯಲೋಕದಲ್ಲಿ ಇರುವವರು, ಕಬೀರರೇ ಆಗಿದ್ದಾರೆ. ಅವರನ್ನೇ ಅಲ್ಲಾಹು ಅಕಬಿರೂ ಎಂದೂ ಸಹ ಕರೆಯುತ್ತಾರೆ.

ಗೌರವಾನ್ವಿತ ಧರ್ಮ್‌ದಾಸರು, ಪೂಜ್ಯ ಕಬೀರರನ್ನು ಕೇಳಿದರು ಹೇ ಸರ್ವಶಕ್ತಿಮಾನ್! ಇಂದಿನತನಕ ಯಾರೂ ಸಹ ಈ ತತ್ವಜ್ಞಾನವನ್ನು ತಿಳಿಸಿಲ್ಲ. ವೇದಗಳನ್ನು ಬಲ್ಲ ಜ್ಞಾನಿಗಳೂ ಸಹ ತಿಳಿಸಿಲ್ಲ. ಇದರಿಂದ ಸ್ಪಷ್ಟವಾಯ್ತು. ನಾಲ್ಕು ಪವಿತ್ರ ವೇದಗಳು ನಾಲ್ಕು ಪವಿತ್ರ ಕತೇಬ್ (ಕುರಾನ್ ಶರೀಫ್ ಮುಂತಾದವು)ಗಳು ಸುಳ್ಳಾಗಿವೆ. ಪೂರ್ಣ ಪರಮಾತ್ಮ ಕಬೀರರು ಹೇಳಿದರು:–

"ಕಬೀರ್, ಬೇದ ಕತೇಬ್ ಝೂಠೆ ನಹೀ ಭಾಯಿ, ಝೂಠೆ ಹೈ ಜೋ ಸಮಝೆ ನಾಹಿ।"

ಭಾವಾರ್ಥ:– ನಾಲ್ಕು ಪವಿತ್ರ ವೇದಗಳು (ಋಗ್ವೇದ, ಯಜುರ್ವೇದ, ಅಥರ್ವವೇದ, ಸಾಮವೇದ) ಹಾಗೂ 4 ಕತೇಬ್ (ಕುರಾನ್ ಶರೀಪ್, ಜಬೂರ, ತೌರಾತ, ಇಂಜಿಲ) ಗಳು ತಪ್ಪಲ್ಲ. ಆದರೆ ಯಾರು ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಅವರು ಮೂರ್ಖರು.

## "ಪೂಜ್ಯ ಕಬೀರ್ ಪರಮೇಶ್ವರರ ಅಮೃತಮಯ ವಾಣಿಯಲ್ಲಿ ಸೃಷ್ಟಿ ರಚನೆ"

ವಿಶೇಷ:– ಈ ಕೆಳಗಿನ ಅಮೃತವಾಣಿ ಇಸವಿ 1403 ರಿಂದ {ಪೂಜ್ಯ ಕವಿರ್ದೇವ (ಕಬೀರ್ ಪರಮೇಶ್ವರ) ಲೀಲಾಮಯ ಶರೀರದಲ್ಲಿ 5 ವರ್ಷದವರಿದ್ದಾಗ} ಇಸವಿ 1518ರ {ಮಗಹರ ಸ್ಥಾನದಿಂದ ಸಶರೀರ ಸತ್ಯಲೋಕಕ್ಕೆ ಕಬೀರ ಪರಮೇಶ್ವರರು ಹೋದಾಗ) ಮಧ್ಯ, ಸುಮಾರು 600 ವರ್ಷಗಳ ಹಿಂದೆ ಪರಮ ಪೂಜ್ಯ ಕಬೀರ ಪರಮೇಶ್ವರರ ಮೂಲಕ ತಮ್ಮ ಆತ್ಮೀಯ ಸೇವಕ (ದಾಸ ಭಕ್ತ) ಗೌರವಾನ್ವಿತ ಧರ್ಮದಾಸ್ ಸಾಹೇಬರಿಗೆ ಹೇಳಿದ್ದರು ಹಾಗು ಧರ್ಮದಾಸರು ಅದನ್ನು ಲಿಪಿಬದ್ಧಗೊಳಿಸಿದ್ದರು. ಆದರೆ ಆ ಸಮಯದಲ್ಲಿನ ಪವಿತ್ರ ಹಿಂದೂ ಹಾಗೂ ಪವಿತ್ರ ಮುಸಲ್ಮಾನರ ತತ್ವಜ್ಞಾನವಿಲ್ಲದ ಗುರುಗಳೆನಿಸಿ ಕೊಂಡಿದ್ದವರು "ಈ ನೇಕಾರ ಕಬೀರನು ಸುಳ್ಳುಗಾರ" ಎಂದು ಹೇಳಿದರು. "ಯಾವುದೇ ಸದ್‌ಗ್ರಂಥದಲ್ಲಿ ಶ್ರೀಬ್ರಹ್ಮಾ, ಶ್ರೀವಿಷ್ಣು ಹಾಗೂ ಶ್ರೀಶಿವ ರವರ ತಾಯಿ–ತಂದೆಯ ಹೆಸರು ಇಲ್ಲ. ಈ ಮೂವರು ಪ್ರಭುಗಳು ಅವಿನಾಶಿ ಇವರ ಜನನ–ಮರಣ ಆಗುವುದಿಲ್ಲ. ಪವಿತ್ರ ವೇದಗಳಲ್ಲಾಗಲಿ ಪವಿತ್ರ ಕುರಾನ್ ಶರೀಫ್ ಮುಂತಾದವುಗಳಲ್ಲಾಗಲಿ ಕಬೀರ್ ಪರಮೇಶ್ವರರ ಪ್ರಮಾಣ(ಸಾಕ್ಷಿ) ಇಲ್ಲ. ಹಾಗೂ ಪರಮಾತ್ಮನನ್ನು ನಿರಾಕಾರ ಎಂದು ಬರೆದಿದೆ. ನಾವು ಪ್ರತಿ ದಿನ ಓದುತ್ತೇವೆ. ಮುಗ್ಧ ಆತ್ಮಗಳು (ಜೀವಿಗಳು) ಈ ಚತುರ ಗುರುಗಳ ಮೇಲೆ ವಿಶ್ವಾಸ ಮಾಡಿದರು. ಇವರು ಸತ್ಯ ಹೇಳುತ್ತಿದ್ದಾರೆಂದು. ಈ ಕಬೀರ್ ನೇಕಾರನು ಖಂಡಿತ ಅಶಿಕ್ಷಿತನು ಹಾಗೂ ಗುರುಗಳು ಶಿಕ್ಷಿತರಾಗಿದ್ದಾರೆ. ಇವತ್ತು ಅದೆ ಸತ್ಯ ಬೆಳಕಿಗೆ ಬರುತ್ತಿದೆ ಹಾಗು ನಮ್ಮ ಎಲ್ಲ ಪವಿತ್ರ ಧರ್ಮಗಳ, ಪವಿತ್ರ ಧರ್ಮಗ್ರಂಥಗಳು ಸಾಕ್ಷಿ ನೀಡುತ್ತಿವೆ.

ಇದರಿಂದ ಸ್ಪಷ್ಟವಾಯ್ತೆನೆಂದರೆ, ಪೂರ್ಣ ಪರಮೇಶ್ವರ, ಸರ್ವ ಸೃಷ್ಟಿಯ ರಚನಾಕಾರ, ಪೂರ್ಣ ಬ್ರಹ್ಮ, ಹಾಗೂ ಸರ್ವಜ್ಞ ಕವಿರ್ದೇವ (ಕಬೀರ್ ಪರಮೇಶ್ವರ)ರೇ ಆಗಿದ್ದಾರೆ. ಇವರು ಕಾಶೀ(ಬನಾರಸ್)ಯಲ್ಲಿ ಕಮಲದ ಹೂವಿನ ಮೇಲೆ ಪ್ರಕಟಗೊಂಡಿದ್ದರು. 120 ವರ್ಷಗಳವರೆಗೆ ತಮ್ಮ ವಾಸ್ತವಿಕ ತೇಜೋಮಯ ಶರೀರದ ಮೇಲೆ ಮಾನವ ಸದೃಶ್ಯವಾದ ಶರೀರ ಕಡಿಮೆ ಪ್ರಕಾಶಮಾಡಿ ಇದ್ದರು. ಹಾಗು ತಮ್ಮ ಮೂಲಕ ರಚಿಸಿದ್ದ ಸೃಷ್ಟಿಯ ಸರಿಯಾದ ವಾಸ್ತವಿಕ ತತ್ವಜ್ಞಾನವನ್ನು ನೀಡಿ, ಸಶರೀರ ಸತ್ಯಲೋಕಕ್ಕೆ ಹೋದರು. (ಓದುಗರೇ ದಯವಿಟ್ಟು ಓದಿ ಈ ಕೆಳಗಿನ ಅಮೃತವಾಣಿಗಳನ್ನ ಕಬೀರ್ ಪರಮೇಶ್ವರರರಿಂದಲೇ ಉಚ್ಚಾರಿತ)

ಧರ್ಮದಾಸ್ ಯಹ್ ಜಗ್ ಬೌರಾನಾ । ಕೊಯಿ ನ ಜಾನೆ ಪದ್ ನಿರವಾನಾ ॥
ಯಹೀ ಕಾರಣ್ ಮೈ ಕಥಾ ಪಸಾರಾ । ಜಗಸೆ ಕಹಿಯೊ ರಾಮ್ ನಿಯಾರಾ ॥
ಯಹೀ ಜ್ಞಾನ್ ಜಗ್ ಜೀವ್ ಸುನಾವೋ । ಸಬ್ ಜೀವೋಂಕಾ ಭರಮ್ ನಶಾವೊ ॥

ಭರಮ್ ಗಯೆ ಜಗ್ ವೇದ್ ಪುರಾನಾ । ಆದಿ ರಾಮ್ ಕಾ ಭೇದ್ ನ ಜಾನಾ ॥
ರಾಮ್ ರಾಮ್ ಸಬ್ ಜಗತ್ ಬಖಾನೆ । ಆದಿ ರಾಮ್ ಕೋಈ ಬಿರಲಾ ಜಾನೆ ॥
ಜ್ಞಾನೀ ಸುನೆ ಸೋ ಹಿರದೈ ಲಗಾಈ । ಮೂರ್ಖ್ ಸುನೆ ಸೋ ಗಮ್ಯ್ ನಾ ಪಾಈ॥
ಅಬ್ ಮೈ ತುಮಸೆ ಕಹೊ ಚಿತಾಯಿ । ತ್ರಿದೇವನ್ ಕೀ ಉತ್ಪತ್ತಿ ಭಾಈ ॥
ಕುಛ್ ಸಂಕ್ಷೇಪ್ ಕಹೂಂ ಗುಹರಾಈ । ಸಬ್ ಸಂಶಯ್ ತುಮ್ಹರೆ ಮಿಟ್ ಜಾಈ
ಮಾಂ ಅಷ್ಟಂಗೀ ಪಿತಾ ನಿರಂಜನ್ । ವೇ ಜಮ್ ದಾರುಣ್ ವಂಶನ್ ಅಂಜನ್ ॥
ಪಹಿಲೆ ಕೀನ್ಹ ನಿರಂಜನ್ ರಾಈ ॥ ಪೀಛೆಸೆ ಮಾಯಾ ಉಪಜಾಈ ॥
ಮಾಯಾ ರೂಪ್ ದೇಖ್ ಅತಿ ಶೋಭಾ।ದೇವ್ ನಿರಂಜನ್ ತನ್–ಮನ್ ಲೋಭಾ॥
ಕಾಮದೇವ್ ಧರ್ಮರಾಯ್ ಸತಾಯೆ । ದೇವಿ ಕೊ ತುರತ್‌ಹೀ ಧರ್ ಖಾಯೆ ॥
ಪೇಟ್ ಸೆ ದೇವಿ ಕರೀ ಪುಕಾರಾ । ಹೇ ಸಾಹಬ್ ಮೇರಾ ಕರೋ ಉಬಾರಾ ॥
ಟೇರ್ ಸುನೀ ತಬ್ ಹಮ್ ತಹಾ ಆಯೆ । ಅಷ್ಟಂಗೀ ಕೊ ಬಂದ್ ಛುಡಾಯೆ ॥
ಸತ್‌ಲೋಕ್ ಮೇ ಕೀನ್ಹಾ ದುರಾಚಾರಿ । ಕಾಲ್ ನಿರಂಜನ್ ದಿನ್ಹಾ ನಿಕಾರಿ ॥
ಮಾಯಾ ಸಮೇತ್ ದಿಯಾ ಭಗಾಈ।ಸೋಲಹ್ ಸಂಖ್ ಕೋಸ್ ದೂರೀ ಪರ್ ಆಈ॥
ಅಷ್ಟಂಗೀ ಔರ್ ಕಾಲ್ ಅಬ್ ದೋಈ । ಮಂದ್ ಕರ್ಮಸೆ ಗಏ ಬಿಗೋಈ ॥
ಧರ್ಮರಾಯ್ ಕೊ ಹಿಕಮತ್ ಕೀನ್ಹಾ । ನಖ್ ರೇಖಾ ಸೆ ಭಗಕರ್ ಲೀನ್ಹಾ ॥
ಧರ್ಮರಾಯ್ ಕಿನ್ಹಾ ಭೋಗ್ ವಿಲಾಸಾ । ಮಾಯಾ ಕೊ ರಹೀ ತಬ್ ಆಸಾ ॥
ತೀನ್ ಪುತ್ರ್ ಅಷ್ಠಂಗೀ ಜಾಯೆ । ಬ್ರಹ್ಮಾ, ವಿಷ್ಣು, ಶಿವ್ ನಾಮ್ ಧರಾಯೆ ॥
ತೀನ್ ದೇವ್ ವಿಸ್ತಾರ್ ಚಲಾಯೆ । ಇನಮೆ ಯಹ್ ಜಗ್ ದೋಖಾ ಖಾಯೆ ॥
ಪುರುಷ್ ಗಮ್ಯ್ ಕೈಸೆ ಕೋ ಪಾವೈ । ಕಾಲ್ ನಿರಂಜನ್ ಜಗ್ ಭರಮಾವೈ ॥
ತೀನ್ ಲೋಕ್ ಅಪನೇ ಸುತ್ ದೀನ್ಹಾ । ಸುನ್ನ್ ನಿರಂಜನ್ ಬಾಸಾ ಲೀನ್ಹಾ ॥
ಅಲಖ್ ನಿರಂಜನ್ ಸುನ್ನ್ ಠಿಕಾನಾ । ಬ್ರಹ್ಮಾ–ವಿಷ್ಣು–ಶಿವ್ ಭೇದ್ ನ ಜಾನಾ ॥
ತೀನ್ ದೇವ್ ಸೊ ಉನಕೊ ಧಾವೈ । ನಿರಂಜನ್ ಕಾ ವೆ ಪಾರ್ ನಾ ಪಾವೆ ॥
ಅಲಖ್ ನಿರಂಜನ್ ಬಡಾ ಬಟಪಾರಾ । ತೀನ್ ಲೋಕ್ ಜೀವ್ ಕಿನ್ ಆಹಾರಾ ॥
ಬ್ರಹ್ಮಾ, ವಿಷ್ಣು, ಶಿವ್ ನಹೀಂ ಬಚಾಯೆ । ಸಕಲ್ ಖಾಯ್ ಪುನ್ ಧೂರ್ ಉಡಾಯೆ॥
ತಿನಕೆ ಸುತ್ ಹೈ ತೀನೋ ದೇವಾ । ಆಂಧರ್ ಜೀವ್ ಕರತ್ ಹೈ ಸೇವಾ ॥
ಅಕಾಲ್ ಪುರುಷ್ ಕಾಹೂ ನಹಿ ಚೀನ್ಹಾ । ಕಾಲ್ ಪಾಯ್ ಸಬಹಿ ಗಹ್ ಲೀನ್ಹಾ ॥
ಬ್ರಹ್ಮ ಕಾಲ್ ಸಕಲ್ ಜಗ್ ಜಾನೆ । ಆದಿ ಬ್ರಹ್ಮ್ ಕೊ ನಾ ಪಹಿಚಾನೆ ॥
ತೀನೋ ದೇವ್ ಔರ್ ಔತಾರಾ । ತಾಕೊ ಭಜೆ ಸಕಲ್ ಸಂಸಾರಾ ॥
ತೀನೋ ಗುಣ್ ಕಾ ಯಹ್ ವಿಸ್ತಾರಾ । ಧರ್ಮದಾಸ್ ಮೈಂ ಕಹೊಂ ಪುಕಾರಾ ।
ಗುಣ್ ತೀನೋಂ ಕೀ ಭಕ್ತಿ ಮೇಂ, ಭೂಲ್ ಪರೋ ಸಂಸಾರ್ ।
ಕಹೈ ಕಬೀರ್ ನಿಜ್ ನಾಮ್ ಬಿನ್, ಕೈಸೆ ಉತರೈಂ ಪಾರ್ ॥

**ಮೇಲೆ ಹೇಳಿರುವ ಅಮೃತ ವಾಣಿಯಲ್ಲಿ ಕಬೀರ್ ಪರಮೇಶ್ವರರು ತನ್ನ ಆತ್ಮೀಯ ಸೇವಕನಾದ, ಗೌರವಾನ್ವಿತ ಧರ್ಮದಾಸ್ ರವರಿಗೆ ಹೇಳಿದ್ದರು. ಧರ್ಮದಾಸ! ಈ ಸಕಲ ವಿಶ್ವವೂ ತತ್ವಜ್ಞಾನದ ಕೊರತೆಯಿಂದ ವಿಚಲಿತವಾಗಿವೆ. ಯಾರಿಗೂ, ಪೂರ್ಣವಾದ ಮೋಕ್ಷ ಮಾರ್ಗದ ಹಾಗೂ ಸೃಷ್ಟಿ ರಚನೆಯ ಜ್ಞಾನವಿಲ್ಲ. ಆದ್ದರಿಂದ ನಾನು ನಿನಗೆ ನನ್ನಿಂದಲೇ ರಚಿತವಾಗಿರುವ ಸೃಷ್ಟಿಯ ಕಥೆಯನ್ನು ಹೇಳುತ್ತೇನೆ. ಬುದ್ಧಿವಂತರು ಕೂಡಲೆ ತಿಳಿಯುವರು. ಆದರೆ ಸಕಲ ಪ್ರಮಾಣಗಳನ್ನು ನೋಡಿಯೂ ಕೂಡ ತಿಳಿಯಲಾರದ ಜೀವಿಗಳಂತು ಕಾಲನ ಪ್ರಭಾವದಿಂದ ಪ್ರಭಾವಿತರಾಗಿದ್ದಾರೆ. ಅವರು ಭಕ್ತಿಗೆ ಯೋಗ್ಯರಾದವರಲ್ಲ. ಈಗ ನಾನು ಮೂವರು ದೇವತೆಗಳಾದ ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿಯ ಬಗ್ಗೆ ತಿಳಿಸುತ್ತೇನೆ. ಇವರ ತಾಯಿಯಂತು ಅಷ್ಟಂಗಿ (ದುರ್ಗೆ) ಹಾಗು ತಂದೆ ಜ್ಯೋತಿ ನಿರಂಜನ**

(ಕಾಲ ಬ್ರಹ್ಮ)ನು. ಮೊದಲು ಇವರ ತಂದೆ ಬ್ರಹ್ಮನ ಉತ್ಪತ್ತಿಯು ಮೊಟ್ಟೆಯಿಂದ ಆಯಿತು. ನಂತರ ತಾಯಿ ದುರ್ಗೆಯ ಉತ್ಪತ್ತಿಯಾಯಿತು. ದುರ್ಗೆಯ ರೂಪಕ್ಕೆ ಮೋಹಿತನಾಗಿ ಬ್ರಹ್ಮನು ತಪ್ಪು ಮಾಡಿದನು. ಆಗ ದುರ್ಗೆಯು ಮಾನ ರಕ್ಷಣೆಗಾಗಿ ಅವನ ಹೊಟ್ಟೆಯಲ್ಲಿ ಅಡಗಿ ರಕ್ಷಿಸುವ ಪ್ರಾರ್ಥನೆ ಮಾಡಿದಳು. ನಾನು ಕಾಲಬ್ರಹ್ಮನ ಬಳಿಗೆ ಹೋದೆನು. ಆಗ ದುರ್ಗೆಯನ್ನು ಬ್ರಹ್ಮನ ಹೊಟ್ಟೆಯಿಂದ ಹೊರ ತೆಗೆದೆ. 21 ಬ್ರಹ್ಮಾಂಡಗಳ ಸಹಿತ, 16 ಶಂಖ ಕೋಸ ದೂರದವರೆಗೆ ಕಳುಹಿಸಿದೆ. ಬ್ರಹ್ಮನು ದುರ್ಗೆಯೊಂದಿಗೆ ಭೋಗ–ವಿಲಾಸ ಮಾಡಿದನು. ಈ ಇಬ್ಬರ ಸಂಯೋಗದಿಂದ 3 ಗುಣಗಳ (ಶ್ರೀಬ್ರಹ್ಮಾ–ಶ್ರೀವಿಷ್ಣು–ಶ್ರೀಶಿವನ) ಉತ್ಪತ್ತಿಯಾಯ್ತು. ಈ 3 ಗುಣ(ರಜಗುಣ–ಸತ್ವಗುಣ–ತಮಗುಣ) ಗಳ ಸಾಧನೆ ಮಾಡಿ ಎಲ್ಲಾ ಜೀವಿಗಳು ಕಾಲ ಬ್ರಹ್ಮನ ಬಲೆಯಲ್ಲಿ ಸಿಲುಕಿ ಕೊಂಡಿವೆ. ವಾಸ್ತವಿಕ ಮಂತ್ರ ಸಿಗುವವರೆಗೂ ಪೂರ್ಣ ಮೋಕ್ಷ ಹೇಗೆ ಸಾಧ್ಯವಾಗುವುದು?

➢ ವಿಶೇಷ:– ಪ್ರಿಯ ಓದುಗರೆ ವಿಚಾರ ಮಾಡಿರಿ, ಶ್ರೀಬ್ರಹ್ಮಾ, ಶ್ರೀವಿಷ್ಣು, ಹಾಗೂ ಶಿವ ಇವರನ್ನು ಹಿಂದೂ ಸಮಾಜದ ಸರ್ವರೂ ಈವರೆಗೂ ಈ ಮೂರು ಪರಮಾತ್ಮರನ್ನು ಅಜರ, ಅಮರ, ಅರ್ಥಾತ್ ಹುಟ್ಟು–ಸಾವು ಇಲ್ಲದವರು ಎಂದು ನಂಬುತ್ತಾ ಬಂದಿದ್ದಾರೆ. ಆದರೆ ಈ ಮೂವರೂ ನಾಶಹೊಂದುವವರು. ಇವರ ತಂದೆ ಕಾಲರೂಪಿ ಬ್ರಹ್ಮ ಹಾಗೂ ತಾಯಿ ದುರ್ಗಾ ಇದ್ದಾಳೆ. ತಾವೆಲ್ಲರು ಈಗಾಗಲೇ ಮೇಲಿನ ಪ್ರಮಾಣಗಳನ್ನು ಓದಿ ತಿಳಿದಿದ್ದಿರಿ. ಈ ತತ್ವಜ್ಞಾನ ನಮ್ಮ ಶಾಸ್ತ್ರಗಳಲ್ಲೂ ವಿದ್ಯಮಾನವಾಗಿದೆ. ಆದರೆ ಕಲಿಯುಗದ ಗುರುಗಳು, ಋಷಿಗಳು, ಸಂತರು ತಿಳಿಯಲಿಲ್ಲ. ಯಾವ ಶಿಕ್ಷಕರಿಗೆ ಪಠ್ಯ ಕ್ರಮದ ಬಗ್ಗೆ ಸರಿಯಾದ ಜ್ಞಾನವಿಲ್ಲವೋ, ಅವರು ವಿದ್ಯಾರ್ಥಿಗಳ ಭವಿಷ್ಯದ ಶತ್ರು. ಹಾಗೆಯೇ ಈ ಋಷಿಗಳಿಗೆ, ಗುರುಗಳಿಗೆ, ಸಂತರಿಗೆ ಶ್ರೀಬ್ರಹ್ಮಾ, ಶ್ರೀವಿಷ್ಣು, ಶ್ರೀಶಿವ ಇವರ ತಂದೆ–ತಾಯಿ ಯಾರು ಎಂಬ ಜ್ಞಾನವಿಲ್ಲ ಎಂದರೆ ಇವರು ತತ್ವಜ್ಞಾನ ಹೀನರು. ಈ ಕಾರಣದಿಂದಾಗಿ ಸಮಸ್ತ ಭಕ್ತ ಸಮಾಜವನ್ನು, ಶಾಸ್ತ್ರ ವಿರುದ್ಧವಾದ ಜ್ಞಾನವನ್ನು ತಿಳಿಸುತ್ತಾ, (ದಂತ ಕಥೆಗಳನ್ನು ಹೇಳುತ್ತಾ) ಅವರನ್ನು ಅಜ್ಞಾನದ ಕತ್ತಲಲ್ಲಿ ಇಟ್ಟಿದ್ದಾರೆ.

➢ ಶಾಸ್ತ್ರ ವಿರುದ್ಧವಾದ ಭಕ್ತಿ ಮಾಡಿಸಿ ಪರಮಾತ್ಮನ ವಾಸ್ತವಿಕ ಲಾಭ (ಪೂರ್ಣ ಮೋಕ್ಷ) ದಿಂದ ವಂಚಿತರನ್ನಾಗಿಸಿ ಎಲ್ಲರ ಮಾನವ ಜನ್ಮವನ್ನು ವ್ಯರ್ಥಗೊಳಿಸಿದ್ದಾರೆ. ಭಗವದ್ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕಗಳಲ್ಲಿ ಇದಕ್ಕೆ ಪ್ರಮಾಣವಿದೆ. ಯಾರು ಶಾಸ್ತ್ರವಿಧಿ ತ್ಯಜಿಸಿ ಮನಸೆಚ್ಚೆ ಆಚರಣೆ (ಪೂಜೆ) ಮಾಡುತ್ತಾರೆ. ಅವರಿಗೆ ಯಾವುದೆ ಲಾಭ ಆಗುವುದಿಲ್ಲ. ಜೀವನವನ್ನೇ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಪೂರ್ಣ ಪರಮಾತ್ಮ ಕಬೀರರು 5 ವರ್ಷದ ಲೀಲಾಮಯ ಆಯಸ್ಸಿನಿಂದ ಇಸವಿ 1403 ರಿಂದಲೇ ಸರ್ವಶಾಸ್ತ್ರಯುಕ್ತ ಜ್ಞಾನವನ್ನು ತಮ್ಮ ಅಮೃತವಾಣಿಯಲ್ಲಿ ತಿಳಿಸಲು ಪ್ರಾರಂಭ ಮಾಡಿದರು. ಆದರೆ ಆ ಅಜ್ಞಾನಿ ಗುರುಗಳು ಈ ತತ್ವಜ್ಞಾನವನ್ನು ಭಕ್ತ ಸಮಾಜಕ್ಕೆ ತಲುಪಿಸಲು ಬಿಡಲಿಲ್ಲ. ಅದು ವರ್ತಮಾನದಲ್ಲಿ ಎಲ್ಲಾ ಸದ್ಗ್ರಂಥಗಳಿಂದ ಸ್ಪಷ್ಟವಾಗುತ್ತಿದೆ. ಇದರಿಂದ ಸ್ಪಷ್ಟವಾಯ್ತೆನೆಂದರೆ ಕವಿರ್ದೇವ(ಕಬೀರ ಪ್ರಭು) ತತ್ವದರ್ಶಿ ಸಂತ ರೂಪದಲ್ಲಿ ಸ್ವತಃ ಪೂರ್ಣ ಪರಮಾತ್ಮ ಬಂದಿದ್ದರು.

## “ಗೌರವಾನ್ವಿತ ಗರೀಬ್‌ದಾಸ್ ಸಾಹೇಬರ ಅಮೃತ ವಾಣಿಯಲ್ಲಿ ಸೃಷ್ಟಿ ರಚನೆಯ ಪ್ರಮಾಣ”

### ಆದಿ ರಮೈಣೀ (ಸದ್‌ಗ್ರಂಥ ಪುಟ ಸಂಖ್ಯೆ 690 ರಿಂದ 692ರವರೆಗೆ)

ಆದಿ ರಮೈಣೀ ಅದಲೀ ಸಾರಾ । ಜಾ ದಿನ್ ಹೋತೆ ಧುಂಧುಕಾರಾ ॥ 1 ॥
ಸತ್‌ಪುರುಷ್ ಕೀನ್ಹಾ ಪ್ರಕಾಶಾ । ಹಮ್ ಹೋತೆ ತಖತ್ ಕಬೀರ್ ಖವಾಸಾ ॥ 2 ॥
ಮನ್ ಮೋಹಿನಿ ಸಿರಜೀ ಮಾಯಾ । ಸತ್ಪುರುಷ್ ಏಕ್ ಖ್ಯಾಲ್ ಬನಾಯಾ ॥ 3 ॥
ಧರ್ಮರಾಯ್ ಸಿರಜೇ ದರಬಾನೀ । ಚೌಸಠ್ ಜುಗ್ ತಪ್ ಸೇವಾ ಠಾನೀ ॥ 4 ॥
ಪುರುಷ್ ಪೃಥವೀ ಜಾಕೂ ದೀನ್ಹೀ । ರಾಜ್ ಕರೋ ದೇವಾ ಆಧೀನೀ ॥ 5 ॥

ಬ್ರಹ್ಮಾಂಡ್ ಇಕೀಸ್ ರಾಜ್ ತುಮ್ಹ ದೀನ್ಹಾ । ಮನ್ ಕೀ ಇಚ್ಛಾ ಸಬ್ ಜುಗ್ ಲೀನ್ಹಾ ॥ 6 ॥
ಮಾಯಾ ಮೂಲ್ ರೂಪ್ ಏಕ್ ಛಾಜಾ । ಮೋಹಿ ಲಿಯೆ ಜಿನಹೂ ಧರ್ಮರಾಜಾ ॥ 7 ॥
ಧರ್ಮ್ ಕಾ ಮನ್ ಚಂಚಲ್ ಚಿತ್ ಧಾರ್‌ಯಾ । ಮನ್ ಮಾಯಾ ಕಾ ರೂಪ್ ವಿಚಾರಾ ॥ 8 ॥
ಚಂಚಲ್ ಚೇರಿ ಚಪಲ್ ಚಿರಾಗಾ । ಯಾ ಕೆ ಪರಸೆ ಸರಬಸ್ ಜಾಗಾ ॥ 9 ॥
ಧರ್ಮರಾಯ್ ಕೀಯಾ ಮನ್ ಕಾ ಭಾಗೀ । ವಿಷಯ್ ವಾಸನಾ ಸಂಗ್ ಸೆ ಜಾಗೀ ॥ 10 ॥
ಆದಿ ಪುರುಷ್ ಅದಲೀ ಅನರಾಗೀ । ಧರ್ಮರಾಯ್ ದಿಯಾ ದಿಲ್ ಸೆ ತ್ಯಾಗಿ ॥ 11 ॥
ಪುರುಷ್ ಲೋಕ್ ಸೆ ದಿಯಾ ಢಹಾಹೀ । ಅಗಮ್ ದೀಪ್ ಚಲಿ ಆಯೆ ಭಾಯಿ ॥ 12 ॥
ಸಹಜ್ ದಾಸ್ ಜಿಸ್ ದೀಪ್ ರಹಂತಾ । ಕಾರಣ್ ಕೌನ್–ಕೌನ್ ಕುಲ್ ಪಂಥಾ ॥ 13 ॥
ಧರ್ಮರಾಯ್ ಬೋಲೆ ದರಬಾನೀ । ಸುನೋ ಸಹಜ್ ದಾಸ್ ಬ್ರಹ್ಮಜ್ಞಾನಿ ॥ 14 ॥
ಚೌಸಠ್ ಜುಗ್ ಹಮ್ ಸೇವಾ ಕೀನ್ಹೀ । ಪುರುಷ್ ಪೃಥಿವೀ ಹಮ್ ಕೂ ದಿನ್ಹೀ ॥ 15 ॥
ಚಂಚಲ್ ರೂಪ್ ಭಯಾ ಮನ್ ಬೌರಾ । ಮನ್ ಮೋಹಿನಿ ಠಗಿಯಾ ಭೌಂರಾ ॥ 16 ॥
ಸತ್‌ಪುರುಷ್ ಕೆ ನಾ ಮನ್ ಭಾಯೆ । ಪುರುಷ್ ಲೋಕ್ ಸೆ ಹಮ್ ಚಲೀ ಆಯೆ ॥ 17 ॥
ಅಗರ್ ದೀಪ್ ಸುನತ್ ಬಡ್‌ಭಾಗೀ । ಸಹಜ್ ದಾಸ್ ಮೇಟೋ ಮನ್ ಪಾಗೀ ॥ 18 ॥
ಬೋಲೆ ಸಹಜದಾಸ್ ದಿಲ್ ದಾನೀ । ಹಮ್ ತೋ ಚಾಕರ್ ಸತ್ ಸಹದಾನೀ ॥ 19 ॥
ಸತ್‌ಪುರುಷ್ ಸೆ ಅರಜ್ ಗುಜಾರೂಂ । ಜಬ್ ತುಮ್ಹಾರಾ ಬಿವಾಣ್ ಉತಾರೂ ॥ 20 ॥
ಸಹಜದಾಸ್ ಕೊ ಕೀಯಾ ಪೀಯಾನಾ । ಸತ್ಯಲೋಕ್ ಲೀಯಾ ಪ್ರವಾನಾ ॥ 21 ॥
ಸತ್‌ಪುರುಷ್ ಸಾಹಿಬ್ ಸರಬಂಗೀ । ಅವಿಗತ್ ಅದಲೀ ಅಚಲ್ ಅಭಂಗೀ ॥ 22 ॥
ಧರ್ಮರಾಯ್ ತುಮ್ಹಾರಾ ದರಬಾನೀ । ಅಗರ್ ದೀಪ್ ಚಲಿ ಗಯೆ ಪ್ರಾನೀ ॥ 23 ॥
ಕೌನ್ ಹುಕುಮ್ ಕರೀ ಅರಜ್ ಅವಾಜಾ । ಕಹಾ ಪಠಾವೌ ಉಸ್ ಧರ್ಮರಾಜಾ ॥ 24 ॥
ಭಯಿ ಅವಾಜ್ ಅದಲೀ ಏಕ್ ಸಾಚಾ । ವಿಷಯ್ ಲೋಕ್ ಜಾ ತೀನ್ಯೂ ಬಾಚಾ ॥ 25 ॥
ಸಹಜ್ ವಿಮಾನ್ ಚಲೆ ಅಧಿಕಾಯಿ । ಛಿನ್ ಮೆ ಅಗರ್ ದೀಪ್ ಚಲಿ ಆಈ ॥ 26 ॥
ಹಮತೋ ಅರಜ್ ಕರೀ ಅನುರಾಗೀ । ತುಮ್ಹ್ ವಿಷಯ್ ಲೋಕ್ ಜಾವೋ ಬಡಭಾಗಿ ॥ 27 ॥
ಧರ್ಮರಾಯ್ ಕೆ ಚಲೆ ವಿಮಾನಾ । ಮಾನಸರೋವರ್ ಆಯೆ ಪ್ರಾನಾ ॥ 28 ॥
ಮಾನಸರೋವರ್ ರಹನ್ ನ ಪಾಯೆ । ದರ್ರೈ ಕಬೀರಾ ಥಾನಾ ಲಾಯೆ ॥ 29 ॥
ಬಂಕನಾಲ್ ಕೀ ವಿಷಮಿ ಬಾಟಿ । ತಹಾ ಕಬೀರಾ ರೋಕೀ ಘಾಟೀ ॥ 30 ॥
ಇನ್ ಪಾಂಚೋ ಮಿಲಿ ಜಗತ್ ಬಂಧಾನಾ । ಲಖ್ ಚೌರಾಸಿ ಜೀವ್ ಸಂತಾನಾ ॥ 31 ॥
ಬ್ರಹ್ಮಾ, ವಿಷ್ಣು, ಮಹೇಶ್ವರ್ ಮಾಯಾ । ಧರ್ಮರಾಜ್ ಕಾ ರಾಜ್ ಪಠಾಯಾ ॥ 32 ॥
ಯೌಹ್ ಖೊಖಾ ಪುರ್ ಝುಠೀ ಬಾಜೀ । ಭಿಸತಿ ಬೈಕುಂಠ್ ದಗಾಸಿ ಸಾಜೀ ॥33॥
ಕೃತಿಮ್ ಜೀವ್ ಭುಲಾನೆ ಭಾಈ । ನಿಜ್ ಘರ್ ಕೀ ತೋ ಖಬರಿ ನ ಪಾಈ ॥ 34 ॥
ಸವಾ ಲಾಖ್ ಉಪಜೆ ನಿತ್ ಹಂಸಾ । ಏಕ್ ಲಾಬ್ ವಿನಶೆ ನಿತ್ ಅಂಸಾ ॥ 35 ॥
ಉಪತಿ ಖಪತಿ ಪ್ರಲಯ್ ಫೇರೀ । ಹರ್ಷ ಶೋಕ್ ಜೌಂರಾ ಜಮ್ ಜೆರೀ ॥ 36 ॥
ಪಾಂಚೊಂ ತತ್ವ ಹೈ ಪ್ರಲಯ್ ಮಾಂಹೀ । ಸತ್ವಗುಣ್ ರಜಗುಣ್ ತಮಗುಣ್ ಝಾಂಈ ॥37 ॥
ಆಠೋಂ ಅಂಗ್ ಮಿಲೀ ಹೈ ಮಾಯಾ । ಪಿಂಡ್ ಬ್ರಹ್ಮಾಂಡ್ ಸಕಲ್ ಭರಮಾಯಾ ॥ 38 ॥
ಯಾ ಮೇಂ ಸುರತಿ ಶಬ್ದ್ ಕೀ ಡೋರೀ । ಪಿಂಡ್ ಬ್ರಹ್ಮಾಂಡ್ ಲಗೀ ಹೈ ಖೋರೀ ॥ 39 ॥
ಶ್ವಾಂಸಾ ಪಾರಸ್ ಮನ್ ಗಹ್ ರಾಖೋ । ಖೋಲ್ಹಿ ಕಪಾಟ್ ಅಮೀರಸ್ ಚಾಖೋ ॥ 40 ॥
ಸುನಾಊಂ ಹಂಸ್ ಶಬ್ದ್ ಸುನ್ ದಾಸಾ । ಅಗಮ್ ದೀಪ್ ಹೈ ಅಗ್ ಹೈ ಬಾಸಾ ॥ 41 ॥
ಭವಸಾಗರ್ ಜಮ್ ದಂಡ್ ಜಮಾನಾ । ಧರ್ಮರಾಯ್ ಕಾ ಹೈ ತಲಬಾಂನಾ ॥ 42 ॥
ಪಾಂಚೊ ಊಪರ್ ಪದ್ ಕೀ ನಗರೀ । ಬಾಟ್ ವಿಹಂಗಮ್ ಬಂಕೀ ಡಗರೀ ॥ 43
ಹಮಾರಾ ಧರ್ಮರಾಯ್ ಸೋಂ ದಾವಾ । ಭವಸಾಗರ್ ಮೆಂ ಜೀವ್ ಭರಮಾವಾ ॥ 44 ॥

ಹಮ್ ತೊ ಕಹ್ಯೆ ಅಗಮ್ ಕೀ ಬಾನೀ । ಜಹಾಂ ಅವಿಗತ್ ಅದಲೀ ಆಪ್ ಬಿನಾನೀ ॥ 45 ॥
ಬಂದೀಛೋಡ್ ಹಮಾರಾ ನಾಮ್ಂ । ಅಜರ್ ಅಮರ್ ಹೈ ಅಸ್ಥೀರ್ ಠಾಮ್ಂ ॥ 46 ॥
ಜುಗನ್ ಜುಗನ್ ಹಮ್ ಕಹತೆ ಆಯೇ । ಜಮ್ ಜೌಂರಾ ಸೆಂ ಹಂಸ್ ಛುಟಾಯೇ ॥ 47 ॥
ಜೋ ಕೋಈ ಮಾನೆಂ ಶಬ್ದ್ ಹಮಾರಾ । ಭವಸಾಗರ್ ನಹೀ ಭರಮೆಂ ಧಾರಾ ॥ 48 ॥
ಯಾ ಮೇಂ ಸುರತಿ ಶಬ್ದ್ ಕಾ ಲೇಖಾ । ತನ್ ಅಂದರ್ ಮನ್ ಕಹೊ ಕಿನ್ಹಿ ದೇಖಾ ॥ 49 ॥
ದಾಸ್ ಗರೀಬ್ ಅಗಮ್ ಕೀ ಬಾನೀ । ಖೋಜಾ ಹಂಸಾ ಶಬ್ದ್ ಸಹದಾನೀ ॥ 50 ॥

**ಭಾವಾರ್ಥ:– ಮೇಲಿನ ವಾಣಿಯ ಭಾವಾರ್ಥ ಹೀಗಿದೆ ಗೌರವಾನ್ವಿತ ಗರೀಬ್‌ದಾಸ ಸಾಹೇಬರು ಸಹ ಇದನ್ನೆ ಹೇಳುತ್ತಿದ್ದಾರೆ ಅಂದರೆ ಇಲ್ಲಿ ಮೊದಲು ಕತ್ತಲೆ ಮಾತ್ರ ಇತ್ತು. ಹಾಗೂ ಪೂರ್ಣ ಪರಮಾತ್ಮ ಕಬೀರ್ ಪರಮೇಶ್ವರರು ಸತ್ಯ ಲೋಕದಲ್ಲಿ ಸಿಂಹಾಸನದ ಮೇಲೆ ವಿರಾಜಮಾನರಾಗಿದ್ದರು. ನಾವು ಅಲ್ಲಿ ನೌಕರರಾಗಿದ್ದೆವು. ಪರಮಾತ್ಮನು ಬ್ರಹ್ಮ (ಧರ್ಮರಾಯ) ನನ್ನು ಉತ್ಪತ್ತಿ ಮಾಡಿದರು. ನಂತರ ಅವನ ತಪಸ್ಸಿನ ಪ್ರತಿಫಲವಾಗಿ 21 ಬ್ರಹ್ಮಾಂಡಗಳನ್ನು ನೀಡಿದರು. ನಂತರ (ಮಾಯಾ) ದುರ್ಗೆಯ ಉತ್ಪತ್ತಿ ಮಾಡಿದರು. ಯುವತಿ ದುರ್ಗಾಳ ಮೋಹಕ್ಕೆ ಒಳಗಾಗಿ ಬ್ರಹ್ಮನು ಅವಳನ್ನು ಬಲಾತ್ಕರಿಸಿದನು. ಬ್ರಹ್ಮನಿಗೆ ಇದಕ್ಕೆ ಶಿಕ್ಷೆ ಆಯಿತು. ಅವರನ್ನು ಸತ್ಯಲೋಕದಿಂದ ಹೊರ ಹಾಕಿದರು. 1 ಲಕ್ಷ ಮಾನವ ಶರೀರ ಧಾರಿ ಜೀವಾತ್ಮಗಳನ್ನು ಪ್ರತಿದಿನ ಆಹಾರವಾಗಿ ತಿನ್ನಬೇಕು. ಒಂದೂಕಾಲು ಲಕ್ಷ ಉತ್ಪತ್ತಿ ಮಾಡಬೇಕು ಎಂದು ಶಾಪ ಕೊಟ್ಟರು. ಇಲ್ಲಿ ಎಲ್ಲ ಜೀವಾತ್ಮಗಳು ಕಷ್ಟ ಪಡುತ್ತಿವೆ. ಒಂದು ವೇಳೆ ಯಾರಾದರೂ ಪೂರ್ಣ ಪರಮಾತ್ಮನ ವಾಸ್ತವಿಕ ಶಬ್ದ (ಸತ್ಯ ನಾಮದ ಮಂತ್ರ) ವನ್ನು ನಮ್ಮಿಂದ ಪಡೆಯುವರೋ, ಅವರನ್ನು ಕಾಲನ ಬಂಧನದಿಂದ ಬಿಡಿಸುವೆವು. ನಮ್ಮ ಹೆಸರು ಮುಕ್ತಿ ದಾತ (ಬಂದೀಛೋಡ) ಎಂದು. ಗೌರವಾನ್ವಿತ ಗರೀಬ್‌ದಾಸರು, ತಮ್ಮ ಗುರು ಹಾಗೂ ಪರಮಾತ್ಮ, ಕಬೀರರ ಆಧಾರದಿಂದ ಹೇಳುತ್ತಿದ್ದಾರೆ ಸತ್ಯನಾಮ ಹಾಗೂ ಸಾರನಾಮವನ್ನು ನಮ್ಮಿಂದ ಉಪದೇಶ ಪಡೆದು ಭಕ್ತಿ ಮಾಡಿದರೆ ಪೂರ್ಣ ಮೋಕ್ಷ ಪ್ರಾಪ್ತಿಯಾಗುತ್ತದೆ. ಇಲ್ಲದಿದ್ದರೆ ನಕಲಿ ನಾಮ ಕೊಡುವ ಸಂತ ಹಾಗೂ ಮಹಂತರ ಸಿಹಿ ಮಾತಿನಲ್ಲಿ ಸಿಕ್ಕಿಕೊಂಡು ಶಾಸ್ತ್ರ ವಿರುದ್ಧವಾದ ಸಾಧನೆ ಮಾಡಿ, ಕಾಲನ ಜಾಲದಲ್ಲಿ ಸಿಲಿಕಿಕೊಳ್ಳುವಿರಿ. ನಂತರ ಕಷ್ಟದ ಮೇಲೆ ಕಷ್ಟ ಪಡುವಿರಿ.**

**ಸಂತ ಗರೀಬ್‌ದಾಸರ ಕೃತ ಅಮರ್ ಗ್ರಂಥದ ಅಧ್ಯಾಯ "ಹಂಸ್ ಪರಮ್‌ಹಂಸ್" ಕಥೆಯ ವಾಣಿ ಸಂಖ್ಯೆ 37–43ರಲ್ಲಿ ಹೇಳಲಾಗಿದೆ:–**

ಮಾಯಾ ಆದಿ ನಿರಂಜನ್ ಭಾಈ, ಅಪನೆ ಜಾಯೆ ಆಪೈ ಖಾಈ ।
ಬ್ರಹ್ಮಾ, ವಿಷ್ಣು, ಮಹೇಶ್ವರ್ ಚೇಲಾ, ಓಂ–ಸೋಹಂ ಕಾ ಹೈ ಖೇಲಾ ॥
ಶಿಖರ್ ಶುನ್ಯ್ ಮೆ ಧರ್ಮ್ ಅನ್ಯಾಯೀ, ಜಿನ್ ಶಕ್ತಿ ಡಾಯನ್ ಮಹಲ್ ಪಠಾಈ ।
ಲಾಖ್ ಗ್ರಾಸ್ಯೆ ನಿತ್ ಉಠಿ ದೂತೀ, ಮಾಯಾ ಆದಿ ತಖ್ತ್ ಕೀ ಕೂತೀ ॥
ಸವಾ ಲಾಖ್ ಘಡಿಯೆ ನಿತ್ ಭಾಂಡೆ, ಹಂಸಾ ಉತ್ಪತ್ತಿ ಪರಲಯ್ ಡಾಂಡೆ ।
ಯೇ ತೀನೋಂ ಚೇಲಾ ಬಟಪಾರೀ, ಸಿರಜೆ ಪುರುಷಾ ಸಿರಜೀ ನಾರೀ ॥
ಖೋಖಾಪುರ್ ಮೇ ಜೀವ್ ಭುಲಾಯೆ, ಸ್ವಪ್ನಾ ಬಹಿಸ್ತ್ ಬೈಕುಂಠ್ ಬನಾಯೆ ।
ಯೌಹ್ ಹರಹಟ್ ಕಾ ಕೂವಾ ಲೋಈ, ಯಾ ಗಲ್ ಬಂಧ್ಯಾ ಹೈ ಸಬ್ ಕೋಈ ॥
ಕೀಡೀ ಕುಂಜರ್ ಔರ್ ಅವತಾರಾ, ಹರಹಟ್ ಡೋರೀ ಬಂಧೆ ಕಈ ಬಾರಾ ।
ಅರಬ್ ಅಲೀಲ್ ಇಂದ್ರ್ ಹುಎ ಹೈ ಭಾಈ, ಹರಹಟ್ ಡೋರೀ ಬಂಧೆ ಸಬ್ ಆಈ ॥
ಶೇಷ್ ಮಹೇಶ್ ಅರೂ ಗಣೇಶ್ ತಾಂಈ, ಹರಹಟ್ ಡೋರಿ ಬಂಧ್ ಸಬ್ ಆಂಈ ।
ಶುಕ್ರಾದಿಕ್ ಬ್ರಹ್ಮಾದಿಕ್ ದೇವಾ, ಹರಹಟ್ ಡೋರಿ ಬಂಧೆ ಸಬ್ ಖೇವಾ ॥
ಕೋಟಿಕ್ ಕರ್ತಾ ಫಿರತಾ ದೇಖ್ಯಾ, ಹರಹಟ್ ಡೋರಿ ಕಹೂಂ ಸುನಿ ಲೇಖಾ ।
ಚುತುರ್ಭುಜಿ ಭಗವಾನ್ ಕಹಾವೈಂ, ಹರಹಟ್ ಡೋರಿ ಬಂಧೆ ಸಬ್ ಆವೈ ॥

ಯೊಹ್ ಹೈ ಖೋಖಾ ಪುರ್ ಕಾ ಕೂವಾ, ಯಾಮೆಂ ಪರ್‌ಯಾ ಸೋ ನಿಶ್ಚಯ್ ಮೂವಾ ॥

ಈ ಮೂವರೂ ದೇವತೆಗಳು (ರಜಗುಣ–ಬ್ರಹ್ಮಾ, ಸತ್ವಗುಣ–ವಿಷ್ಣು, ತಮಗುಣ–ಶಿವ) ಜ್ಯೋತಿ ನಿರಂಜನ್‌ನ(ಕಾಲಬಲಿಯ) ವಶದಲ್ಲಿ ತಮ್ಮ ಮಹಿಮೆಯನ್ನು ತೋರಿಸುತ್ತಾ, ಜೀವಿಗಳನ್ನು ಸ್ವರ್ಗ–ನರಕ ಹಾಗೂ ಈ ಭವಸಾಗರದಲ್ಲಿ (84 ಲಕ್ಷ ಯೋನಿಗಳಲ್ಲಿ) ಅಲೆದಾಡಿಸುತ್ತಿರುತ್ತಾರೆ. ಜ್ಯೋತಿ ನಿರಂಜನ್ ತನ್ನ ಮಾಯೆಯಿಂದ ನಾಗಿಣಿ ಹಾವಿನಂತೆ ಜೀವಿಗಳನ್ನು ಹುಟ್ಟಿಸುತ್ತಾನೆ, ನಂತರ ಸಾಯಿಸುತ್ತಾನೆ. ಯಾವ ರೀತಿ ನಾಗಿಣಿಹಾವು ತನ್ನ ಬಾಲದಿಂದ ಮೊಟ್ಟೆಗಳ ಸುತ್ತ ಕುಂಡಲಿ ಹಾಕಿ ಕುಳಿತು, ನಂತರ ಮೊಟ್ಟೆಗಳನ್ನು ಹೆಡೆಯಿಂದ ಹೊಡೆಯುತ್ತದೆ. ಅದರಿಂದ ಮೊಟ್ಟೆಗಳು ಒಡೆದು ಹೋಗುತ್ತವೆ. ಅದರಿಂದ ಮರಿ ಹೊರ ಬರುತ್ತದೆ ಅವುಗಳನ್ನು ನಾಗಿಣಿಹಾವು ತಿಂದು ಬಿಡುತ್ತದೆ. ಹೆಡೆ ಹೊಡೆಯುವಾಗ ಅನೇಕ ಮೊಟ್ಟೆಗಳು ಒಡೆದು ಹೋಗುತ್ತವೆ. ಏಕೆಂದರೆ ನಾಗಿಣಿಹಾವಿನ ಬಹಳಷ್ಟು ಮೊಟ್ಟೆಗಳಿರುತ್ತವೆ. ಒಡೆದ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಒಂದೊಮ್ಮೆ ಯವುದಾದರೂ ಮರಿ ಕುಂಡಲಿಯಿಂದ (ನಾಗಿಣಿಹಾವಿನ ಬಾಲದಿಂದ ಮಾಡಿದ ವೃತ್ತದಿಂದ) ಹೊರಬಂದ ಹಾವಿನ ಮರಿ ಮಾತ್ರ ಉಳಿಯುತ್ತದೆ. ಇಲ್ಲದಿದ್ದರೆ ಕುಂಡಲಿಯಲ್ಲಿ ಅದು(ನಾಗಿಣಿ) ಬಿಡುವುದಿಲ್ಲ. ಕುಂಡಲಿಯಲ್ಲಿ ಇರುವಷ್ಟು ಮರಿಗಳನ್ನು ತಿಂದು ಬಿಡುತ್ತದೆ, ಯಾವ ಸಾಧಕನು ಬ್ರಹ್ಮ (ಕಾಲಬ್ರಹ್ಮ ಅಂದರೆ ಜ್ಯೋತಿ ನಿರಂಜನ್), ದೇವಿ ದುರ್ಗೆ ಹಾಗೂ ಬ್ರಹ್ಮಾ, ವಿಷ್ಣು, ಶಿವ ಹಾಗೂ ಅನ್ಯ ದೇವತೆಗಳ ಭಕ್ತಿ ಮಾಡುತ್ತಾರೆ, ಅವರು ಕಾಲಬ್ರಹ್ಮ ರೂಪಿ ನಾಗಿಣಿಹಾವಿನ ಚಕ್ರದಲ್ಲಿ ಅಂದರೆ ಕಾಲ ಲೋಕದಲ್ಲಿ ಜನ್ಮ–ಮರಣದ ಚಕ್ರದಲ್ಲಿ ಉಳಿದು ಬಿಡುತ್ತಾರೆ. ಅವರನ್ನು ಕಾಲ ಜ್ಯೋತಿ ನಿರಂಜನನು ತಿನ್ನುತ್ತಾನೆ.

ಮಾಯಾ ಕಾಲೀ ನಾಗಿನೀ, ಅಪನೆ ಜಾಯೆ ಖಾತ್ ।
ಕುಂಡಲೀ ಮೆ ಛೋಡ್ಯೆ ನಹೀ ಸೌ ಬಾತೋಂ ಕೀ ಬಾತ್ ॥

ಇದೇ ರೀತಿ ಇದು ಕಾಲ ಬ್ರಹ್ಮನ ಜಾಲವಾಗಿದೆ. ಅನ್ಯ ಸಂತರಿಂದ ನಾಮೋಪದೇಶ ಪಡೆದು ನಿರಂಜನ್‌ನ ವರೆಗಿನ ಭಕ್ತಿ ಮಾಡಿದರೂ,ಈ ನಿರಂಜನ್ ಕುಂಡಲಿಯಿಂದ (21 ಬ್ರಹ್ಮಾಂಡಗಳಿಂದ) ಹೊರ ಬರಲು ಸಾಧ್ಯವಿಲ್ಲ. ಸ್ವಯಂ ಬ್ರಹ್ಮಾ, ವಿಷ್ಣು, ಮಹೇಶ್, ಆದಿ ಮಾಯಾ (ದುರ್ಗೆ) ಕೂಡಾ ನಿರಂಜನ್‌ನ ಕುಂಡಲಿಯಲ್ಲಿ ಸಿಲುಕಿದ್ದಾರೆ. ಪಾಪ ಇವರು ಅವತಾರ ಧರಿಸಿ ಬರುತ್ತಾರೆ ಮತ್ತು ಹುಟ್ಟು–ಸಾವು ಚಕ್ರದಲ್ಲಿ ಸಿಲುಕಿರುತ್ತಾರೆ. ಆದ್ದರಿಂದ ವಿಚಾರ ಮಾಡಬೇಕು ಸೊಹಂ ಮಂತ್ರವನ್ನು ಧ್ರುವ, ಪ್ರಹ್ಲಾದ, ಸುಖ್‌ದೇವ ಋಷಿ ಎಲ್ಲರೂ ಜಪ ಮಾಡಿದರು. ಆದರೂ ಪಾರಾಗಲಿಲ್ಲ. ಏಕೆಂದರೆ ಶ್ರೀ ವಿಷ್ಣು ಪುರಾಣದ ಪ್ರಥಮ ಅಂಶದ 12ನೇ ಅಧ್ಯಾಯದ 93ನೇ ಶ್ಲೋಕ, ಪುಟ 51ರಲ್ಲಿ ಹೀಗೆ ಬರೆದಿದೆ. 'ದ್ರುವ'ನಿಗೆ ಒಂದು ಕಲ್ಪದವರೆಗೆ (ಒಂದು ಸಾವಿರ ಚತುರ್ಯುಗ) ಮಾತ್ರ ಮುಕ್ತಿ ದೊರಕಿದೆ. ಆದ್ದರಿಂದ ಕಾಲ ಲೋಕದಲ್ಲಿಯೆ ಉಳಿದುಕೊಂಡನು. "ಓಂ ನಮೋ ಭಗವತೆ ವಾಸುದೇವಾಯ" ಎಂದು ಜಪ ಮಾಡಿದ ಭಕ್ತರು ಸಹ ಕೃಷ್ಣನ ವರೆಗಿನ ಭಕ್ತಿ ಮಾಡುತ್ತಿದ್ದಾರೆ. ಇವರೂ ಸಹ 84 ಲಕ್ಷ ಯೋನಿಗಳ ಚಕ್ರದಿಂದ ಪಾರಾಗುವುದಿಲ್ಲ. ಇಲ್ಲಿ ಗೌರವಾನ್ವಿತ ಗರೀಬ್ ದಾಸ್ ಹಾಗೂ ಕಬೀರ್ ಪರಮೇಶ್ವರರ ವಾಣಿಯಲ್ಲಿ ಪ್ರತ್ಯಕ್ಷ ಪ್ರಮಾಣ ಇದೆ.

ಅನಂತ್ ಕೋಟಿ ಅವತಾರ್ ಹೈ, ಮಾಯಾ ಕೆ ಗೋವಿಂದ್ ।
ಕರ್ತಾ ಹೊ ಹೊ ಅವತರೆ, ಬಹುರ್ ಪಡೆ ಜಗ್ ಫಂದ್ ॥


ಸತ್ಯಪುರುಷ ಕಬೀರ್ ಪರಮೇಶ್ವರರ ಭಕ್ತಿಯಿಂದಲೇ ಜೀವಾತ್ಮ ಮೋಕ್ಷ ಪಡಯುತ್ತದೆ. ಎಲ್ಲಿಯವರೆಗೆ ಜೀವಾತ್ಮ ಸತ್ಯಲೋಕಕ್ಕೆ ಮರಳಿ ಹೋಗುವುದಿಲ್ಲ ಅಲ್ಲಿಯವರೆಗೆ ಕಾಲನ ಲೋಕದಲ್ಲಿ ಹೀಗೆಯೆ ಕರ್ಮ ಮಾಡುವನು ಮತ್ತು ದಾನ ಧರ್ಮದ ಗಳಿಕೆಯನ್ನು ಸ್ವರ್ಗರೂಪಿ ಹೊಟೇಲ್‌ಗಳಲ್ಲಿ ಖರ್ಚು ಮಾಡಿ ಮರಳಿ ಕರ್ಮದ ಆಧಾರದಿಂದ 84 ಲಕ್ಷ ಪ್ರಕಾರದ ಜೀವಿಗಳ ಶರೀರದಲ್ಲಿ ಕಷ್ಟ ಪಡುವ ಈ ಕಾಲ ಲೋಕದಲ್ಲಿ ಸುತ್ತುತ್ತಿರುವನು. ಕೋಟ್ಯಾಂತರ(ಗೋವಿಂದ)ಬಹ್ಮಾ, ವಿಷ್ಣು, ಮಹೇಶ್ವರರು

**ದುರ್ಗೆ(ಮಾಯೆ)ಯಿಂದ ಉತ್ಪನ್ನರಾಗಿ ಮರಣಹೊಂದಿದ್ದಾರೆ. ದೇವರ ಅವತಾರಗಳಾಗಿ ಆಗಮಿಸಿ ನಂತರ ಕರ್ಮಗಳ ಬಂಧನದಲ್ಲಿ ಬಂಧಿತರಾಗಿ ಕರ್ಮವನ್ನು ಭೋಗಿಸಿ 84 ಲಕ್ಷ ಯೋನಿಗಳಲ್ಲಿ ಹೋದರು. ಹೇಗೆ ಶ್ರೀವಿಷ್ಣುವಿಗೆ ನಾರದರ ಶಾಪ ತಗುಲಿ ಅಯೋಧ್ಯಾದಲ್ಲಿ ಶ್ರೀರಾಮಚಂದ್ರನ ರೂಪದಲ್ಲಿ ಆಗಮಿಸಿ, ನಂತರ ಸುಗ್ರಿವನ ಅಣ್ಣ ವಾಲಿಯನ್ನು ಕೊಂದನು. ಈ ಕರ್ಮದ ಶಿಕ್ಷೆಯನ್ನು ಅನುಭವಿಸಲು ಶ್ರೀಕಷ್ಣನಾಗಿ ಜನನವಾಯಿತು. ಆಗ ವಾಲಿಯ ಆತ್ಮ ಬೇಟೆಗಾರನಾಗಿ ತನ್ನ ಪತೀಕಾರ ತಿರಿಸಿಕೊಂಡನು. ಶ್ರೀಕೃಷ್ಣನ ಕಾಲಿಗೆ ವಿಷಯುಕ್ತ ಬಾಣ ಹೊಡೆದು ವಧೆ ಮಾಡಿದನು.**

**ಗೌರವಾನ್ವಿತ ಗರೀಬ್‌ದಾಸರು ತಮ್ಮ ವಾಣಿಯಲ್ಲಿ ಹೇಳಿದ್ದಾರೆ:–**

ಬ್ರಹ್ಮಾ, ವಿಷ್ಣು, ಮಹೇಶ್ವರ್ ಮಾಯಾ, ಔರ್ ಧರ್ಮರಾಯ್ ಕಹಿಯೆ ।
ಇನ್ ಪಾಂಚೋ ಮಿಲ್ ಪರಪಂಚ್ ಬನಾಯಾ, ವಾಣಿ ಹಮಾರಿ ಲಹಿಯೇ ॥
ಇನ್ ಪಾಂಚೋ ಮಿಲ್ ಜೀವ್ ಅಟಕಾಯೆ, ಜುಗನ್–ಜುಗನ್ ಹಮ್ ಆನ್ ಛುಟಾಯೆ ।
ಬಂದೀ ಛೋಡ್ ಹಮಾರಾ ನಾಮ್ಂ ಅಜರ್, ಅಮರ್ ಹೈ ಅಸ್ಥಿರ್ ಠಾಮ್ಂ ॥
ಪೀರ್ ಪೈಗಂಬರ್ ಕುತುಬ್ ಔಲಿಯಾ, ಸುರ್–ನರ್ ಮುನಿ ಜನ್ ಜ್ಞಾನಿ ।
ಯೆತಾ ಕೊ ತೋ ರಾಹ್ ನ ಪಾಯಾ, ಜಮ್ ಕೆ ಬಂಧೆ ಪ್ರಾಣೀ ॥
ಧರ್ಮರಾಯ್ ಕೀ ಧೂಮಾ–ಧಾಮೀ, ಜಮ್ ಪರ್ ಜಂಗ್ ಚಲಾಊಂ ।
ಜೋರಾ ಕೊ ತೊ ಜಾನ್ ನ ದೂಂಗಾ, ಬಾಂದ್ ಅದಲ್ ಘರ್ ಲ್ಯಾಊಂ ॥
ಕಾಲ್–ಅಕಾಲ್ ದೋಹೂಂ ಕೊ ಮೋಸೂಂ, ಮಹಾಕಾಲ್ ಸಿರ್ ಮೂಂಡೂ ।
ಮೈಂ ತೊ ತಖ್ತ್ ಹಜೂರಿ ಹುಕಮೀ, ಚೋರ್ ಖೋಜ್ ಕೂ ಢೂಂಡೂ ॥
ಮೂಲಾ ಮಾಯಾ ಮಗ್ ಮೆ ಬೈಠೀ, ಹಂಸಾ ಚುನ್–ಚುನ್ ಖಾಈ ।
ಜ್ಯೋತಿ ಸ್ವರೂಪಿ ಭಯಾ ನಿರಂಜನ್, ಮೈಂ ಹೀ ಕರ್ತಾ ಭಾಈ ॥
ಸಂಹಸ್ ಅಠಾಸೀ ದೀಪ್ ಮುನೀಶ್ವರ್, ಬಂಧೇ ಮೂಲಾ ಡೋರೀ ।
ಏತ್ಯಾಂ ಮೆಂ ಜಮ್ ಕಾ ತಲಬಾನಾ, ಚಲಿಯೆ ಪುರುಷ್ ಕೀಶೋರೀ ॥
ಮೂಲಾ ಕಾ ತೊ ಮಾಥಾ ದಾಗೂಂ, ಸತಕಿ ಮೊಹರ್ ಕರೂಂಗಾ ।
ಪುರುಷ್ ದೀಪ್ ಕೂ ಹಂಸ್ ಚಲಾಊಂ, ದರಾ ನ್ ರೋಕನ್ ದೂಂಗಾ ॥
ಹಮ್ ತೊ ಬಂದೀ ಛೋಡ್ ಕಹಾವಾಂ, ಧರ್ಮರಾಯ್ ಹೈ ಚಕವೈ ।
ಸತ್‌ಲೋಕ್ ಕೀ ಸಕಲ್ ಸುನಾವಾಂ, ವಾಣಿ ಹಮರಿ ಅಖವೈ ॥
ನೌ ಲಖ್ ಪಟ್ಟಣ್ ಊಪರ್ ಖೇಲೂಂ, ಸಾಹದರೆ ಕೂಂ ರೋಕೂಂ ।
ದ್ವಾದಶ್ ಕೋಟಿ ಕಟಕ್ ಸಬ್ ಕಾಟೂಂ, ಹಂಸ್ ಪಠಾಊಂ ಮೋಖೂಂ ॥
ಚೌದಹ್ ಭುವನ್ ಗಮನ್ ಹೈ ಮೇರಾ, ಜಲ್–ಥಲ್ ಮೆ ಸರಬಂಗೀ ।
ಖಾಲೀಕ್ ಖಲಕ್ ಖಲಕ್ ಮೇ ಖಾಲಿಕ್, ಅವಿಗತ್ ಅಚಲ್ ಅಭಂಗೀ ॥
ಅಗರ್ ಅಲೀಲ್ ಚಕ್ರ್ ಹೈ ಮೇರಾ, ಜಿತ್ ಸೆ ಹಮ್ ಚಲ್ ಆಏ ।
ಪಾಂಚೋ ಪರ್ ಪ್ರವಾನಾ ಮೇರಾ, ಬಂಧಿ ಛುಟಾವನ್ ಧಾಯೆ ॥
ಜಹಾಂ ಓಂಕಾರ್ ನಿರಂಜನ್ ನಾಹೀ, ಬ್ರಹ್ಮಾ, ವಿಷ್ಣು, ವೇದ್ ನಹೀ ಜಾಹೀಂ ।
ಜಹಾಂ ಕರತಾ ನಹೀ ಕಾಲ್ ಭಗವಾನಾ, ಕಾಯಾ ಮಾಯಾ ಪಿಂಡ್ ನ ಪ್ರಾಣಾ ॥
ಪಾಂಚ್ ತತ್ವ್ ತೀನೋ ಗುಣ್ ನಾಹೀಂ, ಜೋರಾ ಕಾಲ್ ದೀಪ್ ನಹೀಂ ಜಾಹೀಂ ।
ಅಮರ್ ಕರೂಂ ಸತ್‌ಲೋಕ್ ಪಠಾಂಊ, ತಾತೈಂ ಬಂದೀ ಛೋಡ್ ಕಹಾಂಊಂ ॥

**ಗೌರವಾನ್ವಿತ ಗರೀಬ್‌ದಾಸರು, ಕಬೀರ ಪರಮೇಶ್ವರರ ಮಹಿಮೆಯನ್ನು ವರ್ಣಿಸುತ್ತಾ ಹೇಳುತ್ತಾರೆ, ನಮ್ಮ ಪ್ರಭು ಕವಿರ್ದೇವ ಮುಕ್ತಿದಾತರು. ಮುಕ್ತಿದಾತರೆಂದರೆ ಕಾಲನ ಸೆರೆಯಿಂದ ಬಿಡುಗಡೆ ಮಾಡಿ ಮುಕ್ತಿಕೊಡುವವರು, ಕಾಲ ಬ್ರಹ್ಮನ 21 ಬ್ರಹ್ಮಾಂಡಗಳಲ್ಲಿ ಎಲ್ಲ ಜೀವಿಗಳು,**




ಯೊಹ್ ಹರಹಟ್ ಕಾ ಕುಆಂ ಲೊಈ, ಯಾ ಗಲ್ ಬಂಧ್ಯಾ ಹೈ ಸಬ್ ಕೊಈ ।
ಕೀಢೀ ಕುಂಜರ್ ಔರ್ ಅವತಾರಾ, ಹರಹಟ್ ಡೋರೀ ಬಂಧೆ ಕಈ ಬಾರಾ ॥

**ಕಾಲನ ಲೋಕದಲ್ಲಿ ಜನನ–ಮರಣರೂಪಿ ಹರಹಟ್ (ಚಕ್ರ)**

ಪಾಪದ ಕಾರಣ ಕಾಲನ ಸೆರೆಯಲ್ಲಿವೆ. ಪೂರ್ಣ ಪರಮಾತ್ಮ ಕಬೀರ ಪರಮೇಶ್ವರರು ಪಾಪ ನಾಶ ಮಾಡುವವರು. ಪಾಪವನ್ನು ಬ್ರಹ್ಮಾ, ವಿಷ್ಣು, ಶಿವ, ದುರ್ಗೆ, ಬ್ರಹ್ಮ, ಪರಬ್ರಹ್ಮ ಈ ಯಾರೂ ನಾಶಮಾಡಲಾರರು. ಯಾರ ಕರ್ಮ ಹೇಗಿದೆಯೊ, ಹಾಗೇಯೆ ಫಲವೂ ದೊರೆಕುತ್ತದೆ. ಇದಕ್ಕಾಗಿ ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರದಲ್ಲಿ ಹೀಗೆ ಬರೆದಿದೆ. 'ಕವಿರಂಘಾರಿರಸಿ'=(ಕವಿರ್) ಕವಿರ್ದೇವ (ಕಬೀರ ಪರಮೇಶ್ವರರು) (ಅಂಘ್ ಅರಿ) ಪಾಪಗಳ ಶತ್ರು, 'ಬಂಭಾರಿರಸಿ'=(ಬಂಭಾರಿಃ) ಬಂಧನಗಳ (ಅರಿ) ಶತ್ರು ಅಂದರೆ ಬಂಧನಗಳ ಶತ್ರು ಅಂದರೆ ಮುಕ್ತಿದಾತರು(ಬಂದೀಛೋಡ್).

ಈ ಐವರ ಮೇಲೆ (ಬ್ರಹ್ಮಾ, ವಿಷ್ಣು, ಶಿವ ಮಾಯಾ, ಧರ್ಮರಾಯ್) ಸತ್ಯಪುರುಷ ಪರಮಾತ್ಮ (ಕವಿರ್ದೇವ) ನಿರುವನು. ಇವನೇ ಸತ್ಯಲೋಕದ ಪ್ರಭು. ಉಳಿದ ಎಲ್ಲಾ ಪರಬ್ರಹ್ಮ, ಬ್ರಹ್ಮ (ಧರ್ಮರಾಯ), ಮಾಯಾ(ದುರ್ಗಾ) ಹಾಗೂ ಬ್ರಹ್ಮಾ, ವಿಷ್ಣು, ಶಿವ ನಾಶಹೊಂದುವ ಭಗವಂತರು. ಮಹಾಪ್ರಳಯದಲ್ಲಿ ಇವರು ಹಾಗೂ ಇವರ ಎಲ್ಲ ಲೋಕಗಳು ಸಮಾಪ್ತವಾಗುತ್ತವೆ. ಸಾಮಾನ್ಯ ಜೀವಿಗಿಂತ ಇವರ ಆಯಸ್ಸು ಎಷ್ಟೋ ಸಾವಿರ ಪಟ್ಟು ಹೆಚ್ಚಾಗಿದೆ. ಆದರೆ ಯಾವ ಸಮಯ ನಿರ್ಧಾರಿತವಾಗಿದೆ ಅದು 1 ದಿನ ನಿಶ್ಚಿತವಾಗಿ ಪೂರ್ಣವಾಗುವುದು. ಈ ವಿಷಯದಲ್ಲಿ ಗೌರವಾನ್ವಿತ ಗರೀಬ್‌ದಾಸರು ಹೀಗೆ ಹೇಳಿದ್ದಾರೆ:-

ಶಿವ್ ಬ್ರಹ್ಮಾ ಕಾ ರಾಜ್, ಇಂದ್ರ್ ಗಿನತೀ ಕಹಾಂ। ಚಾರ್ ಮುಕ್ತಿ ವೈಕುಂಠ್ ಸಮಝ್, ಯೆತಾ ಲಹ್ಯಾ॥
ಸಂಖ್ ಜುಗನ್ ಕೀ ಜುನೀ, ಉಮ್ರ್ ಬಡ್ ಧಾರಿಯಾ। ಜಾ ಜನನೀ ಕುರ್ಬಾನ್, ಸು ಕಾಗಜ್ ಪಾರಿಯಾ॥
ಯೆತೀ ಉಮ್ರ್ ಬುಲಂದ್ ಮರ್ಹೆಗಾ ಅಂತ್ ರೆ। ಸತ್‌ಗುರು ಲಗೆ ನ ಕಾನ್ ನ ಭೈಂಟೆ ಸಂತ್ ರೆ ॥

ಶಂಖ ಯುಗದ(ಬಹಳ ವರ್ಷಗಳ) ಆಯಸ್ಸು ಇದ್ದರೂ ಸಹ 1 ದಿನ ಖಂಡಿತ ಮುಗಿಯುತ್ತದೆ. ಒಂದೊಮ್ಮೆ ಸತ್ಯಪುರುಷ ಪರಮಾತ್ಮ (ಕವಿರ್ದೇವ) ಕಬೀರ ಪರಮೇಶ್ವರರ ಪ್ರತಿನಿಧಿ ಪೂರ್ಣ ಸಂತ (ಗುರು) ಅವರು 3 ನಾಮದ ಮಂತ್ರ(ಅದರಲ್ಲಿ ಒಂದು ಓಂ+ತತ್+ಸತ್ ಸಾಂಕೇತಿಕವಾಗಿವೆ) ಕೊಡುತ್ತಾರೆ. ಹಾಗೂ ಅವರಿಗೆ ಪೂರ್ಣ ಸಂತನಿಂದ ನಾಮೋಪದೇಶ ಕೊಡುವ ಆದೇಶವಿದೆ, ಅವರಿಂದ ಉಪದೇಶ ಪಡೆದು ನಾಮ ಜಪದ ಗಳಿಕೆ ಮಾಡಿದರೆ, ನಾವು ಸತ್ಯಲೋಕದ ಅಧಿಕಾರಿ ಹಂಸರಾಗುತ್ತೆವೆ. ಸತ್ಯಸಾಧನೆ ಮಾಡದ, ದೀರ್ಘ ಆಯಸ್ಸಿನಿಂದ ಪ್ರಯೋಜನವೇನು ಏಕೆಂದರೆ ನಿರಂಜನ್‌ನ ಲೋಕದಲ್ಲಿ ದುಃಖವೇ ದುಃಖವಿದೆ.

ಕಬೀರ್, ಜೀವನಾ ತೊ ಥೋಡಾ ಹೀ ಭಲಾ, ಜೈ ಸತ್ ಸುಮಿರನ್ ಹೋಯ್ ।
ಲಾಖ್ ವರ್ಷ ಕಾ ಜೀವನಾ, ಲೆಖೈ ಧರೈ ನಾ ಕೋಯ್ ॥

ಒಂದೊಮ್ಮೆ ಸತ್ಯ ಸಾಧನೆ ಮಾಡಿದರೆ ಕಡಿಮೆ ಆಯಸ್ಸು ಒಳ್ಳೆಯದು. ಸತ್ಯ ಪುರುಷನ ಸತ್ಯ ಸಾಧನೆ ಬಿಟ್ಟು ಹಾಗೂ ಕಾಲಬ್ರಹ್ಮನ ಮತ್ತು ದೇವಿ-ದೇವತೆಗಳ ಪೂಜೆ ಮಾಡಿ ಮತ್ತು ಪ್ರಾಣಾಯಮ ಇತ್ಯಾದಿ ಮಾಡಿ ಹೆಚ್ಚು ವರ್ಷ ಬದುಕುವವರ ಯಾವುದೇ ಲೆಕ್ಕ (ಅಕೌಂಟ್) ಮೋಕ್ಷ ಮಾರ್ಗದಲ್ಲಿ ಮಾಡುವುದಿಲ್ಲ. ಇಷ್ಟು ಅಧಿಕ ಆಯಸ್ಸು (ಶಂಕರನದಷ್ಟು) ಸಿಕ್ಕಿದರೆ ಒಂದು ದಿನ ಮೃತ್ಯು ಖಂಡಿತ ಆಗುವುದು. ಭಕ್ತಿ ತಪ್ಪಾಗಿದ್ದರೆ, ಜನನ ಹಾಗೂ ಮರಣದ ಚಕ್ರ ಇರುವುದು, ಇಂಥ ಆಯಸ್ಸಿನ ಲಾಭವೇನು.

ಕಬೀರ ಪರಮೇಶ್ವರರು ತಮ್ಮ ಪರಿಚಯವನ್ನು ಸ್ವತಃ ತಿಳಿಸಿದ್ದಾರೆ. ಈ ದೇವರುಗಳಿಗಿಂತ ಮೇಲೆ ಅಸಂಖ್ಯೆ ಭುಜಗಳುಳ್ಳ ಸತ್ಯಪುರುಷನಿದ್ದಾನೆ. ಅವನು ಸತ್ಯಲೋಕ(ಸತ್ಯಖಂಡ, ಸತ್ಯಧಾಮ್)ದಲ್ಲಿರುತ್ತಾನೆ. ಅವನ ಅಧಿನ ಎಲ್ಲಾ ಲೋಕಗಳು [ಪರಬ್ರಹ್ಮನ 7 ಶಂಖ ಬ್ರಹ್ಮಾಂಡ, ಕಾಲ ಬ್ರಹ್ಮನ 21 ಬ್ರಹ್ಮಾಂಡಗಳು, ಶಕ್ತಿ(ದುರ್ಗಾ), ಬ್ರಹ್ಮಾ, ವಿಷ್ಣು, ಶಿವನ ಲೋಕಗಳು ಹಾಗೂ ಅನ್ಯ ಸರ್ವ ಬ್ರಹ್ಮಾಂಡ] ಇವೆ. ಯಾರು ಸತ್ಯನಾಮ/ಸಾರನಾಮವನ್ನು ಸಂಪೂರ್ಣ ಜ್ಞಾನಿ ಅಂದರೆ ಪೂರ್ಣ ಗುರುವಿನಿಂದ ಪಡೆದು ಜಪಿಸಿದರೆ ಸತ್ಯಲೋಕಕ್ಕೆ ಹೋಗುತ್ತಾರೆ, ಅಂತಹ ಆತ್ಮಗಳಿಗೆ ಪುನಃ ಜನ್ಮ ಆಗುವುದಿಲ್ಲ. ಕವಿರ್ದೇವರು ಸ್ವತಃ ಎಲ್ಲ ಬೇರೆ-ಬೇರೆ ಲೋಕಗಳಲ್ಲಿ ಬೇರೆ-ಬೇರೆ

ನಾಮಗಳಿಂದ ವಿರಾಜಮಾನರಾಗಿದ್ದಾರೆ. ಹೇಗೆಂದರೆ ಅಲಖ್‌ಲೋಕದಲ್ಲಿ 'ಅಲಖ್ ಪುರುಷ', ಅಗಮ್‌ಲೋಕದಲ್ಲಿ 'ಅಗಮ್‌ಪುರುಷ', ಅಕಹ/ಅನಾಮಿ ಲೋಕದಲ್ಲಿ ಅನಾಮಿ ಪುರುಷ ರೂಪದಲ್ಲಿ ವಿರಾಜಮಾನರಿದ್ದಾರೆ. ಇವಂತು ಅವರ ಉಪನಾಮಗಳಿವೆ ಆ ಪೂರ್ಣ ಪುರುಷನ ವಾಸ್ತವಿಕ ನಾಮ 'ಕವಿರ್ದೇವ'(ಭಾಷೆಯ ಭಿನ್ನತೆಯಿಂದ ಕಬೀರ ಸಾಹೇಬ) ಇದೆ.

## "ಗೌರವಾನ್ವಿತ ಗುರು ನಾನಕ್ ರವರ ವಾಣಿಯಲ್ಲಿ ಸೃಷ್ಟಿ ರಚನೆಯ ಸಂಕೇತ"

**ಶ್ರೀ ಗುರು ನಾನಕ್ ರವರ ಅಮೃತವಾಣಿ, ಮಹಲಾ-1, ರಾಗ್ ಬಿಲಾವಲು, ಅಂಶ-1 ("ಗುರು ಗ್ರಂಥ" ಪುಟ.839)**

ಆಪೆ ಸಚು ಕೀಆ ಕರ್ ಜೋಡಿ । ಅಂಡಜ್ ಫೋಡಿ ಜೋಡಿ ವಿಛೋಡ್ ॥
ಧರತೀ ಆಕಾಶ್ ಕೀಯೆ ಬೈಸಣ್ ಕಉ ಥಾಉ । ರಾತಿ ದಿನಂತು ಕೀಏ ಭಉ-ಭಾಉ ॥
ಜಿನ್ ಕೀಏ ಕರಿ ವೆಖಣ್ ಹಾರಾ (3)
ತ್ರಿತೀಆ ಬ್ರಹ್ಮಾ-ಬಿಸನು-ಮಹೇಸಾ । ದೇವಿ ದೇವ್ ಉಪಾಏ ವೇಸಾ । (4)
ಪಉಣ್ ಪಾಣೀ ಅಗನೀ ಬಿಸರಾಉ । ತಾಹೀ ನಿರಂಜನ್ ಸಾಚೊ ನಾಉ ।
ತಿಸು ಮಹಿ ಮನು ಆ ರಹಿಆ ಲಿವ್ ಲಾಈ । ಪ್ರಣವತಿ ನಾನಕು ಕಾಲು ನ ಖಾಈ ॥ 10 ॥

**ಭಾವಾರ್ಥ:-** ಸತ್ಯಪುರುಷನು ಸ್ವತಃ ತನ್ನ ಕೈಯಿಂದಲೇ ಸಮಸ್ತ ಸೃಷ್ಟಿಯ ರಚನೆ ಮಾಡಿರುವನು. ಅವನೇ ಮೊಟ್ಟೆಯನ್ನು ಮಾಡಿದನು. ನಂತರ ಅದರಿಂದ ಜ್ಯೋತಿ ನಿರಂಜನನು ಹೊರಬಂದನು. ಅದೇ ಪೂರ್ಣ ಪರಮಾತ್ಮನು ಸರ್ವ ಜೀವಿಗಳಿಗೆ ವಾಸಿಸಲು, ಭೂಮಿ, ಆಕಾಶ, ಗಾಳಿ, ನೀರು, ಅಗ್ನಿ, ಎಂಬ ಪಂಚ ತತ್ವಗಳನ್ನು ರಚಿಸಿದ. ತನ್ನಿಂದ ರಚಿತವಾದ ಸೃಷ್ಟಿಗೆ, ಸ್ವಯಂ ಸಾಕ್ಷಿಯಾಗಿರುವನು. ಬೇರೆ ಯಾರೂ ಸರಿಯಾದ ಮಾಹಿತಿ ಕೊಡಲಾರರು. ನಂತರ ಮೊಟ್ಟೆ ಒಡೆದರಿಂದ ಹೊರಬಂದ ಜ್ಯೋತಿ ನಿರಂಜನ್‌ನ ನಂತರ ಶ್ರೀಬ್ರಹ್ಮಾ, ಶ್ರೀವಿಷ್ಣು, ಹಾಗೂ ಶ್ರೀಶಿವನ ಉತ್ಪತ್ತಿ ಆಯಿತು. ಆದಾದ ನಂತರ ಅನ್ಯ ದೇವಿ-ದೇವತೆಗಳ ಉತ್ಪತ್ತಿ ಆಯಿತು ಹಾಗು ಅನೇಕ ಜೀವಿಗಳ ಉತ್ಪತ್ತಿಯಾಯ್ತು. ಅದರ ನಂತರ ಅನ್ಯ ದೇವತೆಗಳ ಜೀವನ ಚರಿತ್ರೆ, ಹಾಗೂ ಅನ್ಯ ಋಷಿಗಳ ಅನುಭವದ 6 ಶಾಸ್ತ್ರ ಹಾಗೂ 18 ಪುರಾಣಗಳಾದವು. ಪೂರ್ಣ ಪರಮಾತ್ಮನ ನಿಜ ನಾಮ(ಸತ್ಯನಾಮ) ಸಾಧನೆಯನ್ನು ಅನನ್ಯ ಮನದಿಂದ(ದೃಢಚಿತ್ತದಿಂದ) ಮಾಡುವುದರಿಂದ ಗುರುಮರ್ಯಾದೆಯಲ್ಲಿ(ಪ್ರಣವತಿ) ಇದ್ದರೆ ಕಾಲನು ಭಕ್ಷಿಸುವುದಿಲ್ಲ ಎಂದು ಗುರುನಾನಕ್‌ರವರು ಹೇಳಿದ್ದಾರೆ.

**ರಾಗ್ ಮಾರುಂ (ಅಂಶ) ಅಮೃತವಾಣಿ ಮಹಲಾ 1 (ಗು. ಗ್ರಂ. ಪು. 1037)**

ಸುನಹು ಬ್ರಹ್ಮಾ, ಬಿಸನು ಮಹೇಸು, ಉಪಾಯೆ । ಸುನೆ ವರತೆ ಜುಗ್ ಸಭಾಯೆ ॥
ಇಸು ಪದ್ ಬಿಚಾರೆ ಸೊ ಜನು ಪುರಾ । ತಿಸ್ ಮಿಲಿಯೆ ಭರಮು ಚುಕಾಇದಾ ॥3॥
ಸಾಮ್ ವೇದು, ರುಗು, ಜುಜರು, ಅಥರಬಣು । ಬ್ರಹಮೆಂ ಮುಖ್ ಮಾಇಆ ಹೈ ತ್ರೈಗುಣ್
ತಾ ಕೀ ಕೀಮತ್ ಕಹಿ ನ್ ಸಕ್ಕೈ । ಕೊ ತಿಉ ಬೋಲೆ ಜಿಉ ಬುಲಾಈದಾ । (9)

ಮೇಲಿನ ಅಮೃತ ವಾಣಿಯ ಸಾರಾಂಶ ಹೀಗಿದೆ "ಮೊಟ್ಟೆ 2 ಭಾಗವಾದಾಗ ಯಾರು ಹೊರ ಬಂದನು? ಅವನು ನಂತರ ಬ್ರಹ್ಮಲೋಕದ ಸುನ್ನ ಅಂದರೆ ಗುಪ್ತ ಸ್ಥಾನದಲ್ಲಿ (ರಹಸ್ಯ ಸ್ಥಾನದಲ್ಲಿ) ಬ್ರಹ್ಮಾ, ವಿಷ್ಣು, ಶಿವನ ಉತ್ಪತ್ತಿ ಮಾಡಿದ? ಹಾಗು ಆ ಪರಮಾತ್ಮ ಯಾರು? ಕಾಲನ ಬಾಯಿಯಿಂದ 4 ವೇದಗಳನ್ನ(ಪವಿತ್ರ ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವವೇದ) ಉಚ್ಚಾರಿಸಿದ. ಪೂರ್ಣ ಪರಮಾತ್ಮ ಹೇಗೆ ಬೇಕು ಹಾಗೆ ಪ್ರತ್ಯೇಕ ಜೀವಿಗಳಿಂದ ಉಚ್ಚರಿಸುತ್ತಾನೆ. ಈ ಎಲ್ಲಾ ಜ್ಞಾನವನ್ನು ಪೂರ್ಣವಾಗಿ ಹೇಳುವ ಸಂತ ಸಿಕ್ಕರೆ ಅವನ ಬಳಿ ಹೋಗಿ ಹಾಗು ಯಾರು ಎಲ್ಲಾ ಸಂದೇಹಗಳನ್ನು ಸಂಪೂರ್ಣ ನಿವಾರಿಸುತ್ತಾನೆ, ಅವನೇ ಪೂರ್ಣಸಂತ ಅಂದರೆ ತತ್ವದರ್ಶಿ ಸಂತನು.

**ಗೌರವಾನ್ವಿತ ಗುರುನಾನಕ್‌ರವರ ಅಮೃತವಾಣಿ. ಶ್ರೀಗುರುಗ್ರಂಥದ ಪುಟ.929 ರಾಗ್**

**ರಾಮ್‌ಕಲೀ ಮಹಲಾ 1, ದಖಣೀ ಓಅಂಕಾರ:–**

ಓಅಂಕಾರಿ ಬ್ರಹ್ಮಾ ಉತಪತಿ । ಓ ಅಂಕಾರೂ ಕೀಆ ಜಿನಿ ಚಿತ್ । ಓಅಂಕಾರಿ ಸೈಲ್ ಜುಗ್ ಭಏ । ಓ ಅಂಕಾರಿ ಬೇದ್ ನಿರಮಏ । ಓಅಂಕಾರಿ ಸಬದಿ ಉಧರೆ । ಓಅಂಕಾರಿ ಗುರುಮುಖಿ ತರೆ । ಓನಮ್ ಅಖರ್ ಸುಣಹೂ ಬೀಚಾರು । ಓನಮ್ ಅಖರು ತ್ರಿಭವಣ್ ಸಾರು ।

**ಮೇಲಿನ ಅಮೃತ ವಾಣಿಯಲ್ಲಿ ಶ್ರೀಗುರುನಾನಕ್‌ರವರು ಹೇಳುತ್ತಿದ್ದಾರೆ:– ಓಂಕಾರ ಅರ್ಥಾತ್ ಜ್ಯೋತಿನಿರಂಜನ(ಕಾಲ)ನಿಂದ, ಬ್ರಹ್ಮಾನ ಉತ್ಪತ್ತಿಯಾಯಿತು. ಅನೇಕ ಯುಗಗಳವರೆಗೆ ಸ್ವೇಚ್ಛೆಯಿಂದ ಇದ್ದು, ಓಂಕಾರನು (ಬ್ರಹ್ಮನು) ವೇದಗಳನ್ನು ಉತ್ಪತ್ತಿ ಮಾಡಿದ. ಅದು ಬ್ರಹ್ಮಾನಿಗೆ ಪ್ರಾಪ್ತವಾಯಿತು. 3 ಲೋಕಗಳ ಭಕ್ತಿಯ ಕೇವಲ 'ಓಂ' ಮಂತ್ರವಿದೆ ಅದನ್ನೇ ವಾಸ್ತವದಲ್ಲಿ ಜಪ ಮಾಡುವುದು. ಈ 'ಓಂ' ಮಂತ್ರದ ಉಪದೇಶವನ್ನು ಪೂರ್ಣ ಸದ್ಗುರುವಿನಿಂದ ಪಡೆದು ಜಪ ಮಾಡಿದರೆ, ಉದ್ಧಾರವಾಗುವುದು.**

**ವಿಶೇಷ:– ಶ್ರೀಗುರು ನಾನಕ್‌ರವರು 3 ಮಂತ್ರಗಳ (ಓಂ–ತತ್–ಸತ್) ಸ್ಥಾನ–ಸ್ಥಾನಗಳಲ್ಲಿನ ರಹಸ್ಯಮಯವಾಗಿ ವಿವರಿಸಿದ್ದಾರೆ, ಇದನ್ನು ಕೇವಲ ಪೂರ್ಣ ಸಂತರು ಮಾತ್ರ ತಿಳಿಯಬಲ್ಲರು ಹಾಗೂ ಈ 3 ಮಂತ್ರಗಳ ಜಪವನ್ನು ಉಪದೇಶ ಪಡೆಯುವವರಿಗೆ ತಿಳಿಸಲಾಗುತ್ತದೆ. (ಪು.1038):–**

ಉತ್ತಮ್ ಸತಿಗುರು ಪುರುಷ್ ನಿರಾಲೆ, ಸಬದಿ ರತೆ ಹರಿ ರಸ್ ಮತವಾಲೆ ।
ರಿಧಿ, ಬುಧಿ, ಸಿಧಿ, ಗಿಆನ್ ಗುರು ತೆ ಪಾಇಯೆ । ಪೊರೆ ಭಾಗ್ ಮಿಲಾಈದಾ ॥ 15 ॥
ಸತಿಗುರು ತೆ ಪಾಏ ಬೀಚಾರಾ, ಸುನ್ ಸಮಾಧಿ ಸಚೆ ಘರಬಾರಾ ।
ನಾನಕ್ ನಿರಮಲ್ ನಾದು ಸಬದ್ ಧುನಿ, ಸಚು ರಾಮ್ಯೆಂ ನಾಮಿ ಸಮಾಇದಾ ॥ 17 ॥

**ಮೇಲಿನ ಅಮೃತ ವಾಣಿಯ ಭಾವಾರ್ಥ:– ಈ ವಾಸ್ತವಿಕ ಜ್ಞಾನ ನೀಡುವ ಸದ್ಗುರುವಂತು ವಿರಳ. ಅವರು ಕೇವಲ ನಾಮ ಜಪವನ್ನು ಜಪಿಸಲು ಕೊಡುತ್ತಾರೆ ಮತ್ತು ಜಪಿಸುತ್ತಾರೆ. ಬೇರೆ ಹಠಯೋಗ ಸಾಧನೆಯನ್ನು ಹೇಳುವುದಿಲ್ಲ. ನಿಮಗೆ ಹಣ, ಸಂಪತ್ತು, ಪದವಿ, ಬುದ್ಧಿ ಅಥವಾ ಭಕ್ತಿಯ ಶಕ್ತಿಯೂ ಬೇಕಾಗಿದ್ದರೆ ಅದನ್ನು ಪೂರ್ಣ ಜ್ಞಾನಿ ಸಂತರು ಪ್ರದಾನ ಮಾಡುವರು. ಇಂತಹ ಪೂರ್ಣ ಸಂತರು ಬಹಳ ಭಾಗ್ಯವಂತರಿಗೆ ದೊರೆಯುತ್ತಾರೆ. ಆ ಪೂರ್ಣ ಸಂತರು ಮಾತ್ರ ವಿವರಿಸಬಲ್ಲರು ಮೇಲೆ ಆಕಾಶದಲ್ಲಿ ಪರಮೇಶ್ವರನು ತಮ್ಮ ವಾಸ್ತವಿಕ ಮನೆಯನ್ನು ಮೇಲೆ ಸತ್ಯಲೋಕದಲ್ಲಿ ರಚಿಸಿದ್ದಾನೆ. ಅಲ್ಲಿ ಒಂದು ವಾಸ್ತವಿಕ ಸಾರನಾಮದ ಶಬ್ದ ಮೊಳಗುತ್ತಿದೆ. ಆ ಆನಂದದಲ್ಲಿ ಅವಿನಾಶಿ ಪರಮೇಶ್ವರನ ಸಾರಶಬ್ದದಿಂದ ಸೇರಬಹುದು ಅಂದರೆ ಆ ವಾಸ್ತವಿಕ ಸುಖದ ಸ್ಥಾನದಲ್ಲಿ ವಾಸವಾಗಬಹುದು. ಬೇರೆ ನಾಮಗಳಿಂದಾಗಲಿ, ಬೇರೆ ಅಲ್ಪಜ್ಞಾನಿ ಗುರುಗಳಿಂದಾಗಲಿ, ಇದು ಸಾಧ್ಯವಿಲ್ಲ.**

**ಆಂಶಿಕ ಅಮೃತವಾಣಿ ಮಹಲಾ ಪಹಲಾ (ಶ್ರೀ ಗುರು ಗ್ರಂಥ. ಪುಟ 359–360)**

ಸಿವ್ ನಗರೀ ಮಹಿ ಆಸಣಿ ಬೈಸಉ ಕಲಪ್ ತ್ಯಾಗೀ ವಾದ್‌ಂ । (1)
ಸಿಂಙೀ ಸಬದ್ ಸದಾ ಧುನಿ ಸೋಹೈ ಅಹಿನಿಸಿ ಪೂರೈ ನಾದ್‌ಂ । (2)
ಹರಿ ಕೀರತಿ ರಹ್ ರಾಸಿ ಹಮಾರಿ ಗುರು ಮುಖ್ ಪಂಥ್ ಅತೀತ್‌ಂ । (3)
ಸಗಲೀ ಜ್ಯೋತಿ ಹಮಾರಿ ಸಂಮಿಆ ನಾನಾ ವರಣ್ ಅನೇಕ್‌ಂ ।
ಕಹ್ ನಾನಕ್ ಸುಣಿ ಭರಥರೀ ಜೋಗೀ ಪಾರ್‌ಬ್ರಹ್ಮ ಲಿವ್ ಏಕ್‌ಂ । (4)

**ಮೇಲಿನ ಅಮೃತವಾಣಿಯ ಭಾವಾರ್ಥ:– ಶ್ರೀಗುರುನಾನಕ್‌ರವರು ಹೇಳುತ್ತಿದ್ದಾರೆ, ಹೇ ಭರ್ಥರಿ ಯೋಗೀ! ನಿಮ್ಮ ಸಾಧನೆಯು ಭಗವಂತ ಶಿವನವರೆಗೆ ಇದೆ. ಇದರಿಂದ ನಿಮಗೆ ಶಿವನಗರಿಯಲ್ಲಿ ಸ್ಥಾನ ಸಿಕ್ಕಿದೆ. ಶರೀರದಲ್ಲಿ ಶೃಂಗದ ಶಬ್ದ ಮೊದಲಾದವು ಆಗುತ್ತಿದೆ. ಅದು ಈ ಕಮಲಗಳ ಶಬ್ದ. ಟೆಲಿವಿಷನ್ ರೀತಿಯಲ್ಲಿ ಪ್ರತ್ಯೇಕ ದೇವರ ಲೋಕದಿಂದ ಶರೀರದಲ್ಲಿ ಕೇಳಿಸುತ್ತಿದೆ.**

ನಾವಂತು, ಒಬ್ಬನೇ ಪರಮಾತ್ಮ ಪಾರಬ್ರಹ್ಮ ಅಂದರೆ ಎಲ್ಲರಿಗಿಂತಲೂ ಬೇರೆಯಿರುವ ಪೂರ್ಣ ಪರಮಾತ್ಮ, ಆ ಒಬ್ಬ ಪರಮಾತ್ಮನ ಅನನ್ಯ ಮನಸ್ಸಿನಿಂದ ಭಕ್ತಿ ಮಾಡುತ್ತೇವೆ.

ನಾವು ಆಡಂಬರ(ಕೈಯಲ್ಲಿ ದಂಡಧರಿಸಿ, ಬಸ್ಮಲೇಪನ ಮಾಡಿಕೊಳ್ಳುವುದು) ಮಾಡುವುದಿಲ್ಲ. ನಾನಂತೂ ಸರ್ವ ಜೀವಿಗಳನ್ನು ಒಬ್ಬ ಪೂರ್ಣ ಪರಮಾತ್ಮನ ಸಂತಾನವೆಂದು ತಿಳಿದಿದ್ದೇನೆ. ಎಲ್ಲವೂ ಅವನ ಶಕ್ತಿಯಿಂದಲೇ ನಡೆಯುತ್ತಿದೆ. ನಮ್ಮ ಧನವಂತು ಗುರುವಿನಿಂದ ಉಪದೇಶ ಪಡೆದ ಸತ್ಯನಾಮ ಜಪವೇ ಆಗಿದೆ ಹಾಗು ಕ್ಷಮೆ ಮಾಡುವುದೇ ನಮ್ಮ ವೇಷ ಭೂಷಣ ಆಗಿದೆ. ನಾನಂತೂ ಪೂರ್ಣ ಪರಮಾತ್ಮನ ಉಪಾಸಕ ಹಾಗು ಪೂರ್ಣ ಸದ್ಗುರುವಿನ ಭಕ್ತಿ ಮಾರ್ಗ ಇದಕ್ಕಿಂತ ಭಿನ್ನವಾಗಿದೆ.

**ಅಮೃತವಾಣಿ ರಾಗ್ ಆಸಾ ಮಹಲಾ 1 (ಶ್ರೀಗುರು ಗ್ರಂಥ ಪುಟ.420)**

॥ಆಸಾ ಮಹಲಾ 1 ॥ ಜಿನಿ ನಾಮು ವಿಸಾರಿಆ ದೂಜೈ ಭರಮಿ ಭುಲಾಈ । ಮೂಲು ಛೋಡಿ ಡಾಲೀ ಲಗೆ, ಕಿಆ ಪಾವಹಿ ಛಾಈ ॥ 1 ॥ ಸಾಹಿಬು ಮೆರಾ ಏಕು ಹೈ ಅವರು ನಹೀಂ ಭಾಈ । ಕಿರಪಾ ತೆ ಸುಖು ಪಾಇಆ ಸಾಚೆ ಪರಥಾಈ ॥3॥ ಗುರ್ ಕೀ ಸೇವಾ ಸೋ ಕರೆ ಜಿಸು ಆಪಿ ಕರಾಏ । ನಾನಕ್ ಸಿರು ದೆ ಛೂಟೀಏ ದರಗಹ್ ಪತಿ ಪಾಏ ॥8 ॥ 18 ॥

ಮೇಲಿನ ವಾಣಿಯ ಭಾವಾರ್ಥ:– ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ, ಯಾರು ಪೂರ್ಣ ಪರಮಾತ್ಮನ ವಾಸ್ತವಿಕ ನಾಮವನ್ನು ಮರೆತು ಬೇರೆ ಭಗವಂತನ ನಾಮ ಜಪ ಮಾಡುತ್ತಾರೋ, ಅವರು ಭ್ರಮೆಯಲ್ಲಿದ್ದಾರೆ. ಬೇರನ್ನು (ಪೂರ್ಣ ಪರಮಾತ್ಮ) ಬಿಟ್ಟು ಕೊಂಬೆಗಳಿಗೆ (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವನ) ನೀರು ಹಾಕಿದಂತೆ (ಪೂಜೆ ಮಾಡಿದಂತೆ) ಈ ಸಾಧನೆಯಿಂದ ಯಾವುದೇ ಲಾಭವಾಗುವುದಿಲ್ಲ ಅಂದರೆ ಹೀಗೆ ಮಾಡಿದರೆ ಗಿಡ ಒಣಗುತ್ತದೆ. ಅದರ ನೆರಳಿನಲ್ಲಿ ಕೂಳಿತುಕೊಳ್ಳಲೂ ಆಗುವುದಿಲ್ಲ ಇದರ ಸಾರವಿಷ್ಟೆ, ಶಾಸ್ತ್ರ ವಿಧಿಯನ್ನು ಬಿಟ್ಟು ಮಾಡುವ ಸಾಧನೆಯು ವ್ಯರ್ಥ ಪ್ರಯತ್ನವಾಗುವುದು ಯಾವುದೇ ಲಾಭವಿಲ್ಲ, ಇದಕ್ಕೆ ಪ್ರಮಾಣವು ಪವಿತ್ರ ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿದೆ. ಆ ಪೂರ್ಣ ಪರಮಾತ್ಮನನ್ನು ಪಡೆಯಲು, ಮನಬಂದಂತೆ ಸಾಧನೆ ಮಾಡುವುದನ್ನು ಬಿಟ್ಟು, ಪೂರ್ಣ ಗುರುದೇವರನ್ನು ಆಶ್ರಯಿಸಿ. ಅವರಿಂದ ಸತ್ಯನಾಮ ಜಪದ ಉಪದೇಶ ಪಡೆದಲ್ಲಿ ಮೋಕ್ಷ ಸಂಭವವಿದೆ. ಇಲ್ಲವಾದರೆ ಮೃತ್ಯುವಿನ ನಂತರ ನರಕಕ್ಕೆ ಹೋಗಬೇಕಾಗುವುದು.

**ಶ್ರೀಗುರುಗ್ರಂಥ ಪುಟ ಸಂ.843–844.**

ಬಿಲಾವಲು ಮಹಲಾ 1 ॥ ಮೈ ಮನ್ ಚಾಹು ಘಣಾ ಸಾಚಿ ವಿಗಾಸೀ ರಾಮ್ । ಮೋಹಿ ಪ್ರೇಮ್ ಪಿರೆ ಪ್ರಭು ಅಬಿನಾಸಿ ರಾಮ್ ॥ ಅವಿಗತೊ ಹರಿ ನಾಥು ನಾಥಹ್ ತಿಸೈ ಭಾವೈ ಸೋ ಥೀಏ । ಕಿರಪಾಲು ಸದಾ ದಇಆಲು ದಾತಾ ಜೀಆ ಅಂದರಿ ತೂಂ ಜೀಯೆ । ಮೈಂ ಆಧಾರು ತೇರಾ ತೂ ಖಸಮು ಮೇರಾ ಮೈ ತಾಣು ತಕೀಆ ತೆರಓ । ಸಾಚಿ ಸೂಚಾ ಸದಾ ನಾನಕ್ ಗುರಸಬದಿ ಝುಗರು ನಿಬೇರಓ ॥ 4 ॥ 2॥

ಮೇಲಿನ ಅಮೃತವಾಣಿಯಲ್ಲಿ ಶ್ರೀಗುರುನಾನಕ್‌ರವರು ಹೀಗೆ ಹೇಳುತ್ತಿದ್ದಾರೆ. ಅವಿನಾಶೀ ಪೂರ್ಣ ಪರಮಾತ್ಮನು ನಾಥ್‌ಗಳ ನಾಥ್‌ರು ಅಂದರೆ ದೇವರುಗಳ ದೇವರು (ಸರ್ವ ಪ್ರಭುಗಳು ಶ್ರೀಬ್ರಹ್ಮಾ, ಶ್ರೀವಿಷ್ಣು, ಶ್ರೀಶಿವ, ಶ್ರೀದುರ್ಗಾ, ಬ್ರಹ್ಮ ಹಾಗೂ ಪರಬ್ರಹ್ಮನೂ ನಾಥ ಅಂದರೆ ಸ್ವಾಮಿ). ನಾನಂತೂ ಸತ್ಯನಾಮವನ್ನು ಹೃದಯದಲ್ಲಿ ಧಾರಣೆ ಮಾಡಿರುವೆ. ಹೇ ಪರಮಾತ್ಮ! ಸರ್ವ ಜೀವಿಗಳ ಜೀವನಾಧಾರ ಕೂಡಾ ನೀವೇ. ನಾನು ನಿಮ್ಮ ಆಶ್ರಯದಲ್ಲಿದ್ದೇನೆ, ತಾವು ನನ್ನ ಸ್ವಾಮಿ, ತಾವೇ ಗುರುವಿನ ರೂಪದಲ್ಲಿ ಬಂದು, ಸತ್ಯ ಭಕ್ತಿಯ ನಿರ್ಣಾಯಕ ಜ್ಞಾನ ಪ್ರದಾನ ಮಾಡಿ, ಎಲ್ಲ ಜಗಳಗಳನ್ನು ಕೊನೆಗೊಳಿಸಿದಿರಿ ಅರ್ಥಾತ್ ಸಂದೇಹ ನಿವಾರಣೆ ಮಾಡಿದಿರಿ.

**(ಶ್ರೀಗುರುಗ್ರಂಥ ಪುಟ ಸಂ.721 ರಾಗ್ ತಿಲಂಗ್ ಮಹಲಾ 1)**

ಯಕ್ ಅರ್ಜ್ ಗುಫತಮ್ ಪೇಶ್ ತೊ ದರ್ ಕೂನ್ ಕರತಾರ್ ।
ಹಕ್ಕಾ ಕಬೀರ್ ಕರೀಮ್ ತೂ ಬೇಯೆಬ್ ಪರವರದಿಗಾರ್ ।
ನಾನಕ್ ಬುಗೋಯದ್ ಜನ್ ತುರಾ ತೇರೆ ಚಾಕರಾಂ ಪಾಖಾಕ್ ।

**ಮೇಲಿನ ಅಮೃತವಾಣಿಯು ಸ್ಪಷ್ಟ ಪಡಿಸುತ್ತಿದೆ (ಹಕ್ಕಾ ಕಬೀರ್) ತಾವು ಸತ್ಯ ಕಬೀರ (ಕೂನ ಕರತಾರ) ಶಬ್ದ ಶಕ್ತಿಯಿಂದ ರಚನೆ ಮಾಡಿರುವ ಶಬ್ದ ಸ್ವರೂಪಿ ಪ್ರಭು. ಅರ್ಥಾತ್ ಸಕಲ ಸೃಷ್ಟಿಯ ರಚನಾಕಾರ ತಾವೇ(ಬೆಎಬ್) ನಿರ್ವಿಕಾರ (ಪರವರದಿಗಾರ್) ಎಲ್ಲರ ಪಾಲನೆ ಮಾಡುವವ ದಯಾಳು ಪ್ರಭು, ನಾನು ನಿಮ್ಮ ದಾಸರ–ದಾಸ.**

**(ಶ್ರೀಗುರುಗ್ರಂಥ ಪುಟ ಸಂಖ್ಯೆ 24 ರಾಗ್ ಸೀರೀ ಮಹಲಾ 1)**

ತೇರಾ ಏಕ್ ನಾಮ್ ತಾರೆ ಸಂಸಾರ್, ಮೈಂ ಏಹಾ ಆಸ್ ಏಹೋ ಆಧಾರ್ ।
ನಾನಕ್ ನೀಚ್ ಕಹೈ ಬಿಚಾರ್, ದಾಣಕ್ ರೂಪ್ ರಹಾ ಕರತಾರ್ ।

**ಮೇಲೆ ಹೇಳಿರುವ ಅಮೃತವಾಣಿಯಲ್ಲಿ, ಸ್ಪಷ್ಟಪಡಿಸಲಾಗಿದೆ ಯಾರು ಕಾಶಿಯಲ್ಲಿನ ಧಾಣಕನೋ(ಜುಲಾಹಾ) ಅವನೇ(ಕರತಾರ್) ಸೃಷ್ಟಿಕರ್ತನು. ಅತಿ ಆಧೀನತೆಯಿಂದ ಶ್ರೀ ಗುರು ನಾನಕ್ ರವರು ಹೇಳುತ್ತಿದ್ದಾರೆ. ನಾನು ಸತ್ಯ ಹೇಳುತ್ತಿದ್ದೇನೆ. ಈ ಧಾಣಕ(ನೇಕಾರ) ಅರ್ಥಾತ್ ಕಬೀರ ನೇಕಾರನೇ ಪೂರ್ಣ ಬ್ರಹ್ಮ 'ಸತ್ಯಪುರುಷನು'.**

**ವಿಶೇಷ:– ಮೇಲಿನ ಪ್ರಮಾಣಗಳ ಸಾಂಕೇತಿಕ ಜ್ಞಾನದಿಂದ ಸ್ಪಷ್ಟವಾಯ್ತು, ಸೃಷ್ಟಿಯ ರಚನೆ ಹೇಗೆ ಆಯಿತೆಂದು. ಈಗ ಪೂರ್ಣ ಪರಮಾತ್ಮರನ್ನು ಪ್ರಾಪ್ತಿಮಾಡಿಕೊಳ್ಳಬೇಕು. ಈ ಕಾರ್ಯ ಪೂರ್ಣ ಸಂತರಿಂದ ನಾಮೋಪದೇಶ ಪಡೆದಲ್ಲಿ ಮಾತ್ರ ಸಾಧ್ಯವಿದೆ.**

## "ಬೇರೆ ಸಂತರ ಮೂಲಕ ಸೃಷ್ಟಿ ರಚನೆಯ ದಂತ ಕಥೆ"

**ಅನ್ಯ ಸಂತರು ಸೃಷ್ಟಿ ರಚನೆಯ ಜ್ಞಾನವನ್ನು ಹೇಳಿದ್ದಾರೆ. ಅದು ಹೇಗಿದೆ? ದಯವಿಟ್ಟು ಓದಿರಿ ಕೆಳಗಿನಂತಿದೆ:– ರಾಧಾಸ್ವಾಮಿ ಪಂಥದ ಸಂತರ ಹಾಗೂ ಧನ–ಧನ ಸದ್ಗುರು ಪಂಥದ ಸಂತರ ವಿಚಾರ.**

**ಪವಿತ್ರ ಪುಸ್ತಕ 'ಜೀವನ ಚರಿತ್ರ' ಪರಮ ಸಂತ ಬಾಬಾ ಜಯಮಲ್ ಸಿಂಗ್ ಮಹಾರಾಜ ಪು.ಸಂ 102–103 ರಿಂದ ಸೃಷ್ಟಿ ರಚನೆ (ಸಾವನ್ ಕೃಪಾಲ್ ಪಬ್ಲಿಕೇಶನ್, ದೆಹಲಿ)**

ಮೊದಲು ಸತ್ಯಪುರುಷನು ನಿರಾಕಾರನಾಗಿದ್ದನು. ನಂತರ ಆಕಾರದಲ್ಲಿ ಬಂದರು ಮೇಲಿನ ಮೂರು ನಿರ್ಮಲ ಮಂಡಲಗಳು (ಸತ್ಯಲೋಕ, ಅಲಖ್‌ಲೋಕ, ಅಗಮ್‌ಲೋಕ) ರಚಿಸಿದ್ದವು ಹಾಗೂ ಪ್ರಕಾಶ ಹಾಗು ಮಂಡಲಗಳ ಶಬ್ದ (ಧ್ವನಿ) ಆಯಿತು.

**ಪವಿತ್ರ ಪುಸ್ತಕ ಸಾರವಚನ(ನಸರ) ಪ್ರಕಾಶಕ:– ರಾಧಾಸ್ವಾಮಿ ಸತ್ಸಂಗ ಸಭಾ, ದಯಾಲಬಾಗ್ ಆಗರಾ "ಸೃಷ್ಟಿ ಕೀ ರಚನಾ" ಪುಟ 8:–**

ಮೊದಲು ಕತ್ತಲೇ ಇತ್ತು. ಅದರಲ್ಲಿ ಪುರುಷ ಸುನ್ನ ಸಮಾಧಿ (ಆಕಾಶ) ಯಲ್ಲಿದ್ದರು. ಆಗ ಯಾವ ರಚನೆಯೂ ಆಗಿರಲಿಲ್ಲ. ನಂತರ ಹರ್ಷವಾದಾಗ ಶಬ್ದ ಪ್ರಕಟವಾಯಿತು ಮತ್ತು ಅದರಿಂದ ಎಲ್ಲಾ ರಚನೆ ಆಯಿತು. ಮೊದಲು ಸತ್ಯಲೋಕ ನಂತರ ಸತ್ಯಪುರುಷನ ಕಲೆಯಿಂದ 3 ಲೋಕ, ಎಲ್ಲಾ ವಿಸ್ತಾರವಾಯಿತು.

**ಈ ಜ್ಞಾನ ಹೀಗಿದೆ, ಒಬ್ಬನು ನೌಕರಿಗೆ ಹೋಗುವ ಮೊದಲು ಸಂದರ್ಶನಕ್ಕಾಗಿ(ಇಂಟರ್ ವ್ಯೂ)ಹೋದನು. ನೀನು ಮಹಾಭಾರತ ಓದಿರುವೆಯಾ? ಎಂದು ಅಧಿಕಾರಿಯು ಕೇಳಿದಾಗ, ಅವನು ಕಂಠಸ್ಥ ಮಾಡಿರುವೆನೆಂದು ಉತ್ತರಿಸಿದ. ಅಧಿಕಾರಿ ಕೇಳಿದರು 5 ಜನ ಪಾಂಡವರ ಹೆಸರನ್ನು ಹೇಳು, ಆಗ ಆ ವ್ಯಕ್ತಿ ಉತ್ತರ ಕೊಟ್ಟ ಒಬ್ಬ ಭೀಮ ಇನ್ನೊಬ್ಬ ಅವರ ಅಣ್ಣ. ಇನ್ನೊಬ್ಬ ಅವನ ತಮ್ಮ, ಇನ್ನಿಬ್ಬರು ಇದ್ದರು, ಅವರ ಹೆಸರನ್ನು ಮರೆತಿರುವೆ ಎಂದ. ಮೇಲೆ ಹೇಳಿರುವ**

ಸೃಷ್ಟಿ ರಚನೆಯ ಜ್ಞಾನ ಹೀಗೆಯೇ ಇದೆ.

ಸತ್ಯಪುರುಷ ಹಾಗೂ ಸತ್ಯಲೋಕದ ಮಹಿಮೆ ಹೇಳುವ ಹಾಗೂ ಐದು ನಾಮ (ಓಂಕಾರ, ಜ್ಯೋತಿ ನಿರಂಜನ, ರರಂಕಾರ, ಸೋಹಂ, ಸತ್ಯನಾಮ) ಕೊಡುವವರು ಹಾಗೂ ಮೂರು ನಾಮ (ಅಕಾಲಮೂರ್ತಿ–ಸತ್ಯಪುರುಷ–ಶಬ್ಧ ಸ್ವರೂಪಿ ರಾಮ) ನಾಮ ಕೊಡುವ ಸಂತರಿಂದ ರಚಿತವಾದ ಪುಸ್ತಕಗಳಿಂದ ಕೆಲವು ನಿಷ್ಕರ್ಷ:–

ಸಂತಮತ ಪ್ರಕಾಶ ಭಾಗ 3 ಪುಟ 76ರಲ್ಲಿ ಬರೆದಿದೆ :– "ಸತ್ಯಖಂಡ ಅಥವಾ ಸತ್ಯನಾಮ್ ನಾಲ್ಕನೆಯ ಲೋಕ" ಇಲ್ಲಿ "ಸತ್ಯನಾಮ"ಕ್ಕೆ ಸ್ಥಾನ ಎಂದು ಹೇಳಿದ್ದಾರೆ. ನಂತರ ಈ ಪುಸ್ತಕದ 79ನೇ ಪುಟದಲ್ಲಿ ಹೀಗೆ ಬರೆದಿದ್ದಾರೆ– "ಒಬ್ಬ ರಾಮ ದಶರಥನ ಮಗ. ಎರಡನೆಯ ರಾಮ 'ಮನಸ್ಸು' ಮೂರನೆಯ ರಾಮ ಬ್ರಹ್ಮ, ನಾಲ್ಕನೆಯ ರಾಮ 'ಸತ್ಯನಾಮ' ಇವನೇ ನಿಜವಾದ ರಾಮ. ನಂತರ ಈ ಪುಸ್ತಕದ ಮೊದಲನೆಯ ಭಾಗ ಪುಟ ಸಂಖ್ಯೆ 17 ರಲ್ಲಿ ಬರೆದಿದೆ. "ಯಾವುದನ್ನು ಸತ್ಯನಾಮ" ಎನ್ನುತ್ತೇವೇಯೊ ಅದೇ ಸತ್ಯಲೋಕ." ಪವಿತ್ರ ಪುಸ್ತಕ "ಸಾರ ವಚನ ನಸರ್ ಅಂದರೆ ವಾರ್ತಿಕ" ಪುಟ ಸಂಖ್ಯೆ 3ರಲ್ಲಿ ಬರೆದಿದೆ. ಈಗ ತಿಳಿಯಬೇಕು. ರಾಧಾಸ್ವಾಮಿ ಪದ್ ಎಲ್ಲಕ್ಕಿಂತ ಉಚ್ಚ ಸ್ಥಾನದಲ್ಲಿದೆ. ಅದನ್ನೇ ಸಂತರು ಸತ್ಯಲೋಕ, ಸತ್ಯ ಖಂಡ, ಸಾರಶಬ್ದ, ಸತ್ಯ ಶಬ್ದ, ಸತ್ಯನಾಮ ಮತ್ತು ಸತ್ಯಪುರುಷ ಎಂದು ವ್ಯಾಖ್ಯಾನ ಮಾಡಿದ್ದಾರೆ. ಪವಿತ್ರ ಪುಸ್ತಕ ಸಾರವಚನ (ನಸರ್) ಆಗ್ರಾದಿಂದ ಪ್ರಕಾಶಿತವಾಗಿರುವುದು. ಪುಟ ಸಂಖ್ಯೆ 4ರಲ್ಲಿ ಮೇಲೆ ಹೇಗೆ ವರ್ಣಿಸಿದೆಯೋ, ಹಾಗೇ ವರ್ಣನೆ ಇದೆ. ಪವಿತ್ರ ಪುಸ್ತಕ "ಸಚ್ಚಖಂಡ ಕೀ ಸಡಕ್" ಪುಟ ಸಂಖ್ಯೆ 226 ರಲ್ಲಿ "ಸಂತರ ದೇಶ ಸತ್ಯಖಂಡ ಅಥವಾ ಸತ್ಯಲೋಕವಾಗಿದೆ. ಅದನ್ನೇ ಸತ್ಯನಾಮ ಸತ್ಯಶಬ್ಧ' ಸಾರಶಬ್ಧ ಎಂದು ಕರೆಯುತ್ತಾರೆ.

ವಿಶೇಷ:– ಮೇಲಿನ ಹೇಳಿಕೆಗಳು ಹೇಗಿವೆಯೆಂದರೆ ಯಾರೋ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಪಟ್ಟಣವನ್ನೇ ನೋಡಿಲ್ಲ. ಕಾರ್ ನೋಡಿಲ್ಲ. ಪೆಟ್ರೋಲ್ ನೋಡಿಲ್ಲ. ಡ್ರೈವಿಂಗ್‌ನ ಜ್ಞಾನವೂ ಇಲ್ಲ. ಆದರೆ ಹೇಳುತ್ತಾನೆ. "ನಾನು ಕಾರಿನಲ್ಲಿ ಕುಳಿತು ಆನಂದ ಪಡುತ್ತೇನೆ ಎಂದು." ನಂತರ ಜೊತೆಗಾರರು ಕೇಳಿದರು "ಕಾರು ಹೇಗಿದೆ–ಪೆಟ್ರೋಲ್ ಹೇಗಿದೆ ಡ್ರೈವರ್ ಹೇಗಿದ್ದಾನೆ? ತಾನೆ ಗುರುವೆಂದು ಹೇಳುತ್ತಿದ್ದ ವ್ಯಕ್ತಿ ಹೇಳಿದ ಪಟ್ಟಣಕ್ಕನೇ ಕಾರು, ಪೆಟ್ರೋಲ್‌ಗನೇ ಕಾರು, ಡ್ರೈವರ್‌ನಿಗೆ ಕಾರು, ರಸ್ತೆಗನೇ ಕಾರು ಎನ್ನುತ್ತಾರೆ.

ವಿಚಾರವನ್ನು ಮಾಡೋಣ ಬನ್ನಿ:– ಸತ್ಯಪುರುಷನು ಪೂರ್ಣ ಪರಮಾತ್ಮನಾಗಿದ್ದಾನೆ. ಸತ್ಯನಾಮವು "ಓಂ–ತತ್" ಈ 2 ಸಾಂತೇತಿಕ ಮಂತ್ರಗಳಿಂದ ಕೂಡಿವೆ. ಹಾಗೂ ನಂತರ 'ಸಾರನಾಮ'ವು ಸಾಧಕನಿಗೆ ಪೂರ್ಣ ಗುರುವಿನಿಂದ ಉಪದೇಶಿಸಲ್ಪಡುತ್ತದೆ. ಈ ಸತ್ಯನಾಮ ಹಾಗೂ ಸಾರನಾಮ ಸ್ಮರಣೆ ಮಾಡುವ ನಾಮಗಳು, ಸತ್ಯಲೋಕವೆಂಬುದು ಸತ್ಯಪುರುಷನಿರುವ ಸ್ಥಾನ. ಪುಣ್ಯಾತ್ಮರೇ! ಈಗ ಸತ್ಯ ಹಾಗೂ ಅಸತ್ಯವನ್ನು ಸ್ವತಃ ನೀವೆ ನಿರ್ಧರಿಸಿ.

# "ಭಕ್ತಿಯ ಮರ್ಯಾದೆ"

## ನಾಮದೀಕ್ಷೆ ಪಡೆಯುವ ವ್ಯಕ್ತಿಗಳಿಗೆ ಅವಶ್ಯಕ ಮಾಹಿತಿ

**1)ಪೂರ್ಣ ಗುರುವಿನಿಂದ ದೀಕ್ಷೆ ಪಡೆಯಬೇಕು:–**

**ಪೂರ್ಣ ಗುರುವನ್ನು ಗುರುತಿಸುವುದು:–** ಇಂದಿನ ಕಲಿಯುಗದಲ್ಲಿ ಪೂರ್ಣ ಗುರುವನ್ನು ಗುರುತಿಸುವುದು ಭಕ್ತ ಸಮಾಜಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಆದರೆ ಇದಕ್ಕೆ ಒಂದು ಸರಳವಾದ ಉಪಾಯವಿದೆ. ಯಾವ ಗುರುವು ಶಾಸ್ತ್ರಕ್ಕೆ ಅನುಸಾರವಾಗಿ ಭಕ್ತಿ ಮಾಡುತ್ತಾನೋ ಮತ್ತು ತನ್ನ ಅನುಯಾಯಿಗಳ ಅಂದರೆ ಶಿಷ್ಯರ ಮೂಲಕ ಭಕ್ತಿಯನ್ನು ಮಾಡಿಸುತ್ತಾನೋ ಅವನೇ ಪೂರ್ಣ ಸಂತನು. ಏಕೆಂದರೆ ಭಕ್ತಿಮಾರ್ಗದ ಸಂವಿಧಾನ ಧಾರ್ಮಿಕ ಶಾಸ್ತ್ರ ಅಂದರೆ ಕಬೀರ ಸಾಹೇಬರ ವಾಣಿ, ಗುರುನಾನಕ್‌ರವರ ವಾಣೀ, ಸಂತ ಗರೀಬ್‌ದಾಸ ಮಹಾರಾಜರ ವಾಣೀ, ಸಂತ ಧರ್ಮ್‌ದಾಸರ ವಾಣೀ, ವೇದ, ಗೀತೆ, ಪುರಾಣ, ಕುರಾನ್, ಪವಿತ್ರ ಬೈಬಲ್ ಮುಂತಾದವು. ಯಾವ ಗುರುವು ಶಾಸ್ತ್ರಗಳ ಅನುಸಾರವಾಗಿ ಭಕ್ತಿ ಸಾಧನೆಯನ್ನು ತಿಳಿಸುತ್ತಾನೋ ಮತ್ತು ಭಕ್ತ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಾನೋ ಅವನು ಪೂರ್ಣ ಗುರು. ಇಲ್ಲದಿದ್ದರೆ ಶಾಸ್ತ್ರದ ವಿರುದ್ಧ ಸಾಧನೆ ಮಾಡಿಸುವವನು ಭಕ್ತ ಸಮಾಜದ ದೊಡ್ಡ ಶತ್ರು. ಈ ಅಮೂಲ್ಯವಾದ ಮಾನವ ಜನ್ಮದೊಂದಿಗೆ ಅವನು ಆಟವಾಡುತ್ತಿದ್ದಾನೆಂದು ಅರ್ಥ, ಅಂಥಾ ಗುರು ಅಥವಾ ಸಂತನನ್ನು ಭಗವಂತನ ಆಸ್ಥಾನದಲ್ಲಿ ಘೋರ ನರಕದಲ್ಲಿ ತಲೆಕೆಳಗಾಗಿ ತೂಗು ಹಾಕಲಾಗುತ್ತದೆ.

ಉದಾಹರಣೆಗಾಗಿ ಯಾರಾದರೂ ಅಧ್ಯಾಪಕರು ಪಠ್ಯಕ್ರಮದ ಹೊರಪಡಿಸಿ ಬೇರೆ ಶಿಕ್ಷಣ ನೀಡಿದರೆ ಅಂತಹವರು ವಿದ್ಯಾರ್ಥಿಗಳ ಶತ್ರು.

**ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ:–**

ನ, ಮಾಮ್, ದುಷ್ಕೃತಿನಃ, ಮೂಢಾಃ, ಪ್ರದ್ಯನ್ತೆ, ನರಾಧಮಾಃ,
ಮಾಯಯಾ, ಅಪಹೃತಜ್ಞಾನಾಃ, ಆಸುರಮ್, ಭಾವಮ್, ಆಶ್ರಿತಾಃ ॥

**ಅನುವಾದ:–** ಮಾಯೆಯ ಮೂಲಕ ಯಾರ ಜ್ಞಾನ ಹರಣವಾಗಿದೆ ಅಂಥಾ ಅಸುರ ಸ್ವಭಾವವನ್ನು ಧರಿಸಿರುವ ಮನುಷ್ಯರಲ್ಲಿ ನೀಚ ದೂಷಿತ ಕರ್ಮವನ್ನು ಮಾಡುವ ಮೂರ್ಖರು ನನ್ನನ್ನು ಭಜಿಸುವುದಿಲ್ಲ. ಅಂದರೆ ಅವರು 3 ಗುಣಗಳ (ರಜಗುಣ–ಬ್ರಹ್ಮಾ, ಸತ್ವಗುಣ–ವಿಷ್ಣು, ತಮಗುಣ–ಶಿವನ) ಸಾಧನೆಯನ್ನೇ ಮಾಡುತ್ತಿರುತ್ತಾರೆ. ಯಜುರ್ವೇದದ 40ನೇ ಅಧ್ಯಾಯದ 10ನೇ ಶ್ಲೋಕದಲ್ಲಿ (ಸಂತ ರಾಮ್‌ಪಾಲ್ ದಾಸರಿಂದ ವ್ಯಾಖ್ಯಾನಿಸಿದ):–

ಅನ್ಯದೇವಾಹುಃಸಂಭವಾದನ್ಯದಾಹುರಸಂಭವಾತ್, ಇತಿ ಶುಶ್ರುಮ್ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೆ ॥

**ಅನುವಾದ:–** ಪರಮಾತ್ಮನ ಬಗ್ಗೆ ಸಾಮಾನ್ಯವಾಗಿ ಹೇಳಬೇಕೆಂದರೆ ಅವನು ನಿರಾಕಾರ ಅರ್ಥಾತ್ ಎಂದಿಗೂ ಜನ್ಮವೆತ್ತದಿರುವವನು ಎಂದು ಹೇಳುತ್ತಾರೆ. ಬೇರೆ ಆಕಾರದಲ್ಲಿ ಅರ್ಥಾತ್ ಜನ್ಮ ಪಡೆದು ಅವತಾರ ರೂಪದಲ್ಲಿ ಬಂದವನು ಎನ್ನುತ್ತಾರೆ. ಯಾವ ಪೂರ್ಣಜ್ಞಾನಿ ಇದನ್ನು ಚೆನ್ನಾಗಿ ತಿಳಿಸುವರೋ ಅದನ್ನು ಈ ರೀತಿ ಸರಿಯಾಗಿ ಅವರೇ ಸಮರೂಪ ಅರ್ಥಾತ್ ಯಥಾರ್ಥ ರೂಪದಲ್ಲಿ ಭಿನ್ನ–ಭಿನ್ನ ರೂಪದಿಂದ ಪ್ರತ್ಯಕ್ಷ ಜ್ಞಾನವನ್ನು ನೀಡುವರು.

**ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ:–**

ತತ್ ವಿದ್ಧಿ, ಪ್ರಣಿಪಾತೇನ್, ಪರಿಪ್ರಶ್ನೇನ್, ಸೇವಯಾ,
ಉಪದೇಕ್ಷ್ಯನ್ತಿ, ತೆ, ಜ್ಞಾನಮ್, ಜ್ಞಾನಿನಃ ತತ್ವದರ್ಶಿನಃ ॥

**ಅನುವಾದ:–** ಅದನ್ನು ತಿಳಿದು ಆ ಪೂರ್ಣ ಪರಮಾತ್ಮನ ಜ್ಞಾನ ಮತ್ತು ಪರಿಹಾರಗಳನ್ನು ತಿಳಿದ ಸಂತರಿಗೆ ದೀರ್ಘ ದಂಡನಮಸ್ಕಾರ ಮಾಡಿದರೆ, ಅವರ ಸೇವೆ ಮಾಡಿದರೆ ಮತ್ತು ಕಪಟವನ್ನು ಬಿಟ್ಟು, ಸರಳತೆಯಿಂದ ಪ್ರಶ್ನಿಸುವುದರಿಂದ ಪರಮಾತ್ಮನ ತತ್ವವನ್ನು ಚೆನ್ನಾಗಿ ಅರಿತಿರುವ ಜ್ಞಾನಿ ಮಹಾತ್ಮ ನಿನಗೆ ತತ್ವಜ್ಞಾನದ ಉಪದೇಶವನ್ನು ನೀಡುವರು.

**2)ಮಾದಕ ವಸ್ತುಗಳ ಸೇವನೆ ನಿಷೇಧ:–** ಹುಕ್ಕಾ, ಮದ್ಯ, ಬೀಯರ್, ತಂಬಾಕು, ಬೀಡಿ, ಸಿಗರೇಟು, ಗುಟ್ಕಾ, ಮಾಂಸ, ಮೊಟ್ಟೆ, ಅಫೀಮು, ಗಾಂಜಾ ಮತ್ತು ಇತರೆ ಮಾದಕ ವಸ್ತುಗಳನ್ನು ಸೇವಿಸುವುದರಿಂದ ದೂರವಿರುವುದೇ ಅಲ್ಲದೆ, ಅಂಥಾ ವಸ್ತುಗಳನ್ನು ಯಾರಿಗೂ, ತಂದು ಸಹ ಕೊಡಬಾರದು. ಮುಕ್ತಿದಾತ ಗರೀಬ್‌ದಾಸ ಮಹಾರಾಜರು ಈ ಎಲ್ಲಾ ಮಾದಕ ವಸ್ತುಗಳ ಬಹಳ ಕೆಟ್ಟದ್ದೆಂದು ಹೇಳುತ್ತಾ ತಮ್ಮ ವಾಣಿಯಲ್ಲಿ ಹೀಗೆಂದು ಹೇಳಿದ್ದಾರೆ:–

ಸುರಾಪಾನ್ ಮದ್ಯ್ ಮಾಂಸಾಹಾರಿ, ಗಮನ್ ಕರ್ರೈ ಭೋಗ್ಯೆಂ ಪರ್ ನಾರೀ ।
ಸತ್ತರ್ ಜನ್ಮ್ ಕಟತ್ ಹೈಂ ಶೀಶಂ, ಸಾಕ್ಷೀ ಸಾಹಿಬ್ ಹೈ ಜಗದೀಶ್ಂ ॥
ಪರ್ ದ್ವಾರಾ ಸ್ತ್ರೀ ಕಾ ಖೋಲ್ಯೆ, ಸತ್ತರ್ ಜನ್ಮ್ ಅಂಧಾ ಹೋವ್ಯೆ ಡೋಲ್ಯೆ ।
ಮದಿರಾ ಪೀವ್ಯೆ ಕಡವಾ ಪಾನೀ, ಸತ್ತರ್ ಜನ್ಮ್ ಶ್ವಾನ್ ಕೇ ಜಾನೀ ॥
ಗರೀಬ್, ಹುಕ್ಕಾ ಹರ್‌ದಮ್ ಪಿವತೇ, ಲಾಲ್ ಮಿಲಾವ್ಯೆ ಧೂರ್ ।
ಇಸ್ ಮೆಂ ಸಂಶಯ್ ಹೈ ನಹೀಂ, ಜನ್ಮ್ ಪಿಛಲೆ ಸೂರ್ ॥ 1 ॥
ಗರೀಬ್, ಸೋ ನಾರೀ ಜಾರೀ ಕರ್ರೈ, ಸುರಾ ಪಾನ್ ಸೌ ಬಾರ್ ।
ಏಕ್ ಚಿಲಮ್ ಹುಕ್ಕಾ ಭರ್ರೈ, ಡುಬ್ಬೈ ಕಾಲೀ ಧಾರ್ ॥ 2 ॥
ಗರೀಬ್, ಸೂರ್ ಗಊ ಕುಂ ಖಾತ್ ಹೈ, ಭಕ್ತಿ ಬಿಹುನೇಂ ರಾಡ್ ।
ಭಾಂಗ್ ತಂಬಾಖೂ ಖಾ ಗಏ, ಸೋ ಚಾಬತ್ ಹೈಂ ಹಾಡ್ ॥ 3 ॥
ಗರೀಬ್, ಭಾಂಗ್ ತಂಬಾಖೂ ಪೀವ್ ಹೀಂ, ಸುರಾ ಪಾನ್ ಸ್ಯೆಂ ಹೇತ್ ।
ಗೌಸ್ತ್ ಮಟ್ಟೀ ಖಾಯ್ ಕರ್, ಜಂಗಲೀ ಬನೆಂ ಪ್ರೇತ್ ॥ 4 ॥
ಗರೀಬ್, ಪಾನ್ ತಂಬಾಖೂ ಚಾಬ್ ಹೀಂ, ನಾಸ್ ನಾಕ್ ಮೆಂ ದೇತ್ ।
ಸೋ ತೋ ಇರಾನ್ಯೆ ಗಏ, ಜ್ಯೂಂ ಭಡಭೂಜೆ ಕಾ ರೇತ್ ॥ 5 ॥
ಗರೀಬ್, ಭಾಂಗ್ ತಂಬಾಖೂ ಪೀವಹೀಂ, ಗೋಸ್ತ್ ಗಲಾ ಕಬಾಬ್ ।
ಮೋರ್ ಮೃಗ್ ಕೂಂ ಭಖತ್ ಹೈಂ, ದೇಗೆಂ ಕಹಾಂ ಜವಾಬ್ ॥ 6 ॥

**3)ತೀರ್ಥಸ್ಥಾನಗಳಿಗೆ ಹೋಗುವುದು ನಿಷೇಧ :–** ಯಾವುದೇ ರೀತಿಯ ವ್ರತವನ್ನು ಆಚರಿಸಬಾರದು. ಯಾವ ತೀರ್ಥಯಾತ್ರೆಗಳನ್ನೂ ಮಾಡಬಾರದು, ಗಂಗಾಸ್ನಾನ ಮಾಡುವುದು, ಅನ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ಸ್ನಾನ ಮಾಡುವುದು, ದರ್ಶನ ಮಾಡುವುದು ಮುಂತಾದವುಗಳನ್ನು ಮಾಡಬಾರದು. ಯಾವುದೇ ದೇವಸ್ಥಾನಗಳಿಗೆ ಹೋಗಿ ದೇವರಿಗೆ ಪೂಜೆ ಮಾಡಬಾರದು, ಭಕ್ತಿಯಿಂದ ನಮಿಸಬಾರದು. ದೇವಸ್ಥಾನಗಳಿಗೆ ಭಕ್ತಿಭಾವದಿಂದ ಹೋಗಬಾರದು. ದೇವರು ಯಾವುದೋ ಪ್ರಾಣಿಯಲ್ಲ. ಅವನನ್ನು ಪೂಜಾರಿಯು ದೇವಸ್ಥಾನದ ಒಳಗೆ ಕೂಡಿಡುವ ಹಾಗೆ ಮಾಡುತ್ತಿದ್ದಾನೆ. ದೇವರು ಕಣ ಕಣದಲ್ಲೂ ಇದ್ದಾನೆ. ಈ ಎಲ್ಲಾ ಸಾಧನೆಗಳು ಶಾಸ್ತ್ರಕ್ಕೆ ವಿರುದ್ಧವಾದದ್ದು.

ಸ್ವಲ್ಪ ಯೋಚಿಸಿ ನೋಡಿ. ಎಲ್ಲಾ ತೀರ್ಥಸ್ಥಾನಗಳು (ಜಗನ್ನಾಥ್ ಮಂದಿರ, ಬದ್ರಿನಾಥ್, ಹರಿದ್ವಾರ್, ಮಕ್ಕಾ–ಮದೀನಾ, ಅಮರನಾಥ್, ವೈಷ್ಣೋದೇವಿ, ಬೃಂದಾವನ, ಮಥುರಾ, ಅಯೋಧ್ಯೆಯ ರಾಮಮಂದಿರ, ಕಾಶಿಧಾಮ, ಛುಡಾನಿಯ ಧಾಮ ಮುಂತಾದವು) ಮಂದಿರ, ಮಸೀದಿ, ಗುರುದ್ವಾರಾ, ಚರ್ಚ್ ಮತ್ತು ಇಷ್ಟದೇವನ ಧಾಮ ಮುಂತಾದವು ಅಲ್ಲಿ ಯಾರೋ ಸಂತರು ವಾಸಿಸುತ್ತಿದ್ದರು. ಅವರು ಅಲ್ಲಿ ಭಕ್ತಿಸಾಧನೆ ಮಾಡಿ ಭಕ್ತಿ ಎಂಬ ಹಣವನ್ನು ಸಂಗ್ರಹಿಸಿ, ಶರೀರವನ್ನು ತ್ಯಜಿಸಿ ತಮ್ಮ ಇಷ್ಟದೈವನ ಲೋಕಕ್ಕೆ ಹೋದರು. ನಂತರ ಅವರ ಸ್ಮರಣಾರ್ಥ ಇನ್ಯಾರೋ ಆ ಜಾಗದಲ್ಲಿ ಮಂದಿರ, ಮಸೀದಿ, ಗುರುದ್ವಾರ, ಚರ್ಚ್ ಅಥವಾ ಧರ್ಮಶಾಲೆ ಕಟ್ಟಿಸುವರು. ಬೇರೆಯವರಿಗೆ ಅದು ಮಾದರಿಯಾಗಿರಲಿ ಹಾಗೂ ಆ ಸಂತರು ಮಾಡಿದಂಥಾ ಕಾರ್ಯವನ್ನು ಎಲ್ಲರೂ ಮಾಡಲಿ ಎನ್ನುವ ಆಶಯ ಅವರದ್ದಾಗಿರುತ್ತದೆ. ಈ ಎಲ್ಲಾ ಧಾರ್ಮಿಕ ಸ್ಥಳಗಳು ಆ ಸಂತರು ಮಾಡಿದ ಸಾಧನೆಯನ್ನು ನೀವೂ ಮಾಡಿ ಎಂಬ ಸಂದೇಶವನ್ನು ನೀಡುತ್ತವೆ. ಆದ್ದರಿಂದ ಈ ರೀತಿ ಸಾಧನೆ ಮಾಡುವ ಅಥವಾ ಹೇಳಿಕೊಡುವ ಸಂತರನ್ನು ಹುಡುಕಿ ಮತ್ತು ಅವರು ಹೇಳಿದಂತೆ ಕೇಳಿ. ಆದರೆ ಆನಂತರ ಆ ಸ್ಥಳಗಳ ಪೂಜೆ ಪ್ರಾರಂಭಗೊಂಡಿದ್ದು ನಿಜವಾಗಲೂ ವ್ಯರ್ಥ ಏಕೆಂದರೆ ಅದು ಶಾಸ್ತ್ರಕ್ಕೆ ವಿರುದ್ಧವಾಗಿದೆ.

ಈ ಎಲ್ಲಾ ಸ್ಥಳಗಳು ಒಬ್ಬ ಸಿಹಿ ತಿಂಡಿ ಮಾಡುವವನು ಒಲೆ ಹಚ್ಚಿ ಬಾಣಲೆ ಇಟ್ಟು ಜಿಲೇಬಿ, ಲಡ್ಡು ಮುಂತಾದವುಗಳನ್ನು ತಯಾರಿಸಿ ಸ್ವತಃ ತಾನೂ ತಿಂದು, ತನ್ನ ಸಂಬಂಧಿಕರಿಗೂ ತಿನ್ನಿಸಿ ಹೊರಟು ಹೋದ ಹಾಗೆ ಎಂದು ಹೇಳಬಹುದು. ನಂತರ ಆ ಜಾಗದಲ್ಲಿ ಸಿಹಿ ತಿಂಡಿ ಮಾಡುವವನೂ ಇಲ್ಲ, ಸಿಹಿ ತಿಂಡಿಯೂ ಇಲ್ಲ. ಅಲ್ಲಿ ಕೇವಲ ಒಲೆ ಇದೆ, ಒಲೆಯು ನಮಗೆ ಸಿಹಿತಿಂಡಿ ಮಾಡುವುದನ್ನೂ ಕಲಿಸುವುದಿಲ್ಲ, ನಮ್ಮ ಹೊಟ್ಟೆಯೂ ತುಂಬಿಸುವುದಿಲ್ಲ. ಯಾರಾದರೂ ಬಂದು, ಬಾ ತಮ್ಮ, ಸಿಹಿತಿಂಡಿ ಮಾಡುತ್ತಿದ್ದ ಒಲೆ ತೋರಿಸುತ್ತೇನೆ ಬಾ ಎಂದು ಹೇಳಿದರೆ ನೀವು ಅಲ್ಲಿ ಹೋಗಿ ಆ ಒಲೆಯನ್ನು ನೋಡಿ, ಅದರ ಸುತ್ತಲೂ ಸುತ್ತಿದರೆ ನಿಮಗೆ ಸಿಹಿತಿಂಡಿ ಸಿಗುವುದೇ? ನಿಮಗೆ ಸಿಹಿತಿಂಡಿ ಮಾಡುವ ವಿಧಿ ಹೇಳಿ ಕೊಡುವವನು ಸಿಕ್ಕಿದನೇ? ನೀವು ಮೊದಲು ಸಿಹಿತಿಂಡಿ ತಿನ್ನಿಸುವ ಹಾಗೂ ಅದನ್ನು ಮಾಡುವ ವಿಧಾನವನ್ನು ಹೇಳಿಕೊಡುವಂಥಾ ಸಿಹಿತಿಂಡಿ ಮಾಡುವವನನ್ನು ಹುಡುಕಬೇಕು. ನಂತರ ಅವನು ಹೇಳಿದಂತೆ ಮಾಡಬೇಕು. ಅದೇ ರೀತಿ ತೀರ್ಥಸ್ಥಾನಗಳ ಪೂಜೆ ಮಾಡದೆ, ಅಂತಹ ಸಂತರನ್ನು ಹುಡುಕಿ ಶಾಸ್ತ್ರಗಳ ಅನುಸಾರವಾಗಿ ಪೂರ್ಣ ಪರಮಾತ್ಮನಾದ ಕಬೀರ್ ಸಾಹೇಬರ ಭಕ್ತಿಯನ್ನು ಮಾಡುವರೋ ಹಾಗೂ ಹೇಳುವರೋ ಅವರನ್ನು ಹುಡುಕಿ ನಂತರ ಅವರು ಹೇಳಿದಂತೆ ಮಾಡಿ. ನೀವು ಮನಸೆಚ್ಛೆ ಮಾಡಬೇಡಿ.

**ಸಾಮವೇದ ಸಂಖ್ಯೆ 1400ರ ಉತಾರ್ಚಿಕ 12ನೇ ಅಧ್ಯಾಯದ 3ನೇ ಖಂಡದ 5ನೇ ಶ್ಲೋಕದಲ್ಲಿ ಹೇಳಿದೆ (ಸಂತ ರಾಮ್‌ಪಾಲ್‌ದಾಸರ ಮೂಲಕ ವ್ಯಾಖ್ಯಾನಿಸಲಾಗಿದೆ):–**

ಭದ್ರಾ ವಸ್ತ್ರಾ ಸಮನ್ಯಾವಸಾನೋ ಮಹಾನ್ ಕವಿರ್ನಿವಚನಾನಿ ಶಂಸನ್ ।
ಆ ವಚ್ಯಸ್ವ ಚಮ್ವೋಃ ಪೂಯಮಾನೋ ವಿಚಕ್ಷಣೋ ಜಾಗ್ರುವಿರ್ದೇವವೀತೌ ॥ 5 ॥

**ಅನುವಾದ:– ಚತುರ ವ್ಯಕ್ತಿಗಳು ತಮ್ಮ ವಚನಗಳ ಮೂಲಕ ಪೂರ್ಣ ಪರಮಾತ್ಮನ (ಪೂರ್ಣ ಬ್ರಹ್ಮನ) ಪೂಜೆಯ ಸತ್ಯಮಾರ್ಗವನ್ನು ಕಂಡುಕೊಳ್ಳದೆ ಅಮೃತದ ಬದಲಾಗಿ ಅನ್ಯ ಉಪಾಸನೆ {ಭೂತ ಪೂಜೆ, ಪಿತೃ ಪೂಜೆ, ಶ್ರಾದ್ಧ ಆಚರಣೆ, ಮೂರೂ ಗುಣಗಳ (ರಜಗುಣ–ಬ್ರಹ್ಮಾ, ಸತ್ವಗುಣ–ವಿಷ್ಣು, ತಮೋಗುಣ–ಶಿವನ) ಪೂಜೆ ಮತ್ತು ಕಾಲಬ್ರಹ್ಮನ ಪೂಜೆ, ಮಂದಿರ, ಮಸೀದಿ, ಚರ್ಚ್, ಗುರುದ್ವಾರ ಪ್ರವೇಶ ಮತ್ತು ಉಪವಾಸ, ವ್ರತಗಳ ಆಚರಣೆ} ರೂಪಿ ಹುಣ್ಣು ಮತ್ತು ಗಾಯದಿಂದ ಬರುವ ಕೀವುವನ್ನು ಆದರದಿಂದ ಆಚಮನ ಮಾಡಿಸುತ್ತಿದ್ದಾರೆ. ಅದನ್ನು ಪರಮ ಸುಖದಾಯಕ ಪೂರ್ಣ ಬ್ರಹ್ಮ ಕಬೀರರು ಸಶರೀರ ಸಾಧಾರಣ ವೇಷ ಭೂಷಣಗಳಲ್ಲಿ (ವಸ್ತ್ರಗಳೆಂದರೆ ವೇಭೂಷಣೆ ಸಂತರ ಭಾಷೆಯಲ್ಲಿ ಜೋಳಿಗೆ ಎನ್ನುತ್ತಾರೆ ಅಂದರೆ ಯಾರಾದರೂ ಸಂತರು ಶರೀರ ತ್ಯಜಿಸಿ ಹೋದರೆ ಆಗ ಜನರು ಆ ಮಹಾತ್ಮನು ತನ್ನ ಜೋಳಿಗೆ ಬಿಟ್ಟು ಹೊರಟ ಎಂದು ಹೇಳುತ್ತಾರೆ) ಸತ್ಯಲೋಕದ ಶರೀರದಂತೆ ಇನ್ನೊಂದು ಪ್ರಕಾಶಮಯವಾದ ಶರೀರವನ್ನು ಧರಿಸಿ ಸಾಧಾರಣ ವ್ಯಕ್ತಿಯಂತೆ ಜೀವನ ಕಳೆದು ಕೆಲವು ದಿನಗಳ ಕಾಲ ಈ ಪ್ರಪಂಚದಲ್ಲಿದ್ದು ತನ್ನ ವಚನ–ವಾಣಿಗಳಿಂದ ಸತ್ಯಜ್ಞಾನವನ್ನು ವರ್ಣಿಸುತ್ತಾ ಪೂರ್ಣ ಪರಮಾತ್ಮನ ಗುಪ್ತವಾಗಿರುವ ನಿಜವಾದ ಸತ್ಯಜ್ಞಾನ ಮತ್ತು ಭಕ್ತಿಯನ್ನು ಜಾಗೃತಗೊಳಿಸುತ್ತಾರೆ.**

**ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕ:–**

ಯಃ, ಶಾಸ್ತ್ರವಿಧಿಮ್, ಉತ್ಸೃಜ್ಯ, ವರ್ತತೆ, ಕಾಮಕಾರತಃ, ನ, ಸಃ,
ಸಿದ್ಧಿಮ್, ಅವಾಪ್ನೋತಿ, ನ, ಸುಖಮ್, ನ, ಪರಾಮ್, ಗತಿಮ್ ॥

**ಅನುವಾದ:– ಯಾವ ಪುರುಷನು ಶಾಸ್ತ್ರವಿಧಾನವನ್ನು ತ್ಯಜಿಸಿ ತನ್ನ ಇಚ್ಛೆಯಂತೆ ಮನಸ್ಸಿಗೆ ಬಂದ ಹಾಗೆ ಆಚರಣೆ ಮಾಡುವನೋ ಅವನು ಯಾವ ಸಿದ್ಧಿಯನ್ನೂ ಪಡೆಯುವುದಿಲ್ಲ ಹಾಗೂ ಮೋಕ್ಷವನ್ನು ಪಡೆಯುವುದಿಲ್ಲ. ಯಾವ ಸುಖವೂ ಅವನಿಗೆ ದಕ್ಕುವುದಿಲ್ಲ.**

**ಗೀತೆಯ 6ನೇ ಅಧ್ಯಾಯದ 16ನೇ ಶ್ಲೋಕ:–**

ನ, ಅತಿ, ಅಶ್ರನತಃ, ತು, ಯೋಗಃ, ಅಸ್ತಿ, ನ, ಚ, ಏಕಾಂತಮ್,
ಅನಶ್ರನತಃ, ನ, ಚ, ಅತಿ, ಸ್ವಪ್ನಶೀಲಸ್ಯ, ಜಾಗ್ರತಃ, ನ, ಏವ್, ಚ, ಅರ್ಜುನ ॥

**ಅನುವಾದ :– ಹೇ ಅರ್ಜುನ ! ಈ ಯೋಗವು ಅರ್ಥಾತ್ ಭಕ್ತಿಯು ಹೆಚ್ಚು ತಿನ್ನುವವನದ್ದೂ**

**ಅಲ್ಲ, ತಿನ್ನದೇ ಇರುವವನದ್ದೂ ಅಲ್ಲ ಅಂದರೆ ವ್ರತ ಮಾಡುವವನ, ಏಕಾಂತದಲ್ಲಿ ಆಸನಗಳನ್ನು ಹಾಕಿ ಸಾಧನೆ ಮಾಡುವವನದ್ದೂ ಅಲ್ಲ ಹಾಗು ಯಾವಾಗಲೂ ಮಲಗುವ ಸ್ವಭಾವ ಇರುವವನದ್ದೂ ಅಲ್ಲ ಮತ್ತು ಯಾವಾಗಲೂ ಎಚ್ಚರ ಇರುವವನದ್ದೂ ಅಲ್ಲ ಎನ್ನುವುದು ತಿಳಿಯುತ್ತದೆ.**

ಪೂಜ್ಯೆ ದೇಈ ಧಾಮ್ ಕೋ, ಶೀಶ್ ಹಲಾವ್ಯೆ ಜೋ ।
ಗರೀಬ್ ದಾಸ್ ಸಾಚೀ ಕಹ್ಯೆ, ಹದ್ ಕಾಫಿರ್ ಹ್ಯೆ ಸೋ ॥
ಕಬೀರ್, ಗಂಗಾ ಕಾಠ್ಯೆ ಘರ್ ಕರ್‍ಯೆ, ಪೀವ್ಯೆ ನಿರ್ಮಲ್ ನೀರ್ ।
ಮುಕ್ತಿ ನಹೀಂ ಹರಿ ನಾಮ್ ಬಿನ್, ಸತಗುರು ಕಹ್ಯೆಂ ಕಬೀರ್ ॥
ಕಬೀರ್, ತೀರ್ಥ್ ಕರ್-ಕರ್ ಜಗ್ ಮೂವಾ, ಉಡ್ಯೆ ಪಾನೀ ನ್ಹಾಯ್ ।
ರಾಮ್ ಹೀ ನಾಮ್ ನಾ ಜಪಾ, ಕಾಲ್ ಘಸೀಟೆ ಜಾಯ್ ॥
ಗರೀಬ್, ಪೀತಲ್ ಹೀ ಕಾ ಥಾಲ್ ಹ್ಯೆ, ಪೀತಲ್ ಕಾ ಲೋಟಾ ।
ಜಡ್ ಮೂರತ್ ಕೋ ಪೂಜತೇಂ, ಆವ್ಯೆಗಾ ಟೋಟಾ॥
ಗರೀಬ್, ಪೀತಲ್ ಚಮಚ್ಚಾ ಪೂಜಿಯೇ, ಜೋ ಥಾಲ್ ಪರೋಸ್ಯೆ ।
ಜಡ್ ಮೂರತ್ ಕಿಸ್ ಕಾಮ್ ಕೀ, ಮತಿ ರಹೋ ಭರೋಸ್ಯೆ ॥
ಕಬೀರ್, ಪರ್ವತ್ ಪರ್ವತ್ ಮ್ಯೆಂ ಫಿರ್‍ಯಾ, ಕಾರಣ್ ಅಪನೇ ರಾಮ್ ।
ರಾಮ್ ಸರೀಖೆ ಜನ್ ಮಿಲೆ, ಜಿನ್ ಸಾರೇ ಸಬ್ ಕಾಮ್ ॥

**4)ಪಿತೃ ಪೂಜೆ ನಿಷೇಧ:- ಯಾವುದೇ ರೀತಿಯ ಪಿತೃಪೂಜೆ, ಶ್ರಾದ್ಧ ಮುಂತಾದವುಗಳನ್ನು ಮಾಡಬಾರದು. ಭಗವಂತ ಶ್ರೀ ಕೃಷ್ಣನು ಸಹ ಪಿತೃಪೂಜೆ ಮತ್ತು ಭೂತಪೂಜೆ ಮಾಡುವುದನ್ನು ತಿರಸ್ಕರಿಸಿದ್ದಾರೆ. ಗೀತೆಯ 9ನೇ ಅಧ್ಯಾಯದ 25ನೇ ಶ್ಲೋಕದಲ್ಲಿ ಹೇಳಿದೆ:-**

ಯಾನ್ತಿ, ದೇವವ್ರತಾಃ, ದೇವಾನ್, ಪಿತೃಋನ್, ಯಾನ್ತಿ, ಪಿತೃವ್ರತಾಃ ।
ಭೂತಾನಿ, ಯಾನ್ತಿ, ಭೂತೇಜ್ಯಾಃ, ಮದ್ಯಾಜಿನಃ, ಅಪಿ, ಮಾಮ್ ॥

**ಅನುವಾದ:- ದೇವತೆಗಳ ಪೂಜೆಯನ್ನು ಮಾಡುವವರು ದೇವತೆಗಳನ್ನು ಪಡೆಯುವರು, ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುವರು ಹಾಗೂ ಭೂತಗಳನ್ನು ಪೂಜಿಸುವವರು ಭೂತಗಳನ್ನು ಪಡೆಯುವರು. ಮತ್ತು ಮತಾನುಸಾರವಾಗಿ ನನ್ನನ್ನು ಪೂಜಿಸುವವರು ನನ್ನಿಂದ ಲಾಭ ಪಡೆಯುವರು.**

**ಮುಕ್ತಿದಾತ ಗರೀಬ್‌ದಾಸ ಮಹಾರಾಜರು ಹಾಗೂ ಕಬೀರ ಪರಮೇಶ್ವರರೂ ಹೇಳುತ್ತಾರೆ.**

ಗರೀಬ್, ಭೂತ್ ರಮ್ಯೆ ಸೋ ಭೂತ್ ಹ್ಯೆ, ದೇವ್ ರಮ್ಯೆ ಸೋ ದೇವ್ ।
ರಾಮ್ ರಮ್ಯೆ ಸೋ ರಾಮ್ ಹ್ಯೆ, ಸುನೋ ಸಕಲ್ ಸುರ್ ಭೇವ್ ॥

**ಆದ್ದರಿಂದ ಯಾರಿಂದ ಪೂರ್ಣ ಮುಕ್ತಿ ಸಿಗುವುದೋ ಆ (ಪೂರ್ಣ ಪರಮಾತ್ಮ) ಪರಮೇಶ್ವರನನ್ನು ಆರಾಧಿಸು. ಅವನು ಪೂರ್ಣ ಬ್ರಹ್ಮ ಸತ್ಯಪುರುಷ(ಸತ್ಯಕಬೀರ)ನು. ಇದರ ಆಧಾರ ಗೀತೆಯ 18ನೇ ಅಧ್ಯಾಯದ 46ನೇ ಶ್ಲೋಕದಲ್ಲಿದೆ:-**

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ 46 ॥

**ಅನುವಾದ:- ಯಾವ ಪರಮೇಶ್ವರನಿಂದ ಸಕಲ ಜೀವಿಗಳ ಸೃಷ್ಟಿಯಾಗಿದೆಯೋ ಹಾಗೂ ಯಾರಿಂದ ಈ ಸಮಸ್ತ ಪ್ರಪಂಚವು ವ್ಯಾಪ್ತಿಯಾಗಿದೆಯೋ ಆ ಪರಮೇಶ್ವರನನ್ನು ತನ್ನ ಸ್ವಾಭಾವಿಕ ಕರ್ಮಗಳ ಮೂಲಕ ಪೂಜಿಸಿ ಮಾನವ ಪರಮಸಿದ್ಧಿಯನ್ನು ಪಡೆಯುತ್ತಾನೆ.**

**ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕ:-**

ತ್ವಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಯಸಿ ಶಾಶ್ವತಮ್ ॥ 62 ॥

**ಅನುವಾದ:- ಹೇ ಭರತವಂಶೋಛ್ಬವ ಅರ್ಜುನ! ನೀನು ಸರ್ವಭಾವದಿಂದ ಆ**

ಪರಮೇಶ್ವರನಿಗೆ ಶರಣಾಗು. ಅವನ ಕೃಪೆಯಿಂದ ನೀನು ಪರಮಶಾಂತಿಯನ್ನು ಹಾಗೂ ಅವಿನಾಶಿ ಪರಮಪದವನ್ನು ಪಡೆಯುವೆ. ಸರ್ವಭಾವ ಎಂದರೆ ಬೇರೆ ಯಾವ ಪೂಜೆಯನ್ನೂ ಮಾಡದೆ ಮನ–ಕರ್ಮ–ವಚನದಿಂದ ಒಬ್ಬ ಪರಮೇಶ್ವರನಲ್ಲಿ ನಂಬಿಕೆ ಇಡುವುದು ಎಂದರ್ಥ.

**ಗೀತೆಯ 8ನೇ ಅಧ್ಯಾಯದ 22ನೇ ಶ್ಲೋಕ:–**

ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃ ಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಮ್ ॥

**ಅನುವಾದ:– ಹೇ ಪೃಥಾನಂದನ ಅರ್ಜುನ! ಯಾರ ಒಳಗೆ ಎಲ್ಲಾ ಜೀವಿಗಳಿವೆಯೋ ಹಾಗೂ ಯಾರಿಂದ ಈ ಇಡೀ ಪ್ರಪಂಚವು ವ್ಯಾಪಿಸಿದೆಯೋ, ಆ ಪರಮ ಪುರುಷ ಪರಮಾತ್ಮನು ಅನನ್ಯ ಭಕ್ತಿಯಿಂದ ಪ್ರಾಪ್ತನಾಗುವವನು. ಅನನ್ಯ ಭಕ್ತಿ ಎಂದರೆ ಒಬ್ಬ ಪರಮೇಶ್ವರ (ಪೂರ್ಣ ಬ್ರಹ್ಮ) ನನ್ನು ಆರಾಧಿಸುವುದು ಎಂದರ್ಥ. ಬೇರೆ ದೇವಿ–ದೇವತೆಗಳನ್ನು ಅಂದರೆ ಮೂರು ಗುಣಗಳನ್ನು (ರಜಗುಣ ಬ್ರಹ್ಮಾ, ಸತ್ವಗುಣ ವಿಷ್ಣು, ತಮಗುಣ ಶಿವನನ್ನು) ಪೂಜಿಸಬಾರದು.**

**ಗೀತೆಯ 15ನೇ ಅಧ್ಯಾಯದ 1 ರಿಂದ 4ರ ವರೆಗಿನ ಶ್ಲೋಕ:–**

**ಗೀತೆಯ 15ನೇ ಅಧ್ಯಾಯದ 1ನೇ ಶ್ಲೋಕ:–**

ಊರ್ಧ್ವಮೂಲಮ್, ಅಧಃಶಾಖಮ್ ಅಶ್ವತ್ಥಮ ಪ್ರಾಹುಃ ಅವ್ಯಯಮ್,
ಛಂದಾಂಸಿ, ಯಸ್ಯ, ಪರ್ಣಾನಿ, ಯಃ ತಮ್, ವೇದ, ಸಃ, ವೇದವಿತ್ ॥1॥

**ಅನುವಾದ:– ಮೇಲೆ ಬೇರಿರುವ ಹಾಗೂ ಕೆಳಗೆ ರೆಂಬೆಗಳಿರುವ ಅವಿನಾಶಿಯು ವಿಸ್ತೃತ ಪ್ರಪಂಚವೆಂಬ ಅರಳಿ ಮರವಾಗಿದೆ. ಅದರ ಸಣ್ಣ ಸಣ್ಣ ರೆಂಬೆಗಳು, ಎಲೆಗಳು ಎಂದು ಹೇಳಲ್ಪಡುವ ಈ ಪ್ರಪಂಚವೆಂಬ ವೃಕ್ಷವನ್ನು ಯಾರು ಈ ರೀತಿಯಾಗಿ ಅರಿಯುತ್ತಾನೋ, ಅವನೇ ಪೂರ್ಣಜ್ಞಾನಿ ಅಂದರೆ ತತ್ವದರ್ಶಿ ಆಗಿರುತ್ತಾನೆ.**

**ಗೀತೆಯ 15ನೇ ಅಧ್ಯಾಯದ 2ನೇ ಶ್ಲೋಕ:–**

ಅಧಃ, ಚ, ಊರ್ಧ್ವಮ್, ಪ್ರಸೃತಾಃ, ತಸ್ಯ, ಶಾಖಾಃ, ಗುಣಪ್ರವೃದ್ಧಾಃ, ವಿಷಯ ಪ್ರವಾಲಾಃ,
ಅರ್ಧಃ, ಚ, ಮೂಲಾನಿ, ಅನುಸಂತತಾನಿ, ಕರ್ಮಾನುಬಂಧೀನಿ, ಮನುಷ್ಯಲೋಕೆ ॥ 2 ॥

**ಅನುವಾದ:– ಆ ವೃಕ್ಷದ ಕೆಳಗೆ ಹಾಗೂ ಮೇಲೆ ಮೂರೂ ಗುಣಗಳ ಬ್ರಹ್ಮಾ–ರಜಗುಣ, ವಿಷ್ಣು–ಸತ್ವಗುಣ, ಶಿವ–ತಮೋಗುಣ ರೂಪದಲ್ಲಿ ಹರಡಿರುವ ವಿಕಾರ ಕಾಮ, ಕ್ರೋಧ, ಮೋಹ, ಲೋಭ, ಅಹಂಕಾರವೆಂಬ ಶಾಖೆಗಳು ಬ್ರಹ್ಮಾ, ವಿಷ್ಣು, ಶಿವ ಇವರೇ ಜೀವಿಗಳನ್ನು ಕರ್ಮದಲ್ಲಿ ಬಂಧಿಸುವ ಬೇರುಗಳು. ಅರ್ಥಾತ್ ಅವರೇ ಮೂಲ ಕಾರಣರು ಮತ್ತು ಮನುಷ್ಯಲೋಕ, ಸ್ವರ್ಗ, ನರಕಲೋಕ, ಭೂಲೋಕದಲ್ಲಿ ಕೆಳಗೆ (84 ಲಕ್ಷ ಯೋನಿಗಳಲ್ಲಿ) ಮೇಲೆ ವ್ಯವಸ್ಥಿತಗೊಳಿಸಿದ್ದಾರೆ.**

**ಗೀತೆಯ 15ನೇ ಅಧ್ಯಾಯ 3ನೇ ಶ್ಲೋಕ:–**

ನ ರೂಪಮ್, ಅಸ್ಯ ಇಹ್ ತಥಾ ಉಪಲಭ್ಯತೆ, ನ, ಅಂತಃ, ನ, ಚ, ಆದಿಃ, ನ, ಚ ।
ಸಂಪ್ರತಿಷ್ಠಾ, ಅಶ್ವತ್ಥಮ್, ಏನಮ್, ಸುವಿರೂಢಮೂಲಮ್, ಅಸಂಗಶಸ್ತ್ರೇಣ, ದೃಢೇನ, ಛಿತ್ವಾ ॥ 3 ॥

**ಅನುವಾದ:– ಈ ರಚನೆಯ ಪ್ರಾರಂಭವೂ ಇಲ್ಲ, ಅಂತ್ಯವೂ ಇಲ್ಲ, ಹಾಗೆ ಸ್ವರೂಪವೂ ಸಿಗುವುದಿಲ್ಲ ಹಾಗೂ ಇಲ್ಲಿ ವಿಚಾರ ಕಾಲದಲ್ಲಿ ಅಂದರೆ ನಾನು ಕೊಡುತ್ತಿರುವ ಗೀತೆಯ ಜ್ಞಾನದ ಅರಿವು ಪೂರ್ಣವಾಗಿ ನನಗೂ ಇಲ್ಲ. ಏಕೆಂದರೆ ಸರ್ವ ಬ್ರಹ್ಮಾಂಡಗಳ ರಚನೆಯ ಬಗ್ಗೆ ನನಗೂ ಸರಿಯಾಗಿ ಜ್ಞಾನವಿಲ್ಲ. ಒಳ್ಳೆಯ ರೀತಿಯಲ್ಲಿ ದೃಢ ಸ್ಥಿತಿಯ ಸ್ವರೂಪದ ನಿರ್ಲೇಪ್ ತತ್ವಜ್ಞಾನ ರೂಪಿ ದೃಢ ಶಸ್ತ್ರದಿಂದ ಅಂದರೆ ನಿರ್ಮಲ ತತ್ವಜ್ಞಾನದ ಮೂಲಕ ಕತ್ತರಿಸಿ ಅಂದರೆ ನಿರಂಜನ್‌ನ ಭಕ್ತಿ ಕ್ಷಣಿಕವೆಂದು ತಿಳಿದು.**

**ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕ:–**

ತತಃ ಪದಂ ತತ್ಪರಿಮಾರ್ಗಿತವ್ಯಂ ಯಸ್ಮಿನ್ಗತಾ ನ ನಿವರ್ತಂತಿ ಭೂಯಃ ।

ತಮೇವ ಚಾದ್ಯಂ ಪುರುಷಂ ಪ್ರಪಧ್ಯೆ ಯತಃ ಪ್ರತೃತ್ತಿ ಪ್ರಸೃತಾ ಪುರಾಣಿ॥

**ಅನುವಾದ:–** ಇದರ ನಂತರ ಆ ಪರಮಪದ ಪರಮಾತ್ಮನನ್ನು ಹುಡುಕಬೇಕು. ಅವನನ್ನು ಪಡೆದ ಮನುಷ್ಯನು ಮತ್ತೆ ಈ ಪ್ರಪಂಚಕ್ಕೆ ಬರುವುದಿಲ್ಲ. ಮತ್ತು ಯಾರಿಂದ ಅನಾದಿ ಕಾಲದಿಂದ ನಡೆದುಬರುವ ಈ ಸೃಷ್ಟಿ ವಿಸ್ತಾರಕ್ಕೆ ಪ್ರಾಪ್ತವಗಿದೆ. ಆ ಆದಿ ಪುರುಷ ಪರಮಾತ್ಮನದೇ ನಾನು ಶರಣು. ಈ ರೀತಿ ಸ್ವಯಂ ಭಗವಂತ ಶ್ರೀಕೃಷ್ಣನು ದೇವಾದಿದೇವತೆಗಳ ರಾಜನಾದ ಇಂದ್ರನ ಪೂಜೆಯನ್ನು ಬಿಡಿಸಿ ಪೂರ್ಣ ಪರಮಾತ್ಮನನ್ನು ಆರಾಧಿಸಲು ಪ್ರೇರಣೆ ನೀಡಿದ್ದನು. ಆ ಕಾರಣದಿಂದಲೇ ಅವನು ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು ಇಂದ್ರನ ಕೋಪದಿಂದ ಬ್ರಜವಾಸಿಗಳನ್ನು ರಕ್ಷಿಸಿದ್ದನು.

ಗರೀಬ್, ಇಂದ್ರ್ ಚಢಾ ಬ್ರಿಜ್ ಡುಬೋವನ್, ಭೀಗಾ ಭೀತ್ ನ ಲೇವ್।
ಇಂದ್ರ್ ಕಢಾಈ ಹೋತ್ ಜಗತ್ ಮೆಂ, ಪೂಜಾ ಖಾ ಗಏ ದೇವ್॥
ಕಬೀರ್, ಇಸ್ ಸಂಸಾರ್ ಕೋ, ಸಮಝಾಊಂ ಕೈ ಬಾರ್।
ಪೂಂಛ್ ಜೋ ಪಕಡ್ಯೆ ಭೇಢ್ ಕೀ, ಉತರಾ ಚಾಹ್ಯೆ ಪಾರ್॥

**5)ಗುರುಗಳ ಆಜ್ಞೆಯ ಪಾಲನೆ:–** ಗುರುದೇವರ ಆಜ್ಞೆ ಇಲ್ಲದೆ ಮನೆಯಲ್ಲಿ ಯಾವುದೇ ರೀತಿಯ ಧಾರ್ಮಿಕ ಅನುಷ್ಠಾನ ಮಾಡಿಸಬಾರದು.

**ಹೇಗೆ ಮುಕ್ತಿದಾತರು ತಮ್ಮ ವಾಣಿಯಲ್ಲಿ ಹೇಳುತ್ತಾರೆ :–**

ಗುರು ಬಿನ್ ಯಜ್ಞ ಹವನ್ ಜೋ ಕರಹೀಂ, ಮಿಥ್ಯಾ ಜಾವೇ ಕಬಹು ನಹೀಂ ಫಲಹೀಂ।
ಕಬೀರ್, ಗುರು ಬಿನ್ ಮಾಲಾ ಫೇರತೆ, ಗುರು ಬಿನ್ ದೇತೆ ದಾನ್।
ಗುರು ಬಿನ್ ದೋನೋಂ ನಿಷ್ಫಲ್ ಹೈಂ, ಪೂಛೋ ವೇದ್ ಪುರಾಣ್॥

**6)ಸ್ಮಶಾನ್ ಕಾಳಿ(ಸಮಾಧಿ)ಯ ಪೂಜೆ ನಿಷೇಧ:–** ತಮ್ಮ ಜಮೀನಿನಲ್ಲಿ ಅಥವಾ ಮನೆಯ ಬಳಿ ಇರುವ ಯಾವುದೇ ಅನ್ಯ ದೇವತೆಗಳ ಸಮಾಧಿಯನ್ನು ಪೂಜಿಸಬಾರದು. ಸಮಾಧಿ ಯಾರದ್ದೇ ಆಗಿದ್ದರೂ ಪೂಜಿಸಬಾರದು. ಬೇರೆ ಯಾರ ಉಪಾಸನೆಯನ್ನೂ ಮಾಡಬಾರದು. ಎಲ್ಲಿಯವರೆಗೆ ಅಂದರೆ ಮೂರು ಗುಣಗಳ (ಬ್ರಹ್ಮಾ, ವಿಷ್ಣು, ಶಿವರ) ಪೂಜೆಯನ್ನು ಸಹ ಮಾಡಬಾರದು. ಕೇವಲ ಗುರುಗಳು ಹೇಳಿದಂತೆ ಮಾಡಬೇಕು.

**ಗೀತೆಯ 7ನೇ ಅಧ್ಯಾಯದ 15ನೇ ಶ್ಲೋಕ:–**

ನ, ಮಾಮ್, ದುಷ್ಕೃತಿನಃ ಮುಢಾಃ, ಪ್ರಪದ್ಯಂತೆ, ನರಾಧಮಾಃ।
ಮಾಯಯಾ ಅಪಹೃತಜ್ಞಾನಾಃ, ಆಸುರಮ್, ಭಾವಮ್, ಆಶ್ರಿತಾಃ॥

**ಅನುವಾದ:–** ಮಾಯೆಯ ಮೂಲಕ ಯಾರ ಜ್ಞಾನವು ಅಪಹರಿಸಲ್ಪಟ್ಟಿದೆಯೋ, ಅಂಥಾ ಅಸುರ ಸ್ವಭಾವವನ್ನು ಹೊಂದಿರುವಂಥಾ ಮನುಷ್ಯರಲ್ಲಿ ನೀಚ ಹಾಗೂ ದೂಷಿತ ಕರ್ಮ ಮಾಡುವಂಥಾ ಮೂರ್ಖರು ನನ್ನನ್ನು (ಗೀತೆಯ ಜ್ಞಾನದಾತ) ಭಜಿಸುವುದಿಲ್ಲ ಅರ್ಥಾತ್ ಅವರು ಮೂರೂ ಗುಣಗಳ (ರಜಗುಣ–ಬ್ರಹ್ಮಾ, ಸತ್ವಗುಣ–ವಿಷ್ಣು, ತಮಗುಣ–ಶಿವನ) ಸಾಧನೆಯನ್ನೇ ಮಾಡುತ್ತಿರುತ್ತಾರೆ.

ಕಬೀರ್, ಮಾಈ ಮಸಾನೀ ಶೇಢ್ ಶೀಲತಾ, ಭೈರವ್ ಭೂತ್ ಹನುಮಂತ್।
ಪರಮಾತ್ಮ ಉನ್‌ಸೆ ದೂರ್ ಹೈ, ಜೋ ಇನ್‌ಕೋ ಪೂಜಂತ್॥
ಕಬೀರ್, ಸೌ ವರ್ಷ್ ತೋ ಗುರು ಕೀ ಸೇವಾ, ಏಕ್ ದಿನ್ ಆನ್ ಉಪಾಸೀ ।
ವೋ ಅಪರಾಧಿ ಆತ್ಮಾ, ಪರ್ಯೆ ಕಾಲ್ ಕೀ ಫಾಂಸೀ॥
ಗುರು ಕೋ ತಜ್ಯೆ ಭಜ್ಯೆ ಜೋ ಆನಾ । ತಾ ಪಶುವಾ ಕೋ ಫೋಕಟ್ ಜ್ಞಾನಾ॥

**7) ಸಂಕಟ ಮೋಚನ ಕಬೀರ್ ಪರಮೇಶ್ವರರು:–** ಕರ್ಮಕಷ್ಟ ಬಂದಾಗ ಅನ್ಯ ದೇವತೆಯ ಅಥವಾ ಸ್ಮಶಾನ್ ಕಾಳಿಯ (ಸಮಾಧಿಯ) ಮುಂತಾದವು ಪೂಜೆ ಎಂದಿಗೂ ಮಾಡಬಾರದು. ಯಾವುದೇ ಜ್ಯೋತಿಷಿ, ಪಂಚಾಂಗ, ಭವಿಷ್ಯ ಕೇಳಬಾರದು. ಕೇವಲ ಮುಕ್ತಿದಾತ ಕಬೀರ ಪರಮೇಶ್ವರರನ್ನು ಪೂಜಿಸಬೇಕು. ಅವರು ಎಲ್ಲಾ ದುಃಖಗಳನ್ನು ನಿವಾರಿಸುವವರು ಸಂಕಟ ಮೋಚನರು.

**ಸಾಮವೇದ 822ನೇ ಸಂಖ್ಯೆಯ 3ನೇ ಉತಾರ್ಚಿಕ ಅಧ್ಯಾಯದ 5ನೇ ಕಾಂಡದ 8ನೇ ಶ್ಲೋಕ (ಸಂತ ರಾಮ್‌ಪಾಲ್ ದಾಸರ ಮೂಲಕ ವ್ಯಾಖ್ಯಾನಗೊಂಡಿದೆ)**

ಮನೀಷಿಭಿಃ ಪವತೆ ಪೂರ್ವ್ಯಃ ಕವಿರ್ನೃಭಿರ್ಯತಃ ಪರಿ ಕೋಶಾಂ ಅಸಿಶ್ಯದತ್ ।
ತ್ರಿತಸ್ಯ ನಾಮ್ ಜನಯನ್ಮಧು ಕ್ಷರನ್ನಿಂದ್ರಸ್ಯ ವಾಯುಂ ಸಖ್ಯಾಯ್ ವರ್ಧಯನ್॥ 8 ॥

**ಕನ್ನಡ:–** ಸನಾತನ ಅರ್ಥಾತ್ ಅವಿನಾಶಿ ಕಬೀರ ಪರಮೇಶ್ವರರು ಹೃದಯದಿಂದ ಇಚ್ಛಿಸುವಂಥಾ ಶ್ರದ್ಧೆಯಿಂದ, ಭಕ್ತಿಮಾಡುವ ಭಕ್ತಾತ್ಮನಿಗೆ 3 ಮಂತ್ರೋಪದೇಶವನ್ನು ಕೊಟ್ಟು ಪವಿತ್ರಗೊಳಿಸಿ ಜನನ ಹಾಗು ಮರಣ ರಹಿತರನ್ನಾಗಿ ಮಾಡುತ್ತಾರೆ. ಮತ್ತು ಅವನ ಪ್ರಾಣ ಅರ್ಥಾತ್ ಜೀವನ–ಶ್ವಾಸಗಳನ್ನು ಸಂಸ್ಕಾರಕ್ಕನುಗುಣವಾಗಿ ತನ್ನ ಮಿತ್ರ ಅಂದರೆ ಭಕ್ತನು ಆಶಿಸುವಂಥಾ ಶ್ವಾಸವನ್ನು ತನ್ನ ಖಜಾನೆಯಿಂದ ಪೂರ್ಣ ರೂಪದಿಂದ ಹೆಚ್ಚಿಸುತ್ತಾನೆ ಹಾಗೂ ಪರಮೇಶ್ವರನ ವಾಸ್ತವಿಕ ಆನಂದವನ್ನು ತನ್ನ ಆಶೀರ್ವಾದ ಪ್ರಸಾದದಿಂದ ಪ್ರಾಪ್ತಮಾಡಿಸುತ್ತಾನೆ.

ಕಬೀರ್, ದೇವೀ ದೇವ್ ಠಾಢೇ ಭಯೆ, ಹಮ್ ಕೋ ಠೌರ್ ಬತಾಓ।
ಜೋ ಮುಝ್ (ಕಬೀರ್) ಕೋ ಪೂಜೈ ನಹೀಂ, ಉನಕೋ ಲೂಟೋ ಖಾಓ॥
ಗರೀಬ್, ಕಾಲ್ ಜೋ ಪೀಸೈ ಪೀಸನಾ, ಜೌರಾ ಹೈ ಪನಿಹಾರ್।
ಯೆ ದೋ ಅಸಲ್ ಮಜೂರ್ ಹೈಂ, ಸತಗುರು ಕೆ ದರ್‌ಬಾರ್॥

**8)**ಅನಾವಶ್ಯಕವಾದ ದಾನ ನಿಷೇಧ:– ಎಲ್ಲೂ, ಯಾರಿಗೂ, ಯಾವ ರೂಪದಲ್ಲೂ ದಾನ ನೀಡಬಾರದು. ಹಣ, ಹೊಲಿಸದ ಬಟ್ಟೆ ಮುಂತಾದವುಗಳನ್ನೂ ನೀಡಬಾರದು. ಯಾರಾದರೂ ದಾನ ರೂಪದಲ್ಲಿ ಬೇಡಲು ಬಂದರೆ ಅವರಿಗೆ ಊಟ ಮಾಡಿಸಿ, ಕಾಫಿ, ಟೀ, ಹಾಲು, ನೀರು, ಲಸ್ಸಿ ಮುಂತಾದವುಗಳನ್ನು ಕುಡಿಸಿ. ಆದರೆ ಏನನ್ನೂ ಕೊಡಬೇಡಿ. ಆ ಹಣವನ್ನು ಆ ಭಿಕ್ಷುಕ ಹೇಗೆ ದುರುಪಯೋಗಪಡಿಸಿಕೊಳ್ಳುವನೋ ಯಾರಿಗೆ ಗೊತ್ತು? ಒಬ್ಬ ಭಿಕಾರಿ ಒಬ್ಬ ವ್ಯಕ್ತಿಯ ಬಳಿ ಹೋಗಿ ನನ್ನ ಮಕ್ಕಳು ರೋಗದಿಂದ ನರಳುತ್ತಿದ್ದಾರೆ, ಚಿಕಿತ್ಸೆಗೆ ಹಣವಿಲ್ಲ ಎಂದು ಕಟ್ಟುಕತೆ ಹೇಳಿದಾಗ ಆ ವ್ಯಕ್ತಿಯು ಆ ಮಾತನ್ನು ನಂಬಿ ಅವನಿಗೆ 100 ರೂಪಾಯಿಗಳನ್ನು ಕೊಟ್ಟನು. ಆ ಭಿಕಾರಿ ಈ ಮೊದಲು ಮುಕ್ಕಾಲು ಬಾಟಲಿ ಕುಡಿಯುತ್ತಿದ್ದನು. ಆ ದಿನ ಅರ್ಧ ಬಾಟಲಿ ಮದ್ಯ ಸೇವಿಸಿ ತನ್ನ ಹೆಂಡತಿಯನ್ನು ಹಿಗ್ಗಾಮಗ್ಗಾ ಥಳಿಸಿದನು ಹೊಡೆದನು. ಅವನ ಹೆಂಡತಿ ಬೇಸತ್ತು ತನ್ನ ಮಕ್ಕಳ ಸಹಿತ ಆತ್ಮಹತ್ಯೆ ಮಾಡಿಕೊಂಡಳು. ನೀವು ಮಾಡಿದ ದಾನ ಆ ಕುಟುಂಬದ ನಾಶಕ್ಕೆ ಕಾರಣವಾಯಿತು. ನೀವು ಇಷ್ಟಪಟ್ಟರೆ ಆ ವ್ಯಕ್ತಿಯ ಮಕ್ಕಳಿಗೆ ನೀವೇ ಖುದ್ದಾಗಿ ಹೋಗಿ ಔಷಧಿ ಕೊಡಿಸಬೇಕೇ ವಿನಃ ದುಡ್ಡನ್ನಲ್ಲ.

ಕಬೀರ್, ಗುರು ಬಿನ್ ಮಾಲಾ ಫೇರತೆ, ಗುರು ಬಿನ್ ದೆತೆ ದಾನ್ ।
ಗುರು ಬಿನ್ ದೋನೋಂ ನಿಷ್ಫಲ್ ಹೈಂ, ಪುಛೋ ವೇದ್ ಪುರಾನ್ ॥

**9)**ಎಂಜಲು ತಿನ್ನುವುದು ನಿಷೇಧ:– ಯಾರು ಮಾಂಸ, ಮೊಟ್ಟೆ ತಿನ್ನುವರೋ, ಮದ್ಯ, ತಂಬಾಕು, ಬೀರ್, ಅಫೀಮ್, ಗಾಂಜಾ ಮುಂತಾದವುಗಳ ಸೇವನೆ ಮಾಡುವರೋ, ಅಂಥಾ ವ್ಯಕ್ತಿಗಳ ಎಂಜಲನ್ನು ತಿನ್ನಬಾರದು.

**10)**ಸತ್ಯಲೋಕ ಗಮನ(ದೇಹಾಂತ)ದ ನಂತರ ಕ್ರಿಯಾ–ಕರ್ಮ ನಿಷೇಧ:– ಕುಟುಂಬದಲ್ಲಿ ಯಾರಾದರೂ ಮರಣ ಹೊಂದಿದರೆ, ಆಗ ಚಿತೆಗೆ ಬೆಂಕಿ ಯಾರು ಬೇಕಾದರೂ ಕೊಡಬಹುದು. ಮನೆಯವರು ಅಥವಾ ಬೇರೆಯವರು, ಯಾರಾದರೂ ಅಗ್ನಿ ಪ್ರಜ್ವಲಿಸುವಾಗ ಮಂಗಳಾಚರಣವನ್ನು ಹೇಳಬೇಕು. ಅದರ ಹೂವು ಮುಂತಾದವು ಏನನ್ನೂ ತೆಗೆಯಬಾರದು. ಆ ಸ್ಥಾನವನ್ನು ಶುಚಿಗೊಳಿಸುವುದು ಅನಿವಾರ್ಯವಾದಾಗ, ಅಲ್ಲಿನ ಅಸ್ಥಿಗಳನ್ನು ಸಂಗ್ರಹಿಸಿ ಹರಿಯುವ ನೀರಿನಲ್ಲಿ ಬಿಡಬೇಕು. ಆ ಸಮಯದಲ್ಲೂ ಮಂಗಲಾಚರಣವನ್ನು ಹೇಳಬೇಕು. ಆದರೆ ಪಿಂಡ ಬಿಡುವುದು, 13ನೇ ದಿನ ಆಚರಣೆ, 6 ತಿಂಗಳ ತಿಥಿ, ವಾರ್ಷಿಕ ತಿಥಿ ಪ್ರತಿ ವರ್ಷ ತಿಥಿ ಏನನ್ನೂ ಮಾಡಬಾರದು.

ಬೇರೆಯವರಿಂದ ಹೋಮ ಹವನಗಳನ್ನು ಮಾಡಿಸಬಾರದು. ಯಾರಾದರೂ ಸಂಬಂಧಿಕರು ಅಥವಾ ಆಪ್ತರು ಶೋಕ ವ್ಯಕ್ತಪಡಿಸಲು ಬಂದರೆ, ಅವರಿಗಾಗಿ 1 ದಿನ ನಿಗದಿಪಡಿಸಬೇಕು. ಆ ದಿನ ಪ್ರತಿದಿನವೂ ಮಾಡುವಂಥಾ ನಿತ್ಯ ಕರ್ಮಗಳನ್ನು ಮಾಡಬೇಕು. ನಂತರ ಜ್ಯೋತಿ ಬೆಳಗಿಸಬೇಕು. ನಂತರ ಎಲ್ಲರಿಗೂ ಊಟ ಮಾಡಿಸಬೇಕು. ಸತ್ತವರ ಹೆಸರಿನಲ್ಲಿ ಏನಾದರೂ ಮಾಡಲು ಬಯಸಿದರೆ ಗುರುದೇವರ ಅಪ್ಪಣೆ ಪಡೆದು ಗರೀಬ್‌ದಾಸ ಮಹಾರಾಜರ ಅಮೃತವಾಣಿಯ ಅಖಂಡ ಪಾಠ ಮಾಡಿಸಬಹುದು. ಒಂದೊಮ್ಮೆ ಪಾಠ (ಅಖಂಡ ಪಾಠ ಪ್ರಕಾಶ್) ಮಾಡಿಸಲು ಅಪ್ಪಣೆ ದೊರಕದಿದ್ದರೆ ಕುಟುಂಬದಲ್ಲಿ ದೀಕ್ಷೆ ಪಡೆದ ಭಕ್ತರಿದ್ದರೆ, ಅವರು 4 ದಿನ ಅಥವಾ 7 ದಿನ ದೇಸೀ ತುಪ್ಪದಲ್ಲಿ 1 ಜ್ಯೋತಿಯನ್ನು ಬೆಳಗಿಸಬೇಕು ಹಾಗೂ ಬ್ರಹ್ಮ ಗಾಯತ್ರಿಮಂತ್ರವನ್ನು ಪ್ರತಿದಿನವೂ ನಾಲ್ಕು ಬಾರಿ ಮಾಡಬೇಕು. ಹಾಗೂ 3 ಅಥವಾ ಒಂದು ಬಾರಿಯ ಮಂತ್ರದ ದಾನ ಸಂಕಲ್ಪವನ್ನು ಸತ್ಯಲೋಕವಾಸಿಗೆ ಮಾಡಬೇಕು. ನಿಮಗೆ ಸರಿ ಎನಿಸುವಷ್ಟು 1, 2, 3ರವರೆಗೆ ಮಂತ್ರ ಜಪದ ಫಲವನ್ನು ಅವರಿಗೆ ದಾನ ಮಾಡಬೇಕು. ಪ್ರತಿದಿನದಂತೆ ಜ್ಯೋತಿ ಬೆಳಗಿಸುವುದು, ಆರತಿ ಮಾಡುವುದು, ನಾಮಸ್ಮರಣೆ ಮಾಡುವುದು ಮುಂತಾದವುಗಳನ್ನು ಮಾಡಬೇಕು. ಇದನ್ನು ನೆನಪಿನಲ್ಲಿ ಇಟ್ಟುಕೊಂಡು ಅಂದರೆ:–

ಕಬೀರ್, ಸಾಥೀ ಹಮಾರೆ ಚಲೇ ಗಏ, ಹಮ್ ಭೀ ಚಾಲನ್ ಹಾರ್ ।
ಕೋಏ ಕಾಗಜ್ ಮೇಂ ಬಾಕೀ ರಹ್ ರಹೀ, ತಾತೇ ಲಾಗ್ ರಹೀ ವಾರ್ ॥
ಕಬೀರ್, ದೇಹ್ ಪಡೀ ತೋ ಕ್ಯಾ ಹುವಾ, ಜೂಠಾ ಸಭೀ ಪಟೀಟ್ ।
ಪಕ್ಷಿ ಉಡ್‌ಯಾ ಆಕಾಶ್ ಕೂ, ಚಲತಾ ಕರ್ ಗಯಾ ಬೀಟ್ ॥

## “ಕರ್ಮ ಕಾಂಡದ ವಿಷಯದಲ್ಲಿ ಸತ್ಯಕಥೆ”

ನನ್ನ (ಸಂತ ರಾಮ್‌ಪಾಲ್ ದಾಸರ) ಪೂಜ್ಯ ಗುರುದೇವ ಸ್ವಾಮೀ ರಾಮದೇವಾನಂದ ಮಹಾರಾಜರು ತಮ್ಮ 16ನೇ ವರ್ಷ ವಯಸ್ಸಿನಲ್ಲಿ ಒಬ್ಬ ಮಹಾತ್ಮನ ಸತ್ಸಂಗವನ್ನು ಕೇಳಿದ್ದರಿಂದ ವೈರಾಗ್ಯ ಉಂಟಾಯಿತು. 1 ದಿನ ಹೊಲಕ್ಕೆ ಹೋಗಿದ್ದರು. ಪಕ್ಕದಲ್ಲಿಯೇ 1 ಅರಣ್ಯವಿತ್ತು. ಆ ಅರಣ್ಯಕ್ಕೆ ಹೋದ ಗುರುಗಳು ಯಾವುದೋ ಮೃತಪಟ್ಟ ಮೃಗದ ಮೂಳೆಗಳ ಬಳಿ ತಮ್ಮ ಬಟ್ಟೆಯನ್ನು ಹರಿದು ಎಸೆದು ಬಿಟ್ಟರು. ಮತ್ತು ಸ್ವತಃ ಮಹಾತ್ಮರ ಜೊತೆಯಲ್ಲಿ ಹೋಗಿ ಬಿಟ್ಟರು. ಯಾವಾಗ ಅವರ ಹುಡುಕಾಟ ಶುರುವಾಯಿತೋ, ಆಗ ಅವರ ಮನೆಯವರು ಅರಣ್ಯದಲ್ಲಿ ಮೂಳೆಗಳ ಬಳಿ ಹರಿದು ಹಾಕಿದ ಬಟ್ಟೆ ದೊರಕಿತು. ಅದನ್ನು ಕಂಡು, ಯಾವುದೋ ಕಾಡು ಪ್ರಾಣಿ ಅವರನ್ನು ತಿಂದಿರಬೇಕೆಂದು ತಿಳಿದುಕೊಂಡು ಬಿಟ್ಟರು. ಹರಿದ ಬಟ್ಟೆ ಮತ್ತು ಮೂಳೆಗಳನ್ನು ತೆಗೆದುಕೊಂಡು ಹೋಗಿ ಅಂತಿಮ ಸಂಸ್ಕಾರವನ್ನೂ ಮಾಡಿದರು. ಅದರ ನಂತರ 13 ದಿನದ ಕಾರ್ಯ ಮತ್ತು 6 ತಿಂಗಳ ತಿಥಿ ಮಾಡಿದರು. ನಂತರ ಶ್ರಾದ್ಧವನ್ನೂ ಶುರುಮಾಡಿದರು.

ನನ್ನ ಪೂಜ್ಯ ಗುರುದೇವರು ವೃದ್ಧರಾದಾಗ ಒಂದು ಬಾರಿ ಅವರ ಮನೆಗೆ ಹೋದರು. ಆಗ ಅವರ ಮನೆಯವರಿಗೆ ಇವರು ಬದುಕಿದ್ದಾರೆ ಹಾಗೂ ಮನೆ ಬಿಟ್ಟು ಹೋಗಿದ್ದಾರೆಂದು ತಿಳಿಯಿತು. ಗುರುಗಳಿಗೆ ಮನೆಯವರು ಹೇಳಿದ್ದೇನೆಂದರೆ,“ಯಾವಾಗ ಅವರು ಮನೆ ಬಿಟ್ಟು ಹೊರಟರೋ, ಆ ದಿನ ಇವರ ಹುಡುಕಾಟ ನಡೆಯಿತು. ಅರಣ್ಯದಲ್ಲಿ ಇವರ ಹರಿದ ಬಟ್ಟೆ ಪಕ್ಕದಲ್ಲಿ ಕೆಲವು ಮೂಳೆಗಳನ್ನು ಕಂಡು, ಯಾವುದೋ ಕಾಡು ಪ್ರಾಣಿ ಹುಡುಗನನ್ನು ತಿಂದಿರಬಹುದೆಂದು ಯೋಚಿಸಿದೆವು ಮತ್ತು ಆ ಬಟ್ಟೆ ಮತ್ತು ಮೂಳೆಗಳನ್ನು ಮನೆಗೆ ತಂದು ಅಂತಿಮ ಸಂಸ್ಕಾರವನ್ನು ಮಾಡಿದೆವು”.

ಆಮೇಲೆ ನಾನು(ಸಂತ ರಾಮ್‌ಪಾಲ್ ದಾಸ್) ನನ್ನ ಪೂಜ್ಯ ಗುರುಗಳ ತಮ್ಮನ ಪತ್ನಿಯನ್ನು ಹೀಗೆ ಕೇಳಿದೆ. ನಮ್ಮ ಪೂಜ್ಯ ಗುರುಗಳು ಮನೆ ಬಿಟ್ಟು ಹೊರಟು ಹೋದಾಗ ನೀವೇನು ಮಾಡಿದಿರಿ? ಆಕೆ ಉತ್ತರಿಸುತ್ತಾ, “ಯಾವಾಗ ನಾನು ಮದುವೆಯಾಗಿ ಈ ಮನೆಗೆ ಬಂದೆನೋ, ಆಗಿನಿಂದಲೂ ಇವರ ಶ್ರಾದ್ಧವನ್ನು ಆಚರಿಸುವುದನ್ನೇ ನೋಡುತ್ತಿದ್ದೇನೆ. ನಾನು ನನ್ನ ಕೈಯಿಂದ ಇವರ ಸುಮಾರು 70 ಶ್ರಾದ್ಧಗಳನ್ನು ಆಚರಿಸುತ್ತಿದ್ದೇನೆ. ಯಾವಾಗ ಮನೆಯಲ್ಲಿ ಯಾವುದಾದರೂ

ನಷ್ಟವಾಗುತ್ತಿತ್ತೋ ಅಂದರೆ ಎಮ್ಮೆ ಹಾಲು ಕೊಡದೇ ಇರುವುದು, ಕೆಚ್ಚಲಲ್ಲಿ ತೊಂದರೆ ಬರುವುದು, ಹೀಗೆ ಬೇರೆ ಯಾವುದೇ ನಷ್ಟವಾದಾಗ ನಾವು ಜೋತಿಷ್ಯರ ಬಳಿಗೆ ಪಂಚಾಂಗ ಕೇಳಲು ಹೋಗುತ್ತಿದ್ದೆವು. ಆಗ ಅವರು ಹೇಳುತ್ತಿದ್ದರು. ನಿಮ್ಮ ಮನೆಯಲ್ಲಿ ಯಾರೋ ಒಬ್ಬರು ಸಂತಾನಹೀನರ (ಬ್ರಹ್ಮಚಾರಿಯ) ಸಾವಾಗಿದೆ. ಅವನು ನಿಮ್ಮನ್ನು ದುಃಖಿಗೊಳಿಸುತ್ತಿದ್ದಾನೆ". ನಂತರ ನಾವು ಅವರಿಗೆ ಬಟ್ಟೆ ಮೊದಲಾದುದ್ದನ್ನು ನೀಡುತ್ತಿದ್ದೆವು.

ಆಗ ನಾನು ಹೇಳಿದೆ, "ಇವರಂತೂ ಪ್ರಪಂಚದ ಉದ್ಧಾರವನ್ನು ಮಾಡುತ್ತಿರುವರು, ಇವರು ಯಾರಿಗೆ ದುಃಖ ಕೊಡುತ್ತಿದ್ದರು, ಇವರಂತು ಸುಖದಾತನಾಗಿದ್ದಾರೆ". ನಂತರ ನಾನು (ಸಂತ ರಾಮ್‌ಪಾಲ್ ದಾಸರು) ಆ ವೃದ್ಧೆಯನ್ನು ಕೇಳಿದೆ, "ಈಗಂತೂ ಅವರು ನಿಮ್ಮ ಮುಂದಿದ್ದಾರೆ, ಈಗ ಆ ವ್ಯರ್ಥ ಸಾಧನೆಯಾದ ಶ್ರಾದ್ಧ ಮಾಡುವ ಕ್ರಮವನ್ನು ನಿಲ್ಲಿಸಿಬಿಡಿ. ಆಗ ಆ ವೃದ್ಧೆಯು ಹೀಗೆ ಹೇಳಿದಳು, "ಇದು ಹಿಂದಿನ ಪರಂಪರೆಯಾಗಿದೆ. ಇದನ್ನು ಹೇಗೆ ಬಿಟ್ಟು ಬಿಡಲಿ? ಅರ್ಥಾತ್ ನಾವು ಹಳೆಯ ಪರಂಪರೆಯಲ್ಲಿ ಇಷ್ಟೊಂದು ತಲ್ಲೀನರಾಗಿ ಬಿಟ್ಟಿದ್ದೇವೆ. ಅಂದರೆ ಪ್ರತ್ಯಕ್ಷ ಪ್ರಮಾಣವಿದ್ದರೂ ಅವರು ತಪ್ಪು ಮಾಡುತ್ತಿದ್ದಾರೆಂದು ಅನಿಸಿದರೂ ಬಿಡಲು ಅಸಾಧ್ಯವಾಗಿದೆ". ಇದರಿಂದ ನಮಗೆ ತಿಳಿಯುವುದೇನೆಂದರೆ ಶ್ರಾದ್ಧ ಮಾಡುವುದು, ಪಿತೃ ಪೂಜೆ ಮಾಡುವುದು ಇವೆಲ್ಲವೂ ವ್ಯರ್ಥವಾಗಿದೆ.

**11)ಮಕ್ಕಳ ಜನ್ಮವಾದಾಗ ಶಾಸ್ತ್ರ ವಿರುದ್ಧ ಪೂಜೆಯ ನಿಷೇಧ:–** ಮಕ್ಕಳ ಜನನವಾದಾಗ 6ನೇ ದಿನದ ಕಾರ್ಯವಾಗಲೀ, ಯಾವುದೇ ಕಾರ್ಯವನ್ನೂ ಆಚರಿಸುವಂತಿಲ್ಲ. ಸೂತಕವಿದ್ದಾಗಲೂ ಸಹ ಪ್ರತಿದಿನ ಮಾಡುವ ರೀತಿಯಲ್ಲಿಯೇ ಪೂಜೆ, ಭಕ್ತಿ, ಆರತಿ, ಜ್ಯೋತಿ ಬೆಳಗಿಸುವುದನ್ನು ನಿಲ್ಲಿಸಬಾರದು.

ಈ ಸಂದರ್ಭದಲ್ಲಿ ಒಂದು ಕಥೆಯನ್ನು ಹೇಳುವೆನು. ಒಬ್ಬ ವ್ಯಕ್ತಿಗೆ ಮದುವೆಯಾದ 10 ವರ್ಷದ ನಂತರ ಪುತ್ರನ ಜನ್ಮವಾಯಿತು. ಪುತ್ರಪ್ರಾಪ್ತಿಯಿಂದ ತುಂಬಾ ಸಂತೋಷಗೊಂಡ ಅವನು ಆ ಆನಂದವನ್ನು ಹಂಚಿಕೊಂಡನು. 20–25 ಹಳ್ಳಿಗಳನ್ನು ಭೋಜನಕ್ಕೋಸ್ಕರ ಆಮಂತ್ರಿಸಿದನು. ಸಂಗೀತ, ವಾದ್ಯಗಳಮೇಳ, ನೃತ್ಯ ಇವೆಲ್ಲವೂ ನಡೆಯಿತು. ಅರ್ಥಾತ್ ಹಣ ವಿಪರೀತವಾಗಿ ಖರ್ಚಾಯಿತು. ಇದಾದ 1 ವರ್ಷದ ನಂತರ ಆ ಮಗು ಮರಣ ಹೊಂದಿತು. ನಂತರ ಅದೇ ಕುಟುಂಬ ತನ್ನ ದೌರ್ಭಾಗ್ಯವನ್ನು ನೆನೆದು ಬಿಕ್ಕಿ–ಬಿಕ್ಕಿ ಅಳುತ್ತಾರೆ. ಅದಕ್ಕಾಗಿ ಕಬೀರ್ ಪರಮೇಶ್ವರರು ನಮಗೆ ಹೇಳುತ್ತಾರೆ:–

ಕಬೀರ್, ಬೇಟಾ ಜಾಯಾ ಖುಷಿ ಹುಈ, ಬಹುತ್ ಬಜಾಯೆ ಥಾಲ್ ।
ಆನಾ ಜಾನಾ ಲಗ್ ರಹಾ, ಜ್ಯೋಂ ಕೀಡೀ ಕಾ ನಾಲ್ ॥
ಕಬೀರ್, ಪತಝುಡ್ ಆವತ್ ದೇಖ್ ಕರ್, ಬನ್ ರೋವೈ ಮನ್ ಮಾಹಿಂ ।
ಊಂಚೀ ಡಾಲೀ ಪಾತ ಥೆ, ಅಬ್ ಪೀಲೆ ಹೋ ಹೋ ಜಾಹಿಂ ॥
ಕಬೀರ್, ಪಾತ್ ಝುಡಂತಾ ಯೂಂ ಕಹೈ, ಸುನ್ ಭಈ ತರುವರ ರಾಯ್ ।
ಅಬ್ ಕೆ ಬಿಛುಡೆ ನಹೀಂ ಮಿಲಾ, ನ ಜಾನೆ ಕಹಾಂ ಗಿರೆಂಗೇ ಜಾಯ್ ।
ಕಬೀರ್, ತರುವರ್ ಕಹತಾ ಪಾತ್ ಸೆ, ಸುನೋಂ ಪಾತ್ ಏಕ್ ಬಾತ್ ।
ಯಹಾಂ ಕೀ ಯಾಹೆ ರೀತಿ ಹೈ, ಏಕ್ ಆವತ್ ಏಕ್ ಜಾತ್ ॥

**12)ಯಾವುದೇ ದೇವಸ್ಥಾನಗಳಲ್ಲಿ ಕೇಶ ಮುಂಡನ ಮಾಡುವುದು ನಿಷೇಧ:–** ಮಕ್ಕಳ ಕೇಶಮುಂಡನ ಮಾಡಲು ಯಾವುದೇ ದೇವಸ್ಥಾನಕ್ಕೆ ಹೋಗುವ ಅಗತ್ಯವಿಲ್ಲ. ಯಾವಾಗ ಕೂದಲು ಉದ್ದ ಬೆಳೆಯುತ್ತದೆಯೋ, ಆಗ ಕತ್ತರಿಸಿ ಎಸೆದು ಬಿಡಿ. ಒಂದು ದೇವಸ್ಥಾನದಲ್ಲಿ ನಾವು ನೋಡಿದೆವು, ಶ್ರದ್ಧಾಳು ಭಕ್ತರು ತಮ್ಮ ಮಗಳು ಅಥವಾ ಮಗನ ಕೂದಲನ್ನು ತೆಗೆಸಲು ಬಂದಿದ್ದರು. ಅಲ್ಲಿದ್ದ ಕ್ಷೌರಿಕನು ಹೊರಗಡೆ ಎಷು ರೇಟ್ ಇತ್ತೋ ಅದರ 3 ಪಟ್ಟು ಹಣ ತೆಗೆದುಕೊಂಡು ಒಂದು ಬಾರಿ ಕತ್ತರಿಯಿಂದ ಎಷ್ಟು ಕತ್ತರಿಸಬಹುದೋ ಅಷ್ಟು ಕೂದಲನ್ನು ಕತ್ತರಿಸಿ ತಂದೆ–

**ತಾಯಿಯ ಕೈಯಲ್ಲಿಟ್ಟನು. ಅವರು ಆ ಕೂದಲನ್ನು ದೇವರಿಗೆ ಬಹಳ ಶ್ರದ್ಧೆಯಿಂದ ಅರ್ಪಿಸಿದರು. ಪೂಜಾರಿಯು ಆ ಕೂದಲನ್ನು ಒಂದು ಚೀಲದಲ್ಲಿ ಹಾಕಿದನು. ರಾತ್ರಿ ಅದನ್ನು ತೆಗೆದುಕೊಂಡು ಹೋಗಿ ದೂರ ಯಾರು ಇಲ್ಲದ ಸ್ಥಳದಲ್ಲಿ ಎಸೆದು ಬಿಟ್ಟನು. ಇದು ಕೇವಲ ನಾಟಕವಾಗಿದೆ. ಯಾಕೆ ಮೊದಲಿನ ರೀತಿಯಲ್ಲಿ ನಾವು ಕೂದಲನ್ನು ತೆಗೆಸಿ ಹೊರಗೆ ಹಾಕಬಾರದು? ಪರಮಾತ್ಮ ನಾಮಸ್ಮರಣೆಯಿಂದ ಪ್ರಸನ್ನಗೊಳ್ಳುವನು. ಪಾಖಂಡದಿಂದಲ್ಲ.**

**13)ನಾಮಸ್ಮರಣೆಯಿಂದ ಸುಖ:– ನಾಮೋಪದೇಶ(ದೀಕ್ಷೆ) ಕೇವಲ ದುಃಖ ನಿವಾರಣೆಯ ಅರ್ಥದಿಂದ ಪಡೆಯುವುದಲ್ಲ, ಬದಲಾಗಿ ಆತ್ಮಕಲ್ಯಾಣಕ್ಕೋಸ್ಕರ ಪಡೆದುಕೊಳ್ಳಬೇಕು. ಮತ್ತೆ ಈ ಸ್ಮರಣೆಯಿಂದ ಎಲ್ಲಾ ಸುಖಗಳು ತಮ್ಮಷ್ಟಕ್ಕೆ ತಾವು ನಮ್ಮ ಬಳಿಗೆ ಬರುತ್ತವೆ.**

"ಕಬೀರ್, ಸುಮಿರಣ್ ಸೆ ಸುಖ್ ಹೋತ್ ಹೈ, ಸುಮಿರಣ್ ಸೆ ದುಃಖ್ ಜಾಎ ।
ಕಹೈ ಕಬೀರ್ ಸುಮಿರಣ್ ಕಿಎ, ಸಾಂಈ ಮಾಹಿಂ ಸಮಾಯ್ ॥"

**14) ವ್ಯಭಿಚಾರಣೆ ನಿಷೇಧ :– ಪರಸ್ತ್ರೀಯನ್ನು ತಾಯಿ–ಮಗಳು, ಸಹೋದರಿಯ ದೃಷ್ಟಿಯಿಂದ ನೋಡಬೇಕು. ವ್ಯಭಿಚಾರವು ಮಹಾಪಾಪ ಹೇಗೆಂದರೆ:–**

ಗರೀಬ್, ಪರದ್ವಾರಾ ಸ್ತ್ರೀ ಕಾ ಖೋಲೈ । ಸತ್ತರ್ ಜನ್ಮ್ ಅಂಧಾ ಹೋ ಡೋಲೈ ।
ಸುರಾಪಾನ್ ಮದ್ಯ್ ಮಾಂಸಾಹಾರೀ । ಗವನ್ ಕರೆಂ ಭೋಗ್ಯೆ ಪರ್ ನಾರೀ ॥
ಸತ್ತರ್ ಜನ್ಮ್ ಕಟತ್ ಹೈಂ ಶೀಶಂ । ಸಾಕ್ಷೀ ಸಾಹಿಬ್ ಹೈ ಜಗದೀಶಂ ॥
ಪರನಾರೀ ನಾ ಪರಸಿಯೋಂ, ಮಾನೋ ವಚನ್ ಹಮಾರ ।
ಭವನ್ ಚತುರ್ದಶ್ ತಾಸ್ ಸಿರ್, ತ್ರಿಲೋಕೀ ಕಾ ಭಾರ್ ॥
ಪರನಾರೀ ನಾ ಪರಸಿಯೋ, ಸುನೋ ಶಬ್ದ್ ಸಲತಂತ್ ।
ಧರ್ಮರಾಯ್ ಕೆ ಖಂಬ್ ಸೆ, ಅರ್ಧಮುಖೀ ಲಟಕಂತ್ ॥

**15)ನಿಂದನೆಯನ್ನು ಕೇಳುವುದು ಮತ್ತು ಮಾಡುವುದು ನಿಷೇಧ:– ತಮ್ಮ ಗುರುವಿನ ನಿಂದನೆಯನ್ನು ಅಪ್ಪಿತಪ್ಪಿಯೂ ಕೂಡ ಮಾಡಬಾರದು ಹಾಗೂ ಕೇಳಬಾರದು. ಕೇಳುವುದರ ಅಭಿಪ್ರಾಯ ಹೀಗಿದೆ. ಒಂದು ವೇಳೆ ಯಾರಾದರೂ ನಿಮ್ಮ ಗುರುಗಳ ವಿಷಯದಲ್ಲಿ ಕೆಟ್ಟ ಅಥವಾ ಸುಳ್ಳು ವಿಷಯ ಹೇಳಿದಾಗ ಜಗಳವಾಡಬಾರದು. ಹಿಂದೆ ಮುಂದೆ ಯೋಚಿಸದೆ ಮಾತನಾಡುತ್ತಿದ್ದಾನೆ ಅರ್ಥಾತ್ ಸುಳ್ಳು ಹೇಳುತ್ತಿದ್ದಾನೆ ಎಂದು ತಿಳಿಯಬೇಕು.**

ಗುರು ಕೀ ನಿಂದಾ ಸುನ್ಯೆ ಜೋ ಕಾನಾ । ತಾಕೋ ನಿಶ್ಚಯ್ ನರಕ್ ನಿದಾನಾ ॥
ಅಪನ್ ಮುಖ್ ನಿಂದಾ ಜೋ ಕರಹೀಂ । ಶುಕರ್ ಶ್ವಾನ್ ಗರ್ಭ್ ಮೆಂ ಪರಹೀಂ ॥

**ನಿಂದನೆಯಂತು ಯಾರದೂ ಮಾಡಬಾರದು ಮತ್ತು ಕೇಳಬಾರದು. ಅವನು ಎಷ್ಟೇ ಸಾಮಾನ್ಯ ವ್ಯಕ್ತಿಯಾಗಿದ್ದರೂ ಕಬೀರ್ ಪರಮೇಶ್ವರರು ಹೀಗೆ ಹೇಳುತ್ತಾರೆ.**

ತಿನಕಾ ಕಬಹೂ ನ ನಿಂದಿಯೇ, ಜೋ ಪಾಂವ್ ತಲೆ ಹೋ ।
ಕಬಹು ಉಠ್ ಆಖಿನ್ ಪಡೆ. ಪೀರ ಘನೇರೀ ಹೋ ॥

**16)ಗುರುಗಳ ದರ್ಶನದ ಮಹಿಮೆ:– ಸತ್ಸಂಗಕ್ಕೆ ಸಮಯ ಸಿಕ್ಕ ತಕ್ಷಣ ಬರುವ ಪ್ರಯತ್ನ ಮಾಡಬೇಕು ಮತ್ತು ಸತ್ಸಂಗದಲ್ಲಿ ಜಂಭ ಹಾಗೂ ದೊಡ್ಡಸ್ತಿಕೆ ಎಲ್ಲಾ ಮಾಡುವ ಹಾಗಿಲ್ಲ. ಅಲ್ಲದೆ ತಮ್ಮನ್ನು ತಾವು ಒಂದು ರೋಗಿಯೆಂದು ತಿಳಿದು ಸತ್ಸಂಗಕ್ಕೆ ಬರಬೇಕು. ಹೇಗೆಂದರೆ ರೋಗಿ ಬೇಕಾದರೆ ಎಷ್ಟೇ ಹಣ ಉಳ್ಳವನಾಗಿರಲಿ, ದೊಡ್ಡ ಪದವಿಯನ್ನು ಪಡೆದವನಾಗಿರಲಿ, ಯಾವಾಗ ಆಸ್ಪತ್ರೆಗೆ ಹೋಗುತ್ತಾನೋ, ಆಗ ಆತನ ಉದ್ದೇಶ ಕೇವಲ ರೋಗ ಮುಕ್ತನಾಗಿರುವುದಾಗಿರುತ್ತದೆ. ಅಲ್ಲಿ ಡಾಕ್ಟರ್ ಮಲಗಲು ಹೇಳಿದರೆ ಮಲಗುತ್ತಾನೆ. ಕೂರಲು ಹೇಳಿದರೆ ಕುಳಿತುಕೊಳ್ಳುತ್ತಾನೆ, ಹೊರಗೆ ಹೋಗಲು ಆಜ್ಞಾಪಿಸಿದರೆ ಹೊರಗೆ ಹೋಗುತ್ತಾನೆ ಮತ್ತೆ ಒಳಗೆ ಬರಲು ಆದೇಶ ದೊರೆತರೆ ಸುಮ್ಮನೆ ಒಳಗೆ ಬರುತ್ತಾನೆ. ಇದೇ ರೀತಿ ಒಂದು ವೇಳೆ ನೀವು ಸತ್ಸಂಗಕ್ಕೆ ಬಂದಿರಾದರೆ ನಿಮಗೆ ಸತ್ಸಂಗದ ಲಾಭ ದೊರೆಯುವುದು. ಇಲ್ಲದಿದ್ದರೆ ನೀವು ಬಂದಿದ್ದೂ ಕೂಡಾ**

**ಫಲವಿಲ್ಲದಂತಾಗುವುದು. ಸತ್ಸಂಗದಲ್ಲಿ ಎಲ್ಲಿ ನಿಮಗೆ ಕೂರಲು ಜಾಗ ಸಿಗುವುದೋ ಅಲ್ಲಿಯೇ ಕುಳಿತುಕೊಂಡುಬಿಡಿ. ತಿನ್ನಲು ಏನು ಸಿಗುವುದೋ ಅದನ್ನೇ ಪರಮಾತ್ಮ ಕಬೀರ್ ಪರಮೇಶ್ವರರ ಅಪ್ಪಣೆಯಿಂದ ದೊರೆತ ಪ್ರಸಾದವೆಂದು ತಿಳಿದು ತಿಂದು ಪ್ರಸನ್ನರಾಗಿರಿ.**

ಕಬೀರ್, ಸಂತ್ ಮಿಲನ್ ಕೂಂ ಚಾಲಿಯೆ, ತಜ್ ಮಯಾ ಅಭಿಮಾನ್ ।
ಜೋ–ಜೋ ಕದಮ್ ಆಗೆ ರಖೆ, ಓಹೀ ಯಜ್ಞ್ ಸಮಾನ್ ॥
ಕಬೀರ್, ಸಂತ್ ಮಿಲನ್ ಕೂಂ ಜಾಈಎ, ದಿನ್ ಮೇ ಕಈ–ಕಈ ಬಾರ್ ।
ಆಸೋಜ್ ಕೆ ಮೇಹ್ ಜ್ಯೋಂ, ಘನಾಕರೆ ಉಪಕಾರ್ ॥
ಕಬೀರ್, ದರ್ಶನ್ ಸಾಧು ಕಾ, ಪರಮಾತ್ಮಾ ಆವೈ ಯಾದ್ ।
ಲೇಖೆ ಮೇ ವೋಹೆ ಘಡೀ, ಬಾಕೀ ಕೆ ದಿನ್ ಬಾದ್ ।
ಕಬೀರ್, ದರ್ಶನ್ ಸಾಧು ಕಾ, ಮುಖ ಪರ್ ಬಸೈ ಸುಹಾಗ್ ।
ದರ್ಶ ಉನ್‌ಹೀ ಕೋ ಹೋತ್ ಹೈ, ಜಿನಕೆ ಪೂರ್ಣ್ ಭಾಗ್ ॥

**17) ಗುರು ಮಹಿಮೆ:– ಒಂದು ವೇಳೆ ಎಲ್ಲಿಯಾದರೂ ಪಾಠ ಅಥವಾ ಸತ್ಸಂಗ ನಡೆಯುತ್ತಿದ್ದರೆ ಅಥವಾ ಹಾಗೆಯೇ ಗುರುಗಳ ದರ್ಶನಕ್ಕಾಗಿ ಹೋದರೆ ಸರ್ವ ಪ್ರಥಮ ಗುರುಗಳಿಗೆ ದೀರ್ಘ ದಂಡ ನಮಸ್ಕಾರವನ್ನು ಮಾಡಬೇಕು. ನಂತರ ಸದ್ಗ್ರಂಥ ಸಾಹಿಬ್ ಮತ್ತು ಚಿತ್ರಗಳು ಹೇಗೆಂದರೆ ಕಬೀರ್ ಪರಮೇಶ್ವರರ ಮೂರ್ತಿಗೆ, ಗರೀಬ್‌ದಾಸರ ಮೂರ್ತಿಗೆ ಹಾಗು ಸ್ವಾಮಿ ರಾಮದೇವಾನಂದರ ಮೂರ್ತಿಗೆ ಹಾಗು ಗುರುಗಳ ಮೂರ್ತಿಗೆ ಪ್ರಣಾಮ ಮಾಡಿ. ಇದರಿಂದ ಕೇವಲ ಭಕ್ತಿ ಭಾವನೆ ಇರುವುದು. ಮೂರ್ತಿ ಪೂಜೆ ಮಾಡಬಾರದು. ಕೇವಲ ನಮಸ್ಕಾರ ಮಾಡುವುದು ಪೂಜಾಕಾರ್ಯದಲ್ಲಿ ಬರುವುದಿಲ್ಲ. ಅದು ಭಕ್ತನ ಶ್ರದ್ಧೆಯನ್ನು ಕಡಿಮೆಯಾಗದಂತೆ ಸಹಕರಿಸುತ್ತದೆ. ಪೂಜೆಯಂತು ವರ್ತಮಾನ ಗುರುವಿನ ಹಾಗು ನಾಮಸ್ಮರಣೆಯದ್ದು ಮಾಡುವುದು, ಅವರು ಪಾರುಮಾಡುವರು.**

ಕಬೀರ್, ಗುರು ಗೋವಿಂದ್ ದೋವು ಖಡೆ, ಕಾಕೆ ಲಾಗುಂ ಪಾಯ್ ।
ಬಲಿಹಾರಿ ಗುರು ಆಪನೆ, ಜಿನ್ ಗೋವಿಂದ್ ದಿಯೋ ಮಿಲಾಯ್ ॥
ಕಬೀರ್, ಗುರು ಬಡೆ ಹೈಂ ಗೋವಿಂದ್ ಸೆ, ಮನ್ ಮೆಂ ದೇಖ್ ವಿಚಾರ್ ।
ಹರಿ ಸುಮರೆ ಸೋ ರಹ್ ಗಯೆ, ಗುರು ಭಜೆ ಹೋಯ್ ಪಾರ್ ॥
ಕಬೀರ್, ಹರಿ ಕೆ ರೂಠತಾಂ, ಗುರು ಕೀ ಶರಣ್ ಮೆಂ ಜಾಯ್ ।
ಕಬೀರ್ ಗುರು ಜೈ ರೂಠಜಾಂ, ಹರಿ ನಹೀಂ ಹೋತ್ ಸಹಾಯ್ ॥
ಕಬೀರ್, ಸಾತ್ ಸಮುಂದ್ರ ಕೀ ಮಸಿ ಕರೂಂ, ಲೇಖನಿ ಕರೂಂ ಬನಿರಾಯ್ ।
ಧರತೀ ಕಾ ಕಾಗಜ್ ಕರೂಂ, ತೋ ಗುರು ಗುನ್ ಲಿಖಾ ನ ಜಾಯ್ ॥

**18) ಮಾಂಸ ಭಕ್ಷಣೆ ನಿಷೇಧ:– ಮೊಟ್ಟೆ, ಮಾಂಸ ಭಕ್ಷಣೆ ಮತ್ತು ಜೀವಹಿಂಸೆಯನ್ನು ಮಾಡಬಾರದು. ಇದು ಮಹಾಪಾಪವಾಗುತ್ತದೆ. ಹೇಗೆ ಕಬೀರರು ಮತ್ತು ಗರೀಬ್‌ದಾಸ ಮಹಾರಾಜರು ಹೇಳಿದ್ದಾರೆ:–**

ಕಬೀರ್, ಜೀವ ಹ್ನೆ ಹಿಂಸಾ ಕರೆ ಪ್ರಕಟ್ ಪಾಪ್ ಸಿರ್ ಹೋಯ್ ।
ನಿಗಮ್ ಪುನಿ ಏಸೆ ಪಾಪ್ ತೆಂ ಭಿಸ್ತ್ ಗಯಾ ನಹಿಂ ಕೋಯ್ ॥ 1 ॥
ಕಬೀರ್, ತಿಲ್‌ಭರ್ ಮಛಲೀ ಖಾಯಕೆ, ಕೋಟಿ ಗಊ ದೆ ದಾನ್ ।
ಕಾಶೀ ಕರೌಂತ್ ಲೆ ಮರೆ, ತೋ ಭೀ ನರಕ್ ನಿದಾನ್ ॥ 2 ॥
ಕಬೀರ್, ಬಕರೀ ಪಾತೀ ಖಾತ್ ಹೈ ತಾಕೀ ಕಾಢೀ ಖಾಲ್ ।
ಜೋ ಬಕರೀಕೊ ಖಾತ್ ಹೈ, ತಿನಕಾ ಕೌನ್ ಹವಾಲ್ ॥ 3 ॥
ಕಬೀರ್, ಗಲಾ ಕಾಟಿ ಕಲಮಾ ಭರೆ, ಕೀಯಾ ಕಹೈ ಹಲಾಲ್ ।
ಸಾಹಬ್ ಲೇಖಾ ಮಾಂಗಸೀ, ತಬ್ ಹೋಸೀ ಕೌನ್ ಹವಾಲ್ ॥ 4 ॥
ಕಬೀರ್, ದಿನ್ ಕೋ ರೋಜಾ ರಹತ್ ಹೈ, ರಾತ್ ಹನತ್ ಹೈಂ ಗಾಯ್ ।

ಯಹ್ ಖೂನ್ ವಹ್ ವಂದಗೀ, ಕಹುಂ ಕ್ಯೋಂ ಖುಷೀ ಖುದಾಯ್ ॥ 5 ॥
ಕಬೀರ್, ಕಬೀರಾ ತೇಈ ಪೀರ್ ಹೈ, ಜೋ ಜಾನ್ಯೆ ಪರ್ ಪೀರ್ ।
ಜೋ ಪರ್ ಪೀರ್ ನ ಜಾನಿ ಹೈ, ಸೋ ಕಾಫಿರ್ ಬೇಪೀರ್ ॥ 6 ॥
ಕಬೀರ್, ಖೂಬ್ ಖಾನಾ ಹೈ ಖೀಚಡೀ, ಮಾಂಹೀ ಪರೀ ಟುಕ್ ಲೌನ್ ।
ಮಾಂಸ್ ಪರಾಯಾ ಖಾಯ್ ಕೈ, ಗಲಾ ಕಟಾವೈ ಕೌನ್ ॥ 7 ॥
ಕಬೀರ್, ಮುಸಲ್ಮಾನ್ ಮಾರೈಂ ಕರದಸೋ, ಹಿಂದೂ ಮಾರೈ ತರವಾರ್ ।
ಕಹೈ ಕಬೀರ್ ದೊನೂಂ ಮಿಲಿ, ಜೈಹೈಂ ಯಮಕೆ ದ್ವಾರ್ ॥ 8 ॥
ಕಬೀರ್, ಮಾಂಸ್ ಅಹಾರೀ ಮಾನವ್, ಪ್ರತ್ಯಕ್ಷ್ ರಾಕ್ಷಸ್ ಜಾನಿ ।
ತಾಕಿ ಸಂಗತಿ ಮತಿ ಕರೈ, ಹೋಇ ಭಕ್ತಿ ಮೆಂ ಹಾನಿ ॥ 9 ॥
ಕಬೀರ್, ಮಾಂಸ್ ಖಾಂಯ್ ತೆ ಢೆಡ್ ಸಬ್, ಮದ್ ಪೀವೈ ಸೋ ನೀಚ ।
ಕುಲಕೀ ದುರ್ಮತಿ ಪರ ಹರೈ, ರಾಮ್ ಕಹೈ ಸೋ ಊಂಚ್ ॥ 10 ॥
ಕಬೀರ್, ಮಾಂಸ್ ಮಛಲಿಯಾ ಖಾತ್ ಹೈಂ, ಸುರಾಪಾನ್ ಸೆ ಹೇತ್ ।
ತೆ ನರ ನರಕೈ ಜಾಹಿಂಗೆ, ಮಾತಾ ಪಿತಾ ಸಮೇತ್ ॥ 11 ॥
ಗರೀಬ್, ಜೀವ್ ಹಿಂಸಾ ಜೋ ಕರತೆ ಹೈಂ, ಯಾ ಆಗೆ ಕ್ಯಾ ಪಾಪ್ ।
ಕಂಟಕ್ ಜುನೀ ಜಿಹಾನ್ ಮೆಂ, ಸಿಂಹ್ ಭೇಡಿಯಾ ಔರ್ ಸಾಂಪ್ ॥
ಝೋಟೆ ಬಕರೆ ಮುರುಗೆ ತಾಈ। ಲೇಖಾ ಸಬ್ ಹೀ ಲೇತ್ ಗುಸಾಈಂ ॥
ಮೃಗ ಮೋರ್ ಮಾರೆ ಮಹಮಂತಾ । ಅಚರಾ ಚರ್ ಹೈ ಜೀವ್ ಅನಂತಾ ॥
ಜಿಹ್ವಾ ಸ್ವಾದ್ ಹಿತೆ ಪ್ರಾನಾ । ನೀಮಾ ನಾಶ್ ಗಯಾ ಹಮ್ ಜಾನಾ ॥
ತೀತರ್ ಲವಾ ಬುಟೇರೀ ಚಿಡಿಯಾ । ಖೂನೀ ಮಾರೆ ಬಡೆ ಅಗಡಿಯಾ ॥
ಅದಲೆ ಬದಲೆ ಲೆಖೆ ಲೇಖಾ । ಸಮಝ್ ದೇಖ್ ಸುನ್ ಜ್ಞಾನ ವಿವೇಕಾ ॥
ಗರೀಬ್, ಶಬ್ದ ಹಮಾರಾ ಮಾನಿಯೋ, ಔರ್ ಸುನತೆ ಹೋ ನರ್ ನಾರಿ ।
ಜೀವ್ ದಯಾ ಬಿನ್ ಕುಫರ್ ಹೈ, ಚಲೆ ಜಮಾನಾ ಹಾರಿ ॥

**ಗೊತ್ತಿಲ್ಲದೇ ಮಾಡಿದ ಹಿಂಸೆಯ ಪಾಪ ತಗಲುವುದಿಲ್ಲ. ಮುಕ್ತಿದಾತ ಕಬೀರ್ ಪರಮೇಶ್ವರರು ಹೀಗೆ ಹೇಳುತ್ತಾರೆ:–**

"ಇಚ್ಛಾ ಕರ್ ಮಾರೈ ನಹೀಂ, ಬಿನ್ ಇಚ್ಛಾ ಮರ್ ಜಾಏ ।
ಕಹೈಂ ಕಬೀರ್ ತಾಸ್ ಕಾ ಪಾಪ್ ನಹೀಂ ಲಗಾಏ ॥"

**19) ಗುರು ದ್ರೋಹಿಯ ಸಂಪರ್ಕ ನಿಷೇಧ:– ಒಂದು ವೇಳೆ ಯರೋ ಭಕ್ತ ಗುರುಗಳಿಗೆ ದ್ರೋಹ (ಗುರುಗಳಿಂದ ದೂರವಾಗುವನೋ) ಮಾಡುವನೋ, ಅವನು ಮಹಾಪಾಪದ ಭಾಗಿಯಾಗುತ್ತಾನೆ. ಹಾಗೆಯೇ ಯಾರಿಗಾದರೂ ಈ ಮಾರ್ಗ ಸರಿಯಿಲ್ಲ ಎನಿಸಿದರೆ ತನ್ನ ಗುರುವನ್ನು ಬದಲಿಸಬಹುದು. ಆದರೆ ಯಾವ ಭಕ್ತನು ತನ್ನ ಮೊದಲಿನ ಗುರುವಿನೊಡನೆ ದ್ವೇಷಸಾಧನೆ ಅಥವಾ ನಿಂದನೆ ಮಾಡುವನೋ, ಅವನನ್ನು ಗುರುದ್ರೋಹಿ ಎಂದು ಕರೆಯಲಾಗುವದು. ಅಂತಹ ವ್ಯಕ್ತಿಯೊಡನೆ ಭಕ್ತಿಯ ಚರ್ಚೆಯನ್ನು ಮಾಡುವುದರಿಂದ ಉಪದೇಶಿಗೆ ದೋಷ ತಗಲುತ್ತದೆ. ಅವನ ಭಕ್ತಿಯು ಮುಗಿದು ಹೋಗುವುದು.**

ಗರೀಬ್, ಗುರು ದ್ರೋಹಿ ಕೀ ಪೈಡ್ ಪರ್, ಜೆ ಪಗ್ ಆವೈ ಬೀರ್ ।
ಚೌರಾಸೀ ನಿಶ್ಚಯ್ ಪಡೈ, ಸತ್‌ಗುರು ಕಹೈ ಕಬೀರ್ ॥
ಕಬೀರ್, ಜಾನ್ ಬುಝ್ ಸಾಚೀ ತಜೈ, ಕರೈ ಝೂಠೇ ಸೆ ನೇಹ್ ।
ಜಾಕೀ ಸಂಗತ್ ಹೇ ಪ್ರಭು, ಸ್ವಪನ್ ಮೆಂ ಭೀ ನಾ ದೇಹ್ ॥

**ಅರ್ಥಾತ್ ಗುರು ದ್ರೋಹಿಯ ಬಳಿ ಹೋಗುವವನು ಭಕ್ತಿರಹಿತನಾಗಿ ನರಕಕ್ಕೆ ಹೋಗುವನು ಹಾಗು 84 ಲಕ್ಷ ಯೋನಿಗಳಲ್ಲಿ ಹೋಗುವನು.**

**20) ಜೂಜು ನಿಷೇಧ:– ಜೂಜು, ಇಸ್ಪೀಟು ಎಂದಿಗೂ ಆಡಬಾರದು.**

ಕಬೀರ್, ಮಾಂಸ್ ಭಖ್ಯೆ ಔರ್ ಮದ್ ಪಿಯೆ, ಧನ್ ವೇಶ್ಯಾ ಸೋಂ ಖಾಯ್ ।
ಜುವಾ ಖೇಲಿ ಚೋರಿ ಕರ್ಯೆ, ಅಂತ್ ಸಮೂಲಾ ಜಾಯ್ ॥

**21) ನೃತ್ಯ–ಗಾನದ ನಿಷೇಧ:– ಯಾವುದೇ ರೀತಿಯ ಸಂತೋಷದ ಸಂದರ್ಭದಲ್ಲಿ ನೃತ್ಯ ಮತ್ತು ಅಶ್ಲೀಲ ಗೀತೆಗಳನ್ನು ಹಾಡುವುದು ಭಕ್ತಿಭಾವದ ವಿರುದ್ಧವಾಗಿದೆ. ಅಂದರೆ ಒಂದು ಬಾರಿ ಒಬ್ಬಳು ವಿಧವೆ ಯಾವುದೋ ಸಂತೋಷ ಸಂದರ್ಭದಲ್ಲಿ ನೆಂಟರ ಮನೆಗೆ ಹೋಗಿದ್ದಳು. ಎಲ್ಲರೂ ಸಂತೋಷದಿಂದ ನೃತ್ಯ ಸಂಗೀತದಲ್ಲಿ ಮಗ್ನರಾಗಿದ್ದರು. ಅವಳು ಮಾತ್ರ ಒಂದು ಕಡೆ ಕುಳಿತು ಭಗವಂತನ ಚಿಂತನೆಯಲ್ಲಿ ತೊಡಗಿದ್ದಳು. ನಂತರ ಅವಳ ನೆಂಟರು ಹೀಗೆ ಪ್ರಶ್ನಿಸಿದರು, "ನೀವು ಏಕೆ ಹೀಗೆ ನಿರಾಶರಾಗಿ ಕುಳಿತಿದ್ದೀರಿ? ನೀವು ಕೂಡಾ ನಮ್ಮ ಹಾಗೇ ನೃತ್ಯ ಮಾಡಿ, ಹಾಡಿ ಮತ್ತು ಸಂತೋಷಪಡೆಯಿರಿ". ಈ ಮಾತಿಗೆ ಉತ್ತರಿಸುತ್ತಾ ಆ ವಿಧವೆ ಹೇಳುತ್ತಾಳೆ, "ಯಾವ ಖುಷಿಯನ್ನು ನಾನು ಆಚರಿಸಲಿ? ಈ ವಿಧವೆಯ ಒಬ್ಬನೇ ಮಗನಿದ್ದ, ಅವನೂ ಸಹ ಭಗವಂತ ಬಳಿ ಹೋದನು. ಅಂದರೆ ಪರಮಾತ್ಮ ಅವನನ್ನು ತನ್ನ ಬಳಿ ಕರೆದುಕೊಂಡು ಬಿಟ್ಟಿದ್ದಾನೆ. ಈಗ ನನಗೆ ಯಾವ ಸಂತೋಷ?" ಇದೇ ರೀತಿ ಕಾಲನ ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿ ಇದೆ. ಇಲ್ಲಿ ಗುರು ನಾನಕ್ ರವರ ವಾಣಿ ಇದೆ:–**

ನಾ ಜಾನೆ ಕಾಲ್ ಕೀ ಕರ್ ಡಾರ್ಯೆ, ಕಿಸ್ ವಿಧಿ ಢಲ್ ಪಾಸಾ ವೆ ।
ಜಿನ್ಹಾದೆ ಸಿರ್ ತೆ ಮೌತ್ ಖುಡಗದೀ, ಉನ್ಹಾನೂಂ ಕೇಡಾ ಹಾಂಸಾ ವೆ ॥
ಸಾಧ್ ಮಿಲೆಂ ಸಾಡೀ ಶಾದೀ (ಖುಷೀ) ಹೋಂದೀ,
ಬಿಛಡ್ ದಾಂ ದಿಲ್ ಗಿರಿ (ದುಃಖ) ವೆ ।
ಅಖದೆ ನಾನಕ್ ಸುನೋ ಜಿಹಾನಾ, ಮುಶ್ಕಿಲ್ ಹಾಲ್ ಫಕೀರೀ ವೆ ॥

**ಕಬೀರ್ ಪರಮೇಶ್ವರರು ಕೂಡಾ ಹೀಗೆ ಹೇಳುತ್ತಾರೆ:–**

ಕಬೀರ್, ಝೂಠೆ ಸುಖ್ ಕೋ ಸುಖ್ ಕಹೈ, ಮಾನ್ ರಹಾ ಮನ್ ಮೋದ್ ।
ಸಕಲ್ ಚಬೀನಾ ಕಾಲ್ ಕಾ, ಕುಛ್ ಮುಖ್ ಮೆಂ ಕುಛ್ ಗೋದ್ ॥
ಕಬೀರ್, ಬೇಟಾ ಜಾಯಾ ಖುಷೀ ಹುಈ, ಬಹುತ್ ಬಜಾಯೆ ಥಾಲ್ ।
ಆವಣ್ ಜಾಣಾ ಲಗ್ ರಹಾ, ಜ್ಯೋಂ ಕೀಡೀ ಕಾ ನಾಲ್ ॥

**ವಿಶೇಷ:– ಸ್ತ್ರೀ ಮತ್ತು ಪುರುಷರಿಬ್ಬರಿಗೂ ಪರಮಾತ್ಮನನ್ನು ಪಡೆಯುವ ಹಕ್ಕಿದೆ. ಸ್ತ್ರೀಯರು ತಮ್ಮ ಮಾಸಿಕ ಋತುವಿನ ದಿನದಲ್ಲಿಯೂ ಕೂಡಾ ತಮ್ಮ ದಿನದ ಪೂಜೆ ಹಾಗೂ ದೀಪ ಬೆಳಗಿಸುವುದು ಮುಂತಾದವನ್ನು ನಿಲ್ಲಿಸಬಾರದು. ಯಾರದೋ ಜನ್ಮ, ಮರಣ ದಿನಗಳಲ್ಲಿ ಕೂಡಾ ದೈನಿಕ ಪೂಜಾ ಕ್ರಮಗಳನ್ನು ನಿಲ್ಲಿಸಬಾರದು.**

**ಟಿಪ್ಪಣಿ:– ಯಾವ ಭಕ್ತಜನರು ಈ 21 ಸೂತ್ರದ ಆದೇಶಗಳನ್ನು ಪಾಲಿಸುವುದಿಲ್ಲವೋ ಅವರು ನಾಮ ರಹೀತರಾಗುವರು. ಒಂದು ವೇಳೆ ತಿಳಿಯದೆ ತಪ್ಪು ಆಗಿಬಿಟ್ಟರೂ ಅದು ಕ್ಷಮೆಗೆ ಯೋಗ್ಯವಾಗಿರುತ್ತದೆ. ಆದರೆ ತಿಳಿದೂ ತಪ್ಪನ್ನು ಮಾಡಿದರೆ ಆ ಭಕ್ತನು ನಾಮರಹೀತನಾಗುವನು. ಈ ಸಮಸ್ಯೆಗೆ ಪರಿಹಾರವೇನೆಂದರೆ ಗುರುದೇವರಲ್ಲಿ ಕ್ಷಮೆಯಾಚಿಸಿ ಮತ್ತೊಮ್ಮೆ ನಾಮದ (ಮಂತ್ರದ) ಉಪದೇಶವನ್ನು ಪಡೆಯುವುದು.**

**ಲೇಖಕರು,**
**ಸಂತ ರಾಮ್‌ಪಾಲ್ ದಾಸ್ ಮಹಾರಾಜರು**
**ಸತ್ಯಲೋಕ ಆಶ್ರಮ, ಬರವಾಲಾ,**
**ಜಿಲ್ಲೆ–ಹಿಸಾರ್, ಹರಿಯಾಣ (ಭಾರತ)**

# "ಶಾಸ್ತ್ರಾನುಕೂಲದ ಭಕ್ತಿಯಿಂದ ಭಕ್ತರಿಗಾಗುವ ಲಾಭ"

## "ಪರಮೇಶ್ವರನ ಸೀಮಾತೀತವಾದ ದಯೆ"

ಮುಕ್ತಿದಾತ ಸದ್ಗುರು ರಾಮ್‌ಪಾಲ್ ಮಹಾರಾಜರಿಗೆ ಜೈ

ನನ್ನ ಹೆಸರು ನೀಲೇಶ ದಾಸ್, ನನ್ನ ತಂದೆಯವರ ಹೆಸರು ವಾಲಪ್ಪ, ನಾನು ತಾ॥ಜಿ॥ ಬಾಗಲಕೋಟ, ನೀಲಾನಗರ ಹಳ್ಳಿಯ ನಿವಾಸಿಯಾಗಿದ್ದೇನೆ. ನಾನು ಮೋದಲು ನನ್ನ ತಂದೆ–ತಾಯಿಯವರು ಶ್ರದ್ಧಾ, ಭಕ್ತಿ ಮತ್ತು ನಂಬಿಕೆಯಿಂದ ಪೂಜೆ ಪುನಸ್ಕಾರ ಮಾಡಿಕೊಂಡು ಬಂದಂತಹ ದೇವಾನು–ದೇವತೆಗಳ ಪೂಜೆ ಪುನಸ್ಕಾರಗಳನ್ನು ನಾನೂ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದೆ. ನಮ್ಮ ಊರಿನ ಹತ್ತೀರದಲ್ಲಿರುವ ಎಲ್ಲಮ್ಮ ದೇವಿಯ ಗುಡ್ಡಕ್ಕೂ ಹೋದೆ, ದಸರಾ ಉತ್ಸವದ ಸಮಯದಲ್ಲಿ ದುರ್ಗಾ ದೇವಿಗೆ ಅಲ್ಲಿ ನಡೆದುಕೊಂಡು ಬಂದಿರುವ ಆಚಾರ ವಿಚಾರ ಮತ್ತು ನಂಬಿಕೆಗಳ ಆಧಾರದ ಮೆರೆಗೆ ಮೇಕೆ ಬಲಿ ಕೊಡುತ್ತಿದ್ದೆ ಮತ್ತು ಪಾಂಡುರಂಗನ ಭಕ್ತಿ ಕೂಡ ಮಾಡುತ್ತಿದ್ದೆ. ಅದೇ ರೀತಿ ಎಲ್ಲಾ ದೇವರ ಭಕ್ತಿ ಮಾಡುತ್ತಿದ್ದೆನು. ಆದರೂ ಸಹ ನನ್ನ ಆರ್ಥಿಕ ಹಾಗೂ ಶಾರೀರಿಕ ತೊಂದರೆಗಳನ್ನು ಅನುಭವಿಸುತ್ತಿದ್ದೆನು ಮತ್ತು ಆ ಭಕ್ತಿಯನ್ನು ಮಾಡಿದ ದಿಸೆಯಿಂದ ನನ್ನ ತೊಂದರೆಗಳು ಸುದಾರಿಸುವ ಸ್ಥಿತಿಯನ್ನು ಕಂಡುಕೊಳ್ಳಲಿಲ್ಲ ಹಾಗೂ ಯಾವುದೆ ವ್ಯತ್ಯಾಸಗಳು ಕಂಡುಬರಲಿಲ್ಲ. ನಾನು ಕಂಡ ಜೀವನದಲ್ಲಿ, ಒಂದು ದಿನ ಸಂತೋಷದಿಂದಿದ್ದರೆ ಹತ್ತು ದಿನ ದುಃಖದಲ್ಲಿರುತ್ತಿದ್ದೆ. ನಾನು ಯಾವುದೇ ಕೆಲಸ ಮಾಡಿದರು ಯಶಸ್ವಿ ಹೊಂದುತ್ತೀರಲಿಲ್ಲ. ಈ ಕಾರಣದಿಂದ ನಾನು ಕಾಲ ಕ್ರಮೇಣವಾಗಿ ನಶೆ ಮಾಡಲು ಆರಂಭಿಸಿದೆ. ಆ ದಿಸೆಯಲ್ಲಿ ಸಾರಾಯಿ, ಗುಟಖಾ, ತಂಬಾಕು, ಸಿಗರೇಟ್‌ಇವೆಲ್ಲ ದುಷ್ಚಟಗಳು ನನ್ನಲ್ಲಿ ಮನೆ ಮಾಡಿಕೊಂಡಿದ್ದವು.

ನಾನು ಡ್ರೈವರ್ ಕೆಲಸ ಮಾಡುತ್ತಿದ್ದೆ. ಬರುವ ಅರ್ಧ ಸಂಬಳ ಈ ಚಟಗಳಿಗೆ ಖರ್ಚಾಗುತ್ತಿತ್ತು. ಸ್ವಲ್ಪ ದಿನದ ನಂತರ ನಾನು ಮದುವೆ ಮಾಡಿಕೊಂಡೆ. ನನ್ನ ಹೆಂಡತಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು ಹೆರಿಗೆ ಆದ ನಂತರ ಕೆಲವು ಗಂಟೆಗಳ ನಂತರ ಆ ಮಗು ಸಾವನ್ನಪ್ಪಿತು. ಹೀಗೆ ಒಂದು ವರ್ಷದ ನಂತರ ಇನ್ನೊಂದು ಹೆಣ್ಣು ಮಗು ಹುಟ್ಟಿತು. ಆ ಕೂಸಿಗೆ ಉಸಿರಾಟದ ಸಮಸ್ಯೆ ಇತ್ತು. ನಾನು ನಂಬಿಕೊಂಡಿದ್ದ ದೇವರುಗಳಲ್ಲಿ, ಹೇ ದೇವರೇ ! ನನಗೆ ಈ ಭೂಮಿ ಮೇಲೆ ಏಕೆ ಹುಟ್ಟಿಸಿದ್ದೀರಿ. ನನಗೆ ದುಃಖ ಬಿಟ್ಟು ಏನೂ ಸಿಗುತ್ತಿಲ್ಲ. ಈ ಭೂಮಿ ಮೇಲೆ ನಿವು ಇದ್ದಿರೋ ಅಥವಾ ಇಲ್ಲವೋ? ಎಂದು ಇಡೀ ರಾತ್ರಿ ದುಃಖಿಸುತ್ತಿದ್ದೆ. ಕೆಲವು ದಿನದ ನಂತರ ನಾನು ಯಾವ ಲಾರ್‍ರಿಯನ್ನು ಓಡಿಸಿ ನನ್ನ ಕುಟುಂಬದ ಜೀವನ ಸಾಗಿಸುತ್ತಿದ್ನೋ ಅದೂ ಕಳುವಾಯ್ತು. ಸಮಯಕ್ಕೆ ಬೇರೆ ಕೆಲಸ ಸಿಗದೆ, ಜೀವನ ಸಾಗಿಸುವುದು ತುಂಬ ಕಷ್ಟಕರವಾಗಿ ದುಃಖದ ಬೆಟ್ಟವೇ ನನ್ನ ಮೇಲೆ ಬಿದ್ದಂತೆ ಭಾಸವಾಗುತ್ತಿತ್ತು.

ನನ್ನ ಗೆಳೆಯನಾದ ಉಮೇಶನು ಒಂದು ದಿನ ಸಾಧನಾ ಟವಿಯಲ್ಲಿ ಸಂತ ರಾಮ್‌ಪಾಲ್ ಮಹಾರಾಜ ರವರ ಪ್ರವಚನ ಕೇಳುತ್ತಿದ್ದನು ಟಿವಿ ಸ್ಕ್ರೀನ್ ಮೇಲೆ "ಜ್ಞಾನ ಗಂಗಾ" ಪುಸ್ತಕವನ್ನು ಉಚಿತವಾಗಿ ಪಡೆಯಲು ನಿಮ್ಮ ಪೂರ್ಣ ವಿಳಾಸ ಆಶ್ರಮನ ಮೊಬೈಲ್ ಸಂಖ್ಯೆಗೆ ಎಸ್. ಎಮ್.ಎಸ್ ಮಾಡಿ ಎಂದು ಒಂದು ಪಟ್ಟಿಯ ಮೇಲೆ ಬರೆದಿತ್ತು. ನಾನು ಮತ್ತು ಉಮೇಶನು ಪರಸ್ಪರ ನಮ್ಮ ವಿಳಾಸವನ್ನು ಎಸ್.ಎಮ್.ಎಸ್ ಮೂಲಕ ಸದರಿ ಮೊಬೈಲ್ ಸಂಖ್ಯೆಗೆ ಪುಸ್ತಕ ಕಳುಹಿಸಿಕೊಡಲು ಕೇಳಿಕೊಂಡೆವು. ಒಂದು ವಾರದಲ್ಲಿ ಪುಸ್ತಕ ನಮ್ಮ ಮನೆ ಬಾಗಿಲಿಗೆ ಬಂದು ತಲುಪಿತು. ಅದರಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರ ಭಕ್ತಿ ಹೇಗೆ ಮಾಡಿದರೆ ಲಾಭವಾಗುವುದು, ಶ್ರೀಮದ್ಭಗವದ್ಗೀತೆ, ವೇದಗಳು ಮತ್ತು ಪುರಾಣಗಳಲ್ಲಿ ಪ್ರಮಾಣ ಸಹಿತ ಯಾವ ದೇವರ ಭಕ್ತಿ ಮಾಡಿದರೆ ನಾವು ನಮ್ಮ ಜೀವನದಲ್ಲಿ ಸಾರ್ಥಕತೆಯನ್ನು ಹೊಂದಿ ಮೋಕ್ಷ ಮಾರ್ಗ

ಪ್ರಶಸ್ತವಾಗುವುದು ಎಂಬುವ ಜ್ಞಾನವನ್ನು ಸಂತ ರಾಮ್‌ಪಾಲ್ ಮಹಾರಜರು ಸವಿಸ್ತಾರವಾಗಿ ತಿಳಿಸಿರುವುದನ್ನು ಓದಿ ನನಗೆ ಜ್ಞಾನೋದಯವಾಯಿತು.

ಭಗವದ್ಗೀತೆಯ **16**ನೇ ಅಧ್ಯಾಯದ **23**ನೇ ಶ್ಲೋಕದಲ್ಲಿ ಬರೆದಿದೆ ಯಾವ ವ್ಯಕ್ತಿಯು ಶಾಸ್ತ್ರಗಳಲ್ಲಿ ಬರೆದಿರುವುದನ್ನು ಬಿಟ್ಟು ಮನಬಂದಂತೆ ಆಚರಣೆ (ಪೂಜೆ) ಮಾಡುತ್ತಾರೋ ಅಂಥವರಿಗೆ ಸುಖ, ಸಿದ್ಧಿ ಮತ್ತು ಮೋಕ್ಷ ದೊರೆಯುವುದಿಲ್ಲವೆಂಬುವುದನ್ನು ಅರಿತು ನಾನು ಇಲ್ಲಿಯವರೆಗೆ ಮಾಡಿಕೊಂಡು ಬರುತ್ತಿದ್ದ ಭಕ್ತಿಯಿಂದ ಯಾವ ಲಾಭವು ಏಕೆ ಸಿಗುತ್ತೀರಲಿಲ್ಲವೆಂದು ತಿಳಿದುಕೊಂಡೆನು.

ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಇನ್ನಿತರ ಆದಿ ದೇವತೆಗಳ ಮೂಲ ಮಂತ್ರವನ್ನು ಪೂರ್ಣ ಗುರುವಿನಿಂದ ಪಡೆದು ನಿಯಮದಲ್ಲಿದ್ದು ಭಕ್ತಿ ಮಾಡಿದರೆ ಮನೆಯಲ್ಲಿ ಸುಖ–ಶಾಂತಿ ಮತ್ತು ಮೊಕ್ಷದ ಮಾರ್ಗ ಸಿಗುವುದೆಂದು "ಜ್ಞಾನ ಗಂಗಾ" ಪುಸ್ತಕದ ಮೂಲಕ ತಿಳಿಯಿತು ಮತ್ತು ಗುರವಿಲ್ಲದೆ ಮುಕ್ತಿ ದೊರೆಯುವುದಿಲ್ಲ ಎಂದು ತಿಳಿದ ಬಳಿಕ ಸಂತ ರಾಮ್‌ಪಾಲ್ ಗುರುಗಳ ಆಶೀರ್ವಾಚದನ ಪಡೆಯುವ ಇಚ್ಛೆ ಮನಸ್ಸಿನಲ್ಲಿ ಮೂಡಿತು. ಆರ್ಥಿಕ ತೊಂದರೆಗಳ ಕಾರಣಗಳಿದ್ದರೂ ಬೇರೆಯವರಿಂದ ಸಾಲ ಪಡೆದು ಸತ್ಯಲೋಕ ಆಶ್ರಮ ಬರವಾಲಾ, ಜಿಲ್ಲೆ–ಹಿಸಾರ್‌ಗೆ(ಹರಿಯಾಣ) ಹೋಗಿ ದಿನಾಂದಕ:– **11–04–2014** ರಂದು ರಾತ್ರಿ **03:30** ಕ್ಕೆ ಗುರುಗಳಿಂದ ನಾಮದೀಕ್ಷೆ ಪಡೆದೆ. ಆಶ್ರಮದಲ್ಲಿ ಭಕ್ತಾದಿಗಳ ನಡೆ–ನುಡಿ, ಸಭ್ಯತೆ ಮತ್ತು ಆಶ್ರಮದ ವ್ಯವಸ್ಥೆ ಎಲ್ಲವನ್ನು ನೋಡಿದಾಗ ಅದೊಂದು ಮಿನಿ ಸತ್ಯಲೋಕ ಎನ್ನಿಸಿತು. ಗುರುಗಳಿಂದ ಆಶಿರ್ವಾದ ಪಡೆಯುವಾಗ ಅಳುತ್ತಾ ನನ್ನ ದುಃಖಗಳನ್ನು ವಿವರಿಸಿದೆ. ಆಗ ಗುರುಗಳು, ಪರಮಾತ್ಮ ಎಲ್ಲಾ ಸರಿಪಡಿಸುತ್ತಾನೆ ಭಕ್ತಿ ಮಾಡು ಮಗು ಎಂದು ಹೇಳಿ ಆಶಿರ್ವದಿಸಿದರು. ಆಶ್ರಮದಿಂದ ಅವತ್ತೆ ಸಾಯಂಕಾಲ ಮನೆಗೆ ಹಿಂದಿರುಗಿದೆ. ಗುರುಗಳು ಹೇಳಿದ ಪ್ರಕಾರ ನಿಯಮದಲ್ಲಿದ್ದು ಶ್ರದ್ಧೆಯಿಂದ ಭಕ್ತಿ ಮಾಡಲು ಆರಂಭಿಸಿದೆ. ಕೆಲವೇ ದಿನಗಳಲ್ಲಿ ಆರ್ಥಿಕ ಹಾಗೂ ಶಾರೀರಿಕ ಲಾಭ ಸಿಗಲು ಪ್ರಾರಂಭವಾಯಿತು. ನಾನು ಮೊದಲು ಮಾಂಸ, ಮೀನು, ಮೊಟ್ಟೆ ಎಲ್ಲವನ್ನು ತಿನ್ನುತ್ತಿದ್ದೆ ಹಾಗೂ ಸಾರಾಯಿ, ಗುಟಖಾ, ಸಿಗರೆಟ್‌ಗಳ ಚಟಗಳಿತ್ತು. ಗುರುಗಳು ತಿಳಿಸಿದ ಹಾಗೆ ಭಕ್ತಿ ಮಾರ್ಗದಲ್ಲಿ ಇವೆಲ್ಲ ವಿಷಕ್ಕೆ ಸಮಾನವೆಂದು ಅರಿತು ಅವೆಲ್ಲವನ್ನು ತಿನ್ನುವುದನ್ನು ಹಾಗೂ ಸೇವಿಸುವುದನ್ನು ಬಿಟ್ಟಿರುತ್ತೇನೆ ಹಾಗೂ ಅವೆಲ್ಲವನ್ನು ಯಾರಿಗೂ ತಂದು ಸಹ ಕೊಡುವುದಿಲ್ಲ ಮತ್ತು ಮುಟ್ಟುವುದಿಲ್ಲ. ಇಷ್ಟೆಲ್ಲ ಬದಲಾವಣೆ ಗುರುಗಳು ನೀಡಿದಂತಹ ನಾಮ ಜಪದಿಂದ ಹಾಗೂ ಅವರ ಆಶಿರ್ವಾದದಿಂದಾಯಿತೆಂದು ಅವರಿಗೆ ಕೋಟಿ–ಕೋಟಿ ಬಾರಿ ಕೃತಘ್ನತೆಗಳನ್ನು ಅರ್ಪಿಸಿದರೂ ಕಡಿಮೆಯೆಂದು ಹೇಳಲು ಇಚ್ಛಿಸುತ್ತೇನೆ.

ನಾನು ಮೊದಲು ಬೇರೆಯವರ ಬಳಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೆ. ಇಗ ನನ್ನದೆ ಆದ ಒಂದು ಸ್ವಂತ ಗಾಡಿ ಇದೆ. ನನಗೆ ಎಲ್ಲಾ ತರಹದ ಸುಖ ಸಿಗಲು ಪ್ರಾರಂಭವಾದವು. ನನ್ನ ಹೆಂಡತಿಯ ಎರಡೂ ಕಾಲುಗಳು ಅಚಾನಕ್ಕಾಗಿ ಸ್ಪರ್ಶವಿಲ್ಲದಂತಾಯಿತು. ಆಗ ನಾನು ಸತ್ಯಲೋಕ ಆಶ್ರಮ ಬರವಾಲಾಗೆ ಫೋನ್ ಮಾಡಿ ಗುರುಗಳಲ್ಲಿ ಪ್ರಾರ್ಥಿಸಿಕೊಂಡಾಗ, ಗುರುಗಳು ನಿನ್ನ ಹೆಂಡತಿಗೆ ದೀಕ್ಷೆ ಕೊಡಿಸು ಪರಮಾತ್ಮ ದಯಮಾಡುತ್ತಾರೆ ಎಂದರು. ನನ್ನ ಕಾಲುಗಳು ಸರಿಯಾದರೆ ನಾನು ದೀಕ್ಷೆ ಪಡೆಯುವೆನೆಂದು ಅವತ್ತೆ ರಾತ್ರಿ ನನ್ನ ಹೆಂಡತಿ ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಳು. ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರವರ ದಯದಿಂದ ಬೆಳಿಗ್ಗೆ ಆಗುವಷ್ಟರಲ್ಲಿ ಕಾಲುಗಳು ಸರಿಯಾಗಿದ್ದವು. ಆಮೇಲೆ ನನ್ನ ಹೆಂಡತಿ ದೀಕ್ಷೆ ಪಡೆದಳು.ಈಗ ನಾನು, ನನ್ನ ಹೆಂಡತಿ ಮತ್ತು ನನ್ನ ಐದು ವರ್ಷದ ಮಗಳು ಸೇರಿ ಮುಕ್ತಿದಾತ ಕಬೀರ್ ಪರಮೇಶ್ವರರ ಅವತಾರ ಸಂತ ರಾಮ್‌ಪಾಲ್ ಮಹಾರಾಜರು ನೀಡಿದಂತಹ ಭಕ್ತಿ ಮಾರ್ಗ ಅನುಸರಿಸಿ ಬಹಳ ಸುಖಕರ ಜೀವನ ಸಾಗಿಸುತ್ತಿದ್ದೇವೆ. ಎಲ್ಲ ಭಕ್ತ ಸಮಾಜರಲ್ಲಿ ಪ್ರಾರ್ಥಿಸಿಕೊಳ್ಳುವುದೆನೆಂದರೆ ಸ್ವತಃ

ಕಬೀರ ಪರಮೇಶ್ವರರು ಸಂತ ರಾಮ್‌ಪಾಲ್ ಮಹಾರಾಜರವರ ರೂಪದಲ್ಲಿ ಬಂದು ವೇದಗಳು, ಶ್ರೀಮದ್ಭಗವದ್ಗೀತೆ, ಪುರಾಣ ಶಾಸ್ತ್ರಗಳಲ್ಲಿ ಉಲ್ಲೆಖವಿರುವ ನೀಜ ಭಕ್ತಿಸಾಧನೆಯ ತತ್ವಜ್ಞಾನವನ್ನು ತಿಳಿಸಿ, ಸತ್ಯಭಕ್ತಿ ಮಾಡಿಸಿ ನಮ್ಮನ್ನು ಅಮರಲೋಕ ಅಂದರೆ ಸತ್ಯಲೋಕಕ್ಕೆ ಕರೆದೊಯ್ಯಲು ಅವತರಿಸಿದ್ದಾರೆ. ಇವರಿಂದ ದೀಕ್ಷೆ ಪಡೆದು ನಿಮ್ಮ ಆತ್ಮಕಲ್ಯಾಣಮಾಡಿಸಿಕೊಳ್ಳಿರಿ.

–: ಸತ್ ಸಾಹೇಬ್ :–

ನೀಲೇಶ ದಾಸ:– **7972426806**

## "ಅದ್ಭುತ ಚಮತ್ಕಾರ"

ನಾನು ಹಣಮಂತರೆಡ್ಡಿಯವರ ಮಗ ಶಿವಾರೆಡ್ಡಿ ಕರ್ನಾಟಕ ರಾಜ್ಯದ ಕಲಬುರ್ಗಿ ಜಿಲ್ಲೆಯ ಕಮಲಾಪೂರ ತಾಲ್ಲೂಕಿನ ಕಲಮೂಡ ಗ್ರಾಮದ ನಿವಾಸಿಯಾಗಿದ್ದೇನೆ. ನನಗೆ ನಾಲ್ಕು ವರ್ಷದಿಂದ ಬೆನ್ನು ನೋವು ಮತ್ತು ಕಿಡ್ನಿ ಸ್ಟೋನ್ ಹಾಗೂ ಕಾಲು ನೋವು ಇತ್ತು. ಸುಮಾರು **6** ತಿಂಗಳಿನಿಂದ ನನಗೆ ಬೆನ್ನಿನಿಂದ ಕಾಲಿನವರೆಗೆ ನೋವು ಅತೀ ಹೆಚ್ಚಾಗಿತ್ತು. ಡಾಕ್ಟರ್ ಹತ್ತಿರ ಹೋದಾಗ ಅವರು ಮೂರು ತಿಂಗಳುಗಳಿಗೆ ಆಗುವಷ್ಟು ಮಾತ್ರೆ ಕೊಟ್ಟರು. ಅದನ್ನೆಲ್ಲಾ ಸೇವಿಸಿದ ನಂತರವೂ ರಿಪೋಟಿನಲ್ಲಿ ಸ್ಲೀಪ್ ಡಿಸ್ಕ್ ಆಗಿರುವ ಕಾರಣದಿಂದ ಆಪರೇಷನ್ ಮಾಡಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದರು. ಆ ವಿಷಯದಲ್ಲಿ ನಾನು ಬೆಂಗಳೂರಿಗೆ ಹೋಗಿ 'ಮಹಾವೀರ್ ಜೈನ್ ಆಸ್ಪತ್ರೆ' ಯಲ್ಲಿ ತಜ್ಞವೈದ್ಯರ ಸಲಹೆ ಪಡೆಯಲು ರೋಗಿಗಳ ಸಾಲಿನಲ್ಲಿ ಕುಳಿತುಕೊಂಡೆ. ಆಗ ನಾನು ದೊಡ್ಡ ಟಿವಿ ಸ್ಕ್ರಿನಿನ ಪರದೆಯ ಮೇಲೆ ಮೂಳೆಗಳನ್ನು ಕಟ್ಟು ಮಾಡಿ ಆಪರೇಷನ್ ಮಾಡುವುದನ್ನು ನೋಡಿ ಭಯಭೀತನಾಗಿ ಮುಂದಿನ ಸಲಹೆ ಪಡೆಯದೆ ಮರಳಿ ಊರಿಗೆ ಬಂದೆ. ಆಗ ನನ್ನ ಮಿತ್ರರು ಆದ ಡಾಕ್ಟರ್ ಮಠಪತಿಯವರ ಮೂಲಕ ಕಲಬುರ್ಗಿ ಯುನೈಟೆಡ್ ಹಾಸ್ಪಿಟಲನಲ್ಲಿ ಆಪರೇಷನ್ ಮಾಡಿಸಿಕೊಳ್ಳುವ ಸಿದ್ಧತೆಯನ್ನು ಮಾಡಿಕೊಂಡಿದ್ದೆನು. ಆದರೂ ನನಗೆ ಅವರು ಮಿತ್ರರಾದ ಕಾಣದಿಂದ ಖಾಸಗಿ ಆಸ್ಪತ್ರಯಲ್ಲಿ ಬಹಳ ಖರ್ಚು ವೆಚ್ಚ ತಗಲಬಹುದೆಂದು ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಮಾಡುತ್ತೆನೆಂದು ಸಲಹೆಯನ್ನು ನೀಡಿದರು. ಸದರಿ ಸಲಹೆಯಂತೆ **5** ದಿನಗಳ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗುತ್ತೆನೆಂದು ಊರಿಗೆ ಮರಳಿ ಬಂದೆ. ಈ ರೀತಿ ಇರುವಾಗ ನನ್ನ ಗೆಳೆಯನಾದ ರಾಮರೆಡ್ಡಿಯವರು ಸಂತ ರಾಮ್‌ಪಾಲ್ ಮಹಾರಾಜರಿಂದ ಸಾವಿರಾರು ಜನರು ದೀಕ್ಷೆ ಪಡೆದು ಭಕ್ತಿ ಮಾಡುವುದರಿಂದ ಮಾರಣಾಂತಿಕ ರೋಗಗಳಿಂದ ಗುಣಮುಖರಾಗಿದ್ದಾರೆಂದು ಸುಮಾರು **6** ತಿಂಗಳುಗಳ ಹಿಂದೆ ಹೇಳಿದ ಮಾತು ಪದೆ–ಪದೆ ನೆನಪಾಗುತ್ತಿತ್ತು. ನಾನು ಅವರ ಮಾತುಗಳಿಗೆ ಗಮನ ನೀಡುತ್ತಿರಲಿಲದಿದ್ದರು, ಅವರು **1** ದಿನ ಅಂಚೆಯ ಮೂಲಕ 'ಜ್ಞಾನ ಗಂಗಾ' ಪುಸ್ತಕವನ್ನು ನನಗೆ ಕಳುಹಿಸಿದರು.

ಸದರಿ ಪುಸ್ತಕ ಈ ಮೊದಲೇ ನನ್ನ ಮನೆಯಲ್ಲಿ ಇತ್ತು. ಅದನ್ನು ಒಂದು ದಿನ ನಾನು ಕಮಲಾಪೂರದಲ್ಲಿ ಕೆಲಸಕ್ಕೆ ಹೊಗಿದ್ದಾಗ ಕೆಲ ಭಕ್ತರು 'ಜ್ಞಾನ ಗಂಗಾ' ಪುಸ್ತಕ ಸೇವೆ ಮಾಡುತ್ತೀರುವಾಗ ಅವರ ಬಳಿ **10** ರೂಪಾಯಿ ನೀಡಿ ಪುಸ್ತಕವನ್ನು ಪಡೆದುಕೊಂಡಿದ್ದೆ. ಅದೇ ಪುಸ್ತಕವನ್ನು ನನ್ನ ಸ್ನೇಹಿತರು ಕಳುಹಿಸಿದ್ದನ್ನು ನೋಡಿ, ಆ ಪುಸ್ತಕದಲ್ಲಿ ಏನಿರಬಹುದೆಂಬ ಕೂತುಹಲದಿಂದ ಪುಸ್ತಕವನ್ನು ಓದಲು ಆರಂಭಿಸಿದೆ. ಪುಸ್ತಕವನ್ನು ಸಂಪೂರ್ಣವಾಗಿ ಓದಲಾಗಿ, ಶ್ರೀಮದ್ಭಗವದ್ಗೀತೆ, **4** ವೇದಗಳು, ಪುರಾಣಗಳು, ಉಪನಿಷದ್‌ಗಳು ಮತ್ತು ಇನ್ನೀತರೆ ಧರ್ಮದ ಪವಿತ್ರ ಸದ್ಗ್ರಂಥಗಳಲ್ಲಿ ಪೂರ್ಣ ಪರಮಾತ್ಮನ ಬಗ್ಗೆ ಒಬ್ಬರೆ ಎನ್ನುವ ಅರಿವು ಆಯಿತು. ಹಾಗೂ ಅವರನ್ನು ಆರಾಧಿಸುವುದರಿಂದ ದುಃಖಿಯನ್ನು ಸುಖಿಯನ್ನಾಗಿ ಮಾಡುವನೆಂದು ತಿಳಿಯಿತು. ಅವತ್ತಿನಿಂದ ನಾನು ಮಾಂಸ ಮತ್ತು ವ್ಯಸನ ಮಾಡುವುದಿಲ್ಲ. ನನ್ನ ತಾಯಿಯವರಿಗೂ ಕೂಡ ಬಹಳ ವರ್ಷಗಳಿಂದ ಮಾಟ ಮಂತ್ರ ಪೀಡೆಯಿಂದ ಬಳಲುತ್ತಿದ್ದರು. ಅವರು ಅಂಬಾ ಭವಾನಿ ಮಾತೆಯ ಭಕ್ತೆಯಾಗಿದ್ದಳು. ಅವರ ಹೆಸರಿನಲ್ಲಿ ಮಂಗಳವಾರ ಮತ್ತು

ಶುಕ್ರವಾರ ಬಿಕ್ಷಾಟನೆ ಮಾಡಿ ತಯಿಗೆ ನೈವೆದ್ಯ ಸೇವೆ ಮಾಡುತ್ತಿದ್ದರು. ಆದರೂ ಪೀಡೆಯ ಕಾಟದ ಪ್ರಮಾಣ ಕಡಿಮೆಯಾಗಲಿಲ್ಲ. ಎಲ್ಲಾ ತಾಂತ್ರಿಕರ ಹತ್ತಿರ ಹೋದರು ಕೂಡ ನೋವು ಹಾಗೂ ತೊಂದರೆಗಳು ಹೆಚ್ಚಾಗುತ್ತಿತ್ತು. ನಮ್ಮ ಊರಲ್ಲಿದ್ದ ಮಾಣಿಕೇಶ್ವರ ದೇವಸ್ಥಾನಕ್ಕೆ, ಎಲ್ಲಮ್ಮ ದೇವಸ್ಥಾನ ಹಾಗೂ ಮನ ಲಕ್ಷ್ಮಿಗೆ ಕುರಿಯನ್ನು 3 ವರ್ಷಕ್ಕೊಮ್ಮೆ ಬಲಿ ಅರ್ಪಿಸಿ ಪೂಜೆಯನ್ನು ಮಾಡಿದರೂ ಸಹ ನಮ್ಮ ತಾಯಿಯ ಶರೀರದಲ್ಲಿ ಸೂಜಿ ಚುಚ್ಚಿದ ಹಾಗೆ ಮತ್ತು ಬೆಂಕಿ ಹತ್ತಿದ ಹಾಗೆ ಕಾಲು ನೋವು ಹೆಚ್ಚಾಗಿತ್ತು. ಅವರು ಕೂಡ ಗುರುಗಳು ಹೇಳಿದ ಜ್ಞಾನಾರ್ಜನೆ ಮಾಡಿ ನಾಮೋಪದೇಶ ಪಡೆಯಲು ಮುಂದದರು. ದಿನಾಂಕ:– 25–08–2019 ರಂದು ನಮ್ಮ ಸಪರಿವಾರದೊಂದಿಗೆ ಹೈದ್ರಾಬಾದನಲ್ಲಿರುವ ಸದ್ಗುರುಗಳ ನಾಮೋಪದೇಶ ಕೇಂದ್ರಕ್ಕೆ ಹೋಗಿ ಗುರು ದೀಕ್ಷೆ ಪಡೆದುಕೊಂಡೆವು.

ಸೇವೆ ಮಾಡುವುದರಿಂದ ನಮ್ಮ ಪಾಪಕರ್ಮಗಳು ಕಳೆಯುವುದೆಂದು ಕೆಲವು ಭಕ್ತಾದಿಗಳಿಂದ ತಿಳಿದುಕೊಂಡು 1 ತಿಂಗಳ ತನಕ ಸೇವೆ ಮಾಡುವುದಾಗಿ ಪರಮಾತ್ಮನಲ್ಲಿ ಮನಸ್ಸಿನಲ್ಲಿ ಬೇಡಿಕೊಂಡೆ. ಆಗ ನಾನು ಬೆಂಗಳೂರು ನಾಮೋಪದೇಶ ಕೇಂದ್ರಕ್ಕೆ ಫೋನ್ ಮಾಡಿ ಸೇವೆಗೆ ಬರುವುದಾಗಿ ಕೇಳಿದೆ. ಆಗ ಅವರು ಕರ್ನಾಟಕದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳಿಗೆ ಉಚಿತವಾಗಿ ಪುಸ್ತಕ ವಿತರಣೆಯ ಸೇವೆಯಲ್ಲಿ ಭಾಗವಹಿಸಲು ತಿಳಿಸಿದರು. ಸದರಿ ಸೇವೆ ಮಾಡುವ ಅವಕಾಶವನ್ನು ಸದುಪಯೋಗ ಪಡೆಯಲು ಸೇವೆಯಲ್ಲಿ ಭಾಗವಹಿಸಿದೆ. ಕೆಲವು ದಿನಗಳ ನಂತರ ನನ್ನ ಬೆನ್ನು ಮೂಳೆ ನೋವು ಹೇಗೆ ಮಾಯವಾಯಿತು ಎಂದು ನನಗೆ ತಿಳಿಯಲಿಲ್ಲ. ಇದೆಲ್ಲ ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರ ಕೃಪೆಯಿಂದಾಗಿದೆ ಎನ್ನುವುದರಲ್ಲಿ ಎರಡು ಮಾತಿರುವುದಿಲ್ಲ. ಒಂದು ತಿಂಗಳು 14 ದಿನ ಸೇವೆ ಮಾಡಿ ಊರಿಗೆ ಹೋಸ ಉಲ್ಲಾಸದಿಂದ ವಾಪಸ್ಸಾದೆ. ಈಗ ನಾವು ಸಪರಿವಾರ ಸಂತ ರಾಮ್‌ಪಾಲ್ ಮಹಾರಾಜರವರು ಹೇಳಿರುವ ಭಕ್ತಿಯನ್ನು ಮಾಡುತ್ತಾ ಸುಖವಾಗಿ ಜೀವನವನ್ನು ಸಾಗಿಸುತ್ತಿದ್ದೇವೆ

॥ ಸತ್ ಸಾಹೇಬ್ ॥

ಶಿವಾರೆಡ್ಡಿ ದಾಸ್:– 9108900453

## "ಲೂಟಿಗೊಳಗಾದವರಿಗೆ ಆಧಾರ"

ನಾನು ಚೇತನಾ ದಾಸಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹರಲಾಪೂರದ ನಿವಾಸಿಯಾಗಿದ್ದೇನೆ. ನನ್ನನ್ನು ದೇವರು ಸಾವಿನ ದವಡೆಯಿಂದ ಬದುಕಿಸಿದ್ದಾರೆ. ಈ ಮೇಲೆ ತಿಳಿಸಿರುವ ನಾನು ಆತ್ಮ ಹತ್ಯೆ ಮಾಡಿಕೊಳ್ಳುವ ಮಾನಸಿಕ ಸ್ಥಿತಿಗೆ ಒಳಗಾಗಿದ್ದೆ ಮತ್ತು ಬದುಕೆಂಬುವುದು ಒಂದು ಅವತಾರವಾಗಿ ಪರಿಗಣಿಸಿತ್ತು. ಇವೆಲ್ಲಾ ಸಂಕಷ್ಟಗಳು ನನಗೆ ಮದುವೆ ಆದ ಮೇಲೆ ಶುರುವಾಗಿ ತುಂಬಾ ಹಿಂಸೆ ಅನುಭವಿಸಬೇಕಾಯಿತು. ನಾನು ಮೂಲತಃ ಬಿ.ಕಾಮ್ ಎಜುಕೇಷನ್ ಮಾಡಿದ್ದೆನೆ. ನನ್ನನ್ನು ಮಹಾರಾಷ್ಟ್ರದಲ್ಲಿ ಮದುವೆ ಮಾಡಿ ಕೊಟ್ಟರು. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಬಿಟ್ಟು ಯಾವುದೇ ಬೇರೆ ಭಾಷೆಗಳು ಬರುತ್ತಿರಲಿಲ್ಲ. ಮನೆಯಲ್ಲಿ ನನ್ನ ಗಂಡ ಮತ್ತು ಮಾವನವರಿಗೆ ಇಂಗ್ಲೀಷ ಭಾಷೆಯ ಅರಿವಿದ್ದ ಕಾರಣದಿಂದ ಅವರ ಜೋತೆಯಲ್ಲಿ ಮಾತನಾಡಬಹುದಿತ್ತು. ಆದರೆ ನನ್ನ ಅತ್ತೆ ಮತ್ತು ನಾದನಿ ಇಬ್ಬರು ನನಗೆ ಮರಾಠಿ ಭಾಷೆ ಬರದೇ ಇದ್ದ ಕಾರಣ ಅವರೊಡನೆ ಸಂಭಾಷಿಸಲು ಕಷ್ಟಕರವಾಗುತಿತ್ತು ಮತ್ತು ಈ ವರ್ತನೆಯಿಂದ ಅವರು ನನಗೆ ಮಾನಸಿಕವಾಗಿ ಹಿಂಸಿಸುತ್ತಿದ್ದರು ಆದ ಕರಣದಿಂದ ನಾನು ಹಲವಾರು ಬಾರಿ ಅಳುತ್ತಿದ್ದೆ. ನಾನು ನನ್ನ ತಾಯಿ–ತಂದೆಗೆ ಫೋನ್ ಮಾಡಲೂ ಕೂಡ ಕಷ್ಟವಾದ ಸ್ಥಿತಿಯಲ್ಲಿ ಇಟ್ಟಿದರು. ನನ್ನ ಫೋನ್ ಕೂಡ ಕೊಡುತ್ತಿರಲಿಲ್ಲ. ನಮ್ಮದು ಸ್ವಂತ ಫ್ಯಾಕ್ಟರಿ ಇದ್ದು ಮತ್ತು ಮನೆಯಲ್ಲಿ ಕೆಲಸದವರು ಇದ್ದರು ನನಗೆ ಆ ಮನೆಯಲ್ಲಿ ಇರಲು ಕಷ್ಟವಾಗುತಿತ್ತು. ನನಗೆ ಗಂಡನ ಮನೆಯವರು ತತ್ವಜ್ಞಾನ ಇಲ್ಲದ ಕಾರಣ ತುಂಬ ಹಿಂಸೆ ಕೊಡುತ್ತಿರುತ್ತಿದ್ದರು. ಮನೆಯಲ್ಲಿ ಗಂಡನ ಆಸರೆಯು ಇರಲಿಲ್ಲ

ದಿನಾಗಲೂ ಮನೆಯಲ್ಲಿ ಅನಗತ್ಯವಾಗಿ ಜಗಳವಾಗುತ್ತಿತ್ತು. ಮದುವೆಯಾಗಿ ಗಂಡನ ಮನೆಯಲ್ಲಿ 1 ವರ್ಷ ಕಾಲ ಕಳೆಯಲಾಗಲಾರದೇ ತವರಿಗೆ ಮರಳಿದೆ. ತವರು ಮನೆಯಲ್ಲಿ 5 ವರ್ಷಕಳೆಯಿತು,

ಆ 5 ವರ್ಷಗಳಲ್ಲಿ ಪೋಲಿಸ್ ಸ್ಟೇಷನ್, ಕೊರ್ಟು ಕಛೇರಿಗಳನ್ನು ಅಲೆದಾಡಿದರು, ಎಲ್ಲ ಗುರು ಹಿರಿಯರು ಸೇರಿ ಮಾತನಾಡಿದ್ದರೂ ಕೂಡ ಪರಿಸ್ಥಿತಿ ಸುಧಾರಿಸದೇ ನನ್ನ ದಾಂಪತ್ಯ ಜೀವನದಲ್ಲಿ ಯಾವುದೇ ರೀತಿಯ ಸುಖವನ್ನು ಕಾಣಲಾಗಲಿಲ್ಲ. ಇಷ್ಟೆ ಅಲ್ಲದೆ ನಾನು ಜೈನ್ ಧರ್ಮದವಳಾಗಿದ್ದ ಕಾರಣ ನನ್ನ ತಾಯಿ ಹೇಳಿದ ಹಾಗೆ ಜೈನ್ ಮಂತ್ರ 'ನವಕಾರ್ ಮಂತ್ರ' ಕೂಡ ಜಪ ಮಾಡುತ್ತಿದ್ದೆ. ಇದರ ಜೋತೆಗೆ 'ಭಕ್ತಾಂಬರ' ಸ್ತೋತ್ರ' ಕೂಡ ಜಪಿಸುತ್ತಿದ್ದೆ. ಜೈನ್ ಧರ್ಮದಲ್ಲಿ 'ಭಕ್ತಾಂಬರ' ಸ್ತೋತ್ರವನ್ನು ಸ್ತೂತಿ ಮಾಡುವುದರಿಂದ ಸಕಲ ಸಂಕಷ್ಟಗಳು ದೂರವಾಗುವುದೆಂಬ ಪ್ರತೀತಿ ಇರುವ ಕಾರಣದಿಂದ, ಅದನ್ನೂ ಸಹ ಹಲವಾರು ಬಾರಿ ಜಪಿಸುತ್ತಿದೆ. ಯಾರೋ ಹೇಳಿದಂತೆ, ಪಠನೆ ಮಾತ್ರದಿಂದಲೇ ಸಕಲ ಕಷ್ಟಗಳು ದೂರವಾಗುವುದೆಂದು ಹನುಮಾನ ಚಾಲಿಸಾ ಕೂಡ ಜಪ ಮಾಡಿದೆ. ಹುಬ್ಬಳ್ಳಿಯಲ್ಲಿ ಭವಿಷ್ಯ ಹೇಳುವವರೊಬ್ಬರ ಬಳಿ ಹೊಗಲಾಗಿ, ಸದರಿಯವರು ನನ್ನನ್ನು ಗಮನಿಸಿ, ನಿನ್ನ ಮುಖದ ಮೇಲೆ ಇರುವ ಮಚ್ಚೆಯು ಅಪಶಕುನವಾಗಿ ಪರಿಗಣಿಸುತ್ತೀರುವುದರಿಂದ ಸದರಿ ಮಚ್ಚೆಯನ್ನು ತೆಗೆದು ಹಾಕಲು ಸೂಚಿಸಿದರು. ಅವರು ಸೂಚಿಸಿದಂತೆ, ಮಚ್ಚೆಯನ್ನು ಅಗರಬತ್ತಿಯಿಂದ ಸುಟ್ಟು ತೆಗೆಯಲು ಹೋಗಿ ಮುಖದಲ್ಲಿ ಗಾಯವನ್ನು ಮಾಡಿಕೊಂಡೆನು. ನಮ್ಮ ಊರ ಹತ್ತೀರ ಇರುವ ಪದ್ಮಾವತಿ ದೇವಸ್ಥಾನಕ್ಕೂ ಹೊದೆ, ಎಲ್ಲೋ ಪಂಚಾಂಗ ಕೇಳಿದೆ ಅವರು ಹೇಳಿದ ಹಾಗೆ ಕೂಡ ಮಾಡಿದೆ, ಸಿ.ಜಿ ಪರಿವಾರ ಅಂತ ಟಿವಿಯಲ್ಲಿ  ಬರುತ್ತಿದ್ದು ಸರಳವಾಸ್ತು ಕೂಡ ಮಾಡಿಸಿದೆವು, ಕವಡೆ ಶಾಸ್ತರ ಕೇಳಿಸಿದೆವು, ನನ್ನ ಗೆಳತಿಯ ಸಲಹೆಯಂತೆ ಕ್ರೈಸ್ತ ಧರ್ಮದಲ್ಲಿ ಮಾಡುವ ಪ್ರರ್ಥನೆಗೆ ಕೂಡ ಹೊದೆ. ಎಲ್ಲೆಲ್ಲೋ ಸುತ್ತಾಡಿ ನನ್ನ 5 ವರ್ಷಗಳ ಕಾಲ ವ್ಯರ್ಥವಾಯಿತೆ ಹೊರತು ನನಗೆ ಎಲ್ಲೂ ಕೂಡ ಲಾಭ ಸಿಗಲಿಲ್ಲ. ಮಧ್ಯದಲ್ಲಿ 1 ಸಲ ನನ್ನ ಗಂಡ ಕರೆದುಕೊಂಡು ಹೊದರು ನಾವಿಬ್ಬರು ಬೇರೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೇವು.

ಒಂದು ದಿನ ನನ್ನ ಗಂಡ ಜಗಳವಾಡಿ ಏನೂ ಹೇಳಲಾರದೆ ನನ್ನನ್ನು ಬಿಟ್ಟು ಹೋದರು. ಇವೆಲ್ಲವನ್ನು ಸಹಿಸಲಾರದೆ ನಾನು ವಿಷ ಸೇವಿಸಿ ಆತ್ಮ ಹತ್ಯೆ ಮಾಡಲು ಪ್ರಯತ್ನಿಸಿದೆ. ಆದರೆ ಪೂರ್ವ ಜನ್ಮದ ಸಂಸ್ಕಾರದಿಂದ ಬದುಕುಳಿದು ಮತ್ತೆ ತವರು ಮನೆಗೆ ಮರಳಿ ಬಂದೆ. ನನಗೆ ಒಳಿತಾಗಬೇಕೆಂದು ಮೇಲೆ ತಿಳಿಸಿದ ಎಲ್ಲ ದೇವರುಗಳ ಆರಾಧನೆ ಮಾಡಿದರು ಸಹ ಯಾವುದೇ ಲಾಭ ಸಿಗದೆ ನನ್ನ ಸಮಯ ಮತ್ತು ನನ್ನ ದುಡ್ಡು ವ್ಯರ್ಥವಾಯಿತು. ಕೊನೆಗೆ ಎಲ್ಲಾ ಸ್ಥಿತಿಗಳು ನನ್ನ ವಿರುದ್ಧವಾಯಿತು. ಇಷ್ಟೆಲ್ಲ ಸೇವೆ, ಭಕ್ತಿ, ವ್ಯಯಾ ಮಾಡಿದರೂ ನನ್ನ ಜೀವನ ಸರಿಪಡಿಸಿಕೊಳ್ಳಲಾಗದೆ, ದಾಂಪತ್ಯ ಜೀವನ ಅಂತ್ಯ ಅಂದರೆ ಡೈವರ್ಸ ತನಕ ತಲುಪಿತು. ಒಂದು ದಿನ ರಾತ್ರಿ ಎನನ್ನೂ ಹೇಳಲಾಗದ ಸ್ಥಿತಿಯಲ್ಲಿ ಅಳುತ್ತಿದ್ದೆ. ನಾನು ನೋಡಲು ಚೆನ್ನಾಗಿದ್ದೆನೆ, ವಿದ್ಯೆ ಇದೆ ಮತ್ತು ಧನವಂತ ಗಂಡ ಇದ್ದರೂ ಮದುವೆಯಾದ ಮೇಲೆ ನನ್ನ ಜೀವನ ನರಕವಾಯಿತು. ಬೇರೆ ಕಡೆ ಕೆಲಸ ಮಾಡಲು ಹೊಗುತ್ತಿದ್ದೆ ಅದರೆ ಒಳ್ಳೆ ಸಂಬಳ ಇಲ್ಲದೆ ಜನರು ಕೆಟ್ಟ ದೃಷ್ಟಿಯಿಂದ ಜಾಸ್ತಿ ಸಂಬಳ ಕೊಡುತ್ತೆವೆ ಎಂದರು. ಎಲ್ಲಾ ಕೆಲಸ ಬಿಟ್ಟು ಬದುಕುವ ಆಸೆಯನ್ನೆ ಬಿಟ್ಟೆ. 1 ರಾತ್ರಿ ಏಕಾಂತದಲ್ಲಿ ಕುಳಿತಿರುವಾಗ ಎಲ್ಲವೂ ನೆನನಪಿಸಿಕೊಳ್ಳುತ್ತ ತುಂಬ ನೋವಾಯಿತು. ಅವತ್ತೆ ದೇವರಲ್ಲಿ ನಮಸ್ಕಾರ ಹಾಕಿ ಕೇಳಿಕೊಂಡೆ ನೀವು ನೀಜವಾಗಿಯೂ ಇದ್ದರೆ ಅದು ನನಗೆ ಗೊತ್ತಾಗಲಿ, ಈ ಎಲ್ಲಾ ದೇವರು ಸತ್ಯ ಅಥವಾ ಸುಳ್ಳು ಎಂದು ಗೊತ್ತಾಗಲಿ ಮತ್ತು ಪೂರ್ಣ ಪರಮಾತ್ಮ ಯಾರು ಎಂದು ಗೊತ್ತಾಗಲಿ ಎಂದು ಪರಮಾತ್ಮನಲ್ಲಿ ಮೊರೆ ಹೋದೆ.

ಒಂದು ದಿನ ನಾನು ಸಾಯಿ ಸಮರ್ಥ ಮಂದಿರಕ್ಕೆ ಹೋಗಿದ್ದೆ. ಅಲ್ಲಿ ಸರಿತಾ ದಾಸಿ ಮನೆಯ ಸದಸ್ಯರ ಜೋತೆ ಬಂದಿದ್ದರು ಅಚಾನಕ್ಕಾಗಿ ಅವರು ನನ್ನನ್ನು ಮಾತನಾಡಿಸಿ 'ಜ್ಞಾನ ಗಂಗಾ' ಪುಸ್ತಕ

ನೀಡಿ ಓದಲು ಹೇಳಿದರು. ಮನೆಗೆ ಬಂದು ಪುಸ್ತಕವನ್ನು ಓದಿದಾಗ ನಾನು ಬಯಸಿದ ಹಾಗೆ ನಿಜವಾದ ದೇವರು ಪೂರ್ಣ ಪರಮಾತ್ಮ ಯಾರೆಂದು ಮತ್ತು ಎಲ್ಲಾ ಧರ್ಮಗ್ರಂಥಗಳನ್ನು ತಿಳಿದಿರುವ ತತ್ವದರ್ಶಿ ಸಂತ ಯಾರೆಂದು ಗೊತ್ತಾಯ್ತು ಮತ್ತು ಇವರಿಂದ ಎಲ್ಲಾ ಸಂದೇಹ ನಿವಾರಣೆ ಆಯಿತು. ಇದರಲ್ಲಿ ಎಲ್ಲಾ ಸದ್ಗ್ರಂಥಗಳು ಶ್ರೀಮದ್ಭಗವದ್ಗೀತೆ, 4 ವೇದಗಳು, ಪುರಾಣಗಳು, ಕುರಾನ್ ಶರೀಫ್, ಬೈಬಲ್, ಜೈನ್ ಧರ್ಮದ ಗ್ರಂಥ ಮತ್ತು ಗುರುಗ್ರಂಥ ಸಾಹೇಬ್ ಈ ಎಲ್ಲಾ ಗ್ರಂಥಗಳ ಸತ್ಯಾಂಶ ತಿಳಿಯಿತು. ನನಗೆ ಪುಸ್ತಕ ನೀಡಿದ ಸರಿತಾ ದಾಸಿಗೆ, ಸದ್ಭಕ್ತಿ ಮಾಡಲು ಮತ್ತು ಶಂಕೆಗಳ, ಕಷ್ಟಗಳ ನಿವಾರಣೆ ಮಾಡಿಕೊಳ್ಳಲು ನಿಮ್ಮ ಗುರುಗಳಿಗೆ ಏನಾದರು ಶುಲ್ಕ  ಪಾವತಿಸಬೇಕೆ ಎಂದು ಕೇಳಿದೆ? ಆಗ ಅವಳು 'ಅವರಿಗೆ ಯಾವ ದುಡ್ಡು ಕೇಳುವುದಿಲ್ಲ ಎಂದಳು' ಆಗ ನಾನು ಸರಿಯಾದ ಜಾಗಕ್ಕೆ ಬಂದೆ ಎಂದು ತಿಳಿದೆ. ಏಕೆಂದರೆ ಎಲ್ಲಿ ಹೋದರೂ ಮೊದಲು ದುಡ್ಡಿನ ವಿಷಯ ಎತ್ತುತಿದ್ದರು. ಇಗ ನಾನು ಖರ್ಚು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ಬಹಳ ಖುಷಿಯಾದೆ. ಒಂದೇ ವಾರದದಲ್ಲಿ ಪುಸ್ತಕ ಓದಿ ತಿಳಿದು ನನ್ನ ತಮ್ಮನನ್ನು ಸಹ ಕರೆದುಕೊಂಡು ದೆಹಲಿಯ ಬಳಿ ಇರುವ ಮುಂಡ್ಕ ಸತ್ಯಲೋಕ ಆಶ್ರಮದಲ್ಲಿರುವ ನಾಮೋಪದೇಶ ಕೇಂದ್ರ ದಿನಾಂಕ:– 26–03–2017 ರಂದು ನಾಮದೀಕ್ಷೆ ಪಡೆದುಕೊಂಡೆವು. ಅವತ್ತಿನಿಂದ ನನ್ನ ಎಲ್ಲ ಸಮಸ್ಯೆಗಳು ದೂರವಾಗತೊಡಗಿದವು.ನಾನು ನಾಮದೀಕ್ಷೆ ಪಡೆದು ಮನೆಗೆ ಬಂದ ಕೆಲವೆ ದಿನಗಳಲ್ಲಿ ನನ್ನ ಗಂಡನ ಫೋನ್ ಬರಲು ಶುರುವಾಯಿತು. 6 ತಿಂಗಳಿಂದ ಮಾತಾಡುವುದನ್ನು ಬಿಟ್ಟಿದ್ದೇವು ಆ ಕಾರಣದಿಂದ ನಾನು ಫೋನ್ ತೆಗೆಯುತ್ತಿರಲಿಲ್ಲ 3 ದಿನದ ನಂತರ ಖುದ್ದಾಗಿ ಮನೆಗೆ ಬಂದು ಕರೆದುಕೊಂಡು ಹೋದರು. ಇಗ ಗುರುಗಳ ದಯದಿಂದ ನಮ್ಮ ಮನೆಯಲ್ಲಿ ಯಾವ ತೊಂದರೆಯು ಇಲ್ಲ. ಈ ಮಧ್ಯ ನಾನು ತವರು ಮನೆಯಲ್ಲಿದ್ದಾಗ ಒಂದು ದಿನ ಜೋರಾಗಿ ಮಳೆ ಬರುತ್ತಿತ್ತು ಮನೆ ಒಳಗೆ ಹೊಗುವಾಗ ತಲೆಗೆ ಬಾಗಿಲು ತಾಗಿ ಗಂಭೀರವಾದ ಪೆಟ್ಟು ಬಿದ್ದು ತುಂಬಾ ಗಾಯವಾಯಿತು ಮತ್ತು ಕಣ್ಣು ಕತ್ತಲೆ ಆಗುತ್ತಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ನನ್ನ ಹತ್ತಿರ ದುಡ್ಡು ಇರಲಿಲ್ಲ. ಆಗ ನಾನು ಸತ್ಯಲೋಕ ಆಶ್ರಮ ಮುಂಡ್ಕಗೆ ಫೋನ್ ಮಾಡಿ ತೊಂದರೆ  ನಿವಾರಣೆಗೆ ಗುರುಗಳ ಬಳಿ ಪ್ರಾರ್ಥನೆ ಸಲ್ಲಿಸಿದೆ. ಆಗ ಗುರುಗಳ ಆದೇಸದಂತೆ 'ಪರಮಾತ್ಮ ದಯಮಾಡುತ್ತಾರೆ ಎಂದರು. ಆಶ್ರಮದಲ್ಲಿ ನೀಡಿದಂತಂಹ ಅಮೃತ್ ಜಲವನ್ನು ಸೇವಿಸಿದೆ ಅವತ್ತೆ ಗುರುಗಳ ದಯದಿಂದ ಸರಿಯಾಯಿತು ಮತ್ತು ನನ್ನ ತಮ್ಮ ಕೆಲಸವಿಲ್ಲದೆ ದುಃಖಿತನಾಗಿದ್ದು ಗುರುಗಳಿಗೆ ಪ್ರಾರ್ಥನೆ ಮಾಡಿಕೊಂಡ ಸ್ವಲ್ಪ ದಿನದಲ್ಲೇ ಅವನಿಗೆ ಸರ್ಕಾರಿ ಕೆಲಸ ಸಿಕ್ಕಿದೆ. ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲದವನಿಗೆ ಸರ್ಕಾರಿ ಕೆಲಸ ಹೇಗೆ ಸಿಕ್ಕಿತು ಎಂದು ಊರಿನ ಜನರು ಆಶ್ಚರ್ಯಪಡುತ್ತಾರೆ. ಗುರುಗಳು ಹೇಳಿದ ನಿಯಮವನ್ನು ಉಲ್ಲಂಘನೆ ಮಾಡಿದ್ದರಿಂದ ನನಗೆ ಮೊದಲಿನ ತೊಂದರೆಗಳು ಕಾಡಲಾರಂಭಿಸಿದವು. ಮನೆಯಲ್ಲಿ ಮತ್ತೆ ಕಲಹ ಸುರುವಾಯಿತು ನನ್ನ ಗಂಡ ಗುರುಗಳ ಫೊಟೊ ಮನೆಯಿಂದ ತೆಗೆದರು. ಆಗ ನಾನು ತವರು ಮನೆಗೆ ಹೋಗುವೆನೆಂದು ನೇರ ಸತ್ಯಲೋಕ ಆಶ್ರಮ ಮುಂಡ್ಕಾ ದೆಹಲಿಗೆ ಹೋಗಿ ನನ್ನ ತವರು ಮನೆಗೆ ಫೋನ್ ಮಾಡಿ ಆಶ್ರಮಕ್ಕೆ ಬಂದಿರುವುದಾಗಿ ತಿಳಿಸಿದೆ. ಗುರುಗಳಲ್ಲಿ ಪ್ರಾರ್ಥಿಸಿಕೊಂಡೆ ಭವಿಷ್ಯದಲ್ಲಿ ಯಾವತ್ತು ನಿಯಮ ಖಂಡನೆ ಮಾಡುವುದಿಲ್ಲವೆಂದು ಮತ್ತು ಪುನರ ಉಪದೇಶ ಪಡೆದೆ. ನನ್ನ ಗಂಡ ನನ್ನ ತವರು ಮನೆಯಲ್ಲಿ ಫೋನ್ ಮಾಡಿ ಆಶ್ರಮಕ್ಕೆ ಹೊಗಿರುವುದಾಗಿ ತಿಳಿದು ನನಗೆ ಫೋನ್ ಮಾಡಿ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಈ ರೀತಿ ಎಂದು ಮಾಡುವುದಿಲ್ಲ ಎಂದರು. ಇಗ ನಾವು ನಮ್ಮ ಪರಿವಾರದಲ್ಲಿ ಬಹಳ ಸುಖಿಯಾಗಿದ್ದೆವೆ.

॥ ಸತ್ ಸಾಹೇಬ್ ॥

ಚೇತನಾ ದಾಸಿ:– 8550066959

## "11,000 ಓಲ್ಟೇಜ್‌ನ ವೈರ್‌ನಿಂದ ಬಿಡುಗಡೆಗೊಳಿಸುವುದು"

ನಾನು ಭಕ್ತ ಸುರೇಶದಾಸ, ಚಾಂದರಾಮರ ಪುತ್ರ, ನಿವಾಸಿ ಹಳ್ಳಿ–ಧನಾನಾ, ಜಿಲ್ಲೆ–ಸೋನಿಪತ್,

ಆದರೆ ಈಗ ಶಾಸ್ತ್ರಿನಗರ, ರೋಹತಕ್(ಹರಿಯಾಣ)ನಲ್ಲಿ ವಾಸವಾಗಿದ್ದೇನೆ. ಸದ್ಗುರುವಿನಿಂದ ನಾಮಸ್ಮರಣೆಯ ದೀಕ್ಷೆ ತೆಗೆದುಕೊಳ್ಳುವ ಮೊದಲು ನನ್ನ ಮನೆಯ ಆರ್ಥಿಕ ಸ್ಥಿತಿ ತುಂಬಾ ಹೀನಾಯ ಸ್ಥಿತಿಯಲ್ಲಿತ್ತು. ಕುಟುಂಬದಲ್ಲಿ ಎಲ್ಲಾ ಸದಸ್ಯರು ಒಂದಲ್ಲಾ ಒಂದು ಅನಾರೋಗ್ಯದಿಂದ ನರಳುತ್ತಿದ್ದರು ಹಾಗೂ ಯಾವೊಬ್ಬ ವ್ಯಕ್ತಿಯೂ ಈ ತೊಂದರೆಯಿಂದ ಹೊರಗುಳಿದಿದ್ದಾನೆ ಎನ್ನುವಂತಿರಲಿಲ್ಲ. ನನ್ನ ಪತ್ನಿಗೆ ಭೂತ ಪ್ರೇತಗಳು ಬಹಳಷ್ಟು ತೊಂದರೆಯನ್ನು ನೀಡುತ್ತಿದ್ದವು. ಇಷ್ಟು ಕಷ್ಟಗಳು ಇದ್ದರೂ ಕೂಡಾ ನಾವು ದೇವ-ದೇವತೆಗಳ ಪೂಜೆಯನ್ನು ಅತಿಯಾಗಿ ಮಾಡುತ್ತಿದ್ದೆವು ಮತ್ತು ನನಗೆ ಆಂಜನೇಯನ ಬಗ್ಗೆ ಬಹಳಷ್ಟು ನಂಬಿಕೆ ಇತ್ತು. ಆದರೆ ಮನೆಯಲ್ಲಿ ಸಂಕಟವು ಮೇಲಿಂದ ಮೇಲೆ ಬರುತ್ತಲಿದ್ದವು. ಯಾವುದೇ ಕಾರ್ಯವು ಸಂಪನ್ನತೆಯಿಂದ ಆಗುತ್ತಿರಲಿಲ್ಲ. ಪೂರ್ಣ ಪರಮಾತ್ಮ ಸದ್ಗುರು ರಾಮ್‌ಪಾಲ್ ಮಹಾರಾಜರು ನನ್ನ ಪರಿವಾರದವರೇ ಆದ ಕಾರಣ ನಾವು ಅವರನ್ನು ಪೂರ್ಣ ಪರಮಾತ್ಮನೆಂದು ಒಪ್ಪಿರಲಿಲ್ಲ. ಅದರ ಫಲವನ್ನು ನಾವು ಬಹಳ ವರ್ಷಗಳವರೆಗೆ ಅನುಭವಿಸಬೇಕಾಯಿತು. ಆಗಲೇ ಸಿಂಹಪುರ ಹಳ್ಳಿಯ ನಿವಾಸಿ ಭಕ್ತ ವಿಕಾಸನು ನನಗೆ ಈ ರೀತಿ ಹೇಳಿದನು. "ನಿಮ್ಮ ಮನೆಗೆ ಪೂರ್ಣ ಪರಮಾತ್ಮ ಜಗದ್ಗುರು ರಾಮ್‌ಪಾಲ್ ಮಹಾರಾಜರು ಬಂದಿದ್ದಾರೆ ಆದರೆ ನೀವು ನಿಮ್ಮ ಕಷ್ಟಗಳ ಸುಳಿಯಲ್ಲಿ ಮಲಗಿ ಬಿಟ್ಟಿದ್ದೀರಿ" ಎಂದನು, ಆಗ ನಾನು, "ಕಾಲನು ಎಷ್ಟು ಕಷ್ಟವನ್ನು ಕೊಟ್ಟಿದ್ದಾನೆಂದರೆ ಅವರ ಬಗ್ಗೆ ತಿಳಿದುಕೊಳ್ಳಲು ಸಮಯವೇ ದೊರೆಯಲಿಲ್ಲ.

ಎಲ್ಲಾ ಸಮಯದಲ್ಲೂ ಡಾಕ್ಟರ್ ಬಳಿ ಹೋಗಿ ಬರುವುದರಲ್ಲೇ ಕಳೆದು ಹೋಯಿತು. ಅದರ ಮೇಲೆ ಆರ್ಥಿಕ ಮುಗ್ಗಟ್ಟು ಕೂಡಾ ಬಹಳವಾಗಿತ್ತು" ಎಂದೆನು. ಆಗ ಆ ಭಕ್ತನು ನನಗೆ ಬಹಳಷ್ಟು ತಿಳಿಸಿ ಹೇಳಿದನು. ಪೂರ್ಣ ಪರಮಾತ್ಮನಿಗೆ ಎಷ್ಟರಮಟ್ಟಿಗೆ ದಯೆ ಇತ್ತೆಂದರೆ ನಾನು ರಾಮ್‌ಪಾಲ್ ಮಹಾರಾಜರಿಂದ ನಾಮಸ್ಮರಣೆಯ ಉಪದೇಶ ಪಡೆಯಲೆಂದು ಅಕ್ಟೋಬರ್ 2010ರಲ್ಲಿ ಸತ್ಯಲೋಕ ಆಶ್ರಮ ಬರವಾಲಾ ತಲುಪಿದೆನು. ಮಂತ್ರಪಠಣದ ಉಪದೇಶ ಪಡೆದ ನಂತರ ಸದ್ಗುರುವು ತನ್ನ ದಯೆಯ ಭಂಡಾರವನ್ನು ತೆರೆದರು ಮತ್ತು ನನಗೆ ಆ ಸುಖದ ಅನುಭವವಾಗತೊಡಗಿತು. ಆ ಸುಖದ ಅನುಭವವನ್ನು ಈ ಪಾಮರನ ನಾಲಿಗೆಯಿಂದ ವರ್ಣಿಸಲು ಬಹಳ ಕಷ್ಟಸಾಧ್ಯವಾಗಿತ್ತು.

ನನ್ನ ಹೆಂಡತಿಗೆ ಭೂತ-ಪ್ರೇತಗಳು ಬಹಳ ತೊಂದರೆ ನೀಡುತ್ತಿದ್ದವು. ಸದ್ಗುರುವಿನ ದಯೆಯಿಂದ ಈಗ ಪೂರ್ಣವಾಗಿ ಆರೋಗ್ಯವಾಗಿದ್ದಾಳೆ. 7 ಸೆಪ್ಟೆಂಬರ್ 2011ರಲ್ಲಿ ನನ್ನ ಮಗ ಮೋಹಿತ್, 12 ವರ್ಷ ವಯಸ್ಸು, ನನ್ನ ಅಣತಿಯಂತೆ ಮೆಕ್ಯಾನಿಕ್‌ನನ್ನು ಕರೆದುಕೊಂಡು ಬರಲು ಹೋಗಿದ್ದನು. ನನ್ನ ಮಗ ಮೆಕ್ಯಾನಿಕ್‌ನ ಟೆರೇಸ್‌ನ ಮೇಲೆ ಹತ್ತಲು ಸಜ್ಜದ ಮೇಲೆ ಹೋದನು. ಛಜ್ಜಾದ ಪಕ್ಕದಲ್ಲೇ ಮೇಲೆ 11,000 (ಹನ್ನೊಂದು ಸಾವಿರ) ಓಲ್ಟೇಜ್‌ನ ಕರೆಂಟಿನ ವೈರು ಇತ್ತು. ಮಗು ಹಾಗೂ ವೈರಿನ ಮಧ್ಯದಲ್ಲಿ 1 ಅಡಿಯ ಅಂತರವಿತ್ತು. ಯಾವಾಗ ಮಗು ವೈರಿನ ಹತ್ತಿರ ಹೋದನೋ ವೈರುಗಳು ಹುಡುಗನನ್ನು ಸೆಳೆದುಕೊಂಡು ಬಿಟ್ಟವು ಮತ್ತು ಹುಡುಗನ ತಲೆಗೆ ವೈರುಗಳು ಅಂಟಿಕೊಂಡವು 1 ಇಂಚಿನಷ್ಟು ಒಳಗೆ ಹೊರಟು ಹೋಯಿತು. ಮುಖವು ಸುಟ್ಟು, ಕರೆಂಟು ಮೈಯ್ಯಲ್ಲೆಲ್ಲಾ ಹರಿದು ಕಾಲಿನ ಹೆಬ್ಬೆರಳಿನ ಮೂಳೆಯು ಮುರಿದು ಹೋಯಿತು. ಅದೇ ಸಮಯದಲ್ಲಿ ಸದ್ಗುರು ರಾಮ್‌ಪಾಲ್ ಮಹಾರಾಜರು ಆಕಾಶಮಾರ್ಗದಿಂದ ಬಂದರು. ಮತ್ತು ನನ್ನ ಮಗನಿಗೆ ಬಹಳ ತೇಜೋಮಯ ಶರೀರದಲ್ಲಿ ಕಾಣಿಸಿಕೊಂಡರು, 1000 ಟ್ಯೂಬ್‌ಲೈಟ್‌ಗಳ ಬೆಳಕು ಕೂಡಿದರೆ ಹೇಗಿರುವುದೋ ಹಾಗೆ ಕಾಣಿಸಿಕೊಂಡರು. ಅವರು ಹುಡುಗನ ಕೈಹಿಡಿದು ಕರೆಂಟ್ ನಿಂದ ಬಿಡಿಸಿ ಸಜ್ಜದ ಮೇಲೆ ಮಲಗಿಸಿದರು. ನಂತರ ಮಗುವಿನ ಜೊತೆಯಲ್ಲಿ ಬಹಳ ಹೊತ್ತು ಮಾತನ್ನಾಡಿದರು. ನಂತರ ಸದ್ಗುರು ಹೊರಡಲನುವಾದಾಗ ಮಗುವು 'ಗುರೂಜಿ ಎಲ್ಲಿಗೆ ಹೋಗುತ್ತಿರುವಿರಿ?' ಎಂದು ಕೇಳಿದರು. ಗುರೂಜಿ ಉತ್ತರಿಸುತ್ತಾ, "ಮಗೂ, ನಾನು ನಿನ್ನ ಜೊತೆಯಲ್ಲಿ ಇರುವೆನು. ನೀನು ಹೆದರದಿರು". ಆ ಸಮಯದಲ್ಲಿ ನನ್ನ ಮಗುವಿನ ಅಜ್ಜಿ ಅಲ್ಲಿಯೇ ಇದ್ದರು. ಅವರು ಈ ದೃಶ್ಯವನ್ನು ತನ್ನ ಕಣ್ಣುಗಳಿಂದ ನೋಡಿ, ಬಹಳಷ್ಟು ಹೆದರಿಬಿಟ್ಟಿದ್ದರು. ಯಾಕೆಂದರೆ ಹುಡುಗನ ಶರೀರದಿಂದ ಕರೆಂಟಿನ ಕಿಡಿಗಳು ಹೊರ ಹೊಮ್ಮುತ್ತಿದ್ದವು.

ಅದರ ನಂತರ ನಾವು ಹುಡುಗನನ್ನು ಪಿ.ಜಿ.ಐ. ರೋಹತಕ್‌ನ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಕೂಡಾ ನನ್ನ ಮಗನಿಗೆ ಗುರುಗಳು ಕಾಣಿಸಿಕೊಂಡರು. ನನ್ನ ಮಗ "ಗುರೂಜಿ ನನ್ನ ಬಳಿ ಇದ್ದಾರೆ. ನೀವು ಹೆದರಬೇಡಿ" ಎಂದನು. ಒಂದು ವೇಳೆ ನಾವು ಗುರುಗಳಲ್ಲಿ ಶರಣಾಗತರಾಗದಿದ್ದಲ್ಲಿ ನಮ್ಮ ಮಗ ಇಂದು ಜೀವಂತವಾಗಿರುತ್ತಿರಲಿಲ್ಲ ಮತ್ತು ನನ್ನ ಪತ್ನಿಯನ್ನು ಪ್ರೇತಗಳು ಕೊಂದುಬಿಡುತ್ತಿದ್ದವು. ನಮ್ಮ ಕುಟುಂಬವು ನಾಶವಾಗದೆ ಉಳಿದುಕೊಂಡಿತು. ಇದು ಸದ್ಗುರು ರಾಮ್‌ಪಾಲ್ ಮಹಾರಾಜರ ದಯೆಯೇ ಆಗಿದೆ. ಎಲ್ಲಾ ಓದುಗರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ನನ್ನ ಸತ್ಯಕಥೆಯನ್ನು ಓದಿ ತಾವು ಕೂಡಾ ಸದ್ಗುರು ರಾಮ್‌ಪಾಲ್ ದಾಸರಲ್ಲಿ ಶರಣಾಗತರಾಗಿ ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಿ ಮತ್ತು ಪ್ರಾರಬ್ಧದಲ್ಲಿ ಬರೆದ ಕರ್ಮಗಳ ಕಾರಣದಿಂದ ಯಾವ ಘಟನೆಗಳು ನಡೆಯಬೇಕಾಗಿದೆಯೋ ಅವುಗಳಿಂದ ಪೂರ್ಣವಾಗಿ ಪಾರಾಗಿ. ಸದ್ಗುರು ರಾಮ್‌ಪಾಲ್ ಮಹಾರಾಜರ ಸತ್ಸಂಗದಲ್ಲಿ ನಾನು ಕೇಳಿದೆ, ಏನೆಂದರೆ ಪೂರ್ಣ ಪರಮಾತ್ಮ ಕಬೀರರು ಮುಕ್ತಿದಾತರು, ನಮ್ಮ ಎಲ್ಲಾ ಪಾಪಗಳನ್ನು ನಾಶಮಾಡುವರು. ಹೀಗೆ ಪ್ರಮಾಣ ಋಗ್ವೇದ ಮಂಡಲ **10** ಸೂಕ್ತ **161** ಮಂತ್ರ **2**ರಲ್ಲಿ ಮತ್ತು ಮಂಡಲ **9** ಸೂಕ್ತ **80** ಮಂತ್ರ **2**ರಲ್ಲಿ ಬರೆಯಲಾಗಿದೆ ಏನೆಂದರೆ ಯಾವುದೇ ರೋಗಿಯ ಪ್ರಾಣಶಕ್ತಿ ಕ್ಷೀಣವಾಗಿರುವುದೋ ಮತ್ತು ಅವನ ಆಯಸ್ಸು ಕೂಡಾ ಬಾಕಿ ಇಲ್ಲದೇ ಇರುವುದೋ ಅವನ ಪ್ರಾಣದ ರಕ್ಷಣೆ ಮಾಡುವೆನು. ಮತ್ತು ಅವನಿಗೆ **100** ವರ್ಷ ಆಯಸ್ಸನ್ನು ನೀಡಿ ಅರ್ಥಾತ್ ಅವನ ಜೀವಿತ ಕಾಲವನ್ನು ದೀರ್ಘಗೊಳಿಸಿ ಸಾಧಕನಿಗೆ ಸರ್ವಸುಖವನ್ನು ನೀಡುವೆನು.

ಸಜ್ಜನರೇ, ಸದ್ಗುರು ರಾಮ್‌ಪಾಲ್ ಮಹಾರಾಜರು ತಮ್ಮ ಅಮೃತ ವಚನಗಳಲ್ಲಿ ಈ ವಿಚಾರವನ್ನೂ ಹೇಳಿದ್ದಾರೆ. ಪ್ರತಿಯೊಂದು ಪ್ರಾಣಿಯೂ ತಾನು ಮಾಡಿದ ಕರ್ಮದನುಸಾರವಾಗಿಯೇ ಸುಖ ಅಥವಾ ದುಃಖವನ್ನು ಪಡೆಯುತ್ತಾನೆ. ದುಃಖವು ಪಾಪಕರ್ಮದ ಫಲವಾಗಿದೆ ಮತ್ತು ಸುಖವು ಪುಣ್ಯ ಕರ್ಮದ ಫಲವಾಗಿದೆ. ಇಲ್ಲಿಯವರೆಗೂ ಎಲ್ಲಾ ವಿದ್ವಾಂಸರೂ, ಗುರುಗಳು, ಸಂತರೂ ಇದನ್ನೇ ಹೇಳುತ್ತಿದ್ದಾರೆ ಏನೆಂದರೆ ಪ್ರಾರಬ್ಧ ಕರ್ಮಗಳನ್ನು ಮಾಡಿರುವ ಪ್ರಾಣಿಯು ಅದನ್ನು ಅನುಭವಿಸಿಯೇ ತೀರಿಸಬೇಕಾಗುವುದು. ಹೇ ಸಭ್ಯ ಓದುಗರೇ, ಪಾಪಕರ್ಮದಿಂದ ದುಃಖವು ಉಂಟಾಗುತ್ತದೆ. ಒಂದು ವೇಳೆ ಪಾಪ ಕರ್ಮಗಳು ನಾಶವಾಗಿಬಿಟ್ಟರೆ, ದುಃಖವು ತಂತಾನೇ ಕಡಿಮೆಯಾಗುವುದು. ಆದ್ದರಿಂದ ಭಕ್ತಿಭಾವದಿಂದ ಭಗವಂತನ ಸ್ಮರಣೆ ಮಾಡಿ, ಪಾಪಕರ್ಮಗಳ ಫಲವನ್ನು (ದುಃಖ) ಅನುಭವಿಸುತ್ತಿರಬೇಕಾದರೆ, ಭಕ್ತಿಯು ದುಃಖದ ಅಂತ್ಯವನ್ನು ಕಂಡುಕೊಳ್ಳುತ್ತದೆ. **7** ಸೆಪ್ಟೆಂಬರ್ **2011**ರಲ್ಲಿ ನಮ್ಮ ಪ್ರಾರಬ್ಧ ಕರ್ಮದ ಪಾಪದ ಕಾರಣ ನನ್ನ ಪುತ್ರ ಮೋಹಿತನ ಮೃತ್ಯು ಆಗಬೇಕಾಗಿತ್ತು. ನಮ್ಮ ಸದ್ಗುರು ರಾಮ್‌ಪಾಲ್ ದಾಸರ ಕೃಪೆಯಿಂದ ಪರಮ ಪೂಜ್ಯ ಕಬೀರ ಪರಮೇಶ್ವರನು ನಮ್ಮ ಪಾಪವನ್ನು ನಾಶ ಮಾಡಿದರು ಮತ್ತು ನನ್ನ ಮಗುವಿನ ಪ್ರಾಣವನ್ನು ಉಳಿಸಿ ಆತನ ಆಯಸ್ಸನ್ನು ಹೆಚ್ಚಿಸಿದರು. ಒಂದು ವೇಳೆ ಸೆಪ್ಟೆಂಬರ್ **2011**ರಲ್ಲಿ ಪ್ರಾರಬ್ಧ ಕರ್ಮದ ಫಲಸ್ವರೂಪ ನನ್ನ ಮಗ ಮರಣ ಹೊಂದಿದ್ದರಂತೂ ಇಡೀ ಕುಟುಂಬದ ಸದಸ್ಯರುಗಳು ಭಕ್ತಿ, (ನಾಮಸ್ಮರಣೆ)ಯನ್ನು ತ್ಯಾಗ ಮಾಡಿ ನಾಸ್ತಿಕರಾಗಿಬಿಡುತ್ತಿದ್ದೆವು. ಏಕೆಂದರೆ ನಮಗೆ ಆ ಸಮಯದಲ್ಲಿ ಪರಮಾತ್ಮನ ಪೂರ್ಣ ಜ್ಞಾನವಿರಲಿಲ್ಲ. ಈಗ ಭಗವಂತನ ಮೇಲೆ ಅತ್ಯಧಿಕ ವಿಶ್ವಾಸ ಉಂಟಾಗಿದೆ. ಪರಮಪೂಜ್ಯ ಕಬೀರ ಪರಮೇಶ್ವರರೇ ಪಾಪನಾಶಕರು, ಸರ್ವಸುಖದಾಯಕರು ಮತ್ತು ಪೂರ್ಣ ಮೋಕ್ಷದಾಯಕರಾಗಿದ್ದಾರೆ ಮತ್ತು ಸದ್ಗುರು ರಾಮ್‌ಪಾಲ್ ದಾಸರು ಕಬೀರರು ಕಳುಹಿಸಿದ ಅವರ ಅವತಾರವೇ ಆಗಿದ್ದಾರೆ ಎಂಬುದು ದೃಢವಾದ ನಂಬಿಕೆಯಾಗಿದೆ. ಅಲ್ಲದೆ ತಮ್ಮಲ್ಲಿ ಪುನಃ ಪ್ರಾರ್ಥಿಸುತ್ತಿರುವುದೇನೆಂದರೆ ವಿಳಂಬ ಮಾಡದೆ ಸತ್ಯಲೋಕ ಆಶ್ರಮ ಬರವಾಲಕ್ಕೆ ಬಂದು, ಉಪದೇಶ ಪಡೆದು ಉದ್ಧಾರವಾಗಿ. ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡುವ ಉದ್ದೇಶ ಇದಾಗಿದೆ, ನನ್ನ ಹಾಗೆ ಬಹಳಷ್ಟು ಜನರು ದುಃಖದಲ್ಲಿದ್ದಾರೆ. ನನ್ನ ಈ ಮೇಲಿನ ಆತ್ಮಕಥೆ ಓದಿ ಯೋಚನೆ ಮಾಡಿ. ನೀವೂ ಕೂಡಾ ನನ್ನ ಹಾಗೆ ಸಂಕಟಗಳ ನಿವಾರಣೆಯನ್ನು ಮಾಡಿಕೊಳ್ಳಬಹುದಾಗಿದೆ ಹಾಗೂ ಸುಖೀ ಜೀವನವನ್ನು ನಡೆಸಬಹುದಾಗಿದೆ.

ಯಹ್ ಸಂಸಾರ್ ಸಮುಝುದಾ ನಾಹೀಂ, ಕಹಂದಾ ಶಾಮ್ ದೋಪಹರೆ ನೂಂ ।
ಗರೀಬ್‌ದಾಸ ಯಹ್ ವಕ್ತ್ ಜಾತ್ ಹೈ, ರೋವೋಗೆ ಇಸ್ ಪಹರೆ(ಸಮಯ್) ನೂಂ ॥

**ಪ್ರಾರ್ಥಿ ಭಕ್ತ ಸುರೇಶದಾಸ, ಶ್ರೀ ಚಾಂದರಾಮರ ಪುತ್ರ,**
**ಶಾಸ್ತ್ರೀನಗರ, ರೋಹತಕ್, ಮೊ.ನಂ.09829588628**

## "ಭಕ್ತ ಸತೀಶನ ಆತ್ಮಕಥೆ."

**ನಾನು ಭಕ್ತ ಸತೀಶದಾಸ್ 193 ಸೆಕ್ಟರ್ 7, ಆರ್.ಕೆ. ಪುರಮ್ ನವದೆಹಲಿಯ ನಿವಾಸಿಯಾಗಿರುವೆ. ಮೇಲಿನ ಸಾಲುಗಳು ನಮ್ಮ ಜೀವನದಲ್ಲಿ ಉಲ್ಲೇಖನೀಯವಾಗಿವೆ. 1997ರ ಡಿಸೆಂಬರ್ ನಲ್ಲಿ, ದೆಹಲಿಯ ಪ್ರೀತಮಪುರದಲ್ಲಿ ಪ್ರವಚನ ನಡೆದಿತ್ತು. ನಾವು ನಮ್ಮ ಮಿತ್ರನು ಹೇಳಿದನೆಂದು, ಪ್ರವಚನ ಕೇಳಲು ಹೋಗಿದ್ದೆವು. ಆದರೆ ಪರಂಪರಾಗತವಾಗಿ ನಡೆದು ಬಂದಿರುವ ಪೂಜೆಯನ್ನು ಬಿಡಬೇಕೆಂಬ ಮಾತನ್ನು ಕೇಳಿದ ನಂತರ, ಪ್ರವಚನದಲ್ಲಿ ಮನಸ್ಸು ನಿಲ್ಲಲಿಲ್ಲ. ಸದ್ಗುರುಗಳು ಶಾಸ್ತ್ರಗಳನ್ನು ಓದಿ–ಓದಿ ನಮಗೆ ತಿಳಿಸುತ್ತಿದ್ದರು. ನಮ್ಮ ಮನಸ್ಸಿಗೆ ಬಂತು, ನಾನಂತೂ ಪುಸ್ತಕಗಳನ್ನು ಮನೆಯಲ್ಲೇ ಓದಬಹುದಲ್ಲ ಈ ರೀತಿ ಜ್ಯೋತಿ ನಿರಂಜನ (ಕಾಲ)ನು ನಮ್ಮ ಬುದ್ದಿಯನ್ನು ಅಸ್ಥಿರಗೊಳಿಸಿರುವನು ಹಾಗೂ ಭಕ್ತಿಯ ಚಾನಲ್ ಬಂದ್ (ಮುಚ್ಚು) ಮಾಡಿರುವನು. ಸದ್ಗುರುವು ನಮಗೆ ತಿಳಿಸುತ್ತಾರೆ :–**

ಗುರು ಬಿನ್ ಕಿನ್ಹೆ ನ್ ಪಾಯಾ ಜ್ಞಾನಾ, ಜ್ಯೋ ಥೋಥಾ ಭೂಸ್ ಛಡೇ ಕಿಸಾನಾ ।
ಗುರು ಬಿನ್ ಭರಮ್ ನಾ ಛೂಟೆ ಭಾಯಿ, ಕೋಟಿ ಉಪಾಯ್ ಕರೋ ಚತುರಾಯಿ ॥

**ಈ ರೀತಿಯಾಗಿ ನಮ್ಮ ಬುದ್ಧಿಯು ಸ್ಥಿರ ವಾಗಲಿ ಎಂಬ ಕಾರಣದಿಂದ ನಾವು ಆ ಕಡೆ–ಈ ಕಡೆಯ ಮಾತುಗಳನ್ನಾಡುತ್ತಾ ಮನೆಗೆ ವಾಪಸ್ ಬಂದೆವು. 1999ರಲ್ಲಿ ನನ್ನ ಪತ್ನಿ ಶ್ರೀಮತಿ ಮಂಜುವಿಗೆ ಬ್ರೈನ್ ಟ್ಯೂಮರ್ (ಮೆದುಳಿನ ಕ್ಯಾನ್ಸರ್) ಆಯಿತು. ಇದು ನಮಗೆ ಗೊತ್ತಾಗಿದ್ದು, ನಾವು ಸಫದರಜಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವ ಸಂದರ್ಭದಲ್ಲಿ, ಇದಾದ ನಂತರ, ನಾನು ಅವಳನ್ನು ಪಂತ ಆಸ್ಪತ್ರೆ ಹಾಗೂ A.I.I.M.S ನವದೆಹಲಿ ಮತ್ತು ಇದಾದ ನಂತರ ಅಪೋಲೋ ಆಸ್ಪತ್ರೆ ನವ ದೆಹಲಿಯಲ್ಲಿನ ಡಾಕ್ಟರಿಗೂ ತೋರಿಸಿದೆ. ಎಲ್ಲ ಡಾಕ್ಟರಗಳು ಕೂಡಲೆ ಅಪರೇಷನ್ ಮಾಡಿಸಬೇಕೆಂದು ಸಲಹೆ ಕೊಡುತ್ತಾ ಹೇಳಿದರು. ಆಪರೇಷನ್ನಿನ ಕಾರಣ ಇವರಿಗೆ ಒಂದು ಕೈಗೆ ಲಕ್ವ (ಪೈರಾಲೈಸಿಸ್) ಹೊಡಯುವ ಸಾಧ್ಯತೆ ಇದೆ. ಆಪೋಲೋ ಆಸ್ಪತ್ರೆಯ ಡಾಕ್ಟರಂತೂ ರಿಪೋರ್ಟ್ ನೋಡಿದ ನಂತರ ಹೇಳಿದರು. ಇವರ ಎರಡೂ ಕಣ್ಣುಗಳು ಈವರೆಗೆ ಸರಿಯಾರಿಗಿಲು ಹೇಗೆ ಸಾಧ್ಯ? ಮತ್ತು ಅದೇ ಸಮಯದಲ್ಲಿ ಕಣ್ಣಿನ ಡಾಕ್ಟರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಲು ತಿಳಿಸಿದರು. ನಾನು ಆಗಲೇ ಪರೀಕ್ಷೆ ಮಾಡಿಸಿದೆ. ನಂತರ ಕಣ್ಣಿನ ವಿಶೇಷ ಡಾಕ್ಟರ್ (ಐ ಸ್ಪೆಷಲಿಸ್ಟ್) ಹಾಗೂ ನ್ಯೊರೋ ಸರ್ಜನ್ (ನರ ಶಸ್ತ್ರ ಚಿಕಿತ್ಸಕ) ಸಲಹೆ ನೀಡಿದರು. ಪ್ರತಿ 15 ದಿನಗಳಿಗೊಮ್ಮೆ ಇವರ ಕಣ್ಣುಗಳನ್ನು ಪರೀಕ್ಷೆ ಮಾಡಿಸುತ್ತಿರಬೇಕು. ಯಾವಾಗ ಬೇಕಾದರೂ ಕಣ್ಣು ಕಾಣದಾಗಬಹುದು. ಏಕೆಂದರೆ ಬ್ರೈನ್ ಟ್ಯೂಮರ್, ಅಂತಹ ಜಾಗದಲ್ಲಿದೆ. ನಾನು ಮತ್ತು ನನ್ನ ಪತ್ನಿ ಇಬ್ಬರೂ ಕಾಲಿಲ್ಲದ ಅಂಗವಿಕಲರು. ಕೈ ಮತ್ತು ಕಣ್ಣುಗಳೂ ಹೋಗುತ್ತವೆ ಎಂಬ ಮಾತನ್ನು ಕೇಳಿ, ಮೇಲಿನ ಉಸಿರು ಮೇಲೆ, ಕೆಳಗಿನ ಉಸಿರು ಕೆಳಗೆ ನಿಂತು ಹೋಗಿತ್ತು. ಆದರೆ ಬೇರೆ ಏನೂ ಮಾಡಲಾಗದೆ, ಕಡೆಗೆ ಪಂತ ಆಸ್ಪತ್ರೆ ನವ ದೆಹಲಿಯಲ್ಲಿ ಆಪರೇಷನ್ ಮಾಡಿಸುವುದೆಂದು ಯೋಚಿಸಿದೆವು ಮತ್ತು ಡಾಕ್ಟರ್ ಹೇಳಿದ ನಂತರ ಖಓಂಖ ಆಸ್ಪತ್ರೆ ತಿಮಾರಪುರ ದೆಹಲಿಯಲ್ಲಿ M.R.I ಮಾಡಿಸಿದೆ ಬೇರೆ ಕೆಲವು ಪರೀಕ್ಷೆ ಗಳನ್ನು ಮಾಡಿಸಿದೆ. ಆಪರೇಷನ್ನಿನ ದಿನಾಂಕ ತಿಳಿದುಕೊಳ್ಳುವುದು ಮಾತ್ರ ಬಾಕಿ ಇತ್ತು ನಮಗೆ, ಪೂರ್ಣ ಪರಮಾತ್ಮ ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜರಿಂದ ಮೊದಲು ನಾವು ಕೇಳಿದ ಪ್ರವಚನದ ಸಾಲುಗಳು ನೆನಪಾಯಿತು.**

ಜಿನ್ ಮಿಲತೆ ಸುಖ್ ಉಪಜೆ, ಮಿಟೆ ಕೋಟಿ ಉಪಾಧ್ ।
ಭುವನ್ ಚತುರ್ದಶ್ ಧೂಂಢಿಯೋ, ಪರಮ್ ಸ್ನೇಹೀ ಸಾಧ್ ॥

**ನಮ್ಮ ಭಕ್ತಿಯ ಚಾನಲನ್ನು ಪರಮೇಶ್ವರ ಆನ್ ಮಾಡಿದರು, ಮನದಲ್ಲಿ ಭಾವನೆಗಳು**

ಉತ್ಪನ್ನವಾದವು. ಅದೇನೆಂದರೆ, ಆಪರೇಷನ್‌ನ ಮೊದಲು ನಾಮೋಪದೇಶ ಪಡೆದು ನೋಡೋಣ ಎಂದು ನಂತರ ನನ್ನ ಗೆಳೆಯನೊಡನೆ ಪ್ರೀತಮಪುರಾ ದೆಹಲಿಗೆ ಹೋಗಿ 4–2–2001 ರಂದು ಪೂರ್ಣ ಪರಮಾತ್ಮ ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜರಿಂದ ನಾಮೋಪದೇಶವನ್ನು ಪಡೆದೆವು. ಮೊದಲಿನ ಎಲ್ಲಾ ಪೂಜೆಗಳನ್ನೂ ಬಿಟ್ಟೆವು. ಸದ್ಗುರುಗಳು ಅಖಂಡ ಪಾಠ ಮಾಡಿಸಿರಿ. ಎಂದು ಸಲಹೆ ಕೊಡುತ್ತಾ ಹೇಳಿದರು. "ಪರಮಾತ್ಮನು ಇಚ್ಛಿಸಿದಲ್ಲಿ ಆಪರೇಷನ್ ಮುಂದೂಡಬಹುದು. ಮತ್ತು ಎಲ್ಲವೂ ಸರಿಯಾಗಬಹುದು. ನಾವು ಸದ್ಗುರುವಿನ ಆದೇಶದಂತೆ, ಮನೆಯಲ್ಲಿ 3 ದಿನಗಳ ಕಾಲ ಅಖಂಡ ಪಾಠ ಮಾಡಿಸಿದೆವು. ಇದಾದ ನಂತರ ಆಪರೇಷನ್ ದಿನಾಂಕ ತಿಳಿಯಲು ಹೊಸ ದೆಹಲಿಯ ಪಂತ ಆಸ್ಪತ್ರೆಗೆ ಹೋದೆವು. ಯಾವ ಡಾಕ್ಟರ್ ಮೊದಲು ಆಪರೇಷನ್ ಮಾಡಿಸಿರಿ ಎಂದು ಸಲಹೆ ನೀಡಿದ್ದರೊ, ಅದೇ ಡಾಕ್ಟರ್ ಎರಡನೆಯ M.R.I ನೋಡಿ ಹೇಳತೊಡಗಿದರು. "ಆಪರೇಷನ್ನಿನ ಯಾವ ಅವಶ್ಯಕತೆಯೂ ಇಲ್ಲ. ಆಗ ಸದ್ಗುರುವಿನ ವಾಣಿಯು ನೆನಪಿಗೆ ಬಂದಿತು":–

ಸತ್‌ಗುರು ದಾತಾ ಹೈ ಕಲಿ ಮಾಹಿ, ಪ್ರಾಣ್ ಉಧಾರಣ ಉತರೆ ಸಾಯಿ ।
ಸತ್‌ಗುರು ದಾತಾ ದೀನ್ ದಯಾಲ್‌ಂ, ಜಮ್ ಕಿಂಕರ್ ಕೆ ತೋಡೇ ಜಾಲ್‌ಂ ॥

ನಾವು ಸದ್ಗುರುವನ್ನು ನೆನೆದು, ಬಿದ್ದು ಬಿದ್ದು ಅಳತೊಡಗಿದೆವು. ಹೇ ಪರಮೇಶ್ವರ ನಾವು ನಿನ್ನ ಮಹಿಮೆಯನ್ನು ಯಾವ ಶಬ್ದಗಳಿಂದ ವರ್ಣನೆ ಮಾಡಲಿ. ಈ ರೀತಿ ಪೂರ್ಣ ಪರಮೇಶ್ವರನ ಅವತಾರ ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜ ರವರ ಕೃಪೆಯಿಂದ ನಮ್ಮ ಆಪರೇಶನ್ ಮುಂದೂಡಲಾಯಿತು. ಅದಾದ ನಂತರ ನಾವು 1 ಪೈಸೆಯ ಮಾತ್ರೆ ಔಷಧಿಗಳನ್ನು ಸೇವಿಸಲಿಲ್ಲ. ಮತ್ತು ಸುಖಮಯ ಜೀವನ ಮಾಡುತ್ತಿರುವೆವು. 20–11–2004ರ ರಾತ್ರಿ ಕಾಲನ ಹೊಡೆತದ ಕಾರಣ ನನ್ನ ಪತ್ನಿ ಸತ್ತವಳಂತೆ ಆಗಿದ್ದಳು. ಪರಮೇಶ್ವರರ ಅಮೃತ ಜಲವನ್ನು ಕುಡಿಸಿದ ನಂತರ ಪ್ರಜ್ಞೆ ಬಂದಿತು. ನಂತರ ನಾವು ಅವಳನ್ನು ಸದ್ಗುರುವಿನ ಬಳಿಗೆ ಕರೆದುಕೊಂಡು ಬಂದೆವು. ಸದ್ಗುರುಗಳು ತಿಳಿಸಿದರು. ಈ ದಿನ ಇವಳ ಸಾವು ಆಗುತ್ತಿತ್ತು. ಕಬೀರ್ ಪರಮೇಶ್ವರರು ಇವಳ ಆಯಸ್ಸನ್ನು ಹೆಚ್ಚಿಸಿದ್ದಾರೆ. ಈಗ ಅವರು ಭಕ್ತಿಮಾಡಬೇಕು. ಪುನಃ 22–11–2004 ರಂದು ನನ್ನ ಪತ್ನಿಗೆ ಸೋನೀಪತದ ಸತ್ಸಂಗದ ಸಮಯದಲ್ಲಿ ಲಕ್ವಾದ ಹೊಡೆತ ಬಿತ್ತು (ಪೈರಾಲೈಸಿಸ್) ಅದರ ಕಾರಣ ಅವಳ ಕೈಯಿನ ಶಕ್ತಿ ಮುಗಿದು ಹೋಗತೊಡಗಿತು. ಮತ್ತು ಅದೇ ಸಮಯದಲ್ಲಿ, ಸದ್ಗುರುವಿನ ಕೈ ನಮ್ಮ ಕೈಯಲ್ಲಿ ಕಾಣತೊಡಗಿತು. ಯಾವಾಗ ಸುಮಾರು 5 ನಿಮಿಷಗಳ ವರೆಗೆ ಕಾಣಿಸತೊಡಗಿತು. ಯಾವಾಗ ಲಕ್ವದ ಪ್ರಭಾವ(ಪೈರಾಲೈಸಿಸ್)ವು ಮುಗಿಯಿತೋ ಆಗ ಸದ್ಗುರುವಿನ ಕೈ ಅದೃಶ್ಯವಾಯಿತು. ಈ ದಿನದ ವರೆಗೆ ಅವಳು ಸರಿಯಾಗಿದ್ದಾಳೆ. ಸದ್ಗುರು ತತ್ವದರ್ಶಿ ಸಂತ ರಾಮ್‌ಪಾಲ್ ಮಹಾರಾಜರು, ಕಬೀರ್ ಪರಮೇಶ್ವರರ ಯಥಾವತ್ ಅವತಾರವಾಗಿ ಬಂದಿರುವರು. ಅವರು ಈ ಅಂಶವನ್ನು ನಮಗೆ ದೃಢಪಡಿಸಿರುವರು:– "ಗರೀಬ್, ಜಮ್ ಜೌರಾ ಜಾಸೇ ಡರೇ, ಮಿಟೆ ಕರ್ಮ್ ಕೆ ಅಂಕ್ । ಕಾಗದ್ ಕೀರೆ ದರಗಹ್ ದಯಿ, ಚೌದಹ್ ಕೋಟಿ ನ್ ಚಂಪ್ ॥

ಭಕ್ತಿ ಸತೀಶ ಮೆಹರಾ,
ಮೊ.ನಂ.9718184704

❖❖❖❖❖

➢ ಸತ್ಯಲೋಕ ಆಶ್ರಮದ ಬೇರೆ ಪುಸ್ತಕಗಳು(ಆಧ್ಯಾತ್ಮಿಕ ಜ್ಞಾನ ಗಂಗಾ, ಬದುಕುವ ದಾರಿ, ಜ್ಞಾನ ಗಂಗಾ, ಗಹರಿ ನಜರ್ ಗೀತಾ ಮೆಂ, ಗೀತೆಯೇ ನಿನ್ನ ಜ್ಞಾನ ಅಮೃತ, ಸೃಷ್ಟಿ ರಚನಾ ಸಂಪೂರ್ಣ್, ಮಾನವತಾ ಕಾ ಹ್ರಾಸ್ ತಥಾ ವಿಕಾಸ್ ಮುಂತಾದವುಗಳು) ನಮ್ಮ ವೆಬ್‌ಸೈಟ್(www.jagatgururampalji.org) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.